PERIYA PURĀṆAM

Tirumalai Sargam to Mummaiyāl Ulagāṇḍa Sargam

(Kannada Translation with Transliteration)

VOLUME ONE

by

Dr. A. SHANKER KEDILAYA, M.A., B.T., Ph.D.
Head of the Department of Kannada,
University of Madras.

UNIVERSITY OF MADRAS
1974.

Madras University Kannada Series No. 18

PERIYA PURĀṆAM

irumalai Sargam to Mummaiyāl Ulagāṇḍa Sargam

(Kannada Translation with Transliteration)

VOLUME ONE

by

Dr. A. SHANKER KEDILAYA M.A., B.T., Ph.D.,
Head of the Department of Kannada,
University of Madras.

© University of Madras, Madras.

First Published - 1974.

Price Rs. 15/-

Printed at the Rathnam Press, Madras-1.

ಪೆರಿಯ ಪುರಾಣಂ

(ತಮಿಳು ಮೂಲದೊಡನೆ)

ತಿರುಮಲೈ ಸರ್ಗ – ಮುಮ್ಮೈಯಾಲ್ ಉಲಗಾಂಡ ಸರ್ಗ

ಭಾಗ ಒಂದು

ಭಾಷಾಂತರ :

ಡಾ|| ಎ. ಶಂಕರ ಕೆದಿಲಾಯ, ಎಮ್.ಎ., ಬಿ.ಟಿ., ಪಿಎಚ್.ಡಿ.,

ಮದ್ರಾಸು ವಿಶ್ವವಿದ್ಯಾನಿಲಯ

1974

PERIYA PURĀṆAM

Tirumalai Sargam to Mummaiyāl Ulagāṇḍa Sargam

(Kannada Translation with Transliteration)

VOLUME ONE

by

Dr. A. SHANKER KEDILAYA, M.A., B.T., Ph.D.,
Head of the Department of Kannada,
University of Madras.

UNIVERSITY OF MADRAS

1974.

FOREWORD

The University of Madras has been following an enlightened policy of publishing scholarly treatises of various departments including departments of languages such as Tamil, Telugu, Kannada, etc. The publications in languages again are of a wide range such as dictionaries, literary criticism, critical editions of texts and translations from one language to another. Under the head of translations we have already published translation of Tamil works such as Tirukkural into Hindi and certain *Kanḍams* of Kamba Ramayanam into Malayalam. In this line we are now presenting to the Kannada knowing people the first part of translation of the famous Tamil devotional work, the Periapuranam of Sekhizhar, a minister under Kulottunga Chola who reigned in the 12th Century A.D. Sekhizhar, the hagiologist combined in himself a saint, statesman and poet. In this work, otherwise called Tiruthondar Puranam we find high poetic excellence and deep spiritual fervour neatly blended. This work saturated with the spirit of devotion gives an account of the sixty three Saiva Saints in a telling and pleasing manner. The authentic ring of the work bespeaks the talent of the author who evidently pressed into service epigraphical and historical evidence as well as local legends in weaving the stories of the saints. This work breathes a true cosmopolitan spirit. Monarch and mendicant, Harijan and Brahmin, potter and peasant, bachelor and householder, in short men and women of different strata are found working in their own way towards one goal. Periapuranam touches upon certain facets of social life and is useful for a study of the history, economy, religion and culture of the contemporary period in Tamil nadu.

It is seen that the stories of these Saiva Saints spread even beyond the confines of Tamil Nadu and were current in the neighbouring Kannada region and the first Kannada poet to

narrate some of the stories presented in Periapuranam is Harihara who wrote in compositions known as " Regaeḷs ".

Dr. A. Shanker Kedilaya, Reader in Kannada has given a literal translation in Kannada of the monumental work of Sekhizhar, the first part of which appears in print now. When completed this will help a comprative study of the stories of these saints in the Tamil and Kannada versions as well as of the Siddhanta School of Saivism in Tamil Nadu and Virasaivism in Karnataka State.

It is hoped that works of this kind introducing outstanding works in one language to readers in other languages will go a long way in fostering proper understanding and appreciation of cultures of peoples in different regions which collectively lend charm and dignity to the composite cuiture of our Motherland.

University of Madras
1st June 1974

N. D. SUNDARAVADIVELU,
Vice - Chancellor.

PREFACE

The *Periyapurāṇam* of Śēkkiḷar is a great Tamil poem dealing with the lives of the sixty-three Śaivite Nāyanārs and consists of 4286 verses divided into 71 cantos. It is important not only as an excellent literary work and a collection of interesting accounts of the Śaiva devotees but also as the main source book for S'aivism in Tamil Nāḍu and as a reliable text shedding much useful light on the social, political, geographical and cultural history of mediaeval Tamil Nāḍu. Its author, S'ēkkiḷar was the chief minister to the Chola king Anapāya, wellknown as Kulōttunga II. (1133–1150 A.D.).

Many of the stories found in the *Periyapurāṇam* are already available in Kannada literature, though in a brief and adapted form. The earliest saint poet who narrated some of these stories in an ecstatic devotional style in Kannada is Harihara; it is believed that he might have also visited some of the Śaiva shrines in Tamil Nāḍu associated with the Nāyanārs before he wrote his *ragaḷes* in Kannada. A Comparative study of *Periyapurāṇam* with the *ragaḷes* of Harihara would be quite interesting. The influence of the Tamil classic on the Veeraśaiva literature in Kannada also is worth investigation. A complete translation into Kannada of the *Periyapurāṇam* is a prerequisite even for such comparative studies.

The present literal translation in Kannada prose of the *Periyapurāṇam* together with the original Tamil text in Kannada transliteration, is intended to introduce this great classic to the Kannada scholars and the general public. It is hoped that this translation will give a true picture of the essential greatness of the Tamil work, the true message of the lives of the Nāyanārs and much of the natural descriptions and cultural glimpses found in the original.

Śēkkiḷar's dignified and cultured personality shines throughout in the treatment of the lives of the Nāyanārs. He is a great devotee of Śiva and holds in high respect the Nāyanārs (devotees of Śiva) irrespective of their birth, position or status. And anyone

devoid of devotion to Śiva loses the regard and esteem of the author whatever may be their position in life.

The Kannada introduction deals in detail with the biography of the author, his work, the *Periyapurāṇam*, its characteristics, excellences and descriptions of geographical divisions, of nature, man and society. The terms which are new to Kannada like Tirumurai, Tēvāram, Tiruvācakam and Tirumantiram have been suitably explained with examples. A note on the flower *konrai* sacred to Śiva has been added to remove its confusion with the flower *Karṇikāra*. A list of the novel simili used in this work, lists of the names of trees, flowers, varieties of fish, and places occurring in this valume and a map of Tamil Nāḍu showing the place-names have been appended. The contents of the entire *Periyapurāṇam* are also given under the respective sub-headings.

The present volume (Vol. I) of the translation consists of the first four cantos of the first Kāṇḍam of *Periyapurāṇam* beginning from the description of the mountain Kailāsa (Tirumalai sarga) upto the story of Chandēśwara Nāyanār, corresponding to the first 1255 verses of the original. The Kannada translation of the remaining portion will be published in due course in the succeeding volumes.

Dr. A. SHANKER KEDILAYA,
M.A., B.T., Ph.D.,
Head of the Department of Kannada,
University of Madras.

Madras,
1-6-'74.

ವಿಷಯಾನುಕ್ರಮಣಿಕೆ

1.	Foreword		
2.	Preface		
3.	ಶೇಕ್ಕಿಳಾರನ ಪೆರಿಯಪುರಾಣ		1—30

ಪೆರಿಯಪುರಾಣ (ಭಾಗ ಒಂದು)

1.	ಪೀಠಿಕೆ	—	1

ತಿರುಮಲೈ ಸರ್ಗ

2.	ಕೈಲಾಸ ಪರ್ವತದ ಹಿರಿಮೆ	...	5
3.	ನಾಡಿನ ಹಿರಿಮೆ	...	17
4.	ತಿರುವಾರೂರಿನ ಹಿರಿಮೆ	...	28
5.	ಭಕ್ತಕೂಟದ ಹಿರಿಮೆ	...	44
6.	ತಡೆದು ಆಳಾಗಿಸಿಕೊಂಡ ಪುರಾಣ	...	47

ತಿಲ್ಲೈವಾಳಂದಣರ ಸರ್ಗ

1.	ಚಿದಂಬರ ದೀಕ್ಷಿತರು	...	119
2.	ತಿರುನೀಲಕಂಠ ನಾಯನಾರ	...	123
3.	ಇಯರ್‌ಪಗೈ ನಾಯನಾರ	...	137
4.	ಇಳೆಯಾನ್ ಗುಡಿಮಾರ ನಾಯನಾರ	...	151
5.	ಮೆಯ್‌ಪೊರುಳ್ ನಾಯನಾರ	...	160
6.	ವಿಱಲ್‌ಮಿಂಡ ನಾಯನಾರ	...	168
7.	ಅಮರನೀತಿ ನಾಯನಾರ	...	172

ಇಲ್ಲೈಮಲಿನ್ತ ಸರ್ಗ

8.	ಎರಿಪ್ಪತ್ತರ್ ನಾಯನಾರ	...	188
9.	ಏಣಾಧಿನಾಥ ನಾಯನಾರ	...	207
10.	ಕಣ್ಣಪ್ಪ ನಾಯನಾರ	...	221

11.	ಕುಂಗುಲಿಯ ಕಲಯ ನಾಯನಾರ	...	284
12.	ಮಾನಕ್ಕಂಜಾಜ ನಾಯನಾರ	...	296
13.	ಅರಿವಾಳ್ತಾಯ ನಾಯನಾರ	...	309
14.	ಆನಾಯ ನಾಯನಾರ	...	317

ಮುಮ್ಮೈಯಾಲುಲಗಾಂಡ ಸರ್ಗ

15.	ಮೂರ್ತಿ ನಾಯನಾರ	...	331
16.	ಮುರುಗ ನಾಯನಾರ	...	348
17.	ರುದ್ರ ಪಶುಪತಿ ನಾಯನಾರ	...	353
18.	ತಿರುನಾಳೈಪ್ಪೋವಾರ್ ನಾಯನಾರ	...	357
19.	ತಿರುಕುರಿಪ್ಪುತೊಂಡ ನಾಯನಾರ	...	370
20.	ಚಂಡೇಶುರ ನಾಯನಾರ	...	423

ಅನುಬಂಧ	೧.	ವೃಕ್ಷಗಳ ಹೆಸರುಗಳು	...	i
,,	೨.	ಮೀನುಗಳ ಹೆಸರುಗಳು	...	i
,,	೩.	ಸ್ಥಳಗಳ ಹೆಸರುಗಳು	...	i
,,	೪.	ನಾಯನಾರರೂ ಅವರಿಗೆ ಸಂಬಂಧಿಸಿದ ಸ್ಥಳಗಳೂ		iii
,,	೫.	ಸ್ಥಳಗಳನ್ನು ಗುರುತಿಸಿದ ಭೂಪಟಿ	...	iv
,,	೬.	ಪೆರಿಯ ಪುರಾಣದ ಸರ್ಗಗಳು ಮತ್ತು ವಿಷಯಾನುಕ್ರಮಣಿಕೆ	...	v



ಪೆರಿಯ ಪುರಾಣದ ಕರ್ತೃ

ಶೇಕ್ಕಿಳಾರ

[ಕುನ್ರತ್ತೂರಿನ ದೇವಾಲಯದಲ್ಲಿರುವ ಶೇಕ್ಕಿಳಾರ ವಿಗ್ರಹದ ಪಟ]

ಶೇಕ್ಕಿಳಾರನ ಪೆರಿಯ ಪುರಾಣ

ಶೇಕ್ಕಿಳಾರ

ತೊಂಡಮಂಡಲದಲ್ಲಿರುವ ಕುನ್ರತ್ತೂರ[1]ನಲ್ಲಿ ಶೇಕ್ಕಿಳಾರ್ ವಂಶದವರಿದ್ದರು. ಈ ವಂಶವು ತಮಿಳುನಾಡಿನಲ್ಲಿ ಸುಸಂಸ್ಕೃತ ವರ್ಗವಾದ ವೆಲ್ಲಾಳ[2]ರ ಒಂದು ವಿಭಾಗ. ಆ ವಂಶದಲ್ಲಿ ಬಂದ ಶೈವಮತದ ಸುಸಂಸ್ಕೃತ ವಿದ್ವಾಂಸನೊಬ್ಬನು ತೊಂಡಮಂಡಲ ವನ್ನಾಳುತ್ತಿದ್ದ ಅರಸನ ಆಸ್ಥಾನ ವಿದ್ವಾಂಸನಾಗಿದ್ದನು. ಈತನ ಪತ್ನಿ ಶೈವಮತದಲ್ಲಿ ಆಳವಾದ ಭಕ್ತಿಯುಳ್ಳವಳು.

ಈ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು. ಹಿರಿಯುವನ ಹೆಸರು ಅರುಳ್‌ಮೊಳಿ ದೇವರ್ ಎಂದು. ಎರಡನೆಯವನ ಹೆಸರು ಬಾಲರಾವಾಯರ್ ಎಂದು. ಇವರಿಬ್ಬರೂ ಗುರುಮುಖದಿಂದ ತಮಿಳು ಶಾಸ್ತ್ರಗ್ರಂಥಗಳನ್ನು ಚೆನ್ನಾಗಿ ಅಭ್ಯಾಸಮಾಡಿ ವಿದ್ವತ್ತಿ ನಲ್ಲಿ ಪರಿಣತರಾದರು. ಆಗ ಚೋಳನಾಡನ್ನು ಎರಡನೇ ಕುಲೋತ್ತುಂಗನೆಂದು ಕರೆಯಲ್ಪಡುವ ಅನಪಾಯನೆಂಬ ಚೋಳರಾಜನು ಆಳುತ್ತಿದ್ದನು. ಈತನ ಆಳುವಿಕೆಯ ಕಾಲ ಕ್ರಿ. ಶ. 1133 ರಿಂದ 1150 ರ ವರೆಗೆ. ಈತನು ಅರುಳ್‌ಮೊಳಿದೇವನ ವಿದ್ವತ್ತನ್ನು ತಿಳಿದು ಅವನನ್ನು ತನ್ನ ಮುಖ್ಯಮಂತ್ರಿಯನ್ನಾಗಿ ಮಾಡಿಕೊಂಡು, ಆತನಿಗೆ ಉತ್ತಮ ಚೋಳಪಲ್ಲವರಾಯ ಎಂಬ ಬಿರುದನ್ನೂ ಕೊಟ್ಟನು. ಅರುಳ್‌ಮೊಳಿ ದೇವನು ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದಾಗ ರಾಜನೂ ಪ್ರಜೆಗಳೂ ಎಲ್ಲರೂ ಸಂತೋಷದಿಂದಿದ್ದರು.

ಅರುಳ್‌ಮೊಳಿದೇವನು ಶೈವಮತದಲ್ಲಿ ಆಳವಾದ ಭಕ್ತಿಯಿದ್ದವನು. ಚೋಳನಾಡಿ ನಲ್ಲುಳ್ಳ ತಿರುನಾಗೇಶ್ವರಂ ಎಂಬ ಸ್ಥಳದಲ್ಲಿರುವ ಶಿವಪರಮಾತ್ಮನನ್ನು ಈತನು ನಮಿಸಿ ಬಂದನು. ತನ್ನ ಹುಟ್ಟೂರಾದ ಕುನ್ರತ್ತೂರಿನಲ್ಲಿಯೂ ತಿರುನಾಗೇಶ್ವರಂ ಎಂಬ ಹೆಸರಿನಲ್ಲಿ ಶಿವಾಲಯವೊಂದನ್ನು ನಿರ್ಮಿಸಿ, ಅಲ್ಲಿ ನಿತ್ಯಪೂಜೆ ಉತ್ಸವಾದಿಗಳು ನಡೆಯಲು ಬೇಕಾದ ಏರ್ಪಾಡುಗಳನ್ನೂ ಮಾಡಿದನು.

ಚೋಳ ಅರಸನಿಗೆ ತಮಿಳು ಮಹಾಕಾವ್ಯವಾದ ಜೀವಕಚಿಂತಾಮಣಿಯಲ್ಲಿ ಹೆಚ್ಚಿನ ಆದರವಿತ್ತು. ಅದನ್ನು ಬರೆದವನು ತಿರುತ್ತಕ್ಕದೇವರ್ ಎಂಬ ಜೈನವಿದ್ವಾಂಸನು. ಅರಸನಿಗೆ ಶೈವಮತ ಗ್ರಂಥಗಳಲ್ಲಿ ಆಸಕ್ತಿಯನ್ನು ಹೆಚ್ಚಿಸಬೇಕೆಂದು ಅರುಳ್‌ಮೊಳಿ

---

1. ಕುನ್ರತ್ತೂರು ಮದ್ರಾಸಿನ ಸಮೀಪದಲ್ಲಿದೆ.

2. ವೆಲ್ಲಾಳ ಅಥವಾ ವೇಳಾಳ ಎಂಬುದು ತಮಿಳರಲ್ಲಿ ಒಂದು ಜಾತಿ. ಈ ಜಾತಿಯವರು ಮುಖ್ಯವಾಗಿ ಕೃಷಿಕರು. ಕೆಲ ವೈಶ್ಯರೂ ಈ ಜಾತಿಯಲ್ಲಿ ಸೇರಿದ್ದಾರೆ. ವೇಳಾಳ ಎಂಬ ಶಬ್ದಕ್ಕೆ ಉಪಕಾರಿ ಎಂಬರ್ಥವೂ ಇದೆ. ಬಹುಶಃ ಕೃಷಿಕರ್ಮದಲ್ಲಿ ತೊಡಗಿರುತ್ತಿದ್ದ ವೇಳಾಳರು ಸ್ವಭಾವತಃ ಉಪಕಾರಿಗಳಾಗಿದ್ದಿರಬೇಕು. ವೇಳಾಳರು ಸಾಮಾನ್ಯವಾಗಿ ಮಾಡುವ ಆರು ಉದ್ಯೋಗಗಳು ಇವು: ಉಳುಮೆ, ಪಶುಪಾಲನೆ, ವ್ಯಾಪಾರ, ವಾದನವಿದ್ಯೆ, ನೇಯ್ಗೆಕೆಲಸ ಮತ್ತು ದ್ವಿಜಸೇವೆ.

ದೇವನು ಹೆವಣಿಸಿದನು. ಜೈನಗ್ರಂಥದ ಜೀವಕನ ಚರಿತೆಗಿಂತ ಮಾನವಕುಲಕ್ಕೇ ಎಷ್ಟೋ ಉಪಯೋಗವಾಗುವ, ಸುಂದರರು ತಿರುತ್ತೊಂಡತ್ತೊಗೆಯಲ್ಲಿ ಹೇಳಿದ ನಾಯನಾರರ ದಿವ್ಯಪ್ರೇಮದ ಅದ್ಭುತ ಚರಿತೆಗಳನ್ನು ಆತನು ರಾಜನಿಗೆ ಹೇಳಿದನು ರಾಜನಲ್ಲಿ ಇದು ಹೊಸ ಉತ್ಸಾಹವನ್ನುಂಟುಮಾಡಿತು. ಆತನು ಅರುವತ್ತುಮೂವರು ನಾಯನಾರರ ಚರಿತೆಯನ್ನೂ ಉಪದೇಶವನ್ನೂ ಕಾವ್ಯರೂಪವಾಗಿ ಬರೆಯುವಂತೆ ಅರುಳ್‌ಮೊಳಿದೇವನನ್ನು ಕೇಳಿಕೊಂಡನು.

ಅದಕ್ಕನುಮತಿಸಿ ಆತನು ಚಿದಂಬರದ ನಟರಾಜನ ಪಾದಮೂಲಗಳನ್ನಾಶ್ರಯಿಸಿ ಶೈವಪುರಾತನರ ಕುರಿತು ಹಾಡಲು ಮನಮಾಡಿದನು. ಶಿವನು ಆತನಿಗೆ 'ಉಲಕೆಲಾಮ್' (ಎಲ್ಲಾ ಲೋಕವು) ಎಂಬ ಪದವನ್ನು ಅನುಗ್ರಹಿಸಿದನು. ಅದನ್ನು ಮೊದಲುಮಾಡಿ ಬರೆಯತೊಡಗಿ ಅರುಳ್‌ಮೊಳಿದೇವನು ಅವ್ಯಾಹತವಾಗಿ ಬರೆಯುತ್ತ ಅರುವತ್ತುಮೂರು ನಾಯನಾರರ ಚರಿತೆಗಳುಳ್ಳ ಕಾವ್ಯವನ್ನು ಕ್ರಮವಾಗಿ ಬರೆದು ಮುಗಿಸಿದನು. ಆಮೇಲೆ ಅರಸನ ಆಶಯದಂತೆ ಆ ಗ್ರಂಥವನ್ನು ಪ್ರಕಟಿಸಿದನು.

ಅರಸನು ಆ ಕಾವ್ಯವನ್ನು ಮೆಚ್ಚಿ ಕವಿಯನ್ನು ಕೊಂಡಾಡಿದನು. ಅವನಿಗೆ 'ತೊಂಡರ್ ಶೀರ್‌ಪರವುವಾರ್'[1] ಎಂಬ ಹೆಸರನ್ನೂ ಕೊಟ್ಟನು. ಶೇಕ್ಕಿಳಾರ್ ಕುಲಕ್ಕೆ ಇವನಿಂದಾಗಿ ಹಿರಿಮೆ ಬಂದುದರಿಂದ ಇವನನ್ನು ಶೇಕ್ಕಿಳಾರ್ ಎಂದೇ ಎಲ್ಲರೂ ನಮಿಸಿದರು. ಹಿರಿಯಭಕ್ತರ ಚರಿತೆಯನ್ನು ತಿಳಿಸುವ ಈ ಭಕ್ತಚರಿತೆಯು 'ಪೆರಿಯಪುರಾಣ'[2] ಎಂಬುದಾಗಿ ಲೋಕವಿಖ್ಯಾತವಾಯಿತು. ಪೆರಿಯಪುರಾಣಕ್ಕೆ ತಿರುತ್ತೊಂಡರ್‌ಪುರಾಣ ವೆಂಬ ಹೆಸರೂ ಇದೆ. ಭಕ್ತರ ಚರಿತೆ ಎಂಬುದೇ ತೊಂಡರ್‌ಪುರಾಣವೆಂಬುದರ ಅರ್ಥ.

ಆಮೇಲೆ ಶೇಕ್ಕಿಳಾರನು ತನ್ನ ತಮ್ಮನಾದ ಬಾಲರಾಮಾಯರನ್ನು ತನ್ನ ಪದವಿಯಲ್ಲಿ ನಿಯಮಿಸಿ ತಾನು ವಿಶ್ರಾಂತಿ ಹೊಂದಿ ಚಿದಂಬರದಲ್ಲಿಯೇ ಇರುತ್ತಿದ್ದು ತನ್ನ ಉಳಿದ ಜೀವಿತಕಾಲವನ್ನು ಪೆರಿಯಪುರಾಣವನ್ನು ವಿವರಿಸುವುದರಲ್ಲಿ, ಶಿವಭಕ್ತರ ಹಾಡುಗಳನ್ನು ಪ್ರಚಾರಮಾಡುವಲ್ಲಿ ಉಪಯೋಗಿಸಿದನು

ಶೇಕ್ಕಿಳಾರನು ಶ್ರೇಷ್ಠ ಶಿವಭಕ್ತ. ಸುಸಂಸ್ಕೃತ ಕವಿ. ತನ್ನ ಗ್ರಂಥದಲ್ಲಿ ಬರುವ ಶಿವಭಕ್ತರ ಜಾತಿ ಅಂತಸ್ತುಗಳನ್ನು ಲೆಕ್ಕಿಸದೆ ಅವರ ಶಿವಭಕ್ತಿಯೊಂದನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು, ಅವರನ್ನು ಗೌರವದಿಂದ ಭಕ್ತಿಯಿಂದ ಉಲ್ಲೇಖಿಸುತ್ತಾನೆ. ಶಿವಭಕ್ತರಲ್ಲದವರು, ಶಿವದ್ರೋಹಿಗಳು ಯಾವ ಜಾತಿಗೇ ಸೇರಿರಲಿ, ಯಾವ ಅಂತಸ್ತಿನವರೇ ಆಗಿರಲಿ, ಅವರನ್ನು ಕುರಿತು ಪ್ರಸ್ತಾಪಿಸುವಾಗ ಏಕವಚನವನ್ನೇ ಉಪಯೋಗಿಸುತ್ತಾನೆ.

1. ಭಕ್ತರ ಹಿರಿಮೆಯನ್ನು ಪಸರಿಸುವವನು ಎಂದು ಇದರ ಅರ್ಥ
2. ಪೆರಿಯಪುರಾಣ ಎಂದರೆ ಹಿರಿಯ ಅಥವಾ ದೊಡ್ಡ ಪುರಾಣ.

ಶಿವಭಕ್ತರಿಗೆ ಕೇಡು, ಹಾನಿಯುಂಟಾಗಿರುವ ಸಂದರ್ಭದಲ್ಲಿ ಅದನ್ನು ಮರೆಸಿಡದೆ ಚಾರಿತ್ರಿಕ ದೃಷ್ಟಿಯಿಂದ ಇದ್ದ ಹಾಗೆಯೇ ನಿರೂಪಿಸಿರುತ್ತಾನೆ ಅಂತಹ ಸಂದರ್ಭಗಳಲ್ಲಿ ತನ್ನ ವ್ಯಕ್ತಿತ್ವ ಸ್ವಭಾವಗಳಿಗೆ ತಕ್ಕುದಾದ ಸುಸಂಸ್ಕೃತ ಭಾಷೆಯನ್ನೇ ಉಪಯೋಗಿಸುತ್ತಾನೆ.

ಉದಾಹರಣೆಗಾಗಿ ಏಣಾಧಿನಾಥ ನಾಯನಾರನು ತನ್ನ ವೈರಿಯಾದ ಅತಿಶೂರನು ತನ್ನೊಡನೆ ದ್ವಂದ್ವಯುದ್ಧ ಮಾಡುವ ಸಂದರ್ಭದಲ್ಲಿ ಅವನ ಹಣೆಯ ವಿಭೂತಿಯನ್ನು ನೋಡಿ 'ಇವನು ನನ್ನನ್ನು ಕೊಲ್ಲುವಲ್ಲಿ ನಾನು ವಿರೋಧಿಸುವುದಿಲ್ಲ' ಎಂಬ ಅರ್ಥದಲ್ಲಿ, 'ಇವನು ಮನಮಾಡಿದ ಕಾರ್ಯದ ದಾರಿಯಲ್ಲಿಯೇ ಸೇರಿ ಸಮ್ಮತಿಸಿ ನಿಲ್ಲುವೆನು' ಎನ್ನುವನು (ಪು. 219. ಪ. 635).

ಅತಿಶೂರನು ಏಣಾಧಿನಾಥ ನಾಯನಾರನನ್ನು ಕೊಂದನು ಎಂಬುದರ ಬದಲಾಗಿ, 'ಅತಿಶೂರನು ತಾನು ಚಿಂತಿಸಿದಂತೆಯೇ ಮಾಡಿ ಮುಗಿಸಿದನು' ಎಂದು ಕವಿಯು ಎನ್ನುವನು. (ಪು. 220. ಪ. 637).

ಮೆಯ್‌ಪ್ಪೊರುಳ್ ನಾಯನಾರನನ್ನು ಮುತ್ತನಾಥನು ಶಿವಭಕ್ತನ ವೇಷವನ್ನು ಧರಿಸಿ ಮೋಸದಿಂದ ಕೊಂದುದನ್ನು ಪ್ರಸ್ತಾಪಿಸುವಾಗ ಕವಿಯು ಅದನ್ನು ವ್ಯಕ್ತವಾಗಿ ಹೇಳದೆ, 'ತಾನು ಹಿಂದೆ ನೆನೆದುಕೊಂಡು ಬಂದಂತೆ ಮಾಡಿದನು' ಎನ್ನುವನು. (ಪು 164. ಪ 471). ಇಂತಹ ಸಂದರ್ಭಗಳು ಕವಿಯ ಉತ್ತಮ ಸಂಸ್ಕೃತಿಯನ್ನು ಉದಾಹರಿಸುತ್ತವೆ.

ಪೆರಿಯ ಪುರಾಣ

ಪೆರಿಯ ಪುರಾಣವು ಎಪ್ಪತ್ತು ಸರ್ಗಗಳಿಂದಲೂ 4286 ವೃತ್ತಗಳಿಂದಲೂ ಕೂಡಿದೆ. ಇದರಲ್ಲಿ ಶಿವನ ಭಕ್ತರ ಚರಿತೆಗಳು ವಿವರವಾಗಿ ನಿರೂಪಿತವಾಗಿವೆ. ಇದನ್ನು ಹನ್ನೆರಡನೆಯ ತಿರುಮುರೆ[1] (ಪವಿತ್ರಗ್ರಂಥ) ಎಂದು ಭಕ್ತರು ಘೋಷಿಸಿದ್ದಾರೆ.

ಈ ಪೆರಿಯ ಪುರಾಣವು ಚೋಳಕಾಲದ ಅತ್ಯಂತ ಅಮೂಲ್ಯವಾದ ಶೈವಗ್ರಂಥ. ಶೇಕ್ಕಿಳಾರನು ಈ ಗ್ರಂಥದಲ್ಲಿ ತನ್ನ ಉನ್ನತವಾದ ರಾಜಕೀಯ ಪದವಿಯಿಂದಲೂ, ವಿಪುಲವಾದ ವಿಷಯ ಜ್ಞಾನದಿಂದಲೂ, ಶಿವಭಕ್ತರ ಚರಿತೆಯಲ್ಲಿ ಅನುಸ್ಯೂತವಾದ ಪೂರ್ವಕಾಲದ ಮತಭಾವನೆಗಳನ್ನು ಸಮರ್ಪಕವಾಗಿ ಕನ್ನಡಿಸಿದ್ದಾನೆ. ಈ ಭಕ್ತ ನಾಯನಾರರಲ್ಲಿ ಕೆಲವರು ಚೇರ, ಚೋಳ, ಪಾಂಡ್ಯ ಅರಸುಮನೆತನಗಳಿಗೆ ಸೇರಿದವರು. ಕೆಲವರು ಸಣ್ಣಪುಟ್ಟ ಅರಸುಗಳು ಮತ್ತು ಮುಖಂಡರು. ಅರಸುಮನೆತನಗಳ ನಿಕಟ

---

1. ತಿರುಮುರೆಗಳು: ಇವು ತಮಿಳು ಶೈವಶಾಸ್ತ್ರಗ್ರಂಥಗಳು. ಇವುಗಳ ಸಂಖ್ಯೆ ಹನ್ನೆರಡು. ತೇವಾರ್, ತಿರುವಾಚಕ, ತಿರುವಿಶೈಪ್ಪಾ, ತಿರುಪಲ್ಲಾಂಡು, ತಿರುಮಂತ್ರ, ಪದಿನೊನ್ರಾ ನ್ತಿರುಮುರೈ ಮತ್ತು ಪೆರಿಯ ಪುರಾಣಗಳೇ ಈ ಹನ್ನೆರಡು ತಿರುಮುರೆಗಳು.

ಪರಿಚಯವಿದ್ದುದರಿಂದ ಈ ಕವಿಗೆ ಆಗಿನ ಕಾಲದ ಶೈವ ಸಂಪ್ರದಾಯಗಳಿಗೆ ಸಂಬಂಧಿಸಿ ಶಿವಭಕ್ತರ ಕಾಲ, ಜೀವನ, ಇತಿಹಾಸಗಳ ಯಥಾವತ್ತಾದ ಪರಿಚಯವನ್ನು ಕೊಡಲು ಯೋಗ್ಯತೆ ಇತ್ತು.

ತೇವಾರ[1]ವನ್ನು ರಚಿಸಿದ ಕವಿಗಳು ತಮ್ಮ ಸ್ತೋತ್ರಗಳಲ್ಲಿ ಹೆಸರಿಸಿದ ಎಲ್ಲಾ ದೇವಾಲಯಗಳನ್ನೂ ಈತನು ಸಂದರ್ಶಿಸಿರಬೇಕೆಂದು ತೋರುವುದು. ಇಂತಹ ಕವಿಯು ಪೆರಿಯ ಪುರಾಣವನ್ನು ಶ್ರಮಪೂರ್ವಕವಾಗಿ ರಚಿಸಿದುದರಿಂದ, ಈ ಗ್ರಂಥವು ಶೈವಮತ ಮತ್ತು ಅದರ ಅಭಿವೃದ್ಧಿಯ ಕುರಿತಾದ ವಿವರಗಳಿಂದ ತುಂಬಿದೆ. ಆಳುವ ಅರಸನ ಮಂತ್ರಿಯೊಬ್ಬನು ಹನ್ನೆರಡನೆಯ ಶತಮಾನದಲ್ಲಿ ನಾಯನಾರರ (ಶಿವಶರಣರ) ಕುರಿತು ಬರೆದನೆಂಬುದರಿಂದಲೇ ಚೋಳರಾಜನೂ ಅವನ ಪ್ರಜೆಗಳೂ ಈ ಶಿವಶರಣರಲ್ಲಿ ಎಷ್ಟೊಂದು ಗೌರವವಿಟ್ಟಿದ್ದರೆಂಬುದು ವ್ಯಕ್ತವಾಗುವುದಲ್ಲವೇ? ಮಾತ್ರವಲ್ಲ, ಚೋಳ ಕಾಲದಲ್ಲಿ ಶೈವಮತದ ಪ್ರಾಬಲ್ಯಪ್ರಾಧಾನ್ಯತೆಗಳಿಗೂ ಇದು ದ್ಯೋತಕವಾಗಿದೆ.

ದಕ್ಷಿಣ ಭಾರತದಲ್ಲಿ ಶೈವಸಿದ್ಧಾಂತಕ್ಕೆ ಒಂದು ಸ್ಥಾನ ದೊರೆತುದು ತಿರುಮೂಲ[2]ರ ತಿರುಮಂತ್ರದ ಕಾಲದಿಂದ. ಇದರ ತತ್ವಗಳನ್ನು ತೇವಾರ ಸ್ತೋತ್ರಪಾಠಕರೂ, ಮಾಣಿಕ್ಯ ವಾಸಕರೂ ತಮ್ಮ ಭಕ್ತಿಗೀತಗಳ ಮೂಲಕ ಪ್ರಚಾರಮಾಡಿದರು. ಈ ಶೈವ ತತ್ವಗಳನ್ನು ಅರುವತ್ತಮೂರು ಪುರಾತನರು ಹೇಗೆ ತಮ್ಮ ನಿತ್ಯಜೀವನದಲ್ಲಿ ಆಚರಿಸಿ ತೋರಿಸಿರುವರು ಎಂಬುದನ್ನು ಹನ್ನೆರಡನೆಯ ಶತಮಾನದಲ್ಲಿ ಶೇಕ್ಕಿಳಾರನು ತನ್ನ ಪೆರಿಯ ಪುರಾಣದಲ್ಲಿ ವಿವರಿಸಿದ್ದಾನೆ. 13ನೇ ಶತಮಾನದಲ್ಲಿ ಮೆಯ್ಕಂಡರ ಶಿವಜ್ಞಾನ ಭೋಧೆಯ 12 ಸೂತ್ರಗಳಲ್ಲಿ ಈ ತತ್ವಗಳಿಗೆ ಒಂದು ಮೂರ್ತ ಸ್ವರೂಪ ದೊರೆತಿದೆ

ಪೆರಿಯ ಪುರಾಣದಲ್ಲಿ ಚರಿತೆಯು ಐತಿಹ್ಯಗಳೊಡನೆ ಬೆರೆತು ನಿರೂಪಿತವಾಗಿದೆ. ಇದು ಒಂದು ಬೃಹತ್ಕೃತಿ. ಇದು ಪ್ರಾಧಾನ್ಯವಾಗಿ ಧಾರ್ಮಿಕ ಗ್ರಂಥವಾದರೂ ಒಂದು ಉತ್ತಮ ಕಾವ್ಯವೆಂದೆನ್ನಿಸಿಕೊಂಡಿದೆ ಸ್ವಾರಸ್ಯವಾದ ಸುಂದರರ ಜೀವನ ಚರಿತೆ ಈ ಕಾವ್ಯದ ಸೂತ್ರವೆಂದೆಣಿಸಲ್ಪಟ್ಟಿದೆ. ಅಂತೆಯೇ ಸುಂದರರ ಚರಿತೆಯಿಂದ ಪೆರಿಯ ಪುರಾಣವು ಆರಂಭವಾಗುವುದು. ಸುಂದರರ ಜೀವನ ಈ ಗ್ರಂಥಕ್ಕೆ ಬೇಕಾದ ವಿಪುಲ ವಿಷಯಗಳನ್ನು ದೊರಕಿಸಿದೆ ಅವರ ಜೀವನಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಅವರದು ಬರಿಯ ವಿರಕ್ತ ಭಕ್ತರ ಜೀವನವಲ್ಲ. ಅವರು ಮದುವೆಯಾಗಿ ಗೃಹಸ್ಥ ಜೀವನವನ್ನು ನಡೆಸಿದ ಭಕ್ತರು. ಅವರದು ಪವಿತ್ರ ಜೀವನ. ಶಿವನ ಸಖರಾಗಿ ಜೀವನದಲ್ಲಿ ಬಾಳ್ವೆಯನ್ನು ನಡೆಸಿದುದರಿಂದ ಸಂಸಾರದ ದೋಷಗಳು ಅವರನ್ನಂಟಿಕೊಳ್ಳಲಿಲ್ಲ. ಅವರು ಶಿವನಿಂದ ಆಳಾಗಿ ಸ್ವೀಕರಿಸಲ್ಪಟ್ಟವರು. ಅವರು ಬಯಸಿದುದನ್ನೆಲ್ಲಾ ಅನುಗ್ರಹಿಸುವ ಭಾರ ಶಿವನದಾಗಿತ್ತು. ರಾಜಯೋಗ್ಯವಾದ ಉಡುಪುಗಳನ್ನು ಅವರು ಧರಿಸು

1. ತೇವಾರ: ಪುಟ 19 ರಲ್ಲಿ ವಿವರಿಸಲಾಗಿದೆ
2. ತಿರುಮೂಲರ ತಿರುಮಂತ್ರ : ಪುಟ 30 ರಲ್ಲಿ ಕೊಟ್ಟಿದೆ.

ತ್ತಿದ್ದರು. ಈ ರೀತಿಯ ರಾಜಠೀವಿಯ ಜೀವನವನ್ನು ನಡೆಸಲು ದೇವರೇ ಅವರಿಗೆ ಸಹಾಯಮಾಡಿದರು. ತಿರುತ್ತೊಂಡರ ಯಾದಿಯನ್ನು ಕೊಡುವ ವರೆಗಿನ ಘಟ್ಟದ ಸುಂದರರ ಬಾಲ್ಯಜೀವನವನ್ನು ಶೇಕ್ಕಿಳಾರ ಕವಿಯು ಚಲೋದಾಗಿ ಹಾಡಿದ್ದಾನೆ. ಆಮೇಲೆ ಆ ತಿರುತ್ತೊಂಡರ ಚರಿತೆಗಳು ಒಂದರ ಮೇಲೊಂದು ಹೇಳಲಾಗಿವೆ. ಈ ಭಕ್ತರ ಚರಿತೆಗಳನ್ನೆಲ್ಲಾ ಹಾಡಿ ಮುಗಿಸಿದ ಮೇಲೆ ಸುಂದರರ ಉಳಿದ ಜೀವನವನ್ನು ನಿರೂಪಿಸಿ ಈ ಗ್ರಂಥವು ಕೊನೆಗೊಂಡಿದೆ. ಹೀಗೆ ಈ ಗ್ರಂಥಕ್ಕೆ ಒಂದು ಸಂಪೂರ್ಣತೆ ಯನ್ನು ಹೇಳಬಹುದು. ವೈವಿಧ್ಯದಲ್ಲಿ ಕಾಣಬರುವ ಐಕ್ಯತೆಯನ್ನು ಗುರುತಿಸಬಹುದು.

ಕವಿಯು ದೈವಿಕ ಸಾನ್ನಿಧ್ಯವನ್ನು ತಾನು ದೃಷ್ಟಿಹರಿಸಿದ ಎಡೆಗಳಲ್ಲೆಲ್ಲಾ ನೋಡು ತ್ತಾನೆ. ಆಧ್ಯಾತ್ಮಿಕ ಭಾವುಕತೆ ಕವಿಯಲ್ಲಿ ತುಂಬಿದೆ.

ಪುರಾತನವಾದ ಸತ್ಯದಲ್ಲಿಯೇ ಜೀವನವು ನಿಂತಿದೆ ಎಂಬುದನ್ನು ಪುರಾಣ ಎಂಬ ಶಬ್ದವು ಸೂಚಿಸುತ್ತದೆ. ಪುರಾತನ ಭಕ್ತರ ಸತ್ಯಜೀವನವನ್ನೇ ಶೇಕ್ಕಿಳಾರನು ವಿವರಿ ಸಿದ್ದಾನೆ. ಈ ಭಕ್ತರು ಜೀವಿಸಿದ್ದ ಸ್ಥಳಗಳಿಗೆಲ್ಲಾ ಶೇಕ್ಕಿಳಾರನು ಹೋಗಿದ್ದಿರಬೇಕು. ಈ ಭಕ್ತರ ಕುರಿತಾಗಿದ್ದ ಐತಿಹ್ಯಗಳನ್ನೆಲ್ಲಾ ಪರಿಶೋಧಿಸಿರಬೇಕು ಎಂಬುದಾಗಿ ಈ ಗ್ರಂಥದಿಂದ ತಿಳಿದುಬರುತ್ತದೆ. ಈ ರೀತಿ ಹೋಗಿ ಬರಲು, ಪರಿಶೋಧಿಸಲು ಬೇಕಾದ ವಿಪುಲ ಅನುಕೂಲ್ಯಗಳು ಒಂದು ರಾಜ್ಯದ ಪ್ರಧಾನಿಯಾಗಿದ್ದ ಈತನಿಗೆ ಸಹಜವಾಗಿಯೇ ಇದ್ದುವು. ಹೀಗಾಗಿ ಶೇಕ್ಕಿಳಾರನ ಪೆರಿಯ ಪುರಾಣವು ಚಾರಿತ್ರಿಕ ದೃಷ್ಟಿಯಿಂದ ತಕ್ಕ ಮಟ್ಟಿಗೆ ಸಮರ್ಪಕವಾಗಿದೆ.

ಭಕ್ತರನ್ನು ಕುರಿತಾದ ವಿವಿಧ ಹಾಡುಗಳನ್ನು ಹಾಡಿದ ಸಂದರ್ಭಗಳನ್ನು ಶೇಕ್ಕಿಳಾರನು ವಿವರಿಸುತ್ತಾನೆ. ಇದರಿಂದ ಹಲ ಸೂಕ್ಷ್ಮವಿಷಯಗಳೂ ಭಕ್ತರ ಜೀವನದಲ್ಲಿ ನಡೆದ ಅನೇಕ ಸಂಭವಗಳೂ ತಿಳಿದುಬರುತ್ತವೆ. ಭಕ್ತರ ಹೃದಯವನ್ನು ಒಳಹೊಕ್ಕು ಅವರ ಅಭಿಪ್ರಾಯಗಳನ್ನು ನಿರೂಪಿಸಿದಂತೆ ಸಹಜವಾಗಿದೆ ಈ ಚರಿತೆ ಗಳನ್ನೊಳಗೊಂಡ ಪೆರಿಯ ಪುರಾಣ.

ಪೆರಿಯ ಪುರಾಣವೆಂದರೆ ದೊಡ್ಡ ಪುರಾಣವೆಂದರ್ಥ. ಇಲ್ಲಿ ಪುರಾಣವನ್ನು, ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುಚರಿತೆ ಎಂಬ ಪಂಚಲಕ್ಷಣಗಳಿಂದ ಕೂಡಿದ ಪುರಾಣವೆಂಬರ್ಥದಲ್ಲಿ ಉಪಯೋಗಿಸಿಲ್ಲ. ಹಳೆಯ ಧಾರ್ಮಿಕ ಗ್ರಂಥ ಎಂಬರ್ಥ ದಲ್ಲಿ ಮಾತ್ರ ಉಪಯೋಗಿಸಿದೆ. ಇದು ಭಕ್ತರ ಚರಿತೆಯನ್ನೊಳಗೊಂಡ ಬೃಹದ್ ಗ್ರಂಥ.

ಭಕ್ತಿ, ನಿಷ್ಠೆ, ಆಚಾರಗಳ ಮಹತ್ತ್ವವನ್ನು ಈ ಶಿವಭಕ್ತರು ತಮ್ಮ ಜೀವನದಲ್ಲಿ ತೋರಿಸಿಕೊಡುತ್ತಾರೆ. ಶಿವನ ಅನುಗ್ರಹವೇ ಮುಕ್ತಿಗೆ ಕಾರಣ ಎನ್ನುವುದು ಸುಂದರರ ಚರಿತೆಯಿಂದ ಸುವಿದಿತವಾಗುತ್ತದೆ. ಶಿವನು ತನ್ನನ್ನು ತಡೆದು ಆಳಾಗಿಸಿಕೊಂಡಲ್ಲದೆ ಈ ಪ್ರಾಪಂಚಿಕ ಜೀವನದಿಂದ ಬಿಡುಗಡೆ ಹೊಂದುವುದು, ಮುಕ್ತಿಯನ್ನು ಹೊಂದುವುದು ಅಸಾಧ್ಯ ಎನ್ನುವುದು ಅವನಿಗೆ ಗೊತ್ತು. 'ಅಹಂ ಕರೋಮೀತಿ ವೃಥಾಭಿಮಾನಃ'

ಎಂಬುದನ್ನು ಮೈಗೂಡಿಸಿಕೊಂಡ ಸುಂದರನು ಶಿವನೇ ತನ್ನನ್ನು ಆಳಾಗಿಸಿಕೊಂಡುದರಿಂದ ಸುಲಭವಾಗಿ ಶಿವನಲ್ಲಿ ಏಕಭಕ್ತಿಯನ್ನು ಸಾಧಿಸುತ್ತಾನೆ. ಯಜಮಾನನಿರುವಾಗ ಆಳಿಗೆಲ್ಲಿಯದು ಜೀವನ ನಿರ್ವಹಣದ ಚಿಂತೆ? ಶಿವನೇ ಆತನ ಯೋಗಕ್ಷೇಮವನ್ನು ವಹಿಸಿರುತ್ತಾನೆ.

ತಿರುನೀಲಕಂಠನೆಂಬ ಕುಂಬಾರ ಭಕ್ತನು ತನ್ನ ಪತ್ನಿಯು ತಿರುನೀಲಕಂಠದ ಮೇಲೆ ಇಟ್ಟ ಆಣೆಯನ್ನು ತಪ್ಪದೆ ಜೀವನವಿಡೀ ಪಾಲಿಸಿಕೊಂಡು ಬರುತ್ತಾನೆ.

ವೈಶ್ಯಕುಲಕ್ಕೆ ಸೇರಿದ ಇಯರ್‌ಪಗೈ ನಾಯನಾರನು ಶಿವಭಕ್ತರು ಬಯಸಿದುದನ್ನೆಲ್ಲಾ ಇಲ್ಲವೆನ್ನದೆ ಕೊಡುವ ನಿಷ್ಠೆಯನ್ನಿಟ್ಟುಕೊಂಡಿರುತ್ತಾನೆ. ತನ್ನ ಪತ್ನಿಯನ್ನೇ ಬಯಸಿದ ಶಿವಭಕ್ತನಾದ ವೇದಿಯ ಬ್ರಾಹ್ಮಣನಿಗೆ ಸಂತೋಷದಿಂದ ಆಕೆಯನ್ನೀಯುತ್ತಾನೆ. ಇದು ಸಾಮಾನ್ಯಜನರಿಗೆ ಅರ್ಥವಾಗದ ವಿಷಯ. ಲೋಕರೂಢಿಗೆ ವಿರುದ್ಧವಾಗಿ ಈತನು ಆಚರಿಸಿದುದರಿಂದ ಈತನಿಗೆ ಇಯರ್‌ಪಗೈ (ಪ್ರಕೃತಿ ಸ್ವಭಾವಕ್ಕೆ ವಿರೋಧನಾಗಿ ಆಚರಿಸಿದವನು) ಎಂಬ ಹೆಸರು ಅನ್ವರ್ಥನಾಮವಾಗಿಯೇ ಇದೆ. ಈತನು ಸತಿಯನ್ನು ಶಿವಭಕ್ತನಿಗೆ ಕೊಟ್ಟುದು ಮಾತ್ರವಲ್ಲ. ಆತನಿಗೆ ಕಾವಲಿದ್ದು ಈ ಕೃತ್ಯವನ್ನು ವಿರೋಧಿಸಿದ ತನ್ನ ನಂಟರಿಷ್ಟರನ್ನೇ ತುಂಡರಿಸಿ ಆತನು ತನ್ನ ಸತಿಯನ್ನು ಕಾಡಿನವರೆಗೆ ಕೊಂಡು ಹೋಗುವುದಕ್ಕೆ ಸಹಾಯನಾಗುವನು.

ಇಳೆಯಾನ್ ಗುಡಿಮಾರನೆಂಬ ಶೂದ್ರಭಕ್ತನು ತನ್ನ ದಾರಿದ್ರ್ಯದಲ್ಲಿಯೂ ಅತಿಥಿ ಸೇವೆಯನ್ನು ತಪ್ಪಿಸುವುದಿಲ್ಲ. ಮೊಳಕೆಹಾಕಿದ ಬತ್ತವನ್ನೇ ಹೆಕ್ಕಿತಂದು ಅಕ್ಕಿಮಾಡಿ, ಅನ್ನಮಾಡಿ, ಕೀರೆಯಿಂದ ಪದಾರ್ಥಗಳನ್ನು ಮಾಡಿ ಅತಿಥಿಯನ್ನು ಸತ್ಕರಿಸುವನು. ಅಡುಗೆ ಮಾಡಲು ಕಟ್ಟಿಗೆ ಇಲ್ಲದಾಗಲು ಮನೆಯ ಸೂರನ್ನೇ ಕಟ್ಟಿಗೆಯನ್ನಾಗಿ ಭಕ್ತನು ತನ್ನ ಸತಿಗೆ ಒದಗಿಸುವನು.

ಚೇದಿನಾಡಿನ ಅರಸನಾದ ಮೆಯ್‌ಪೊರುಳ್ ನಾಯನಾರನಿಗೆ ಶಿವಭಕ್ತರಲ್ಲಿ ಅಚಲವಾದ ಭಕ್ತಿ. ತನ್ನ ವೈರಿ ಅರಸನೇ ಶಿವಭಕ್ತನ ವೇಷದಲ್ಲಿ ಈತನಲ್ಲಿ ಬಂದಾಗ ಆತನನ್ನು ಭಕ್ತನೆಂದೇ ಪೂಜಿಸುವನು. ಆತನ ಕೈಯಿಂದ ವಂಚನೆಗೊಳಗಾಗಿ ಪ್ರಾಣಾಂತಿಕವಾದ ಗಾಯವನ್ನು ಹೊಂದಿದಾಗಲು ಎಳ್ಳಷ್ಟೂ ವೈರವನ್ನು ತೋರದೆ ಆ ಶಿವಭಕ್ತವೇಷಕ್ಕೆ ಗೌರವವನ್ನು ಕೊಟ್ಟು ತನ್ನ ಕಡೆಯವರಿಂದ ಆತನನ್ನು ರಕ್ಷಿಸುವನು.

ವೆಲ್ಲಾಳ ಕುಲದಲ್ಲಿ ಜನಿಸಿದ ವಿಜನ್‌ಮಿಂಡನು ಶಿವಭಕ್ತರನ್ನು ಅಲಕ್ಷಿಸಿ ಶಿವನನ್ನೇ ಸೇವಿಸಹೋಗುತ್ತಿದ್ದ ಸುಂದರನ ಮೇಲೆಯೇ ಆಕ್ರೋಶಗೊಂಡನು.

ವೈಶ್ಯಕುಲಕ್ಕೆ ಸೇರಿದ ಅಮರನೀತಿ ನಾಯನಾರನು ಅನ್ನಸತ್ರವನ್ನೇರ್ಪಡಿಸಿ ಅಲ್ಲಿ ಶಿವಭಕ್ತರಿಗೆ ಭೋಜನವನ್ನು ಮಾತ್ರವಲ್ಲದೆ ಕಂಥೆ, ಕೌಪೀನ, ಮೇಲುಹೊದಿಕೆಯ

ಬಟ್ಟೆಗಳನ್ನು ಒದಗಿಸುತ್ತಿದ್ದನು. ಶಿವಭಕ್ತನಾದ ವೇದಿಯನು ತನ್ನಲ್ಲಿಟ್ಟ ಕೌಪೀನವು ಕಾಣದಾಗಲು ಸತಿಸುತರೊಡನೆ ತಾನೇ ತೊಲೆಯ ತಟ್ಟೆಯನ್ನೇರುವನು. ಆಗ ಆ ತಟ್ಟೆಯು ಆ ವೇದಿಯನ ಇನ್ನೊಂದು ಕೌಪೀನದ ಭಾರಕ್ಕೆ ಸಮವಾಗುವುದು.

ಶಿವಭಕ್ತನೊಬ್ಬನಿಗೆ ಅರಸನ ಪಟ್ಟದಾನೆಯಿಂದ ವಿಘ್ನವು ಪ್ರಾಪ್ತವಾಗಲು (ಅದು ಶಿವಭಕ್ತನು ಕೊಯ್ದ ಪುಷ್ಪಗಳನ್ನು ಚೆಲ್ಲಲು), ಎರಿಪತ್ತನು ಆ ಆನೆಯನ್ನು ತನ್ನ ಪರಶುವಿನಿಂದ ಕೊಂದುಹಾಕುವನು.

ಬಿಲ್ಲವ ಕುಟುಂಬದಲ್ಲಿ ಬಂದ ಏಣಾಧಿನಾಥ ನಾಯನಾರನು ವಿಭೂತಿಯನ್ನು ವಂಚನೆಗಾಗಿ ಧರಿಸಿ ಬಂದ ವೈರಿಯನ್ನೂ ಕೊಲ್ಲದೆ ಬಿಟ್ಟು ಅವನಿಂದ ಹತನಾಗಿ ಶಿವಾನುಗ್ರಹವನ್ನು ಪಡೆದನು.

ಸೇನಾಪತಿಯ ಕುಲದಲ್ಲಿ ಜನಿಸಿದ ಮಾನಕ್ಕಂಜಾರ ನಾಯನಾರನು ತನ್ನ ಮಗಳ ವಿವಾಹದ ಮುಂಚಿನ ದಿನದಲ್ಲಿ ಆಕೆಯ ತಲೆಕೂದಲನ್ನು ಪಂಚವಟಿಗಾಗಿ ಬಯಸಿದ ಶಿವಭಕ್ತನಾದ ಮುನಿವರನಿಗೆ ಒಡನೆಯೇ ಕತ್ತರಿಸಿ ಕೊಟ್ಟನು.

ವೇಳಾಳರ ಕುಲದಲ್ಲಿ ಬಂದ ತಾಯನಾರ್ ಎಂಬ ನಾಯನಾರನು ಶಿವನಿಗೆ ಸಮರ್ಪಿಸಲು ಕೊಂಡುಹೋಗುವ ಕೆಂಪುನೆಲ್ಲ ಅಕ್ಕಿ, ಮಾವಿಡಿ, ಕೆಂಪಗಾದ ಕೀರೆ ಇವುಗಳು ನೆಲದ ಬಿರುಕುಗಳಲ್ಲಿ ಚೆಲ್ಲಲು ಶಿವನ ಸೇವೆಗೆ ಬಂದ ಈ ಎಡರನ್ನು ನೋಡಿ ಅರಿವಾಳಿನಿಂದ ತನ್ನ ಕತ್ತನ್ನೇ ಕತ್ತರಿಸಲು ಉದ್ಯಮಿಸಿದನು.

ಕಲಯರ್ ಎಂಬ ಬ್ರಾಹ್ಮಣ ಭಕ್ತನು ಗುಗ್ಗುಳಧೂಪದ ಕೈಂಕರ್ಯವನ್ನು ಶಿವಪರಮಾತ್ಮನಿಗೆ ತಪ್ಪದೆ ನಡೆಸುವವನು. ತನಗೆ ಹೆಚ್ಚಿನ ದಾರಿದ್ರ್ಯವು ಬಂದು ಗುಗ್ಗುಳವನ್ನು ಕೊಂಡುಕೊಳ್ಳಲು ಸಾಧ್ಯವಾಗದಿದ್ದಾಗ ಆತನ ಪತ್ನಿಯು ತನ್ನ ತಾಲಿಯನ್ನೇ ಮಾರಲು ಗಂಡನಗೆ ಕೊಡುವಳು. ಅವನು ಅದರಿಂದ ಗುಗ್ಗುಳವನ್ನು ಕೊಂಡುಕೊಂಡು ತನ್ನ ಸೇವೆಯನ್ನು ನಡೆಸಿ ಶಿವನನ್ನು ಮೆಚ್ಚಿಸಿದನು. ಆತನ ಅನುಗ್ರಹವನ್ನು ಪಡೆದನು.

ಗೊಲ್ಲರ ಕುಲದಲ್ಲಿ ಸೇರಿದ ಆನಾಯರ್ ಎಂಬ ಭಕ್ತನು ತನ್ನ ಕೊಳಲಲ್ಲಿ ಶಿವಪಂಚಾಕ್ಷರಿಯನ್ನು ರಾಗಯುಕ್ತವಾಗಿ ನುಡಿಸುತ್ತ ಆ ಗೀತದಲ್ಲೇ ತನ್ಮಯನಾಗಿ ಚರಾಚರಗಳನ್ನೂ ತಲ್ಲೀನಗೊಳಿಸಿ ಶಿವಾನುಗ್ರಹ ಪಾತ್ರನಾಗುವನು.

ವಣಜಕುಲದಲ್ಲಿ ಜನಿಸಿದ ಮೂರ್ತಿ ನಾಯನಾರನು ಶಿವನಿಗೆ ಚಂದನ ಲೇಪನದ ಕೈಂಕರ್ಯವನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದನು. ಆ ಊರಿನ ಜೈನ ಅರಸನು ಈತನಿಗೆ ಚಂದನ ಸಿಗದಂತೆ ಮಾಡಲು ಮುಂಗೈಯನ್ನೆ ತೇದು ಶಿವನ ಅನುಗ್ರಹವನ್ನು ಸಂಪಾದಿಸಿದನು.

ವೇದಿಯರ ಕುಲದಲ್ಲಿ ಅವತರಿಸಿದ ಮುರುಗ ನಾಯನಾರನು ಶಿವನ ಅಲಂಕಾರಕ್ಕೆ ಹೂಗಳನ್ನು ನಿಯಮನಿಷ್ಠೆಯಿಂದ ಸಂಗ್ರಹಿಸಿ, ವಿಧವಿಧವಾಗಿ ಶಿವನನ್ನು ಅಲಂಕರಿಸಿ, ಪಂಚಾಕ್ಷರವನ್ನು ಜಪಿಸುತ್ತ ಆತನ ಅನುಗ್ರಹವನ್ನು ಪಡೆದನು.

ಪಶುಪತಿ ನಾಯನಾರನು ಇನ್ನೊಬ್ಬ ಬ್ರಾಹ್ಮಣ ಭಕ್ತನು. ಆತನು ಕಂಠಪೂರ್ತಿ ನೀರಲ್ಲಿ ಮುಳುಗಿ ಶ್ರೀರುದ್ರವನ್ನು ಭಕ್ತಿಯಿಂದ ಜಪಿಸಿ ಶಿವನನ್ನು ಸಂತೋಷಗೊಳಿಸಿದನು.

ನಂದನಾರ್ ಎಂಬ ಹೊಲೆಯ ಭಕ್ತನು ಡೋಲುಬಡಿಯುವ ಉದ್ಯೋಗದಲ್ಲಿ ನಿರತನಾಗಿರುವವನು. ಶಿವಚಿಂತನೆಯನ್ನು ಎಡೆಬಿಡದೆ ಮಾಡುತ್ತಿದ್ದನು. ಈತನ ಭಕ್ತಿವಿಶೇಷಕ್ಕೆ ಮೆಚ್ಚಿ ಶಿವನು ಈ ಭಕ್ತನಿಗೆ ಹೊರಗಿನಿಂದಲೇ ದರ್ಶನ ಸಿಗುವಂತೆ ನಂದಿಯನ್ನು ಸರಿದು ಇರುವಂತೆ ಆಜ್ಞಾಪಿಸಿದನು. ಹಾಗೆಯೇ ಚಿದಂಬರಕ್ಕೆ ಹೋಗ ಬೇಕೆಂಬ ದೃಢಸಂಕಲ್ಪವನ್ನು ಈ ಭಕ್ತನು ಮಾಡಿಕೊಂಡನು. ತಾನು ಜನಿಸಿದ ಕುಲವು ಈ ಕಾರ್ಯಕ್ಕೆ ತಕ್ಕುದಲ್ಲವೆಂದು ತಿಳಿದು ತನ್ನ ಆಶೆಯನ್ನು ಅಡಗಿಸಿಡುವನು. ಆದರೆ ಪುನಹ ನಾಳೆ ಹೋಗಬೇಕೆಂದು ಆಶೆಯು ಆತನಿಗೆ ಪ್ರತಿದಿನ ಉಂಟಾಗುತ್ತಿತ್ತು. ಕೊನೆಗೆ ಆತನು ತಿಲ್ಲೆಗೆ ಹೋಗಿ ಶಿವಾನುಗ್ರಹಕ್ಕೆ ಪಾತ್ರನಾಗುವನು.

ತಿರುಕುರಿಪ್ಪುತೊಂಡ ನಾಯನಾರನು ಕಾಂಚೀಪುರದಲ್ಲಿದ್ದ ಮಡಿವಾಳವೃತ್ತಿಯ ಭಕ್ತ. ಶಿವತಪಸಿಯೊಬ್ಬನು ಕೊಟ್ಟ ಕಂಥೆಯನ್ನು ತಾನು ಒಪ್ಪಿಕೊಂಡಂತೆ ಸಂಜೆ ಯೊಳಗೆ ಒಗೆದು ಆರಿಸಿಕೊಡಲು ಅಶಕ್ತನಾದಾಗ ತನ್ನ ತಲೆಯನ್ನೇ ಒಗೆಯುವ ಕಲ್ಲಿಗೆ ತಾಟಿಸಿಕೊಳ್ಳುವನು. ಆಗ ಶಿವನು ಆತನನ್ನು ತಡೆದು ಅವನನ್ನನುಗ್ರಹಿಸುವನು.

ವಿಚಾರಶರ್ಮನೆಂಬ ಬ್ರಾಹ್ಮಣ ಭಕ್ತನು ತಾನು ಮೇಯಿಸಿಕೊಂಡು ಬರುತ್ತಿದ್ದ ದನಗಳ ಹಾಲಿನಿಂದ ಶಿವನಿಗೆ ಅಭಿಷೇಕವನ್ನು ಮಾಡುತ್ತಿರಲು, ಆತನ ತಂದೆಯು ಆತನನ್ನು ಹೊಡೆದನು. ಆ ಅಭಿಷೇಕದ ಹಾಲಿನ ಕೊಡಗಳನ್ನು ಕಾಲಿನಿಂದ ಒದೆದನು. ಆಗ ವಿಚಾರಶರ್ಮನು ಈ ರೀತಿ ಒದೆದ ಕಾಲುಗಳನ್ನು ತನ್ನ ತಂದೆಯೆಂದೂ ಲಕ್ಷಿಸದೆ ತುಂಡರಿಸಿದನು. ಶಿವನು ಈ ಭಕ್ತನಿಗೆ ಮೆಚ್ಚಿ ಚಂಡೀಶ ಪದವಿಯನ್ನು ಕೊಟ್ಟು ಅನುಗ್ರಹಿಸಿದನು. ಹೀಗೆ ಈ ಪೆರಿಯ ಪುರಾಣದಲ್ಲಿ ಬರುವ ಭಕ್ತರು ಶಿವನಲ್ಲಿ ತೋರಿಸುವ ನಿಷ್ಠೆಯ ವೈವಿಧ್ಯತೆಗಳು ವಿಸ್ಮಯಕರ! ಊಹನಾತೀತ!

ಹೀಗೆ ಲೋಕರೂಢಿಗೆ ವಿಪರೀತವಾಗಿ ಈ ಭಕ್ತರು ವರ್ತಿಸಿದುದಕ್ಕೆ ಎರಡು ರೀತಿಯ ಕಾರಣಗಳನ್ನು ನಾವು ಕೊಡಬಹುದು. ಒಂದು ಶಿವಭಕ್ತರಲ್ಲಿ, ಭಕ್ತರ ಸೇವೆಯಲ್ಲಿ, ಶಿವನ ಪೂಜೆಯಲ್ಲಿ ಅವರಿಗಿದ್ದ ಅಚಲವಾದ ನಿಷ್ಠೆ. ಇನ್ನೊಂದು ಭಕ್ತಿಪಂಥದಲ್ಲಿ ಅವರು ಮುಟ್ಟಿದ ಪರಾಕಾಷ್ಠೆ. ಈ ಉಚ್ಚನೆಲೆಯಲ್ಲಿದ್ದ ಅವರು ಶಿವಸಾಕ್ಷಾತ್ಕಾರವನ್ನು ಪಡೆದವರು, ಜೀವನ್ಮುಕ್ತರ ನೆಲೆಯಲ್ಲಿದ್ದು, ಸಾಮಾನ್ಯರು ಈ ಪ್ರಪಂಚವನ್ನು ನೋಡು ತ್ತಿರುವಷ್ಟು ಸಹಜವಾಗಿಯೇ ಅವರು ಶಿವನನ್ನು ಎಲ್ಲೆಡೆಯಲ್ಲಿಯೂ ನೋಡುತ್ತಿರು

ತ್ತಾರೆ. ಈ ರೀತಿ ಸಾಕ್ಷಾತ್ಕಾರಹೊಂದಿದ ಈ ಹಿರಿಯ ಭಕ್ತರು ಇಂತು ವರ್ಣಿಸುವುದು ಆಶ್ಚರ್ಯಕರವಲ್ಲ. ಅದು ಅವರಿಗೆ ಸ್ವಾಭಾವಿಕ.

ಹೀಗೆ ಇಲ್ಲಿ ಬಂದ ನಾಯನಾರರ ಚರಿತೆಗಳಲ್ಲಿ ಶಿವಭಕ್ತಲಾಂಛನಗಳು, ವಿಭೂತಿ, ಪಂಚಾಕ್ಷರ, ಕೌಪೀನ, ಶಿವಭಕ್ತಸೇವೆ, ಶಿವಾರ್ಚನೆ – ಇವುಗಳ ಹಿರಿಮೆಯನ್ನು ಕವಿಯು ನಿರೂಪಿಸಿದ್ದಾನೆ. ಪೆರಿಯಪುರಾಣದ ಈ ಸಂಪುಟದಲ್ಲಿ ನಿರೂಪಿತರಾದ ಭಕ್ತರುಗಳಲ್ಲಿ ವೇದಿಯರ ಕುಲಕ್ಕೆ ಸೇರಿದವನು ನಾಲ್ವರು. ಒಬ್ಬ ಭಕ್ತ ರಾಜ, ಒಬ್ಬ ಸೇನಾಪತಿ, ಮೂವರು ಭಕ್ತರು ವೈಶ್ಯಕುಲಕ್ಕೆ ಸೇರಿದವರು. ವೇಳಾಳರ ಕುಲಕ್ಕೆ ಸೇರಿದವರು ಮೂವರು. ಒಬ್ಬ ಭಕ್ತ ಕುಂಬಾರ ಕಸಬಿನವ. ಒಬ್ಬ ಬಿಲ್ಲವರ ಜಾತಿಗೆ ಸೇರಿದವ. ಒಬ್ಬ ಬೇಡರ ಜಾತಿಗೆ ಸೇರಿದವ. ಹೊಲೆಯರ ಜಾತಿಗೆ ಸೇರಿದವ ಇನ್ನೊಬ್ಬ. ಗೊಲ್ಲರ ಜಾತಿಯವ ಒಬ್ಬ. ಅಗಸ ವೃತ್ತಿಯನ್ನಾಚರಿಸುತ್ತಿದ್ದ ಇನ್ನೊಬ್ಬ. ಒಬ್ಬ ಶಿವಭಕ್ತನ ಜಾತಿಯನ್ನು ಹೇಳಿಲ್ಲ. ಶಿವಭಕ್ತನೆಂದು ಮಾತ್ರ ತಿಳಿಸಿದೆಯಷ್ಟೆ. ಇವರೆಲ್ಲರದೂ ಒಂದೇ ವರ್ಗ – ಶಿವನ ಭಕ್ತವರ್ಗ. ಒಂದೇ ಜಾತಿ – ಶಿವನ ಭಕ್ತಜಾತಿ. ಇವರೊಳಗೆ ಭೇದವಿಲ್ಲ ವೈಷಮ್ಯವಿಲ್ಲ. ಮೇಲುಕೀಳಿಲ್ಲ. ಆಧ್ಯಾತ್ಮಿಕ ಜೀವನ ಇವರನ್ನೆಲ್ಲಾ ಒಂದುಗೂಡಿಸಿದೆ.

ಪೆರಿಯಪುರಾಣದಲ್ಲಿ ಬರುವ ಸಂತರೆಲ್ಲಾ ಹಿರಿಯ ಭಕ್ತರು. ಮಾನವಜಾತಿಯಲ್ಲಿ ಕರುಣೆಯನ್ನು ತೋರಿಸುವವರು. ಸದಾ ಶಿವಭಕ್ತರ ಸೇವೆಯಲ್ಲಿ ನಿರತರಾಗಿದ್ದು ಶಿವ ನಲ್ಲಿಯೇ ಅರ್ಪಿತವಾದ ಮನಸ್ಸುಳ್ಳವರಾಗಿ ಜೀವನವನ್ನು ನಡೆಸತಕ್ಕವರು. ಅವರ ನಾಲಗೆಯಲ್ಲಿ ಯಾವಾಗಲೂ ಶಿವನಾಮವು ನೆಲಸಿರುತ್ತದೆ. ನಿರಾಡಂಬರವಾದ ಉಡುಗೆ ಯನ್ನು ಧರಿಸಿ ನಮ್ರವಾಗಿರುವರು ಅವರು. ಆಕುಲವ್ಯಾಕುಲಗಳಿಲ್ಲದೆ, ಚಿಂತಾಸಕ್ತಿ ಗಳಿಲ್ಲದೆ, ದೇವರನ್ನು ಒಂದೇರೀತಿಯಾಗಿ ಸೇವೆಮಾಡಿಕೊಂಡು ಬಂದವರು. ಆ ಶಿವನಿಗಾಗಿ ಸರ್ವವನ್ನೂ ತ್ಯಜಿಸಿದವರು. ತಮ್ಮ ಶ್ರದ್ಧೆಗಾಗಿ, ನಂಬಿಕೆಗಾಗಿ ಎಲ್ಲಾ ಕಷ್ಟಗಳನ್ನೂ ಇದಿರಿಸಿದವರು. ತಮ್ಮ ಜೀವನವನ್ನೇ ಒತ್ತೆಯಿಟ್ಟವರು. ತಮಿಳುನಾಡಿನಲ್ಲಿ ಶೈವಮತದ ಅಸ್ತಿತ್ವಕ್ಕೆ, ಪ್ರಚಾರಕ್ಕೆ ಮೂಲಸಾಧನ ಅಮರಕಾವ್ಯವಾದ ಪೆರಿಯಪುರಾಣ.

ಶಿವಭಕ್ತನ ವೇಷ

ಕಂಥೆ, ಕೌಪೀನ, ಮೇಲುಹೊದಿಕೆಯ ಬಟ್ಟೆ, ವಿಭೂತಿಯ ಚೀಲ ಇವುಗಳು ಶಿವ ಭಕ್ತರ ಉಡುಗೆತೊಡುಗೆಗಳಾಗಿದ್ದುವು.

ಆಗಿನ ಕಾಲದ ಕಾಪಾಲಿಕ ಪಂಥಕ್ಕೆ ಸೇರಿದ ಮಹಾವ್ರತಿ ಶಿವಯೋಗಿಯ ವೇಷ ಭೂಷಣಗಳ ವರ್ಣನೆಯು ಮಾನಕ್ಕಂಜಾರರ ಚರಿತೆಯಲ್ಲಿ ವಿಶದವಾಗಿ ಬರುತ್ತದೆ.

"ಆ ಮುನಿವರರು ತ್ರಿಪುಂಡ್ರವಾಗಿ ವಿಭೂತಿಯನ್ನು ನೆತ್ತಿಯಲ್ಲಿ ಧರಿಸಿದ್ದರು. ನೆತ್ತಿಯ ಮೇಲೆ ಮುಂಡನ ಮಾಡಿಸಿಕೊಂಡಿದ್ದರು. ತಲೆಯಲ್ಲಿ ಇಟ್ಟ ಶಿಖೆಯ ಕೊನೆ ಯಲ್ಲಿ ಸುರಿದು ಅಲಂಕರಿಸಿದ ಎಲುಬಿನ ಮಣಿ ಇತ್ತು. ಮುತ್ತುಗಳಂತೆ ಶೋಭಿಸುವ

ಎಲುಬುಗಳ ಕುಂಡಲ ಕಿವಿಗಳಲ್ಲಿ ಅಲ್ಲಾಡುತ್ತಿತ್ತು. ಎಲುಬಿನಿಂದ ಮಾಡಿದ ಮಣಿಗಳ ಮಾಲೆಯನ್ನು ಅವರು ಧರಿಸಿದ್ದರು. ಯೋಗಪಟ್ಟೆಯಾದ ಉತ್ತರೀಯವನ್ನು ತೋಳಿನಲ್ಲಿ ಧರಿಸಿದ್ದರು. ಕಪ್ಪಾದ ರೋಮದಿಂದ ಹಗ್ಗವಾಗಿ ಹುರಿಮಾಡಿದ ಜನಿವಾರವು ಅವರ ಎದೆಯನ್ನಲಂಕರಿಸಿತ್ತು. ವಿಭೂತಿಯ ಚೀಲವನ್ನು ಜೋತುಹಾಕಿಕೊಂಡಿದ್ದರು. ಮುಂಗೈಯಲ್ಲಿ ಎಲುಬಿನ ಮಣಿಯನ್ನು ಸುರಿದ ಹಗ್ಗವನ್ನು ಕಟ್ಟಿಕೊಂಡಿದ್ದರು. ಕೋವಣ, ನಡುವಿನ ವಸ್ತ್ರಗಳನ್ನು ಧರಿಸಿದ್ದರು. ಪಾದದಲ್ಲಿ ಪಂಚಮುದ್ರೆಗಳು ಶೋಭಿಸುತ್ತಿದ್ದುವು. ವಿಭೂತಿಯನ್ನು ಮೈಮೇಲೆ ಪೂಸಿಕೊಂಡಿದ್ದರು. ಹೀಗೆ ಆ ಶಿವಯೋಗಿಗಳು ಕಂಗೊಳಿಸುತ್ತಿದ್ದರು.''[1]

ಶಿವಭಕ್ತನಾದ ವೃದ್ಧವೇದಿಯ ಬ್ರಾಹ್ಮಣನೊಬ್ಬನ ವರ್ಣನೆ ಇನ್ನೊಂದೆಡೆಯಲ್ಲಿ ಹೀಗೆ ಬಂದಿದೆ: ``ಆತನು ಪುಣ್ಯರೂಪವಾದ ವಿಭೂತಿಯನ್ನು ಹಣೆಯಲ್ಲಿ ಧರಿಸಿದ್ದನು. ಬಿಳಿಯಾದ ತಲೆಕೂದಲನ್ನು ತಲೆಯ ಮೇಲೆ ಒಟ್ಟು ಸೇರಿಸಿ ಕಟ್ಟಿದ್ದನು. ಕಿವಿಯಲ್ಲಿ ರುದ್ರಾಕ್ಷಿಯ ಕುಂಡಲವು ನೇತಾಡುತ್ತಿತ್ತು. ರುದ್ರಾಕ್ಷಮಾಲೆಯಿಂದ ಶೋಭಿತವಾದ ಎದೆಯಲ್ಲಿ ಮೂರೆಳೆಗಳಿಂದ ಕೂಡಿದ ಉಪವೀತದೊಡನೆ ತೋಳಿನ ಮೇಲೆ ಹಾಕಿಕೊಂಡ ಬಿಳಿಯ ಉತ್ತರೀಯವು ಅಲಂಕಾರವಾಗಿ ತೋರುತ್ತಿತ್ತು. ಬಿಸಿಲನ್ನು ನಿವಾರಿಸಲಿಕ್ಕಾಗಿ ಕೈಯಲ್ಲಿ ಕೊಡೆಯನ್ನು ಹಿಡಿದಿದ್ದನು. ಕೌಪೀನವು ನಡುವನ್ನು ಅಲಂಕರಿಸಿತ್ತು. ಬಿಳಿಯ ವಸ್ತ್ರದೊಡನೆ ದರ್ಭೆಯನ್ನು ಕಟ್ಟಿದ ವೇಣುದಂಡವನ್ನು ಹಿಡಿದುಕೊಂಡಿದ್ದನು''.[2]

ವೇದಿಯ ಬ್ರಹ್ಮಚಾರಿಯ ವರ್ಣನೆ ಈ ಗ್ರಂಥದಲ್ಲಿ ಹೀಗೆ ಬಂದಿದೆ: ``ಆತನು ತಲೆಯಲ್ಲಿ ಶಿಖೆಯನ್ನು ಧರಿಸಿದ್ದನು. ಹಣೆಯಲ್ಲಿ ತ್ರಿಪುಂಡ್ರವಾಗಿ ವಿಭೂತಿಯನ್ನು ಧರಿಸಿದ್ದನು. ಆತನ ಶರೀರದಲ್ಲಿ ಬಿಳಿದಾದ ಹುರಿಗಳುಳ್ಳ ಜನಿವಾರದೊಡನೆ ಶೋಭಿಸುವ ಜಿಂಕೆಯ ಚರ್ಮವೂ, ಕೈಯ ಪವಿತ್ರ ಬೆರಳಲ್ಲಿ ಮರಕತ ಕಿರಣವನ್ನು ಸೂಸುವ ಪವಿತ್ರವೂ, ಮುಂಜಿಹುಲ್ಲನ್ನು ತಿರುಪಿ ತಯಾರಿಸಿದ ಹಗ್ಗದಿಂದ ಮಾಡಿದ ಮೇಖಲೆಯ ಎಡೆಯಲ್ಲಿ ಕಟ್ಟಿದ ಕೌಪೀನವೂ ಶೋಭಿಸುತ್ತಿದ್ದುವು.[3]

ವೇದಿಯರು ವಸ್ತ್ರದ ಉಡುದಾರವನ್ನೂ ಧರಿಸುತ್ತಿದ್ದರು.[4]

ಶಿವಭಕ್ತರು ವಿಭೂತಿಯನ್ನು ಲೇಪಿಸಿಕೊಳ್ಳುತ್ತಿದ್ದರು.[5]

ವಿಭೂತಿ, ರುದ್ರಾಕ್ಷಿ, ಶಿವಭಕ್ತವೇಷ, ಪಂಚಾಕ್ಷರ – ಇವುಗಳ ಹಿರಿಮೆ, ಭಕ್ತರ

---

1. ಪೆರಿಯಪುರಾಣ ಪುಟ 303 ವೃತ್ತ 877–880.
2. „ „ 56 „ 165–167.
3. „ „ 174 „ 498, 499.
4. „ „ 126 „ 360.
5. „ „ 162 „ 463.

ಪೂಜೆ, ಯಾವುದಾದರೂ ಶಿವಕೈಂಕರ್ಯದಲ್ಲಿ ನಿಷ್ಠೆಯನ್ನು ತೋರಿಸುವುದರಿಂದಾಗುವ ಸುಗತಿ – ಇವುಗಳೆಲ್ಲಾ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿವೆ.

ಪೆರಿಯಪುರಾಣದ ವರ್ಣನಾ ವೈಶಿಷ್ಟ್ಯ

ಇಲ್ಲಿಯ ವರ್ಣನೆ ಕನ್ನಡದ ಕಾವ್ಯಗಳಲ್ಲಿ ಬರುವ ವರ್ಣನೆಗಳಿಗಿಂತ ಭಿನ್ನವಾಗಿದೆ. ಉತ್ಪ್ರೇಕ್ಷೆ, ಅತಿಶಯೋಕ್ತಿಯ ವರ್ಣನೆಗಳು ತೀರ ಕಮ್ಮಿ. ಇಲ್ಲಿಯ ಕತೆಗಳನ್ನು ಓದುವಾಗ ಇದೊಂದು ಭಕ್ತರ ಚರಿತೆಗಳ ವರದಿ ಎಂಬಭಿಪ್ರಾಯ ಓದುಗರಿಗೆ ಬಂದೀತು. ಇಲ್ಲಿ ಸಹಜ ವಿವರಣೆಗಳಿವೆ. ಸಹಜ ವರ್ಣನೆಗಳಿವೆ. ಆಗಿನ ಕಾಲದ ಪ್ರಾಕೃತಿಕ, ಸಾಮಾಜಿಕ ವಿವರಣೆಗಳನ್ನು ತಿಳಿಯಲು ಇದು ಅತ್ಯಂತ ಸಹಕಾರಿಯಾಗಿದೆ. ಹಳಸಿದ ಅಲಂಕಾರಗಳಿಂದ, ಚರ್ವಿತಚರ್ವಣ ವರ್ಣನೆಗಳಿಂದ ತುಂಬಿದ ಕಾವ್ಯಗಳನ್ನೋದಿ ಬೇಸರಗೊಂಡವರಿಗೆ ಇಲ್ಲಿಯ ಸ್ವಾಭಾವಿಕ ವರ್ಣನೆ ಸಹಜೋಕ್ತಿಗಳು ಉತ್ಸಾಹವನ್ನು ಮೂಡಿಸುವಂತಿದೆ. ಆಸಕ್ತಿಯನ್ನು ಹೆಚ್ಚಿಸುವಂತಿದೆ. ಇತರ ಕಾವ್ಯಗಳ ಕತೆಗಳಿಗಿಂತ ಇಲ್ಲಿ ಚರಿತ್ರಾಂಶ ಹೆಚ್ಚು. ಉತ್ಪ್ರೇಕ್ಷೆಯ ಅಂಶ ಕಮ್ಮಿ.

ಕಾವೇರಿನದಿ ಹರಿಯುವ ಚೋಳನಾಡಿನ ವರ್ಣನೆ, ಮಣವಂದ ಪುತ್ತೂರಿನಲ್ಲಿ ನಂಬಿಯ ವಿವಾಹ ವರ್ಣನೆ, ಕಣ್ಣಪ್ಪನ ಹುಟ್ಟೂರಾದ ಬೇಡರ ಊರಿನ ವರ್ಣನೆ, ಬೇಡರ ವರ್ಣನೆ, ಅವರ ಸಂಪ್ರದಾಯ, ಸಂಸ್ಕಾರ, ಹಬ್ಬ, ಉತ್ಸವಗಳ ಸಹಜ ವರ್ಣನೆ, ಕಣ್ಣಪ್ಪನ ಮುಗ್ಧಭಕ್ತಿಯ ವರ್ಣನೆ, ಆಯನಾರನ ಊರಾದ ತಿರುಮಂಗಲಂ ಎಂಬುದು ಇದ್ದ ಮೇಸ್‌ಮಟನಾಡಿನ ವರ್ಣನೆ, ಆಯನಾರ ನಾಯನಾರರ ಕೊಳಲೂದುವ ವರ್ಣನೆ – ಇವೆಲ್ಲಾ ಅತ್ಯಂತ ಸುಂದರವಾಗಿ ವರ್ಣಿತವಾಗಿವೆ.

ನಂದನಾರನ ಊರಾದ ಆದನೂರಿನ ವರ್ಣನೆಯೂ ಸಹಜೋಕ್ತಿಯಿಂದ ಕೂಡಿದ ವರ್ಣನೆಗಳಿಂದ ತುಂಬಿದೆ. ಅದರಲ್ಲಂತೂ ನಂದನಾರನು ಇದ್ದ ಹೊಲೆಯರ ಪಾಡಿಯ ವರ್ಣನೆಯು ಕನ್ನಡಿಗರಿಗಂತೂ ಹೊಚ್ಚಹೊಸದಾಗಿದೆ. ಅಂತಹ ವರ್ಣನೆಗಳು ಕನ್ನಡಕಾವ್ಯಗಳಲ್ಲೆಲ್ಲೂ ಕಂಡುಬಾರವು.

ಕೃಷಿಯನ್ನು ಮಾಡುವ ಪಳ್ಳರ (ಹೊಲೆಯರ) ಕುಟುಂಬಗಳಿರುವ ಊರು ಅದು. ಅಲ್ಲಿ ಗದ್ದೆಗಳ ಹುಣಿಗಳ ಬದಿಯಲ್ಲಿ ಅವರ ಸಣ್ಣ ಮನೆಗಳು ಹಲವಿವೆ. ಅವುಗಳ ಹಳೆಯ ಮಾಡುಗಳು ಹುಲ್ಲಿನಿಂದ ಹೊದೆಯಲ್ಪಟ್ಟಿವೆ. ಈ ಮಾಡುಗಳ ಮೇಲೆ ಸೋರೆಯ ಬಳ್ಳಿಗಳು ಹಬ್ಬಿವೆ.

'ಕೂರಾದ ಉಗುರುಗಳನ್ನೂ ಮೃದುವಾದ ಪಾದಗಳನ್ನೂ ಉಳ್ಳ ಹೆಣ್ಣು ಕೋಳಿಗಳ ಸಣ್ಣ ಮರಿಗಳ ಕೂಟಗಳು ಆ ಮನೆಗಳನ್ನು ಸುತ್ತಿ ತಿರುಗುತ್ತವೆ. ಅವುಗಳೊಡನೆ ಇದಿರು ಭಾಗದಲ್ಲಿ ಚರ್ಮದ ಬಾರುಗಳು ಹಾಕಿರುವ, ಬಾಗಿದ ಉಗುರುಗಳುಳ್ಳ ಎಳೆಯ ನಾಯಿಮರಿಗಳು ಓಡಾಡುತ್ತವೆ. ಕರಿದಾದ ಕಬ್ಬಿಣದ ಬಳೆಗಳನ್ನು ದಟ್ಟವಾಗಿ

ಅಲಂಕರಿಸಿಕೊಂಡ ಕರಿಯ ಬಾಲಕರು ನಾಯಿಮರಿಗಳನ್ನು ಕದ್ದು ಓಡಲು ಅವು ಎಡೆಬಿಡದೆ ಬಗುಳುವ ಮೃದುವಾದ ಸಣ್ಣ ಧ್ವನಿಯನ್ನು ಆ ಬಾಲಕರ ಸೊಂಟದಲ್ಲಿ ಕಟ್ಟಿದ ಕಬ್ಬಿಣದ ಗೆಜ್ಜೆಯ ಶಬ್ದಗಳು ಅಡಗಿಸುವುವು.

ಬಲವಾದ ಸಣ್ಣಪುಟ್ಟ ಚರ್ಮಗಳ ಮೇಲೆ ಹೊಲೆಯರ ಮಕ್ಕಳನ್ನು ಹೊಲತಿಯರು ನಿದ್ರಿಸಿಡುವ ನೆಳಲುಳ್ಳ ಮರುದ ಮರಗಳಿವೆ. ತನ್ನ ಮೊಟ್ಟೆಗಳನ್ನು ಕಾವು ಗೊಳಿಸುವ ಹೆಣ್ಣು ಕೋಳಿಗಳು ಇರುವುದಕ್ಕೆಡೆಯಾದ ದೊಡ್ಡ ಮಣ್ಣಿನ ಪಾತ್ರೆಗಳು ಮಣ್ಣಿನಲ್ಲಿ ಹೊದೆದಿಡಲ್ಪಟ್ಟಿವೆ. ಅವುಗಳಿಗೆ ನೆಳಲನ್ನು ತರುವುದು ಮೃದುವಾದ ಗೆಲ್ಲುಗಳುಳ್ಳ ವಂಜಿ ಮರಗಳು. ಇವುಗಳನ್ನೂ ಬಾರುಕಟ್ಟಿದ ಪಜಿಕೆಗಳನ್ನು ತೂಗಾಡಿಸಿಟ್ಟ ಮಾವುರಗಳನ್ನೂ, ಸಣ್ಣ ತಲೆಗಳುಳ್ಳ ನಾಯಿಮರಿಗಳು ತಂಗುವುದಕ್ಕೆಡೆಯಾದ ಕೆಳಪೊಟರೆಗಳುಳ್ಳ ತೆಂಗಿನ ಮರಗಳನ್ನೂ ಆ ಹೊಲೆಯರ ಪಾಡಿಯು ಎಲ್ಲೆಡೆಗಳಲ್ಲಿಯೂ ಒಳಗೊಂಡಿರುವುದು.

ಮಿಕ್ಕ ಬಲುಮೆಯುಳ್ಳ ಆ ಪಳ್ಳರು ಕೃಷಿಕಾರ್ಯಗಳನ್ನು ಮಾಡಲು ಆರಂಭಿಸತಕ್ಕ ಅರುಣೋದಯ ಕಾಲವನ್ನು ಅಳಿದು ತೋರಿಸಿ, ಅವರನ್ನು ಉದ್ಯೋಗದಲ್ಲಿ ತೊಡಗಿಸುವುದಕ್ಕೆ ಕೂಗುವ, ಕೆಂಪಗಾದ ತಲೆಯ ಜುಟ್ಟುಳ್ಳ ಹುಂಜಗಳು ತಂಗುವುದಕ್ಕೆಡೆಯಾದ, ಸುವಾಸನಾಯುಕ್ತವಾದ ಶೀತಲವಾದ ಗೆಲ್ಲುಗಳುಳ್ಳ ಕಾಂಚಿ ಮರದ ವಿಶಾಲವಾದ ನೆಳಲ ಪಕ್ಕಗಳಲ್ಲೆಲ್ಲಾ ದಟ್ಟವಾದ ಕೂದಲುಗಳುಳ್ಳ, ಚಿಕ್ಕ ಹೊಲತಿಯರು ಬತ್ತಕುಟ್ಟುವ ಹಾಡಿನ ಶಬ್ದವು ಆ ಪಾಡಿಯಲ್ಲಿ ಹೆಚ್ಚಾಗಿ ಪಸರಿಸಿರುವುದು'.[1]

ಇದೇ ಧಾಟಿಯಲ್ಲಿ ಹೊಲೆಯರ ಪಾಡಿನ ವರ್ಣನೆ ಸಹಜ ಸುಂದರವಾಗಿ ಮುಂದರಿಯುವುದು. ಸೂಕ್ಷ್ಮಪರಿಶೀಲನೆಯ ಫಲವಾದ ಈ ಸ್ವಾಭಾವಿಕ ವರ್ಣನೆ ಅದೆಷ್ಟು ಮನೋಜ್ಞ!

ತಿರುಕುರಿಪ್ಪುತೊಂಡ ನಾಯನಾರನ ಚರಿತೆಯನ್ನು ಪ್ರಾರಂಭಿಸುವ ಮೊದಲು ತಮಿಳುನಾಡಿನ ಪ್ರಾಕೃತಿಕ ವರ್ಣನೆಯೂ ಈ ಗ್ರಂಥದಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ತಮಿಳುನಾಡಿನ ನೆಲವನ್ನು ಕುರಿಂಜಿ, ಮುಲ್ಲೆ, ಮರುದ, ನೆಯ್ದಲ್ ಎಂಬ ನಾಲ್ಕು ಪ್ರಾಕೃತಿಕ ವಿಭಾಗಗಳನ್ನಾಗಿ ಹೆಸರಿಸಿ ವರ್ಣಿಸಿರುವುದು ತಮಿಳಿನಲ್ಲಿ ಕಂಡುಬರುವ ಪ್ರಕೃತಿ ವರ್ಣನಾ ರೀತಿಯ ವೈಶಿಷ್ಟ್ಯ. ಕನ್ನಡನಾಡಿನಲ್ಲಿಯೂ ಇಂತಹ ಪ್ರಾಕೃತಿಕ ವಿಭಾಗಗಳನ್ನು ಮಾಡಬಹುದಾದರೂ, ಹೀಗೆ ಮಾಡಿ ವರ್ಣಿಸಿರುವುದು ಯಾವ ಕನ್ನಡ ಕಾವ್ಯಗಳಲ್ಲಿಯೂ ಕಂಡುಬಂದಿಲ್ಲ. ನೆಲವನ್ನು ಜನವನ್ನು ಪರಿಶೀಲಿಸಿ ಸಹಜ ವರ್ಣನೆಯನ್ನು ಮಾಡಿರುವುದಂತೂ ಕನ್ನಡ ಕಾವ್ಯವರ್ಣನಾ ರೀತಿಗೆ ಹೊಸದು.

ಕುರಿಂಜಿ ನೆಲವೆಂದರೆ ಮಲೆಯಿಂದ ಸುತ್ತುವರಿದ ಸ್ಥಳ. ಮುಲ್ಲೆ ನೆಲವು ಕಾಡಿನಿಂದಾವರಿಸಲ್ಪಟ್ಟ ಪ್ರದೇಶ. ಮರುದ ಪ್ರದೇಶವು ಬಯಲಿನಿಂದ ಸುತ್ತುವರಿಯಲ್ಪಟ್ಟಿದೆ.

---

1. ಪೆರಿಯಪುರಾಣ, ಪದ್ಯ 1037–1039.

ನೈದಲ್ ನೆಲವು ಸಮುದ್ರ ಸಮೀಪದ ಸ್ಥಳ. ಈ ಪ್ರದೇಶ ವಿಭಾಗಗಳ ವಿಸ್ತಾರವಾದ ವರ್ಣನೆಯನ್ನು ಈ ಕೃತಿಯ ಪುಟಗಳಲ್ಲಿ (372–386) ಕಾಣಬಹುದು. ಪ್ರತಿಯೊಂದು ಪ್ರಾದೇಶಿಕ ವಿಭಾಗದಲ್ಲಿಯೂ ಇರುವ ಶಿವಕ್ಷೇತ್ರಗಳನ್ನೂ ದೇವಾಲಯಗಳನ್ನೂ ಕವಿಯು ಈ ವರ್ಣನಾ ಸಂದರ್ಭದಲ್ಲಿ ಹೆಸರಿಸಿದ್ದಾನೆ.

ಕುರಿಂಜಿ ಸ್ಥಳದ ಕೆಲಪ್ರದೇಶಗಳಲ್ಲಿ ಕೆಂಪಗಾದ ಮಾಣಿಕ್ಯಗಳು ಜಲಪಾತ ಗಳಿಂದಲೂ ನದಿಗಳಿಂದಲೂ ಇಳಿದು ಬರುತ್ತವೆ. ಇಲ್ಲಿ ಕೊರಗರು ಇಲ್ಲಿನ ಕೆಲವೆಡೆಗಳಲ್ಲಿ ರತ್ನಗಳನ್ನು ನೀರಿನಿಂದ ಆರಿಸಿ ತೆಗೆದು ಅವುಗಳನ್ನು ಬಿಸಾಡಿ ಅಲಸಂಡೆ ಬೀಜಗಳನ್ನು ಬಿತ್ತುವರು. ಬೆಟ್ಟದೆಡೆಗಳಲ್ಲಿ ಮೋಡಗಳು ಬಾನಿನಿಂದ ಮುತ್ತುಗಳನ್ನು ಸುರಿಸುತ್ತವೆ. ಕುರಿಂಜಿ ನೆಲದ ಸಣ್ಣಸಣ್ಣ ಊರುಗಳಲ್ಲಿ ತುಂಬಾ ಜೇನು ಹಾಕಿ ಕಲಸಿದ ಕೆಂಪಗಾದ ತಿನೆಧಾನ್ಯದ ಹಿಟ್ಟನ್ನು ಆಹಾರಕ್ಕೆ ಬಳಸುತ್ತಾರೆ. ಇಲ್ಲಿನ ಪ್ರದೇಶಗಳಲ್ಲಿ ಕೊಳಲಂತೆ ಶಬ್ದಿಸುವ ತುಂಬಿಯ ಕೂಟಗಳು ಕುರಿಂಜಿ ರಾಗಗಳನ್ನು ಹಾಡುವುವು. ಕುರಿಂಜಿ ನೆಲದ ಪ್ರದೇಶಗಳಲ್ಲಿ ತಿನೈ ಧಾನ್ಯಗಳನ್ನು ಬೆಳೆಸಿರುವ ದೊಡ್ಡ ದೊಡ್ಡ ಗದ್ದೆಗಳಲ್ಲಿ ನವಿಲುಗಳು ರೆಕ್ಕೆಗಳನ್ನೂ ಸೋಗೆಗಳನ್ನೂ ಬಿಡಿಸಿ ಕುಣಿಯುತ್ತಿರುವುವು. ಗುಂಗುರು ಕೂದಲು ಗಳುಳ್ಳ ಕೊರತಿಯರು ಆ ತಿನೈ ಗದ್ದೆಗಳನ್ನು ಕಾಯುವರು. ಆ ಕುರಿಂಜಿ ಪ್ರದೇಶ ದಲ್ಲಿಯೇ ಪ್ರಸಿದ್ಧ ಶಿವದೇವಾಲಯವಿರುವ ಕಾಳಹಸ್ತಿ ಕ್ಷೇತ್ರವಿದೆ. ಬೇಡಬೇಡಿತಿಯರಿಂದ ಕೂಡಿದ ಆ ನೆಲದಲ್ಲಿ ತಿರುವಿಡೈಚ್ಚುರ ತಿರುಕ್ಕಳುಕ್ಕುನ್ರುಗಳೆಂಬ ಶಿವಕ್ಷೇತ್ರಗಳೂ ಇವೆ.

ಮುಲ್ಲೈ ನೆಲವು ಕಾಡಿನಿಂದ ಸುತ್ತುವರಿಯಲ್ಪಟ್ಟಿದೆ. ಅಲ್ಲಿ ತುಂಬಿಗಳ ಕೂಟಗಳು ಹೊಸ ಜೇನನ್ನು ಸಮೃದ್ಧವಾದ ಹೂಗಳಲ್ಲಿ ಕುಡಿಯುತ್ತಿರುತ್ತವೆ. ಅಲ್ಲಿಯ ಕಾನಗಳಲ್ಲಿ ಪಶುಕೂಟಗಳು ಜಿಂಕೆಗಳೊಡನೆ ಸೇರಿ ಆಡುತ್ತಿರುತ್ತವೆ. ಮುಲ್ಲೈ ನೆಲದ ಸಮೀಪ ದೆಡೆಗಳಲ್ಲಿ ಶೀತಲವಾದ ಗೊಂಚಲುಗಳುಳ್ಳ ಕೊನ್ನೆ ಹೂಗಳಿಂದ ಹೊನ್ನಿನಂತಹ ಬಣ್ಣವುಳ್ಳ ಎಸಳುಗಳು ಉದುರುತ್ತಿರುತ್ತವೆ. ಇಲ್ಲಿಯ ವಿಶಾಲವಾದ ಪಾಡಿಗಳಲ್ಲಿ ಹಾಲು ಸೇರಿಸಿ ಅಡುಗೆಮಾಡಿದ ಸಣ್ಣಕ್ಕಿಯ ಅನ್ನವನ್ನು ಆಹಾರವಾಗಿ ಸೇವಿಸುತ್ತಾರೆ ಇಲ್ಲಿ ಮೃದಂಗವೇ ಮೊದಲಾದ ಪರೆಗಳು ಮೇಘಗಳಂತೆ ಶಬ್ದಿಸಲು ಮುಲ್ಲೆ ಬಳ್ಳಿಗಳು ಪುಷ್ಪಿಸುವುವು. ಹೂಗೊಂಚಲುಗಳಲ್ಲಿ ಮುಸುರಿರುವ ತುಂಬಿಗಳನ್ನು ಓಡಿಸಿಕೊಂಡು ಬರುವ, ದೊಡ್ಡ ಪ್ರವಾಹವನ್ನುಳ್ಳ ಕಾಡಿನ ತೊರೆಗಳು ಎಡೆಎಡೆಗಳಲ್ಲಿ ಹರಿದು ಹೊರ ಪಕ್ಕಗಳಲ್ಲುಳ್ಳ ಮೃದುವಾದ ಎಲೆಗಳನ್ನುಳ್ಳ ಕುರುಂದ ಮರದ ಮೇಲೆ ಹಬ್ಬಿದ ಹೂವಿನ ಹೆಂದರದಂತಿರತಕ್ಕ ಮುಲ್ಲೆ ಬಳ್ಳಿಗಳ ಮೃದುವಾದ ಪೊದರುಗಳಲ್ಲಿ ಹುದುಗಿರುವ ಮೊಲಗಳನ್ನು ಓಡಿಸಿ, ಆಮೇಲೆ ತಾನಾಗಿಯೇ ಅಡಗಿರುವ ನೀರಪ್ರದೇಶಗಳನ್ನು ಮುಲ್ಲೆ ನೆಲವು ಒಳಕೊಂಡಿದೆ. ಸುಂದರಿಯರಾದ ಗೊಲ್ಲಿತಿಯರು ತಮ್ಮ ವೃತ್ತಿಗಳಲ್ಲಿ ಮಗ್ನ ರಾಗಿರುತ್ತಾರೆ. ತಿರುಮುಲ್ಲೈವಾಯಿಲ್, ಕಲಿಗೈಮಾನಗರ ಎಂಬ ಶಿವಕ್ಷೇತ್ರಗಳು ಮುಲ್ಲೈ ಪ್ರದೇಶದಲ್ಲಿಯೇ ಇವೆ.

ಮರುದ ಸ್ಥಳಗಳು ಬಯಲಿನಿಂದ ಸುತ್ತುವರೆಯಲ್ಪಟ್ಟಿವೆ. ಅಲ್ಲಿನ ತಟಾಕಗಳಲ್ಲಿ ಕಯಲ್ ಮೀನುಗಳು ಕಟ್ಟೆಹುಣಿಗಳು ಒಡೆಯುವಂತೆ ಹಾರಾಡುವುದಕ್ಕೆಡೆಯಾಗಿವೆ. ಇಲ್ಲಿ ಗದ್ದೆಗಳು, ಹಕ್ಕಿಗಳು ತಾವರೆಹೂಗಳಲ್ಲಿದ್ದುಕೊಂಡು ಇರಾಲ್ ಮೀನುಗಳನ್ನು ಉಣ್ಣುವುದಕ್ಕೆಡೆಯಾಗಿವೆ ನೀರಿನಿಂದ ಕೂಡಿದ ಕಾಲುವೆಗಳು ಗದ್ದೆಗಳೆಡೆಗಳಲ್ಲುಳ್ಳ ಹಳ್ಳಗಳಲ್ಲಿ ಮುತ್ತುಗಳನ್ನು ಸುರಿಸುತ್ತವೆ. ಈ ಮರುದ ನೆಲದಲ್ಲಿ ಶೀತಲವಾದ ಹದವಾದ ನೀರಿನ ಪ್ರದೇಶಗಳುಳ್ಳ ಊರುಗಳು ಪರಿಶುದ್ಧವಾದ ಬತ್ತದ ಅಕ್ಕಿಯ ಅನ್ನವನ್ನೂ, ತುಪ್ಪವನ್ನೂ, ಕಬ್ಬನ್ನೂ, ಇನಿದಾದ ಫಲಗಳನ್ನೂ ಕೊಂಡ ಆಹಾರವನ್ನು ಒಳಗೊಂಡಿವೆ. ಇಲ್ಲಿನ ಮರುದ ಮರಗಳನ್ನು ಗಿಳಿಮರಿಗಳು ತಮಗೆ ನಿದ್ರಿಸುವ ಎಡೆಗಳಾಗಿ ಮಾಡಿಕೊಂಡಿವೆ. ಕಾಮಧೇನು ಸುರಿಸಿದ ಹಾಲು ತೀರ್ಥವಾಗಿ ರೂಪುಗೊಂಡು ನಂದಿಮಲೆಯಿಂದ ಬಂದು ಆ ಎಡೆಯಲ್ಲುಳ್ಳ ಮುತ್ತುಗಳನ್ನೂ, ಚಂದನ, ಅಗಿಲು ಮೊದಲಾದವುಗಳೊಡನೆ ಮಣಿಗಳನ್ನೂ ಕೊಂಡುಬಂದು ತಾವರೆಯ ತಟಾಕಗಳಲ್ಲಿ ತುಂಬುವಂತೆ ಕೆಳಗಿಳಿದು ಓಡಿಬರುವುದು. ಅದು ಪಾಲಿಯಾರು (ಪಾಲಾರು) ಎಂಬ ಹೆಸರನ್ನೊಳಗೊಂಡಿದೆ.

ಕೃಷಿಕರು ವಸಂತಕಾಲದಲ್ಲಿ ಹೊಯಿಗೆಯ ದಿನ್ನೆಗಳನ್ನು ಕಟ್ಟಿ ಕಾಲುವೆಗಳನ್ನು ಮಾಡಿ ಅದರ ಮೂಲಕ ನೀರನ್ನು ಹಾಯಿಸುವರು. ಆ ನೀರು ಎರಡು ಪಕ್ಕಗಳಲ್ಲೂ ತುಂಬಿ ಮೇಲೇರಿ ಹೋಗಿ, ಹಳ್ಳ ಪ್ರದೇಶಗಳಲ್ಲುಳ್ಳ ನಿಡಿದಾದ ಗದ್ದೆಗಳ ದೊಡ್ಡ ಮಡೆಗಳನ್ನು ಒಡೆಯುವುದು. ಆ ನೀರು ಬಲವಾದ ಕಟ್ಟೆಗಳುಳ್ಳ ದೊಡ್ಡ ಕೊಳಗಳೊಡನೆ ಸೇರಿ, ಅವುಗಳಿಗೆ ಕಟ್ಟಿದ ಮದಗಗಳ ಬಾಯಿಗಳನ್ನು ತೆರೆದುಬಿಡಲು, ಆ ದ್ವಾರಗಳ ಮೂಲಕ ಹೋಗಿ, ಕೃಷಿಕರು ನೀರಬರವನ್ನು ಕಂಡು ಘೋಷಿಸುವ ಧ್ವನಿಯು ಹೆಚ್ಚುವಂತೆ ವಿಸ್ತಾರವಾದ ಎಡೆಗಳುಳ್ಳ ಕಾಲುವೆಗಳ ಮೂಲಕವಾಗಿ ನೀರು ಹಾಯುವುದು. ವಿವಿಧ ಕೃಷಿಕರ್ಮಗಳಲ್ಲಿ ನಿರತರಾಗಿರುವವರ ಶಬ್ದವು ಕೇಳಿಬರುವುದು. ಕೆಲ ಎಡೆಗಳಲ್ಲಿ ಬಾಳೆ ಮೀನುಗಳು ಕಾಲುವೆಗಳಲ್ಲಿ ಅಡ್ಡವಾಗಿ ನಿಲ್ಲುವುದರಿಂದ ನೀರ ಕಾಲುವೆಗಳು ಬೇರೆ ದಾರಿಯಾಗಿ ಹೋಗುವುವು. ಶೇಲ್ ಮೀನುಗಳ ಕೂಟವು ಗದ್ದೆಯ ಪಕ್ಕಗಳಲ್ಲಿದ್ದು ಪಕ್ಕಗಳನ್ನು ಎತ್ತರವಾಗಿ ಮಾಡುವುದು. ಮದಗಗಳ ಒಳಹೋಗಿ ನೀರು ಬರುವ ದಾರಿಯಲ್ಲಿ ವರಾಲ್ ಮೀನುಗಳು ನಿಂತು ನೀರನ್ನು ತಡೆದುಬಿಡುವುವು. ಇವೇ ಮೊದಲಾದ ವಿವರಗಳ ಉಲ್ಲೇಖಗಳು ಈ ಪ್ರದೇಶ ವರ್ಣನೆಯಲ್ಲಿ ಬಂದಿವೆ. ಗದ್ದೆಗಳಲ್ಲಿ ಮೊಳೆದೆದ್ದ ಕೆಂದಾವರೆಗಳಲ್ಲಿ ಶಂಖಗಳು ಉದಯಿಸುವುವು. ತಿರುವಲ್ಲಂ, ತಿರುಮಾಲ್‌ಪೇರು, ತಿರುಪ್ಪಾಶೂರು ಎಂಬ ಕ್ಷೇತ್ರಗಳನ್ನು ಈ ಮರುದನೆಲವು ಒಳಗೊಂಡಿದೆ.

ಇಲ್ಲಿನ ಜನರಲ್ಲಿ ಕೆಲವರು ಬಯಲಿನ ಕೆಲಸಗಳಿಗೆ ಬೇಕಾದ ದೊಡ್ಡ ಅಂಗಳದಲ್ಲಿ ಮರುದ ನೆಲಕ್ಕುಳ್ಳ ರಾಗಗಳನ್ನು ಹಾಡುತ್ತ, ಮಲರುಗಳನ್ನು ಧರಿಸಿಕೊಂಡು, ಮಾಮರಗಳ ಪಕ್ಕಗಳಲ್ಲಿ ಮರುದ ನೆಲಕ್ಕೆ ತಕ್ಕ ವೀಣೆಯನ್ನು ಶಬ್ದಿಸುವರು.

ನೆಯ್ದಲ್ ಸ್ಥಳಗಳು ಕಡಲಿನ ಸಮೀಪವಿವೆ. ಪರತಿಯರು ಮುತ್ತುಗಳನ್ನು ತೊಳೆದು ಒಣಗಿಸುವುದಕ್ಕೆ ಇವು ಎಡೆಯಾಗಿವೆ. ಇಲ್ಲಿ ಕೆಲ ಎಡೆಗಳಲ್ಲಿ ಸುರಾಮೀನುಗಳ ಮುಳ್ಳು ಗಳುಳ್ಳ ಕೊಂಬುಗಳನ್ನು ದೈವವಿಗ್ರಹದಂತೆ ಇಟ್ಟುಕೊಂಡು ಪೂಜಿಸುತ್ತಾರೆ. ಕಡಲ ಕರೆಯಲ್ಲಿ ಕೇದಗೆ ಬನಗಳನ್ನು ಇದಿರು ಪಕ್ಕಗಳಲ್ಲಿ ಕೊಂಡ ಬಂದರುಗಳಲ್ಲಿ ಹಡಗುಗಳು ಆನೆಗಳನ್ನು ಕೊಂಡುಬಂದು ಇಳಿಸುತ್ತವೆ. ಕಡಲಿನಿಂದ ಸುತ್ತುವರಿದ ನೆಯ್ದಲ್ ನೆಲಗಳು ಮೀನುಗಳಿಂದ ಸಮೃದ್ಧವಾದ ಆಹಾರವನ್ನೊಳಗೊಂಡಿವೆ. ಮಾತ್ರವಲ್ಲದೆ ನೆಳಲನ್ನು ತರುವ ಕೇದಗೆ ಬನಗಳಿಂದ ಸುತ್ತುವರಿದ ನೆಯ್ದಲ್ ಹೂಗಳು ಅರಳಿರುವ ಜಲವಸತಿಗಳನ್ನೊಳಕೊಂಡಿವೆ. ಬಿಳಿಯ ಮಳಲುಳ್ಳ ಕಡಲಕರೆಯಲ್ಲಿ ಬೆಸ್ತರು ಬಲಿ ಗಳನ್ನು ಎತ್ತಿಕೊಳ್ಳುತ್ತಾರೆ. ಕೆಂಪಗಾದ ಕಣ್ಣುಗಳುಳ್ಳ ಬೆಸ್ತರ ಹೆಂಗುಸರು ಶಿಗುಂದಿ ಹೂಗಳ ಮಾಲೆಗಳನ್ನು ಧರಿಸುತ್ತಾರೆ. ಆ ಎಡೆಯಲ್ಲಿ ಉಪ್ಪು ತಯಾರಿಸುವ ಸ್ಥಳದಲ್ಲಿ ಜನರು ಉಪ್ಪನ್ನು ಅಳೆಯುವರು. ಬೆಸ್ತರು ಕೊಂದುಹಾಕಿದ ಮೀನುಗಳು ಒಂದೆಡೆಯಲ್ಲಿ ಮಾರಾಟವಾಗುವುವು. ಮಳಲ ದಿಣ್ಣೆಯಲ್ಲಿ ಬಿದ್ದಿರುವ ಹವಳಗಳನ್ನು ಬೆಸ್ತರ ಹೆಂಗುಸರು ಮಾರುವರು. ಕೆಲ ಬೆಸ್ತರು ಕಡಲಲ್ಲಿ ಮುಳುಗಿ ಶಂಖಗಳನ್ನು ಎತ್ತಿ ತರುವರು. ಎಳ ಮಾವಿನಕಾಯಿಯ ಹೋಳುಗಳಂತಿರುವ ಕಣ್ಣುಗಳುಳ್ಳ ಬೆಸ್ತರ ಹೆಂಗುಸರು ಕಡಲ ತೀರದಲ್ಲಿ ಮೀಯುವರು. ಕಡಲ ದಡಗಳ ದಾರಿಗಳಲ್ಲಿ ಪುನ್ನೆಮರಗಳ ಹೂಗಳು ಹೊನ್ನಿ ನಂತಹ ಪರಾಗದ ಹುಡಿಗಳನ್ನು ಸುರಿಸುವುವು. ನಿಡಿದಾದ ಓಲೆಗಳನ್ನುಳ್ಳ ಕೇದಗೆಯ ಮುಳ್ಳು ಪೊದರುಗಳು ಕಟ್ಟಿದ ಬುತ್ತಿಯ ಆಹಾರವನ್ನು ಬಿಚ್ಚಿ ಕೊಡುವಂತೆ ಹೂವಿನ ಹುಡಿಗಳನ್ನು ಉದುರಿಸುವುವು. ಈ ಹುಡಿಗಳನ್ನು ತುಂಬಿಗಳು ಉಣ್ಣುವುವು. ಕಡಲ ಕರೆಯ ಉದ್ಯಾನಗಳಲ್ಲಿರುವ ದಾರಿಗಳನ್ನು ಮುಳ್ಳುಗಳನ್ನುಳ್ಳ ಕೆಂಪಗಾಗಿಯೂ ಶೀತಲವಾಗಿಯೂ ಇರುವ ಸುವಾಸನೆಯಿಂದ ಕೂಡಿದ ಮೊಗ್ಗುಗಳು ತುಂಬಿದ ಮುಳ್ಳು ಗಿಡಗಳು ಮರೆಮಾಡುತ್ತವೆ. ಅಲ್ಲಿನ ನುಣುಪಾದ ಮಳಲ ಬಿಳುಪನ್ನು ಬದಿಯ ದಾರಿ ಗಳಲ್ಲಿ ಮೊಳೆತುಳ್ಳ ಹೂಗಳ ಪರಾಗಗಳು ಮರೆಮಾಡುತ್ತವೆ. ಕಡಲ ಭಾಗದ ಮುಂದೆ ಗುಡಿಸಲುಗಳಿರುವ ಎಡೆಗಳಿವೆ ಬಿದಿರಂತಿರುವ ತೋಳುಗಳುಳ್ಳ ಪರತಿಯರು ಆ ಎಡೆಯಲ್ಲಿ ಹಿಡಿದ ಮೀನುಗಳನ್ನು ಮಾರುವರು. ಅವರ ಬಾಲಭಾಷೆಯಂತಿರುವ ಮಾತುಗಳು ಆ ನೆಲದ ಶೆವ್ವಳಿ ರಾಗದ ವೀಣೆಯ ನಾದದಂತೆ ಇದೆ. ಈ ನೆಯ್ದಲ ಪ್ರದೇಶದಲ್ಲಿಯೇ ತಿರುವೊತ್ತಿಯೂರು, ತಿರುಮಯಿಲಾಪುರಿ, ತಿರುವಾನ್ಮಿಯೂರು ಮೊದಲಾದ ಪವಿತ್ರ ಶಿವಕ್ಷೇತ್ರಗಳು ಹಲವಿವೆ.

ಇಲ್ಲಿ ಬರುವ ನೂತನ ಉಪಮೆಗಳು

1. 'ಕಡಲಿನ ಜಲದ ಆಧಿಕ್ಯವನ್ನು ನಕ್ಕಿ ಕುಡಿಯಲು ಆಶಿಸುವ ಒಂದು ಶುನಕದಂತಿರುವ ನಾನು' ಪು. 3 – ಪ. 6.
2. 'ಚಿನ್ನದ ಮೇಲೆ ಬಿಳಿಯಾದ ವಿಭೂತಿಯು ಅಲಂಕಾರಪ್ರಾಯವಾಗಿ ನಿಂತಂತೆ' 5 – 1.

3. ‘ಜೂಜಾಡುವ ಪಗಡೆಕಾಯಂತೆ ಇರುವ ಸ್ತನಗಳುಳ್ಳ ಸ್ತ್ರೀಯರು’ ಪು 54 – ಪ. 157.

4. ‘ನಾಯಿಗೆ ಸಮಾನವಾದ ನಾನು ನಿಮ್ಮ ಗುಣಾತಿಶಯಗಳನ್ನು ಹೇಗೆ ತಿಳಿಯುವೆನು’ 69 – 208.

5. ‘ಕಯಲ್ ಮೀನಿನಂತೆ ಕಣ್ಣುಳ್ಳ ಉಮಾಮಾತೆಯು’ 91 – 264.

6. ‘ಸ್ತನಗಳು ಕೊಂಗೈಹೂವಿನ ಮೊಗ್ಗನ್ನು ತಿರಸ್ಕರಿಸಿ ಚೆಲುವಿನಿಂದ ಮೀರಲು’ 94 – 272.

7. ‘ಕೆಂಡೆಮೀನಿನಂತೆ ಕಣ್ಣುಗಳುಳ್ಳ ಪರವೆಯು’ 96 – 278.

8. ‘ಈಶ್ವರನ ಮಹಿಮಾಯುತವಾದ ವಿಭೂತಿಯಂತೆ ಬೆಳ್ದಿಂಗಳು ಶೋಭಿಸಿತು’ 103 – 298.

9. ‘ಸಿಂಹವನ್ನು ಜಗಳಕ್ಕೆ ಕರೆಯುವ ಗುಳ್ಳೆನರಿಯಂತೆ ಅತಿಶೂರನು ಏಣಾಧಿನಾಥನನ್ನು ಕರೆದನು’ 210 – 607.

10. ‘ಪೂರ್ಣಚಂದ್ರನನ್ನು ಉಪ್ಪುಕಡಲು ಪಡೆದಂತೆ ತತ್ತ್ರಿಯು ಮಗನನ್ನು ಪ್ರಸವಿಸಿದಳು’ 225 – 652.

11. ‘ಉಡುಕೆಗೆ ಸಮಾನವಾದ ಕಾಲುಳ್ಳ ಆನೆಮರಿಗಳು’ 251 – 725.

12. ‘ಗುಲಗುಂಜಿಯಂತಿರುವ ಕೆಂಪಗಾದ ಕಣ್ಣುಗಳನ್ನುಳ್ಳ ಒಂದು ಹಂದಿಯು’ 253 – 729.

13. ‘ಕಣ್ಣೀರು ಅರ್ಬಿಯಂತೆ ಉಕ್ಕಿ ಹರಿಯಲು’ 258 – 745.

14. ‘ಬಿಲ್ಲಿನಂತೆ ನೆತ್ತಿಯುಳ್ಳ ಹೆಣ್ಣು’ 290 – 839.

15. ‘ಆ ಪೆಣ್ಮಣಿಯು ಕೆಂಪುಮಣಿಯ (ಮಾಣಿಕ್ಯದ) ದೀಪದಂತಿದ್ದಳು’ 301 – 871.

16. ‘ತಾಯನಾರನ ಸಂಪತ್ತು ಆನೆಯುಂಡ ಬೇಲದಂತೆ ಮಾಯವಾಯಿತು’ 311 – 900.

17. ‘ಬಿದಿರಿನಂತಹ ತೋಳುಗಳನ್ನುಳ್ಳ ಹೆಂಗಸರು’ 331 – 959.

18. ‘ರಾಜನಿಲ್ಲದ ನಾಡು ಉಸಿರಿಲ್ಲದಿರುವ ಶರೀರದಂತೆ’ 340 – 986.

19. ‘ಗೊಲ್ಲಿತಿಯರ ಕಣ್ಣುಗಳು ಕತ್ತಿಯಲಗಿನಂತಿವೆ’ 376 – 1085.

20. ‘ಕೆಂದಾವರೆಯಲ್ಲಿದ್ದ ಶಂಖಗಳು ಪರಿವೇಷವನ್ನು ಕೊಂಡ ಪೂರ್ಣಚಂದ್ರನಂತಿವೆ’ 379 – 1093.

21. 'ಎಳಮಾವಿನಕಾಯಿಯ ಹೋಳುಗಳಂತಿರುವ ಕಣ್ಣುಗಳುಳ್ಳ ಬೆಸ್ತರ ಹೆಂಗಸರು' ಪು. 382 – ಪ. 1102.

22. 'ಆ ಪರತಿಯರ ಇನಿದಾದ ಬಾಲಭಾಷೆಯಂತಿರುವ ಮಾತುಗಳು ಶಿವ್ವಳಿ ರಾಗದ ವೀಣೆಯ ನಾದದಂತೆ ಇವೆ' 383 – 1106.

23. 'ಆ ಹೆಂಗಸರು ಕಣೆಯಂತಿದ್ದರು' 391 – 1126.

ಪೆರಿಯಪುರಾಣನಲ್ಲಿ ಬರುವ ವೈಶಿಷ್ಟ್ಯಯುತವಾದ ಕೆಲ ತಮಿಳು ಶಬ್ದಗಳು.

ಕೊನ್ರೈ ಹೂ

ಪೆರಿಯಪುರಾಣದಲ್ಲಿ ಶಿವಪರಮಾತ್ಮನ ಅಲಂಕಾರದ ವರ್ಣನೆಯನ್ನು ಮಾಡುವಾಗ ಕೊನ್ರೈಹೂವಿನ ಪ್ರಸ್ತಾಪವು ಹೆಚ್ಚಾಗಿ ಬರುತ್ತದೆ. ಶಿವನು ಕೊನ್ರೈಮಾಲೆಯನ್ನು ಶಿರದಲ್ಲಿ ಧರಿಸಿರುವನೆಂದು ತಮಿಳು ಸಾಹಿತ್ಯದಲ್ಲಿ ಹಲವೆಡೆಗಳಲ್ಲಿ ವರ್ಣಿತವಾಗಿದೆ. ಮಲಯಾಳ ಸಾಹಿತ್ಯದಲ್ಲಿಯೂ ಅದೇ ರೀತಿ ಸೂಚಿಸಿದುದು ಕಂಡುಬರುತ್ತದೆ. ಮಲಯಾಳ ಗ್ರಂಥವಾದ ರಾಮಚರಿತ್ರದಲ್ಲಿ 'ಕೊನ್ನ ಚೂಡುಂ ಪುರಾನ್' ಎಂಬ ಮಾತು ಬಂದಿದೆ. ಸಂಸ್ಕೃತ ಕಾವ್ಯಗಳಲ್ಲಿ ಶಿವವರ್ಣನೆಯಲ್ಲಿ ಬರುವ ಹೂಗಳ ಹೆಸರುಗಳಲ್ಲಿ ಕರ್ಣಿಕಾರವು ತುಂಬಾ ಪ್ರಸಿದ್ಧವಾಗಿದೆ. ತಮಿಳಿನ ಕೊನ್ರೈಹೂವು ಇದೇ ಕರ್ಣಿಕಾರವಾಗಿರಬಹು ದೆಂದು ಕೆಲ ವಿದ್ವಾಂಸರು ಊಹಿಸಿರುತ್ತಾರೆ. ಕರ್ಣಿಕಾರ ಹೂವಿನ ವರ್ಣನೆಯೂ ಕೊನ್ನೆಹೂವಿನ ವರ್ಣನೆಗೆ ಸರಿಹೋಲುತ್ತದಂತೆ.

ಆದರೆ ವಿಚಾರಿಸುವಾಗ ಕರ್ಣಿಕಾರ ಬೇರೆ ಕೊನ್ರೈ ಬೇರೆ ಎಂದು ತಿಳಿದುಬರುತ್ತದೆ. ಇವುಗಳಿಗೆ ನಿಘಂಟುಗಳಲ್ಲಿ ಬಳಸಿದ ಲ್ಯಾಟಿನ್ ಪದಗಳು ಬೇರೆ ಬೇರೆಯಾಗಿಯೇ ಇವೆ. ಕರ್ಣಿಕಾರಕ್ಕೆ ಕಿಟ್ಟೆಲ್ ನಿಘಂಟುವಿನಲ್ಲಿ ಕೊಟ್ಟ ಸಮಾನಾರ್ಥಕ ಪದಗಳು ಇವು: the tree Plerospermum acerifolium. Willd. (ಕೊಸಗು Hlā.; ಕೊಸಗು ಬೆಟ್ಟದಾವರೆ S's.).

ಕೊನ್ರೈಗೆ ಈ ಪದಗಳನ್ನು ಸಮಾನಾರ್ಥವಾಗಿ ಕಿಟ್ಟೆಲ್ ನಿಘಂಟುವಿನಲ್ಲಿ ಕೊಟ್ಟಿರುವುದನ್ನು ಕಾಣಬಹುದು: the tree Cassia fistula Lin. a tree with clusters of yellow flowers and long round legumes, the pudding-pipe tree.

ಅಮರಕೋಶದಲ್ಲಿ ಕೊಟ್ಟಿರುವ ಆರಗ್ವಧ, ಆರೇವತ, ಶಮ್ಯಾಕ, ವ್ಯಾಧಿಘಾತ, ಚತುರಂಗುಲ, ಕೃತಮಾಲ, ಸುವರ್ಣಕ, ಸ್ವರ್ಣಪುಷ್ಪ, ರಾಜತರು ಎಂಬ ಸಂಸ್ಕೃತ ಪದಗಳನ್ನು ಕೊನ್ರೈಗೆ ಕನ್ನಡದಲ್ಲಿ ಸಮಾನಾರ್ಥಕವಾದ ಕಕ್ಕೆ, ಕೊಂದೆ ಎಂಬ ಪದಗಳಿಗೆ ಅರ್ಥವಾಗಿ ಕಿಟ್ಟೆಲ್ ನಿಘಂಟುವಿನಲ್ಲಿ ಸೂಚಿಸಿದೆ. ಸುನಾನ್ ಎಂಬ ಶಬ್ದ ವನ್ನೂ ಕೊನ್ರೈ ಅರ್ಥದಲ್ಲಿ ಬಳಸುತ್ತಾರೆ. ಕೊನ್ರೈ ಎಂಬ ತಮಿಳು ಪದವನ್ನು ಮಲಯಾಳದಲ್ಲಿ ಕೊನ್ನೆ ಎಂದು ವ್ಯವಹರಿಸುತ್ತಾರೆ.

ಇನ್ನು ತಮಿಳು ಶೈವಸಾಹಿತ್ಯದಲ್ಲಿ ಹೆಚ್ಚಾಗಿ ಪ್ರಯೋಗಿಸಲಾಗುವ ತಿರುಮುಱೆ, ತೇವಾರ, ತಿರುವಾಚಕ, ತಿರುಮಂತ್ರ – ಇವುಗಳ ಕುರಿತು ಕೆಲ ವಿವರಣೆಗಳು :

ಶೇಕ್ಕಿಳಾರನು ತನ್ನ ಪೆರಿಯಪುರಾಣವನ್ನು ರಚಿಸಲು ಹೆಚ್ಚಾಗಿ ಉಪಯೋಗಿಸಿರುವುದು ತೇವಾರ ಮತ್ತು ನಂಬಿಯಾಂಡಾರ ನಂಬಿಯ ಗ್ರಂಥಗಳನ್ನು. ಈತನ ಗ್ರಂಥಗಳಲ್ಲಿಯೂ ವಿಶೇಷವಾಗಿ ಉಪಯೋಗಿಸಿದ್ದು ತಿರುತ್ತೊಂಡಾರ್ ತಿರುಅಂದಾದಿಯನ್ನು. ಇವಲ್ಲದೆ ದಂತಕಥೆಗಳನ್ನೂ ಪರಂಪರಾಗತ ಕಥೆಗಳನ್ನೂ ಶಾಸನಗಳನ್ನೂ ಶೇಕ್ಕಿಳಾರನು ಉಪಯೋಗಿಸಿರುವಂತೆ ತಿಳಿದುಬರುವುದು. ಪೆರಿಯಪುರಾಣಕ್ಕೆ ಆಧಾರವಾಗಿರುವ ಮೂಲಸಾಧನಗಳನ್ನು ನಾವು ತಮಿಳುನಾಡಿನೊಳಗೇ ಕಾಣುತ್ತೇವೆ. ಈ ಕಾಲದ ಇತರ ಮಹಾಕಾವ್ಯಗಳ ಮೂಲಗಳ ಕುರಿತು ಹೀಗೆನ್ನಲಾಗುವುದಿಲ್ಲ. ಇದೂ ಪೆರಿಯಪುರಾಣದ ಒಂದು ವೈಶಿಷ್ಟ್ಯ.

ತಿರುಮುಱೆ

ತಿರುಮುಱೆಗಳು ಹನ್ನೆರಡು. ಇವುಗಳಲ್ಲಿ ಮೊದಲ ಮೂರು ತಿರುಜ್ಞಾನಸಂಬಂಧರು ಅನುಗ್ರಹಿಸಿದ ತೇವಾರಗಳನ್ನೊಳಕೊಂಡಿವೆ. ತಿರುನಾವುಕ್ಕರಸರು ಅನುಗ್ರಹಿಸಿದ ತೇವಾರಗಳನ್ನು ಅನಂತರದ ಮೂರು ತಿರುಮುಱೆಗಳು ಒಳಗೊಂಡಿವೆ. ಆಮೇಲಿನ ಏಳನೇ ತಿರುಮುಱೆಯಾಗಿ ಸುಂದರಮೂರ್ತಿ ಸ್ವಾಮಿಗಳು ಹಾಡಿದ ತೇವಾರಗಳು ಬಂದಿವೆ. ಹೀಗೆ ತಿರುಮುಱೆಗಳಲ್ಲಿ ಮೊದಲ ಏಳು ಮೇಲಿನ ಮೂವರು ಭಕ್ತರು ಹಾಡಿದ ತೇವಾರಗಳು.

ಈ ಮೂವರ ತೇವಾರಗಳನ್ನು ಹತ್ತನೇ ಶತಮಾನದ ಸಮೀಪಕಾಲದಲ್ಲಿ ಚಿದಂಬರ ದೇವಾಲಯದ ಕೋಣೆಯೊಂದರಲ್ಲಿ ಸಂಗ್ರಹಿಸಲಾಗಿತ್ತು. ತಿರುವಾರೂರನ್ನು ರಾಜಧಾನಿ ಮಾಡಿಕೊಂಡು ಅರಸಾಳ್ವಿಕೆಯನ್ನು ಮಾಡಿದ ರಾಜನಾದ ಅಭಯ ಕುಲಶೇಖರನ ಕಾಲದಲ್ಲಿ (ಕ್ರಿ. ಶ. 966–970) ತಿರುನಾರೈಯೂರಿನ ನಂಬಿಯಾಂಡಾರ್ ನಂಬಿಯು ಮೇಲಿನ ಮೂವರು ಭಕ್ತರ ತೇವಾರಗಳನ್ನೊಳಗೊಂಡ ತಾಳೆ ಓಲೆಗಳನ್ನು ಕಂಡು ಹಿಡಿದು ಅವುಗಳನ್ನು ಏಳು ತಿರುಮುಱೆಗಳಾಗಿ ವರ್ಗೀಕರಿಸಿದನು. ರಾಜರಾಜನ ಅನಂತರ ಪಟ್ಟಕ್ಕೆ ಬಂದ ಮಧುರಾಂತಕ ಉತ್ತಮ ಚೋಳ ಅರಸನ ಕಾಲದಲ್ಲಿ (ಕ್ರಿ. ಶ. 970–984) ಶಿವಭಕ್ತರು ಒಟ್ಟು ಸೇರಿ ಈ ಏಳು ತಿರುಮುಱೆಗಳೊಡನೆ ಮಾಣಿಕ್ಕವಾಚಕರು ಅನುಗ್ರಹಿಸಿದ ತಿರುವಾಚಕ, ತಿರುಕ್ಕೋವೆಯಾರ್, ಈ ಎರಡನ್ನೂ ಎಂಟನೇ ತಿರುಮುಱೆಯಾಗಿ ಸೇರಿಸಿದರು.

ತಿರುಮಾಳಿಕ್ಕೈ ತೇವರ್, ಶೇನ್ದನಾರ್, ಕರುವೂರ್ ತ್ತೇವರ್, ಪೂಂದುರುತ್ತಿ ನಂಬಿಕಾಡನಂಬಿ, ಕಂಡರಾದಿತ್ತರ್, ವೇನಾತ್ತಡಿಕಳ್, ತಿರುವಾಲಿಯಮುದನಾರ್, ಪುರುಷೋತ್ತಮ ನಂಬಿ, ಚೇದಿರಾಯರ್ – ಈ ಒಂಬತ್ತು ಜನ ಅನುಗ್ರಹಿಸಿದ ಹಾಡು

ಗಳು ಒಂಬತ್ತನೇ ತಿರುಮುರೆಯಾಗಿ ವರ್ಗೀಕರಿಸಲ್ಪಟ್ಟಿತು. ತಿರುವಿಶೈಪ್ಪಾ, ತಿರುಪಲ್ಲಾಂಡುಗಳೇ ಈ ಹಾಡುಗಳು. ತಿರುಪಲ್ಲಾಂಡು ಶೇನ್ದನಾರರಿಂದ ಅನುಗ್ರಹಿಸಲ್ಪಟ್ಟದು.

ಅರುವತ್ತಮೂವರು ನಾಯನಾರರಲ್ಲಿ ಒಬ್ಬರಾದ ತಿರುಮೂಲರು ಅನುಗ್ರಹಿಸಿದ ತಿರುಮಂತ್ರ ಮೂರುಸಾವಿರವನ್ನು ಹತ್ತನೇ ತಿರುಮುರೆಯಾಗಿ ವರ್ಗೀಕರಿಸಿದ್ದಾರೆ.

ಮಧುರಾಂತಕ ಉತ್ತಮ ಚೋಳನ ಅನಂತರದಲ್ಲಿ ಪಟ್ಟಕ್ಕೆ ಬಂದ ಅರುಳ್‌ಮೊಳಿ ಎಂಬ ಮೊದಲನೇ ರಾಜರಾಜನು (ಕ್ರಿ. ಶ. 984–1013) ಕೇಳಿಕೊಂಡಂತೆ ತಿರುನಾರೈಯೂರ್ ನಂಬಿಯು ಶಿವಪರಮಾತ್ಮನು ತನ್ನ ಬಾಯಿಂದಲೇ ಅನುಗ್ರಹಿಸಿದ ತಿರುಮುಗ ಪಾಶುರವನ್ನೂ, ಕಾರೈಕ್ಕಾಲ್ ಅಮ್ಮೆ, ಐಯಡಿಗಳ್, ಕಾಡವರ್ ಕೋನ್ ಎಂಬ ಎರಡನೇ ಮಹೇಂದ್ರ ವರ್ಮ, ಪಟ್ಟಿನತ್ತಾರ್, ನಕ್ಕೀರರ್, ಮೊದಲನೇ ಚೇರಮಾನ್ ಪೆರುಮಾಳ್, ಕರುವೂರ್ ತೇವರ್–ಇವರು ಅನುಗ್ರಹಿಸಿದ ಹಾಡುಗಳನ್ನು ಸೇರಿಸಿ ಈ ಸಂಕಲನವನ್ನು ಹನ್ನೊಂದನೇ ತಿರುಮುರೆಯೆಂದು ಕರೆದನು. ಈ ಹನ್ನೊಂದು ತಿರುಮುರೆಗಳನ್ನೂ ಮೊದಲನೇ ರಾಜರಾಜನು ತಾಮ್ರಫಲಕಗಳಲ್ಲಿ ಬರೆಸಿ ತಿರುವಾರೂರ್ ತ್ಯಾಗೇಶರ ಸನ್ನಿಧಿಯಲ್ಲಿಟ್ಟನು.

ಮೊದಲನೇ ರಾಜರಾಜನ ಮಗನಾದ ಮೊದಲನೇ ರಾಜೇಂದ್ರನ ಕಾಲದಲ್ಲಿ (ಕ್ರಿ. ಶ. 992–1042) ಕುನ್ರತ್ತೂರ್ ಶೇಕ್ಕಿಳಾರನು ಪೆರಿಯಪುರಾಣ ಎಂಬ ತಿರುತ್ತೊಂಡರ ಪುರಾಣವನ್ನು ಹಾಡಿ ಅದನ್ನು ಪ್ರಕಟಪಡಿಸಿದನು. ಹೀಗೆ ಪ್ರಕಟವಾದ ಮೇಲೆ ಅರಸನು ಶೇಕ್ಕಿಳಾರನನ್ನು ನಮಿಸಿ ಹಿಂದೆ ಹೆಸರಿಸಿದ ಹನ್ನೊಂದು ತಿರುಮುರೆಗಳೊಡನೆ ಈ ತಿರುತ್ತೊಂಡರ ಪುರಾಣವನ್ನೂ ಹನ್ನೆರಡನೇ ತಿರುಮುರೆಯಾಗಿ ಸೇರಿಸಿಕೊಳ್ಳಬೇಕು ಎಂದು ಪ್ರಾರ್ಥಿಸಲು, ತಿರುತ್ತೊಂಡರ್ ಪುರಾಣವು ಹನ್ನೆರಡನೇ ತಿರುಮುರೆಯೆಂದು ಅಂಗೀಕೃತವಾಯಿತು. ಇದು ಅರುವತ್ತಮೂವರು ಶಿವಭಕ್ತರ ಚರಿತೆಯನ್ನು ತಿಳಿಸುವ ಗ್ರಂಥ.

ತೇವಾರ

ತೇವಾರವು ತಮಿಳುನಾಡಿನಲ್ಲಿ ರಚಿಸಲ್ಪಟ್ಟ ಶಿವಸ್ತುತಿಯ ಸ್ತೋತ್ರ ಸಾಹಿತ್ಯ. ಮೊದಲು ಈ ಹಾಡುಗಳು ತಿರುಪ್ಪದಿಕಗಳೆಂದೇ ಕರೆಯಲ್ಪಡುತ್ತಿದ್ದುವು. ಕ್ರಮೇಣ ತೇವಾರ ಎಂಬ ಹೆಸರು ರೂಢಿಗೆ ಬಂತು. ತೇವಾರಂ ಎಂಬುದನ್ನು ತೇ+ಆರಂ ಎಂದು ವಿಂಗಡಿಸಿ ದೇವರಿಗೆ ಸೂಡಲಾಗುವ (ಮುಡಿಸಲಾಗುವ) ಹೂಮಾಲೆಯಂತಹ ಒಂದು ಸ್ತೋತ್ರಮಾಲೆ ಎಂದೂ, ತೇ+ವಾರಂ ಎಂದು ವಿಂಗಡಿಸಿ ತೇ=ದೈವ, ವಾರಂ=ಭಕ್ತಿ ಎಂದು ಅರ್ಥ ಕೊಟ್ಟು, ದೈವಸಂಬಂಧವಾದ ಭಕ್ತಿಯುತ ಗೀತಹಾಡುಗಳೆಂದೂ ವಿವರಿಸುತ್ತಾರೆ. ಹಿಂದೆ ಉತ್ಸವಕಾಲಗಳಲ್ಲಿ ಭಕ್ತರು ಕ್ಷೇತ್ರಗಳನ್ನು ಸಂದರ್ಶಿಸುವಾಗ ತೇವಾರ ಹಾಡುಗಳನ್ನು ಹಾಡುತ್ತಿದ್ದರು. ತಮಿಳುನಾಡಿನ ದೇವಾಲಯಗಳಲ್ಲಿ ತೇವಾರಗಳನ್ನು ಹಾಡುವುದಕ್ಕಾಗಿಯೇ ಓದುವಾರ್ ಎಂಬವರನ್ನು ಈಗೀಗ ನಿಯಮಿಸಿದ್ದಾರೆ.

ತಿರುನಾವುಕ್ಕರಸರು (ಇವರು ಅಪ್ಪರ್ ಎಂದು ವಿಖ್ಯಾತರಾಗಿದ್ದಾರೆ), ತಿರುಜ್ಞಾನ ಸಂಬಂಧರು (ಸಂಬಂಧರು ಎಂಬ ಹೆಸರಿನಿಂದಲೇ ಇವರು ಪ್ರಸಿದ್ಧರು) ಮತ್ತು ಸುಂದರ ಮೂರ್ತಿ (ಸುಂದರರು ಎಂದು ಸಂಕ್ಷಿಪ್ತವಾಗಿ ಇವರನ್ನು ಹೆಸರಿಸುತ್ತಾರೆ)–ಈ ಮೂವರು ತೇವಾರಗಳ ರಚಕತ್ರಯರು. ಇವರಲ್ಲಿ ತಿರುನಾವುಕ್ಕರಸರು (ಅಪ್ಪರ್) ಮೊದಲನೆಯು ವರು. ತೇವಾರ ಎಂಬ ಹೆಸರು ಮೂಲತಃ ಇವರ ಸ್ತೋತ್ರಕ್ಕೇ ಸಂಬಂಧಿಸಿತ್ತು. ತಿರುನಾವುಕ್ಕರಸರ್ ಎಂಬ ಪದಕ್ಕೆ ತಮಿಳು ಸ್ತುತಿಹಾಡುಗಳ ಅರಸರು ಎಂದು ಅರ್ಥ. ಇವರ ನಿಜವಾದ ಹೆಸರು ಮರುಳ್‌ನೀಕ್ಕಿಯಾರ್ ಎಂಬುದು ಶ್ರೇಷ್ಠ ಶಿವಭಕ್ತರಾದ ಸಂಬಂಧರು ಇವರನ್ನು ಅಪ್ಪರ್ (ತಂದೆಯವರು) ಎಂಬುದಾಗಿ ಸ್ತುತಿಸಿದುದರಿಂದ ಅಪ್ಪರ್ ಎಂಬ ಹೆಸರೇ ಇವರಿಗೆ ರೂಢಿಯಾಯಿತು. ಇವರು ಕ್ರಿ ಶ. ಏಳನೇ ಶತಮಾನದ ಪೂರ್ವಾರ್ಧದಲ್ಲಿದ್ದರೆಂದು ನಾವು ತಿಳಿಯುತ್ತೇವೆ.

ಇವರ ತೇವಾರ ರಚನೆ ಅತ್ಯುತ್ತಮ. ಜನಸಾಮಾನ್ಯರಿಗೆ ಅರ್ಥವಾಗಲು ಉಳಿದ ತೇವಾರಗಳಿಗಿಂತ ಹೆಚ್ಚು ಲಲಿತ, ಸರಳ, ಮಧುರ, ಸಹಜ. ಇವರು ರಚಿಸಿದ ಹಾಡು ಗಳಲ್ಲಿ ಈಗ ದೊರೆತಿರುವುದು 3066.

ತಿರುನಾವುಕ್ಕರಸರ ಹಾಡುಗಳಲ್ಲಿ ಮನಕರಗುವ ಭಕ್ತಿಯ ಹಾಡುಗಳು ಅಧಿಕ ವಾಗಿವೆ. ಈ ಶಿವಭಕ್ತರ ಚರಿತೆಯಲ್ಲಿ ಬರುವ ಪವಾಡಗಳ ಪ್ರಸ್ತಾಪದಲ್ಲಿ ಬರುವ ಸ್ತೋತ್ರಗಳೂ ತೇವಾರದಲ್ಲಿ ಬರುತ್ತವೆ. ಪುರಾಣಗಳಿಗೆ ಸಂಬಂಧಿಸಿದ ಅನೇಕ ಶಿವಕಥೆಗಳ ವಿಷಯಗಳ ಉಲ್ಲೇಖಗಳೂ ಇವರ ತೇವಾರ ಹಾಡುಗಳಲ್ಲಿವೆ. ಕ್ಷೇತ್ರಗಳ ಕುರಿತೂ ಇವರು ಹಾಡಿದ್ದಾರೆ. ತಿರುನಾವುಕ್ಕರಸರ ಹಾಡಿನಲ್ಲಿ ಗೋಕರ್ಣದ ಕುರಿತಾಗಿಯೂ ಒಂದು ಪದಿಕವಿದೆ. ತಾಂಡಕ[1]ವೆಂಬ ವೃತ್ತದಲ್ಲಿ ಇವರು ಈ ತೇವಾರ ಹಾಡುಗಳನ್ನು ಬರೆ ದಿದ್ದಾರೆ. ಈ ವೃತ್ತರಚನೆಯಲ್ಲಿ ಇವರದು ಎತ್ತಿದ ಕೈ. ಅಂತಹ ಒಂದು ತಾಂಡಕ ವೃತ್ತದ ಉದಾಹರಣೆ:

ವಾನರ್ ಕಾಣ್ ವಾನವರ್‌ಕ್ಕು ಮೇಲಾ ನಾನ್ ಕಾಣ್
ವಟಿವೊಟಿಯು ನ್ತೈನ್‌ಜಿಮಿಟು ಮಜಿತ್ತೈಕ ಣಾನ್‌ಕುಮ್
ಅನವನ್‌ಕಾ ಣಾನ್ಯೆನ್ತು ಮಾಟೆ ನಾನ್‌ಕಾ
ಣೈಯನ್‌ಕಾಣ್ ಕೈಯಿಲನ ಲೇನ್ತಿ ಯಾಟುಮ್
ಕಾನವನ್‌ಕಾಣ್ ಕಾನವನು ಕ್ಕರುಳ್‌ಚೆಯ್ ತಾನ್‌ಕಾಣ್
ಕರುತುವಾ ರಿತಯತ್ತು ಕ್ಕಮಲ ತ್ತೂಱುಮ್

---

1. ತಾಂಡಕವೃತ್ತ: (1) ಪ್ರತಿಪಾದದಲ್ಲಿಯೂ 25 ಅಕ್ಷರಗಳಿರುವ ಎಂಟು ಪಾದಗಳುಳ್ಳ ಒಂದು ಹಾಡು. (2) ಪ್ರತಿಪಾದದಲ್ಲಿಯೂ ಆರು ಅಥವಾ ಎಂಟು 'ಶೀರ್'ಗಳನ್ನೊಳಗೊಂಡ ಒಂದೇ ರೀತಿಯ ಹಾಡುಗಳಿಂದ ರಚಿಸಿದ ದೇವತಾಸ್ತೋತ್ರರೂಪವಾದ ಹಾಡು.

ತೇನವನ್‌ಕಾಣ್ ಚೆನ್‌ಱಟೈಯಾ ಚ್ಚೆಲ್ವನ್ ಱಾನ್‌ಕಾಣ್
ಚಿವನವನ್‌ಕಾಣ್ ಚಿವಪುರತ್ತಿಱ್ ಚೆಲ್ವನ್ ಱಾನೇ.[1]

ಅನುವಾದ: "ಆತನಿರುವುದು ಕೈಲಾಸದಲ್ಲಿ. ಆತನು ಎಲ್ಲಾ ದೇವತೆಗಳಿಗಿಂತ ಮೇಲಾದವನು. ಸಂಸ್ಕೃತ ತಮಿಳುಗಳೆರಡೂ ಆತನೇ. ಆತನೇ ನಾಲ್ಕು ವೇದಗಳು. ಆತನು ಹಾಲಿನಲ್ಲಿ ಮೀಯುವವನು. ಎಲ್ಲರಿಗೂ ಒಡೆಯನು. ಕೈಯಲ್ಲಿ ಬೆಂಕಿಯನ್ನು ಹಿಡಿದುಕೊಂಡು ನಟನವನ್ನಾಡಿದ ಬೇಡನು ಆತ. ಬೇಡರವನನ್ನು ಅನುಗ್ರಹಿಸಿದವನಾತ. ಆತನನ್ನು ನೆನೆಯುವವರ ಹೃದಯಕಮಲದಲ್ಲಿ ಒಸರುವ ಮಕರಂದವು ಆತನೇ. ನಮಗೆ ಸಿಗಲು ಕಷ್ಟವಾದ ಪ್ರಿಯಾಸ್ಪದ ವಸ್ತುವಾತ. ಆತನೇ ಶಿವ. ಶಿವಪುರದಲ್ಲಿ ವಾಸಿಸುವ ಪ್ರಿಯಾಸ್ಪದ ವಸ್ತು."

ಅಪ್ಪರ ಇನ್ನೊಂದು ಸುಂದರವಾದ ಪದ್ಯದ ಉಲ್ಲೇಖ:

ಮಾಚಿಲ್ ವೀಣೈಯು ಮಾಲೈ ಮತಿಯಮುಮ್
ವೀಚು ತೆನ್‌ಱಲುಮ್ ವೀಙ್ಕಿಳ ವೇನಿಲುಮ್
ಮೂಚು ವಣ್ಟಱೈ ಪೊಯ್‌ಕೈಯುಮ್ ಪೋನ್‌ಱತೇ
ಈಚ ನೆನ್ತೈ ಯಿಣೈಯಟಿ ನೀೞಲೇ.[2]

ಅನುವಾದ: "ದೋಷರಹಿತವಾದ ವೀಣೆ, ಸಂಜೆಯ ತಿಂಗಳು, ಬೀಸುವ ತೆಂಗಾಳಿ, ಪರಿಮಳಿತವಾದ ಶರತ್ಕಾಲ, ತುಂಬಿಗಳು ಮುಸುರುವ ಹೂಗೊಳ – ಇವುಗಳಂತೆಯೇ ನನ್ನ ತಂದೆಯಾದ ಈಶನ ಪಾದಕಮಲಗಳ ನೆರಳು."

ಇವರ ಈ ಕೆಳಗಿನ ಪದ್ಯವು ತುಂಬಾ ಪ್ರಸಿದ್ಧವಾಗಿದೆ:

ನಾಮಾರ್‌ಕ್ಕುಙ್ ಕುಟಿಯಲ್ಲೋ ನಮನೈ ಯಞ್ಚೋ
ನರಕತ್ತಿ ಲಿಟರ್‌ಪ್ಪಟೋ ನಟಲೈ ಯಿಲ್ಲೋಮ್
ಏಮಾಪ್ಪೋಮ್ ಪಿಣಿಯಱಿಯೋಮ್ ಪಣಿವೋ ಮಲ್ಲೋ
ಮಿನ್‌ಪಮೇ ಯೆನ್ನಾಳು ನ್ತುನ್‌ಪ ಮಿಲ್ಲೈ
ತಾಮಾರ್‌ಕ್ಕುಙ್ ಕುಟಿಯಲ್ಲಾ ತ್ತನ್‌ಮೈ ಯಾನ
ಚಙ್ಕರನಱ್ ಚಙ್ಕವೆಣ್ ಕುೞೈಯೋರ್ ಕಾತಿಱ್
ಕೋಮಾಱ್‌ಕೇ ನಾಮೆನ್‌ಱು ಮೀಳಾ ವಾಳಾಯ್‌ಕ್
ಕೊಯ್‌ಮಲರ್‌ಚ್ಚೇ ವಟಿಯಿಣೈಯೇ ಕುಱುಕಿ ನೋಮೇ.[3]

---

1. ಅಪ್ಪರ್ ತೇವಾರ ಪ್ಪದಿಹಂಗಳ್, ಕೞಗಂ ಪ್ರಕಟಣೆ 1928. ಪುಟ 634.
2. ಅದೇ ಪ್ರಕಟಣೆ. ಪು. 357.
3. ಅದೇ ಪ್ರಕಟಣೆ. ಪು. 664.

ಅನುವಾದ: "ನಾವು ಯಾರ ಒಕ್ಕಲಲ್ಲಿಯೂ ಇಲ್ಲ. ಯಮನಿಗೆ ನಾವು ಅಂಜುವುದಿಲ್ಲ. ನರಕದಲ್ಲಿ ನಾವು ದುಃಖಿಸುವುದಿಲ್ಲ. ನಾವು ಚಂಚಲರಾಗುವುದಿಲ್ಲ. ನಮಗೆ ಆಧಿ ವ್ಯಾಧಿಗಳಿಲ್ಲ. ನಾವು ದೈನ್ಯವನ್ನು ತೋರಿಸಬೇಕಾಗಿಲ್ಲ. ಜೀವನವಿಡೀ ನಮಗೆ ಸಂತೋಷವೇ. ನೋವಿಲ್ಲ. ತಾನು ಯಾರ ಕೆಳಗೂ ಇಲ್ಲದ, ಶಂಖದ ಉಂಗುರವನ್ನು ಕಿವಿಯಲ್ಲಿ ಧರಿಸಿಕೊಂಡ ಶಿವಪರಮಾತ್ಮನಿಗೆ ನಾವು ಅನವರತ ಆಳಾಗಿರುವೆವು. ಆತನ ಕೆಂಪಗಾದ ಪಾದಮಲರುಗಳಲ್ಲಿ ಆಶ್ರಯವನ್ನು ಪಡೆದಿರುವೆವು."

ಹೃದಯದಿಂದ ನೇರವಾಗಿ ಹೊರಹೊಮ್ಮಿದ ಶಿವಪಂಚಾಕ್ಷರಿಯ ಹಿರಿಮೆಯನ್ನು ಸಾರುವ ಸ್ತೋತ್ರ ಇದು:

ನಮಚ್ಚಿ ವಾಯವೇ ಞಾನಮುಜ್ ಕಲ್ವಿಯುಮ್
ನಮಚ್ಚಿ ವಾಯವೇ ನಾನಱಿ ವಿಚ್ಚೈಯುಮ್
ನಮಚ್ಚಿ ವಾಯವೇ ನಾನವಿನ್ ಱೇತ್ತುಮೇ
ನಮಚ್ಚಿ ವಾಯವೇ ನನ್‌ನೆಱಿ ಕಾಟ್ಟುಮೇ.1

'ನಮಶ್ಶಿವಾಯವೇ ನನ್ನ ಎಲ್ಲಾ ಜ್ಞಾನ, ಎಲ್ಲಾ ವಿದ್ಯೆ.
ನಮಶ್ಶಿವಾಯವೇ ನಾನು ತಿಳಿದ ಕಸಬು.
ನಮಶ್ಶಿವಾಯವೇ ನನ್ನ ನಾಲಗೆಯು ಸ್ತುತಿಸುವ ಪದ.
ನಮಶ್ಶಿವಾಯವೇ ಸನ್ಮಾರ್ಗವನ್ನು ಪ್ರದರ್ಶಿಸುವುದು'.

ಇನ್ನೊಂದು ಸುಂದರವಾದ ಸ್ತೋತ್ರ ಹಾಡು:

ವಿಱಕಿಱ್ ಱೀಯಿನನ್ ಪಾಲಿಱ್ಪಟು ನೆಯ್‌ಪೋಲ್
ಮಱೈಯ ನಿನ್‌ಱುಳನ್ ಮಾಮಣಿ ಜ್ಯೋತಿಯಾನ್
ಉಱವು ಕೋಲ್‌ನಟ್ಟುಣರ್ವು ಕಯಿಱ್ಱಿನಾಲ್
ಮುಱುಕ ವಾಜ್ಕಿ ಕ್ಕಟೈಯ ಮುನ್ ನಿಱ್ಕುಮೇ.2

'ಕಟ್ಟಿಗೆಯಲ್ಲಿರುವ ಬೆಂಕಿಯಂತೆ, ಹಾಲಿನಲ್ಲಿರುವ ತುಪ್ಪದಂತೆ, ಆ ಪರಂಜ್ಯೋತಿ ಯಾದವನು ಒಳಗೆ ಮರೆಯಾಗಿ ನಿಂತಿರುವನು. ಪ್ರೇಮವೆಂಬ ಕಡೆಗೋಲನ್ನು ಕೊಂಡು ಅದನ್ನು ಬುದ್ಧಿ ಎಂಬ ಹಗ್ಗದಿಂದ ಸುತ್ತಿ ಕಡೆದರೆ ಆಗ ಆತನು ನಿನ್ನ ಮುಂದೆ ನಿಲ್ಲುವ ನಲ್ಲವೇ!'

---

1. Two thousand years of Tamil Literature by J. M. Somasundaram Pillai, Pub. South India Saiva Siddhanta Publishing Society Ltd., Madras-1. 1959. p. 313.

2. ಅದೇ ಪ್ರಕಟಣೆ. ಪು. 315.

ಅಪ್ಪರರ ತೇವಾರದಲ್ಲಿ ಇಂದ್ರಿಯಗಳನ್ನು ನಿಗ್ರಹಿಸಲಿಕ್ಕಾಗಿ ಮಾಡುವ ಪ್ರಾರ್ಥನೆಯ ಹಾಡುಗಳು ಕೆಲವಿವೆ. ಶಿವನ ವಿಗ್ರಹದ ಸೌಂದರ್ಯವನ್ನು ಸಾಕ್ಷಾತ್ಕರಿಸಲು ಮಾಡುವ ಪ್ರಾರ್ಥನೆಗಳು ಇನ್ನೂ ಕೆಲವು. ಜಾತ್ಯತೀತವಾದ ಭಾವನೆಗಳು ಹಲವು ಹಾಡುಗಳಲ್ಲಿ ಅಡಕವಾಗಿವೆ :

ಚಙ್ಕನಿತಿ ಪತುಮನಿತಿ ಯಿರಣ್ಡು ನ್ತನ್ತು
ತರಣಿಯೊಟು ವಾನಾಳ ತ್ತರುವ ರೇನುಮ್
ಮಙ್ಕುವಾ ರವರ್‌ಚೆಲ್ವ ಮತಿಪ್ಪೋ ಮಲ್ಲೋ
ಮಾತೇವರ್ ಕ್ಕೇಕಾನ್ತ ರಲ್ಲಾ ರಾಕಿಲ್
ಅಙ್ಕಮೆಲಾಙ್ ಕುಱೈನ್ತುಟುಕು ತೊಟುನೋ ಯರಾ
ಯಾವುರಿತ್ತು ತ್ತಿನ್‌ಱುಟಲುಮ್ ಪುಲೈಯ ರೇನುಮ್
ಕಙ್ಕೈವಾರ್ ಚಟೈಕ್ಕರನ್ತಾರ್ ಕ್ಕನ್ಪ ರಾಕಿ
ಲವರ್ ಕಣ್ಟೀರ್ ನಾಮ್‌ವಣಙ್ಕುಙ್ ಕಟವು ಳಾರೇ.[1]

'ಶಂಖ ಪದ್ಮ ನಿಧಿಗಳನ್ನು ತಂದು ಭೂಲೋಕ ಸ್ವರ್ಗಲೋಕಗಳನ್ನು ಆಳುವವರಾದರೂ ಅವರು ಮಾದೇವನ ಏಕಾಂತಭಕ್ತರಲ್ಲದಿದ್ದರೆ ನಾವು ಅವರ ಸೌಭಾಗ್ಯವನ್ನು ಲಕ್ಷಿಸುವುದಿಲ್ಲ. ದೇಹವು ಬಗ್ಗಿ, ಅಂಗವೆಲ್ಲಾ ವ್ರಣಗಳಿಂದ ಕೂಡಿ, ವ್ಯಾಧಿಯಿಂದ ಕೂಡಿದ, ಪಶುಗಳ ಚರ್ಮವನ್ನು ಸುಲಿದು ಮಾಂಸವನ್ನು ತಿಂದು ಜೀವನ ನಡೆಸುವ ಹೊಲೆಯರಾಗಿದ್ದರೂ, ಅವರು ಗಂಗೆಯನ್ನು ಜಡೆಯಲ್ಲಿ ಧರಿಸಿದ ಶಿವಪರಮಾತ್ಮನಿಗೆ ಭಕ್ತರಾಗಿದ್ದರೆ ಅವರನ್ನೂ ನಾವು ನಮಿಸುವ ದೇವರೆಂದು ತಿಳಿಯಿರಿ'.

ತೇವಾರಗಳಲ್ಲಿ ಭಾವನೆಗಳ ವಿಷಯಗಳ ಪುನರಾವರ್ತನೆಗಳೂ ಇವೆ. ಆದರೂ ಒಟ್ಟಿನಲ್ಲಿ ಈ ತೇವಾರ ಹಾಡುಗಳ ಮಟ್ಟ ಉನ್ನತಿಯದು. ಅನೇಕ ಹಾಡುಗಳು ಹೃದಯದಿಂದ ನೇರವಾಗಿ ಹೊರಹೊಮ್ಮಿದಂತಿವೆ. ಇದರಿಂದಾಗಿ ತೇವಾರಗಳಲ್ಲಿ ಹೆಚ್ಚು ಜನಪ್ರಿಯವಾದುದು ಅಪ್ಪರರ ತೇವಾರಗಳೇ.

ಸಂಬಂಧರು

ತೇವಾರಗಳನ್ನು ಬರೆದವರಲ್ಲಿ ತಿರುಜ್ಞಾನ ಸಂಬಂಧರು ಎರಡನೆಯವರು. ಸಂಬಂಧರು ಎಂಬುದಾಗಿಯೇ ಇವರು ಜನಪ್ರಿಯರಾಗಿದ್ದಾರೆ. ಇವರು ಬರೆದಿಟ್ಟ 4158 ಹಾಡುಗಳು ದೊರೆತಿವೆ. ಇನ್ನೂ ಹೆಚ್ಚು ಬರೆದಿರಬಹುದಾದ ಸಂಭವ ಇದೆ. ಸಂಬಂಧರ ವ್ಯಕ್ತಿತ್ವ ಹಿರಿದು. ಇವರು ರಚಿಸಿದ ಸ್ತೋತ್ರಗಳು ರಾಗದಿಂದ ಹಾಡಲು ಚೆನ್ನಾಗಿರುತ್ತವೆ. ತೇವಾರದ ಎಲ್ಲಾ ರಾಗಗಳೂ (ಸುಮಾರು 23) ಸಂಬಂಧರ ಹಾಡುಗಳಲ್ಲಿ ಬಂದಿವೆ. ಹೀಗೆ ಸಂಗೀತದ ದೃಷ್ಟಿಯಿಂದ ಸಂಬಂಧರ ತೇವಾರಕ್ಕೆ ಹೆಚ್ಚಿನ ಹಿರಿಮೆ ಇದೆ.

1. ಅಪ್ಪರ್ ತೇವಾರ ಪ್ಪದಿಹಂಗಳ್, ಕಟಗಂ ಪ್ರಕಟಣೆ 1928. ಪು. 657.

ಯಮಕ, ಪ್ರಾಸ, ಲಯ, ವರ್ಣಗಳ ಪ್ರಯೋಗದಲ್ಲಿ ಜಾಣ್ಮೆ – ಇವೆಲ್ಲಾ ಸಂಬಂಧರ ತೇವಾರಗಳಲ್ಲಿವೆ. ಇದಕ್ಕೆ ಒಂದು ಉದಾಹರಣೆ:

ಪುಲನೈನ್ತುಮ್ ಪೊಱಿಕಲಙ್ಙಿ ನೆಱಿಮಯಙ್ಙಿ
ಯಱಿವಟಿನ್ರಿಟ್ ಟೈಮ್ಮೇಲುನ್ರಿ
ಅಲಮನ್ರು ಪೋತಾಕ ವಞ್ಚೇಲೆನ್
ಱರುಳ್‌ಚೆಯ್ವಾ ನಮ ರುಱೈಯಿಲ್
ವಲಮ್‌ವನ್ದು ಮಟವಾರ್ಕ ಣಟಮಾಟ
ಮುಟಿವತಿರ ಮಟಿಯೈಯೆನ್‌ಱಞ್ಜಿ
ಚ್ಚಿಲಮನ್ರಿ ಯಲಮನ್ದು ಮರಮೇಱಿ
ಮುಕಿಲ್‌ಪಾರ್ಕ್ಕು ನ್ತಿರುವೈಯಾಱೇ.[1]

'ನಮ್ಮ ಅಂತಿಮ ಕಾಲದಲ್ಲಿ ಪಂಚೇಂದ್ರಿಯಗಳು ಶಕ್ತಿಗುಂದಿದಾಗ, ಮುಂದಿನ ದಾರಿಯು ಮಂಕಾದಾಗ, ಅರಿವು ಅಸವಳಿದಾಗ, ಪ್ರಯಾಸದ ಉಸಿರಾಟವನ್ನು ಶ್ಲೇಷ್ಮವು ಅವರೋಧಿಸಿದಾಗ, ತಿರುವೈಯಾರಿನ ದೇಗುಲದಲ್ಲಿ ವಿರಾಜಮಾನನಾದ ಪರಶಿವನು 'ಅಂಜಬೇಡಿ' ಎಂದು ಅನುಗ್ರಹಿಸುವನು. ಆ ದೇಗುಲದಲ್ಲಿ ಹೆಂಗಸರು ನರ್ತಿಸಲು ಮದ್ದಳೆಯ ನಿನಾದವು ಕೇಳಿಬರುವುದು. ಅಲ್ಲಿನ ಮಂಗಗಳು ಮಳೆಬರುವುದೆಂದು ಹೆದರಿ ಓಡಿ ಮರವೇರಿ ಮುಗಿಲತ್ತ ನೋಡುವುವು'.

ಮಂಗಗಳು ಮುರಜಧ್ವನಿಯನ್ನು ಸಿಡಿಲೆಂದು ಭ್ರಮಿಸಿ ಅನಾವಶ್ಯಕವಾಗಿ ಉದ್ವೇಗಗೊಳ್ಳುವಂತೆ ನಾವೂ ಮರಣಕಾಲದಲ್ಲಿ ನಮಗೆ ತಿಳಿಯದ ವಿಷಯದ ಕುರಿತು ಅನಾವಶ್ಯಕವಾಗಿ ಉದ್ವೇಗಗೊಳ್ಳುವೆವೆಂಬುದು ಸೂಚಿತವಾಗಿದೆ.

ಸಂಬಂಧರ ತೇವಾರಗಳಲ್ಲಿ ಸ್ಥಳ, ಕ್ಷೇತ್ರ, ದೇವಸ್ಥಾನದ ಸುತ್ತಿನ ಊರು, ನದಿ, ಬೀದಿ, ಮನೆ, ಸ್ತ್ರೀಪುರುಷರು ಆಚರಿಸುವ ಸನ್ಮಾರ್ಗ, ದೇವಸ್ಥಾನದಲ್ಲಿ ನಡೆದುಬರುವ ವಿಶೇಷ ಪೂಜೆಗಳ ವರ್ಣನೆಗಳು – ಇವೆಲ್ಲಾ ಬರುವುವು. ಶಿವನು ಮಾಡಿದ ಅನುಗ್ರಹ ಗಳೂ ಇಲ್ಲಿ ವರ್ಣಿತವಾಗಿವೆ. ರಾವಣನು ಕೈಲಾಸವನ್ನು ಎತ್ತಿದ ಪ್ರಸ್ತಾಪ ತಿರುಜ್ಞಾನ ಸಂಬಂಧರ ತೇವಾರದಲ್ಲಿ ಪ್ರತಿಪದಿಕ[2]ದಲ್ಲಿಯೂ ಎಂಟನೆಯ ಹಾಡಾಗಿ ಬರುತ್ತದೆ.

ಸಂಬಂಧರು ಮೃತಳಾದ ಪೂಂಪಾವೈ ಎಂಬವಳ ಎಲುಬುಗಳನ್ನು ಒಂದುಗೂಡಿಸಿ ಹೆಣ್ಣಾಗಿ ಮಾಡಿದ ವಿಷಯ ಒಂದು ತೇವಾರದಲ್ಲಿದೆ. ಹೀಗೆ ಜೀವನಚರಿತೆಯ ಕೆಲ ಅಂಶಗಳನ್ನು ಈ ತೇವಾರಗಳಲ್ಲಿ ಕಾಣಬಹುದು. ತಿರುಜ್ಞಾನ ಸಂಬಂಧರು ತಾನು ರಚಿಸಿದ ತೇವಾರಗಳ ಕೊನೆಯ ಹಾಡಿನಲ್ಲಿ ತನ್ನ ಹೆಸರನ್ನೆತ್ತಿಕೊಂಡೇ ಅದರ ಕುರಿ ತಾಗಿಯೇ ಹಾಡಿದ್ದಾರೆ.

---

1. ಸಂಬಂಧರ್ ತೇವಾರ ಪ್ಪದಿಕಂಗಳ್, ಕಟಗಂ ಪ್ರಕಟಣೆ 1927. ಪುಟ 273.
2. ಪದಿಕ: ಹತ್ತು ಹಾಡುಗಳ ಒಂದು ಗುಂಪಿಗೆ ಪದಿಕ ಎಂದು ಹೆಸರು.

ಸುಂದರರು

ತೇವಾರ ರಚಕತ್ರಯರಲ್ಲಿ ಸುಂದರರು ಮೂರನೆಯವರು. ಇವರು **ರಚಿಸಿದ** ತೇವಾರ ಹಾಡುಗಳು 1000. ಈ ತೇವಾರ ಹಾಡುಗಳು ಸುಂದರರ ಭಕ್ತ್ಯತಿಶಯದಿಂದ ತಮ್ಮವೇ ಆದ ವೈಶಿಷ್ಟ್ಯವನ್ನು ಪಡೆದಿವೆ.

ಅವರ ತೇವಾರ ಹಾಡುಗಳಿಂದ ಅವರ ಜೀವನಚರಿತೆಯ ಅನೇಕ ವಿವರಗಳು ತಿಳಿದು ಬರುತ್ತವೆ. ಒಂದು ತೇವಾರ ಹಾಡಿನಲ್ಲಿ ಅವರು ತಮ್ಮೊಳಗಾದ ಹಿಂದಿನ ಒಪ್ಪಂದವನ್ನು ತಿಳಿಸಿ, ಜೀವನದ ಸುಖಭೋಗಗಳನ್ನು ಕೊಡುವಂತೆ ಶಿವನನ್ನು ಕೇಳಿಕೊಳ್ಳುತ್ತಾರೆ. ಚಿನ್ನದ ಹಿಡಿಯ ಬೆತ್ತ, ಕಂಠವಸ್ತ್ರ, ಅನ್ನ, ವ್ಯಂಜನ, ತುಪ್ಪ, ಪರಿಮಳದ್ರವ್ಯ– ಇವುಗಳನ್ನು ಕೊಡುವಂತೆ ದೇವರನ್ನು ಪ್ರಾರ್ಥಿಸುತ್ತಾರೆ.[1]

ಮಗುವನ್ನು ಬಿಟ್ಟುಕೊಡಬೇಕೆಂದು ಮೊಸಳೆಗೆ ಹೇಳುವಂತೆ ಇನ್ನೊಂದು ತೇವಾರದ ಹಾಡಿನಲ್ಲಿ ಬರುವುದು.[2]

ಶಿವನು ಬತ್ತವನ್ನು ಕರುಣಿಸಿದುದು ಇನ್ನೊಂದು ಹಾಡಿನಲ್ಲಿದೆ.[3] ಸುಂದರರು ಕಣ್ಣನ್ನು ಕಳಕೊಂಡು ಶಿವನನ್ನು ಪ್ರಾರ್ಥಿಸುವುದು ಒಂದು ಹಾಡಿನಲ್ಲಿದೆ.[4] ಕಳೆದು ಕೊಂಡ ಕಣ್ಣನ್ನು ಅನುಗ್ರಹಿಸಬೇಕೆನ್ನುವ ಪ್ರಾರ್ಥನೆ ತೇವಾರ ಹಾಡೊಂದರಲ್ಲಿ ಬರುತ್ತದೆ.[5] ಈ ರೀತಿಯ ಸ್ವಂತ ಜೀವನಚರಿತೆಯ ಅಂಶವನ್ನೊಳಗೊಂಡ ತೇವಾರ ಹಾಡುಗಳು ಬಹಳ. ಸ್ತುತಿರೂಪದ ಭಕ್ತಿ ಹಾಡುಗಳನ್ನೂ ಸುಂದರರು ಹಲವಾರು ಹಾಡಿದ್ದಾರೆ. ಸಂಬಂಧರ ತೇವಾರ ಹಾಡುಗಳ ವಸ್ತುವಿನ ಕುರಿತಾಗಿ ಹೇಳಿದುದನ್ನೇ ಸುಂದರ, ಅಪ್ಪರರ ತೇವಾರಗಳ ವಸ್ತುವಿನ ಬಗ್ಗೂ ಹೇಳಬಹುದು.

ಅವುಗಳಲ್ಲೊಂದು ಸುಂದರವಾದ ತೇವಾರ ಹಾಡಿನ ಉದಾಹರಣೆ:

ಪೊನ್ನಾರ್ ಮೇನಿಯನೇ ಪುಲಿತ್ತೋಲೈ ಯರೈಕ್ಕಚೈತ್ತು
ಮಿನ್ನಾರ್ ಚೆಞ್ಚಟೈಮೇಲ್ ಮಿಳಿರ್ಕೊನ್ಜೈ ಯಣಿನ್ತವನೇ
ಮನ್ನೇ ಮಾಮಣಿಯೇ ಮಟಪಾಟಿಯುಳ್ ಮಾಣಿಕ್ಕಮೇ
ಅನ್ನೇ ಯುನ್ನೈಯಲ್ಲಾ ಲಿನಿಯಾರೈ ನಿನೈಕ್ಕೇನೇ.[6]

'ಹೊನ್ನಿನ ಮೈಯುಳ್ಳವನೇ! ಹುಲಿದೊವಲನ್ನು ನಡುವಿಗೆ ಬಿಗಿದು ಮಿಂಚಿನಂತಹ ಕೆಂಜೆಡೆಯ ಮೇಲೆ ಮಿಳಿರುವ ಕೊನ್ರೈಹೂವಿನ ಅಲಂಕಾರವುಳ್ಳವನೇ!

1. ಸುಂದರರ್ ತೇವಾರ ಪ್ಪದಿಕಂಗಳ್, ಕಟಿಗಂ ಪ್ರಕಟಣೆ 1929. ಪುಟ 108–111.
2. ,, ,, ಪು. 92–ಹಾಡು 4.
3. ,, ,, ಪದಿಹ 20.
4. ,, ,, ಪದಿಹ 54–ಹಾಡು 9.
5. ,, ,, ಪದಿಹ 95–ಹಾಡು 2.
6. ,, ,, ಪದಿಹ 24–ಹಾಡು 1.

ಶಾಶ್ವತನೇ! ಅನರ್ಘರತ್ನವೇ! ಮಟಪಾಡಿ[1]ಯ ಮಾಣಿಕ್ಯವೇ! ಆಳಾಗಿರುವ ನಾನು ನಿನ್ನನ್ನಲ್ಲದೆ ಇನ್ನಾರನ್ನು ನೆನೆಯಲಿ!'

ತೇನೆಯ್‌ಪುರಿನ್ತುಟಿಲ್ ಚೆಞ್ಜಿಟೈಯೆನ್ಪಿರು
ಮಾನತಿಟನ್ತಿಕ ಟಿೖಜ್ಞಣೈಯ
ಕ್ಕೋನೈಯರಿತ್ತರಿ ಯಾಟಿಯಿಟಙ್ಕಲ
ವಾನತಿಟಙ್ಕಟಿೖ ಯಾವಜಿೖಯಾವ್
ಮಾನೈಯಿಟತ್ತತೊರ್ ಕೈಯನಿಟವ್ಮೃತ
ಮಾಜಿಪಟಪ್ಪೋಟಿ ಯುವ್ಮೃಲೈಪೋಲ್
ಯಾನೈಯುರಿತ್ತಪಿ ರಾನತಿಟಙ್ಕಲಿ
ಕ್ಕಚ್ಚಿಯನೇಕತ ಙ್ಕಾವತವೇ. —ಇತ್ಯಾದಿ 10 ಹಾಡುಗಳು.[2]

'ಜೇನೆಯ್ಯು ಪೂಸಲ್ಪಟ್ಟ, ಅಲುಗಾಡುವ ಕೆಂಜೆಡೆಯ ಶಿವಪರಮಾತ್ಮನಿರುವ ಎಡೆ, ಪಂಚಬಾಣನನ್ನು ದಹಿಸಿ ನರ್ತಿಸಿದೆಡೆ, ವೃಷಭನಿರುವ ಎಡೆ, ವೇದಗಳೆಂಬ ಜಿಂಕೆಯನ್ನು ಎಡಕೈಯಲ್ಲಿ ಧರಿಸಿದವನ ಎಡೆ, ಹೊಳೆಯಂತೆ ಹರಿಯುವ ಮದಜಲವನ್ನು ಸುರಿಸುವ ಆನೆಯನ್ನು ಕೊಂದು ಅದರ ಚರ್ಮವನ್ನು ಸುಲಿದ ಶಿವಪರಮಾತ್ಮನಿರುವ ಎಡೆ, ಕಾಂಚಿಯಲ್ಲಿರುವ ಅನೇಕದಙ್ಕಾಪದಂ ಎಂಬ ಸ್ಥಳ'.

ಸುಂದರರ ಇನ್ನೊಂದು ಪ್ರಸಿದ್ಧವಾದ ಹಾಗೂ ತುಂಬಾ ಸೊಗಸಾದ ಹಾಡು ಇದು:

ತಿಲ್ಲೈವಾ ಟನ್ತಣರ್‌ತ ಮ್ಮಟಿಯಾರ್‌ಕ್ಕು ಮಟಿಯೇನ್
ಟಿರುನೀಲ ಕಣ್ಟತ್ತು ಕ್ಕುಯವನಾರ್ ಕ್ಕಟಿಯೇನ್
ಇಲ್ಲೈಯೇ ಯೆನ್‌ನಾತ ವಿಯಟ್ಪಕೈಕ್ಕು ಮಟಿಯೇ
ನಿಳೈಯಾನ್‌ಜನ್ ಕುಟಿಮಾಜ ನಟಿಯಾರ್‌ಕ್ಕು ಮಟಿಯೇನ್
ವೆಲ್ಲುಮಾ ಮಿಕವಲ್ಲ ಮೆಯ್‌ಪೊರುಳು ಕ್ಕಟಿಯೇನ್
ವಿರಿಪೊಟಿಲ್‌ಚೂಟ್ ಕುನ್‌ಟೈಯಾರ್ ವಿಜನ್‌ಮಿಣ್ಟಜ್ ಕ್ಕಟಿಯೇನ್
ಅಲ್ಲಮೆನ್ ಮುಲ್ಲೈಯನ್ತಾ ರಮರ್‌ನೀತಿ ಕ್ಕಟಿಯೇ
ನಾರೂರ ನಾರೂರಿ ಲಮ್ಮಾನು ಕ್ಕಾಳೇ. —ಇತ್ಯಾದಿ 11 ಹಾಡುಗಳು.[3]

'ನಿಮ್ಮ ದಾಸರಾದ ಚಿದಂಬರ ದೀಕ್ಷಿತರಿಗೆ ದಾಸನಾಗಿರುವೆನು. ಕುಂಬಾರ ತಿರುನೀಲಕಂಠರಿಗೆ ದಾಸನಾಗಿರುವೆನು. ಇಲ್ಲವೆಂದು ಹೇಳದೆ ಇದ್ದುದನ್ನೆಲ್ಲಾ ಕೊಟ್ಟ

1. ಮಟಪಾಡಿ ಎಂಬುದು ತಿರುಚಿ ಜಿಲ್ಲೆಯಲ್ಲಿರುವ ಒಂದು ಸ್ಥಳ.
2. ಅದೇ: ಪದಿಹ 10.
3. ಅದೇ: ಪದಿಹ 39.

ಬಿಡುವ ಇಯಂಟ್‌ಪಗೈ ನಾಯನಾರರಿಗೆ ದಾಸನಾಗಿರುವೆನು. ಭಕ್ತ ಇಳೈಯಾನ್‌ಕುಡಿಮಾರ ನಾಯನಾರರಿಗೆ ದಾಸನಾಗಿರುವೆನು. ಜಯವನ್ನು ಪಡೆಯುವ ಶಕ್ತಿವಂತರಾದ ಮೆಯ್‌ಪೊರುಳ್ ನಾಯನಾರರಿಗೆ ದಾಸನಾಗಿರುವೆನು. ಅಮರ್‌ನೀತಿ ನಾಯನಾರರಿಗೆ ನಾನು ದಾಸನು. ಆರೂರನು (ನಂಬಿಯು) ಆರೂರಿನ ತಂದೆಗೆ (ಶಿವನಿಗೆ) ಭೃತ್ಯನು.' ಹೀಗೆಯೇ ಅರುವತ್ತುಮೂರು ನಾಯನಾರರ ಹೆಸರುಗಳನ್ನು ಬೇರೆ ಬೇರೆಯಾಗಿ ಎತ್ತಿ ಹೇಳಿ ಅವರಿಗೆಲ್ಲಾ ತಾನು ದಾಸನಾಗಿರುವೆನು ಎಂದು ಸುಂದರರು ತಿರುತ್ತೊಂಡರ್ ಪುರಾಣದ ಆರಂಭದ ಈ ಹಾಡಿನಲ್ಲಿ ಹೇಳುತ್ತಾರೆ.

ತಿರುವಾಚಕ

ಪವಿತ್ರ ಶೈವಗ್ರಂಥವಾದ ತಿರುವಾಚಕವನ್ನು ರಚಿಸಿದವರು ಪ್ರಸಿದ್ಧ ಶೈವ ಅನುಭಾವಿಗಳಲ್ಲಿ ನಾಲ್ಕನೆಯವರಾದ ಮಾಣಿಕ್ಕವಾಚಕರು. ಇವರು ಒಂಬತ್ತನೇ ಶತಮಾನದಲ್ಲಿದ್ದ ಶಿವಭಕ್ತರು. ಇವರು ತಮ್ಮ ಕೃತಿಯಾದ ತಿರುವಾಚಕದಲ್ಲಿ ಜಾನಪದ ಗೀತಗಳ ಸಂಕೇತಗಳನ್ನೆಲ್ಲಾ ಉಪಯೋಗಿಸಿಕೊಂಡಿದ್ದಾರೆ. ಹೀಗೆ ತಮ್ಮ ಸಂದೇಶವನ್ನು ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯುವಂತೆ ಹೇಳಿದ್ದಾರೆ. ತಾವು ಪಡೆದ ಸಾಕ್ಷಾತ್ಕಾರದ ಅನುಭವವನ್ನು ತಿರುವಾಚಕದಲ್ಲಿ ತೆರೆದಿರಿಸಿದ್ದಾರೆ. ಭಕ್ತಿಗೀತಗಳೆಂದರೆ ತಮಿಳರಿಗೆ ಹೊಳೆಯುವುದು ತಿರುವಾಚಕದ ಹೆಸರು.

ಕವಿಯು ತನ್ನ ಹೃದಯವನ್ನೇ ಇಲ್ಲಿ ದೇವರೆದುರು ತೋಡಿಕೊಂಡಿದ್ದಾರೆ. ಅವರ ಭಯ ಕಾತರತೆಗಳು, ಆಶೆ ಸಂತೋಷಗಳೊಡನೆ ಇಲ್ಲಿ ಕಾಣಿಸಿಕೊಳ್ಳುತ್ತವೆ. ಕೊನೆಗೆ ಇವೆಲ್ಲಾ ಅಮಿತಾನಂದದಲ್ಲಿ ಕೊನೆಗೊಳ್ಳುವುದನ್ನು ನಾವು ಕಾಣುತ್ತೇವೆ. ಶೈವ ಸಿದ್ಧಾಂತ ತತ್ವವು ತಿರುವಾಚಕದಲ್ಲಿ ಪಕ್ವಗೊಂಡಿದೆ. ಶಿವನು ತನ್ನನ್ನು ಹುಡುಕುವವರನ್ನು ಗುರುವಿನ ರೂಪದಿಂದ ಹುಡುಕಿ ಅನುಗ್ರಹಿಸುವನೆಂದು ತಿರುವಾಚಕದಲ್ಲಿದೆ. ಇದರಲ್ಲಿ ಭಕ್ತಿಗೇ ಪ್ರಾಧಾನ್ಯ. ಮಾಣಿಕ್ಕವಾಚಕರು ತಿಳಿದ ಒಂದೇ ಮಾರ್ಗ ಈ ಭಕ್ತಿ ಮಾರ್ಗ. ತಾತ್ವಿಕ ವಿಷಯಗಳೂ ಇದರಲ್ಲಿ ಸಾಕಷ್ಟಿವೆ. ಇವು ಸ್ತುತಿಹಾಡುಗಳಾಗಿ ತಿರುವಾಚಕದಲ್ಲಿ ರೂಪುದಾಳಿವೆ.

ಮಾಣಿಕ್ಕವಾಚಕರು ಶಿವನಿದಿರು ಸಾಷ್ಟಾಂಗ ನಮಸ್ಕಾರ ಮಾಡಿ ತನ್ನನ್ನು ಸಂಪೂರ್ಣ ಒಪ್ಪಿಸಿಕೊಂಡಂತೆ ಈ ಹಾಡುಗಳಿಂದ ತಿಳಿದುಬರುವುದು. ಹೀಗೆ ಶಿವನಲ್ಲಿ ತನ್ನನ್ನರ್ಪಿಸಿಕೊಂಡು ತನ್ನ ಆತ್ಮವನ್ನು ಪರಮಾತ್ಮನೊಡನೆ ಅವರು ಸೇರಿಸಿಕೊಂಡಿದ್ದಾರೆ. ಲೌಕಿಕ ವಿಷಯಗಳನ್ನು ಅವರು ತೊರೆದಿದ್ದಾರೆ. ಅವರ ಆತ್ಮವು ಅಕ್ಷರಶಃ ಕರಗಿ ದೇವರತ್ತ ಹರಿದಿದೆ. ತಿರುವಾಚಕವಿಡೀ ಇದೇ ಭಾವವು ಕಾಣುತ್ತಿದೆ. ತಿರುವಾಚಕದಲ್ಲಿ ಮಾಣಿಕ್ಕವಾಚಕರ ಆತ್ಮವೃತ್ತಾಂತವೂ ಇದೆ. ಹೀಗೆ ಈ ಕೃತಿಯು ಉತ್ತಮ ಮಟ್ಟದ ಒಂದು ಗ್ರಂಥ. ಮೇಲಿನ ನಾಲ್ಕು ಶೈವ ಅನುಭಾವಿಗಳಲ್ಲಿ ಮಾಣಿಕ್ಕವಾಚಕರು ಅತ್ಯುತ್ತಮ ಕವಿ.

ಮಾಣಿಕ್ಕವಾಚಕರ ಹಾಡುಗಳು ಸಾಮೂಹಿಕ ಹಾಡುವಿಕೆಗಾಗಿ ರಚಿಸಿದ ಹಾಡುಗಳಲ್ಲ. ಹೀಗಾಗಿ ಅದರಲ್ಲಿ ಸಂಬಂಧರ ಹಾಡುಗಳಲ್ಲಿದ್ದಂತೆ ಗೇಯತೆ ಹೆಚ್ಚಾಗಿಲ್ಲ. ತಿರುವಾಚಕದ ಹಾಡುಗಳು ಶಿವನ ಮುಂದೆ ಆತ್ಮವು ತನ್ನನ್ನು ಅರ್ಪಿಸಿಕೊಂಡ ಹಾಡುಗಳು. ಅವರ ಹಾಡಿನ ಪ್ರತಿಪದದಲ್ಲಿಯೂ ಕಾತರತೆ, ಪ್ರಾಮಾಣಿಕತೆ, ಆರ್ತ ಭಾವಗಳು ಅಭಿವ್ಯಕ್ತವಾಗಿವೆ. ಮಾಣಿಕ್ಕವಾಚಕರು ದೇವರ ಹಿರಿಮೆಯನ್ನೂ ತನ್ನ ಅಲ್ಪತೆಯನ್ನೂ ಹಾಡುಗಳಲ್ಲಿ ವರ್ಣಿಸುತ್ತಾರೆ. ತನ್ನನ್ನು ಕಠಿಣಹೃದಯಿಯೆಂದೂ ಮೋಸಗಾರನೆಂದೂ ವಿಶೇಷಿಸಿಕೊಳ್ಳುತ್ತಾರೆ. ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವಲ್ಲಿ ತಾನೆಷ್ಟು ವಿಫಲನಾಗಿರುತ್ತೇನೆ ಎಂಬುದೇ ಈ ನೈಚ್ಯಾನುಸಂಧಾನದ ಅರ್ಥ.

ತಿರುವಾಚಕದ ಐವತ್ತೊಂದು ಪದ್ಯಗಳಲ್ಲಿ ಪ್ರತಿಯೊಂದೂ ತನ್ನದೇ ಆದ ವೈಶಿಷ್ಟ್ಯತೆಯನ್ನೂ ಸೊಗಸನ್ನೂ ಪಡೆದಿದೆ. ಕವಿಯು ದೇವರ ಎದುರಿನಲ್ಲಿ ಎದೆಕರಗಿ ನಿಲ್ಲುವುದನ್ನು ನಾವು ಈ ಹಾಡುಗಳಲ್ಲಿ ನೋಡುತ್ತೇವೆ. ಉದಾಹರಣೆ:

ಚೆಟುಕ್ಕಮಲತ್ತಿರಳ್ ಅನನಿನ್ ಚೇವಟಿ ಚೇರ್ನ್ತ ಮೈನ್ತ
ಪಟುತ್ತಮನತ್ತಟಿಯರ್ ಉಟನ್ ಪೋಯಿನರ್; ಯಾನ್ ಪಾವಿಯೇನ್
ಪುಟುಕ್ಕಣುಟ್ಟೈ ಪ್ಪುನ್‌ಕುರಮ್ಪೈ ಪೊಲ್ಲಾ ಕ್ಕಲ್ವಿ ಞಾನಮಿಲಾ
ಅಟುಕ್ಕುಮನ ತ್ತಟಿಯೇನ್, ಉಟೈಯಾಯ್! ಉನ್ ಅಟೈಕ್ಕಲಮೇ! 1

'ರಾಜಿಸುವ ಕಮಲಗಳ ಷಂಡದೋಪಾದಿಯಲಿ
ಪರಿಪಕ್ವಮತಿ ಭಕುತ ವೃಂದಗಳು ನಿನ್ನ
ಪದಕಮಲ ಸೇರಿಹರು, ಜ್ಞಾನವಿದ್ಯಾಶೂನ್ಯ
ಪಾಪಿಯಾಂ ತ್ವದ್ಭೃತ್ಯ ನಿನ್ನಲ್ಲಿ ಶರಣು'.

ತಾತ್ವಿಕ ಪರಾಕಾಷ್ಠೆಯನ್ನು ಮುಟ್ಟಿದ ಹಾಡುಗಳಿಗೆ ಉದಾಹರಣೆ:

ಪಟೈಪ್ಪೋಱ್ ಪಟೈಕ್ಕುಮ್ ಪಟಿಯೋನ್; ಪಟೈತ್ತವೈ
ಕಾಪ್ಪೋಱ್ ಕಾಕ್ಕುಙ್ಕಟವುಳ್; ಕಾಪ್ಪವೈ
ಕರಪ್ಪೋನ್, ಕರಪ್ಪವೈ ಕರುತಾ
ಕ್ಕರುತ್ತುಟೈ ಕ್ಕಟವುಟೆರುತ್ತಕುಮ್
(ಅರುವಕೈ ಚ್ಚಮಯ ತ್ತಱುವಕೈ ಯೋರ್‌ಕ್ಕುಮ್
ವೀಟುಪೇಱಾಯ್ ನಿನ್ಱ ವಿಣ್ಣೋರ್ ಪಕುತಿ)2

1. Popes Translation of Tiruvacakam, XXIV.
2. ಅದೇ: III 11, 13-16.

'ಆತನು ಎಲ್ಲವನ್ನೂ ಸೃಷ್ಟಿಸಿದವನನ್ನು ಸೃಷ್ಟಿಸುವ ಪುರಾತನನು.
ಸೃಷ್ಟಿಸಿದವುಗಳನ್ನು ರಕ್ಷಿಸುವವನನ್ನು ರಕ್ಷಿಸುವ ದೇವನು.
ಲಯಿಸುವವನನ್ನು ಲಯಿಸುವ ದೇವನು.
ಚಿಂತನೆಯಿಲ್ಲದೆ ಚಿಂತಿಸಿ ಜೀವಿಗಳ ನಾಶವನ್ನು ತಿಳಿದವನು'.

ತತ್ವವು ಕವಿತೆಯಲ್ಲಿ ಬೆರೆಯುವ ಉದಾಹರಣೆಗಳೂ ತಿರುವಾಚಕದಲ್ಲಿ ಹೆಚ್ಚಾಗಿವೆ. ಉದಾಹರಣೆ:

. . . . ತಿರುತ್ತಕು
ಮತಿಯಿಱ್ಱೆಕ್ಕೈ ವೈತ್ತೋನ್; ತಿಣ್ತಿಱ
ಱೀಯಿನ್ ವೆಮ್ಮೈ ಚೆಯ್ತೋನ್; ಪೊಯ್‌ತೀರ್
ವಾನಿಱ್ ಕಲಪ್ಪು ವೈತ್ತೋನ್; ಮೇತಕು
ಕಾಲಿ ನೂಕ್ಕ ಜ್ಞಣ್ಣೋನ್; ನಿೞಱ್‌ಕೞ್
ನೀರಿಲ್ ಇನ್‌ಚುವೈ ನಿಕೞ್‌ನ್ದೋನ್; ವೆಳಿಪ್ಪಟ
ಮಣ್ಣಿ ಱೀಣ್ಮೈ ವೈತ್ತೋನ್;

'ಆತನು ಪವಿತ್ರವಾದ ಚಂದ್ರನಲ್ಲಿ ಆತನ ತಂಪನ್ನು ಇಟ್ಟವನು. ಶಕ್ತಿಯುತವಾದ ಬೆಂಕಿಯಲ್ಲಿ ಅದರ ಉಷ್ಣವನ್ನು ಉಂಟುಮಾಡಿದವನು. ನಿರ್ಮಲವಾದ ಆಕಾಶದಲ್ಲಿ ಅದರ ವ್ಯಾಪಕತ್ವವನ್ನಿಟ್ಟವನು. ಬಲಶಾಲಿಯಾದ ಗಾಳಿಯಲ್ಲಿ ಅದರ ಶಕ್ತಿಯನ್ನಿಟ್ಟವನು. ನೆಳಲಿನಲ್ಲಿ ಪ್ರಕಾಶಿಸುವ ನೀರಿನಲ್ಲಿ ಅದರ ತಂಪನ್ನುಂಟುಮಾಡಿದವನು. ವಿಸ್ತಾರವಾದ ಭೂಮಿಗೆ ಅದರ ಭಾರವನ್ನಿತ್ತವನು'.

ತನ್ಮಯತೆಯ ಮಟ್ಟದಲ್ಲಿರುವ ಹಾಡುಗಳು ತಿರುವಾಚಕದಲ್ಲಿ ಹಲವಾರು. 'ಎಂಬಾವೈ' ಹಾಡುಗಳಲ್ಲಿ ದೇವರನ್ನು ಕನ್ನೆಯರು ಪೂಜಿಸುವಂತೆಯೂ, ಸೂರ್ಯೋದಯದಲ್ಲಿ ಕನ್ನಿಕೆಯರನ್ನು ಎಬ್ಬಿಸಿ ಅವರು ಮಿಾಯುವ ಉತ್ಸವದಲ್ಲಿ ಸೇರಿಕೊಳ್ಳುವಂತೆಯೂ ಕೇಳುವ ಭಾವವು ಅಡಗಿದೆ. 'ಕುಯಿಲ್' ಹಾಡುಗಳಲ್ಲಿ ಪ್ರೇಮಿಯಾದ ದೇವನನ್ನು ತನ್ನ ಬಳಿಗೆ ಕರೆಯುವಂತೆ ಕೋಗಿಲೆಯನ್ನು ಕನ್ಯೆಯು ಕೇಳಿಕೊಳ್ಳುವಂತಿದೆ. ಮಾಣಿಕ್ಯವಾಚಕರ ಹಾಡುಗಳು ಬರಿಯ ಕಲ್ಪನಾವಿಲಾಸವಲ್ಲ. ಬರಿಯ ಸಮ್ಮೋಹಕ ಸಂಗೀತವಲ್ಲ. ಅವು ಸರಳ ಸಹಜ ಹಾಡುಗಳು. ತೇವಾರದ ರಚಕತ್ರಯರನ್ನು ಶೈವ ಭಕ್ತಿಪಂಥದ ಬೆಳವಣಿಗೆಗೆ ಕಾರಣರೆಂದರೆ, ಮಾಣಿಕ್ಯವಾಚಕರನ್ನು ಆ ಬೆಳವಣಿಗೆಯ ಶಿಖರವೆನ್ನಬಹುದು.

---

2. ಅದೇ: III 11, 21–26.

ತಿರುಮೂಲರ ತಿರುಮಂತ್ರ

ತಿರುಮೂಲರು ದೊಡ್ಡ ಯೋಗಿ. ಇವರು ತಮ್ಮ ಗ್ರಂಥದ ಪ್ರಾರ್ಥನಾ ಪದ್ಯದಲ್ಲಿ ವಿನಾಯಕನನ್ನು ಸ್ತುತಿಸಿರುವರು. ಈ ಕಾರಣಗಳಿಂದ ತಿರುಮೂಲರು ಸುಮಾರು ಏಳನೇ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದಿರಬಹುದೆಂದು ನಾವು ಊಹಿಸಬಹುದು.

ಇವರಿಂದ ರಚಿತವಾದ ತಿರುಮಂತ್ರವು ಒಂಬತ್ತು ವಿಭಾಗಗಳನ್ನು ಹೊಂದಿದೆ. ನಾಲ್ಕು ಚರಣಗಳಿರುವ 3000 ವೃತ್ತಗಳನ್ನು ಈ ಗ್ರಂಥ ಒಳಗೊಂಡಿದೆ. ವೃತ್ತಗಳು ಕಲಿವೃತ್ತ ಛಂದಸ್ಸಿನಲ್ಲಿವೆ. ತಮಿಳಿನಲ್ಲಿ ಇದು ಮೊತ್ತಮೊದಲನೆಯ ಗ್ರಂಥ. ತಮಿಳಿನ ಶೈವ ಸಿದ್ಧಾಂತದ ಉಗಮ ಇಲ್ಲಿಂದ ಸಿದ್ಧಾಂತ ಎನ್ನುವ ಹೆಸರು ಮೊದಲಬಾರಿಗೆ ಇಲ್ಲಿ ಪ್ರಯೋಗವಾಗಿದೆ. ಈ ಗ್ರಂಥದ ವಿಷಯಗಳು ಪುರಾತನವಾದ ಒಂಬತ್ತು ಶಿವಾಗಮಗಳಿಂದ ಸಂಗ್ರಹವಾಗಿವೆ. ತಿರುಮಂತ್ರದ ಶೈಲಿ ಸರಳವಾದರೂ ವಿಷಯ ಗಹನ. ಸುಂದರರು ತಮ್ಮ ತಿರುತ್ತೊಂಡತ್ತೊಗೆಯಲ್ಲಿ ತಿರುಮೂಲರ ಕುರಿತು ಪ್ರಸ್ತಾಪಿಸಿರುವರು.

ಉಪಸಂಹಾರ

ಈ ಗ್ರಂಥವು ತಮಿಳುನಾಡಿನಲ್ಲಿ ಪ್ರಚಲಿತವಾಗಿದ್ದ ಶೈವಮತದ ಪರಿಚಯವನ್ನು ಮಾಡಿಕೊಡುವುದು. ಈ ಶೈವಮತದ ತತ್ವಗಳನ್ನು ನಿತ್ಯಜೀವನದಲ್ಲಿ ಅನುಸರಿಸಿರುವ ಅರುವತ್ತುಮೂವರು ಪುರಾತನರ ಚರಿತೆಯೂ ಇಲ್ಲಿದೆ. ಅಂದಿನ ಕಾಲದ ತಮಿಳರ ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಪರಿಚಯವೂ ಈ ಗ್ರಂಥದಿಂದಾಗುವುದು. ತಮಿಳುನಾಡಿನ ಭೌಗೋಳಿಕ ವರ್ಣನೆಯನ್ನು ಶೇಕ್ಕಿಳಾರನು ತನ್ನದೇ ಆದ ವೈಶಿಷ್ಟ್ಯಯುತ ರೀತಿಯಲ್ಲಿ ಈ ಗ್ರಂಥದಲ್ಲಿ ಮಾಡಿರುವನು. ಇಲ್ಲಿ ಕಥೆಗಿಂತ ಚಾರಿತ್ರಿಕ ಸತ್ಯಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದೆ. ಹೀಗಾಗಿ ಈ ಗ್ರಂಥದ ಉಪಯೋಗ ಇನ್ನಷ್ಟು ಹೆಚ್ಚು.

ತಮಿಳಿನಲ್ಲಿದ್ದ ಪೆರಿಯಪುರಾಣವನ್ನು ಮೂಲದಲ್ಲಿದ್ದಂತೆ ನೋಡಲು ಬಯಸುವ ವಿದ್ವಾಂಸರಿಗೆ ಈ ಗ್ರಂಥವು ಉಪಯುಕ್ತವಾದೀತು. ಕನ್ನಡದಲ್ಲಿ ಹರಿಹರನ ಶಿವಶರಣರ ರಗಳೆಗಳು ಸುಪ್ರಸಿದ್ಧವಾಗಿವೆ. ಈ ಶಿವಭಕ್ತರಲ್ಲಿ ಹೆಚ್ಚಿನವರು ಪೆರಿಯಪುರಾಣದಲ್ಲಿ ಬರುವ ನಾಯನಾರರು. ಹರಿಹರ ಶೇಕ್ಕಿಳಾರರ ತುಲನಾತ್ಮಕ ಅಧ್ಯಯನಕ್ಕೆ ಈ ಪುಸ್ತಕವು ಅವಶ್ಯವಾಗಿ ಸಂಗ್ರಹಣೀಯವಾಗಿದೆ.

ಡಾ|| ಎ. ಶಂಕರ ಕೆದಿಲಾಯ
ರೀಡರ್, ಕನ್ನಡ ವಿಭಾಗ
ಮದ್ರಾಸು ವಿಶ್ವವಿದ್ಯಾನಿಲಯ

ಮದ್ರಾಸು
೧–೬–೧೯೭೪

ಪೆರಿಯ ಪುರಾಣ

ಎನ್ನಲ್ಪಡುವ

ತಿರುತ್ತೊಂಡರ್ ಪುರಾಣವು

ಪೀಠಿಕೆ

1. ಎಲ್ಲಾ ಲೋಕಗಳಿಗೂ ತನ್ನ ಸ್ವಭಾವವನ್ನು ತಿಳಿದು ಹೇಳುವುದಕ್ಕೆ ಸಾಧ್ಯವಿಲ್ಲದವನೂ, ಬಾಲಚಂದ್ರನನ್ನೂ ಗಂಗೆಯನ್ನೂ ಜಡೆಯಲ್ಲಿ ಅಲಂಕಾರವಾಗಿಟ್ಟು ಕೊಂಡವನೂ, ಅಳತೆ ಇಲ್ಲದ ಜ್ಯೋತಿರ್ಮಯವಾಗಿ ಇರುವವನೂ ಆದ, ಚಿದಾಕಾಶದಲ್ಲಿ ನಟನವಾಡುವವನ ಜ್ಞಾನಪ್ರಕಾಶವನ್ನು ಹೊಂದಿದ ನೂಪುರವಿರುವ ಶ್ರೀಪಾದಗಳನ್ನು ಸ್ತುತಿಸಿ ನಮಿಸುವೆನು.

2. ಜೇನಿರುವ ಪುಷ್ಪಗಳು ತುಂಬಿದ ಉದ್ಯಾನಗಳಿಂದ ಸುತ್ತುವರಿದ ಚಿದಂಬರದ ಚಿತ್ಸಭೆಯಲ್ಲಿ ಮಹಾನಟನ[1]ವನ್ನು ಮಾಡುವ ವರದರ ಹೊನ್ನಮಯವಾದ ಶ್ರೀಪಾದ ಗಳನ್ನು ನಮಿಸಿದರೆ, ಮಾಂಸಪಿಂಡವಾದ ಈ ಶರೀರದ ಜನನದಿಂದ ಪ್ರಾಪ್ತವಾಗುವ ಗುರಿಯನ್ನು ಹೊಂದಲು ಸಾಧ್ಯವಾಗುವುದು.

ತಿರುತ್ತೊಣ್ಡರ್ ಪುರಾಣಮ್

ಪಾಯಿರವ್

ವಾೞ್ತ್ತು

1. ಉಲಕೆ ಲಾಮ್ಉಣರ್ ನ್ತೋತಱ್ ಕರಿಯವನ್
ನಿಲವು ಲಾವಿಯ ನೀರ್ಮಲಿ ವೇಣಿಯನ್
ಅಲಕಿಲ್ ಜೋತಿಯನ್ ಅಮ್ಪಲ ತ್ತಾಟುವಾನ್
ಮಲರ್ಚಿ ಲಮ್ಪಟಿ ವಾೞ್ತ್ತಿ ವಣಙ್ಕುವಾಮ್.

2. ಊನ ಟೈನ್ತ್ತ ಉಟಮ್ಪಿನ್ ಪಿಱವಿಯೇ
ತಾನ ಟೈನ್ತ್ತ ಉರುತಿಯೈ ಚ್ಚಾರುಮಾಲ್
ತೇನ ಟೈನ್ತ್ತ ಮಲರ್ಪ್ಪೊಟಿಲ್ ತಿಲ್ಲೈಯುಳ್
ಮಾನ ಟಙ್ಜಿಯ್ ವರತರ್ಪೊ ಱ್ಱಾಳ್ತೊಟಿ.

---

1. ಮಹಾನಟನ = ಪಂಚಕೃತ್ಯ ನಟನ.

3. ನಾವು ಆರಂಭಿಸುವ ಈ ಕಥೆಯು ಇನಿದಾದ ತಮಿಳ ಪದ್ಯಗಳಾಗಿ ಏರ್ಪಡು ವಂತೆ ಆಗುವ ಮೇಲ್ಮೆಯನ್ನು ನಮಗೆ ಅನುಗ್ರಹಿಸುವಂತೆ ಐದು ಹಸ್ತಗಳಿಂದಲೂ, ಜೋಲಿದ ಕಿವಿಗಳಿಂದಲೂ, ನೀಳವಾದ ಮಕುಟದಿಂದಲೂ ಕೂಡಿದ, ಕಪೋಲಗಳಲ್ಲಿ ಮದಜಲವು ಸುರಿಯುತ್ತಿರುವ ಗಜಮುಖನನ್ನು ಮನಸ್ಸಿನಲ್ಲಿ ಧ್ಯಾನಿಸುವೆನು.

4. ಬಾಲಚಂದ್ರನಿರುವ ಜಡೆಮುಡಿಯನ್ನುಳ್ಳ ಚಿದಂಬರದಲ್ಲಿ ನಟನವನ್ನಾಡು ವವರನ್ನು ಸ್ತುತಿಸುವ ಭಕ್ತರನ್ನು ಕುರಿತ ಚರಿತೆಯನ್ನು ತಿಳಿದು ಅದರಿಂದ ಪ್ರಯೋ ಜನವನ್ನು ಹೊಂದುವ ಪುನೀತರಾದ ಜನರ ಕೂಟವು ಪರಂಪರೆಯಾಗಿ ಲೋಕದಲ್ಲಿ ಹಿರಿಮೆಯನ್ನು ಹೊಂದಿ ಪ್ರಕಾಶಿಸತಕ್ಕುದು.

5. ಅಳತೆ ಇಲ್ಲದ ಹಿರಿಮೆಯುಳ್ಳ ಅಸಂಖ್ಯಾತ ಭಕ್ತರ ಕೀರ್ತಿಯುತವಾದ ಚರಿತೆಯನ್ನು ಹೇಳುವ ನಾನು ಅದನ್ನು ಇದ್ದಂತೆಯೇ ಪೂರ್ಣವಾಗಿ ಹೇಳಲು ಸಾಧ್ಯ ವಿಲ್ಲದಂತಿದ್ದರೂ ಮನಸ್ಸಿನಲ್ಲಿ ಅಳತೆಗೆ ಮೀರಿದ ಆಸೆಯು ನನ್ನನ್ನು ಪ್ರೇರಿಸುವುದರಿಂದ ನಾನು ಹೇಳಲು ಆರಂಭಿಸುವೆನು.

---

3. ಎಟುಕ್ಕುಮ್ ಮಾಕ್ಕತ್ತೈ ಇನ್‌ಜಮಿಟ್ ಚ್ಚೆಯ್ಯುಳಾಯ್
ನಟಕ್ಕುಮ್ ಮೇನ್‌ಮೈ ನಮಕ್ಕರುಳ್ ಚೆಯ್ತಿಟ
ತ್ತಟಕ್ಕೈ ಐನ್ತುಟೈ ತ್ತಾಟ್‌ಚೆವಿ ನೀಳ್‌ಮುಟಿ
ಕ್ಕಟಕ್ಕ ಳಿಱ್ಱೈ ಕ್ಕರುತ್ತುಳ್ ಇರುತ್ತುವಾಮ್.

ತಿ ರು ಕ್ಕೂ ಟ ಮ್

4. ಮತಿವಳರ್ ಚಟೈಮುಟಿ ಮನ್‌ಱು ಳಾರೈಮುನ್
ತುತಿಚೆಯುಮ್ ನಾಯನ್‌ಮಾರ್ ತೂಯ ಚೊಲ್‌ಮಲರ್
ಪ್ಪೊತಿ ನಲನ್ ಱುಕರ್‌ತರು ಪುನಿತರ್ ಪೋಟ್ರೈ
ವಿತಿಮುಱೈ ಉಲಕಿನಿಲ್ ವಿಳಙ್ಕಿ ವೆಲ್ಕವೇ.

ಅ ವೈ ಯ ಟ ಕ್ಕ ಮ್

5. ಅಳವಿ ಲಾತ ಪೆರುಮೈಯ ರಾಕಿಯ
ಅಳವಿ ಲಾಅಟ ಯಾರ್‌ಪುಕಟ್ ಕೂಱುಕೇನ್
ಅಳವು ಕೂಟ ಉಱೈಪ್ಪರಿ ತಾಯಿನುಮ್
ಅಳವಿ ಲಾಚೈ ತುರಪ್ಪ ಅಱೈಕುವೇನ್.

6. ಪರಿಪೂರ್ಣವಾಗಿರುವ ತಿಳಿದ ನೀರುಳ್ಳ ಕಡಲಿನ ಜಲದ ಆಧಿಕ್ಯವನ್ನು ನಕ್ಕಿ ಕುಡಿಯಲು ಆಶಿಸುವ ಒಂದು ಶುನಕನಂತಿರುವ ನಾನು, ತಿಳಿಯುವುದಕ್ಕೆ ಸಾಧ್ಯವಿಲ್ಲದ ಹಿರಿಮೆಯುಳ್ಳ ಭಕ್ತರ ಉಪಮಾತೀತವಾದ ಕೀರ್ತಿಯನ್ನು ಹೊಗಳಲು ಪ್ರಯತ್ನ ಮಾಡುತ್ತೇನೆ.

7. ನಾನು ಹೇಳುವುದಕ್ಕೆ ಆರಂಭಿಸಿದ ಚರಿತ್ರೆಯ ಮಹತ್ವದಿಂದ ಆ ಚರಿತ್ರೆಯ ಅರ್ಥವನ್ನು ಎಲ್ಲರೂ ಅಂಗೀಕರಿಸುವರು. ಈ ಚರಿತ್ರೆಗೆ ನನ್ನ ಮಾತು ಅಲ್ಪವಾಗಿದ್ದರೂ ಸತ್ಯಾರ್ಥವನ್ನು ತಿಳಿಯುವ ಹಿರಿಯರು ಆ ಚರಿತ್ರೆಯ ಮಹಿಮೆಯಿಂದ ಇದನ್ನು ಉತ್ತಮವಾಗಿಯೇ ತಿಳಿದುಕೊಳ್ಳುವರು.

8. ಕೆಂಪಗಾದ ಜ್ಯೋತಿಮಯವಾದ ಶಿವಪರಮಾತ್ಮನ ಅಲಂಕಾರ ಮಂಟಪವನ್ನು, ಕೆಂಪಗಾದ ಪರಿಶುದ್ಧವಾದ ಹೊನ್ನಿನಿಂದ ಅಲಂಕರಿಸಿದ ಚೋಳನಾದ, ಲೋಕದಲ್ಲಿ ದೀರ್ಘಕಾಲ ತನ್ನ ಕೀರ್ತಿಯನ್ನು ನೆಲೆಯಾಗುವಂತೆ ಮಾಡಿದ, ಅನಪಾಯನ ರಾಜಸಭೆಯವರು ಈ ಚರಿತ್ರೆಯನ್ನು ಆಸೆಯಿಂದ ಸ್ವೀಕರಿಸುವರು.

---

6. ತೆರಿವ ರುಮ್ಪೆರು ಮೈತ್ತಿರು ತ್ತೊಣ್ಟರ್‌ತಮ್
ಪೊರುವ ರುಞ್ಚೀರ್ ಪುಕಲಲು ಱ್ಱೇನ್‌ಮುಱ್ಱ
ಪ್ಪೆರುಕು ತೆಣ್‌ಕಟಲ್ ಊಱ್ಱುಣ್ ಪೆರುನಚೈ
ಒರುಚು ಣಙ್ಕನೈ ಒಕ್ಕ ನ್ತ್ರಕೈಮೈಯೇನ್.

7. ಚೆಪ್ಪ ಲುಱ್ಱ ಪೊರುಳಿನ್ ಚಿಱಪ್ಪಿನಾಲ್
ಅಪ್ಪೊ ರುಟ್‌ಕುರೈ ಯಾವರುಙ್ ಕೊಳ್ವರಾಲ್
ಇಪ್ಪೊ ರುಟ್‌ಕೆನ್ ನುರೈಚಿಱಿ ತಾಯಿನುಮ್
ಮೆಯ್‌ಪ್ಪೊರುಟ್‌ಕುರಿ ಯಾರ್‌ಕೊಳ್ವರ್ ಮೇನ್‌ಮೈಯಾಲ್.

8. ಮೇಯ ಇವ್ವುರೈ ಕೊಣ್ಟು ವಿರುಮ್ಪುಮಾಮ್
ಚೇಯ ವನ್‌ತಿರು ಪ್ಪೇರಮ್ಪ ಲಮ್‌ಚೆಯ್ಯ
ತೂಯ ಪೊನ್‌ನಣಿ ಚೋೞನ್‌ನೀ ಟೂೞಿಪ್ಪಾರ್
ಆಯ ಚೀರ್‌ಅನ ಪಾಯನ್ ಅರಚವೈ.

9. ಅನುಗ್ರಹ ಸ್ವಭಾವವುಳ್ಳ ಶಿವಕೈಂಕರ್ಯದ ಹಿರಿಮೆಯನ್ನು ತಿಳಿಯುವುದಕ್ಕೆ ಸಾಧ್ಯವಿಲ್ಲ. ಅಂತಹುದನ್ನು ನೀವು ಹೇಳುವುದಕ್ಕೆ ಯೋಗ್ಯತೆಯುಳ್ಳವರೋ ಎಂದು ನೀವು ಕೇಳುವುದಾದರೆ, ಆಕಾಶದ ನೆಳಲನ್ನು ಕುರಿತು ಹೇಳುವ ಶುದ್ಧ ಸತ್ಯ ವಚನವಾಗಿರುವಂತೆ ಹೇಳುವೆನು.

10. ಇಲ್ಲಿ ಇದರ ಹೆಸರನ್ನು ಹೇಳುವುದಿದ್ದರೆ, ಈ ಲೋಕದಲ್ಲಿ ಹಿಂದಿನಿಂದಲೇ ಬಂದಿರುವ ಎರಡು ವಿಧವಾದ ಕತ್ತಲೆಗಳಲ್ಲಿ, ಕಣ್ಣಿಗೆ ಕಾಣಿಸದಂತೆ ಮಾಡುವ ಬಾಹ್ಯಾಂಧಕಾರವನ್ನು ನೀಗಿಸುವ ಸೂರ್ಯನಂತೆ, ಅರಿವನ್ನು ಮರೆಸುವ ಅಜ್ಞಾನವೆಂಬ ಒಳಗಿನ ಕತ್ತಲೆಯನ್ನು ನೀಗಿಸುವಂತಹ 'ತಿರುತ್ತೊಂಡರ್ ಪುರಾಣ' ಇದು, ಎಂದು ಹೇಳುವೆವು.

---

9. ಅರುಳಿನ್ ನೀರ್‌ಮೈ ತ್ತಿರುತ್ತೊ ಣ್ಣಿಱಿವರುಮ್
ತೆರುಳಿಲ್ ನೀರಿತು ಚೆಪ್ಪುತಱ್ ಕಾಮ್‌ಎನಿನ್
ವೆರುಳಿಲ್ ಮೆಯ್‌ಮ್ಮೊೞಿ ವಾನ್‌ನಿೞಲ್ ಕೂಱಿಯ
ಪೊರುಳಿನ್ ಆಕುಮ್ ಎನಪ್ಪುಕಲ್ ವಾಮ್‌ಅನ್‌ಱೇ.

ತೂ ಱಿ ಪ್ಪ ಯ ರ್

10. ಇಙ್ಙಿತನ್ ನಾಮಮ್ ಕೂಱಿನ್ ಇವ್ವುಲ ಕತ್ತು ಮುನ್‌ನಾಳ್
ತಙ್ಙಿರುಳ್ ಇರಣ್ಡಿಲ್ ಮಾಕ್ಕಳ್ ಚಿನ್ತೈಯುಟ್ ಚಾರ್‌ನ್ತು ನಿನ್‌ಱ
ಪೊಙ್ಙಿಯ ಇರುಳೈ ಏನೈ ಪ್ಪುಱಇರುಳ್ ಪೋಕ್ಕು ಕಿನ್‌ಱ
ಚೆಙ್ಕತಿರ ವನ್‌ಪೋಲ್ ನೀಕ್ಕುಮ್ ತಿರುತ್ತೊಣ್ಡರ್‌ಪುರಾಣಮ್ ಎನ್‌ಪಾಮ್.

ಶೇಕ್ಕಿಳಾರ್ ಸ್ವಾಮಿಗಳು ಅನುಗ್ರಹಿಸಿದ

ಪೆರಿಯ ಪುರಾಣಂ

ಎಂಬ ತಿರುತ್ತೊಂಡರ್ ಪುರಾಣವು

ಕೈಲಾಸ ಪರ್ವತದ ಹಿರಿಮೆ

1. ಚಿನ್ನದ ಮೇಲೆ ಬಿಳಿಯಾದ ವಿಭೂತಿಯು ಅಲಂಕಾರಪ್ರಾಯವಾಗಿ ನಿಂತಂತೆ, ಉನ್ನತವೂ ಬಹು ನೀಳವೂ ಆದ ಆ ಹಿಮಾಲಯ ಪರ್ವತ ಪ್ರದೇಶದಲ್ಲಿ ತನ್ನನ್ನು ಯಾರಿಂದಲೂ ತಿಳಿಯಲು ಸಾಧ್ಯವಿಲ್ಲವೆಂಬ ಮಹತಿಯನ್ನು ಹೊಂದಿದ ಶಿವಪರಮಾತ್ಮನು ಯಾವಾಗಲೂ ವಾಸಿಸುವಂತಹ ಕೈಲಾಸವೆಂಬ ಪರ್ವತವಿದೆ.

2. ಶಿವಪರಮಾತ್ಮನು ಅಲ್ಲಿ ನೆಲಸಿರುವ ಕಾರಣದಿಂದ ಮೂರು ಲೋಕಗಳೂ ನಾಲ್ಕು ವೇದಗಳೂ ಬಹು ದೊಡ್ಡ ತಪಸ್ಸನ್ನು ಮಾಡಿದುದರ ಕಾರಣವಾಗಿ ಸಂಗ್ರಹ ವಾದ ಪುಣ್ಯವೆಲ್ಲಾ ನೇರವಾಗಿ ಕಣ್ಣಿನಿಂದ ಕಾಣಲಾಗುವಂತೆ ರೂಪುಗೊಂಡು ನೆಲಸಿದಂತೆ ಈ ಕೈಲಾಸ ಪರ್ವತವಿದೆ.

3. ಎಲ್ಲಾ ಆತ್ಮಗಳ ಒಳಗಿದ್ದು ಹೃದಯಕಮಲವು ಅರಳುವಂತೆ ಲೋಕವೆಂಬ ಇನಿದಾದ ಸ್ತ್ರೀಯು, ಪ್ರಣವವು ಹೊರಬರುವ ಎಡೆಯಾದ ಹೃದಯಕಮಲವು ಎಂದು ಹೇಳುವಂತೆ, ತ್ಯಾಗೇಶರು ವಾಸವಾಗಿದ್ದು ಅನುಗ್ರಹಿಸಿದ ತಿರುವಾರೂರು ಆ ಹಿಮಾಲಯದ ತೆಂಕುದಿಕ್ಕಿನಲ್ಲಿ ವಿಕಸಿತವಾಗಿ ಶೋಭಿಸುವುದು.

ತಿರುಮಲೈ ಚ್ಚಿಱಪ್ಪು

1. ಪೊನ್ನಿನ್ ವೆಣ್‌ತಿರು ನೀಱು ಪುನೈನ್ದ್‌ನ
ಪ್ಪನ್ನುಮ್ ನೀಳ್‌ಪನಿ ಮಾಲ್‌ವರೈ ಪ್ಪಾಲತು
ತನ್ನೈ ಯಾರ್ಕ್ಕುಮ್ ಅಱಿವರಿ ಯಾನ್‌ಎನ್‌ಱುಮ್
ಮನ್ನಿ ವಾೞ್‌ಕಯಿ ಲೈತ್ತಿರು ಮಾಮಲೈ.

2. ಅಣ್ಣಲ್ ವೀಱ್ಱಿರು ಕ್ಕಪ್ಪೆಱ್ಱ ತಾತಲಿನ್
ನಣ್ಣುಮ್ ಮೂನ್‌ಱುಲ ಕುನ್ನಾನ್ ಮಱೈಕಳುಮ್
ಎಣ್ಣಿಲ್ ಮಾತವ ಞ್ಚೆಯ್ಯವ ನ್ದ್‌ಯಿನ್ದ್‌ಯ
ಪುಣ್ಣಿ ಯನ್ದ್‌ರ ಣ್ಟಾಳ್ಳತು ಪೋಲ್ವತು.

3. ನಿಲವುಮ್ ಎಣ್ಣಿಲ್ ತಲಙ್ಗಳುಮ್ ನೀಟೊಳಿ
ಇಲಕು ತಣ್‌ತಳಿರ್ ಆಕಎ ಟುನ್ದ್‌ತೋರ್
ಉಲಕಮ್ ಎನ್ನುಮ್ ಒಳಿಮಣಿ ವಲ್ಲಿಮೇಲ್
ಮಲರುಮ್ ವೆಣ್‌ಮಲರ್ ಪೋಲ್ವತಮ್ ಮಾಲ್‌ವರೈ.

4. ನಾಲ್ಕು ವೇದಗಳ ಘೋಷವೂ, ಕಿನ್ನರರು ಬಾರಿಸುವ ವೀಣಾ ನಿನಾದವೂ, ಮೇಘ ಗರ್ಜನೆಗೆ ಪ್ರತಿಯಾಗಿ ಶಬ್ದಿಸುವ ಆನೆಗಳ ಘೀಂಕೃತವೂ, ನಿರ್ದುಷ್ಟವಾದ ದೇವ ದುಂದುಭಿಯ ನಿನಾದಗಳೂ ಆ ಪರ್ವತದ ಪಕ್ಕಗಳಲ್ಲೆಲ್ಲಾ ಕೇಳಿಬರುತ್ತಿದ್ದುವು.

5. ನಮಸ್ಕರಿಸಿಕೊಂಡು ಸುತ್ತುನಿಂತ ಅಸಂಖ್ಯಾತ ದೇವತೆಗಳ ಕಿರೀಟಪಂಕ್ತಿ ಗಳಲ್ಲಿರತಕ್ಕ ಕಲ್ಪತರುಗಳ ಕುಸುಮಗಳಿಂದ ರಚಿಸಲಾದ ಸುವರ್ಣದಂತೆ ಪ್ರಕಾಶಿಸತಕ್ಕ ಮಾಲೆಗಳೂ, ಋಷಿಗಳು ಅಂಜಲಿಯಾಗಿ ಎತ್ತಿದ ಕೈಗಳ ಸಾಲೂ ಆ ಗಿರಿಯ ಮುಂಭಾಗ ದಲ್ಲೆಲ್ಲಾ ವಿರಾಜಿಸುತ್ತಿದ್ದುವು.

6. ಅಲ್ಲಿನ ಎಲ್ಲೆಡೆಗಳೂ ಶ್ರೇಷ್ಠರಾದ ದೇವತೆಗಳು ವಾಸಿಸುವ ಸ್ಥಳಗಳು. ಮನಸ್ಸುಮಾಡಿದರೆ ಪಂಚಮಹಾಭೂತಗಳನ್ನು ಉಂಟುಮಾಡಬಲ್ಲ ಅನೇಕ ಕೋಟಿ ಸಣ್ಣಸಣ್ಣ ಭೂತಗಳು ಆ ಪರ್ವತದ ವಿಸ್ತಾರವಾದ ಪಕ್ಕಗಳಲ್ಲೆಲ್ಲಾ ಹಾಡಿ, ಆಡಿ, ಸಂಚರಿಸುತ್ತಿವೆ.

7. ಶಿವಪರಮಾತ್ಮನ ಶ್ರೀಪಾದಗಳನ್ನು ಸೇವಿಸಲು ಬಂದ ಬ್ರಹ್ಮನಿಗೆ ಆಗ ಅದಕ್ಕೆ ತಕ್ಕ ಅವಕಾಶವು ದೊರೆಯದುದರಿಂದ ಆತನು ಪವಿತ್ರವಾದ ಹಾಗೂ ಶ್ರೇಷ್ಠ ವಾದ ಆ ಕೈಲಾಸಪರ್ವತದಲ್ಲಿ ನಿಂತನು. ಅಲ್ಲಿ ಆತನ ವಾಹನವಾದ ಹಂಸವು ಆ ಗಿರಿಯ ಬಿಳಿದಾದ ಪ್ರಕಾಶದಲ್ಲಿ ಕಾಣದೆ ಹೋಯಿತು.

---

4. ಮೇನ್‌ಮೈ ನಾನ್‌ಮಱೈ ನಾತಮುಮ್ ವಿಞ್ಞೈಯರ್
ಕಾನ ವೀಣೈಯಿನ್ ಓಚೈಯುಮ್ ಕಾರೆತಿರ್
ತಾನ ಮಾಕ್ಕಳ್ ಮುಱಕ್ಕಮುಮ್ ತಾವಿಲ್‌ಚೀರ್
ವಾನ ತುನ್ತುಪಿ ಆರ್‌ಪ್ಪುಮ್ ಮರುಙ್ಕೆಲಾಮ್.

5. ಪನಿವಿ ಚುಮ್ಪ್ಪಲ್ ಅಮರರ್ ಪಣಿನ್ತುಚೂಟ್
ಅನಿತ ಕೋಟಿ ಅಣಿಮುಟಿ ಮಾಲೈಯುಮ್
ಪುನಿತ ಕಱ್ಪಕ ಪ್ಪೊನ್‌ನರಿ ಮಾಲೈಯುಮ್
ಮುನಿವರ್ ಅಞ್ಞಲಿ ಮಾಲೈಯುಮ್ ಮುನ್‌ನೆಲಾಮ್.

6. ನೀಟು ತೇವರ್ ನಿಲೈಕಳುಮ್ ವೇಣ್ಟಿಟಿನ್
ನಾಟುಮ್ ಐಮ್ಪೆರುಮ್ ಪೂತಮುಮ್ ನಾಟ್ಟುವ
ಕೋಟಿ ಕೋಟಿ ಕುಱಟ್‌ಚಿಱು ಪೂತಙ್ಕಳ್
ಪಾಟಿ ಆಟುಮ್ ಪರಪ್ಪತು ಪಾಙ್ಕೆಲಾಮ್.

7. ನಾಯಕನ್ ಕಟಿಲ್ ಚೇವಿಕ್ಕ ನಾನ್‌ಮುಕನ್
ಮೇಯ ಕಾಲಮ್ ಅಲಾಮೈಯಿನ್ ಮಿಣ್ಣವನ್
ತೂಯ ಮಾಲ್‌ವರೈ ಚೋತಿಯಿಲ್ ಮೂಟ್ಕಿಯೋನ್
ಱಾಯ ಅನ್‌ನಮುಮ್ ಕಾಣಾ ತಯರ್‌ಕ್ಕುಮಾಲ್.

8. ಕಿವಿಯಲ್ಲಿ ಬಿಳಿಶಂಖದ ಉಂಗುರಗಳನ್ನು ಧರಿಸಿಕೊಂಡ ಸರ್ವೇಶ್ವರನಾದ ಶಿವನ ಪಾದಗಳನ್ನು ನಮಿಸಲಿಕ್ಕಾಗಿ ವಿಷ್ಣುವು ಬಹುಕಾಲ ಇದಿರು ನೋಡುತ್ತ ಕಾದಿರುವ ವೃತ್ತಾಂತವನ್ನು ತಿಳಿಯದವನಾಗಿ ಬಿಳಿಯ ಪ್ರಕಾಶದಿಂದ ಕೂಡಿದ ಕೈಲಾಸ ಪರ್ವತದ ಕೆಳಭಾಗದಲ್ಲಿರುವ ಒಂದು ಗುಹೆಯಲ್ಲಿ ವಿನಾಯಕನ ವಾಹನವಾದ ಮೂಷಿಕವನ್ನು ನೋಡಿ, ಹಿಂದಣ ಕಾಲದಲ್ಲಿ ಮೇಲೆದ್ದ ಕೆಂಜೊಡರಾದ ಅಗ್ನಿಸ್ತೂಣವಾದುದು, ಈಗ ಬಿಳುಪಾದ ಕಾಂತಿಯ ಸ್ಥೂಣವಾಗಿ ನಿಂತಿರುವುದೆಂಬ ಎಣಿಕೆಯಿಂದ ವಿಷ್ಣುವು ಶ್ವೇತವರ್ಣದ ಆದಿವರಾಹದ ರೂಪವನ್ನು ತಾಳಿ ಅದರ ಅಡಿಯನ್ನು ಹುಡುಕಿಕೊಂಡು ನೆಲವನ್ನು ತೋಡಿ ನಿಂತಿರುವನು ಎಂದು ಅಭಿಪ್ರಾಯಪಟ್ಟ ಗರುಡನು ಆ ಮೂಷಿಕದ ಸಮೀಪ ಬಂದು ಸೇರುವುದು.

9. ರಂಭೆಯೇ ಮೊದಲಾದ ದೇವಸ್ತ್ರೀಯರ ನಾಟ್ಯಕ್ಕೆ ಹೊಂದಿಕೆಯಾದ ಮೃದಂಗನಾದ, ಮಲೆಯ ಪಕ್ಕದಲ್ಲಿ ಅಬ್ಬಿಗಳು ಒಂದರೊಡನೊಂದು ಸೇರುವ ಘೋಷ–ಇವುಗಳನ್ನು ಕೇಳುವ ಲವಲವಿಕೆಯಿಂದ ಎರಡು ಕೈಗಳಲ್ಲಿಯೂ ಮಧುರಸವಿರುವ ಮಲರುಗಳನ್ನು ತುಂಬಿಕೊಂಡು ವಿಮಾನಪಂಕ್ತಿಗಳಲ್ಲಿ ಮೇಲಕ್ಕೆ ಸಾಗಿ ಇಂದ್ರನೇ ಮೊದಲಾದ ದೇವತೆಗಳು ಸ್ತುತಿಸಿಕೊಂಡಿರುವುದರಿಂದ ಆ ಕೈಲಾಸ ಮಲೆಯ ಪಕ್ಕಗಳು ಶೋಭಿಸುತ್ತಿದ್ದುವು.

---

8. ಕಾತಿಲ್‌ವೆಣ್ ಕುಟ್ಟೈಯೋನ್ ಕಟಲ್‌ತೊಟಿ ನೆಟಿಯೋನ್ ಕಾಲವನ್
ಪಾರ್ ತ್ತಿರುನ್ತುವರ್ ಅಟಿಯಾನ್
ಚೋತಿವೆಣ್ ಕಯಿಲೈ ತ್ತಾಟ್‌ವರೈ ಮುಟ್ಟೈಯಿಲ್ ತುತಿಕ್ಕೈ
ಯೋನ್ ಊರ್‌ತಿಯ್ಯೈ ಕ್ಕಣ್ಟು
ಮಿೂತೆಟು ಪಣ್‌ಟೈ ಚ್ಚೆಙ್ಙಟರ್ ಇನ್‌ಱು ವೆಣ್‌ಚುಟರಾನತೆ ನ್ಱತನ್‌ಕೀಟ್
ಆತಿ ಏನಮತಾಯ್ ಇಟಕ್ಕಲು ಱಾನ್‌ಎ ನ್ಱತನ್ನೈವ ನ್ತ್ಣೈ ತರುವುಮ್ ಕಲುಟನ್.

9. ಅರಮ್ಬೈಯ ರಾಟಲ್ ಮುಟವುಟನ್ ಮರುಙ್ಕಿಲ್ ಅರುವಿಕಳ್
ಎತಿರೆತಿರ್ ಮುಟಙ್ಕ
ವರಮ್ಪೆರು ಕಾತಲ್ ಮನತ್ತುಟನ್ ತೆಯ್ವ ಮತುಮಲರ್
ಇರುಕ್ಕೈಯುಮ್ ಏನ್ತಿ
ನಿರನ್ತರಮ್ ಮಿಟೈನ್ತು ವಿಮಾನಚೋ ಪಾನ ನೀಟುಯರ್
ವಟಿಯಿನಾಲ್ ಏಱಿ
ಪ್ಪುರನ್ತರನ್ ಮುತಲಾಙ್ ಕಟವುಳರ್ ಪೋಱ್ಱಿ ಪ್ಪೊಲಿವತ
ತ್ತಿರುಮಲೈ ಪ್ಪುರಮ್ಪು.

10. ವೇದಗಳನ್ನೆಲ್ಲಾ ತಿಳಿದ ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳೂ, ಇನ್ನೂ ಅಸಂಖ್ಯಾತ ದೇವಜಾತಿಗೆ ಸೇರಿದವರೂ, ಪ್ರಕಾಶಮಾನವಾದ ಮಣಿಗೋಪುರದಲ್ಲಿ ಆತುರದಿಂದ ಬಂದು ಕೂಡಿದ್ದರು. ಆ ಸಮಯದಲ್ಲಿ ಭೂತಭೇತಾಳರೇ ಮೊದಲಾದ ಗಣನಾಥರು ಸ್ತುತಿಸುತ್ತಿರಲು ಕನಕಸಭೆಯಲ್ಲಿ ಆ ಪರಮಶಿವನು ನಟನ ಮಾಡುತ್ತಿದ್ದನು. ಅಲ್ಲಿ ನಂದಿಯು ಕಾವಲಾಗಿದ್ದನು.

11. ನೆತ್ತಿಯಲ್ಲಿ ಕಣ್ಣುಳ್ಳವರು, ನಾಲ್ಕು ತೋಳುಗಳುಳ್ಳವರು, ವಿಭೂತಿಲಿಪ್ತರಾದ ಶರೀರವುಳ್ಳವರು ಮೊದಲಾಗಿ ಅಲ್ಲಿರುವವರೆಲ್ಲಾ ವೃಷಭ ವಾಹನನಾದ ಶಿವನ ಕೃಪೆಯನ್ನು ಪಡೆದವರೇ. ಕೆಂದಾವರೆಯಂತಿರತಕ್ಕ ಕೈಗಳಲ್ಲಿ ಬಾಳನ್ನೂ ಬೆತ್ತವನ್ನೂ ಹಿಡಿದು, ಸರ್ವಭೂಷಣನೂ ಜಡೆಮುಡಿಯುಳ್ಳವನೂ ಆದ ಶಿವನ ಅನುಗ್ರಹದಿಂದ ನಂದಿಯು ಕಾವಲಾಗಿ ನಿಂತಿರುವುದು ಆ ಹಿರಿಮೆಯ ಕೈಲಾಸಗಿರಿಯಲ್ಲಿಯೇ.

---

10. ವೇತನಾನ್ ಮುಕನ್‌ಮಾಲ್ ಪುರನ್ತರನ್ ಮುತಲಾಮ್ ವಿಣ್ಣವರ್
ಎಣ್ಣಿಲಾರ್ ಮಱ್ಱುಮ್
ಕಾತಲಾಲ್ ಮಿಟೈನ್ತು ಮುತಱ್ಪೆರು ನ್ತಟೈಯಾಮ್ ಕತಿರ್‌ಮಣಿ
ಕ್ಕೋಪುರ ತ್ತುಳ್ಳಾರ್
ಪೂತವೇ ತಾಳ ಪ್ಪೆರುಙ್ಕಣನಾತರ್ ಪೋಱ್ಱಿಟ ಪ್ಪೊಱ್ಪೊತುವಿಲ್‌ನಿನ್ ಱಾಟುಮ್
ನಾತನಾರ್ ಆತಿ ತೇವನಾರ್ ಕೋಯಿಲ್ ನಾಯಕನ್ ನನ್ತಿಯೆಮ್ ಪೆರುಮಾನ್

11. ನೆಱ್ಱಿಯಿಱ್ ಕಣ್ಣರ್ ನಾಱ್ಪೆರು ನ್ತೋಳರ್ ನೀಱಣಿ ಮೇನಿಯರ್ ಅನೇಕರ್
ಪೆಱ್ಱಮೇಲ್ ಕೊಣ್ಟ ತಮ್ಪಿರಾನ್ ಅಟಿಯಾರ್
ಪಿಙ್ಞಕನ್ ತನ್‌ನರುಳ್ ಪೆಱುವಾರ್
ಮಱ್ಱವರ್ ಕ್ಕೆಲ್ಲಾಮ್ ತಲೈಮೈಯಾಮ್ ಪಣಿಯುಮ್ ಮಲರ್‌ಕ್ಕೈ
ಯಿಲ್ ಚುರಿಕೈಯುಮ್ ಪಿರಮ್ಪುಮ್
ಕಱ್ಱೈವಾರ್ ಚಟೈಯಾನ್ ಅರುಳಿನಾಲ್ ಪೆಱ್ಱಾನ್ ಕಾಪ್ಪತು
ಕ್ಕಯಿಲೈ ಮಾಲ್ ವರೈತಾನ್.

12. ಎಡದ ಕೈಯಲ್ಲಿ ಜಿಂಕೆ, ಬಲದ ಕೈಯಲ್ಲಿ ಬೆಂಕಿ, ಇವುಗಳನ್ನು ಧರಿಸಿ, ತಲೆಯ ಜಡೆಮುಡಿಯಲ್ಲಿ ಗಂಗೆಯನ್ನೂ, ಬಾಲಚಂದ್ರನನ್ನೂ ಒಡಗೊಂಡು, ಪರಿಮಳ ಯುಕ್ತವಾದ (ಕೊನ್ರೈ) ಕರ್ಣಿಕಾರ ಹೂಮಾಲೆಗಳನ್ನು ಸುತ್ತಿಕೊಂಡು ಇರುವ ಶಿವ ಪರಮಾತ್ಮನು ಅಲ್ಲಿಯೇ ವಾಸವಾಗಿರುವ ಮಹಿಮೆಯಿಂದಲೂ, ಸತ್ವಗುಣವು ಅಲ್ಲಿ ಯಾವಾಗಲೂ ಪ್ರಕಾಶಿಸುತ್ತಿರುವುದರಿಂದಲೂ, ಜಯಯುಕ್ತನಾದ ಬೆಳ್ಗೊಡೆಯುಳ್ಳ ಅನಪಾಯನ ರಾಜದಂಡದ ಧರ್ಮನ್ಯಾಯಗಳು ಪ್ರಕಾಶಿಸುವ ಆ ಚೋಳರಾಜನ ಮನಸ್ಸಿನಂತೆ ನೀಳವಾದ ಆ ಕೈಲಾಸಪರ್ವತವು ಶೋಭಿಸುತ್ತಿತ್ತು.

13. ಕೈಲಾಸಮಲೆಯ ಆ ರೀತಿಯ ಸನ್ನಿವೇಶದಲ್ಲಿ ಇಂತಹ ಗುಣದವನೆಂದು ತಿಳಿಯಲಾಗದ ಅಚಿಂತ್ಯನಾದ ಆ ಶಿವಪರಮಾತ್ಮನನ್ನು ಧ್ಯಾನಿಸುತ್ತಾ ಖ್ಯಾತಿವಂತನಾದ ಉಪಮನ್ಯುಮುನಿಯು ಇರುತ್ತಿರುವನು.

14. ಯದುಕುಲದಲ್ಲಿ ಜನಿಸಿದ ದ್ವಾರಕಾಧೀಶನಾದ ಶ್ರೀಕೃಷ್ಣನ ಮುಡಿಯ ಮೇಲೆ ಪಾದವನ್ನಿಟ್ಟಂತಹ ಭೂತನಾಥನನ್ನು ಬಹುವಾಗಿ ಸ್ತುತಿಸುವುದಕ್ಕೆ ಉದ್ಯಮಿಸಿ ಆದಿಯೂ ಅಂತವೂ ಇಲ್ಲದಂತಹ ಪೂಜೆಯಲ್ಲಿ ನಿರತನಾಗಿರುವವನು ಉಪಮನ್ಯು ಮುನಿಯು.

---

12. ಕೈಯಿಲ್ ಮಾನ್ ಮಟುವರ್ ಕಜಿತ್ತುಕುಟಿ ಚಟೈಯಿಲ್ ಕತಿರಿಳವು
ಪಿಱೈ ನಱು ಙ್ಗಣ್ಣಿ
ಐಯರ್‌ವೀ ಱಿರುಕ್ಕು ನ್ರನ್‌ಮೈಯಿ ನಾಲುಮ್ ಅಳಪ್ಪರುಮ್ ಪೆರುಮೈಯಿ
ನಾಲುಮ್
ಮೆಯ್ಯೊಳಿ ತಟೈಕ್ಕುನ್ ತೂಯ್‌ಮೈಯಿ ನಾಲುಮ್ ವೆನ್ಱಿವೆಣ್
ಕುಟೈ ಅನ ಪಾಯನ್
ಚೆಯ್ಯಕೋಲ್ ಅಪಯನ್ ತಿರುಮನ ತ್ತೋಙ್ಗುಮ್ ತಿರುಕ್ಕಯಿ
ಲಾಯನೀಳ್ ಚಿಲಮ್ಪು.

13. ಅನ್ನ ತನ್‌ತಿರು ತ್ತಾಟ್‌ವರೈ ಯಿನ್ ಇಟತ್ತು
ಇನ್ನ ತನ್‌ಮೈಯನ್ ಎನ್‌ಱಱಿ ಯಾಚ್ಚಿವನ್
ತನ್ನೈ ಯೇ ಉಣರ್ ನ್ತಾರ್‌ವಮ್ ತಟೈಕ್ಕಿನ್‌ಱಾನ್
ಉನ್ನ ರುಙ್ಗೀರ್ ಉಪಮನ್ ನಿಯಮುನಿ.

14. ಯಾತ ವನ್‌ತುವ ರೈಕ್ಕಿಱೈ ಯಾಕಿಯ
ಮಾತ ವನ್‌ಮುಟಿ ಮೇಲಟಿ ವೈತ್ತವನ್
ಪೂತ ನಾತನ್ ಪೊರುವರುನ್ ತೊಣ್ಟನುಕ್ಕು
ಆತಿ ಅನ್ತಮ್ ಇಲಾವ್ಮೈ ಅಟ್ಟೈನ್ತವನ್.

15. ನಟರಾಜನಾದ ಪರಶಿವನು ಕರುಣಿಸಿದ ಅನುಗ್ರಹದಿಂದ ಪಾಲ್ಗಡಲನ್ನುಂಡು ಮನಸ್ಸಂತೋಷಗೊಂಡು ತೇಗಿ ಸುಖಿಸುವವನು ಆ ಉಪಮನ್ಯು. ಆ ಮುನಿಯನ್ನು ಸುತ್ತಿ ಅನೇಕ ಸಾವಿರ ಭಕ್ತರೂ ಶಿವಯೋಗಿಗಳೂ ಆದ ಮುನಿಗಳು ಇರುತ್ತಿದ್ದರು. ಹೀಗಿರಲು ಒಂದು ದಿನ—

16. ಸಾವಿರ ಸೂರ್ಯರಿಗಿಂತಲೂ ಅಧಿಕವಾದ ಹೆಚ್ಚಿನ ಪ್ರಕಾಶವೊಂದು ಆ ಋಷಿಗಳ ಇದಿರಿನಲ್ಲಿ ಕಾಣಿಸಿಕೊಂಡು ಮಾಯವಾಯಿತು. ಆಗ ಅಲ್ಲಿ ಸುತ್ತುವರಿದಿದ್ದ ತಪಸ್ವಿಗಳೆಲ್ಲರೂ, 'ಇಲ್ಲಿ ಪ್ರಕಾಶವು ಕಾಣಿಸಿಕೊಂಡುದು ಆಶ್ಚರ್ಯ! ಇದೇನು ?' ಎಂದು ಕೇಳಲು,

17. ಸಂಧ್ಯಾಕಾಲದಲ್ಲಿ ಆಗಸದಲ್ಲಿ ತೋರುವ ಬಾಲಚಂದ್ರನನ್ನು ಶಿರದಲ್ಲಿ ಧರಿಸಿದ ಶಿವಪರಮಾತ್ಮನ ಶ್ರೀಪಾದಗಳನ್ನು ಧ್ಯಾನಿಸಿ, ಆ ಉಪಮನ್ಯು ಮುನಿಗಳು "ತೆಂಕುದಿಕ್ಕಿನ ತಿರುನಾವಲೂರಲ್ಲಿ ವಿಖ್ಯಾತನಾದ ವನ್‌ತೊಂಡ ಮಹಾತ್ಮನು (ಸುಂದರ ನಂಬಿಯು) ಈಶ್ವರನ ಅನುಗ್ರಹದಿಂದ ಕೈಲಾಸಕ್ಕೆ ತಿರುಗಿ ಬರುತ್ತಿದ್ದಾನೆ" ಎಂದು ಹೇಳಿ,

18. ಆ ದಿಕ್ಕನ್ನು ನೋಡಿ ಎದ್ದು, ಕೈಗಳನ್ನೆತ್ತಿ ಮುಗಿದು ನಮಸ್ಕರಿಸಿ, ಆನಂದಬಾಷ್ಪಗಳನ್ನು ಸುರಿಸುತ್ತಾ ನಿಡಿದಾದ ಜಡೆಗಳಿಂದ ಕೂಡಿದ ಉಪಮನ್ಯು ಮುನಿಗಳು ಅಲ್ಲಿಂದ ಹೋಗುತ್ತಿರಲು, ತಮ್ಮ ಸಂದೇಹವನ್ನು ನಿವಾರಿಸಿಕೊಳ್ಳಲು ಆ ಮುನಿಗಳೆಲ್ಲಾ ಅವರೊಡನೆ ಹೀಗೆ ಕೇಳಿಕೊಂಡರು.

---

15. ಅತ್ತರ್ ತನ್ತ ಅರುಟ್‌ಪಾಱ್ ಕಟಲುಣ್ಟು
ಚಿತ್ತಮ್ ಆರ್‌ನ್ತು ತೆವಿಟ್ಟಿ ವಳರ್‌ನ್ತವನ್
ಪತ್ತ ರಾಯ ಮುನಿವರ್‌ಪಲ್ ಲಾಯಿರರ್
ಚುತ್ತ ಯೋಕಿಕಳ್ ಚೂಟ ಇರುನ್ತುಟಿ.

16. ಅಙ್ಕಣ್ ಓರೊಳಿ ಆಯಿರ ಞಾಯಿಱು
ಪೊಙ್ಕು ಪೇರೊಳಿ ಪೋನ್‌ಱುಮುನ್ ತೋನ್‌ಱಿಟ
ತ್ತುಙ್ಕ ಮಾತವರ್ ಚೂಟ್‌ನ್ತಿರು ನ್ತಾರೆಲಾಮ್
"ಇಙ್ಕಿ ತೆನ್‌ಕೊಲ್ ಅತಿಚಯಮ್" ಎನ್‌ಱಲುಮ್.

17. ಅನ್ತಿ ವಾನ್‌ಮತಿ ಚೂಟಿಯ ಅಣ್ಣಲ್‌ತಾನ್
ಚಿನ್ತಿ ಯಾಉಣರ್ ನ್ತಮ್ಮುನಿ "ತೆನ್‌ತಿಚೈ
ವನ್ತ ನಾವಲರ್ ಕೋನ್‌ಪುಕಟ್ ವನ್‌ಱೊಣ್ಟನ್
ಎನ್ತೈ ಯಾರ್‌ಅರು ಳಾಲ್‌ಅಣೈ ವಾನ್" ಎನ.

18. ಕೈಕಳ್ ಕೂಪ್ಪಿ ತ್ತೊಟುತೆಟು ನ್ತತ್ತಿಚೈ
ಮೆಯ್ಯಿಲ್ ಆನನ್ತ ವಾರಿ ವಿರವಿಟ
ಚ್ಚೆಯ್ಯ ನೀಳ್‌ಚಟೈ ಮಾಮುನಿ ಚೆಲ್‌ವುಟಿ
ಐಯಮ್ ನೀಙ್ಕ ವಿನವುವೋರ್ ಅನ್ತಣರ್.

19. 'ಶಂಭುವಿನ ಪಾದಕಮಲಗಳಿಗಲ್ಲದೆ ಬೇರೆ ಯಾರಿಗೂ ನಮಿಸದ ನೀವು ಇಂದು ನಮಸ್ಕರಿಸಿದ ಕಾರಣವೇನು ?' ಎಂದು ಆ ಮುನಿಗಳು ಕೇಳಲು, 'ಶಿವನನ್ನು ತನ್ನ ಹೃದಯದಲ್ಲಿಯೇ ಯಾವಾಗಲೂ ಇರಿಸಿಕೊಂಡಿದ್ದ ನಂಬಿ ಆರೂರರೆಂಬವರು ನಮಗೆಲ್ಲರಿಗೂ ವಂದನೆಗೆ ಯೋಗ್ಯರು',

20. ಎಂದು ಹೇಳಿ ಅವರಿಗೆ ಪುನಹ ನಮಿಸಿದ ಉಪಮನ್ಯುವನ್ನು ಕುರಿತು ಮುನಿವರರು "ಅತಿಯಾದ ಪ್ರಕಾಶವನ್ನು ಹೊಂದಿ ಮೇಲಾದ ತಪಸ್ಸನ್ನು ಸರಿಯಾಗಿ ಆಚರಿಸಿದ ಹಿರಿಯರಾದ ನೀವು ನಮಗೆ ಆ ವಿಷಯವನ್ನು ಅರುಹಿ ಅನುಗ್ರಹಿಸಬೇಕು" ಎನ್ನಲು,

21. ಉಪಮನ್ಯು ಮುನಿಗಳು ಅಲ್ಲಿ ನಡೆದ ಹಾಗೆ ವಿವರಿಸುವರು :— ಮಹಿಮಾ ಯುತವಾದ ಗಂಗಾನದಿಯನ್ನು ಜಡೆಯಲ್ಲಿ ಧರಿಸಿದ, ಪರವಸ್ತುವಾದ ಶಿವಪರಮಾತ್ಮನು ಅಲಂಕರಿಸಿಕೊಳ್ಳುವ ಮಧುರಸದಿಂದ ಕೂಡಿದ ಹೂಮಾಲೆಯನ್ನೂ ವಿಭೂತಿಯನ್ನೂ ಒದಗಿಸಿ ಕೊಡುವವರು ಒಬ್ಬರಿರುವರು.

22. ಅವರ ಹೆಸರು ಆಲಾಲಸುಂದರರೆಂದು. ಹಿಂದೊಂದು ದಿನ ಅವರು ಆ ಕೈಲಾಸ ಪರ್ವತದಲ್ಲಿ ಪರಶಿವನ ಅರ್ಚನೆಗೆ ಯೋಗ್ಯವಾದ ಹೊಸ ಹೊಸ ಪುಷ್ಪಗಳನ್ನು ಸಂಗ್ರಹಿಸುವ ಉದ್ದೇಶದಿಂದ ನಂದನೋದ್ಯಾನದಲ್ಲಿ ಸಂಚರಿಸುತ್ತಿದ್ದರು.

---

19. "ಚಮ್ಪು ವಿನ್ಅಟಿ ತ್ತಾಮರೈ ಪ್ಪೋತಲಾಲ್
ಎಮ್ಪಿ ರಾನ್ಇಱೈಞ್ಚಿ ಇಞ್ಞಾಯಿಱ್ ತೆನ್" ಎನ
"ತ್ತಮ್ಪಿ ರಾನ್ಯೈತ್ತನ್ ಉಳ್ಳಮ್ ತಟೈಇಯವನ್
ತಮ್ಪಿ ಆರೂರನ್ ನಾಮ್ತೊಟುಮ್ ತನ್ಮೈಯಾನ್,"

20. ಎನ್ಱು ಕೂಱಿ ಇಱೈಞ್ಚಿಇಞ್ಞ ಇಯಮ್ಪುವಾರ್
"ವೆನ್ಱಿ ಪೇಱೊಳಿ ಯಾರ್ಚೆಯ್ ವಿಟುತ್ತವಮ್
ನನ್ಱು ಕೇಟ್ಕ ವಿರುಮ್ಪುವಮ್ ನಚ್ಚೈಯಿನೋಮ್
ಇನ್ಱಿ ಮಕ್ಕುಱ್ಱೈ ಚೆಯ್ತರುಳ್" ಎನ್ಱಿಲುಮ್,

21. ಉಳ್ಳ ವಣ್ಣಮ್ ಮುನಿವನ್ ಉಱೈಚೆಯ್ವಾನ್
"ವೆಳ್ಳ ನೀರ್ಚ್ಚಟೈ ಮೆಯ್ಪ್ಪೊರುಳಾಕಿಯ
ವಳ್ಳಲ್ ಚಾತ್ತುಮ್ ಮತುಮಲರ್ ಮಾಲೈಯುಮ್
ಅಳ್ಳುಮ್ ನೀಱುಮ್ ಎಟುತ್ತಣ್ಣೈ ವಾನುಳನ್.

22. ಅನ್ನ ವನ್ಪೆಯರ್ ಆಲಾಲ ಚುನ್ತರನ್
ಮುನ್ನಮ್ ಆಙ್ಙೊರು ನಾಳ್ಮುತಲ್ ವನ್ತನಕ್ಕು
ಇನ್ನ ಆಮೆನುಮ್ ನಾಣ್ಮಲರ್ ಕೊಯ್ತಿಟ
ತ್ತುನ್ನಿ ನಾನ್ನ ನ್ತನವನ ಚ್ಚೋಟಲಿಲ್.

23. ಉಮಾದೇವಿಯವರ ಪರಿಮಳಯುಕ್ತವಾದ ಕೊದಲಿಗೆ ಯೋಗ್ಯವಾದ ಪುಷ್ಪಗಳನ್ನು ಕೊಯ್ಯಲಿಕ್ಕಾಗಿ ಚಂದ್ರನಂತೆ ಕಾಂತಿಯುಕ್ತರಾದ ಮುಖವುಳ್ಳ ಸುಂದರಿಯರಾದ (ಉಮಾದೇವಿಯ) ಸಖಿಯರು ಅಲ್ಲಿಗೆ ಆಲಾಲಸುಂದರರಿಗಿಂತ ಮೊದಲೇ ಬಂದು ಸೇರಿದ್ದರು.

24. ಉಪಮಾತೀತವಾದ ಮಹಿಮೆಯಿಂದ ಕೂಡಿದ 'ಅನಿಂದಿತೆ' ಮತ್ತು ಒಪ್ಪವಾದ ತಲೆಕೂದಲಿನಿಂದ ಕೂಡಿದ ಸುಗಂಧ ಪುಷ್ಪಗಳನ್ನು ಮುಡಿದ 'ಕಮಲಿನಿ' ಎಂಬ ಆ ಸಖಿಯರು, ಗೊಂಚಲು ಗೊಂಚಲಾಗಿ ಉಳ್ಳ ಪುಷ್ಪಗಳನ್ನು ಕೊಯ್ಯುತ್ತಿರುವ ಆ ಸ್ಥಳಕ್ಕೆ ದೇವತೆಗಳಿಗೆ ಮೊದಲಿನವರಾದ ಶಿವಪರಮಾತ್ಮನ ಅನುಗ್ರಹವೆಂದು ನೆನಸಲಾಗುವಂತೆ ಆಲಾಲಸುಂದರರು ಬಂದರು.

25. ದೊಡ್ಡ ತಪಸ್ಸನ್ನು ಮಾಡಿ ದಕ್ಷಿಣ ದಿಗ್ಭಾಗಕ್ಕೆ ಖ್ಯಾತಿಯನ್ನು ತರುವಂತಹ, ದೋಷರಹಿತವಾದ 'ತಿರುತ್ತೊಂಡ ತೊಗೈ' ಎಂಬ ದಶಕಗಳಿಂದ ಯುಕ್ತವಾದ ಹಾಡುಗಳ ರಚಕರೂ ಆಗುವಂತಹ, ಆಲಾಲಸುಂದರರು ಆ ತರುಣಿಯರತ್ತ ತಮ್ಮ ಮನವನ್ನು ಹರಿಸಿದರು. ಆ ತರುಣಿಯರೂ ಆಶೆಗೊಂಡು ಆಲಾಲಸುಂದರರನ್ನು ನೋಡಿದರು.

---

23. ಅಙ್ಙು ಮುನ್ನೆಯ್ದೈ ಆಳುಟ್ಟೈ ನಾಯಕಿ
ಕೊಙ್ಙು ಚೇರ್ಕುಟಿಱ್ ಕಾಮಲರ್ ಕೊಯ್ತಿಟ
ತ್ತಿಙ್ಕಳ್ ವಾಟ್ಮುಕ ಚ್ಚೇಟಿಯರ್ ಎಯ್ತಿನಾರ್
ಪೊಙ್ಙು ಕಿನ್ಱ ಕವಿನುಟ್ಟೈ ಪ್ಪೂವೈಮಾರ್.

24. ಅನ್ತ ಮಿಲ್ಚೀರ್ ಅನಿನ್ತಿತೈ ಆಯ್ಕುಟಿಱ್
ಕನ್ತ ಮಾಲೈ ಕ್ಕಮಲಿನಿ ಎನ್ಪವರ್
ಕೊಙ್ಙು ಕೊಣ್ಟ ತಿರುಮಲರ್ ಕೊಯ್ವುೞಿ
ವನ್ತು ವಾನವರ್ ಈಚರ್ ಅರುಳಿನ.

25. ಮಾತ ವನ್ಚೆಯ್ತು ತೆನ್ತಿಚೈ ವಾೞ್ನ್ತಿಟ
ತ್ತೀತಿ ಲಾತ್ತಿರು ತ್ತೊಣ್ಟ ತ್ತೊಕೈತಾ
ಪ್ಪೋತು ವಾರ್ಅವರ್ ಮೇಲ್ಮನಮ್ ಪೋಕ್ಕಿಟ
ಕ್ಕಾತಲ್ ಮಾತರು ಙ್ಕಾಟ್ಚಿಯಿಲ್ ಕಣ್ಣಿನಾರ್.

26. ಆ ಆಲಾಲಸುಂದರರು ಮೊಗ್ಗುಗಳಿಂದ ಕೂಡಿದ ಹೊಸ ಹೂಗೊಂಚಲುಗಳನ್ನೂ, ತನ್ನನ್ನು ಆಳಾಗಿ ಮಾಡಿಕೊಂಡ ಶಿವಪರಮಾತ್ಮನಿಗೆ ಪ್ರಿಯವಾಗುವಂತಹ ಇತರ ಹಲವಿಧದ ಪುಷ್ಪಗಳನ್ನೂ ಕೊಯ್ದುಕೊಂಡು ಹೋಗಲು ಹಂಸಗಮನೆಯರಾದ ಆ ಸಖಿಯರು ಶೀತಲವಾದ ಹನಿಗಳಿಂದ ಕೂಡಿದ ಪುಷ್ಪಗಳನ್ನಾಯ್ದುಕೊಂಡು ತಾವೂ ಹೋದರು. ಅನಂತರದಲ್ಲಿ—

27. ಆದಿಮೂರ್ತಿಯಾದ ಪರಶಿವನು ಆಲಾಲಸುಂದರರ ವೃತ್ತಾಂತವನ್ನು ಕಂಡವನಾಗಿ, "ಎಲೈ ಭಕ್ತನೇ, ಆ ಇಬ್ಬರು ತರುಣಿಯರಲ್ಲಿ ಮನಸ್ಸನ್ನು ಹರಿಸಿದೆ. ಆದುದರಿಂದ ಭರತಖಂಡದ ತೆಂಕುನಾಡಿನಲ್ಲಿ ಜನಿಸಿ ಆ ಸ್ತ್ರೀಯರಲ್ಲಿ ಸಂತೋಷದಿಂದ ಸೇರಿ ಸುಖಿಸಿದ ಮೇಲೆ ತಿರುಗಿ ಇಲ್ಲಿಗೆ ಬರುವೆ" ಎಂದು ಆಜ್ಞಾಪಿಸಿದರು.

28. ಆಗ ತಲೆಯ ಮೇಲೆ ಕೈಗಳನ್ನು ಜೋಡಿಸಿ ನಮಿಸಿ, ಮನದಲ್ಲಿ ತಲ್ಲಣಗೊಂಡ ಆಲಾಲಸುಂದರರು, "ಪರಶಿವನೇ, ನಿಮ್ಮ ಪಾದಗಳನ್ನು ನನ್ನ ಮನಶ್ಚಾಂಚಲ್ಯದಿಂದ ಕಳೆದುಕೊಂಡು ಸೇವಕನಾದ ನಾನು ದೋಷಪೂರಿತನಾದೆನು. ಮನುಷ್ಯಜನ್ಮವೆತ್ತಿ ನಿಮ್ಮನ್ನು ತಿಳಿಯದೆ, ಮತಿಯು ಮೋಹಗೊಂಡಿರುವ ಕಾಲದಲ್ಲಿ, ನೀವೇ ನನ್ನನ್ನು ಆಳಾಗಿಸಿಕೊಂಡು ಅನುಗ್ರಹಿಸಬೇಕು" ಎಂದು ಬಿನ್ನವಿಸಲು,

---

26. ಮುನ್‌ನಮ್ ಆಙ್ಙವನ್ ಮೊಯ್‌ಮ್ಮುಕ್ಕೈ ನಾಣ್‌ಮಲರ್
ಎನ್‌ನೈ ಆಟ್‌ಕೊಣ್ಟ ಈಚನು ಕ್ಕೇಯ್ವನ
ಪನ್‌ಮ ಲರ್‌ಕೊಯ್ತು ಚೆಲ್ಲ ಪ್ಪನಿಮಲರ್
ಅನ್‌ನಮ್ ಅನ್‌ನವ ರುಙ್ಕೊ ಣ್ಟಕನ್‌ಱಪಿನ್.

27. ಆತಿ ಮೂರ್‌ತ್ತಿ ಅವನ್‌ತಿಱಮ್ ನೋಕ್ಕಿಯೇ
'ಮಾತರ್ ಮೇಲ್‌ಮನಮ್ ವೈತ್ತನೈ ತೆನ್‌ಪುವಿ
ಮಿಾತು ತೋನ್‌ಱಿಅ ಮ್ಮೆಲ್ಲಿಯ ಲಾರುಟನ್
ಕಾತಲ್ ಇನ್‌ಪಮ್ ಕಲನ್ತಣೈ ವಾಯ್' ಎನ.

28. ಕೈಕ ಳಞ್ಚಲಿ ಕೂಪ್ಪಿ ಕ್ಕಲಙ್ಕಿನಾನ್
'ಚೆಯ್ಯ ಚೇವಟಿ ನೀಙ್ಕ ಞ್ಚಿಱುಮೈಯೇನ್
ವೈಯಲ್ ಮಾನುಟ ಮಾಯ್‌ಮಯ ಙ್ಕುಮ್‌ಪೋಟಿ
ಐಯ ನೇ! ತಟು ತ್ತಾಣ್ಟರುಳ್ ಚೆಯ್' ಎನ.

29. ಶಿವಪರಮಾತ್ಮನು ಅವರು ಕೇಳಿದ ವರಗಳನ್ನು ಅನುಗ್ರಹಿಸಿದನು. ಆಲಾಲಸುಂದರರು (ನಂಬಿಯು) ಆ ಸ್ತ್ರೀಯರೊಡನೆ ತೆಂಕುನಾಡಿನಲ್ಲಿ ಜನ್ಮವೆತ್ತಿ, ಸ್ತ್ರೀಸುಖವನ್ನು ಅನುಭವಿಸಿ ಮುಗಿಸಿ, ತಿರುಗಿ ಬರುತ್ತಿದ್ದಾರೆ ಎಂದು ಆ ಸುಂದರರ ವೃತ್ತಾಂತಗಳನ್ನೆಲ್ಲಾ ಉಪಮನ್ಯು ಮುನಿಗಳು ತಿಳಿಸಿದರು.

30. ಅದನ್ನು ಕೇಳಿ ಆಲಾಲಸುಂದರರು ಬಂಧನವನ್ನೊದಗಿಸತಕ್ಕ ಮನುಷ್ಯ ಜನ್ಮದಲ್ಲಿ, ಈ ದಕ್ಷಿಣ ದಿಗ್ಭಾಗದಲ್ಲಿ ಉದಯಿಸಲು, ಉಳಿದ ದಿಕ್ಕುಗಳಿಗಿಂತ ಈ ಪ್ರದೇಶವು ಪಡೆದ ಪುಣ್ಯವಾವುದು? ಎಂದು ಆ ಮುನಿಗಳು ಕೇಳಲು ಉಪಮನ್ಯು ಋಷಿಗಳು ಹೇಳುವರು.

31. ಅಸಮಾನವಾದ ತಪಸ್ಸಿನಿಂದ ಕೂಡಿದ ವ್ಯಾಘ್ರಪಾದನೆಂಬ ನನ್ನ ತಂದೆಯು ಪೂಜಿಸಿದ ಪಾವಿತ್ರ್ಯ, ಹಿರಿಮೆ ಅಲ್ಲಿದೆ. ಜೀವನ್ಮುಕ್ತರುಗಳಿರುವ ಊರು ಆ ಪುಲಿಯೂರು. ಇಂತಹ ಮೇಲ್ಮೆಯಿಂದ ಕೂಡಿದೆ ಆ ಸ್ಥಳ.

32. ಆ ಸ್ಥಳದಲ್ಲಿ ನಮ್ಮನ್ನು ಆಳಾಗಿಸಿಕೊಂಡ ನಾಯಕಿಯರಾದ ಶಿವಕಾಮಸುಂದರಿ ಮಾತೆಯವರು ಆಸೆಯಿಂದ ಯಾವಾಗಲೂ ಕಾಣುತ್ತಿರುವ ಚಿತ್ಸಭೆಯಲ್ಲಿ ನಿತ್ಯನಾದ ಪರಶಿವನು ದಿವ್ಯನಟನವನ್ನಾಡುತ್ತಿರುವನು. ಬೇರೆ ಯಾವ ದೆಸೆಯು ಇಂತಹ ಹಿರಿಮೆಯನ್ನು ಪಡೆದಿದೆ?

---

29. ಅಙ್ಕ ಣಾಳನ್ ಅತಱ್‌ಕರುಳ್ ಚೆಯ್ತಪಿನ್
ನಙ್ಕೈಯ ಮಾರುಟನ್ ನಮ್ಪಿಮ ಱತ್ತಿಚ್ಚೈ
ತಙ್ಕು ತೋಱ್ಱತ್ತಿಲ್ ಇನ್‌ಪುಱ್ಱು ಚ್ಚಾರು' ಮೆನ್‌ಱು
ಅಙ್ಕ ವನ್‌ಚೆಯಲ್ ಎಲ್ಲಾಮ್ ಅಱೈನ್ತನನ್.

30. ಅನ್ತ ಣಾಳರುಮ್ ಆಙ್ಕತು ಕೇಟ್ಟವರ್
"ಪನ್ತ ಮಾನುಟ ಪ್ಪಾಱ್‌ಪಟು ತೆನ್‌ತಿಚ್ಚೈ
ಇನ್ತ ವಾನ್‌ತಿಚ್ಚೈ ಎಟ್ಟಿನುಮ್ ಮೇಱ್‌ಪಟ
ವನ್ತ ಪುಣ್ಣಿಯಮ್ ಯಾತೆ"ನ ಮಾತವನ್.

31. "ಪೊರುವ ರುನ್ತವ ತ್ತಾನ್‌ಪುಲ ಕ್ಕಾಲನುಮ್
ಅರುಮು ನಿವನ್ತ್ರೈ ಅರ್‌ಚ್ಚಿತ್ತುಮ್ ಉಳ್ಳತು
ಪೆರುಮ್ಮೈ ಚೇರ್ ಪೆರುಮ್ ಪಱ್ಱಿ ಪ್ಪುಲಿಯೂರ್‌ಎನ್‌ಱು
ಒರುಮ್ಮೈ ಯಾಳರ್‌ವೈ ಪ್ಪಾವಮ್‌ಪತಿ ಓಙ್ಕುಮಾಲ್.

32. ಅತ್ತಿ ರುಪ್ಪತಿ ಯಿಲ್‌ನಮ್ಮೈ ಆಳುಟ್ಟೈ
ಮೆಯ್‌ತ್ತ ವಕ್ಕೊಟಿ ಕಾಣ ವಿರುಪ್ಪುಟನ್
ಅತ್ತನ್ ನೀಟಿಯ ಅಮ್ಪಲ ತ್ತಾಟುಮ್ಮ
ಱಿತ್ತಿ ಱಪ್ಪಿಱ ಲಾಮ್‌ತಿಚ್ಚೈ ಎತ್ತಿಚ್ಚೈ.

33. ಎಲ್ಲಾ ಆತ್ಮಗಳ ಒಳಗೆ ಹೃದಯಕಮಲವು ಹೇಗೆ ವಿಕಸಿತವಾಗಿರುತ್ತದೆಯೋ ಅಂತೆಯೇ ಲೋಕವೆಂಬ ವನಿತೆಯ, ಪ್ರಣವವು ಹೊರಬರುವ ಎಡೆಯಾದ ಹೃದಯಕಮಲವು ಎಂದು ಹೇಳುವಂತೆ, ತ್ಯಾಗೇಶರು ವಾಸವಾಗಿದ್ದು ಅನುಗ್ರಹಿಸಿದ ಆ ತಿರುವಾರೂರು ತೆಂಕುದಿಕ್ಕಿನಲ್ಲಿ ವಿಕಸಿತವಾಗಿ ಶೋಭಿಸುವುದು.

34. ಏಳು ಲೋಕಗಳನ್ನೂ ಪಡೆದ ಉಮಾಕಾಂತೆಯು ಈಶ್ವರನನ್ನು ತಪಸ್ಸಿನಿಂದ ಒಲಿಸಿಕೊಂಡ ಸ್ಥಳ ಕಂಬಾ ನದೀತೀರ. ಈ ಪ್ರದೇಶವೇ ಕಾಂಚಿ. ಇದು ದೇವತೆಗಳೇ ಸ್ತುತಿಸುವಂತಹ ದಿವ್ಯಪ್ರದೇಶ.

35. ನಮಗೆಲ್ಲಾ ಮೊದಲನೆಯವರಾದ ನಂದಿದೇವರು ತಪಸ್ಸು ಮಾಡಿ ಪರಮಾನುಗ್ರಹವನ್ನು ಪಡೆದ ಮಹಿಮಾನ್ವಿತವಾದ ಪ್ರದೇಶವಿದು. ಗಂಗಾನದಿಯನ್ನು ಜಡೆಯಲ್ಲಿ ಧರಿಸಿದ ವಹ್ನಿನೇತ್ರನೂ ನೀಲಕಂಠನೂ ಆದ ಶಿವಪರಮಾತ್ಮನು ವಾಸಿಸಿರುವ ತಿರುವೈಯಾರು ಇರುವುದು ಈ ತೆಂಕುದೆಸೆಯಲ್ಲಿ.

36. ತೆಂಕುದೆಸೆಯಲ್ಲಿ ಶಿವನು ಪೂಜೆ ಕೈಕೊಳ್ಳುವ ಎಡೆಗಳು ಎಲ್ಲೆಲ್ಲೂ ಇವೆ. ಅವುಗಳನ್ನೆಲ್ಲಾ ವಿಸ್ತರಿಸುವಲ್ಲಿ ಇತರ ದಿಕ್ಕುಗಳು ತೆಂಕುದಿಕ್ಕಿಗೆ ಸಮಾನವಾಗವು. ಹೀಗೆ ಮಹಿಮಾನ್ವಿತವಾದ ದಿಕ್ಕು ತೆಂಕುದಿಕ್ಕು.

---

33. ಪೂತಮ್ ಯಾವೈಯಿನ್ ಉಳ್ಳುವರ್ ಪೋತೆನ
ವೇತ ಮೂಲಮ್ ವೆಳಿಪ್ಪಟು ಮೇತಿನಿ
ಕ್ಕಾತಲ್ ಮಙ್ಕೈ ಇತಯ ಕಮಲಮಾಮ್
ಮಾತೊರ್ ಪಾಕನಾರ್ ಆರೂರ್ ಮಲರ್‌ನ್ತತಾಲ್.

34. ಎಮ್ಪಿ ರಾಟ್ಟಿ ಇವ್ವೇಟುಲ ಕೀನ್‌ಱವಳ್
ತಮ್ಪಿ ರಾನೈ ತ್ತನಿತ್ತವ ತ್ತಾಲ್‌ಎಯ್ತಿ
ಕ್ಕಮ್ಪೈ ಯಾಱ್ಱಿಲ್ ವಟಿಪಟು ಕಾಞ್ಚಿಎನ್‌ಱು
ಉಮ್ಪರ್ ಪೋಱ್ಱುಮ್ ಪತಿಯುಮ್ ಉಟೈಯತು.

35. ನಙ್ಕಳ್ ನಾತನಾಮ್ ನನ್ತಿ ತವಞ್ಚೆಯ್ತು
ಪೊಙ್ಕು ನೀಟರುಳ್ ಎಯ್ತಿಯ ಪೊಱ್ಪತು
ಕಙ್ಕೈ ವೇಣಿ ಮಲರ್ ಕ್ಕಣಲ್‌ಮಲರ್
ಚೆಙ್ಕೈ ಯಾಳರ್ ಐಯಾಱುಮ್ ತಿಕಟ್ಪತು.

36. ತೇಚಮ್ ಎಲ್ಲಾಮ್ ವಿಳಕ್ಕಿಯ ತೆನ್‌ತಿಚೈ
ಈಚರ್ ತೋಣಿ ಪುರತ್ತುಟನ್ ಎಙ್ಕಣುಮ್
ಪೂಚ ನೈಕ್ಕು ಪ್ಪೊರುನ್ತುಮ್ ಇಟಮ್‌ಪಲ
ಪೇಚಿಲ್ ಅತ್ತಿಚೈ ಒವ್ವರ ಪಿಱತಿಚೈ".

37. ಹೀಗೆಂದು ನಂಬಿಯಾರೂರರ ಚರಿತೆಯನ್ನು ಆ ಉಪಮನ್ಯು ಮುನಿಯು ಅನುಗ್ರಹಿಸಿದ ಕಾರಣದಿಂದ ಇತರ ಭಕ್ತರೆಲ್ಲಾ ಮೇಲಾದ ಚರಿತ್ರವೆಂದು ಹೇಳುತ್ತಿರುವ '**ತಿರುತ್ತೊಂಡ ತೊಗೈ**'ಯ ವಿವರಗಳನ್ನು ಈಗ ಆಸಕ್ತಿಯಿಂದ ಹೇಳತೊಡಗಿದ್ದೇನೆ.

38. ಈ ಚರಿತ್ರೆಯಲ್ಲಿ ಅಡಕವಾದ ದಶಕ (ಹಾಡು) ಗಳಲ್ಲಿ ನಂಬಿಯಾರೂರರು ಅವತರಿಸಲು ಕಾರಣರಾದ ಶಿವಪರಮಾತ್ಮನ ಕೃಪೆಯ ದೆಸೆಯಿಂದ ಅನುಗ್ರಹಿಸಲಾದ ಮಹಿಮಾತಿಶಯದಿಂದ ಕೂಡಿದ 'ತಿರುತ್ತೊಂಡ ತೊಗೈ' ಎಂದು ಕರೆಯಲ್ಪಡುವ ಸ್ತೋತ್ರ ದಶಕಗಳು ನಮ್ಮ ವಂದನೆಗೆ ಅರ್ಹವಾದವುಗಳು.

39. ಸತ್ಯಯುಕ್ತವಾದ ಆ ಹಾಡುಗಳಲ್ಲಿ ಹೇಳಲಾದ ಶರಣರಲ್ಲಿ ನಂಬಿ ಎಂಬ ಹಿರಿಯರು ನಮಗೆಲ್ಲಾ ಮೊದಲನೆಯವರು. ನಮ್ಮ ಬುದ್ಧಿಗನುಸಾರವಾಗಿ ಹೇಳಲು ಬಂದ ರೀತಿಯಲ್ಲಿ ಒಂದನ್ನೂ ಬಿಡದೆ ನಾವು ಹೇಳಲುಜ್ಜುಗಿಸುವೆವು.

40. ಲೋಕದಲ್ಲಿ ಬಾಳುವ ಮನುಜರಿಗೆ ಮೋಕ್ಷಸಾಧನವಾಗುವಂತೆಯೂ ಶೈವ ಸಮಯವು ನೆಲೆನಿಂತು ಶೋಭಿಸುವಂತೆಯೂ ನಂಬಿಯಾರೂರರು ಹಾಡಿದ ಬಹುವಾದ ಖ್ಯಾತಿಯಿಂದ ಕೂಡಿದ ಶರಣರು ವಾಸಮಾಡಿದ ಪ್ರಶಸ್ತವಾದ ಹಿತಪ್ರದವಾದ ಚೋಳ ನಾಡಿನ ಹಿರಿಮೆಯನ್ನು ಹೇಳುವ.

---

37. ಎನ್‌ಱು ಮಾಮುನಿ ವನ್‌ಱೊಣ್ಡರ್ ಚೆಯ್‌ಕೈಯೈ
ಅನ್‌ಱು ಚೊನ್‌ನ ಪಟಿಯಾಲ್ ಅಟಿಯವರ್
ತೊನ್‌ಱು ಚೀರ್‌ತ್ತಿರು ತ್ತೊಣ್ಟ ತ್ತೊಕೈವಿರಿ
ಇನ್‌ಱಿನ್ ಆತಾ ವಾಲ್‌ಇಚೈ ಕಿಯಮ್ಬುಕೇನ್.

38. ಮಱ್ಱಿ ತಱ್ಕು ಪ್ಪತಿಕಮ್‌ವನ್ ಱೊಣ್ಡರ್‌ತಾಮ್
ಪುಱ್ಱಿ ಟತ್ತಿಮ್ ಪುರಾಣರ್ ಅರುಳಿನಾಲ್
ಚೊಱ್ಱ ಮೆಯ್‌ತ್ತಿರು ತ್ತೊಣ್ಟ ತ್ತೊಕೈಎನ
ಪ್ಪೆಱ್ಱ ನಱ್ಪತಿ ಕಮ್‌ತೊಟಿ ಪ್ಪೆಱ್ಱಿತಾಮ್.

39. ಅನ್ತ ಮೆಯ್‌ಪ್ಪತಿ ಕತ್ತಟಿ ಯಾರ್‌ಕಳೈ
ನನ್ತಮ್ ನಾತನಾಮ್ ನಮ್ಬಿಯಾ ಣ್ಡಾರ್‌ನಮ್ಬಿ
ಪುನ್ತಿ ಆರ ಪ್ಪುಕನ್‌ಱ ವಕೈಯಿನಾಲ್
ವನ್ತ ವಾಱು ವಟಿಾಮಲ್ ಇಯಮ್ಬುವಾಮ್.

40. ಉಲಕಮ್ ಉಯ್ಯವುಮ್ ಚೈವಮ್‌ನಿನ್ ಱೋಙ್ಕವುಮ್
ಅಲಕಿಲ್ ಚೀರ್‌ನಮ್ಬಿ ಆರೂರರ್ ಪಾಟಿಯ
ನಿಲವು ತೊಣ್ಡರ್‌ತಮ್ ಕೂಟ್ಟಮ್ ನಿಱೈನ್ತುಱೈ
ಕುಲವು ತಣ್ಪನಲ್ ನಾಟ್ಟಣಿ ಕೂಱುವಾಮ್.

ನಾಡಿನ ಹಿರಿಮೆ

41. ಬಹುವಾದ ಹಿರಿಮೆಯನ್ನು ಹೊಂದಿದ ತಮಿಳಿಗೆ ಎಡೆಯಾಗಿರುವ ಪಸರಿಸಿದ ಎಲ್ಲೆಗಳೊಳಗೆ ಹಿಮಾಲಯಪರ್ವತದ ತುದಿಯಲ್ಲಿ ನಿಡಿದಾದ ವ್ಯಾಘ್ರಧ್ವಜವನ್ನೇರಿಸಿದ ಖ್ಯಾತಿಯು ಚೋಳವಂಶದ ಅರಸರದು. ಕಾವೇರಿನಾಡಿನಲ್ಲಿ ಕಾಣಲಾದ ಅವರ ಮೇಲ್ಮೆಯನ್ನು ನಾನು ಹೇಳಲು ಆರಂಭಿಸುವೆನು.

42. ಆದಿತಪಸಿಗಳಾದ ಅಗಸ್ತ್ಯರು ಕೊಂಡುಬಂದ ಪರಿಶುದ್ಧವಾದ ನೀರುಳ್ಳ ಕಮಂಡಲದಿಂದ ಹೊರಬಂದ ಕಾವೇರಿನದಿಯು, ಭೂದೇವಿಯು ಸುವರ್ಣದಂತೆ ಕಾಂತಿಯಿಂದ ಶೋಭಿಸುವ ತನ್ನ ಎದೆಭಾಗದಲ್ಲಿ ತಾಳಿದ, ಪ್ರಕಾಶಮಾನವಾದ, ಪ್ರಶಸ್ತವಾದ ನೀರಿನಲ್ಲಿ ಉದಿಸಿದ ಮುತ್ತಿನ ಮಾಲೆಗೆ ಸಮಾನವಾಗಿದೆ.

43. ಮಹಿಮಾಯುತವಾದ ಸಹ್ಯಮಲೆಯಿಂದುದಯಿಸಿದ ಕಾವೇರಿಯು ಉತ್ತಮೆಯಾದ ಭೂಮಿ ಎಂಬ ಹೆಂಗಸಿಗೆ ಸಖಿಯೋಪಾದಿಯಲ್ಲಿದೆ. ಈ ಭೂಮಿಯಲ್ಲಿ ಹಲ ಜೀವಕೋಟಿಗಳನ್ನು ಬೆಳೆಸಿ ಅವುಗಳನ್ನು ಕೃಪೆಯಿಂದ ಉಣಿಸಲು ಸಾಧನವಾಗುವಂತಹ ನೀರನ್ನು ಆ ಕಾವೇರಿ ನದಿಯು ಪಡೆದಿದೆ.

ತಿರುನಾಟ್ಟುಚ್ಚಿಱಪ್ಪು

41. ಪಾಟ್ಟಿಯಲ್ ತಮಿೞುರೈ ಪಯಿನ್ಱ ಎಲ್ಲೈಯುಟ್
ಕೋಟ್ಟುಯರ್ ಪನಿವರೈ ಕ್ಕುನ್ಱಿನ್ ಉಚ್ಚಿಯಿಲ್
ಕೂಟ್ಟಿಯ ವಳರ್‌ಪುಲಿ ಚ್ಚೋೞರ್ ಕಾವಿರಿ
ನಾಟ್ಟಿಯಲ್ ಪತನ್ಮೈಯಾನ್ ನವಿಲಲ್ ಉಱ್ಱನನ್.

42. ಆತಿಮಾ ತವಮುನಿ ಅಕತ್ತಿಯನ್‌ತರು
ಪೂತನೀರ್ ಕ್ಕಮಣ್ಟಲಮ್ ಪೊೞಿನ್ತ ಕಾವಿರಿ
ಮಾತರ್‌ಮಣ್ ಮಟನ್ತೈಪೊನ್ ಮಾರ್ಪಿಲ್ ತಾೞ್‌ನ್ತತೋರ್
ಓತನೀರ್ ನಿತ್ತಿಲ ತ್ತಾಮಮ್ ಒಕ್ಕುಮಾಲ್.

43. ಚೈಯಮಾಲ್ ವರೈಪಯಿಲ್ ತಲೈಮೈ ಚಾನ್ಱತು
ಚೆಯ್ಯಪೂ ಮಕಟ್‌ಕುನಱ್ ಚೆವಿಲಿ ಪೋನ್ಱತು
ವೈಯಕಮ್ ಪಲ್ಲುಯಿರ್ ವಳರ್‌ತ್ತು ನಾಟೊಱುಮ್
ಉಯ್ಯವೇ ಚುರನ್ತಳಿ ತ್ತೂಟ್ಟುಮ್ ನೀರತು.

44. (ಕಾವೇರಿಯು) ೧. ಹೆಚ್ಚಾದ ನೀರು ಸುಳಿಗಳನ್ನು, ಹೂಗಳನ್ನು, ತನ್ನೆಡೆಯಲ್ಲಿ ಕೂಡಿಕೊಂಡು ಪ್ರವಹಿಸುವ ಹಿರಿಮೆಯಿಂದ, ೨. (ಬಹ್ಮನು) ವಿಷ್ಣುವಿನ ನಾಭಿ ಕಮಲದಿಂದುದಯಿಸಿದ ವಿಶೇಷದಿಂದ, ೧. (ಕಾವೇರಿಯು) ಹಲವು ಜೀವಕೋಟಿಗಳನ್ನು ತನ್ನ ನೀರಿನಿಂದ ಪೋಷಿಸುವ ಗುಣದಿಂದ, (ಬ್ರಹ್ಮನು) ಹಲಜೀವಕೋಟಿಗಳನ್ನು ಪಡೆದ ಗುಣದಿಂದ, ೧. (ಕಾವೇರಿಯು) ಅಗಸ್ತ್ಯಮುನಿಗಳ ಕಮಂಡಲದಿಂದ ಬಂದಂತಹ ಇತಿಹಾಸದಿಂದ, (ಬ್ರಹ್ಮನು) ಕಮಂಡಲುವನ್ನು ಧರಿಸಿ ನಿಲ್ಲುವವನು ಎಂದು ಪುರಾಣಗಳು ಸೂಚಿಸುವಂತಹ ಗುಣದಿಂದ—ಈ ಮೂರು ಕಾರಣಗಳಿಂದ ಕಾವೇರಿ ನದಿಯು ಸಾಲ್ಮೊಗಸಾದ ಬ್ರಹ್ಮನಿಗೆ ಸಮಾನವಾಗಿ ಇದೆ.

45. ೧. (ಕಾವೇರಿಯು) ಚಂದ್ರನನ್ನು ಮುಟ್ಟುವಂತೆ ಉನ್ನತವಾದ ಸಹ್ಯಮಲೆಯಿಂದ ಇಳಿದು ಪ್ರವಹಿಸಿ ಬರುವುದರಿಂದ, ೨. (ಗಂಗೆಯು) ಚಂದ್ರನನ್ನು ತಲೆಯಲ್ಲಿ ಧರಿಸಿದ ಶಿವಪರಮಾತ್ಮನ ಜಡೆಮುಡಿಯಿಂದ ಕೆಳಗಿಳಿದು ಲೋಕದಲ್ಲಿ ಅವತರಿಸಿರುವುದರಿಂದ, ೧. (ಕಾವೇರಿಯು) ನೀರುಕ್ಕಿ ಉಕ್ಕಿ ಅತಿಶಯಿಸಿ ಹರಿಯುವುದರಿಂದ ಉಂಟಾದ ಬಿಳಿಯ ತಲೆಯಂತಿರುವ ಆಕಾರಗಳುಳ್ಳ ನೊರೆ ಸಮೂಹಗಳನ್ನು ಪ್ರವಹಿಸಿಕೊಂಡು ಬರುವಂತೆ ಕಾಣುವುದರಿಂದ, ೨. (ಗಂಗೆಯು) ಬಿಳಿತಲೆಯನ್ನು ಉಕ್ಕುವ ನೊರೆಗಳನ್ನು ಹೇಗೋ ಹಾಗೆ ತಾಗಿಕೊಂಡು ಬರುವುದರಿಂದ ನಮ್ಮ ಮೊದಲನೆಯವನಾದ ಶಿವಪರಮಾತ್ಮನ ಶ್ರೀಮುಡಿಯಿಂದ ಬರುವ ಗಂಗೆಯೇ ಆಗಿರುತ್ತದೆ ಕಾವೇರಿನದಿ.

46. ಸುಂದರವೂ ನಿಡಿದೂ ಆದ ಸಹ್ಯಮಲೆಯಿಂದ ಉದಿಸಿ ಬಂದ ಹಿರಿಮೆಯಿಂದಲೂ, ಅಗಣಿತವಾದ ಶ್ರೇಷ್ಠಧರ್ಮಗಳನ್ನು ವರ್ಧಿಸಲು ಸಹಾಯವಾಗಿ ನಿಲ್ಲುವ ಕೊಡುಗೆಯಿಂದಲೂ, ಶಿವಪರಮಾತ್ಮನ ಎಡಭಾಗವನ್ನು ತಮ್ಮೆಡೆಯಾಗಿ ಮಾಡಿಕೊಂಡಿರುವ ಉಮಾಮಾತೆಯು ಮನಸ್ಸು ಕರಗಿ ನೀರಾಗಿ ಹರಿಯುವ ಕರುಣೆಯ ಪ್ರವಾಹದಂತೆ ಆ ಕಾವೇರಿ ನದಿಯು ಇದೆ.

---

44. ಮಾಲಿನ್‌ಉನ್ ತಿಚ್ಚುಟಿ ಮಲರ್‌ತನ್ ಮೇಲ್‌ವರುಞಾ್
ಚಾಲ್ಪಿನಾಲ್ ಪಲ್ಲುಯಿರ್ ತರುತನ್ ಮಾಣ್ಪಿನಾಲ್
ಕೋಲನಜ಼್ ಕಣ್ಪಿಕ್ಕೈ ತಾಙ್ಕುಙ್ ಕೊಳ್‌ಕೈಯಾಜ಼್
ಪೋಲುಮ್‌ನಾನ್ ಮುಕನ್ನೈಯುಮ್ ಪೊನ್‌ನಿ ಮಾನತಿ.

45. ತಿಙ್ಕಳ್‌ಚೂ ಟಿಯಮುಟಿ ಚ್ಚಿಕರ ತ್ತುಚ್ಚಿಯಿಲ್
ಪೊಙ್ಕುವೆಣ್ ತಲ್ಯೆನುರೈ ಪೊರುತು ಪೋತಲಾಲ್
ಎಙ್ಕಳ್‌ನಾ ಯಕನ್‌ಮುಟಿ ಮಿಚೈನಿನ್ ಱೀಯಿಟಿ
ಕಙ್ಕೈಯಾಮ್ ಪೊನ್‌ನಿಯಾಮ್ ಕನ್‌ನಿ ನೀತ್ತಮೇ.

46. ವಣ್ಣನೀಳ್ ವರೈತರ ವನ್ತ ಮೇನ್‌ಮೈಯಾಲ್
ಎಣ್ಣಿಲ್‌ಪೇರ್ ಅಱಙ್ಕಳುಮ್ ವಳರ್‌ಕ್ಕುಮ್ ಈಕೈಯಾಲ್
ಅಣ್ಣಲ್‌ಪಾ ಕತ್ತೈಯಾ ಳುಟೈಯ ನಾಯಕಿ
ಉಣ್ಣೆಕಿೞ್ ಕರುಣೈಯಿನ್ ಒಟುಕ್ಕಮ್ ಪೋನ್‌ಱತು.

47. ಸುವಾಸನಾಯುಕ್ತವಾದ ಮಲರುಗಳಿಂದಲೂ, ಜಲದಿಂದಲೂ ಸ್ತುತಿಸಿ ಪೂಜಿಸಿ, ಕೆಂಪಗಾದ ಚಿನ್ನದ ಹುಡಿಗಳಿಂದ ಕೂಡಿದ ಎರಡು ತೀರಗಳಲ್ಲಿಯೂ ಇರುವ ಅಗಣಿತವಾದ ಶಿವಾಲಯಗಳಲ್ಲಿರುವ ಶಿವಪರಮಾತ್ಮನನ್ನು ನಮಿಸುವುದರಿಂದ, ಶೈತ್ಯ ಯುತವಾದ ಕಾವೇರಿ ನದಿಯು ದೇವತೆಗಳಿಗೆ ನಾಯಕನಾದ ಪರಮೇಶ್ವರನ ಭಕ್ತರು ಗಳಿಗೆ ಸಮಾನವಾಗಿದೆ.

48. ಸುಗಂಧಯುತವಾದ ಜಲದಲ್ಲಿ ಕೇಳಿಯಾಡುವ ನಾರಿಯರ ಸ್ತನಗಳಲ್ಲಿ ಪೂಸಿದ ಕುಂಕುಮವನ್ನೂ, ಲೇಪಿಸಿದ ಚಂದನಕರ್ದಮವನ್ನೂ, ಬೀಸುವ ಅಲೆಗಳ ಮೂಲಕವಾಗಿ ತನ್ನಲ್ಲಿ ಪಡೆದುಕೊಂಡು ಪ್ರವಹಿಸುವುದರಿಂದ ಆ ನದಿಯು ಪರಿಶುದ್ಧತೆ ಯನ್ನೂ ಕಾಂತಿಯನ್ನೂ ಕೂಡಿಕೊಂಡಿರುವ ಸ್ವಭಾವದ್ದಾದರೂ ತಿಳಿಯಾಗದೆ ಇರುವುದು.

49. ತುಂಬಿಗಳು ಸಂಚರಿಸಿ ಝೇಂಕರಿಸಲು, ಗಿರಿಗಳಿಂದಲಾಗಿ ಕೊಂಡುಬರುವ ಹೊಸ ಹೂಗಳ ಜೇನಿನಿಂದ ವರ್ಧಿಸಿ, ಅಲ್ಲಲ್ಲಿ ತಟಾಕಗಳಿಂದ ತುಂಬಿದ ನಾಡಿಗೆ ಭಾಗ್ಯ ವನ್ನು ತರುವ ಕಾರಣವಾಗಿ ಕಾವೇರಿನದಿಯು ನೀರು ಕಾಲುವೆಗಳಲ್ಲಿ ಹಾದು ಎಲ್ಲೆಡೆ ಗಳಲ್ಲಿಯೂ ಹರಿಯುತ್ತದೆ.

50. ಕರೆಯಲ್ಲಿರುವ ದೊಡ್ಡ ಮದಗುಗಳ ದಾರಿಯಾಗಿ ಹಾದು, ಅವುಗಳಲ್ಲಿ ತುಂಬಿದ ಹೊಸ ನೀರು ಗದ್ದೆಗಳಲ್ಲಿ ಪ್ರವೇಶಿಸುವುದೂ, ಅದನ್ನು ಇದಿರುಕೊಂಡು ಕರೆದು ಕೊಂಡು ಹೋಗುವಂತೆ ಬಂದ ರೈತರು ಸಂತೋಷದಿಂದ ಶಬ್ದಿಸಿ, ಕೈತಟ್ಟಿ ಸ್ವಾಗತಿಸಿದ ಧ್ವನಿಯು ದೇವತೆಗಳ ಆಕಾಶಲೋಕಕ್ಕೂ ಅದನ್ನು ದಾಟಿಯೂ ಹೋಗಿ ಸೇರುವುದು.

---

47. ನಮ್ಪು ಲಾಮಲರ್ ನೀರಾಲ್ ವಟಿಪಟ್ಟು
ಚ್ಚೆನ್ಪೊನ್ ವಾರ್ಕರೈ ಎಣ್ಣಿಲ್ ಚಿವಾಲಯತ್ತು
ಎಮ್ಪಿ ರಾನ್ರೈ ಇಜಿಕ್ಕೈಞ್ಞಲಿನ್ ಈರ್ವೊನ್ನಿ
ಉಮ್ಪರ್ ನಾಯಕರ್ ಕ್ಕನ್ಪರುವಮ್ ಒಕ್ಕುಮಾಲ್.

48. ವಾಚ ನೀರ್ಕುಟೈ ಮಜಿಕ್ಕೈಯರ್ ಕೊಜಿಕ್ಕೈಯಿಲ್
ಪೂಚು ಕುಜ್ಙುಮ ಮುಮ್ಪನ್ರೈ ಚಾನ್ತುಮುಮ್
ವೀಚು ತೆಣ್ಣಿರೈ ಮಿಾತಿಟಿನ್ ತೊಟ್ಟುನೀರ್
ತೇಚು ಟೈತ್ತೆನಿ ನುನ್ತೆಳಿ ವಿಲ್ಲತೇ.

49. ಮಾವಿ ರೈತ್ತೆಟುನ್ ತಾರ್ಪ್ಪ ವರ್ರೈತರು
ಪೂವಿ ರಿತ್ತ ಪುತುಮತು ಪ್ಪೊಜಿಕ್ಕಿಟ
ವಾವಿ ಯಿಜಿಕ್ಕೊಲಿ ನಾಟು ವಳನ್ತರ
ಕ್ಕಾವಿ ರಿಪ್ಪುನಲ್ ಕಾಲ್ಪರನ್ ತೊಜ್ಙುಮಾಲ್.

50. ಒಣ್ತು ಜಿಕ್ಕೈತ್ತಲೈ ಮಾಮತ ಕೊಟುಪೋಯ್
ಮಣ್ಣು ನೀರ್ವಯ ಲುಟ್ಪುಕ ವನ್ತೆತಿರ್
ಕೊಣ್ಟ ಮಳ್ಳರ್ ಕುರೈತ್ತಕೈ ಓಚೈಪೋಯ್
ಅಣ್ಣರ್ ವಾನತ್ತಿನ್ ಅಪ್ಪುಜಿಞ್ ಚಾರುಮಾಲ್.

51. ಚೆಲುವಾದ ನೇಜಿಯನ್ನು ಕೀಳುವವರ ಕಾರ್ಯವೂ, ಅವುಗಳನ್ನು ಸೂಡಿಗಳಾಗಿ ಸೇರಿಸಿ ಕಟ್ಟಿ ನೀರಿನಲ್ಲಿ ಸೇರಿಸುವವರ ಉದ್ಯಮದ ಹಿರಿಮೆಯೂ, ಶಬ್ದಿಸುತ್ತ ಗದ್ದೆಯನ್ನು ಉತ್ತು ರೈತರು ಬೇಸಾಯ ಮಾಡುವ ದುಡಿಮೆಯೂ, ಕಾಣುವವರಿಗೆ ಆಸೆಯನ್ನು ಮೇಲೂ ಮೇಲೂ ಹೆಚ್ಚಿಸುತ್ತಿರುವುವು. ಈ ಪ್ರತಿಯೊಂದು ಉದ್ಯಮವೂ ದರ್ಶನೀಯವಾದ ಚಲೋ ದೃಶ್ಯಗಳಾಗಿ ಎಲ್ಲೆಲ್ಲಿಯೂ ತೋರುತ್ತಿರುವುವು.

52. ನೇಗಿಲಿನಿಂದ ಉತ್ತಮೇಲೆ, ನೇಗಿಲ ದಾರಿಯಲ್ಲಿ ಎದ್ದ ಕೆಸರು ನೀರಾದ ಮೇಲೆ, ಆ ಗದ್ದೆಗಳಲ್ಲಿ ದೇವೇಂದ್ರನನ್ನು ನಮಿಸಿ, ನೇಜಿ ನಡುವ ಹೆಂಗಸರ ಕೂಟವೇ ದೋಷವಿಲ್ಲದ ಕಾವೇರಿಯು ಹರಿಯುವ ನಾಡಿನಲ್ಲೆಲ್ಲಾ ತೋರುವುದು.

53. ನಟ್ಟಮೇಲೆ, ನೀರು ಹಾದು ಬಂದು ಗದ್ದೆಯಲ್ಲಿ ಬೆಳೆದ ಬತ್ತದ ನೇಜಿಯ ಮೊದಲೆಲೆಯು ಸುರುಳಿ ಬಿರಿದು ತೋರಲು, ಆ ಕಾಲವನ್ನು ಕಂಡು ರೈತರು ಇದು ತಾನೇ ಕಳೆಗಳನ್ನು ಕೀಳುವ ಕಾಲವೆಂದು ತೋರಿಸಲು, ಅದೇ ರೀತಿ ಕಳೆಗಳನ್ನು ತೆಗೆದು ಮುಂದುವರಿಯುವ ರೈತರ ಹೆಂಗಸರು, ಶೀತಲವಾಗಿರುವ ಮುತ್ತುಗಳನ್ನು ಹೊರ ಹೊಮ್ಮುವ ಶಂಖಗಳು ತಮ್ಮ ಕಾಲಿಗೆ ಎಡವಲು ತಡೆತಡೆದು ಮೆಲ್ನಡೆಯಿಂದ ಮುಂದೆ ಹೋಗುವರು. ತುಂಬಿಗಳಂತಿರುವ ಕುರುಳುಗಳು ಚಲಿಸುವಂತೆ ಎಳನಡೆಯಲ್ಲಿ ಬದಿಗಳನ್ನು ಸೇರುವರು.

---

51. ಮೂತರ್ ನಾಱು ಪಱಿಪ್ಪವರ್ ಮಾಟ್ಚಿಯುಮ್
ಚೀತ ನೀರ್ಮುಟಿ ಚೇರ್ಪ್ಪವರ್ ಚೆಯ್ಕೈಯುಮ್
ಓತ್ತೈ ಯಾರ್ಚೆಯ್ ಉಟುನರ್ ಒಟುಕ್ಕಮುಮ್
ಕಾತಲ್ ಚೆಯ್ವತೋರ್ ಕಾಟ್ಚಿ ಮಲಿನ್ತತೇ.

52. ಉಟುತ ಚಾಲ್ಮಿಕ ವೂಱಿ ತ್ತೆಳಿನ್ತಚೇಱು
ಇಟುತು ಚೆಯ್ಯಿನುಳ್ ಇನ್ತಿರ ತ್ತೆಯ್ವತಮ್
ತೊಟುತು ನಾಱು ನಟುವಾರ್ ತೊಕುತಿಯೇ
ಪಟುತಿಲ್ ಕಾವಿರಿ ನಾಟ್ಟಿನ್ ಪರಪ್ಪೆಲಾಮ್.

53. ಮಣ್ಣುಪುನರ್ ಪರನ್ತವಯುಲ್ ವಳರ್ಮುತಲಿನ್ ಚುರುಳ್ವಿರಿಯ
ಕ್ಕಣ್ಣುಟಿವರ್ ಪತಙ್ಕಾಟ್ಟ ಕ್ಕಳೈಕಳೈಯುಙ್ ಕಟ್ಚೆಯರ್ಕಳ್
ತಣ್ಣರಳಙ್ ಚೊರಿಪಣಿಲಮ್ ಇಟಱಿಯಿಟ್ಟ ತಳರ್ನ್ತಚೈವಾರ್
ವಣ್ಣಲೈಯುಙ್ ಕುಟಲ್ಅಳೈಯ ಮಟನಟೈಯಿನ್ ವರಮ್ಪಣೈವಾರ್.

54. ಕನ್ನೈದಿಲೆ ಹೂಗಳನ್ನು ಕೊಯ್ದು ಅವುಗಳನ್ನು ತಮ್ಮ ಕರಿಯ ಕೂದಲಿನ ಮೇಲೆ ಅಲಂಕಾರವಾಗಿಟ್ಟುಕೊಳ್ಳುವರು. ಅವುಗಳಿಗೆ ಮುಸುರುವ ತುಂಬಿಗಳನ್ನು ತಮ್ಮ ಕೈಗಳಿಂದ ಓಡಿಸಲು ಪ್ರಯತ್ನಿಸುವರು. ಅವುಗಳು ಒಮ್ಮೆ ಹೋದರೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮುಸುರುವುವು. ಚಂದ್ರನಂತಿರತಕ್ಕ ಹಣೆಯಲ್ಲಿ ಬೆವರು ಮೂಡಲು, ಮೊಲ್ಲೆಯ ಮೊಗ್ಗುಗಳಂತಿರುವ ಹಲ್ಲುಗಳು ಮುಗುಳುನಗೆಯನ್ನು ಸೂಸಲು, ಹೊಸದಾಗಿ ಅರಳಿದ ತಾವರೆ ಹೂವಿನಿಂದ ಒಸರುವ ಜೇನನ್ನು ಬಾಯಿಯಿಂದ ಹೀರುವರು.

55. ನೋಡಿದವರು ಇವು ಕಬ್ಬು ಅಲ್ಲ, ನೆಲ್ಲು; ಇವು ಕಂಗು ಅಲ್ಲ, ಕಬ್ಬು ಎಂದು ಹೇಳುವುದಕ್ಕೆಡೆಯಾದ ಗದ್ದೆಗಳಿವೆ. ಅಲ್ಲಿ ಎಲ್ಲೆಲ್ಲೂ ತುಂಬಿಗಳು ನೀಲಮಲರುಗಳ ಎಸಳುಗಳೊಳಗೆ ಪ್ರವೇಶಿಸಿದುದರಿಂದ ಆ ಹೂಗಳ ಕರಿಯ ಹುಡಿ ಎಂಬಂತೆ ಕಾಣಬರುತ್ತಿರುವುವು. ಇಂತಹ ಹೂಗಳು ಎಲ್ಲೆಲ್ಲೂ ತೋರುತ್ತಿರುವುವು. ಇವುಗಳು ಮೊಗ್ಗುಗಳಲ್ಲ, ಮೊಗ್ಗುಗಳಂತಿರುವ ಮೊಲೆಗಳೇ. ಇವು ಮುತ್ತುಗಳಲ್ಲ, ಮುತ್ತಿನಂತಿರುವ ಮಾತುಗಳೇ ಎಂದು ಹೇಳುವುದಕ್ಕೆ ತಕ್ಕುದಾದ ಲಕ್ಷಣಗಳುಳ್ಳ ಹಲವು ಸಾವಿರ ಸ್ತ್ರೀಯರು ಒಟ್ಟು ಸೇರಿ ಆ ಗದ್ದೆಗಳಲ್ಲಿ ಕೆಲಸವನ್ನು ಮಾಡುತ್ತಿರುವರು.

56. ಕಯಲ್‌ಮೀನುಗಳು ಚಲಿಸುವ ತಟಾಕದ ಕೆರೆಯಲ್ಲಿ ದೊರೆಯುವ ಕೊಬ್ಬಿನಿಂದ ರಹಿತವಾದ ಶಂಖದ ಓಡುಗಳನ್ನು ಅನ್ನವನ್ನು ಬೇಯಿಸುವ ಸಣ್ಣ ಪಾನೆಗಳಾಗಿಯೂ, ಶಂಖಗಳೊಳಗಿನ ಮುತ್ತುಗಳನ್ನೂ ಹೂವಿನ ಜೇನನ್ನೂ ಅಕ್ಕಿ ಮತ್ತು ನೀರಾಗಿಯೂ ಎಣಿಸಿಕೊಂಡು, ಬದಿಗಳಲ್ಲಿ ಸಿಕ್ಕುವ ಆಮೆಯ ಚಿಪ್ಪುಗಳನ್ನು ಒಲೆಗಳಾಗಿ ಮಾಡಿಕೊಂಡು, ಕೆಂಪಗಾದ ಕುಮುದಪುಷ್ಪಗಳನ್ನು ಬೆಂಕಿಯಾಗಿ ಕಲ್ಪಿಸಿಕೊಂಡು ಅಡುಗೆ ಮಾಡುವ ಆಟದಲ್ಲಿ ಸಣ್ಣ ಹುಡುಗಿಯರು ಗದ್ದೆಯ ಬದಿಗಳಲ್ಲೆಲ್ಲಾ ನಿರತರಾಗಿರುತ್ತಿರುವರು.

---

54. ಚೆಙ್ಕುವಳೈ ಪಱಿತ್ತಣಿವಾರ್ ಕರುಙ್ಕುೞಲಿಲ್‌ಮೇಲ್ ಚಿಱೈವಣ್ಟಱೈ
ಅಱೈಕ್ಕುಮಲರ್ ಕಳೈಕೊಟುಕ್ಕೈ ತ್ತಯಲ್‌ವಣ್ಟುಮ್ ವರವಱೈಪ್ಪಾರ್
ತಿಙ್ಕಣುತಲ್ ವೆಯರ್‌ವರುಮ್ಪ ಚ್ಚಿಱುಮುಱುವಲ್ ತಳವರುಮ್ಪ
ಪ್ಪೊಙ್ಕುಮಲರ್ ಕ್ಕಮಲತ್ತಿನ್ ಪುತುಮತುವಾಯ್ ಮಟುತ್ತಯರ್‌ವಾರ್.

55. ಕರುಮ್ಪಲ್ಲ ನೆಲ್ಲೆನ್ನ ಕ್ಕಮುಕಲ್ಲ ಕರುಮ್ಪೆನ್ನ
ಚ್ಚುರುಮ್ಪಲ್ಲ ಕುಟೈನೀಲ ತ್ತುಕಳಲ್ಲ ಪಕಲೆಲ್ಲಾಮ್
ಅರುಮ್ಪಲ್ಲ ಮುಲೈಯೆನ್ನ ಅಮುತಲ್ಲ ಮೊೞಿಯೆನ್ನ
ವರುಮ್ಪಲ್ಲಾ ಯಿರಙ್ಕಟೈಚಿ ಮಟನ್ದೈಯರ್‌ಕಳ್ ವಯಲ್ ಎಲ್ಲಾಮ್.

56. ಕಯಲ್‌ಪಾಯ್‌ಪೈನ್ ತಟನನ್ದಿನ್ ಕಟೈನ್ದಪೆರುಙ್ ಕರುಙ್ಕುೞಿಚಿ
ವಿಯಲ್‌ವಾಯ್ವಿನ್ ವಳೈತ್ತಾಳ ಮಲರ್‌ವೇರಿ ಉಲೈಪ್ಪೆಯ್‌ತಙ್
ಕಯಲಾಮೈ ಅಟುಪ್ಪೇಱ್ಱಿ ಅರಕ್ಕಾಮ್ಪಲ್ ನೆರುಪ್ಪೂತುಮ್
ವಯಲ್‌ಮಾತರ್ ಚಿಱುಮಕಳಿರ್ ವಿಳೈಯಾಟ್ಟು ವರಮ್ಪೆಲ್ಲಾಮ್.

57. ಬಿದಿರಿನಂತಹ ಕಬ್ಬು ಎಲ್ಲೆಲ್ಲೂ ಕಾಡಾಗಿ ಇರುತ್ತವೆ. ಉದ್ಯಾನಗಳಲ್ಲಿ ಎಲ್ಲೆಲ್ಲಿಯೂ ಎಳದಳಿರುಗಳಿಂದ ಕೂಡಿದ ಸಣ್ಣ ಪುಟ್ಟ ಮೊಗ್ಗುಗಳು ತೋರುವುವು. ಪಕ್ಕಗಳಲ್ಲಿ ಎಲ್ಲಿಡೆಗಳಲ್ಲಿಯೂ ಕರಿಯ ಕುವಲಯಗಳು ಅರಳುವುವು. ದಟ್ಟವಾಗಿ ಬೆಳೆಯುವ ಗದ್ದೆಗಳಲ್ಲಿ ಎಲ್ಲೆಲ್ಲಿಯೂ ಶಂಖಗಳು ದೊರೆಯುವುವು. ತಟಾಕದ ಬದಿಗಳಲ್ಲೆಲ್ಲಾ ಎಳೆಯ ಹಂಸಗಳು ಇರುವುವು. ಕೊಳಗಳೆಲ್ಲಾ ಕಡಲಿನಂತೆ ವಿಸ್ತಾರವಾಗಿರುವುವು. ಹೀಗಿರುವುದರಿಂದ ಯಾವ ನಾಡೂ ಯಾವ ಸಂಪತ್ತಿನ ಗುಣಗಳಿಂದಲೂ ಚೋಳನಾಡಿಗೆ ಸರಿಸಮವಾಗದು.

58. ಕಬ್ಬಿನ ಆಲೆಯನ್ನು ನಡೆಸುವವರು ಕೂಗುವ ಶಬ್ದವೂ ತೋಟಗಳಲ್ಲಿ ಹಲವು ತುಂಬಿಗಳು ಸೇರಿ ಮೊರೆಯುವ ಶಬ್ದವೂ ಲೋಕವನ್ನು ಮೇಲ್ಮೈಗೆಯ್ಯುವ ವೇದಗಳ ಶಬ್ದವೂ ಕಡಲ ಮೊರೆತಕ್ಕಿಂತಲೂ ಹೆಚ್ಚಾದ ಘೋಷವಾಗಿ ಒಂದುಗೂಡುವುದು.

59. ಹಂಸಗಳು ವಿಹರಿಸುತ್ತಿರುವ ಉದ್ದವಾದ ದಡಗಳುಳ್ಳ ತಟಾಕಗಳಲ್ಲಿ ಹಿಂಡು ಹಿಂಡಾದ ಎಮ್ಮೆಗಳು ಮುಳುಗಿದುದರಿಂದ ಬಾಳೆಮೀನುಗಳು ಬಹುವಾಗಿ ಮೇಲೆದ್ದು ಪಕ್ಕದಲ್ಲಿರುವ ತೋಟದ ಕಂಗಿನ ಮೇಲೆ ಹಾರುವ ದೃಶ್ಯಗಳು ಆಕಾಶದಲ್ಲಿ ತೋರಿ ಮರೆಯಾಗುವ ಕಾಮನಬಿಲ್ಲಿನಂತೆ ಎಲ್ಲೆಲ್ಲಿಯೂ ಕಾಣುವುವು.

---

57. ಕಾಟೆಲ್ಲಾಙ್ ಕಟಿಕ್ಕೈಕ್ಕರುಮ್ಬು ಕಾವೆಲ್ಲಾಙ್ ಕುಟಿಕ್ಕೈಕ್ಕರುಮ್ಬು
ಮಾಟೆಲ್ಲಾಙ್ ಕರುಙ್ಕುವಳೈ ವಯಲೆಲ್ಲಾಮ್ ನೆರುಙ್ಕುವಳೈ
ಕೋಟೆಲ್ಲಾಮ್ ಮಟಅನ್ನಮ್ ಕುಳಮೆಲ್ಲಾಮ್ ಕಟಲ್‌ಅನ್ನ
ನಾಟೆಲ್ಲಾಮ್ ನೀರ್‌ನಾಟು ತನ್ನೈಒವ್ವಾ ನಲಮೆಲ್ಲಾಮ್.

58. ಆಲೈ ಪಾಯ್ಪವರ್ ಆರ್‌ಪ್ಪೊಲಿಯುಮ್ ಓಲಮುಮ್
ಚೋಲೈ ವಾಯ್ವಣ್ ಟಿರೈತ್ತೆಟು ಚುಮ್ಮೈಯುಮ್
ಞಾಲಮ್ ಓಙ್ಕಿಯ ನಾನ್‌ಮಱೈ ಓತೈಯುಮ್
ವೇಲೈ ಓಚೈಯಿನ್ ಮಿಕ್ಕು ವಿರವುಮಾಲ್.

59. ಅನ್ನಮ್ ಆಟುಮ್ ಅಕನ್ ತುಱೈ ಪ್ಪೊಯ್‌ಕೈಯಿಲ್
ತುನ್ನುಮ್ ಮೇತಿ ಪಟಿಯ ತ್ತುತೈ ನ್ತೆಟುಮ್
ಕನ್ನಿ ವಾಳೈ ಕಮುಕಿನ್‌ಮೇಲ್ ಪಾಯ್ವನ
ಮನ್ನು ವಾನ್‌ಮಿಚೈ ವಾನವಿಲ್ ಪೋಲುಮಾಲ್.

60. ತೋಟದಲ್ಲಿ ಸಂಚರಿಸುವ ತುಂಬಿಗಳು ಪಕ್ಕದಲ್ಲಿರುವ ತಟಾಕಗಳ ನೀರು ಹೂಗಳಲ್ಲಿ ಚರಿಸುತ್ತ ಜೇನುಣ್ಣುವುವು. ಆ ರೀತಿ ತುಂಬಿಗಳು ಜೇನನ್ನು ಹೀರುವ ತಟಾಕಗಳಲ್ಲಿ ವಾಸಿಸಿಯೂ ಅವುಗಳಲ್ಲಿಯೇ ಇರದೆ ಮೇಲೆದ್ದು ಹಾರುವ ಸ್ವಭಾವವುಳ್ಳ ಕೆಯಲ್‌ಮೀನುಗಳು, ತುಂಬಿಗಳು ಬಂದ ಆ ತೋಟಗಳ ಮಧುರವಾದ ಫಲವೃಕ್ಷಗಳ ಮೇಲೆ ಆ ಫಲಗಳನ್ನು ಉದುರಿಸಿ ಚದರಿಸುವುವು.

61. ನೆಲ್ಲಿನ ಬೆಳೆಗಳು ವಿಶಾಲವಾದ ಗದ್ದೆಯಲ್ಲಿ ಎತ್ತರವಾಗಿ ಬೆಳೆದು ತಮಗೆ ಸರಿಸಮವಿಲ್ಲದಂತೆ ಮೇಲೆನಿಸಿ ಪರಿಶುದ್ಧವಾದ ಬೆಳ್ಳಗಾದ ಅಕ್ಕಿಯನ್ನೊಳಗೊಂಡ ಭಾಗ್ಯವನ್ನು ಪಡೆದು, ಆ ತೆನೆಯು ಯೋಗ್ಯ ಬೆಳವಣಿಗೆಯನ್ನು ಹೊಂದಿದುದರಿಂದ ಹಸುರನ್ನು ಪಡೆದು ಆ ಮೇಲಿ ಕದಿರಿನ ಸುರುಳಿ ಬಿರಿಯಲು ಶಿವಪರಮಾತ್ಮನೆಡೆಯಲ್ಲಿ ಆತನ ಭಕ್ತರ ವಿಕಸಿತವಾದ ಅರಳಿದ ಹೃದಯದಂತೆ ಕದಿರುಗಳಿಂದ ಕೂಡಿಕೊಳ್ಳುವುವು.

62. ಭಕ್ತಿಯ ವಶಪಟ್ಟವರಾಗಿ ಪರಮೇಶ್ವರನ ಸೇವೆಯನ್ನು ಮಾಡುವ ಭಕ್ತರು ಒಟ್ಟು ಸೇರುವಾಗ ಒಬ್ಬರಿಗೊಬ್ಬರು ತಲೆಬಾಗಿ ನಮಿಸಿ ಗೌರವಿಸುವಂತೆ ಒತ್ತೊತ್ತಾಗಿ ನೀಳವಾಗಿ ಬೆಳೆದ ಇದಿರಿದಿರಾದ ಸಾಲುಗಳ ಕದಿರುಗಳಲ್ಲಿ ಹಾಲು ತುಂಬಿ ಪಕ್ವವಾದುದರಿಂದ ತಲೆಬಾಗಿದವುಗಳಾಗಿ, ಆ ಭಕ್ತರಿಗೆ ಶಿವಭೋಗವು ಬೆಳೆಯುವಂತೆಯೇ ನೆಲ್ಲು ಪಕ್ವವಾಗಿ ವರ್ಧಿಸುವುದು.

---

60. ಕಾವಿ ನಿಱ್‌ಪಯಿ ಲುಙ್ಕಳಿ ವಣ್ಟಿನಮ್
ವಾವಿ ಯಿಱ್‌ಪಟ್ನ್ ತುಣ್ಣುವ್ ಮಲರ್‌ಮತು
ಮೇವಿ ಅತ್ತಟವಮ್ ಮೀತೆಟ ಪ್ಪಾಕಯಲ್
ತಾವಿ ಅಪ್ಪೊಟಿ ಲಿಙ್ಕನಿ ಚಾಟುಮಾಲ್.

61. ಚಾಲಿನೀಳ್ ವಯಲಿನ್ ಓಙ್ಕಿ ತ್ತನ್ನಿಕರ್ ಇನ್‌ಱಿ ಮಿಕ್ಕು
ವಾಲಿತಾಮ್ ವೆಣ್ಮೈ ಉಣ್ಮೈಕ್ ಕರುವಿನಾಮ್ ವಳತ್ತ ವಾಕಿ
ಚ್ಚೂಲ್‌ಮುತಿರ್ ಪಚಲೈ ಕೊಣ್ಟು ಚುರುಳ್‌ವಿರಿ ತ್ತಾನು ಕ್ಕನ್‌ಪರ್
ಆಲಿನ ಚಿನ್ತೈ ಪೋಲ ಅಲರ್‌ನ್ತನ ಕತಿರ್‌ಕ ಳೆಲ್ಲಾಮ್.

62. ಪತ್ತಿಯಿನ್ ಪಾಲ ರಾಕಿ ಪ್ಪರಮನು ಕ್ಕಾಳಾಮ್ ಅನ್‌ಪರ್
ತತ್ತಮಿಱ್ ಕೂಟ ನಾರ್‌ಕಳ್ ತಲೈಯಿನಾಲ್ ವಣಙ್ಕು ಮಾಪೋಲ್
ಮೊಯ್‌ತ್ತನೀಳ್ ಪತ್ತಿ ಯಿನ್‌ಪಾಲ್ ಮುತಿರ್‌ತಲೈ ವಣಙ್ಕಿ ಮಣ್ಣಿ
ವಿತ್ತಕರ್ ತನ್‌ಮೈ ಪೋಲ ವಿಳೈನ್ತನ ಚಾಲಿ ಯೆಲ್ಲಾಮ್.

63. ಆ ಮೇಲೆ ರೈತರು ಕೊಯ್ದು ಬತ್ತದಿಂದ ಕೂಡಿದ ಹುಲ್ಲಿನ ಸೂಡಿಗಳಿಂದಾದ ಬೈಹುಲ್ಲಿನ ರಾಶಿಗಳನ್ನು ಬೆಟ್ಟದಂತೆ ಒಂದುಗೂಡಿಸುವರು. ಆಸೆಯಿಂದ ಹಿಡಿದ ಹಲ ಬಗೆಯ ಮೀನುಗಳನ್ನು ವಿಶಾಲವಾದ ಗುಡ್ಡದಂತೆ ರಾಶಿಹಾಕುವರು. ಕೆಲವರು ಸುರುಳಾಗಿರುವ ಶಂಖಗಳಿಂದ ಸುರಿದ ಮುತ್ತುಗಳಿಂದ ಕಾಂತಿಯುಕ್ತವಾದ ದೊಡ್ಡ ಗುಡ್ಡವನ್ನೇ ಮಾಡುವರು. ಕೆಲವರು ಅರಳಿದ ಹೂಗಳ ಗೊಂಚಲುಗಳಿಂದ ಜೇನಿನ ಅಬ್ಬಿಯು ಕೆಳಗೆ ಸುರಿಯಲು ಆ ಹೂಗಳನ್ನು ಗಿರಿಯಂತೆ ಎತ್ತರಕ್ಕೆ ಸೇರಿಸಿಡುವರು.

64. ಬೈಹುಲ್ಲುಗಳ ರಾಶಿಯಿಂದ ಬತ್ತವನ್ನು ಬೇರ್ಪಡಿಸಲಿಕ್ಕಾಗಿ ಬೈಹುಲ್ಲಿನ ಗುಡ್ಡವನ್ನು ಕೆಳಗೆ ತಳ್ಳಿ ಕೋಣಗಳನ್ನು ನಡೆಸುವರು. ಕಪ್ಪಗಾದ ದೊಡ್ಡ ಎತ್ತುಗಳನ್ನು ನಡೆಸುವರು. ಇವುಗಳ ಕೂಟವು ಪರ್ವತದ ತುದಿ ಭಾಗದಲ್ಲಿ ಪ್ರದಕ್ಷಿಣವಾಗಿ ಸುತ್ತುವ ದಟ್ಟವಾದ ಕರಿಯ ಮೋಡಗಳಂತೆ ತೋರುವುವು.

65. ಬೈಹುಲ್ಲಿನ ಬತ್ತವನ್ನು ಬೇರ್ಪಡಿಸಿ ಕಸ ಹೊಟ್ಟುಗಳನ್ನು ಬೇರೆಯಾಗಿಸಲು, ಮಳೆಯ ಹನಿಗಳಂತೆ ಆ ಬತ್ತವನ್ನು ಗೆರಸೆಯಿಂದ ತೆಗೆದುಕೊಂಡು ಮೇಲಿನಿಂದ ಸುರಿದು ಗೇರಿ, ಕೆಂಪಗಾದ ಚಿನ್ನದ ಗಿರಿಗಳಂತೆಯೂ, ಪ್ರತ್ಯೇಕವಾದ ನವರತ್ನದ ಗಿರಿಗಳಂತೆಯೂ ತೋರಲು, ವಿಷ್ಣುಲೋಕವು ಮರೆಯುವಂತೆ ಕೃಷಿಯಲ್ಲಿ ನುರಿತ ರೈತರು ಎತ್ತರವಾಗಿ ಮಾಡಿದ ಬತ್ತದ ಬೆಟ್ಟಗಳಿಂದ, ಉನ್ನತವಾದ ಬೆಟ್ಟಗಳುಳ್ಳ ಲೋಕಕ್ಕೆ ಸಮಾನವಾಗಿ, ಆ ಫಲವತ್ತಾದ ನೆಲವು ತಾವರೆ ಹೂಗಳಿಂದಲೂ ಜಲಸಂಪತ್ತಿನಿಂದಲೂ ಕೂಡಿರುವುದು.

---

63. ಅರಿತರು ಚೆನ್ನೆಲಿನ್ ಚೂಟ್ಟಿನ್ ಅಟುಕ್ಕಿಯ ಅಟುಕ್ಕಲ್ ಚೇರ್‌ಪ್ಪಾರ್
ಪರಿವುಟಿ ತ್ತಟನ್ತ ಪನ್‌ಮೀನ್ ಪಟರ್‌ನೆಟುಙ್ ಕುನ್‌ಱು ಚೆಯ್ಪಾರ್
ಚುರಿವಳ್ಳೆ ಚೊರಿನ್ತ ಮುತ್ತಿನ್ ಚುಟರ್‌ಪ್ಪೆರುವರ್ ಪೊರುಪ್ಪು ಯರ್‌ಪ್ಪಾರ್
ವಿರಿಮಲರ್ ಕ್ಕಱಿತ್ತೈ ವೇರಿ ಪೊಟಿನ್ತಿಟಿ ವೆಱ್ಪು ವೈಪ್ಪಾರ್.

64. ಚಾಲಿಯಿನ್ ಕಱಿತ್ತೈ ತುಱಿ ತಟವರೈ ಮುಕಟು ಚಾಯ್‌ತ್ತು
ಕ್ಕಾಲಿರುಮ್ ಪಕಟು ಪೋಕ್ಕುಙ್ ಕರುಮ್ಪೆರುಮ್ ಪಾಣ್ಟಿಲ್ ಈಟ್ಟಮ್
ಆಲಿಯ ಮುಕಿಲಿನ್ ಕೊಟ್ಟಮ್ ಅರುವರೈ ಚ್ಚೆಮಯ ಚ್ಚಾರಲ್
ಮೇಲ್‌ವಲಙ್ ಕೊಣ್ಟು ಚೂಟುಙ್ ಕಾಟ್ಚಿಯಿನ್ ಮಿಕ್ಕ ತನ್‌ಱೇ.

65. ವೈತೆರಿ ನ್ತಕಱಿ ಆಱಿ ಮಟಿತ್ತೈಪ್ಪೆಯಲ್ ಮಾನ ತ್ತೂಱಿ
ಚ್ಚೆಯ್ಯಪೊಟಿನ್ ಕುನ್‌ಱುಮ್ ವೇಱು ನವಮಣಿ ಚ್ಚಿಲಮ್ಪುಮ್ ಎನ್‌ನ
ಕ್ಕೈವಿನೈ ಮಳ್ಳರ್ ವಾನಙ್ ಕರಕ್ಕವಾ ಕ್ಕಿಯನೆಟಿ ಕುನ್‌ಱಾಲ್
ಮೊಯ್ವರೈ ಉಲಕಮ್ ಪೋಲುಮ್ ಮುಳರಿನೀರ್ ಮರುತ ವೈಪ್ಪು.

66. ಅರಸನಿಗೆ ಕೊಡಬೇಕಾದ ಆರರಲ್ಲಿ ಒಂದು ಭಾಗವನ್ನು ಕೊಟ್ಟು, ಉಳಿದ ಐದು ಭಾಗಗಳನ್ನು ತಾನು ತೆಗೆದುಕೊಂಡು, ಅವುಗಳಲ್ಲಿ ಒಂದು ಭಾಗವನ್ನು ಧರ್ಮ ಮಾಡಿ, ಉಳಿದ ನಾಲ್ಕು ಭಾಗಗಳಿಂದ ನಮಿಸತಕ್ಕ ದೈವಗಳನ್ನು ಪೂಜಿಸಿ, ಪಿತೃಗಳನ್ನೂ ಅತಿಥಿಗಳನ್ನೂ ಗುಣದಿಂದ ಕೂಡಿದ ಸಂಬಂಧಿಕರನ್ನೂ ಕಾಪಾಡಿ, ಹೀಗೆ ಭಾಗ್ಯವನ್ನು ಪಡೆದ ಕೃಷಿಕರ ಮನೆಗಳ ಮಾಳಿಗೆಗಳು ಬೆಟ್ಟದಂತೆ ಉನ್ನತವಾಗಿದ್ದು ಆ ನಾಡಿನಲ್ಲಿ ಎಲ್ಲೆಡೆಯಲ್ಲಿಯೂ ಶೋಭಿಸುತ್ತವೆ.

67. ಕಬ್ಬಿನ ರಸವನ್ನು ಕಾಸುವಾಗ ಕಬ್ಬಿನ ಆಲೆಯ ಪ್ರದೇಶದಿಂದ ಹುಟ್ಟಿದ ಪರಿಮಳಯುಕ್ತವಾದ ಹೊಗೆಯೂ, ಹೆಮ್ಮಕ್ಕಳು, ತುಂಬಿಗಳು ಏಳುವಂತೆ ಅಗಿಲು ತುಂಡುಗಳನ್ನು ಹಾಕಿ ಎಬ್ಬಿಸಿದ ಹೊಗೆಯೂ, ಯೂಪಗಳು ಇರುವ ಯಾಗಶಾಲೆಯಲ್ಲಿ ದೊಡ್ಡ ಯಾಗಗಳನ್ನು ಮಾಡುವುದರಿಂದ ಉಂಟಾದ ಹೊಗೆಯೂ, ಆಕಾಶದಲ್ಲಿ ಸಂಚರಿಸತಕ್ಕ ಕರಿಯ ಮೇಘಗಳೂ ಮಂಟಪಗಳಲ್ಲಿಯೂ ನಂದನವನಗಳಲ್ಲಿಯೂ ಎಲ್ಲೆಡೆಗಳಲ್ಲಿಯೂ ಸುಳಿದುಕೊಂಡಿವೆ.

68. ತೆಂಗಿನ ಮರಗಳು, ಶಿರುಂದಿ ಮರಗಳು, ಒಳ್ಳೆಯ ಹೂಗಳುಳ್ಳ ವೃಕ್ಷ ವಿಶೇಷಗಳು ಎಲ್ಲೆಡೆಯಲ್ಲಿಯೂ ಇವೆ. ಹೆಚ್ಚು ಹೂಗಳಿರದೆ ಕಾಯಿಗಳಿರುವ ನಾನಾ ಮರಗಳು, ಗೋಳಿ, ಆಲ, ಕುರವ ಮೊದಲಾದ ಮರಗಳು ತುಂಬಾ ಇವೆ. ಪನೆ, ಚಂದನ, ಕುಂಕುಮ ವೃಕ್ಷಗಳು ವಿಶೇಷವಾಗಿ ಕಾಣಿಸುವುವು. ನಿಡಿದಾದ ಎಲೆಗಳ ವಾಂಚಿ, ಕಾಂಚಿ ಮರಗಳು, ತುಂಬ ಹೂಗಳಿಂದ ಕೂಡಿಕೊಂಡ ಕೊಂಗು ಮರಗಳು ಎಲ್ಲೆಲ್ಲಿಯೂ ಕಂಡುಬರುವುವು.

---

66. ಅರಚುಕೊಳ್ ಕಟನ್‌ಕಳ್ ಆಱಿಲ್ ಮಿಕುತಿಕೊ ಣ್ಟಜಙ್ಕಳ್ ಪೇಣಿ
ಪ್ಪರವರುಙ್ ಕಟವುಟ್ ಪೋಱ್ಱಿ ಕ್ಕುರವರುಮ್ ವಿರುನ್ತುಮ್ ಪಣ್ಪಿನ್
ವಿರವಿಯ ಕಿಳೈಯುಂ ನ್ತಾಙ್ಕಿ ವಿಳಙ್ಕಿಯ ಕುಟಿಕಳ್ ಓಙ್ಕಿ
ವರೈಪುರೈ ಮಾಟಮ್‌ನೀಟಿ ಮಲರ್‌ನ್ತುಳ ಪತಿಕಳ್ ಎಙ್ಕುಮ್.

67. ಕರುಮ್ಪುಟು ಕಳಮರ್ ಆಲೈ ಕ್ಕಮಟ್‌ನಙುಮ್ ಪುಕೈಯೋ ಮಾತರ್
ಕರುಮ್ಪೆಟಿ ಅಕಿಲಾಲ್ ಇಟ್ಟ ತೂಪಮೋ ಯೂಪ ವೇಳ್ವಿ
ಪ್ಪೆರುಮ್ಪೆಯರ್ ಚ್ಚಾಲೈ ತೋಱುಮ್ ಪಿಱಙ್ಕಿಯ ಪುಕೈಯೋ ವಾನಿನ್
ವರುಙ್ಕರು ಮುಕಿಲೋ ಚೂಟ್ಪ ಮಾಟಮುಮ್ ಕಾವುಮ್ ಎಙ್ಕುಮ್.

68. ನಾಳಿಕೇ ರಙ್ಚ್ಚಿ ರುನ್ತಿ ನಱುಮಲರ್ ನರನ್ತಮ್ ಎಙ್ಕುಮ್
ಕೋಳಿಚಾ ಲನ್ತ ಮಾಲ ಙ್ಕುಳಿರ್‌ಮಲರ್ ಕ್ಕುರವಮ್ ಎಙ್ಕುಮ್
ತಾಳಿರುಮ್ ಪೋನ್ತು ಚನ್ತು ತಣ್ಮಲರ್ ನಾಗಮ್ ಎಙ್ಕುಮ್
ನೀಳಿಲೈ ವಞ್ಚಿ ಕಾಞ್ಚಿ ನಿಱೈಮಲರ್ ಕ್ಕೋಙ್ಕಮ್ ಎಙ್ಕುಮ್.

69. ಮಾಮರ, ಪಾದರಿ, ಸುರಹೊನ್ನೆ, ಸರಳ ಮೊದಲಾದ ಮರಗಳೂ, ಮಲ್ಲಿಗೆ, ಜಾಜಿ, ಮಾಲತಿ, ನರವ, ಮಾಧವಿ, ವಕುಳ, ಚಂಪಕ ಮೊದಲಾದ ಹೂಬಳ್ಳಿಗಳೂ, ಹೂಗಳಿರುವ ಕೇತಕೀ ಪುನ್ನಾಗ ವೃಕ್ಷಗಳೂ ಎಲ್ಲೆಲ್ಲಿಯೂ ಇವೆ.

70. ಮಂಗಳಕರವಾದ ಉದ್ಯಮಗಳು ಎಲ್ಲೆಡೆಯಲ್ಲಿಯೂ ಕಾಣುವುವು. ವಿವಾಹ ಸಂಭ್ರಮದ ವಾದ್ಯಘೋಷಗಳು ಎಲ್ಲೆಲ್ಲಿಯೂ ಇವೆ. ಹೆಮ್ಮಕ್ಕಳ ಕಮಲದಂತಿರುವ ಮುಖಗಳು ಎಲ್ಲೆಲ್ಲಿಯೂ ತೋರುವುವು. ಹೆಂಗಸರ ಮಂಜುಲವಾದ ಸ್ವರದಿಂದ ಕೂಡಿದ ಮಾತುಗಳು ಎಲ್ಲೆಡೆಗಳಲ್ಲಿಯೂ ಕೇಳಿಬರುವುವು. ಹೆಚ್ಚಾದ ಕಾಂತಿ ಸೂಸುವ ಆಭರಣ ಗಳು ಎಲ್ಲೆಲ್ಲಿಯೂ ತೋರುವುವು. ಹೊಸ ಮಲರುಗಳಿಂದ ಅಲಂಕೃತವಾದ ಚಪ್ಪರಗಳು ಎಲ್ಲೆಲ್ಲಿಯೂ ಕಾಣುವುವು. ಕೆಂಪಗಾದ ಕಯಲ್ ಮೀನುಗಳು ಚರಿಸುವ ಗದ್ದೆಗಳು ಎಲ್ಲೆಲ್ಲಿಯೂ ತೋರುವುವು. ಲಕ್ಷ್ಮಿಯು ವಾಸಿಸತಕ್ಕ ಸ್ಥಳಗಳು ಎಲ್ಲೆಲ್ಲಿಯೂ ಇವೆ.

71. ಮುಗಿಲುಗಳ ಗುಂಪುಗಳೂ, ಆನೆಗಳ ಹಿಂಡುಗಳೂ ಎಲ್ಲೆಲ್ಲಿಯೂ ಇವೆ. ವೇದ ಘೋಷವೂ, ವೇದಾಧ್ಯಯನದ ಸಭೆಗಳೂ, ಯಾಗಗಳೂ, ಅವುಗಳ ಅಂಗಗಳಾದ ಕ್ರಿಯೆಗಳೂ ಎಲ್ಲೆಡೆಗಳಲ್ಲಿಯೂ ಇವೆ. ಸುಖಸಂತೋಷಗಳೂ ಯೋಗ ತಪಸ್ಸುಗಳೂ ಎಲ್ಲೆಲ್ಲಿಯೂ ಇವೆ. ಅಲ್ಲದೆ ಎಲ್ಲಾ ಎಡೆಗಳಲ್ಲಿಯೂ ಉಯ್ಯಾಲೆಗಳೂ, ಬೀದಿಗಳೂ, ಸುಖಾನುಭವವೂ, ಸಂತೋಷ ಬಾಳ್ವೆಯೂ ಇವೆ.

---

69. ಚೂತಪಾ ಟಲಜ್ಞಳ್ ಎಜ್ಞುಮ್ ಚೂಟ್‌ವಟಿೖ ಇ್ಾಟಿಲ್ ಎಜ್ಞುಮ್
ಚಾತಿಮಾ ಲತಿಕಳ್ ಎಜ್ಞುಮ್ ತಣ್‌ತಳಿರ್ ನಜಿವಮ್ ಎಜ್ಞುಮ್
ಮಾತವಿ ಚರಳಮ್ ಎಜ್ಞುಮ್ ವಕುಳಚನ್ ಪಕಜ್ಞಳ್ ಎಜ್ಞುಮ್
ಪೋತವಿಟ್ ಕೈತೈ ಎಜ್ಞುಮ್ ಪೂಕಪು ನ್‌ನಾಕಮ್ ಎಜ್ಞುಮ್.

70. ಮಜ್ಞಲ ವಿನೈಕಳ್ ಎಜ್ಞುಮ್ ಮಣಇಕ್ಟಿಯ್ಯುಮ್ ಪಲೈಕಳ್ ಎಜ್ಞುಮ್
ಪಜ್ಞಯ ವತನಮ್ ಎಜ್ಞುಮ್ ಪಣ್‌ಕಳಿನ್ ಮಟಿಲೈ ಎಜ್ಞುಮ್
ಪೊಜಿಕ್ಕೊಳಿ ಕ್ಕಲನ್‌ಕಳ್ ಎಜ್ಞುಮ್ ಪುತುಮಲರ್ ಪ್ಪನ್ತ‌ರ್ ಎಜ್ಞುಮ್
ಚೆಜ್ಞಯಲ್ ಪಟಿನಮ್ ಎಜ್ಞುಮ್ ತಿರುಮಕಳ್ ಉಜಿಕ್ಕೈಯುಳ್ ಎಜ್ಞುಮ್.

71. ಮೇಕಮುಮ್ ಕಳಿಜುಮ್ ಎಜ್ಞುಮ್ ವೇತಮುಮ್ ಕಿಟ್ಟೈಯುಮ್ ಎಜ್ಞುಮ್
ಯಾಕಮುಮ್ ಚಟಜ್ಞುಮ್ ಎಜ್ಞುಮ್ ಇನ್‌ಪಮುಮ್ ಮಕಿಟ್ಚಿವುಮ್ ಎಜ್ಞುಮ್
ಯೋಕಮುಮ್ ತವಮುಮ್ ಎಜ್ಞುಮ್ ಊಚಲುಮ್ ಮಜುಕುಮ್ ಎಜ್ಞುಮ್
ಪೋಕಮುಮ್ ಪೊಲಿವುಮ್ ಎಜ್ಞುಮ್ ಪುಣ್ಣಿಯ ಮುನಿವರ್ ಎಜ್ಞುಮ್.

72. ಹಾಡುವುದಕ್ಕೆ ತಕ್ಕುದಾದ ವೀಣೆಗಳು ಎಲ್ಲೆಡೆಯಲ್ಲಿಯೂ ಇವೆ. ಹೆಂಗಸರ ಕಾಲುಗಳಲ್ಲಿ ಕೆಂಪಗಾದ ಆಭರಣಗಳು ಎಲ್ಲೆಲ್ಲಿಯೂ ಇವೆ. ತುಂಬಿಗಳು ಮುಸುರುವ ಹೆಂಗಸರ ತಲೆಕೂದಲುಗಳೂ, ಮಂಜುಳವಾಗಿ ಶಬ್ದಿಸುವ ಪಿಳ್ಳಂಗೋವಿಗಳೂ ಎಲ್ಲೆಲ್ಲಿಯೂ ಇವೆ. ಎಲ್ಲೆಲ್ಲಿಯೂ ಶಿವಭಕ್ತರ ಮಠಗಳು ಇವೆ. ಆ ನಾಡಿನಲ್ಲಿ ಎಲ್ಲೆಲ್ಲಿಯೂ ಓದುವುದು ಋಕ್ ಮೊದಲಾದ ವೇದಗಳನ್ನು. ಅಲ್ಲಿ ಎಲ್ಲೆಡೆಗಳಲ್ಲಿಯೂ ತಂಪಾದ ನಂದನವನಗಳಿವೆ. ಎಲ್ಲೆಲ್ಲಿಯೂ ಹಲಸು ಮೊದಲಾದ ಉತ್ತಮ ವೃಕ್ಷಗಳಿವೆ.

73. ಕಟ್ಟಡದ ರಚನೆಯಲ್ಲಿಯೂ, ನಂದನವನಗಳಲ್ಲಿಯೂ ಆನೆಗಳು ಕಾಣಬರುವುವು. ಮಲರುಗಳಲ್ಲಿ ತುಂಬಿಗಳು ಝೇಂಕರಿಸುತ್ತ ಸಂಚರಿಸುತ್ತಿವೆ. ಹುಡುಗಿಯರ ನರ್ತನದ ಆಟಗಳು ಎಲ್ಲೆಡೆಗಳಲ್ಲಿಯೂ ಇವೆ. ನಿಡಿದಾದ ಬಟ್ಟೆಯ ಧ್ವಜಗಳು ಎಲ್ಲೆಲ್ಲಿಯೂ ಇವೆ. ಮಲರಮಾಲೆಗಳು ಎಲ್ಲೆಲ್ಲಿಯೂ ಶೋಭಿಸುತ್ತವೆ. ನಮಿಸುವ ಜನರ ಪಂಕ್ತಿಗಳು ಎಲ್ಲೆಲ್ಲಿಯೂ ಕಾಣಬರುತ್ತವೆ.

74. ಉತ್ಸವಗಳಿಂದಾದ ಕೋಲಾಹಲವೂ, ಮನೆಗಳಿಂದ ಬಂದ ಅತಿಥಿಗಳನ್ನು ಉಪಚರಿಸುವ ಶಬ್ದವೂ ಅಲ್ಲಿ ಎಲ್ಲೆಲ್ಲಿಯೂ ಕೇಳಿಬರುತ್ತಿದ್ದುವು. ಬ್ರಾಹ್ಮಣರೇ ಮೊದಲಾದ ಜಾತಿಗಳ ಜನರು ತಂತಮ್ಮ ವರ್ಣಾಶ್ರಮ ಧರ್ಮಗಳಿಗೆ ತಪ್ಪದೆ ಇರುತ್ತಿದ್ದರು. ಬಾಲಕರೂ ಮನೆಗಳಲ್ಲಿ ಯೋಗ್ಯವಾದ ಆಚರಣೆಗಳನ್ನು ತಪ್ಪದೆ ಆಚರಿಸುತ್ತಿದ್ದರು. ಪಕ್ಷಿಗಳೂ ಜಂತುಗಳೂ ವೈರವಿಲ್ಲದೆ ಸ್ನೇಹದಿಂದ ಇರುತ್ತಿದ್ದುವು. ಆ ನಾಡಿನಲ್ಲಿ ವಾಸಿಸುವುದಕ್ಕೆ ಲಕ್ಷ್ಮಿಯು ಆಶಿಸುತ್ತಿದ್ದಳು. ಅಲ್ಲಿ ಓದುವ ಅಕ್ಷರಗಳೆಂದರೆ ಪಂಚಾಕ್ಷರಗಳು. ಇತರ ನೋವುಗಳು ಅಲ್ಲಿನ ಜನರನ್ನು ಸೋಂಕಲು ಅಂಜುತ್ತಿದ್ದುವು.

---

72. ಪಣ್ಣಾರು ವಿಪಞ್ಚಿ ಎಙ್ಙುಮ್ ಪಾತಚಿಲಮ್ ಪಞ್ಚಿ ಎಙ್ಙುಮ್
ವಣ್ಣಾರೈ ಕುಟಲ್ಕಳ್ ಎಙ್ಙುಮ್ ವಳರಿಚೈ ಕ್ಕುಟಲ್ಕಳ್ ಎಙ್ಙುಮ್
ತೊಣ್ಣಾರ್‌ತಮ್ ಇರುಕ್ಕೈ ಎಙ್ಙುಮ್ ಚೊಲ್ಲುವ ತಿರುಕ್ಕೈ ಎಙ್ಙುಮ್
ತಣ್ಣಾಲೈ ಪಲವುಮ್ ಎಙ್ಙುಮ್ ತಾತಕಿ ಪಲವುಮ್ ಎಙ್ಙುಮ್.

73. ಮಾಟುಪೋ ತಕಙ್ಙಳ್ ಎಙ್ಙುಮ್ ವಣ್ಟುಪೋ ತಕಙ್ಙಳ್ ಎಙ್ಙುಮ್
ಪಾಟುಮ್‌ಅ ಮ್ಮನೈಕಳ್ ಎಙ್ಙುಮ್ ಪಯಿಲುಮ್‌ಅ ಮ್ಮನೈಕಳ್ ಎಙ್ಙುಮ್
ನೀಟುಕೇ ತನಙ್ಙಳ್ ಎಙ್ಙುಮ್ ನಿತಿನಿಕೇ ತನಙ್ಙಳ್ ಎಙ್ಙುಮ್
ತೋಟುಚೂಟ್ ಮಾಲೈ ಎಙ್ಙುಮ್ ತುಣ್ಯೆವರ್ ಚೂಳ್ ಮಾಲೈ ಎಙ್ಙುಮ್.

74. ವೀತಿಕಳ್ ವಿಟಲಿನ್ ಆರ್‌ಪ್ಪುಮ್ ವಿರುಮ್ಪಿನರ್ ವಿರುನ್ತಿನ್ ಆರ್‌ಪ್ಪುಮ್
ಚಾತಿಕಳ್ ನೆಜಿಯಿಲ್ ತಪ್ಪಾ ತನಯರುಮ್ ಮನೈಯಿಲ್ ತಪ್ಪಾ
ನೀತಿಯ ಪುಳ್ಳುಮ್ ಮಾವುಮ್ ನಿಲತ್ತಿರು ಪ್ಪುಳ್ಳು ಮಾವುಮ್
ಓತಿಯ ಎಟುತ್ತಾಮ್ ಅಞ್ಚುಮ್ ಉಱುಪಿಣಿ ವರುತ್ತಾಮ್ ಅಞ್ಚುಮ್.

75. ಶೆಂದಮಿಳು (ಶುದ್ಧವಾದ ತಮಿಳು) ಆ ನಾಡಿನಲ್ಲಿ ಶೋಭಿಸುವುದು. ಲೋಕವು ಎಲ್ಲರಿಗೂ ಸಮವಾಗಿದೆ ಎಂಬ ಮಾತನ್ನು ಬದಲಿಸಿ, ಲೋಕವನ್ನೆಲ್ಲಾ ತನ್ನದೆಂದಾಗಿಸಿಕೊಂಡು ಅದನ್ನು ಯೋಗ್ಯವಾಗಿ ಸಂರಕ್ಷಿಸಿಕೊಂಡು ಬರುವ ಸದಾ ವಿಜಯ ಯುಕ್ತರಾದ ಅನಪಾಯ ಚೋಳ ಅರಸನ ಬೆಳ್ಗೊಡೆಯ ನೆಳಲಲ್ಲಿ ಆ ಲೋಕವು ತಂಪಾಗಿ ಬಾಳುತ್ತದೆ. ಹೀಗಿರುವುದರಿಂದ ಆ ನಾಡ ಹಿರಿಮೆಗಳನ್ನು ನಮ್ಮಿಂದ ಮಾತುಗಳ ಅಳತೆಗೆ ಒಳಗಾಗುವಂತೆ ಹೇಳಲು ಸಾಧ್ಯವಾದೀತೇ ?

ತಿರುವಾರೂರಿನ ಹಿರಿಮೆ

ಮನುನೀತಿ ಚೋಳನ ಚರಿತೆ ಮತ್ತು ನಂಬಿಯಾರೂರನ ಕಥೆ

76. ಹಿಂದೆ ಹೇಳಿದ ಚೋಳನಾಡಿನಲ್ಲಿ, ಪುರಾತನವಾಗಿಯೂ ಶ್ರೇಷ್ಠವಾಗಿಯೂ ಇರುವ, ಲಕ್ಷ್ಮೀದೇವಿಯು ಸೇವೆಮಾಡಿಕೊಂಡಿರತಕ್ಕ, ಬನ್ನಿಪತ್ರವನ್ನೂ ಗಂಗಾನದಿಯನ್ನೂ ಬಾಲಚಂದ್ರನನ್ನೂ ಧರಿಸಿದ ಕೆಂಜೆಡೆಗಳಿಂದ ಕೂಡಿದ ಶ್ರೀಮುಡಿಯಿರುವ ತ್ಯಾಗೇಶರು ವಾಸಮಾಡುವುದರಿಂದ ಅನುಗ್ರಹಿಸಲ್ಪಟ್ಟ ಊರು ತಿರುವಾರೂರು.

77. ಆ ನಗರದೆಡೆಗಳಲ್ಲಿ ವೇದನಿನಾದವೂ ವೀಣಾನಿಸ್ವನವೂ ಶಾಂತಿಯುಕ್ತರಾದ ದೇವತೆಗಳು ಮಾಡುವ ಸ್ತೋತ್ರಧ್ವನಿಯೂ, ಗಣಿಕೆಯರ ನರ್ತನಕ್ಕೆ ಒಪ್ಪುವ ಇನಿದಾದ ಮದ್ದಳೆಯ ಶಬ್ದವೂ, ಹೆಂಗಸರ ಗಾಯನ ಸ್ವರವೂ ಮೊದಲಾದ ಮಂಜುಲವಾದ ಸ್ವರಗಳು ಒಟ್ಟಾಗಿ ಎಂಬಂತೆ ಕೇಳಿಬರುತ್ತಿದ್ದುವು.

---

75. ನಱುಮಿಟಿ್ ವೈಪ್ಪಿನ್ ಓಙ್ಕು ನಾಮ್ಪುಕಟಿ್ ತಿರುನಾ ಟಿನ್ಱುಮ್
ಪೊಱುಟ ನ್ನೋಳಾನ್ ವೈಯಮ್ ಪೊತುಕ್ಕಟ ನ್ನಿನಿತು ಕಾಕ್ಕುಮ್
ಕೊಱುವನ್ ಅನಪಾ ಯನ್ಪೊ ಱ್ಕುಟೈನಿಟ ಱ್ಕಳರ್ವ ತೆನ್ಱಾಲ್
ಮಱುತನ್ ಪೆರುಮೈ ನಮ್ಮಾಲ್ ವರಮ್ಪುಱ ವಿಳಮ್ಪ ಲಾಮೋ.

ತಿರುನಕರ ಚ್ಚಿಱಪ್ಪು

76. ಚೊನ್ನ ನಾಟ್ಟಿಟೈ ತ್ತೊನ್ಮೈಯಿಲ್ ಮಿಕ್ಕತು
ಮನ್ನು ಮಾಮಲ ರಾಳ್ವಟಿ ಪಟ್ಟತು
ವನ್ನಿ ಯಾಱು ಮತಿಪೊತಿ ಚೆಞ್ಚಟೈ
ಚ್ಚೆನ್ನಿ ಯಾರ್ತಿರು ವಾರೂರ್ ತ್ತಿರುನಕರ್.

77. ವೇತ ಓಚೈಯುಮ್ ವೀಣೈಯಿನ್ ಓಚೈಯುಮ್
ಚೋತಿ ವಾನವರ್ ತೋತ್ತಿರ ಓಚೈಯುಮ್
ಮಾತರ್ ಆಟಲ್ ಮಣಿಮುಟ ವೋಚೈಯುಮ್
ಕೀತ ಓಚೈಯು ಮಾಯ್ಕ್ಕಿಳರ್ ವುಱುವೇ.

78. ಪಲವಗೆಯ ವಾದ್ಯಗಳಿಂದ ಹೊರಹೊಮ್ಮುವ ಧ್ವನಿಯೊಡನೆ ಸೌಭಾಗ್ಯ ಯುಕ್ತವಾದ ಆ ಬೀದಿಗಳಲ್ಲಿ ಪ್ರಕಾಶಿಸುವ ಮಣಿಗಳಿಂದ ಅಲಂಕರಿಸಿದ ತೇರುಗಳ ಸ್ವರವೂ, ಆನೆ ಕುದುರೆಗಳ ಶಬ್ದಗಳೂ ಆ ನಗರದಲ್ಲಿ ಎಲ್ಲೆಲ್ಲಿಯೂ ಅತಿಶಯವಾಗಿ ಕೇಳಿ ಬರುತ್ತಿದ್ದುವು.

79. ಮೇಲುಪ್ಪರಿಗೆಯ ಮಹಡಿಗಳಲ್ಲಿ, ಮಂಟಪಗಳಲ್ಲಿ, ವಿಶಾಲವಾದ ಹಜಾರ ಗಳಲ್ಲಿ, ಗೋಪುರ ಶಾಲೆಗಳಲ್ಲಿ, ದಿಣ್ಣೆಗಳಲ್ಲಿ ಇವೇ ಮೊದಲಾದ ದೊಡ್ಡ ದೊಡ್ಡ ಸಭೆ ಸೇರಿರುವ ಎಲ್ಲೆಡೆಗಳಲ್ಲಿಯೂ ತರುಣಿಯರು ನಾಟ್ಯವಾಡುತ್ತಿರಲು ಅವರ ಕಾಲ ಗೆಜ್ಜೆಗಳು ಮಂಜುಲವಾಗಿ ಶಬ್ದಿಸುತ್ತಿದ್ದುವು.

80. ಆ ನಗರದಲ್ಲಿ ನಾಯಕನಿಲ್ಲದ ರುದ್ರಕನ್ನಿಕೆಯರ ಮನೆಗಳಲ್ಲಿ ಒಂದು, ಈಶ್ವರನ ಎಡಭಾಗದಲ್ಲಿರತಕ್ಕ ಉಮಾದೇವಿಯ ದಾಸಿಯರಲ್ಲಿ ಒಬ್ಬಳಾದ ಕಮಲಿನಿ ಎಂಬವಳು 'ಪರವೆಯಾರ್' ಎಂಬ ಹೆಸರಿನಿಂದ ಅವತರಿಸಿದ, ಸಂಪದ್ಯುಕ್ತವಾದ ಮನೆ ಯಾದುದರಿಂದ, ಆ ತಿರುವಾರೂರಿನ ಹಿರಿಮೆಯನ್ನು ಎಷ್ಟೆಂದು ಬಣ್ಣಿಸಲಿ ?

81. ಪಸರಿಸಿದ ಬಹುವಾದ ಕಾಂತಿಯಿಂದ ಕೂಡಿ, ಅನೇಕ ಮಣಿಗಳಿಂದಲಂ ಕೃತವಾದ ಆ ನಗರದ ಬೀದಿಗಳಲ್ಲಿ ಒಂದು, ನಂಬಿಯಾರೂರರಿಗೋಸ್ಕರ ದೂತನಾಗಿ ಪರವೆಯರಲ್ಲಿ ಹೋದ ಶಿವನ (ತ್ಯಾಗೇಶನ) ಪಾದಪದ್ಮಗಳಿಂದ ಅಲಂಕೃತವಾದ ಬೀದಿ. ಈ ಶಿವನ ಅಡಿಯನ್ನು ಮುಡಿಯನ್ನು ಕಂಡುಹಿಡಿಯಲೆಂದು ವರಾಹಾವತಾರವನ್ನು ತಾಳಿದ ವಿಷ್ಣುವು ಭೂಮಿಯಡಿಯೂ, ಹಂಸವಾಹನನಾದ ಬ್ರಹ್ಮನು ಆಗಸದ ಮೇಲೂ ಹೋಗಿ ಪ್ರಯತ್ನಿಸಿದರು.

---

78. ಪಲ್ಲಿ ಯಙ್ಗಳ್ ಪರನ್ತ ಒಲಿಯುಟನ್
ಚೆಲ್ವ ವೀತಿ ಚ್ಚೆಟುಮಣಿ ತ್ತೇರೊಲಿ
ಮಲ್ಲಲ್ ಯಾನೈ ಒಲಿಯುಟನ್ ಮಾವೊಲಿ
ಎಲ್ಲೈ ಇನ್‌ಱಿ ಎಟುನ್ತುಳ ಎಙ್ಗಣುಮ್.

79. ಮಾಟ ಮಾಳಿಕೈ ಚೂಳಿಕೈ ಮಣ್ಟಪಮ್
ಕೂಟ ಚಾಲೈಕಳ್ ಕೋಪುರಮ್ ತೆಱ್ಱಿಕಳ್
ನೀಟು ಚಾಳರ ನೀಟರ ಙ್ಗೆಙ್ಗಣುಮ್
ಆಟಲ್ ಮಾತರ್ ಅಣಿಚಿಲ ಮ್ಬಾರ್ಪ್ಪನ.

80. ಅಙ್ಗು ರೈಕ್ಕೈನ್ ನಳವ ಪ್ಪತಿಯಿಲಾರ್
ತಙ್ಗಳ್ ಮಾಳಿಕೈ ಯಿನ್‌ನೊನ್‌ಱು ಚಮ್ಪುವಿನ್
ಪಙ್ಗಿ ನಾಳ್‌ತಿರು ಚ್ಚೇಟಿ ಪರವೈಯಾಮ್
ಮಙ್ಗೈಯ್ಯ ಯಾರ್‌ಅವ ತಾರಙ್ಚೆಯ್ ಮಾಳಿಕೈ.

81. ಪಟರ್‌ನ್ತ ಪೇರೊಳಿ ಪ್ಪನ್‌ಮಣಿ ವೀತಿಪಾರ್
ಇಟನ್ತ ಏನಮುಮ್ ಅನ್‌ನಮುಮ್ ತೇಟುವಾರ್
ತೊಟರ್‌ನ್ತು ಕೊಣ್ಟವನ್ ತೊಣ್ಟರ್‌ಕ್ಕು ತ್ತೂತುಪೋಯ್
ನಟನ್ತ ಚೆನ್ತಾ ಮರೈಯಟಿ ನಾಱುಮಾಲ್.

82. ಕೆಂಪಗಾದ ಕಣ್ಣುಗಳುಳ್ಳ ಸ್ತ್ರೀಯರಿರುವ ಬೀದಿಯಲ್ಲಿ ಬೀಸಿದ ಕುಂಕುಮದ ಹನಿಗಳು ಆ ಸ್ತ್ರೀಯರ ಕೂದಲಲ್ಲಿ ಮುಡಿಯಲ್ಪಟ್ಟ ಪುಷ್ಪಗಳ ಪರಾಗಸಂಪರ್ಕವನ್ನು ಹೊಂದಿ ಒಡನೆ ಒಂದರೊಡನೊಂದು ಸೇರಿಕೊಳ್ಳುವುದು. ಹೀಗೆ ಆ ಕುಂಕುಮದ ಹನಿಗಳು ಕಾಯಿಗಳಾಗುವುವು.

83. ಆ ನಗರದಲ್ಲಿ ಶಿವನ ಭಕ್ತಿಸ್ತೋತ್ರಗಳನ್ನು ಓದಿ ಮನಕರಗದವರು ಯಾರು ತಾನೇ ಇದ್ದಾರೆ? ಸಣ್ಣಪುಟ್ಟ ಗಿಳಿಗಳು ಮಂಜುಲವಾದ ಶಬ್ದದಲ್ಲಿ ವೃಷಭವನ್ನು ವಾಹನವಾಗುಳ್ಳ ತ್ಯಾಗೇಶರಿರುವ ತಿರುವಾರೂರಿನ ಬೀದಿಗಳ ಪಕ್ಕಗಳಲ್ಲೆಲ್ಲ ಮಂಜುಲವಾದ ತಿರುಪ್ಪದಿಕ (ಸ್ತೋತ್ರದಶಕ) ಗಳನ್ನು ಹಾಡುವಾಗ ಇತರ ಹಕ್ಕಿಗಳು ಕೇಳುತ್ತಿರುತ್ತವೆ.

84. ಬಹುವಾಗಿ ಪ್ರಕಾಶಿಸುವ ಆಭರಣಗಳು ದಟ್ಟವಾಗಿರುವುದರಿಂದಲೂ, ಎಡೆ ಬಿಡದ ಹೆಚ್ಚಾದ ಶಬ್ದದಿಂದಲೂ, ಹಲಬಗೆಯ ವಸ್ತುವಿಶೇಷಗಳು ತನ್ನಲ್ಲಿ ಸಾಂದ್ರ ವಾಗಿರುವುದರಿಂದಲೂ, ಆ ಅಂಗಡಿ ಬೀದಿಗಳು ಕಡಲಿಗೆ ಸಮಾನವಾಗಿರುತ್ತಿದ್ದುವು.

85. ಬೀದಿಗಳಲ್ಲಿ ವೇದಘೋಷಗಳು ಮಾತ್ರವಲ್ಲದೆ ಆನೆಗಳು ಪ್ರತಿಯಾಗಿ ಘೀಂಕಾರ ಮಾಡುತ್ತಿದ್ದುವು. ಮಹಿಮಾನ್ವಿತರೂ ಸುಂದರರೂ ಆದ ದೇವತೆಗಳಲ್ಲಿ ಮಾತ್ರವಲ್ಲದೆ ತೋರಣಗಳಲ್ಲಿಯೂ ಪೂಮಾಲೆಗಳು ಸುತ್ತಿರುವುವು.

---

82. ಚೆಙ್ಕಣ್ ಮಾತರ್ ತೆರುವಿಲ್ ತೆಳಿತ್ತಚೆ
ಙ್ಕುಙ್ಕು ಮತ್ತಿನ್ ಕುಟಮ್ಪ್ರ ಅವರ್ಕುಟಲ್
ಪೊಙ್ಕು ಕೋತ್ತೈಯಿಟ್ ಪೂನ್ತುಕಳ್ ವೀಟ್ನ್ತುಟನ್
ಅಙ್ಕಣ್ ಮೇವಿ ಅಟಙು ಪುಲರ್ತ್ತುಮಾಲ್.

83. ಉಳ್ಳಮ್ ಆರ್ಉರು ಕಾತವರ್ ಊರ್ವಿಟ್ಟೈ
ವಳ್ಳ ಲಾರ್ತಿರು ವಾರೂರ್ ಮರುಙ್ಕಿಲಾಮ್
ತೆಳ್ಳುಮ್ ಓಚ್ಚೈ ತ್ತಿರುಪ್ಪತಿ ಕಙ್ಕಳ್ಪೈ
ಙ್ಕಿಳ್ಳೈ ಪಾಟುವ ಕೇಟ್ಪನ ಪೂವೈಕಳ್.

84. ವಿಳಕ್ಕಮ್ ಮಿಕ್ಕ ಕಲನ್ಕಳ್ ವಿರವಲಾಲ್
ತುನಕ್ಕಿಲ್ ಪೇರೊಲಿ ಯಾಲ್ತುನ್ನು ಪಣ್ಟಙ್ಕಳ್
ವಳತ್ತೊಟುಮ್ಪಲ ವಾಙು ಮಟುತ್ತಲಾಲ್
ಅಳಕ್ಕರ್ ಪೋನ್ಙನ ಆವಣ ವೀತಿಕಳ್.

85. ಆರ ಣಙ್ಕಳೇ ಅಲ್ಲ ಮಙುಕಿಟ್ಟೈ
ವಾರ ಣಙ್ಕಳುಮ್ ಮಾಟಿ ಮುಟಙ್ಕುಮಾಲ್
ಚೀರ ಣಙ್ಕಿಯ ತೇವರ್ಕ ಳೇಯಲಾಲ್
ತೋರ ಣಙ್ಕಳಿನ್ ತಾಮಟ ಙ್ಟುಮಾಲ್.

86. ನಿಡಿದಾದ ಜಡೆಗಳಿಂದ ಕೂಡಿದ ಶಿವತಪಸಿಗಳೂ, ಆಶಿಸತಕ್ಕ ತುಂಬು ಜೀವನದ ಗೃಹಸ್ಥಾಶ್ರಮದಲ್ಲಿರತಕ್ಕವರೂ, ಸಂತೋಷದ ಬಾಳ್ವೆಯನ್ನು ನಡೆಸುವವರೂ, ಮುನಿಗಳೂ ವೇದಜ್ಞರೂ ಆದ ಬ್ರಾಹ್ಮಣರು, ಆ ನಗರದ ಬೇರೆ ಬೇರೆ ಎಡೆಗಳಲ್ಲಿ ವಾಸಿಸುತ್ತಿದ್ದರು.

87. ಭೂದೇವಿಯ ಸುಂದರವಾದ ವಿಶಾಲ ನೊಸಲಿನಲ್ಲೊಪ್ಪುವ ತಿಲಕದಂತಿತ್ತು ಚೋಳರು ಆಳಿಕೊಂಡು ಬಂದ ಆ ನಾಡು. ಅಲ್ಲಿ ಲಕ್ಷ್ಮಿಯ ಆವಾಸವಾದ ತಾವರೆಯಂತೆ ಪ್ರಕಾಶಿಸಿ ಬಹುವಾದ ಮಹಿಮೆಯನ್ನು ಹೊಂದಿ ಶೋಭಿಸುತ್ತಿತ್ತು ತಿರುವಾರೂರೆಂಬ ನಗರ.

88. ಅಂತಹ ಹಿರಮೆಯ ಪುರಾತನ ನಗರದ ಅರಸನು ಯಾರೆಂದರೆ, ಸಹಸ್ರ ಕಿರಣಗಳುಳ್ಳ ಸೂರ್ಯವಂಶೀಯನೆಂದು ಪ್ರಸಿದ್ಧಿಗೊಂಡ ಅನಪಾಯ ಚೋಳನ ವಂಶಕ್ಕೆ ಆದಿಯವನಾಗಿ ಶೋಭಿಸತಕ್ಕ ವಿಶೇಷವಾದ ರತ್ನಾಭರಣಗಳಿಂದ ಅಲಂಕೃತನಾದ ಮನು ಎಂಬ ಹೆಸರಿನ ದೊರೆ.

89. ಆ ಅರಸನು ಲೋಕದಲ್ಲಿ ಬಾಳುವ ಎಲ್ಲಾ ಜೀವಿಗಳನ್ನೂ ಕಣ್ಣಿನಂತೆ ಉಸಿರಿನಂತೆ ರಕ್ಷಿಸುತ್ತಿದ್ದನು. ದೇವತೆಗಳು ಸಂತೋಷಿಸುವಂತೆ ಅಗಣಿತವಾದ ಯಾಗ ಗಳನ್ನು ಮಾಡಿದನು.

---

86. ತಾಟ್ನ್ರ ವೇಣಿಯರ್ ಚೈವರ್ ತಪೋತನರ್
ವಾಟ್ನ್ರ ಚಿನ್ರೈ ಮುನಿವರ್ ಮಱೈಯವರ್
ವೀಟ್ನ್ರ ಇನ್ಪ ತ್ತುಱೈಯುಳ್ ವಿರವುವಾರ್
ಚೂಟ್ನ್ರ ಪಲ್ವೇಱಿಟತ್ತತ ತ್ತೊಲ್ನಕರ್.

87. ನಿಲಮ ಕಟ್ಕೊರು ಕಾರ್ತಿರು ನೀಳ್ನುತಲ್
ತಿಲಕಮ್ ಒಪ್ಪತು ಚೆಮ್ಪಿಯರ್ ವಾಟ್ಪತಿ
ಮಲರ್ಮ ಕಟ್ಕುವಣ್ ತಾಮರೈ ಪೋಲ್ಮಲರ್ತ್ತು
ಅಲಕಿಲ್ ಚೀರ್ತ್ತಿರು ವಾರೂರ್ ವಿಳಙ್ಕುಮಾಲ್.

88. ಅನ್ನ ತೊಲ್ನಕ ರುಕ್ಕರ ಚಾಯಿನಾನ್
ನುನ್ನು ಚೆಙ್ಕತಿ ರೋನ್ವಟಿ ತ್ತೋನ್ಱಿನಾನ್
ಮನ್ನು ಚೀರ್ಅನ ಪಾಯನ್ ವಟಿಮುತಲ್
ಮಿನ್ನುಮ್ ಮಾಮಣಿ ಪ್ಪೂಣ್ಮನು ವೇನ್ರನೇ.

89. ಮಣ್ಣಿಲ್ ವಾೞ್ತರು ಮನ್ನುಯಿರ್ ಕಟ್ಕೆಲಾಮ್
ಕಣ್ಣುಮ್ ಆವಿಯುಮ್ ಆಮ್ಪೆರು ಙ್ಕಾವಲಾನ್
ವಿಣ್ಣು ಳಾರ್ಮಕಿೞ್ ವೆಯ್ತಿಟ ವೇಳ್ವಿಕಳ್
ಎಣ್ಣಿ ಲಾತನ ಮಾಣ ಇಯಱ್ಱಿನಾನ್.

೯೦. ಜಯಪ್ರದವಾದ ತನ್ನ ಆಜ್ಞಾಚಕ್ರವು ಲೋಕವನ್ನು ವ್ಯಾಪಿಸಿ ನಿಂತಿತ್ತು. ಅದರಿಂದ ನಿಯಂತ್ರಿತರಾದ ಅರಸರು ಕಳುಹಿಸಿದ ಕಪ್ಪ ಕಾಣಿಕೆ ವಸ್ತುಗಳು ತನ್ನ ಅರಮನೆಯ ಬಾಗಿಲಲ್ಲಿಯೇ ಸುತ್ತುವರಿದುಕೊಂಡಿದ್ದುವು. ತಾನು ಕೋಪವನ್ನು ನೀಗಿದ ಉತ್ತಮ ಸ್ವಭಾವದಿಂದಲಾಗಿ ಸತ್ಯವೇ ಮೈದೋರಿ ಬಂದ ಆದಿ ಮನುಚಕ್ರವರ್ತಿಯು ಪಡೆದ ಮನುನೀತಿ ಎಂಬುದನ್ನು ಆತನು ತನ್ನ ಹೆಸರಿನಲ್ಲಿ ಸೇರಿದ್ದಾಗಿ ಮಾಡಿಕೊಂಡನು. ಹೀಗೆ ಮನುನೀತಿ ಚೋಳನು ಎಂಬ ಸಕಾರಣವಾದ ಹೆಸರನ್ನೇ ತನ್ನ ಸಹಜವಾದ ಹೆಸರಾಗಿ ಪಡೆದನು.

೯೧. ಆ ಅರಸನು, ಪ್ರಕಾಶಿಸುವ ಮಹಾವೇದಸ್ವರೂಪರೂ, ಹುತ್ತೇ ವಾಸವಾಗಿ ಉಳ್ಳವರೂ, ಸರ್ವವ್ಯಾಪಿಯೂ ಆಗಿರತಕ್ಕ ವಲ್ಮೀಕಿನಾಥರ ಪೂಜೆಗೆ ಆ ಎಡೆಯಲ್ಲಿ ಬೇಕಾದ ವಿಧಿವಿಧಾನಗಳನ್ನು ಸರಿಯಾಗಿ ತಿಳಿದವನು. ಶ್ರೇಷ್ಠವಾದ 'ಕಾಮಿಕ' ಮೊದಲಾದ ಆಗಮಶಾಸ್ತ್ರಗಳು ವಿಧಿಸಿದ ವಿಧಿಗಳು ತಪ್ಪದಂತೆ ನೋಡಿಕೊಳ್ಳುವುದರಲ್ಲಿ ನಿಷ್ಣಾತನು.

೯೨. ನ್ಯಾಯನೀತಿಗಳೆಂದು ಹೇಳಲಾದ ಧರ್ಮಶಾಸ್ತ್ರ ವಿಧಿಯಲ್ಲಿ ಜನರು ನಡೆಯುವಂತೆ ವಿಧಿಸಿ, ವೈರಿಗಳನ್ನು ನಾಶಮಾಡಿ ರಾಜರುಗಳು ತನ್ನನ್ನು ಹೊಗಳುವಂತೆ ಲೋಕವನ್ನು ರಕ್ಷಿಸುವ ಆ ಕಾಲದಲ್ಲಿ ವಿಶೇಷವಾದ ತಪಸ್ಸಿನ ಕಾರಣದಿಂದ ಲೋಕವು ಸ್ತುತಿಸುವಂತೆ ತನ್ನ ರಾಣಿಯು ಪವಿತ್ರವಾದ ಉದರದಲ್ಲಿ ದೊಡ್ಡ ಸಿಂಹದ ಮರಿಗೆ ಸಮಾನನಾದ ಒಬ್ಬ ಪುತ್ರನನ್ನು ಆ ರಾಜನು ಪಡೆದನು.

---

೯೦. ಕೊಱ್ಱ ಆಟಿ ಕುವಲಯ ಇಱ್ಱುಟ್ಟ್ನಿನ್ಱ
ಚ್ಚುಱ್ಱು ಮನ್ನರ್ ತಿಱೈಕಟೈ ಚೂೞ್ನಿನ್ಱ
ಚ್ಚೆಱ್ಱವ್ ನೀಙ್ಕಿಯ ಚೆಮ್ಮೈಯಿನ್ ಮೆಯ್‌ಮ್ಮನು
ಪ್ಪೆಱ್ಱ ನೀತಿಯು ನ್ತನ್‌ಪೆಯರ್ ಆಕ್ಕಿನಾನ್.

೯೧. ಪೊಙ್ಕು ಮಾಮಱೈ ಪ್ಪುಱ್ಱಿಟ ಙ್ಕೊಣ್ಟವರ್
ಎಙ್ಕುಮ್ ಆಕಿ ಇರುನ್ತವರ್ ಪೂಚನೈಕ್ಕು
ಅಙ್ಕಣ್ ವೇಣ್ಟುಮ್ ನಿಪನ್ತಮಾ ರಾಯ್‌ನ್ತುಳಾನ್
ತುಙ್ಕ ಆಗಮಮ್ ಚೊನ್ನ ಮುಱೈಮೈಯಾಲ್.

೯೨. ಅಱಮ್ಪೊರು ಳಿನ್ಪ ಮಾನ ಅಱನೆಱಿ ವೞಾಮಱ್ ಪುಲ್ಲಿ
ಮಱಙ್ಕಟಿ ನ್ತರಚರ್ ಪೋಱ್ಱ ವೈಯಕಮ್ ಕಾಕ್ಕುಮ್ ನಾಳಿಲ್
ಚಿರನ್ತನಲ್ ತವತ್ತಾಲ್ ತೇವಿ ತಿರುಮಣಿ ವಯಿಱ್ಱಿನ್ ಮೈನ್ತನ್
ಪಿಱನ್ತನನ್ ಉಲಕಮ್ ಪೋಱ್ಱ ಪ್ಪೇರ್‌ಅರಿ ಕ್ಕುರುಳೈ ಅನ್ನಾನ್.

93. ಆ ಮನುಚೋಳನು ತಪಸ್ಸನ್ನು ಮಾಡಿ ಅಕ್ಕರೆಯಿಂದ ಪಡೆದ ಯೋಗ್ಯನಾದ ಆ ರಾಜಕುಮಾರನು ಪ್ರತಿದಿನವೂ ಹಿತವನ್ನು ಪ್ರಯತ್ನಿಸಿ ಸಂಪಾದಿಸುವುದಕ್ಕೆ ಕಾರಣವಾದ ಧರ್ಮಶಾಸ್ತ್ರ ಗ್ರಂಥಗಳನ್ನು ಕೂಲಂಕಷವಾಗಿ ಓದಿ, ಕುದುರೆ ಸವಾರಿ, ಆನೆ ಸವಾರಿ, ರಥಾರೋಹ, ಯುದ್ಧಾಭ್ಯಾಸ, ಇವೇ ಮೊದಲಾದುವುಗಳನ್ನು ಕಲಿತುಕೊಂಡು, ಮನುಷ್ಯದೇಹವನ್ನು ಪಡೆದುದಕ್ಕೆ ದೊಡ್ಡ ಫಲವಿದು ಎಂದೆಲ್ಲರೂ ಹೇಳುವಂತೆ ಒಳ್ಳೆಯ ಗುಣಗಳಲ್ಲಿ ಮೇಲ್ಪಟ್ಟವನಾಗಿದ್ದನು.

94. ಪುರಾತನವಾದ ವೇದವೇದಾಂಗ ಮೊದಲಾದ ಅಗಣಿತ ಶಾಸ್ತ್ರಗಳನ್ನು ಓದಿ ಮುಗಿಸಿ, ಶ್ರೇಷ್ಠನೂ ಧರ್ಮಾತ್ಮನೂ ಆದ ತಂದೆಯ ಮನಸ್ಸಿನ ಸಂತೋಷ ಕಾರಣನೂ, ಉತ್ತಮ ಸದ್ಗುಣಗಳಲ್ಲಿ ಹಿರಿಮೆ ಹೊಂದಿದವನೂ ಆದ ರಾಜಕುಮಾರನೆಂಬ ಹೆಗ್ಗಳಿಕೆಯನ್ನು ಗಳಿಸುವವನಾಗಿ ಉದಯಿಸುವ ಸೂರ್ಯನಿಗೆ ಸಮನಾಗಿ ಇರುವಂತಹ ಕಾಲದಲ್ಲಿ, ಒಂದು ದಿನ ಆ ಕುಮಾರನು,

95. ಚಂದ್ರನಂತೆ ಬಿಳುಪಾದ ಬೆಳ್ಗೊಡೆಯಿಂದ ಕೂಡಿದ ಮನುನೀತಿ ಕುಮಾರನು ಸುಂದರವಾದ ದೇವಾಲಯದಿಂದ ಹೊರಟು ಮೇಘಮಂಡಲಕ್ಕೆ ಸಮಾನವಾದ ಮಂಟಪಗಳಿರುವ ಬೀದಿಯ ಮಾರ್ಗವಾಗಿ ಅನೇಕ ರಾಜಕುಮಾರರು ತನ್ನನ್ನು ಸುತ್ತಿಬರಲು, ಪರಿಮಳವು ಹೊಮ್ಮುತ್ತಿರುವ ಮಲರಮಾಲೆಗಳನ್ನು ಎದೆಯಲ್ಲಿ ಅಲಂಕರಿಸಿಕೊಂಡು, ಕುಂಕುಮ ಚಂದನಗಳನ್ನು ಲೇಪಿಸಿಕೊಂಡು ಮಿಕ್ಕ ಸೇನೆಗಳು ತನ್ನ ಸುತ್ತಲಿಂದ ಬರಲು ರಥದ ಮೇಲೇರಿ ಬರುತ್ತಿದ್ದನು.

---

93. ತವಮುಯನ್ ಱಿರಿತಿಲ್ ಪೆಱ್ಱ ತನಿಇಟ ಱ್ಱುಮರನ್ ನಾಳುಱ್
ಚಿವಮುಯನ್ ಱಟ್ಟೈಯು ನ್ಱೆಯ್ಯ್ ಕ್ಕಲೈಪಲ ತಿರುನ್ತ ಓತಿ
ಕ್ಕವನವಾವ್ ಪುರವಿ ಯಾನೈ ತೇರ್‌ಪಟ್ಟೈ ತ್ತೊಟಿಲ್‌ಕಳ್ ಕಱ್ಱು
ಪ್ಪವಮುಯನ್ ಱತುವುಮ್ ಪೇಱೇ ಎನವರುಮ್ ಪಣ್ಪಿನ್ ಮಿಕ್ಕಾನ್.

94. ಅಳವಿಲ್‌ತೊಲ್ ಕಲೈಕಳ್ ಮುಱ್ಱಿ ಅರುಮ್ಪೆಱಲ್ ತನ್ತೈ ಮಿಕ್ಕ
ಉಳಮಕಿಟ್ ಕಾತಲ್ ಕೂರ ಓಙ್ಕಿಯ ಕುಣತ್ತಾಲ್ ನೀಟಿ
ಇಳವರ ಚಿನ್‌ನು ನ್ತನ್‌ಮೈ ಎಯ್‌ತ್ತುತಱ್ ಕಣಿಯ ನಾಕಿ
ವಳರಿಳಮ್ ಪರಿತಿ ಪೋನ್‌ಱು ವಾಟುನಾಳ್ ಒರುನಾಳ್ ಮೈನ್ತನ್.

95. ತಿಙ್ಕಳ್‌ವೆಣ್ ಕವಿಕೈ ಮನ್‌ನನ್ ತಿರುವಳರ್ ಕೋಯಿಲ್ ನಿನ್‌ಱು
ಮಙ್ಕುಲ್‌ತೋಯ್ ಮಾಟವೀತಿ ಮನ್‌ನಿನ ಱ್ಱುಮರರ್ ಚೂಟಿ
ಕ್ಕೊಙ್ಕಲರ್ ಮಾಲೈ ತಾಟ್‌ನ್ತ ಕುಙ್ಕುಮ ಱ್ಱುಲವು ತೋಟಾನ್
ಪೊಙ್ಕಿಯ ತಾನೈ ಚೂಟ ತ್ತೇರ್‌ಮಿಚೈ ಪೊಲಿನ್ತು ಪೋನಾನ್.

೯೬. ಸ್ತುತಿಸುವ ವಂದಿಗಳು ಮುಂದೆ ಹೋಗುತ್ತಿರಲು, ಸೂತಮಾಗಧರು ಒಂದು ಪಕ್ಕದಲ್ಲಿ ಬರುತ್ತಿರಲು, ಬಿಳಿ ಬಳೆಗಳು ಕಳಚಿ ಕೆಳೆಗೆ ಬಿದ್ದ ಪರಿಮಳದ ಜಡೆಮುಡಿಗಳಿಂದ ಕೂಡಿದ ನಾರಿಯರು ಇನ್ನೊಂದು ಪಕ್ಕದಲ್ಲಿ ಇರುತ್ತಿರಲು, ಮುರಜ ಧ್ವನಿಯೊಡನೆ ಶಂಖನಿನಾದವೂ ಸೇರಲು, ಆ ಘೋಷವು ಒಂದೆಡೆಯಲ್ಲಿ ಮೀರಿ ಬರುತ್ತಿರಲು, ವಿಜಯಿಗಳಾದ ಅರಸುಕುಮಾರರು ನಡೆಯುತ್ತಿರಲಾಗಿ ಆ ಮಾಡವೀದಿಯು (ದೇಗುಲಕ್ಕೆ ಸೇರಿದ ಬೀದಿಯು) ಪ್ರಶಸ್ತವಾಗಿ ತೋರುತ್ತಿತ್ತು.

೯೭. ಚತುರಂಗ ಬಲದಿಂದ ಕೂಡಿದ ಮನುನೀತಿ ಚೋಳನ ನಿಶ್ಚಲವಾದ ಮನಸ್ಸನ್ನೂ ನಿಷ್ಪಕ್ಷಪಾತ ದೃಷ್ಟಿಯನ್ನೂ ಶೋಧಿಸಲು ಬಂದಂತೆ, ಅಪೂರ್ವವಾದ ಹಿರಿಮೆಯಿಂದ ಶೋಭಿಸುವ ಧರ್ಮದೇವತೆಯು, ಜನರಿಗೆ ತನ್ನ ರೂಪು ತಿಳಿಯದಂತೆ ಆಗ ತಾನೇ ಜನನಕ್ಕೆ ಬಂದ ಸುಂದರವಾದ ಒಂದು ಕರುವಿನ ರೂಪವನ್ನು ತಾಳಿತು. ಆ ಕರುವು ಹಾರುತ್ತ, ಓಡುತ್ತ ಆ ಬೀದಿಗೆ ಬಂತು.

೯೮. ಸುಂದರವಾದ ಆ ಕರುವು ಬೀದಿಯಲ್ಲಿ ಓಡಿ ಜೆಂಬೊನ್ನಿನ ರಥದ ಚಕ್ರದಡಿಗೆ ಬಿದ್ದು ಮೃತವಾಯಿತು. ಇದನ್ನು ನೋಡಿ ಮನೋವೇದನೆಗೆ ಗುರಿಯಾದ ತಾಯಿ ಹಸುವು ದಿಗ್ಭ್ರಮೆಗೊಂಡೋಡುತ್ತ ಕರುಣಾಪೂರಿತವಾಗಿ ಕೂಗುತ್ತ ದುಃಖಿಸುತ್ತಿತ್ತು. ಮೈ ನಡುಗುತ್ತಿರಲು ನೆಲದಲ್ಲಿ ಬೀಳುತ್ತಿತ್ತು. ಹೊರಳಾಡುತ್ತಿತ್ತು.

---

೯೬. ಪರಚುವ ನ್ರಿಯರ್ಮುನ್ ಚೂತರ್ ಮಾಕತರ್ ಒರುಪಾಲ್ ಪಾಙ್ಕರ್
ವಿರೈನಱು ಙ್ಕುಟಿಲಾರ್ ಚಿನ್ತುಮ್ ವೆಳ್ವಳೈ ಒರುಪಾಲ್ ಮಿಕ್ಕ
ಮುರಚೊಟು ಚಙ್ಕಮ್ ಆರ್ಪ್ಪ ಮುಟಙ್ಕೊಲಿ ಒರುಪಾಲ್ ವೆನ್ಱಿ
ಅರಚಿಳ ಙ್ಕುಮರನ್ ಪೋತುಮ್ ಅಣಿಮಣಿ ಮಾಟ ವೀತಿ.

೯೭. ತನಿಪ್ಪೆರು ನ್ತರುಮಮ್ ತಾನೋ! ತಯಾಇನ್ಱಿ ತ್ತಾನೈ ಮುನ್ನನ್
ಪನಿಪ್ಪಿಲ್ಚಿ ನ್ತೈಯಿನಿಲ್ ಉಣ್ಮೈ ಪ್ಪಾನ್ಮೈ ಚೋತಿತ್ತಾಲ್ ಎನ್ನ
ಮನಿತ್ತರ್ತನ್ ವರವು ಕಾಣಾ ವಣ್ಣಮೋರ್ ವಣ್ಣಮ್ ನಲ್ಆನ್
ಪುನಿಱ್ಱಿಳ ಙ್ಕನ್ಱು ತುಳ್ಳಿ ಪ್ಪೋನ್ತತ ಮ್ಮರುಙ್ಕಿ ನೂಟೇ

೯೮. ಅಮ್ಪೊನಿ ಱ್ಱಾವಿನ್ ಕನ್ಱಿಕೋರ್ ಅಪಾಯತ್ತಿನ್ ಊಟು ಪೋಕಿ
ಚ್ಚೆಮ್ಪೊನಿನ್ ತೇರ್ಕ್ಕಾಲ್ ಮಿಾತು ವಿಜ್ಞೈಯಿನಾಲ್ ಚೆಲ್ಲ ಪ್ಪಟ್ಟೇ
ಉಮ್ಪರಿನ್ ಅಟೈಯ ಕ್ಕಣ್ಟು ಙ್ಕರುಕತಾಯ್ ಅಲಮ ನ್ತೋಟಿ
ವೆಮ್ಪಿಟುಮ್ ಅಲಱುಮ್ ಚೋರುಮ್ ಮೆಯ್ನ್ನಟು ಕ್ಕುಱ್ಱು ವೀಟುಮ್.

99. ಗೋವಿನ ದುಃಖವನ್ನು ನೋಡಿ ಆ ಮನುಕುಮಾರನು 'ಈ ಎಡೆಯಲ್ಲಿ ಅಪಾಯವು ಒದಗಿಬಿಟ್ಟಿತಲ್ಲವೇ' ಎಂದು ಮಾತು ತಡವಲು, ಹೃದಯದಲ್ಲಿ ದುಃಖವು ತುಂಬಿಕೊಳ್ಳಲು, ಅರಿವು ಕೆಟ್ಟು 'ಈ ಕರುವು ನನ್ನ ಜೀವನದ ಹಿರಿಮೆಯು ಇಂದು ಕೆಟ್ಟು ಹೋಗುವಂತೆ ಮಾಡಿತು. ಇನ್ನೇನು ಮಾಡಲಿ ?' ಎಂದು ತೇರಿನಿಂದಿಳಿದು ನೆಲದಲ್ಲಿ ಬಿದ್ದುಬಿಟ್ಟನು.

100. ದುಃಖದಿಂದ ಕೂಗುವ ಆ ಗೋವನ್ನು ನೋಡಿ ತನ್ನ ಜೀವವು ಮಿಡಿಯಲು ದುಃಖಪಡುವನು. ನೆಲದಲ್ಲಿ ಸತ್ತು ಬಿದ್ದಿದ್ದ ಕರುವನ್ನು ನೋಡಿ ನಿಟ್ಟುಸಿರಿಟ್ಟು ದುಃಖಿಸುವನು. 'ವಿಶಾಲವಾದ ಭೂಭಾಗವನ್ನು ರಕ್ಷಿಸುವ 'ಮನು' ಹೆಂಬ ಹೆಸರಿನ ನನ್ನ ತಂದೆಗೆ ಲೋಕದಲ್ಲಿ ಇಂತಹ ಅಪವಾದವು ಬರಲು ನಾನೊಬ್ಬನು ಹುಟ್ಟಿದಂತಾಯಿತು' ಎನ್ನುವನು.

101. ತಿಳಿಯದೆ ತಂದುಕೊಂಡ ಈ ಪಾಪವನ್ನು ಹೋಗಲಾಡಿಸಲು, ವೇದ ಶಾಸ್ತ್ರಜ್ಞರಾದ ವಿಪ್ರರು ನಿಯಮಿಸಿದ ನೀತಿಯಂತೆ ನಡೆಯುವುದು ಧರ್ಮವಾಗಿತ್ತು. ಅಂತೆಯೇ ತನ್ನ ತಂದೆಯಾದ ಮನುನೀತಿ ಚೋಳನು, ಈ ವರ್ತಮಾನವನ್ನು ತಿಳಿಯದಿರುವಾಗಲೇ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆನೆಂದು ಆ ಮನುಕುಮಾರನು ತನ್ನ ಮನಸ್ಸಿನಲ್ಲಿರುವ ಹೆಚ್ಚಿನ ದುಃಖವನ್ನು ಕಳೆದುಕೊಳ್ಳಲು ವೇದಜ್ಞರಾದ ವಿಪ್ರರಲ್ಲಿಗೆ ಹೋದನು.

---

99. ಮಱಿತ್ತು ಕಣ್ಣುಱ್ಱ ಮೈನ್ದನ್ 'ವನ್ದತಿ ಪ್ಪಾಯಮ್' ಎನ್ಱು
ಚೊಱಿಟು ಮಾಱಿ ನೆಞ್ಚಿಲ್ ತುಯರುಱ ನ್ದುಱವ ಱಿನ್ದು
'ಪೆಱಿಮು ಱ್ಕನ್ಱುಮ್ ಇನ್ಱಿನ್ ಉಣರ್ವೆನುಮ್ ಪೆರುಮೈ ಮಾಳ
ಚ್ಚೆಱಿ ಎನ್ಚೆಯ್ಕೇನ್' ಎನ್ಱು ತೇರಿನಿನ್ ಱಿೞಿನ್ದು ವೀೞ್ನ್ದಾನ್.

100. ಅಲಱುಪೇರ್ ಆವೈ ನೋಕ್ಕಿ ಆರುಯಿರ್ ಪತೈತ್ತು ಚ್ಚೋರುಮ್
ನಿಲಮಿಚ್ಚೈ ಕ್ಕನ್ಱೈ ನೋಕ್ಕಿ ನೆಟಿತುಯಿರ್ ತ್ತಿರಙ್ಗಿ ನೀಙ್ಗುಮ್
'ಮಲರ್ತಲೈ ಉಲಕ ಙ್ಕಾಕ್ಕುಮ್ ಮನುವೆನುಮ್ ಎನ್ಕೋ ಮಾನುಕ್ಕು
ಉಲಕಿಲ್ಇ ಪ್ಪೞಿವ ನ್ದೆಯ್ದ ಪ್ಪಿಱನ್ದವಾ ಒರುವನ್' ಎನ್ಪಾನ್.

101. 'ವನ್ದಇ ಪ್ಪೞಿಯೈ ಮಾಱ್ಱುಮ್ ವಕೈಯಿನೈ ಮಱೈನೂಲ್ ವಾಯ್ಮೈ
ಅನ್ದಣರ್ ವಿತಿತ್ತ ಆಱ್ಱಾಲ್ ಆಱ್ಱುವ ತಱಮೇ ಆಕಿಲ್
ಎನ್ದೈಈ ತಱಿಯಾ ಮುನ್ನಮ್ ಇಯಱ್ಱುವನ್' ಎನ್ಱು ಮೈನ್ದನ್
ಚಿನ್ದೈವೆ ನ್ದುಯರ ನೀರ್ಪ್ಪಾನ್ ತಿರುಮಱೈ ಯವರ್ಮುನ್ ಚೆನ್ಱಾನ್.

102. ತನ್ನ ಪ್ರಾಣದಂತಿರುವ ಕರುವು ಮೃತಿಹೊಂದಲು ಹಸುವು ಆ ದುಃಖವನ್ನು ಸಹಿಸಲಾರದೆ ಬೆಂಕಿಯನ್ನು ಕಾರುವಂತೆ ನಿಟ್ಟುಸಿರು ಬಿಡುತ್ತ, ಶೋಕದಿಂದ ಕಣ್ಣೀರು ಸುರಿಸುತ್ತ, ಜೀವಕೋಟಿಗಳ ರಕ್ಷಕನಾದ, ಅಧಿಕಾರದಂಡವನ್ನು ಕೈಯಲ್ಲಿ ಹಿಡಿದಿರುವ ಮನುಚೋಳನ ಅರಮನೆಯ ಹೆಬ್ಬಾಗಿಲಿಗೆ ಬಂದು, ಅಲ್ಲಿ ಕಟ್ಟಿದ್ದ ಹೊನ್ನಿನ ಘಂಟೆಯನ್ನು ತನ್ನ ಕೊಂಬಿನಿಂದ ಅಲ್ಲಾಡಿಸಿತು. ಆಗ—

103. ಅಪವಾದವು ಬರುವಂತೆ ಸೂಚಿಸುವ ವಾದ್ಯವಿಶೇಷದ ಧ್ವನಿಯೋ, ಪಾಪವೇ ರೂಪುಗೊಂಡು ಶಬ್ದಿಸುವ ನಿನಾದವೋ, ಮನುವೆಂಬ ಸಂತತಿಯಲ್ಲಿ ಅವತರಿಸಿದ ಮಗನ ಪ್ರಾಣವನ್ನು ಕೊಂಡೊಯ್ಯಲು ಬರುವ ಯಮನ ವಾಹನವಾದ ಮಹಿಷದ ಕುತ್ತಿಗೆಗೆ ಕಟ್ಟಿದ ಘಂಟೆಯ ಶಬ್ದವೋ, ಎಂದು ಮೊದಲಾಗಿ ಕೇಳುವವರು ಅಚ್ಚರಿಪಡುವಂತೆ ತನ್ನ ಹೆಬ್ಬಾಗಿಲಲ್ಲಿ ಇದುವರೆಗೆ ಕೇಳದ ಘಂಟಾನಿನಾದವು ಹೊರಹೊಮ್ಮಿ ಮನುನೀತಿ ಚೋಳನ ಕಿವಿಗೆ ಬಿತ್ತು.

104. ಆ ಶಬ್ದವನ್ನು ಕೇಳಿದ ಮನುನೀತಿ ಚೋಳನು ಸಿಂಹಾಸನದಿಂದ ಇಳಿದು ಅಲ್ಲಿ ಸೇರಲು, ಚಂದವಾದ ಧ್ವಜವಸ್ತ್ರಗಳನ್ನು ಕಟ್ಟಿರುವ ಬಾಗಿಲಿನ, ಕಾವಲುಗಾರರು, ಅರಸನ ಇದಿರು ಬಂದು, "ಇಲ್ಲಿಗೆ ಈ ಹಸುವು ಬಂದು ನಿನ್ನ ಜಯಯುಕ್ತವಾದ ಆಸ್ಥಾನ ಮಂಟಪದ ಬಾಗಿಲಲ್ಲಿ ತೂಗಿಸಿರುವ ವಿಚಾರಣಾ ಘಂಟೆಯನ್ನು ಅಲ್ಲಾಡಿಸಿತು" ಎಂದು ಹೇಳಿದರು.

---

102. ತನ್ನುಯಿರ್ ಕ್ಕನ್ಱು ವೀಯ ತ್ತಳರ್ನ್ದ ಆ ತ್ತರಿಯಾ ತಾಕಿ
ಮುನ್ನೆರು ಪ್ಪುಯಿರ್ತ್ತು ವಿಮ್ಮಿ ಮುಕತ್ತಿನಿಲ್ ಕಣ್ಣೀರ್ ವಾರ
ಮನ್ನುಯಿರ್ ಕಾಕ್ಕು ಞ್ಚೆಙ್ಕೋಲ್ ಮನುವಿನ್ಪೊಱ್ ಕೋಯಿಲ್ ವಾಯಿಲ್
ಪೊನ್ನಣಿ ಮಣಿಯೈ ಚ್ಚೆನ್ಱು ಕೋಟ್ಟಿನಾಲ್ ಪುಟೈತ್ತ ತನ್ಱೇ.

103. ಪಟಿಪ್ಪಱೈ ಮುಟಿಕ್ಕೋ ಆರ್ಕ್ಕುಮ್ ಪಾವತ್ತಿನ್ ಒಲಿಯೋ ವೇನ್ದನ್
ಪಟಿತ್ತಿರು ಮೈನ್ದನ್ ಆವಿ ಕೊಳವರುಮ್ ಮಱಲಿ ಊರ್ತಿ
ಕ್ಕಟುತ್ತಣಿ ಮಣಿಯಿನ್ ಆರ್ಪ್ಪೋ ಎನ್ನತ್ತನ್ ಕಟೈಮುನ್ ಕೇಳಾ
ತ್ತಟಿತ್ತಟುಮ್ ಓಚೈ ಮನ್ನನ್ ಚೆವಿಪ್ಪುಲಮ್ ಪುಕ್ಕ ಪೋತು.

104. ಆಙ್ಕತು ಕೇಟ್ಟ ವೇನ್ದನ್ ಅರಿಯಣೈ ಇೞಿನ್ದು ಪೋನ್ದು
ಪೂಙ್ಕೊಟಿ ವಾಯಿಲ್ ನಣ್ಣ ಕ್ಕಾವಲರ್ ಎತಿರೇ ಪೋಱ್ಱಿ
'ಈಙ್ಕೋರ್ ಪಕವ ನ್ದಾಯ್ತ್ತು, ಇಱೈವ! ನಿನ್ ಕೊಱ್ಱ ವಾಯಿಲ್
ತೂಙ್ಕಿಯ ಮಣಿಯೈ ಕ್ಕೋಟ್ಟಾಲ್ ನುಳಕ್ಕಿಯ' ತೆನ್ಱು ಚೊನ್ನಾರ್.

105. ಅರಸನು ಈ ವಾರ್ತೆಯನ್ನು ಕೇಳಿ, ದುಃಖಿಸುವ ಪಶುವನ್ನು ನೋಡಿ, 'ಏನಿದಕ್ಕೆ ಆಪತ್ತು ಬಂತು?' ಎಂದು ಹೇಳಿ ಮಂತ್ರಿಗಳನ್ನು ಸ್ವಲ್ಪ ಅಸಹನೆಯಿಂದ ನೋಡಿದನು. ಆಗ ಮೊದಲು ನಡೆದ ವಿಷಯಗಳನ್ನು ತಿಳಿದ, ಧರ್ಮಶಾಸ್ತ್ರ ವಿಚಾರಗಳಲ್ಲಿ ಪರಿಣತನಾದ ಹಳೆಯ ನೀತಿಗಳನ್ನು ತಪ್ಪದೆ ಅನುಸರಿಸುವ ಒಬ್ಬ ಮಂತ್ರಿಯು ಅರಸನಿಗೆ ನಮಿಸಿ ಹೀಗೆ ಹೇಳುವನು—

106. "ಅರಸನೇ, ನಿನ್ನ ಮಗನು ಮಣಿಗಳನ್ನು ಕಟ್ಟಿರುವ ದೊಡ್ಡ ರಥವನ್ನು ಏರಿ, ಅಸಂಖ್ಯಾತವಾದ ತೇರುಗಳೂ ಸೇನೆಗಳೂ ತನ್ನನ್ನು ಸುತ್ತಿಬರಲು, ಆ ರಾಜಬೀದಿಯಲ್ಲಿ ಹೋಗುವಾಗ ಒಂದು ಸಣ್ಣ ಕರು ರಥಚಕ್ರದ ಎಡೆಯಲ್ಲಿ ಬಿದ್ದು ಸತ್ತಿತು. ಅದರಿಂದ ದುಃಖಹೊಂದಿದ ಈ ತಾಯಿ ಹಸುವು ಇಲ್ಲಿ ಬಂದು ಮಣಿಯನ್ನು ಅಲ್ಲಾಡಿಸಿತು"

107. ಈ ಮಾತನ್ನು ಕೇಳಿದ ಅರಸನು ಆ ಪಶುವಿನ ದುಃಖವನ್ನು ತಾನೂ ಅನುಭವಿಸಿ, ತೀಕ್ಷ್ಣವಾದ ವಿಷವು ತಲೆಯಲ್ಲಿ ಏರಿದಂತೆ ಮನಸ್ಸಿನಲ್ಲಿ ವೇದನೆಗೊಂಡು, 'ಈ ಪಾಪಕೃತ್ಯವು ಹೀಗೆ ನಡೆದುಹೋಯಿತೇ? ಎಂದು ಕಷ್ಟಪಡುವನು. ಪಶುವಿನಲ್ಲಿ ಕನಿಕರದಿಂದ ದಯೆಯಿಂದ ಮನೋವ್ಯಾಕುಲತೆಯನ್ನು ಹೊಂದುವನು. 'ನನ್ನ ಆಳುವಿಕೆ ತುಂಬಾ ಒಳ್ಳೆಯದು!' ಎನ್ನುವನು. 'ಇದಕ್ಕೆ ಪರಿಹಾರವೇನನ್ನು ಮಾಡಲಿ?' ಎಂದು ನೆನೆದು ಏನೂ ತೋಚದವನಾಗಿ ದುಃಖಪಡುವನು.

---

105. ಮನ್ನವನ್ ಅತನ್ನೈ ಕ್ಕೇಳಾ ವರುನ್ತಿಯ ಪಚುವೈ ನೋಕ್ಕಿ,
'ಎನ್ಇತಱ್ ಕುಱ್ಱ' ತೆನ್ಪಾನ್ ಅಮೈಚ್ಚರೈ ಇಕೞ್ನ್ತು ನೋಕ್ಕ,
ಮುನ್ನುಱ ನಿಕೞ್ನ್ತ ಎಲ್ಲಾಮ್ ಅಱಿನ್ತುಳಾನ್ ಮುತಿರ್ನ್ತ ಕೇಳ್ವಿ,
ತ್ತೊನ್ನೆಱಿ ಅಮೈಚ್ಚನ್ ಮನ್ನನ್ ತಾಳಿಣೈ ತೊೞುತು ಚೊಲ್ವಾನ್.

106. 'ವಳವ! ನಿನ್ ಪುತಲ್ವನ್ ಆಙ್ಕೋರ್ ಮಣಿನೆಟು ನ್ತೇರ್ಮೇಲ್ ಏಱಿ
ಅಳವಿಲ್ತೇರ್ ತ್ತಾನೈ ಚೂೞ ಅರಚುಲಾ ನ್ತೆರುವಿಲ್ ಪೋಙ್ಕಾಲ್
ಇಳೈಯಆನ್ ಕನ್ಱು ತೇರ್ಕ್ಕಾಲ್ ಇಟೈಪ್ಪುಕು ನ್ತಿಱನ್ತು ತಾಕ
ತ್ತಳರ್ವುಱುಮ್ ಇತ್ತಾಯ್ ವನ್ತು ವಿಳೈತ್ತತಿ ತ್ತನ್ಮೈ' ಎನ್ಱಾನ್.

107. ಅವ್ವುರೈ ಕೇಟ್ಟ ವೇನ್ತನ್ ಆವುಱು ತುಯರಮ್ ಎಯ್ತಿ
ವೆವ್ವಿಟ ನ್ತಲೈಕ್ಕೊಣ್ಟಾಱ್ಪೋಲ್ ವೇತನೈ ಅಕತ್ತು ಮಿಕ್ಕಿ
ಚ್ಚೆವ್ವಿನೈ ವಿಳೈನ್ತ ವಾಱಿನ್ ಱಿಟರುಱುಮ್ ಇರಙ್ಕುಮ್ ಏಙ್ಕುಮ್
'ಚೆವ್ವಿತೆನ್ ಚೆಙ್ಕೋಲ್!' ಎನ್ನುಮ್ ತೆರುಮರುಮ್ ತೆಳಿಯುಮ್
ತೇಱಾನ್.

108. ಆತ್ಮವರ್ಗಗಳನ್ನೆಲ್ಲಾ ಕಾದು, ವೈರಿಗಳನ್ನೆಲ್ಲಾ ಜೈಸಿ, ಧರ್ಮದ ದಾರಿಯಲ್ಲಿ ನಡೆಯುತ್ತಿರುವ ತನ್ನ ಅರಸಾಳ್ವಿಕೆಯು ಒಳ್ಳೆಯದಾಗಿತ್ತು! ಎನ್ನುವನು. ಈ ಪಾಪವು ಹೇಗೆ ಪರಿಹಾರವಾದೀತು? ಎನ್ನುವನು. ತನ್ನ ಎಳೆಗರುವನ್ನು ಕಾಣದಿರುವ ಆ ಹಸುವಿನ ಮುಖವನ್ನು ಕಂಡು ದುಃಖಿಸುವನು. ಹೀಗೆ ಅರಸನ ದುಃಖವು ವಿಶೇಷವಾಗಿತ್ತು.

109. ಮಂತ್ರಿಗಳು ಅರಸನ ದುಃಖವನ್ನು ನೋಡಿ, ಅವನ ಪಾದಗಳಿಗೆ ನಮಸ್ಕರಿಸಿ, "ನೀನು ದುಃಖಪಡುವುದು ಇದರ ಪರಿಹಾರವಲ್ಲ. ಹಿಂದೆ ಗೋವಧೆಗೆ ಪರಿಹಾರವಾಗಿ ವೇದಪರಿಣತರಾದ ಬ್ರಾಹ್ಮಣರಿಂದ ವಿಧಿಸಲ್ಪಟ್ಟ ಪ್ರಾಯಶ್ಚಿತ್ತವನ್ನು ಮಾಡುವಂತೆ, ಒತ್ತೊತ್ತಾಗಿ ಅರಳಿದ ಹೂಮಾಲೆಗಳನ್ನು ಧರಿಸಿದ ನಿನ್ನ ಮಗನನ್ನು ನಿಯಮಿಸುವುದು ನೀತಿ" ಎಂದು ಹೇಳಿದರು.

110. ಅರಸನು ಆ ಮಾತಿಗೆ, "ನೀವು ಹೀಗೆ ಪರಿಹಾರ ಹೇಳಿದರೂ ಅದು ತನ್ನ ಕರುವನ್ನು ಕಳೆದುಕೊಂಡು ದುಃಖಿಸುವ ಪಶುವಿನ ದುಃಖಕ್ಕೆ ಸಮವಾಗದು. ಆದುದರಿಂದ ನಾನು ನನ್ನ ಪುತ್ರನನ್ನು ಬಿಟ್ಟುಬಿಡುತ್ತೇನೆ" ಎನ್ನುವನು. "ನೀವೆಲ್ಲಾ ಹೇಳಿದ ಅಸತ್ಯವಾದ ಈ ಮಾತಿಗೆ ನಾನು ಸಮ್ಮತಿಸಿದರೆ ಧರ್ಮದೇವತೆಯು ದುಃಖಪಡುವಳು" ಎನ್ನುವನು.

---

108. 'ಮನ್ನುಯಿರ್ ಪುರನ್ತು ವೈಯಮ್ ಪೊತುಕ್ಕಟಿ ನ್ತಿತ್ತಿಲ್ ನೀಟುಮ್
ಎನ್ನೆಱಿ ನನ್ಱಾಲ್' ಎನ್ನುಮ್ 'ಎನ್ಚೆಯ್ದಾಲ್ ತೀರುಮ್' ಎನ್ನುಮ್
ತನ್ನಿಳ ಙ್ಕನ್ಱು ಕಾಣಾ ತ್ತಾಯ್‌ಮುಕ ಙ್ಕಣ್ಟು ಚೋರುಮ್
ಅನ್ನಿಲೈ ಅರಚನ್ ಉಱ್ಱ ತುಯರಮ್‌ಓರ್ ಅಳವಿ ತ್ತನ್ಱಾಲ್.

109. ಮನ್ತಿರಿಕಳ್ ಅತುಕಣ್ಟು ಮನ್ನವನ್ನೈ ಅಟಿವಣಙ್ಕಿ
'ಚಿನ್ತೈತಳರ್ ನ್ತರುಳುವತು ಮಱ್ಱಿತಱ್ಕು ತ್ತೀರ್ವನ್ಱಾಲ್
ಕೊನ್ತಲರ್ತ್ತಾರ್ ಮೈನ್ತನ್ನೈಮುನ್ ಕೋವತೈಚೆಯ್ ತಾರ್ಕ್ಕುಮಱೈ
ಅನ್ತಣರ್ಕಳ್ ವಿತಿತ್ತಮುಱೈ ವಟಿನಿಱುತ್ತಲ್ ಅಱಮ್' ಎನ್ಱಾರ್.

110. 'ವಟಿಕ್ಕೆನ್ಱು ನೀರ್ಮೊಟಿನ್ತಾಲ್ ಮಱ್ಱತುತಾನ್ ವಲಿಪ್ಪಟ್ಟು
ಕ್ಕುಟಿಕ್ಕನ್ಱೈ ಇಟನ್ತಲಱು ಙ್ಕೋವುಱುನೋಯ್ ಮರುನ್ತಾಮೋ?
ಇಟಿಕ್ಕಿನ್ಱೇನ್ ಮೈನ್ತನೈಎನ್ ಱೆಲ್ಲೀರು ಙ್ಕೊಲ್ಲಿಯಙ
ಚ್ಚಟಿಕ್ಕಿನ್ಱು ನಾನಿಚ್ಚೈನ್ತಾಲ್ ತರುಮನ್ತಾನ್ ಚಲಿಯಾತೋ?'

111. "ರಾಜ್ಯದ ಆತ್ಮಕೋಟಿಗಳನ್ನು ಕಾಯುವಾಗ, ಆ ರಕ್ಷಣೆಗೆ ವಿಘ್ನಗಳಾಗಿ ತನ್ನಿಂದ, ತನ್ನ ಪರಿಜನಗಳಿಂದ, ವೈರಿಗಳಿಂದ, ಕಳ್ಳರಿಂದ, ಇತರ ಜೀವಿಗಳಿಂದ ಬರುವ ಐದು ಭಯಗಳನ್ನು ನಿವಾರಿಸಿ ಧರ್ಮವು ತಪ್ಪದಂತೆ ಪ್ರಜೆಗಳನ್ನು ರಕ್ಷಿಸಿಕೊಂಡು ಬರುವವನು ಮಾತ್ರವೇ ಸಾಮ್ರಾಜ್ಯ ಸಂರಕ್ಷಕನೆಂಬ ಹೆಸರಿಗೆ ಯೋಗ್ಯನಾಗುವನಲ್ಲವೆ ?"

112. "ನನ್ನ ಮಗನು ಮಾಡಿದ ಈ ಪಾಪಕ್ಕೆ ಪ್ರಾಣವಧೆ ಇಲ್ಲದಿರುವ ಬೇರೆ ವ್ರತಗಳನ್ನು ಪರಿಹಾರವಾಗಿ ಸಮ್ಮತಿಸಿ, ಬೇರೊಬ್ಬನು ಮಾಡಿದ ಕೊಲೆಪಾತಕಕ್ಕೆ ಆತನನ್ನು ನಾನು ವಧಿಸುವೆನು ಎಂದರೆ, ಹಿಂದಿನಿಂದಲೇ ಆಚರಣೆಗೆ ಬಂದು ಮನುವಿನಿಂದ ವಿಧಿಸಲ್ಪಟ್ಟ ಶಾಸ್ತ್ರಧರ್ಮವು ಮನುಚೋಳರಾಜನಿಂದ ಕೆಟ್ಟುಹೋಯಿತು ಎಂಬ ವಾರ್ತೆಯು ಈ ಲೋಕದಲ್ಲಿ ಹೇಳಲಾಗುವಂತೆ ನೀವು ಹೀಗೆ ಉಪದೇಶವನ್ನು ಮಾಡುತ್ತೀರಿ, ಇಂತು ಧರ್ಮವಿರುದ್ಧವಾಗಿ ಉಪದೇಶ ಮಾಡುವುದು ಮಂತ್ರಿಗಳ ಪದ್ಧತಿ" ಎಂದು ರಾಜನು ಹೇಳಿದನು.

113. ಮನುಚೋಳನು ಹೀಗೆ ಮಂತ್ರಿಗಳನ್ನು ಇಳಿಸಿ ಮಾತನಾಡಲು ಅರಸನ ಮುಂದೆ ನಿಂತ ಬುದ್ಧಿವಂತರಾದ ಮಂತ್ರಿಗಳು "ಧರ್ಮಶಾಸ್ತ್ರವು ಹೇಳಿದ ದಾರಿಯಲ್ಲಿ ನಡೆಯುತ್ತಿರುವ ಈ ಲೋಕದಲ್ಲಿ ಹಿಂದೆಯೂ ಪಶುಹತ್ಯೆಗಳು ನಡೆದಿದ್ದರೂ ಆ ಕಾರಣವಾಗಿ ಮಗನನ್ನು ವಧಿಸುವುದು ಸಂಪ್ರದಾಯವಾಗಿ ಕಾಣುವುದಿಲ್ಲ. ಅದು ಏನೆಂದರೆ, ವೇದಗಳು ಹೇಳುವ ಧರ್ಮಾನುಸಾರವಾಗಿ ನಡೆಯುವುದು ಹಿಂದಿನಿಂದಲೂ ಬಂದ ಪದ್ಧತಿಯಲ್ಲವೇ ?" ಎಂದು ಹೇಳಿದರು.

---

111. 'ಮಾನಿಲಙ್ಕಾ ವಲನಾವಾನ್ ಮನ್ನುಯಿರ್ಕಾ ಕ್ಕುಙ್ಕಾಲೈ
ತ್ತಾನತನು ಕ್ಕಿಟ್ಟೈಯೂಱು ತನ್ನಾಲ್ತನ್ ಪರಿಚನತ್ತಾಲ್
ಊನಮಿಕು ಪಕೈತ್ತಿಱತ್ತಾಲ್ ಕಳ್ವರಾಲ್ ಉಯಿರ್ತಮ್ಮಾಲ್
ಅನಪಯಮ್ ಐನ್ತುತ್ತೀರ್ ತ್ತಱಙ್ಕಾಪ್ಪಾನ್ ಅಲ್ಲನೋ ?'

112. 'ಎನ್ಮಗನ್ಚೆಯ್ ಪಾತಕತ್ತು ಕ್ಕಿರುನ್ತವಙ್ಕಳ್ ಚೆಯಇಚ್ಚೈನ್ತೀ
ಅನ್ನಿಯನ್ಓರ್ ಉಯಿರ್ಕೊನ್ಱಾಲ್ ಅವನೈಕ್ಕೊಲ್ ವೇನಾನಾಲ್
ತೊನ್ಮನುನೂಲ್ ತೊಟ್ಟೈಮನುವಾಲ್ ತುಟ್ಟೈಪುಣ್ಣ ತೆನುವರ್ವಾರ್ತ್ತೈ
ಮನ್ನುಲಕಿಲ್ ಪೆಱವೊೞಿನ್ತೀರ್ ! ಮನ್ತಿರಿಕಳ್ ! ವಟಿಕ್ಕೆ'ನ್ಱಾನ್.

113. ಎನ್ಱರಚನ್ ಇಕಟ್ನ್ತುರೈಪ್ಪ ಎತಿರ್ನಿನ್ಱ ಮತಿಅಮೈಚ್ಚರ್
'ನಿನ್ಱನೆಱಿ ಉಲಕಿನ್ಕಣ್ ಇತುಪೋಲ್ಮುನ್ ನಿಕೞ್ನ್ತತಾಲ್
ಪೊನ್ಱುವಿತ್ತಲ್ ಮರಪನ್ಱು ಮಱೈವೊೞಿನ್ತ ಅಱಮ್ಪುರಿತಲ್
ತೊನ್ಱುತೊಟು ನೆಱಿಯನ್ಱೋ? ತೊಲ್ನಿಲಙ್ಕಾ ವಲ!' ಎನ್ಱಾರ್

114. ಹಾಗೆ ನಮಸ್ಕರಿಸಿ ಹೇಳಿದ ಮಂತ್ರಿಗಳ ಮುಖವನ್ನು ನೋಡಿ ಧರ್ಮಜ್ಞ ನಾದ ಮನು ಎಂಬ ಹೆಸರಿನ ಬಲಿಷ್ಠನಾದ ಚೋಳರಾಜನು "ಹೀಗೆ ನೀವು ಹೇಳಿದುದು ದೋಷಯುಕ್ತವು" ಎಂದು ಬಾಡಿದ ತಾವರೆ ಹೂವಿನಂತೆ ಮುಖ ಬಾಡಿದವನಾಗಿ ಕೋಪಿಸಿಕೊಂಡು ಹೇಳಿದನು.

115. "ನೀವು ಹೇಳುವ ವಾಕ್ಯಗಳಲ್ಲಿ ಸಾಧಾರಣವಾಗಿ ತೋರುವ ಧರ್ಮಶಾಸ್ತ್ರದ ಶ್ರೇಷ್ಠವಾದ ಸತ್ಯದ ಗುಣವನ್ನು ನೀವು ಚಿಂತಿಸದೆ ಹೀಗೆ ಹೇಳುತ್ತಿರುವಿರಿ. ಯಾವ ನಾಡಿನಲ್ಲಿ ಯಾವ ಪಶುವಾದರೂ ಈ ರೀತಿ ತಾನು ಕರುವನ್ನು ಕಳೆದುಕೊಂಡ ಕಾರಣ ಅತಿಯಾದ ದುಃಖದಿಂದ ದೀರ್ಘಶ್ವಾಸವನ್ನು ಬಿಡುತ್ತ ಘಂಟೆಯನ್ನು ಬಾರಿಸಿ ರೋದಿಸಿದೆಯೋ ಹೇಳಿರಿ" ಎಂದು ಕೇಳಿದನು.

116. "ಹಿಂದೆಯೇ ಇಂದ್ರ, ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಸ್ತುತಿಸಿ ನಮಿಸಲು ಕೈಲಾಸವಾಸಿಯಾದ ಶಿವಪರಮಾತ್ಮನು ತನ್ನ ವಿಶೇಷ ಸಾನ್ನಿಧ್ಯದಿಂದ ವೀದಿವಿಡಂಗನೆಂಬ ಖ್ಯಾತಿಯಿಂದ ತಿರುವಾರೂರಿನಲ್ಲಿ ನೆಲಸಿರುತ್ತಾನೆ. ಅಂತಹ ತಿರುವಾರೂರಿನಲ್ಲಿ ಉದಯಿಸಿದ ಜೀವಿಯೊಂದನ್ನು ಕೊಂದವನು ನನ್ನ ಮಗನೇ ಆಗಿದ್ದರೂ ಅವನನ್ನು ಕೊಲ್ಲುವುದೇ ಯುಕ್ತವು".

---

114. ಅವ್ವಣ್ಣಮ್ ತೊೞುತುರೈತ್ತ ಅಮೈಚ್ಚರ್‌ಕಳ್ಳೈ ಮುಕಮ್‌ನೋಕ್ಕಿ,
ಮೆಯ್ವ್ವಣ್ಣನ್ ತೆರಿನ್ತುಣರ್‌ನ್ತ ಮನುವೆನ್‌ನುಮ್ ವಿಱಲ್‌ವೇನ್ತನ್,
'ಇವ್ವಣ್ಣಮ್ ಪೞುತುರೈತ್ತೀರ್' ಎನ್‌ಱೆರಿಯಿನ್ ಇಟೈತ್ತೋಯ್‌ನ್ತ,
ಚೆವ್ವಣ್ಣ ಕ್ಕಮಲಮ್‌ಪೋಲ್ ಮುಕಮ್‌ಪುಲರ್‌ನ್ತು ಚೆಯಿರ್‌ತ್ತುರೈಪ್ಪಾನ್.

115. 'ಅವ್ವುರೈಯಿಲ್ ವರುನೆಱಿಕಳ್ ಅವೈನಿಱ್ಕ ಅಱನೆಱಿಯಿನ್
ಚೆವ್ವಿಯಉಣ್ ಮೈತ್ತಿರಮ್‌ನೀರ್ ಚಿನ್ತ್ಯೈಚೆಯಾ ತುರೈಕ್ಕಿನ್‌ಱೀರ್
ಎವ್ವುಲಕಿಲ್ ಎಪ್ಪೆಱ್ಱಮ್ ಇಪ್ಪೆಱ್ಱಿ ತ್ತಾಮ್ ಇಟರಾಲ್
ವೆವ್ವುಯಿರ್‌ತ್ತು ಕ್ಕತಱಿಮಣಿ ಎಱಿನ್ತುವಿೞು ನ್ತತು ?' ವಿಳಮ್ಪೀರ್

116. 'ಪೋಱ್ಱಿಚೈತ್ತು ಪ್ಪುರನ್ತರನ್‌ಮಾಲ್ ಅಯನ್‌ಮುತಲೋರ್
ಪುಕೞ್‌ನ್ತಿಱೈಞ್ಚ,
ವೀಱ್ಱಿರುನ್ತ ಪೆರುಮಾನಾರ್ ಮೇವಿಯುಱೈ ತಿರುವಾರೂರ್,
ತೋಱ್ಱಮುಟೈ ಉಯಿರ್‌ಕೊನ್‌ಱಾನ್ ಆತಲಿನಾಲ್ ತುಣೈಪೊರುಳ್‌ತಾನ್,
ಆಱ್ಱವುಮ ಱ್ಱವಱ್ಕೊಲ್ಲುವತ್ ಅತುವೇಯಾಮ್ ಎನನಿನೈಮಿನ್',

117. ಚೋಳರಾಜನು ಹೀಗೆ ಹೇಳಿ "ಈ ಪಾಪಕಾರ್ಯಕ್ಕೆ ಕರುವನ್ನು ಕೊಂದ ಮಗನನ್ನು ಕೊಲ್ಲುವುದೇ ಯುಕ್ತವಾದುದು. ಈ ಪಶುವು ಮನೋವೇದನೆಪಡುವುದನ್ನು ಪರಿಹರಿಸಲಾಗದ ನಾನು ಕಷ್ಟಪಡುವ ಈ ಪಶುವಿನ ದುಃಖವನ್ನು ಹೊಂದುವುದೇ ಕರ್ತವ್ಯವು" ಎಂದು ಮೇಲಾದ ಧರ್ಮವನ್ನು ನಿಶ್ಚಯಿಸಿದನು. ಮಂತ್ರಿಗಳು ಭಯಪಟ್ಟು ಆ ಎಡೆಯಿಂದ ಹೊರಟರು.

118. ಚೋಳನು ತನ್ನ ಮಗನನ್ನು ಅಲ್ಲಿಗೆ ಬರಿಸಿ ಒಬ್ಬ ಮಂತ್ರಿಯನ್ನು ನೋಡಿ 'ಇವನನ್ನು ಆ ಬೀದಿಯಲ್ಲಿ ಬಲವಾದ ರಥದ ಚಕ್ರದಡಿಯಲ್ಲಿ ಹಾಕಿ' ಎನ್ನಲು ಆ ಮಂತ್ರಿಯು ಅಂತಹ ಕಾರ್ಯವನ್ನು ತಾನು ಮಾಡಲಾಗದಂತೆ ಅಲ್ಲಿಂದ ಹೋಗಿ ಆತ್ಮ ಹತ್ಯೆಯನ್ನು ಮಾಡಿಕೊಳ್ಳಲು ಅರಸನು ತನ್ನ ಮಗನನ್ನು ಕರೆದುಕೊಂಡು ಆ ಬೀದಿಯ ಸಮೀಪಕ್ಕೆ ತಾನೇ ಬಂದನು.

119. ತನ್ನ ಕುಲಕ್ಕೆ ಸೇರಿದ ಅರಸಾಳ್ವಿಕೆಯನ್ನು ನಡೆಸಲು ಒಬ್ಬ ಪುತ್ರ ನಿದ್ದಾನೆ ಎಂಬುದನ್ನು ಗಣಿಸದೆ, ಧರ್ಮದ ದಾರಿಯಲ್ಲಿ ನಡೆಯುವುದು ನೀತಿ ಎಂದು ನಿರ್ಧರಿಸಿ, ಮಗನ ಎದೆಯನ್ನು ರಥದ ಚಕ್ರದಡಿಯಲ್ಲಿ ಬೀಳುವ ಹಾಗಿರಿಸಿದನು. ಒಳ್ಳೆಯ ಆಳಿಕೆಯು ಹಿರಿದಾದುದೇ ಹೊರತು ನಿಂದಿತವಾದ ಆಳಿಕೆಯು ಮೇಲಾದುದಲ್ಲ.

---

117. ಎನವೊಟಿನ್ತು "ಮೞಿತನು ಕ್ಕಿನಿಯಿತುವೇ ಚೆಯಲ್ಇನ್ಆನ್
ಮನವ್ಅಟಿಯು ನ್ತ್ರಯರ್ಅಕೞ ಮಾಟ್ಟಾತೇನ್ ವರುನ್ತ್ರಮ್ಇತು
ತನತುಱಪೇರ್ ಇಟರ್ಯಾನುಮ್ ತಾಙ್ಕುವತೇ ಕರುಮಮ್" ಎನ
ಅನಕನ್ ಅರುಮ್ ಪೊರುಳ್ ತುಣಿನ್ತ್ರಾನ್ ಅಮೈಚ್ಚರುಮ್ ಅಞ್ಚಿನರ್
ಅಕನ್ಱಾರ್.

118. ಮನ್ನವನ್ತನ್ ಮೈನ್ತ್ರನೈಅಙ್ ಕಟಿೖತ್ತೊರುಮನ್ ತಿರಿತನ್ನೈ
"ಮುನ್ನಿವನೈ ಅವ್ವೀತಿ ಮುರಣ್ತೇರ್ಕ್ಕಾಲ್ ಊರ್ಕ" ಎನ
ಅನ್ನವನುಮ್ ಅತುಚೆಯ್ಯಾ ತಕನ್ಱುತನ್ಆ ರುಯಿರ್ತುಱಪ್ಪ
ತ್ತ್ರನ್ನುಟ್ಟೈಯ ಕುಲಮಕನೈ ತ್ತಾನ್ಕೊಣ್ಟು ಮಱುಕಣೈನ್ತ್ರಾನ್.

119. ಒರುಮೈನ್ತ್ರನ್ ತನ್ಕುಲತ್ತು ಕ್ಕುಳ್ಳಾನ್ಎನ್ ಪತುಮ್ಉಣರಾನ್
ತರುಮಮ್ತನ್ ವಟಿಚ್ಚೆಲ್ಕೈ ಕಟನೆನ್ಱು ತನ್ಮೈನ್ತ್ರನ್
ಮರುಮಮ್ತನ್ ತೇರಾಟಿ ಉಱಊರ್ನ್ತ್ರಾನ್ ಮನುವೇನ್ತ್ರನ್
ಅರುಮನ್ತ್ರ ಅರಚಾಟ್ಚಿ ಅರಿತೋ?ಮ ಱಿಳಿತೋತಾನ್ !

120. ಜೀವಿಗಳ ಮೇಲೆ ಕೃಪೆಯನ್ನು ತೋರುವ ಚೋಳರಾಜನ ಕೃತಿಯನ್ನು ಕಂಡು ಮನಕರಗಿ ಪ್ರಜೆಗಳು ಕಣ್ಣೀರು ಸುರಿಸಿದರು. ದೇವತೆಗಳು ಆಶ್ಚರ್ಯಗೊಂಡು ಹೂಮಳೆಗರೆದರು. ಆ ಅರಸನ ಕಣ್ಣೆದಿರೇ ಧರ್ಮವೃಷಭದ ಮೇಲೇರಿ ವೀದಿವಿಡಂಗ ನಾದ ಶ್ರೀತ್ಯಾಗೇಶ ಪರಮಾತ್ಮನು ದರ್ಶನ ಕೊಟ್ಟನು.

121. ಜಡೆಯಲ್ಲಿ ಪ್ರಕಾಶಿಸುವ ಬಾಲಚಂದ್ರನಿಂದ, ವಿಷಮನೇತ್ರವುಳ್ಳ ಹಣೆಯಿಂದ, ಎಡಭಾಗವನ್ನಲಂಕರಿಸಿದ ಉಮಾದೇವಿಯಿಂದ, ಎಲ್ಲೆಡೆಗಳಲ್ಲಿಯೂ ನೆರೆದು ನಿಂತ ಭೂತಗಣಗಳಿಂದ—ಈ ರೀತಿಯ ಮಹಿಮೆಯಿಂದ ಕೂಡಿದ ಶಿವನನ್ನು ಅರಸನು ತನ್ನಿದಿರು ಕಂಡು ಸ್ತುತಿಸಿ ನಿಲ್ಲಲು ವೃಷಭಾರೂಢನಾದ ಶಿವನು ಬಲಿಷ್ಠನಾದ ಆ ಚೋಳ ರಾಜನಿಗೆ ಅನುಗ್ರಹವನ್ನು ಮಾಡಿದನು.

122. ಆ ಸಮಯದಲ್ಲಿ ಸತ್ತುಬಿದ್ದ ಕರುವೂ, ಅರಸನ ಹಿರಿಮೆಗೆ ಯೋಗ್ಯನಾದ ರಾಜಕುಮಾರನೂ, ಮಂತ್ರಿಯೂ ಒಡನೆಯೇ ಎದ್ದರು. ಆಗ ಅರಸನು ಪಟ್ಟ ಸಂತೋಷ ವನ್ನು ವರ್ಣಿಸಲು ಸಾಧ್ಯವಿಲ್ಲ. ಎಲ್ಲರಿಗೂ ಆದಿಯಾದ ಶಿವನೇ ಮುಂದೆ ನಿಲ್ಲಲು ಅದರಿಂದ ಸಾಧ್ಯವಾಗದ ಪುರುಷಾರ್ಥವೇ ಇಲ್ಲ.

---

120. ತಣ್ಣಳಿವೆಣ್ ಕುಟ್ಟೈವೇನ್ಱನ್ ಚೆಯಲ್ಕಣ್ಟು ತರಿಯಾತು
ಮಣ್ಣವರ್ಕಣ್ ಮಟೈಕ್ಕೊಟಿನ್ಱಾರ್ ವಾನವರ್ಪೂ ಮಟೈಚೊರಿನ್ಱಾರ್
ಅಣ್ಣಲವನ್ ಕಣ್ಣೆತಿರೇ ಅಣಿವೀತಿ ಮಟವಿಟೈಮೇಲ್
ವಿಣ್ಣವರ್ಕಳ್ ತೊಟನಿನ್ಱಾನ್ ವೀತಿವಿಟಙ್ಕಪ್ಪೆರುಮಾನ್.

121. ಚಟೈಮರುಙ್ಕಿಲ್ ಇಳವಮ್ಪಿಱೈಯುನ್ ತನಿವಿಟಕ್ಕುನ್ ತಿರುನುತಲುಮ್
ಇಟಮರುಙ್ಕಿಲ್ ಉಮೈಯಾಳುಮ್ ಎಮ್ಮರುಙ್ಕುಮ್ ಪೂತಕಣಮ್
ಪುಟೈನೆರುಙ್ಕುಮ್ ಪೆರುಮೈಯುಮ್ಮುನ್ ಕಣ್ಟರಚನ್ ಪೋಱ್ಱಿಚೈಪ್ಪ
ವಿಟೈಮರುವುಮ್ ಪೆರುಮಾನುಮ್ ವಿಱಲ್ವೇನ್ಱಱ್ ಕರುಳ್ಕೊಟುತ್ತಾನ್.

122. ಅನ್ನಿಲೈಯೇ ಉಯಿರ್ಪಿರಿನ್ದ ಆನ್ಕನ್ಱುಮ್ ಅವ್ವರಚನ್
ಮನ್ನುರಿಮೈತ್ತನಿಕನ್ಱುಮ್ ಮನ್ದಿರಿಯುಮ್ ಉಟನ್ಎಟಿಲುಮ್
ಇನ್ನಪರಿಚಾನಾನ್ಎನ್ ಱಱಿನ್ದಲನ್ವೇ ನ್ದನುಮ್ಯಾರ್ಕ್ಕುಮ್
ಮುನ್ನವನೇ ಮುಸ್ನಿನ್ಱಾಲ್ ಮುಟಿಯಾತ ಪೊರುಳುಳತೋ.

---

1. ವೀದಿ ವಿಡಂಗ=ತಿರುವಾರೂರು ದೇವಾಲಯದಲ್ಲಿರುವ ಉತ್ಸವಮೂರ್ತಿಯಾದ ಶಿವಪರಮಾತ್ಮ.

123. ಪಾದಗಳಲ್ಲಿ ನಮಿಸಿದ ಮಗನನ್ನು ಅಪ್ಪಿಕೊಂಡು ಸಂತೋಷಪಟ್ಟು ಚೋಳರಾಜನು ತನ್ನ ದುಃಖವನ್ನು ನೀಗಿದನು. ಹಸುವಿನ ಮೊಲೆಯಲ್ಲಿ ಒಸರಿದ ಹಾಲನ್ನು ಕರುವು ಸಂತೋಷದಿಂದ ಉಣ್ಣಲು, ಮಿಕ್ಕ ಹಾಲಿನಿಂದ ಭೂಮಿಯು ನೆನೆಯಲು ಆ ಪಶುವು ತನ್ನ ದುಃಖದಿಂದ ಪಾರಾಯಿತು.

124. ಸುವರ್ಣಮಯವಾಗಿ ಪ್ರಕಾಶಿಸುವ ಗೋಡೆಗಳಿಂದ ಸುತ್ತುವರಿದ ತಿರುವಾರೂರಿನ ಸುಂದರವಾದ ದೇಗುಲದಲ್ಲಿರುವ ಶಿವನು ಜಯಯುಕ್ತನಾದ ಚೋಳನಿಗೆ ಬೀದಿಯಲ್ಲಿಯೇ ಪ್ರತ್ಯಕ್ಷನಾಗಿ ಮರೆಯಾದ ಹಿರಿಯ ಕೃಪೆಯ ಮಹತ್ವವನ್ನು ತಿಳಿದು ಶಿವನು ತನ್ನ ಶರಣರಲ್ಲಿ ತೋರಿಸುವ ದಯೆಯನ್ನು ಏಳು ಲೋಕವೂ ಸ್ತುತಿಸುವುದು.

125. ಹೀಗೆ ಧರ್ಮದ ದಾರಿಯಲ್ಲಿ ನಡೆಯುವ ಅಗಣಿತ ಶರಣರಿಗೆ ಅನುಗ್ರಹಿಸಿದ, ಶಿವನು ನೆಲೆಯಾಗಿರುವ ತಿರುವಾರೂರಿನ ಮಹಿಮೆಯು ಹೇಳಲಳವಲ್ಲ. ಆ ತಿರುನಗರಕ್ಕೆ ಶಿವನ ದೇವಾಲಯವು ಹೃದಯ ಕಮಲಕ್ಕೆ ಸಮವಾಗಿ ಇರುತ್ತದೆ.

---

123. ಅಟಿಪಣಿನ್ದ ತಿರುಮಕನೈ ಆಕಮುಱ ಎಟುತ್ತಣೈತ್ತು
ನೆಟಿತುಮಕಿೞ್ ನ್ದರುನ್ದುಯರಮ್ ನೀಙ್ಕಿನಾನ್ ನಿಲವೇನ್ದನ್
ಮಟಿಚುರನ್ದು ಪೊೞಿತೀಮ್ಪಾಲ್ ವರುಙ್ಕನ್ಱು ಮಕಿೞ್ನ್ದುಣ್ಣ
ಪಟಿನನೈಯ ವರುಮ್ಪಚುವುಮ್ ಪರುವರಲ್ನೀ ಙ್ಕಿಯತನ್ಱೇ.

124. ಪೊನ್ತಯಙ್ಕು ಮತಿಲಾರೂರ್ ಪೂಙ್ಕೋಯಿಲ್ ಅಮರ್ನ್ದಪಿರಾನ್
ವೆನ್ಱಿಮತು ವೇನ್ದನುಕ್ಕು ವೀತಿಯಿಲೇ ಅರುಳ್ಕೊಟುತ್ತು
ಚ್ಚೆನ್ಱಅರುಳುಮ್ ಪೆರುಙ್ಕರುಣೈ ತ್ತಿಱಙ್ಕಣ್ಟು ತನ್ಅಟಿಯಾರ್ಕ್ಕು
ಎನ್ಱುಮ್ಎಳಿ ವರುಮ್ಪೆರುಮೈ ಏೞುಲಕುಮ್ ಎಟುತ್ತೇತ್ತುಮ್.

125. ಇನ್ನೈಯವಕೈ ಅಱನೆಱಿಯಿಲ್ ಎಣ್ಣಿರನ್ದೋರ್ ಕ್ಕರುಳ್ಪುರಿನ್ದು
ಮುನ್ನೈವರವರ್ ಮಕಿೞ್ನ್ದರುಳ ಪ್ಪೆಱ್ಱಟೈಯ ಮೂತೂರ್ಮೇಲ್
ಪುನ್ನೈಯುಮ್ಉರೈ ನಮ್ಮಳವಿಲ್ ಪುಕಲಲಾ ನ್ದಕೈಮೈಯತೋ ?
ಅನ್ನೈ ಯತನು ಕ್ಕಕಮಲರಾಮ್ ಅಱವನಾರ್ ಪೂಙ್ಕೋಯಿಲ್.

ಭಕ್ತಕೂಟದ ಹಿರಿಮೆ

126. ಭೂತನಾಯಕರಾಗಿಯೂ, ಹುತ್ತದಲ್ಲಿ ವಾಸಮಾಡುವವರಾಗಿಯೂ, ಆದಿ ದೇವರಾಗಿಯೂ ಉಳ್ಳ ಪರಮಾತ್ಮನು ಆಶಿಸಿ ವ್ಯಕ್ತವಾಗಿ ತೋರಿ ಅನುಗ್ರಹಿಸಿರುವ 'ಪೂಂಗೋಯಿಲ್' (ಪವಿತ್ರವಾದ ದೇಗುಲ) ಎಂಬ ದೇವಾಲಯದಲ್ಲಿ, ಪ್ರಕಾಶದಲ್ಲಿ ಹೆಚ್ಚಿ, ಹೆಚ್ಚಿನ ಸೌಂದರ್ಯ ಕಾಂತಿಗಳಿಂದ ಕೂಡಿದ ಮುಂಭಾಗದಲ್ಲಿ ಪ್ರಾಕಾರದ (ಮದಿಲಿನ) ಶ್ರೀದ್ವಾರಕ್ಕೆ ಸಮೀಪವಾಗಿ ಮೊದಲಲ್ಲಿ ಇರುವುದು ದೇವಾಚಿರಿಯನ್[1] ಮಂಟಪ.

127. ತಾವರೆಯಲ್ಲಿರುವ ಬ್ರಹ್ಮದೇವನೂ, ಇಂದ್ರನೂ, ಲಕ್ಷ್ಮಿಯನ್ನು ತನ್ನ ವಕ್ಷಸ್ಥಲದಲ್ಲಿರಿಸಿಕೊಂಡ ವಿಷ್ಣುವೇ ಮೊದಲಾದ ದೇವತೆಗಳೂ, ಇವರೆಲ್ಲರೂ ತುಂಬಿ ಸ್ತುತಿಸುವುದಕ್ಕೆ ಅವಕಾಶವಿರುವಂಥಾದ್ದು ದೇವಾಚಿರಿಯನ್ ಎನ್ನುವ ದಿವ್ಯಮಂಟಪವು.

128. ಜೀವಿಗಳಿಗೆ ದುಃಖವನ್ನು ಹೋಗಲಾಡಿಸುವ ಉಪಕಾರಿಗಳಾದ ಅಲ್ಲಿ ತುಂಬಿ ಸೇರಿದ ಭಕ್ತರ ಶರೀರದ ಮೇಲೆ ಪೂಸಿ ಅಲಂಕರಿಸಿಕೊಂಡ ವಿಭೂತಿಯ ಬಿಳಿಯ ಪ್ರಕಾಶದಿಂದಲೂ, ಆ ಭಕ್ತರ ಮನಸ್ಸಿನಲ್ಲಿ ತುಂಬಿದ ಪರಿಶುದ್ಧತೆಯಿಂದಲೂ, ಜೀವಿಗಳನ್ನು ರಕ್ಷಿಸತಕ್ಕುದಾಗಿ, ಅವರ ಮಾತಿನಲ್ಲಿ ಹೊರಬರುವ ಪಂಚಾಕ್ಷರಿಯ ಉಲಿಯು ಎಲ್ಲೆಲ್ಲಿಯೂ ಹಬ್ಬುವುದರಿಂದಲೂ, ವಿಶಾಲವಾದ ಅನೇಕ ಪಾಲಕಡಲುಗಳು ಒಂದಾಗಿ ಸೇರಿದಂತೆ ಇರುವುದು ಆ ದಿವ್ಯಮಂಟಪ.

ತಿರುಕ್ಕೂಟ್ಟ ಚ್ಚಿರಪ್ಪು

126. ಪೂತ ನಾಯಕರ್ ಪುಱ್ಱಿಟ ಙ್ಕೊಣ್ಟವರ್
ಆತಿ ತೇವರ್ ಅಮರ್ನ್ದ ಪೂಙ್ ಕೋಯಿಲಿಙ್
ಚೋತಿ ಮಾಮಣಿ ನೀಳ್ಚುಟರ್ ಮುನ್ಱಿಲ್ಚೂಟ್
ಮೂತೆ ಯಿಲ್ತಿರು ವಾಯಿಲ್ಮುನ್ ನಾಯತು.

127. ಪೂವಾರ್ ತಿಚ್ಚೈಮುಕನ್ ಇನ್ದಿರನ್ ಪೂಮಿಚ್ಚೈ
ಮೂವಾಟ್ ಅಕಲತ್ತು ಮಾಲ್ಮುತಲ್ ವಾನವರ್
ಓವಾ ತೇವರುಮ್ ನಿಱೈನ್ದುಱೈ ನ್ದುಳ್ಳತು
ತೇವಾ ಚಿರಿಯನ್ ಎನುತ್ತಿರು ಕ್ಕಾವನಮ್.

128. ಅರನ್ದೈ ತೀರ್ಕ್ಕುಮ್ ಅಟಿಯವರ್ ಮೇನಿಮೇಲ್
ನಿರನ್ದ ನೀಱ್ಱೊಳಿ ಯಾಲ್ನಿಱೈ ತೂಯ್ಮೈಯಾಲ್
ಪುರನ್ದ ಅಞ್ಚೆೞುತ್ತೋಚೈ ಪೊಲಿತಲಾಲ್
ಪರನ್ದ ಆಯಿರಮ್ ಪಾಱ್ಕಟಲ್ ಪೋಲ್ವತು.

---

1. ದೇವಾಚಿರಿಯನ್=ದೇವಾಶ್ರಯ.

129. ಅಖಿಲಕಾರಣರಾದ (ಎಲ್ಲಾ ಲೋಕಗಳನ್ನೂ ಸೃಷ್ಟಿಸಿದ) ಶಿವಪರಮಾತ್ಮನ ದಿವ್ಯಪಾದಗಳನ್ನೇ ಆಶ್ರಯಿಸಿ ನಮಿಸುವವರಾಗಿ ಅಲ್ಲಿ ಇದ್ದು ಅನುಗ್ರಹಿಸಿರುವ ಭಕ್ತರೇ ಎಲ್ಲಾ ಲೋಕಗಳನ್ನೂ ಆಳುವುದಕ್ಕೆ ತಕ್ಕವರು ಎಂಬ ಕಾರಣದಿಂದ ಅಖಿಲ ಲೋಕಗಳಲ್ಲುಳ್ಳವರೂ ಅವರ ಆಳಿಕೆಗೊಳಗಾಗಿ ನಮಿಸಲು, ಇಲ್ಲಿ ಬಂದು ಸೇರುವರು. ಆದುದರಿಂದ ಆ ದೇವಾಚಿರಿಯ ಸ್ಥಳವು ಎಲ್ಲಾ ಲೋಕಗಳನ್ನೂ ಒಂದಾಗಿ ಸೇರಿಸಿದಂತಿದೆ.

130. ಇಲ್ಲಿ ಇದ್ದು ಅನುಗ್ರಹಿಸಿರುವ ಭಕ್ತರು ಲೋಕಪಿತನಾದ ಶಿವಪರಮಾತ್ಮನಿಂದ ಹಿಂದೆಯೇ ಪ್ರೀತಿಯಿಂದ ಆಳಾಗಿಸಿಕೊಳ್ಳಲ್ಪಟ್ಟವರು. ಪ್ರೇಮಾತಿಶಯದಿಂದ ತಮ್ಮ ಮೈಯಲ್ಲಿ ರೋಮಾಂಚವೂ ಶರೀರದಲ್ಲಿ ಕಂಪನವೂ ಇರುವಂತಹ ಮನಸ್ಸ್ವಭಾವವುಳ್ಳವರು. ತಮ್ಮ ಕರ್ತವ್ಯವೆಂದು ತಿಳಿದುಕೊಂಡು ಕೈಂಕರ್ಯವನ್ನು ಮಾಡುವವರು. ಈ ಸ್ವಭಾವವುಳ್ಳವರು ಅಗಣಿತರಾದ ಭಕ್ತರು

131. ದೋಷರಹಿತವಾದ ರುದ್ರಾಕ್ಷವನ್ನು ಧರಿಸಿದ ತಮ್ಮ ಮೈಮೇಲೆ ಪೂಸಿದ ವಿಭೂತಿಯ ಪವಿತ್ರತೆಯಂತೆಯೇ ಒಳಗೂ ಪರಿಶುದ್ಧರಾಗಿರುವವರು. ಇವರು ತಮ್ಮ ಕಾಂತಿಯಿಂದ ಯಾವ ಲೋಕಗಳನ್ನೂ ಪ್ರಕಾಶಗೊಳಿಸುವರು. ಆದುದರಿಂದ ಇಷ್ಟೆಂದು ಮಾತಿನಿಂದ ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲದ ಹಿರಿಮೆಯಿಂದ ಶೋಭಿಸುವವರು.

---

129. ಅಕಿಲ ಕಾರಣರ್ ತಾಳ್‌ಪಣಿ ವಾರ್‌ಕಳ್‌ತಾಮ್
ಅಕಿಲ ಲೋಕಮುಮ್ ಆಳಱ್ ಕುರಿಯರ್‌ಎನ್‌ಱು
ಅಕಿಲ ಲೋಕತ್ತು ಳಾರ್‌ಕಳ್ ಅಟೈತಲಿನ್
ಅಕಿಲ ಲೋಕಮುಮ್ ಪೋಲ್ವ ತತನಿಟೈ.

130. ಅತ್ತರ್ ವೇಣ್ಟಿಮುನ್ ಆಣ್ಟವರ್ ಅನ್‌ಪಿನಾಲ್
ಮೆಯ್‌ತ್ತ ಟೈನ್ತು ವಿತಿರ್‌ಪ್ಪುಱು ಚಿನ್ತೈಯಾರ್
ಕೈತ್ತಿ ರುತ್ತೊಣ್ಟು ಚೆಯ್ಕಟ ಪ್ಪಾಟ್ಟಿನಾರ್
ಇತ್ತಿ ಱತ್ತವರ್ ಅನ್‌ಱಿಯುಮ್ ಎಣ್ಣಿಲಾರ್.

131. ಮಾಚಿ ಲಾತ ಮಣಿತಿಕಟ್ ಮೇನಿಮೇಲ್
ಪೂಚು ನೀಱುಪೋಲ್ ಉಳ್ಳುಮ್ ಪುನಿತರ್‌ಕಳ್
ತೇಚಿ ನಾಲ್‌ಎ ತ್ತಿಚೈಯುಮ್ ವಿಳಕ್ಕಿನಾರ್
ಪೇಚ ಒಣ್ಣಾ ಪ್ಪೆರುಮೈ ಪಿಱಙ್ಕಿನಾರ್.

132. ಪರಮಾತ್ಮನ ಆಜ್ಞೆಯಂತೆಯೇ ನೆಲೆಗೊಂಡ, ಪಂಚಮಹಾಭೂತಗಳು ತಮ್ಮ ನೆಲೆಯಿಂದ ಕದಲಿದ ಕಾಲದಲ್ಲಿಯೂ (ತಮ್ಮ ನೆಲೆಯಲ್ಲಿ ವ್ಯತ್ಯಾಸವಿಲ್ಲದ) ಉಮಾದೇವಿಯವರನ್ನು ಒಂದು ಭಾಗದಲ್ಲಿರಿಸಿಕೊಂಡ ಶಿವಪರಮಾತ್ಮನ ಮಲರಂತಿರುವ ಪಾದಗಳನ್ನು ತಮ್ಮ ಮನಸ್ಸಿನಲ್ಲಿ ಮರೆಯದವರು. ಹಿರಿಯರಿಂದ ಹೇಳಲ್ಪಟ್ಟ ಪ್ರೇಮ ದಿಂದ ಮೊಳೆತ ಭಕ್ತಿಯ ದಾರಿಯಿಂದ ವಿಚಲಿತರಾಗದವರು. ದೋಷರಹಿತವಾದ ಗುಣ ರಾಶಿಯಂತಿರುವವರು.

133. ನ್ಯೂನಾಧಿಕಗಳು ಇಲ್ಲದ ನೆಲೆಯ ಐಶ್ವರ್ಯವನ್ನುಳ್ಳವರು. ಮಣ್ಣಿನ ಓಡನ್ನೂ ಚಿಂಬೊನ್ನನ್ನೂ ಒಂದಾಗಿಯೇ ಎಣಿಸುವವರು. ಪರಮಾತ್ಮನನ್ನು ಮನಸ್ಸಿ ನಲ್ಲಿ ಇಟ್ಟುಕೊಳ್ಳುವ ಪ್ರೇಮಾತಿಶಯದಿಂದ ಅವನನ್ನು ನಮಸ್ಕರಿಸುವ ಜನ್ಮ ವೊಂದನ್ನಲ್ಲದೆ ಮನೆಯಲ್ಲಿಯೂ ಆಸೆಯನ್ನಿಡದ ಸ್ವಭಾವವುಳ್ಳವರು.

134. ಇಲ್ಲಿಯ ಭಕ್ತರು ಹಾರವಾಗಿ ಧರಿಸಿಕೊಳ್ಳುವುದು ರುದ್ರಾಕ್ಷ ಮಾಲೆ ಯನ್ನು. ಉಟ್ಟುಕೊಳ್ಳುವುದು ಕಂಥೆಯನ್ನು. ತಾವು ಮಾಡುವ ಕರ್ತವ್ಯವೆಂದು ಕೈಕೊಂಡಿರುವುದು ಪರಮಾತ್ಮನ ಕೈಂಕರ್ಯವೇ ಅಲ್ಲದೆ ಬೇರೆ ಯಾವುದನ್ನೂ ಇಲ್ಲ. ಆ ಸೇವೆಯಲ್ಲಿ ತಮ್ಮನ್ನು ಪ್ರವರ್ತಿಸುವ ಭಕ್ತಿಯನ್ನು ವಿಶೇಷವಾಗಿ ಉಳ್ಳವರು. ಯಾವೊಂದರಲ್ಲಿಯೂ ಕುಂದಿಲ್ಲದವರು. ಇವರ ವೀರವನ್ನು ಇಷ್ಟೆಂದು ಅಳತೆ ಮಾಡಲು ಸಾಧ್ಯವಿದೆಯೇ ?

---

132. ಪೂತಮ್ ಐನ್ದುಮ್ ನಿಲ್ಯೆಯಿಱಿಲ್ ಕಲಙ್ಕಿನುಮ್
ಮಾತೊರ್ ಪಾಕರ್ ಮಲರ್ತ್ತಾಳ್ ಮಱಪ್ಪಿಲಾರ್
ಓತು ಕಾತಲ್ ಉಱೈಪ್ಪಿನ್ ನೆಱಿನಿನ್ಱಾರ್
ಕೋತಿ ಲಾತ ಕುಣಪ್ಪೆರುಙ್ ಕುನ್ಱನಾರ್.

133. ಕೇಟುಮ್ ಆಕ್ಕಮುಮ್ ಕೆಟ್ಟ ತಿರುವಿನಾರ್
ಓಟುಙ್ ಚೆಮ್ಪೊನುಮ್ ಒಕ್ಕವೇ ನೋಕ್ಕುವಾರ್
ಕೂಟುಮ್ ಅನ್ಪಿನಿಲ್ ಕುಮ್ಪಿಟ ಲೇಅನ್ಱಿ
ವೀಟುಮ್ ವೇಣ್ಟಾ ವಿಱಲಿನ್ ವಿಳಙ್ಕಿನಾರ್.

134. ಆರಙ್ ಕಣ್ಟಿಕೈ ಆಟೈಯುಙ್ ಕನ್ತೈಯೇ
ಪಾರಮ್ ಈಚನ್ ಪಣಿಅಲ ತೊನ್ಱಿಲಾರ್
ಈರ ಅನ್ಪಿನರ್ ಯಾತುಙ್ ಕುಱೈವಿಲಾರ್
ವೀರಮ್ ಎನ್ನಾಲ್ ವಿಳಮ್ಪುನ್ ತಕೈಯತೋ ?

135. ಮೇಲೆ ಹೇಳಿದ ಸ್ವಭಾವಗಳಲ್ಲದೆ, ತಾವು ಬಯಸಿದ ಸ್ವಭಾವಗಳನ್ನುಳ್ಳವರು. ಕಂಡವರೂ, ಕೇಳಿದವರೂ ಆಶಿಸತಕ್ಕ ಬೇರೆ ಬೇರೆ ಸುಸ್ವಭಾವಗಳಿಂದ ಶೋಭಿಸುವವರು. ಬೇರೆ ಬೇರೆ ಸ್ವಭಾವಗಳಿಂದ ಕೂಡಿದ್ದರೂ, ತಾಂಡವ ಪರಮಾತ್ಮನ ಭಕ್ತರು. ಆದುದರಿಂದ ವಿಶೇಷವಾದ ಕೀರ್ತಿವಂತರು ಈ ಕೂಟದಲ್ಲಿರುವವರು. ಇವರ ಕೈಂಕರ್ಯದ ವಿಧಗಳನ್ನು ಈ ಪುರಾಣದಲ್ಲಿ ವಿವರಿಸಿ ಬದುಕುವೆನು.

136. ಈ ಮಹಾತಪಸಿಗಳ ದಿವ್ಯಕೂಟವನ್ನು ನಮ್ಮ ಪರಮಾತ್ಮನಾದ ಆಳತೆಗೆ ಸಿಗದ ಕೀರ್ತಿಯುಳ್ಳ ಆಲಾಲ ಸುಂದರರು ಈ ಲೋಕದಲ್ಲಿ ಬಂದು ಸುಂದರ ತಿರುತ್ತೊಣ್ಡತ್ತೊಗೈ ಎಂಬ ತಮಿಳು ಸ್ತೋತ್ರವನ್ನು ಹಾಡಿದ ಚರಿತ್ರೆಯನ್ನು ಮೇಲೆ ಹೇಳ ಹೋಗುವೆವು.

ತಿರುತ್ತಾಳ್‌ಕೊಂಡ ಪುರಾಣಂ

(ಸುಂದರಮೂರ್ತಿಯನ್ನು ಶಿವನು ತಡೆದು ಅವರನ್ನು ಆಳಾಗಿಸಿಕೊಂಡ ಸುಂದರಮೂರ್ತಿಸ್ವಾಮಿಯ ಪುರಾಣವು)

137. ಗಂಗೆ, ಚಂದ್ರ, ಹಾವು, ಕರ್ಣಿಕಾರ ಪುಷ್ಪ– ಇವುಗಳನ್ನು ಮುಡಿಯಲ್ಲಿ ಧರಿಸಿದ ಶಿವನು ಓಲೆಯನ್ನು ತೋರಿಸಿ ತನಗೆ ಸೇವಕನನ್ನಾಗಿ ಮಾಡಿಕೊಂಡ ನಂಬಿಯಾರೂರನ ನಾಡು ಯಾವುದು ಎಂದರೆ, ಸ್ತ್ರೀಯರ ಚಂದ್ರನಂತಹ ಮುಖಗಳ ಎರಡು ಬದಿಗಳಲ್ಲಿ ಕಣ್ಣುಗಳೆಂಬ ಮೀನುಗಳು ಕಿವಿಗಳವರೆಗೆ ಹರಡಿರುವ ತಿರುಮುನ್ನೈಪಾಡಿ ಎಂಬ ನಾಡು.

---

135. ವೇಣ್ಡು ಮಾಱು ವಿರುಪ್ಪುಱುಮ್ ವೇಟತ್ತರ್
ತಾಣ್ಡ ವಪ್ಪೆರು ಮಾನ್‌ತನಿ ತ್ತೊಣ್ಡರ್‌ಕಳ್
ನೀಣ್ಡ ತೊಲ್ಪುಕ ೞಾರ್‌ತಮ್ ನಿಲ್ಮೈಯೈ
ಈಣ್ಡು ವಾೞ್‌ತ್ತುಕೇನ್ ಎನ್‌ನಱಿನ್ ತೇತ್ತುಕೇನ್.

136. ಇನ್ಱ ಮಾತವರ್ ಕೂಟ್ಟತ್ತೈ ಎಮ್ಪಿರಾನ್
ಅನ್ಱುವ್ ಇಲ್‌ಪುಕೞ್ ಆಲಾಲ ಚುನ್ದರನ್
ಚುನ್ದ ರತ್ತಿರು ತ್ತೊಣ್ಡ ತ್ತೊಕೈತ್ತಮಿೞ್
ವನ್ತು ಪಾಟೆಯ ವಣ್ಣಮ್ ಉರೈಚೆಯ್ವಾಮ್.

ತಟುತ್ತಾಟ್ ಕೊಣ್ಡ ಪುರಾಣಮ್

137. ಕಙ್ಕೈಯುಮ್ ಮತಿಯುಮ್ ಪಾಮ್ಪುಮ್ ಕಟುಕ್ಕೈಯುಮ್ ಮುಟಿಮೇಲ್ ವೈತ್ತ
ಅಙ್ಕಣರ್ ಓಲೈ ಕಾಟ್ಟಿ ಆಣ್ಡವರ್ ತಮಕ್ಕು ನಾಟು
ಮಙ್ಕೈಯರ್ ವತನ ಚೀತ ಮತಿಇರು ಮರುಙ್ಕುಮ್ ಓಟಿ
ಚ್ಚೆಙ್ಕಯಲ್ ಕುೞೈಕಳ್ ನಾಟುಮ್ ತಿರುಮುನ್ನೈ ಪ್ಪಾಟಿ ನಾಟು.

138. ಸಂಪತ್ಸಮೃದ್ಧವಾದ ತಿರುಮುನ್ನೈಪಾಡಿ ಎಂಬ ನಾಡಿನಲ್ಲಿ ವೇದದಲ್ಲಿ ಸಾರವಾದ ಶಿವಸಮಯವು ವೃದ್ಧಿಯನ್ನು ಹೊಂದಲು, ಶಿವನ ದಯೆಯಿಂದ ಆಲಾಲ ಸುಂದರನು ಅವತರಿಸಿದ, ಮೇಲಾದ ತಪಸ್ಸಿನಿಂದ ಕೂಡಿದ ಊರು ಯಾವುದೆಂದರೆ ನೀತಿ ತಪ್ಪದ ಬ್ರಾಹ್ಮಣರು ಹೆಚ್ಚಾಗಿರುವ ತಿರುನಾವಲೂರೆಂಬ ಊರು.

139. ಉಮಾದೇವಿಯನ್ನು ಒಂದು ಭಾಗದಲ್ಲುಳ್ಳ ಶಿವನಿಗೆ ಪರಂಪರೆಯಾಗಿ ಸೇವೆಮಾಡಿಕೊಂಡು ಬರುವ ಆದಿಶೈವ ಬ್ರಾಹ್ಮಣಕುಲದಲ್ಲಿ ಉದಿಸಿದ, ಮೇಲ್ ಶಡೆಯನಾರ್ ಎನ್ನುವ ಶಿವಬ್ರಾಹ್ಮಣನಿಗೆ, ತಪ್ಪಿಲ್ಲದ ಪತಿವ್ರತಾಧರ್ಮದಿಂದ ಕೂಡಿದ, ಗೃಹಸ್ಥಧರ್ಮಕ್ಕೆ ಒಪ್ಪಿದ ಪತ್ನಿಯಾದ ಇಶೈಜ್ಞಾನಿಯ ಉದರದಲ್ಲಿ ಲೋಕದ ಕೆಟ್ಟ ನಡೆವಳಿಕೆಯನ್ನು ಹೋಗಲಾಡಿಸಿ, ಲೋಕವನ್ನು ಒಳ್ಳೆಯ ನಡತೆಯಲ್ಲಿ ಪ್ರವರ್ತಿಸು ವಂತೆ ಮಾಡಲು ಒಬ್ಬ ಮಗನು ಜನಿಸಿದನು.

140. ಶಿವಾನುಗ್ರಹದಿಂದ ತಪೋಕಾರಣವಾಗಿ ಮೇಲ್ಮೆಹೊಂದಿದ ಹಿರಿಯರು ಒಂದುಗೂಡಿ ಆ ಮಗುವಿಗೆ ನಂಬಿಯಾರೂರನು ಎಂಬ ಹೆಸರನ್ನಿಟ್ಟರು. ಆ ಮಗುವು ಉತ್ತಮವಾದ ಪಂಚಾಯುಧ, ಕಡಗ, ಆಭರಣಗಳನ್ನು, ಎದೆ, ಕಾಲುಗಳಲ್ಲಿ ಧರಿಸಿ, ಚಂದವಾದ ನೆತ್ತಿಬಿಲ್ಲೆಯನ್ನು ತಲೆಯಲ್ಲಿ ಧರಿಸಿ, ಸೊಂಟದಲ್ಲಿ ಚಿನ್ನದ ಉಡುದಾರವು ಪ್ರಕಾಶಿಸಲು, ಬೀದಿಯಲ್ಲಿ ಸಣ್ಣ ರಥವನ್ನು ಉರುಳಿಸುತ್ತಾ ಆಡುವ ಒಂದು ದಿವಸದಲ್ಲಿ

---

138. ಪೆರುಕಿಯ ನಲತ್ತಾಲ್ ಮಿಕ್ಕ ಪೆರುನ್ತಿರು ನಾಟು ತನ್ನಿಲ್
ಅರುಮಱೈ ಚ್ಚೈವಮ್ ಓಙ್ಕ ಅರುಳಿನಾಲ್ ಅವತ ರಿತ್ತ
ಮರುವಿಯ ತವತ್ತಾಲ್ ಮಿಕ್ಕ ವಳಮ್ಪತಿ, ವಾಯ್ಮೈ ಕುನ್ಱಾ
ತಿರುಮಱೈ ನೀಟುಮ್ ತಿರುನಾವ ಲೂರಾಮ್ ಅನ್ಱೇ.

139. ಮಾತೊರು ಪಾಕ ನಾರ್ಕ್ಕು ವಟಿವಟಿ ಅಟಿಮೈ ಚೆಯ್ಯುಮ್
ವೇತಿಯರ್ ಕುಲತ್ತುಳ್ ತೋನ್ಱಿ ಮೇಮ್ಪಟು ಚಟೈಯನಾರುಕ್ಕು
ಏತಮಿಲ್ ಕಱ್ಪಿನ್ ವಾಟ್ಕ್ಕೈ ಮನೈಇಚೈ ಞಾನಿ ಯಾರ್ಪಾಲ್
ತೀತಕನ್ ಱುಲಕಮ್ ಉಯ್ಯ ತ್ತಿರುಅವ ತಾರಮ್ ಚೆಯ್ತಾರ್.

140. ತಮ್ಪಿರಾನ್ ಅರುಳಿ ನಾಲೇ ತವತ್ತಿನಾಲ್ ಮಿಕ್ಕೋರ್ ಪೋಱ್ಱುಮ್,
ನಮ್ಪಿಯಾ ರೂರರ್ ಎನ್ಱೇ ನಾಮಮುಮ್ ಚಾಱ್ಱಿ ಮಿಕ್ಕ,
ಐಮ್ಪಟೈ ಚತಙ್ಕೈ ಚಾತ್ತಿ ಅಣಿಮಣಿ ಕ್ಕಟ್ಟೆ ಚಾತ್ತಿ,
ಚ್ಚೆಮ್ಪೊನ್ ನಾಣ್ ಅರೈಯಿಲ್ ಮಿನ್ನ ತೆರುವಿಲ್ತೇರ್ ಉರುಟ್ಟುನಾಳಿಲ್.

141. ನರಸಿಂಗಮುನೈಯರೆಂಬ ಆ ನಾಡಿನ ಅರಸನು, ಈ ಮಗುವನ್ನು ನೋಡಿ ಬಹುವಾದ ಆಶೆಯಿಂದ ತಂದೆಯಾದ ಶಡೆಯನಾರನಲ್ಲಿಗೆ ಹೋಗಿ, ಅವನಲ್ಲಿ ಹಿಂದಿನಿಂದ ಇರುವ ಸ್ನೇಹದಿಂದ ನಂಬಿಯಾರೂರನನ್ನು ತನಗೆ ಮಗನನ್ನಾಗಿ ಪಡೆದು ಕೊಂಡನು.

142. ಶ್ರೇಷ್ಠರಾದ ನರಸಿಂಗಮುನೈಯರ ಅಭಿಮಾನದ ಮಗನಾಗಿ, ಆ ವಂಶದ ಸಂಪ್ರದಾಯದಂತೆ ಪಾಲಿಸಲ್ಪಟ್ಟು, ಉಪನಯನ ಸಂಸ್ಕಾರವನ್ನು ಹೊಂದಿ, ಮಂಗಲವಾದ ಅಲಂಕಾರದಿಂದ ವೇದವಿಧಿಯಂತೆ ಉಪವೀತವನ್ನು ಧರಿಸಿ, ಅನಂತರ ಬಹುವಾದ ಶಾಸ್ತ್ರಗಳ ಅಧ್ಯಯನವನ್ನು ಮಾಡಿ, ವೈಭವದಿಂದ ಬೆಳೆದು ನಂಬಿಯಾರೂರನು ಮದುವೆ ಕಾಲವನ್ನು ಹೊಂದಿದನು.

143. ತಂದೆಯಾದ ಜಡೆಯ ನಾಯನಾರನು ತನ್ನ ಅಸಮ ಪುತ್ರನಿಗೆ, ಆದಿಶೈವ ಬ್ರಾಹ್ಮಣಕುಲದಲ್ಲಿ, ತನ್ನ ಮೇಲಾದ ಗೋತ್ರಕ್ಕೆ ಯೋಗ್ಯವಾದ ಪುತ್ತೂರಿನಲ್ಲಿ ಬಾಳುವ ಶಡಂಕವಿ ಶಿವಾಚಾರ್ಯನಲ್ಲಿ ಲಕ್ಷ್ಮಿಗೆ ಸಮಳಾದ ಅವನ ಮಗಳನ್ನು ಮದುವೆಯಾಗಲು ಕೇಳಲು ವಿಪ್ರರನ್ನು ಕಳುಹಿಸಿದನು.

---

141. ನರಚಿಙ್ಕ ಮುನೈಯರ್ ಎನ್ನುಮ್ ನಾಟುವಾಟಿ ಅರಚರ್ ಕಣ್ಟು
ಪರವರು ಙ್ಕಾತಲ್ ಕೂರ ಪ್ಪಯನ್ತವರ್ ತಮ್ಪಾಲ್ ಚೆನ್ಱು
ವಿರವಿಯ ನಣ್ಪಿ ನಾಲೇ ವೇಣ್ಟಿನರ್ ಪೆಱ್ಱು ತ್ತಙ್ಕಳ್
ಅರಚಿನ ಙ್ಕುಮರಱ್ ಕೇಱ್ಪ ಅನ್ಪಿನಾಲ್ ಮಕನ್ಮೈ ಕೊಣ್ಟಾರ್.

142. ಪೆರುಮೈಚಾಲ್ ಅರಚರ್ ಕಾತಱ್ ಪಿಳ್ಳೈಯಾಯ್ ಪ್ಪಿನುನುಮ್ ತಙ್ಕಳ್
ವರುಮುಱೈ ಮರಪಿಲ್ ವೈಕಿ ವಳರ್ನ್ತುಮ ಙ್ಕಲಙ್ಚೆಯ್ ಕೋಲತ್ತು
ಅರುಮಱೈ ಮುನ್ನೂಲ್ ಚಾತ್ತಿ ಅಳವಿಲ್ತೊಲ್ ಕಲೈಕಳ್ ಆಯ್ನ್ತು
ತಿರುಮಲಿ ಚಿಱಪ್ಪಿನ್ ಓಙ್ಕಿ ಚ್ಚೇರ್ಮಣ ಪ್ಪರುವ ಙ್ಚೇರ್ನ್ತಾರ್.

143. ತನ್ತೈಯಾರ್ ಚಟೈಯ ನಾರ್ತಮ್ ತನಿತ್ತಿರು ಮಕಱ್ಕು ಚ್ಚೈವ
ಅನ್ತಣರ್ ಕುಲತ್ತುಳ್ ತಙ್ಕಳ್ ಅರುಮ್ಪೆರುಮ್ ಮರವು ಕ್ಕೇಱ್ಪ
ವನ್ತತೊಲ್ ಚಿಱಪ್ಪಿಱ್ ಪುತ್ತೂರ್ ಚ್ಚಟಙ್ಕವಿ ಮಱೈಯೋನ್ ತನ್ಪಾಲ್
ಚೆನ್ತಿರು ಅನೈಯ ಕನ್ನಿ ಮಣತ್ತಿಱ ಙ್ಚೆಪ್ಪಿ ವಿಟ್ಟಾರ್.

144. ಜಡೆಯ ನಾಯನಾರನು ಇಂತಹ ಕುಲದವನೆಂದು ತಿಳಿದವರೂ, ಗೋತ್ರಗಳ ವಿಷಯದಲ್ಲಿ ಪರಿಜ್ಞಾನಿತರೂ, ಸತ್ಯವಾದಿಗಳೂ ಆದ ಮುದಿಬ್ರಾಹ್ಮಣರು ಹೇಳಲು, ಶಡಂಕವಿ ಶಿವಾಚಾರ್ಯನು ಹೆಣ್ಣನ್ನು ಕೊಡುವುದು ಒಳ್ಳೆಯದೆಂದು ಅಂಗೀಕರಿಸಿ ಸಂತೋಷಪಟ್ಟು ಮದುವೆಗೆ ಸಂಬಂಧಪಟ್ಟ ಮಾತುಕತೆಗಳನ್ನು ಮುಗಿಸಿ, ತನ್ನ ಮಗಳನ್ನು ನಂಬಿಯಾರೂರನಿಗೆ ಕೊಡಲು ಪ್ರೀತಿಯಿಂದ ಸಮ್ಮತಿಸಿದನು.

145. ಶಿವಾಚಾರ್ಯನು ಹೆಣ್ಣು ಕೊಡಲು ಸಮ್ಮತಿಸಿದುದನ್ನು ಕೇಳಿದ ಆ ವಿಪ್ರರು, ನಂಬಿಯಾರೂರನ ತಂದೆಯಲ್ಲಿಗೆ ಹೋಗಿ ತಿಳಿಸಿದ ಮೇಲೆ ಸಂತೋಷಾಧಿಕ್ಯದಿಂದ ಕೂಡಿ, ಮದುವೆಯ ಕಾರ್ಯದಲ್ಲಿ ಆಸಕ್ತನಾಗಿ, ಬಂಧುಗಳೊಡನೆ ಹೇಳಿ, ಅರಸನು ವಿವಾಹಕ್ಕೆ ಬೇಕಾದ ಹಣದ ಏರ್ಪಾಡನ್ನು ಮಾಡಿ, ಮುಹೂರ್ತ ದಿನವನ್ನು ನಿಶ್ಚಯಿಸಿ ಮದುವೆಯ ಓಲೆಯನ್ನು ಕಳುಹಿಸಿದನು.

146. ಮದುವೆಯ ಓಲೆಯನ್ನು ತೆಗೆದುಕೊಂಡು ಹೆಂಗಸರೂ, ಗಂಡಸರೂ, ನಂದನವನಗಳಿಂದ ಸುತ್ತುವರಿಯಲ್ಪಟ್ಟ ಪುತ್ತೂರಿಗೆ ಬಂದು ಸೇರಿದರು. ಅಲ್ಲಿ ಚೆಲುವಾದ ಹೆಂಗಸರೂ, ಗಂಡಸರೂ ಬಗ್ಗಿ ವಿನಯದಿಂದ ಆ ಮದುವೆಯೋಲೆಯನ್ನು ತೆಗೆದುಕೊಂಡರು.

---

144. ಕುಲಮುತಲ್ ಅಱಿವಿನ್ ಮಿಕ್ಕಾರ್ ಕೋತ್ತಿರ ಮುಱೈಯುಮ್ ತೇರ್ನ್ದಾರ್
ನಲಮಿಗು ಮುತಿಯೋರ್ ಚೊಲ್ಲ ಚ್ಚಟೈಙ್ಕವಿ ನನ್ಱೈ ಎಣ್ಣಿ
ಮಲರ್ತರು ಮುಕತ್ತನ್ ಆಕಿ ಮಣಮ್ಪುರಿ ಚೆಯಲಿನ್ ವಾಯ್ಮೈ
ಪಲವುಟನ್ ಪೇಚಿ ಒತ್ತು ಪಣ್ಪಿನಾಲ್ ಅನ್ಪು ನೇರ್ನ್ದಾನ್.

145. ಮಣ್ಣಿವನ್ ಇಚೈನ್ದ ವಾರ್ತ್ತೈ ಕೇಟ್ಟವರ್ ವಳ್ಳಲ್ ತನ್ನೈ
ಪ್ಪೆಣ್ಣವರ್ ತಮ್ಪಾಲ್ ಚೆನ್ಱು ಚೊಂನ್ನಪಿನ್ ಪೆರುಕು ಚಿನ್ದೈ
ಉಣ್ಣಿತೋರ್ ಮಕಿೞ್ಚ್ಚಿ ಎಯ್ದಿ ಮಣವಿನೈ ಉವನ್ದು ಚಾಱ್
ಕ್ಕೊಣ್ಣವರ್ ತಿರುವು ಕ್ಕೇಳ್ವಿ ಕ್ಕುಱಿತ್ತನಾಳ್ ಓಲೈ ವಿಟ್ಟಾರ್.

146. ಮಙ್ಕಲಮ್ ಪೊಲಿಯ ಚ್ಚೆಯ್ದ ಮಣವಿನೈ ಓಲೈ ಏನ್ದಿ
ಅಙ್ಕಯಱ್ ಕಣ್ಣಿ ನಾರುಮ್ ಆಟವರ್ ಪಲರುಮ್ ಈಣ್ಟಿ
ಕ್ಕೊಙ್ಕಲರ್ ಚ್ಚೋಲೈ ಮೂತೂರ್ ಕುಱುಕಿನಾರ್ ಎತಿರೇ ವನ್ದು
ಪಙ್ಕಯ ವತನಿ ಮಾರುಮ್ ಮೈನ್ದರುಮ್ ಪಣಿನ್ದು ಕೊಣ್ಟಾರ್,

147. ವಿವಾಹದ ಓಲೆಯನ್ನು ಸ್ವೀಕರಿಸಿದುದರಿಂದ ಸಂತೋಷವನ್ನು ಹೊಂದಿ ಎಲ್ಲರೂ ತಿಳಿಯುವಂತೆ ಅದನ್ನು ಓದಿ ಹೇಳಿ, ವಿವಾಹ ಸಂಬಂಧದ ಶುಭಕಾರ್ಯಗಳೆಲ್ಲಾ ಪ್ರಶಸ್ತವಾಗಿ ಆಗುತ್ತಿರಲು, ಅವುಗಳಲ್ಲಿ ನಿರತರಾಗಿ ಯಾವುದರಲ್ಲಿಯೂ ಕೊರತೆ ಇಲ್ಲದಂತೆ ಹಾಕಿದ ಹೂಮಾಲೆಗಳುಳ್ಳ ಚಪ್ಪರದಲ್ಲಿ ಮನಸ್ಸಂತೋಷದಿಂದ ವಿಪ್ರರೆಲ್ಲಾ ಒಟ್ಟುಗೂಡಿ ಅಂಕುರಗಳು ಉಂಟಾಗುವಂತೆ ನವಧಾನ್ಯಗಳನ್ನು ಸಣ್ಣ ಮಣ್ಣಿನ ಪಾತ್ರೆಗಳಲ್ಲಿರಿಸಿದರು.

148. ವಿವಾಹಕ್ಕೆ ಆಗತಕ್ಕ ಕಾರ್ಯಗಳನ್ನು ಶಿವಾಚಾರ್ಯನೂ ಇತರ ಬಂಧುಗಳೂ ಮಾಡಲು, ತುಂಬಿಗಳು ಮುಸುರುವ ಹೂ ಗೊಂಚಲುಗಳಿಂದ ತಯಾರಿಸಿದ ಮಾಲೆಗಳಿಂದ ಅಲಂಕೃತರಾದ ನಂಬಿಯಾರೂರನನ್ನು, ವಿವಾಹದ ಮೊದಲ ದಿನವೇ ಧರ್ಮಶಾಸ್ತ್ರದ ವಿಧಿಯಂತೆ, ವಾದ್ಯಘೋಷದೊಡನೆ ಆಶೀರ್ವದಿಸಿ, ಚಿನ್ನದ ನೂಲಿನ ರಕ್ಷೆಯನ್ನು ಬಂಧುಗಳು ಅವನ ಕೈಯಲ್ಲಿ ಕಟ್ಟಿದರು.

149. ಶ್ರೇಷ್ಠವಾದ ವೇದವಿಧಿಯು ತಪ್ಪದಂತೆ ವಿವಾಹ ಕಾರ್ಯಗಳು ನಡೆಯುತ್ತಿರುವ ಶುದ್ಧವಾದ ವೇದಗಳು ಶಬ್ದಿಸುವ ಹಳೆಯದಾದ ತಿರುನಾವಲೂರಿನಲ್ಲಿ ಮದುವೆಯ ಮೊದಲ ದಿನ ರಾತ್ರಿಯಲ್ಲಿ ಮಂಗಲಕರವಾದ ವಾದ್ಯಗಳು ಶಬ್ದಿಸಲು ಮಧುಯುಕ್ತವಾದ ಮಾಲೆಗಳಿಂದ ಅಲಂಕರಿಸಿದ ನಂಬಿಯಾರೂರನ ಮದುವೆಯ ಸೊಬಗನ್ನು ನೋಡುವಂತೆ ಆಸೆಯುಳ್ಳ ಮನಸ್ಸಿನವನ ಹಾಗೆ ಸೂರ್ಯನು ಉದಯಿಸಿದನು.

---

147. ಮಕಿೞ್ಚ್ಚಿಯಾಲ್ ಮಣವಿೞಾ ಕ್ಕುಱಿ ಮಙ್ಗಲ ವಿನೈಕಳ್ ಎಲ್ಲಾಮ್
ಪುಕೞ್ಚ್ಚಿಯಾಲ್ ಪೊಲಿನ್ದು ತೋನ್ಱ ಪ್ಪೋಱ್ಱಿಯ ತೊೞಿಲರಾಕಿ
ಇಕೞ್ಚ್ಚಿಯೊನ್ ಱಾನುಮ್ ಇನ್ಱಿ ಏನ್ದುಪೂ ಮಾಲೈ ಪ್ಪನ್ದರ್
ನಿಕೞ್ಚ್ಚಿಯಿನ್ ವೈಮ್ಮನ್ದರ್ ಈಣ್ಟಿ ನೀಳ್ಮುಳೈ ಚಾತ್ತಿ ನಾರ್ಕಳ್.

148. ಮಣವಿನೈ ಕ್ಕೈವೈನ್ದ ಚೆಯ್ಕೈ ಮಾತಿನೈ ಪ್ಪಯನ್ದಾರ್ ಚೆಯ್ಯ
ತ್ತುಣರ್ಮಲರ್ ಕ್ಕೋತೈ ತ್ತಾಮ ಚ್ಚುರುಮ್ಬಣೈ ತೋಳಿ ನಾನೈ
ಪ್ಪುಣರ್ಮಣ ತ್ತಿರುನಾಳ್ ಮುನ್ನಾಟ್ ಪೊರುನ್ದಿಯ ವಿತಿಯಿ ನಾಲೇ
ಪಣೈಮುರಚಿಯಮ್ ಪವಾೞ್ತ್ತಿ ಪ್ಪೈಮ್ಪೊನ್ ನಾಣ್ ಕಾಪ್ಪು
ಚ್ಚೇರ್ತ್ತಾರ್.

149. ಮಾಮಱೈ ವಿತಿವ ೞಾಮಲ್ ಮಣತ್ತುಱೈ ಕ್ಕಟನ್ ಕಳ್ ಆಱ್ಱ
ತ್ತೂಮಱೈ ಮೂತೂರ್ ಕ್ಕಙ್ಗುಲ್ ಮಙ್ಗಲ ನ್ದನ್ಱಿ ಆರ್ಪ್ಪ
ತ್ತೇಮರು ತೊಟೈಯಲ್ ಮಾರ್ಪನ್ ತಿರುಮಣ ಕ್ಕೋಲ ಙ್ಕಾಣ
ಕ್ಕಾಮುಱು ಮನತ್ತಾನ್ ಪೋಲ ಕ್ಕತಿರವನ್ ಉತಯಮ್ ಚೆಯ್ತಾನ್.

I. I. T. S. LIBRARY

150. ನಂಬಿಯಾರೂರನು ನಿತ್ಯಕರ್ಮಗಳನ್ನು ಬೇಗನೆ ಮುಗಿಸಿ ಜೋಯಿಸರು ಹೇಳಿದ ಮುಹೂರ್ತಕ್ಕೆ ಮೊದಲೇ ಮದುವೆಯ ಆಸೆಯು ಹೆಚ್ಚುತ್ತಿರಲು, ಉಪವೀತವನ್ನು ಧರಿಸಿದನು. ಬಹುವಾದ ಸೂಕ್ಷ್ಮವಾದ ಶಾಸ್ತ್ರಗಳಲ್ಲಿ ಪರಿಣತನೂ ಆದ ನಂಬಿಯಾರೂರನು ತಾನು ಧರಿಸಿಕೊಂಡ ಮಣಿಮಾಲೆಯೂ ಪುಷ್ಪಹಾರವೂ ಪ್ರಕಾಶಿಸಲು ಮಜ್ಜನಗೃಹವನ್ನು ಪ್ರವೇಶಿಸಿದನು.

151. ಸುವಾಸನೆಯ ಹೊಗೆಯನ್ನು ಹಾಕಿ, ಪುಷ್ಪಗಳ ಸುಗಂಧದಿಂದ ಕೂಡಿದ ಶುದ್ಧವಾದ ನೀರಿನ ಪಾತ್ರೆಗಳನ್ನು ಸಮೀಪದಲ್ಲಿಟ್ಟು, ದೊಡ್ಡ ಮಣಿಗಳನ್ನು ಕಟ್ಟಿರುವ ಚಿನ್ನದ ಕಾಲುಗಳುಳ್ಳ ಪೀಠದಲ್ಲಿ ಕುಳ್ಳಿರಿಸಿ, ನೀರನ್ನು ಹೊಯ್ದು ಸ್ನಾನಮಾಡಿಸಿ, ಅರಿಸಿನದ ಹುಡಿಯನ್ನು ಪೂಸಿ, ಪ್ರೀತಿಯಿಂದ (ಶಿವನ ಪ್ರೀತಿಯ) ನಂಬಿಯಾರೂರನ ಶರೀರವನ್ನು ಚಂದವಾಗುವ ರೀತಿಯಲ್ಲಿ ಬಂಧುಗಳು ಸ್ನಾನಮಾಡಿಸಿದರು.

152. ಅಗಿಲ ಹೊಗೆಯ ಪರಿಮಳವುಳ್ಳ ಪಟ್ಟೆಯನ್ನುಡಿಸಿ ಮುಗಿಲೆಡೆಯ ಚಂದ್ರನಂತೆ ಶೋಭಿಸುವ ಕೈಬೆರಳುಗಳುಳ್ಳ, ಅಲಂಕರಿಸುವಲ್ಲಿ ನಿಪುಣನಾದವನು ತನ್ನ ಮುಂಗೈವಸ್ತ್ರದಿಂದ ಕೂದಲ ಪಸೆಯನ್ನು ಒರಸಿ ತನ್ನ ಶುದ್ಧವಾದ ಕೈಯ ಉಗುರ್ಗೊನೆಗಳಿಂದ ಕೂದಲ ಸಿಕ್ಕನ್ನು ಬಿಡಿಸಿ ಪರಿಮಳಯುಕ್ತವಾದ ಕೂದಲುಗಳನ್ನು ಮುಡಿಯಾಗಿ ಕಟ್ಟಿದನು.

---

150. ಕಾಲೈಚೆಯ್ ವಿನೈಕಳ್ ಮುಱ್ಱಿ ಕ್ಕಣಿತ ನೂಲ್ ಪುಲವರ್ ಚೊನ್ನ
ವೇಲೈವ ನ್ತಣೈಯುಮ್ ಮುನ್ನರ್ ವೀತಿಮಣ ಕ್ಕೋಲಮ್ ಕೊಳ್ವಾನ್
ನೂಲಚೈನ್ ತಿಲಙ್ಕು ಮಾರ್ಪಿನ್ ನುಣಙ್ಕಿಯ ಕೇಳ್ವಿ ಮೇಲೋನ್
ಮಾಲೈಯುನ್ ತಾರುಮ್ ಪೊಙ್ಕ ಮಜ್ಜನ ಚಾಲೈ ಪುಕ್ಕಾನ್.

151. ವಾಚನೆ ಯ್ಯೂಟ್ಟಿ ಮಿಕ್ಕ ಮಲರ್ವಿರೈ ಅಟುತ್ತ ತೂನೀರ್
ಪಾಚನ ತ್ತವೈನ್ತ ಪಾಙ್ಕರ್ ಪ್ಪರುಮಣಿ ಪ್ಪೈಮ್ಪೊನ್ ತಿಣ್ಕಾಲ್
ಆಚನ ತ್ತಣಿನೀರ್ ಆಟ್ಟಿ ಅರಿಚನ ಇಞ್ಚಾತ್ತಿ ಅನ್ಪಾಲ್
ಈಚನು ಕ್ಕಿನಿಯಾನ್ ಮೇನಿ ಎಟಿಲ್ಪೆಱ ವಿಳಕ್ಕಿ ನಾರ್ಕಳ್.

152. ಅಕಿಲ್ವಿರೈ ತ್ತೂಯ ಮೇಯ್ನ್ತ ಅಣಿಕೊಳ್ಪ ಟ್ಟಾಟೈ ಚಾತ್ತಿ
ಮುಕಿಲ್ನುಟೈ ಮತಿಯಮ್ಪೋಲ ಕ್ಕೈವಲಾನ್ ಮುನ್ಕೈ ಚೂಟ್ನ್ತ
ತುಕಿಲ್ಕೊಟು ಕುಞ್ಚಿ ಈರಮ್ ಪುಲರ್ತ್ತಿತ್ತನ್ ತೂಯ ಚೆಙ್ಕೈ
ಉಕಿರ್ನುತಿ ಮುಱೈಯಿಲ್ ಪೋಕ್ಕಿ ಒಳಿರ್ನಱು ಞ್ಚಿಕಟಿ ಆರ್ತ್ತಾನ್

153. ಶುದ್ಧವಾದ ಸುವಾಸನೆಯ ಪಚ್ಚಕರ್ಪೂರದ ಹುಡಿಯೊಡನೆ ಹಲಹೂಗಳ ಪನ್ನೀರನ್ನೂ ಸೇರಿಸಿ ಆದ ಚಂದನದ ಕೆಸರಿನಿಂದ ಶರೀರವನ್ನು ಪೂಸಿ ಕಸ್ತೂರಿದ್ರವದಲ್ಲಿ ಸೇರಿಸಿದ ಮಂಗಲಕರವಾದ ಲೇಪನಗಳನ್ನು ಲೇಪಿಸಿ ಎದೆಯಲ್ಲಿ ಉಪವೀತವು ಪ್ರಕಾಶಿಸಲು, ಪವಿತ್ರವು ಕೈಯಲ್ಲಿ ಶೋಭಿಸಲು ಅಂತಹ ನಂಬಿಯಾರೂರನು,

154. ಪವಿತ್ರವಾದ ಪುಷ್ಪಗಳ ಮಾಲೆ, ಭಕ್ತಿಮಾಲೆ ಎಂಬ ಈ ವಿಧವಾದ ಮಾಲೆಗಳಿಂದ ಅಲಂಕರಿಸಲ್ಪಟ್ಟು ತೊಟ್ಟ ಮಾಣಿಕ್ಯಗಳ ಕಿರಣಗಳಿಂದ ಕತ್ತಲನ್ನೋಡಿಸುವ ಶ್ರೇಷ್ಠವಾದ ಆಭರಣಗಳನ್ನು ಧರಿಸಿ ವಿವಾಹಾಲಂಕಾರವನ್ನು ಹೊಂದಿದನು.

155. ನರಸಿಂಗಮೊನೈಯರನ ಸಂಪತ್ತೂ ತನ್ನ ವೇದರಾಶಿಯ ಸಂಪತ್ತೂ ಪ್ರಕಾಶಿಸಲು, ತಿರುನಾವಲೂರು ವಿವಾಹಮಹೋತ್ಸವದಿಂದ ಕೂಡಿರಲು, ನಂಬಿಯಾರೂರನು ಶಿವನ ಶ್ರೀಪಾದಗಳನ್ನು ಮನದಲ್ಲಿ ಧ್ಯಾನಿಸಿಕೊಂಡು ವಿಭೂತಿಯನ್ನು ಮೈಯಲ್ಲಿ ಧರಿಸಿಕೊಂಡು ಹೊನ್ನಿನ ಆಭರಣಗಳಿಂದಲೂ ಮುತ್ತು ಮೊದಲಾದ ಮಣಿಗಳಿಂದಲೂ ಅಲಂಕೃತವಾದ ಮಂಗಲಕರವಾದ ಕುದುರೆಯ ಮೇಲೇರಿಕೊಂಡು ಹೊರಟನು.

156. ಹಲವು ವಾದ್ಯಗಳು ಘೋಷಿಸಲು, ಎಲ್ಲೆಡೆಗಳಲ್ಲಿಯೂ ಸ್ತೋತ್ರಶಬ್ದಗಳು ಕೇಳಿಬರಲು, ಹೆಂಗಸರು ಜಯಕಾರವನ್ನು ನುಡಿಯಲು, ನಾಲ್ಕು ವೇದಗಳೂ ಶಬ್ದಿಸಲು, ವಿವಾಹವನ್ನು ನೋಡಬಂದು ಕೂಡಿದವರಿಗೆ ಬೇಕಾದ ರೀತಿಯಲ್ಲಿ ಉಪಚಾರ ಮಾಡಿ, ಆನೆ ಕುದುರೆ ಮೊದಲಾದ ವಾಹನಗಳಲ್ಲೂ, ಶಿಬಿಕೆ ಮೊದಲಾದ ವಾಹನಗಳಲ್ಲೂ ಪರಿಜನರು ಏರಿ ಬಂದರು.

---

153. ತೂನಱುಮ್ ಪಚ್ಚುಙ್ಕರ್ ಪ್ಪೂರ ಚ್ಚುಣ್ಣತ್ತಾಲ್ ವಣ್ಣ ಪ್ಪೋತಿಲ್
ಆನತಣ್ ಪನಿನೀರ್ ಕೂಟ್ಟ ಅವ್ವೈತ್ತಚ ನ್ತನಚ್ಚೇಱಾಟ್ಟಿ
ಮಾನ್ಮತ ಚ್ಚಾನ್ತು ತೋಯ್ನ್ತ ಮಙ್ಕಲ ಕ್ಕಲವೈ ಚಾತ್ತಿ
ಪ್ಪಾನ್ಮಱೈ ಮುನ್ನೂಲ್ ಮಿನ್ನ ಪ್ಪವಿತ್ತಿರ ಇಚ್ಚಿರನ್ತ ಕೈಯಾನ್.

154. ತೂಮಲರ್ ಪ್ಪಿಣೈಯಲ್ ಮಾಲೈ ತುಣರ್ಇಣರ್ ಕ್ಕಣ್ಣಿ ಕೋತೈ
ತಾಮಮ್ಎನ್ ಱಿನ್ನೈಯ ವೇಱು ತಕುತಿಯಾಲ್ ಅಮೈಯ ಚ್ಚಾತ್ತಿ
ಮಾಮಣಿ ಅಣಿನ್ತ ತೂಯ ವಳರ್ಒಳಿ ಇರುಳ್ಕಾಲ್ ಚೀಕ್ಕುಮ್
ನಾಮನೀಳ್ ಕಲನ್ಕಳ್ ಚಾತ್ತಿ ನನ್ಮಣ ಕ್ಕೋಲಮ್ ಕೊಣ್ಡಾನ್.

155. ಮನ್ನವರ್ ತಿರುವುಮ್ ತಙ್ಕಳ್ ವೈತಿಕ ತ್ತಿರುವುಮ್ ಪೊಙ್ಕ
ನನ್ನಗರ್ ವಿೞವು ಕೊಳ್ಳ ನಮ್ಬಿಯಾ ರೂರರ್, ನಾತನ್
ತನ್ನಟಿ ಮನತ್ತುಟ್ ಕೊಣ್ಡು ತಕುನಿ್ತರು ನೀರು ಚಾತ್ತಿ
ಪ್ಪೊನ್ನಣಿ ಮಣಿಯಾರ್ ಯೋಗ ಪ್ಪುರವಿಮೇಱ್ ಕೊಣ್ಡು ಪೋನ್ದಾರ್.

156. ಇಯಮ್ಬಲ ತುವೈಪ್ಪ ಎಙ್ಕುಮ್ ಏತ್ತೊಲಿ ಎಟುಪ್ಪ ಮಾತರ್
ನಯನ್ತುಪ ಲ್ಲಾಣ್ಡು ಪೋಱ್ಱ ನಾನ್ಮಱೈ ಒಲಿಯಿನ್ ಓಙ್ಕ
ವಿಯನ್ತುಪಾರ್ ವಿರುಮ್ಬ ವನ್ತು ವಿರವಿನರ್ ಕ್ಕಿನ್ಪ ಇಚ್ಚೆಯ್ತೇ
ಉಯರ್ನ್ತವಾ ಕನಯಾ ನಙ್ಕಳ್ ಮಿಚ್ಚೈಕೊಣ್ಡಾರ್ ಉಱೈಯ ರಾನಾರ್.

157. ಮಂಗಲವಾದ ಗೀತಗಳನ್ನು ಹಾಡುವ ಬ್ರಾಹ್ಮಣರ ಕೂಟಗಳೊಡನೆ, ಹೂಮಾಲೆಗಳನ್ನೂ ಪರಿಮಳ ದ್ರವ್ಯಗಳನ್ನೂ ಧರಿಸಿದ ಗಂಡಸರು ಸಂದಣಿಸಿ, ಜೂಜಾಡುವ ಪಗಡೆಕಾಯಂತೆ, ತಾವರೆಯ ಮೊಗ್ಗಿನಂತೆ ಒತ್ತೊತ್ತಾಗಿರುವ, ಕುಂಕುಮ ಪರಿಮಳ ದ್ರವ್ಯ ಪೂಸಿರುವ ಸ್ತನಗಳುಳ್ಳ ಹೆಣ್ಣುಗಳು ಸುತ್ತಿಬರುವ ಸಂಭ್ರಮದಿಂದಲೂ,

158. ಶ್ರೇಷ್ಠವಾದ ವಿವಾಹ ಸಮಯದಲ್ಲಿ ಶಬ್ದಿಸುವ ಬಿಳಿ ಶಂಖಗಳಿಂದಲೂ, ಕಿವಿಗಳಲ್ಲಿರುವ ಆಭರಣ ಮಣಿಗಳಿಂದಲೂ, ಮುತ್ತು ಮೊದಲಾದ ಮಣಿಗಳಿಂದಲೂ, ಒತ್ತೊತ್ತಾಗಿರುವ ನವಿಲ್ಗರಿಗಳ ಬನಗಳಿಂದಲೂ, ಆ ವಿವಾಹ ವಿಭ್ರಮವು ಕರಿಯ ಕಡಲು ಉಕ್ಕಿ ಪೆರ್ಚಳಿಸುವಂತೆ ಶೋಭಿಸುತ್ತಿತ್ತು.

159. ಭೇರಿ ಮೊದಲಾದ ವಾದ್ಯಗಳು ಶಬ್ದಿಸಲು, ಸಾಲಾಗಿ ಹಿಡಿದ ಚಾಮರಗಳೂ, ಮಣಿಗೊಂಚಲುಗಳನ್ನು ಕಟ್ಟಿದ ದೊಡ್ಡ ಕೊಡೆಗಳೂ, ಒತ್ತೊತ್ತಾಗಿ ಹೋಗುತ್ತಿರಲು, ಪ್ರಕಾಶಿಸುವ ಧ್ವಜವಸ್ತ್ರಗಳು ಅಲ್ಲಾಡಲು, ಹೀಗೆ ಶ್ರೇಷ್ಠವಾದ ವಿವಾಹವು ಆ ಊರಿಗೆ ಬರಲು, ಆ ಕಾರಣದಿಂದ, ಆದಿಶೈವ ಬ್ರಾಹ್ಮಣರ ಆ ಪುತ್ತೂರು, 'ವಿವಾಹ ಬಂದ ಪುತ್ತೂರು' ಎಂಬ ಹೆಸರನ್ನು ಪಡೆಯುತ್ತದೆ.

160. ಪೂರ್ಣಕುಂಭ, ಧೂಪ, ದೀಪ, ಮೊಳಕೆಧಾನ್ಯಗಳಿರುವ ಪಾತ್ರ – ಇವುಗಳನ್ನು ಕೈಯಲ್ಲಿ ಹಿಡಿದುಕೊಂಡು, ಪರಿಮಳಯುಕ್ತವಾದ ಪುಷ್ಪ, ಗರಿಕೆ, ಸುವಾಸನೆಯ ಹುಡಿಗಳನ್ನು ಚೆಲ್ಲುತ್ತಾ, ಪರಿಮಳಜಲವನ್ನು ಬೀದಿಯಲ್ಲಿ ಹನಿಸಿ ಬ್ರಾಹ್ಮಣ ಸ್ತ್ರೀಯರು ನಂಬಿಯಾರೂರನ ವಿವಾಹಾರಂಭವನ್ನು ಎದುರುಗೊಳ್ಳಲು ಬಂದರು.

---

157. ಮಙ್ಗಲ ಕೀತ ನಾತ ಮಱೈಯವರ್ ಕುಋಾಙ್ಕ ಳೋಟು
ತೊಙ್ಕಲುಮ್ ವಿರೈಯುಮ್ ಚೂಟ್‌ನ್ತ ಮೈನ್ತರುಮ್ ತುವನ್‌ಱಿರ್ ಚೂತುಮ್
ಪಙ್ಕಯ ಮುಕೈಯುಮ್ ಚಾಯ್‌ತ್ತು ಪ್ಪಣೈತ್ತೆಟು ನ್ತಣಿಯಿಲ್ ವಿಕ್ಕ
ಕುಙ್ಕುಮ ಮುಲೈಯಿ ನಾರುಮ್ ಪರನ್ತೆಟು ಕೊಳ್‌ಕೈ ತ್ತಾಕ್ಕಿ.

158. ಅರುಙ್ಕಟಿ ಎಟುನ್ತ ಪೋಟ್‌ತಿನ್ ಆರ್‌ತ್ತವೆಳ್ ವಳೈಕ ಳಾಲುಮ್
ಇರುಙ್ಕುಟೈ ಮಕರತ್ತಾಲುಮ್ ಇಲಙ್ಕೊಳಿ ಮಣಿಕ ಳಾಲುಮ್
ನೆರುಙ್ಕಿಯ ಪೀಲಿಚ್ಚೋಲೈ ನೀಲನೀರ್ ತ್ತರಙ್ಕ ತ್ತಾಲುಮ್
ಕರುಙ್ಕಟಲ್ ಕಿಳರ್‌ನ್ತ ತೆನ್‌ನ ಕ್ಕಾಟ್ಚಿಯಿಱ್ ಪೊಲಿನ್ತ ತನ್‌ಱೇ.

159. ನೆರುಙ್ಕುತೂ ರಿಯಙ್ಕಳ್ ಏಙ್ಕ ನಿರೈತ್ತಚಾ ಮರೈಕಳ್ ಓಙ್ಕ
ಪ್ಪೆರುಙ್ಕುಟೈ ವಿಟೈನ್ತು ಚೆಲ್ಲ ಪ್ಪಿಣಙ್ಕುಪೂ ಙ್ಕೊಟಿಕಳ್ ಆಟ
ಅರುಙ್ಕಟಿ ಮಣವ್‌ವ ನ್ತೆಯ್ತ ಅನ್‌ಱುತೊ ಟ್ಟಿನ್‌ಱುಮ್ ಅನ್‌ಪಿಲ್
ವರುಙ್ಕುಲ ಮಱೈಯೋರ್ ಪುತ್ತೂರ್ ಮಣವ್ ವನ್ತ ಪುತ್ತೂ ರಾಮಾಲ್.

160. ನಿಱೈಕುಟಮ್ ತೂಪಮ್ ತೀಪಮ್ ನೆರುಙ್ಕುಪಾ ಲಿಕೈಕಳ್ ಏನ್ತಿ
ನಱೈಮಲರ್ ಅಱುಕು ಕಣ್ಣಮ್ ನಱುಮ್ಪೊರಿ ಪಲವುಮ್ ವೀಚಿ
ಉಱೈಮಲಿ ಕಲವೈ ಚ್ಚಾನ್ತಿನ್ ಉಱುಪುನಲ್ ತೆಳಿತ್ತು ವೀತಿ
ಮಱೈಯವರ್ ಮಟವಾರ್ ವಳ್ಳಲ್ ಮಣಮ್‌ಎತಿರ್ ಕೊಳ್ಳ ವನ್ತಾರ್.

161. ಮದುಮಗನನ್ನು ನೋಡಲು ಅಸಂಖ್ಯಾತವಾದ ಕಣ್ಣುಗಳು ಬೇಕೆಂದು ಆ ಹೆಂಗಸರಲ್ಲಿ ಕೆಲವರು ಹೇಳುವರು; 'ಷಡಂಕವಿ ಶಿವಾಚಾರ್ಯನ ಮಗಳು ಇಂತಹ ಗಂಡನನ್ನು ಪಡೆಯಲು ಬಹುವಾದ ತಪವನ್ನು ಮಾಡಿರಬೇಕು' ಎನ್ನುವರು ಕೆಲವರು; 'ಲೋಕದಲ್ಲಿ ಸಂತೋಷವನ್ನು ಪಡೆಯಲಾಗುವ ಈ ವಿವಾಹ ಸಂಭ್ರಮವನ್ನು ಕಂಡು ನಮ್ಮ ಬಾಳ್ವೆಯು ಸಫಲವಾಯಿತು' ಎಂದು ಹಲವರು ನುಡಿಯುವರು. ಗೀತಬದ್ಧವಾದ ಹಾಡುಗಳನ್ನು ಆನಂದದಿಂದ ಹಾಡಿಕೊಂಡು ಸಂತೋಷಿಸುವರು ಕೆಲವರು.

162. ಈ ಮದುಮಗಳ ಕಣ್ಣುಗಳಿಂದ ಹೊಮ್ಮುವ ಕರುಣಾಕಟಾಕ್ಷದ ಜಲದಲ್ಲಿ ನಾವು ಉಯ್ಯಾಲಾಡುವೆವು ಎನ್ನುವರು ಕೆಲವರು. (ಮದುಮಗನು ಏರಿರುವ) ಓಡಿಕೊಂಡು ಬರುವ ಕುದುರೆಯು ನಮ್ಮ ಸಮೀಪಕ್ಕೆ ಚೆನ್ನಾಗಿ ಬರುತ್ತದೆ ಎನ್ನುವರು ಕೆಲವರು. ಆಭರಣಗಳು ಪ್ರಕಾಶಿಸುವ ಈ ಮದುಮಗನು ಪುಣ್ಯವೇ ರೂಪುದಳೆದು ಬಂದವನು ಎನ್ನುವರು ಕೆಲವರು. ಇದಿರುಗೊಳ್ಳಲು ಬಂದ ಸ್ತ್ರೀಯರ ಕೂಟವು ಹೀಗೆ ಹೇಳುತ್ತಿರಲು ನಂಬಿಯಾರೂರನು ಬರುತ್ತಿದ್ದನು.

163. ಹೀಗೆ ಬರುವ ವಿವಾಹಸಂಭ್ರಮವುಳ್ಳ ನಂಬಿಯಾರೂರನು ಸುವಾಸನೆಯನ್ನು ಸೂಸುವ ವಿವಾಹಚಪ್ಪರಕ್ಕೆ ಬಂದು, ಶಂಖಗಳು ಎಲ್ಲೆಡೆಗಳಿಂದಲೂ ಮೇಘ ಕೂಟದಂತೆ ಶಬ್ದಿಸಲು, ಕುದುರೆಯಿಂದ ಕೆಳಗಿಳಿದು, ತಾನು ಮಾಡಿಕೊಳ್ಳುವ ವಿವಾಹದ ಸಂದರ್ಭದಲ್ಲಿ ನಡೆಯಹೋಗುವ ಒಂದು ಹೊಸ ಸಂಭವವುಳ್ಳವನಾಗಿ ಅದರಿಂದ ಹಿರಿಮೆಯನ್ನು ಹೊಂದಿದನು.

---

161. 'ಕಣ್ಕಳ್ಎ ಣ್ಣಿಲಾತ ವೇಣ್ಡು ಙ್ಙ್ಕಳೈಯ್ಯ ಕ್ಕಾಣ' ಎನ್ಪಾರ್
'ಪೆಣ್ಕಳಿಲ್ ಉಯರ ನೋಱ್ಱಾಳ್ ಚಟಙ್ಕವಿ ಪೇತ್ತೈ' ಎನ್ಪಾರ್
'ಮಣ್ಕಳಿ ಕೂರ ವನ್ತ ಮಣಮ್ಕಣ್ಡು ವಾೞ್ನ್ದೋಮ್' ಎನ್ಪಾರ್
ಪಣ್ಕಳಿಲ್ ನಿಱೈನ್ತ ಕೀತಮ್ ಪಾಟುವಾರ್ ಆಟುವಾರ್ ಕಳ್.

162. 'ಅಣ್ಣಕ್ಕೈ ಅರುಳಿನ್ ನೋಕ್ಕಿನ್ ವೆಳ್ಳತ್ತುಳ್ ಅಲ್ಲೈತ್ತೋಮ್' ಎನ್ಪಾರ್,
'ತಾಣ್ಟಿಯ ಪರಿಯುಮ್ ನಮ್ಪಾಲ್ ತಕುತಿಯಿನ್ ನಟನ್ತ' ತೆನ್ಪಾರ್,
'ಪೂಣ್ಟಿಯ ಙ್ಕಿವನೇ ಕಾಣುಮ್ ಪುಣ್ಣಿಯ ಮೂರ್ತ್ತಿ' ಎನ್ಪಾರ್,
ಈಣ್ಟಿಯ ಮಟವಾರ್ ಕೂಟ್ಟಮ್ ಇನ್ನನ ಇಚೈಪ್ಪ ಚ್ಚೆನ್ಱಾರ್.

163. ವರುಮಣ ಕ್ಕೋಲ ತ್ತಿಙ್ಕಳ್ ವಳ್ಳಲಾರ್ ತೆಳ್ಳುಮ್ ವಾಚ
ತ್ತಿರುಮಣ ಪ್ಪನ್ತರ್ ಮುನ್ಪು ಚೆನ್ಱುವೆಣ್ ಚಙ್ಕಮ್ ಎಙ್ಕುಮ್
ಪೆರುಮಟಿೞ್ಕ ಕುಲತ್ತಿನ್ ಆರ್ಪ್ಪ ಪ್ಪರಿಮಿಚೈ ಇೞಿನ್ತು ಪೇಣುಮ್
ಒರುಮಣ ತ್ತಿಜಿತ್ತಿನ್ ಅಙ್ಙ ನಿಕೞ್ನ್ತತು ಮೊೞಿವೇನ್ ಉಯ್ನ್ತೇನ್.

164. ವೇದಗಳು ಸುತ್ತುವರಿದು ಶಬ್ದಿಸುವ ಕೈಲಾಸವಾಸಿಯಾದ ಬ್ರಹ್ಮನು ಹಂಸವಾಗಿ ಮೇಲೆ ಹಾರಿಯೂ, ವಿಷ್ಣುವು ವರಾಹ ರೂಪದಿಂದ ಭೂಮಿಯನ್ನು ತೋಡುತ್ತ ಕೆಳಗೆ ಹೋಗಿಯೂ, ತುದಿಬುಡವನ್ನೇ ತಿಳಿಯಲಾಗದಂತಹ ಶಿವ ಪರಮಾತ್ಮನು, ತನ್ನ ಮಾತಿನಂತೆ ಆಲಾಲ ಸುಂದರನೆನ್ನುವ ನಂಬಿಯಾರೂರನನ್ನು ಮದುವೆಯಾಗಲು ಬಿಡದೆ ತಡೆದು, ತನ್ನ ತೊತ್ತಾಗಿ ಮಾಡಿಕೊಳ್ಳಲು, ಮನುಷ್ಯ ರೂಪವನ್ನು ತಾಳಿ ಬಂದನು.

165. ಹಣೆಗಣ್ಣನ್ನು ಮರೆಸಿದ, ಹರಡಿರುವ ಬಿಳಿಯ ವಸ್ತ್ರದಂತೆ ಪುಣ್ಯರೂಪವಾದ ವಿಭೂತಿಯು ಹಣೆಯಲ್ಲಿ ಪ್ರಕಾಶಿಸಲು, ನೆತ್ತಿಯಲ್ಲಿರುವ ಬಾಲಚಂದ್ರನು ವರ್ಧಿಸುವುದರಿಂದ ಅದರ ಕಿರಣಗಳು ಕೆಳಗೆ ಪಸರಿಸುವಂತೆ ತಲೆಯ ಮೇಲೆ ಒಟ್ಟು ಸೇರಿಸಿ ಕಟ್ಟಿದ ಬಿಳಿಯ ಕೂದಲು ಕೆಳಜಗುಳಿ ಅಲ್ಲಲ್ಲಿ ಆಡುತ್ತಿರಲು,

166. ತೂಂಗುವ ಕಿವಿಗೆ ಅಲಂಕಾರವಾಗಿ ರುದ್ರಾಕ್ಷಿಯ ಕುಂಡಲವು ನೇತಾಡಲು ರುದ್ರಾಕ್ಷಿಮಾಲೆಯಿಂದ ಶೋಭಿತವಾದ ವಕ್ಷಸ್ಥಳದಲ್ಲಿ ಉಪವೀತದೊಡನೆ ತೋಳಿನ ಮೇಲೆ ಹಾಕಿಕೊಂಡ ಬಿಳಿಯ ಉತ್ತರೀಯವು ಅಲಂಕಾರವಾಗಿ ತೋರಲು, ಬಿಸಿಲನ್ನು ಹೋಗಲಾಡಿಸುವ ಕೊಡೆಯು ಕೈಯಲ್ಲಿ ಶೋಭಿಸಲು,

167. ಬಸಿರ ಕೆಳಭಾಗದಲ್ಲಿ ಉಟ್ಟ ಪುರಾತನವಾದ ಕೌಪೀನವು ನಡುವನ್ನು ಅಲಂಕರಿಸಲು, ಬಿಳಿಯ ವಸ್ತ್ರದೊಡನೆ ದರ್ಭೆಯನ್ನು ಕಟ್ಟಿದ ವೇಣುದಂಡವನ್ನು ಕೈಯಲ್ಲಿ ಹಿಡಿದು ನಡೆದುಕೊಂಡು ಬರುವ,

---

164. ಆಲುಮಱೈ ಚೂೞ್ಕಯಿಲೈ ಯಿನ್ಕಣ್ ಅರುಳ್ ಚೆಯ್ತು
ಚಾಲುಮೊೞಿ ಯಾಲ್ವೞಿ ತಟುತ್ತಿಟಮೈ ಕೊಳ್ವಾನ್
ಮೇಲುಱ ಎೞುನ್ದುಮಿಕು ಕೀೞುಱ ಅಕೞ್ನ್ದುಂ
ಮಾಲುಮ್ಅಯ ನುಕ್ಕುಮ್ ಅರಿ ಯಾರ್ಒರುವರ್ ವನ್ದಾರ್.

165. ಕಣ್ಣಿಟೈ ಕರನ್ದ್ರಕತಿರ್ ವೆಣ್ಪಟಮ್ ಎನಚ್ಚೂೞ್
ಪುಣ್ಣಿಯ ನುತಲ್ಪುನಿತ ನೀಱುಪೊಲಿ ವೆಯ್ತು
ತ್ತಣ್ಮತಿ ಮುತಿರ್ನ್ದುಕತಿರ್ ಚಾಯ್ವತೆನ ಮಾತೇ
ವೆಣ್ಣರೈ ಮುಟಿತ್ತತು ವಿೞುನ್ದಿಟೈ ಚೞಙ್ಕ,

166. ಕಾತಿಲಣಿ ಕಣ್ಟಿಕೈ ವಟನ್ದ್ರಕುೞೈ ತಾೞ
ಚ್ಚೋತಿಮಣಿ ಮಾರ್ಪಿನ್ ಅಚ್ಚೈ ನೂಲಿನೊಟು ತೋಳಿನ್
ಮಾತುಪುನೈ ಉತ್ತರಿಯ ವೆಣ್ತುಕಿಲ್ ನುಟಙ್ಕ
ಆತಪ ಮ್ಮಱೈಕ್ಕುಮ್ಟೈ ಅಣಿಕ್ಕರಮ್ ವಿಳಙ್ಕ,

167. ಪಣ್ಟಿಚರಿ ಕೋವಣ ಉಟೈಪ್ಪಟಿಮೈ ಕೂರ
ಕ್ಕೊಣ್ಟತೊರ್ ಚೞಙ್ಕಲುಟೈ ಆರ್ನ್ದಿಱಕು ಕೊಳ್ಳ
ವೆಣ್ತುಕಿ ಲುಟನ್ಕುಚೈ ಮುಟಿನ್ದುವಿಟು ವೇಣು
ತ್ತಣ್ಟೊರುಕೈ ಕೊಣ್ಟುಕಟಲ್ ತಳ್ಳುನಟೈ ಕೊಳ್ಳ,

168. ಸೇರಿ ಬೆಳೆದ ಚೆಲುವಿನ ಪಕ್ವವಾದ ರೂಪವೋ, ಒಟ್ಟುಗೂಡಿ ಬೆಳೆದ ಮುದಿತನದ ರೂಪವೋ, ವೈದಿಕ ವಿಧಿಗಳ ಪರಿಪೂರ್ಣತೆಗೆ ಕಾರಣನಾದ ಆದಿಯ ಹಿರಿಯನೋ ಎಂದು ನೋಡುವವರು ಸಂದೇಹಿಸುವಂತೆ ರೂಪವನ್ನು ತಾಳಿ ಅಲ್ಲಿಗೆ ಬಂದು ಸೇರಿ,

169. ಹಿಂದೆ ಅಗಣಿತವಾದ ವೇದಗಳನ್ನು ಅನುಗ್ರಹಿಸಿದ ಪರಶಿವನು ವೇದವಿಧಿ ಪೂರ್ವಕವಾಗಿ ಆಗುವ ವಿವಾಹಮಂಟಪದ ಬಳಿ ನಂಬಿಯಾರೂರನ ಮುಂದೆ ಇರುವ ಸಭೆಯುವರೆದುರು ನಿಂತು, 'ನಾನು ಹೇಳುವ ಈ ವಾರ್ತೆಗಳನ್ನು ಸಭೆಯುವರೆಲ್ಲರೂ ಕೇಳಿ' ಎಂದು ಹೇಳಿದನು.

170. ಹೀಗೆ ಹೇಳುವ ಬ್ರಾಹ್ಮಣನನ್ನು ಅಲ್ಲಿ ನೆರೆದಿದ್ದ ಅಸಂಖ್ಯಾತ ವಿಪ್ರರೂ ಮದುವೆಯ ಅಲಂಕಾರದಿಂದ ಕೂಡಿ ಸಿಂಹದಂತೆ ಧೈರ್ಯದಿಂದ ಕೂಡಿದ ನಂಬಿಯಾರೂರನೂ 'ನೀವು ಬಂದುದು ಒಳ್ಳೆಯದಾಯಿತು. ಇದು ನಾವು ಮಾಡಿದ ತಪಸ್ಸಿನ ಫಲ' ಎಂದು ಹೇಳಿ ಸ್ವಾಗತಿಸಿ, 'ಇಲ್ಲಿ ನೀವು ತಿಳಿಸ ಬಯಸುವುದನ್ನು ಅರುಹಿರಿ' ಎಂದು ಹೇಳಿದರು.

171. ಶಿವನು ನಂಬಿಯಾರೂರನನ್ನು ನೋಡಿ 'ನಮ್ಮಿಬ್ಬರ ಸ್ನೇಹಕಾರಣದಿಂದ ನಾನು ಮೊದಲೇ ಮಾಡಿರುವ ಆ ನಮ್ಮೊಳಗಿನ ವ್ಯವಹಾರವನ್ನು ತೀರಿಸಿ ನಿನ್ನ ಮದುವೆಯನ್ನು ಮಾಡಿಕೊಳ್ಳು' ಎಂದು ಹೇಳಿದನು.

---

168. ಮೊಯ್‌ತ್ತುವಳರ್ ಪೇರಟಿಕು ಮೂತ್ತವಟಿ ವೇಯೋ
ಅತ್ತಕೈಯ ಮೂಪ್ಪೆನುವಮ್ ಅತನ್‌ವಟಿವ ಮೇಯೋ
ಮೆಯ್‌ತ್ತನೆಱಿ ವೈತಿಕವಮ್ ವಿಳೈನ್ತ ಮುತ ಲೇಯೋ
ಇತ್ತಕೈಯ ವೇಟಮ್‌ಎನ ಐಯುಮುಱ ಎಯ್ತಿ.

169. ವನ್ತಿರು ಮಾಮಱೈ ಮಣತ್ತೊಟಿಲ್ ತೊಟಙ್ಕುಮ್
ಪನ್ತರಿಟೈ ನಮ್ಪಿಎತಿರ್ ಪನ್‌ನುಚಪೈ ಮುನ್‌ನಿನ್(ಱು)
'ಇನ್ತಮೊಳಿ ಕೇಣ್‌ಮಿನ್‌ಎತಿರ್ ಯಾವರ್‌ಕಳುಮ್' ಎನ್‌ಱಾನ್
ಮುನ್ತೈಮಱೈ ಆಯಿರಮ್ ಮೊಳಿನ್ತಿರು ವಾಯಾನ್.

170. ಎನ್‌ಱುರೈಚೆಯ್ ಅನ್ತಣನೈ ಎಣ್ಣಿಲ್‌ಮಱೈ ಯೋರುಮ್
ಮನ್‌ಱಲ್‌ವಿನೈ ಮಙ್ಕಲ ಮಟಙ್ಕಲನೈ ಯಾನುಮ್
'ನನ್‌ಱುಮತು ನಲ್‌ವರವು ನಙ್ಕಳ್‌ತವಮ್' ಎನ್‌ಱೇ
ನಿನ್‌ಱತಿವಣ್ ನೀರ್‌ಮೊಳಿಯಿನ್ ನೀರ್‌ಮೊಳಿವ' ತೆನ್‌ಱಾರ್.

171. ಪಿಙ್ಕಕನುಮ್ ನಾವಲರ್ ಪೆರುನ್ತಕೈಯೈ ನೋಕ್ಕಿ
'ಎನ್‌ನಿಟೈಯುಮ್ ನಿನ್‌ನಿಟೈಯುಮ್ ನಿನ್‌ಱಇಚೈ ವಾಲ್‌ಯಾನ್
ಮುನ್‌ನುಟೈಯ ತೋರ್‌ಪೆರು ವಟಿಕ್ಕನೈ ಮುಟಿತ್ತೇ
ನಿನ್‌ನುಟೈಯ ವೇಳ್‌ವಿಯಿನೈ ನೀಮುಯಲ್ತಿ' ಎನ್‌ಱಾನ್.

172. ಶಿವನು ಹೀಗೆ ಹೇಳಲು ತನಗೆ ಸರಿಸಮರಿಲ್ಲದಂತಹ ನಂಬಿಯಾರೂರನು 'ಹಿಂದಿನಿಂದಲೇ ಇರುವ ನಿಮ್ಮೊಂದು ವ್ಯವಹಾರವು ನನ್ನಲ್ಲಿ ಇರುವುದೆಂದು ಹೇಳುವುದು ಸತ್ಯವಾದರೆ ಅದನ್ನು ತೀರಿಸದೆ ನಾನು ವಿವಾಹಮಾಡಿಕೊಳ್ಳುವುದಿಲ್ಲ. ನಿಮ್ಮ ವ್ಯವಹಾರವನ್ನು ಸರಿಯಾಗಿ ಅರುಹಿ' ಎನ್ನಲು ಶಿವಪರಮಾತ್ಮನು ಹೇಳುವನು,

173. 'ಬ್ರಾಹ್ಮಣರೇ ಕೇಳಿರಿ. ತಿರುನಾವಲೂರಿನ ನಂಬಿಯಾರೂರನು ನನ್ನ ಸೇವಕನು. ಇದೇ ನಾನು ಹೇಳಲು ಬಂದಿರುವ ವ್ಯವಹಾರದ ವಿಷಯ' ಎಂದು ಬ್ರಹ್ಮ ವಿಷ್ಣು ಮೊದಲಾದ ಎಲ್ಲಾ ದೇವತೆಗಳನ್ನೂ ಸೇವಕರನ್ನಾಗಿ ಉಳ್ಳ ಪರಮೇಶ್ವರನು ಹೇಳಿದನು.

174. ಇದನ್ನು ಕೇಳಿ ಎಲ್ಲೆಡೆಗಳಲ್ಲಿಯೂ ಇದ್ದ ಸಮಸ್ತರೂ 'ಈ ಬ್ರಾಹ್ಮಣ ಏನನ್ನು ಮಾಡಲು ಯೋಚಿಸಿದ್ದಾನೆ?' ಎಂದು ಅದನ್ನು ತಿಳಿಯಲು ಸಮೀಪಕ್ಕೆ ಸೇರಿದರು. ಕೋಪಿಸಿದರು. ನಕ್ಕರು. ನಂಬಿಯಾರೂರನೂ 'ಈ ವೇದಿಯನ ಮಾತು ಒಳ್ಳೆಯದಾಗಿದೆ' ಎಂದು ಅವನನ್ನು ನೋಡಿ ನಕ್ಕನು.

175. ತನ್ನನ್ನು ಪರಿಹಾಸ ಮಾಡಿದ ನಂಬಿಯಾರೂರನ ಮುಖವನ್ನು ನೋಡಿ ಶರೀರವು ನಡುಗಲು ವ್ಯಸನದಿಂದ ಕೂಡಿ ಎಲ್ಲರಿಗೂ ಮೇಲಾದ ಶಿವನು ಜಾರಿದ ಉತ್ತರೀಯವನ್ನು ಸರಿಪಡಿಸಿಕೊಂಡು ಅವನ ಸಮೀಪಕ್ಕೆ ಹೋಗಿ, 'ಅಂದು ನಿನ್ನ ತಾತನು ಬರೆದುಕೊಟ್ಟ ಅಡಿಮೆಯೋಲೆಯು ಇದು. ಕಾರ್ಯವು ಹೀಗಿರಲು ನೀನು ನಕ್ಕದ್ದೇನು?' ಎಂದನು.

---

172. ನೆಱ್ಱಿವಿೞಿ ಯಾನ್ಮೊೞಿಯ ನಿನ್ಱನಿಕರ್ ಇಲ್ಲಾನ್
'ಉಱ್ಱತೋರ್ ವೞಕ್ಕೆನಿಟೈ ನೀಯುಟೈಯ ತುಣ್ಟೇಲ್
ತುಱ್ಱತು ಮುಟಿತ್ತಲತಿ ಯಾನ್ವತುವೈ ಚೆಯ್ಯೇನ್;
ಮುಱ್ಱಿತು ಚೊಲ್ಲು' ಕೆನ ಎಲ್ಲೈಮುಟಿ ವಿಲ್ಲಾನ್.

173. 'ಆವತಿತು ಕೇಣ್ಮಿನ್ಮಱೈ ಯೋರ್! ಎನ್ಅಟಿ ಯಾನ್ಇ
ನ್ನಾವಲ್ನಕರ್ ಊನ್ಇತು ನಾನ್ಮೊೞಿವ' ತೆನ್ಱಾನ್
ತೇವರೈಯುಮ್ ಮಾಲಯನ್ ಮುತಲ್ತಿರುವಿನ್ ಮಿಕ್ಕೋರ್
ಯಾವರೈಯುಮ್ ವೇಱಟಿಮೈ ಯಾವುಟೈಯ ಎಮ್ಮಾನ್.

174. ಎನ್ಱಾನ್ ಇಱೈಯೋನ್ ಅತುಕೇಟ್ಟವರ್ ಎಮ್ಮರುಙ್ಕುಮ್
ನಿನ್ಱಾರ್ ಇರುನ್ತಾರ್ 'ಇವನ್ ಎನ್ನಿನೈನ್ತಾನ್ಕೊಲ್' ಎನ್ಱು
ಚೆನ್ಱಾರ್ ವೆಕುಣ್ಟಾರ್ ಚಿರಿತ್ತಾರ್, ತಿರುನಾವ ಲೂರಾನ್
'ನನ್ಱಾಲ್ ಮಱೈಯೋನ್ ಮೊೞಿ' ಎನ್ಱೆತಿರ್ ನೋಕ್ಕಿ ನಕ್ಕಾನ್

175. ನಕ್ಕಾನ್ ಮುಕಮ್ನೋಕ್ಕಿ ನಟುಙ್ಕಿ ನುಟಙ್ಕಿ ಯಾರ್ಕ್ಕುಮ್
ಮಿಕ್ಕಾನ್ ಮಿಕೈಯು ತ್ತರಿಯತ್ತುಕಿಲ್ ತಾಙ್ಕಿ ಮೇಱ್ಚೆನ್ಱು
'ಅಕ್ಕಾ ಲಮ್ಉನ್ತನ್ತೈ ತನ್ತನ್ತೈ ಆಳ್ಓಲೈ ಈತಾಲ್
ಇಕ್ಕಾ ರಿಯತ್ತೈ ನೀಇನ್ಱು ಚಿರಿತ್ತತೆನ್ ಎಟ' ಎನ್ನ.

176. ದೋಷರಹಿತವಾದ ಆದಿಶೈವ ಕುಲದಲ್ಲಿ ಅವತರಿಸಿದ ನಂಬಿಯಾರೂರನು, ಆ ಬ್ರಾಹ್ಮಣನನ್ನು ನೋಡಿ, ನಮ್ಮಿಬ್ಬರ ಸ್ನೇಹವು ಅಂದಿನಿಂದಲೇ ಇದ್ದುದರಿಂದುಂಟಾದ ಮನಸ್ಸಿನ ಆಕರ್ಷಣದಿಂದ, ನಗುವುದನ್ನು ಬಿಟ್ಟು, 'ನಿರ್ದೋಷರಾದ ಬ್ರಾಹ್ಮಣರು ಇತರ ವಿಪ್ರರಿಗೆ ದಾಸರಾಗುವ ಮಾತನ್ನು ಇಂದು ನಿನ್ನಲ್ಲಿ ಕೇಳಿದೆವು. ವಿಪ್ರನೇ, ನಿನಗೇನು ಹುಚ್ಚೋ?' ಎಂದು ಕೇಳಿದನು.

177. 'ನಾನು ಹುಚ್ಚನಾಗಿದ್ದರೂ ಇರಲಿ, ಪಿಶಾಚಿಯಿದ್ದರೂ ಇರಲಿ. ನೀನೀಗ ಎಷ್ಟೊಂದು ತಪ್ಪುಮಾತುಗಳನ್ನು ಹೇಳಿರುವಿ. ಆದರೂ ಅವುಗಳಿಂದ ನಾನು ನಾಚಿಕೆ ಪಡುವುದಿಲ್ಲ. ನಾನು ಯಾರೆಂದು ನೀನು ತಿಳಿಯಲಿಲ್ಲ. ಆದರೂ ನನ್ನೆದುರು ನಿಂತು ನಿನ್ನ ಶಕ್ತಿಯನ್ನು ಹೇಳುವುದು ಬೇಡ. ನನ್ನ ಸೇವೆಯನ್ನು ನೀನು ಮಾಡತಕ್ಕದು' ಎಂದು ಹೇಳಿದನು.

178. 'ನಾನು ಕಾಣುವ ಈ ಬ್ರಾಹ್ಮಣ ರೂಪು ಮನಸ್ಸಿನಲ್ಲಿ ಪ್ರೀತಿಯನ್ನು ಉಕ್ಕಿಸುವುದು. ಆದುದರಿಂದ ಇವನಲ್ಲಿ ಅಡಿಮೆಯೋಲೆಯು ಉಂಟೆಂಬ ಮಾತಿನ ಸತ್ಯವನ್ನು ತಿಳಿಯುವೆನು' ಎಂದು ನಂಬಿಯಾರೂರನು ಆ ಬ್ರಾಹ್ಮಣನನ್ನು ನೋಡಿ, 'ಅಡಿಮೆಯೋಲೆಯನ್ನು ತೋರಿಸು' ಎಂದನು.

---

176. ಮಾಚಿಲಾ ಮರಪಿಲ್ ವನ್ದ ವಳ್ಳಲ್‌ವೇ ತಿಯನ್ನೈ ನೋಕ್ಕಿ
ನೇಚಮುನ್ ಕಿಟನ್ದ ಚಿನ್ದೈ ನೆಕಿಟ್‌ಚಿಯಾಲ್ ಚಿರಿಪ್ಪು ನೀಕ್ಕಿ
'ಆಚಿಲ್‌ಅ ನ್ದಣರ್‌ಕಳ್ ವೇಱೋರ್ ಅನ್ದಣರ್ ಕ್ಕಟಿಮೈ ಆತಲ್
ಪೇಚಇನ್ ಱುನ್‌ನೈ ಕ್ಕೇಟ್ಟೋಮ್ ಪಿತ್ತನೋ ಮಱೈಯೋನ್' ಎನ್‌ಱಾರ್.

177. 'ಪಿತ್ತನುಮ್ ಆಕ ಪ್ಪಿನ್‌ನುಮ್ ಪೇಯನುಮ್ ಆಕ ನೀಯಿನ್‌ಱು
ಎತ್ತನೈ ತೀಙ್ಕು ಚೊನ್‌ನಾಲ್ ಯಾತುಮು ಱುವತ್ತಾಲ್ ನಾಣೇನ್
ಅತ್ತನೈ ಕ್ಕೆನ್‌ನೈ ಒನ್‌ಱುಮ್ ಅಱಿನ್ದಿಲೈ ಯಾಕಿಲ್ ನಿನ್‌ಱು
ವಿತ್ತಕಮ್ ಪೇಚ ವೇಣ್ಟಾಮ್ ಪಣಿಚೆಯ ವೇಣ್ಟುಮ್' ಎನ್‌ಱಾರ್.

178. 'ಕಣ್ಟೋರ್ ವಟಿವಾಲ್ ಉಳ್ಳ ಙ್ಕಾತಲ್‌ಚೆಯ್ ತುರುಕಾ ನಿಱ್‌ಕುಮ್;
ಕೊಣ್ಟೋರ್ ಪಿತ್ತ ವಾರ್‌ತ್ತೈ ಕೋಪಮುಮ್ ಉಟನೇ ಆಕ್ಕುಮ್;
ಉಣ್ಟೊರಾಳ್ ಓಲೈ ಎನ್‌ನುಮ್ ಅತನ್ ಉಣ್‌ಮೈ ಅಱಿವೇನ್' ಎನ್‌ಱು
ತೊಣ್ಟನಾರ್ 'ಓಲೈ ಕಾಟ್ಟು' ಕೆನ್‌ಱನರ್ ತುಣೈವ ನಾರೈ.

179. 'ಪತ್ರವನ್ನು ತೋರಿಸು' ಎನ್ನಲು, 'ಅದನ್ನು ನೋಡಿ ನೀನು ತಿಳಿದು ಕೊಳ್ಳಬಲ್ಲೆಯೋ ? ಈ ಸಭೆಯ ಮುಂದೆ ನಾನು ತೋರಿಸಿದ ಮೇಲೆ ನೀನು ನನಗೆ ಸೇವೆ ಮಾಡತಕ್ಕವನು' ಎಂದಾಗ ನಂಬಿಯು ಕೋಪಗೊಂಡು ಹರಿ ಅಜರು ಮುಟ್ಟಲು ಸಾಧ್ಯವಾಗದ ಶಿವನ ಸಮೀಪಕ್ಕೆ ಬಲುವೆುಯಿಂದ ಹೋದನು.

180. ಪ್ರಮಾಣಪತ್ರವನ್ನು ಸೆಳೆದುಕೊಳ್ಳಲು ನಂಬಿಯಾರೂರನು ಹೋಗು ವಾಗ, ಬ್ರಾಹ್ಮಣ ವೇಷದ ಶಿವನು ಮದುವೆಯ ಚಪ್ಪರದೊಳಗೆ ಓಡಲು ನಂಬಿಯಾರೂ ರನು ತಿರುಪ್ಪೂವನದಲ್ಲಿರುವ ಆ ದ್ವಿಜವೇಷದ ಶಿವನನ್ನು ವೇಗವಾಗಿ ಹಿಂಬಾಲಿಸಿ ಹಿಡಿದು ಕೊಂಡನು. ನಂಬಿಯಾರೂರನಲ್ಲದೆ ಬೇರೆ ಯಾವನು ತಾನೇ ತ್ರಿಪುರಗಳನ್ನು ದಹಿಸಿದ, ಮೇರುವನ್ನು ಬಿಲ್ಲನ್ನಾಗಿ ಮಾಡಿದ ಶಿವನನ್ನು ಸಮೀಪಿಸಬಲ್ಲನು ?

181. ವೇದಗಳು ಮೊದಲಲ್ಲೇ ಸ್ತುತಿಸಿ ಯಾವನ ಶ್ರೀಪಾದಗಳನ್ನು ಆಶ್ರಯಿಸಿ ನಿಲ್ಲುವುವೋ, ಅಂತಹ ಶಿವನನ್ನು ಸಮೀಪಿಸಿ ಹಿಡಿದು, ಬರೆದಿರುವ ಪ್ರಮಾಣಪತ್ರವನ್ನು ಸೆಳೆದುಕೊಂಡು, ಶಬ್ದಿಸುವ ಕಾಲ್ಗಡಗವುಳ್ಳ ನಂಬಿಯಾರೂರನು, 'ಬ್ರಾಹ್ಮಣರು ಸೇವಕರಾಗಿ ಕೆಲಸಮಾಡುವುದು ಯಾವ ಶಾಸ್ತ್ರದಲ್ಲಿ ಹೇಳುವ ನೀತಿ ?' ಎಂದು ಆ ಪತ್ರ ವನ್ನು ಹರಿದುಹಾಕಿಬಿಟ್ಟನು. ಅಂತ್ಯವಿಲ್ಲದ ಶಿವನು (ದ್ವಿಜವೇಷಧಾರಿಯು) 'ಇದು ನೀತಿಯೇ ?' ಎಂದು ಮೊರೆಯಿಟ್ಟನು.

---

179. 'ಓಲೈ ಕಾಟ್ಟು'ಎನ್ಱು ನಮ್ಬಿ ಉರೈಕ್ಕ 'ನೀ ಓಲೈ ಕಾಣಱ್
ಪಾಲೈಯೋ ಅವೈಮುನ್ ಕಾಟ್ಟ ಪ್ಪಣಿಚೆಯ್ಯಱ್ ಪಾಲೈ' ಎನ್ಱ
ವೇಲೈಯಿಲ್ ನಾವ ಲೂರರ್ ವೆಕುಣ್ಡುಮೇಲ್ ವಿರೈನ್ದು ಚೆನ್ಱು
ಮಾಲಯನ್ ತೊಟರಾ ತಾನೈ ವಲಿನ್ದುಪಿನ್ ತೊಟಾ ಲುಱ್ಱಾರ್.

180. ಆವಣಮ್ ಪಱಿಕ್ಕ ಚೆನ್ಱ ಅಳವಿನಿಲ್ ಅನ್ದ ಣಾಳನ್
ಕಾವಣ ತ್ತಿಟೈಯೇ ಓಟ ಕ್ಕಟಿತುಪಿನ್ ತೊಟರ್ನ್ದು ನಮ್ಬಿ
ಪೂವಣ ತ್ತವರೈ ಉಱ್ಱಾರ್ ಅವರಲಾಲ್ ಪುರಙ್ಕಳ್ ಚೆಱ್ಱ
ಏವಣ ಚಿಲೈಯಿ ನಾರೈ ಯಾರ್ತೊಟರ್ ನ್ದೆಟ್ಟ ವಲ್ಲಾರ್ ?

181. ಮಱೈಕಳಾ ಯಿನಮುನ್ ಪೋಱ್ಱಿ ಮಲರ್ಪ್ಪತಮ್ ಪಱ್ಱಿ ನಿನ್ಱ
ಇಱೈಯವನ್ರೈ ತೊಟರ್ನ್ದು ಪಱ್ಱಿ ಎೞುತುಮ್ ಆಳ್ ಓಲೈ ವಾಙ್ಕಿ
ಅಱೈಕೞಲ್ ಅಣ್ಣಲ್ 'ಆಳಾಯ್ ಅನ್ದಣರ್ ಚೆಯ್ದಲ್ ಎನ್ನ
ಮುಱೈ' ಎನಕ್ಕೀಱಿ ಯಿಟ್ಟಾರ್; ಮುಱೈಯಿಟ್ಟಾನ್ ಮುಟಿವಿ ಲಾತಾನ್.

182. ವೇದಗಳಿಗೂ ಸಿಗದ ಶಿವನು ನಂಬಿಯನ್ನು ಕೈಯಲ್ಲಿ ಹಿಡಿದು, 'ಇದು ನೀತಿಯೋ?' ಎನ್ನಲು, ಸಮೀಪ ನಿಂತವರು ಇಬ್ಬರನ್ನೂ ಬಿಡಿಸಿ, 'ಈ ಲೋಕದಲ್ಲಿಯೇ ಇಲ್ಲದ ವಿಶೇಷದ ಹೊಸ ಪದ್ಧತಿಯನ್ನು ಕೈಕೊಂಡು ಅದನ್ನು ತೀರಿಸಬೇಕೆಂದು ಹಟ ಮಾಡುವ ಹಿರಿಯ ಮುನಿಗಳೇ, ನೀವೆಲ್ಲಿರುವವರು ಹೇಳಿ' ಎಂದು ಕೇಳಿದರು.

183. ಹೀಗೆ ಕೇಳಲು, ದ್ವಿಜವೇಷದ ಶಿವನು, 'ನನ್ನ ಊರು ಇಲ್ಲಿಂದ ಬಹು ದೂರದಲ್ಲಿಲ್ಲ. ಸಮೀಪದ ತಿರುವೆಣ್ಣೈನಲ್ಲೂರೇ ಆಗಿದೆ. ಅದು ಹಾಗಿರಲು ನೀತಿ ಧರ್ಮವೆಂದು ಸಾಹಸವನ್ನು ತೋರಿಸಿ ನನ್ನ ಕೈಯ ಪ್ರಮಾಣಪತ್ರವನ್ನು ಸೆಳೆದು ತಾನು ನನಗೆ ಸೇವಕನೆಂಬುದನ್ನು ಈತನೇ ಸ್ಥಿರಪಡಿಸಿದನು,' ಎಂದು ಹೇಳಿದನು.

184. ಶಂಖದ ಉಂಗುರಗಳಿಂದ ಮರೆಯಾದ ಕಿವಿಗಳುಳ್ಳ ಶಿವನನ್ನು, ದೋಷರಹಿತನಾದ ನಂಬಿಯು ನೋಡಿ, ಹಳೆಯ ನ್ಯಾಯಸಭೆಗಳ ಪದ್ಧತಿಗಳನ್ನು ತಿಳಿದವರಿವರು ಎಂದು ಪ್ರೀತಿ ಹೆಚ್ಚಿ, ಮನವು ಆಶಿಸಲು, 'ನೀವು ತಿರುವೆಣ್ಣೈನಲ್ಲೂರಿನಲ್ಲಿ ಇರುವವರಾದುದರಿಂದ ನಿಮ್ಮ ದೋಷಯುಕ್ತವಾದ ಆ ಪದ್ಧತಿಯನ್ನು ಅಲ್ಲಿಯೇ ಹೇಳುವಿರಂತೆ, ಬನ್ನಿ' ಎಂದು ಹೇಳಿದನು.

185. ಬ್ರಾಹ್ಮಣನು ಅದನ್ನು ಕೇಳಿ, 'ತಿರುವೆಣ್ಣೈನಲ್ಲೂರಿಗೆ ನೀನು ಬಂದರೆ ಒಳ್ಳೆಯದು. ಅಲ್ಲಿಯ ಹಿರಿಯ ಬ್ರಾಹ್ಮಣರ ಮುಂದೆ ಹಿಂದೆಯೇ ಬರೆದ ಆ ಮೂಲ ಓಲೆಯನ್ನು ತೋರಿಸಿ, 'ನೀನು ನನಗೆ ಅಡಿಮೆಯವನು' ಎನ್ನುವುದನ್ನು ಸಾಧಿಸುವೆನು' ಎಂದು ತನ್ನ ದಂಡವನ್ನೂರಿಕೊಂಡು ತಿರುವೆಣ್ಣೈನಲ್ಲೂರನ್ನು ಸೇರಿದನು.

---

182. ಅರುಮಱೈ ಮಱೈಯಿ ಟ್ಟನ್ನುಮ್ ಅಱಿವತಱ್ ಕರಿಯಾನ್ ಪಱ್ಱಿ
ಒರುಮುಱೈ ಮುಱೈಯೋ ಎನ್ನ ಉಱೈಸಿನ್ಱಾರ್ ವಿಲಕ್ಕಿ 'ಇನ್ತ
ಪ್ಪೆರುಮುಱೈ ಉಲಕಿಲ್ ಇಲ್ಲಾ ನೆಱಿಕೊಣ್ಡು ಪಿಣಙ್ಕು ಕಿನ್ಱ
ತಿರುಮಱೈ ಮುನಿವ ರೇನೀರ್ ಎಙ್ಕುಳೀರ್ ಚೆಪ್ಪುಮ್' ಎನ್ಱಾರ್.

183. ಎನ್ಱಲುಮ್ ನಿನ್ಱ ಐಯರ್ 'ಇಙ್ಕುಳೇನ್ ಇರುಪ್ಪು ಇಙ್ಙೇಯ
ತನ್ಱಿನ್ತ ವೆಣ್ಣೆಯ್ ನಲ್ಲೂರ್, ಅತುನಿಱ್ಕ, ಅಱತ್ತಾಱಿನ್ಱಿ
ವನ್ಱಿಱಲ್ ಚೆಯ್ತಿನ್ ಕೈಯಿಲ್ ಆವಣಮ್ ವಲಿಯ ವಾಙ್ಕಿ
ನಿನ್ಱಿವನ್ ಕಿೞಿತ್ತು ತ್ತಾನೇ ನಿರಪ್ಪಿನಾನ್ ಅಟಿಮೈ' ಎನ್ಱಾನ್.

184. ಕುೞೈಮಱೈ ಕಾತಿ ನಾನ್ಕೈ ಕ್ಕೋತಿಲ್ಆ ರೂರರ್ ನೋಕ್ಕಿ
'ಪ್ಪೞೈಯಮನ್ ಱಾಟಿ ಪೋಲುಮ್ ಇವನ್' ಎನ್ಱು ಪಣ್ಪಿನ್ ಮಿಕ್ಕ
ವಿೞೈವುಱು ಮನಮುಮ್ ಪೊಙ್ಕ 'ವೆಣ್ಣೆಯ್‌ನ ಲ್ಲೂರಾ ಯೇಲ್ಉನ್
ಪಿೞೈನೆಱಿ ವೞಕ್ಕೈ ಆಙ್ಕೇ ಪೇಚನೀ ಪೋತಾಯ್' ಎನ್ಱಾರ್.

185. ವೇತಿಯನ್ ಅತನೈ ಕ್ಕೇಟ್ಟು 'ವೆಣ್ಣೆಯ್‌ನ ಲ್ಲೂರಿ ಲೇನೀ
ಪೋತಿನುಮ್ ನನ್ಱು ಮುಱ್ಪು ನಿತನಾನ್ ಮಱೈಯೋರ್ ಮುನ್ನರ್
ಆತಿಯಿಲ್ ಮೂಲ ವೋಲೈ ಕಾಟ್ಟನೀ ಅಟಿಮೈ ಯಾತಲ್
ಚಾತಿಪ್ಪನ್' ಎನ್ಱು ಮುನ್ನೇ ತಣ್ಟುಮುನ್ ತಾಙ್ಕಿ ಚ್ಚೆನ್ಱಾನ್.

186. ಆ ವಿಪ್ರನ ಹಿಂದೆಯೇ ನಂಬಿಯು ಅಯಸ್ಕಾಂತದಿಂದ ಸೆಳೆಯಲ್ಪಡುವ ಕಬ್ಬಿಣದಂತೆ ವೇಗವಾಗಿ ಹೋದನು. ಈ ವ್ಯವಹಾರವು ಹೇಗಾಗುವುದೆಂಬುದನ್ನು ತಿಳಿಯಲು ಅಸಂಖ್ಯಾತರಾದ ಬಂಧುಜನಗಳೂ ಅವರ ಹಿಂದೆಯೇ ಹೋದರು. ಹೀಗೆ ಅವರೆಲ್ಲಾ ಶ್ರೇಷ್ಠ ಬ್ರಾಹ್ಮಣರಿರುವ ತಿರುವಣ್ಣೈನಲ್ಲೂರನ್ನು ಸೇರಿದರು.

187. ಅಲ್ಲಿ ಹಿರಿಯ ಬ್ರಾಹ್ಮಣರ ಸಭೆಯ ಮುಂದೆ ಹೋಗಿ ದ್ವಿಜವೇಷದ ಶಿವನ 'ತಿರುನಾವಲೂರಿನ ಈ ನಂಬಿಯು ನನ್ನ ಪ್ರೀತಿಯ ಸೇವಕನೆಂಬ ನಾನು ತೋರಿಸಿದ ಪ್ರಮಾಣಪತ್ರವನ್ನು ಹರಿದು, ನಿಮ್ಮಲ್ಲಿ ಬಂದು ಈಗ ಸೇರಿರುವನು. ಇದು ನನ್ನ ದೂರು' ಎಂದು ಹೇಳಿದನು.

188. ಆ ಸಭೆಯ ವಿಪ್ರರು, 'ವೇದಿಯರುಗಳು ಸೇವಕರಾಗುವ ಪದ್ಧತಿಯು ಈ ಲೋಕದಲ್ಲಿಲ್ಲ. ಎಲ್ಲಿಯೂ ಇಲ್ಲದ ಸಂಪ್ರದಾಯವನ್ನು ನೀವು ಹೇಳುತ್ತೀರಿ' ಎಂದರು. ಒಬ್ಬರೇ ಆಗಿ ನಿಂತ ಆ ವೃದ್ಧ ಬ್ರಾಹ್ಮಣನು, 'ನಾನು ಬಂದು ಹೇಳಿದ ಪದ್ಧತಿಯು ಯುಕ್ತವಾದುದಲ್ಲವೇನು? ಇವನು ಹರಿದುಹಾಕಿದ ಪತ್ರವು ಇವನ ತಾತನು ಬರೆದು ಕೊಟ್ಟದ್ದು' ಎಂದನು.

---

186. ಚೆಲ್ಲುನಾನ್ ಮಱೈಯೋನ್ ತನ್‌ಪಿನ್ ತಿರಿಮುಕ ಕ್ಕಾನ್ತ ಇಮ್ ಚೇರ್‌ನ್ತ
ವಲ್ಲಿರು ಮ್ಪಣೈಯು ಮಾಪೋಲ್ ವಳ್ಳ ಲುಱ್ಕಟೆತು ಚೆನ್‌ಱಾನ್
ಎಲ್ಲೈಯಿಲ್ ಚ‌ಱ್ಱ ತ್ತಾಗುಮ್ 'ಇತುಎನ್‌ನಾಮ್' ಎನ್‌ಱು ಚೆಲ್ಲ
ನಲ್ಲಱ ನ್ತಣರ್‌ಕಳ್ ವಾೞುಮ್ ವೆಣ್ಣೆಯ್‌ನ ಲ್ಲೂರೈ ನಣ್ಣಿ.

187. ವೇತಪಾ ರಕರಿನ್ ಮಿಕ್ಕಾರ್ ವಿಳಙ್ಕುಪೇರ್ ಅವೈಮುನ್ ಚೆನ್‌ಱು
ನಾತನಾಮ್ ಮಱೈಯೋನ್ ಚೊಲ್ಲುಮ್ 'ನಾವಲೂರ್ ಆರೂ ರನ್‌ತಾನ್
ಕಾತಲೆನ್ ಅಟಿಯಾನ್ ಎನ್‌ನ ಕ್ಕಾಟ್ಟಿಯ ಓಲೈ ಕೀಱಿ
ಮೂತಱಿ ವಿರ್‌ಮುನ್ ಪೋನ್ತಾ ನಿತುಮ್ಮಱ್ಱಿನ್ ಮುಱೈಪ್ಪಾ' ಟೆನ್‌ಱಾನ್.

188. ಅನ್ತಣರ್ ಅವೈಯಿಲ್ ಮಿಕ್ಕಾರ್ 'ಮಱೈಯವರ್ ಅಟಿಮೈ ಆತಲ್
ಇನ್ತಮಾ ನಿಲತ್ತಿಲ್ ಇಲ್ಲೈ ಎನ್‌ಚೊನ್‌ನಾಯ್ ಐಯಾ' ಎನ್‌ಱಾರ್
'ವನ್ತವಾ ಱಿಚ್ಚೈವೇ ಅನ್‌ಱೋ ವಟಕ್ಕಿವನ್ ಕಿಟೀತ್ತ ಓಲೈ
ತನ್ತೈತನ್ ತನ್ತೈ ನೇರ್‌ನ್ತ(ತು)' ಎನ್‌ಱನನ್ ತನಿಯಾಯ್
ನಿನ್‌ಱಾನ್.

189. 'ಒಡಂಬಡಿಕೆಯಿಂದ ಬರೆದುಕೊಟ್ಟ ಪ್ರಮಾಣಪತ್ರವನ್ನು ಇವರು ತೋರಿಸಿದ್ದರೆ, ಅದನ್ನು ಬೇಗನೆ ಜುಲುಮೆಯಿಂದ ತೆಗೆದುಕೊಂಡು ಹರಿದುಹಾಕುವುದು ನಿನಗೆ ಜಯವನ್ನು ತಾರದು. ದೇಹದ ಮಾಂಸವೆಲ್ಲಾ ಒತ್ತಿಹೋಗುವಂತೆ ಪ್ರಾಯಸಂದ ಈ ವೃದ್ಧರು ತನ್ನ ನ್ಯಾಯವನ್ನು ಎಲ್ಲರೂ ಒಪ್ಪುವಂತೆ ತಿಳಿಸಿರುವರು. ಈಗ ನಂಬಿಯ ಅಭಿಪ್ರಾಯವೇನು ?' ಎಂದು ಆ ಸಭೆಯ ಹಿರಿಯರು ಕೇಳಿದರು.

190. ವಿಚಾರದಲ್ಲಿ ಪರಿಣತನಾದ ನಂಬಿಯು, 'ಬ್ರಾಹ್ಮಣರೇ, ನಾನು ಆದಿಶೈವ ಬ್ರಾಹ್ಮಣನೆಂದು ನೀವು ತಿಳಿದಿದ್ದೀರಿ. ಲೋಕನ್ಯಾಯಕ್ಕೆ ವಿಪರೀತರಾಗಿ ಇವರು ನನ್ನನ್ನು ತಮಗೆ ಸೇವಕನೆಂದು ಸಾಧಿಸುವರಾದರೆ ಮನಸ್ಸಿನಿಂದಲೂ ತಿಳಿಯಲಾಗದ ಮಾಯೆ ಇದು. ಇದಕ್ಕೆ ನಾನೇನನ್ನು ಹೇಳಲಿ ? ನನಗೆ ನಿಶ್ಚೈಸಲು ಸಾಧ್ಯವಾಗದೆ ಇರುವುದು,' ಎಂದನು.

191. ಹೀಗೆ ನಂಬಿಯು ಸಭೆಯ ಮುಂದೆ ಹೇಳಲು, ಮಧ್ಯಸ್ಥಿಕೆಯನ್ನು ಮಾಡುವ ಸಭೆಯವರು ವೃದ್ಧಬ್ರಾಹ್ಮಣನನ್ನು ನೋಡಿ 'ನಂಬಿಯು ನಿಮ್ಮ ಸೇವಕನೆಂದು ನೀವೀಗ ಹೇಳಿದ ಅನುಚಿತವಾದ ಮಾತನ್ನು ನಮ್ಮ ಮುಂದೆ ನಿಶ್ಚಯಪಡಿಸಬೇಕು' ಎಂದು ಹೇಳಿ ಮತ್ತೂ ಹೇಳುವರು.

---

189. 'ಇಚ್ಚೈವಿನಾಲ್ ಎಟುತುಮ್ ಓಲೈ ಕಾಟ್ಟಿನಾನ್ ಆಕಿಲ್ ಇನ್ಱು
ವಿಚ್ಚೈಯಿನಾಲ್ ವಲಿಯ ವಾಙ್ಕಿ ಕ್ಕಿಟಿಪ್ಪತು ವೆಱ್ಱಿ ಆಮೋ ?
ತಚ್ಚೈಯೆಲಾಮ್ ಒಟುಙ್ಕ ಮೂತ್ತಾನ್ ವಟಿಕ್ಕಿನೈ ಚ್ಚಾರ ಚ್ಚೊನ್ನಾನ್;
ಅಚ್ಚೈವಿಲ್ಆ ರೂರರ್ ಎಣ್ಣಮ್ ಎನ್' ಎನ್ಱಾರ್ ಅವೈಯಿಲ್ ಮಿಕ್ಕಾರ್.

190. 'ಅನ್ನೈತ್ತುನೂಲ್ ಉಣರ್ನ್ತೀರ್! ಆತಿಚ್ಚೈವನೆನ್ ಱಿವೀರ್! ಎನ್ನೈ
ತ್ತನಕ್ಕುವೇ ಱಟಿಮೈ ಎನ್ಱಿ ವ್ವನ್ತಣನ್ ಚಾತಿ ತ್ತಾನೇಲ್
ಮನತ್ತಿನಾ ಉಣರ್ತಱ್ ಕೆಟ್ಟಾ ಮಾಯೈಯಿನ್ ಚೊಲ್ಲು ಕೇನ್ ಯಾನ್
ಎನಕ್ಕಿತು ತೆಳಿಯ ವೊಣ್ಣಾ ತೆನ್ಱನನ್' ಎಣ್ಣಮ್ ಮಿಕ್ಕಾನ್.

191. ಅವ್ವುರೈ ಅವೈಯಿನ್ ಮುಮ್ಪು ನಮ್ಪಿಯಾ ರೂರರ್ ಚೊಲ್ಲ
ಚ್ಚೆವ್ವಿಯ ಮಱೈಯೋರ್, ನಿನ್ಱ ತಿರುಮಱೈ ಮುನಿಯೈ ನೋಕ್ಕಿ
'ಇವ್ವುಲ ಕಿನ್ಕಣ್ ನೀಯಿನ್ ಱೀವರೈಯುನ್ ನಟಿಮೈ ಎನ್ಱ
ವೆವ್ವುರೈ ಎಮ್ಮುನ್ ಪೇಱ್ಱವೇಣ್ಟುಮ್' ಎನ್ ಱುರೈತ್ತ ಮಿಱಣ್ಟುಮ್.

192. 'ಅನುಭವ, ಸಾಕ್ಷಿ, ಬರೆಹ – ಈ ಮೂರರಲ್ಲಿ ಒಂದನ್ನು ನೀವು ತೋರಿಸಿರಿ' ಎನ್ನಲು, ಮಾಯೆಯನ್ನು ಬಲ್ಲ ಕಪಟವಿಪ್ರನು, 'ಕೋಪದಲ್ಲಿ ನಂಬಿಯು ಮೊದಲೇ ಹರಿದ ಓಲೆಯು ಮೂಲ ಓಲೆಯ ಪ್ರತಿಯು. ಆ ಮೂಲ ಓಲೆಯನ್ನು ತೋರಿಸಲಿಕ್ಕಾಗಿ ಇಟ್ಟುಕೊಂಡಿರುವೆನು' ಎಂದು ಹೇಳಿದನು.

193. 'ಬಲ್ಲವರಾಗಿದ್ದರೆ ತೋರಿಸಿ' ಎಂದು ಬ್ರಾಹ್ಮಣರು ಎನ್ನಲು, 'ನಂಬಿಯು ಆ ಮೂಲಪತ್ರವನ್ನು ಎಳೆದು ಹರಿದುಹಾಕದಂತೆ ಆತನಿಗೆ ನೀವು ಹೇಳಬಲ್ಲಿರಾದರೆ ನಾನು ತೋರಿಸುವೆನು' ಎಂದು ಆ ಕಪಟದ್ವಿಜನು ನುಡಿದನು. 'ನಂಬಿಯು ಅದನ್ನು ಕೆಡಿಸದಂತೆ ನಾವು ನೋಡಿಕೊಳ್ಳುವೆವು' ಎಂದು ಆ ಸಭೆಯ ವಿಪ್ರರು ಉತ್ತರವಿತ್ತರು. ನಂಬಿಯನ್ನು ಪ್ರಯಾಸದಿಂದ ತಡೆದು ಸೇವಕನನ್ನಾಗಿಸಿಕೊಳ್ಳುವ ಉದ್ದೇಶದಿಂದ ಬ್ರಾಹ್ಮಣ ವೇಷಧಾರಿಯಾದ ಶಿವನು ಆ ಮೂಲಪತ್ರವನ್ನು ಕೊಂಡುಬಂದನು.

194. ಕಂಠದ ನೀಲಿಮೆಯನ್ನು ಮರೆಸಿದ ಶಿವನ ಕೈಯ ಓಲೆಯನ್ನು ನೋಡಿ ಸಭೆಯವರು ಅದನ್ನು ಓದುವಂತೆ ಹೇಳಲು, ಅವರ ಅನುಮತಿಯನ್ನು ಪಡೆದ ಕರಣಿಕನು, ಆ ಪತ್ರವನ್ನು ತೆಗೆದುಕೊಂಡು ಅದರ ಸುರುಳಿಯ ಮುಡಿಕೆಯನ್ನು ತೆಗೆದು ಬಿಡಿಸಿ ಅದರ ಪ್ರಾಚೀನತೆಯನ್ನು ನೋಡಿ, ಧರ್ಮವಿದರಾದ ಸಭೆಯವರು ಕೇಳುವಂತೆ ವಾಚಿಸ ತೊಡಗಿದನು.

---

192. ಆಟ್ಚಿಯಿಲ್ ಆವ ಣತ್ತಿಲ್ ಅನ್‌ಱಿಮ ಱ್ಱಯಲಾರ್ ತಙ್ಕಳ್
ಕಾಟ್ಚಿಯಿಲ್ ಮೂನ್‌ಱಿಲ್ ಒನ್‌ಱು ಕಾಟ್ಟುವಾಯ್ ಎನ್‌ನ 'ಮುನ್‌ನೇ
ಮೂಟ್ಟಿಯಿಱ್ ಕಿಱಿತ್ತಓಲೈ ಪಟಿ ಯೋಲೈ ಮೂಲ ಓಲೈ
ಮಾಟ್ಚಿಯಿಱ್ ಕಾಟ್ಟ ವೈತ್ತೇನ್' ಎನ್‌ಱನನ್ ಮಾಯೈ ವಲ್ಲಾನ್.

193. 'ವಲ್ಲೈಯೇಲ್ ಕಾಟ್ಟ' ಎನ್ಕನ್‌ನ, ಮಱೈಯವನ್ 'ವಲಿಚೆಯ್ ಯಾಮಲ್
ಚೊಲ್ಲನೀರ್ ವಲ್ಲೀ ರಾಕಿಲ್ ಕಾಟ್ಟುವೇನ್' ಎನ್‌ಱು ಚೊಲ್ಲ
'ಚೆಲ್ವನಾನ್‌ಮಱೈಯೋಯ್! ನಾಙ್ಕಳ್ ತೀಙ್ಕುರ ಒಟ್ಟೋಮ್' ಎನ್‌ಱಾರ್
ಅಲ್ಲಲ್‌ತೀರ್ ತ್ತಾಳ ನಿನ್‌ಱಾರ್ ಆವಣ ಎಱ್ಕಣ್ಟು ಚೆನ್‌ಱಾರ್.

194. ಇರುಳ್‌ಮಱೈ ಮಿಟಱ್ಱೋನ್ ಕೈಯಿಲ್ ಓಲೈಕ ಣ್ಟವೈ ಯೋರ್ ಏವ
ಅರುಳ್‌ಪೆಱು ಕರಣ ತ್ತಾನುಮ್ ಆವಣಮ್ ತೊಱುತು ವಾಙ್ಕಿ
ಚ್ಚುರುಳ್‌ಪೆಱು ಮಟಿಯೈ ನೀಕ್ಕಿ ವಿರಿತ್ತನನ್ ತೊನ್‌ಮೈ ನೋಕ್ಕಿ
ತ್ತಿರುಳ್‌ಪೆಱು ಚವೈಯೋರ್ ಕೇಟ್ಪ ವಾಚಕಮ್ ಚೆಪ್ಪ ಕಿನ್‌ಱಾನ್.

195. 'ವೇದಜ್ಞನಾದ ತಿರುನಾವಲೂರಲ್ಲಿರುವ ಆದಿಶೈವ ಬ್ರಾಹ್ಮಣನಾದ ಆರೂರನು ಬರೆದುಕೊಟ್ಟ ಸಮ್ಮತಪತ್ರ. ಮುನಿವರರಾದ ತಿರುವೆಣ್ಣೈನಲ್ಲೂರಿನಲ್ಲಿ ಬಾಳುವ ಪಿತ್ತನೆನ್ನುವ ಬ್ರಾಹ್ಮಣನಿಗೆ ನಾನೂ ನನ್ನ ಸಂತತಿಯವರೂ ಪರಂಪರೆಯಾಗಿ ಸೇವೆಯನ್ನು ಮಾಡಲು, ಈ ಪತ್ರದಲ್ಲಿ ಅಂತರಂಗ ಬಹಿರಂಗಗಳಲ್ಲಿ ಸಮ್ಮತಿಸಿ ಬರೆದು ಕೊಟ್ಟಿರುವೆನು. ಹೀಗೆ ಇದು ನನ್ನ ಕೈಬರೆಹ.'

196. ಈ ವಾಚಕವನ್ನು ಕೇಳಿದಮೇಲೆ ವಾಚಕ ಬರೆಹಗಳನ್ನಲ್ಲದೆ ಸಾಕ್ಷಿ ಬರೆಹವನ್ನು ಬರೆದವರು ನಿರ್ದೋಷವಾದ ತಮ್ಮ ಬರೆಹವನ್ನು ಸರಿಯಾಗಿ ಪರೀಕ್ಷಿಸಿ ಅವುಗಳು ಸರಿಯಾಗಿವೆ ಎಂದು ಸಮ್ಮತಿಸಿದ ಮೇಲೆ ಸಭೆಯವರು, 'ಅಯ್ಯಾ ನಂಬಿಯೇ, ನಿನ್ನ ತಾತನ ಕೈಬರೆಹವನ್ನು ಸಂದೇಹವಿಲ್ಲದಂತೆ ಪರೀಕ್ಷಿಸಿಕೊಳ್ಳು' ಎಂದರು.

197. ಶರಣರನ್ನು ಒಲುಮೆಯಿಂದ ತಡೆದು ಸೇವೆ ತೆಗೆದುಕೊಳ್ಳುವ ದಯಾ ಶಾಲಿಯಾದ ಶಿವನು, 'ಇನ್ನು ಅಡಿಮೆಯೋಲೆಯನ್ನು ನಂಬಿಯೇ ಕಾಣಬಲ್ಲವನು. ಇದಲ್ಲದೆ ತನ್ನ ತಾತನ ಕೈಕಾಗದವು ಪ್ರತ್ಯೇಕವೊಂದು ನಂಬಿಯಲ್ಲಿ ಇರುವುದಾದರೆ, ಆ ಪತ್ರದೊಡನೆ ಈ ಅಡಿಮೆಯೋಲೆಯ ಬರೆಹಗಳನ್ನು ಹೋಲಿಸಿ, ಸರಿಯಾಗಿ ಪರೀಕ್ಷಿಸಿ, ನಿಮ್ಮ ತೀರ್ಮಾನವನ್ನು ಹೇಳಿರಿ' ಎಂದು ಹೇಳಿದನು.

---

195. 'ಅರುಮಱೈ ನಾವಲ್ ಆತಿ ಚೈವನ್ಆ ರೂರನ್ ಚೆಯ್ಕೈ
ಪೆರುಮುನಿ ವೆಣ್ಣೆಯ್ ನಲ್ಲೂರ್ ಪ್ಪಿತ್ತನು ಕ್ಕಿಯಾನುಮ್ ಎನ್ಪಾಲ್
ವರುಮುಱೈ ಮರಪು ಳೋರುಮ್ ವಟಿತ್ತೊಣ್ಟು ಚೆಯ್ತಱ್ ಕೋಲೈ
ಇರುಮೈಯಾಲ್ ಎಟುತಿ ನೇರ್ನ್ತೇನ್ ಇತಱ್ಕಿವೈ ಎನ್ಎ ಟುತ್ತು.'

196. ವಾಚಕ ಙ್ಕೇಟ್ಟ ಪಿನ್ನರ್ ಮಱ್ಱುಮೇಲ್ ಎಟುತ್ತಿ ಟ್ಟಾರ್ಕಳ್
ಆಚಿಲಾ ಎಟುತ್ತೈ ನೋಕ್ಕಿ 'ಅವೈಯೊಕ್ಕುಮ್' ಎನ್ಱ ಪಿನ್ನರ್
ಮಾಚಿಲಾ ಮಱೈಯೋರ್ 'ಐಯಾ! ಮಱ್ಱುಙ್ಕಳ್ ಪೇರ ನಾರ್ತಮ್
ತೇಚುಟ್ಟೈ ಎಟುತ್ತೇ ಆಕಿಲ್ ತೆಳಿಯಪ್ಪಾರ್ ತ್ತಱಿಮಿನ್' ಎನ್ಱಾರ್.

197. ಅನ್ತಣರ್ ಕೂಱ 'ಇನ್ನುಮ್ ಆಳ್ಓಲೈ ಇವನೇ ಕಾಣ್ಪಾನ್
ತನ್ನೈತನ್ ತನ್ನೈ ತಾನ್ವೇ ಱಿಟುತುಕೈ ಚ್ಚಾತ್ತು ಣ್ಡಾಕಿಲ್
ಇನ್ತಆ ವಣತ್ತು ನೋಟುಮ್ ಎಟುತ್ತುನೀರ್ ಒಪ್ಪು ನೋಕ್ಕಿ
ವನ್ತತು ಮೊಟಿಮಿನ್' ಎನ್ಱಾನ್ ವಲಿಯಆಟ್ ಕೊಳ್ಳುಮ್ ವಳ್ಳಲ್.

198. ಸಭೆಯ ಬ್ರಾಹ್ಮಣರು ನಂಬಿಯ ಸಂದೇಹವು ನಿವಾರಣೆಯಾಗುವಂತೆ ಆತನ ತಾತನ ಪತ್ರವನ್ನು ಅವನ ಮನೆಯಲ್ಲಿಟ್ಟಿದ್ದ ಸ್ಥಳದಿಂದ ತರಿಸಿ ಎರಡನ್ನೂ ಹೋಲಿಸಿ ನೋಡಿ, 'ಇವೆರಡೂ ಹೊಂದಿಕೆಯಾಗಿವೆ. ಏನು ಆಶ್ಚರ್ಯ! ಇದು ತಪ್ಪಿದೆ ಎನ್ನಲು ಇನ್ನು ಸಾಧ್ಯವಿಲ್ಲ' ಎಂದರು.

199. 'ನಂಬಿಯಾರೂರನೇ, ನೀನು ಈ ವೃದ್ಧವೇದಿಯರಿಗೆ ಸೋತಿರುವಿ. ಆದುದರಿಂದ ಅವರೆಂದಂತೆ ಅವರ ಸೇವೆ ಮಾಡುವುದೇ ನಿನ್ನ ಕರ್ತವ್ಯವು' ಎಂದು ಆ ಸಭೆಯವರು ಹೇಳಲು, ಅದನ್ನು ಕೇಳಿದ ನಂಬಿಯು 'ಪೂರ್ವಕರ್ಮ ಫಲವು ಹೀಗಿದ್ದರೆ ನಾನು ಸಮ್ಮತಿಸೆನು ಎಂದು ಹೇಗೆ ಹೇಳಲಾದೀತು ?' ಎಂದನು.

200. ಆಮೇಲೆ ಆ ಸಭೆಯವರು ವಿಪ್ರವೇಷದ ಶಿವನನ್ನು ನೋಡಿ, 'ಶ್ರೇಷ್ಠ ಮುನಿಗಳೇ, ನೀವು ತೋರಿಸಿದ ಪ್ರಮಾಣಪತ್ರದಲ್ಲಿ ನಿಮ್ಮ ಊರು ನಮ್ಮ ತಿರುವಣ್ಣೈ ನಲ್ಲೂರು ಎಂದಿದೆ. ಆದುದರಿಂದ ನಿಮಗೆ ಈ ಊರಿನಲ್ಲಿ ಪರಂಪರೆಯಾಗಿ ಬಂದ ಮನೆ, ಭೂಮಿ, ಇವೇ ಮೊದಲಾದುವುಗಳನ್ನು ತೋರಿಸಿರಿ' ಎಂದರು.

---

198. ತಿರಣ್ಟಮಾ ಮಱೈಯೋರ್ ತಾಮುಮ್ ತಿರುನಾವ ಲೂರರ್ ಕೋಮಾನ್,
ಮರುಣ್ಟತು ತೆಳಿಯ ಮಱ್ಱ ಮಱೈಯವನ್ ಎೞುತ್ತಾಲ್ ಓಲೈ,
ಅರುಣ್ ತರು ಕಾಪ್ಪಿಲ್ ವೇಱೊನ್ ಱೆೞುತ್ತುಟನ್ ಒಪ್ಪು ನೋಕ್ಕಿ,
'ಇರಣ್ಟುಮ್ ಒತ್ತಿರುನ್ತ ತೆನ್ನೇ! ಇನಿಚ್ಚೆಯಲ್ ಇಲ್ಲೈ' ಎನ್ಱಾರ್.

199. 'ನಾನ್ಮಱೈ ಮುನಿವ ನಾರ್ಕ್ಕು ನಮ್ಪಿಯಾ ರೂರರ್! ತೋಱ್ಱೀರ್
ಪಾನ್ಮೈಯಿನ್ ಏವಲ್ ಚೆಯ್ತಲ್ ಕಟನ್' ಎನ್ಱು ಪಣ್ಪಿಲ್ ಮಿಕ್ಕ
ಮೇನ್ಮೈಯೋರ್ ವಿಳಮ್ಪ, ನಮ್ಪಿ 'ವಿತಿಮುಱೈ ಇತುವೇ ಆಕಿಲ್
ಯಾನ್ ಇತಱ್ ಕಿಚೈಯೋನ್ ಎನ್ನ ಇಚೈಯುಮೋ' ಎನ್ಱು ನಿನ್ಱಾರ್

200. ತಿರುಮಿಕು ಮಱೈಯೋರ್ ನಿನ್ಱ ಚೆಟಿಮುಱೈ ಮುನಿಯೈ ನೋಕ್ಕಿ
'ಅರುಮುನಿ! ನೀಮುನ್ ಕಾಟ್ಟುಮ್ ಆವಣಮ್ ಅತನಿಲ್ ಎಙ್ಕಳ್
ವೆರುಮೈಚೇರ್ ಪತಿಯೇ ಯಾಕ ಪ್ಪೇಚ್ಚಿಯ ತುಮಕ್ಕಿ ವ್ವೂರಿಲ್
ವರುಮುಱೈ ಮನೈಯುಮ್ ನೀಟು ವಾೞ್ಕ್ಕೈಯುಮ್ ಕಾಟ್ಟು'
ಕೆನ್ಱಾರ್.

201. ಜಯುಹೊಂದಿದ ಆ ಮುದಿ ಬ್ರಾಹ್ಮಣನು 'ಈ ಊರಿನಲ್ಲಿ ಮನೆ ಮಾಡಿ ಕೊಂಡಿರುವ ನನ್ನನ್ನು ನಿಮ್ಮಲ್ಲಿ ಒಬ್ಬರೂ ಅರಿಯಲಾರಿರಾದರೆ ನನ್ನೊಡನೆ ಬನ್ನಿ. ತೋರಿಸುವೆನು' ಎಂದು ಹೇಳಿ, ಆ ಹಿರಿಯ ಬ್ರಾಹ್ಮಣ ಸಭೆಯೂ ನಂಬಿಯಾರೂರನೂ ಹಿಂದಿನಿಂದ ಬರುತ್ತಿರಲು, ಆ ಊರಿನಲ್ಲುಳ್ಳ ತಿರುವರುತ್ತುರೈ ಎಂಬ ದೇವಾಲಯದೊಳಗೆ ಪ್ರವೇಶಿಸಿದನು. ಆಮೇಲೆ ಆ ಮುದಿ ಬ್ರಾಹ್ಮಣನನ್ನು ಯಾರೊಬ್ಬರೂ ಕಾಣದೆ ದಿಗ್ಭ್ರಮೆಗೊಂಡು ನಿಂತರು.

202. ಬ್ರಾಹ್ಮಣವೇಷದಿಂದ ಬಂದ ಶಿವನು ದೇಗುಲದೊಳಹೊಕ್ಕು ಮರೆಯಾಗಲು, 'ನನ್ನನ್ನು ಅಡಿಮೆಯುವನೆಂದು ಸಾಧಿಸಿದ ಜನಿವಾರದಿಂದ ಶೋಭಿಸುವ ಎದೆಯುಳ್ಳ ಆ ವೇದಿಯರು, ನಮ್ಮ ಈಶ್ವರನಿರುವ ಆಲಯದೊಳಹೊಕ್ಕುದು ಎಂತಹ ಆಶ್ಚರ್ಯ!' ಎಂದು ನಂಬಿಯಾರೂರನು ತನ್ನಲ್ಲಿ ಉದಿಸಿದ ಆಶೆಯಿಂದ ಪ್ರತ್ಯೇಕವಾಗಿ ನಿಂತು, ಆ ವೇದಿಯರನ್ನು ಕರೆಯಲು ಶಿವಪರಮಾತ್ಮನು ಉಮಾದೇವಿಯೊಡನೆ ವೃಷಭ ವಾಹನದ ಮೇಲೆ ಕಾಣಿಸಿಕೊಂಡು ನಂಬಿಗೆ ಹೇಳುತ್ತಾನೆ.

203. 'ಹಿಂದಿನ ಜನ್ಮದಲ್ಲಿ ನೀನು ನಮಗೆ ಸೇವಕನಾಗಿದ್ದೆ. ಹೆಣ್ಣುಗಳ ಮೇಲೆ ಮನಸ್ಸು ಹರಿದ ಆಶೆಯ ಆಧಿಕ್ಯದಿಂದಲೂ, ನಮ್ಮ ಅನುಮತಿಯಿಂದಲೂ ನೀನು ಭೂಮಿಯಲ್ಲಿ ಜನ್ಮವೆತ್ತಿದೆ. ಆದುದರಿಂದ ದುಃಖವನ್ನುಂಟಾಗಿಸುವ ಸಂಸಾರ ಜೀವನವು ನಿನ್ನನ್ನು ಬಂಧಿಸದಂತೆ ನಾವೇ ಬೇಕೆಂದೇ ಬಂದು ಬ್ರಾಹ್ಮಣರ ಮುಂದೆ ನಿನ್ನನ್ನು ತಡೆದು ಸೇವಕನನ್ನಾಗಿ ಸ್ವೀಕರಿಸಿದೆವು.'

---

201. ಪೊರುವರುಮ್ ವಟಿಕ್ಕಾಲ್ ವೆನ್‍ಱಿ ಪುಣ್ಣಿಯ ಮುನಿವರ್ 'ಎನ್ನೈ
ಒರುವರುಮ್ ಅಱಿಯಿರಾ ರಾಕಿಲ್ 'ಪೋತುಮ್'ಎನ್ ಱುರೈತ್ತು ಚ್ಚೂಟಿನ್ನ
ಪೆರುಮಱೈ ಯುವರ್‌ಕು ಟಾಮುಮ್ ನಮ್ಪಿಯುಮ್ ಪಿನ್‍ಪು ಚೆಲ್ಲ
ತ್ತಿರುವರು ಟ್ಟುಱೈಯೇ ಪುಕ್ಕಾರ್, ಕಣ್ಟಿಲರ್ ತಿಕೈತ್ತು ನಿನ್‍ಱಾರ್.

202. ಎಮ್ಪಿರಾನ್ ಕೋಯಿಲ್ ನಣ್ಣ ಇಲಜ್ಕುನೂಲ್ ಮಾರ್‌ಪರ್ 'ಎಜ್ಕಳ್
ನಮ್ಪರ್‌ತ ಱ್ಕೋಯಿಲ್ ಪುಕ್ಕ ತೆನ್‍ಕೊಲೋ' ಎನ್‍ಱು ನಮ್ಪಿ
ತಮ್ಪೆರು ವಿರುಪ್ಪಿ ನೋಟು ತನಿತ್ತೊಟರ್ ನ್ದಟೈಪ್ಪ ಮಾತೋ(ಟು)
ಉಮ್ಪರಿನ್ ವಿಟ್ಟೈಮೇಲ್ ತೋನ್‍ಱಿ ಅವರ್‌ತಮ ಕ್ಕುಣರ್‌ತ್ತಲ್ ಉಱ್ಱಾರ್.

203. 'ಮುನ್‍ಪುನೀ ನಮಕ್ಕು ತ್ತೊಣ್ಟನ್ ಮುನ್‍ನಿಯ ವೇಟ್ಕೈ ಕೂರ
ಪ್ಪಿನ್‍ಪುನಮ್ ಏವಲಾಲೇ ಪಿಱನ್ದನೈ ಮಣ್ಣಿನ್ ಮಾತು
ತುನ್‍ಪುಱು ವಾಟ್‍ಕ್ಕೈ ನಿನ್‍ನೈ ತ್ತೊಟರ್‌ವಟ ತ್ತೊಟರ್ನ್ತು ವನ್ತು
ನನ್‍ಪುಲ ಮಱೈಯೋರ್ ಮುನ್‍ನರ್ ನಾಮ್‌ತಟು ತ್ತಾಣ್ಟೋಮ್
ಎನ್‍ಱಾರ್

204. ಶಿವನ ಈ ಮಾತನ್ನು ಕೇಳಿ, ತನ್ನನ್ನು ಹೆತ್ತ ಪಶುವಿನ ಹೊಂಕಾರವನ್ನು ಕೇಳಿದ ಕರುವಿನಂತೆ ವಿಸ್ಮಯದಿಂದ ತಿಳಿದು, ಕೈಕಾಲು ಮೊದಲಾದ ಅವಯವಗಳಲ್ಲಿ ರೋಮಾಂಚನವಾಗಲು, ಮುಗಿದ ಕೈಗಳು ಶಿರದ ಮೇಲಿರಲು, 'ದೇಗುಲದಲ್ಲಿ ಆನಂದ ನೃತ್ಯವನ್ನಾಡಿದ ಶಿವನೇ, ಹೀಗೆ ಬಲಾತ್ಕಾರದಿಂದ ನನ್ನನ್ನು ಸೇವಕನನ್ನಾಗಿಸಿ ಕೊಂಡುದು ನಿನ್ನ ಕಾರ್ಯವೇ ?' ಎಂದು ನಂಬಿಯು ಬಿನ್ನಪಮಾಡಿದನು.

205. ಎಲ್ಲರೂ ಕೇಳುವಂತೆ ಪಂಚದುಂದುಭಿಗಳ ಶಬ್ದವು ಆಕಾಶದಲ್ಲಿ ತುಂಬಲು, ದೇವತೆಗಳು ಎಲ್ಲೆಡೆಗಳಲ್ಲೂ ಸುರಿಸುವ ಹೂಮಳೆಯು ಭೂಮಿಯಲ್ಲಿ ತುಂಬಲು, ಲೋಕದವರು ಸಂತೋಷವನ್ನು ಹೊಂದಲು, ವೇದಗಳು ಬಹುವಾಗಿ ಶಬ್ದಿಸಲು, ನಂಬಿಯನ್ನು ಪ್ರಮಾಣಪತ್ರವನ್ನು ತೋರಿಸಿ ಸೇವಕನನ್ನಾಗಿ ಕೊಂಡ ಶಿವನು ಹೀಗೆ ಅನುಗ್ರಹಿಸುವನು.

206. ಪವಿತ್ರವಾದ ವೇದಗಳನ್ನು ಆದಿಯಲ್ಲಿ ಅನುಗ್ರಹಿಸಿದ ಶಿವನು 'ಅದು ಮಾತ್ರವಲ್ಲದೆ ಹಿಂದೆ ನೀನು ನಮ್ಮೊಡನೆ ಜೋರಾಗಿ ಮಾತನಾಡಿದುದರಿಂದ 'ವನ್ ತೊಂಡನ್' ಎನ್ನುವ ಹೆಸರನ್ನು ಹೊಂದಿರುವೆ. ನಮಗೆ ಪ್ರೀತಿಯನ್ನು ಕೊಡುವ ಹಲವಿಧದ ಅರ್ಚನೆಗಳಲ್ಲಿ ಶ್ರೇಷ್ಠವಾದುದು ಸ್ತುತಿರೂಪವಾದ ಅರ್ಚನೆ. ಆದುದರಿಂದ ನೀನು ಈ ಭೂಮಿಯಲ್ಲಿ ನಮ್ಮನ್ನು ಸ್ತುತಿಸಿ ತಮಿಳು ಹಾಡುಗಳನ್ನು ಹಾಡು' ಎಂದು ಅನುಗ್ರಹಿಸಿದನು.

---

204. ಎನ್‌ಱಿಟುಮ್ ಓಚ್ಚೈ ಕೇಳಾ ಈನ್‌ಱ ಆನ್ ಕನೈಪ್ಪು ಕ್ಕೇಟ್ಟ
ಕನ್‌ಱುಪೋಲ್ ಕತಱಿ ನಮ್ಬಿ ಕರಚರ ಣಾತಿ ಅಙ್ಗಮ್
ತುನ್‌ಱಿಯ ಪುಳಕಮ್ ಆಕ ತ್ತೊಟುತಕೈ ತಲೈಮೇಲ್ ಆಕ
'ಮನ್‌ಱುಳೀರ್ ! ಚೆಯಲೋ ವನ್ತು ವಲಿಯಆಟ್ ಕೊಣ್ಡ' ತೆನ್‌ಱಾರ್.

205. ಎಣ್ಣಿಯ ಓಚ್ಚೈ ಐನ್ತುಮ್ ವಿಚುಮ್ಬಿಟೈ ನಿಱೈನ್ತಿಯ ಎಙ್ಗುಮ್
ವಿಣ್ಣವರ್ ಪೊಟಿಪೂ ಮಾರಿ ಮೇತಿನಿ ನಿಱೈಯನ್ತು ವಿಮ್ಮ
ಮಣ್ಣವರ್ ಮಕಿಟ್‌ಚ್ಚಿ ಪೊಙ್ಗ ಮಱೈಕಳುಮ್ ಮುಟಙ್ಗಿ ಆರ್‌ಪ್ಪ
ಅಣ್ಣಲೈ ಓಲೈ ಕಾಟ್ಟಿ ಆಣ್ಡವರ್ ಅರುಳಿ ಚ್ಚೆಯ್‌ವಾರ್.

206. 'ಮಱ್ಱುನೀ ವನ್ಮೈ ಪೇಚಿ ವನ್‌ಱೊಣ್ಡನ್ ಎನ್ನುಮ್ ನಾಮಮ್
ಪೆಱ್ಱನೈ ; ನಮಕ್ಕುಮ್ ಅನ್‌ಪಿಱ್ ಪೆರುಕಿಯ ಚಿಱಪ್ಪಿನ್ ಮಿಕ್ಕ
ಅಱ್‌ಚನೈ ಪಾಟ್ಟೇ ಆಕುಮ್ ; ಆತಲಾಲ್ ಮಣ್‌ಮೇಲ್ ನಮ್ಮೈಚ್
ಚೊಱ್ಱಮಿಟ್ ಪಾಟು' ಕೆನ್‌ಱಾರ್ ತೂಮಱೈ ಪಾಟುಮ್ ವಾಯಾರ್.

207. ಹಿಂದೆ ಶಿರವನ್ನೂ ಪಾದವನ್ನೂ ಹುಡುಕಿದ ಬ್ರಹ್ಮವಿಷ್ಣುಗಳು ಕಾಣದಂತಿದ್ದ, ಪಂಚಾಕ್ಷರಗಳು ಹಾಡಿದ ವಸ್ತುವಾಗುಳ್ಳ, ಶಿವನು 'ನಮ್ಮನ್ನು ಹಾಡು' ಎನ್ನಲು ಶಿವನ ಅನುಗ್ರಹದ ಮನಸ್ಸುಳ್ಳವನಾಗಿ ಚಿದಂಬರದಲ್ಲಿ ನೃತ್ತವನ್ನಾಡಿದ ಶಿವನ ಪಾದಗಳನ್ನು ಕೈಮುಗಿದು ನಮಸ್ಕರಿಸಿ ನಿಂತು,

208. 'ಬ್ರಾಹ್ಮಣರೂಪದಿಂದ ಸೇವಕನಾದ ನನಗೆ ವಿಷಯವನ್ನು ಹೇಳಿ ನನ್ನನ್ನು ಗೆದ್ದು ಸ್ವಹಿತವನ್ನು ತಿಳಿಯದ ಸೇವಕನಿಗೆ ಹಳೆಯ ನೆನಪನ್ನು ಕೊಟ್ಟು ಲೋಕ ಜೀವನದ ಬಾಳ್ವೆಯನ್ನು ತಡೆದು ನನ್ನನ್ನು ಆಳಾಗಿ ಮಾಡಿಕೊಂಡ ದೋಷವಿಲ್ಲದ ಅಮೃತವನ್ನು ಹೋಲುವವರೇ, ನಿಮ್ಮ ನಿರತಿಶಯ ಗುಣಸಾಗರವನ್ನು ನಾಯಿಗೆ ಸಮಾನನಾದ ನಾನು ಹೇಗೆ ತಿಳಿಯುವೆನು? ಹೇಗೆ ಹಾಡುವೆನು?' ಎಂದು ನಂಬಿಯು ಬಿನ್ನವಿಸಿದನು.

209. ಆಗ ತಮ್ಮ ಸೇವಕನಾದ ನಂಬಿಯಾರೂರನನ್ನು ಕೃಪೆಯಿಂದ ನೋಡಿ ಕರುಣಾಪೂರಿತ ದೃಷ್ಟಿಯುಳ್ಳ ಶಿವಪರಮಾತ್ಮನು ಇಂತು ಅನುಗ್ರಹಿಸುವನು. 'ಹಿಂದೆ ನಮ್ಮನ್ನು ಪಿತ್ತ (ಹುಚ್ಚ) ನೆಂದು ಕರೆದೆ. ಆದುದರಿಂದ ನಮ್ಮನ್ನು ಪಿತ್ತನೆಂದೇ ಸಂಬೋಧಿಸಿ ಹಾಡು.' ಇದನ್ನು ಕೇಳಿ ಅಲ್ಲಿ ನಿಂತ ವನ್‌ತೊಂಡನು (ಬಲುಮೆಯಿಂದ ಆಳಾಗಿಸಿಕೊಂಡ ನಂಬಿಯಾರೂರನು) ತನ್ನನ್ನು ತಡೆದು ಅಡಿಮೆಯವನನ್ನಾಗಿ ಮಾಡಿಕೊಂಡ ಶಿವಪರಮಾತ್ಮನನ್ನು ಹಾಡತೊಡಗಿದನು.

---

207. ತೇಟಿಯ ಅಯನುಮ್ ಮಾಲುಮ್ ತೆಳಿವುಱಾ ಐನ್ತು ಬುತ್ತುಮ್
ಪಾಟಿಯ ಪೊರುಳಾಯ್ ಉಳ್ಳಾನ್ 'ಪಾಟುವಾಯ್ ನಮ್ಮೈ' ಎನ್ನ
ನಾಟಿಯ ಮನನ್ತು ರಾಕಿ ನಮ್ಬಿಯಾ ರೂರರ್, ಮನ್ಱುಳ್
ಆಟಿಯ ಚೆಯ್ಯ ತಾಳೈ ಅಞ್ಚಲಿ ಕೂಪ್ಪಿ ನಿನ್ಱು.

208. 'ವೇತಿಯನ್ ಆಕಿ ಎನ್ನೈ ವಟಕ್ಕಿನಾಲ್ ವೆಲ್ಲ ವನ್ತು
ಊತಿಯಮ್ ಅಱಿಯಾ ತೇನು ಕ್ಕುಣರ್‌ವುತ ನ್ತಯ್ಯ ಕೊಣ್ಟ
ಕೋತಿಲಾ ಅಮುತೇ! ಇನ್ಱುನ್ ಕುಣಪ್ಪೆರು ಙ್ಕಟಲ್ಲೈ ನಾಯೇನ್
ಯಾಕಿನ್ನೈ ಅಱಿನ್ತುನ್ ಚೊಲ್ಲಿ ಪ್ಪಾಟುಕೇನ್' ಎನವೊ ಟಿನ್ನಾರ್.

209. ಅನ್ಪನ್ನೈ ಅರುಳಿನ್ ನೋಕ್ಕಿ ಅಙ್ಕಣರ್ ಅರುಳಿ ಚ್ಚೆಯ್ವಾರ್
'ಮುನ್ಪೆನ್ನೈ ಪ್ಪಿತ್ತನ್ ಎನ್ಱೇ ಮೊಟಿನ್ತನ್ನೈ ಆತ ಲಾಲೇ
ಎನ್‌ಪೆಯರ್ ಪಿತ್ತನ್ ಎನ್ಱೇ ಪಾಟುವಾಯ್' ಎನ್ಱಾರ್; ನಿನ್ಱು
ವನ್‌ಪೆರು ನ್ತೊಣ್ಟರ್ ಆಣ್ಟ ವಳ್ಳಲೈ ಪ್ಪಾಟಲ್ ಉಱ್ಱಾರ್.

210. ಗೊಂಚಲಾಗಿ ಅರಳಿದ ಮಲರುಗಳನ್ನು ಮುಡಿದ ಉಮಾದೇವಿಯನ್ನು ಎಡಭಾಗದಲ್ಲಿರಿಸಿಕೊಂಡು, ಸೇವಕರ ಮೇಲೆ ಸಹಜ ಪ್ರೀತಿಯಿಂದ ತಾಯಿಗಿಂತಲೂ ಹೆಚ್ಚಿನ ಸುಖವನ್ನು ಕೊಡುವ ಶಿವಪರಮಾತ್ಮನನ್ನು, ತಿರುನಾವಲೂರಿಗೆ ಮೊದಲಿನವ ನೆನಿಸಿಕೊಂಡ ನಂಬಿಯು 'ಪಿತ್ತಾಪಿಜ್ಚೈಶೂಡಿ' ಎಂದು ಮೊದಲಾಗುವ ತಿರುಪ್ಪದಿಕವನ್ನು (ಹಾಡನ್ನು) ಈ ಲೋಕದವರೆಲ್ಲಾ ಒಳ್ಳೆಯ ಗತಿಯನ್ನು ಹೊಂದಲು ಅನುಕೂಲ ವಾಗುವಂತೆ ಅನುಗ್ರಹಿಸಿದನು.

211. ಎಲ್ಲಾ ಮೇಲ್ಮೆಯ ಗುಣಗಳಲ್ಲಿಯೂ ತನಗೆ ಸರಿಸಮರಿಲ್ಲದ ನಂಬಿಯು, ಕ್ರಮಕ್ರಮವಾಗಿ ಬರುವ ಅರ್ಥಸಹಿತವಾಗಿ ಮೊದಲಲ್ಲಿ ಎತ್ತಿ ಹಾಡುವ ಇಂದಳ ಎಂಬ ರಾಗವುಳ್ಳ ಆ ತಿರುಪ್ಪದಿಕವನ್ನು ಸಂಗೀತದ ನಲಿದಲ್ (ಅನುದಾತ್ತ) ಪಡುತ್ತಲ್ (ಸ್ವರಿತ) ಎಡುತ್ತಲ್ (ಉದಾತ್ತ) ಎಂಬ ಮೂರು ಲಕ್ಷಣಗಳಿಗೆ ಲೋಪಬಾರದೆ, ಅವು ಹೊಂದಿಕೆಯಾಗುವಂತೆ ತಾಳದೊಡನೆ ಸಂಗೀತವು ಸೇರುವ ರೀತಿಯಲ್ಲಿ ಪರಶಿವನು ಸಂತೋಷಪಡುವಂತೆ ಹಾಡಿದನು.

212. ಎಲ್ಲಾ ಲೋಕದವರಿಗೂ ಒಳ್ಳೆಯದಾಗುವಂತೆ ತ್ರಿಪುರಗಳನ್ನು ದಹಿಸಿ ಅನುಗ್ರಹಿಸಿದವರಾದ, ಭಕ್ತರು ವಾಸಿಸುವ ತಿರುವಣ್ಣೈನಲ್ಲೂರಿನ ತಿರುವರುತ್ತುರೈ ಯಲ್ಲಿರುವ ಶಿವನು, ಮಧುರ ಪದಗಳಿಂದ ತುಂಬಿದ ತಮಿಳು ಪದಿಕವನ್ನು ಸಂಗೀತದಿಂದ ಹಾಡಿ ಅನುಗ್ರಹಿಸಿದ ನಂಬಿಯನ್ನು, 'ಇನ್ನೂ ಹಲಬಗೆಯಿಂದ ಈ ಭೂಮಿಯಲ್ಲಿ ನಮ್ಮ ಸ್ತುತಿಯನ್ನು ಹಾಡು' ಎಂದು ತುಂಬಿದ ಕರುಣೆಯಿಂದ ಆಜ್ಞಾಪಿಸಿದನು.

---

210. ಕೊತ್ತಾರ್‌ಮಲರ್ ಕ್ಕುಟಲಾಳೊರು ಕೂಱಾಯ್‌ಅಟಿ ಯವರ್‌ಪಾಲ್
ಮೆಯ್‌ತ್ತಾಯಿನುಮ್ ಇನಿಯಾನೈಅ ವ್ವಿಯನ್‌ನಾವಲರ್ ಪೆರುಮಾನ್
'ಪಿತ್ತಾಪಿಱೈ ಚೂಟಿ' ಎನ ಪ್ಪೆರಿತಾನ್ತಿರು ಪ್ಪತಿಕಮ್
ಇತ್ತಾರಣಿ ಮುತಲಾಮ್‌ಉಲ ಕೆಲ್ಲಾಮ್‌ಉಯ್ಯ ಎಟುತ್ತಾರ್.

211. ಮುಱೈಯಾಲ್‌ವರು ಮತುರತ್ತುಟನ್ ಮೊಟಿಇನ್ತಳ ಮುತಲಿಲ್
ಕುಱೈಯಾನಿಲೈ ಮುಮ್ಮೈಪ್ಪಟಿ ಕೂಟುಂಕಿಟಿ ಮೈಯಿನಾಲ್
ನಿಱೈಪಾಣಿಯಿನ್ ಇಚೈಕೋಳ್‌ಪುಣರ್ ನೀಟುಮ್ಪ್ಪುಕಟ್ ವಕೈಯಾಲ್
ಇಱೈಯಾನ್‌ಮಕಿಟ್ ಇಚೈಪಾಟಿನನ್ ಎಲ್ಲಾಮ್‌ನಿಕರ್ ಇಲ್ಲಾನ್.

212. ಚೊಲ್ಲಾರ್ ತಮಿಟ್ ಇಚೈಪಾಟಿಯ ತೊಣ್ಣನ್‌ತನ್ನೈ 'ಇನ್‌ನುಮ್
ಪಲ್ಲಾಱುಲ ಕಿನಿಲ್‌ನಮ್ಮುಕಟ್ ಪಾಟು' ಎನ್‌ಱುಱು ಪರಿವಿಲ್
ನಲ್ಲಾರ್‌ವೆಣ್ಣೆಯ್ ನಲ್ಲೂರರು ಟ್ಟುಱೈಮೇವಿಯ ನಮ್ಪನ್
ಎಲ್ಲಾವುಲ ಕುಯ್ಯಪ್ಪುರಮ್ ಎಯ್ತಾನ್ ಅರುಳ್ ಚೆಯ್ತಾನ್.

213. ನಂಬಿಯಾರೂರನನ್ನು ಶಿವನು ತಡೆದು ತನಗೆ ಆಳಾಗಿ ಮಾಡಿಕೊಂಡ ಆ ದಿನದಲ್ಲಿ ಮದುವೆ ನಿಂತುಹೋದ ಕಾರಣದಿಂದ ಪುತ್ತೂರಿನಲ್ಲಿ ಬಾಳುವ ಶಿವಾಚಾರ್ಯರ ಮಗಳು ನಂಬಿಯನ್ನು ಬಿಡದೆ ಚಿಂತಿಸುವ ಧರ್ಮದಿಂದ ಬೇರಾಗದಂತೆ ಶಿವಲೋಕವನ್ನು ಪಡೆದಳು. ಅದನ್ನು ಪಡೆಯಲು ಇತರರಾದರೆ ಬೇರೆ ವಿಧವಾದ ಜಪ, ವ್ರತ ಮೊದಲಾದುವುಗಳನ್ನು ಆಚರಿಸುವರು.

214. ನಂಬಿಯನ್ನು ತಿರುವಣ್ಣೈನಲ್ಲೂರಿನ ತಿರುವರುತ್ತುರೈ ಶಿವಾಲಯದಲ್ಲಿ ವಾಸಿಸುವ ಶಿವನು ತಡೆದು ಸೇವಕನನ್ನಾಗಿ ಮಾಡಿಕೊಂಡ ಮೇಲೆ ನೀರ್ಪೂಗಳಾದ ತಾವರೆ ಮೊದಲಾದುವುಗಳು ಪುಷ್ಪಿಸಲು ಎಡೆಯಾಗಿರುವ ತಟಾಕಗಳಿಂದ ಸುತ್ತುವರಿದ ತಿರುನಾವಲೂರಿಗೆ ನಂಬಿಯು ಬಂದು, ಶಿವನನ್ನು ನಮಿಸಿ ಅಲ್ಲಿ ತಿರುಪ್ಪದಿಕವನ್ನು ಹಾಡಿದನು.

215. ಶಿವನು ವಾಸಿಸುವ ತಿರುತ್ತುರೈಯೂರು ಎಂಬ ಗ್ರಾಮವನ್ನು ಸೇರಿ, 'ಪಾಪದ ಕಾರಣವಾಗಿ ಪುನಃ ಪಾಪದ ದಾರಿಗೆ ಹೋಗುವುದನ್ನು ತಡೆದು ನನ್ನನ್ನು ಸೇವಕನನ್ನಾಗಿ ಮಾಡಿಕೊಂಡವರೇ, ದಾಸನಾದ ನನಗೆ ತಪೋಮಾರ್ಗವನ್ನು ಆಜ್ಞಾಪಿಸಿ ಅನುಗ್ರಹಿಸಿ' ಎಂದು ಶಿವಪರಮಾತ್ಮನ ಸನ್ನಿಧಿಯಲ್ಲಿ ನಿಂತು ಭವವನ್ನು ಹಿಂಗಿಸುವಂತಹ ತಿರುಪ್ಪದಿಕವನ್ನು ನಂಬಿಯು ಹಾಡಿದನು.

---

213. ಅಯಲೋರ್‌ತವಮ್ ಮುಯಲ್ವಾರ್‌ಪಿಱರ್ ಅನ್‌ಱೇಮಣಮ್ ಅಱಿಯುಮ್
ಚೆಯಲಾಲ್‌ನಿಕೞ್ ಪುತ್ತೂರ್‌ವರು ಚಿವವೇತಿಯನ್ ಮಕಳುಮ್
ಉಯರ್‌ನಾವಲರ್ ತನಿನಾತನೈ ಒಱಿಯಾತುಣರ್ ವೞಿಯಿಲ್
ಪೆಯರಾತುಯರ್ ಚಿವಲೋಕಮುಮ್ ಎಳಿತಾಮ್‌ವಕೈ ಪೆಱ್ಱಾಳ್.

214. ನಾವಲರ್‌ಕೋನ್ ಆರೂರನ್ ತನ್ನೈವೆಣ್ಣೈಯ್ ನಲ್ಲೂರಿಲ್
ಮೇಲುಮ್‌ಅರುಟ್ಟುಱೈಯಮರ್‌ನ್ತ ವೇತಿಯರಾಟ್ ಕೊಣ್ಟತಱ್ ಪಿನ್
ಪೂವಲರುಂ ತಟಮ್‌ಪೊಯ್ಕೈತ್ ತಿರುನಾವ ಲೂರ್‌ಪುಕುನ್ತು
ತೇವರ್‌ಪಿರಾನ್ ತನ್ನೈಪ್ಪಣಿನ್ತು ತಿರುಪ್ಪತಿಕಮ್ ಪಾಟಿನಾರ್.

215. ಚಿವನುಱೈಯುಂ ತಿರುತ್ತುಱೈಯೂರ್ ಚೆನ್‌ಱಣೈನ್ತು 'ತೀವಿನೈಯಾಲ್
ಅವನೆಱಿಯಿಱ್ ಚೆಲ್ಲಾಮೇ ತಟುತ್ತಾಣ್ಟಾಯ್ ಅಟಿಯೇಱ್‌ಕು
ತ್ತವನೆಱಿತನ್ತರುಳ್' ಎನ್‌ಱು ತಮ್ಪಿರಾನ್ ಮುನ್‌ನಿನ್‌ಱು
ಪವನೆಱಿಕ್ಕು ವಿಲಕ್ಕಾಕುಂ ತಿರುಪ್ಪತಿಕಮ್ ಪಾಟಿನಾರ್.

216. ಪಂಚೇಂದ್ರಿಯಗಳು ತನ್ನ ವಶದಲ್ಲಿ ಅಡಗುವಂತೆ, ತಪಸ್ಸಿನ ದಾರಿಯನ್ನು ಪಡೆದುಕೊಳ್ಳಲು ಮಲರುಗಳಿರುವ ಸುವಾಸನೆಯನ್ನು ಹೊಮ್ಮುವ ಉದ್ಯಾನಗಳಿಂದ ಸುತ್ತುವರಿದ, ತಿರುತ್ತುರೈಯೂರಿನಲ್ಲಿ ನೆಲಸಿದ, ಬಾಲಚಂದ್ರನನ್ನೂ ಶೀತಲವಾದ ಗಂಗೆಯನ್ನೂ ಜಡೆಯಲ್ಲಿಟ್ಟುಕೊಂಡ, ಶಿವನ ಪಾದಗಳನ್ನು ಕುಸುಮಗಳಿಂದ ನಂಬಿಯು ಪೂಜಿಸಿದನು.

217. ತಿರುತ್ತುರೈಯೂರನ್ನು ನಮಿಸಿ, ಶಿವನಿರುವ ಹಿರಿಮೆಯ ಇತರ ಹಲವು ಸ್ಥಳಗಳನ್ನೂ ಸೇರಿ ವಂದಿಸಿ, ಪುಲಿಯೂರಿನಲ್ಲಿ ನರ್ತಿಸಿದ ನಟೇಶನ ಆನಂದನೃತ್ತವನ್ನು ಕಂಡು ನಮಿಸಬೇಕೆಂದು ಮನಸ್ಸಿನಲ್ಲಿ ನಿಶ್ಚೈಸಿ ಸಹಿಸಲಾಗದ ಅಧಿಕ ಪ್ರೀತಿಯಿಂದ ಅಲ್ಲಿ ಸೇವಿಸಲು ನಂಬಿಯು ಮನಮಾಡಿದನು.

218. ಬೆಟ್ಟದಲ್ಲಿ ಹುಟ್ಟಿದ ಚಂದನಮರಗಳು, ಅಗಿಲುಮರಗಳು, ನವಿಲ ಸೋಗೆಗಳು, ಮಲರುಗಳು – ಮೊದಲಾದುವುಗಳನ್ನು ತನ್ನ ಮೇಲೆ ಪಸರಿಸಿಕೊಂಡಿರಲು, ಮುತ್ತುಗಳನ್ನು ತೀರಗಳಲ್ಲಿ ಸೇರಿಸುವ ಅಲೆಗಳ ತಂಪಾದ ನೀರನ್ನುಳ್ಳ ಪೆಣ್ಣೈಯಾರನ್ನು (ಪೆಣ್ಣೈ ನದಿಯನ್ನು) ನಂಬಿಯು ದಾಟಿ, ಅಶ್ವಗಳನ್ನು ಹೂಡಿದ ರಥದಲ್ಲಿ ಗಮಿಸುವ ರವಿಯು ಪಡುಕಡಲನ್ನು ಸೇರುವ ಹೊತ್ತಿನಲ್ಲಿ ತಿರುವದಿಕೈ ವೀರಟ್ಟಾನ ಎಂಬ ಪುರವನ್ನು ಸೇರಿದನು.

---

216. ಪುಲನೊನ್ಱುಮ್ ಪಟಿತವತ್ತಿಱ್ ಪುರಿನ್ದ‌ನೆಱಿ ಕೊಟುತ್ತರುಳ
ಅಲರ್ಕೊಣ್ಟ ನಱುಞ್ಚೋಲೈ ತ್ತಿರುತ್ತುಱೈಯೂರ್ ಅಮರ್ನ್ದರುಳುಮ್
ನಿಲವುನ್ದಣ್ ಪುನಲುಮ್ಚಳಿರ್ ನೀಳ್‌ಚಟೈಯೋನ್ ತಿರುಪ್ಪಾತಮ್
ಮಲರ್ಕೊಣ್ಟು ಪೋಱ್ಱಿಚೈತ್ತು ವನ್ದಿತ್ತಾರ್ ವನ್‌ಱೊಣ್ಟರ್.

217. ತಿರುತ್ತುಱೈಯೂರ್ ತನ್ನೈಪ್ಪಣಿನ್ತು ಚಿವಪೆರುಮಾನ್ ಅಮರ್ನ್ದರುಳುಮ್
ಪೊರುತ್ತಮಾಮ್ ಇಟಮ್ಪಲವುಮ್ ಪುಕ್ಕಿಱೈಞ್ಚಿ ಪ್ಪೊಱ್‌ಪುಲಿಯೂರ್
ನಿರುತ್ತನಾರ್ ತಿರುಕ್ಕೂತ್ತು ತೊೞುವತಱ್ಕು ನಿನೈವುೞ್ಱು
ವರುತ್ತಮಿಕು ಕಾತಲಿನಾಲ್ ವೞಿಕ್ಕೊಳ್ವಾನ್ ಮನಙ್ಕೊಣ್ಟಾರ್.

218. ಮಲೈವಳರ್ಚ ನ್ದಕಿಲ್‌ಪೀಲಿ ಮಲರ್‌ಪರಪ್ಪಿ ಮಣಿಕೊೞಿಕ್ಕುಮ್
ಅಲೈತರುತಣ್ ಪುನಱ್‌ಪೆಣ್ಣೈ ಯಾಱುಕಟ ನ್ದೇಱಿಯಪಿನ್
ನಿಲವುಪಚುಮ್ ಪುರವಿನೆಟು ನ್ದೇರಿರವಿ ಮೇಲ್‌ಕಟಲಿಱ್
ಚೆಲಅಣೈಯುಮ್ ಪೊೞುತಣೈಯ ತ್ತಿರುವತಿಕೈ ಪ್ಪುಱತ್ತಣೈನ್ದಾರ್.

219. ಲೋಕವೇ ಸ್ತುತಿಸುವ, ಪುಷ್ಪಗಳನ್ನು ಕೊಯ್ಯುವ ಆಯುಧವುಳ್ಳ ತಿರುನಾವಕ್ಕರಸರು ಶಿವನ ಕೈಂಕರ್ಯವನ್ನು ಮಾಡಿ ಅನುಗ್ರಹಿಸಿದ ಹಿರಿಮೆಯುಳ್ಳ ಸ್ಥಳವನ್ನು ಕಾಲಲ್ಲಿ ತುಳಿದುಕೊಂಡು ಹೋಗುವುದಕ್ಕೆ ಹೆದರುವೆನು ಎಂದು ಆ ತಿರುವದಿಕ್ಕೈ ವೀರಟ್ಟಾನಂ ಎಂಬ ಸ್ಥಳವನ್ನು ಪ್ರವೇಶಿಸದೆ, ಸಣ್ಣ ಅಣೆಕಟ್ಟುಗಳುಳ್ಳ ಸಿದ್ಧಕೂಟಗಳಿರುವ ಮಠವನ್ನು ನಂಬಿಯು ಪ್ರವೇಶಿಸಿದನು.

220. ತುಂಬಿಗಳ ಗೀತವು ಕೇಳಿಬರುವ ನಂದನವನಗಳಿಂದ ಸುತ್ತುವರಿದ ಮಠದಲ್ಲಿ ಅಲೆಗಳುಳ್ಳ, ನೀರು ಹೆಚ್ಚಿರುವ, ಕೆಡಿಲ ನದಿಯ ಎಡದಿಕ್ಕಿನಲ್ಲಿರುವ ತಿರುವೀರಟ್ಟಾನದ ಶಿವನ ಪಾದಗಳನ್ನು ಆಶಿಸುವ ಮನವುಳ್ಳವನಾಗಿ ನಂಬಿಯು ತನ್ನ ಪಕ್ಕದಲ್ಲಿ ಪರಿಜನರು ನಿದ್ರೆಹೋಗಲು ತಾನೂ ನಿದ್ರಿಸಿದನು.

221. ಹೀಗೆ ನಂಬಿಯು ನಿದ್ರಿಸುವುದನ್ನು ತಿರುವೀರಟ್ಟಾನದಲ್ಲಿ ನೆಲೆಯಾದ ಶಿವಪರಮಾತ್ಮನು ತಿಳಿದು ಮುದಿಯ ಬ್ರಾಹ್ಮಣ ವೇಷವನ್ನು ತಾಳಿ ಯಾರೂ ತಿಳಿಯದಂತೆ, ಸಾರ್ವಜನಿಕವಾಗುಳ್ಳ ಆ ಮಠದೊಳಗೆ ಪ್ರವೇಶಿಸಿ, ಮಲರಮಾಲೆಗಳನ್ನು ಸುತ್ತಿದ ನಂಬಿಯಾರೂರನ ತಲೆಯ ಮೇಲೆ ತಾವರೆ ಮಲರಂತಿರುವ ತಮ್ಮ ಪಾದಗಳನ್ನಿಟ್ಟು, ತಾವೂ ನಿದ್ರಿಸುವವರಂತೆ ಇದ್ದರು.

---

219. 'ಉಟೈಯಅರ(ಚು) ಉಲಕೇತ್ತುಮ್ ಉೞವಾರ ಪ್ಪಟೈಯಾಳಿ
ವಿಟೈಯವರ್ಕ್ಕು ಕ್ಕೈತ್ತೊಣ್ಡು ವಿರುಮ್ಪುಪೆರುಮ್ ಪತಿಯೈಮಿತಿತ್ತು
ಅಟೈಯುಮತಱ್ ಕಞ್ಚುವನ್' ಎನ್ ಱನ್ನಕರಿಲ್ ಪುಕುತಾತೇ
ಮಟೈವಳರ್ತಣ್ ಪುಱಮ್ಪಣೈಯಿಱ್ ಚಿತ್ತವಟ ಮಟಮ್ಪು ಕುನ್ತಾರ್.

220. ವರಿವಳರ್ಪೂ ಞ್ಚೋಲೈಚೂೞ್ ಮಟತ್ತಿನ್ಕಣ್ ವನ್ಱೊಣ್ಟರ್
ವಿರಿತಿರೈನೀರ್ ಕ್ಕೆಟಿಲವಟ ವೀರಟ್ಟಾ ನತ್ತಿಱೈತಾಳ್
ಪುರಿವುಟೈಯ ಮನತ್ತಿನರಾಯ್ ಪ್ಪುಟೈಎಙ್ಕುಮ್ ಮಿಟೈಕಿನ್ಱ
ಪರಿಚನಮುಮ್ ತುಯಿಲ್ಕೊಳ್ಳ ಪ್ಪಳ್ಳಿಯಮರ್ ನ್ತರುಳಿನಾರ್.

221. ಅತುಕಣ್ಟು ವೀರಟ್ಟ ತ್ತಮರ್ನ್ತರುಳುಮ್ ಅಙ್ಕಣರುಮ್
ಮುತುವಟಿವಿನ್ ಮಱೈಯವರಾಯ್ ಮುನ್ನೊರುವರ್ ಅಱಿಯಾಮೇ
ಪೊತುಮಟತ್ತಿ ನುಟ್ಪುಕುನ್ತು ಪೂನ್ತಾರಾನ್ ತಿರುಮುಟಿಮೇಲ್
ಪತುಮಮಲರ್ ತ್ತಾಳ್ವೈತ್ತು ಪ್ಪಳ್ಳಿಕೊಳ್ವಾರ್ ಪೋಱ್ಪಯಿನ್ಱಾರ್,

222. ತನ್ನ ತಲೆಯ ಮೇಲೆ ಕಾಲಿಟ್ಟುದನ್ನು ತಿಳಿದ ನಂಬಿಯು, 'ವೇದಿಯರೇ, ನಿಮ್ಮ ಪಾದಗಳನ್ನು ನನ್ನ ತಲೆಯ ಮೇಲೆ ಇಟ್ಟುದೇಕೆ?' ಎಂದು ಕೇಳಲು, ಅದಕ್ಕೆ ಆ ಕಪಟವೇಷದ ಶಿವನು, 'ನೀನು ನಿದ್ರಿಸಿದ ದಿಕ್ಕನ್ನು ತಿಳಿಯದೆ ಕಾಲಿಟ್ಟೆನು. ಈ ಪ್ರಮಾದವು ನನ್ನ ಮುಪ್ಪಿನ ಪರಿಣಾಮ' ಎಂದು ಹೇಳಲು, ಅದಕ್ಕೆ ನಂಬಿಯು ಸಮ್ಮತಿಸಿ ತನ್ನ ತಲೆಯನ್ನು ಬೇರೆ ದೆಸೆಯಲ್ಲಿಟ್ಟು ನಿದ್ರಿಸಿದನು.

223. ಅಲ್ಲಿಯೂ ಶಿವನು ತಲೆಯಲ್ಲಿ ಪಾದವನ್ನಿಡಲು ಕೆಂಪಗಾದ ಕಯಲ್ ಮೀನುಗಳು ಚಲಿಸುವ ತಟಾಕಗಳಿಂದ ಸುತ್ತುವರಿದ ತಿರುನಾವಲೂರಲ್ಲಿ ಅವತರಿಸಿದ ನಂಬಿಯು, 'ಇಲ್ಲಿಯೂ ನನ್ನನ್ನು ಹಲವು ಸಲ ತುಳಿದೆ, ನೀನು ಯಾರು?' ಎಂದು ಕೇಳಲು, ಜಡೆಯಲ್ಲಿರುವ ಗಂಗೆಯನ್ನು ಮರೆಸಿದ ಬ್ರಾಹ್ಮಣ ವೇಷವನ್ನು ತಾಳಿದ ಆ ಪರಶಿವನು, 'ನಮ್ಮನ್ನು ನೀನು ತಿಳಿಯೆಯೋ?' ಎಂದು ಹೇಳಿ ಅಂತರ್ಧಾನವಾದರು.

224. ಆಮೇಲೆ 'ಗರ್ವದಿಂದ ತಿಳಿಯದೆ ನಾನು ಏನನ್ನು ಮಾಡಿಬಿಟ್ಟೆನು?' ಎಂದು ನಂಬಿಯು ಮನದಲ್ಲಿ ವ್ಯಥೆಗೊಂಡು, ಜ್ಞಾನವನ್ನು ಹೊಂದಿ ವೀರಟ್ಟಾನದಲ್ಲಿ ನೆಲಸಿ ಅನುಗ್ರಹಿಸಿದ ಗಜಚರ್ಮವನ್ನು ಹೊದ್ದ ವೀರಟ್ಟೇಶ್ವರನನ್ನು ನಮಿಸಿ, 'ತಮ್ಮನ್ನು ತಿಳಿಯದವರೂ ಇದ್ದಾರೆಯೋ?' ಎಂದು ಆರಂಭವಾಗುವ ಪದವನ್ನು ಹಾಡಿದನು.

---

222. ಅನ್ನಿಲೈಅ ರೂರನ್ ಉಣರ್ 'ನ್ತಿರುಮುಡಿಯೈಯೋಯ್ ! ಉನ್ ನಟಿಎನ್
ಚೆನ್ನಿಯಿಲ್ ವೈತ್ತನೈ' ಎನ್ನ 'ತ್ತಿಚೈಯಱಿಯಾ ವಕೈಚೆಯ್ತತು
ಎನ್ ಮುಟ್ಟೈಯ ಮೂಪ್ಪುಕ್ಕಾಣ್' ಎನ್ಱರುಳ ಅತಱ್ಕಿಚೈನ್ತು
ತನ್ ಮುಟಿಅ ಪ್ಪಾಲ್ ವೈತ್ತೇ ತುಯಿಲಮರ್ನ್ತಾನ್ ತಮಿೞ್ ನಾತನ್.

223. ಅಙ್ಙುಮವನ್ ತಿರುಮುಟಿಮೇಲ್ ಮೀಟ್ಟುಮವರ್ ತಾಳ್ ನೀಟ್ಟ
ಚ್ಚೆಙ್ಕಯಲ್ ಪಾಯ್ ತಟಮ್ಪುಟೈಚೂೞ್ ತಿರುನಾವ ಲೂರಾಳಿ
'ಇಙ್ಙನ್ ನೈ ಪ್ಪಲಕಾಲುಮ್ ಮಿತಿತ್ತನೈನೀ ಯಾರ್?' ಎನ್ನ
ಕ್ಕಙ್ಕೈಚಟೈ ಕ್ಕರನ್ತಪಿರಾನ್ 'ಅಱಿನ್ತಿಲೈಯೋ' ಎನಕ್ಕರನ್ತಾನ್.

224. 'ಚೆಮ್ಮಾನ್ತ ಙ್ಕಿಯಾನಱಿಯಾ ತೆನ್ ಚೆಯ್ತೇನ್' ಎನತ್ತೆಳಿನ್ತು
'ತಮ್ಮಾನೈ ಅಱಿಯಾತ ಚಾತಿಯಾರ್ ಉಳರೇ' ಎನ್ಱು
ಅಮ್ಮಾನೈ ತ್ತಿರುವತಿಕೈ ವೀರಟ್ಟಾ ನತ್ತಮರ್ನ್ತ
ಕೈಮ್ಮಾವಿನ್ ಉರಿಯಾನೈ ಕ್ಕಟಿಲ್ ಪಣಿನ್ತು ಪಾಟಿನಾರ್.

225. ಚಿನ್ನದ ಹುಡಿ, ಮಣಿಗಳ ಗುಂಪು, ಆನೆಗಳ ಬಿಳಿ ದಂತಗಳು, ಬಿಳಿ ಮುತ್ತುಗಳು, ಸುಗಂಧಯುತವಾದ ಕುಸುಮಗಳು, ಚಂದನ ತುಂಡುಗಳು – ಇವುಗಳನ್ನು ಬಲಿಷ್ಠವಾದ ಅಲೆಗಳೆಂಬ ಕರಗಳಿಂದ ಕೊಂಡುಬಂದು ತಿರುವದಿಕೈ ಎಂಬ ಸ್ಥಳವನ್ನು ಪೂಜೆಮಾಡುವಂತೆ ಆ ಊರ ತೆಂಕುದಿಕ್ಕಿನಲ್ಲಿರುವ ತಿರುಕ್ಕೆಡಿಲ ನದಿಯಲ್ಲಿ ನಂಬಿಯು ಮುಳುಗಿ ಸ್ನಾನಮಾಡಿ,

226. ವೀರಟ್ಟೇಶ್ವರನನ್ನು ನಮಿಸಿ ಅಲ್ಲಿಂದ ಹೊರಟು ಆ ನದಿಯ ತೆಂಕುತೀರದಲ್ಲಿಯೇ ಬಂದು ಯುದ್ಧದಲ್ಲಿ ಬಲಯುತವಾದ ಬಲಿಯ ಯಾಗದಲ್ಲಿ ಹಿಂದೆ ವಾಮನನಾಗಿ ಮೂರಡಿ ನೆಲವನ್ನು ಯಾಚಿಸಿದ ವಿಷ್ಣುವು ಪೂಜೆಮಾಡಿದ ತಿರುಮಾಣಿಕ್ಕುಳಿ ಎಂಬ ಸ್ಥಳವನ್ನು ಸೇರಿದನು.

227. ಆ ತಿರುಮಾಣಿಕ್ಕುಳಿಯ ಮಾಣಿಕ್ಕವರದರನ್ನು ನಮಿಸಿ, ಅಲ್ಲಿಂದ ಹೊರಟು, ನಮಿಸಿದ ಭಕ್ತರಿಗೆ ವರವನ್ನು ಕೊಡುವ ಶಿವನಿರುವ ತಿರುತ್ತಿನೈನಗರವನ್ನು ವಂದಿಸಿ ಆ ಸ್ಥಳವನ್ನು ತಿರುಪ್ಪಾಡಿನಲ್ಲಿ ಹಾಡಿ, ವೀಣೆಗಳ ನಾದ, ಮದ್ದಳೆಯ ಸ್ವರ, ವೇದಗಳ ಘೋಷ, ದೇವಕನ್ನಿಕೆಯರ ಸಂಗೀತದ ಸ್ವರ ಇವುಗಳು ಯಾವ ಕಾಲದಲ್ಲೂ ನಿಲ್ಲದ ಚಿದಂಬರದ ಸಮೀಪ ನಂಬಿಯು ಬಂದು ಸೇರಿದನು.

---

225. ಪೊನ್ಱಿರಳುಮ್ ಮಣಿತ್ತಿರಳುಮ್ ಪೊರುಕರಿವೆಣ್ ಕೋಟುಕಳುಮ್
ಮಿನ್ಱಿರಣ್ಟ ವೆಣ್ಮುತ್ತುಮ್ ವಿರೈಮಲರುಮ್ ನಱುಙ್ಕುಱಟುಮ್
ವನ್ಱಿರೈಕ ಳಾಱ್ಕೊಣರ್ನ್ದು ತಿರುವತಿಕೈ ವೞಿಪಟಲಾಲ್
ತೆನ್ಱಿಚೈಯಿಲ್ ಕಙ್ಕೈಯೆನುಮ್ ತಿರುಕ್ಕೆಟಿಲಮ್ ತಿಳೈತ್ತಾಟಿ.

226. ಅಙ್ಕಣರೈ ಅಟಿಪೋಱ್ಱಿ ಅಙ್ಕಕನ್ಱು ಮಙ್ಙಿನ್ದು
ಪೊಙ್ಕುನತಿ ತ್ತೆನ್ಕರೈಯೇ ಪೋಯ್ ಪೋರ್ವಲಿತ್ತೋಳ್ ಮಾವಲಿತನ್
ಮಙ್ಕಲವೇಳ್ ವಿಯಿಲ್ಪುಕ್ಕು ವಾಮನನಾಯ್ ಮಣ್ಇರನ್ದ
ಚೆಙ್ಕಣವನ್ ವೞಿಪಟ್ಟ ತಿರುಮಾಣಿ ಕ್ಕುೞಿಅಣೈನ್ದಾರ್.

227. ಪರಮ್ಪೊರುಳೈ ಪ್ಪಣಿನ್ದುತಾಳ್ ಪರವಿಪ್ಪೋಯ್ ಪ್ಪಣಿನ್ದವರ್ಕ್ಕು
ವರನ್ದರುವಾನ್ ತಿನೈನಕರೈ ವಣಙ್ಕಿನರ್ವ ಣ್ಣಮಿೞ್ಪಾಟಿ
ನಾಮ್ಪುಟೈಯಾೞ್ ಒಲಿಮುೞವಿನ್ ನಾತಒಲಿ ವೇತಒಲಿ
ಅರಮ್ಪೈಯರ್ತಮ್ ಕೀತಒಲಿ ಅಱಾತ್ತಿಲ್ಲೈ ಮರುಙ್ಙಣೈನ್ದಾರ್.

228. ಮಧುರಸದಿಂದ ಕೂಡಿದ ಸುಂದರವಾದ ಪುಷ್ಪಹಾರಗಳನ್ನೂ ರತ್ನ ಮಾಲೆಗಳನ್ನೂ ಎದೆಯಲ್ಲಿ ಧರಿಸಿಕೊಂಡ ನಂಬಿಯು, ತಂಪಾದ ಕೆಂದಾವರೆಯಲರುಗಳು ಅಲ್ಲಾಡುವಂತೆ ಸುಂದರವಾದ ಕಯಲ್ ಮೀನುಗಳು ಇದಿರು ಹಾರಲು ಅದರಿಂದ ಪಕ್ಕದಲ್ಲಿ ತುಂಬಿಗಳೂ ನೀರ್ಹಕ್ಕಿಗಳೂ ಶಬ್ದಿಸಲು ಅಲೆಗಳನ್ನೂ ಬಿಳಿ ಶಂಖಗಳನ್ನೂ ಉಳ್ಳ ತಟಾಕಗಳಿಂದಲೂ, ಹಾರುವ ಮಲಂಗು ಮೀನುಗಳಿಂದ ಕೂಡಿದ ವಿಸ್ತಾರವಾದ ಗದ್ದೆ ಗಳಿಂದ ಸುತ್ತುವರಿದ ತನ್ನ ಪ್ರದೇಶದಲ್ಲಿ ನಮಸ್ಕರಿಸುವವರ ತ್ರಿವಿಧಮಲಗಳನ್ನು ನಾಶಗೊಳಿಸಿ ಮೋಕ್ಷವನ್ನು ಕೊಡುವ ಚಿದಂಬರವೆಂಬ ಸುಂದರವಾದ ಊರಿನ ಎಲ್ಲೆಯನ್ನು ಸಮೀಪಿಸಿ ಒಡನೆಯೇ ನಮಸ್ಕರಿಸಿದನು.

229. ಅಲ್ಲಿ ಹೊನ್ನೆ, ಮಾವು, ಗಂಧ, ಸರಳ, ತೆಂಗು, ಲವಂಗ, ನಾರಂಗ, ಕವುಂಗು, ಕುಂಕುಮ, ಬಾಳೆ, ತಿರುಪ್ಪೆ, ವಂಜಿ ಮೊದಲಾದ ಹಲವು ಬಗೆಯ ಮರಗಳು ಎಲ್ಲೆಡೆಗಳಲ್ಲಿಯೂ ಒತ್ತೊತ್ತಾಗಿ ಎತ್ತರವಾಗಿರುವುದರಿಂದ ಮೇಘರಾಜಿಗಳನ್ನು ದಾಟಿ ಇರುತ್ತಿದ್ದುವು. ಇಂತಹ ವೃಕ್ಷೋದ್ಯಾನಗಳಲ್ಲಿ ಕೋಗಿಲೆಗಳು ಸರಗೈಯ್ಯುತ್ತಿರಲು ಅಂತಹ ಪ್ರದೇಶಗಳು ಭೋಗಭೂಮಿಯಾದ ಸ್ವರ್ಗವನ್ನು ಮೀರಿಸಿ ರಾಜಿಸುತ್ತಿದ್ದುವು.

---

228. ತೇಮ ಲಙ್ಕಲಣಿ ಮಾಮಣಿ ಮಾರ್ಪಿಱ್ ಚೆಮ್ಮಲ್ ಅಙ್ಕಯಲ್ಕಳ್ ಚೆಙ್ಕಮ ಲತ್ತಣ್,
ಪೂಮ ಲಙ್ಕಎತಿರ್ ಪಾಯ್ವ್ವನ ಮೋಟೇ ಪುಳ್ಳ ಲಮ್ಪುತಿರೈ ವೆಳ್ವಳೈ ವಾವಿ,
ತ್ತಾಮ ಲಙ್ಕಕಳ್ ತಟಮ್ಪಣೈ ಚೂಟುಮ್ ತಣ್ಮ ರುಙ್ಕು ತೊಟು ವಾರ್ಕಳ್ತಮ್ ಮುಮ್ಮೈ,
ಮಾಮ ಲಙ್ಕಳಱ ವೀಟರುಳ್ ತಿಲ್ಲೈ ಮಲ್ಲಲ್ ಅಮ್ಪತಿಯಿನ್ ಎಲ್ಲೈ ವಣಙ್ಕಿ.

229. ನಾಕ ಚೂತವಕು ಳಙ್ಗರ ಳಙ್ಕೂಟಿ ನಾಳಿ ಕೇರಮ್ಇಲ ವಙ್ಕ ನರನ್ತಮ್,
ಪೂಕ ಞಾಟಲ್ಕುಳಿರ್ ವಾಟೈ ಮತೂಕಮ್ ಪೊತುಳುಮ್ ವಞ್ಚಿಪಲ ಎಙ್ಕುಮ್ ನೆರುಙ್ಕಿ,
ಮೇಕ ಚಾಲಮಲಿ ಚೋಲೈಕ ಳಾಕಿ ಮೀತು ಕೋಕಿಲಮ್ ಮಿಟೈನ್ತು ಮಿಟಱ್ಱಿ,
ಪ್ಪೋಕ ಭೂಮಿಯಿನುಮ್ ಮಿಕ್ಕು ವಿಳಙ್ಕುಮ್ ಪೂಮ್ಪುಱಮ್ಪಣೈ ಕಟನ್ತು ಪುಕುನ್ತಾರ್.

230. ಬನ್ನಿ, ಕರ್ಣಿಕಾರ, ಸುರಹೊನ್ನೆ, ಚಂದನ, ಪಲಾಶ ಮರಗಳು, ಮಂದಾರ, ಕೊಂಗು, ಕುರಾಮರಗಳು, ಪರಿಮಳಯುಕ್ತವಾದ ಹೊನ್ನೆ, ಪಾದರಿ, ಬಿಲ್ವ ಮೊದಲಾದ ಮರಗಳು – ಇವುಗಳಿಂದ ಹಿರಿಮೆಯನ್ನು ಹೊಂದಿ, ಶಿರೀಷ, ಚಂಪಕ, ಸುವಾಸನೆಯ ಮುಲ್ಲೆ, ಮಲ್ಲಿಗೆ, ಜಾಜಿ, ನಂದ್ಯಾವರ್ತ, ಕರವೀರಗಳ ಗಿಡಬಳ್ಳಿಗಳಿಂದ ದಟ್ಟವಾಗಿ, ಹಲವಿಧ ಕುಸುಮಗಳಿಂದ ಕೂಡಿದ, ಪರಿಶುದ್ಧವಾದ ನಂದನವನಗಳನ್ನು ನಮಿಸಿ, ಸುಗಂಧಮಾಲೆಗಳನ್ನು ಧರಿಸಿದ ನಂಬಿಯಾರೂರನು ಆ ದಾರಿಯಾಗಿ ಬರುತ್ತಿದ್ದನು.

231. ಎಡಭಾಗದಲ್ಲಿರುವ ಉಮಾಮಾತೆಯು ಕಾಣಬರಲು, ಏಳು ಲೋಕಗಳೂ ಉಜ್ಜೀವಿಸಲು, ನಟನ ಕಾಲದಲ್ಲೆತ್ತಿದ ಪಾದದ ಗೆಜ್ಜೆಯ ದನಿಯೂ, ನಾಲ್ಕು ವೇದಗಳೂ ಸ್ತುತಿಸುವ ಈ ಸ್ಥಳವನ್ನು (ತಿರುತಿಲ್ಲೆಯನ್ನು) ದಿನವೂ ಪ್ರದಕ್ಷಿಣ ಬಂದು ನಮಿಸುವೆವು ಎಂಬ ಎಣಿಕೆಯಿಂದ ಕಡಲು ಸುತ್ತುವರಿದಂತೆ ತೋರುವುದು. ಎತ್ತರವಾಗಿದ್ದುದರಿಂದ ಮೇಘಗಳು ಪಸರಿಸಿ ನಿಲ್ಲುವುದಕ್ಕೆ ಎಡೆಯಾದ ಪ್ರಾಕಾರದ ಹೊರಗಿನ ಕಂದಕವನ್ನು ನಂಬಿಯು ತನ್ನ ದಾರಿಯಲ್ಲಿ ಕಂಡು ಸಂತಸ ಪಡೆದನು.

---

230. ವನ್ನಿ ಕೊನ್ಱೈಮತ್ತಮ್ ಚಣ್ಬಕವಮ್ ಆರಮ್ ಮಲರ್ಪ್ಪ ಲಾಚೊಟು
ಚೆರುನ್ತಿಮು ನ್ತಾರಮ್,
ಕನ್ನಿ ಕಾರಙ್ಕುರ ವಙ್ಕುಮಟಿ ಪುನ್ನೈ ಕಙ್ಕು ಪಾಟಲಮ್
ಕೂವಿಳಮ್ ಓಙ್ಕಿ,
ತ್ತುನ್ನು ಚಾತಿಮರು ಮಾಲತಿ ಮೌವಲ್ ತುತೈನ್ತು ನನ್ತಿ ಕರ
ವೀರಮ್ ಮಿಟೈನ್ತು,
ಪನ್ಮ ಲರ್ಪ್ಪುನಿತ ನನ್ತ ವನಙ್ಕಳ್ ಪಣಿನ್ತು ಚೆನ್ಱನನ್
ಮಣಙ್ಕಮಟಿ ತಾರಾನ್,

231. ಇಟಮ ರುಙ್ಕುತನಿ ನಾಯಕಿ ಕಾಣ ಏಟಿ ರುಮ್ಪುವನಮ್ ಉಯ್ಯ ಎಟುತ್ತು,
ನಟನ ವಿನ್ಱಿರುಳ್ ಚಿಲಮ್ಪೊಲಿ ಪೋಱುಮ್ ನಾನ್ಮ ಱೈಪ್ಪತಿಯೈ
ನಾಳುಮ್ ವಣಙ್ಕ,
ಕ್ಕಟಲ್ವ ಲಙ್ಕೊಳ್ವತು ಪೋಲ್ಪುಟೈ ಚೂಟು ಱ್ಯಾಟ್ಟಿ ಮೇವಿಮಿಕು
ಚೇಟ್ಟಿಲ ಓಙ್ಕುಮ್,
ತಟಮ ರುಙ್ಕುವಳರ್ ಮಙ್ಕಿವರ್ ಇಙ್ಕಿ ತ್ತಣ್ಕಿ ಟಙ್ಕೈ ಎತಿರ್
ಕಣ್ಟು ಮಕಿೞ್ನ್ತಾರ್.

232. ಆ ತಿಲ್ಲೈನಗರದಲ್ಲಿ ಕನಕಸಭೆಯಲ್ಲಿ ಆನಂದನೃತ್ಯವನ್ನಾಡುವ ಪರಶಿವನೆಂಬ ಮಧುರಸದ ಸವಿಯನ್ನು ಸವಿಯುವ ಆಸೆಯಿಂದ ವೇದಗಳೆಂಬ ತುಂಬಿಗಳು ನಿನದಿಸುತ್ತವೆ. ಆ ಪುರದ ಸುತ್ತಿನಲ್ಲಿರುವ ಪರ್ವತದಂತೆ ಉನ್ನತವೂ, ಸುಂದರವೂ, ಮಹಿಮಾಯುತವೂ ಆದ ಮದಿಲನ್ನು ಸುತ್ತಿ ಆಳವಾದ ಅಗಳಿದೆ. ಅಲ್ಲಿರುವ ತಾವರೆಯಲರುಗಳಲ್ಲಿ, ತುಂಬಿಗಳು ಅವುಗಳ ಹತ್ತಿರವೇ ವಿಕಸಿತವಾದ ಕೇದಗೆ ಹೂವಿನ ಪರಾಗವೆಂಬ ಬಿಳಿಯ ವಿಭೂತಿಯನ್ನು ಮೈಯಲ್ಲಿ ಲೇಪಿಸಿಕೊಂಡವುಗಳಾಗಿ ಭಸ್ಮಾಲಂಕೃತ ಶಿವಶರಣರೆಂದು ಹೇಳುವ ರೀತಿಯಲ್ಲಿ ತಿರುತಿರುಗಿ ಮುಸುರಿ ನಿನದಿಸುವ ದೃಶ್ಯವನ್ನು ಕಂಡು ಭಕ್ತಿಸಾಗರದಲ್ಲಿ ಮುಳುಗಿದವನಾಗಿ ನಂಬಿಯು ಅಲ್ಲಿ ತಲಪಿದನು.

233. ಲೋಕದವರು ಧರ್ಮದ ದಾರಿಯಲ್ಲಿ ನಡೆದು ಪ್ರಕಾಶಿಸುವುದಕ್ಕೆ ಕಾರಣವಾದ ನಾಲ್ಕು ವೇದಗಳ ಅಭ್ಯಾಸವು ಅಲ್ಲಿ ಅನವರತವೂ ಆಗುತ್ತಿತ್ತು. ಶ್ವೇತಧ್ವಜದ ಹಾರಾಟದೊಡನೆ ಘಂಟೆಯ ನಿನಾದವೂ ಏಳುತ್ತಿತ್ತು. ಈ ಶಬ್ದಗಳು ನಾಲ್ಕು ದಿಕ್ಕುಗಳಲ್ಲಿಯೂ ಇದಿರುಮುಖವಾಗಿ ಹೊರಬರುತ್ತಿದ್ದುದರಿಂದ, ಮಾಲೆಗಳಿಂದಲಂಕೃತವಾದ ವಿಶಾಲವಾದ ವಕ್ಷಸ್ಥಳವುಳ್ಳ, ಬ್ರಹ್ಮದೇವರ ಚಿನ್ನದ ಕಾಂತಿ ಇರುವ ನಾಲ್ಕು ಮುಖಗಳೇ ಇವು ಎಂದು ಹೇಳಬರುವಂತಹ ತಿಲ್ಲೈ ಊರಿನ ಶೋಭಾಯಮಾನವಾದ ನಾಲ್ಕು ಮಹಾದ್ವಾರಗಳಲ್ಲಿ ಉತ್ತರದಲ್ಲಿರುವ ಶ್ರೀದ್ವಾರದ ಮುಂದೆ ನಂಬಿಯು ಸೇರಿದನು.

---

232. ಮನ್ಱು ಳಾಟುಮತು ವಿನ್ನಚ್ಚೈ ಯಾಲೇ ಮಱೈಚ್ಚುರುಮ್ಬುಱೈ
ಪುಱತ್ತಿನ್ ಮರುಙ್ಗೇ,
ಕುನ್ಱು ಪೋಲುಮಣಿ ಮಾಮತಿರ್ ಚೂೞು ಙ್ಕಿಣ್ಣಕಟ್ಕಮಲ
ವಣ್ಣಲರ್ ಕೈತೈ,
ತ್ತುನ್ಱು ನೀಱುಪುನೈ ಮೇನಿಯ ವಾಕಿತ್ತೂಯ ನೀಱುಪುನೈ
ತೊಣ್ಡರ್ಕಳ್ ಎನ್ನ,
ಚ್ಚೆನ್ಱು ಚೆನ್ಱುಮುರಲ್ಕಿನ್ಱನ ಕಣ್ಡು ಚಿನ್ತೈ ಅನ್ಪೊಟು
ತಿಳೈತ್ತತಿರ್ ಚೆನ್ಱಾರ್.

233. ಪಾರ್ವಿ ಳಙ್ಕುವಳರ್ ನಾನ್ಮಱೈ ನಾತಮ್ ಪಯಿನ್ಱ ಪಣ್ಬುಮಿಕ
ವೇಣ್ಮೊಟ ಆಟುಮ್,
ಚೀರ್ವಿ ಳಙ್ಕುಮಣಿ ನಾವೊಲಿ ಯಾಲುಮ್ ತಿಚೈಕಳ್ ನಾನ್ಕಿತಿರ್
ಪುಱಪ್ಪಟ ಲಾಲುಮ್,
ತಾರ್ವಿ ಳಙ್ಕುವರೈ ಮಾರ್ಪಿನ್ ಅಯನ್ಪೊನ್ ಚತುರ್ಮುಕಙ್ಕನೆನ
ಆಯಿನ ತಿಲ್ಲೈ,
ಊರ್ವಿ ಳಙ್ಕುತಿರು ವಾಯಿಲ್ಕಳ್ ನಾನ್ಕಿನ್ ಉತ್ತರತ್ತಿಚೈ
ವಾಯಿಲ್ ಮುನ್ ಎಯ್ತಿ.

234. ನಂಬಿಯನ್ನು ಕಾಣಲು ಆಶೆಹೊಂದಿ ಇದಿರುಗೊಂಡ ಭಕ್ತರು ಇವನಿಗೆ ನಮಸ್ಕರಿಸಿದರೋ, ಸುಂದರಮೂರ್ತಿಯು ಮೊದಲು ನಮಸ್ಕರಿಸಿದನೋ, ಎಂಬುದನ್ನು ತಿಳಿಯಲು ಸಾಧ್ಯವಾಗದಂತೆ ಎದುರೆದುರು ನಮಸ್ಕರಿಸಿ ಸಂತೋಷಹೊಂದಿ, ನಟೇಶ ಪರಮಾತ್ಮನನ್ನು ದರ್ಶಿಸುವ ಆಶೆಯು ತನ್ನ ಹೃದಯದಲ್ಲಿ ತುಂಬಲು ನಂಬಿಯು ಸ್ವರ್ಣ ಮಯವಾಗಿ ಪ್ರಕಾಶಿಸುವ ಚೆಲುವಾದ ಮಾಳಿಗೆಗಳುಳ್ಳ ಬೀದಿಯಲ್ಲಿ ಬಂದನು.

235. ಆಗ ಜೂಟದಲ್ಲಿ ಬಾಲಚಂದ್ರನನ್ನೂ ಗಂಗೆಯನ್ನೂ ಧರಿಸಿದ ದೇವ ದೇವನಾದ ನಟೇಶನು ಪ್ರೀತಿಯಿಂದ ಅನುಗ್ರಹಿಸುವಂತಹ ಆ ಬೀದಿಯಲ್ಲಿ ಶ್ರೇಷ್ಠವಾದ ಶಾಖೆಗಳಿಂದ ಕೂಡಿದ ವೇದಗಳು ಶಬ್ದಿಸುತ್ತಿದ್ದುವು. ಒಂದೆಡೆಯಲ್ಲಿ ನಾಟ್ಯವಾಡುವ ದೇವಕನ್ನಿಕೆಯರ ಸಭೆಯು ನಿನದಿಸುತ್ತಿತ್ತು. ಮೇಘಗಳು ಸಂಚರಿಸುತ್ತಿರುವ ಆಕಾಶದಲ್ಲಿ ಪಂಚದುಂದುಭಿಗಳು ಶಬ್ದಿಸುತ್ತಿದ್ದುವು. ಪರಿಮಳಯುಕ್ತವಾದ ಹೂಮಾಲೆಗಳಿಗೆ ಮುಸುರುವ ತುಂಬಿಗಳು ಝೇಂಕರಿಸುತ್ತಿದ್ದುವು. ಆನಂದ ಬಾಷ್ಪಗಳನ್ನು ಸುರಿಸುತ್ತಿರುವ ಶರಣರ ಸ್ತೋತ್ರಗಳು ಎಲ್ಲೆಡೆಗಳಲ್ಲಿಯೂ ಕೇಳಿಬರುತ್ತಿದ್ದುವು.

---

234. ಅನ್‌ಪಿನ್ ವನ್ದೆತಿರ್ ಕೊಣ್ಣಚೀರ್ ಅಟಿಯಾರ್ ಅವರ್‌ಕಳೋ ನಮ್ಬಿ
ಆರೂರರ್ ತಾಮೋ,
ಮುನ್‌ಪಿ ಱೈಞಚಿನ ರಿಯಾವರೆನ್ ಱಿಯಾ ಮುಱೈಮೈ
ಯಾಲ್‌ಎತಿರ್ ವಣಙ್ಗಿ ಮಕಿೞ್‌ನ್ದು,
ಪಿನ್‌ಪು ಕುಮ್ಪಿಟುಮ್ ವಿರುಪ್ಪಿಲ್ ನಿಱೈನ್ದು ಪೆರುಕು ನಾವಲ್‌ನಕ
ರಾರ್‌ಪೆರು ಮಾನುಮ್,
ಪೊನ್‌ಪಿ ಱಙ್ಗುಮಣಿ ಮಾಳಿಕೈ ನೀಟುಮ್ ಪೊರುವಿ ಱನ್ದತಿರು
ವೀತಿ ಪುಕುನ್ದಾರ್.

235. ಅಙ್ಕಣ್ ಮಾಮಱೈ ಮುೞಙ್ಕುಮ್ ಮರುಙ್ಕೇ ಆಟ ರಮ್ಪೈಯರ್
ಅರಙ್ಕು ಮುೞಙ್ಕುಮ್,
ಮಙ್ಕುಲ್ ವಾನಿನ್‌ಮಿಚೈ ಐನ್ದುಮ್ ಮುೞಙ್ಕುಮ್ ವಾಚ
ಮಾಲೈಕಳಿಲ್ ವಣ್ಡು ಮುೞಙ್ಕುಮ್,
ಪೊಙ್ಕುಮ್ ಆನ್‌ಪರುವಿ ಕಣ್‌ಪೊಟಿ ತೊಣ್ಡರ್ ಪೋಱ್ಱಿ ಚೈಕ್ಕುಮ್
ಒಲಿ ಎಙ್ಕುಮ್‌ಮುೞಙ್ಕುಮ್,
ತಿಙ್ಕಳ್ ತಙ್ಕುಚಟೈ ಕಙ್ಕೈ ಮುೞಙ್ಕುಮ್ ತೇವ ತೇವರ್‌ಪುರಿ
ಯುನ್ದಿರು ವೀತಿ.

236. ಯಾವ ವಿವಿಧ ಭೋಗಗಳನ್ನೂ ಕೊಂಡುಳ್ಳ ಕುಬೇರಪಟ್ಟಣಗಳಿಗೆ ಹೋಲುವೆಯಾಗಿ, ಬೇರೆಬೇರೆಯಾಗಿ ಶೋಭಿಸುವ, ಎತ್ತರವಾಗಿದ್ದು ಮೇಘಮಂಡಲವನ್ನು ತಮ್ಮಲ್ಲಿ ಸೇರಿಸಿಕೊಳ್ಳುವಂತಿರುವ ಅಗಣಿತ ಮಾಳಿಗೆಗಳ ಮೇಲೆ ಕಟ್ಟಲ್ಪಟ್ಟ ಶುಭ್ರವಾದ ಧ್ವಜಗಳು, ಬ್ರಾಹ್ಮಣರು ಯೋಗಚಿಂತನೆಯಲ್ಲಿ ಮಾಡುತ್ತಿದ್ದ ಹೋಮಗಳ ಹೊಗೆಯು ಆಕಾಶದಲ್ಲಿ ಪಸರಿಸಿ ನಿಲ್ಲಲು, ಮೇಘಕೂಟಗಳಿಡೆಯಲ್ಲಿ ಮಿಂಚುವ ಮಿಂಚಿನ ಬಳ್ಳಿಗಳಂತೆ ಪ್ರಕಾಶಿಸುತ್ತಿದ್ದುವು.

237. ಗೋಪುರದ ಮೇಲ್ಪಕ್ಕಗಳಲ್ಲಿ ಎಲ್ಲೆಡೆಗಳಲ್ಲಿಯೂ ಆಡುವ ನವಿಲುಗಳು, ಯಾಗಗಳಲ್ಲಿ ಎಲ್ಲೆಡೆಗಳಲ್ಲಿಯೂ ಅರಣಿಯಿಂದ ತಯಾರಿಸಲಾದ ಅಗ್ನಿ, ಇವು ತೋರಿ ಬರುತ್ತಿವೆ. ಎರಡು ಪಕ್ಕಗಳಲ್ಲಿಯೂ ಮಾಲೆಗಳು ನೇತಾಡಿಸಲ್ಪಟ್ಟಿವೆ. ದ್ವಾರಪ್ರದೇಶಗಳ ದಿಣ್ಣೆಗಳಲ್ಲೆಲ್ಲಾ ಮಂಗಲಕಲಶಗಳು, ರಥಗಳ ಕೂಟಗಳಲ್ಲೆಲ್ಲಾ ದೊಡ್ಡ ಪ್ರಕಾಶ, ಅನ್ನಶಾಲೆಗಳಲ್ಲೆಲ್ಲಾ ಉತ್ತಮ ಅಕ್ಕಿಯಿಂದ ತಯಾರಿಸಲಾದ ಅನ್ನದ ರಾಶಿಗಳು, ಅರವಟ್ಟಿಗೆಗಳಲ್ಲೆಲ್ಲಾ ಯಾವಾಗಲೂ ಪೂರ್ಣವಾಗಿ ತುಂಬಿರುವ ತಂಪಾದ ಪಾನೀಯಗಳು, ಬೀದಿಯ ಸಂದುಗೊಂದುಗಳಲ್ಲೆಲ್ಲಾ ದೇವತೆಗಳ ಕೂಟಗಳು, ಇವುಗಳು ಕಾಣಬರುವುವು.

---

236. ಪೋಕ ನೀಟುನಿತಿ ಮನ್‌ನವನ್ ಮನ್‌ನುಮ್ ಪುರಙ್ಗಳ್ ಒಪ್ಪನ
ವರಮ್ಪಿಲ ಓಙ್ಗಿ,
ಮಾಕಮ್ ಮುನ್‌ಪರುಕು ಕಿನ್‌ಱನ ಪೋಲುಮ್ ಮಾಳಿ ಕೈಕ್ಕುಲಮ್
ಮಿಟ್ಟೈನ್ಱ ಪತಾಕೈ,
ಯೋಕ ಚಿನ್ತೈಮಱೈ ಯೋರ್‌ಕಳ್ ವಳರ್‌ಕ್ಕುಮ್ ಓಮ ತೂಮಮ್
ಉಯರ್ ವಾನಿಲ್ ಅಟುಪ್ಪ,
ಮೇಕ ಪನ್ಱಿಕಳಿನ್ ಮೀತಿಟೈ ಎಙ್ಕುಮ್ ಮಿನ್‌ನು ಟಙ್ಕುವನ ಎನ್‌ನ
ವಿಳಙ್ಕುಮ್.

237. ಆಟು ತೋಕೈಪುಟೈ ನಾಚಿಕಳ್ ತೋಱುಮ್ ಅರಣಿ ತನ್ಱ ಚುಟರ್
ಆಕುತಿ ತೋಱುಮ್,
ಮಾಟು ತಾಮಮಣಿ ವಾಯಿಲ್‌ಕಳ್ ತೋಱುಮ್ ಮಙ್ಕಲಕ್ಕಲಚಮ್
ವೇತಿಕೈ ತೋಱುಮ್,
ಚೇಟು ಕೊಣ್ಟೊಳಿ ತೇರ್‌ನಿರೈತೋಱುಮ್ ಚೆನ್ನೆಲ್ ಅನ್‌ನಮಲೈ
ಚಾಲೈಕಳ್ ತೋಱುಮ್,
ನೀಟು ತಣ್‌ಪುನಲ್‌ಕಳ್ ಪನ್ಱರ್‌ಕಳ್ ತೋಱುಮ್ ನಿಱೈನ್ಱ
ತೇವರ್‌ಕಣಮ್ ನೀಳಿಟೈ ತೋಱುಮ್.

238. ಅಗಣಿತವಾದ ಲೋಕಗಳಲ್ಲಿಲ್ಲಾ ಇರುವ ಅಸೀಮವಾದ ಚೆಲುವೆಂಬುದೆಲ್ಲಾ ಭೂಲೋಕದ ಈ ಸ್ಥಳದಲ್ಲಿ ಬಂದು ಸೇರಿದೆ ಎಂದು ಹೇಳಲ್ಪಡುವಂತೆ ಮಂಗಳಯುಕ್ತ ವಾದ ಭಾಗ್ಯಗಳಿಂದ ಕೂಡಿಕೊಂಡು ಪುಣ್ಯಶ್ಲೋಕರಾದ ಹಿಂದಿನವರು ಹೊಗಳಿ ಹಾಡಿ ದಂತಹ, ಸೌಂದರ್ಯಯುಕ್ತವಾದ ತಿಲ್ಲೆಯ ಈಶನು ನಟನವಾಡುತ್ತಿರುವ ದೇವಾಲಯದ ಸುತ್ತಿನ ಒಳಬೀದಿಗಳಲ್ಲಿ ನಂಬಿಯು ನಮಸ್ಕರಿಸುತ್ತ ಹೋಗಿ,

239. ವಿಷ್ಣು, ಬ್ರಹ್ಮ, ಇಂದ್ರ ಮೊದಲಾದ ಹಿರಿಯ ದೇವರುಗಳೂ ಮತ್ತಿತರ ದೇವರುಗಳೂ, ಎಲ್ಲರೂ ಗುಂಪುಕೂಡಿ, ತಪೋಶೀಲಯುಕ್ತರಾದ ಮಹಾ ಮಹಾಮುನಿಗಳೆಲ್ಲಾ ಅಲ್ಲಿ ಮುಂದೆ ನಿಂತಿರಲು ಹೆಚ್ಚುಕಾಲವಾಗದ ವಿನಾ ಒಳಗೆ ಪ್ರವೇಶಿಸಲಾರದವರಾಗಿ, ಕಾವಲರ ನಾಯಕರಾದ ನಂದಿದೇವರ ಆಜ್ಞಾದಂಡದ ಪೆಟ್ಟು ಮೇಲೆ ಬೀಳಲು ಅದ ರಿಂದಾಗಿ ನಿಯಂತ್ರಿಸಲ್ಪಟ್ಟು, ಬಹುಕಾಲ ಕಾದುಕೊಂಡು ಪಕ್ಕಗಳಲ್ಲಿಯೇ ನಿಂತಿರಲು, ಭಕ್ತಿಯ ಆಧಿಕ್ಯದಿಂದ ಕೂಡಿದ ಭಕ್ತರುಗಳೂ ಗಣನಾಥರುಗಳೂ ತಡೆಯಿಲ್ಲದೆ ಒಳಗೆ ಹೋಗುತ್ತಿರುವ ಸುಂದರವಾದ ಶ್ರೀ ದ್ವಾರವನ್ನು ನಮಿಸಿ, ತಲೆಯ ಮೇಲೆ ಕೈಗಳನ್ನು ಜೋಡಿಸಿಕೊಂಡು ಆ ದ್ವಾರದ ಸಮೀಪ ಬಂದನು.

---

238. ಎಣ್ಣಿಲ್ ಪೇರ್ಉಲ ಕನೈತ್ತಿನುಮ್ ಉಳ್ಳ ಎಲ್ಲೈ ಯಿಲ್ ಅೞಕು
ಚೊಲ್ಲಿಯ ಎಲ್ಲಾಮ್,
ಮಣ್ಣಿಲ್ ಇಪ್ಪತಿಯಿಲ್ ವನ್ತನ ಎನ್ನ ಮಙ್ಕಲಮ್ಪೊಲಿ ವಳತ್ತನ ಆಕಿ,
ಪ್ಪುಣ್ಣಿಯ ಪ್ಪುನಿತ ಅನ್ಪರ್ಕಳ್ ಮುನ್ಪು ಪುಕೞ್ನ್ತ ಪಾಟಲ್
ಪುರಿ ಪೊೞಿಪ್ಪಿನ್ ವಿಳಙ್ಕುಮ್,
ಅಣ್ಣಲ್ ಆಟುತಿರು ಅಮ್ಪಲಮ್ ಚೂೞ್ನ್ತ ಅಮ್ಪೊನ್ ವೀತಿಯಿನೈ
ನಮ್ಪಿ ವಣಙ್ಕಿ.

239. ಮಾಲ ಯನ್ಚತ ಮಕನ್ಪೆರು ನ್ದೇವರ್ ಮಱ್ಱುಮ್ ಉಳ್ಳವರ್ಕಳ್
ಮುಱ್ಱುಮ್ ನೆರುಙ್ಕಿ,
ಚ್ಚೀಲ ಮಾಮುನಿವರ್ ಚೆನ್ಱುಮುನ್ ತುನ್ನಿ ತ್ತಿರುಪ್ಪಿ ರಮ್ಪಿನ್
ಅಟಿಕೊಣ್ಟು ತಿಳೈತ್ತು,
ಕ್ಕಾಲಮ್ ನೇರ್ಪಟುತಲ್ ಪಾರ್ತ್ತಯಲ್ ನಿಱ್ಪ ಕ್ಕಾತಲ್ ಅನ್ಪರ್
ಕಣ ನಾತರ್ ಪುಕುಮ್ಪೊೞ್ತ್,
ಕೋಲ ನೀಟುತಿರು ವಾಯಿಲಿಱೈಙ್ಚಿ ಕುವಿತ್ತ ಚೆಙ್ಕೈತಲೈ
ನೋಙ್ಕೊಟು ಪುಕ್ಕಾರ್.

240. ದೊಡ್ಡ ಪ್ರಾಕಾರವನ್ನು ಸುತ್ತುವರಿದ ಸುವರ್ಣಮಯವಾದ ಮಾಳಿಗೆಗಳಿಂದ ಕೂಡಿದ ಬೀದಿಯಲ್ಲಿ ವಿಧಿವತ್ತಾಗಿ ಪ್ರದಕ್ಷಿಣ ಬಂದು ವಂದಿಸಿ ಸಂತೋಷಾಧಿಕ್ಯದಿಂದ ಮತ್ತೂ ಮತ್ತೂ ನಮಿಸಿದ ಮೇಲೆ, ವೇದದ ಆದಿ ಮಧ್ಯ ಅಂತಗಳಲ್ಲಿಯೂ ಭಕ್ತರ ಚಿಂತನೆಗಳಲ್ಲಿಯೂ ಬೆಳಗುತ್ತಿರುವ ಜ್ಞಾನಜ್ಯೋತಿಯು ತುಂಬಿದ ತಿರುಚಿತ್ರಂಬಲದ ಇದಿರಿರುವ ತಿರುವಣುಕ್ಕನ್ ಶ್ರೀ ದ್ವಾರವನ್ನು ನಂಬಿಯು ಒಳಹೊಕ್ಕನು.

241. ಬ್ರಹ್ಮ ವಿಷ್ಣುಗಳು ಹುಡುಕುತ್ತಿರಲು ಲೋಕವು ಬೆಳಗಲು ವೇದ ಸಮೂಹವು ಶಬ್ದಿಸಲು ದೇಗುಲದ ಒಳಗೂ ಹೊರಗೂ ಆನಂದದಿಂದ ನಲಿಯುತ್ತ ಆ ಈಶನನ್ನು ಸ್ತುತಿಸಿ ನಮಿಸಲು ಎತ್ತಿದ ಕೈಗಳೂ ಆನಂದಿಸುವ ಕಣ್ಣುಗಳೂ ಇವುಗಳೊಡನೆ ಲೀನವಾದ ಅಂತಃಕರಣಗಳುಳ್ಳವನಾಗಿ ಪ್ರೇಮಾಧಿಕ್ಯದಿಂದ ರೋಮಾಂಚಿತನಾಗಿ ತಪೋಬಲದಿಂದ ಹಿರಿಯನಾದ ನಂಬಿಯು ನಟರಾಜನಾದ ಶಿವಮೂರ್ತಿಯ ಪಕ್ಕದಲ್ಲಿ ಬಂದು ನಮಿಸಿ ಎದ್ದನು.

---

240. ಪೆರುಮತಿಲ್ ಚಿಜನ್ತು ಚೆಮ್ಪೊನ್ ಮಾಳಿಕೈಯಿನ್ ಪಿಜಿಜ್ಮ್ಕ
ಪೇರಮ್ಪಲಮ್ ಮೇರು,
ವರುಮುಜಿ್ಮೈ ವಲಜಿೊ್ಮ ಣ್ಟಜಿ್ಮಿಜ್ಟಿಯ ಪಿನ್ನರ್ ವಣಜ್ಕಿಯು
ಮಕಿಟ್‌ವೊಟುಮ್ ಪುಕುನ್ತಾರ್,
ಆರುಮಜಿ್ಮೈ ಮುತಲಿಲ್ ನಟುವಿನಿಲ್ ಕಟೈಯಿಲ್ ಅನ್ಪರ್ತಮ್
ಚಿನ್ತೈಯಿಲ್ ಅಲರ್ನ್ತು;
ತಿರುವಳರ್ ಒಳಿಚೂಟ್ ತಿರುಚ್ಚಿಜಿ ಮ್ಪಲಮ್ಮುನ್ ತಿರುಅಣು
ಕ್ಕನ್ತಿರು ವಾಯಿಲ್.

241. ವೈಯಕಮ್ ಪೊಲಿಯ ಮಜಿ್ಮೈಚ್ಚಿಲ ಮ್ಪಾರ್ಪ್ಪ ಮನ್ಜುಳೀ
ಮಾಲಯನ್ ತೇಟ,
ಐಯರ್ತಾಮ್ ವೆಳಿಯೇ ಆಟುಕಿನ್ ಜಾರೈ ಅಜ್ಚಲಿ ಮಲರ್ತ್ತಿ
ಮುನ್ ಕುವಿತ್ತ,
ಕೈಕಳೋ ತಿಳೈತ್ತ ಕಣ್ಕಳೋ ಅನ್ತ ಕ್ಕರಣಮೋ ಕಲನ್ತ ಅನ್ ಪುನ್ತ,
ಚ್ಚೆಯ್ತವ ಪ್ಪೆರಿಯೋನ್ ಚೆನ್ಜು ತಾಜ್ನ್ತೆಟುನ್ತಾನ್ ತಿರುಕ್ಕಳಿ
ಜ್ಞಪ್ಪಟಿ ಮರುಜ್ಮ್ಕ.

242. ಪಂಚೇಂದ್ರಿಯ ಜ್ಞಾನಗಳೆಲ್ಲವನ್ನೂ ಕಣ್ಣುಗಳು ತಮ್ಮದಾಗಿ ಮಾಡಿಕೊಳ್ಳಲು, ಅಳತೆಗೆ ಸಿಗದ ನಾಲ್ಕು ಕರಣಗಳ ಕೆಲಸಗಳೆಲ್ಲವೂ ಚಿತ್ತವೆಂಬೊಂದರಲ್ಲಿಯೇ ನಡೆಸಲ್ಪಡಲು, ಮೂರು ಗುಣಗಳೂ ಶುದ್ಧ ಸಾತ್ವಿಕವೆಂಬ ಗುಣವೊಂದರಲ್ಲೇ ಐಕ್ಯ ಹೊಂದಲು, ಚಂದ್ರಚೂಡನಾದ ಈಶ್ವರನು ನಟನವಾಡುವ ಸುಂದರವಾದ ಶ್ರೇಷ್ಠ ನರ್ತನದಿಂದುಂಟಾದ ಹಿರಿದಾದ ಸುಖಸಾಗರದಲ್ಲಿ ಮುಳುಗಿದವನಾಗಿ ನಂಬಿಯು ಹೆಚ್ಚಾದ ಸಂತೋಷದಿಂದ ಕೂಡಿದವನಾದನು.

243. ಸಂತೋಷದಿಂದ ವಿಕಸಿತನಾದ ಆ ಹಿರಿಯ ಭಕ್ತನು ಕಣ್ಣುಗಳಿಂದ ಆನಂದಬಾಷ್ಪವು ಧಾರೆಧಾರೆಯಾಗಿ ಸುರಿಯುತ್ತಿರಲು, ಕೈಗಳನ್ನು ತಲೆಯ ಮೇಲೆ ಮುಗಿದುಕೊಂಡು, 'ಚಂದ್ರನನ್ನು ಜಡೆಯಲ್ಲಿ ಧರಿಸಿದವರೇ, ನಿಮ್ಮ ಶ್ರೀ ನರ್ತನವನ್ನು ನೋಡಿ ನಮಸ್ಕರಿಸುವ ಜೀವನವನ್ನು ಪಡೆದು ಈ ಲೋಕದಲ್ಲಿ ಬಂದ ಮಾನವಜನ್ಮವು ನನಗೆ ಅತ್ಯಂತ ಸುಖಪ್ರದವಾಯಿತು' ಎಂದು ಮೊರೆಯಿಟ್ಟು ಅಚಿಂತ್ಯನಾದ ಆ ಪರಮಾತ್ಮನನ್ನುದ್ದೇಶಿಸಿ ತೇವಾರ ದಶಕವನ್ನು ಭಕ್ತಿಯಿಂದ ಹಾಡಿ ರೋಮಾಂಚಿತನಾದನು.

---

242. ಐನ್ದುಪೇರ್ ಅಱಿವುಮ್ ಕಣ್ಗಳೇ ಕೊಳ್ಳ ಅಳಪ್ಪರುಮ್ ಕಾಣಙ್ಗಳ್
ನಾನ್ಕುಮ್,
ಚಿನ್ದೈಯೇ ಆಕ ಕ್ಕುಣಮ್ಒರು ಮೂನ್ಱುಮ್ ತಿರುನ್ದು
ಚಾತ್ತುವಿಕಮೇ ಆಕ,
ಇನ್ದುವಾಚ್ ಚಟೈಯಾನ್ ಆಟುಮ್ ಆನನ್ದ ಎಲ್ಲೈಯಿಲ್
ತನಿಪ್ಪೆರು ಙ್ಕೂತ್ತಿನ್,
ವನ್ದಪೇರ್ ಇನ್ಪವೆಳ್ಳತ್ತುಳ್ ತಿಳೈತ್ತು ಮಾಱಿಲಾ ಮಕಿಳ್ಚ್ಚಿಯಿನ್
ಮಲರ್ನ್ದಾರ್.

243. ತೆಣ್ಣಿಲಾ ಮಲರ್ನ್ದ ವೇಣಿಯಾಯ್ ಉನ್ಱನ್ ತಿರುನಟಙ್
ಕುಮ್ಪಿಟ ಪ್ಪೆಱ್ಱು,
ಮಣ್ಣಿಲೇ ವನ್ದ ಪಿಱವಿಯೇ ಎನಕ್ಕು ವಾಲಿತಾಮ್ ಇನ್ಪಮ್–
'ಆಮ್' ಎನ್ಱು,
ಕಣ್ಣಿಲ್ ಆನನ್ದ ಅರುವಿನೀರ್ ಚೊರಿಯಕ್ಕೈಮ್ಮಲರ್ ಉಚ್ಚಿಮೇಱ್ ಕುವಿತ್ತು,
ಪ್ಪಣ್ಣಿನಾಲ್ ನೀಟಿ ಅಱಿವರುಮ್ ಪತಿಕಮ್ ಪಾಟಿನಾರ್ ಪರವಿನಾರ್
ಪಣಿನ್ದಾರ್.

244. ಹಿಂದೆಯೇ ತನ್ನನ್ನು ತಡೆದು ಆಳಾಗಿಸಿಕೊಂಡ ನಂಬಿಯು ಆನಂದ ನರ್ತನವನ್ನಾಡಿದ ಶಿವನ ಅನುಗ್ರಹದಿಂದ 'ಮುತ್ತುಗಳು ತೇಲಿಬರುವ ಕಾವೇರಿನದಿಯ ಕಾರಣದಿಂದ ಸಂಪತ್ಸಮೃದ್ಧವಾದ ಬಯಲುಗಳು ಸುತ್ತುವರಿದ ತಿರುವಾರೂರಿನಲ್ಲಿ ನಮ್ಮಲ್ಲಿಗೆ ಬರುವವನಾಗು' ಎಂದು ಆಕಾಶದಿಂದ ಆಗತಾನೇ ಉದಯಿಸಿದ ಒಂದು ಶಬ್ದವನ್ನು ಕೇಳಿ, ಅದನ್ನೇ ಧ್ಯಾನಿಸುತ್ತ ಮೇಲೆದ್ದನು.

245. ಶಿವಪರಮಾತ್ಮನು ಅತ್ಯಂತ ಕರುಣೆಯಿಂದ ದಯಪಾಲಿಸಿದ ಆ ಆಜ್ಞೆಯನ್ನು ಶಿರಸಾವಹಿಸಿ, ತಮ್ಮ ಕೈಗಳನ್ನು ತಲೆಯ ಮೇಲೆ ಮುಗಿದುಕೊಂಡು ಆಗಾಗ ನಮಸ್ಕರಿಸಿಕೊಂಡೇ ಶ್ರೀ ಚಿದಂಬರವನ್ನು ಪ್ರದಕ್ಷಿಣ ಬಂದು ಅಲ್ಲಿಂದ ಹೊರಟು ವಿಶಾಲ ಆಕಾಶದಲ್ಲಿ ಸಣ್ಣದಾದ ಮೇರುಪರ್ವತದಂತೆ ನೆಲದಿಂದೆದ್ದ ತೆಂಕು ಗೋಪುರವನ್ನು ದಾಟಿ,

246. ಗೋಪುರ ದ್ವಾರದ ಹೊರಗೆಯೇ ನಿಂತು, ಗೋಪುರದ ಕೆಳಭಾಗದಲ್ಲಿ ಬಿದ್ದು ಅಷ್ಟಾಂಗ ನಮಸ್ಕಾರ ಮಾಡಿ, ದೇಗುಲದ ಇದಿರ ಒಳಬೀದಿಯನ್ನು ನಮಿಸಿ, ಆ ನಗರದ ತೆಂಕಣದ್ವಾರವನ್ನು ಕಳೆದು, ಆ ಪುರದ ದಕ್ಷಿಣ ಎಲ್ಲೆಯನ್ನು ವಂದಿಸಿ, ಆಮೇಲೆ ಕರ್ಣಿಕಾರ ಪುಷ್ಪಗಳಿಂದ ಅಲಂಕೃತನಾದ, ಜಟಾಜೂಟನಾದ ಈಶ್ವರನ ಪರಮಕೃಪೆಯನ್ನು ಚಿಂತಿಸಿದವನಾಗಿ ಸುತ್ತುವರಿದಿದ್ದ ನದಿಯನ್ನು ದಾಟಿದನು.

---

244. ತಟುತ್ತುಮುನ್ ಆಣ್ಟ ತೊಣ್ಟನಾರ್ ಮುನ್‌ಪು ತನಿಪ್ಪೆರು ನಾತ್ತಣ್ಟವಮ್ ಪುರಿಯ,
ಎಟುತ್ತಚೀ ವಟಿಯಾರ್ ಅರುಳಿನಾಲ್ 'ತರಳಮ್ ಎಟಿಪುನಲ್ ಮಟಿತಿರೈ ಪ್ಪೊನ್‌ನಿ,
ಮಟುತ್ತನೀಳ್ ವಣ್ಣ ಪ್ಪಣ್ಣೈ ಆರೂರಿಲ್ ವರುಕ ನಮ್ಪಾಲ್' ಎನ ವಾನಿಲ್,
ಅಟುತ್ತಪೋ ತಿನಿಲ್‌ವನ್ತೆಟುನ್ತತೋರ್ ನಾತಮ್ ಕೇಟ್ಟಲುಮ್ ಅತುವುಣರ್ ನ್ತೆಟುನ್ತಾರ್.

245. ಆಟುಕಿನ್ ಬಿವರ್‌ಪೇರ್ ಅರುಳಿನಾಲ್ ನಿಕಟ್‌ನ್ತ ಅಪ್ಪಣಿ ಚೆನ್‌ನಿ ಮೇಟಿಕ್ಕೊಣ್ಟು,
ಚೂಟುತ ಕ್ಕರಙ್ಕಳ್ ಅಞ್ಚಲಿ ಕೊಣ್ಟು ತೊಟುನ್ತೊಟುಮ್ ಪುಟವಿಟ್ಟೈ ಕೊಣ್ಟು,
ಮಾಟುಪೇ ರೊಳಿಯಿನ್ ವಳರುಮ್ ಅಮ್ಪಲತ್ತೈ ವಲಙ್ಕೊಣ್ಟು ವಣಙ್ಕಿನರ್ ಪೋನ್ತು,
ನೀಟುವಾನ್ ಪಣಿಯ ಉಯರ್‌ನ್ತಪೊನ್ ವರೈಪೋಲ್ ನಿಲ್ಯೆಟು ಕೋಪುರ ಙ್ಕಟನ್ತು.

246. ನಿನ್‌ಟುಗೋ ಪುರತ್ತೈ ನಿಲಮುಟ ಪ್ಪಣಿನ್ತು ನೆಟುನಿಟರು ವೀತಿಯೈ ವಣಙ್ಕಿ,
ಮನ್‌ಟಲಾರ್ ಚೆಲ್ವ ಮಟುಕಿನೂ ಟೇಕಿ ಮನ್‌ನಿಯ ತಿರುಪ್ಪತಿ ಅತನಿಲ್,
ತೆನ್‌ಟಿಚೈ ವಾಯಿಲ್ ಕಟನ್ತುಮುನ್ ಪೋನ್ತು ಚೆಟ್ಪಟುನಿಟರು ವೆಲ್ಲೈ ಇಟಿಞ್ಚಿ,
ಕೊನ್‌ಟೈ ವಾರ್‌ಚಟೈಯಾನ್ ಅರುಳೈಯೇ ನಿನೈವಾರ್ ಕೊಳ್ಳಿಟ ತ್ತಿರುನತಿ ಕಟನ್ತಾರ್.

247. ಪರಿಜನಗಳಾದ ಭಕ್ತರು ತನ್ನನ್ನು ಸ್ತುತಿಸಿಕೊಂಡು ಬರಲು, ಮೂರೆಳೆಯ ಜನ್ನದಾರದಿಂದ ಶೋಭಿಸುವ ಎದೆಯುಳ್ಳ ನಂಬಿಯು, ಎಲ್ಲಾ ಧರ್ಮಗಳನ್ನೂ ತಂದವಳಾದ ಉಮಾದೇವಿಯ ಶ್ರೀಸ್ತನದ ಕ್ಷೀರವೆಂಬ ಅಮೃತವನ್ನುಂಡು ಬೆಳೆದ ತಿರುಜ್ಞಾನಸಂಬಂಧಸ್ವಾಮಿಯು ಅವತರಿಸಿದ ಹಿರಿಮೆಯನ್ನು ಪಡೆದ ಸ್ಥಳವಿದು ಎಂದು ಎಲ್ಲೆಡೆಗಳಲ್ಲಿಯೂ ಸ್ತುತಿಸಲ್ಪಡುವ ಕಳುಮಲಂ ಎಂಬ ಸ್ಥಳವನ್ನು ತಲಪಿದನು.

248. ಪಿಳ್ಳೈಯಾರ್ (ಉಮಾದೇವಿಯ ಪುತ್ರ) ಆದ ತಿರುಜ್ಞಾನಸಂಬಂಧರು ಅವತಾರವೆತ್ತಿದುದೆಂದು ಪ್ರಖ್ಯಾತವಾದ ಪುಗಲಿ ಎಂಬ ಈ ಸ್ಥಳದ ಸೀಮೆಗಳೊಳಗೆ ಕಾಲನ್ನಿಟ್ಟು ತುಳಿಯೆನು ಎಂಬ ತೀರ್ಮಾನವನ್ನು ಮಾಡಿದವನಾಗಿ ಆ ಊರಿನ ಮೇರೆಯ ಹೊರಗೇ ನಿಂತು ನಮಿಸಿ ಆ ಸ್ಥಳವನ್ನು ನಂಬಿಯು ಪ್ರದಕ್ಷಿಣ ಬರುವಾಗ ಉಮಾದೇವಿಯೊಡನೆ ವೃಷಭವಾಹನದ ಮೇಲೆ ಇರುವವರಾಗಿ ಈಶ್ವರನು ಆ ನಂಬಿಗೆ ದರ್ಶನವನ್ನು ಕೊಟ್ಟು ಅನುಗ್ರಹಿಸಿದರು.

249. ನಂಬಿಯು ಹೆಚ್ಚಾದ ಪ್ರೀತಿಯಿಂದ ನಮಿಸಿ ನಿಂತು ಪ್ರಳಯಕಾಲದಲ್ಲಿ ಸಾಗರದ ಮಧ್ಯೆ ತೇಲುತ್ತಿದ್ದ ತಿರುತ್ತೋಣಿಪುರದಲ್ಲಿ, ಈಶ್ವರನನ್ನು ಕೈಲಾಸದಲ್ಲಿರುವಾಗ ಹೇಗೆ ಕಾಣಿಸಿಕೊಳ್ಳುವನೋ, ಅಂತೆಯೇ ನೋಡಿ ನಮಿಸಿ ತನ್ನ ಮನದೊಳಗೇ ಧರಿಸಲಾಗುವಂತೆ ಇಟ್ಟುಕೊಂಡೆನು ಎಂಬರ್ಥದ ಮಂಜುಲವಾದ ಹಾಡನ್ನು ಅನುಗ್ರಹಿಸಿದನು.

---

247. ಪೊೞಿನ್ತರುವಾರ್ ಪೋಱ್ಱಿಚೈಪ್ಪ ಪ್ಪುರಿಮುನ್ನೂಲ್ ಅಣಿಮಾರ್ಪರ್
ಅೞಿನ್ಪ್ಪಯನ್ತ್ತಾಳ್ ತಿರುಮುಲೈಪ್ಪಾಲ್ ಅಮುತುಣ್ಟು ವಳರ್ನ್ತವರ್ ತಾಮ್
ಪಿರನ್ತರುಳುಮ್ ಪೆರುಮ್ಪೇಱು ಪೆಱ್ಱತೆನ ಮುಱ್ಱುಲಕಿಲ್
ಚಿಱನ್ತಪುಕೞ್ ಕ್ಕೞುಮಲಮಾಮ್ ತಿರುಪ್ಪತಿಯೈ ಚೆನ್ಱಣೈನ್ತಾರ್.

248. ಪಿಳ್ಳೈಯಾರ್ ತಿರುಅವತಾ ರಞ್ಚೆಯ್ತ ಪೆರುಮ್ಪುಕಲಿ
ಉಳ್ಳುನಾನ್ ಮಿತಿಯೇನ್ 'ಎನ್ ಱೂರೆಲ್ಲೈ ಪ್ಪುಱಮ್ವಣಙ್ಕಿ
ವಳ್ಳಲಾರ್ ವಲಮಾಕ ವರುಮ್ಪೊೞುತಿನ್ ಮೞೈಕ್ಕುಯಿಟೈಞ್
ಕೊಳ್ಳುಮಾಲ್ ವಿಟೈಯಾನುಮ್ ಎತಿರ್ಕಾಟ್ಟಿ ಕೊಟುತ್ತರುಳ.

249. ಮಣ್ಣಿಯಪೇ ರನ್ಪಿನಾಲ್ ವನ್ಱೆೞುನ್ತಾರ್ ನಿನ್ಱಿಱೈಞ್ಚಿ
'ತ್ತೆಣ್ಣಿರೈವೇ ಲೈಯಿಲ್ಮಿತನ್ತ ತಿರುತ್ತೋಣಿ ಪುರತ್ತಾರೈ
ಕಣ್ಟುಕೊಣ್ಟೇನ್ ಕಯಿಲೈಯಿನಿಲ್ ವೀಱ್ಱಿರುನ್ತ ಪಟಿ' ಎನ್ಱು
ಪಣ್ಣಿರುಮ್ಇನ್ ನಿಱೈಪಯಿನ್ಱ ತಿರುಪ್ಪತಿಕಮ್ ಪಾಟನಾರ್.

250. ವೇದಗಳು ಹೊಗಳುತ್ತಿರುವ ಈಶ್ವರನು ಈ ರೀತಿ ದರ್ಶನ ಕೊಟ್ಟು ಅಂತರ್ಧಾನನಾಗಲು ನಂಬಿಯು ದಿಗಿಲುಗೊಂಡವನಾಗಿ, ಆಮೇಲೆ ತಿಳಿವನ್ನು ಪಡೆದು ತಿರುವಾರೂರನ್ನು ವಂದಿಸಬೇಕೆಂಬ ಆಸೆಯಿಂದ ಕಡಲಿನಿಂದ ಸುತ್ತುವರಿಯಲ್ಪಟ್ಟ ಆ ಸ್ಥಳವನ್ನು ನಮಿಸಿ, ಸೇರಿ, ತಿರುಕ್ಕೋಲಕ್ಕಾ ಎಂಬ ಸ್ಥಳವನ್ನು ತಲಪಿ ಶಿವನ ದರ್ಶನವನ್ನು ಮಾಡಿ ಒಂದು ಸ್ತೋತ್ರಹಾಡಿನಿಂದ ಸ್ತುತಿಸಿ,

251. ಮಧುರಸದಿಂದ ಕೂಡಿದ ಉದ್ಯಾನಗಳಿಂದ ಸುತ್ತಲ್ಪಟ್ಟ ತಿರುಪ್ಪುಣ್ ಕೂರಿನ ಶಿವನಲ್ಲಿಗೆ ಬಹಳವಾದ ಪ್ರೇಮದಿಂದ ಬಂದು ನಮಿಸಿ ಅಲ್ಲಿ ಒಂದು ಹಾಡನ್ನು ಹಾಡಿ, ಇದೇ ರೀತಿಯಲ್ಲಿ ಅನೇಕ ಶಿವಸ್ಥಳಗಳಿಗೆ ಹೋಗಿ ಅಲ್ಲೆಲ್ಲಾ ಶಿವನನ್ನು ಸ್ತುತಿಸಿ, ಪುಷ್ಪೋದ್ಯಾನಗಳಿಂದ ಕೂಡಿದ ಕಾವೇರಿನದಿಯ ತೀರವನ್ನು ಸೇರಿದನು.

252. ಮಲರುಗಳನ್ನೂ ಮಣಿಗಳನ್ನೂ ಕೊಂಡು ಎರಡು ಕರೆಗಳಲ್ಲಿಯೂ ಚಿನ್ನದ ಹುಡಿಗಳನ್ನು ಚೆಲ್ಲುವಂತೆ ಚೆಲ್ಲಿದ ಕಾವೇರಿ ತೀರ್ಥದಲ್ಲಿ ಸ್ನಾನಮಾಡಿ, ಶಿವನು ನಿಂದು ಅನುಗ್ರಹಿಸಿದ ತಿರುಮಯಿಲಾಡುತುರೈಯನ್ನು ನಮಿಸಿ, ತಿರುವಂಬರ್ ಮಾಗಾಳ ವನ್ನು ಸಮಾಪಿಸಿ ಅಲ್ಲಿಯೂ ಒಡೆಯನ ಪಾದಗಳನ್ನು ನಮಿಸಿದನು.

---

250. ಇರುಕ್ಕೋಲಮ್ ಇಟುಮ್ಪೆರುಮಾನ್ ಎತಿರ್‌ನಿನ್‌ಱುಮ್ ಎಟುನ್ತರುಳ
ವೆರುಕ್ಕೊಳು ಱತುನೀಙ್ಕ ಆರೂರ್‌ಮೇಱ್ ಚೆಲವಿರುಮ್ಪಿ
ಪ್ಪೆರುಕ್ಕೋತ ಞ್ಞಾಟ್‌ಪುಱವ ಪ್ಪೆರುಮ್ಪತಿಯೈ ವಣಙ್ಕಿಪ್ಪೋಯ್
ತ್ತಿರುಕ್ಕೋಲ ಕ್ಕಾವಣಙ್ಕಿ ಚ್ಚೆನ್ತಮಿಟ್‌ಮಾ ಲೈಕಳ್‌ಪಾಟಿ.

251. ತೇನಾರ್‌ಕ್ಕುಮ್ ಮಲರ್‌ಚ್ಚೋಲೈ ತ್ತಿರುಪ್ಪುನ್‌ಕೂರ್ ನಮ್ಪರ್‌ಪಾಲ್
ಆನಾಪ್ಪೇ ರನ್‌ಪುಮಿಕ ಅಟಿಪಣಿನ್ತು ತಮಿಟ್‌ಪಾಟಿ
ಮಾನಾರ್‌ಕ್ಕುಮ್ ಕಾತಲತ್ತಾರ್ ಮಕಿಟ್‌ನ್ತಇಟಮ್ ಪಲವಣಙ್ಕಿ
ಕ್ಕಾನಾರ್‌ಕ್ಕುಮ್ ಮಲರ್‌ತ್ತಟಞ್ಞ್ಚಾಟ್ ಕಾವಿರಿಯಿನ್ ಕರೈಯಣೈನ್ತಾರ್.

252. ವಮ್ಪುಲಾ ಮಲರ್ ಅಲೈಯ ಮಣಿಕೊಟಿತ್ತು ವನ್ತಿಟಿಯುಮ್
ಪೈಮ್ಪೊನ್‌ವಾರ್ ಕರೈಪ್ಪೊನ್‌ನಿ ಪ್ಪಯಿಲ್‌ತೀರ್‌ತ್ತಮ್ ಪಟಿನ್ತಾಟಿ
ತ್ತವಿಪ್ಪಿರಾನ್ ಮಯಿಲಾಟು ತುಱೈವಣಙ್ಕಿ ತ್ತಾವಿಲ್‌ಚೀರ್
ಅಮ್ಪರ್‌ಮಾ ಕಾಳತ್ತಿನ್ ಅಮರ್‌ನ್ತಪಿರಾನ್ ಅಟಿಪಣಿನ್ತಾರ್.

253. ಪ್ರಕಾಶಿಸುವ ಕೆಂಪಗಾದ ಜಡೆಯ ಶಿವನು ಆಶೆಯಿಂದ ವಾಸಿಸುವ ತಿರುಪ್ಪುಗಲೂರನ್ನು ಮೊದಲಲ್ಲಿ ವಂದಿಸಿ, ಸ್ತುತಿಸಿ, ಈಶನ ಪರಮಕೃಪೆಯನ್ನು ನೆನೆದುಕೊಂಡವನಾಗಿ, ಚಿನ್ನದ ಅಂಚಿನ ಉತ್ತರೀಯದಿಂದಲೂ ಮೂರೆಳೆಯ ಯಜ್ಞೋಪವೀತದಿಂದಲೂ ಅಲಂಕೃತವಾದ ಎದೆಯುಳ್ಳವನಾಗಿ, ತಿರುನಾವಲೂರಿನ ಹಿರಿಯ ಭಕ್ತನಾದ ನಂಬಿಯು ತಿರುವಾರೂರನ್ನು ತಲಪಿದನು.

254. ರಥಗಳಿಂದ ಚೆಲುವನ್ನು ಪಡೆದ ಬೀದಿಗಳಿರುವ ತಿರುವಾರೂರಿನಲ್ಲಿ ಬಾಳುವ ಭಕ್ತರುಗಳಿಗೆ, 'ಹಿರಿದಾದ ಭಕ್ತಿಯ ನಮ್ಮ ನಂಬಿಯಾರೂರನನ್ನು ನಾವು ಆಮಂತ್ರಿಸಲು ಆತನು ಇಲ್ಲಿ ಬರುತ್ತಿದ್ದಾನೆ. ಅವನನ್ನು ಸಂತೋಷದಿಂದ ಸ್ವಾಗತಿಸಿಕೊಂಡು ಬನ್ನಿ' ಎಂದು ಗಂಗೆಯನ್ನೂ ಚಂದ್ರನನ್ನೂ ಜಡೆಯಲ್ಲಿ ಧರಿಸಿದ ಶಿವನು ಅನುಗ್ರಹಿಸಿದನು.

255. ತಮ್ಮ ಒಡೆಯರಾದ ತ್ಯಾಗೇಶರು ಈ ರೀತಿ ಅನುಗ್ರಹಿಸಿ ಆದೇಶಿಸಲು, ತಿರುವಾರೂರಿನಲ್ಲಿರುವ ಭಕ್ತರೆಲ್ಲಾ ತಾವು ತಾವು ಕೇಳಿದ ಆ ಆದೇಶವನ್ನು ಇತರರಿಗೂ ತಿಳಿಸಿ, 'ನಮ್ಮ ಒಡೆಯರ ಪೂರ್ಣಾನುಗ್ರಹವಿರುವ ರೀತಿ ಇದೇ. ಆ ತಿರುವಾರಿನವನಾದ ನಂಬಿಯೂ ನಮ್ಮ ಒಡೆಯನೇ ಆಗುವನು' ಎಂದುಕೊಂಡು ಪ್ರೀತಿಯಿಂದ ಸ್ವರ್ಗಲೋಕವೇ ಕೆಳಗಿಳಿದು ಬಂತೋ ಎಂದು ಹೇಳುವಂತೆ, ನಂಬಿಯನ್ನು ಇದಿರುಗೊಂಡು ಸ್ವಾಗತಿಸಲು ಒಡನೆಯೇ ಮುಂದಾದರು.

---

253. ಮಿನ್ನಾರ್‌ಚೆ ಞ್ಚಟೈ ಅಣ್ಣಲ್ ವಿರುಮ್ಬುತಿರು ಪ್ಪುಕಲೂರ್ರೈ
ಮುನ್ನಾಕ ಪ್ಪಣಿನ್ತೇತ್ತಿ ಮುತಲ್ವನ್‌ತನ್ ಅರುಳ್‌ನಿನೈನ್ತು
ಪೊನ್ನಾರುಮ್ ಉತ್ತರಿಯಮ್ ಪುರಿಮುನ್ನೂಲ್ ಅಣಿಮಾರ್ಪರ್
ತೆನ್ನಾವ ಲೂರಾಳಿ ತಿರುವಾರೂರ್ ಚೆನ್‌ಱಣೈನ್ತಾರ್.

254. ತೇರಾರುಮ್ ನೆಟುವೀತಿ ತ್ತಿರುವಾರೂರ್ ವಾಟ್‌ವಾರ್‌ಕ್ಕು
'ಆರಾತ ಕಾತಲಿನ್‌ನಮ್ ಆರೂರನ್ ನಾಮ್ ಅಟೈಕ್ಕ
ವಾರಾನಿನ್ ಱಾನ್‌ಅವನ್ನೈ ಮಕಿಟ್‌ನ್ತೆತಿರ್‌ಕೊಳ್ ವೀರ್' ಎನ್‌ಱು
ನೀರಾರುಮ್ ಚಟೈಮುಟಿಮೇಲ್ ನಿಲವಣಿನ್ತಾರ್ ಅರುಳ್‌ಚೆಯ್ತಾರ್.

255. ತಮ್ಪಿರಾನ್ ಅರುಳ್‌ಚೆಯ್ಯ ತ್ತಿರುತ್ತೊಣ್ಟರ್ ಅತುಚಾಱ್ಱಿ
'ಎಮ್ಪಿರಾನಾರ್ ಅರುಳ್‌ತಾನ್ ಇರುನ್ತಪರಿ ಚಿತುವಾನಾಲ್
ನಮ್ಪಿರಾನಾರ್ ಆವಾರ್ ಅವರನ್‌ಱೇ' ಎನುಮ್‌ನಲತ್ತಾಲ್
ಉಮ್ಪರ್‌ನಾ ಟೆಟಿನ್ತೆನ ಎತಿರ್‌ಕೊಳ್ಳ ಉಟನ್ ಎಟುನ್ತಾರ್.

256. ಆಗ ಆ ಊರಿನಲ್ಲಿ ಮಾಳಿಗೆಗಳಲ್ಲಿಯೂ ಮಂಟಪಗಳಲ್ಲಿಯೂ ನಿಡಿದಾದ ಧ್ವಜಗಳನ್ನು ಮೇಲ್ಭಾಗದಲ್ಲಿ ಎದ್ದು ಕಾಣುವಂತೆ ಅಲಂಕರಿಸಿಟ್ಟುದು ಕಾಣುತ್ತಿತ್ತು. ಕೆಳಭಾಗದಲ್ಲಿ ಉದ್ದವಾದ ತೋರಣಗಳನ್ನೂ, ಸೋಗೆಗಳಿಂದ ಕೂಡಿದ ಕಂಗು ಮೊದಲಾದುವುಗಳನ್ನೂ, ಎಲೆಗಳಿಂದ ತಯಾರಿಸಿದ ಮಾಲೆಗಳನ್ನೂ, ನಿಡಿದಾದ ಎಲೆಗಳಿರುವ ಬಾಳೆಮರಗಳನ್ನೂ, ನೀರು ತುಂಬಿದ ಹೊನ್ನಕಲಶಗಳನ್ನೂ, ಸಾಲಾಗಿರಿಸಿದ ಮಣಿ ದೀಪಗಳನ್ನೂ ಉಳ್ಳ ಬಾಗಿಲುಗಳು ಎಲ್ಲೆಡೆಗಳಲ್ಲಿಯೂ ಕಂಡುಬರುತ್ತಿದ್ದುವು.

257. ಕಾಂತಿಯೂ ಚೆಲುವೂ ಉಳ್ಳ ತಿಣ್ಣೆಗಳನ್ನು ಪರಿಶುದ್ಧವಾದ ಪರಿಮಳವುಳ್ಳ ಚಂದನಕರ್ದಮಗಳಿಂದ ಪೂಸಿ, ದೋಷರಹಿತವಾದ ಅರಳು, ಸುಗಂಧಯುಕ್ತವಾದ ಚೂರ್ಣ, ಸುಂದರವಾದ ಮುತ್ತುಗಳು, ಇತರ ಮಣಿಗಳು, ಇವೇ ಮೊದಲಾದುವುಗಳನ್ನು ರಂಗವಲ್ಲಿಯಾಗಿ ಪಸರಿಸಿ, ಹೂಮಾಲೆಗಳಿಂದ ರಚಿತವಾದ ಶೀತಲವಾದ ಚಪ್ಪರಗಳಿಂದ ಹೂವಿನ ಹುಡಿಯು ಉದುರಿ ಪಸರಿಸುತ್ತಿರಲು, ಬೀದಿಗಳಲ್ಲಿ ದೂಳು ಅಡಗುವಂತೆ ಪರಿಮಳಯುಕ್ತವಾದ ಪನ್ನೀರನ್ನು ಬಹುವಾಗಿ ಹನಿಸಿದರು.

258. ಮಂಗಲ ಗೀತೆಗಳು ಹಾಡಲ್ಪಡಲು, ತೂರ್ಯಗಳು ಮೊಳಗಲು, ನರ್ತಕಿಯರು ನರ್ತನಮಾಡುತ್ತಿರಲು, ತಿರುವಾರೂರಲ್ಲಿರುವ ಶಿವಶರಣರು ತಂತಮ್ಮ ಮನೆಗಳಿಂದ ಹೊರಬಂದು ನಂಬಿಯನ್ನು ಇದಿರುಗೊಂಡು ಸ್ವಾಗತಿಸಿದರು.

---

256. ಮಾಳಿಕೈಕಳ್ ಮಣ್ಟಪಙ್ಕಳ್ ಮರುಙ್ಕುಪೆರು ಙ್ಕೊಟಿನೆರುಙ್ಕ
ತ್ತಾಳಿನ್‌ನೆಟು ನ್ತೋರಣಮುಮ್ ತಟೈಕ್ಕಮುತು ಙ್ಕುಟೈತ್ತೊಟೈಯುಮ್
ನೀಳಿಲೈಯ ಕತಲಿಕಳುಮ್ ನಿಱೈನ್ತಪಚುಮ್ ಪೊಱ್ಚುಮ್ಪುಮ್
ಒಳಿನೆಟು ಮಣಿವಿಳಕ್ಕುಮ್ ಉಯರ್‌ವಾಯಿಲ್ ತೊಱುಮ್ ನಿರೈತ್ತಾರ್.

257. ಚೋತಿಮಣಿ ವೇತಿಕೈಕಳ್ ತೂನಱುಞ್ಚಾ ನ್ತಣಿನೀವಿ
ಕ್ಕೋತಿಲ್‌ಪೊರಿ ಪ್ಪೊಱ್‌ಚುಣ್ಣ ಙ್ಕುಳಿರ್‌ತರಳ ಮಣಿಪರಪ್ಪಿ
ತ್ತಾತಿವರ್‌ಪೂ ನ್ತೊಟೈಮಾಲೈ ತ್ತಣ್ಪನ್ತರ್ ಕಳಞ್ಚೆಯ್ತು
ವೀತಿಕಳ್‌ನುಣ್ ತುಕಳ್ ಅಟಙ್ಕ ವಿರೈಪ್ಪನಿನೀರ್ ವಿಱಕ ತ್ತೆಳಿತ್ತಾರ್.

258. ಮಙ್ಕಲಕೀ ತಮ್ಪಾಟ ಮಟೈನಿಕರ್‌ತೂ ರಿಯಮ್‌ಮುಳಙ್ಕ
ಚ್ಚೆಙ್ಕಯಙ್ಕಣ್ ಮುಱ್ಱಿಟೈಯಾರ್ ತೆಱ್ಱಿತೊಱುಮ್ ನಟಮ್ಪಯಿಲ
ನಙ್ಕಳ್‌ಪಿರಾನ್ ತಿರುವಾರೂರ್ ನಗರ್‌ವಾಟ್ವಾರ್ ನಮ್ಪಿಯೈಮುನ್
ಪೊಟ್ಕಯಿಲ್‌ನೀಳ್ ತಿರುವಾಯಿಲ್ ಪುಱಮ್‌ಉಱವ ನ್ತೆತಿರ್ ಕೊಣ್ಟಾರ್.

259. ಹೀಗೆ ಬಂದು ಸ್ವಾಗತಿಸುವ ತಿರುವಾರೂರಿನ ಶರಣರನ್ನು ಅವರು ತನ್ನನ್ನು ನಮಿಸುವ ಮೊದಲೇ ತಾನು ಕೈಗಳನ್ನೆತ್ತಿ ವಂದಿಸಿ, ಅವರೊಡನೆ ಕೂಡಿಕೊಂಡು ಬಂದು, ಎರಡು ಪಕ್ಷದವರೂ ಮನಸ್ಸಂತೋಷದಿಂದ ಉಬ್ಬಲು, ತನ್ನನ್ನು ಸ್ವಾಗತಿಸಲು ಅಲಂಕರಿಸಲ್ಪಟ್ಟು ಶೋಭಿಸುವ ಬೀದಿಗಳೊಳಗೆ ನಡೆಯುತ್ತಿರುವ ನಂಬಿಯು ಈಶ್ವರನ ಆಜ್ಞೆಯಂತೆ ತನ್ನನ್ನು ಸ್ವಾಗತಿಸಲು ಬಂದ ಶರಣರನ್ನು ಮುಂದಿಟ್ಟುಕೊಂಡು 'ನಮ್ಮ ಈಶ್ವರನು ಆಶಿಸಿ ಬಂದು ನೆಲಸಿರುವ ಸ್ಥಳವು ಈ ತಿರುವಾರೂರಾಗಿದೆ. ಆ ಈಶ್ವರನು ನಮ್ಮನ್ನೂ ಆಳಾಗಿಸಿಕೊಂಡು ಅನುಗ್ರಹಿಸುವನೋ ಕೇಳುವವರಾಗಿ' ಎಂಬ ಅಭಿಪ್ರಾಯದ ಪಲ್ಲವಿಯುಳ್ಳ ಚೆಲುವಾದ ರಾಗವಿರುವ ಗಾಂಧಾರ ಛಂದಸ್ಸಿನಲ್ಲಿ ಸ್ತೋತ್ರವನ್ನು ಹಾಡಿಕೊಂಡು ಬಂದು ತನ್ನೊಡೆಯನ ದೇಗುಲದ ಬಾಗಿಲನ್ನು ಸೇರಿದನು.

260. ನಿಡಿದಾದ ದೇಗುಲದ ದ್ವಾರವನ್ನು ನಂಬಿಯು ನೋಡಿ ಕೆಳಗೆ ಬಿದ್ದು ನಮಸ್ಕರಿಸಿ ದೇವೇಶನನ್ನು ವಂದಿಸಿ, ಸ್ತುತಿಸಿ, ಪ್ರೀತಿಯಿಂದ ತಲೆಯ ಮೇಲೆ ಕೈಗಳೆತ್ತಿ ಈಶನು ನೆಲಸಿ ಅನುಗ್ರಹಿಸಿದ ಗರ್ಭಗೃಹವನ್ನು ಸುತ್ತುವರಿದ ಅಂಗಣದ್ವಾರವನ್ನು ಪ್ರವೇಶಿಸಿದನು.

---

259. ವನ್ದೆತಿರ್ ಕೊಣ್ಡು ವಣಙ್ಗುವಾರ್‌ಮುನ್ ವನ್‌ಙಿಕೊಣ್ಡರ್ ಅಞ್ಜಲಿ ಕೂಪ್ಪಿ ವನ್ದು,
ಚಿನ್ದೈ ಕಳಿಪ್ಪುಱ ವೀತಿಯೂಟು ಚೆಲ್ವಾರ್ ತಿರುತ್ತೊಣ್ಡರ್ ತಮ್ಮೈ ನೋಕ್ಕಿ,
'ಎನ್ದೈ ಇರುಪ್ಪತುವುಮ್ ಆರೂರ್ ಅವರ್ ಎಮ್ಮೈಯುಮ್ ಆಳ್ವರೋ ಕೇಳೀರ್' ಎನ್ನುಮ್,
ಚನ್ದ ಇಚೈಪ್ಪತಿಕಙ್ಗಳ್ ಪಾಟಿ ತ್ತಮ್ಪಿರುಮಾನ್ ತಿರುವಾಯಿಲ್ ಚಾರ್‌ನ್ದಾರ್.

260. ವಾನುಱ ನೀಳ್‌ತಿರು ವಾಯಿಲ್‌ನೋಕ್ಕಿ ಮಣ್ಣುಱ ಐನ್ದುಱು ಪ್ಪಾಲ್ ವಣಙ್ಗಿ,
ತ್ತೇನುಱೈ ಕಱ್ಪಕ ವಾಚಮಾಲೈ ತ್ತೇವಾಚಿರಿಯನ್ ತೊಱುತಿ ಱೈಙ್ಜಿ,
ಊನುಮ್ ಉಯಿರುಮ್ ಉರುಕ್ಕುಮ್ ಅನ್‌ಪಾಲ್ ಉಚ್ಚಿ ಕುವಿತ್ತ ಚೆಙ್ಗೈಕಳೋಟುಮ್,
ತೂನಱು ಙ್ಗೊನ್‌ಱೈಯನ್ ಮೂಲಟ್ಟಾನಮ್ ಚೂಟ್‌ತಿರು ಮಾಳಿಕೈ ವಾಯಿಲ್ ಪುಕ್ಕಾರ್.

261. ಹುತ್ತವನ್ನು ವಾಸವಾಗಿ ಮಾಡಿಕೊಂಡ ಪುರಾತನರನ್ನು, ಪುಷ್ಪದೇಗುಲದಲ್ಲಿ ನೆಲಸಿದ ಶಿವನನ್ನು, ಎಲ್ಲಾ ಜೀವರುಗಳಿಗೂ ಏಕ ಶರಣ್ಯನಾದ ಆದಿದೇವನನ್ನು, ಪಾರ್ವತೀಪತಿಯನ್ನು, ತಾವರೆಯಂತಹ ತನ್ನ ಪಾದಗಳನ್ನು ಅರ್ಚಿಸುವ ಭಾಗ್ಯವನ್ನು ತನಗೆ ಕೊಟ್ಟು ಅನುಗ್ರಹಿಸಿದ ಮಹಿಮೆಯುಳ್ಳವನನ್ನು, ಭೂಮಿಯಲ್ಲಿ ಬಿದ್ದು ನಮಿಸಿ, ತಿರುನಾವಲೂರಿನ ಒಡೆಯನು (ನಂಬಿಯು) ಮಾನವ ಜನ್ಮ ತಾಳಿದುದರಿಂದ ಹೊಂದಬೇಕಾದ ಯೋಗ್ಯ ಪ್ರಯೋಜನವನ್ನು ನಿಜವಾಗಿಯೇ ಹೊಂದಿದನು.

262. ಪ್ರೀತಿಯು ಹೆಚ್ಚಿದುದರಿಂದ ಹೃದಯವು ದ್ರವಿಸಿ ಕರಗಲು, ಆ ಗರ್ಭಗೃಹದಲ್ಲಿರುವ ಶಿವನ ಮುಂದೆ ಅಷ್ಟಾಂಗವಾಗಿಯೂ, ಪಂಚೇಂದ್ರಿಯಗಳಿಂದಲೂ ವಿಧಿವತ್ತಾಗಿ ನಮಿಸಿ, ವಿಶೇಷವಾದ ಪ್ರೀತಿಯು ಇನ್ನೂ ಹೆಚ್ಚುತ್ತಿರಲು, ತನ್ನ ಪಂಚೇಂದ್ರಿಯಗಳನ್ನು ಏಕೀಕರಿಸಿ, ಈಶ್ವರನ ಪಾದವನ್ನು ಹೊಂದಲು, ಅದರಿಂದ ಉಂಟಾದ ಸಂತೋಷಾಧಿಕ್ಯದಲ್ಲಿ ಮುಳುಗಿ, ಅದರಲ್ಲಿಯೇ ನೆಲೆನಿಂತು ನಂಬಿಯು ಮಂಜುಲವಾದ ತೇವಾರ ಹಾಡನ್ನು ಹಾಡಿದನು.

---

261. ಪುಱ್ಱಿಟ ಙ್ಕೊಣ್ಡ ಪುರಾತನನ್ನೈ ಪ್ಪೂಙ್ಕೋಯಿಲ್ ಮೇಯ ಪಿರಾನ್ನೈ
ಯಾರ್ಕ್ಕುಮ್,
ಪಱ್ಱಿಟಮ್ ಆಯ ಪರಮ್ಪೊರುಳ್ಳೈ ಪ್ಪಾರ್ಪ್ಪತಿ ಪಾಕನ್ನೈ ಪ್ಪಙ್ಕಯತ್ತಾಳ್,
ಅರ್ಚ್ಚನೈ ಚೆಯ್ಯ ಅರುಳ್‌ಪುರಿನ್ತ ಅಣ್ಣಲೈ ಮಣ್‌ಮಿಜೈ ವೀಟ್‌ನ್ತಿಙ್ಕೈಙ್ಚಿ,
ನಱ್ಱಮಿಟ್ ನಾವಲರ್ ಕೋನ್ ಉಟಮ್ಪಾಲ್ ನನ್‌ಮೈಯಿನ್
ತನ್‌ಮೈಯೈ ಮೆಯ್‌ಮ್ಮೈ ಪೆಱ್ಱಾರ್.

262. ಅನ್‌ಪು ಪೆರುಕ ಉರುಗಿ ಉಳ್ಳಮ್ ಅಲೈಯ ಅಟ್ಟಾಙ್ಕ ಪಞ್ಚಾಙ್ಕಮಾಕ,
ಮುನ್‌ಪು ಮುಱೈಮ್ಮೈಯಿ ನಾಲ್‌ವಣಙ್ಕಿ ಮುಟವಿಲಾ ಕ್ಕಾತಲ್
ಮುತಿರ ಓಙ್ಕಿ,
ನನ್‌ಪುಲನ್ ಆಕಿಯ ಐನ್ತುಮ್ ಒನ್‌ಱಿ ನಾಯಕನ್ ಚೇವಟಿ ಎಯ್ತ್ತಪ್ಪೆಱ್ಱಿ,
ಇನ್‌ಪವೆಳ್ಳತ್ತಿಟೈ ಮೂಟ್‌ಕಿನಿನ್‌ಱೇ ಇನ್‌ನಿಙ್ಕೈ ವಣ್ಣಮಿಟ್
ಮಾಲೈ ಪಾಟ.

263. ಜೀವರು ತನ್ನನ್ನು ವಂದಿಸಿ ಅನುಗ್ರಹ ಪಡೆಯುವುದಕ್ಕಾಗಿ ದೊಡ್ಡ ವೇದಗಳ ರೂಪವಾದ ಹುತ್ತವನ್ನೇ ವಾಸವಾಗಿಸಿಕೊಂಡು ಅನುಗ್ರಹಿಸಿದ ಈಶ್ವರನು ತುಂಬುಕೃಪೆಯಿಂದ, 'ನಮ್ಮನ್ನು ಹಿಂದೆಯೇ ನಿನಗೆ ಅನುಗ್ರಹಿಸಿರುವೆವು. ನಾವು ಹಿಂದೆಯೇ ನಿನ್ನನ್ನು ತಡೆದು ಆಳಾಗಿಸಿಕೊಂಡ ಆ ಮದುವೆಯ ಸಂದರ್ಭದಲ್ಲಿ ನೀನು ತಳೆದಿದ್ದ ಮದುವೆಯ ಅಲಂಕಾರದಲ್ಲಿಯೇ ಯಾವಾಗಲೂ ಇದ್ದವನಾಗಿ ನಿನ್ನ ಆಶೆಯು ತೀರುವಂತೆ ಈ ಭೂಲೋಕದಲ್ಲಿ ವಿಹರಿಸುವವನಾಗು' ಎಂಬೊಂದು ವಾಣಿಯು ನಂಬಿ ಯಾರೂರನಿಗೆ ಆಗ ಕೇಳಿಬಂತು.

264. ಈ ವಾಕ್ಯವನ್ನು ಕೇಳಿದ ನಂಬಿಯು ನಾಶರಹಿತನಾದ, ಹುತ್ತವನ್ನು ಮನೆಮಾಡಿಕೊಂಡಂತಹ ಶಿವನನ್ನು ಬಹುವಾದ ಪ್ರೀತಿಯಿಂದ ನಮಿಸಿ ನಿಂತು, 'ಅಂದು ಲೋಕಕ್ಕೆ ಆಳಾಗುವುದನ್ನು ತಡೆದು ನಿನಗೆ ಆಳಾಗುವಂತೆ ಬಂದನುಗ್ರಹಿಸಿದ ವೇದ ಪ್ರತಿಪಾದ್ಯರೇ, ಇನ್ನೂ ಅಂತೆಯೇ ಆಳಾಗಿಸಿಕೊಳ್ಳಲು ತಿರುವಾರೂರಲ್ಲಿ ಆಸೆಯಿಂದ ನೆಲೆನಿಂತ ಅಮೂಲ್ಯರತ್ನವೇ, ಜೀವನದ ಹಿತವನ್ನೂ ಕಯಲ್‌ಮೀನಿನ ಚೆಲುವನ್ನೂ ತನ್ನಲ್ಲಿಯೇ ಇಟ್ಟುಕೊಂಡ ಉಮಾಮಾತೆಯನ್ನು ಒಂದು ಭಾಗದಲ್ಲುಳ್ಳ ಶಿವನೇ, ನಾಯಂತಿರುವ ನನ್ನನ್ನು ಒಂದು ವಸ್ತುವಾಗಿ ಗೌರವಿಸಿ ಅಂದಿನಂತೆಯೇ ಇಂದೂ ನಿಮ್ಮ ಪಾದಕಮಲದ ಅನುಗ್ರಹವನ್ನು ತಂದ ಕಾರ್ಯವು ನೀವು ತೋರಿಸಿದ ಪರಮ ಕೃಪಾಫಲವಲ್ಲವೇ!' ಎಂದು ಸ್ತುತಿಸಿದನು.

---

263. ವಾಟಿಯ ಮಾಮಱೈ ಪ್ಪುಱ್ಱಿಟಙ್ಕೊಳ್ ಮನ್‌ನವನ್
ಆಱರುಳಾಲೋರ್ ವಾಕ್ಕು,
'ತ್ತೋಟಮೈ ಆಕ ಉನಕ್ಕು ನಮ್ಮೈ ತ್ತನ್ತನಮ್ ನಾಮ್
ಮುನ್‌ಪು ತೊಣ್ಟುಕೊಣ್ಟು,
ವೇಳ್ವಿಯಿಲ್ ಅನ್‌ಱುನೀ ಕೊಣ್ಟ ಕೋಲಮ್ ಎನ್‌ಱುಮ್
ಪುನೈನ್ತುನಿನ್ ವೇಟ್ಕೈ ತೀರ,
ವಾಟಿಮಣ್ ಮೇಲ್‌ವಿನ್ನೈ ಯಾಟುವಾಯ್' ಎನ್ ಱಾರೂರರ್
ಕೇಟ್ಕ ಎಟುನ್ತನ್‌ಱೇ.

264. ಕೇಟ್ಕ ವಿರುಪ್ಪುವನ್ ಱಿಕೊಣ್ಟರ್ ಎನ್‌ಱುಮ್ ಕೇಟಿಲಾ ತಾನ್ನೈ
ಇಱೈಞ್ಚಿ ನಿನ್‌ಱೇ,
'ಆಟ್ಕೊಳ ವನ್ತ ಮಱೈಯವನೇ! ಆರೂರ್ ಅಮರ್‌ನ್ತ ಅರುಮಣಿಯೇ!
ವಾಟ್ಕಯಲ್ ಕೊಣ್ಟಕಣ್ ಮಱ್ಕೈ ಪಙ್ಕಾ! ಮಣ್ಣಿನ್ ಪೆರಿಯ
ಕರುಣೈಯನ್‌ಱೇ!
ನಾಟ್ಕಮಲಪ್ಪತಮ್ ತನ್ತಿನ್‌ಱುನಾಯಿನೇ ನೈಪ್ಪೊರುಳಾಕ' ಎನ್‌ಱಾರ್.

265. ಹೀಗೆ ಸ್ತುತಿಸಿ ಹಲವು ರೀತಿಯಿಂದ ವಂದಿಸಿ, ಹೆಚ್ಚಾದ ಮನಸ್ಸಂತೋಷ ದಿಂದ ಜಯಪಡೆಯಹೋಗುವೆನೆಂದು ನಟಿಸುವಂತೆ, ತಿರುಮೂಲಟ್ಟಾನನಾಥರ ಸನ್ನಿಧಿ ಯಿಂದ ನಡೆದು ಬಂದು ವೀದಿವಿಡಂಗರಾದ ತ್ಯಾಗೇಶರ ಸನ್ನಿಧಿಗೆ ಹೋಗಿ, ಅಲ್ಲಿ ವಂದಿಸಿಯೂ ಸ್ತುತಿಸಿಯೂ ಅದರಿಂದ ಬಾಳ್ವೆಯ ಸಾಫಲ್ಯವನ್ನು ಹೊಂದಿದವನಾಗಿ ದೇವಮಂದಿರವನ್ನು ಪ್ರದಕ್ಷಿಣೆ ಮಾಡಿ ನಂಬಿಯು ಹೊರಗೆ ಬಂದನು. ಅಂದು ಮೊದಲು ಶರಣರೆಲ್ಲರೂ ನಂಬಿಯನ್ನು 'ತಂಬಿರಾನ್ ತೋಳರ್' (ಆದಿದೇವನಿಗೆ ಸ್ನೇಹಿತರಾದವರು) ಎಂಬ ಹೆಸರಿಂದಲೇ ಕೊಂಡಾಡುವರು.

266. ಈಶ್ವರನ ಕೃಪೆಯಿಂದ ನಂಬಿಯು ಆದಿಶೈವರು ವಿಧಿಸಿದ ಸುಂದರ ಲಾಂಛನಗಳನ್ನು ಧರಿಸಿ, ಚಂದನ, ಮಣಿಮಾಲೆ, ಪೂಮಾಲೆ ಎಂಬಿವುಗಳಿಂದ ಅಲಂಕೃತ ನಾಗಿ, ತೊಟ್ಟುಕೊಂಡ ಆಭರಣಗಳಿಂದ ಶೋಭಿಸುತ್ತ,

267. ತಿರುವಾರೂರಿಗೆ ಬಂದು ಅನುಗ್ರಹಿಸುವ ಮೊದಲೇ ಮಹಿಮಾತೀತವಾದ ಅದೇ ನಗರಕ್ಕೆ ಬಂದು ಕೈಲಾಸದಲ್ಲಿ ಶಿವನರ್ಧಾಂಗಿಯಾದ ಉಮಾದೇವಿಯ ಪರಿಚರ್ಯೆ ಯನ್ನು ಮಾಡುವ ಇಬ್ಬರು ಸೇವಕಿಯರಲ್ಲಿ ಒಬ್ಬಳಾದ ಕಮಲಿನಿಯು ಅವತರಿಸಿದಳು.

---

265. ಎನ್ಱು ಪಲಮುಱೈ ಯಾಲ್‌ವಣಙ್ಕಿ ಎಯ್ತ್ತಿಯ ಉಳ್ಳ ಕ್ಕಳಿಪ್ಪಿನೋಟುಮ್,
ವೆನ್ಱಿ ಅಟಲ್‌ವಿಟೈ ಪೋಲ್‌ನಟನ್ತು ವೀತಿವಿಟಙ್ಕ ಪ್ಪೆರುಮಾನ್ ಮುನ್ಪು,
ಚೆನ್ಱು ತೊಟುತು ತುತಿತ್ತು ವಾಟ್ನ್ತು ತಿರುಮಾಳಿಕೈ ವಲಮ್
ಚೆಯ್ತುಪೋನ್ತಾರ್,
ಅನ್ಱು ಮುತಲಟಿ ಯಾರ್‌ಕಳೆಲ್ಲಾ ನ್ತಮ್ಪಿರಾನ್ ತೋಟರ್
ಎನ್ಱೇ ಅಱೈನ್ತಾರ್.

266. ಮೈವಳರ್ ಕಣ್ಟರ್ ಅರುಳಿನಾಲೇ ವಣ್ಣಮಿಟ್ ನಾವಲರ್ ತಮ್ಪೆರುಮಾನ್,
ಚೈವ ವಿಟಙ್ಕಿನ್ ಅಣಿಪುನೈನ್ತು ಚಾನ್ತುಮುಮ್ ಮಾಲೈಯುಮ್
ತಾರುಮ್‌ಆಕಿ,
ಮೆಯ್‌ವಳರ್ ಕೋಲಮೆ ಲ್ಲಾಮ್ಪೊಲಿಯ ಮಿಕ್ಕವಿಟುತ್ತವ ವೇನ್ತರ್ ಎನ್ನ,
ತ್ತೆಯ್ವ ಮಣಿಪ್ಪುಱ್ಱು ಳಾರೈಪ್ಪಾಟಿ ತ್ತಿಳೈತ್ತು ಮಕಿಟ್‌ವೊಟು
ಇಣ್ಣಿಲ್ಲಾನಿನ್ಱಾರ್.

267. ಇತಙ್ಕುಮುನ್ ಎಲ್ಲೈ ಇಲ್ಲಾ ತ್ತಿರುನಕರ್ ಇತನುಳ್ ವನ್ತು
ಮುತಱ್ಪೆರು ಙ್ಕಯಿಲೈ ಆತಿ ಮುತಲ್ವರ್‌ತಮ್ ಪಙ್ಕಿ ನಾಟ್‌ಕು
ಪ್ಪೊತುಕ್ಕಟ ನ್ತುರಿಮೈ ಚೆಯ್ಯುಮ್ ಪೂಙ್ಕುಟಿಲ್ ಚೇಟಿ ಮಾರಿಲ್
ಕತಿರ್‌ನ್ತ ಪೂಣ್ ಏನ್ತು ಕೊಙ್ಕೈ ಕ್ಕಮಲಿನಿ ಅವತರಿತ್ತಾಳ್.

268. ಈ ರೀತಿಯಲ್ಲಿ ಅವತರಿಸಿದ ಆಕೆಯು ಪ್ರಕಾಶಿಸುವ ರತ್ನವು ಉದಯಿಸಿದಂತೆ ರುದ್ರಗಣಿಕೆಯರು ಎಂದು ಹೇಳಲ್ಪಡುವ ದೇವದಾಸಿ ಕುಲದಲ್ಲಿ ಜನಿಸಲು, ಶ್ರೇಷ್ಠರಾದ ಹಿರಿಯರು, ಚಂದ್ರಚೂಡನಾದ ಪರಶಿವನ ದಿವಸವಾದ ಆರ್ದ್ರಾದಿನದಲ್ಲಿ ಮಂಗಳಾಲಂಕಾರಗಳನ್ನು ಮಾಡಿ ಪರವೈಯಾರ್ ಎಂಬ ಹೆಸರನ್ನು ಶಾಸ್ತ್ರವಿಧಿಯಂತೆ ಇಟ್ಟರು.

269. ಆ ಮಗುವಿಗೆ ಒಂದು ತಿಂಗಳಾಗುವಾಗ, ಸಂಬಂಧಿಕರೆಲ್ಲಾ ಒಟ್ಟು ಸೇರಿ, ಮಗುವನ್ನು ಕಾಪಾಡುವಂತೆ ತಮ್ಮ ಇಷ್ಟದೇವತೆಗಳನ್ನು ಸ್ತುತಿಸಿ, ಆಯಾ ಮಾಸಗಳಲ್ಲಿ ಬಂದು ಸೇರುವ ಆಯಾ ಪರ್ವಗಳಲ್ಲೆಲ್ಲಾ ತಕ್ಕ ಸಂಸ್ಕಾರಗಳನ್ನು ಚಂದವಾದ ರೀತಿಯಲ್ಲಿ ಮಾಡಲು, ಕೆಂದಾವರೆಯಲ್ಲಿ ಶೋಭಿಸುವ ಲಕ್ಷ್ಮಿಯೇ ಇಲ್ಲಿ ಬಂದು ಅವತರಿಸಿದಳು ಎಂದು ಜ್ಞಾನಿಗಳು ಮನಮಿೂರಿ ಸಂತಸಪಡಲು, ಪರವೆಯು ನಡೆಯಲು ಕಲಿಯುವ ಮೊದಲು ಹೆಜ್ಜೆಯನ್ನಿಡುವ ಮಟ್ಟವನ್ನು ಸೇರಿದಳು.

270. ಬಾಲ್ಯಾವಸ್ಥೆಯಲ್ಲಿರುವ ಹೆಣ್ಣು ಜಿಂಕೆಯೋ, ದೈವಿಕವಾದ ಸೌರಭ್ಯ ಮೊದಲಾದ ಗುಣಗಳನ್ನು ಹೊಂದಿದ ಹೂವಿನ ಎಳೆ ಮೊಗ್ಗೋ, ಪರಿಮಳದಿಂದ ತುಂಬಿದ ಜೇನಿನ ಹೊಸ ಇರವೋ, ಸಮುದ್ರದ ಅಲೆಯಲ್ಲಿ ಪ್ರಕಾಶಿಸುವ ಹವಳದ ಎಳೆಕುಡಿಯೋ, ಮನ್ಮಥನು ಎಳವೆಯಲ್ಲಿ ಯುದ್ಧೋದ್ಯೋಗವನ್ನು ಕಲಿಯುವ ಎಳೆ ಧನುಸ್ಸೋ ಎಂದು ಹೇಳುವಂತೆ,

---

268. ಕತಿರ್ಮಣಿ ಪಿಱನ್ತ ತೆನ್ನ ಉರುತ್ತಿರ ಕಣಿಕೈ ಮಾರಾಮ್
ಪತಿಯಿಲಾರ್ ಕುಲತ್ತುಳ್ ತೋನ್ಱಿ ಪ್ಪರವೈಯಾರ್ ಎನ್ನುಮ್ ನಾಮಮ್
ವಿತಿಯುಳಿ ವಿಳಕ್ಕ ತ್ತಾಲೇ ಮೇತಕು ಚಾನ್ಱೋರ್ ಆನ್ಱ
ಮತಿಯಣಿ ಪುನಿತನ್ ನನ್ನಾಳ್ ಮಙ್ಕಲ ಅಣಿಯಾಲ್ ಚಾಱ್ಱಿ,

269. ಪರವಿನರ್ ಕಾಪ್ಪು ಪ್ಪೋಱ್ಱಿ ಪ್ಪಯಿಲ್ಪೆರು ಚ್ಚುಱ್ಱಮ್, ತಿಙ್ಕಳ್
ವಿರವಿಯ ಪರುವಮ್ ತೋಱುಮ್ ವಿಟಾ ಅಣಿ ಎಟುಪ್ಪ, ಮಿಕ್ಕೋರ್
'ವರಮಲರ್ ಮಙ್ಕೈ ಇಙ್ಕು ವನ್ತನಳ್' ಎನ್ಱು ಚಿನ್ತೈ
ತರವರು ಮಕಿೞ್ಚ್ಚಿ ಪೊಙ್ಕ ತಳರ್ನಟೈ ಪ್ಪರುವ ಞ್ಚೇರ್ನ್ತಾರ್.

270. ಮಾನಿಳಮ್ ಪಿಣೈಯೋ ? ತೆಯ್ವ ವಳರಿಳ ಮುಕೈಯೋ ? ವಾಚ
ತ್ತೇನಿಳಮ್ ಪತಮೋ ? ವೇಲೈ ತ್ತಿರೈ ಇಳಮ್ ಪವಳ ವಲ್ಲಿ
ಕ್ಕಾನಿಳಮ್ ಕೊಟಿಯೋ ? ತಿಙ್ಕಟ್ಕತಿರಿಳ ಙ್ಕೊೞುನ್ತೋ ? ಕಾಮನ್
ತಾನಿಳಮ್ ಪರುವಮ್ ಕಱ್ಕುಮ್ ತನಿಇಳ ನ್ತನುವೋ ಎನ್ನ.

271. ಸೌಂದರ್ಯವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರಲು, ಗೋಲಿಯಾಟ, ಚೆಂಡಿನಾಟ, ಉಯ್ಯಾಲೆ – ಇವೇ ಮೊದಲಾದುವುಗಳನ್ನು ಆಡುತ್ತಾ, ಉಮಾದೇವಿಯವರ ಪಾದಗಳನ್ನು ಸೇವಿಸುವ ಪ್ರೇಮದಿಂದ ಶರೀರವೂ ಆತ್ಮವೂ ದ್ರವಿಸುವಂತೆ ಇನಿದಾದ ಗೀತಗಳನ್ನು ಹಾಡುತ್ತಾ,

272. ಶೈಶವಾವಸ್ಥೆಯ ಐದು ವರ್ಷಗಳ ಕಾಲದ ಮೇಲೆ ಬರುವ (ಐದರಿಂದ ಏಳು ವರ್ಷಗಳ ವರೆಗಿರುವ) ಬಾಲ್ಯಾವಸ್ಥೆಯನ್ನೂ ದಾಟಿ, ಮನಸ್ಸನ್ನಾಕರ್ಷಿಸುವ ಚೆಲುವಿನಿಂದ ಶರೀರವು ಕಾಂತಿಯುತವಾಗಿ ಬೆಳೆಯಲು, ಸ್ತನಗಳು ಕೊಂಗೆಹೂವಿನ ಮೊಗ್ಗನ್ನು ತಿರಸ್ಕರಿಸಿ ಚೆಲುವಿನಿಂದ ಮೀರಲು, ತಾನು ಹಿಂದೆ ಉಮಾದೇವಿಯವರ ಸಖಿಯಾಗಿದ್ದ ಭಾವವು ಮನಸ್ಸಿನಲ್ಲಿ ವ್ಯಕ್ತವಾಗುತ್ತಿರಲು ಪರವೆಯು ಅಭಿವೃದ್ಧಿ ಹೊಂದುತ್ತಿದ್ದಳು.

273. ಒಂದು ದಿನ ಆಕೆಯು, ತನ್ನ ಸಖಿಯರು ತನ್ನನ್ನು ಸುತ್ತಿಬರಲು, ತನ್ನ ಕೂದಲಿನ ಸೌರಭ್ಯವು ಎಲ್ಲಾ ದಿಕ್ಕುಗಳಲ್ಲಿ ಸೇರಿ ಹರಡಲು, ತಿರುವಾರೂರ[1] ದೇಗುಲದಲ್ಲಿ ನೆಲಸಿದ ಈಶನನ್ನು ವಂದಿಸುವುದಕ್ಕಾಗಿ ಯಾವಾಗಲೂ ಹೋಗುವ ಪದ್ಧತಿಯಂತೆ ತೇರು ಬೀದಿಗಳನ್ನು ಸುತ್ತಿ ಹೋಗುತ್ತಿದ್ದಳು.

---

271. ನಾಟ್ಟುಮ್ಇನ್ ಪೊೞ್ಪು ವಾಯ್ಪ್ಪ ನಾಳುನಾಳ್ ವಳರ್ನ್ದು ಪೊಙ್ಗ
ಆಟ್ಟುಮೆನ್ ಕೞಙ್ಗುಮ್ ಪನ್ದುಮ್ ಅಮ್ಮನೈ ಊಚಲ್ ಇನ್ನ
ಪಾಟ್ಟುಮ್ಇನ್ ನಿಚ್ಚೈಯುಮ್ ತಙ್ಗಳ್ ಪನಿಮಲೈ ವಲ್ಲಿ ಪಾತಮ್
ಕೂಟ್ಟುಮ್ಅನ್ ಪುರುಕ ಪ್ಪಾಟ್ಟುಮ್ ಕೊಳ್ಕೈಯೋರ್ ಕುೞುವ್ಪು ತ್ತೋನ್ಱಿ.

272. ಪಿಳ್ಳೈಮೈ ಪ್ಪರುವಮ್ ಮೀತಾಮ್ ಪೇತೈಮೈ ಪ್ಪರುವಮ್ ನೀಙ್ಗಿ,
ಅಳ್ಳುತಱ್ ಕವಿನ್ಕನ್ತ ಪೊಱ್ಪಾಲ್ ಅನಙ್ಗನ್ಮೆಯ್ ತ್ತನಙ್ಗಳ್ ಈಟ್ಟಮ್,
ಕೊಳ್ಳುಮಿ ಕ್ಕಯರ್ನ ಪೋನ್ಱ ಕೊಙ್ಕೈ ಕೋಙ್ಕರುಮ್ಪೈ ವೀಟ್ಪ್ಪ,
ಉಳ್ಳುಮೆಯ್ ತ್ತನ್ಮೈ ಮುನ್ನೈ ಉಣ್ಮೈಯುಮ್ ತೋನ್ಱ
ಉಯ್ಪ್ಪಾರ್.

273. ಪಾಙ್ಗಿಯರ್ ಮರುಙ್ಗು ಚೂೞ ಪ್ಪಟರೊಳಿ-ಮಱುಕು ಚೂೞ
ತ್ತೇಙ್ಗುಮಟ್ ಕುೞಲಿನ್ ವಾಚಮ್ ತಿಚೈಯೆಲಾಮ್ ಚೆನ್ಱು ಚೂೞ
ಓಙ್ಗುಪೂ ಙ್ಕೋಯಿಲ್ ಉಳ್ಳಾರ್ ಒರುವರೈ ಅನ್ಪಿ ನೋಟ್ಟುಮ್
ಪೂಙ್ಗೞಲ್ ವಣಙ್ಗ ಎನ್ಱುಮ್ ಪೋತುವಾರ್ ಒರುನಾಟ್ ಪೋನ್ದಾರ್.

---

1. ತಿರುವಾರೂರು ತಂಜಾವೂರಿನಿಂದ ಐವತ್ತು ಮೈಲು ದೂರವಿದೆ. ಅಲ್ಲಿರುವ ಸ್ವಾಮಿಗೆ ವಲ್ಮೀಕನಾಥ, ತ್ಯಾಗೇಶ ಎಂಬ ಹೆಸರುಗಳಿವೆ.

274. ಪಾದಗಳಲ್ಲಿ ಅಲಂಕಾರವಾಗಿ ತೊಟ್ಟುಕೊಂಡ ನೂಪುರಗಳು 'ಈ ಪಾದಗಳು ಭೂಲೋಕವನ್ನು ಜಯಿಸಿ ಕಾಲಕೆಳಗಿರಿಸಿವೆ' ಎಂದು ಹೇಳುವಂತೆ ಶಬ್ದಿಸುತ್ತಿದ್ದುವು. ಮಣಿಗಳೊಡನೆ ಪ್ರಕಾಶಿಸುವ ಕಾಂಚಿ ಎಂಬ ಆಭರಣವು ನಾಗಲೋಕವಾದ ಪಾತಾಳಲೋಕವನ್ನು ನಿತಂಬವು ಜಯಿಸಿಕೊಂಡ ನಂಬಿಕೆಯೊಡನೆ ಅಲ್ಲಾಡುತ್ತಿತ್ತು. ಸುರುಳಿದ ಕೂದಲಿಗೆ ಮೇಘಗಳು ಸೋತು ಜೋಲುವ ರೀತಿಯಿಂದ ವಿಷ್ಣುಲೋಕವು ನಮಿಸುವುದೆಂದು, ಮುಸುರುತ್ತಿರುವ ತುಂಬಿಗಳ ಹಿಂಡು ಝೇಂಕರಿಸುತ್ತಿದ್ದುವು. ಪರವೆಯು ಮೇಲೆ ಹೇಳಿದ ರೀತಿಯಲ್ಲಿ ಬೀದಿಯಲ್ಲಿ ಹೋಗುತ್ತಿದ್ದಳು. ಆಗ—

275. ಹುತ್ತವನ್ನೇ ತಾವು ಯಾವಾಗಲೂ ಇರುವ ಸ್ಥಳವಾಗಿ ಆಶಿಸಿ ಅಲ್ಲೇ ಇರುವ ಪರಮೇಶ್ವರನನ್ನು ಸ್ತುತಿಸಿ, ನಮಿಸಿದ ಮೇಲೆ, ಪರಿಜನರಿಂದ ಸುತ್ತುವರಿದು ಹೋಗುತ್ತಿರುವ ನಂಬಿಯು, ಮಹತ್ತಾದ ಪ್ರಿಯವಾದ ಪ್ರಾರಬ್ಧವು ಸೇರಿಟ್ಟುದರಿಂದ, ಸಂತೋಷವನ್ನು ಸೂಚಿಸುವ ಮುಗುಳುನಗೆಯಿಂದ ಕೂಡಿದ ಕೆಂಪಗಾದ ಬಾಯೂ, ಬಿಲ್ಲಿನಂತಿರುವ ಹುಬ್ಬುಗಳ ಕೆಳಗೆ ಬಾಣದಂತಿರುವ ಕಣ್ಣುಗಳೂ – ಇವುಗಳಿಂದ ಕೂಡಿ ಪ್ರಕಾಶಿಸುವ ಆಭರಣಗಳನ್ನು ಧರಿಸಿದ ಪರವೆಯನ್ನು ನೋಡಿದನು.

276. 'ಇಲ್ಲಿ ನಾನು ಕಾಣುವ ಈ ವಸ್ತು ಕಲ್ಪವೃಕ್ಷದ ಹೂಗಳಿಂದ ಕೂಡಿದ ಶಾಖೆಯೋ, ಮನ್ಮಥನು ತನ್ನ ದೊಡ್ಡ ಜೀವಿತವಾಗಿಸಿಕೊಂಡ ವಸ್ತುವೋ, ಸೌಂದರ್ಯವೆನ್ನುವ ವಸ್ತುವು ಗಳಿಸಿದ ಪುಣ್ಯದ ಬೆಳೆಯೋ, ಮೇಘದ ಮೇಲೆ ಸುತ್ತಿಕೊಂಡು ಬಿಲ್ಲನ್ನೂ, ಕನ್ನೈದಿಲೆಯ ಹೂವನ್ನೂ, ಹವಳವನ್ನೂ, ತಾವರೆಯನ್ನೂ, ಚಂದ್ರನನ್ನೂ ಅಂಗಗಳಾಗಿ ತೆಗೆದುಕೊಂಡು ಪ್ರಕಾಶಿಸುವ ಒಂದು ಪರಿಮಳಯುಕ್ತವಾದ ಬಳ್ಳಿಯೋ ಎಂಬಂತೆ ಮೇಲೆ ಹೇಳಿದ ವಸ್ತುಗಳಲ್ಲಿ ಇಂಥದೆಂದು ಅಥವಾ ಇವುಗಳಲ್ಲಿ ಅಡಗದಿರುವ ಬೇರೊಂದರಲ್ಲಿ ಉಂಟೆಂದು ಹೇಳಲಾಗದ ಅದ್ಭುತ ವಸ್ತುವೋ, ಅಥವಾ ಒಂದರಿಂದಲೂ ಉಪಮಾನವನ್ನು ಕೊಡಲು ಸಾಧ್ಯವಿಲ್ಲದ ಪರಮೇಶ್ವರನ ದಿವ್ಯಾನುಗ್ರಹವೋ, ಇದು ಇಂಥದೆಂದು ತಿಳಿಯೆನು' ಎಂದು ನಂಬಿಯು ಅಚ್ಚರಿಗೊಂಡನು.

---

274. ಅಣಿಚಿಲಮ್ಬುಟಿಕಳ್ 'ಪಾರ್ವೆನ್ ಆಟಿಪ್ಪಟು ತ್ತನಮ್' ಎನ್ ಱಾರ್ಪ್ಪ
ಮಣಿಕಿಳರ್ ಕಾಞ್ಚಿ ಅಲ್ಕುಲ್ ವರಿಅರ ವುಲಕ್ಕೈ ವೆನ್ಱ
ತುಣಿವು ಕೊಣ್ಡಾರ್ಪ್ಪ ಮಞ್ಞು ಚುರಿಕುಟಿಞ್ ಕಟಿಯ 'ವಿಣ್ಣುವಮ್
ಪಣಿಯುಮ್' ಎನ್ಱಿನವ ಣ್ಡಾರ್ಪ್ಪ ಪ್ಪಾವೈಯಾರ್ ಪೋತುಮ್ ಪೋತಿಲ್,

275. ಪುಱ್ಱಿಟಮ್ ವಿರುಮ್ಬಿ ನಾರೈ ಪ್ಪೋಱ್ಱಿನರ್ ತೊಟುತು ಚೆಲ್ವಾರ್
ಚುಱ್ಱಿಯ ಪರಿಚ ನಙ್ಕಳ್ ಚೂಟಿಅ ಉಟ್ಟೈಯ ನಮ್ಬಿ
ನಱ್ಱುರುಮ್ ಪಾನ್ಮೈ ಕೂಟ್ಟ ನಕೈಪೂತಿ ನಿಲಙ್ಕು ಚೆವ್ವಾಯ್
ವಿಲ್ಪುರೈ ನುತಲಿನ್ ವೇಲ್ಕಣ್ ವಿಳಙ್ಕಿಟೈ ಯವರೈ ಕ್ಕಣ್ಡಾರ್.

276. 'ಕಱ್ಪಕತ್ತಿನ್ ಪೂಙ್ಕೊಮ್ಬೋ? ಕಾಮನ್ತನ್ ಪೆರುವಾಟ್ವೋ?
ಪೊಱ್ಪುಟೈಯ ಪುಣ್ಣಿಯತ್ತಿನ್ ಪುಣ್ಣಿಯಮೋ? ಪುಯಲ್ಚುಮನ್ತು
ವಿಱ್ಕುವಳೈ ಪವಳಮಲರ್ ಮತಿಪೂತ್ತ ವಿರೈಕ್ಕೊಟಿಯೋ?
ಅಱ್ಪುತಮೋ? ಚಿವನರುಳೋ? ಅಱಿಯೇನ್' ಎನ್ ಅತಿಚಯಿತ್ತಾರ್.

277. ಬ್ರಹ್ಮದೇವನು ಈ ಬಗೆಯಾದ ಒಂದು ಚಿತ್ರಪಟವನ್ನು ಬರೆಯಲು ಶಕ್ತನಾದುದರಿಂದ ಉಂಟಾದ ತನ್ನ ವ್ಯಸನವು ಕೊನೆಗೊಳ್ಳುವಂತೆ ಮನಸ್ಸಿನಿಂದ ಪಡೆದ ಒಂದು ಸೌಂದರ್ಯದ ಪ್ರಕಾಶನವು, ಮೇಲೆ, ಕೆಳಗೆ, ನಡು ಎಂಬ ಮೂರು ಲೋಕಗಳಲ್ಲಿಯೂ ಪಡೆಯಬಹುದಾದ ದೊಡ್ಡ ಫಲವಾಗಿ ತನ್ನ ಮುಂದೆ ಇಲ್ಲಿ ನಿಂತಿದೆ, ಎಂದು ನಂಬಿಯು ಎಣಿಸಿದವನಾಗಿ ಮುಂದೆ ನಡೆದುಹೋಗುವುದನ್ನು ನಿಲ್ಲಿಸಿ ನಿಂತನು. ಈ ರೀತಿ ಕಂಡು ಸಂದೇಹಪಟ್ಟ ನಂಬಿಗೂ ಆತನಿಂದ ಕಾಣಿಸಿಕೊಂಡ ಹೆಣ್ಣಿಗೂ ನಡುವೆ ಆಯುಧಗಳನ್ನು ಧರಿಸಿದ ಮನ್ಮಥನು ನಿಂತನು.

2/8. ಶೀತಲವಾದ ಮುತ್ತುಗಳನ್ನು ಪೋಣಿಸಿದ ಕರ್ಣಾಭರಣಗಳನ್ನೂ ದಾಟಿ ಓಡುವ ಸ್ವಭಾವದಿಂದ ಕಡೆಗಣ್ಣಿತ್ತ ಹೊರಳುವ ಕೆಂಡೆಮೀನಿನಂತಿರುವ ರೂಪವನ್ನು ಪಡೆದ ಪರವೆಯ ಕಣ್ಣುಗಳು ಅಚ್ಚರಿವಡೆಯಲು ದೇವನಾದ ಪರಶಿವನ ದಿವ್ಯಾನುಗ್ರಹದಿಂದ ಅವನ ಅನುಗ್ರಹವನ್ನಲ್ಲದೆ ಬೇರೊಂದನ್ನೂ ಇದುವರೆಗೂ ತಿಳಿಯದ ತನ್ನ ಮನಸ್ಸು ಪ್ರಕಾಶಯುತವಾದ ಆಭರಣಗಳನ್ನು ಧರಿಸಿದ ನಂಬಿಯಾರೂರನ ಮೇಲೆ ಆಶೆಯನ್ನು ಪಡೆಯಲು, ಮೊದಲು ಕೈಲಾಸದಲ್ಲಿ ಶಿವನು ವಿಧಿಸಿದ ಆಜ್ಞೆಯು ಇವರಿಬ್ಬರಲ್ಲಿಯೂ ಸೇರಿಬಿಟ್ಟಿತು. ಹೀಗೆ ಪರವೆಯೂ ನಂಬಿಯನ್ನು ನೋಡಿದಳು.

279. ಕಣ್ಣೋಟದಲ್ಲಿ ಅಡಗದ ಸೌಂದರ್ಯವನ್ನು ಸೂಸುತ್ತಿರುವ ಶರೀರದಲ್ಲಿ ಹೊಮ್ಮುವ ಕಿರಣಗಳ ಪ್ರಸಾರವು ಆಕಾಶದಲ್ಲಿಯೂ ಬಿದ್ದು ಅಡಗದು. ಹೆಚ್ಚುತ್ತಿರುವ ದೊಡ್ಡ ಕಾಂತಿರೂಪದ ನಂಬಿಯೂ ಪರವೆಯೂ ಒಬ್ಬರನ್ನೊಬ್ಬರು ನೋಡುತ್ತಿರುವಾಗ ಕೋಮಲ ಸ್ವಭಾವದ ಪರವೆಗೆ ಮನಸ್ಸಿನಲ್ಲಿ ಅಡಗಿಸಲು ಸಾಧ್ಯವಿಲ್ಲದ, ಇದಕ್ಕೆ ಮೊದಲು ಲೋಕದಲ್ಲಿ ಅನುಭವಕ್ಕೆ ಬಾರದ ಒಂದು ಹೊಸ ಆಶೆಯು ಅಧಿಕವಾಗಿ, ತನ್ನಲ್ಲಿದ್ದ ಸ್ತ್ರೀಸಹಜವಾದ ಲಜ್ಜೆ, ಮುಗ್ಧತೆ, ಅಂಜಿಕೆ, ಅಸಹ್ಯ ಎಂಬ ನಾಲ್ಕು ಗುಣಗಳನ್ನೂ ಅಡಗಿಸಿ ಮೇಲೆದ್ದಿತು

---

277. 'ಓವಿಯನಾನ್ ಮುಕನ್ಎಟುತ ಒಣ್ಣಾಮೈ ಉಳ್ಳತ್ತಾಲ್
ಮೇವಿಯತನ್ ವರುತ್ತಮುಱ ವಿತಿತ್ತತೊರು ಮಣಿವಿಳಕ್ಕೋ ?
ಮೂವುಲಕಿನ್ ಪಯನಾಕಿ ಮುನ್ನಿನ್ಱ' ತೆನ ನಿನೈನ್ತು
ನಾವಲರ್ ಕಾವಲರ್ ನಿನ್ಱಾರ್ ನಟುನಿನ್ಱಾರ್ ಪಟೈಮತನಾರ್.

278. ತಣ್ಣರಳ ಮಣಿತ್ತೋಟುಮ್ ತಕ್ಕೈತ್ತೋಟುಮ್ ಕಟೈಪಿಱಟುಮ್
ಕೆಣ್ಡೈನೆಟು ಙ್ಕಣ್ವಿಯಪ್ಪ ಕ್ಕೆಳರ್ಒಳಿಪ್ಪೂಣ್ ಉರವೋನೈ
ಅಣ್ಣಲ್ಪಿರಾನ್ ತಿರುವರುಳಾಲ್ ಅಯಲ್ಅಱಿಯಾ ಮನಮ್ ವಿರುಮ್ಪ
ಪ್ಪೆಣ್ಣೈವಿತಿ ಕಟೈಕೂಟ್ಟ ಪ್ಪರವೈಯಾ ರುಙ್ಕಣ್ಣಾರ್.

279. ಕಣ್ಕೊಳ್ಳಾ ಕ್ಕವಿನ್ಪೊಲಿನ್ತ ತಿರುಮೇನಿ ಕತಿರ್ವಿರಿಪ್ಪ
ವಿಣ್ಕೊಳ್ಳಾ ಪ್ಪೇರೊಳಿಯಾನ್ ಎತಿರ್ನೋಕ್ಕುಮ್ ಮೆಲ್ಲಿಯಲುಕ್ಕು
ಎಣ್ಕೊಳ್ಳಾ ಕ್ಕಾತಲಿನ್ಮುನ್ ಪೆಯ್ತಾತ ತೊರುವೇಟ್ಕೈ
ಮಣ್ಕೊಳ್ಳಾ ನಾಣ್ಮಟಮ್ಅಚ್ಚನ್ಪಯಿರ್ಪ್ಪೈ ವಲಿನ್ತಿಟಲುಮ್.

280. ನಂಬಿಯನ್ನು ನೋಡಿದ ಆಕೆಯು ಈತನು ಜ್ಯೋತಿರ್ಮಯನಾದ ಸುಬ್ರಹ್ಮಣ್ಯಸ್ವಾಮಿಯೋ, ತನಗೆ ಸಮಾನವಿಲ್ಲದ ಮನ್ಮಥನೋ, ಬಾಡದ ಮಾಲೆಗಳಿಂದ ಅಲಂಕೃತನಾದ ವಿದ್ಯಾಧರನೋ, ಮಿಂಚಿಗೆ ಸಮಾನವಾದ ಜಡೆಗಳಿಂದ ಕೂಡಿದ ಶಿವ ಪರಮಾತ್ಮನ ನಿಜವಾದ ಕೃಪೆಯನ್ನು ಪಡೆದವನೋ, ತನ್ನ ಮನಸ್ಸನ್ನು ಕದಲಿಸಿದ ಈತನು ಯಾರಿರಬಹುದು ? ಎಂದು ತನ್ನಲ್ಲಿ ಹಲಬಗೆಯಾಗಿ ಚಿಂತಿಸಿದಳು.

281. ಮಹಾತ್ಮನಾದ ನಂಬಿಯ ಮೇಲುಂಟಾದ ಎಲ್ಲೆಯಿಲ್ಲದ ಪ್ರಣಯ ಕಾರಣವಾಗಿ, ಮೊದಲೇ ತನ್ನಲ್ಲಿ ಪರಿಪೂರ್ಣತೆಯನ್ನು ಪಡೆದಿದ್ದ ಲಜ್ಜೆಯೇ ಮೊದಲಾದ ಸ್ತ್ರೀಸಹಜವಾದ ನಾಲ್ಕು ಗುಣಗಳು ಒಂದು ಪಕ್ಕವಾಗಿ ಅಡಗಿ ಹೋದಾಗಲೂ, ಸುಂದರ ವಾದ ಹೂವಿನ ವಾಸನೆ ತುಂಬಿದ ಕಪ್ಪುಕೂದಲುಳ್ಳ, ಲತೆಯಂತೆ ಕೋಮಲಳಾದ ಮುಗ್ಧಸ್ವಭಾವದ ಪರವೆಯನ್ನು ಶಕ್ತಿಯುಳ್ಳವಳನ್ನಾಗಿ ಮಾಡಿ, ಫಾಲನೇತ್ರನಾದ ಪರಶಿವನನ್ನು ಸೇರಿ ನಮಿಸಬೇಕೆಂದು ಈಶಭಕ್ತಿಯೇ ಆಧಾರವಾಗಿ ಹಿಡಿದುಕೊಂಡು ಹೋಗುವಂತೆ ತನ್ನ ವಶಪಡಿಸಿಕೊಂಡು ಹೋಗಲು,

282. ಧನುರ್ಧಾರಿಯಾಗಿ ಯುದ್ಧಸನ್ನದ್ಧನಾದ ಮನ್ಮಥನಿಂದ ಎಸೆಯಲ್ಪಟ್ಟ ಅನೇಕವಾದ ಬಾಣಗಳು ತನ್ನನ್ನು ಎಲ್ಲಾ ಪಕ್ಕಗಳಲ್ಲಿಯೂ ಸುತ್ತಿ ನಿರೋಧಿಸಿದರೂ, ಆ ತಡೆಗಳನ್ನು ಶಿವಭಕ್ತಿಯ ಆಧಾರದಿಂದ ದಾಟಿ, ತಾನು ತಲೆಯಲ್ಲಿ ಮುಡಿದ ಹೊಸ ಹೂಮಾಲೆಗಳಿಗೆ ತುಂಬಿಗಳು ಮುಸುರಿ ಝೇಂಕರಿಸುತ್ತಿರಲು, ಮುಂದೆ ಹೋಗಿ ಶಿವ ಪರಮಾತ್ಮನು ನೆಲಸಿರುವ 'ಪೂಂಗೋಯಿಲ್' ಎಂಬ ಆಲಯವನ್ನು ಪರವೆಯು ಪ್ರವೇಶಿಸಿದಳು.

---

280. ಮುನ್ನೇವ ನ್ತಿರ್ತೋನ್ಱುಮ್ ಮುರುಕನೋ ? ಪೆರುಕೊಳಿಯಾಲ್
ತನ್ನೇರಿಲ್ ಮಾರನೋ ? ತಾರ್ಮಾರ್ಪಿನ್ ವಿಙ್ಚ್ಚೈಯನೋ ?
ಮಿನ್ನೇರ್ಚ ಇಚ್ಚೈಅಣ್ಣಲ್ ಮೆಯ್ಯರುಳ್‌ಪೆ ಱ್ಱೈಯವನೋ ?
ಎನ್ನೇ! ಎನ್ ಮನನ್ತಿರಿತ್ತ ಇವನ್‌ಯಾರೋ' ಎನ ನಿನ್ನೈನ್ತಾರ್.

281. ಅಣ್ಣಲವನ್ ತನ್‌ಮರುಙ್ಕೇ ಅಳವಿಱನ್ತ ಕಾತಲಿನಾಲ್
ಉಣ್ಣಿಱೈಯುಮ್ ಕುಣನಾನ್‌ಕುಮ್ ಒರುಪುಟೈಚಾಯ್ ನ್ತನವನಿನುಮ್
ವಣ್ಣಮಲರ್ ಕ್ಕರುಙ್ಕುನ್ತಲ್ ಮಟಕ್ಕೊಟಿಯೈ ವಲಿತಾಕ್ಕಿ
ಕ್ಕಣ್ಣುತಲ್ಪೈ ತ್ತೊಟುಮ್‌ಅನ್ಪೇ ಕೈಕ್ಕೊಣ್ಟು ಚೆಲವುಯ್‌ಪ್ಪ.

282. ಪಾಙ್ಕ್ಕೋಟೆ ಚ್ಚಿಲೈವಳೈತ್ತು ಪ್ಪಟೈಅನಙ್ಕನ್ ವಿಟುಪಾಣಮ್
ತಾಙ್ಕ್ಕೋಲಿ ಎಮ್ಮರುಙ್ಕುಮ್ ತಟೈಚೆಯ್ಯ ಮಟವರಲುಮ್
ತೇಙ್ಕ್ಕೋತೈ ಮಲರ್‌ಕ್ಕುಟಲ್‌ಮೇಲ್ ಚಿಙ್ಕೈವಣ್ಟು ಕಲನ್ತಾರ್‌ಪ್ಪ
ಪೂಙ್ಕೋಯಿಲ್ ಅಮರ್‌ನ್ತಪಿರಾನ್ ಪೊಙ್ಕ್ಕೋಯಿಲ್ ಪೋಯ್
ಪ್ಪುಕುನ್ತಾಳ್.

283. ಹಾಗೆ ಪರವೆಯು ಪೂಂಗೋಯಿಲನ್ನು ಪ್ರವೇಶಿಸಿದುದನ್ನು ನಂಬಿಯು ನೋಡಿ, 'ನನ್ನ ಮನಸ್ಸನ್ನು ಸೂರೆಗೊಂಡ ನವಿಲಿನಂತೆ ಕಣ್ಣಿಗೆ ಆಪ್ಯಾಯನಕರಳೂ, ಎಳಲತೆಯಂತೆ ಕೋಮಲೆಯೂ ಆದ ಈ ಹೆಣ್ಣು ಯಾರು?' ಎಂದು ಕೇಳಲು, ಅಲ್ಲಿ ನಿಂತ ಭಕ್ತರು, 'ಈಕೆಯೇ ಸ್ತ್ರೀಯರಲ್ಲಿ ಉತ್ತಮಳಾದ ಪರವೆ ಎಂಬಾಕೆಯು, ದೇವತಾ ಸ್ವಭಾವವನ್ನು ಹೊಂದಿದವರಿಗೂ ಪಡೆಯುವುದಕ್ಕೆ ಸಾಧ್ಯವಾಗದವಳು' ಎಂದು ಹೇಳಿದರು.

284. ಆಗ ನಂಬಿಯು ಮನಸ್ಸಿನಲ್ಲಿ ಯೋಚಿಸುವನು. 'ಈಕೆಯ ಹೆಸರು ಪರವೆ. ಈಕೆಯು ದೇವಸಭೆಯೂ ಆಶಿಸುವ ತಿಲೋತ್ತಮೆ ಮೊದಲಾದ ಅಪ್ಸರೆಯರೂ ಸ್ತುತಿಸ ತಕ್ಕ ದೈವವಂತೆ. ಈಕೆಯ ಮೂಗಿನಲ್ಲಿ ಜೋಲುವ ಮೂಗುತಿಯ ಮುತ್ತುಗಳ ಮೇಲ್ಭಾಗದಲ್ಲಿದ್ದು ಪ್ರಕಾಶಿಸುವ ಸುಂದರ ದಂತಪಙ್ತಿಗಳು ಮೊಲ್ಲೆಯ ಮೊಗ್ಗುಗಳಂತೆ ಇವೆ. ಎಂಥವರೂ ಆಶಿಸತಕ್ಕ ಮನೋಹರವಾದ ಆಕೃತಿಯಿರುವ ಈಕೆಯ ಚೆಲುವಿನ ಪಸರಿಕೆಯ ಎಡೆಯಲ್ಲಿ ಸಿಕ್ಕಿಕೊಂಡ ನನ್ನ ಆಸೆಯು ಸಪ್ತಸಾಗರದಂತೆ ಸೀಮಾತೀತ ವಾಗಿದೆ'.

285. ಮೇಲೆ ಹೇಳಿದಂತೆ ಕೊಂಡಾಡಿ, ಇವುಗಳಂತಿರುವ ಇನ್ನೂ ಹಲವೆಣಿಕೆ ಗಳನ್ನು ಎಣಿಸಿದವನಾಗಿ, ತನ್ನ ಈಶನು ಅನುಗ್ರಹಿಸಿದ ಕೃಪೆಯಿಂದ, ಪುರಾತನವಾದ ವಿಧಿಯಿಂದ ಕಟ್ಟುಪಟ್ಟವನಾಗಿ, 'ನನ್ನನ್ನು ಆಳಾಗಿಸಿಕೊಂಡ ಈಶನೆಡೆಯಲ್ಲಿಯೇ ಹೋಗಿ ಸೇರುವೆನು' ಎಂಬ ಅಭಿಪ್ರಾಯದಿಂದ ಮನಸ್ಸಿನಲ್ಲಿ ಸಂತೋಷದಿಂದ ಕೂಡಿ ಹೋಗುವವನಾಗಿ, ಎಲ್ಲರನ್ನೂ ಆಳಾಗಿಸಿಕೊಂಡ ನಂಬಿಯು ದೇವದೇವನಾಗಿರುವ ಪರಮೇಶನ ದೇಗುಲವನ್ನು ಪ್ರವೇಶಿಸಿದನು. ಆಗ—

---

283. ವನ್‌ಱೊಣ್ಡಾರ್ ಅತುಕಣ್ಡು 'ಎನ್ ಮನಙ್ಕೊಣ್ಡ ಮಯಿಲಿಯಲಿನ್
ಇನ್‌ತೊಣ್ಡೈ ಚ್ಚೆಙ್ಕನಿವಾಯ್ ಇಳಙ್ಕೊಟಿತಾನ್ ಯಾರ್' ಎನ್ನ,
ಅನ್‌ಱಙ್ಕು ಮುನ್‌ನಿನ್‌ಱಾರ್ 'ಅವರ್‌ನಙ್ಕೈ ಪರವೈಯಾರ್
ಚೆನ್‌ಱುಮ್ಬರ್ ತರತ್ತಾರ್‌ಕ್ಕುಮ್ ಚೇರ್‌ವರಿಯಾರ್' ಎನಚ್ಚೆಪ್ಪ,

284. 'ಪೇರ್‌ಪರವೈ ಪೆಣ್ಮೈಯಿನಿಲ್ ಪೆರುಮ್ಬರವೈ ವಿರುಮ್ಬುಲ್ ಕುಲ್
ಆರ್‌ಪರವೈ ಅಣಿತಿಕಟುಮ್ ಮಣಿಮುಱುವಲ್ ಅರುಮ್ಬರವೈ
ಚೀರ್‌ಪರವೈ ಆಯಿನಾಳ್ ತಿರುವುರುವಿನ್ ಮೆನ್‌ಚಾಯಲ್
ಏರ್‌ಪರವೈ ಇಟೈಪ್ಪಟ್ಟ ಎನ್ ಆಚೈ ಎಟುಪರವೈ'.

285. ಎನ್‌ಱಿನ್ನೈಯ ಪಲವುನಿನೈ ನ್ತೆಮ್ಬೆರುಮಾನ್ ಅರುಳ್‌ವಕೈಯಾನ್,
ಮುನ್‌ತೊಟರ್‌ನ್ತು ವರುಙ್ಕಾತಲ್ ಮುಱೈಮೈಯಿನಾಲ್ ತೊಟಕ್ಕುಣ್ಡು,
'ನನ್‌ಱಿನೈಯಾಟ್ ಕೊಣ್ಡವರ್‌ಪಾಲ್ ನಣ್ಣುವನ್' ಎನ್ ಉಳ್
ಮಕಿಟ್‌ನ್ತು,
ಚೆನ್‌ಱುಟೈಯ ನಮ್ಬಿಯುಮ್ಪೋಯ್ ತ್ತೇವರ್‌ಪಿರಾನ್ ಕೋಯಿಲ್ ಪುಕ,

286. ದೇವಾಲಯವನ್ನು ಪ್ರವೇಶಿಸಿದ್ದ ಪರವೆಯು ದೇವರಿಗೆ ಪ್ರದಕ್ಷಿಣವಾಗಿ ಬಂದು ಪರಮೇಶ್ವರನನ್ನು ನಮಿಸಿ, ಸ್ತುತಿಸಿ, ತನ್ನ ಪದ್ಧತಿಯಂತೆ ಪ್ರಾರ್ಥನೆಯನ್ನು ಮುಗಿಸಿಕೊಂಡು, ನಂಬಿಯು ದೇವಾಲಯವನ್ನು ಪ್ರವೇಶಿಸುವ ಮೊದಲೇ, ಅಲ್ಲಿಂದ ಬೇರೊಂದು ಪಕ್ಕವಾಗಿ ಹೊರಗೆ ಬಂದಳು. ತನ್ನಲ್ಲಿ ಪ್ರಬಲಗೊಂಡ ಆಸೆಯಿಂದ ಮೃದು ಸ್ವಭಾವವುಳ್ಳ ಪರವೆಯನ್ನು ತನಗೆ ತಂದುಕೊಡುವಂತೆ ನಂಬಿಯಾರೂರನು ಹಾವಿನ ಮಾಲೆಯನ್ನು ಧರಿಸಿಕೊಂಡ ಪರಮೇಶ್ವರನ ಪಾದಪದ್ಮಗಳನ್ನು ನಮಿಸಿದನು.

287. ಈ ರೀತಿಯಲ್ಲಿ ನಮಿಸಿ, ಸ್ತುತಿಸಿ, ಸುಂದರವಾದ ತಿರುವಾರೂರಿನಲ್ಲಿ ಹುತ್ತದಲ್ಲಿ ನೆಲಸಿದ ನೀಲಕಂಠನಾದ ಪರಶಿವನ ಸನ್ನಿಧಿಯಿಂದ ಹೊರಟು ಬಂದು ತನ್ನ ಇನಿದಾದ ಉಸಿರಿನಂತಿರುವ ಪರವೆಯು ಎಲ್ಲಿ ಹೋದಳು ಎಂದು ಕೆಂಪಗಾದ ಬಾಯಿಯೂ ಬಿಳಿದಾದ ಉಗುರುಗಳೂ ಉಳ್ಳ ಆ ಪರವೆಯನ್ನು ಹುಡುಕಲು ನಂಬಿಯು ಮುಂದಾದನು.

288. ಕರ್ಮಪಾಶದ ಬಂಧನವನ್ನು ತುಂಡರಿಸುವುದಕ್ಕಾಗಿ ತನ್ನೆಡೆಯಲ್ಲಿ ಹೆಚ್ಚಾಗಿ ವರ್ಧಿಸಿರುವ ಈಶ್ವರ ಸೇವೆಯ ಆಶೆಯನ್ನೂ ಕೆಳಪಡಿಸಿಕೊಂಡು ಅದರ ಮೇಲೂ ಒಂದು ಆಶೆಯನ್ನು ಕೊಡುವ ಸ್ಥಿರವಾದ ತನ್ನ ಮನಸ್ಸು ಚಾಂಚಲ್ಯವನ್ನು ಹೊಂದುವಂತೆ ತನಗೆ ಕಾಣಿಸಿಕೊಂಡ ಪರಮೇಶ್ವರನ ಪೂರ್ಣಕಟಾಕ್ಷದಂತಿದ್ದ ಆ ಪರವೆಯು ಯಾವ ದಾರಿಯಲ್ಲಿ ಹೋದಳು ?

---

286. ಪರವೈಯಾರ್ ವಲಙ್ಕೊಣ್ಡು ಪಣಿನ್ದೇತ್ತಿ ಮುನ್‌ನರೇ
ಪುರವಲನಾರ್ ಕೋಯಿಲಿನಿನ್ ಱೊರುಮರುಙ್ಕು ಪುಱಪ್ಪಟ್ಟಾರ್.
ವಿರವುಪೆರು ಙ್ಕಾತಲಿನಾಲ್ ಮೆಲ್ಲಿಯಲಾರ್ ತಮೈವೇಣ್ಡಿ
ಅರವಿನ್ ಆ ರಮ್ಪುನೈನ್ದಾರ್ ಅಡಿಪಣಿನ್ದಾರ್ ಆರೂರರ್.

287. ಅವ್ವಾರು ಪಣಿನ್ದೇತ್ತಿ 'ಅಣಿ ಆರೂರ್ ಮಣಿಪ್ಪುಱ್ಱಿನ್
ಮೈವಾಟು ನ್ದಿರುಮಿಡಱ್ಱು ವಾನವರ್‌ಪಾಲ್ ನಿನ್‌ಱುಮ್ ಪೋನ್ದು
ಎವ್ವಾರು ಚೆನ್‌ಱಾಳ್‌ಎನ್ ಇನ್‌ನುಯಿರಾಮ್ ಅನ್‌ನಮ್' ಎನ
ಚ್ಚೆವ್ವಾಯ್‌ವೆಣ್ ನಕೈಕ್ಕೊಡಿಯೈ ತ್ತೇಡುವಾ ರಾಯಿನಾರ್.

288. 'ಪಾಚ ಮಾಮ್‌ವಿನೈ ಪ್ಪಱ್ಱಱು ಪ್ಪಾನ್‌ಮಿಕುಮ್
ಆಚೈ ಮೇಲುಮ್‌ಓರ್ ಆಚೈ ಅಳಿಪ್ಪತೋರ್
ತೇಚಿನ್ ಮನ್‌ನಿಎನ್ ಚಿನ್ದೈ ಮಯಕ್ಕಿಯ
ಈಚ ನಾರ್‌ಅರುಳ್ ಎನ್ನೆಱಿ ಚ್ಚೆನ್‌ಱತೇ.

289. ದೇವದೇವನಾದ ಪರಮೇಶ್ವರನ ಶ್ರೀಪಾದಗಳನ್ನಲ್ಲದೆ ಬೇರೊಂದನ್ನು ನಂಬುವ ಪದ್ಧತಿಯಿಲ್ಲದ ತನ್ನ ಚಿತ್ತವನ್ನು ಕದಲಿಸಿ, ಹೆಚ್ಚಾದ ಪರವಶತೆಯನ್ನು ತಂದು ತನ್ನನ್ನು ಲತೆಯಂತೆ ಅಲುಗಿಸಿ, ಪರಮೇಶ್ವರನ ಅನುಗ್ರಹ ರೂಪದಂತೆ ಇಂದು ತನ್ನ ಮುಂದೆ ಬಂದ ಪರವೆಯು ಯಾವ ದಾರಿಯಲ್ಲಿ ಹೋದಳು ?

290. ಬಂಧಪಾಶವನ್ನೂ ಮೋಕ್ಷವನ್ನೂ ತರುವ ಪರಮೇಶ್ವರನ ಶ್ರೀಪಾದಗಳನ್ನು ಅನನ್ಯ ಭಕ್ತಿಯಿಂದ ಎಣಿಸುವ ತನ್ನ ಚಿತ್ತದೊಳಗೆ ಬಂದು ಹೊಕ್ಕು, ಮನವನ್ನು ಸೂರೆಗೊಂಡು ಜಿಂಕೆಯಂತೆ ನೋಟವನ್ನು ಬೀರಿ, ತನ್ನ ಈಶ್ವರನ ಅನುಗ್ರಹವೇ ಮೈದೋರಿದಂತಿರುವ ಪರವೆಯು ಎಲ್ಲಿ ಸೇರಿದಳು ?

291. ಮೇಲೆ ಹೇಳಿದ ರೀತಿಯಲ್ಲಿ ಹಲವನ್ನು ಚಿಂತಿಸಿ ಅಧಿಕವಾಗುತ್ತಿರುವ ಸಂತಾಪವನ್ನು ಸಹಿಸಲಾರದವನಾಗಿ, ತನ್ನ ಉಸಿರಾದ ಪರವೆಯು ಎಲ್ಲಿ ನಿಂತಿರುವಳು ? ಎಂದು ಮುತ್ತುಗಳಿಂದ ಪುದಿದ ಆಭರಣಗಳಿಂದ ಅಲಂಕರಿಸಲ್ಪಟ್ಟ ಮಾಲೆಗಳನ್ನೂ ಸುವಾಸನೆ ಕೂಡಿದ ಸುಂದರವಾದ ತಲೆಕೂದಲನ್ನೂ ಉಳ್ಳ ಪರವೆಯನ್ನು ಹುಡುಕುವುದಕ್ಕಾಗಿ ಹೊರಟು ನಂಬಿಯು ದೇವಾಚಾರ್ಯ ಮಂಟಪವನ್ನು ಸೇರಿದನು.

---

289. 'ಉಮ್ಬರ್ ನಾಯಕರ್ ತಙ್ಕಟಲ್ ಅಲ್ಲತು
ಶಮ್ಬು ಮಾಱಱಿ ಯೇನ್ನೈ ನಟುಕ್ಕುಱಿ
ಪಮ್ಬು ಮಾಲ್ಚೆಯ್ತು ವಲ್ಲಿಯಿನ್ ಒಲ್ಕಿಯಿನ್ಱು
ಎಮ್ಬಿ ರಾನ್ಅರುಳ್ ಎನ್ನೆಱ್ ಚ್ಚೆನ್ಱತೇ'.

290. 'ಪನ್ತಮ್ ವೀಟು ತರುಮ್ಬರ ಮನ್ಕಟಲ್
ಚಿನ್ತೈ ಆರವುಮ್ ಉನ್ನುಮ್ಎನ್ ಚಿನ್ತೈಯೈ
ವನ್ತು ಮಾಲ್ಚೆಯ್ತು ಮಾನ್ಎನ ನೇವಿಱೆತ್ತು
ಎನ್ತೈ ಯಾರ್ಅರುಳ್ ಎನ್ನೆಱ್ ಚ್ಚೆನ್ಱತೇ'.

291. ಎನ್ಱು ಚಾಲವುಮ್ ಅಙ್ಙಲರ್ 'ಎನ್ನುಯಿರ್
ನಿನ್ಱ ತೆಱ್ ಕೆನ ನಿತ್ತಿಲ ಪೂಣ್ಮುಲೈ
ಮನ್ಱಿಲ್ ವಾರ್ಕುಟಲ್ ವಞ್ಚಿಯೈ ತ್ತೇಟುವಾನ್
ಚೆನ್ಱು ತೇವಾ ಚಿರಿಯನೈ ಚ್ಚೇರ್ನ್ತಪಿನ್,

292. ಕನ್ನೈಯಿಂದಲೆಯ ಮಲರೇ ನೇರವಾಗಿ ಇದಿರಾಗಿ ಬರುತ್ತಿರುವುದೋ ಎಂದು ಹೇಳತಕ್ಕ ಕಣ್ಣುಗಳಿರುವ ಪರವೆಯನ್ನು ಪಡೆಯುವವನಾದ ನಂಬಿಯು, ಯಾರೊಬ್ಬ ರೊಡನೆಯೂ ಒಂದು ಮಾತನ್ನೂ ಹೇಳದೆ ಅಲ್ಲೇ ಇದ್ದು ತಿರುವಾರೂರನ್ನು ರಾಜಧಾನಿ ಯಾಗಿ ಮಾಡಿಕೊಂಡು ಇರುವಂತಹ ಪರಮೇಶ್ವರನು, ಇನಿಯೆಯೂ ಸುಂದರಿಯೂ ಆದ ಪರವೆಯನ್ನು ತನಗೆ ತಂದು ಕೊಟ್ಟು ಆ ಮೂಲಕವಾಗಿ ತನ್ನ ಉಸಿರನ್ನು ತನಗೆ ಕೊಡುವನು ಎಂದು ಹೇಳಿಕೊಂಡಿರುವ ಹೊತ್ತಿನಲ್ಲಿ,

293. ಲೋಕದಲ್ಲಿ ಶುಭ್ರವಾದ ಕೀರ್ತಿಯನ್ನು ನೆಲೆನಿಲ್ಲಿಸುವ ತಿರುನಾವಲೂರಿ ನವನಾದ ನಂಬಿಯ ಮನವು ಬಯಸಿದ ಮಿಂಚಿನಂತಿರುವ ನಡುವಿನಿಂದ ಕೂಡಿದ ಪರವೆ ಯೆಂಬ ಇನಿದಾದ ಅಮೃತವನ್ನು ಕಡಲನ್ನು ದಾಟಿ ಹೋಗಿ ತೋರಿಸುವೆನು ಎಂದು ಹೊರಟುಬಿಡುವಂತೆ ಬೇರೆ ಬೇರೆ ಬಣ್ಣಗಳುಳ್ಳ ಏಳು ಕುದುರೆಗಳನ್ನು ಹೂಡಿದ ತೇರಿನಲ್ಲಿ ಬರುವ ಸೂರ್ಯನು ಪಶ್ಚಿಮ ಸಮುದ್ರವನ್ನು ಸೇರಲು,

294. ಆಗ ಬೇರಾಗದೆ ತಮ್ಮೊಡನೆ ಕೂಡಿದ ಕೋಮಲವಾದ ಸ್ವಭಾವವುಳ್ಳ ಹೆಣ್ಣು ಪಕ್ಷಿಗಳಿಂದ ಕೂಡಿ, ಹಲವೆಡೆಗಳಲ್ಲಿ ಆಹಾರವನ್ನು ಹುಡುಕಿ ತಂದು ಕೊಳಗಳಲ್ಲಿ ಔತಣವನ್ನು ಮಾಡಿ ಮಧುರವಾಗಿ ಕಾಲವನ್ನು ಕಳೆದು ಪಕ್ಷಿಜಾತಿಗಳು ತಾವು ತಾವು ಸೇರಿ ತಂಗುವುದಕ್ಕಾಗಿ ಗೂಡುಗಳನ್ನು ಹೋಗಿ ಸೇರಲು, ವಿರಹಿಗಳಾದವರು ಅಂಜಿ ನಡುಗಲು ಸಂಧ್ಯಾಕಾಲವು ಬಂದು ಸೇರಿತು.

---

292. ಕಾವಿ ನೇರ್‌ವರು ಙ್ಕಣ್ಣಿಯೈ ನಣ್ಣುವಾನ್
ಯಾವ ರೋಟುಮ್ ಉರೈಇಯುಮ್ ಪಾತಿರುನ್ತು
'ಆವಿ ನಲ್‌ಕುವರ್ ಆರೂರೈ ಆಣ್ಟವರ್
ಪೂವಿನ್ ಮಙ್ಕೈಯೈ ತ್ತನ್ತು' ಎನುಮ್ ಪೋೞ್ತಿನಿಲ್,

293. ನಾಟ್ಟು ನಲ್‌ವಿೞೈ ನಾವಲೂ ರನ್‌ಚಿನ್ತೈ
ವೇಟ್ಟ ಮಿನ್‌ನಿಟೈ ಇನ್‌ನಮು ತತ್ತಿನೈ
ಕ್ಕಾಟ್ಟು ವನ್‌ಕಟ ಲೈಕ್ಕಟ ನ್ತೆನ್‌ಪ್ಪೋಲ್
ಪೂಟ್ಟುವಾ್ ಏೞ್‌ಪರಿ ತ್ತೇರೋನ್ ಕಟಲ್‌ಪುಕ.

294. ಎಯ್ತ್ತು ಮೆನ್‌ಪೆಟ್ಟೈ ಯೋಟೆಯ್ತೈ ತೇರ್‌ನ್ತುಣ್ಟು
ಪೊಯ್‌ಕೈ ಯಿಙ್ಕಲ್ ಪೋಕ್ಕಿಯ ಪುಳ್ಳಿನಮ್
ವೈಕು ಚೇಕ್ಕೈಕಣ್ ಮೇಏಚಿಲ ವನ್ತತು
ಪೈಯುಳ್ ಮಾಲೈ ತಮಿಯೋರ್ ಪನಿಪ್ಪುಏ.

295. ಹತ್ತಿಯಂತೆ ಮೃದುಪಾದಗಳಿರುವ ಬೊಂಬೆಗಳಿಗೆ ಸಮಾನರಾದ ದುಷ್ಟ ಸ್ತ್ರೀಯರ ಹೃದಯ, ವಂಚನೆಯನ್ನು ಮಾಡುವ ದುರ್ಜನರ ಬಲವಾದ ಕರ್ಮ, ಶಿವ ಪಂಚಾಕ್ಷರವನ್ನು ನೆನೆಯದ ಅಜ್ಞಾನಿಗಳ ಹೃದಯ – ಇವುಗಳಂತೆ ವಿಶಾಲವಾದ ಆಕಾಶವು ಕತ್ತಲೆಯನ್ನು ಹೊಂದಿತು.

296. ದೋಷವಿಲ್ಲದ ಮನಸ್ಸಿನಿಂದ ಕೂಡಿದ, ಬಲಾತ್ಕಾರದಿಂದ ಆಳಾಗಿಸಿಕೊಂಡ ನಂಬಿಯಾರೂರನು ಹೀಗೆ ವ್ಯಸನಪಡುತ್ತಿರಲು, 'ಮುರಿದು ಹೋಗುವುದೆಂಬ ಶಂಕೆಯನ್ನು ತರುವ ಸಪೂರವಾದ ನಡುವುಳ್ಳ ಸ್ತ್ರೀಯರ ಆಶೆಯಿಂದ ನೀಗಿ ಯಾರು ಬಾಳಬಲ್ಲರು ?' ಎಂಬ ಅಭಿಪ್ರಾಯದೊಡನೆ, ಸುವಾಸನಾಯುಕ್ತವಾದ ಹೂಗಳಿಂದ ಅಲಂಕೃತವಾದ ಇರುಳು ಎನ್ನುವ ಹೆಣ್ಣು ಮೊದಲೇ ತಾನು ಧರಿಸಿಕೊಂಡ ಮುಗುಳು ನಗೆಯೋ ಎಂದು ಕಾಣುವಂತೆ ಬಿಳಿದಾದ ಬಾಲಚಂದ್ರನ ಕಾಂತಿಯು ಪಸರಿಸಿತು.

297. ಕೇಡನ್ನು ಮಾಡುವ ದುರ್ಜನರಿಗೆ ವ್ಯಸನಪಟ್ಟು, ತಮ್ಮ ಉಸಿರಿನಂತಿರುವ ಪ್ರಿಯರು ತಮ್ಮನ್ನು ಸ್ಪರ್ಶಿಸುವಾಗ ಸಂತೋಷವನ್ನು ಹೊಂದುವ ಸತ್ಕುಲೀನರಾದ ಹೆಣ್ಣುಗಳಂತೆ, ಎಲ್ಲೆಡೆಗಳಲ್ಲಿಯೂ ವ್ಯಾಪಿಸಿ ಉಷ್ಣವನ್ನುಂಟುಮಾಡುವ ಸೂರ್ಯನ ಕಿರಣ ಹಸ್ತಗಳು ಬೀಳಲು ಹೂಗಳು ಬಾಡಿ ಮುಚ್ಚಿದುವು. ಶೀತಲವಾದ ಚಂದ್ರನ ಕಿರಣ ಹಸ್ತಗಳು ಮುಟ್ಟಿದಾಗ ಅವು ಅರಳಿದುವು.

---

295. ಪಞ್ಞಿನ್ ಮೆಲ್ಲಟಿ ಪ್ಪಾವೈಯರ್ ಉಳ್ಳಮುಮ್
ವಞ್ಚ ಮಾಕ್ಕಳ್‌ತಮ್ ವಲ್ವಿನೈ ಯುಮ್ಮರನ್
ಅಞ್ಜೆ ಟುತ್ತುಣರಾ ಅಱಿವಿಲೋರ್
ನೆಞ್ಜುಮ್ ಎನ್ನ ಇರುಣ್ಡತು ನೀಣ್ಡವಾನ್.

296. 'ಮಱುವಿಲ್ ಚಿನ್ತೈಯನ್ ಆಟ್ಕೊಣ್ಡರ್ ವರುನ್ತಿನಾಲ್
ಇಱುಮ ರುಙ್ಗುಲಾರ್ ಕ್ಕಿಯಾರ್‌ಪಿಟೈ ಪ್ಪಾರ್' ಎನ್ಱು
ನಱುಮ ಲರ್‌ಕ್ಕುಙ್ಗುಲ್ ನಙ್ಗೈಯುಮ್ ಕೊಣ್ಡವುನ್
ಮುಱುವಲ್ ಎನ್ನ ಮುಕಿಟ್ತ್ತತು ವೆಣ್ಣಿಲಾ.

297. ಅರನ್ತೈ ಚೆಯ್ವಾರ್ ಕ್ಕಟುಙ್ಕಿತ್ತಮ್ ಆರುಯಿರ್
ವರನ್‌ಕೈ ತೀಣ್ಡ ಮಲರ್‌ಕುಲ ಮಾತರ್‌ಪೋಲ್
ಪರನ್ತ ವೆಮ್ಪಕಱ್ ಕೊಳ್ಕಿ ಪ್ಪನಿಮತಿ
ಕ್ಕರಙ್ಗಳ್ ತೀಣ್ಡ ಅಲರ್‌ನ್ತ ಕಯಿರವಮ್.

298. ಈ ಲೋಕದಲ್ಲಿ ಜನಿಸುವಂತೆ ಪರಮೇಶ್ವರನು ಪ್ರೇರಿಸುವ ಜೀವರುಗಳಿಗೆಲ್ಲಾ ಪರಿಶುದ್ಧತೆಯನ್ನೂ, ಹಿರಿದಾದ ಸುಖವನ್ನೂ, ಶೀತಲತೆಯನ್ನೂ ಕೊಟ್ಟು ಹೋಗುವುದು ಮಾತ್ರವಲ್ಲದೆ, ಬೇರೆ ಎಲ್ಲಾ ಲೋಕಗಳಲ್ಲಿಯೂ ವ್ಯಾಪಿಸಿ ನೆಲಸುವ ಈಶ್ವರನ ಮಹಿಮಾಯುತವಾದ ವಿಭೂತಿಯಂತೆ ಬಿಳಿಯ ಚಂದ್ರಿಕೆಯು ಶೋಭಿಸಿತು.

299. ತಟಾಕದಲ್ಲಿ ಹಗಲು ಹೊತ್ತನ್ನು ಕಳೆದ ಪಕ್ಷಿಜಾತಿಗಳು ಸಂಜೆಯಲ್ಲಿ ಗೂಡನ್ನು ಸೇರಿದುವು. ಆದುದರಿಂದ ಆ ಪಕ್ಷಿಜಾತಿಗಳ ದನಿಯು ಅಡಗಿದ ಕಾಲವಾದ ಸಂಜೆ ಹೊತ್ತಿನಲ್ಲಿ ನಂಗೈ ಪರವೆಯ ಮೇಲಿನ ಆಸೆಯು ನಂಬಿಯಾರೂರನ ಉಸಿರನ್ನು ಸುತ್ತಿ ವ್ಯಾಪಿಸಿತು.

300. 'ನನ್ನ ತಂದೆಯು ಹಣೆಗಣ್ಣಿನ ಬೆಂಕಿಯಲ್ಲಿ ಬೆಂದುಹೋದ ಮನ್ಮಥನು ಪುನಃ ಆಕಾರವನ್ನು ಹೊಂದಿ ಹೊರಬಂದು ನನ್ನ ಮುಂದೆ ನಿಂತು ಬಾಣವನ್ನೆಸೆಯುವ ಶಕ್ತಿಯುಳ್ಳವನಾಗುವುದೋ ? ನನ್ನ ತಂದೆಯು ಕೃಪೆಯು ಇಂತಹುದೋ ?' ಎಂದು ವ್ಯಸನಪಟ್ಟು ಮರುಗಿ ಪುನಃ ನಂಬಿಯು ಹೇಳುವನು.

---

298. ತೋಱ್ಱುಮ್ ಮನ್‌ನುಯಿರ್ ಕಟ್ಕೆಲಾ ನ್ತೂಯ್‌ಮೈಯೇ
ಚಾಱ್ಱುಮ್ ಇನ್‌ಪಮುಮ್ ತಣ್‌ಮೈಯುಮ್ ತನ್ತುಪೋಯ್
ಆಱ್ಱ ಅಣ್ಟಮೆ ಲಾಮ್ಪರ ನ್ತಣ್ಣಲ್‌ವೆಣ್
ನೀಱ್ಱಿನ್ ಪೇರೊಳಿ ಪೋನ್‌ಱತು ನೀಳ್‌ನಿಲಾ.

299. ವಾವಿ ಪುಳ್ಳೊಲಿ ಮಾಱಿಯ ಮಾಲೈಯಿಲ್
ನಾವ ಲೂರರುಮ್ ನಙ್ಕೈ ಪರವೈಯಾಮ್
ಪಾವೈ ತನ್ತ ಪಟರ್‌ಪೆರು ಙ್ಕಾತಲುಮ್
ಆವಿ ಚೂಟ್‌ನ್ತ ತನಿಮೈಯುಮ್ ಆಯಿನಾರ್.

300. 'ತನ್ತಿ ರುಕ್ಕಣ್ ಎರಿತಟಿ ಲಿಪ್ಪಟ್ಟ
ವೆನ್ತ ಕಾಮನ್ ವೆಳಿಯೇ ಉರುಚ್ಚೆಯ್ತು
ವನ್ತ್ರನ್ ಮುನ್‌ನಿನ್‌ಱು ವಾಳಿ ತೊಟುಪ್ಪತೇ !
ಎನ್ತೈ ಯಾರ್‌ಅರುಳ್ ಇವ್ವಣ್ಣ ಮೋ ?' ಎನ್‌ಪಾರ್.

301. 'ಶೀತಲವಾದ ಸ್ವಭಾವವುಳ್ಳ ಚಂದ್ರನೇ! ದುಃಖಿತನಾದ ನನ್ನನ್ನು ಕಂಡೂ ನಿನ್ನ ಶೀತಲಸ್ವಭಾವಕ್ಕೆ ವಿರುದ್ಧವಾಗಿ ಗಮನವನ್ನು ನಿಲ್ಲಿಸಿ ಉಷ್ಣಕಿರಣಗಳನ್ನು ಮೇಲೆ ಮೇಲೆ ಪಸರಿಸುವುದೋ? ನನ್ನನ್ನು ತಡೆದು ಆಳಾಗಿ ಮಾಡಿಕೊಂಡ ಪರಮೇಶ್ವರನು ಜಲಮಯವಾದ ಅಲೆಗಳಿಂದ ಕೂಡಿದ ನೀಳವಾದ ಗಂಗೆಯನ್ನು ತಲೆಯಲ್ಲಿ ಧರಿಸಿದ ದೀರ್ಘವಾದ ಜಟಾಭಾಗದಲ್ಲಿ ಕೃಪೆಯಿಂದ ತೆಗೆದು ಧರಿಸಿಕೊಂಡ ಬಿಳಿಯ ಚಂದ್ರನಂತೆ ನೀನಿರುವ ರೀತಿಯು ಇಲ್ಲವಲ್ಲಾ!

302. 'ಮೇಲೆಮೇಲೆಯೂ ಸಮೀಪಿಸಿ ಅಲೆಗಳನ್ನೆಬ್ಬಿಸುವ ಕಡಲೇ! ಇತರ ದೇವತೆಗಳನ್ನೆಲ್ಲಾ ದುಃಖಗೊಳಿಸಿದ ವಿಷವನ್ನು– ನನ್ನನ್ನು ಹಿಂದೆಯೇ ತಡೆದು ಆಳಾಗಿಸಿಕೊಂಡ ಪರಮೇಶ್ವರನೇ ಉಣ್ಣುವಂತೆ ನಿನ್ನ ಅಲೆಗಳೆಂಬ ಕೈಗಳಿಂದ ತೆಗೆದು ನೀಡಿ ಕೊಟ್ಟ ನೀನು ಇಂದು ನನ್ನನ್ನು ಏನು ಮಾಡಲಾರೆ?

303. 'ತಂಪಾದ ದಕ್ಷಿಣಾನಿಲವೇ! ನೀನು ಹುಟ್ಟಿದುದು ನನ್ನ ಒಡೆಯನಾದ ಈಶ್ವರನಿರುವ ಪುದಿಯಮಲೆ (ಅಗಸ್ತ್ಯಮಲೆ) ಯಲ್ಲಿ. ಹಾಗೆ ಹುಟ್ಟಿದೆಡೆಯಿಂದ ಹರಿದು ಬಂದ ದಾರಿಯು ದೈವಭಕ್ತಿಯು ಹೆಚ್ಚಿದ ಚೋಳನಾಡಿನಲ್ಲಿರುವ ತಟಾಕಗಳ ದಾರಿಯುಲ್ಲವೆ? ಹೀಗಿದ್ದೂ ಬಿಸಿಯಾದ ಗಾಳಿಯನ್ನು ಬೀಸುವಂತೆ ನೀನು ಸ್ವಭಾವವನ್ನು ಹೊಂದಿದುದು ಎಲ್ಲಿಯೋ?'

---

301. 'ಆರ್‌ತ್ತಿ ಕಣ್ಣುಮ್ ಎನ್ ಮೇಲ್‌ನಿನ್ ಅಟಿಙ್ಕತಿರ್
ತೂರ್‌ಪ್ಪ ತೇ! ಎನ್ನೈ ತ್ತೊಣ್ಣುಕೊ ಣ್ಣಣ್ಣವರ್
ನೀರ್‌ತ್ತ ರಙ್ಗ ನೆಟುಞ್ಜಟೈಕ್ಕಿಲ್ ನೀಳ್‌ಮುಡಿ
ಚ್ಚಾತ್ತುಮ್ ವೆಣ್ಮತಿ ಪೋನ್‌ಱಿಲೈ ತಣ್ಮತಿ!'

302. ಅಟುತ್ತು ಮೇನ್‌ಮೇಲ್ ಅಲೈತ್ತೆಟುಮ್ ಆಟಿಯೇ!
ತಟುತ್ತು ಮುನ್‌ಎನ್ನೈ ಆಣ್ಡವರ್ ತಾಮ್‌ಉಣ
ಕ್ಕಟುತ್ತ ನಞ್ಜಿನ್ ತರಙ್ಗ ಕ್ಕರಙ್ಗಳಾಲ್
ಎಟುತ್ತು ನೀಟ್ಟುನೀ ಎನ್‌ನೈಇನ್ ಱಿನ್‌ಜೆಯಾಯ್?'

303. 'ಪಿಱನ್ತ ತೆಙ್ಗಳ್ ಪಿರಾನ್‌ಮಲ ಯತ್ತಿಟ್ಟೈ
ಚ್ಚಿಱನ್ತ ಕೈನ್ತತು ತೆಯ್ವನೀರ್ ನಾಟ್ಟನಿಲ್.
ಪುಱಮ್ಪು ಕೈತ್ತಟಮ್ ಪೊಙ್ಗಟಿಲ್ ವೀಚಿಟ
ಮಱಮ್ಪು ಯಿನ್‌ಱತೆ ಙ್ಗೋ? ತಮಿಟಿಲ್ ಮಾರುತಮ್!'

304. ಮೇಲಿನ ಮಾತುಗಳಲ್ಲದೆ ಇನ್ನೂ ಇಂತಹ ರೀತಿಯ ಹಲಮಾತುಗಳನ್ನು ಹಂಬಲಿಸುವಷ್ಟು ಪ್ರಣಯಭಾವದಿಂದ ಕೂಡಿದ ತ್ಯಾಗಿಯಾದ ನಂಬಿಯಲ್ಲಿ ತನ್ನ ಅದೃಷ್ಟವಶದಿಂದ ಸಿಲುಕಿದ ಮನಸ್ಸು ನಿಧಾನಿಸುತ್ತ ಬರಲು ತಾನು ಮಾತ್ರ ಮುಂದೆ ಹೋಗುತ್ತಿರುವ ಹಂಸದಂತಿರತಕ್ಕ ಪರವೈನಾಚಿಯ ಅವಸ್ಥಾಂತರಗಳನ್ನು ಇನ್ನು ಮುಂದೆ ಹೇಳುವೆವು.

305. ಮೇಘದ ಬಣ್ಣದಂತೆ ನೀಲವಾದ ಕಂಠವಿರುವ ತ್ಯಾಗೇಶರ ಪಾದಪದ್ಮಗಳನ್ನು ನಮಿಸಿ, ಆ ವಂದನೆಯ ಫಲವಾಗಿ ಪಡೆದ ಅನುಗ್ರಹದ ಮೂಲಕ ಪತಿಯನ್ನು ಮುಂದೆ ಪಡೆಯುವವಳಂತೆ ಸಖಿಯರು ತನ್ನನ್ನು ಸುತ್ತಿಬರಲು, ತನ್ನಲ್ಲಿ ಹೊಸದಾಗಿ ಬಂದು ಸೇರಿದ ಕಾಲದೊಡನೆ ಸ್ತನಭಾರದಿಂದಾಗಿ ನಡು ಕಂಪಿಸಲು, ಮೆಲ್ಲಡೆಯಿಂದ ಹೋಗುವ ಪರವೆಯು ವನ್‌ತೊಂಡನಾದ ನಂಬಿಯಲ್ಲಿ, ಆತನು ತನ್ನನ್ನೂ ಸಖಿಯರನ್ನೂ ಬಿಟ್ಟು ಪ್ರತ್ಯೇಕವಾಗಿ ಹೋಗಿ ತಿರುಗುವಾಗ, ಮನಸ್ಸಿನಲ್ಲಿ ಬಹುವಾದ ಪರವಶತೆಯನ್ನು ಪಡೆದವಳಾಗಿ ತನ್ನ ಸುಂದರವಾದ ತಿರುಮಾಳಿಗೆಯನ್ನು ಸೇರಿದಳು.

---

304. ಇನ್‌ನ ತನ್‌ಮೈಯ ಪಿನ್‌ನುಮ್ ಇಯಮ್ಬುವಾನ್
ಮುನ್‌ನು ಕಾತಲ ನಾಕಿಯ ವಳ್ಳಲ್‌ಪಾಲ್
ತನ್‌ನ ರುಮ್ಪೆಱಲ್ ನೆಞ್ಜು ತಯಙ್ಗಪ್ಪೋಮ್
ಅನ್‌ನಮ್ ಅನ್‌ನವಳ್ ಚೆಯ್‌ಕೈ ಅಱೈಕುವಾಮ್.

305. ಕನಙ್ಕೊಣ್ಡ ಮಣಿಕಣ್ಟರ್ ಕಟಲ್ವಣಙ್ಗಿ ಕ್ಕಣವನ್ನೈ ಮುನ್
ಪೆಱುವಾಳ್ ಪೋಲ,
ಇನಙ್ಕೊಣ್ಡ ಚೇಟಿಯರ್‌ಕಳ್ ಪುಟೈಚೂಟ ಎಯ್ತ್ತು ಪೆರುಙ್ಗಾತ
ಲೋಟುಮ್,
ತನಙ್ಕೊಣ್ಡು ತಳರ್‌ಮರುಙ್ಗುಱ್ ಪರವೈಯುಮ್‌ವನ್ ಟೊಣ್ಡರ್‌ಪಾಲ್
ತನಿತ್ತು ಚ್ಚೆನ್‌ಱು,
ಮನಙ್ಕೊಣ್ಡು ವರುಮ್ಪೆರಿಯ ಮಯಲ್‌ಕೊಣ್ಡು ತನ್‌ಮಣಿಮಾ ಳಿಕೈಯೈ
ಚ್ಚಾರ್‌ನ್ತಾಳ್.

306. ಅಲ್ಲಿ ಸೇರಿದ ಪರವೆಯು ತನ್ನ ಸಣ್ಣ ಪಾದಗಳಲ್ಲಿ ಅಲಂಕೃತವಾದ ನೂಪುರಗಳು ಆಕೆಯ ಮನಸ್ಸಿನೊಳಗೆ ನಡೆದ ಕಾರ್ಯಗಳನ್ನು ತಿಳಿದುಕೊಂಡವುಗಳಂತೆ, (ಅವೆಲ್ಲಾ ರಹಸ್ಯ ವಿಷಯವಾದುದರಿಂದ) ಅವಕ್ಕೆ ತಕ್ಕುದಾಗಿ ಮೆದುವಾಗಿ ಶಬ್ದಿಸಲು, ತನ್ನ ಮುಂದೆ ನಿಂತ ಬೇರೆ ಯಾರೊಡನೆಯೂ ಮಾತನಾಡದವಳಾಗಿ ಮೆದುವಾಗಿ ಹೆಜ್ಜೆಯನ್ನಿಟ್ಟು ನಡೆದು ಮಾಳಿಗೆಯ ಮೇಲೇರಿ ಹೋಗಿ ಮುಖಮಂಟಪದ ಸಮೀಪ ಮರಕತದಿಂದ ರಚಿಸಿದ ಕಂಬಗಳಿಂದ ಶೋಭಿಸುವ ಸುಂದರವಾದ ಚಂದ್ರಕಾಂತ ಶಿಲೆಯ ದಿಣ್ಣೆಯ ಮೇಲೆ ಅಸಮಾನವಾದ ಹೂವಿನ ಹಾಸಿಗೆಯಲ್ಲಿ ಕುಳಿತಿದ್ದಳು.

307. ಆಮೇಲೆ ತನ್ನ ಸಖಿಯನ್ನು ನೋಡಿ, 'ತಿರುವಾರೂರನ್ನು ಆಳುವ ನೀಲಕಂಠವುಳ್ಳ ತ್ಯಾಗರಾಜ ಪರಮೇಶ್ವರನನ್ನು ನಾವು ನಮಿಸುವಾಗ ದಾರಿಯಲ್ಲಿ ಇದಿರಾಗಿ ಬಂದವನು ಯಾರು?' ಎಂದು ಪರವೆಯು ಕೇಳಲು, 'ಬ್ರಹ್ಮ, ವಿಷ್ಣು ಮೊದಲಾದ ದೊಡ್ಡ ದೇವರುಗಳಿಗೂ ಕಾಣಲು ಸಾಧ್ಯವಿಲ್ಲದ ಶಿವಪರಮಾತ್ಮನು ಈ ಲೋಕದಲ್ಲಿ ಬ್ರಾಹ್ಮಣನಾಗಿ ಮೈದೋರಿ ಬಂದು ವಾದಿಸಿ ಆಳಾಗಿಸಿಕೊಂಡ ನಂಬಿ ಎಂಬವನೇ ಆತನು. ಆತನು ಶೈವಸಮಯಕ್ಕೇ ಮೊದಲಿನವನಾದ ತಿರುತ್ತೊಂಡನಾಗಿರುವನು. ಆತನು ಶಿವಪರಮಾತ್ಮನ ಸಖನು. ಶಿವನಿಂದ ಆಳಾಗಿಸಿಕೊಂಡು ಇತರರನ್ನು ಆಳಾಗಿಸಿಕೊಳ್ಳುವ ಹಿರಿಯ ಭಕ್ತನು' ಎಂದು ಸಖಿಯು ನುಡಿದಳು.

---

306. ಚೀಱಟಿಮೇಲ್ ನೂಪುರಙ್ಙಳ್ ಅಱಿನ್ತನಪೋಲ್ ಚಿಱಿನ್ತನವೇ ಒಲಿಪ್ಪ ಮುನ್ನರ್,
ವೇಱೊರುವರ್ ಉಟನ್ಪೇಚಾಳ್ ಮೆಲ್ಲಅಟಿ ಒತುಙ್ಙಿಮಾ ಳಿಕೈಯಿನ್ ಮೇಲಾಲ್,
ಏಱಿಮರ ಕತತ್ತೂಣ ತ್ತಿಲಙ್ಙುಮಣಿ ವೇತಿಕೈಯಿಲ್ ನಲಙ್ಙೊಳ್ ಪೊಙ್ಙಲ್,
ಮಾಱಿಲ್ಮಲರ್ ಚ್ಚೇಕ್ಕೈಮಿಚ್ಚೈ ಮಣಿನಿಲಾ ಮುನ್ಱಿಲ್ಮರು ಙ್ಙಿರುನ್ತಾಳ್ ವನ್ತು.

307. ಅಮ್ಮಳವಿಲ್ ಅರುಕಿರುನ್ತ ಚೇಟಿತನ್ನೈ ಮುಕನೋಕ್ಕಿ 'ಆರೂರ್ ಅಣ್ಣಲ್,
ಮೈಮಿರವು ಕಣ್ಟರೈನಾಮ್ ವಣಙ್ಙಪ್ಪೋಮ್ ಮಱುಕೆತಿರ್ ವನ್ತವರಾರ್?' ಎನ್ನ,
'ಇಮ್ಮುಲಕಿಲ್ ಅನ್ತಣರಾಯ್ ಇರುವರ್ತೇ ಟೊರುವರ್ತಾಮ್ ಎತಿರ್ನಿನ್ ಱಾಣ್ಟ,
ಚೈವಮುತಲ್ ತಿರುತ್ತೊಣ್ಟರ್; ತಮ್ಪಿರಾನ್ ತೋಟನಾರ್; ಎನ್ಱಾಳ್.

308. ಈ ಉತ್ತರವನ್ನು ಕೇಳಿದೊಡನೆ 'ಅವನು ನಮ್ಮ ಒಡೆಯರಾದ ತ್ಯಾಗೇಶರ ಬಂಧುವೋ ?' ಎಂದು ಕೇಳಿ, ಆ ಮಾತು ಬಾಯಿಂದ ಹೊರಬೀಳುವ ಮೊದಲೇ ವನ್‌ತೊಂಡನೊಡನೆ ಮನಸ್ಸಿನಲ್ಲಿಯೇ ಉಂಟಾದ ಪ್ರೇಮವು ಅಳವುಮೀರಿ ಮೇಲೆ ವರ್ಧಿಸಿದುದರಿಂದ ಮೊದಲೇ ತನ್ನೆಡೆಯಲ್ಲಿ ನೆಲೆಯಾಗಿದ್ದ ನಾಚಿಕೆ ಮೊದಲಾದ ನಾಲ್ಕು ಗುಣಗಳು ಒಂದಾಗಿ ಮಾಯವಾಗಲು ಜೀವ ಒಂದನ್ನೇ ತಾಳಿಕೊಂಡು ಮಿಂಚಿನಂತೆ ಅಲ್ಲಾಡುವ ಸಣ್ಣದಾದ ನಡುವಿರುವ ಪರವೆಯು ನಿಟ್ಟುಸಿರುಬಿಟ್ಟು ಮೃದುವಾದ ಕುಸುಮಶಯ್ಯೆಯಲ್ಲಿ ಬಿದ್ದಳು.

309. ಸುವಾಸನಾಯುಕ್ತವಾದ ಚಂದನಕರ್ದಮವನ್ನು ಪೂಸಿಯೂ, ಉತ್ತಮ ಗಂಧವಿರುವ ಪನ್ನೀರನ್ನು ಮಳೆಯಂತೆ ಸಣ್ಣ ಹನಿಗಳಾಗಿ ಪಕ್ಕಗಳಲ್ಲೆಲ್ಲಾ ಹನಿಸಿಯೂ, ಒದ್ದೆಯಾದ ಶೀತಲವಾದ ಎಳೆತಳಿರುಗಳನ್ನು ಮೈಮೇಲಿಟ್ಟು ಉಪಚರಿಸಿಯೂ ಸಖಿಯರು ಪರವೆಗೆ ಮಾಡಿದ ಉಪಚಾರಗಳೆಲ್ಲಾ ಹಿಂದೆಯೇ ಉಂಟಾದ ದೊಡ್ಡ ಉರಿಗೆ ತುಪ್ಪವನ್ನು ಸುರಿದ ಹಾಗಾಯಿತು. ಅದರ ಮೇಲೆ ಆ ಬೆಂಕಿಯನ್ನು ಮತ್ತೂ ಹೆಚ್ಚಿಸಲು ಆಹಾರವನ್ನು ಕೊಡುವ ಹಾಗೆ ಮನ್ಮಥನೂ ಬಂದು ತನ್ನ ಅಸಮಾನವಾದ ಧನುಸ್ಸಿನ ಪರಾಕ್ರಮವನ್ನು ತೋರಿಸಿ ಪುಷ್ಪಬಾಣಗಳನ್ನು ಮೇಲೆ ಮೇಲೆ ಎಸೆದನು.

---

308. ಎನ್‌ಱುವುರೈ ಕೇಟ್ಟಲುಮೇ 'ಎಮ್ಪಿರಾನ್ ತಮರೇಯೋ !' ಎನ್‌ನಾ
ಮುನ್‌ನಮ್,
ವನ್‌ಱೊಣ್ಟರ್ ಪಾಲ್‌ವೈತ್ತ ಮನಕ್ಕಾತಲ್ ಅಳವಿನ್‌ಱಿ ವಳರ್‌ನ್ದು ಪೊಙ್ಗ,
ನಿನ್‌ಱನಿಱೈ ನಾಣ್‌ಮುತಲಾ ಙ್ಙಣಙ್ಗಳುಟನ್ ನೀಙ್ಗಉಯಿರ್
ಒನ್‌ಱು ನ್ದಾಙ್ಗಿ,
ಮಿನ್‌ಱಿಯಙ್ಗು ನುಣ್ಣಿಟೈಯಾಳ್ ವೆಯ್ದುಯಿರ್‌ತ್ತು ಮೆಲ್ಲಣೈಮೇಲ್
ವೀಟ್‌ನ್ದು ಪೋತು.

309. ಆರನಱು ಙ್ಚೇಱಾಟ್ಟಿ ಅರುಮ್ಪನಿನೀರ್ ನಱುನ್ದಿವಲೈ ಅರುಕು ವೀಚಿ,
ಈರ ಇಳ ನ್ದಳಿರ್‌ಕ್ಕುಳಿರಿ ಪಟುತ್ತುಮಟ ವಾರ್‌ಚೆಯ್ದ ಇವೈಯುಮ್
ಎಲ್ಲಾಮ್,
ಪೋಟಲಿನ್ ನೆಯ್‌ಚೊರಿನ್ದಾಲ್ ಒತ್ತನ; ಮ ಞ್ಞತನ್‌ಮಾತು ಚಮಿತೈ ಎನ್‌ನ,
ಮಾರನುಮ್‌ತನ್ ಪೆರುಙ್ಚಿಲೈಯಿನ್ ವಲಿಕಾಟ್ಟಿ ಮಲರ್‌ವಾಳಿ
ಚೊರಿನ್ದಾನ್ ವನ್ದು.

310. ಹೂವಿನ ಹಾಸಿಗೆಯ ಮೇಲೆ ಬಿದ್ದ ಪರವೆಯು ಅಲ್ಲಿಯೂ ನಿದ್ರೆ ಬಾರದವಳಾಗಿ ಚಂದ್ರಕಾಂತಶಿಲೆಯಲ್ಲಿ ನಿದ್ರೆಯನ್ನು ಉಂಟುಮಾಡಲರ್ಹವಾದ ತನ್ನ ಪಕ್ಕದಲ್ಲಿ ಮೆಲ್ಲನೆ ಬೀಸುವ ದಕ್ಷಿಣಾನಿಲವನ್ನೂ ಸಹಿಸಲಾರದಾದಳು. ಮೇಘಗಳು ಸಂಚರಿಸುವ ಆಕಾಶದಲ್ಲಿದ್ದು ಪ್ರಕಾಶವನ್ನು ಕೊಡುವ ಚಂದ್ರನ ಕಿರಣಗಳು ಬೆಂಕಿಯನ್ನು ಬೀಸುವುದರಿಂದ ಆ ಉಷ್ಣವನ್ನೂ ತಾಳಲಾರದಾದಳು. ತನಗೆ ಸಹಜಸ್ವಭಾವವಾಗಿ ತನ್ನಲ್ಲಿ ಪರಿಪೂರ್ಣವಾಗಿದ್ದ ಸಹನಶಕ್ತಿಯೂ ಈಗ ಶಿಥಿಲವಾಯಿತು. ಈ ಗುಣದೊಡನೆ ನವಿಲಿನ ಸೋಗೆಯಂತಿರುವ ತನ್ನ ಕರಿಯ ಕೂದಲ ಭಾರವನ್ನೂ ಸಹಿಸಲಾರದವಳಾಗಿ ತಡೆಯಲಾಗದ ದುಃಖದಿಂದ ಆಕೆಯು ಹೀಗೆ ಹೇಳತೊಡಗಿದಳು:

311. 'ಸುವಾಸನೆಯನ್ನು ಬೀರುವ ಮೃದುವಾದ ಕೂದಲುಳ್ಳ ಸಖಿಯರೆ, ಇದೆಂತಹ ಆಶ್ಚರ್ಯ! ಅಮೃತಕಿರಣನಾದ ಚಂದ್ರನೇ ನನ್ನನ್ನು ಸುಡುವವನಾಗಿದ್ದಾನೆ. ಈ ಚಂದನ ಕರ್ದಮವನ್ನು ಪನ್ನೀರಿನಲ್ಲಿ ಕಲಸಿ ನನ್ನ ಮೇಲೆ ಪೂಸುವ ಸಖಿಯರೆ, ನೀವೇನೋ ಈ ಉದ್ಯಮವನ್ನು ಬಿಟ್ಟಿಲ್ಲ. ಇಲ್ಲಿ ಬಂದು ಬೀಸುತ್ತಿರುವ ತಂಗಾಳಿಯೋ ಬೆಂಕಿಯ ಶರೀರದಿಂದಿದೆ. ಸುಂದರವಾದ ಶೀತಲವಾದ ಗಂಗೆಯನ್ನೂ ಹಾವನ್ನೂ ತನ್ನೆಡೆಯಲ್ಲಿಟ್ಟುಕೊಂಡಿರುವ ಶಿವಪರಮಾತ್ಮನ ಅನುಗ್ರಹವನ್ನು ಪಡೆದ ನಂಬಿಯೋ, ಸೇವಕಿಯಾದ ನನ್ನ ಮೇಲೆ ದಯೆತೋರುವುದಿಲ್ಲ.

---

310. ಮಲರಮಳಿ ನ್ತುಯಿಲಾಱಾಳ್; ವರುನ್ತೆನ್‌ಱಲ್ ಮರುಙ್ಗಾಱ್ಱಾಳ್;
ಮಙ್ಗುಲ್ ವಾನಿಲ್,
ನಿಲವುಮಿಟುಮ್ ತಟಲಾಱಾಳ್; ನಿಱೈಯಾಱ್ಱುಮ್ ಪೊಱೈಯಾಱ್ಱಾ
ನೀರ್‌ಮೈ ಯೋಟುಮ್,
ಕಲವಮಯಿಲ್ ಎನವೆಟುನ್ತು ಕರುಙ್ಗುಟಲಿನ್ ಪರಮಾಱ್ಱಾ ಕೈಯ ಳಾಕಿ,
ಇಲವಇತಟ್ ಚ್ಚೆನ್ತುವರ್‌ವಾಯ್ ನೆಕಿಟ್‌ನ್ತಾಱ್ಱಾ ಮೈಯಿನ್‌ವಱ್ತೇ
ಇನ್‌ನ ಚೊನ್‌ನಾಳ್.

311. ಕನ್ತ ಙ್ಕುಮಟಿಲ್‌ಮೆನ್ ಕುಟಲೀರ್! ಇತುಎನ್? ಕಲೈವಾಣ್
ಮತಿಯಮ್ ಕನಲ್‌ವಾನ್ ಎನ್ನೈ ಇಚ್
ಚನ್ತಿನ್ ತಟಲೈ ಪ್ಪನಿನೀರ್ ಅಳವಿ ತ್ತಟವು ಙ್ಕೊಟಿಯೀರ್! ತವಿರೀರ್!
ತವಿರೀರ್!
ವನ್ತಿ ಙ್ಕುಲವುಮ್ ನಿಲವುಮ್ ವಿರೈಯಾರ್ ಮಲಯಾ ನಿಲಮುಮ್
ಎರಿಯಾಯ್ ವರುಮಾಲ್,
ಅನ್ತಣ್ ಪುನಲುಮ್ ಅರವುಮ್ ವಿರವುಮ್ ಚಟೈಯಾನ್ ಅರುಳ್‌ಪೆ
ಱುಟೈಯಾರ್ ಅರುಳಾರ್.

312. 'ನನ್ನ ಮಟ್ಟಿಗೆ ಈ ರಾತ್ರಿಯು ಕೊನೆಗೊಳ್ಳುವಂತೆ ಕಾಣುವುದಿಲ್ಲ. ಸಹನೆಯೂ ಕಾಪಾಡುವ ಶಕ್ತಿಯೂ ಕಮ್ಮಿಯಾಗುತ್ತಾ ಬರುವಂತಿದೆ. ಸ್ತನಭಾರಗಳೂ ಮನವೂ ಕರಿದುಹೋಗುತ್ತಿವೆ. ಇಷ್ಟು ಕಷ್ಟದ ಅನುಭವಗಳು ದುರದೃಷ್ಟೆಯಾದ ನನ್ನೊಬ್ಬಳ ಮಟ್ಟಿಗೆ ಮಾತ್ರ ನಡೆಯಬೇಕೋ ಹೇಳಿರಿ.

313. 'ಒಬ್ಬರ ಹಾಗೆಯೇ ಹಲವರೂ ಸೇರಿ ದುಃಖವನ್ನುಂಟುಮಾಡುವುದೋ? ಮನ್ಮಥನು ನನ್ನ ಪಕ್ಕದಲ್ಲಿ ನಿಂತು ಬಾಣಪ್ರಯೋಗ ಮಾಡುತ್ತಿರುವುದನ್ನು ನಿಲ್ಲಿಸುವುದಿಲ್ಲ. ಚಂದ್ರನು ವಿಕಸಿತವಾಗುವುದಕ್ಕೆ ಎಡೆಯಾದ ಶ್ರೀಮುಡಿಯವರ (ಈಶ್ವರನ) ದಿವ್ಯಾನುಗ್ರಹವನ್ನು ಪಡೆದು ನನ್ನನ್ನು ಸ್ವಂತವಾಗಿ ಕೊಂಡ ನಂಬಿಯೋ, ನಾನು ಪಡುವ ದುಃಖವನ್ನು ತಿಳಿಯದವನಾಗಿದ್ದಾನೆ.

---

312. 'ಪುಲರುಮ್ ಪಟಿಯುನ್ ಅಱಿರವೆನ್ ನಳವುಮ್; ಪೊಱುಕ್ಕೈಯುಮ್
ನಿಱುಕ್ಕೈಯುಮ್ ಇಱುಕ್ಕೈಯುಮ್ ತರಿಯಾ,
ಉಲರುಮ್ ತನಮುಮ್ ಮನಮುಮ್; ವಿನೈಯೇನ್ ಒರುವೇನ್
ಅಳವೋ ಪೆರುವಾಟ್ ವುರೈಯಿರಾರ್!
ಪಲರುಮ್ ಪುರಿಯುಮ್ ತುಯರ್‌ತಾನ್ ಇತುವೋ? ಪಟ್ಟೈಮನ್
ಮತನಾರ್ ಪುಟ್ಟೈನೀನ್ ಱಿಕಲಾರ್!
ಅಲರುಮ್ ನಿಲವುಮ್ ಮಲರುಮ್ ಮುಟಿಯಾರ್ ಅರುಳ್‌ಪೆ
ಱ್ರಾಟ್ಟೈಯಾರ್ ಅವರೋ ಅಱಿಯಾರ್.'

313. 'ತೇರುಮ್ ಕೊಟಿಯುಮ್ ಮಿಟೈಯುಮ್ ಮಱುಕಿಲ್ ತಿರುವಾರೂರೀರ್!
ನೀರೇ ಅಲ್ಲಾಲ್,
ಆರೆನ್ ತುಯರಮ್ ಅಱಿವಾರ್? ಅಟಿಕೇನ್!' ಅಟಿಯೇನ್ ಅಯರುಮ್
ಪಟಿಯೋ ಇತುತಾನ್?
ನೀರುಮ್ ಪಿಱಕ್ಕೈಯುಮ್ ಪೊಱಿವಾಳ್ ಅರವಿನ್ ನಿರೈಯುಮ್
ನಿರೈವೇಣ್ ಟಲೈಯಿನ್ ಪುಟೈಯೇ,
ಊರುಮ್ ಚಟೈಯಿರಾರ್! ವಿಟೈಮೇಲ್ ವರುವೀರ್! ಉಮತನ್
ಪಿಲರ್‌ಪೋಲ್ ಯಾನೋ ಉಱುವೇನ್?'

314. 'ತೇರುಗಳೂ ಪತಾಕೆಗಳೂ ಗುಂಪಾಗಿ ಸೇರಿ ಶೋಭಿಸುವ ತಿರುವಾರೂರಲ್ಲಿ ನೆಲಸಿರುವ ಪರಮೇಶ್ವರನೇ, ನೀನಲ್ಲದೆ ನನ್ನ ಕಷ್ಟಗಳನ್ನು ತಿಳಿಯಬಲ್ಲವರು ಯಾರು? ಪರಮೇಶ್ವರನೇ, ಸೇವಕಿಯಾದ ನಾನು ಇಷ್ಟು ಕಷ್ಟಪಡುವುದೇ? ಗಂಗೆಯನ್ನೂ ಚಂದ್ರನನ್ನೂ ಧರಿಸಿದ, ಚುಕ್ಕೆಗಳುಳ್ಳ ಹಾವಿನ ಕೊಟಗಳು ಪಕ್ಕಗಳಲ್ಲಿ ಹರಿದು ಹೋಗುವುದಕ್ಕೆ ಎಡೆಕೊಡದೆ ಬಿಳಿದಾದ ಕಪಾಲಗಳನ್ನು ಧರಿಸಿದ ಪರಶಿವನೆ, ವೃಷಭ ವಾಹನದ ಮೇಲೆ ತೋರಿ ಅನುಗ್ರಹಿಸುವವರೇ, ನಿಮ್ಮಲ್ಲಿ ಭಕ್ತಿ ಇಲ್ಲದೆ ಇರುವವರಂತೆ ಭಕ್ತಳಾದ ನಾನೂ ಈ ಕಷ್ಟವನ್ನು ಪಡುವುದೇ?'

315. ಇವೇ ಮೊದಲಾದ ಮಾತುಗಳನ್ನು ಮೇಲೆ ಮೇಲೆ ಹೇಳಿ ಹಂಬಲಿಸುವ, ಕರಿದಾದ ಮೋಡದಂತೆ ಕಪ್ಪಾಗಿರುವ ಕೂದಲುಳ್ಳ ಪರವೆಯನ್ನೂ, ನಂಬಿಯನ್ನೂ ಈ ಲೋಕದಲ್ಲಿ ಬರುವಂತೆ ಕರುಣಿಸಿದ ಶಿವಪರಮಾತ್ಮನು, ಈ ಸಮಯದಲ್ಲಿ ಅನುಗ್ರಹಿಸುವ ಬಗೆಯನ್ನು ಯಾರು ತಾನೇ ನೆನೆಯಬಲ್ಲವರಾಗುವರು? ದೇವತೆಗಳೂ ಬಂದು ನಮಸ್ಕರಿಸುವ ಭಾಗ್ಯವು ತುಂಬಿದ ತಿರುವಾರೂರಿನಲ್ಲಿ ಬಾಳಿಕೊಂಡು ಬರುವ ತ್ಯಾಗೇಶರು ಅಂದೇ 'ನಂಬಿ ಪರವೆಯರಿಗೆ ಮದುವೆಯನ್ನು ನೀವು ನೆರವೇರಿಸಿರಿ' ಎಂದು ತಿರುವಾರೂರಿನ ಆಡಿಗಳು (ಪೂಜಾರಿಗಳು) ತಿಳಿಯುವಂತೆ ಅವರಿಗೆ ಕನಸಿನಲ್ಲಿ ಅನುಗ್ರಹಿಸಿ,

---

314. ಎನ್ಱಿನ್ ನನವೇ ಪಲವುಮ್ ಪುಕಲುಮ್ ಇರುಳಾರ್ ಅಳಕ
ಚ್ಚುರುಳೋ ತಿಯ್ಯೈಯುಮ್
ವನ್ಱಿೊಣ್ ಟರ್ೈಯುಮ್ ಪಟಮೇಲ್ ವರಮುನ್ ಪರುಳ್ವಾನ್
ಅರುಳುಮ್ ವಕ್ಕೈಯಾರ್ ನಿನ್ೈವಾರ್?
ಚೆನ್ಱುಮ್ ಪರ್ಕಳುಮ್ ಪಣಿಯುಮ್ ಚೆಲ್ವ ತ್ತಿರುವಾರೂರ್ ವಾಟ್
ಪೆರುಮಾಳ್ ಅಟಿಕಳ್,
'ಅನ್ಱಿಙ್ಕಲರ್ಮನ್ ಱಲ್ಯೈನೀರ್ ಚೆಯುಮ್' ಎನ್ ಱಟಿಯಾರ್
ಅಱಿಯುಮ್ ಪಟಿಯಾಲ್ ಅರುಳಿ.

315. ಮನ್ನುಮ್ ಪುಕಟ್ನಾ ವಲರ್ಕೋನ್ ಮಕಿಟ 'ಮಱಿಕ್ಕುಲ ಪರವೈ
ತನ್ನೈ ತ್ತನ್ನೋಮ್;
ಇನ್ನ ವ್ವಕೈನಮ್ ಆಟಿಯಾರ್ ಅಱಿಯುಮ್ ಪಟಿಯೋ ಉರ್ೈ ಚೆಯ್
ತನಮ್' ಎನ್ ಱರುಳಿ,
ಪ್ಪೊನ್ನಿನ್ ಪುರಿಯುನ್ ಚಟೈಯನ್ ವಿಟೈಯನ್ ಪೊರುಮಾ ಕರಿಯಿನ್
ಉರಿವೈ ಪುನೈವಾನ್,
ಅನ್ನ ನ್ನಟೈಯಾಳ್ ಪಾವೈಕ್ಕು 'ಅಣಿಯ ತಾರೂ ರನ್ಪಾಲ್
ಮಣಮ್' ಎನ್ ಱರುಳ.

316. 'ಯುವತಿಯಾದ ಪರವೆಯನ್ನು ನಿನಗೆ ನಾಯಕಿಯಾಗಿ ಕೊಟ್ಟೆವು. ಈ ರೀತಿ ನಾವು ಕೊಟ್ಟು ಅನುಗ್ರಹಿಸಿದ ಕಾರ್ಯವು ತಿರುವಾರೂರಿನಲ್ಲಿ ಬಾಳುವ ನಮ್ಮ ಅಡಿಗಳು ತಿಳಿಯುವಂತೆಯೂ ಅನುಗ್ರಹಿಸಿದ್ದೇವೆ' ಎಂದು ಕೀರ್ತಿವಂತನಾದ ತಿರುನಾವಲೂರ ನಂಬಿಯು ಸಂತೋಷಿಸುವಂತೆ ನಂಬಿಗೂ ಕನಸಿನಲ್ಲಿ ತಿಳಿಸಿ ಆಮೇಲೆ ಹೊನ್ನನ್ನು ಹುರಿಮಾಡಿದಂತೆ ಶೋಭಿಸುವ ಜಡೆಗಳೂ, ಆನೆಯ ಚರ್ಮದಿಂದ ಮಾಡಿದ ಕಂಚುಕವೂ ಉಳ್ಳ ತ್ಯಾಗೇಶರು ಪರವೆಗೂ ಕನಸಿನಲ್ಲಿ ಕಾಣಿಸಿಕೊಂಡು 'ನಿನಗೂ ನಂಬಿಯಾರೂರನಿಗೂ ವಿವಾಹವು ಶೀಘ್ರವಾಗಿ ಜರಗುವುದು' ಎಂದು ಕರುಣಿಸಿದರು.

317. ಒಬ್ಬರನ್ನೊಬ್ಬರು ಪ್ರೇಮಿಸಿ ಮಿಲನವು ದೊರಕದ ವ್ಯಸನದಿಂದ ಪರಿತಪಿಸುತ್ತಿದ್ದ ನಂಬಿ ಮತ್ತು ಪರವೆಯ ಮನಸ್ಸಿನಲ್ಲಿದ್ದ ಕತ್ತಲೆಯೂ ರಾತ್ರಿಯ ಕತ್ತಲೆಯೂ ಒಟ್ಟಿಗೆ ಮಾಯವಾಗಲು ಸೂರ್ಯನು ಉದಿಸುವ ಕಾಲವಾದ ಅರುಣೋದಯದಲ್ಲಿ ಕನಸಿನಲ್ಲಿ ತಿಳಿದು ಅನುಗ್ರಹ ಪಡೆದ ತಿರುವಾರೂರಿನ ಅಡಿಗಳೆಲ್ಲಾ ಕೂಡಿ, ತನ್ನ ಭಕ್ತರುಗಳಿಗೆ ತಕ್ಕುದಾದ ಸಮಯದಲ್ಲಿ ಸಹಾಯವನ್ನೂ ಕ್ಷೇಮವನ್ನೂ ಮಾಡುವ ಪರಮಾತ್ಮನ ಹಿರಿದಾದ ದಿವ್ಯಾನುಗ್ರಹವನ್ನು ನಮಿಸಿ, ಸ್ತುತಿಸಿ, ತಿರುನಾವಲೂರ ನಂಬಿಯು ಸಂತೋಷಿಸುವಂತೆ ಮಾಲೆಯಿಂದ ಸಿಂಗರಿಸಿದ ಕೂದಲಿರುವ ಪರವೆಯ ಮದುವೆಯನ್ನು ಅದಕ್ಕೆ ತಕ್ಕುದಾದ ಸಂಭ್ರಮದಿಂದ ಜರಗಿಸಿದರು.

---

316. ಕಾಮ ತ್ತುಯರಿಲ್ ಕವಲ್ವಾರ್ ನೆಞ್ಚಿಱ್ ಕಱೈಯಿಲ್ ಇರುಳುಮ್
ಕಙ್ಗುಲ್ ಕಟಿಪ್ಪೋಮ್,
ಯಾಮ ತ್ತಿರುಳುಮ್ ಪುಲರ ಕ್ಕತಿರೋನ್ ಎಟುಕಾಲ್ಯೆಯಿಲ್ವ
ನ್ತಟಿಯಾರ್ ಕೂಟಿ,
ಚ್ಚೇಮ ತ್ತುಣೈಯಾಮ್ ಅವರ್ಪೇರ್ ಅರುಳೈ ತ್ತೊ‌ಟುತೇ ತಿರುನಾ
ವಲರ್ಕೋನ್ ಮಕಿಟ,
ತ್ತಾಮ ಕ್ಕುಟಿಲಾಳ್ ಪರವ್ಯೆ ವತುವ್ಯೆ ತಕುನೀರ್ ಮ್ಯೆಯಿನಾಲ್
ನಿಕಟ ಚ್ಚೆಯ್ತಾರ್.

317. ತೆನ್ನಾವ ಲೂರ್ಮನ್ನನ್ ತೇವರ್ಪಿರಾನ್ ತಿರುವರುಳಾಲ್
ಮಿನ್ನಾರು ಕೊಟಿಮರುಙ್ಗುಲ್ ಪಾವ್ಯೆಯೆನುಮ್ ಮೆಲ್ಲಿಯಲ್ ತನ್
ಪೊನ್ನಾರುಮ್ ಮುಲೈಓಙ್ಗಲ್ ಪುಣರ್ಕುವಟೇ ಚಾರ್ವಾಕ
ಪ್ಪನ್ನಾಳುಮ್ ಪಯಿಲ್ಯೋಕಮ್ ಪರಮ್ಪರೈಯಿನ್ ವಿರುಮ್ಪಿನಾರ್.

318. ತಿರುನಾವಲೂರ ನಂಬಿಯು ತ್ಯಾಗೇಶಪರಶಿವನ ದಿವ್ಯಾನುಗ್ರಹದಿಂದ ಸಪೂರವಾದ ನಡುವುಳ್ಳ ಸುಂದರಿಯಾದ ಪರವೆಯೊಡನೆ ಬಹುಕಾಲ ಸುಖಿಸುತ್ತಿದ್ದನು. ತನ್ನನ್ನು ಆಳಾಗಿಸಿರುವ ಶಿವಪರಮಾತ್ಮನ ಅಡಿದಾವರೆಗಳನ್ನು ತಲೆಗೆ ಆಭರಣವಾಗಿಟ್ಟು ಕೊಂಡೂ, ಮನದಲ್ಲಿ ನೆನೆದೂ, ಹಲವು ತಿರುಪ್ಪದಿಕ (ಹಾಡುಗಳ ದಶಕ) ಗಳನ್ನು ಅನುಗ್ರಹಿಸುತ್ತ, ಪರವೆಯೊಡನೆ ಕೂಡಿ ಕ್ರೀಡಿಸುವವನಾದನು.

319. ಆಕೆಯೊಡನೆ ಅರಮನೆಯ ಪಕ್ಕದ ಉದ್ಯಾನದಲ್ಲಿ ನೀರು ಹೂಗಳು ಅರಳಿ ಶೋಭಿಸುವ ತಟಾಕದ ಪಕ್ಕದ ಕೃತಕಾದ್ರಿಯಲ್ಲಿ ಶೀತಲವಾದ ಮುತ್ತುಗಳಿಂದ ಮಾಡಲ್ಪಟ್ಟ ವಿತಾನದ ಕೆಳಗೆ ಸುಂದರವಾದ ಆಸನದಲ್ಲಿದ್ದು ಅಲ್ಲಿಂದ ಕೆಳಗೆ ಬಂದು ತನ್ನ ಒಡೆಯನು ನೆಲಸಿರುವ ಪೂಂಗೋಯಿಲನ್ನು ಸೇರಿ ನಮಿಸಬೇಕು ಎಂಬ ಆಸೆಯೊಡನೆ ನಂಬಿಯು,

320. ದೇವರುಗಳು ಸ್ತುತಿಸುವ ಅನರ್ಘವಾದ ಉಡುಪಿನಿಂದ ಅಲಂಕೃತನಾಗಿ ಕುಂಕುಮಕಲಿತ ಚಂದನಕರ್ದಮವನ್ನು ಲೇಪಿಸಿಕೊಂಡು ಸುಂದರವಾದ ಶಿರೋಭೂಷಣ ವನ್ನು ತಲೆಯಲ್ಲಿ ತೊಟ್ಟುಕೊಂಡು ಕಾಂತಿಸೂಸುವ ಮಣಿಗಳಿಂದ ಆವೃತವಾದ ಆಭರಣ ಗಳನ್ನು ಅಲಂಕರಿಸಿಕೊಂಡು ಮೇಲಾದ ಸೌಂದರ್ಯದಿಂದ ಶೋಭಿಸುವವನಾಗಿ ತೋರಲು,

---

318. ತನ್ನೈಯಾ ಳುಟೈಯಪಿರಾನ್ ಚರಣಾರ ವಿನ್ತ್ತಮಲರ್
ಚೆನ್ನಿಯಿಲು ಞ್ಚಿನ್ತ್ತೈಯಿಲುಮ್ ಮಲರ್ವಿತ್ತು ತ್ತಿರುಪ್ಪತಿಕಮ್
ಪನ್ನುತಮಿೞ್ ತ್ತೊಟೈಮಾಲ್ಯೆ ಪಲಚಾತ್ತಿ ಪ್ಪರವೈಯೆನುಮ್
ಮಿನ್ನಿಟೈಯಾಳ್ ಉಟನ್ಕೂಟಿ ವಿಳೈಯಾಟಿ ಚ್ಚೆಲ್ಕಿನ್ಱಾರ್.

319. ಮಾತುಟನ್ ಕೂಟವೈಕಿ ಮಾಳಿಕೈ ಮರುಙ್ಕು ಚೋಲೈ
ಪೋತಲರ್ ವಾವಿ ಮಾಟು ಚೆಯ್ಕುನ್ಱಿನ್ ಪುಟೈಯೋರ್ ತೆಱ್ಱ
ಚ್ಚೀತಳ ತ್ತರಳ ಪ್ಪನ್ತರ್ ಚ್ಚೆಱಿನ್ತ್ತವಿ ಚೆಱಿನ್ತು ತಙ್ಕಳ್
ನಾತರ್ಪೂ ಙ್ಕೋಯಿಲ್ ನಣ್ಣಿ ಕ್ಕುಮ್ಪಿಟುಮ್ ವಿರುಪ್ಪಾಲ್ ನಮ್ಪಿ.

320. ಅನ್ತರ ತ್ತಮರರ್ ಪೋಱ್ಱುಮ್ ಅಣಿಕಿಳರ್ ಆಟೈ ಚಾತ್ತಿ
ಚ್ಚನ್ತನ ತ್ತಳಱು ತೋಯ್ನ್ತ ಕುಙ್ಕುಮ ಕ್ಕಲವೈ ಚಾತ್ತಿ
ಚ್ಚನ್ತರ ಚ್ಚುಟಿಯ ಞ್ಚಾತ್ತಿ ಚ್ಚುಟರ್ಮಣಿ ಕ್ಕಲನ್ಕಳ್ ಚಾತ್ತಿ
ಇನ್ತಿರ ತ್ತಿರುವಿನ್ ಮೇಲಾಮ್ ಎೞಿಲ್ಮಿಕ ವಿಳಙ್ಕಿ ತ್ತೋನ್ಱಿ.

321. ಕೈಯಲ್ಲಿ ಧರಿಸಿದ ಸ್ವರ್ಣದಂಡ, ಕಿವಿಗಳಲ್ಲಿ ಧರಿಸಿದ ಕುಂಡಲಗಳು, ಎದೆಯಲ್ಲಿ ಹೊರಳಿ ಅಲುಗಾಡುವ ಯಜ್ಞೋಪವೀತ, ಫಾಲದಲ್ಲಿ ವಿರಾಜಿಸುವ ವಿಭೂತಿ, ಇವುಗಳಿಂದ ಕೂಡಿ, ನೋಡಿದ ಸ್ತ್ರೀಯರು 'ಈ ಪರಮೇಶ್ವರನಿಗೆ ಈ ಅಲಂಕಾರವು ಶೋಭೆಯನ್ನು ಕೊಡುವುದು' ಎಂದು ಸ್ತುತಿಸುವಂತೆ ಬೀದಿಯಲ್ಲಿ ಸೇರಿದನು.

322. ಶೈವದ ಒಳ್ಳೆಯ ತಪಸ್ಸಿನ ಫಲವಾಗಿ ತಿರುನಾವಲೂರಿನಲ್ಲಿ ಅವತರಿಸಿದ ಗಂಡಾನೆಯಂತೆ ಇರತಕ್ಕವನೇ ಎಂದೂ, ವೈರಿಗಳ ತ್ರಿಪುರಗಳನ್ನು ದಹಿಸಿದ ವೃಷಭ ವಾಹನನಾದ ಶಿವಪರಮಾತ್ಮನಲ್ಲಿ ಹೆಚ್ಚಾದ ಪ್ರೀತಿಯುಳ್ಳವನೇ ಎಂದೂ, ದೋಷ ವಿದೂರವಾದ ಶ್ರೇಷ್ಠವಾದ ಹಿರಿಮೆ ಇರುವ ತಿರುವಾರೂರ ಬ್ರಾಹ್ಮಣ ಮಹಾತ್ಮನೇ ಎಂದೂ, ಎರಡು ಪಕ್ಕಗಳಲ್ಲಿಯೂ ಬೇರೆಬೇರೆಯಾಗಿ ಸಂದಣಿಸಿದ ಪುರಜನರ ಸ್ತ್ರೀಯರ ಕೂಟಗಳು ಸ್ತುತಿಸಲು,

323. ಕೈಯಲ್ಲಿ ಹಿಡಿದು ಜಗಳಮಾಡಲು ಅಭ್ಯಾಸಕೊಡುವ ಗಂಡಾಡು, ಮಂಗ, ಹುಂಜ, ಕವುಜುಗ, ತಿತ್ತಿರಿವಕ್ಕಿ ಎಂಬಿವುಗಳನ್ನು ಹಿಡಿದುಕೊಂಡು ಎರಡು ಪಕ್ಕ ಗಳಲ್ಲಿಯೂ ಮುಂಭಾಗದಲ್ಲಿಯೂ ಹೋಗುವವರು ಆ ಪ್ರಾಣಿಗಳನ್ನು ಪಳಗಿಸುವ ಮಾತು ಗಳನ್ನು ಹೇಳಿಕೊಂಡು ಬರಲು, ಹೂಗಳು ತುಂಬಿದ ಬುಟ್ಟಿಗಳನ್ನು ಕೊಂಡುಹೋಗು ವವರೂ, ಸುವಾಸನಾ ವಸ್ತುಗಳಿಂದ ಕೂಡಿದ ವೀಳ್ಯದೆಲೆ ಮೊದಲಾದುವನ್ನು ಧರಿಸಿದ ಅಡಪದವರೂ ಸುತ್ತಿಬರಲು, ಕಾಡಿಗೆಯಿಂದಲಂಕೃತವಾದ ವಿಶಾಲವಾದ ಕಣ್ಣುಗಳಿರುವ ಹೆಣ್ಣುಗಳು ಪರವಶತೆಯನ್ನು ಹೊಂದಲು, ನೀಳವಾದ ಬೀದಿಯ ದಾರಿಯಾಗಿ ನಂಬಿಯು ಬಂದನು.

---

321. ಕೈಯಿನಿಱ್ ಪುನೈಪೊ ಱ್ಕೋಲುಮ್ ಕಾತಿನಿಲ್ ಇಲಙ್ಕು ತೋಟುಮ್
ಮೆಯ್ಯಿನಿಲ್ ತುವಳು ನೂಲುಮ್ ನೆಱ್ಱಿಯಿಲ್ ವಿಳಙ್ಕು ನೀಱುಮ್
'ಐಯನು ಕ್ಕಟಿಕಿತಾಮ್' ಎನ್ ಱಾಯಿಟೈ ಮಕಳಿರ್ ಪೋಱ್ಱ
ಚ್ಚೈವಮೆಯ್ ತ್ತಿರುವಿನ್ ಕೋಲ ನ್ತ್ತಟೈಪ್ಪವೀ ತಿಯಿನೈ ಚ್ಚಾರ್ನ್ತಾರ್.

322. 'ನಾವಲೂರ್ ವನ್ತ ಚ್ಚೈವ ನಱ್ಱವ ಕ್ಕಳಿಱೇ!' ಎನ್ಱುಮ್
'ಮೇವಲರ್ ಪುರಙ್ಕಳ್ ಚೆಱ್ಱ ವಿಟೈಯವರ್ ಕ್ಕನ್ಪ!' ಎನ್ಱುಮ್
'ತಾವಿಲ್ಚೀರ್ ಪ್ಪೆರುಮೈ ಆರೂರ್ ಮಱೈಯವರ್ ತಲೈವ!' ಎನ್ಱುಮ್
ನೋವಿನರ್ ಇರಣ್ಟು ಪಾಲುಮ್ ನೇಱುವೇ ಱಾಯುಮ್ ಪೋಱ್ಱ.

323. ಕೈಕ್ಕುಟಾ ಕುಱಙ್ಕು ಕೋೞಿ ಚಿವಲ್ಕವು ತಾರಿ ಪಱ್ಱಿ
ಪ್ಪಕ್ಕಮುನ್ ಪೋತು ವಾರ್ಕಳ್ ಪಯಿಲ್ವೊೞಿ ಪ್ಪಯಿಱ್ಱಿ ಚ್ಚೆಲ್ಲ
ಮಿಕ್ಕಪೂ ಪ್ಪಿಟಕ್ಕೈ ಕೊಳ್ವೋರ್ ವಿರೈಯಟೈ ಪ್ಪೈಯೋರ್ ಚೂೞ
ಮೈಕ್ಕರು ಙ್ಕಣ್ಣಿ ನಾರ್ಕಳ್ ಮಱುಕನೀಳ್ ಮಱುಕಿಲ್ ವನ್ತಾರ್.

324. ಸುಂದರವಾದ ಆಭರಣಗಳನ್ನು ತೊಡಿಸಿದ ಕುಣಿಯುವ ಕುದುರೆಗಳನ್ನು ಆಡಿಸಿಕೊಂಡು ಬರುವವರು ಮುಂದೆ ಹೋಗಲು, ಕಾಂತಿಯನ್ನು ಸೂಸುವ ತೋಳ್ಬಳೆಗಳಿಂದ ಅಲಂಕರಿಸಿದ ತೋಳುಗಳ ಮೇಲೆ ಎಡೆ ಎಡೆ ಒತ್ತೊತ್ತಾಗಿ ನವಿಲುಗರಿಗಳನ್ನು ಕಟ್ಟಿದುದರಿಂದ ಅವುಗಳ ತಂಪಾದ ನೆಳಲು ಮೇಲೆ ಬೀಳುತ್ತಿರಲು, ಮಾಲೆಯಿಂದ ಅಲಂಕೃತವಾದ ಸುಂದರವಾದ ತೋಳುಗಳಿರುವ ನಂಬಿಯು ವೇದಪಾರಾಯಣವನ್ನು ಮಾಡುವ ವಿಪ್ರರ ನಡುವೆ ಬಂದು ತ್ಯಾಗೇಶರ ದೇವಾಲಯವನ್ನು ಸೇರಿದನು.

325. ಪರಮೇಶ್ವರನ ಸುಂದರವಾದ ದೇಗುಲದ ಮಣಿಮೊಗವಾಡದಲ್ಲಿ ಶ್ರೀದ್ವಾರದ ಮುಂದಿರುವ ದೇವಾಶಿರಿಯನ್[1] (ಸಾವಿರಕಂಬ) ಮಂಟಪದ ಬಾಗಿಲೆದುರು ಸೇರಿರುವ ದೇವರುಗಳು ಒಂದು ಪಕ್ಕವಾಗಿ ನಿಲ್ಲಲು, ಈ ಬುವಿಯಲ್ಲಿ ಅವತರಿಸಿ ಮಹಿಮೆಯುತಿಶಯ ಉಳ್ಳ ಭಕ್ತರು ಸಂಖ್ಯಾತೀತವಾಗಿ ಇರುತ್ತಿರಲು, 'ಇವರುಗಳಿಗೆಲ್ಲಾ ನನ್ನನ್ನು ಸೇವಕನನ್ನಾಗಿ ಮಾಡಲಾಗುವ ದಿವಸ ಯಾವ ದಿವಸವೋ ?' ಎಂಬ ಅಭಿಪ್ರಾಯದೊಡನೆ ತ್ಯಾಗೇಶರ ಪಾದಗಳನ್ನು ಸ್ತುತಿಸಿ ನಂಬಿಯು ಹೋಗುವವನಾದನು.

326. 'ನಾನು ಈ ಭೃತ್ಯರುಗಳಿಗೆ ಭೃತ್ಯನಾಗುವೆನು' ಎಂಬ ಪ್ರೀತಿಯು ತನ್ನ ಹೃದಯದಲ್ಲಿ ಮೇಲೆದ್ದು ಬರುತ್ತಿರಲು, ಧ್ವಜಗಳನ್ನು ಕಟ್ಟಿರುವ ಎತ್ತರವಾದ ಜಯಪ್ರದವಾದ ಒಳಗೋಪುರದ ಶ್ರೀದ್ವಾರವನ್ನು ನಮಸ್ಕರಿಸಿ, ಕೈಗಳನ್ನು ತಲೆಯ ಮೇಲೆ ಎತ್ತಿ ಮುಗಿದುಕೊಂಡು, ಶ್ರೀದೇಗುಲದೊಳಗೆ ನಂಬಿಯು ಪ್ರವೇಶಿಸಿದನು. ಆಗ ಸುವಾಸನೆಯೂ ಸೌಂದರ್ಯವೂ ಇರುವ ಕರ್ಣಿಕಾರ ಕುಸುಮಗಳನ್ನು ತಲೆಯಲ್ಲಿ ಧರಿಸಿದ ತ್ಯಾಗೇಶರು, ನಂಬಿಯ ಇದಿರು ತೋರಿ ನಿಲ್ಲಲು, ಅವರನ್ನು ಕಂಡು, ಅವರ ಶ್ರೀಪಾದಗಳನ್ನು ನಮಿಸಿ, ಅವುಗಳನ್ನು ತಲೆಯ ಮೇಲೆ ಧರಿಸಿಕೊಂಡವನಾಗಿ ನಂಬಿಯು ಹೀಗೆ ಸ್ತುತಿಸುವವನಾದನು :

---

324. ಪೊಲಙ್ಕಲ ಪ್ಪುರವಿ ಪಣ್ಣಿ ಪ್ಪೋತುವಾರ್ ಪಿನ್ಪು ಪೋತ,
ಇಲಙ್ಕೊಳಿ ವಲಯ ಪ್ಪೊಙ್ಕೋಳ್ ಇಟ್ಟೈಯಿಟ್ಟೈ ಮಿಟ್ಟೈನ್ತು ತೊಙ್ಕಲ್,
ನಲಙ್ಕಿಳರ್ ನೀಟಲ್ ಚೂಟ ನಾನ್ಮಱೈ ಮುನಿವ ರೋಟುಮ್,
ಅಲಙ್ಕಲ ನ್ತೋಳ ನಾನ್ವ ನ್ತಣೈನ್ತನನ್ ಅಣ್ಣಲ್ ಕೋಯಿಲ್.

325. ಕಣ್ಣುತಲ್ ಕೋಯಿಲ್ ತೇವಾ ಚಿರಿಯನಾ ಙ್ಕಾವ ಣತ್ತು,
ವಿಣ್ಣವರ್ ಒಟಿಯ ಮಣ್ಮೇಲ್ ಮಿಕ್ಕಚೀರ್ ಅಟಿಯಾರ್ ಕೂಟ್ಟ,
ಎಣ್ಣಿಲಾರ್ ಇರುನ್ತ ಪೋತಿಲ್ 'ಇವರ್ಕ್ಕಿಯಾನ್ ಅಟಿಯೇ ನಾಕ,
ಪ್ಪಣ್ಣುನಾಳ್ ಎನ್ನಾಳ್' ಎನ್ಱು ಪರಮರ್ತಾಳ್ ಪರವಿ ಚ್ಚೆನ್ಱಾರ್.

326. 'ಅಟಿಯವರ್ ಕ್ಕಟಿಯ ನಾವೇನ್' ಎನ್ನುಮ್ಆ ತರವುಕೂರ,
ಕೊಟಿನೆಟು ಙ್ಕೊಙ್ಱ ವಾಯಿಲ್ ಪಣಿನ್ತುಕೈ ಕುವಿತ್ತು ಪ್ಪುಕ್ಕಾರ್,
ಕಟಿಕೊಳ್ಪೂ ಙ್ಕೊನ್ಱಿ ವೇಯ್ನ್ತಾರ್ ಅವರ್ಕ್ಕೆತಿರ್ ಕಾಣ ಕ್ಕಾಟ್ಟುಮ್,
ಪಟಿಯೆತಿರ್ ತೋನ್ಱ ನಿಱ್ಕ ಪ್ಪಾತಙ್ಕಳ್ ಪಣಿನ್ತು ಪೂಣ್ಟು.

---

1. ದೇವಾಶಿರಿಯನ್ = ದೇವಾಶ್ರಯ (ಸಂ.)

327. 'ಸ್ಥಿರವಾದ ಸೌಭಾಗ್ಯವನ್ನು ತರುವ, ಅಸಂಖ್ಯಾತವಾದ ವೇದಗಳೆಂಬ ತುಂಬಿಗಳು ಸುತ್ತಿ ಶಬ್ದಿಸಲು, ಭಕ್ತಿಯಿಂದ ಧ್ಯಾನಿಸುವವರ ಹೃದಯಕಮಲದಲ್ಲಿ ತೋರಿ ವರ್ಧಿಸುವ, ದಿವ್ಯಾನಂದವೆಂಬ ಉತ್ತಮ ಜೇನನ್ನು ಯೋಗ್ಯತೆಯಿಲ್ಲದ ನನ್ನಂಥವನಿಗೂ ಕೊಟ್ಟು, ಇದಿರಾಗಿ ತಾವೇ ಪ್ರಕಾಶವಾಗಿ ನಿಂತಿರುವ,

328. 'ಲೋಕವು ಉಜ್ಜೀವಿಸಲಿಕ್ಕಾಗಿ ಪಂಚಕೃತ್ಯ ನಟನವನ್ನು ಚಿತ್ಸಭೆಯಲ್ಲಿ ಆಡಿದ, ಯಮನ ಪ್ರಾಣವೇ ಹೋಗುವಂತೆ ಕೋಪಿಸಿದ, ಉಮಾಮಾತೆಯವರು ತಮ್ಮ ಕೆಂಪಗಾದ ಕೈಯಿಂದ ಉಪಚರಿಸಿ ತಡವಲು ಅವರ ಹಸ್ತಸ್ಪರ್ಶದಿಂದ ಕೆಂಪಗಾಗಿ ಕಾಣುವ,

329. 'ನೀತಿಯಲ್ಲಿ ನೆಲಸಿರುವ ತಪೋಧನರ ಮನಸ್ಸಿನಲ್ಲಿ ಬೆಳಗನ್ನು ಬೀರಿ ಪ್ರಕಾಶಿಸುವ, ಅಜ್ಞಾನಿಗಳಿಗೆ ಅರಿವನ್ನು ಕೊಟ್ಟು ತಿದ್ದುವ, ಪ್ರಕಾಶಿಸುವ ವಸ್ತುಗಳಿಗೆಲ್ಲಾ ಪ್ರಕಾಶವನ್ನು ಕೊಟ್ಟು ಅವುಗಳಿಗೂ ಮೇಲೆ ಎದ್ದು ಬೆಳಗುವ ಕಾಂತಿಯಾಗಿರುವ, ಒಂದು ಕಾಲದಲ್ಲಿ ತೋರಲಾಗುವ ಸ್ವಭಾವವುಳ್ಳ, ವಿಷ್ಣುವಿನಿಂದ ಕಾಣಲಾಗದ ಶಕ್ತಿಯುಳ್ಳ,

---

327. ಮನ್‌ಪೆ ರುನ್ತಿರು ಮಾಮಱೈ ವಣ್ಟುಚೂಟ್‌ನ್ತು
ಅನ್‌ಪರ್ ಚಿನ್ತೈ ಅಲರ್‌ನ್ತಚೆ ನ್ತಾಮರೈ
ನನ್‌ಪೆ ರುಮ್ಪರ ಮಾನನ್ತ ನನ್‌ಮತು
ಎನ್‌ತ ರತ್ತುಮ್ ಅಳಿತ್ತೆತಿರ್ ನಿನ್‌ಱನ.

328. ಞಾಲಮ್ ಉಯ್ಯ ನಟಮುನ್‌ಱುಳ್ ಆಟಿನ;
ಕಾಲನ್ ಆರುಯಿರ್ ಮಾಳ ಕ್ಕಱುತ್ತನ;
ಮಾಲೆ ತಾಟ್‌ಕುಟಿಲ್ ಮಾಮಲೈ ಯಾಳ್‌ಚೆಙ್ಕೈ
ಚೀಲ ಮಾಕ ವರುಟ ಚ್ಚಿವನ್ತನ.

329. ನೀತಿ ಮಾತವರ್ ನೆಞ್ಚಿಱ್ ಪೊಲಿನ್ತನ;
ವೇತಿ ಯಾತವರ್ ತಮ್ಮೈಯುಂವೇ ತಿಪ್ಪನ;
ಚೋತಿ ಯಾಯ್‌ಎಬು ಞ್ಞೋತಿಯುಟ್ ಚೋತಿಯ;
ಆತಿ ಮಾಲಯುನ್ ಕಾಣಾ ಅಳವಿನ.

330. ವೇದಗಳೆಂಬ ಆನೆಯ ಮೇಲೆ ನಿಲ್ಲುವ, ಅಜ್ಞಾನದಿಂದ ಕೂಡಿದ ನನ್ನ ತಪ್ಪುಗಳನ್ನು ಕ್ಷಮಿಸಿ ಅನುಗ್ರಹಿಸಿ ನನ್ನನ್ನು ಆಳಾಗಿಸಿಕೊಂಡ, ಮೇಲೂ ಬರತಕ್ಕ ದೋಷಗಳೆಲ್ಲವನ್ನೂ ನಿವಾರಿಸಲು ಮನವಾರೆ ಆಶಿಸಿ ನಿಂತ, ಭೂತಗಣಗಳಿಗೆ ಒಡೆಯನಾದ, ದೇವದೇವನಾದ, ನಿಮ್ಮ ತಾವರೆಯಂತಿರುವ ಶ್ರೀಪಾದಗಳು'.

331. ಈ ರೀತಿ ಸ್ತುತಿಸುವ ನಂಬಿಗೆ ವೃಷಭವಾಹನನಾದ ಪರಮೇಶ್ವರನು ಆ ನೆಲೆಯಲ್ಲಿ ನಂಬಿಯು ಆಶಿಸಿದ ಆ ವಸ್ತುವನ್ನೇ ಅವನಿಗೆ ಅನುಗ್ರಹಿಸಲು ನೆಲೆಗೊಂಡ ಮಹತ್ವವುಳ್ಳ ಭಕ್ತರ ಪರಂಪರೆಯಲ್ಲಿ ಬರುವ ಶ್ರೀ ಸೇವೆಯ ಮಹಿಮೆಗಳನ್ನು ತಿಳಿಯಲು ಜ್ಞಾನವನ್ನು ಕೊಟ್ಟ ಮೇಲೂ ಅವರ ಮಹಿಮೆಯನ್ನು ತಾವೇ ಅನುಗ್ರಹಿಸುವವರಾದರು.

332. 'ಭಕ್ತರು ಮಹಿಮೆಯಿಂದ ತಮಗೆ ತಾವೇ ಸಮಾನರಾಗುವರು. ದೇವರನ್ನಾರಾಧಿಸುವ ಗುಣದಿಂದ ತಮ್ಮನ್ನು ತಮಗೆ ಅರ್ಹರೆನ್ನಿಸಿಕೊಳ್ಳುವ ಯೋಗ್ಯತೆಯನ್ನು ಪಡೆದವರು. ನಮ್ಮೊಡನೆ ಏಕವಾಗಿ ನಿಂತ ನಿಲುವಿನಿಂದ ಲೋಕವನ್ನು ಜಯಿಸುವರು. ಆದುದರಿಂದ ಮೇಲೆ ಬರತಕ್ಕ ಮಾನ್ಯತೆಗಳು ಒಂದನ್ನೂ ಇಲ್ಲದವರು. ಇತರರಾರೂ ನಿಲ್ಲುವುದಕ್ಕೆ ಸಾಧ್ಯವಿಲ್ಲದ ನೆಲೆಯಲ್ಲಿ ನಿಂತವರು. ಪ್ರೇಮ ತುಂಬಿದವರಾದುದರಿಂದ ಸುಖವನ್ನೇ ಪರಿಪೂರ್ಣ ಅನುಭವಿಸುವವರು. ಇಹಪರಗಳನ್ನು ದಾಟಿದ ನೆಲೆಯನ್ನು ಪಡೆದವರು. ಇಂತಹ ಭಕ್ತರ ಸ್ಥಾನಕ್ಕೆ ನೀನು ಸೇರುವೆ'.

---

330. ವೇತ ಆರಣಮ್ ಮೇಱ್ಕೊಣ್ಣಿರುನ್ತನ;
ಪೇತ್ತೈ ಯೇನ್ಱೆಯುಮ್ ಪಿಣಿಕ್ಕೈಪೊಱುತ್ತಾಣ್ಡನ;
ಏತ ಮಾನವೈ ತೀರ್ಕ್ಕ ಇಚ್ಚೈನ್ತನ;
ಪೂತ ನಾತ! ನಿನ್ ಪುಣ್ಡರೀ ಕಪ್ಪತಮ್.

331. ಇನ್ನವಾ ಱೇತ್ತು ನಮ್ಬಿ ಕ್ಕೇಱುಚೇ ವಕನಾರ್ ತಾಮುಮ್
ಅನ್ನಿಲೈ ಅವರ್ತಾಮ್ ವೇಣ್ಡುಮ್ ಅತನೈಯೇ ಅರುಳ ವೇಣ್ಡಿ
ಮನ್ನುಚೀರ್ ಅಟಿಯಾರ್ ತಙ್ಕಳ್ ವಟಿತ್ತೊಣ್ಡೈ ಉಣರ ನಲ್ಕಿ
ಪ್ಪಿನ್ನೈಯುಮ್ ಅವರ್ಕಳ್ ತಙ್ಕಳ್ ಪೆರುಮ್ಮೈಯೈ ಅರುಳಿ ಚ್ಚೆಯ್ವಾರ್.

332. 'ಪೆರುಮ್ಮೈಯಾಲ್ ತಮ್ಮೈಯೊಪ್ಪಾರ್; ಪೇಣಲಾಲ್ ಎಮ್ಮೈಪ್ಪೆಱ್ಱಾರ್;
ಒರುಮ್ಮೈಯಾಲ್ ಉಲಕೈ ವೆಲ್ವಾರ್; ಊನಮೇಲ್ ಒನ್ಱುಮ್ ಇಲ್ಲಾರ್;
ಅರುಮ್ಮೈಯಾಮ್ ನಿಲೈಯಿಲ್ ನಿನ್ಱಾರ್; ಅನ್ಪಿನಾಲ್ ಇನ್ಪಮ್ ಆರ್ವಾರ್;
ಇರುಮ್ಮೈಯು ಙ್ಕಟನ್ತು ನಿನ್ಱಾರ್; ಇವರೈನೀ ಅಟೈವಾಯ್' ಎನ್ಱು.

333. 'ಪರಮೇಶ್ವರನು ಈ ರೀತಿ ಅನುಗ್ರಹಿಸಿದ ಮಾತ್ರದಲ್ಲಿ ನಂಬಿಯು 'ನಾನು ದೋಷವು ತೀರಿದ ಮಾರ್ಗವನ್ನು ಹೊಂದಿ ಉಜ್ಜೀವಿಸಿದೆನು' ಎಂದು ಸ್ತುತಿಸಿ ಇದಿರಾಗಿ ನಮಿಸಿ ನಿಲ್ಲಲು, 'ವಿಧಿಯಂತೆ ಈ ಭಕ್ತರನ್ನು ನೀನು ನಮಿಸಿ ಪೂರ್ಣವಾದ ವಾಕ್ಯಗಳಿಂದ ಕೂಡಿದ ಸ್ತೋತ್ರಗಳಲ್ಲಿ ಸತ್ಯವಾದ ರೀತಿಯಲ್ಲಿ ಅವರನ್ನು ಹಾಡುವವನಾಗು' ಎಂದು ಈಶನು ಅನುಗ್ರಹವನ್ನು ಮಾಡಲು,

334. ತನ್ನನ್ನು ಆಳಾಗಿಸಿಕೊಂಡ ಪರಮೇಶ್ವರನು ತಾವೇ ಈ ರೀತಿ ಅನುಗ್ರಹಿಸಿದ ಆಜ್ಞೆಯನ್ನು ಕೇಳಿದವನಾಗಿ ಅವರನ್ನು ಶಿರಸ್ಸಿನಿಂದ ವಂದಿಸಿ ನಿಂತ ನಂಬಿಯು 'ಆ ರೀತಿ ಇವರನ್ನು ಪೂರ್ಣವಾಕ್ಯಗಳಿಂದ ಸ್ತುತಿಸಲಿಕ್ಕೆ ಈ ರೀತಿಯಲ್ಲಿ ಹಾಡುವುದೆಂದೂ, ಇಂತಹ ಗುಣಗಳನ್ನು ಹಾಡುವುದೆಂದೂ ಯಾವ ರೀತಿಯಲ್ಲಿ ತಿಳಿದು ಸ್ತುತಿಸುವೆನು? ಆ ಶ್ರೀಸೇವೆಗೆ ನಾನು ಎಂತಹ ಯೋಗ್ಯತೆಯುಳ್ಳವನು? ಇವರನ್ನು ಪೂರ್ಣವಾಕ್ಯ ಮಾಲೆಗಳಿಂದ ಸ್ತುತಿಸುವ ಯೋಗ್ಯತೆಯನ್ನು ನನಗೆ ನೀವೇ ತಂದು ಅನುಗ್ರಹಿಸಬೇಕು' ಎಂದು ಬೇಡಿ ನಿಲ್ಲಲು,

335. ಪುರಾತನವಾದ ಹಿರಿಯ ಹಿಮಾಲಯದ ಪುತ್ರಿಯಾಗಿ ಜನಿಸಿದ ಪರಿಶುದ್ಧಳಾದ ಉಮಾದೇವಿಯನ್ನು ಒಂದು ಭಾಗದಲ್ಲುಳ್ಳ ಪರಮೇಶ್ವರನು, ಲೋಕವು ಕಷ್ಟವನ್ನು ಪರಿಹರಿಸಿಕೊಂಡು ಉಜ್ಜೀವಿಸಲು ಕಾರಣವಾಗಿ ವೇದಗಳನ್ನು ಅನುಗ್ರಹಿಸಿದ ಶ್ರೀ ವಾಕ್ಯಗಳಿಂದ "'ತಿಲ್ಲೈವಾಟಂದಣರ್ತಮ್ಮಡಿಯಾರ್ಕುಮಡಿಯೇನ್' (ಚಿದಂಬರದ ಪೂಜಾರಿಗಳ ಭೃತ್ಯರಿಗೆ ಭೃತ್ಯನಾಗಿರುವೆನು) ಎಂದು ಆರಂಭಿಸಿ ಅಳವಿಲ್ಲದ ಕೀರ್ತಿಯಿಂದ ಕೂಡಿರುವ ಈ ಭಕ್ತರನ್ನು ಹೆಸರಿಸಿ ಸ್ತೋತ್ರಮಾಲೆಯನ್ನು ಹಾಡುವವನಾಗು" ಎಂದು ಅನುಗ್ರಹಿಸಿದನು.

---

333. ನಾತನಾರ್ ಅರುಳಿಚ್ಚೆಯ್ಯ ನಮ್ಬಿಯಾ ರೂರರ್ 'ನಾನಿಙ್ಕು
ಏತನ್ತೀರ್ ನೆಱಿಯೈ ಪ್ಪೆಱ್ಱೇನ್' ಎನ್‌ಱೆತಿರ್ ವಣಙ್ಕಿಪ್ಪೋಱ್ಱಿ
'ನೀತಿಯಾಲ್ ಅವರ್‌ಕಳ್ ತಮ್ಮೈ ಪ್ಪಣಿನ್ದುನೀ ನಿಱೈಚೊಲ್ ಮಾಲೈ
ಕೋತಿಲಾ ವಾಯ್‌ಮೈ ಯಾಲೇ ಪಾ' ಟೆನ ಅಣ್ಣಲ್ ಕೂಱ.

334. ತನ್‌ನೈಯಾ ಳುಟೈಯ ನಾತನ್ ತಾನರುಳ್ ಚೆಯ್ಯ ಕ್ಕೇಟ್ಟು
ಚ್ಚೆನ್‌ನಿಯಾಲ್ ವಣಙ್ಕಿ ನಿನ್‌ಱ ತಿರುಮುನೈ ಪ್ಪಾಟಿ ನಾಟರ್
'ಇನ್‌ನವಾ ಱೆನ್‌ನ ಪಣ್ಪಿನ್ ಱೇತ್ತುಕೇನ್? ಅತಱ್ಕು ಯಾನಾರ್?
ಪನ್‌ನುಪಾ ಮಾಲೈ ಪಾಟುಮ್ ಪರಿಚೆನ ಕ್ಕರುಳ್‌ಚೆಯ್' ಎನ್‌ನ.

335. ತೊಲ್ಲೈಮಾಲ್ ವರೈಪಯನ್ತ ತೂಯಾಳ್‌ತನ್ ತಿರುಪ್ಪಾಕನ್
ಅಲ್ಲಲ್‌ತೀರ್ ನ್ತುಲಕುಯ್ಯ ಮಱೈಯಳಿತ್ತ ತಿರುವಾಕ್ಕಾಲ್
'ತಿಲ್ಲೈವಾಟ್ ಅನ್ತಣರ್‌ತಮ್ ಅಟಿಯಾರ್‌ಕ್ಕುಮ್ ಅಟಿಯೇನ್ ಎನ್‌ಱು
ಎಲ್ಲೈಯಿಲ್‌ವಣ್ ಪುಕಟಿಯಾರೈ ಎಟುತ್ತುಚ್ಚೈಪ್ಪಾ ಮೊಟಿ' ಎನ್‌ಱಾರ್.

336. ಮಹಿಮೆಯು ನೆಲೆಗೊಂಡ ಬಯಲುಗಳಿಂದ ಸುತ್ತುವರಿದ ತಿರುವಾರೂರ ತ್ಯಾಗೇಶರ ಪಾದಗಳಲ್ಲಿ ತಮ್ಮ ಮುಡಿಯು ತಾಗುವಂತೆ ನಮಿಸಿ ಅವರ ದಿವ್ಯಾನುಗ್ರಹ ವನ್ನು ಪಡೆದಿದ್ದ ಕಾಲದಲ್ಲಿ ಬ್ರಹ್ಮವಿಷ್ಣುಗಳಿಂದ ನೆನೆಯಲೂ ಸಾಧ್ಯವಿಲ್ಲದ ಆ ತ್ಯಾಗೇಶರು ಅಲ್ಲಿಂದ ಅಂತರ್ಧಾನವನ್ನು ಹೊಂದಲು ಅದನ್ನು ಕಂಡು ನಂಬಿಯು ದೇವಾಶಿರಿಯ ಮಂಟಪ (ಸಾವಿರಕಂಬದ ಮಂಟಪ) ದಲ್ಲಿ ಕೂಡಿರುವ ಭಕ್ತರೆಡೆಯಲ್ಲಿ ಸೇರುವುದಕ್ಕೆ ಅಲ್ಲಿ ಹೋಗುವವನಾಗಿ,

337. ಭಕ್ತರುಗಳ ಕೂಟದಿಂದ ದೂರವಾಗಿ ನಿಂತೇ ಹಲರೀತಿಯಾಗಿ ನಮಿ ಸಿಯೂ, ಪ್ರೇಮವು ಅಧಿಕವಾಗಿದ್ದುದರಿಂದ ಮತ್ತೂ ವಂದಿಸಿಯೂ ಎದ್ದು, ಆಮೇಲೆ ಸಮೀಪಕ್ಕೆ ಹೋಗಿ ನಿಂತುಕೊಂಡು, ಯಾವ ಕಾಲದಲ್ಲಿಯೂ ನಾಶವಾಗದ (ಪರಮೇಶ್ವರ ನಲ್ಲಿ ಸ್ಥಿರವಾಗಿ ನಿಲ್ಲುವ) ವೀರವುಳ್ಳವರಾಗಿರುವ, ಅವರುಗಳೊಬ್ಬೊಬ್ಬರಿಗೂ, ಬೇರೆ ಬೇರೆಯಾಗಿ ಅವರ ಶ್ರೀನಾಮಗಳನ್ನು ಹೇಳಿ, 'ಇವರಿಗೆ ಭೃತ್ಯನಾಗಿರುವೆನು' ಎಂದೂ, ಆಮೇಲೆ ಭಕ್ತರ ಕೂಟಗಳನ್ನು ಕುರಿತು ಪ್ರತ್ಯಪ್ರತ್ಯೇಕವಾಗಿ, 'ಈ ಕೂಟದವರಿಗೆ ಭೃತ್ಯ ನಾಗಿರುವೆನು, ಇವರಿಗೆ ಭೃತ್ಯನಾಗಿರುವೆನು' ಎಂದೂ ಸ್ತುತಿಸಿ, ಮೇಲೆಮೇಲೇಳುವ ಆಸೆಯ ಕಾರಣದಿಂದ, 'ತಿರುತ್ತೊಂಡ ತ್ತೊಗೈ' (ಭಕ್ತರ ಕೂಟ) ಎಂದು ಹೆಸರುಳ್ಳ ತಿರುಪ್ಪದಿಕವನ್ನು ಅನುಗ್ರಹಿಸುವುದಕ್ಕಾಗಿ,

338. ದೇವರು ಎತ್ತಿಕೊಟ್ಟ ವಾಕ್ಯವನ್ನೇ ಮೊದಲಾಗಿಟ್ಟು ತೊಡಗಿದ ತಮಿಳು ಪ್ರಬಂಧವಾಗಿ, ಪರಿಶುದ್ಧವಾದ ಅರ್ಥವನ್ನು ಕೊಂಡು, 'ತಿರುತ್ತೊಂಡತ್ತೊಗೈ' ಎಂಬ ತಿರುಪ್ಪದಿಕವನ್ನು, ಆ ಪರಮೇಶ್ವರನಿಂದ ಅನುಗ್ರಹಿತನಾಗಿ ಜ್ಞಾನವನ್ನು ಪಡೆದುದರಿಂದ ಲೋಕವು ಸ್ತುತಿಸುವಂತೆ ತಲೆಯುವನಾದ (ಮೊದಲಿನವನಾದ) ನಂಬಿಯು ಹಾಡಿ ಮುಗಿಸಿ, ಆ ತಿರುಕೂಟದ ಮುಂದೆ ನಮಿಸಿದನು.

---

336. ಮನ್ನುಚೀರ್ ವಯಲ್ಆರೂರ್ ಮನ್ನವರೈ ವನ್‌ಱೊಣ್ಡರ್
ಚೆನ್ನಿಯುಱ ಅಟಿವಣಙ್ಕಿ ತ್ತಿರುವರುಳ್ಮೇ ಱ್ಕೊಳ್ಪೊೞುತಿಲ್
ಮುನ್ನಮಾಲ್ ಅಯನ್ಅಱಿಯಾ ಮುತಲ್ವರ್ತಾಮ್ ಎೞುನ್ತರುಳ
ಅನ್ನಿಲೈಕ ಣ್ಟಿಯವರ್ಪಾಲ್ ಚಾರ್ವತನು ಕ್ಕಣ್ಣೈಕಿನ್ಱಾರ್.

337. ತೂರತ್ತೇ ತಿರುಕ್ಕೂಟ್ಟಮ್ ಪಲಮುಱೈಯಾಲ್ ತೊೞುತನ್ಪು
ಚೇರತ್ತಾೞ್ ನ್ತೆೞುನ್ತರುಕು ಚೆನ್ಱಯ್ತಿ ನಿನ್ಱಿಱೈಯಾ
ವೀರತ್ತಾರ್ ಎಲ್ಲಾರ್ಕ್ಕು ನ್ತನಿತ್ತನಿವೇಱು ಅಟಿಯೇನ್ ಎನ್ಱು
ಆರ್ವತ್ತಾಲ್ ತಿರುತ್ತೊಣ್ಟ ತ್ತೊಕೈಪ್ಪತಿಕಮ್ ಅರುಳ್ಚೆಯ್ವಾರ್.

338. ತಮ್ಬಿರುಮಾನ್ ಕೊಟುತ್ತಮೊೞಿ ಮುತಲಾಕ ತ್ತಮಿೞ್ಮಾಲೈ
ಚ್ಚೆಮ್ಪೊರುಳಾಲ್ ತಿರುತ್ತೊಣ್ಟ ತ್ತೊಕೈಯಾನ ತಿರುಪ್ಪತಿಕಮ್
ಉಮ್ಬರ್ಪಿರಾನ್ ತಾನರುಳುಮ್ ಉಣರ್ವುಪೆಱ ಉಲಕೇತ್ತ
ಎಮ್ಬಿರುಮಾನ್ ವನ್‌ಱೊಣ್ಡರ್ ಪಾಟಿ ಅವರ್ ಎತಿರ್ಪಣಿನ್ತಾರ್.

339. ಪರಮೇಶ್ವರನ ಭೃತ್ಯರು ಹೆಚ್ಚಾದ ಸಂತೋಷವನ್ನು ಹೊಂದಲು, ಆರೂರ ನಂಬಿಯು ತಿರುಕೊಟದ ನಡುವೆ ತಾನೂ ನಿಂತನು. ತ್ಯಾಗೇಶರ ಅನುಗ್ರಹವನ್ನು ಪಡೆದ ನಂಬಿಯು ಹಾಡಿದ ಆ ತಮಿಳು ತಿರುಪ್ಪದಿಕವನ್ನು ಯುಕ್ತವಾಗಿ ವಿಭಜಿಸಿ, ಪರಮೇಶ್ವರನಿಗೆ ಪ್ರೀತಿಕಾರಣವಾದ ಭೃತ್ಯರ ಸೇವೆಯ ಚರಿತ್ರಗಳನ್ನೂ ಸ್ವಭಾವಗಳನ್ನೂ ಎತ್ತಿ ಸ್ತುತಿಸಲು ಮೇಲ್ಕೊಳ್ಳುವೆನು.

(ಇದು ಶೇಕ್ಕಿಳಾರರ ಮಾತು.)

ತಿರುಮಲೈ ಸರ್ಗವು ಸಮಾಪ್ತವು.

I. ಚಿದಂಬರ ದೀಕ್ಷಿತರು

340. ಆದಿಯೂ ನಡುವೂ ಆಗಿ ಪಾಶಪಶುಜ್ಞಾನಗಳಿಂದ ವಿವೇಚಿಸಿ ತಿಳಿದುಕೊಳ್ಳಲಾಗದ, ಶಿವಜ್ಞಾನದಿಂದ ತಿಳಿದುಬರುವ ವಸ್ತುವಾಗಿ, ತೋರಿಸಿಕೊಡುವ ತಿಳಿವಾದ ಪ್ರಕಾಶವೂ, ಅದು ತೋರಿಸಲು ತೋರುವ ಅರಿವೂ ಆಗಿ, ಶುದ್ಧ ಅಶುದ್ಧಗಳೆಂಬ ಎರಡು ಬಗೆಯ ಮಾಯೆಗಳಿಂದ ತೋರಿದ ಯಾವ ವಸ್ತುವೂ ಆಗಿ, ಅವೆಲ್ಲವುಗಳಲ್ಲಿಯೂ ಆ ವಿಧವಾಗಿ ಸೇರಿದ ಒಂದು ವಸ್ತುವೇ ಆಗಿ, ಸ್ತ್ರೀಯೂ ಅದರೊಡನೆ ಜತೆಯಾದ ಪುರುಷನೂ ಆಗಿ, ಬೋಧಿಸಿ ನಿಲ್ಲುವ ತಿಲ್ಲೆಯ (ಚಿದಂಬರದ) ಸಭೆಯಲ್ಲಿ ನರ್ತನವನ್ನು ಮಾಡುವ ತಿರುನಟನವು ನಮ್ಮಿಂದ ಸ್ತುತಿಸಬೇಕಾದುದು! ಸ್ತುತಿಸಬೇಕಾದುದು!

---

339. ಉಮ್ಪರ್ನಾ ಯಕರಟಿಯಾರ್ ಪೇರುವಕೈ ತಾಮೆಯ್ತ
ನಮ್ಪಿಯಾ ರೂರರ್ತಿರು ಕ್ಕೂಟ್ಟತ್ತಿನ್ ನಟುವಣೈನ್ದಾರ್;
ತಮ್ಪಿರಾನ್ ತೋಟರವರ್ ತಾಮ್ಕೊಟಿನ್ದ ತಮಿಟ್ಮುಟಿಕ್ಕೈಯೋ
ಎಮ್ಪಿರಾನ್ ತಮರ್ಕಳ್ತಿರು ತ್ತೊಣ್ಟತ್ತಿಲ್ ಉಟಿಕಿನ್ಟಿೀನ್.

I. ತಿಲ್ಲೈವಾಟಿನ್ತಣರ್ ಪುರಾಣಮ್

340. ಆತಿಯಾಯ್ ನಟುವುಮ್ ಆಕಿ ಅಳವಿಲಾ ಅಳವುಮ್ ಆಕಿ
ಚ್ಯೋತಿಯಾಯ್ ಉಣರ್ವುಮ್ ಆಕಿ ತ್ತೋನ್ಟಿಯ ಪೊರುಳುಮ್ ಆಕಿ
ಪೇತಿಯಾ ಏಕಮ್ ಆಕಿ ಪ್ಪೆಣ್ಣುಮಾಯ್ ಆಣುಮ್ ಆಕಿ
ಪ್ಪೋತಿಯಾ ನಿಟ್ಕುಮ್ ತಿಲ್ಲೈ ಪ್ಪೊತುನಟಮ್ ಪೋಟ್ಟಿ! ಪೋಟ್ಟಿ!

341. ಪಶುಜ್ಞಾನ ಪಾಶಜ್ಞಾನಗಳಿಂದ ಕಲ್ಪಿಸಲ್ಪಟ್ಟ ಅಳತೆಗಳನ್ನೆಲ್ಲಾ ದಾಟಿ ನಿಂತ, ಹಿಂದೆ ಹಾಡಿ ನಿರೂಪಿಸಿದ ಆ ಜ್ಯೋತಿವಸ್ತುವಾದುದು ಕೃಪೆಯನ್ನೇ ದೇಹವಾಗಿಸಿ ಕೊಂಡು ತಿಳಿಯುವುದಕ್ಕೆ ಅಸಾಧ್ಯವಾದ, ಅದ್ಭುತವಾದ ಸ್ವರೂಪದಲ್ಲಿ ಬಹುಕಾಲ ನಿಂತು, ವೇದಶಿರಸ್ಸಾಗಿರುವ ಉಪನಿಷದಗಳಲ್ಲಿ ತಿಳಿಸಲ್ಪಡುವುದೂ, ಜ್ಞಾನಾಕಾಶದ ರೂಪವೇ ಆದ ತಿಲ್ಲೆ ತಿರುಚಿದಂಬರದಲ್ಲಿ ನೆಲಸಿ ನಿಂತು ಸುಂದರವಾಗಿ ನಟನವಾಡುವ ನೂಪುರಗಳಿಂದ ಅಲಂಕೃತವಾದುದೂ ಆದ ಶ್ರೀಪಾದವು, ನಮ್ಮಿಂದ ಸ್ತುತಿಸಲ್ಪಡುವುದು! ಸ್ತುತಿಸಲ್ಪಡುವುದು!

342. ಈ ರೀತಿ ನಟರಾಜ ಪರಮೇಶ್ವರನ ಶ್ರೀಪಾದಗಳನ್ನು ಸ್ತುತಿಸಿ, ಅವುಗಳ ಸಹಾಯದಿಂದ, ಅವರನ್ನು ತಲೆಯವರಾಗಿ (ಮೊದಲಿಗರಾಗಿ) ಮಾಡಿಕೊಂಡು, ಈ ಪರಂಪರೆಯಾಗಿ ವರ್ಧಿಸಿಕೊಂಡು ಬರುವ ಚಿದಂಬರ ದೀಕ್ಷಿತರ ಉತ್ತಮ ಸ್ವಭಾವ ಗುಣಗಳನ್ನು ಹೇಳಹೋಗುವೆನು. ಇವರು ವಿಭೂತಿಯನ್ನು ಮೈಯೆಲ್ಲಾ ಲೇಪಿಸಿ ಕೊಂಡವರಾಗಿ, ದಿವ್ಯಸ್ವರೂಪವುಳ್ಳ ನಟರಾಜನಿಗೆ ತಿರುತ್ತೊಂಡರಾಗುವ ಪೂಜಾರಿಗಳೆಂಬ ಪ್ರಯೋಜನವನ್ನು ಪಡೆದವರು. ಎಲ್ಲಾ ಹಿರಿಮೆಗಳಿಗೂ ಒಂದು ಎಲ್ಲೆಯಾಗಿ ಇರುವವರು. ಸೇವೆಮಾಡಿ ಬಾಳುವುದಕ್ಕೆ ಹೇತುವಾದ ಒಳ್ಳೆಯ ನಡತೆಯಲ್ಲಿ ಸ್ಥಿರವಾಗಿ ನಿಂತವರು. ಮೇಲುಮೇಲೂ ಹೆಚ್ಚುತ್ತಿರುವ ಪ್ರೀತಿಯಿಂದ ಶ್ರೀಪಾದಗಳನ್ನೇ ಆಧಾರವಾಗಿಸಿಕೊಂಡು ತಪವನ್ನು ಮಾಡಿ ಬಾಳುವವರು.

343. ವರ್ಧಿಸಿದ ಸೌಭಾಗ್ಯದಲ್ಲಿ, ಅತಿಶಯವಾದ ಕಾಂತಿಯುತವಾದ ದಿವ್ಯಾಭರಣಗಳನ್ನು ವಿಧಿವತ್ತಾಗಿ ಚೆಲುವಾಗಿ ಪರಮೇಶ್ವರನ ದಿವ್ಯಶರೀರದಲ್ಲಿಟ್ಟು ಅಲಂಕರಿಸಿ, ವೇದವಾಕ್ಯಗಳಿಂದ ಸ್ತುತಿಸಿ, ತಾವು ಮಾಡುವುದಕ್ಕೆ ತಕ್ಕುದಾದ ಇತರ ಸೇವೆಗಳನ್ನೂ ಪ್ರಶಸ್ತವೆನಿಸುವಂತೆ ಮಾಡಿ, ಪರಮೇಶ್ವರನ ದೇಗುಲದೊಳಗೆ ಅಭಿಷೇಕ ಮೊದಲಾದ ನಿತ್ಯಸೇವೆಗಳನ್ನು ಮಾಡಿ ಬರುವವರು.

---

341. ಕಱ್ಪನೈ ಕಟನ್ತ ಚೋತಿ ಕರುಣೈಯೇ ಉರುವ ಮಾಕಿ
ಅಱ್ಪುತ ಕ್ಕೋಲ ನೀಟಿ ಅರುಮಱೈ ಚ್ಚಿರತ್ತಿನ್ ಮೇಲಾಮ್
ಚಿಱ್ಪರ ವಿಯೋಮ ಮಾಕು ನ್ತಿರುಚ್ಚಿಱ್ ಱಮ್ಪಲತ್ತುಳ್ ನಿನ್ಱು
ಪೊಱ್ಪುಟನ್ ನಟಮ್ಚೆಯ್ ಕಿನ್ಱ ಪೂಙ್ಕಟಿಲ್ ಪೋಱ್ಱಿ! ಪೋಱ್ಱಿ!

342. ಪೋಱ್ಱಿನೀಳ್ ತಿಲ್ಲೈ ವಾಟ್ಅ ನ್ತಣರ್ತಿಱಮ್ ಪುಕಲ ಲುಱ್ಱೇನ್;
ನೀಱ್ಱಿನಾಲ್ ನಿಱೈನ್ತ ಕೋಲ ನಿರುತ್ತನು ಕ್ಕುರಿಯ ತೊಣ್ಡಾಮ್
ಪೇಱ್ಱಿನಾರ್; ಪೆರುಮೈ ಕ್ಕೆಲ್ಲೈ ಆಯಿನಾರ್ ಪೇಣಿ ವಾಟುಮ್
ಆಱ್ಱಿನಾರ್; ಪೆರುಕುಮ್ ಅನ್ಪಾಲ್ ಅಟಿತ್ತವಮ್ ಪುರಿನ್ತು ವಾಟ್ವಾರ್.

343. ಪೊಙ್ಕಿಯ ತಿರುವಿಲ್ ನೀಟುಮ್ ಪೊಱ್ಪುಟೈ ಪ್ಪಣಿಕಳ್ ಏನ್ತಿ
ಮಙ್ಕಲ ತ್ತೊಟಿಲ್ಕಳ್ ಚೆಯ್ತು ಮಱೈಕಳಾಲ್ ತುತಿತ್ತು ಮಱ್ಱುಮ್
ತಙ್ಕಳು ಕ್ಕೇಱ್ಱ ಪಣ್ಪಿಲ್ ತರುಮ್ಪಣಿ ತ್ತಲೈನಿನ್ ಱಿಯಱ್ಱೇ
ಅಙ್ಕಣರ್ ಕೋಯಿಲ್ ಉಳ್ಳಾ ಅಕಮ್ಪಟಿ ತ್ತೊಣ್ಟು ಚೆಯ್ವಾರ್.

344. ಧರ್ಮವನ್ನೇ ಹುರುಳಾಗಿ ಕೈಕೊಂಡು, ತತ್ವಮಾರ್ಗದಲ್ಲಿ ಹೋಗುವ ಚತುರ್ವೇದಗಳನ್ನೂ ಪರಿಪೂರ್ಣವಾಗಿ ಅಭ್ಯಾಸಮಾಡಿ, ಅವುಗಳಲ್ಲಿ ಪಾರಂಗತರಾಗಿ, ಲೋಕವು ಪರಮೇಶ್ವರನ ಅನುಗ್ರಹವನ್ನು ಪಡೆದು ಜೀವಿಸುವುದಕ್ಕೆ, ಕ್ರಮದಂತೆ ಬರುವ ಆಹವನೀಯ, ದಕ್ಷಿಣಾಗ್ನಿ, ಗಾರ್ಹಪತ್ಯಗಳೆಂಬ ಮೂರು ಅಗ್ನಿಗಳನ್ನೂ ಲೋಪರಹಿತ ವಾಗಿ ತಪ್ಪದೆ ವರ್ಧಿಸಿ, ಕಾಪಾಡಿ, ಅನುಗ್ರಹನಟನವನ್ನು ಮಾಡುವ ಪರಮೇಶ್ವರನಿಗೆ ಸೇವೆ ಮಾಡಿದ ಸೌಭಾಗ್ಯದಿಂದ ಅತಿಶಯಿಸಿ ಶೋಭಿಸುವ ಮೇಲ್ಮೆಯುಳ್ಳವರು.

345. ಇವರು ದೋಷರಹಿತವಾದ ವಂಶದಲ್ಲಿ ಪರಂಪರೆಯಾಗಿ ಬಂದುದಲ್ಲದೆ, ನಡುವೆಯೇನೂ ಲೋಪಬಾರದ ಒಳ್ಳೆಯ ನಡತೆಯನ್ನು ಮೇಲ್ಕೊಂಡವರು. ತಮಗೆ ಸ್ವಭಾವವಾದ ವೇದಾಧ್ಯಯನ ಮೊದಲಾದ ಆರು ಉದ್ಯೋಗಗಳನ್ನೂ ನಿಯಮದಂತೆ ಮಾಡಿಕೊಂಡು ಬರುವುದರಿಂದ ಲೋಕದ ಜೀವಿಗಳಿಗೆಲ್ಲಾ ಕಲಿಯು ಬಾರದಂತೆ ಕಾಪಾಡಿ ದವರು. ತಾವು ಹೊಂದಬಹುದಾದ ಸ್ಥಿರವಾದ ಪ್ರಯೋಜನವೆಂಬುದು ವಿಭೂತಿಯ ಮಾರ್ಗದಲ್ಲಿ ಪಡೆಯುವ, ಅನುಗ್ರಹಸೌಭಾಗ್ಯವೇ ಎಂದುಕೊಂಡು ಜೀವನ ನಡೆಸಿ, ಅದರಲ್ಲಿ ಇನ್ನೂ ಅಧಿಕ ಉತ್ಸಾಹವುಳ್ಳವರು. ಶಿವಪರಮಾತ್ಮನೆಡೆಯಲ್ಲಿ ತಾವು ಪಡೆಯತಕ್ಕ ದೊಡ್ಡ ಪ್ರಯೋಜನವಾದುದು ದೇವರ ಶ್ರೀಪಾದಗಳಲ್ಲಿ ನಿಶ್ಚಲವಾಗಿ ಹಿಡಿದ ಭಕ್ತಿಯೊಂದೇ ಆಗಿರುವುದೆಂದುಕೊಂಡ ಹಿರಿದಾದ ಜೀವನವನ್ನು ನಡೆಸುವವರು.

346. ಜ್ಞಾನವನ್ನೇ ಮೊದಲಾಗಿಟ್ಟು ಗಣಿಸಲಾದ ನಾಲ್ಕರಲ್ಲಿಯೂ ದೋಷ ವನ್ನು ನೀಗಿಸಲು ತಿಳಿದು, ಅವುಗಳಲ್ಲಿಯೂ ಹೆಚ್ಚಾಗಿ ಶಕ್ತಿಯನ್ನು ಪಡೆದವರು. ಧ್ಯಾನದಲ್ಲಿಯೂ ತಪಸ್ಸಿನಲ್ಲಿಯೂ ಶ್ರೇಷ್ಠರಾದವರು. ಎಲ್ಲದರಲ್ಲಿಯೂ ಶ್ರೇಷ್ಠವಾದವು ಗಳನ್ನೇ ಆಶಿಸುವವರು. ಒಂದು ದೋಷವೂ ಇಲ್ಲದವರು. - ಲೋಕವೆಲ್ಲಾ ಸ್ತುತಿಸುವ ಮಾನ ಕ್ಷಮಾ ಗುಣಗಳನ್ನು ಮೇಲ್ಕೊಂಡು ಗೃಹಸ್ಥಧರ್ಮವನ್ನು ದೋಷವಿಲ್ಲದೆ ನೆರವೇರಿಸಿಕೊಂಡು ಬಾಳುವವರು.

---

344. ವರುಮುಱೈ ಎರಿಮೂನ್ ಱೋಮ್ಬಿ ಮನ್ನುಯಿರ್ ಅರುಳಾಲ್ ಮಲ್ಕ
ತ್ತರುಮಮೇ ಪೊರುಳಾ ಕೊಣ್ಡು ತತ್ತುವ ನೆಱಿಯಿಱ್ ಚೆಲ್ಲುಮ್
ಅರುಮಱೈ ನಾನ್ಕಿನೋಟಾ ಱಙ್ಗಮುಮ್ ಪಯಿನ್ಱು ವಲ್ಲಾರ್;
ತಿರುನಟಮ್ ಪುರಿವಾರ್ ಕ್ಕಾಳಾಮ್ ತಿರುವಿನಾಱ್ ಚಿಱನ್ತ ಚೀರಾರ್.

345. ಮಱುವಿಲಾ ಮರಪಿನ್ ವನ್ತು ಮಾಱಿಲಾ ಒಟುಕ್ಕಮ್ ಪೂಣ್ಡಾರ್;
ಅಱುತೊಟಿಲ್ ಆಟ್ಚಿ ಯಾಲೇ ಅರುಙ್ಕಲಿ ನೀಕ್ಕಿ ಉಳ್ಳಾರ್;
ಉಱುವತು ನೀಱ್ಱಿನ್ ಚೆಲ್ವಮ್ ಎನಕ್ಕೊಳುಮ್ ಉಳ್ಳಮ್ ಮಿಕ್ಕಾರ್;
ಪೆಱುವತು ಚಿವನ್ಪಾಲ್ ಅನ್ಪಾಮ್ ಪೇಱೆನ್ನ ಪ್ಪೆರುಕಿ ವಾಟ್ವಾರ್.

346. ಞಾನಮೇ ಮುತಲಾ ನಾನ್ಕುಮ್ ನವೈಯಱ ತೆರಿನ್ತು ಮಿಕ್ಕಾರ್;
ತಾನಮುಮ್ ತವಮುಮ್ ವಲ್ಲಾರ್; ತಕುತಿಯಿನ್ ಪಕುತಿ ಚಾರ್ನ್ತಾರ್;
ಊನಮೇಲ್ ಒನ್ಱುಮ್ ಇಲ್ಲಾರ್; ಉಲಕೆಲಾಮ್ ಪುಕಟ್ನ್ತು ಪೋಱ್ಱುಮ್
ಮಾನಮುಮ್ ಪೊಱೈಯುಮ್ ತಾಙ್ಕಿ ಮನೈ ಅಱಮ್ ಪುರಿನ್ತು ವಾಟ್ವಾರ್.

347. ಋಜುಸ್ವಭಾವದ ಪರಿಪೂರ್ಣತೆಯಿಂದ ಆಣವಮಲವನ್ನು ನೀಗಿ, ಅದು ಅಡಗಿಸಿದ ಮನಸ್ಸಿರುವ ದೈವಿಕ ಸ್ವಭಾವವಿರುವ ಮೂರುಸಾವಿರ ವೇದಿಯ ಬ್ರಾಹ್ಮಣರು ಅವರು. ಈ ಜನ್ಮದಲ್ಲಿಯೇ ಪರಮೇಶ್ವರನನ್ನು ತಾವು ಸ್ತುತಿಸಿ ಬಾಳುವಂತಹ ಯೋಗ್ಯತೆಯನ್ನು ಪಡೆದವರು. ಆದುದರಿಂದ ಇನ್ನು ಮೇಲೆ ಪಡೆಯಬಹುದಾದ ಇದಕ್ಕಿಂತಲೂ ಹೆಚ್ಚಾದ ಪ್ರಯೋಜನವು ಅವರಿಗೆ ಬೇರೆ ಇಲ್ಲ. ಮೇಲೆ ಹೇಳಿದ ಎಲ್ಲವುಗಳಲ್ಲಿಯೂ ತಮಗೆ ಸಮಾನರಾದವರು ತಾವೇ ಅಲ್ಲದೆ ಬೇರೆ ಅಲ್ಲ ಎನ್ನುವಂತಹ ನೆಲೆಯನ್ನು ಪಡೆದು ಆ ನೆಲೆಯಲ್ಲಿಯೇ ಹೆಚ್ಚು ಶ್ರೇಷ್ಠರಾದವರು.

348. ತೆಂಕನಾಡ ತಮಿಳಿನ ಪ್ರಯೋಜನವಾಗಿ ಪ್ರಕಾಶಿಸುವ ತಿರುತ್ತೊಂಡ ತ್ತೊಗೈಯನ್ನು ಹಾಡುವುದಕ್ಕೆ, ಹಿಂದೆ ವನ್‌ತೊಂಡರಾದ ಸುಂದರಮೂರ್ತಿ ಸ್ವಾಮಿಗಳಿಗೆ ಆಜ್ಞೆಯನ್ನು ಕೊಟ್ಟು, ಮೊದಲ ವಾಕ್ಯವನ್ನು ತಿರುವಾರೂರ ತ್ಯಾಗೇಶರು ತಾವೇ ಹೇಳಿಕೊಟ್ಟು, ಆ ಗ್ರಂಥದ ಮೊದಲಲ್ಲಿಯೇ ಘೋಷಿಸಲಾದ 'ತಿಲ್ಲೆವಾಟಂದಣರ್ತ ಮ್ಮಡಿಯಾರ್ಕ್ಕುಮಡಿಯೇನ್' ಎಂಬ ವಾಕ್ಯದಿಂದ ಸೂಚಿಸಿದ ವಸ್ತುವಾದವರು ಇವರೇ ಎಂದು ಕಾಣುವೆವಾದರೂ, ಇಂದು ಇವರ ಮಹಿಮೆಯು ನಮ್ಮ ವರ್ಣನೆಯ ಮಾತಿನ ಮೇರೆಯೊಳಗೆ ಹಿಡಿದೀತೇ ?

349. ವಿಶಾಲವಾದ ಈ ಲೋಕದಲ್ಲಿ ಮೇಲ್ಮೆವಡೆದ ತಿಲ್ಲೈ ವಾಟಂದಣರಾದ ಲೋಕವೆಲ್ಲಾ ಹೊಗಳಿ ಸ್ತುತಿಸುವ ದೈವಿಕರಾದ ವೇದಿಯ ಬ್ರಾಹ್ಮಣರು ನಿತ್ಯವೂ ತಿಲ್ಲೈ ಚಿದಂಬರದಲ್ಲಿ ಪರವಸ್ತುವಿನ ಅನುಗ್ರಹ ನಟನೆಯನ್ನು ಆಶಿಸಿ, ಸ್ತುತಿಸಿ, ಜೀವಿಸುವವರಾಗಿರುತ್ತಿರಲು, ತಿರುನೀಲಕಂಠ ಎಂಬ ಹೆಸರಿನಿಂದ ಖ್ಯಾತಿಹೊಂದಿದ್ದ ಕುಂಬಾರನಾದ ಭಕ್ತನು ದೀರ್ಘಕಾಲ ಮೇಲ್ಕೊಂಡು ನಡೆಸಿದ ಸತ್ಯಮಾರ್ಗವನ್ನು ಪ್ರಕಾಶಿಸುವುದಕ್ಕೆಡೆಯಾದ ತಪಸ್ಸಿನ ಚರಿತ್ರೆಯನ್ನು ಹೇಳತೊಡಗುವೆನು

---

347. ಚೆಮ್ಮೈಯಾಲ್ ತಣಿನ್ದ ಚಿನ್ದೈ ತ್ತೆಯ್ವವೇ ತಿಯರ್‌ಕಳಾನಾರ್
ಮುಮ್ಮೈಯಾಯಿರವರ್ ತಾಙ್ಗಳ್ ಪೋಱ್ಱಿಟ ಮುತಲ್ವ ನಾರೈ
ಇಮ್ಮೈಯೇ ಪೆಱ್ಱು ವಾಟ್ವಾರ್; ಇನಿಪ್ಪೆಱುಮ್ ಪೇಱೊನ್ ಱಿಲ್ಲಾರ್;
ತಮ್ಮೈಯೇ ತಮಕ್ಕೊಪ್ಪಾನ ನಿಲೈಮೈಯಾಲ್ ತಲೈಮೈ ಚಾರ್‌ನ್ದಾರ್.

348. ಇನ್‌ಱವರ್ ಪೆರುಮ್ಮೈ ಎಮ್ಮಾಲ್ ಇಯಮ್ಬಲಾಮ್ ಎಲ್ಲೈ ತ್ತಾಮೋ?
ತೆನ್‌ಱಮಿಟ್‌ಪ್ಪಯನಾಯ್ ಉಳ್ಳ ತಿರುತ್ತೊಣ್ಡ ತ್ತೊಕೈಮುನ್ ಪಾಟ
ಅನ್‌ಱುವನ್ ತೊಣ್ಡರ್ ತಮ್ಮೈ ಅರುಳಿಯ ಆರೂರ್ ಅಣ್ಣಲ್
ಮುನ್‌ತಿರು ವಾಕ್ಕಾಲ್ ಕೋತ್ತ ಮುತಱ್‌ಪೊರು ಳಾನಾರ್ ಎನ್‌ಱಾಲ್.

349. ಅಕಲಿಟತ್ತುಯರ್‌ನ್ದ ತಿಲ್ಲೈ ಅನ್ದಣರ್ ಅಕಿಲಮ್ ಎಲ್ಲಾಮ್
ಪುಕಟ್‌ತಿರು ಮಱೈಯೋರ್ ಎನ್‌ಱುಮ್ ಪೊತುನಟಮ್ ಪೋಱ್ಱಿ ವಾಟ!
ನಿಕಟ್‌ತಿರು ನೀಲ ಕಣ್ಟ ಕ್ಕುಯವನಾರ್ ನೀಟು ವಾಯ್‌ಮೈ
ತಿಕಟುಮ್‌ಅನ್ ಪುಟ್ಯೆಯ ತೊಣ್ಡರ್ ಚೆಯ್ತವಮ್ ಕೂಱ ಲುಱ್ಱಾಮ್.

2. ತಿರುನೀಲಕಂಠ ನಾಯನಾರ್

350. ಹಿಂದೆ ವಿಶದವಾಗಿ ನಿರೂಪಿಸಿದ, ಬ್ರಾಹ್ಮಣರು ವಾಸಿಸುವ ತಿಲ್ಲೈ (ಚಿದಂಬರ) ಎಂಬ ಪುರಾತನವಾದ ಊರಲ್ಲಿ ಕುಂಬಾರ ವಂಶದಲ್ಲಿ ಅವತರಿಸಿದವನು ತಿರುನೀಲಕಂಠ ನಾಯನಾರನು. ಈತನು ಉಮಾಮಾತೆಯುವರು ಸೇರಿರುವ ಒಂದು ಭಾಗವನ್ನು ನೋಡಿಕೊಂಡು, ಪರಿಪೂರ್ಣವಾದ ತಿರುಚಿದಂಬರದಲ್ಲಿ ನಿಂತು, ಆದಿಯೂ ಅಂತವೂ ಇಲ್ಲದ, ಅದ್ಭುತವೂ ಉಪಮಾತೀತವೂ ಆದ ಶ್ರೀ ನಟನವನ್ನು ಆಡುತ್ತಿರುವ, ಶಿವಪರಮಾತ್ಮನ ಶ್ರೀಪಾದಗಳನ್ನು ಸ್ತುತಿಸಿ, ನಮಿಸಿ, ಬರುತ್ತಿರುವ ಸದಾಚಾರದಲ್ಲಿ ಶ್ರೇಷ್ಠನಾದವನು.

351. ಈತನು ಅಸತ್ಯವನ್ನು ನೀಗಿ ಧರ್ಮಮಾರ್ಗದಲ್ಲಿ ಬಾಳುವವನು. ಗಂಗೆಯನ್ನು ಧರಿಸಿದ ಮುಡಿಯಿರುವ ಶಿವಪರಮಾತ್ಮನ ನಿಜಭಕ್ತರುಗಳಿಗೆ ಬೇಕಾದ ಸೇವೆಗಳನ್ನು ಮಾಡುವ ಆಶೆಯುಳ್ಳವನು. ಲೋಕದಲ್ಲಿ ಶ್ರೇಷ್ಠವೆನಿಸಿರುವ ಗೃಹಸ್ಥಾಶ್ರಮದಲ್ಲಿದ್ದು ವಿಧಿಯಂತೆ ಚಾಚೂತಪ್ಪದೆ ಅದನ್ನು ನಿರ್ವಹಿಸಿಕೊಂಡಿರುವವನು. ಶೈವದ ಸತ್ಯವಾದ ಭಾಗ್ಯದಲ್ಲಿ ಸೇರಿ ಬಾಳುವುದೇ ನಿಜವಾದುದೆಂದೆಣಿಸಿ ಅದರಲ್ಲಿ ಸೇರಿ ನಡೆಯುವ ಪವಿತ್ರಾಚರಣೆಯುಳ್ಳವನು.

352. ಈತನು ಉತ್ತಮ ಪರಂಪರೆಯ ತನ್ನ ವಂಶಮಾರ್ಗದ ಉದ್ಯೋಗವನ್ನೇ ನಡೆಸುತ್ತ, ಹಾಗೆ ಮಾಡುವ ಮಣ್ಣಿನ ಪಾತ್ರೆಗಳನ್ನು ತನ್ನ ಗೃಹಸ್ಥಾಶ್ರಮ ಜೀವನಕ್ಕೆ ಬೇಕಾದ ಪ್ರಮಾಣದಲ್ಲಿ ಮಾತ್ರ ಮಾಡಿಕೊಂಡು, ಶುಕ್ಲಪಕ್ಷದ ಚಂದ್ರನನ್ನು ಅಲಂಕಾರವಾಗಿ ಧರಿಸಿದ ಶಿವಪರಮಾತ್ಮನ ಭಕ್ತರಿಗೆ ಬೇಕಾದ ಮಣ್ಣಿನ ಭಿಕ್ಷಾಪಾತ್ರೆಗಳನ್ನು, ಅವರು ಯಾವಾಗಲೂ ಸಂತೋಷದಿಂದ ಕೊಳ್ಳುವ ಹಾಗೆ ಆದರದಿಂದ ಕೊಟ್ಟು, ಈ ರೀತಿ ಕಾಲಯಾಪನೆ ಮಾಡಿಕೊಂಡು ಬರುವಲ್ಲಿ, ಶ್ರೇಷ್ಠವಾದ ತಾರುಣ್ಯದ ಅಲ್ಪಸುಖದ (ಕಾಮದ) ಲೀಲೆಗಳಲ್ಲಿ ಈಡುಪಟ್ಟವನಾದನು.

---

2. ತಿರುನೀಲಕಣ್ಣ ನಾಯನಾರ್

350. ವೇತಿಯರ್ ತಿಲ್ಲೈ ಮೂತೂರ್ ವೇಟ್ಕೋವರ್ ಕುಲತ್ತು ವನ್ದಾರ್,
ಮಾತೊರು ಪಾಕಮ್ ನೋಕ್ಕಿ ಮನ್ನುಚಿ ಱಮ್ಬ ಲತ್ತೇ
ಆತಿಯುಮ್ ಮುಟಿವುಮ್ ಇಲ್ಲಾ ಅಱ್ಪುತ ತ್ತನಿಕ್ಕೂ ತ್ತಾಟುಮ್
ನಾತನಾರ್ ಕಟಲ್ಕಳ್ ವಾಟ್ತ್ತಿ ವಟಿಪಟುಮ್ ನಲತ್ತಿನ್ ಮಿಕ್ಕಾರ್.

351. ಪೊಯ್ಯ್ಕಟಿನ್ದು ಅಱತ್ತಿನ್ ವಾಟ್ವಾರ್; ಪುನಱ್ಚಟೈ ಮುಟಿಯಾರ್ ಕ್ಕನ್ಪರ್,
ಮೆಯ್ಯ್ಕಟಿ ಯಾರ್ಕಟ್ ಕಾನ ಪಣಿಚೆಯುಮ್ ವಿರುಪ್ಪಿಲ್ ನಿನ್ಱಾರ್;
ವೈಯಕಮ್ ಪೋಱ್ಱುಮ್ ಚೆಯ್ಕೈ ಮನೈಯಱಮ್ ಪುರಿನ್ದು ವಾಟ್ವಾರ್;
ಚೈವಮೆಯ್ ತ್ತಿರುವಿನ್ ಚಾರ್ವೇ ಪೊರುಳೆನ ಚ್ಚಾರು ನೀರಾರ್.

352. ಅಳವಿಲಾ ಮರಪಿನ್ ವಾಟ್ಕ್ಕೈ ಮಟ್ಕಲಮ್ ಅಮೈತ್ತು ಕ್ಕಾಕ್ಕಿ
ವಳರಿಳಮ್ ತಿಙ್ಕಟ್ ಕಣ್ಣಿ ಮನ್ಱುಳಾರ್ ಅಟಿಯಾರ್ ಕ್ಕೆನ್ಱುಮ್
ಉಳಮಕಿಟ್ ಚೆಯಪ್ಪಿನ್ ಮಲ್ಕ ಓಟಳಿತ್ತೊಟುಕುಮ್ ನಾಳಿಲ್
ಇಳಮೈಮೀ ತೂರ ಇನ್ಪ ತ್ತುಱೈಯಿನಿಲ್ ಎಳಿಯರ್ ಆನಾರ್.

353. ಈತನ ಹೆಂಡತಿಯು ಅರುಂಧತಿಗಿಂತ ಹೆಚ್ಚಿನ ಪಾತಿವ್ರತ್ಯವುಳ್ಳವಳಾಗಿದ್ದಳು. ಲೋಕದ ಉಜ್ಜೀವನಾರ್ಥವಾಗಿ, ಶಿವಪರಮಾತ್ಮನು ಹಾಲಕಡಲಿನಿಂದ ಉಕ್ಕಿ ಮೇಲೆದ್ದ ವಿಷವನ್ನು ಭುಂಜಿಸಲು (ಆ ವಿಷವು ಒಳಗೆ ಹೋಗಿ ಮರೆಯಾಗದೆ ನಮಗೆಲ್ಲಾ ತಿಳಿದುಬರುವ ಗುರುತಿನಂತೆ ಶೋಭಿಸಿ ಇರುವ ಹಾಗೆ) ತಾನು ಮಾಡಿದ ತಪಃ ಪ್ರಯೋಜನ ತಾನೇ ಆ ಅಳವಿನಲ್ಲಿ ನಿಲ್ಲುವಂತೆ ತಡೆಯಿತೋ ಎಂದು ಹೇಳುವಂತೆ, 'ಈ ಕಂಠವಲ್ಲವೇ ಅದನ್ನು ತಡೆದು ತಾನೇ ಧರಿಸಿ ನಿಲ್ಲುವುದು?' ಎಂಬಭಿಪ್ರಾಯದಲ್ಲಿ, ಈತನು ಶಿವಪರಮಾತ್ಮನಾದ ನಮ್ಮ ಈಶನ ಕಂಠವನ್ನೇ ಯಾವಾಗಲೂ ನೆನೆಯುವವನಾಗಿ 'ತಿರುನೀಲಕಂಠ' ಎಂದು ಸ್ತುತಿಸುತ್ತಿರುವನು.

354. ಜೇನು ತುಂಬಿದ ಚೆಂದಾವರೆಯಲ್ಲಿ ಶೋಭಿಸುವ ಲಕ್ಷ್ಮಿಗಿಂತಲೂ ಸೌಂದರ್ಯದಲ್ಲಿ ಹೆಚ್ಚಾದ ಹೆಂಡತಿಯು, ಮೇಲೆ ಹೇಳಿದ ಸ್ವಭಾವವುಳ್ಳ ತನ್ನ ಗಂಡನು ಒಂದುದಿನ ದೇವದಾಸಿಯ ಜೊತೆಯಲ್ಲಿದ್ದು ಮನೆಗೆ ಬಂದಾಗ ಅಭಿಮಾನದಿಂದುದಯಿಸಿದ ಮನೋವ್ಯಥೆಯನ್ನು ಸಹಿಸಲಾರದೆ, ಮೇಲ್ಕೊಂಡ ಪ್ರಣಯಕೋಪದಿಂದಾಗಿ, ಗೃಹಕೃತ್ಯವನ್ನೆಲ್ಲಾ ವಿಧಿಯಂತೆಯೇ ಮಾಡಿ ಮುಗಿಸಿಯೂ, ಗಂಡನ ದೇಹಸ್ಪರ್ಶವೊಂದನ್ನು ಮಾತ್ರ ಸಮ್ಮತಿಸದವಳಾದಳು.

355. ಆ ಮನೋವ್ಯಥೆಯನ್ನು ತೀರಿಸಲು, ಭಕ್ತನು ಸುಂದರಿಯಾದ ತನ್ನ ಪತ್ನಿಯ ಮುಂದೆ ಹೋಗಿ, ಬೇಕಾದುದೆಲ್ಲವನ್ನೂ ತಾಳ್ಮೆಯಿಂದ ಯಾಚಿಸಿ ಹೇಳಿ, ಇನ್ನು ಆಕೆಯು ಆ ವ್ಯಥೆಯನ್ನು ಬಿಟ್ಟಳೆಂದು ಆಕೆಯನ್ನು ಆಲಿಂಗಿಸಲು ಹೋಗುವಾಗ, 'ನೀವು ನಮ್ಮನ್ನು ಮುಟ್ಟುವುದಾದರೆ ತಿರುನೀಲಕಂಠದ ಆಣೆ ನಿಮ್ಮ ಮೇಲೆ ಇರುವುದು' ಎಂದು ಆಕೆಯು ಆಣೆಯಿಟ್ಟಳು.

---

353. ಅವರ್ ತಙ್ಕಣ್ ಮನೈವಿ ಯಾರುಮ್ ಅರುನ್ದತಿ ಕ್ಕುಱಿಪ್ಪಿನ್ ಮಿಕ್ಕಾರ್;
ಪುವನಙ್ಕಳ್ ಉಯ್ಯ ಐಯರ್ ಪೊಙ್ಕುನಞ್ಞ್ ಉಣ್ಣ ಯಾಮ್ ಚೆಯ್
ತವನಿನ್ಱು ತಟುತ್ತ ತೆನ್ನ ತ್ತಕೈನ್ತು ತಾನ್ ತರಿತ್ತ ತೆನ್ಱು
ಚಿವನ್ ಎನ್ತೈ ಕಣ್ಟ ನನ್ನೈ 'ತ್ತಿರುನೀಲ ಕಣ್ಟಮ್' ಎನ್ಪಾರ್.

354. ಆನತ ಚಿಱ್ಕೇಳ್ವರ್ ಅಙ್ಕೊೞಿಲ್ ಪರತ್ತೈಪಾಲ್ ಅಣೈನ್ತು ನಣ್ಣ
ಮಾನಮುನ್ ಪೊಱಾತು ವನ್ತ ಊಟಲಾಲ್ ಮನೈಯಿನ್ ವಾೞ್ಕ್ಕೈಕ್ಕು
ಏನೈಯ ಎಲ್ಲಾಞ್ ಚೆಯ್ತೇ ಉಟನುಱೈವು ಇಚೈಯಾರ್ ಆನಾರ್;
ತೇನಲರ್ ಕಮಲ ಪ್ಪೋತಿಲ್ ತಿರುವಿನುಮ್ ಉರುವಮ್ ಮಿಕ್ಕಾರ್.

355. ಮೂಣ್ಟಅ ಪ್ಪುಲವಿ ತೀರ್ಕ್ಕ ಅನ್ಪನಾರ್ ಮುನ್ಪು ಚೆನ್ಱು
ಪೂಣ್ಟಯ ಚಿಱ್ಕಳವೆನ್ ಚಾಯಲ್ ಪೊಱ್ಕೊಟಿ ಅನೈಯಾರ್ ತಮ್ಮೈ
ವೇಣ್ಟುವ ಇರನ್ತು ಕೂಱಿ ಮೆಯ್ಯುಱು ಅಣೈಯುಮ್ ಪೋತಿಲ್
'ತೀಣ್ಟುವೀರಾಯಿನ್ ಎಮ್ಮೈ ತ್ತಿರುನೀಲ ಕಣ್ಟಮ್' ಎನ್ಱಾರ್.

356. ಪರವಸ್ತುವಾದ ಶಿವಪರಮಾತ್ಮನ ತಿರುನೀಲಕಂಠದಲ್ಲಿ ತಾವು ಮೇಲ್ಕೊಂಡ ಆಶೆಯು ಅಧಿಕವಾಗಿದ್ದುದರಿಂದ, ಶ್ರೀ ಆಣೆಯನ್ನು ಕೇಳಿದ ಆ ಭಕ್ತನು, ಶರೀರ ವನ್ನಾಲಿಂಗಿಸುವ ಪ್ರಯತ್ನವನ್ನು ಬಿಟ್ಟು ದೂರ ಹೋಗಿ, ಆಕೆಯನ್ನು ತನ್ನ ಹೆಂಡತಿ ಯಾಗಿ ಭಾವಿಸದೆ, ಇತರರಂತೆ ಭಾವಿಸಿ ನೋಡಿ, "ನೀನು 'ನಮ್ಮನ್ನು' ಎಂದು ಒಳಪಡಿಸಿ ಹೇಳಿದುದರಿಂದ, ನಿನ್ನನ್ನಲ್ಲದೆ ನಿನ್ನ ಜಾತಿಯನ್ನು ಸೇರಿದ ಇತರ ಹೆಂಗುಸರನ್ನೂ ನನ್ನ ಮನಸ್ಸಿನಿಂದಲೂ ಇನ್ನುಮೇಲೆ ಸ್ಪರ್ಶಿಸಲಾರೆನು" ಎಂದನು.

357. ಪತಿವ್ರತೆಯಾದ ಹೆಂಡತಿಯು ತನ್ನ ಶರೀರವು ಪತಿಯ ಶರೀರವನ್ನು ಸೋಂಕದಂತೆ ನೋಡಿಕೊಳ್ಳುತ್ತ ಆತನಿಗೆ ಬೇಕಾದ ಸೇವೆಗಳನ್ನು ಉತ್ತಮವಾಗಿ ಮಾಡುತ್ತ, ಗೃಹಕೃತ್ಯಗಳನ್ನು ಕೊರತೆಯಿಲ್ಲದಂತೆ ಎಚ್ಚರಿಕೆಯಿಂದ ನೆರವೇರಿಸಿ ಕೊಳ್ಳುತ್ತ ಬಂದಳು. ತಮ್ಮ ಮನೆಯನ್ನು ಬಿಟ್ಟು ಹೊರಗೆ ಹೋಗದೆ ಆ ಮನೆ ಯಲ್ಲಿದ್ದುಕೊಂಡೇ ಪ್ರೇಮದಿಂದುಂಟಾದ ಸಂಭೋಗವೊಂದನ್ನು ಬಿಟ್ಟು ಇಬ್ಬರೂ ಅಲ್ಲಿ ಬಾಳುವವರಾದರು. ಈ ಜೀವನವನ್ನು ಇತರರೊಬ್ಬರೂ ತಿಳಿಯಲಾರದಂತೆ ನಡೆಸಿ ಕೊಂಡು ಬಂದರು.

358. ಪರಿಪೂರ್ಣವಾದ ಯೌವನವು ಹೀಗೆಯೇ ಕಳೆಯುತ್ತಾ ಹೋಯಿತು. ಅಳತೆಗೆ ಸಿಗದ ಹಿರಿಮೆಯ ಆ ಆಣೆಯನ್ನು ಅವರು ಅತಿಕ್ರಮಿಸದೆ ಕಾಪಾಡಿಕೊಂಡೇ ಬಂದರು. ಈ ರೀತಿಯಲ್ಲಿ ಹಲಕೆಲವರ್ಷಗಳು ಸಂದುವು. ಯೌವನವು ಕುಂದುತ್ತಾ ಬಂದಂತೆ ಶರೀರಸೌಂದರ್ಯವೂ ಕಮ್ಮಿಯಾಗುತ್ತಾ ಬಂತು. ವೃದ್ಧಾಪ್ಯವು ಉದಯಿ ಸಿತು. ಅದಕ್ಕೆ ಸಹಜವಾದ ಬಲಹೀನತೆಯನ್ನು ಹೊಂದಿ, ಒಡಲು ಊರುಗೋಲನ್ನು ಧರಿಸಿ ನಡೆಯುವ ಸಮಯವು ಬಂದಾಗಲೂ, ಶಿವಪರಮಾತ್ಮನಲ್ಲಿ ತಾವಿಟ್ಟ ಪ್ರೀತಿಯು ಕುಂದದಂತೆ ಆ ಆದರ್ಶದಂಪತಿಗಳು ನೋಡಿಕೊಂಡು ಬಂದರು.

---

356. ಆತಿಯಾರ್ ನೀಲ ಕಣ್ಟತ್ತುಳವುತಾ ಱ್ಕೊಣ್ಟ ಆರ್ವಮ್
ಪೇತಿಯಾ ಆಣೈ ಕೇಟ್ಟ ಪೆರಿಯವರ್ ಪೆಯರ್ನ್ತು ನೀಙ್ಕಿ
ಏತಿಲಾರ್ ಪೋಲ ನೋಕ್ಕಿ 'ಎಮ್ಮೈ'ಎನ್ ಱತನಾಲ್ ಮಱ್ಱೈ
ಮಾತರಾರ್ ತಮ್ಮೈಯುಮ್ ಎನ್ಱನ್ ಮನತ್ತಿನುಮ್ ತೀಣ್ಟೇನ್ ಎನ್ಱಾರ್.

357. ಕಱ್ಪಿಱ ಮನೈವಿ ಯಾರುಮ್ ಕಣವನಾರ್ ಕ್ಕಾನ ಎಲ್ಲಾಮ್
ಪೊಱ್ಪಿಱ ಮೆಯ್ಯು ಱಾಮಲ್ ಪೊರುನ್ತುವ ಪೋಱ್ಱಿ ಚ್ಚೆಯ್ಯ
ಇಱ್ಪಿಱವ್ ಪೊಟಿಯಾ ತಙ್ಕಣ್ ಇರುವರುಮ್ ವೇಱು ವೈಕಿ
ಅಱ್ಪಿಱು ಪುಣರ್ಚ್ಚಿ ಇನ್ಮೈ ಅಯಲಱಿ ಯಾಮೈ ವಾಟ್ನ್ತಾರ್.

358. ಇಳಮೈಯಿನ್ ಮಿಕ್ಕು ಳಾರ್ಕಳ್ ಇರುವರುಮ್ ಅಱಿಯ ನಿನ್ಱ
ಅಳವಿಲ್ಚೀರ್ ಆಣೈ ಪೋಱ್ಱಿ ಆಣ್ಟುಕಳ್ ಪಲವು ಞ್ಚೆಲ್ಲ
ವಳಮಲಿ ಇಳಮೈ ನೀಙ್ಕಿ ವಟಿವುಱು ಮೂಪ್ಪು ವನ್ತು
ತಳರ್ವೊಟು ಚಾಯ್ನ್ತುಮ್ ಅನ್ಪು ತಮ್ಪಿರಾನ್ ಶಿಱತ್ತು ಚ್ಚಾಯಾರ್.

359. ಇವರು ಹೀಗೆ ಬಾಳುತ್ತಿರುವಾಗ, ಬೆಂಕಿಯು ಚಿಗುರು ಬಿಟ್ಟು ನೀಳವಾಗಿ ನಿಂತಿತೋ ಎನ್ನುವಂತೆ, ಬಳೆದು ಕಾಂತಿಸೂಸುವ ಜಡೆಯುಳ್ಳ ಶಿವಪರಮಾತ್ಮನು, ತನ್ನ ಸೇವಕನಾದ ನಾಯನಾರರ ಸತ್ಯಸ್ವಭಾವವನ್ನು ಕಂಡು, ಲೋಕದಲ್ಲಿರುವವರು ಇಂತಹ ಸನ್ಮಾರ್ಗವನ್ನು ಕೈಕೊಂಡು ಉಜ್ಜೀವನವನ್ನು ಮಾಡಿಕೊಳ್ಳುವ ದಾರಿಯನ್ನು ತೋರಿಸುವ ಉದ್ದೇಶದಿಂದ, ಕೃಪಾಯುಕ್ತನಾದ ಶಿವಯೋಗಿಯ ವೇಷವನ್ನು ತಳೆದು ಕೊಂಡನು.

360. ತಾನು ವಸ್ತ್ರದ ಉಡುದಾರವನ್ನೂ ಶುಭ್ರಕೌಪೀನವನ್ನೂ ಧರಿಸಿಕೊಂಡು, ನಾಶವಿಲ್ಲದಂತೆ ಮಾಡುವ, ಕಾಂತಿಸೂಸುವ, ಭಸ್ಮಲೇಪದಿಂದ ಶೋಭಿಸುವ ಶರೀರ ದಲ್ಲಿಯೂ ತೋಳಿನಲ್ಲಿಯೂ ಎದೆಯಲ್ಲಿಯೂ ಬಿದ್ದು ಹೊರಳುವ ಜನಿವಾರದ ಶೋಭೆ ಯೊಡನೆ, ಪಸರಿಸುವ ವಿಭೂತಿಯ ಪ್ರಕಾಶವು ವೃದ್ಧಿಹೊಂದುವ ಬೋಳಾದ ನೆತ್ತಿ ಯೊಡನೆ,

361. ಯಾವಾಗಲೂ ಇರುವ ನಿಡಿದಾದ ಜಡೆಗಳನ್ನು ಮರೆಸಿ, ಆಯೆಡೆಯಲ್ಲಿ ಸುರುಳಿಯಾಗಿ ಪಸರಿಸಿದ ತಲೆಕೂದಲುಗಳನ್ನೂ, ವದನದಲ್ಲಿ ಕಾಂತಿಸೂಸುವ ಬಿಳಿಯ ಚಂದ್ರನನ್ನು ಹೋಲುವ ಮುಗುಳುನಗೆಯನ್ನೂ ಕೊಂಡು, ಮೇಲ್ಮೈಯನ್ನು ಹೊಂದಲು ಭಿಕ್ಷೆಯನ್ನು ಕೊಳ್ಳುವುದಕ್ಕೆಡೆಯಾದ ಭಿಕ್ಷಾಪಾತ್ರೆಯನ್ನು ಕೈಯಲ್ಲಿ ಧರಿಸಿ, ನಡೆದು ಬಂದು ತಿರುನೀಲಕಂಠ ಕುಂಬಾರನ ಮನೆಯನ್ನು ಸೇರಿದನು.

---

359. ಇನ್ನೆಱಿ ಒಝುಕುಮ್ ನಾಳಿಲ್ ಎರಿತಳಿರ್ ತ್ತೆನ್ನ ನೀಣ್ಟ
ಮಿನ್ನೊಳಿರ್ ಚಟೈಯೋನ್ ತಾನು ನ್ತೊಣ್ಟರೈ ವಿಳಕ್ಕ ಞ್ಞಾಲ
ನನ್ನೆಱಿ ಇತುವಾಮ್ ಎನ್ಱು ಞಾಲನ್ತಾರ್ ವಿರುಮ್ಪಿ ಉಯ್ಯುಮ್
ಅನ್ನೆಱಿ ಕಾಟ್ಟುಮ್ ಆಱ್ಱಲ್ ಅರುಟ್ಚಿವ ಯೋಕಿ ಯಾಕಿ.

360. ಕೀಳೊಟು ಕೋವಣಮ್ ಚಾತ್ತಿ ಕೇಟಿಲಾ
ವಾಳ್ವಿಟು ನೀಱ್ಱೊಳಿ ಮಲರ್ನ್ತ ಮೇನಿಮೇಲ್
ತೋಳೊಟು ಮಾರ್ಪಿಟೈ ತ್ತುವಳುಮ್ ನೂಲುಟನ್
ನೀಳೊಳಿ ವಳರ್ತಿರು ಮುಣ್ಟ ನೆಱ್ಱಿಯುಮ್.

361. ನೆಟುಞ್ಚಟೈ ಕರನ್ತಿಟ ನೆಱಿತ್ತ ಪಮ್ಪೈಯುಮ್
ವಿಟುಙ್ಕತಿರ್ ಮುಱುವಲ್ವೆ ಣ್ಣಿಲವುಮ್ ಮೇಮ್ಪಟ
ಇಟುಮ್ಪಲಿ ಪ್ಪಾತ್ತಿರಮ್ ಏನ್ತು ಕೈಯರಾಯ್
ನಟನ್ತುವೇಟ್ ಕೋವರ್ತ ಮ್ಮನೈಯಿಲ್ ನಣ್ಣಿನಾರ್.

362. ಮೇಲೆ ಹೇಳಿದಂತೆ ಒಪ್ಪುವ ತಪೋವೇಷದಿಂದ ಕೂಡಿದ ಶಿವಯೋಗ ನಾಥನನ್ನು ಕಣ್ಣಾರೆ ಕಂಡು ತುಂಬು ಮನಸ್ಸಿನಿಂದ ತಿರುನೀಲಕಂಠನಾಯನಾರನು ಇವರು ಪುಣ್ಯವಂತರಾದ ಭಕ್ತರೆಂಬ ಅಭಿಪ್ರಾಯದಿಂದ ಉಚಿತ ರೀತಿಯಲ್ಲಿ ಇದಿರುಗೊಂಡು ನಮಿಸಿ ಸ್ತುತಿಸಿದನು.

363. ಬಾಲಚಂದ್ರನು ವರ್ಧಿಸುವುದಕ್ಕೆಡೆಯಾದ ಜಡೆಮುಡಿಯುಳ್ಳ ಶಿವ ಪರಮಾತ್ಮರೂಪಿ ತಪಸಿಗಳೆಂದುಕೊಂಡು, ತನ್ನ ಮನೆಗೆ ಕರೆದುಕೊಂಡು ಬಂದು ಮಿಕ್ಕ ಸಂತೋಷದಿಂದ ಶಾಸ್ತ್ರವಿಧಿಗನುಸಾರವಾಗಿ ಪೂಜೋಪಚಾರಗಳನ್ನು ಅತಿ ಶ್ರದ್ಧೆಯಿಂದ ಮಾಡಿ, ಅವರ ಮುಂದೆ ನಮಿಸಿ ನಿಂತುಕೊಂಡು, ಆ ಮೇಲೆ,

364. 'ನಮ್ಮ ನಾಯಕರೆ! ಇಂದು ನಾನು ಮಾಡಬೇಕಾದ ಸೇವೆ ಯಾವುದು? ಅನುಗ್ರಹಿಸಬೇಕು' ಎಂದು ಸುವಾಸನೆಯನ್ನು ಬೀರುವ ಕರ್ಣಿಕಾರ ಕುಸುಮವನ್ನು ಧರಿಸಿದ ಜಡೆಯುಳ್ಳ ತ್ಯಾಗಿಯಾದ ಶಿವಪರಮಾತ್ಮನ ಭಕ್ತನು ಕೇಳಿದನು. ಶಿವಯೋಗಿಯ ವೇಷದ ದೇವದೇವನು, 'ನಂಬಿಯೇ![1] ಈ ಭಿಕ್ಷೆಯ ಓಡನ್ನು ನಿನ್ನ ವಶದಲ್ಲಿಟ್ಟುಕೊಂಡು ನಾವು ಕೇಳಿದಾಗ ತಿರುಗಿ ತರಬೇಕು' ಎಂದು ಹೇಳಿ,

---

362. ನಣ್ಣಿಯ ತವಚ್ಚಿವ ಯೋಕ ನಾತರೈ
ಕ್ಕಣ್ಣುಱ ನೋಕ್ಕಿಯ ಕಾತಲ್ ಅನ್‌ಪರ್‌ತಾಮ್
ಪುಣ್ಣಿಯ ತ್ತೊಣ್ಟರಾಮ್ ಎನ್‌ಱು ಪೋಱ್ಱಿ ಚೆಯ್ತು
ಎಣ್ಣಿಯ ವಕೈಯಿನಾಲ್ ಎತಿರ್‌ಕೊ ಣ್ಟೇತ್ತಿನಾರ್.

363. ಪಿಱೈತ್ತವಳರ್ ಚಟೈಮುಟಿ ಪ್ಪಿರಾನ್ಱೆ ತೊಣ್ಟರೆನ್‌ಱು
ಉಱೈಯುಳಿಲ್ ಅಣೈನ್ತುಪೇರ್ ಉಲಕೈ ಕೂರ್‌ನ್ತಿಟ
ಮುಱೈಮೈಯಿನ್ ವಟಿಪಟ ಮೊಟಿನ್ತು ಪೂಚೈಕಳ್
ನಿಱೈಪೆರು ವಿರುಪ್ಪೊಟು ಚೆಯ್ತು ನಿನ್‌ಱಪಿನ್.

364. 'ಎಮ್ಪಿರಾನ್! ಯಾನ್‌ಚೆಯುಮ್ ಪಣಿಎತು?' ಎನ್‌ಱನರ್
ವಮ್ಪಲಾ ಮಲರ್‌ಚ್ಚಟೈ ವಳ್ಳಲ್ ತೊಣ್ಟನಾರ್;
ಉಮ್ಪರ್‌ನಾ ಯಕನುಮ್'ಇ ವ್ವೋಟಿನ್ ಪಾಲ್‌ವೈತ್ತು
ನಮ್ಪಿ! ನೀ ತರುಕನಾಮ್ ವೇಣ್ಟುಮ್ ಪೋ' ತೆನ್‌ಱು.

---

1. ನಂಬಿ= ಗಂಡುಸರಲ್ಲಿ ಶ್ರೇಷ್ಠನಾದವನು,

365. 'ಇದಕ್ಕೆ ಸರಿಯಾದುದು ಇನ್ನೊಂದಿಲ್ಲ. ತನ್ನೆಡೆಯಲ್ಲಿ ಸೇರಿದ ವಸ್ತುಗಳೆಲ್ಲವನ್ನೂ ಇದು ಶುದ್ಧಮಾಡುವುದು. ಚಿನ್ನರನ್ನಗಳಿಗಿಂತಲೂ ಹೆಚ್ಚಾಗಿ ಇದನ್ನು ಕಾಪಾಡಬೇಕು. ಇದರ ಯೋಗ್ಯತೆಯಷ್ಟಿಷ್ಟಲ್ಲ. ಜೋಕೆಯಾಗಿ ಇದನ್ನು ನೋಡಿಕೊಳ್ಳಬೇಕು' ಎಂದು ಹೇಳಿದನು.

366. ಪುರಾತನವೂ ಪರಂಪರಾಗತವೂ ಆದ ಕುಂಬಾರ ಕುಲದಲ್ಲಿ ಬಂದ ಬಹುವಾದ ಹಿರಿಮೆಯುಳ್ಳ ತಿರುನೀಲಕಂಠ ನಾಯನಾರನು ನಮಿಸಿ ಅದನ್ನು ತೆಗೆದುಕೊಂಡು, ವೇಗವಾಗಿ ಹೋಗಿ, ತಮ್ಮ ಮನೆಯಲ್ಲಿ ಸುರಕ್ಷಿತವಾದ ಒಂದೆಡೆಯಲ್ಲಿ ಅದನ್ನು ಭದ್ರವಾಗಿಟ್ಟು ಪುನಃ ಶಿವಯೋಗಿಗಳಿದ್ದಲ್ಲಿಗೆ ಬಂದನು.

367. ಹಾಗೆ ಹಿಂತಿರುಗಿ ಬಂದು ಆ ಶಿವಯೋಗಿಗಳನ್ನು ಬೀಳ್ಕೊಟ್ಟು ಅವರ ಅನುಮತಿಯನ್ನು ಪಡೆದುಕೊಂಡು ಮನೆಗೆ ಹಿಂತಿರುಗಿದನು. ಶಿವಯೋಗಿಯ ವೇಷದ ಶಿವಪರಮಾತ್ಮನು ತನ್ನ ಚಿದಾಕಾಶವಾದ ಚಿತ್ಸಭೆಯನ್ನು ಸೇರಿದನು.

368. ಇದಾಗಿ ಹಲದಿನಗಳು ಕಳೆದಮೇಲೆ, ಶಿವಪರಮಾತ್ಮನು ತಾವು ಹಿಂದೆ ನಾಯನಾರಲ್ಲಿ ಕೊಟ್ಟಿಟ್ಟ ಸುಂದರವಾದ ಶ್ರೀ ಭಿಕ್ಷಾಪಾತ್ರೆಯನ್ನು ಅದು ಭದ್ರವಾಗಿದ್ದ ಎಡೆಯಿಂದ ಕಾಣದಂತೆ ಮಾಡಿ, ಉತ್ತಮ ಶಿವಮಾರ್ಗಾಚಾರ ತತ್ಪರನಾಗಿ ದೋಷವಿದೂರನಾದ ಕುಂಬಾರ ಭಕ್ತನ ಆರ್ಜವ ಸ್ವಭಾವವನ್ನು ಲೋಕದವರಿಗೆ ತಿಳಿಯಪಡಿಸುವ ಉದ್ದೇಶದಿಂದ, ಹಿಂದೆ ಬಂದಂತೆಯೇ ಆತನ ಮನೆಗೆ ಅನುಗ್ರಹಿಸಬಂದರು.

---

365. 'ತನ್ನೈಒ ಪ್ಪರಿಯತು; ತಲತ್ತು ತ್ತನ್ನುಟೈ
ತ್ತನ್ನಿಯ ಯಾವೈಯು ನ್ತೂಯ್ಮೈ ಚೆಯ್ವತು;
ಪೊನ್ನಿನುಮ್ ಮಣಿಯಿನುಮ್ ಪೋಱ್ಱಿ ವೇಣ್ಟುವತು;
ಇನ್ನತನ್ ಮೈಯತಿತು; ವಾಙ್ಕು ನೀ' ಎನ.

366. ತೊಲ್ಲೈವೇಟ್ ಕೋವರ್ತ ಙ್ಕುಲತ್ತುಳ್ ತೋನ್ಱಿಯ
ಮಲ್ಕುಚೀರ್ ತ್ತೊಣ್ಟನಾರ್ ವಣಙ್ಕಿ ವಾಙ್ಕಿಕ್ಕೊಣ್ಟು
ಒಲ್ಲೈಯಿನ್ ಮನೈಯಿಲೋರ್ ಮರುಙ್ಕು ಕಾಪ್ಪಱಮ್
ಎಲ್ಲೈಯಿಲ್ ವೈತ್ತುವ ನ್ತಿಱೈಯೈ ಎಯ್ತಿನಾರ್.

367. ವೈತ್ತಪಿನ್ ಮಱೈಯವ ರಾಕಿ ವನ್ತರುಳ್
ನಿತ್ತನಾರ್ ನೀಙ್ಕಿಟ ನಿನ್ಱ ತೊಣ್ಟರುಮ್
ಉಯ್ತ್ತಿಟನ್ ಪೋಯ್ವಿಟೈ ಕೊಣ್ಟು ಮಿಣ್ಟನರ್
ಅತ್ತರ್ತಾಮ್ ಅಮ್ಪಲಮ್ ಅಣೈಯ ಮೇವಿನಾರ್.

368. ಚಾಲನಾಳ್ ಕಟಿನ್ತ ಪಿನ್ಪು ತಲೈವನಾರ್ ತಾಮುನ್ ವೈತ್ತ
ಕೋಲಮಾರ್ ಓಟು ತನ್ನೈ ಕ್ಕುಱಿಯಿಟ ತ್ತಕಲ ಪ್ಪೋಕ್ಕಿ
ಚ್ಚೀಲಮಾರ್ ಕೊಳ್ಕೈ ಎನ್ಱುಮ್ ತಿರುನ್ತುವೇಟ್ ಕೋವರ್ ತಮ್ಪಾಲ್
ವಾಲಿತಾಮ್ ನಿಲೈಮೈ ಕಾಟ್ಟ ಮುನ್ಪುಪೋಲ್ ಮನೈಯಿಲ್ ವನ್ತಾರ್.

369. ಬಂದ ಶಿವಯೋಗಿಯನ್ನು ನಾಯನಾರನು ಹಿಂದಿನಂತೆಯೇ ಭಕ್ತಿಯಿಂದ ಇದಿರ್ಗೊಂಡು ವಿಧಿವತ್ತಾಗಿ ಉಪಚಾರಾದಿ ಸೇವೆಗಳನ್ನು ಮಾಡಿ, 'ದೇವರ ಬರವು ನಾವು ಮಾಡಿದ ತಪಸ್ಸಿನ ಫಲವೇ' ಎಂದು ಹೇಳಿ ನಮಿಸಿ ನಿಲ್ಲಲು, ಎಲ್ಲಾ ವಸ್ತುಗಳನ್ನೂ ತಾವೇ ಕೊಡಲೂ ತೆಗೆದುಕೊಳ್ಳಲೂ ಬಲ್ಲವರಾದ ಆ ಶಿವಪರಮಾತ್ಮನು, 'ಹಿಂದೆ ನಾವು ನಿನ್ನಲ್ಲಿ ಕೊಟ್ಟಿಟ್ಟ ಅಮೂಲ್ಯವಾದ ಭಿಕ್ಷಾಪಾತ್ರೆಯನ್ನು ನಮಗೀಗ ತಂದುಕೊಡು' ಎಂದನು.

370. ಈ ರೀತಿ ಜೋರಿನಿಂದ ಆ ಶಿವಯೋಗಿಯು ಪಾತ್ರೆಯನ್ನು ಕೇಳಲು, ಅದನ್ನು ತರುವುದಕ್ಕಾಗಿ ನಾಯನಾರನು ತನ್ನ ಮನೆಯೊಳಗೆ ಪ್ರವೇಶಿಸಿದನು. ತಾನು ಭದ್ರವಾಗಿಟ್ಟೆಡೆಯಲ್ಲಿ ಅದನ್ನಾತನು ಕಾಣಲಿಲ್ಲ. ಇದರಿಂದ ಮತಿವಿಕಳತೆಯನ್ನು ಹೊಂದಿ ಅಲ್ಲಿರುವ ಇತರರನ್ನು ಕೇಳಿದನು. ಅವರಿಗೂ ತಿಳಿಯಲಿಲ್ಲ. ತಾನೇ ಇತರ ಎಡೆಗಳಲ್ಲಿಯೂ ಹುಡುಕಿ ನೋಡಿದನು. ಅದೂ ನಿಷ್ಫಲವಾಯಿತು. ಹೀಗೆ ಆ ಪಾತ್ರೆಯು ಕಾಣದೆ ಹೋದ ಮಾಯೆಯನ್ನು ತಿಳಿಯದವನಾಗಿ, ಯೋಗಿಯಲ್ಲಿ ಹೇಳಲು ಮಾತೊಂದನ್ನೂ ಕಾಣದೆ, ಮನೆಯೊಳಗೆ ಆ ಎಡೆಯಲ್ಲಿಯೇ ನಿಂತನು.

371. ಶಿವಯೋಗಿಯ ವೇಷದಿಂದ ಬಂದ, ಪಾರ್ವತಿಯನ್ನು ಎಡಭಾಗದಲ್ಲುಳ್ಳ ಶಿವನು, ಮನೆಯೊಳಗೆ ಪ್ರವೇಶಿಸಿ, ಅಲ್ಲಿ ವಿವಶನಾಗಿ ನಿಂತಿದ್ದ ಹಿರಿಯ ಭಕ್ತನಾದ ತಿರುನೀಲಕಂಠನಿಗೆ ಕೇಳಿಸುವಂತೆ, 'ಶೀಘ್ರವಾಗಿ ಹಿಂದಿರುಗುವೆನೆಂದು ಹೇಳಿ ಒಳಗೆ ಪ್ರವೇಶಿಸಿದವನೇ! ಇಷ್ಟು ತಾಮಸವನ್ನು ಮಾಡಿದ ಕಾರಣವೇನು?' ಎಂದು ಘಟ್ಟಿಯಾಗಿ ಕೇಳಲು, ಒಡನೆಯೇ ಆ ಭಕ್ತನು ಹೊರಗೆ ಬಂದು ವಿಷದ ಕುರುಹನ್ನು ಮರೆಸಿದ ಕಂಠವುಳ್ಳ ಯೋಗಿಯನ್ನು ಕುರಿತು ತಲೆಯ ಮೇಲೆ ಕೈಮುಗಿದು ನಮಸ್ಕರಿಸಿ ಇಂತೆಂದು ಹೇಳುವನು :

---

369. ವನ್ತಪಿನ್ ತೊಣ್ಡನಾರುಮ್ ಎತಿರ್ಕೊಣ್ಡು ಪಾಟು ಚೆಯ್ದು
'ಚಿನ್ದೈಚೆಯ್ದ್ ತರುಳಿ ಱ್ಚೆಙ್ಗಳ್ ಚೆಯ್ದವಮ್' ಎನ್ಱು ನಿಱ್ಪ
'ಮುನ್ನೈನಾಳ್ ಉನ್ಪಾಲ್ ವೈತ್ತ ಮೊಯ್ಯೊಳಿ ವಿಳಙ್ಗುಮ್ ಓಟು
ತನ್ನನಿಲ್' ಎನ್ಱಾನ್ ಎಲ್ಲಾಮ್ ತಾನ್ವೈತ್ತು ವಾಙ್ಗ ವಲ್ಲಾನ್.

370. ಎನ್ಱವರ್ ವಿರೈನ್ದು ಕೂಱ ಇರುನ್ದವರ್ ಈನ್ದ ಓಟು
ಚೆನ್ಱುಮುನ್ ಕೊಣರ್ವಾನ್ ಪುಕ್ಕಾರ್ ಕಣ್ಟಿಲರ್ ತಿಕೈತ್ತು ನೋಕ್ಕಿ
ನಿನ್ಱವರ್ ತಮ್ಮೈ ಕ್ಕೇಟ್ಟಾರ್; ನೇಟಿಯುಮ್ ಕಾಣಾರ್; ಮಾಯ್ಕೈ
ಒನ್ಱುಮ ಙ್ಗಱಿನ್ದು ಲಾರ್ತಾಮ್ ಉರೈಪ್ಪತೊನ್ ಱಿನ್ಱಿ ನಿನ್ಱಾರ್.

371. ಮಱೈಯವ ನಾಕಿ ನಿನ್ಱ ಮಲೈಮಕಳ್ ಕೇಳ್ವನ್ ತಾನುಮ್
ಉಱೈಯುಳಿಱ್ ಪುಕ್ಕು ನಿನ್ಱ ಒರುಪೆರು ನ್ತೊಣ್ಡರ್ ಕೇಟ್ಪ
'ಇಱೈಯಿಲಿ ಱ್ಙ್ಗಯ್ದು ಪುಕ್ಕಾಯ್! ತಾಱ್ತ್ತತೆನ್? ಎನ್ನ ವನ್ದು
ಕಱೈಮಱೈ ಮಿಟಱ್ಱ್ ನಾನೈ ಕ್ಕೈತೊಟು ತುರೈಕ್ಕ ಲುಱ್ಱಾರ್.

372. 'ಸುಂದರವಾದ ಮೂರೆಳೆಗಳಿಂದ ಕೂಡಿದ ಜನಿವಾರದಿಂದ ಶೋಭಿಸುವ ಎದೆಯುಳ್ಳ ನಮ್ಮ ತಂದೆಯಂತಿರುವವರೆ! ನೀವು ನನ್ನಲ್ಲಿ ಕೊಟ್ಟುಹೋದ ಆ ಅಮೂಲ್ಯವಾದ ಭಿಕ್ಷಾಪಾತ್ರೆಯನ್ನು ಅದನ್ನಿರಿಸಿದೆಡೆಯಲ್ಲಿ ನಾನು ಕಾಣೆನು. ಬೇರೆಡೆಗಳಲ್ಲೆಲ್ಲಾ ಹುಡುಕಿಯೂ ಅದು ದೊರೆಯಲಿಲ್ಲ. ಆದುದರಿಂದ ಪುರಾತನವಾದ ಆ ಪಾತ್ರೆಯ ಬದಲು ಬೇರೊಂದು ಒಳ್ಳೆಯ ಹೊಸ ಪಾತ್ರೆಯನ್ನು ಕೊಡುವೆನು. ಅದನ್ನು ಸ್ವೀಕರಿಸಿ ನನ್ನಿಂದಾದ ಈ ಅಪಚಾರವನ್ನು ಮನ್ನಿಸಿ ಅನುಗ್ರಹಿಸಬೇಕು' ಎಂದು ಹೇಳಿ ನಮಿಸಿ ನಿಂತನು.

373. ಹೀಗೆ ತಲೆಬಾಗಿ ನಿಂತ ನಾಯನಾರನನ್ನು ಕೋಪಗೊಂಡವನಂತೆ ನೋಡಿ, 'ನೀನು ಹೇಳಿದುದೇನು? ನಾವು ಕೊಟ್ಟ ಮಣ್ಣಿನಿಂದ ಮಾಡಿದ ಓಡನ್ನು ಬಿಟ್ಟು ಚಿನ್ನದಿಂದ ಮಾಡಿದುದನ್ನು ತಂದರೂ ನಾನು ತೆಗೆದುಕೊಳ್ಳೆನು. ಹಿಂದೆ ನಾವು ನಿನ್ನಲ್ಲಿಟ್ಟ ಆ ಓಡನ್ನೇ ಕೊಂಡು ಬಾ' ಎಂದು ಎಲ್ಲರಿಗೂ ಮೊದಲಿನವರಾದ ಆ ಯೋಗಿಯು ಹೇಳಿದನು.

374. 'ಎಂದಿಗೂ ಅಳಿವಿಲ್ಲದ ಹಿರಿಯವರೆ! ನನ್ನಲ್ಲಿ ನೀವಿಟ್ಟ ಮಣ್ಣು ಓಡು ಕಾಣದಾಗಿದೆ. ಎಲ್ಲೆಡೆಯಲ್ಲಿ ಹುಡುಕಿಯೂ ನಾನದನ್ನು ಕಾಣಲಿಲ್ಲ. ಅದಕ್ಕಿಂತಲೂ ಒಳ್ಳೆಯದಾದ, ದೀರ್ಘಕಾಲ ಬಾಳಿಕೆ ಬಂದು ಉಪಯೋಗವಾಗತಕ್ಕ ಬೇರೆ ಓಡೊಂದನ್ನು ತರುವೆನೆಂದು ನಾನು ಬಿನ್ನವಿಸಿದುದನ್ನು ದೇವರು ಸ್ವೀಕರಿಸದೆ ಕೋಪಿಸಿ ಹೇಳಿದ ಈ ವಾರ್ತೆಯು ನನ್ನ ಚಿಂತನೆ, ಜ್ಞಾನ, ತಿಳಿವು ಇವೆಲ್ಲವನ್ನೂ ನಾಶಮಾಡಿಬಿಟ್ಟಿತು,' ಎಂದು ನಾಯನಾರನು ಹೇಳಲು,

---

372. 'ಇಟಿೣೖಯಣಿ ಮುನ್ನೂಲ್ ಮಾರ್ಪಿನ್ ಎನ್ತೈ! ನೀರ್ ತನ್ತು ಪೋನ,
ವಿಟಿೣೖತರುಮ್ ಓಟು ವೈತ್ತ ವೇೞಿಟಮ್ ತೇಟಿ ಕ್ಕಾಣೇನ್,
ಪಟಿೣೖಯ ಮೞ್ಞಿತನಿಲ್ ನಲ್ಲ ಪಾತ್ತಿರ ನ್ತರುವನ್ ಕೊಣ್ಟು,
ಪ್ಪಿಟಿೣೖಯಿನೈ ಪೊಱುಕ್ಕ ವೇಣ್ಟುಮ್ ಪೆರುಮ! ಎನ್ ಱಿಟಿೣೖಞ್ಚಿ
ನಿನ್ಱಾರ್.

373. ಚೆನ್ನಿಯಾಲ್ ವಣಙ್ಕಿ ನಿನ್ಱ ತೊಣ್ಟರೈ ಚ್ಚೆಯಿರ್ತ್ತು ನೋಕ್ಕಿ,
'ಎನ್ನಿತು ಮೊೞಿನ್ತ ವಾನೀ? ಯಾನ್ವೈತ್ತ ಮಣ್ಣೋಟನ್ಱಿ,
ಪೊನ್ನಿನಾಲ್ ಅಮೈತ್ತು ತನ್ತಾಯ್ ಆಯಿನು ಙ್ಕೊಳ್ಳೇನ್; ಪೋಱ್ಞ,
ಮುನ್ನೈನಾನ್ ವೈತ್ತ ಓಟೇ ಕೊಣ್ಟುವಾ' ಎನ್ಱಾನ್ ಮುನ್ನೋನ್.

374. 'ಕೇಟಿಲಾ ಪ್ಪೆರಿಯೋಯ್! ಎನ್ಪಾಲ್ ವೈತ್ತತು ಕೆಟುತ ಲಾಲೇ
ನಾಟಿಯುಮ್ ಕಾಣೇನ್; ವೇಱು ನಲ್ಲತೋರ್ ಓಟು ಚಾಲ
ನೀಟುಚೆಲ್ ವತುತಾನ್ ಒನ್ಱು ತರುಕಿನ್ಱೇನ್ ಎನವುಮ್ ಕೊಳ್ಳಾತು
ಊಟಿನಿನ್ ಱುರೈತ್ತ ತೆನ್ಱಿನ್ ಉಣರ್ವೆಲಾಮ್ ಒೞಿತ್ತ' ತೆನ್ನ.

375. 'ನಿನ್ನಿಂದ ಇನ್ನು ಆಗುವುದೇನಿದೆ? ನಿನ್ನೆಡೆಯಲ್ಲಿ ಒಪ್ಪಿಸಿ ಕೊಟ್ಟ ಓಡನ್ನು ಕಳವುಮಾಡಿ, ಹಲವು ರೀತಿಯ ವಂಚಕ ನಡತೆಯನ್ನು ತೋರಿಸಿ, ಅದರಿಂದ ಬರುವ ನಿಂದೆಗೆ ಸ್ವಲ್ಪವೂ ನಾಚದವನಾದೆ. ಎಲ್ಲರೂ ಕಾಣುವಂತೆ ನಿನ್ನನ್ನು ಕಟ್ಟಿ ಹಿಡಿದು ನನ್ನ ಪಾತ್ರೆಯನ್ನು ತೆಗೆದುಕೊಳ್ಳದೆ ಇಲ್ಲಿಂದ ಒಂದಡಿ ಕೂಡ ಕದಲಲಾರೆ,' ಎಂದು ಪುಣ್ಯಗಳಿಗೆಲ್ಲಾ ವಸ್ತುವಾಗಿ ನಿಂತ ಈಶ್ವರನು ಹೇಳಿದನು.

376. 'ನಿಮ್ಮ ಅಮೂಲ್ಯವಾದ ಓಡನ್ನು ನಾನು ಕದ್ದವನಲ್ಲ. ಕಾರ್ಯದಲ್ಲಿ ಕಳವು ಇಲ್ಲದಿರುವುದಲ್ಲದೆ ನನ್ನ ಮನಸ್ಸಿನಲ್ಲಿಯೂ ಅಂತಹ ಎಣಿಕೆಯು ಇಲ್ಲದುದನ್ನು ತೋರಿಸಲು ನಾನೇನು ಮಾಡಬೇಕು ಹೇಳಿರಿ' ಎಂದು ನಾಯನಾರನು ಕೇಳಲು, ತನ್ನ ಕಂಠದಲ್ಲಿ ನಿಂತ ವಿಷದ ಕುರುಹನ್ನು ಮರೆಸಿ ಬಂದವನಾದ ಯೋಗಿಯು, 'ನಿನ್ನ ಪ್ರೀತಿಯ ಮಗನನ್ನು ಹಿಡಿದುಕೊಂಡು ಕೊಳದಲ್ಲಿ ಮುಳುಗಿ ಸತ್ಯ (ಪ್ರಮಾಣ) ಮಾಡುವವನಾಗು' ಎಂದು ಹೇಳಿದನು.

377. 'ಸ್ವಾಮಿ, ನೀವು ಅನುಗ್ರಹಿಸಿದಂತೆ ಪ್ರಮಾಣ ಮಾಡುವುದಕ್ಕೆ ನನಗೆ ಪುಣ್ಯಪ್ರದನಾದ ಮಗನಿಲ್ಲ. ಆದುದರಿಂದ ಬೇರೇನನ್ನು ಮಾಡಬೇಕು, ಹೇಳಿರಿ' ಎಂದು ನಾಯನಾರನು ಕೇಳಲು, 'ದೋಷವಿದೂರೆಯೂ ಪೂಜ್ಯೆಯೂ ಆದ ನಿನ್ನ ಪತ್ನಿಯ ಕೈಯನ್ನು ಹಿಡಿದುಕೊಂಡು ತುಂಬಿದ ಹೂಗಳುಳ್ಳ ಕೊಳದಲ್ಲಿ ಮುಳುಗುವವನಾಗು' ಎಂದು ಯೋಗಿಯು ಹೇಳಿದನು.

---

375. 'ಆವತೆನ್? ಉನ್‌ಪಾಲ್ ವೈತ್ತ ಅಟ್ಟೈಕ್ಕಲ ಪ್ಪೊರುಳ್ಳೈ ವೆಳವಿ,
ಪ್ಪಾವಕಮ್ ಪಲವುಮ್ ಚೆಯ್ದು ಪಟಿಕ್ಕುನೀ ಒನ್‌ಱುಮ್ ನಾಣಾಯ್!
ಯಾವರುಮ್ ಕಾಣ ಉನ್‌ನೈ ವಳ್ಳೈತ್ತುನಾನ್ ಕೊಣ್ಣೇ ಅನ್‌ಱಿ,
ಪ್ಪೋವತುಮ್ ಚೆಯ್ಯೇನ್' ಎನ್‌ಱಾನ್ ಪುಣ್ಣಿಯ ಪ್ಪೊರುಳಾಯ್
ನಿನ್‌ಱಾನ್.

376. 'ವಳತ್ತಿನಾಲ್ ಮಿಕ್ಕ ಓಟು ವೆಳವಿನೇನ್ ಅಲ್ಲೇನ್; ಒಲ್ಲೈ,
ಉಳತ್ತಿನುಮ್ ಕಳವಿ ಲಾಮೈ ಕ್ಕೆನ್‌ಚೆಯ್‌ಕೇನ್? ಉರೈಯುಮ್' ಎನ್‌ನ,
ಕ್ಕಳತ್ತುನ ಇಶ್ಶೊಳಿತ್ತು ನಿನ್‌ಱಾನ್ 'ಕಾತಲ್ ಉನ್ ಮಕನೈ ಪ್ಪಱ್ಱಿ,
ಕ್ಕುಳತ್ತಿನಿಲ್ ಮೂಟಿಕ್ಕಿ ಪೋ' ಎನ್ ಱಿರುಳಿನಾನ್ ಕೊಟುಮೈ ಇಲ್ಲಾನ್.

377. ಐಯರ್! ನೀರ್ ಅರುಳಿ ಚ್ಚೆಯ್ದ ವಣ್ಣಮಿಯಾನ್ ಚೆಯ್ವ ತಱ್ಕು
ಪ್ಪೊಯ್ಯಿಲ್‌ಚೀರ್ ಪ್ಪುತಲ್ವನ್ ಇಲ್ಲೈ; ಎನ್‌ಚೆಯ್‌ಕೇನ್? ಪುಕಲುಮ್'
ಎನ್‌ನ,
'ಮೈಯಱು ಚಿಱಪ್ಪಿನ್ ಮಿಕ್ಕ ಮನೈಯವಳ್ ತನ್‌ನೈ ಪ್ಪಱ್ಱಿ
ಮೊಯ್ಯಲರ್ ವಾವಿ ಪುಕ್ಕು ಮೂಟ್ಕುವಾಯ್' ಎನಮೊ ಟಿನ್ನಾರ್.

378. ಗಂಗೆಯು ಮರೆಯಾಗಿರುವುದಕ್ಕೆಡೆಯಾದ ಜಡೆಯನ್ನು ಮರೆಸಿ, ಅನುಗ್ರಹಿಸಿ ಇದಿರಲ್ಲಿಯೇ ನಿಂತವನಾದ, ಕೆಂಗಣ್ಣುಳ್ಳ ವೃಷಭವನ್ನು ವಾಹನವಾಗುಳ್ಳ ಪರಮೇಶ್ವರನು ಈ ರೀತಿ ಅನುಗ್ರಹಿಸಲು, ಕುಂಬಾರ ಭಕ್ತನು ಅದಕ್ಕೆ ಪ್ರತಿಯಾಗಿ, 'ನಮ್ಮೊಳಗಾದ ಒಂದು ಶಪಥದ ಕಾರಣವಾಗಿ ನಾನು ನನ್ನ ಪತ್ನಿಯ ಕೈಯನ್ನು ಹಿಡಿದುಕೊಂಡು ಆಕೆಯೊಡನೆ ಮುಳುಗಲು ಸಾಧ್ಯವಿಲ್ಲ. ನನ್ನ ನಿರಪರಾಧಿತ್ವವನ್ನು ಹೊರಗೆ ತೋರುವಂತೆ ನಾನೇ ಮುಳುಗಿ ಪ್ರತಿಜ್ಞೆಮಾಡುತ್ತೇನೆ, ಬನ್ನಿ' ಎಂದು ಹೇಳಿದನು.

379. ಅದನ್ನು ಕೇಳಿದ ಈಶ್ವರನು, 'ನಾನು ನಿನ್ನೊಡನೆ ಒಪ್ಪಿಸಿ ಕೊಟ್ಟ ವಸ್ತುವನ್ನು ನೀನು ತಿರುಗಿ ಕೊಡುವುದಿಲ್ಲ. ಅದನ್ನು ನೀನು ಕದಿಯಲಿಲ್ಲವೆಂಬುದನ್ನು ಸಿದ್ಧಪಡಿಸಲು ನಿನ್ನ ಪತ್ನಿಯ ಸುಂದರವಾದ ಚಿಗುರಿನಂತಿರತಕ್ಕ ಕೈಯನ್ನು ಹಿಡಿದು ನೀರಿನಲ್ಲಿ ಮುಳುಗಿ ಪ್ರಮಾಣಮಾಡುವುದಕ್ಕೂ ಒಪ್ಪುವುದಿಲ್ಲ. ಇದು ನಿನ್ನ ಮೂರ್ಖವಾದ. ಹೀಗಿರುವುದರಿಂದ ನಾನು ನ್ಯಾಯವನ್ನು ಪಡೆಯಲು ತಿಲ್ಲೈವಾಟಿಂದಣರು ಇರುವ ನ್ಯಾಯಸಭೆಗೆ ಹೋಗುವೆನು' ಎಂದು ಅಲ್ಲಿಗೆ ಹೋದನು.

380. ಸನ್ಮಾರ್ಗದಲ್ಲಿ ಶ್ರೇಷ್ಠರಾದವರೂ, ನಾಲ್ಕು ವೇದಮಾರ್ಗಗಳನ್ನು ತಿಳಿದವರೂ ಆದ ತಿಲ್ಲೈವಾಟಿಂದಣರು ಬಂದು ಕೂಡಿದ್ದ ನಿರ್ದೋಷವಾದ ಸಭೆಯನ್ನು ಅದ್ವಿತೀಯನಾದ ಪರಶಿವನು ಸೇರಲು, ಹಿರಿಯ ಭಕ್ತನಾದ ತಿರುನೀಲಕಂಠನೂ ಬಹು ದೊಡ್ಡ ಆಸೆಯಿಂದ ಸೆಳೆಯಲ್ಪಟ್ಟು ಯೋಗಿಯು ಆರಂಭಿಸಿದ ವ್ಯವಹಾರದಲ್ಲಿ ಸಿಲುಕಿಕೊಂಡವನಾಗಿ ತಾನೂ ಅವರ ಹಿಂದೆಯೇ ಸಭೆಯನ್ನು ಸೇರಿದನು.

---

378. ಕಙ್ಕೈನತಿ ಕರನ್ತಚಟೈ ಕರನ್ತರುಳಿ ಎತಿರ್ನಿನ್ಱ
ವೆಙ್ಕಣ್ವಿಟೈ ಯವರ್ಅರುಳ ವೇಟ್ಕೋವರ್ ಉರೈಚೆಯ್ವಾರ್;
'ಎಙ್ಕಳಿಲ್ಓರ್ ಚಪತತ್ತಾಲ್ ಉಟನ್ಮೂಟ್ಕ ಇಚೈವಿಲ್ಲೈ;
ಪೊಙ್ಕುಪುನಲ್ ಯಾನ್ಮೂಟ್ಕಿ ತರುಕಿನ್ಱೇನ್; ಪೋತುಮ್' ಎನ.

379. ತನ್ತುಮುನ್ ತಾರಾತೇ ಕೊಳ್ವೈಕ್ಕುನ್ಮನೈವಿ
ಅನ್ತಳಿರ್ಚ್ಚೆ ಙ್ಕೈಪ್ಪಱ್ಱಿ ಅಲೈಪುನಲಿನ್ ಮೂಟ್ಕಾತೇ
ಚಿನ್ತೈವಲಿ ತ್ತಿರುಕ್ಕಿನ್ಱಾಯ್! ತಿಲ್ಲೈವಾಟ್ ಅನ್ತಣರ್ಕಳ್
ವನ್ತಿರುನ್ತ ಪೇರವೈಯಿಲ್ ಮನ್ನುವನ್ಯಾನ್ ಎನಚ್ಚೆನ್ಱಾರ್.

380. ನಲ್ಲೊಟುಕ್ಕತ್ತ್ ತಲೈನಿನ್ಱಾರ್ ನಾನ್ಮಱೈಯಿನ್ ತುಱೈಪೋನಾರ್
ತಿಲ್ಲೈವಾಟ್ ಅನ್ತಣರ್ಕಳ್ ವನ್ತಿರುನ್ತ ತಿರುನ್ತವೈಯಿಲ್
ಎಲ್ಲೈಯಿಲಾನ್ ಮುನ್ಚೆಲ್ಲ ಇರುನ್ತೊಣ್ಟರ್ ಅವರ್ತಾಮುಮ್
ಮಲ್ಕುಪೆರು ಙ್ಕಾತಲಿನಾಲ್ ವಟಿಕ್ಕುಮೋ ಲಿಟ್ಟಣೈನ್ತಾರ್.

381. ಶಿವಯೋಗಿಯ ವೇಷದಲ್ಲಿ ಬಂದ ನಮ್ಮ ಪರಮಾತ್ಮನು ತಿಲ್ಲೈವಾಟಿಂದಣರ ಮುಂದೆ 'ಈ ಕುಂಬಾರನು ನಾನು ಆತನಲ್ಲಿ ಒಪ್ಪಿಸಿಕೊಟ್ಟಿದ್ದ ಪಾತ್ರವನ್ನು ತಿರುಗಿ ತರುವುದಿಲ್ಲ. ಅದನ್ನು ಕಳೆದುಕೊಂಡಿದ್ದಲ್ಲಿ ಅದರ ಯಥಾರ್ಥತೆಯನ್ನು ಸಮರ್ಥಿಸಲು ತನ್ನ ಹೆಂಡತಿಯ ಕೈಯನ್ನು ಹಿಡಿದುಕೊಂಡು ಕೊಳದಲ್ಲಿ ಮುಳುಗಿ ಪ್ರಮಾಣ ಮಾಡಲೂ ಒಪ್ಪುವುದಿಲ್ಲ. ಈ ರೀತಿ ಆತನು ಹಟ ಹಿಡಿಯುತ್ತಾನೆ' ಎಂದು ದೂರಿದನು.

382. ಸುವಾಸನೆಯನ್ನು ಬೀರುವ ಜಡೆಮುಡಿಯನ್ನೂ, ನಾಲ್ಕು ತೋಳುಗಳನ್ನೂ, ನೂರು ಕಣ್ಣುಗಳನ್ನೂ, ನೀಲಕಂಠವನ್ನೂ ಮರೆಸಿಕೊಂಡು ಕರುಣೆದೋರಿ ಇದಿರಾಗಿ ಕಾಣಿಸಿಕೊಂಡು ನಿಂತ ವೇದವಿದನಾದ ಬ್ರಾಹ್ಮಣನು (ವೇದಿಯನು) ಈ ರೀತಿಯಾಗಿ ದೂರು ತರಲು, ತಿಲ್ಲೈವಾಟಿಂದಣರು, 'ದೃಢಚಿತ್ತವುಳ್ಳ ಕುಂಬಾರರೆ! ಇದ್ದ ರೀತಿಯಲ್ಲಿ ನಡೆದ ವರ್ತಮಾನವನ್ನು ನೀವು ಹೇಳಿರಿ' ಎಂದು ಕೇಳಿಕೊಂಡರು.

383. 'ಪವಿತ್ರವಾದ ಮೂರೆಳೆಯ ನೂಲನ್ನು ಎದೆಯಲ್ಲಿ ಧರಿಸಿಕೊಂಡಿರುವ ಬ್ರಾಹ್ಮಣರೆ, ಇಲ್ಲಿ ನಿಂತಿರುವ ಈ ವೇದವಿದರಾದ ವಿಪ್ರರು, ಅಮೂಲ್ಯವಾದುದೆಂದು ನನ್ನಲ್ಲಿ ತಂದಿಟ್ಟ ಭಿಕ್ಷಾಪಾತ್ರವು ನಾನಿಟ್ಟ ಭದ್ರವಾದೆಡೆಯಿಂದ ಹೇಗೋ ಮಾಯವಾಗಿದೆ. ಇದು ನಡೆದ ಕಾರ್ಯ' ಎಂದು ದೋಷವೆಂಬುದರ ಸೋಂಕೇ ಇಲ್ಲದ ತಿರುತ್ತೊಂಡನು ಹೇಳಿದನು.

---

381. ಅನ್ನಣನಾಮ್ ಎನ್ನೈಪಿರಾನ್ ಅರುಮಱೈಯೋರ್ ಮುನ್‌ಪಕರ್‌ವಾನ್
'ಇನ್ನವೇಟ್ ಕೋವನ್‌ಪಾಲ್ ಯಾನ್‌ವೈತ್ತ ಪಾತ್ತಿರತ್ತೈ
ತ್ತನ್ನೊಟಿಯಾನ್; ಕೆಟುತ್ತಾನೇಲ್ ತನ್‌ಮನೈವಿ ಕೈಪ್ಪಱ್ಱಿ
ಮನ್ನುಮೂ ೞ್ಕಿಯುನ್ತಾರಾನ್; ವಲಿಚೆಯ್‌ಕಿನ್ ಱಾನ್' ಎನ್‌ಱಾರ್.

382. ನಱುಕ್ಕಮೞು ಞ್ಚಟೈಮುಟಿಯುಮ್ ನಾಱ್ಱೋಳುಮ್ ಮುಕ್ಕಣ್ಣುಮ್
ಕಱೈಮರುವು ತ್ತಿರುಮಿಟಱುಮ್ ಕರನ್ತರುಳಿ ಎೞುನ್ತರುಳುಮ್
ಮಱೈಯವನ್ ಇ ತ್ತಿಱಮೊೞಿಯ ಮಾಮಱೈಯೋರ್ ಉರೈ ಚೆಯ್ವಾರ್
'ನಿಱೈಯುಟೈಯ ವೇಟ್‌ಕೋವರ್! ನೀರ್‌ಮೊೞಿಯುಮ್ ಪುಕುನ್ತ' ತೆನ.

383. 'ನೀಣೆತಿಯಾಮ್ ಇತುವೆನ್‌ಱು ನಿನ್‌ಱಿವರ್ ತರುಮ್‌ಓಟು
ಪೇಣಿನಾನ್ ವೈತ್ತಇಟಮ್ ಪೆಯರ್‌ನ್ತುಕರ ನ್ತತುಕಾಣೇನ್;
ಪೂಣಣಿನೂಲ್ ಮಣಿಮಾರ್‌ಪೀರ್! ಪುರುನ್ತಪರಿ ಚಿತು' ಎನ್‌ಱು
ಚೇಣಿಟೈಯುಮ್ ತೀಙ್ಕಟೈಯಾ ತ್ತಿರುತ್ತೊಣ್ಟರ್ ಉರೈಚೆಯ್ತಾರ್.

384. ಈ ರೀತಿ ಇಬ್ಬರ ಮಾತುಗಳನ್ನೂ ಕೇಳಿದ ತಿಲ್ಲೈವಾಟಂದಣರು ತೀರ್ಪು ಹೇಳುವವರಾಗಿ, 'ಭಸ್ಮಲೇಪಿತ ಶರೀರವುಳ್ಳ ಈ ಶಿವಯೋಗಿಗಳು ನಿಮ್ಮೆಡೆ ಇಟ್ಟ ಓಡು ನಿಮಗೆ ಗೊತ್ತಿಲ್ಲದಂತೆ ಮಾಯವಾಗಿದ್ದರೆ, ನೀವು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕೆ, ಈ ಶಿವಯೋಗಿ ವೇದವಿದರು ಕೇಳಿಕೊಂಡಂತೆ ನೀವು ನಿಮ್ಮ ಹೆಂಡತಿಯೊಡನೆ ಕೊಳದಲ್ಲಿ ಮುಳುಗಿ ಪ್ರಮಾಣ ಮಾಡುವುದೇ ನ್ಯಾಯವು' ಎಂದು ಹೇಳಿದರು.

385. ಅಸಾಧ್ಯವಾದ ತಪಸ್ಸನ್ನು ಮಾಡುವವನಾದ ನಾಯನಾರನು ಈ ರೀತಿ ತಿಲ್ಲೈವಾಟಂದಣರು ಹೇಳಿದ ತೀರ್ಪನ್ನು ಕೇಳಿ, ಅವರೊಡನೆ ತನ್ನ ಪತ್ನಿಯನ್ನು ತಾನು ಸ್ಪರ್ಶಿಸಲಾಗದ ನೆಲೆಯನ್ನು ಹೇಳಲಾರದವನಾಗಿ, ತನ್ನ ವ್ಯವಹಾರದಲ್ಲಿ ಜೈಸಿದ ಆ ಹಿರಿಯ ಶಿವಯೋಗಿಯನ್ನು ನೋಡಿ, 'ತಕ್ಕ ರೀತಿಯಲ್ಲಿ ಕೊಳದಲ್ಲಿ ಮುಳುಗಿ ನಾನು ಪ್ರಮಾಣ ಮಾಡುತ್ತೇನೆ. ಬರುವವರಾಗಿ' ಎಂದು ಹೇಳಿ ಅವನೊಡನೆ ಅಲ್ಲಿಂದ ತನ್ನ ಮನೆಯನ್ನು ಸೇರಿದನು.

386. ಅಲ್ಲಿಂದ ಹೆಂಡತಿಯನ್ನು ಒಡನೆ ಕರೆದುಕೊಂಡು ವೇದವಿದನಾದ ಶಿವ ಯೋಗಿಯ ಮುಂದೆ ಪ್ರಮಾಣ ಮಾಡುವುದಕ್ಕಾಗಿ, ವೃಷಭವಾಹನನಾದ ಶಿವ ಪರಮಾತ್ಮನು ಇದ್ದು ಅನುಗ್ರಹಿಸಿದ ತಿರುಪ್ಪುಲೀಶುರಂ (ವ್ಯಾಘ್ರಪಾದೇಶ್ವರಂ) ಎಂಬ ದೇಗುಲದ ಮುಂದೆ ಇರುವ ಮಲರ ಉದ್ಯಾನವು ಸುತ್ತುವರಿದ ಕೊಳವನ್ನು ಸೇರಿ, ತಾನು ಕೈಕೊಂಡು ನಡೆಸಿ ಬರುವ ಆಣೆಯನ್ನು ಕಾಪಾಡುವವನಾಗಿ, ಅದಕ್ಕೆ ತಪ್ಪದಂತೆ ಪ್ರಮಾಣವನ್ನು ಮಾಡಲಿಕ್ಕಾಗಿ ಬಿದಿರು ದಂಟೆಯ ಒಂದು ಕೊನೆಯನ್ನು ನಾಯನಾರನೂ ಇನ್ನೊಂದು ಕೊನೆಯನ್ನು ಆತನ ಪತ್ನಿಯೂ ಹಿಡಿದುಕೊಂಡು ಕೊಳದಲ್ಲಿ ಮುಳುಗ ಹೋದನು.

---

384. ತಿರುವುಟ್ಟೈ ಅನ್ತಣಾಳರ್ ಚೆಪ್ಪುವಾರ್ "ತಿಕಟ್‍ನ್ತ ನೀಙ್ಗಿನ್
ಉರುವುಟ್ಟೈ ಇವರ್‍ತಾಮ್ ವೈತ್ತ ಓಟ್ಟನೈ ಕ್ಕೆಟುತ್ತೀ ರಾನಾಲ್
ತರುಮಿವರ್ 'ಕುಳತ್ತಿಲ್ ಮೂಟಿಕ್ಕ ತ್ತರುಕ' ಎನ್ಱುರೈನ್ತಾ ರಾಕಿಲ್
ಮರುವಿಯ ಮನೈವಿ ಯೋಟು ಮೂಟ್‍ಕುತಲ್ ವಟಿಕ್ಕೇ" ಎನ್ಱಾರ್.

385. ಅರುನ್ತವ ತ್ತೊಣ್ಡರ್ ತಾಮುಮ್ ಅನ್ತಣರ್ ಮೊಟಿಯ ಕ್ಕೇಟ್ಟು
ತ್ತಿರುನ್ತಿಯ ಮನೈವಿ ಯಾರೈ ತ್ತೀಣ್ಡಾಮೈ ಚೆಪ್ಪ ಮಾಟ್ಟಾರ್
'ಪೊರುನ್ತಿಯ ವಕೈಯಾಲ್ ಮೂಟಿಕ್ಕಿ ತ್ತರುಕಿನ್ಱೇನ್ ಪೋತುಮ್' ಎನ್ಱು
ಪೆರುನ್ತವ ಮುನಿವ ರೋಟುಮ್ ಪೆಯರ್‍ನ್ತುತಮ್ ಮನೈಯೈ ಚ್ಚಾರ್‍ನ್ತಾರ್.

386. ಮನೈವಿಯಾರ್ ತಮ್ಮೈ ಕ್ಕೊಣ್ಡು ಮಱೈಚ್ಚಿಯ ಯೋಕಿ ಯಾರ್‍ಮುನ್
ಚಿನವಿಟೈ ಪ್ಪಾಕರ್ ಮೇವುಮ್ ತಿರುಪ್ಪುಲೀ ಚ್ಚುರತ್ತು ಮುನ್‍ನರ್
ನನೈಮಲರ್ ಚ್ಚೋಲೈ ವಾವಿ ನಣ್ಣಿತ್ತಮ್ ಉಣ್ಮೈ ಕಾಪ್ಪಾರ್
ಪುನೈಮಣಿ ವೇಣು ತ್ತಣ್ಟಿನ್ ಇರುತಲೈ ಪಿಟಿತ್ತು ಪ್ಪುಕ್ಕಾರ್.

387. ಈ ರೀತಿ ಅವರು ಬಿದಿರಿನ ಎರಡು ಕೊನೆಗಳನ್ನು ಹಿಡಿದು ಮುಳುಗ ಹೋಗುವುದನ್ನು ನೋಡಿ, ಬಿಳಿಯ ವಿಭೂತಿಯನ್ನು ತ್ರಿಪುಂಡ್ರವಾಗಿ ಧರಿಸಿ ನಿಂತ ವೇದವಿದ ಶಿವಯೋಗಿಯು, 'ಹೆಂಡತಿಯನ್ನು ಮುಟ್ಟಿ ಕೈಹಿಡಿದು ಮುಳುಗಿ ಪ್ರಮಾಣ ಮಾಡಿ!' ಎಂದು ಹೇಳಲು, ಯಾವ ರೀತಿಯಲ್ಲಿಯೂ ದೋಷವಿಲ್ಲದ ನಾಯನಾರನು ತಾನು ಹೆಂಡತಿಯನ್ನು ಮುಟ್ಟಿ ಮುಳುಗಲಾರದುದನ್ನು ಲೋಕದವರು ಕೇಳಿ ತಿಳಿಯುವಂತೆ ತಮ್ಮ ಹಿಂದಿನ ವೃತ್ತಾಂತವನ್ನು ಹೇಳಿ, ಹಿಂದೆ ಸಂಕಲ್ಪಿಸಿದ ರೀತಿಯಲ್ಲಿಯೇ ಕೊಳದಲ್ಲಿ ಮುಳುಗಿದನು.

388. ಕೊಳದಲ್ಲಿ ಮುಳುಗಿ ಪ್ರಮಾಣ ಮಾಡಿ ಎದ್ದೊಡನೆಯೇ ನಾಯನಾರನೂ ಆತನ ಪತ್ನಿಯೂ ತಮ್ಮ ವೃದ್ಧಾಪ್ಯವನ್ನು ಕಳೆದುಕೊಂಡು ಆಶಿಸತಕ್ಕ ಯೌವನವನ್ನು ಹೊಂದಿದವರಾಗಿದ್ದರು. ಆಗ ದೇವತೆಗಳೂ ಮುನಿಗಳೂ ಅದ್ಭುತಕರವಾಗಿ ಸುರಿಸಿದ ಕಲ್ಪವೃಕ್ಷದ ಹೂಮಳೆಯಲ್ಲಿ ಅವರು ತಿರುಗಿ ಮುಳುಗುವಂತಾದುದನ್ನು ಅಲ್ಲಿದ್ದವರು ನೋಡಿದರು.

389. ಆ ನೆಲೆಯಲ್ಲಿ ನಿಂತ ಅವರೀರ್ವರನ್ನೂ ನೋಡಿ ಅಚ್ಚರಿಗೊಂಡ ಲೋಗರು ಮುಂದೆ ನಿಂತಿದ್ದ ವೇದವಿದನಾದ ಶಿವಯೋಗಿಯನ್ನು ಕಾಣಲಿಲ್ಲ. ಇದಾದ ರೀತಿ ತಾನೇ ಏನು? ಎನ್ನುವಂತೆ ಭ್ರಮೆಯನ್ನು ಅವರು ಹೊಂದಿದವರಾಗಲು, ಮೇಲೆ ಪರಾಕಾಶ ದಲ್ಲಿ ಶಿವನು ತನ್ನ ಜತೆಗಾತಿಯಾದ ಉಮಾದೇವಿಯೊಡಗೂಡಿ ವೃಷಭವಾಹನದ ಮೇಲೆ ದರ್ಶನ ಕೊಡುವುದನ್ನು ಕಣ್ಣಾರೆ ಕಂಡರು.

---

387. ತಣ್ಣಿರು ತಲೈಯುಮ್ ಪಟ್ರಿ ಪ್ಪುಕುಮ್‌ಅವರ್ ತಮ್ಮೈ ನೋಕ್ಕಿ
ವೆಣ್ಣಿರು ನೀಱು ಮುಣ್ಣ ವೇತಿಯರ್ 'ಮಾತೈ ತ್ತೀಣ್ಟಿ
ಕ್ಕೊಣ್ಟುಟನ್ ಮೂೞ್ಕಿರ್' ಎನ್ನ ಕ್ಕುಟ್ಟಮ್ಮೈ ಪಾರೋರ್ ಕೇಟ್ಕ
ಪ್ಪಣ್ಬುತವ್ ಚೆಯ್‌ಕೈ ಚೊಲ್ಲಿ ಮೂೞ್ಕಿನಾರ್ ಪೞುತಿ ಲಾತಾರ್.

388. ವಾವಿಯಿನ್ ಮೂೞ್ಕಿ ಏಱು ಙ್ಗಣವರು ಮನೈವಿ ಯಾರು
ಮೇವಿಯ ಮೂಪ್ಪು ನೀಙ್ಗಿ ವಿರುಪ್ಪುಱು ಮಿಳಮೈ ಪೆಱ್ಱು,
ತ್ತೇವರು ಮುನಿವರ್ ತಾಮು ಞ್ಚಿಱಪ್ಪೊಟು ಪೊೞಿಯು ನ್ತೆಯ್ವ
ಪ್ಪೂವಿನ್‌ಮಾ ಮೞೈಯಿನ್ ಮೀಳ ಮೂೞ್ಕುವಾರ್ ಪೋನ್ಱು ತೋನ್ಱ.

389. ಅನ್ನಿಲೈ ಯವರೈ ಕ್ಕಾಣು ಮತಿಚಯ ಙ್ಗಣ್ಟಾ ರೆಲ್ಲಾ
ಮುನ್‌ನಿಲೈ ನಿನ್ಱ ವೇತ ಮುತಲ್ವರೈ ಕ್ಕಣ್ಟಾ ರಿಲ್ಲೈ;
ಇನ್ನಿಲೈ ಯಿರುನ್ತ ವಣ್ಣ ಮೆನ್‌ನೆನ ಮರುಣ್ಟು ನಿನ್ಱಾರ್
ತುನ್‌ನಿಯ ವಿಚುಮ್ಪಿ ನೂಟು ತುಣೈಯುಟನ್ ವಿಟೈಮೇಱ್ ಕಣ್ಟಾರ್.

390. ತೃಪ್ತಿಹೊಂದುವಂತೆ ಕರಗಳನ್ನು ಎತ್ತಿ ಮುಗಿದು ನಮಿಸಿದರು. ಭಕ್ತರ ಹಿರಿಮೆಯನ್ನು ನೋಡಿ ಹೆಚ್ಚಾದ ಆಶೆಯಿಂದ ದೇವತೆಗಳು ಸ್ತುತಿಸಿದರು. ಆಗಸದಲ್ಲಿ ತನ್ನ ಸುಂದರಮೂರ್ತಿಯನ್ನು ಎಲ್ಲರಿಗೂ ತೋರಿಸಿ, ವೃಷಭವಾಹನದ ಮೇಲಿದ್ದು ಅನುಗ್ರಹಿಸಲು ಬಂದ ಈಶ್ವರನನ್ನು ಕಂಡು ನಾಯನಾರನೂ ಆತನ ಹೆಂಡತಿಯೂ ತಲೆಬಾಗಿ ವಂದಿಸಿದರು.

391. ದಿವ್ಯಸಭೆಯಲ್ಲಿ ದಿವ್ಯನಟನವನ್ನಾಡಿ, ಭಕ್ತರ ಮನೆಗಳಲ್ಲೆಲ್ಲಾ ಹೋಗಿ ಅವರ ಸತ್ಯವಾದ ಮಾರ್ಗವನ್ನು ಲೋಕವು ತಿಳಿಯುವಂತೆ ತೋರಿಸುವವರಾದ ದೇವರ ದೇವರಾದ ಶಿವಪರಮಾತ್ಮನು ನಾಯನಾರನ್ನೂ ಅವನ ಹೆಂಡತಿಯನ್ನೂ ನೋಡಿ, 'ಪಂಚಜ್ಞಾನೇಂದ್ರಿಯಗಳನ್ನೂ ಜೈಸಿ ಅವುಗಳನ್ನು ವಶಪಡಿಸಿಕೊಂಡು ಶೋಭಿಸುವವರೆ, ನೀವು ಈಗ ನಮ್ಮ ಅನುಗ್ರಹದಿಂದ ತಿರುಗಿ ಹೊಂದಿದ ಈ ಯೌವನವನ್ನು ಎಂದಿಗೂ ನೀಗದ ನೆಲೆಯಲ್ಲಿ ನಮ್ಮೆಡೆಯಲ್ಲಿಯೇ ಇರುವವರಾಗಿರಿ' ಎಂದು ಅನುಗ್ರಹಿಸಿ ತನ್ನ ಪರಿಪೂರ್ಣವಾದ ದೇಗುಲದಲ್ಲಿ ಅಂತರ್ಧಾನನಾದನು.

392. ಹಿರಿಮೆಯನ್ನು ಹೊಂದಿದ ಭಕ್ತರೂ ಅವರ ಹೆಂಡತಿಯೂ ಅನುಗ್ರಹ ದಿಂದ ಪರಿಪೂರ್ಣವಾದ ಶ್ರೇಷ್ಠಕಾರ್ಯವನ್ನು ಮಾಡಿ ಮೇಲೆ ಹೇಳಿದಂತೆ ಅದರ ಫಲವಾದ ಶಿವಲೋಕವನ್ನು ಸೇರಿ ಇತರರಾರಿಗೂ ಪಡೆಯಲಸಾಧ್ಯವಾದ ಯೌವನವನ್ನು ಪಡೆದವರಾಗಿ ಆಗಲೇ ದಿವ್ಯಸುಖವನ್ನು ಹೊಂದಿ ಶೋಭಿಸಿದರು.

---

390. ಕಣ್ಣಿನರ್ ; ಕೈಕಳಾರ ತ್ತೊಟುತನರ್ ; ಕಲನ್ತ ಕಾತ
ಲಣ್ಣಲರು ಮೇತ್ತಿ ನಾರ್ಕ ; ಳನ್ಪರ್ತಮ್ ಪೆರುಮೈ ನೋಕ್ಕಿ
ವಿಣ್ಣವರುಮ್ ಪೊಲಿವು ಕಾಟ್ಟ ವಿಟೈಯಿನ್ಮೇಲ್ ವರುವಾರ್ ತಮ್ಮೈ
ತ್ತೊಣ್ಣವರುಮ್ ಮನೈವಿ ಯಾರು ನ್ತೊಟುತುಟನ್ ಪೋಱ್ಱಿ ನಿನ್ಱಾರ್.

391. ಮನ್ಱುಳೇ ತಿರುಕ್ಕೂತ್ತಾಟಿ ಯಟಿಯವರ್ ಮನೈಕ ಟೋಱುಙ್
ಚೆನ್ಱವರ್ ನಿಲೈಮೈ ಕಾಟ್ಟು ನ್ತೇವರ್ಕ ಟೇವರ್ ತಾಮುಮ್
'ವೆನ್ಱವೈ ಮ್ಪುಲನಾನ್ ಮಿಕ್ಕೀರ್! ವಿರುಪ್ಪುಟ ನಿರುಕ್ಕ ನಮ್ಪಾ
ಲೆನ್ಱುಮಿ ವ್ವಿಳಮೈ ನೀಙ್ಕಾ' ತೆನ್ಱಿಟು ನ್ತರುಳಿನಾರೇ.

392. ವಿಱಲುಟೈ ತ್ತೊಣ್ಟ ನಾರುಮ್ ಮೆಣ್ಣಕೈ ಚ್ಚೆವ್ವಾಯ್ ಮೆನ್ಱೋ
ಳಱಲಿಯಱ್ ಕೂನ್ತ ಲಾರಾ ಮನೈವಿಯು ಮರುಳಿ ನಾರ್ನ್ತ
ತಿಱಲುಟೈ ಚೆಯ್ಕೈ ಚೆಯ್ತು ಚಿವಲೋಕ ಮತನೈ ಯೆಯ್ತಿ
ಪ್ಪೆಱಲರು ಮಿಳಮೈ ಪೆಟ್ಱು ಪ್ಪೇರಿನ್ಪ ಮುಱ್ಱಾ ರನ್ಱೇ.

393. ಇತರರಾರೂ ತಿಳಿಯದ ಮಾರ್ಗದಲ್ಲಿ ಪರಮೇಶ್ವರನ ತಿರುನೀಲಕಂಠದ ದಿವ್ಯ ಆಣೆಯನ್ನು ತಪ್ಪದೆ ಕಾಪಾಡಿ ಬಾಳಿದವರೂ ಲೋಕಭ್ರಮೆಗೆ ಒಳಪಡದಂತೆ ಅದರಿಂದ ಬಿಡಲ್ಪಟ್ಟವರೂ ಆದ ಮಹಿಮೆಯುಳ್ಳ ತಿರುನೀಲಕಂಠ ನಾಯನಾರರನ್ನು ನಾನು ತಿಳಿದ ರೀತಿಯಲ್ಲಿ ಸ್ತುತಿಸಿ ಅವರ ಪುರಾಣವನ್ನು ಮುಗಿಸಿಕೊಂಡು ಅದರ ಆಧಾರದಿಂದ, ಮೇಘಗಳು ಜೋತು ತಂಗುವಂತಹ, ಉಚ್ಚವಾದ ಉಪ್ಪರಿಗೆಗಳಿಂದ ಕೂಡಿದ ಅರಮನೆಗಳಿಂದ ಸುಂದರವಾದ ಪುಗಾರ್‌ನಗರ ಎಂಬ ಕಾವೇರಿ ಪೂಂಪಟ್ಟಣದಲ್ಲಿ ಬಾಳಿದ ವ್ಯಾಪಾರಿಗಳಾದ ಸತ್ಯಶೀಲಕಾಯಕಗಳನ್ನೇ ಮಾಡುವ ಇಯರ್‌ಪಗೈ ನಾಯನಾರರು ಮಾಡಿದ ತಿರುತ್ತೊಂಡನ್ನು ಹೇಳತೊಡಗುವೆನು.

3. ಇಯರ್‌ಪಗೈ ನಾಯನಾರ

394. ಪುಗಾರ್ ಎಂಬ ಕಾವೇರಿ ಪೂಂಪಟ್ಟಣವು ನಿಡಿದಾದ ಬೆಳ್ಗೊಡೆಯುಳ್ಳ ಅನಪಾಯ ಚೋಳಚಕ್ರವರ್ತಿಯ ಕಾಲಕ್ಕೆ ಹಿಂದೆಯೇ ಆತನ ಕುಲದ ಅನೇಕ ಕೀರ್ತಿವಂತರಾದ ಚೋಳ ಅರಸರ ಆಳ್ವಿಕೆಯ ಮಹತಿಯನ್ನು ಹೊಂದಿದ ನಗರ. ಈ ಚೋಳ ನಾಡಿನಲ್ಲಿ ಹರಿಯುವ ಪವಿತ್ರವಾದ ತೀರ್ಥಜಲವುಳ್ಳ ಕಾವೇರಿ ನದಿಯು ಇಲ್ಲಿನ ಗದ್ದೆಗಳ ಬೆಳೆಯ ಸಂಪತ್ತನ್ನು ಹೆಚ್ಚಿಸುತ್ತಾ ಪೂರ್ವದ ಕಡಲ ಕಡೆಗೆ ಹರಿದು ಅಲ್ಲಿ ಸಂಗಮವಾಗಿ ಆ ಕಡಲನ್ನೂ ಪರಿಶುದ್ಧವನ್ನಾಗಿ ಮಾಡಿದೆ.

---

393. ಅಯಲಱಿ ಯಾತ ವಣ್ಣ ಮಣ್ಣಲಾ ರಾಣೈ ಯುಯ್‌ತ್ತ
ಮಯನಿಲ್ ಚೀರ್ ತ್ತೊಣ್ಟ ನಾರೈ ಯಾನಱಿ ವಕೈಯಾಲ್ ವಾೞ್‌ತ್ತಿ,
ಪ್ಪುಯಲ್ವಳರ್ ಮಾಟ ನೀಟುಮ್ ಪೂಮ್ಪುಕಾರ್ ವಣಿಕರ್ ಪೊಯ್ಯಿಲ್
ಚೆಯಲಿಯಱ್ ಪಕೈಯಾರ್ ಚೆಯ್ತ ತಿರುತ್ತೊಣ್ಟು ಚೆಪ್ಪ ಲುಱ್ಱೇನ್.

3. ಇಯಱ್‌ಪಕೈ ನಾಯನಾರ್ ಪುರಾಣಮ್

394. ಚೆನ್ನಿ ವೆಣ್‌ಕುಟೈ ನೀಟನ ಪಾಯನ್
ಱಿರುಕ್ಕು ಲಮ್ಪುಕೞ್‌ಪೆ ರುಕ್ಕಿಯ ಚಿಱಪ್ಪಿನ್
ಮನ್ನು ತೊಲ್ಪುಕೞ್ ಮರುತನೀರ್ ನಾಟ್ಟು
ವಯಲ್ವ ಳನ್ತರ ವಿಯಲ್‌ಪಿನಿ ಲಳಿತ್ತು
ಪ್ಪೊನ್ನಿ ನನ್ನತಿ ಮಿಕ್ಕನೀರ್ ಪಾಯ್‌ನ್ತು
ಪುಣರಿ ತನ್ನೈಯುಮ್ ಪುನಿತಮಾ ಕ್ಕುವತೋರ್
ನನ್ನೆ ಟುಮ್ಪೆರು ನ್ತೀರ್‌ತ್ತಮುನ್ ನುಟೈಯ
ನಲಞ್ಚಿ ಱನ್ತು ವಳಮ್ಪುಕಾರ್ ನಕರಮ್.

395. ಇಂತಹ ಬೆಳೆಯ ಸಂಪತ್ತಿರುವ ಚೋಳನಾಡಿನಲ್ಲಿ ನೆಲಸಿ ಬಾಳುವವರಾದ ಮೊದಲ ವೈಶ್ಯಕುಲಕ್ಕೆ ಸೇರಿದವನು ಇಯರ್ ಪಗೈಯಾರ್ (ಲೋಕಸ್ವಭಾವಕ್ಕೆ ವಿರುದ್ಧ ರೀತಿಯಲ್ಲಿ ವರ್ತಿಸಿದವರು) ಎಂಬ ಹೆಸರುಳ್ಳವನು. ಇವನು ಅಳತೆಯಿಲ್ಲದ ಭಾಗ್ಯದಿಂದ ಹೊಂದಿದ ಸಕಲ ವಿಧದ ಸಂಪತ್ತುಗಳಿಂದ ಕೂಡಿದವನು. ಕಿಸುಸಂಜೆಯಲ್ಲಿ ಶೋಭಿಸುವ ಬಾಲಚಂದ್ರನನ್ನು ಧರಿಸಿದ ಜಡೆಯುಳ್ಳ ಶಿವಪರಮಾತ್ಮನಲ್ಲಿ ಭೃತ್ಯಭಾವವನ್ನು ಆಚರಿಸುವವರಲ್ಲಿ ಶ್ರೇಷ್ಠನಾದವನು. ವೇದಗಳೆಂಬ ನೂಪುರಗಳು ಶಬ್ದಿಸುವ ಅಡಿಗಳನ್ನುಳ್ಳ ಶಿವನ ಭಕ್ತರು ಯಾರೇ ಆಗಿದ್ದರೂ, ಅವರು ಇಚ್ಛಿಸಿದುದು ಯಾವುದೇ ಆಗಿದ್ದರೂ 'ಇಲ್ಲ' ಎನ್ನದೆ ಕಡಲು ಸುತ್ತುವರಿದ ಈ ಲೋಕದಲ್ಲಿ ಶೋಭಿತವಾಗುವಂತೆ ಮೊದಲೇ ಕೊಡುವ ಸ್ವಭಾವದಲ್ಲಿ ಸ್ಥಿರವಾಗಿ ನೆಲಸಿ ನಿಂತವನು.

396. ಗಂಗೆಯನ್ನು ಜಡೆಯಲ್ಲಿ ಧರಿಸಿದ ಈಶ್ವರನ ಸೇವಾಪರತೆಯಿಂದ ಪೂರ್ಣಾನುಗ್ರಹವನ್ನು ಪಡೆದ ಭಸ್ಮಲೇಪಿತ ಶರೀರವುಳ್ಳ ಭಕ್ತನು ಮನದಲ್ಲೆಣಿಸಿದೆಲ್ಲವುಗಳನ್ನೂ ಕೊಟ್ಟು ತಾನು ಗೃಹಸ್ಥಾಶ್ರಮದಲ್ಲಿ ಅನುಭವಿಸುವ ಭಾಗ್ಯವೆಲ್ಲಾ ಶಿವಭಕ್ತರ ಸೇವೆಯ ಫಲವೆಂದುಕೊಳ್ಳುತ್ತಿದ್ದನು.

---

395. ಅಕ್ಕು ಲಪ್ಪತಿ ಕ್ಕುಟಿಮುತಲ್ ವಣಿಕರ್,
ಅಳವಿಲ್ ಚೆಲ್ವತ್ತು ವಳಮೈಯಿ ನಮೈನಾರ್,
ಚೆಕ್ಕರ್ ವೆಣ್ಪಿಱೈ ಚ್ಚಟೈಯುವ ರಟಿಮೈ
ತ್ತಿಱತ್ತಿನ್ ಮಿಕ್ಕವರ್, ಮಱೈಚ್ಚಿಲ ಮ್ಪಟಿಯಾರ್
ಮಿಕ್ಕ ಚೀರಟಿ ಯಾರ್ಕಳ್ಯಾ ರೆನಿನುಮ್
ವೇಣ್ಟುಮ್ ಯಾವೈಯು ಮಿಲ್ಲೈಯೆನ್ ನಾತೇ
ಇಕ ಟಱ್ಪಟಿ ನಿಕೞ್ಮುನ್ ಕೊಟುಕ್ಕು
ಮಿಯಲ್ಪಿ ನಿನ್ಱವರ್; ಉಲಕಿಯಱ್ ಪಕೈಯಾರ್.

396. ಆಱು ಚೂಟಿಯ ವೈಯರ್ಮೆ ಯ್ಯಟಿಮೈ
ಯಳವಿ ಲಾತತೋ ರುಳನಿಱೈ ಯರುಳಾ
ನೀಱು ಚೇರ್ತಿರು ಮೇನಿಯರ್ ಮನತ್ತು
ನಿನೈತ್ತ ಯಾವೈಯುಮ್ ವಿನೈಪ್ಪಟ ಮುಟಿತ್ತು
ಮಾಱಿ ಲಾತನನ್ ನೆಱಿಯಿನಿಲ್ ವಿಳಙ್ಕು
ಮನೈಯ ಱಮ್ಪುರಿ ಮಕಿೞ್ಚ್ಚಿಯಿನ್ ವನ್ತು
ಪೇಱು ಲಾಮವ ರೇವಿನ ಚೆಯ್ಯುಮ್
ಪೆರುಮೈ ಯೇಯೆನ ಪ್ಪೇಣಿವಾೞ್ ನಾಳಿಲ್.

397. ಹೀಗಿರುವಾಗ ಶಿವಜ್ಞಾನದಿಂದ ವಿಚಾರಕ್ಕೆ ತಕ್ಕುದಾದ, ಅತಿಸೂಕ್ಷ್ಮ ವಸ್ತುವೂ ಆದ, ಎಲ್ಲರೂ ಕಾಣುವಂತೆ ಪ್ರತ್ಯಕ್ಷವಾಗಿ ಚಿತ್ಸಭೆಯಲ್ಲಿ ನಿಂತು ನಾಟ್ಯ ವಾಡುವ, ಈಶ್ವರನು, ಪರಿಶುದ್ಧವಾದ ವಿಭೂತಿಯು ತನ್ನ ಹೊನ್ನಿನಂತಹ ಶರೀರ ದಲ್ಲಿ ಪ್ರಕಾಶಿಸಲು, ಅದಕ್ಕೆ ವಿರೋಧವಾಗಿ ಧೂರ್ತವೇಷವೂ ಆ ಶರೀರದಲ್ಲಿಯೇ ಪ್ರತ್ಯಕ್ಷ ವಾಗಿ ತೋರಲು, ವೇದವಿದನಾದ ಬ್ರಾಹ್ಮಣ ರೂಪವನ್ನು ತಾಳಿದನು. ತಾನು ಈ ರೀತಿ ರೂಪವನ್ನು ತಾಳಿ ಬಂದು ಮಾಡುವ ಕಾರ್ಯವು ಆಕಾಶದಲ್ಲಿ ಶೋಭಿಸುವ ತನ್ನ ನಾಯಕಿಯಾದ ಉಮಾದೇವಿಗೆ ತಿಳಿಯುವಂತಿತ್ತೋ ತಿಳಿಯದಂತಿತ್ತೋ ಎಂಬು ದನ್ನು ನಾವು ತಿಳಿಯೆವು. ಈ ರೀತಿ ವೇದಿಯನ ರೂಪವನ್ನು ತಾಳಿ ಲೋಕದವರು ಕಾಣುವಂತೆ ತನ್ನ ಭಕ್ತನಾದ ಇಯರ್‌ಪಗೈಯಾರನು ಬೇಡಿದಾವುದನ್ನೂ ಇಲ್ಲವೆನ್ನದೆ ಕೊಡುತ್ತಿರುವ ಸ್ವಭಾವವನ್ನು ತೋರಿಸಿಕೊಡುವುದಕ್ಕಾಗಿ ಬಂದನು.

398. ಹೀಗೆ ಬಂದು ಕಾವೇರಿ ಪೂಂಪಟ್ಟಣದ ವೈಶ್ಯರ ಬೀದಿಯಲ್ಲಿ ಒಂದು ಪಕ್ಕದಲ್ಲುಳ್ಳ ಇಯರ್‌ಪಗೈಯಾರನ ಮನೆಯನ್ನು ಆ ವೇದಿಯ ವೇಷದ ಈಶ್ವರನು ಪ್ರವೇಶಿಸಲು, ಆ ಭಕ್ತನು, 'ನಮ್ಮ ತಂದೆಯೂ ಈಶ್ವರನೂ ಆದ ಭಕ್ತರೇ ಬಂದಿರುವರು' ಎಂದುಕೊಂಡು, ಯಾವಾಗಲೂ ತನ್ನ ಮನಸ್ಸಿನಲ್ಲಿ ನೆಲಸಿ ನಿಂತ ಪ್ರೀತಿಯುಕ್ತವಾದ ಆದರದಿಂದೆದ್ದು, ಸಂತೋಷದಿಂದ ಇದಿರ್ಗೊಂಡು ನಮಿಸಿ, ಕೂಡಿಕೊಂಡು ಬಂದು, ವಿಶೇಷವಾದ ಅರ್ಚನೆ ಸೇವೆಗಳೆಲ್ಲವನ್ನೂ ಮಾಡಿ ಮುಗಿಸಿ, 'ನೀವು ಇಲ್ಲಿ ಅನುಗ್ರಹಿಸಿ ಬರುವಂತಾದುದು, ನನ್ನ ಹಿಂದಿನವರೂ ಸೇವಕನಾದ ನಾನೂ ಮಾಡಿದ ತಪಸ್ಸಿನ ಫಲ' ಎಂದು ಉಪಚಾರ ಹೇಳಿ ತಲೆಬಾಗಿ ನಿಂತನು.

---

397. ಆಯ ನುಣ್ಪೊರು ಳಾಕಿಯುಮ್ ವೆಳಿಯೇ
ಯಮ್ಪ ಲತ್ತುನಿನ್ ಱಾಟುವಾ ರುಮ್ಪರ್
ನಾಯ ಕಿಕ್ಕುಮಹ್ ತಱಿಯುಮೋ ? ಪಿರಿಯಾ
ನಙ್ಕೈ ತಾನಱಿ ಯಾಮೈಯೋ ? ಮಱಿಯೋನ್
ತೂಯ ನೀಱುಪೊನ್ ಮೇನಿಯಿಲ್ ವಿಳಙ್ಗ
ತ್ತೂರ್ತ್ತ ವೇಟಮು ನ್ತೋನ್ಱವೇ ತಿಯರಾಯ್
ಮಾಯ ವಣ್ಣಮೇ ಕೊಣ್ಟುತ ನ್ತೊಣ್ಟರ್
ಮಱಾತ ವಣ್ಣಮು ಙ್ಕಾಟ್ಟುವಾನ್ ವನ್ದಾರ್.

398. ವನ್ತು ತಣ್ಪುಕಾರ್ ವಣಿಕರ್‌ತ ಮ್ಮಱುಕಿನ್
ಮರುಙ್ಕಿ ಯಙ್ಪೈ ಯಾರ್‌ಮನೈ ಪುಕುತ
'ವೆನ್ತೈ ಯೆಮ್ಪಿರಾ ನಟಿಯವ ರಣೈನ್ತಾ'
ರೆನ್‌ಱು ನಿನ್‌ಱತೋ ರಿನಾಪವಾ ತರವಾಱ್
ಚಿನ್ತೈ ಯನ್‌ಪೊಟು ಚೆನ್‌ಱೆತಿರ್ ವಣಙ್ಕಿ
ಚ್ಚಿಱಪ್ಪಿನ್ ಮಿಕ್ಕವರ್ ಚನೈಕಣ್‌ಮುನ್ ಚೆಯ್ತು
'ಮುನ್ತೈ ಯೆಮ್ಪರು ನ್ತವತ್ತಿನಾ ಲೆನ್‌ಕೋ
ಮುನಿವ ರಿಙ್ಕೆಟು ನ್ತರುಳಿಯು' ತೆನ್‌ಱಾರ್.

399. ಆಗ ಆ ಧೂರ್ತವೇಷದ ವೇದಿಯ ಬ್ರಾಹ್ಮಣನು, 'ಕರ್ಣಿಕಾರ ಹೂವನ್ನು ಧರಿಸಿದ ಜಡೆಯಿರುವ ಶಿವನ ಭಕ್ತರು ಆಶಿಸಿ ಕೇಳಿದುದಾವುದನ್ನೂ ಇಲ್ಲವೆಂದು ಹೇಳದೆ ಪ್ರೀತಿಯಿಂದ ಕೊಡುವ ನಿನ್ನ ಋಜುಸ್ವಭಾವವನ್ನು ಕೇಳಿ, ಒಂದು ವಸ್ತುವನ್ನಿಚ್ಛಿಸಿ ಇಂದು ನಿನ್ನೆಡೆಗೆ ಬಂದಿರುವೆನು. ಅದಕ್ಕೆ ನೀನು ಒಡಂಬಡುವಿಯಾಗಿ ತಿಳಿಯುವೆನು' ಎಂದು ಹೇಳಿದನು.

400. ವೇದಿಯನ ಮಾತನ್ನು ಇಯರ್‌ಪಗೈಯಾರನು ಕೇಳಿ, 'ನೀವು ಇಚ್ಛಿಸಿದುದು ಯಾವ ವಸ್ತುವೇ ಆದರೂ, ಆ ವಸ್ತುವು ನನ್ನಲ್ಲಿದ್ದುದೇ ಆದರೆ, ಅದು ನಮ್ಮ ಶಿವಭಕ್ತರ ಸ್ವಂತವಸ್ತುವಿನಂತೆಯೇ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನೀವು ಬಯಸಿದ ವಸ್ತುವಿಂತಹುದೆಂದು ಅನುಗ್ರಹಿಸುವವರಾಗಿ' ಎಂದು ಹೇಳಿದನು. ಅದಕ್ಕೆ ವೇದಿಯನು, 'ಅನ್ಯೋನ್ಯದಾಂಪತ್ಯದಿಂದ ಶೋಭಿಸುವ ನಿನ್ನ ಹೆಂಡತಿಯನ್ನು ಪಡೆಯಲಿಚ್ಛಿಸಿಯೇ ನಾನಿಲ್ಲಿ ಬಂದುದು' ಎಂದು ಹೇಳಿದನು. ಹೀಗೆ ಆ ಧೂರ್ತವೇದಿಯನು ನೇರವಾಗಿ ಇದಿರಿದ್ದುಕೊಂಡೇ ಹೇಳಿದಾಗಲೂ, ಪರಿಶುದ್ಧ ಭಕ್ತನಾದ ನಾಯನಾರನು ಅವಿತವಾದ ಸಂತೋಷವನ್ನು ಹೊಂದಿ ವೇದಿಯನನ್ನು ನಮಿಸಿ ತಿರುಗಿ ಹೀಗೆಂದನು :

---

399. ಎನ್ಱು ಕೊಱಿಯು ವಿಯಱ್ಪ್ರಕೈ ಯಾರ್ಮುನ್
ನೆಯ್ತಿ ನಿನ್ಱವ ಕ್ಕೈತವ ಮಱೈಯೋರ್
'ಕೊನ್ಱೈ ವಾರ್ಚಟ್ಟೈ ಯಾರಟಿ ಯಾರ್ಕಳ್
ಕುಱಿತ್ತು ವೇಣ್ಟಿನ ಕುಣವೆನ ಕೊಣ್ಟೇ
ಯೊನ್ಱು ನೀರೆತಿರ್ ಮಱಾತುವ ನ್ಱಳಿಕ್ಕು
ಮುಣ್ಮೈ ಕೇಟ್ಟುನುವ್ ಪಾಲೊನ್ಱು ವೇಣ್ಟಿ
ಇನ್ಱು ನಾನಿಙ್ಕು ವನ್ತನ ನತನು
ಕ್ಕಿಚೈಯ ಲಾವೆನಿ ಲಿಯಮ್ಪಲಾ' ವೆನ್ಱಾರ್.

400. ಎನ್ನ ವವ್ವುರೈ ಕೇಟ್ಟಿಯರ್ ಪಕೈಯಾರ್
'ಯಾತು ವೊನ್ಱುವೆನ್ ಪಕ್ಕಲು ಣ್ಡಾಕಿ
ಲನ್ನ ತೆವ್ಪಿರಾ ನಟಿಯವ ರುಟಮೈ ;
ಯೈಯ ಮಿಲ್ಲೈ ; ನೀ ರರುಳ್ಚೆಯುಂ' ಮೆನ್ನ,
'ಮನ್ನು ಕಾತಲುನ್ ಮನೈವಿಯೈ ವೇಣ್ಟಿ
ವನ್ತ ತಿಙ್ಕೆನ ವಙ್ಕಣ ರೆತಿರೇ
ಚೊನ್ನ ಪೋತಿಲು ಮುನ್ನೈಯಿನ್ ಮಕಿಟ್ನ್ತು
ತೂಯ ತೊಣ್ಟನಾರ್ ತೊಳುತುರೈ ಚೆಯ್ವಾರ್.

401. 'ನನ್ನೆಡೆಯಲ್ಲಿ ಮೊದಲೇ ಇರುವ ವಸ್ತುವನ್ನು ಇಚ್ಛಿಸಿದುದು ಪರಮೇಶ್ವರನು ನನ್ನಲ್ಲಿ ತೋರಿದ ಅನುಗ್ರಹ!' ಹೀಗೆಂದು ನಾಯನಾರನು ಶೀಘ್ರದಲ್ಲಿಯೇ ಮನೆಯನ್ನು ಸೇರಿ, ತನ್ನ ಮನೆವಾರ್ತೆಗೆ ಅರ್ಹಳಾಗಿಯೂ, ಪಾತಿವ್ರತ್ಯದಲ್ಲಿ ಹಿರಿಮೆಯುಳ್ಳವಳಾಗಿಯೂ, ದಾಂಪತ್ಯಪ್ರೇಮಕ್ಕೆ ತಕ್ಕವಳಾಗಿಯೂ ಇರುವ ತನ್ನ ಪತ್ನಿಯನ್ನು ನೋಡಿ, 'ವಿಧ್ಯುಕ್ತವಾಗಿ ವಿವಾಹವಾದ ನನ್ನ ಕುಲಪತ್ನಿಯೆ! ಇಂದು ನಿನ್ನನ್ನು ಇಲ್ಲಿ ಬಂದಿರುವ ತಪಸಿಗಳಿಗೆ ನಾನು ಕೊಟ್ಟುಬಿಟ್ಟಿರುವೆನು' ಎಂದು ಹೇಳಿದನು. ಆಗ ಮಧುತುಂಬಿದ ಹೊಸ ಮಲರುಗಳನ್ನು ಧರಿಸಿದ ಕೂದಲುಳ್ಳ ಪತ್ನಿಯು ಅದನ್ನು ಕೇಳಿ, ಮನಸ್ಸು ಕಲಕಿ ಆಮೇಲೆ ತಿಳಿಯಾಗಿ ಹೀಗೆಂದಳು:

402. 'ನೀವು ಇಂದಿಗೆ ಅನುಗ್ರಹಿಸಿದ ಆಜ್ಞೆಯು ಇದೇ ಆಗಿದ್ದರೆ, ನನ್ನ ಪ್ರಾಣನಾಥರಾದ ನೀವು ಅನುಗ್ರಹಿಸಿದ ಯಾವುದೊಂದನ್ನೂ ಅದೇ ರೀತಿಯಲ್ಲಿ ಮಾಡುವುದನ್ನು ಬಿಟ್ಟು ಬೇರೆ ಸ್ವಾತಂತ್ರ್ಯವು ನನಗೆ ಉಂಟೇನು?' ಇಂತು ನುಡಿದು ನಿರುಪಮನಾದ ಹಿರಿಯನಾದ ತನ್ನ ಪತಿಯನ್ನು ನಮಿಸಲು, ನಾಯನಾರನೂ ಆಕೆಗೆ ಇದಿರಾಗಿ ನಮಿಸಿ, ಆಕೆಯನ್ನು ತಪಸಿಗಳಲ್ಲಿಗೆ ಕರೆದುಕೊಂಡು ಹೋಗಿ ಅವರಿಗೆ ಅರ್ಪಿಸಿ ಅವರ ಶ್ರೀಪಾದಗಳನ್ನು ವಂದಿಸಿ ತನಗೇನೂ ಸ್ವಾತಂತ್ರ್ಯವಿಲ್ಲದವನಂತೆ ಪರವಶತೆಯಿಂದ ನಿಂತನು.

---

401. 'ಇತುವೆ ನಕ್ಕುಮುನ್ ಪುಳ್ಳತೇ ವೇಣ್ಟಿ
ಯೆಮ್ಪಿರಾನ್‌ಚೆಯ್ತ ಪೇಱಿನ' ಕ್ಕೆನ್‌ನಾ
ಕ್ಕತುಮೆ ನಚ್ಚೆನ್‌ಱು ತಮ್ಮನೈ ವಾೞ್‌ಕ್ಕೈ
ಕ್ಕಱ್ಪಿನ್ ಮೇಮ್ಪಟು ಕಾತಲಿ ಯಾರೈ
'ವಿತಿಮ ಣಕ್ಕುಲ ಮಟನ್ತೈ!ಯಿನ್ ಱುನ್ನೈಯಿಮ್
ಮೆಯ್‌ತ್ತ ವರ್‌ಕ್ಕುನಾನ್ ಕೊಟುತ್ತನ' ನೆನ್‌ನ,
ಮತಮ ಲರ್‌ಕ್ಕುೞಿನ್ ಮನೈವಿಯಾರ್ ಕಲಙ್ಕಿ,
ಮನನ್ತೆ ಳಿನ್ತಪಿನ್ ಮೊೞಿತು ಮೊೞಿವಾರ್.

402. 'ಇನ್‌ಱು ನೀರೆನ್‌ನೈ ಯರುಳ್‌ಚೆಯ್ತ ತಿತುವೇ
ಲೆನ್‌ನು ಯಿರ್‌ಕ್ಕೋರು ನಾತರ್‌ನೀ ರುರೈತ್ತ
ತೊನ್‌ಱೈ ನಾನ್‌ಚೆಯು ಮತನ್ನೈ ಯಲ್ಲಾ
ಲುರಿಮೈ ವೇಱುಳ ತೋವೆನ' ಕ್ಕೆನ್‌ಱು
ತನ್‌ಱ ನಿಪ್ಪೆರು ಙ್ಕಣವರೈ ವಣಙ್ಕ,
ತ್ತಾೞ್‌ನ್ತು ತೊಣ್ಟನಾರ್ ತಾಮೆತಿರ್ ವಣಙ್ಕಿ,
ಚ್ಚೆನ್‌ಱು ಮಾತವನ್ ಚೇವಟಿ ಪಣಿನ್ತು
ತಿಕೈತ್ತು ನಿನ್‌ಱನಳ್ ತಿರುವಿನುಮ್ ಪೆರಿಯಾಳ್.

403. ಹೆಂಡತಿಯನ್ನು ಮೊದಲೇ ಕೊಟ್ಟ ಮಹಾ ತಪಸ್ವಿಯಾದ ನಾಯನಾರನು ಮೊದಲಿಗಿಂತಲೂ ಹೆಚ್ಚಾದ ಮನಸ್ಸಂತೋಷದಿಂದ ಕೂಡಿದವನಾಗಿ, ಆ ವೇದಿಯನೊಡನೆ, 'ಇನ್ನುಮೇಲೆ ನಾನು ಮಾಡಬೇಕಾದ ಸೇವೆ ಯಾವುದು?' ಎಂದು ವಿಜ್ಞಾಪಿಸಲು, ಆ ವೇದಿಯ ವೇಷದ ಪರಮೇಶ್ವರನು, ಈ ಹೆಣ್ಣನ್ನು ನಾನು ಕರೆದುಕೊಂಡು ಹೋಗುವಾಗ ಇವಳಲ್ಲಿಯೂ ನಿನ್ನಲ್ಲಿಯೂ ಪ್ರೀತಿ ಇರುವ ಸಂಬಂಧಿಗಳಿಂದಲೂ, ಊರವರಿಂದಲೂ ನನಗೆ ತಡೆಯಾಗದಂತೆ ಊರನ್ನು ಕಳೆದು ಹೋಗುವವರೆಗೆ ನೀನು ಸಹಾಯವಾಗಿ ಬರಬೇಕು' ಎಂದು ಹೇಳಿದನು.

404. ಆ ವೇದಿಯನು ಈ ರೀತಿಯಲ್ಲಿ ಅನುಗ್ರಹಿಸಲು, 'ಇವರು ಹೇಳುವುದಕ್ಕಿಂತಲೂ ಮೊದಲೇ ತಿಳಿದು ನಾನೇ ಮಾಡಬೇಕಾಗಿದ್ದ ಕಾರ್ಯವಿದು. ಸೇವಕನಾದ ನನ್ನೊಡನೆ ಈ ತಪಸ್ವಿಗಳು ಇದನ್ನು ಪ್ರಕಟವಾಗಿ ಹೇಳುವವರೆಗೂ ನಾನು ತಡೆದು ನಿಂದುದು ನನ್ನ ತಪ್ಪು' ಎಂದು ತನ್ನ ಮನಸ್ಸಿನಲ್ಲಿ ನೆನೆದವನಾಗಿ, ಮನೆಯೊಳಗೆ ಪ್ರವೇಶಿಸಿ, ಹೊನ್ನಿನ ದಿವ್ಯ ಪೀತಾಂಬರದಿಂದ ಅಲಂಕೃತನಾಗಿ, ಅದರ ಮೇಲೆ ಸುಂದರವಾದ ನಡುವಿನ ಬಟ್ಟೆಯನ್ನು ಬಿಗಿಯಾಗಿ ಕಟ್ಟಿಕೊಂಡು,

---

403. ಮಾತು ತನ್ನೈಮುನ್ ಕೊಟುತ್ತಮಾ ತವರ್ತಾ
ಮನಮ ಕಿಟನ್ನುಪೇ ರುವಕ್ಕೈಯಿನ್ ಮಲರ್ನ್ದೇ,
'ಯಾತು ನಾನಿನಿ ಚ್ಚೆಯ್ಪಣಿ?' ಯೆನ್ಱಿೞೇ
ಯಿಱೈಞ್ಜಿ ನಿನ್ಱವರ್ ತಮ್ಮೆತಿರ್ ನೋಕ್ಕಿ
ಚ್ಚಾತಿ ವೇತಿಯ ರಾಕಿಯ ತಲೈವರ್
'ತೈಯ ಲನ್ನೈಯಾನ್ ಱನಿಕೊಣ್ಟು ಪೋಕ
ಕ್ಕಾತಲ್ ಮೇವಿಯ ಚುಱ್ಱಮುಮ್ ಪತಿಯುಂ
ಇಟೈಕ್ಕ ನೀತುಣೈ ಪೋತುಕ!' ವೆನ್ಱಾರ್.

404. ಎನ್ಱವ ರರುಳಿ ಚ್ಚೆಯ್ಯ 'ಯಾನೇಮುನ್ ಚೆಯ್ಕ್ಕಱ್ಪಾಲ
ಲೊನ್ಱಿತು ತನ್ನೈ ಯೆನ್ನೈ ಯುಟೈಯವ ರರುಳಿ ಚ್ಚೆಯ್ಯ
ನಿನ್ಱತು ಪಿಟೈಯಾ' ಮೆನ್ಱು ನಿನೈನ್ದುವೇ ಱಿಟತ್ತು ಪುಕ್ಕು
ಪೊನ್ಱಿಕ ಟಿಱುವೈ ಚಾತ್ತಿ ಪುಱ್ಱಕಚ್ಚು ಪೊಲಿಯ ವೀಕ್ಕಿ,

405. ಕತ್ತಿಯನ್ನೂ ಗುರಾಣಿಯನ್ನೂ ಧರಿಸಿದವನಾಗಿ, ತಿರುಗಿ ಇದಿರಾಗಿ ಬಂದು ನಮಿಸಿ, ವೀರವು ಮಿಕ್ಕಲು ಗಂಡುಸಿಂಹದಂತಿರತಕ್ಕ ನಾಯನಾರನು, ತನ್ನನ್ನು ತಡೆದು ಇದಿರಿಸಿ ಬಂದವರೆಲ್ಲರನ್ನೂ ಹೋರಾಡಿ ನೆಲದಲ್ಲಿ ಬೀಳಿಸಲು ತಯಾರಾದವನಾಗಿ, ತಪಸಿಗಳನ್ನೂ ಅಮ್ಮನವರನ್ನೂ ತನ್ನ ಮುಂದೆ ಹೋಗುವಂತೆ ಹೇಳಿ ತಾನು ಹಿಂದೆಯೇ ಹೋದನು.

406. ಅಮ್ಮನವರ ಸಂಬಂಧಿಗಳೂ, ತ್ಯಾಗಿಗಳಾದ ನಾಯನಾರನ ನಂಟರಿಷ್ಟರೂ, 'ಇಂತಹ ಕಾರ್ಯವನ್ನು ಯಾರು ತಾನೇ ಇದುವರೆಗೆ ಮಾಡಿದವರು? ಬೇರೊಬ್ಬರು ಮಾಡದ ಕಾರ್ಯವನ್ನು ಮಾಡುವಂತೆ ಇಯರ್‌ಪಗೆಯಾರನು ಮರುಳು ಹೊಂದಿದವನಾದನೇ? ಅದು ಕಾರಣವಾಗಿ ಹೆಂಡತಿಯನ್ನು ತೆಗೆದುಕೊಂಡು ಒಬ್ಬನು ಹೋಗಿಬಿಡಲಾದೀತೇ?' ಎಂದು ನೆನೆದು, ಈ ಕಾರ್ಯದಿಂದ ಬಂದ ದೊಡ್ಡ ನಿಂದೆಯಿಂದ ನಾಯನಾರನನ್ನು ಪಾರುಮಾಡುವುದಕ್ಕಾಗಿ ಅವರನ್ನು ಹಿಡಿಯುವುದಕ್ಕೆ ಹೊರಟರು.

407. ಅವರು ಶಕ್ತಿ, ಆಯುಧ, ಬಿಲ್ಲು, ಬಾಣ, ಬಾಳು, ಸುರಿಗೆ – ಎಂಬಿವುಗಳನ್ನು ತೆಗೆದುಕೊಂಡು ಪ್ರಮಾಣಕ್ಕೆ ಮಿಕ್ಕಿ ಏಳುವ ಗಾಳಿಯಂತೆ ವೇಗವಾಗಿ ಹೋಗಿ ಕಾವಲಿರುವ ಆ ಪಟ್ಟಣದ ಹೊರಗೆ ಸೇರಿ ಬಹುವಾದ ಕೋಲಾಹಲದೊಡನೆ ದೊಡ್ಡ ಸಮುದ್ರವೇ ಉಕ್ಕಿ ಬಂದುದೋ ಎಂದು ಹೇಳುವಂತೆ ಇದಿರು ಬಂದರು.

---

405. ವಾಳೊಟು ಪಲಕೈ ಯೇನ್ದಿ ವನ್ದೆತಿರ್ ವಣಙ್ಗಿ ಮಿಕ್ಕ
ಆಳರಿ ಯೇಱು ಪೋಲ್ವಾ ರವರೈಮುನ್ ಪೋಕ್ಕಿ ಪ್ಪಿನ್ನೇ
ತೋಳಿಣೈ ತುಣೈಯೇ ಯಾಕ ಪ್ಪೋಯಿನಾರ್ ತುನ್ನಿ ನಾರೈ
ನೀಳಿಟೈ ಪ್ಪಟಮುನ್ ಕೊಟೆ ನಿಲತ್ತಿಟೈ ವೀಟ್ತ್ತ ನೇರ್ವಾರ್.

406. ಮನೈವಿಯಾರ್ ಚುಱ್ಱತ್ತಾರುಮ್ ವಳ್ಳಲಾರ್ ಚುಱ್ಱತ್ತಾರುಮ್
'ಇನ್ನೈಯತೊರ್ ಱಿಯಾರೇ ಚೆಯ್ತಾ? ರಿಯಱ್ಪಕೈ ಪಿತ್ತ ನಾನಾಱ್
ಪುನ್ನೈಯಿಱ್ಱೈ ತನ್ನೈ ಕ್ಕೊಣ್ಡು ಪೋವತಾ ಮೊರುವ?' ನೆನ್ಱು
ತುನ್ನೈಪೆರುಮ್ ಪಱಿಯೈ ಮಾಟ್ಪಾನ್ ಱೊಟರ್ವತಱ್ ಕೆಟುನ್ತು
ಚೂಟ್ವಾರ್,

407. ವೇಲೊಟು ವಿಲ್ಲುವಾ ವಾಳು ಚ್ಚುರಿಕೈಯು ಮೆಟುತ್ತು ಮಿಕ್ಕ
ಕಾಲಿನ ವಿಜೈಯಿಱ್ ಚೆನ್ಱು ಕಟಿನಕರ್ ಪ್ಪುಱತ್ತು ಪ್ಪೋಕಿ
ಪ್ಪಾಲಿರು ಮರುಙ್ಕು ಮಿಣ್ಟಿ ಪ್ಪರನ್ತವರ್ ಪ್ಪಾವವಾ ಪೊಙ್ಕು
ಮಾಲ್ಕಟಲ್ ಕಿಳರ್ನ್ತ ತೆನ್ನ ವನ್ದೆತಿರ್ ವಳೈತ್ತು ಕ್ಕೊಣ್ಡಾರ್.

408. ದಾರಿಯಲ್ಲಿ ಕಾವಲಾಗಿ ನಾಯನಾರನು ಹಿಂದೆಯೇ ಬರುತ್ತಿರಲು, ಮಾರ್ಗ ಸಹಾಯಕರಾಗಿರುವ ವೇದಿಯರು, ಬಹು ಹೆಚ್ಚು ಪ್ರೇಮವನ್ನು ಹೊರಗೆ ಕಾಣಿಸಿಕೊಂಡು ಅಮ್ಮನವರೊಡನೆ ಹೋಗುವ ಹೊತ್ತಿನಲ್ಲಿ, 'ಗುಣಕೆಟ್ಟವನೆ! ನೀನು ಹೋಗದಿರು! ನಮ್ಮ ಕುಲಧ್ವಜದಂತಿರುವ ಅಮ್ಮನವರನ್ನು ಇಲ್ಲಿ ಬಿಟ್ಟು ನಿನ್ನಿಂದಾಗಿ ನಮಗೆ ಬಂದ ನಿಂದೆಯು ಹೋಗುವಂತೆ ನೀನು ಹೋಗುವವನಾಗು' ಎಂದು ಹೇಳುತ್ತಾ ಅವರು ಸುತ್ತುವರಿದರು.

409. ಅವರು ಆ ರೀತಿ ಬರುವುದನ್ನು ಕಂಡು ಆ ವೇದಮುನಿಗಳು ಭಯಪಟ್ಟವರಂತೆ ತೋರಿಸಿಕೊಂಡು ಅಮ್ಮೆಯಾರನ್ನು ನೋಡಲು, ಅವಳು, 'ನಾಯಕರೇ, ಭಯ ಪಡಬೇಡಿರಿ. ಅವರನ್ನು ಇಯರ್‌ಪಗ್ಯೆ ಗೆಲ್ಲುವನು,' ಎಂದು ಹೇಳಿದಳು. ಇದನ್ನು ಶಬ್ದಿಸುವ ವೀರಗೆಜ್ಜೆಯನ್ನು ಕಟ್ಟಿದ ಹಿರಿಮೆಯುವನಾದ ನಾಯನಾರನು ಕೇಳಿ, 'ದಾಸನಾದ ನಾನು ಅವರೆಲ್ಲರನ್ನೂ ನಿಮಗೆ ವಿಘ್ನಮಾಡದಂತೆ ನೆಲದಲ್ಲಿ ಬೀಳಿಸಿ ಬಿಡುವೆನು. ಸ್ವಾಮಿಗಳು ಹೆದರಬೇಡಿ' ಎಂದು ಹೇಳಿಕೊಂಡೇ,

410. ಪರಾಕ್ರಮಯುತವಾದ ಗಂಡುಸಿಂಹದಂತೆ ಕಣ್ಣುಗಳಲ್ಲಿ ಕೋಪಾಗ್ನಿಯ ಕಿಡಿಗಳು ಹಾರುತ್ತಿರಲು, ಅಲ್ಲಿ ಬಂದಿದ್ದ ತನ್ನ ನಂಟರಿಷ್ಟ ಸಂಬಂಧಿಕರನ್ನು ನೋಡಿ, 'ನೀವೊಬ್ಬರೂ ನನ್ನಿದಿರು ನಿಲ್ಲದಂತೆ ಓಡಿಹೋಗಿರಿ. ಪ್ರಾಣವನ್ನುಳಿಸಿಕೊಳ್ಳಿರಿ. ಹಾಗೆ ಮಾಡದಿದ್ದರೆ ಬೆಂಕಿಯಂತೆ ಜ್ವಲಿಸುವ ನನ್ನ ಖಡ್ಗದಿಂದ ತುಂಡುತುಂಡಾಗಿ ಕಡಿಯಲ್ಪಡುವಿರಿ' ಎಂದು ಹೇಳಿ ಯುದ್ಧಕ್ಕೆ ಸಿದ್ಧನಾಗಿ ನಿಂತನು.

---

408. ವಟಿವಿಟು ನ್ತುಣ್ಯೆಪಿನ್ ಪೋತ ವಟಿತ್ತುಣ್ಯೆ ಯಾಕಿ ಯುಳ್ಳಾರ್
ಕಟಿಪೆರು ಜ್ಕಾತಲ್ ಕಾಟ್ಟಿ ಕ್ಕಾರಿಕ್ಯೆ ಯುಟನ್‌ಪೋವುವ್ ಪೋತಿ
'ಲಟಿತಕನ್! ಪೋಕೇ; ಲೀಣ್ಣ ವರುಜ್ಕುಲ ಕ್ಕೊಟಿಯ್ಯೆ ವಿಟ್ಟು
ಪ್ಪಟಿವಿಟ ನೀಪೋ' ವೆನ್‌ಜು ಪಕರ್‌ನ್ತಿರ್ ನಿರನ್ತು ವನ್ತಾರ್.

409. ವಟಿಕ್ಯೆಮುನಿ ಯಜ್ಚಿ ನಾನ್‌ಪೋನ್ ಮಾತಿನ್ಯೆ ಪ್ಪಾರ್‌ಕ್ಕ ಮಾತುಮ್
'ಇಟಿಕ್ಯೆವನೇ! ಯಜ್ಚ ವೇಣ್ಣಾ; ವಿಯಟಿಪ್ಪಕ್ಯೆ ವೆಲ್ಲು' ಮೆನ್‌ನ;
ವಟಿಕ್ಯೆಕಟಿ ಲಣ್ಣಲ್ ಕೇಳಾ 'ವಟಿಯನೇ ನವರ್ಯೆ ಯೆಲ್ಲಾ
ನ್ಟಿಕ್ಯೆಯಿಟ್ಟೆ ಪ್ಪಟುತ್ತು ಕಿನ್‌ಜೀನ್; ಜಟಿರ್‌ನ್ರುಳ್ ಚೆಯ್ಯೇ' ಲೆನ್‌ಜು,

410. ಪೆರುವಿಟಿ ಲಾಳಿ ಯೆನ್‌ನ ಪ್ಪಿಟಿಜಿಕ್ಕಿರಿ ಚಿತಟಿ ನೋಕ್ಕಿ
ಪ್ಪರಿಪವ ಪ್ಪಟ್ಟು ವನ್ತ ಪಟರ್‌ಪೆರು ಞ್ಚುಟ್ಟ ತ್ತಾರ್ಯೆ
ಯೊರುವರು ಮೆತಿರ್‌ನಿ ಲ್ಲಾಮೇ ಯೋಟಿಪ್ಪೋಯುಪ್ ಪ್ಪಿಟಿಕ್ಯೆಯು; ಮನ್‌ಜೀ
ಲೆರಿಚುಟರ್ ವಾಳಿಟಿಪ್ ಕೂಟಾಯುಪ್ ತ್ತುಟಿಕಿನ್‌ಜೀ ರೆನ್‌ಜು ನೇರ್‌ನ್ತಾರ್.

411. ನಾಯನಾರನು ಈ ರೀತಿ ಹೇಳಿ ಹೋರಾಟಕ್ಕೆ ತಯಾರಾಗಲು, ಸಂಬಂಧಿಗಳು, 'ಎಲಾ! ನೀನು ಎಂತಹ ಕಾರ್ಯವನ್ನು ಮಾಡಿರುವೆ? ಈ ನಾಡಿನಲ್ಲಿರುವವರಿಗೆ ನಿನ್ನ ಕಾರ್ಯದಿಂದಾಗಿ ಬರುವ ನಿಂದೆಯನ್ನೂ ಇತರರ ಅಪಹಾಸ್ಯವನ್ನೂ ಕಂಡು ನೀನು ನಾಚಿಕೆಪಡುವುದಿಲ್ಲವೇ? ಹೆಂಡತಿಯನ್ನು ವೇದಿಯನಿಗೆ ಕೊಟ್ಟುಬಿಟ್ಟೋ ನೀನು ನಿನ್ನ ಪರಾಕ್ರಮವನ್ನು ಪ್ರಶಂಸಿಸಿ ಬಣ್ಣಿಸುವುದು! ಈ ಕಾರ್ಯದಲ್ಲಿ ಮೃತರಾದರೂ ನಾವು ಒಂದಾಗಿ ಸೇರಿ ಸಾಯುವುದಲ್ಲದೆ ನೀನು ನಿನ್ನ ಹೆಂಡತಿಯನ್ನು ವೇದಿಯನಿಗೆ ಕೊಡಲು ಬಿಡಲಾರೆವು' ಎಂದು ಹೇಳಿದರು.

412. ಸಂಬಂಧಿಗಳು ಈ ರೀತಿ ಹೇಳಿದ ಮಾತನ್ನು ಕೇಳಿದೊಡನೆ, ನಾಯನಾರನು ಹೆಚ್ಚಾದ ಕೋಪದಿಂದ ಅವರನ್ನು ನೋಡಿ, 'ನಿಮ್ಮ ಶರೀರಗಳನ್ನು ತುಂಡರಿಸಿ, ಆ ತುಂಡುಗಳನ್ನು ಎಲ್ಲೆಡೆಗಳಲ್ಲಿಯೂ ಬಿಸುಟು, ನಿಮ್ಮನ್ನು ಯಮಲೋಕಕ್ಕೆ ಕಳುಹಿಸಿ, ಆಮೇಲೆ ಈ ತಪಸಿಗಳನ್ನು ಹೋಗಬಿಡುವೆನು' ಎಂದು ಯುದ್ಧಕ್ಕೆ ಸಿದ್ಧನಾದನು.

413. ಹೋರಾಟವು ನೇರ್ಪಟ್ಟು ನಾಯನಾರನು ಇದಿರಿಸಿದಾಗ ಸಂಬಂಧಿಗಳು ಅವನ ಮುಂದೆ ಹೋಗದೆ, ವೃಷಭವಾಹನದ ಮೇಲೇರಿ ಹೋಗುವಂತಹ ಶಿವಪರಮಾತ್ಮನು ವೇದಿಯರ ವೇಷದಿಂದ ಅಮ್ಮೆಯರೊಡನೆ ನಡೆದುಹೋಗುತ್ತಿರಲು ಮಿತಿಮೀರಿದ ಕೋಪದಿಂದ ಅವರನ್ನು ಇದಿರಿಸಿ ತಡೆದರು.

---

411. 'ಏಟ! ನೀ ಯೆನ್‌ಚೆಯ್ ತಾಯಾಲ್? ಇತ್ತಿಱ ವಿಯವಪ್ಪು ಕಿನ್‌ಱಾಯ್;
ನಾಟುಱು ಪೞಿಯುಂ ವೊನ್‌ನಾರ್ ನಕೈಯ್ಯುಂ ನಾಣಾ; ಯಿನ್‌ಱು
ಪಾಟಲ ಮುರೈಪ್ಪ ತುನ್‌ಱನ್ ಮನೈವಿಯ್ಯೈ ಪ್ಪನವಱ್ ಕೀನ್ತೋ?
ಕೂಟವೇ ಮಟೆವ ತನ್‌ಱೀ ಕ್ಕೊಟುಕ್ಕಯಾ ಮೆಟ್ಟೋ' ಮೆನ್‌ಱಾರ್.

412. ಮಱವರ್ ಚೊನ್‌ನ ಮಾಱ ಱಿಕ್ಕೇಟ್ಟಲು ಮನತ್ತಿನ್ ವನ್ತ
ಚೆಱ್ಱಮುನ್ ಪೊಙ್ಕ 'ವುಙ್ಕ ಳುಟಱ್ಱುಣಿ ಯೆಙ್ಕು ಮಾಕ್ಕಿನ್ತ
ಮುಱ್ಱನುಮ್ ಮುಯಿರೈ ಯೆಲ್ಲಾಮ್ ಮುತಲ್ವಿಚುಮ್ ಪೇಱ್ಱಿ ಕ್ಕೊಣ್ಟು
ನಱವರ್ ತಮ್ಮೈಪ್ಪೋಕ ವಿಟುವ' ನೆನ್ ಱೆಟುನ್ತಾರ್ ನಲ್ಲೋರ್.

413. ನೇರ್‌ನ್ತವ ರೆತಿರ್‌ನ್ತ ಪೋತು ನಿಱೈನ್ತವ ಚೆಱ್ಱ ತ್ತಾರುಙ್
ಚಾರ್‌ನ್ತವರ್ ಮುನ್‌ಪು ಚೆಲ್ಲಾರ್ ತೈಯಲೈ ಕೊಣ್ಟು ಪೆಱ
ಮೂರ್‌ನ್ತವರ್ ಪಟಿಮೇಱ್ ಚೆಲ್ಲ ವುಱ್ಱಿತ ರುಟನ್‌ಱು ಪೊಙ್ಕಿ
ಯಾರ್‌ನ್ತವೆ ಙ್ಙಿನತ್ತಾನ್ ಮೇಱ್‌ಚೆನ್ ಱಟರ್‌ನ್ತಿರ್ ತಟುತ್ತಾ ರನ್‌ಱೇ.

414. ಇದನ್ನು ನೋಡಿ ಇಯರ್‌ಪಗ್ಗೈಯಾರನು ತುಂಬಾ ಕೋಪಿಸಿ ತನ್ನ ಬಾಳನ್ನೇ ಸಹಾಯವಾಗಿ ತೆಗೆದುಕೊಂಡು ಎಡಬಲವಾಗಿ ಸಾರಿಗೆ (ಗತಿಭಂಗಿ) ಚಾರಿಯನ್ನು ಬದಲಿಸಿಕೊಳ್ಳುತ್ತಾ ಬಂದು, ಇದಿರಿಸಿದವರ ತೋಳು, ಕಾಲು, ತಲೆಗಳನ್ನು ಶರೀರದಿಂದ ತುಂಡರಿಸಿ ನೆಲದಲ್ಲಿ ಕೆಡವಿ ಕೊಲೆಯನ್ನು ಮಾಡುವ ಗಂಡುಹುಲಿಯಂತೆ ವಿಜೃಂಭಿಸಿ ವಿಜಯಿಯಾಗಿ ನಿಂತನು.

415. ಈ ಹೋರಾಟದಲ್ಲಿ ಸಂಬಂಧಿಗಳು ಹಲವರು ಬಂದು ಸೇರಿ ಇದಿರಿಸುವವರಾಗಿಯೂ, ಬೇರೆ ಬೇರೆಯಾಗಿ ತಾವು ಬಯಸಿದ ದೆಸೆಗಳಲ್ಲಿ ಬಂದು ಇದಿರಿಸುವವರಾಗಿಯೂ ಹೋರಾಟವನ್ನು ಮಾಡುವ ಆಯಾ ಹೊತ್ತಿನಲ್ಲಿ ಅತಿಶಯಿಸಿದ ಪರಾಕ್ರಮವುಳ್ಳ ನಾಯನಾರನು ತಾನೊಬ್ಬನೇ ಆಯಾ ಕೂಟದವರನ್ನು ಇದಿರಿಸಿ, ಅವರು ಎಲ್ಲಲ್ಲಿಯೂ ತನ್ನನ್ನು ಕಾಣತಕ್ಕ ವೇಗದಿಂದ ಚಾರಿಯಾಗಿ ಅವರ ಮೇಲೆ ಹಾಯ್ದು ಅವರೊಡನೆ ಹೋರಾಟದಲ್ಲಿ ಕಲೆತು ಇದಿರಲ್ಲಿಯೇ ಆಯಾ ಕೂಟದವರನ್ನೆಲ್ಲಾ ತುಂಡು ತುಂಡುಗಳಾಗಿ ಮಾಡಿ ನೆಲದಲ್ಲಿ ಬೀಳಿಸಿದನು.

416. ಆ ಯುದ್ಧರಂಗದಲ್ಲಿ ಎಲ್ಲೆಲ್ಲಿಯೂ, ಇದಿರಿಸಿದ ಸಂಬಂಧಿಕರ ಕರುಳುಗಳು ಸುರಿದು ಕೆಳಬಿದ್ದುವು. ದೇಹಗಳು ತುಂಡಾಗಿ ಒಡೆದುವು. ತಲೆಗಳು ಬೇರೆಯಾಗಿ ಉರುಳಿದುವು. ಕಣ್ಣುಗಳು ಸೇದುಹೋದುವು. ಹದ್ದುಗಳು ಕೂಡಿದುವು. ಶಿವ ಪರಮಾತ್ಮನ ದಿವ್ಯಪಾದಗಳನ್ನೇ ಮನದಲ್ಲಿ ಧರಿಸಿದ ವೀರನಾದ ನಾಯನಾರನನ್ನು ಇದಿರಿಸಿದವರೆಲ್ಲರೂ ಅಳಿದುಹೋದರು.

---

414. ಚೆನ್‌ಱವರ್ ತಟುತ್ತ ಪೋತಿ ಲಿಯಱ್ಪಕೈ ಯಾರ್‌ಮುನ್ ಚೀಱಿ
ವನ್‌ಱುಣೈ ವಾಳೇ ಯಾಗ ಚ್ಚಾರಿಕೈ ಮಾಱಿ ವನ್ದು
ತುನ್‌ಱಿನರ್ ತೋಳು ನ್ತಾಳು ನ್ತಲೈಕಳು ನ್ತುಣಿತ್ತು ವೀಟ್ತ್ತು
ವೆನ್‌ಱಟು ಪುಲಿಯೇ ಱೆನ್ನ ವಮುರ್‌ವಿಳೈ ಯಾಟ್ಟಿನ್ ಮಿಕ್ಕಾರ್.

415. ಮೂಣ್ಟುಮುನ್ ಪಲರಾಯ್ ವನ್ತಾರ್ ತನಿವನ್ತು ಮುಟ್ಟಿ ನಾರ್‌ಕಳ್
ವೇಣ್ಟಿಯ ತಿಚೈಕ ಟೋಱುಮ್ ವೇಱುವೇ ಱಮರ್‌ಚೆಯ್ ಪೋೞ್ತಿ
ಲಾಣ್ಟಕೈ ವೀರರ್ ತಾಮೇ ಯನೈವರ್‌ಕ್ಕುಮ್ ಮನೈವ ರಾಕಿ
ಕ್ಕಾಣ್ಟಕು ವಿಚೈಯಿಱ್ ಪಾಯ್‌ನ್ತು ಕಲನ್ತುಮುನ್ ಱುಣಿತ್ತು ವೀಟ್ತ್ತಾರ್.

416. ಚೊರಿನ್ತನ ಕುಟಲ್‌ಕ ಳೆಙ್ಕು; ನ್ತುಣಿನ್ತನ ಉಟಲ್‌ಕ ಳೆಙ್ಕುಮ್,
ವಿರಿನ್ತನ ತಲೈಕ ಳೆಙ್ಕುಮ್; ಮಿಟೈನ್ತನ ಕಟುಕು ಮೆಙ್ಕುಮ್,
ಎರಿನ್ತನ ವಿಟೀಕ ಳೆಙ್ಕುಮ್; ಎತಿರ್‌ಪ್ಪವ ರೊರುವ ರಿನ್ಱಿ
ತ್ತಿರಿನ್ತನರ್ ಕಳನಿ ಲೆಙ್ಕುಱ್ ಚಿವನ್‌ಕಟಲ್ ಪುನೈನ್ತ ವೀರರ್,

417. ಒಡಲ ತುಂಡುಗಳ ಪಕ್ಕದಲ್ಲಿ ಅಲೆಅಲೆಯಾಗಿ ಕಾಣುವ ರಕ್ತಪ್ರವಾಹವು ಮೇಲೆ ಮೇಲೆ ಉಕ್ಕಿತು. ಈ ರೀತಿಯಲ್ಲಿ ಕೆಂಪಗಾದ ಯುದ್ಧಭೂಮಿಯಲ್ಲಿ ಹೋರಾಟಕ್ಕಾಗಿ ಬಂದ ಸಂಬಂಧಿಕರ ಕೂಟದಲ್ಲಿ ಓಡಿಹೋಗಿ ತಪ್ಪಿಸಿಕೊಂಡವರು ಮಾತ್ರ ಬದುಕಿಕೊಂಡರು. ಓಡಿಹೋಗದೆ ಇದಿರಿಸಿದ ಇತರರೆಲ್ಲಾ ಸತ್ತೇಹೋದರು. ಹೀಗಿರಲು ಖಡ್ಗವೊಂದನ್ನೇ ಸಹಾಯವಾಗುಳ್ಳ ನಾಯನಾರನು ತಾನೊಬ್ಬನೇ ಬೇರೆಯಾಗಿ ನಿಂತನು.

418. ಹೀಗೆ ನಾಯನಾರನು ಮಂಗಳಕರಳಾದ ತನ್ನ ಹೆಂಡತಿಯನ್ನು ವೇದಿಯ ವೇಷದ ಶಿವನಿಗೆ ಕೊಟ್ಟು, ಆ ಕೊಡುಗೆಯು ನೆರವೇರಲು ಅಡ್ಡವಾಗಿ ಬಂದ ಸಂಬಂಧಿಕರೆಲ್ಲರನ್ನೂ ಖಡ್ಗದಿಂದ ತುಂಡರಿಸಿ, ಬಂದ ವಿಘ್ನವನ್ನು ನಿವಾರಿಸಿದಮೇಲೆ, ಅಸುಲಭರಾದ ವೇದಮುನಿವರನ್ನು ನೋಡಿ, 'ಒಡೆಯರೆ! ನೀವು ನಿರ್ಭಯವಾಗಿ ಈ ಕಾಡನ್ನು ಕಳೆದುಹೋಗುವಂತೆ ನಾನು ಸಹಾಯವಾಗಿ ಒಡನೇ ಬಂದು ನಿಮ್ಮನ್ನು ಕಳುಹಿಸುವೆನು' ಎಂದು ಹೇಳಿ ಅವರೊಡನೆ ಹೋದನು.

419. ಬ್ರಹ್ಮವಿಷ್ಣುಗಳಿಂದ ತಿಳಿಯಲಾಗದ ಏಕಮೇವರಾದ ವೇದಮುನಿಗಳ ಹಿಂದೆ ಅಮ್ಮೆಯಾರರು ಹೋಗುತ್ತಿರಲು, ಅವರನ್ನು ಸುರಕ್ಷಿತವಾಗಿ ಕಳುಹಿಸಿಕೊಡುವ ಉದ್ದೇಶದಿಂದ ನಾಯನಾರನು ಬರುತ್ತಿರಲು, ಹೀಗೆ ಅವರು ತಿರುಚ್ಚಾಯಕ್ಕಾಡಿನ (ಛಾಯಾವನಂ) ಸಮೀಪ ಸೇರುವಾಗ, ವೇದಮುನಿವರಾದ ವೇದಿಯರು, 'ನೀನು ಇನ್ನುಮೇಲೆ ಹಿಂದಿರುಗು' ಎಂದು ನಾಯನಾರನನ್ನು ಆಜ್ಞಾಪಿಸಿದರು.

---

417. ಮಾಟಲೈ ಕುರುತಿ ಪೊಙ್ಕ ಮಟನ್ಱೆೞ ಕ್ಕಳತ್ತಿ ನಿನ್ಱು
ಮಾಟುೞಿ ಚೆಯಲಿನ್ ವನ್ತು ಕಿಳೈಞರೋ ಟಣೈನ್ತಾರ್ ತಮ್ಮಿಲ್
ಓಟಿನಾ ರುಳ್ಳಾ ರುಯಿರ್ನ್ತಾ; ರೊೞಿನ್ತವ ರೊೞಿನ್ತೇ ಮಾಣ್ಟಾರ್;
ನೀಟಿಯ ವಾಳು ನ್ತಾಮು ನಿನ್ಱವರ್ ತಾಮೇ ನಿನ್ಱಾರ್.

418. ತಿರುವುಟೈ ಮನೈವಿಯಾರೈ ಕ್ಕೊಟುತ್ತಿಟೈ ಚ್ಚೆಱುತ್ತು ಮುನ್ಪು
ವರುಪೆರು ಇಟ್ಟ್ಟಿ ಮೆಲ್ಲಾಮ್ ವಾಳಿನಾ ಱ್ಱುಣಿತ್ತು ಮಾಱ್ಱಿ
ಅರುಮಱೈ ಮುನಿಯೈ ನೋಕ್ಕಿ 'ಅಟಿಕ ಣೀರ್ ಅಞ್ಚಾ ವಣ್ಣಮ್
ಪೊರುವರು ಙ್ಕಾನ ನೀಙ್ಕ ವಿಟುವ' ನೆನ್ ಱುಟನೇ ಪೋನ್ತಾರ್.

419. ಇರುವರಾ ಲಱಿಯ ವೊಣ್ಣಾ ವೊರುವರ್ಪಿನ್ ಚೆಲ್ಲು ಮೇಱ್ಱೈ
ಪೊರುತಿಱಲ್ ವೀರರ್ ಪಿನ್ಪು ಪೋತನುಮ್ ಪೋಕುಮ್ ಪೋತಿ
ಲರುಮಱೈ ಮುನಿವರ್ ಚಾಯ್ಕ್ಕಾ ಟತನ್ಮರು ಙ್ಕಣೈಯ ಮೇವಿ
ತ್ತಿರುಮಲಿ ತೋಳಿ ನಾನೈ 'ಮೀಳ್' ಎನ ಚ್ಚೆಪ್ಪಿ ನಾನೇ.

420. ತಪೋಮುನಿವರರಾದ ವೇದಿಯರು ತನ್ನನ್ನು ಹಿಂದಿರುಗಲು ಹೇಳಿದಾಗ, ನಾಯನಾರನು ವೇದಿಯರ ಪಾದಗಳಿಗೆ ನಮಿಸಿ, ತಲೆಯ ಮೇಲೆ ಕೈಗಳನ್ನು ಅಂಜಲಿ ಜೋಡಿಸಿ ಹಿಂದೆ ನಿಂತು, ಮೂರು ಲೋಕಗಳೂ ಉಜ್ಜೀವಿಸುವಂತೆ ಬಂದನುಗ್ರಹಿಸಿದ ಆ ವೇದಿಯರನ್ನು ಬಾಯಾರೆ ಸ್ತುತಿಸಿ, 'ಇವರ ದಿವ್ಯಾನುಗ್ರಹವನ್ನು ಪಡೆಯುವ ಪ್ರಯೋಜನವನ್ನು ಹೊಂದಿದೆನು' ಎಂದು ಹಿಂದಿರುಗಿದನು.

421. ಇತರರಾರಿಂದಲೂ ಮಾಡಲು ಸಾಧ್ಯವಾಗದ ದೊಡ್ಡ ಕಾರ್ಯವನ್ನು ಮಾಡಿದ ಉತ್ತಮ ಭಕ್ತನಾದ ಇಯರ್‌ಪಗೆಯಾರನು ಈ ರೀತಿ ತಿರುಗಿ ಹೋಗುತ್ತಿರಲು, ತಿರುನೀಲಕಂಠರೂ, ಎಂಟು ತೋಳುಗಳುಳ್ಳವರೂ ಆದ ಆ ವೇದಿಯವೇಷದ ಶಿವ ಪರಮಾತ್ಮನು ಅವನನ್ನು ಸಂತಸದಿಂದ ನೋಡಿ, 'ನಿರ್ಮಲಾಂತಃಕರಣನೀತನು, ಹಿಂದಿರುಗಿಯೂ 'ನೋಡದೆ ಹೋಗುತ್ತಿರುವನು' ಎಂದು ನಿಜಭಕ್ತಿಯನ್ನು ತಾಳಿದ ನಾಯನಾರನನ್ನು ತಿರುಗಿ ಕರೆಯುವವರಾದರು.

422. ಸನ್ಮಾರ್ಗಪ್ರವರ್ತಕವಾದ ವೇದಗಳು, ಪಲತರವಾಗಿ ಮೊರೆದು ತಮ್ಮನ್ನು ಸ್ತುತಿಸುತ್ತಿರಲು, ಬ್ರಹ್ಮವಿಷ್ಣುಗಳು ತಮ್ಮ ತುದಿಬುಡವನ್ನು ಅನ್ವೇಷಿಸುವುದರಲ್ಲಿ ಅಸಮರ್ಥರಾಗಿರಲು, ಇಂತಹ ಹಿರಿಮೆಯಿಂದ ಕೂಡಿದ ಆ ಈಶ್ವರನು, 'ಇಯರ್‌ಪಗೈ ಮುನಿವರನೇ, ಅಭಯವು! ಇಲ್ಲಿ ನೀನು ಬರುವವನಾಗು. ಅಭಯವು! ಯಾವಾಗಲೂ ನಮ್ಮ ಚಿಂತೆಯನ್ನು ಮರೆಯದವನೇ, ಅಭಯವು! ಭಕ್ತಿಯುಳ್ಳವನೇ, ಅಭಯವು! ಇತರರಾರೂ ಮಾಡಲು ಸಾಧ್ಯವಾಗದ ಕಾರ್ಯವನ್ನು ಮಾಡಿದ ಧೈರ್ಯವುಳ್ಳವನೇ, ಅಭಯವು!' ಎಂದು ತಾವು ಹಲವು ಸಾರಿ ಅಭಯಕೊಟ್ಟು ಕರೆಯುವವರಾದರು.

---

420. ತವಮುನಿ ತನ್ನೈ ಮೀಳ ಚ್ಚೊನ್ನಪಿನ್ ತಲೈಯ ಲಾರ
ವವನ್ ಮಲರ್ ಪ್ಪತಜ್ಗಳ್ ಚಊಟಿ ಯಞ್ಜಲಿ ಕೂಪ್ಪಿ ನಿನ್ಱು
ಪುವನ್ಮೂನ್ ಱುಯ್ಯ ವನ್ತ ಪೂಚುರನ್ ಱನ್ನೈ ಯೇತ್ತಿ
ಇವನರುಳ್ ಪೆಱಪ್ಪೆ ಱ್ಱೇನೆನ್ ಱಿಯಱ್ಪಕೈ ಯಾರು ಮೀಣ್ಡಾರ್.

421. ಚೆಯ್ವ್ವತರ್ ಕರಿಯ ಚೆಯ್ಕೈ ಚೆಯ್ತನ ಱ್ಱೊಣ್ಡರ್ ಪೋಕ;
ಮೈತಿಕಟು ಕಣ್ಡ ನೆಣ್ತೋಳ್ ಮಱೈಯವನ್ ಮಕಿಟ್ನ್ತು ನೋಕ್ಕಿ
'ಪ್ಪೊಯ್ತರು ಮುಳ್ಳ ಮಿಲ್ಲಾನ್ ಪಾರ್ಕ್ಕಿಲನ್ ಪೋನಾ' ನೆನ್ಱು
ಮೆಯ್ತರು ಚಿನ್ತೈ ಯಾರೈ ಮೀಳವು ಮಟೈಕ್ಕ ಲುಱ್ಱಾನ್.

422. ಇಯಱ್ಪಕೈ ಮುನಿವಾ ವೋಲಾ! ಮೀಣ್ಡುನೀ ವರುವಾ ಯೋಲಮ್!
ಅಯರ್ಪ್ಪಿಲಾ ತಾನೇ ಯೋಲ! ಯನ್ಪನೇ ಯೋಲ! ವೋಲಮ್!
ಚೆಯಱ್ಕರು ಞ್ಚೆಯಱ್ಕೈ ಚೆಯ್ತ ತೀರನೇ ಯೋಲಮ್!' ಎನ್ಱಾನ್.
ಮಯಕ್ಕಱು ಮಱೈಯೋ ಲಿಟ್ಟ ಮಾಲಯನ್ ಱೇಟ ನಿನ್ಱಾನ್.

423. ಈ ರೀತಿ ಕರೆದ ಶಬ್ದವನ್ನು ಕೇಳಿ ಇಯರ್‌ಪಗೆಯಾರನು, 'ದಾಸನಾದ ನಾನು ಇದೋ ಬಂದುಬಿಟ್ಟೆನು! ಬಂದುಬಿಟ್ಟೆನು! ಯುದ್ಧದಲ್ಲಿ ತಪ್ಪಿಸಿಕೊಂಡವರಾಗಿ ಈಗ ನಿಮ್ಮನ್ನು ತಡೆಯುವವರು ಯಾರೇ ಇದ್ದರೂ ಅವರನ್ನು ನನ್ನ ಖಡ್ಗದಿಂದ ತುಂಡರಿಸುವೆನು' ಎಂದು ಹೇಳಿ ಅವಸರದಿಂದ ಹಿಂದೆ ಬಂದನು. ಆಗ ಆ ವೇದಿಯರು ತನ್ನ ದಿವ್ಯದರ್ಶನ ತೋರುವ ಉದ್ದೇಶದಿಂದ ಅಂತರ್ಧಾನರಾದರು.

424. ಅಲ್ಲಿ ಬಂದು ಸೇರಿದ ನಾಯನಾರನು ಶಿವವೇಷ ಮುನಿವರರನ್ನು ಕಾಣದಾದನು. ಅಮ್ಮೆಯಾರನ್ನು ಮಾತ್ರ ಅಲ್ಲಿ ಕಂಡನು. ಆದರೆ ಶೋಭಿಸುವ ಹೊನ್ನ ಪರ್ವತವೊಂದು ರಜತಗಿರಿಯ ಮೇಲೆ ಸೌಂದರ್ಯದಿಂದ ಕೂಡಿ ಪ್ರಕಾಶಿಸುವುದೆಂದು ಹೇಳಲಾಗುವಂತೆ, ತನ್ನ ಸಂಗಾತಿಯಾದ ಉಮಾ ಮಾತೆಯೊಡನೆ ಆಕಾಶದಲ್ಲಿ ಈಶ್ವರನನ್ನು ವೃಷಭವಾಹನದ ಮೇಲೆ ಕಂಡನು. ಕಂಡೊಡನೆಯೇ ನೆಲದಲ್ಲಿ ಬಿದ್ದು ಸಾಷ್ಟಾಂಗ ನಮಸ್ಕರಿಸಿದನು. ಆಮೇಲೆ ಎದ್ದು ಅವರನ್ನು ಸ್ತುತಿಸಲಾರಂಭಿಸಿದನು.

225. 'ದೇವದೇವನೆ! ನಿಮ್ಮನ್ನು ಯಾವ ಬಗೆಯಲ್ಲಿ ನಾನು ಸ್ತುತಿಸಲಿ! ನೀವು ಮಾಡುವ ದಿವ್ಯಾನುಗ್ರಹವು ಬಾಳಲಿ! ನೀವು ನನಗಾಗಿ ಇತ್ತ ದರ್ಶನವು ಹೊಗಳಲ್ಪಡತಕ್ಕುದು! ನನ್ನಲ್ಲಿ ಅನುಗ್ರಹವನ್ನು ತೋರಿ, ನೀವು ನನ್ನನ್ನು ದಾಸಪರಂಪರೆಯಲ್ಲಿ ದಾಸನನ್ನಾಗಿಸಿಕೊಂಡಿರಿ. ಈ ಕಾರ್ಯವು ಸ್ತುತಿಸತಕ್ಕುದು! ಎಲ್ಲೆಯಿಲ್ಲದ ಆನಂದಸಾಗರವನ್ನು ನನಗೆ ನೀವು ಅನುಗ್ರಹಿಸಿದಿರಿ. ಈ ಕಾರ್ಯವು ಸ್ತುತಿಸತಕ್ಕುದು! ಚಿತ್ಸಭೆಯಲ್ಲಿ ದಿವ್ಯನಟನವಾಡುವ ನಿಮ್ಮ ಕೆಂಪಗಾದ ಪಾದಗಳು ಸ್ತುತಿಸತಕ್ಕವು!' ಎಂದು ಹೊಗಳಲು,

---

423. ಅೞೈತ್ತಪೇ ರೋಚೈ ಕೇಳಾ 'ವಡಿಯನೇನ್ ವನ್ದೇನ್! ವನ್ದೇನ್!'
ಪಿೞೈತ್ತವ ರುಳರೇ ಲಿನ್ನುಮ್ ಪೆರುವಲಿ ತ್ತಡಕ್ಕೈ ವಾಳಿ
ನಿೞೈತ್ತವ ರಾಕಿನ್ ಱಾರೆನ್ ಱಿಯಱ್‌ಪಕೈ ಯಾರ್ವ ನ್ದುಯ್ತ್ತು,
ಕ್ಕಡೈತ್ತೊಳಿ ಕಾತಿ ನಾನು ಮೞೈಯನ್ದನನ್ ಕೋಲ ಱೊಯ್ಯಾನ್.

424. ಚೆನ್ಱವರ್ ಮುನಿಯೈ ಕ್ಕಾಣಾರ್; ಚೇಯಿೞೈ ತನ್ನೈ ಕಣ್ಡಾರ್,
ಪೊನ್ಱಿಕೞ್ ಕುನ್ಱು ವೆಳ್ಳಿ ಪ್ಪೊರುಪ್ಪಿನ್‌ಮೇಱ್ ಪೊಲಿನ್ದ ತೆನ್ನ
ತ್ತುನ್ಱಿಣೈ ಯುಡನೇ ವಾನಿ ೞುಲೈವನ್ನೈ ವಿಡೈಮೇಱ್ ಕಣ್ಡಾರ್;
ನಿನ್ಱಿಲರ್; ತೊೞುತು ವೀೞ್‌ನ್ದಾರ್; ನಿಲತ್ತಿನಿನ್ ಱೆೞುನ್ದಾರ್;
ನೇರ್‌ನ್ದಾರ್.

425. 'ಚೊಲ್ಲುವ ತಱಿಯೇನ್! ವಾೞಿ! ತೋಱ್ಱಿಯ ತೋಱ್ಱಮ್ ಪೋಱ್ಱಿ!
ವಲ್ಲೆವ ನ್ದರುಳಿ ಯೆನ್ನೈ ವೞಿತ್ತೊಣ್ಡು ಕೊಣ್ಡಾಯ್ ಪೋಱ್ಱಿ!
ಎಲ್ಲೈಯಿ ಲಿನ್ಪ ವೆಳ್ಳ ಮೆನಕ್ಕರುಳ್ ಚೆಯ್ದಾಯ್ ಪೋಱ್ಱಿ!
ತಿಲ್ಲೈಯ ಮ್ಬಲತ್ತು ಳಾಡು ಮ್ಚೇವಡಿ ಪೋಱ್ಱಿ ಯೆನ್ನ.

426. ಆಗಸದಲ್ಲಿ ಕಾಣಿಸಿಕೊಂಡ, ಬಿಳಿ ವೃಷಭವನ್ನು ವಾಹನವಾಗುಳ್ಳ ಈಶ್ವರನು ತನ್ನ ಭಕ್ತನಾದ ನಾಯನಾರನನ್ನು ನೋಡಿ, 'ಚಿಂತನೆಯ ಪರಿಣಾಮವೆನಿಸಿ ಕೊಳ್ಳುವ ಈ ಲೋಕದಲ್ಲಿ ಈ ರೀತಿ ನೀನು ನಮ್ಮಲ್ಲಿ ತೋರಿಸಿದ ಭಕ್ತಿಯನ್ನು ಕಂಡು ಸಂತಸಹೊಂದಿದೆವು. ದೋಷರಹಿತನೆ! ಅನುಕೂಲೆಯಾದ ಸತಿಯೊಡನೆ ನೀನು ನಮ್ಮೊಡನೆ ಕೈಲಾಸಕ್ಕೆ ಬರುವವನಾಗು' ಎಂದನುಗ್ರಹಿಸಿದರು.

427. ಅನುಗ್ರಹಭಾಗ್ಯವು ವರ್ಧಿಸುವ ಮಹಿಮಾತಿಶಯದ ಭಕ್ತನಿಗೂ, ವೈರಾಗ್ಯವುಳ್ಳ, ದೈವಗುಣವಾದ ಪಾತಿವ್ರತ್ಯದಿಂದ ಹೆಚ್ಚಿದ ಅವನ ಹೆಂಡತಿಗೂ ನಿತ್ಯವಾದ ಮುಕ್ತಿ ಫಲವನ್ನು ಕೊಟ್ಟರು. ಈ ಶಿವಾನುಗ್ರಹವನ್ನು ದೇವತೆಗಳು ಸ್ತುತಿಸುತ್ತಿರಲು, ವೃಷಭಾರೂಢನಾದ ಈಶ್ವರನು ತಾವು ಸದಾ ನೆಲಸಿರುವ ತಮ್ಮ ಚಿದಾಕಾಶ ಪೂರ್ಣವಾದ ಪೊನ್ನಂಬಲದೊಳಗೆ ನಿಂತರು.

428. ದೇವತೆಗಳು ಹೂಮಳೆಯನ್ನು ಸುರಿಸಲು, ವೇದಗಳು ಘೋಷಿಸಲು, ತಪಸ್ವಿಗಳು ಸ್ತುತಿಸಲು, ದೋಷರಹಿತನಾದ ಇಯರ್‌ಪಗೈನಾಯನಾರನು ಶಿವಲೋಕದಲ್ಲಿ ಪರಶಿವನ ಅಗಲಿಕೆಯಿಲ್ಲದಂತಹ ಸಾಮೀಪ್ಯಮುಕ್ತಿಯನ್ನು ಪಡೆದನು. ಈ ಭಕ್ತನೊಡನೆ ವೈರಭಾವವನ್ನು ತಾಳಿ ಯುದ್ಧಮಾಡಿ ಮೃತರಾದ ಇತರ ಸಂಬಂಧಿಗಳೂ ವೀರಸ್ವರ್ಗದ ಸುಖವನ್ನು ಪಡೆದರು.

---

426. ವಿಣ್ಣಿಟೈ ನಿನ್‌ಱ ವೆಳ್ಳೈ ವಿಟೈಯುವ ರಟಿಯಾರ್ ತಮ್ಮೈ
ಎಣ್ಣಿಯ ವುಲಕು ತನ್‌ನಿ ಲಿಪ್ಪಟಿ ನಮ್ಪಾ ಲನ್‌ಪು
ಪಣ್ಣಿಯ ಪರಿವು ಕಣ್ಟು ಮಕಿಟ್‌ನ್ತನಮ್; ಪಟುಱಿ ಲಾತಾಯ್!
ನಣ್ಣಿಯ ಮನೈವಿ ಯೋಟು ನಮ್ಮುಟನ್ ಪೋತು' ಕೆನ್‌ಱು.

427. ತಿರುವಳರ್ ಚಿಱಪ್ಪಿನ್ ಮಿಕ್ಕ ತಿರುತ್ತೊಣ್ಟರ್ ತಮಕ್ಕು ನ್ತೇಱಿ
ಮರುವಿಯ ತೆಯ್ವ ಕ್ಕಱ್ಪಿನ್ ಮನೈವಿಯಾರ್ ತಮಕ್ಕು ನ್ತಕ್ಕ
ಪೊರುಕಿಯ ವರುಳಿ ನೀಟು ಪೇಱಳಿ ತ್ತಿಮೈಯೋ ರೇತ್ತ
ಪ್ಪೊರುವಿಟೈ ಪ್ಪಾಕರ್ ಮನ್‌ನುಮ್ ಪೊಱ್ಪೊತು ವತನುಟ್ ಪುಕ್ಕಾರ್.

428. ವಾನವರ್ ಪೂವಿನ್ ಮಾರಿ ಪೊಟಿಯಮಾ ಮಱೈಕಳಾರ್‌ಪ್ಪ
ಞಾನಮಾ ಮುನಿವರ್ ಪೋಱ್ಱ ನಲಮಿಕು ಚಿವಲೋ ಕತ್ತಿಲ್
ಊನಮಿ ಲಱೊಣ್ಟರ್ ಕುಮ್ಪಿ ಟ್ಟುಟನುಱೈ ಪೆರುಮೈ ಪೆಱ್ಱಾರ್
ಏನೈಯ ಚುಱ್ಱ ತ್ತಾರುಮ್ ವಾನಿಟೈ ಯಿನ್‌ಪಮ್ ಪೆಱ್ಱಾರ್.

429. ಭೋಗಸಾಧನವಾದ ತನ್ನ ಪತ್ನಿಯನ್ನು, ಈಶ್ವರಭಕ್ತರ ದಾಸನು ತಾನೆಂದು ದೃಢವಾಗಿ ತಿಳಿದು, ಯಾವೊಂದೂ ಮನಶ್ಚಾಂಚಲ್ಯವಿಲ್ಲದೆ, ವೇದಿಯವೇಷದ ಶಿವನಿಗೆ ಕೊಟ್ಟ ಇಯರ್‌ಪಗೈಯಾರನ ಭಕ್ತಿಯ ಮಹಿಮೆಯನ್ನು ನಮಿಸಿ, ಅದರ ಆಧಾರದಿಂದ ಭಕ್ತಿಯುತವಾದ ಮನಸ್ಸಿನಿಂದ ಈಶ್ವರನ ಭೃತ್ಯಭಾವದ ನೆಲೆಯನ್ನು ಪಡೆದ ಖ್ಯಾತಿಯ ಇಳೈಯಾನ್ ಕುಡಿಯಲ್ಲಿ ಬಂದ ಮಾಱನ್ ನಾಯನಾರನ ಭಕ್ತಿಯ ಹಿರಿಮೆಯನ್ನು ಇನ್ನುಮೇಲೆ ಸ್ತುತಿಸಲು ಆರಂಭಿಸುವೆನು.

4. ಇಳೆಯಾನ್ ಗುಡಿಮಾರ ನಾಯನಾರ

430. ಕೆಂಪಗಾದ ಹೊನ್ನಿನಿಂದ ಮುಚ್ಚಿ ಶೋಭಿಸುವ ಚಿದಂಬರದ ದೇಗುಲದಲ್ಲಿ ನಟನವಾಡುವ ನಟರಾಜರ ಶ್ರೀಪಾದಗಳನ್ನು ಯಾವಾಗಲೂ ತಲೆಯಲ್ಲಿ ಧರಿಸಿಕೊಳ್ಳುವವನು ಇಳೆಯಾನ್‌ಗುಡಿ ಎಂಬ ಊರಲ್ಲಿ ಅವತರಿಸಿದ ಮಾಱನ್ ಎಂಬ ಹೆಸರಿನ ಹಿರಿಯನು. ಇವನು ಶಿವಪರಮಾತ್ಮನ ಭಕ್ತರಲ್ಲಿ ಹೆಚ್ಚಿನ ಯೋಗ್ಯತೆಯುಳ್ಳವನು. ಶೂದ್ರ ಸತ್ಕುಲವು ಮಾಡಿದ ತಪಸ್ಸಿನ ಕಾರಣವಾಗಿ ಅವತರಿಸಿ ಈ ಭೂಲೋಕವನ್ನು ಪ್ರಕಾಶಿಸುವಂತೆ ಇವನು ಮಾಡಿದನು.

431. ಉಳುವ ಉದ್ಯೋಗದಲ್ಲಿ ಪರಿಪೂರ್ಣವಾಗಿ ವರ್ಧಿಸುವ ಉಳುವ ಸಂಪತ್ತಿನಿಂದ ಬರುವ ನೆಲ್ಲು ಮೊದಲಾದ ಧಾನ್ಯಗಳು, ಇವುಗಳಿಂದಾಗಿ ಹೊಂದಿದ ಅಗಣಿತವಾದ ಇತರ ಭಾಗ್ಯ, ಶಿವಪರಮಾತ್ಮನ ಭಕ್ತರೆಡೆಯಲ್ಲಿ ಪೂರ್ಣವಾಗಿ ಸೇರಿದ ಚಿಂತನೆಯಿರುವ ಮನ – ಈ ಭಾಗ್ಯಗಳನ್ನು ಇವನು ಪಡೆದು ಇವುಗಳಿಂದಾಗುವ ಪ್ರಯೋಜನವನ್ನು ಹೊಂದಿದನು.

---

429. ಇನ್‌ಪುಱು ತಾರ ನ್ತನ್‌ನೈ ಯಿಾಚನು ಕ್ಕನ್‌ಪ ರೆನ್‌ಱೀ
ತುನ್‌ಪುಱು ತುತವು ನ್ಱೊಣ್ಣಾರ್ ಪೆರುಮೈಯ್ಯೈ ತ್ತೊಟುತು ವಾಟ್‌ತ್ತಿ
ಯನ್‌ಪುಱು ಮನತ್ತಾ ನಾತ ನಟಿಯವರ್ ಕ್ಕನ್‌ಪು ನೀಟು
ಮನ್‌ಪುಕ ಟಿಳಚ್ಚೈ ಮಾರನ್ ವಳತ್ತಿನೈ ವಟುತ್ತ ಲುಱ್ಱೇನ್.

4. ಇಳೈಯಾನ್ ಕುಟಿಮಾಱ ನಾಯನಾರ್ ಪುರಾಣಮ್

430. ಅಮ್ಪೊ ನೀಟಿಯ ಲಮ್ಪ ಲತ್ತಿನಿ ಲಾಟು ವಾರಟಿ ಚೂಟುವಾರ್
ತಮ್ಪಿ ರಾನಟಿ ಮೈತ್ತಿ ಱತ್ತಿಯರ್ ಚಾಲ್ಪಿನ್ ಮೇನ್‌ಮೈ ತರಿತ್ತುಳಾರ್
ನಮ್ಪು ವಾಯ್‌ಮೈಯಿ ನೀಟು ಚೂತ್ತಿರ ನಱ್ಕು ಲಞ್ಚೆಯ್ ತವತ್ತಿನಾ
ಲಿಮ್ಪರ್ ಞಾಲಮ್ ವಿಳಕ್ಕಿ ನಾರಿಳೈ ಯಾನ್‌ಕು ಟಿಪ್ಪತಿ ಮಾಱನಾರ್.

431. ಏರಿನ್ ಮಲ್ಕು ವಳತ್ತಿ ನಾಲ್‌ವರು ಮೆಲ್ಲೈ ಯಿಲ್ಲತೋರ್ ಚೆಲ್ವಮುಮ್
ನೀರಿನ್ ಮಲ್ಕಿಯ ವೇಣಿ ಯಾರಟಿ ಯಾರ್‌ತಿ ಱತ್ತು ನಿಱೈನ್ತ ತೋರ್
ಚೀರಿನ್ ಮಲ್ಕಿಯ ವನ್‌ಪಿನ್ ಮೇನ್‌ಮೈ ತಿರುನ್ತ ಮನ್‌ನಿಯ ಚಿನ್ತೈಯುಮ್
ಪಾರಿನ್ ಮಲ್ಕ ವಿರುಮ್ಪಿ ಮಱ್ಱವೈ ಪೆಱ್ಱ ನೀಟು ಪಯನ್ ಕೊಳ್ವಾರ್.

432. ಹಾರಗಳಿಂದಲೂ ಎಲುಬುಗಳಿಂದಲೂ ಅಲಂಕಾರವನ್ನು ಮಾಡಿಕೊಂಡ ಈಶ್ವರನ ಭಕ್ತರೆಂಬ ಒಂದೇ ವಿಷಯವನ್ನು ನೆನೆದು, ಅದನ್ನೇ ಕಾರಣವಾಗಿಟ್ಟುಕೊಂಡು, ಬಂದವರು ಯಾರೇ ಆಗಿದ್ದರೂ ಸ್ಥಿರವಾಗಿ ನೆಲಸಿದ ಭಕ್ತಿಯಿಂದ ಬಂದು ಎದುರ್ಗೊಂಡು, ಸ್ವಾಗತಿಸಿ, ಕೈಜೋಡಿಸಿ, ಇದಿರಲ್ಲಿ ನಮಿಸಿ ನಿಂತು, ಮಧುರ ವಚನಗಳಿಂದ ಉಪಚಾರ ವನ್ನು ಹೇಳಿ, ಅನಂತರ

433. ಅವರನ್ನು ತಮ್ಮ ಮನೆಯೊಳಗೆ ಕರೆದುಕೊಂಡು ಬಂದು, ಅವರ ಶ್ರೀಪಾದಗಳನ್ನು ತೊಳೆದು, ಉಚಿತಾಸನದಲ್ಲಿ ಅವರನ್ನು ಆದರದಿಂದ ಕುಳ್ಳಿರಿಸಿ, ಅರ್ಚಿಸಿ, ಭಕ್ಷ್ಯ, ಭೋಜ್ಯ, ಲೇಹ್ಯ, ಪಾನೀಯಗಳೆಂಬ ಷಡ್ರಸಯುತವಾದ ಆಹಾರ ದ್ರವ್ಯಗಳನ್ನು ಭಕ್ತರ ಇಚ್ಛೆಯಂತೆ ಉಣಿಸಿ ಅವರ ಅನುಗ್ರಹ ದೊರೆಯುವಂತೆ ಉಪಚರಿಸುವನು.

434. ಎಲ್ಲಾ ಜೀವಿಗಳನ್ನು ತಮಗೆ ಆಳಾಗಿ ಉಳ್ಳ ಈಶ್ವರನ ಅಗಣಿತ ಭಕ್ತರು ಮನಸ್ಸಂತೋಷಗೊಂಡು ಪ್ರತಿದಿನವೂ ಹೆಚ್ಚು ಸಂಖ್ಯೆಯಿಂದ ಕೂಡಿ ಬಂದು ಭೋಜನ ಮಾಡಿ ಇವನ ಸೇವಾಭಕ್ತಿಯನ್ನು ಅನುಭವಿಸಿದುದರಿಂದ ಬಂದ ನಲ್ಮೆಯಿಂದಾಗಿ ವರ್ಧಿಸುವ ಹಿರಿಯ ಭಾಗ್ಯಗಳನ್ನು ಕೂಡಿಕೊಂಡು, ಅಷ್ಟಭುಜಗಳುಳ್ಳ ಶಿವಪರಮಾತ್ಮನು ಅಳಕಾಪುರವನ್ನು ಆಳುವಂತೆ ಏರ್ಪಡಿಸಿದ ತನ್ನ ಸ್ನೇಹಿತನಾದ ಕುಬೇರನೇ ಇವನು ಎಂದು ಹೇಳುವಂತೆ ನಾಯನಾರನು ಬಾಳಿಕೊಂಡು ಬರುವ ದಿನದಲ್ಲಿ,

---

432. ಆರ ಮೆನ್ಪು ಪುನೈನ್ತ ವೈಯರ್ತ ಮನ್ಪ ರೆನ್ಪತೊರ್ ತನ್ಮೈಯಾ
ನೇರ ವನ್ತವರ್ ಯಾವ ರಾಯಿನು ನಿತ್ತ ಮಾಕಿಯ ಪತ್ತಿಮುನ್
ಕೂರ ವನ್ತೆತಿರ್ ಕೊಣ್ಟು ಕೈಕಳ್ ಕುವಿತ್ತು ನಿನ್ಱು ಚೆವಿಪ್ಪುಲ
ತ್ತೀರ ಮೆನ್ಮತು ರಪ್ಪ ತಮ್ಪುರಿ ವೆಯ್ತು ಮುನ್ನುರೈ ಚೆಯ್ತಪಿನ್,

433. ಕೊಣ್ಟು ವನ್ತು ಮನೈಪ್ಪು ಕುನ್ತು ಕುಲಾವು ಪಾತಮ್ ವಿಳಕ್ಕಿಯೇ
ಮಣ್ಟು ಕಾತಲಿ ನಾತ ನತ್ತಿಟೈ ವೈತ್ತ ರುಚ್ಚನೈ ಚೆಯ್ತಪಿನ್
ಉಣ್ಟಿ ನಾಲು ವಿತತ್ತಿ ಲಾಱು ಚುವೈತ್ತಿ ಱತ್ತನಿ ಲೊಪ್ಪಿಲಾ
ವಣ್ಣರ್ ನಾಯಕರ್ ತೊಣ್ಟ ರಿಚ್ಚೈಯಿ ಲಮುತು ಚೆಯ್ಯ ವಳಿತ್ತುಳಾರ್.

434. ಆಳು ನಾಯಕ ರನ್ಪ ರಾನವ ರಳವಿ ಲಾರುಳ ಮಕಿಟವೇ
ನಾಳು ನಾಳು ನಿಱೈನ್ತು ವನ್ತು ನುತರ್ನ್ತ ತನ್ಮೈಯಿ ನನ್ಮೈಯಾ
ನೀಳು ಮಾನಿತಿ ಯಿನ್ಪ ರಪ್ಪು ನೆರುಙ್ಕು ಚೆಲ್ವ ನಿಲಾವಿಯೆಣ್
ಟೋಳಿ ನಾರಳ ಕೈಕ್ಕಿ ರುತ್ತಿಯ ತೋಟಿ ನಾರೆನ ವಾಟುನಾಳ್,

435. ಭಾಗ್ಯಗಳು ಅತಿಶಯವಾಗಿರುವ ಕಾಲದಲ್ಲಿ ಈ ಸೇವಾ ಕಾರ್ಯಗಳನ್ನು ಮಾಡುವುದಲ್ಲದೆ, ಶರೀರಕ್ಕೆ ದುಃಖವನ್ನು ತರುವ ದಾರಿದ್ರ್ಯವು ಬಂದ ಕಾಲದಲ್ಲಿಯೂ ಈ ಕಾರ್ಯಗಳನ್ನು ಇವರು ಮಾಡಬಲ್ಲವರಾಗುವರು ಎಂಬ ಸತ್ಯವನ್ನು ಲೋಕಕ್ಕೆ ತಿಳಿಸುವ ಕಾರಣವಾಗಿ, ಶ್ಲಾಘ್ಯವಾಗಿ ನೀಡಿಬಂದ ಆ ಭಾಗ್ಯಗಳು ಮೆಲ್ಲನೆ ಮರೆಯಾಗಲು, ಶೀಘ್ರವಾಗಿ ಬರುವೆಯಾದ (ದಾರಿದ್ರ್ಯದ) ನಿಲುವು ಸೇರುವಂತೆ ತಿಲ್ಲೆಯಲ್ಲಿರುವ ಪರಮೇಶ್ವರನು ಸಂಕಲ್ಪಮಾಡಿದನು.

436. ಈ ರೀತಿಯಲ್ಲಿ ತಮ್ಮ ಭಾಗ್ಯವು ಕಮ್ಮಿಯಾದರೂ, ನಮ್ಮ ಒಡೆಯನೂ ಇಳೆಯಾನ್ ಗುಡಿಯ ಮುಖ್ಯಸ್ಥನೂ ಆಗಿರುವ ನಾಯನಾರನು, ಮನಸ್ಸಿನಲ್ಲಿ ಸ್ವಲ್ಪವೂ ಕುಗ್ಗದೆ, ತನ್ನೆಡೆಯಲ್ಲಿರುವ ವಸ್ತುಗಳನ್ನು ಮಾರಿಯೂ, ಅಡವಿಟ್ಟು ತೆಗೆದುಕೊಳ್ಳಲಾಗದ ಕಡವನ್ನು ತೆಗೆದುಕೊಂಡೂ, ಹಿಂದಿನಿಂದ ಮಾಡಿಕೊಂಡು ಬರುತ್ತಿರುವ ಸೇವೆಯನ್ನು ಇನ್ನಷ್ಟು ಹೆಚ್ಚಾಗಿ ಮಾಡುವವನಾದನು.

437. ಆ ನಾಯನಾರನು ಭಕ್ತಕೈಂಕರ್ಯವನ್ನು ಈ ರೀತಿ ಶ್ರದ್ಧೆಯಿಂದ ಮಾಡುತ್ತಿರಲು, ವರಾಹ, ಹಂಸ ರೂಪಗಳನ್ನು ತಾಳಿದ ವಿಷ್ಣುಬ್ರಹ್ಮರಿಗೇ ತಿಳಿಯಲಾಗದ ಆ ಪರಮೇಶ್ವರನು, ತನ್ನ ವೃಷಭವಾಹನವನ್ನುಳಿದು, ಸದಾ ಸಂಗಾತಿಯಾದ ಉಮಾದೇವಿಯನ್ನೂ ಕರೆದುಕೊಳ್ಳದೆ, ತವಸಿಯ ವೇಷವನ್ನು ತಾಳಿ, ಈ ಲೋಕವು ಉಜ್ಜೀವಿಸುವ ಕಾರಣವಾಗಿ ಅನುಗ್ರಹಿಸಿ ಬಂದನು.

---

435. ಚೆಲ್ವ ಮೇವಿಯ ನಾಳಿ ಲಿಚ್ಚೆಯಲ್ ಚೆಯ್ವ ತನ್‌ಱಿಯು ಮೆಯ್ಯಿನಾಲ್
ಅಲ್ಲ ನಲ್ಕುರ ವಾನ ಪೋತಿಲುಮ್ ವಲ್ಲ ರೆನ್‌ಱಿ ವಿಕ್ಕವೇ
ಮಲ್ಲ ನೀಟಿಯ ಚೆಲ್ವ ಮೆಲ್ಲ ಮಱೈನ್ತು ನಾಟೊಱು ಮಾಱವ
ನ್ದೊಲ್ಲೈ ಯಿಲ್ವಱು ಮೈಪ್ಪ ತಮ್ಪಿಕ ವುನ್‌ನಿ ನಾರ್‌ತಿಲ್ಲೈ ಮನ್‌ನಿನಾರ್.

436. ಇನ್‌ನ ವಾಱು ವಳಙ್ಗ ರುಙ್ಕವು ಮೆಪ್ಪಿ ರಾನಿಳೈ ಯಾನ್‌ಕುಟಿ
ಮನ್‌ನನ್ ಮಾಱನ್ ಮನಙ್ಗ ರುಙ್ಕು ತವಿನ್‌ಱಿ ಯುಳ್ಳನ ಮಾಱಿಯು
ನ್ತನ್‌ನೈ ಮಾಱಿ ಯಿರುಕ್ಕ ವುಳ್ಳ ಕಟನ್‌ಕ ಟಕ್ಕನ ಕೊಣ್ಟುಪಿನ್
ಮುನ್‌ನೈ ಮಾಱಿ ಱಿರುಪ್ಪ ಣಿಕ್ಕಣ್ ಮುತಿರ್‌ನ್ತ ಕೊಳ್‌ಕೈಯ ರಾಯಿನಾರ್.

437. ಮಱ್ಱ ವರ್‌ಚೆಯ ಲಿನ್‌ನ ತನ್‌ಮೈಯ ತಾಕ ಮಾಲಯ ನಾನವ
ಕ್ಕೊಱ್ಱ ವೇನಮು ಮನ್‌ನ ಮುನ್ತಿರಿ ಯಾತ ಕೊಳ್‌ಕೈಯ ರಾಯಿನಾರ್
ಪೆಱ್ಱ ಮೂರ್‌ವತು ಮಿನ್‌ಱಿ ನೀಟಿಯ ಪೇತೈ ಯಾಳುಟ ನಿನ್‌ಱಿ ಯೋರ್
ನಱ್ಱ ವತ್ತವರ್ ವೇಟ ಮೇಕೊಟು ಞಾಲ ಮುಯ್ನ್ತಿಟ ನಣ್ಣಿನಾರ್.

438. ಮಳೆಗಾಲದ ಒಂದು ರಾತ್ರಿ, ನಿದ್ರೆಯಿಲ್ಲದಿದ್ದು, ಬೇರೇನೂ ಆಹಾರವಿಲ್ಲದುದರಿಂದ ಹಸಿವೆಯು ಬಾಧಿಸುತ್ತಿರಲು, ರಾತ್ರಿ ಹೆಚ್ಚಾದುದರಿಂದ ಮನೆ ಕದವನ್ನು ಮುಚ್ಚಿ, ಅಗುಳಿಯನ್ನು ಹಾಕಿ ಭದ್ರಮಾಡಿದ ಮೇಲೆ ಅತಿಥಿಗಳು ಮನೆಯ ಹೊರಗೆ ಬಂದುದು ನಾಯನಾರನಿಗೆ ತಿಳಿದುಬಂತು. ಮಧುರಸದಿಂದ ಕೂಡಿದ ಮಾಲೆಯನ್ನು ಅಲಂಕರಿಸಿಕೊಂಡ ನಾಯನಾರನು ಕೂಡಲೇ ಹೊರಬಂದು ತಪಸಿಗಳಾದ ಅತಿಥಿಗಳನ್ನು ಇದಿರ್ಗೊಂಡು ಸ್ವಾಗತಿಸಿದನು.

439. ಆಮೇಲೆ ಅತಿಥಿಯ ಮೈಯ ಒದ್ದೆಯನ್ನು ಹೋಗಲಾಡಿಸಿ, ಅವರಿಗೆ ತೃಪ್ತಿಯಾಗುವಂತೆ ಭೋಜನ ಮಾಡಿಸುವ ಆಸೆಯಿಂದ ತನ್ನ ಹೆಂಡತಿಯನ್ನು ನೋಡಿ, 'ಈ ತಪಸಿಗಳು ತೀರ ಹಸಿದಿರುವರು. ಈಗ ನಾವೇನನ್ನು ಮಾಡುವ' ಎಂದನು. ಆಮೇಲೆ,

440. 'ನಮಗೇ ಈಗ ಉಣಿಸಿಲ್ಲದುದು ಸತ್ಯವಾಗಿದ್ದರೂ ಪಾರ್ವತಿಯನ್ನು ಎಡ ಭಾಗದಲ್ಲುಳ್ಳ ಶಿವನ ಭಕ್ತರಿಗೆ ನಾವು ಇನಿದಾದ ಆಹಾರವನ್ನು ತಕ್ಕಂತೆ ತಯಾರಿಸಬೇಕು. ಇದನ್ನು ಮಾಡಲು ದಾರಿ ಯಾವುದು ?' ಎಂದು ನಾಯನಾರನು ಪತ್ನಿಯನ್ನು ಕೇಳಿದನು.

---

438. ಮಾರಿ ಕ್ಕಾಲ ತ್ತಿರವಿನಿಲ್ ವೈಕಿಯೋರ್
ತಾರಿ ಪ್ಪಿನ್‌ಱಿಃ ಪ್ಪಚಿತಲೈ ಕ್ಕೊಳ್ವತು
ಪಾರಿ ತ್ತಿಲ್ಲ ಮಟೈತ್ತಪಿನ್ ಪಣ್ಪುಱಿ
ವೇರಿ ತ್ತಾರಾನ್ ವಿರುನ್ತೆತಿರ್ ಕೊಣ್ಟನನ್.

439. ಈರ ಮೇನಿಯೈ ನೀಕ್ಕಿ ಯಿಟಱ್ಕೊಟು
ತ್ತಾರ ವಿನ್‌ನಮು ತೂಟ್ಟ್ಱಟಱ್ ಕಾಚ್ಚೈಯಾ
ೞಾರ ಮಾತರೈ ನೋಕ್ಕಿ 'ತ್ತಪೋತನರ್
ತೀರ ವೇಪಚಿ ತಾರ್‌ಚೆಯ್ವ ತೆನ್' ನೆನ್‌ಱು,

440. 'ನಮಕ್ಕು ಮುನ್‌ಪಿ ಱ್ಱುಣವಿಲ್ಲೈ ಯಾಯಿನುಮ್
ಇಮಕ್ಕು ಲಕ್ಕೊಟಿ ಪ್ಪಾಕರ್ ಕ್ಕಿನಿಯವರ್
ತಮಕ್ಕು ನಾಮಿನ್ ನಟಿಚಿ ಱಕವುಱ
ಮಮೈಕ್ಕು ಮಾಱಿಱ್ಱ ನೇ? ಯಣಙ್ಙೇ!' ಯೆನ;

441. ಅದಕ್ಕೆ ಆತನ ಪತ್ನಿಯು, 'ನಾನು ಬೇರೊಂದು ಮಾರ್ಗವನ್ನು ಕಾಣೆನು. ಇತರರಾರೂ ಇಂದು ಕಡ ಕೊಡುವವರಿಲ್ಲ. ಕಾಲವೂ ನಟ್ಟಿರುಳಾಯಿತು. ಹೋಗಿ ಹುಡುಕಬಹುದಾದ ಇತರ ಎಡೆಗಳು ಒಂದೂ ಇಲ್ಲ. ದುಷ್ಕರ್ಮಿಗಳಾದ ನಮಗೆ ಇಂದು ಏನು ಮಾಡಲಿಕ್ಕಿದೆ?' ಎಂದು ಹೇಳಿ, ಅನಂತರ—

442. 'ಇಂದು ಹಗಲು ಗದ್ದೆಯಲ್ಲಿ ಬಿತ್ತಿದ ನೀರ್ಮೊಳಕೆಯ ಬತ್ತವನ್ನು ನೀವು ಸಂಗ್ರಹಿಸಿಕೊಂಡು ಬಂದು ಕೊಡುವಿರಾದರೆ ದಾಸಿಯಾದ ನಾನು ತಿಳಿದಂತೆ ಭೋಜನವನ್ನು ತಯಾರಿಸಲು ಸಾಧ್ಯವಾಗುವುದು. ಇದನ್ನು ಬಿಟ್ಟು ಬೇರೆ ಉಪಾಯವು ನನಗೆ ತೋರುವುದಿಲ್ಲ' ಎಂದು ವ್ಯಥೆಯಿಂದ ಹೇಳಿದಳು.

443. ನಾಯನಾರನು ಈ ಮಾತನ್ನು ಕೇಳಿ, ಮೊದಲೇ ಹುಡುಕಿ ಸಂಗ್ರಹಿಸಿಟ್ಟ ಭಾಗ್ಯವನ್ನು ಪಡೆದವನಂತೆ ಮನಸ್ಸಿನಲ್ಲಿ ತುಂಬಾ ಸಂತಸಗೊಂಡು, ನೀರಿನಿಂದ ಕೂಡಿದ ತಮ್ಮ ಗದ್ದೆಗೆ ಮೊಳಕೆಯ ಬತ್ತವನ್ನು ಬಾಚಿಕೊಂಡು ಬರಲು ಮನಮಾಡಿ ಆಶೆಯಿಂದ ಹೊರಟನು.

444. ಹೆಚ್ಚಾಗಿ ಮಳೆಯು ಸುರಿಯುತ್ತಿದ್ದುದರಿಂದ ಪಕ್ಕಗಳೂ, ನಡೆಯುವ ದಾರಿಯೂ ತಿಳಿಯಲು ಸಾಧ್ಯವಿಲ್ಲದಿರುವಾಗ, ಈ ಅಸಾಧ್ಯತೆಯನ್ನು ಇನ್ನಷ್ಟು ಹೆಚ್ಚಿಸುವಂತೆ, ಕತ್ತಲಾದ ಮಧ್ಯರಾತ್ರಿಯು, ಕಪ್ಪಗಾದ ಕಾಡಿಗೆಯಂತಿರುವ ಕತ್ತಲೆಯ ಗುಂಪು ತನ್ನ ಸಾಂದ್ರತೆಯನ್ನು ಕಾಣಿಸಿ ದ್ರವಿಸುವಂತೆ ತೋರಿತು.

---

441. ಮಾತು ಕೂಱುವಣ್ 'ಮಱ್ಱೊನ್ಱು ಱ್ಯಾಣ್ಕಿಲೇನ್;
ಏತಿ ಲಾರು ಮಿನಿತ್ತರು ವಾರಿಲ್ಲೈ;
ಪೋತುಮ್ ವೈಕಿಱ್ಱು; ಪ್ಪೋಮಿಟಮ್ ವೇಱಿಲ್ಲೈ;
ತೀತು ಚೆಯ್ವಿನೈ ಯೇಱ್ಕಿನ್ ಚೆಯು? ಲೆನ್ಱು;

442. 'ಚೆಲ್ಲ ನೀಙ್ಕ ಪ್ಪಕಲ್ವಿ ತ್ತಿಯಚೆನ್ನೆನ್
ಮಲ್ಲ ನೀರ್ಮುನೈ ವಾರಿ ಕ್ಕೊಟುವನ್ದಾಲ್
ವಲ್ಲ ವಾಱಮು ತಾಕ್ಕಲು ಮಾಕು; ಮ
ಱ್ಱಲ್ಲ ತೊನ್ಱಱಿ ಯೇ' ನೆನ್ ಱಯರ್ವುಱ;

443. ಮಱ್ಱ ಮೊೞಿ ಮನೈವಿಯಾರ್ ಕೂಱಮುನ್
ಪೆಱ್ಱ ಚೆಲ್ವ ಮೆನಪ್ಪೆರಿ ತುಣ್ಮ್ರಕಿೞ್
ನ್ದುಱ್ಱ ಕಾತಲಿ ನಾಲೊರು ಪ್ಪಟ್ಟನರ್
ಚುಱ್ಱು ನೀರ್ವಯಲ್ ಚೆಲ್ಲ ತ್ತೊಟಙ್ಕುವಾರ್.

444. ಪೆರುಕು ವಾನಮ್ ಪಿಱಙ್ಕ ಮಱೈಪೊೞಿ
ನ್ದುರುಕು ನಾಪ್ಪ ಣಱಿವರು ಙ್ಕಙ್ಙಱಾನ್
ಕರುಕು ಮೈಯಿರು ಳಿನ್ಕಣ ಙ್ಕಟ್ಟುವಿ
ಟ್ಟುರುಕು ನಿನ್ಱತು ಪೋನ್ಱ ತುಲಕೆಲಾಮ್,

445. ಅದನ್ನು ಇತರರಾರು ಮನದಲ್ಲಿ ನೆನೆದರೂ ಭಯದಿಂದ ನಡುಗಬೇಕು. ಅಂತಹ ಕತ್ತಲೆಯು ತಲೆದೋರಲು, ಅದು ಹೆಚ್ಚಾದ ಬಣ್ಣದಿಂದ ಕೂಡಿದ ಕಾಡಿಗೆಯ ಮೊತ್ತವೆಂದು ಹೇಳಬರುವಂತಿತ್ತು. ಯಾರಿಗೂ ಹೊರಬರಲು ಸಾಧ್ಯವಾಗದಂತಿತ್ತು. ಅಂತಹ ರಾತ್ರಿಯ ನಡುಜಾವದಲ್ಲಿ—

446. ಭಕ್ತಿಯು ತನ್ನ ಮನಸ್ಸನ್ನು ವಶಪಡಿಸಿಕೊಂಡಿರಲು, ಉತ್ಸಾಹವನ್ನು ತಂದುಕೊಂಡು, ಮೊಳಕೆ ಬತ್ತವನ್ನು ತುಂಬಿಸಿ ತರಲು ಒಂದು ದೊಡ್ಡ ಬುಟ್ಟಿಯನ್ನು ತಲೆಯ ಮೇಲೆ ಕವುಚಿಟ್ಟುಕೊಂಡು, ಯಾವಾಗಲೂ ಬಳಕೆಯಿದ್ದ ಗದ್ದೆಯ ದಾರಿಯಲ್ಲಿ ನಡೆದು, ನೀರುಹಕ್ಕಿಗಳು ನಿದ್ರಿಸುವ ಗದ್ದೆಯನ್ನು ಇಳೆಯಾನ್ ಗುಡಿಮಾಱ ನಾಯನಾರನು ಪ್ರವೇಶಿಸಿದನು.

447. ಕಾಲುಗಳಿಂದ ದಾರಿಯನ್ನು ತಡವಿ ತಿಳಿಯುತ್ತಾ ನಡೆದು ಗದ್ದೆಯಲ್ಲಿ ಮಳೆನೀರು ಹರಿಯುವ ದಾರಿಯಲ್ಲಿ ಒಂದೊಂದು ಕಡೆಯಲ್ಲಿ ಸೇರಿದ ಬತ್ತದ ಬಿಳಿ ಮೊಳಕೆಗಳನ್ನು ಕೈಗಳಿಂದ ಸೇರಿಸಿ ಬಾಚಿ ತೆಗೆದು ಬುಟ್ಟಿ ತುಂಬಾ ತುಂಬಿಸಿಕೊಂಡು, ಬುಟ್ಟಿಯನ್ನು ಮೇಲೆತ್ತಿ ತಲೆಯಮೇಲಿಟ್ಟುಕೊಂಡವನಾಗಿ ಅತಿ ಶೀಘ್ರವಾಗಿ ಮನೆಗೆ ಹಿಂತಿರುಗಿ ಬಂದನು.

---

445. ಎಣ್ಣಿ ಮಿಪ್ಪುಲ ಕತ್ತವರ್ ಯಾವರು
ನ್ತ್ತಣ್ಣಿ ನುಪ್ಪುಟ ತೋನ್ಱಮುನ್ ಱೋನ್ಱಿಟಲ್
ವಣ್ಣ ನೀಟಿಯ ಮೈಕ್ಕುಟಿವುವ್ ಪಾಮೆನ್ಱು
ನಣ್ಣಲ್ ಚೆಯ್ಯಾ ನಟುವಿರುಳ್ ಯಾಮತ್ತು,

446. ಉಳ್ಳ ಮನ್ಪುಕೊ ಣ್ಟೂಕ್ಕವೋರ್ ಪೇರಿಟಾ
ಕ್ಕೊಳ್ಳ ಮುನ್ಕವಿ ತ್ತುಕ್ಕುಟೈ ಯಿನ್ನಟೈ
ಪ್ಪುಳ್ಳು ಱಙ್ಕುಮ್ ವಯಲ್ಪ್ಪುಕ ಪ್ಪೋಯಿನಾರ್
ವಳ್ಳ ಲಾರಿಳೈ ಯಾನ್ಕುಟಿ ಮಾಱನಾರ್.

447. ಕಾಲಿ ನಾಱ್ಱಟ ವಿಚ್ಚೆನ್ಱು ಕೈಕಳಾಱ್
ಚಾಲಿ ವೆಣ್ಮುಳೈ ನೀರ್ವಟಿ ಚ್ಚಾರ್ನ್ತನ
ಕೋಲಿ ವಾರಿ ಯಿಟಾನಿಱೈ ಯಕ್ಕೊಣ್ಟು
ಮೇಲೆ ಟುತ್ತು ಚ್ಚುಮನ್ತೊಲ್ಲೈ ಮಿಣ್ಟನರ್.

448. ನಾಯನಾರನು ತಿರುಗಿ ಮನೆಗೆ ಬಂದಮೇಲೆ, ಮನೆಯ ಬಾಗಿಲಲ್ಲಿ ನಿಂತು ಪ್ರತೀಕ್ಷಿಸುತ್ತಿದ್ದ ಅವನ ಹೆಂಡತಿಯು, ಅವರು ಕೊಂಡುಬಂದ ನೆಲ್ಲಿನ ಮೊಳಕೆಗಳಿಂದ ತುಂಬಿದ ಬುಟ್ಟಿಯನ್ನು ತೆಗೆದುಕೊಂಡು, ಮನಸ್ಸಿನಲ್ಲಿ ಹೆಚ್ಚಿನ ಆಶೆಯುಳ್ಳವಳಾಗಿ, ನೆಲ್ಲಮೊಳಕೆಯಲ್ಲಿ ಸೇರಿದ್ದ ಕೆಸರನ್ನು ನೀರಿನಿಂದ ತೊಳೆದು, ಆ ನೀರನ್ನು ಚೆಲ್ಲಿದಮೇಲೆ ತನ್ನ ಪತಿಯೊಡನೆ, 'ಈ ಬತ್ತವನ್ನು ಬೇಯಿಸಲು ಬೆಂಕಿ ಹಚ್ಚಲು ಕಟ್ಟಿಗೆಯಿಲ್ಲ' ಎಂದು ಹೇಳಲು, ಹಿರಿಯ ಭಕ್ತನಾದ ನಾಯನಾರನು, ಅಂದವಿಲ್ಲದ ಪುರಾತನದ ತಮ್ಮ ಮನೆಯ ಮಾಡಿನ ನಿಡಿದಾದ ಸೂರನ್ನೇ ಕಟ್ಟಿಗೆಗಾಗಿ ತುಂಡುಮಾಡಿ ಕೊಟ್ಟನು.

449. ಆ ರೀತಿ ತುಂಡರಿಸಿ ಬೀಳಿಸಿದ ಸೂರಿನ ಬಿದಿರು ಇತ್ಯಾದಿಗಳನ್ನು ಮುರಿದು ಒಲೆಯನ್ನುರಿಸಿ, ಅದರಲ್ಲಿ ನೆಲ್ಲ ಮೊಳಕೆಗಳನ್ನು ಸರಿಯಾಗಿ ಒಣಗಿಸಿದಮೇಲೆ, ಅವನ್ನು ಅಕ್ಕಿಯಾಗಿ ಕುಟ್ಟಿ ತೆಗೆದು, ಶುದ್ಧಮಾಡಿ, ಎಸರಿಗಿಟ್ಟು, ಇನಿದಾದ ಉಣಿಸನ್ನು ತಯಾರಿಸಿದಮೇಲೆ ಪಾತಿವ್ರತ್ಯದಲ್ಲಿ ಮೇಲೇನಿಸಿಕೊಂಡ ಆ ಸತಿಯು 'ಪದಾರ್ಥಕ್ಕೆ ಏನನ್ನು ಮಾಡಲಿ ?' ಎಂದು ಹೇಳಿ ತನ್ನ ಪತಿಯನ್ನು ನಮಿಸಿದಳು.

450. 'ಮಾರ್ಗ ಪರಿಶ್ರಮದಿಂದ ಮೊದಲೇ ಬಳಲಿದ ನಮ್ಮ ಸ್ವಾಮಿಯು ಹಸಿವಿನಿಂದ ಬಹುವಾಗಿ ಕಷ್ಟಪಡುವರು' ಎನ್ನುವ ಪ್ರೀತಿಯಿಂದ ನಾಯನಾರನು ಒಡನೆಯೇ ಎದ್ದು ತಮ್ಮ ತೋಟಕ್ಕೆ ಹೋಗಿ ಅಲ್ಲಿ ಮೊಳೆಸಿ ಇಟ್ಟಿರುವ, ಕುಳಿಗಳಿಂದ ಹೊರಬರುವ ಹರಿವೆ ಮೊದಲಾದ ಸೊಪ್ಪುಗಳನ್ನು ಕೈಯಿಂದ ತಡವಿ, ಬಂಧಪಾಶದ ಬೇರನ್ನೇ ಹರಿಯುವವನಂತೆ ಅವುಗಳನ್ನು ಬೇರೊಡನೆ ಕಿತ್ತು ತಂದು ಪದಾರ್ಥಕ್ಕಾಗಿ ತನ್ನ ಹೆಂಡತಿಯ ಕೈಯಲ್ಲಿ ಕೊಟ್ಟನು.

---

448. ವನ್ದಪಿನ್ ಮನ್ನೈವಿ ಯಾರುಮ್ ವಾಯ್ತ್ತಲಿ ನಿನ್ಱು ವಾಙ್ಗಿ
ಚ್ಚಿನ್ದೈಯಿಲ್ ವಿರುಪ್ಪಿ ನೀರಿಱ್ ಚೇಱ್ಱಿನೈ ಯಲಪ್ಪಿ ಯೂಱ್ಱಿ
'ವೆನ್ದಟಿ ಲಟುಪ್ಪಿನ್ ಮಾಟ್ಟ ವಿಱಕಿಲ್ಲೈ' ಯೆನ್ನ, ಮೇಲೋರ್
ಅನ್ದಮಿಲ್ ಮನ್ನೈಯಿ ನೀಟು ಮಲಕ್ಕಿನೈ ಯಱುತ್ತು ವೀಟ್ತ್ತಾರ್.

449. ಮುಱಿತ್ತವೈ ಯಟುಪ್ಪಿನ್ ಮಾಟ್ಟ ಮುಳೈವಿತ್ತು ಪ್ಪತಮುನ್ ಕೊಳ್ಳ
ವಱುತ್ತಪಿನ್ ನರಿಚಿ ಯಾಕ್ಕಿ ವಾಕ್ಕಿಯ ವುಲೈಯಿಱ್ ಪೆಯ್ತ್ತು
ವೆಱುಪ್ಪಿಲಿನ್ ನಟಿಚಿ ಲಾಕ್ಕಿ ಮೇಮ್ಪಟು ಕಟಿಪ್ಪಿನ್ ಮಿಕ್ಕಾರ್
'ಕಱಿಕ್ಕಿನಿ ಯೆನ್ಚೆಯ್ ಕೋ' ವೆನ್ ಱಿಱೈಞ್ಚಿನಾರ್ ಕಣವ ನಾರೈ.

450. 'ವಟಿವರು ಮಿಳೈಪ್ಪಿ ನೋಟುಮ್ ವರುತ್ತಿಯ ಪಚಿಯಿ ನಾಲೇ
ಯಟಿವುಱು ಮೈಯ' ನೆನ್ನು ಮನ್ಪಿನಿಱ್ ಪೊಲಿನ್ದು ಚೆನ್ಱು
ಕುಟಿನಿರಮ್ ಪಾತ ಪುನ್ಚೆಯ್ ಕ್ಕುಱಮ್ಪಯಿರ್ ತಟವಿ ಪ್ಪಾಚ
ಪ್ಪಟಿಮುತಲ್ ಪಱಿಪ್ಪಾರ್ ಪೋಲ ಪ್ಪಱಿತ್ತವೈ ಕಱಿಕ್ಕು ನಲ್ಕ,

451. ಪತಿಯು ಮನಸ್ಸಂತೋಷದಿಂದ ತಂದ ತರಕಾರಿಗಳನ್ನು ಅವಳು ಎಲೆ ಬೇರೆ, ದಂಟು ಬೇರೆಯಾಗಿ ಮಾಡಿ ಆಯ್ದು ತೆಗೆದು, ಹರಿವೆಯನ್ನು ನೀರಲ್ಲಿ ತೊಳೆದು, ಪರಿಶುದ್ಧವಾದ ಪಾತ್ರದಲ್ಲಿಟ್ಟು, ಅಡುಗೆಯ ಅನುಭವ ನೈಪುಣ್ಯದಿಂದ, ಬೇರೆ ಬೇರೆಯಾಗಿ ಹಲವು ಪದಾರ್ಥಗಳಾಗಿ ಅಡುಗೆ ಮಾಡಿ, ಹಿಂದಿನ ಭಾಗ್ಯಕಾಲದ ನೆನಪಿನಿಂದ ಈಗ ಬಂದಿರುವ ಕೊರತೆಯನ್ನು ನೆನೆದು ವ್ಯಸನಪಟ್ಟು, ಆಮೇಲೆ ಮನಸ್ಸನ್ನು ತಿಳಿಯಾಗಿಸಿ, ಖಾದ್ಯಪದಾರ್ಥಗಳೆಲ್ಲವನ್ನೂ ತಯಾರಿಸಿ ಮುಗಿಸಿದಳು.

452. ಆಮೇಲೆ ಅಡುಗೆಯಾದ ಎಲ್ಲಾ ಪದಾರ್ಥಗಳನ್ನೂ ಪತಿಗೆ ತೋರಿಸಿ, 'ಇನ್ನು ಹಿರಿಯರಾದ ಆ ಯೋಗಿಗಳನ್ನು ನಾವು ಭೋಜನ ಮಾಡಲು ಹೇಳುವ' ಎಂದು ಹೇಳಲು, ಚಿಂತನೆಗೆ ಸಿಗದ ಏಕಮೇವವಾದ ನಿದ್ರಿಸುತ್ತಿದ್ದ ಆ ಅತಿಥಿಗಳ ಸಮೀಪ ಸೇರಿದನು.

453. 'ದುಃಖಸಾಗರದಲ್ಲಿ ತಡಿಗಾಣದೆ ಬಳಲಿರುವ ದಾಸನನ್ನು ಅನುಗ್ರಹಿಸುವ ಉದ್ದೇಶದಿಂದ ಬಂದ ಹಿರಿಯರೇ! ಶೀಘ್ರವಾಗಿ ಎದ್ದು ಭೋಜನಮಾಡಿ ಅನುಗ್ರಹಿಸಿರಿ' ಎಂದು ಭಕ್ತಸೇವೆಯಲ್ಲಿ ಸದಾ ನಿರತನಾದ ನಾಯನಾರನು ಹೇಳಲು, ಯೋಗಿಗಳಾಗಿ ಬಂದು ನಿದ್ರಿಸುತ್ತಿದ್ದವರು, ಜ್ಯೋತಿರ್ಮಯವಾಗಿ ಎದ್ದು ತೋರಲು, ಭಾಗ್ಯವಂತನಾದ ನಾಯನಾರನೂ ಅವನ ಪತ್ನಿಯೂ ಪರವಶತೆಯನ್ನು ಹೊಂದಿ ನಿಂತರು.

---

451. ಮನ್ನೈವಿಯಾರ್ ಕೊೞುನರ್ ತನ್ದ ಮನಮಕಿೞ್ ಕೞಿಕ ಳಾಯ್ನ್ದು
ಪುನಲಿಟ್ಟೈ ಕೞುವಿ ತ್ತಕ್ಕ ಪುನಿತಪಾ ತ್ತಿರತ್ತು ಕ್ಕೈಯ್ಮೆಯ್ಯ
ವಿನೈಯಿನಾಲ್ ವೇಱು ವೇಱು ಕಱಿಯಮು ತಾಕ್ಕಿ ಪ್ಪಣ್ಡೈ
ನಿನೈವಿನಾಱ್ ಕುಱೈಕ್ಕೈವೈ ನೇರ್ನ್ದು ತಿರವಮು ತಮೈತ್ತು ನಿನ್ಱು,

452. ಕಣವನಾರ್ ತಮ್ಮೈ ನೋಕ್ಕಿ ಕ್ಕಱಿಯಮು ತಾನ ಕಾಟ್ಟಿ
'ಯಿಣೈಯಿಲಾ ತವರ್ೈ ಯಿಣ್ಣು ವಮುತುಚೆಯ್ ವಿಪ್ಪೋ' ಮೆನ್ನ
ಉಣರ್ವಿಲಾ ಲುಣರ ವೊಣ್ಣಾ ವೊರುವರೈ ಯುಣರ್ತ್ತ ವೇಣ್ಟಿ
ಯಣೈಯಮುನ್ ಚೆನ್ಱು ನಿನ್ಱಿ ಙ್ಕವರ್ತುಯಿ ಲಕಱ್ಱ ಲುಱ್ಱಾರ್.

453. ಅೞುನ್ದಿಯ ವಿಟರು ಣೀಙ್ಕಿ ಯಟಿಯನೇ ನುಯ್ಯ ವೆನ್ಪಾಲ್
ಎೞುನ್ದರುಳ್ ಪೆರಿಯೋ! ಯಿಣ್ಣು ವಮುತುಚೆಯ್ ತರುಳ್ಕ' ವೆನ್ಱು
ತೊೞುಮ್ಪನಾ ರುರೈತ್ತ ಪೋತಿಱ್ ಚೋತಿಯಾ ಯೆೞುನ್ದು ತೋನ್ಱ
ಚ್ಚೆೞುನ್ದಿರು ಮನೈವಿ ಯಾರು ನೊನ್ದಣ್ಟರು ನಿಱೈತ್ತು ನಿನ್ಱಾರ್.

454. ಹೆರಿಯಜರಿಗೂ ತಿಳಿಯಲು ಸಾಧ್ಯವಿಲ್ಲದ ಪರಶಿವನು ಅನುಗ್ರಹಿಸಿ ಬಂದ ಶಿವಯೋಗಿಯ ರೂಪು ಇಂದು ಜ್ಯೋತಿಯಾಗಿ ತೋರಲು, ಅದನ್ನು ಕಂಡು ಏನೊಂದೂ ತೋರದೆ ತನ್ಮಯತೆಯಿಂದ ನಿಂತ ಭಕ್ತನಿಗೆ ತಿಳಿಸುವಂತೆ, ಶಂಕರನು ತಾನೇ ಸಂತೋಷ ಗೊಂಡವನಾಗಿ, ಸುವಾಸನೆಯಿಂದ ಕೂಡಿದ ನೀಳವಾದ ಕೂದಲುಗಳಿರುವ ಉಮಾದೇವಿ ಯೊಡನೆ ವೃಷಭವಾಹನದ ಮೇಲಿದ್ದು ದರ್ಶನವನ್ನು ಕೊಟ್ಟು, ಸನ್ಮಾರ್ಗಯುಕ್ತನಾಗಿ ಭಕ್ತಕೈಂಕರ್ಯವನ್ನು ಮಾಡಿಕೊಂಡು ಬಂದ ನಾಯನಾರನನ್ನು ನೋಡಿ—

455. 'ಎಲೈ ಭಕ್ತನೇ, ಭಕ್ತರ ಪೂಜೆಯನ್ನು ಸ್ವಲ್ಪವೂ ದೋಷವಿಲ್ಲದೆ ಎಚ್ಚರಿಕೆಯಿಂದ ಮಾಡಿಕೊಂಡು ಬಂದ ನೀನು, ನಿನ್ನ ಹೆಂಡತಿಯೊಡನೆ ಶಿವಲೋಕ ವನ್ನು ಸೇರುವೆ. ಕುಬೇರನು ತಾನೇ ನಿನ್ನೆದಿರಲ್ಲಿ ದೊಡ್ಡ ನಿಧಿಗಳನ್ನು ತಾಳಿಕೊಂಡು ನಿನ್ನ ಮಾತುಗಳನ್ನೇ ಆಜ್ಞೆಯಂತೆ ಗಣಿಸಿ ಶಿರಸಾವಹಿಸಿ ನಿಲ್ಲಲು, ಎಣೆಯಿಲ್ಲದ ನಿತ್ಯಾ ನಂದವನ್ನು ಅನುಭವಿಸಿಕೊಂಡು ನಿತ್ಯವಾಗಿ ಬಾಳುವೆ' ಎಂದು ಅನುಗ್ರಹಿಸಿದನು.

456. ಈ ಪರಿಯಲ್ಲಿ ಇವರಿಗೆ ತಕ್ಕುದಾದ ಸುಖವನ್ನು ಕೊಟ್ಟು, ಆಮೇಲೆ ತ್ರಿಪುರವನ್ನು ದಹಿಸಿದ ಪರಮೇಶ್ವರನು ಭಕ್ತನ ಮುಂದೆ ತೋರಿದ ಪ್ರತ್ಯಕ್ಷ ನೆಲೆಯಿಂದ ತನ್ನ ವ್ಯಾಪಕನೆಲೆಗೆ ಅನುಗ್ರಹಿಸಿ ಹೋದನು. ಆ ಹಿರಿಯವನಾದ ಇಳೆಯಾನ್ ಗುಡಿಮಾಱ ನಾಯನಾರನ ಪರಿಶುದ್ಧವಾದ ಶ್ರೀಪಾದಗಳನ್ನು ತಲೆಯ ಮೇಲೆ ಧರಿಸಿ ಕೊಂಡು, ಅದರ ಸಹಾಯದಿಂದ ಮೆಯ್‌ಪೊರುಳ್ (ಸತ್ಯವಾದ ವಸ್ತು) ಎಂಬ ಹೆಸರುಳ್ಳ, ಚೇದಿನಾಡ ಅರಸನ ಚರಿತೆಯನ್ನು ಹೇಳತೊಡಗುವೆನು.

---

454. ಮಾಲಯಱ್ ಕರಿಯ ನಾತನ್ ವಟಿವೊರು ಚೋತಿ ಯಾಕ
ಚ್ಚಾಲವೇ ಮಯಙ್ಗು ವಾರ್ಕ್ಕು ಚ್ಚಙ್ಕರನ್ ಱಾನ್ಮ ಕಿೞ್ನ್ದೇ
ಯೇಲವಾರ್ ಕುೞಲಾ ಟನ್ನೋ ಟಿಟಪವಾ ಕನನಾಯ್ ತ್ತೋನ್ಱಿ
ಚ್ಚೀಲಮಾರ್ ಪೂಚ್ಚೈ ಚೆಯ್ದ ತಿರುತ್ತೊಣ್ಡರ್ ತಮ್ಮೈ ನೋಕ್ಕಿ,

455. ಅನ್ಪನೇ! ಯನ್ಪರ್ ಪೂಚ್ಚೈ ಯಳಿತ್ತನೀ ಯಣಙ್ಗಿ ನೋಟುಮ್
ಎನ್ಪೆರು ಮುಲಕ ಮೆಯ್ದಿ, ಯಿರುನಿತಿ ಕ್ಕಿೞವನ್ ಱಾನೇ
ಮುನ್ಪರು ನಿತಿಯ ಮೇನ್ದಿ ಮೊೞಿವಟಿ ಯೇವಲ್ ಕೇಟ್ಪ,
ಇನ್ಪಮಾರ್ ನ್ದಿರುಕ್ಕ' ವೆನ್ಱೇ ಯರುಳ್ಚೆಯ್ದಾ ನೆವರ್ಕ್ಕು ಮಿಕ್ಕಾನ್.

456. ಇಪ್ಪರಿ ಚಿವರ್ಕ್ಕು ತ್ತಕ್ಕ ವಕೈಯಿನಾ ಲಿನ್ಪ ನಲ್ಕಿ
ಮುಪ್ಪುರ ಙ್ಗೆಚ್ಚಾ ರನ್ಪರ್ ಮುನ್ಪೆಟು ನ್ದರುಳಿ ಪ್ಪೋನಾರ್
ಅಪ್ಪರಿ ಯವರ್ತ ನ್ದಾಯ ವಟಿಯಿನೈ ತಲೈಮೇಱ್ ಕೊಣ್ಡು
ಮೆಯ್ಪ್ಪೊರುಟ್ ಚೇತಿ ವೇನ್ದನ್ ಚೆಯಲಿನೈ ವಿಳಮ್ಪ ಲುಱ್ಱೇನ್.

5. ಮೆಯ್‌ಪ್ಪೊರುಳ್ ನಾಯನಾರ

457. ನಲ್ಮೆಯ ಚೇದಿನಾಡಿನ ತಿರುಕ್ಕೋವಲೂರಲ್ಲಿ ಅರಸಾಳ್ವಿಕೆಯನ್ನು ಮಾಡುತ್ತ, ಶಿವಭಕ್ತಿಯಲ್ಲಿ ಪರಂಪರಾಗತವಾಗಿ ಆಸ್ಥೆಯನ್ನಿಡುತ್ತ ಬರುವವನು ಮಲಾಡರ ಅರಸನಾದ 'ಮೆಯ್‌ಪ್ಪೊರುಳ್ ನಾಯನಾರ' ಎಂಬವನು. ಇವನು ವೇದ ಸನ್ಮಾರ್ಗದ ಸತ್ಯಸ್ವಭಾವವನ್ನು ಲೋಕದಲ್ಲಿ ಬೆಳಗಿಸುವಂತಹ ಮಹಿಮೆಯಿಂದ ಕೂಡಿದವನು. ಮಿಕ್ಕಿದ ಭಕ್ತಿಯಿಂದ ಈಶ್ವರನ ಭಕ್ತರ ನೆನಹನ್ನು ತಿಳಿದು ಅವರ ಆಜ್ಞೆಯನ್ನು ಶಿರಸಾವಹಿಸಿ ನೆರವೇರಿಸುತ್ತಾ ಬರುವವನು.

458. ಅರಸಾಳ್ವಿಕೆಯ ಧರ್ಮಮಾರ್ಗಗಳಲ್ಲಿ ಬರುವ ದೋಷಗಳನ್ನು ಪರಿಹರಿಸಿ ಪರ್ವತದಂತೆ ಉಚ್ಚವಾದ ತೋಳಿನ ಬಲದಿಂದ ಹಗೆಗಳನ್ನು ಯುದ್ಧದಲ್ಲಿ ಜೈಸಿ, ಹಿಂದಿನವರು ಹೇಳಿದ ಸನ್ಮಾರ್ಗಗಳಲ್ಲಿ ಕೊಂಚವೂ ತಪ್ಪದೆ ಸ್ಥಿರವಾಗಿ ನಿಲ್ಲುವವರಾಗಿ ಅಲೆಯಿಂದ ಕೂಡಿದ ಗಂಗೆಯನ್ನು ಧರಿಸಿದ ಪರಮೇಶ್ವರನ ಭಕ್ತರ ವೇಷವನ್ನು ಸದಾ ಚಿಂತನ ಮಾಡುವವನು.

459. ಉಮಾದೇವಿಯನ್ನು ಒಂದು ಭಾಗದಲ್ಲುಳ್ಳ ಶಿವಪರಮಾತ್ಮನು ನೆಲಸಿರುವ ದೇಗುಲಗಳಲ್ಲೆಲ್ಲಾ ಪೂಜೆಗಳು ತಪ್ಪದೆ ನಡೆದುಬರುವಂತೆಯೂ ಸಪ್ತಸ್ವರಗಳಲ್ಲಿ ಹಾಡುವಿಕೆಗಳಿಂದ ಸೇವಿಸುವಂತೆಯೂ ನಾಯನಾರನು ವ್ಯವಸ್ಥೆಮಾಡಿದ್ದನು. ಭಕ್ತರ ಪಾದಗಳನ್ನೇ ಆಶ್ರಯವನ್ನಾಗಿ ಅವನು ಎಣಿಸಿದ್ದನು.

---

5. ಮೆಯ್‌ಪ್ಪೊರುಣಾಯನಾರ್

457. ಚೇತಿನನ್ ನಾಟ್ಟನೀಟು ತಿರುಕ್ಕೋವ ಲೂರಿನ್ ಮನ್‌ನಿ
ಮಾತೊರು ಪಾಕ ರನ್‌ಪಿನ್ ವಟಿವರು ಮಲಾಟರ್ ಕೋಮಾನ್
ವೇತನನ್ ನೆಱಿಯಿನ್ ವಾಯ್‌ಮೈ ವಿಳಙ್ಕಿಟ ಮೇನ್‌ಮೈ ಪೂಣ್ಟು
ಕಾತಲಾ ಲೀಚರ್ ಕ್ಕನ್‌ಪರ್ ಕರುತ್ತಱಿ ನ್ತೇವಲ್ ಚೆಯ್ವಾರ್;

458. ಅರಚಿಯ ನೆಱಿಯಿನ್ ವನ್ತ ವಜಿನೆಱಿ ವಟಾಮಱ್ ಪುಲ್ಲಿ
ವರೈನೆಟು ನ್ತೋಳಾಲ್ ವೆನ್‌ಱು ಮಾಱ್ಱಲರ್ ಮುನೈಕಣ್ ಮಾಱ್ಱಿ
ಯುರೈತಿಱಮ್ ಪಾತ ನೀತಿ ಯೋಙ್ಕುನೀರ್ ಮೈಯಿನಿನ್ ಮಿಕ್ಕಾರ್
ತಿರೈಚೆಯ್‌ನೀರ್ ಚ್ಚಟೈಯಾ ನನ್‌ಪರ್ ವೇಟಮೇ ಚಿನ್‌ತ್ತೈ ಚೆಯ್ವಾರ್.

459. ಮಙ್ಕೈಯೈ ಪ್ಪಾಕ ಮಾಕ ವುಟೈಯವರ್ ಮನ್‌ನು ಙ್ಕೋಯಿಲ್
ಎಙ್ಕಣುಮ್ ಪೂಚೈ ನೀಟ ಯೇಟಿಚೈ ಪ್ಪಾಟ ಲಾಟಲ್
ಪೊಙ್ಕಿಯ ಚಿಙಪ್ಪಿನ್ ಮಲ್ಕ ಪೋಱ್ಱುತಲ್ ಪುರಿನ್ತು ವಾಙ್ವಾರ್,
ತಙ್ಕಣಾ ಯಕನು ಕ್ಕನ್‌ಪರ್ ತಾಳಲಾಱ್ ಚಾರ್ಪೊನ್ ಱಿಲ್ಲಾರ್,

460. ರಾಜಾದಾಯದಲ್ಲಿ ಸಂಪಾದಿಸಿದ ವಸ್ತುಗಳೂ ನಿಡಿದಾದ ಭಾಗ್ಯಗಳೂ ಚಿದಂಬರದಲ್ಲಿ ಪಂಚಕೃತ್ಯ (ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹ) ನಟನ ವನ್ನಾಡುವ ಶಿವಪರಮಾತ್ಮನ ಭಕ್ತರಿಗಾಗಿಯೇ ಮೀಸಲಾಗಿರುವುವು ಎಂದು ತಿಳಿದವ ನಾಗಿ ತಮ್ಮನ್ನು ಆಳಾಗಿಸಿಕೊಳ್ಳುವ ನಾಯನಾರನು ಶಿವಭಕ್ತರು ಸೇರಿದಾಗ ಹೆಚ್ಚಿನ ಸಂತೋಷದಿಂದ ಆ ಭಾಗ್ಯಗಳನ್ನು ಬೇಡಿದಷ್ಟು ಕೊಡುತ್ತಾ ಬಂದನು.

461. ಈ ರೀತಿ ಇವನು ನಡೆದು ಬರುವ ಕಾಲದಲ್ಲಿ ಒಬ್ಬ ಅರಸನು ಇವನೊಡನೆ ಹಗೆಗೊಂಡು, ಇವನನ್ನು ಗೆಲ್ಲುವ ಆಶೆಯಿಂದ ಯುದ್ಧಮಾಡಲು ಏರಿಬಂದು ತನ್ನ ಚಿನ್ನದ ನೆತ್ತಿಪಟ್ಟದಿಂದ ಅಲಂಕೃತವಾದ ಆನೆ, ಯುದ್ಧದ ಕುದುರೆ, ಕಾಲಾಳು ಮೊದಲಾದ ಹಲವನ್ನು ಕಳೆದುಕೊಂಡವನಾಗಿ, ಹಲಬಾರಿ ಸೋತು ಅವಮಾನ ಹೊಂದಿ ಹಿಂತಿರುಗಿ ಹೋದನು.

462. ಹೀಗೆ ಸೋತುಹೋದ ವೈರಿ ರಾಜನು ಯುದ್ಧಮುಖದಲ್ಲಿ ನಾಯನಾರ ನನ್ನು ಗೆಲ್ಲಲಾರದವನಾಗಿ, ಮೆಯ್‌ಪೊರುಳ್ (ಸತ್ಯವಸ್ತು) ಅರಸರ ಶೈವಶೀಲವನ್ನು ತಿಳಿದುಕೊಂಡು, ವಿಭೂತಿಯನ್ನು ಧರಿಸಿಕೊಳ್ಳುವ ಹಿರಿಯ ವೇಷವನ್ನು ಧರಿಸಿ, ವಂಚನೆ ಯಿಂದ ಗೆಲ್ಲಬೇಕೆಂಬ ಮಾತಿನಲ್ಲಿಯೂ ಹೇಳಬಾರದಂತಹ ಆ ನೆಲೆಯನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ತಿರುಕ್ಕೋವಲೂರಿನೊಳಗೆ ಸೇರುವುದಕ್ಕಾಗಿ,

---

460. ತೇಟಿಯ ಮಾಟು ನೀಟು ಚೆಲ್ವಮು ನ್ತಿಲ್ಲೈ ಮನ್ಱುಳ್
ಆಟಿಯ ಪೆರುಮಾ ನನ್‌ಪರ್ ಕ್ಕಾವನ ವಾಕು ಮೆನ್ಱು
ನಾಟಿಯ ಮನತ್ತಿ ನೋಟು ನಾಯನ್‌ಮಾ ರಣೈನ್ತು ಪೋತು
ಕೂಟಿಯ ಮಕಿಟ್‌ಚ್ಚಿ ಪೊಙ್ಗ ಕ್ಕುಱೈವಱಿ ಕ್ಕೊಟುತ್ತು ವನ್ತಾರ್.

461. ಇನ್‌ನವಾ ಱೊಟುಕು ನಾಳಿ ಲಿಕಲ್ಱಿಱಿವ್ ಪುರಿನ್ತೋರ್ ಮನ್‌ನನ್
ಅನ್‌ನವರ್ ತಮ್ಮೈ ವೆಲ್ಲು ಮಾಚ್ಚೈಯಾ ಲಮರ್‌ಮೇಱ್ ಕೊಣ್ಟು
ಪೊನ್‌ನಣಿ ಯೋಟೈ ಯಾನೈ ಪೊರುಪರಿ ಕಾಲಾಳ್ ಮಱ್ಱುಮ್
ಪನ್‌ಮುಱೈ ಯಿಟನ್ತು ತೋಱ್ಱು ಪರಿಪವ ಪ್ಪಟ್ಟು ಪ್ಪೋನಾನ್.

462. ಇಪ್ಪಡಿ ಯಿಟನ್ತು ಮಾಱ್ಱಾ ನಿಕಲಿನಾಲ್ ವೆಲ್ಲ ಮಾಟ್ಟಾನ್
ಮೆಯ್‌ಪ್ಪೊರುಳ್ ವೇನ್ತನ್ ಚೀಲ ಮಱಿನ್ತುವೆ ಣ್ಣೀಱು ಚಾತ್ತುಮ್
ಅಪ್ಪೆರು ವೇಟ ಙ್ಕೊಣ್ಟೇ ಯಱ್ಱಿತ್ತಿಲ್ ವೆಲ್ವಾ ನಾಕ
ಚ್ಚೆಪ್ಪರು ನಿಲೈಮೈ ಯೆಣ್ಣಿ ತಿರುಕ್ಕೋವ ಲೂರಿಱ್ ಚೇರ್ವಾನ್.

463. ತನ್ನ ಶರೀರವನ್ನೆಲ್ಲಾ ವಿಭೂತಿಯಿಂದ ಲೇಪಿಸಿಕೊಂಡು, ಜಡೆಗಳನ್ನು ಮುಡಿಯಾಗಿ ಕಟ್ಟಿಕೊಂಡು, ಕೈಯಲ್ಲಿ ಆಯುಧವನ್ನು ಮರೆಯಾಗಿಟ್ಟುಕೊಂಡು, ಪುಸ್ತಕದಂತೆ ಕಟ್ಟಿದ ಒಂದು ಚೀಲವನ್ನು ಧರಿಸಿಕೊಂಡು, ಕಾಡಿಗೆಯನ್ನು ಒಳಗಿಟ್ಟುಕೊಂಡು ಹೊರಗೆ ಪ್ರಕಾಶವನ್ನು ತೋರುವ ದೀಪವೇ ಎಂದು ಹೇಳುವಂತೆ, ಮನದೊಳಗೆ ವಂಚನೆಯನ್ನು ಹೊದೆದಿಟ್ಟು, ಅಸತ್ಯವನ್ನು ಮರೆಸಿದ ತಪೋವೇಷವನ್ನು ಧರಿಸಿ, ಮುತ್ತನಾಥನೆಂಬ ಆ ಅರಸನು ನಗರದೊಳಗೆ ಪ್ರವೇಶಿಸಿದನು.

464. ಹಿರಿಯ ತಪೋವೇಷವನ್ನು ತಾಳಿದ ಆ ದುಷ್ಟನು ಮನೆಗಳಲ್ಲೆಲ್ಲಿಯೂ ಮಾಲೆಸುತ್ತಿದ ಮುಡಿಗಳಿರುವ ಕರ್ಣಾಭರಣಗಳಿರುವ ಕ್ಕುಡಿಗಳು (ಬಳ್ಳಿಯಂತೆ ಮೈಯಿರುವ ನರ್ತಕಿಯರು) ಆಡಲು (ನಟನವಾಡಲು), ಮನೆಗಳ ಮೇಲೆ ಕಾಂತಿಯುಕ್ತವಾದ ಬಿಳಿ ಕೊಡೆಗಳು (ಪತಾಕೆಗಳು) ಆಡಲು, ಅಂತಹ, ಪ್ರಕಾಶಯುಕ್ತವಾದ ಬೀದಿಯ ದಾರಿಯಾಗಿ, ಚೇದಿನಾಡ ಅರಸರುಗಳಿಗೆ ಅರಸನಾದ ಮೆಯ್ಪೊರುಳ್ ನಾಯನಾರನ ಅರಮನೆಯ ಹೆಬ್ಬಾಗಿಲಿಗೆ ಬಂದನು.

465. ಅಲ್ಲಿ ಕಾವಲಿದ್ದ ಕಾವಲಾಳುಗಳು ಮುತ್ತನಾಥನು ಒಳಪ್ರವೇಶಿಸಿದುದನ್ನು ಕಂಡು, ಅವನಿಗೆ ಕೈಮುಗಿದು ದಾರಿಬಿಟ್ಟು ನಿಂತು, ನಮ್ಮನ್ನು ಆಳಾಗಿ ಉಳ್ಳವರಾದ ಶಿವಭಕ್ತರು ತಾವೇ ಬಂದರು ಎಂದು, 'ಒಳಗೆ ದಯಮಾಡಿರಿ' ಎಂದು ಹೇಳಲು, ಅದೇ ರೀತಿ ಅರಮನೆಯ ಹಲಬಾಗಿಲುಗಳನ್ನು ದಾಟಿ ಹೋದಮೇಲೆ ಕೊನೆಯದಾಗಿರುವ ಪ್ರತ್ಯೇಕವಾದ ಬಾಗಿಲಿಗೆ ಕಾವಲಾಗುಳ್ಳ 'ತತ್ತನ್' ಎಂಬವನು 'ಸಮಯವನ್ನು ನೋಡಿ ಸ್ವಾಮಿಗಳು ಮನ್ನಿಸಬೇಕು. ನಮ್ಮ ಒಡೆಯರು ನಿದ್ರಿಸುತ್ತಿದ್ದಾರೆ' ಎಂದು ಹೇಳಿದನು.

---

463. ಮೆಯ್ಯೆಲಾ ನೀಱು ಪೂಚಿ ವೇಣಿಕಣ್ ಮುಟಿತ್ತು ಕ್ಕಟ್ಟಿ
ಕೈಯಿನಿಱ್ ಪಟ್ಟೈಕ ರನ್ದ ಪುತ್ತಕ ಕ್ಕವಳಿ ಯೇನ್ದಿ
ಮೈಪೊತಿ ವಿಳಕ್ಕೇ ಯೆನ್ನ ಮನತ್ತಿನುಟ್ ಕಱುಪ್ಪು ವೈತ್ತು
ಪ್ಪೊಯ್ತ್ತವ ವೇಟ ಜಿಕ್ಕೊಣ್ಡು ಪುಕುನ್ದನನ್ ಮುತ್ತ ನಾತನ್.

464. ಮಾತವ ವೇಟ ಜಿಕ್ಕೊಣ್ಡ ವನ್ಕಣಾನ್ ಮಾಟ ನ್ದ್ತೋಱುಙ್
ಕೋತ್ತೈಚೂ ಟಿಳಕ ಪಾರ ಕ್ಕುಟಿಕ್ಕೈಕ್ಕೊಟಿ ಯಾಟ ಮಿಾತು
ಚೋತಿವೆಣ್ ಕೊಟಿಕ ಳಾಟು ಞ್ಚಟರ್ನೆಟು ಮಱುಕಿಱ್ ಪೋಕಿ
ಚ್ಚೇತಿಯರ್ ಪೆರುಮಾನ್ ಕೋಯಿ ಱ್ರುಮಣಿ ವಾಯಿಲ್ ಚೇರ್ನ್ದಾನ್.

465. ಕಟ್ಟೈಯುಟ್ಟೈ ಕ್ಕಾವಲಾನಾರ್ ಕೈತೊಟು ತೇಱಿ ನಿನ್ಱೇ
'ಯುಟ್ಟೈಯವರ್ ತಾಮೇ ವನ್ದಾ; ರುಳ್ಳೆಟುನ್ದರುಳು' ಮೆನ್ನ
ತ್ತಟೈಪಲ ಪುಕ್ಕ ಪಿನ್ಪು ತನಿತ್ತಟೈ ನಿನ್ಱ ತತ್ತನ್
'ಇಟ್ಟೈತೆರಿ ನ್ದರುಳ ವೇಣ್ಡು; ನ್ದುಯಿಲ್ಕೊಳು ಮಿಱೈವ' ನೆನ್ಱಾನ್.

466. ಈ ರೀತಿ ತಡೆಯುವ ಮಾತುಗಳನ್ನು ತತ್ತನು ಹೇಳಲು, ಅದನ್ನು ಕೇಳಿಯೂ ಮುತ್ತನಾಥನು 'ನಾನು ಅರಸನಿಗೆ ವೈರಾಗ್ಯಸಾಧನೆಯನ್ನು ಹೇಳಲು ಬಂದೆನಾದುದರಿಂದ, ನೀನು ನನ್ನನ್ನು ತಡೆಯದೆ ಸರಿದು ನಿಲ್ಲು' ಎಂದು ಹೇಳಿದನು. ಈ ರೀತಿ ಅವನನ್ನು ನೀಗಿ ಒಳಪ್ರವೇಶಿಸಿ, ಚಿನ್ನದಿಂದ ಪ್ರಕಾಶಿಸುವ ಶಯನಮಂಚದಲ್ಲಿ ಅರಸನು ನಿದ್ರಿಸಿರುವುದನ್ನೂ, ಅವನ ಪಕ್ಕದಲ್ಲಿ ಸುವಾಸನೆಯುಳ್ಳ ಸುಂದರವಾದ ತುರುಬಿನಿಂದಲೂ ಮೆಲ್ಲಿತಾದ ಸ್ವಭಾವದಿಂದಲೂ ಕೂಡಿದ ರಾಜಮಹಿಷಿ ಇರುವುದನ್ನೂ ಕಂಡನು.

467. ಹೀಗೆ ಕಂಡಮೇಲೂ ಒಳಸೇರಿ ಪಕ್ಕದಲ್ಲಿ ಹೋಗುವಾಗ, ಆತನನ್ನು ಕಂಡು ಮಾದೇವಿಯು ಶೀಘ್ರವಾಗಿ ಎದ್ದು, ತುಂಬಿಗಳ ಝೇಂಕಾರಕ್ಕೆಡೆಯಾದ ಮಾಲೆಯಿಂದ ಅಲಂಕೃತನಾದ ಅರಸನನ್ನೆಬ್ಬಿಸಲು, ಅರಸನು ಎದ್ದು, 'ದೇವದೇವನಾದ ಶಿವಪರಮಾತ್ಮನ ಭಕ್ತರು ಇಲ್ಲಿ ಬಂದರು' ಎಂದು ತಲೆಯ ಮೇಲೆ ಕೆಂಪಗಾದ ಕೈಗಳನ್ನು ಮುಗಿದುಕೊಂಡು, ಮಂಚವನ್ನು ಬಿಟ್ಟೆದ್ದು ಇದಿರಾಗಿ ಬಂದು ಭಕ್ತರನ್ನು ನಮಿಸುವ ರೀತಿಯಲ್ಲಿ ನಿಯಮದಂತೆ ನಮಿಸಿ ತಲೆಬಾಗಿ ನಿಂತನು.

468. ಆಮೇಲೆ 'ಶುಭಪ್ರದವಾದ ಭಾಗ್ಯದಾಗಮನದಂತೆ ತಮ್ಮ ಬರೋಣವಾಯಿತು. ತಾವು ದಯೆಮಾಡಿಸಿದ ಕಾರಣವನ್ನು ತಿಳಿಸಬೇಕು' ಎನ್ನಲು, 'ಶಿವಪರಮಾತ್ಮನಿಂದ ಉಕ್ತವಾದ, ಇದುವರೆಗೆ ಈ ಭೂಮಂಡಲದಲ್ಲೇ ಎಲ್ಲಿಯೂ ದೊರಕಿರದ ಅಪೂರ್ವವಾದ ಆಗಮಶಾಸ್ತ್ರವೊಂದನ್ನು ನಿಮಗೆ ತಿಳಿಸುವುದಕ್ಕಾಗಿ ಕೊಂಡುಬಂದಿರುವೆನು' ಎಂದು ಮುತ್ತನಾಥನು ಹೇಳಿದನು.

---

466. ಎನ್ಱವನ್ ಕೂಱ ಕ್ಕೇಟ್ಟೇ 'ಯಾನವಱ್ ಕುಱುತಿ ಕೂಱ
ನಿನ್ಱಿಟು ನೀಯು' ಮೆನ್ಱೇ ಯವನೈಯು ನೀಕ್ಕಿ ಪ್ಪುಕ್ಕು
ಪ್ಪೊನ್ಱಿಕಟ್ ಪಳ್ಳಿ ಕ್ಕಟ್ಟಿಲಿಱ್ ಪುರವಲನ್ ಱುಯಿಲ ಮಾಟೇ
ಮನ್ಱಲ ಱ್ಕುಟಿನ್ಮೆನ್ ಚಾಯನ್ ಮಾತೇವಿ ಯಿರುಪ್ಪು ಕಣ್ಡಾನ್.

467. ಕಣ್ಟುಚೆನ್ ಱಣೈಯುಮ್ ಪೋತು ಕತುಮೆನ ವಿಟಿನ್ತು ತೇವಿ
ವಣ್ಟುಲರ್ ಮಾಲೈ ಯಾನೈ ಯೆಟುಪ್ಪಿಟ ವುಣರ್ನ್ತು ಮನ್ನನ್
'ಅಣ್ಣಲ್ನಾ ಯಕನಾರ್ ತೊಣ್ಟ ರಾ' ಮೆನ ಕ್ಕುವಿತ್ತ ಚೆಙ್ಕೈ
ಕೊಣ್ಟೆಟು ನ್ತೆತಿರೇ ಚೆನ್ಱು ಕೊಳ್ಕೈಯಿನ್ ವಣಙ್ಕಿ ನಿನ್ಱು,

468. 'ಮಙ್ಕಲಮ್ ಪೆರುಕ ಮಱ್ಱಿನ್ ವಾಟ್ವುವ ನ್ತಣೈನ್ತ ತೆನ್ನ
ವಿಙ್ಕಿಟು ನ್ತರುಳ ಪೆಱ್ಱ ತೆನ್ಕೊಲೋ?' ವೆನ್ಱು ಕೂಱ,
'ವುಙ್ಕಣಾಯಕನಾರ್ ಮುನ್ನ ಮುರೈತ್ತವಾ ಕಮನೂನ್ ಮಣ್ ಮೇಲ್
ಎಙ್ಕುಮಿ ಲ್ಲಾತ ತೊನ್ಱು ಕೊಟುವನ್ತೇ ನಿಯಮ್ಪ' ವೆನ್ಱಾನ್.

469. ಅದಕ್ಕೆ ಅರಸನು 'ಇದರಿಂದಲೂ ಮೇಲಾದ ಭಾಗ್ಯವು ಬೇರಿದೆಯೇ? ಪರಮಾತ್ಮನು ಅನುಗ್ರಹಿಸಿದ ಈ ಅಪೂರ್ವ ಆಗಮವನ್ನು ವಾಚಿಸಿ ನನ್ನನ್ನು ಅನುಗ್ರಹಿಸ ಬೇಕು' ಎಂದು ಹೇಳಲು, ಮುತ್ತನಾಥನು 'ಇದನ್ನು ನಾನು ವಾಚಿಸಬೇಕಾದರೆ ನೀನಲ್ಲದೆ ಬೇರೆ ಯಾರೂ ಇಲ್ಲಿರಕೂಡದು. ಸುವಾಸನೆಯುಳ್ಳ ಹೂಮಾಲೆಯಿಂದ ಅಲಂಕಾರ ಮಾಡಿಕೊಂಡ ದೇವಿಯರು ಈ ಎಡೆಯಿಂದ ಹೋಗಬೇಕು' ಎಂದು ಹೇಳಿದನು.

470. ಆಗ ಅರಸನು 'ಲಕ್ಷ್ಮಿಯೇ ಇವಳು' ಎಂದು ಹೇಳುವಂತೆ ಅಲ್ಲಿ ನಿಂತ ದೇವಿಯನ್ನು ನೋಡಿ ಅಂತಃಪುರಕ್ಕೆ ಹೋಗುವಂತೆ ಮನದಲ್ಲಿ ನೆನೆದು ಆಜ್ಞಾಪಿಸಿದ ಮೇಲೆ ತಪೋವೇಷದ ಮುತ್ತನಾಥನನ್ನು ಆಸನದಲ್ಲಿ ಕುಳ್ಳಿರಿಸಿ, ತಾನು ನೆಲದಲ್ಲಿ ಕುಳಿತುಕೊಂಡು ಸ್ತುತಿಸಿ, 'ಈಗ ಅನುಗ್ರಹಿಸಬೇಕು' ಎಂದು ಹೇಳಿದನು.

471. ಮುತ್ತನಾಥನು ಕೈಯಲ್ಲಿಟ್ಟುಕೊಂಡಿದ್ದ ಮೋಸದ ಪುಸ್ತಕಚೀಲವನ್ನು ಮಡಿಲಮೇಲಿಟ್ಟುಕೊಂಡು, ಪುಸ್ತಕದ ಕಟ್ಟು ಬಿಚ್ಚುವವನಂತೆ ನಟಿಸಿ ಅರಸನು ನಮಿಸುವ ಸಮಯವನ್ನು ನೋಡಿ, ಅದರೊಳಗೆ ಮರೆಯಾಗಿಟ್ಟಿದ್ದ ಆಯುಧವನ್ನು ತೆಗೆದು ವೇಗವಾಗಿ ತಾನು ಹಿಂದೆ ನೆನೆದುಕೊಂಡು ಬಂದಂತೆ ಮಾಡಿದವನಾಗಲು 'ಸತ್ಯವಾದ ತಪೋವೇಷವೇ ಸತ್ಯವಾದ ವಸ್ತುವು' ಎಂದು ನಮಿಸಿ ಗೆದ್ದರು ಅರಸರು.

---

469. 'ಪೇಱಿನ ಕ್ಕಿತನ್‌ಮೇ ಲುಣ್ಡೋ? ಪಿರಾನರುಳ್ ಚೆಯ್ತ ವಿನ್ತ
ಮಾಱಿಲಾ ಕಮತ್ತೈ ವಾಚಿ ತ್ತರುಳ್‌ಚೆಯ ವೇಣ್ಡು' ಮೆನ್‌ನ,
'ನಾಱುಪೂ ಙ್ಕೋತೈ ಮಾತು ತವಿರವೇ ನಾನು ನೀಯುಮ್
ವೇಱಿಟ ತ್ತಿರುಕ್ಕ ವೇಣ್ಡು' ಮೆನ್‌ಱವನ್ ವಿಳಮ್ಬ ವೇನ್ತನ್.

470. ತಿರುಮಕ ಳೆನ್‌ನ ನಿನ್‌ಱ ತೇವಿಯಾರ್ ತಮ್ಮೈ ನೋಕ್ಕಿ
ಪ್ಪುರಿವುಟನ್ ವಿರೈಯ ವನ್ತ ಪ್ಪುರತ್ತಿಟ್ಟೈ ಪ್ಪೋಕ ವೇವಿ,
ತ್ತರುತವ ವೇಟ ತ್ತಾನೈ ತ್ತವಿಚಿನ್‌ಮೇ ಲಿರುತ್ತಿ ತ್ತಾಮುಮ್
ಇರುನಿಲ ತ್ತಿರುನ್ತು ಪೋಱ್ಱಿ 'ಯಿನಿಯರುಳ್ ಚೆಯ್ಯು' ಮೆನ್‌ಱಾರ್.

471 ಕೈತ್ತಲ ತ್ತಿರುನ್ತ ವಞ್ಚ ಕ್ಕವಳಿಕೈ ಮಟಿಮೇಲ್ ವೈತ್ತು
ಪ್ಪುತ್ತಕ ಮವಿೞ್‌ಪ್ಪಾನ್ ಪೋನ್‌ಱು ಪುರಿನ್ತವರ್ ವಣಙ್ಕುಮ್ ಪೋತಿಱ್
ಪತ್ತಿರಮ್ ವಾಙ್ಕಿ ತ್ತಾನ್‌ಮುನ್ ನಿನೈನ್ತವ ಪ್ಪರಿಚೇ ಚೆಯ್ಯ
'ಮೆಯ್‌ತ್ತವ ವೇಟ ಮೇಮೆಯ್ ಪ್ಪೊರು' ಳೆನ ತ್ತೊಟುತು ವೆನ್‌ಱಾರ್.

472. ಮುತ್ತನಾಥನು ಒಳಗೆ ಪ್ರವೇಶಿಸಿದ ಹೊತ್ತಿನಿಂದಲೇ ಅಲ್ಲಿ ಲಕ್ಷ್ಯವಿಟ್ಟು ನೋಡಿಕೊಂಡಿರುವವನಾದ ತತ್ತನು ಬಹುವೇಗದಲ್ಲಿ ಆ ಎಡೆಗೆ ಬಂದು ಅವನನ್ನು ಕೊಲ್ಲಲು ಖಡ್ಗವೆತ್ತಿದನು. ಹೆಚ್ಚಾಗಿ ರಕ್ತಸುರಿಯುವುದರಿಂದ ಬೀಳುವವನಾದ ನಾಯನಾರನು ತಾನು ಭೂಮಿಯಲ್ಲಿ ಬೀಳುವ ಸಮಯದೊಳಗೆ 'ತತ್ತಾ, ಇವರು ನಮ್ಮವರೇ ಆಗಿರುವರು' ಎಂದು ಹೇಳಿ ಅವನ ಕಾರ್ಯವನ್ನು ತಡೆದು ಬಿದ್ದನು

473. ವೇದನೆಗೊಂಡು ಬಿದ್ದ ಅರಸನ ಆಜ್ಞೆಯಿಂದ ತಡೆಯಲ್ಪಟ್ಟ ದಾಸನಾದ ತತ್ತನು ಅರಸನನ್ನು ಆಧರಿಸಿ ಹಿಡಿದುಕೊಂಡು 'ನಾನು ಈಗ ಏನನ್ನು ಮಾಡಬೇಕು' ಎಂದು ನಮಿಸಿ ಕೇಳಲು, 'ಈಶ್ವರನ ದಾಸರಾದ ಇವರು ತಿರುಗಿ ಹೋಗುವ ದಾರಿಯಲ್ಲಿ ಯಾರೂ ಮೇಲೆ ಬಿದ್ದು ಮಾರ್ಗವನ್ನು ತಡೆಯದ ಬಗೆಯಿಂದ ಕಾವಲಿದ್ದು ಇವರನ್ನು ಕೊಂಡುಹೋಗಿ ನೀನು ಬಿಡುವವನಾಗು' ಎಂದು ಅರಸನು ಹೇಳಿದನು.

474. ಈ ಘಟನೆಯನ್ನು ತಿಳಿದವರೆಲ್ಲಾ 'ನಮ್ಮ ಅರಸನಿಗೆ ಕೇಡನ್ನು ಮಾಡಿದ ಈ ಕಪಟ ತಪಸಿಯನ್ನು ಕೊಂದುಬಿಡುವೆವು' ಎಂದು ಪಕ್ಕದಲ್ಲಿ ಗುಂಪುಗೂಡಿದಾಗ, ತತ್ತನು ಆ ತಪಸಿಯನ್ನು ತನ್ನೊಡನೆ ಕೊಂಡುಹೋಗುವವನಾಗಿ ಅವರನ್ನು ನೋಡಿ 'ಈ ತಪಸಿಯು ಒಡೆಯನ ಆಜ್ಞೆಯೇ ಆಗಿದೆ' ಎಂದು ಹೇಳಿದನು.

---

472. ಮಱೈತ್ತವನ್ ಪುಕುನ್ದ ಪೋತೇ ಮನಮಙ್ಗ ವೈತ್ತ ತತ್ತನ್
ಇಱೈಪ್ಪೊಟು ತಿನ್‌ಕಟ್‌ ಕೂಟಿ ವಾಳಿನಾ ಲೆಱಿಯ ಲುಱ್ಱಾನ್,
ನಿಱೈತ್ತಚೆ ಙ್ಕುರುತಿ ಚೋರ ವೀೞ್‌ಕಿನ್‌ಱಾರ್‌ ನೀಣ್ಟ ಕೈಯಾಱ್‌
ನಱೈಪ್ಪಟು ಮಳವಿ 'ಱತ್ತಾ! ನಮರ್' ಎನ ತ್ತಟುತ್ತು ವೀೞ್‌ನ್ದಾರ್.

473. ವೇತನೈ ಯೆಯ್ತಿ ವೀೞ್‌ನ್ದ ವೇನ್ದರಾಲ್ ವಿಲಕ್ಕಪ್ಪಟ್ಟ
ತಾತನಾ ನ್ದತ್ತನ್ ಱಾನು ನ್ದಲೈಯಿನಾಲ್ ವಣಙ್ಕಿ ತಾಙ್ಕಿ
'ಯಾತುನಾನ್ ಚೆಯ್ಕೇ?' ನೆನ್‌ನ, 'ವೆಮ್ಪಿರಾ ನಟಿಯಾರ್ ಪೋಕ
ಮೀತಿಟೈ ವಿಲಕ್ಕಾ ವಣ್ಣಙ್ಕೊಣ್ಟುಪೋಯ್ ವಿಟುನೀ' ಯೆನ್‌ಱಾರ್.

474. ಅತ್ತಱಿ ಮಱನ್ದಾ ರೆಲ್ಲಾ 'ಮರಚನೈ ತ್ತೀಙ್ಕು ಚೆಯ್ತ
ಪೊಯ್‌ತವನ್ ಱನ್‌ನೈ ಕ್ಕೊಲ್‌ವೋ' ಮೆನಪ್ಪುಟೈ ಚೂೞ್‌ನ್ದ ಪೋತು
ತತ್ತನು ಮವರೈ ಯೆಲ್ಲಾ ನ್ದಟುತ್ತುಟನ್ ಕೊಣ್ಟು ಪೋವಾನ್
'ಇತ್ತವನ್ ಪೋಕ ಪ್ಪೆಱ್ಱ ತಿಱೈವನ ತಾಣೈ' ಯೆನ್‌ಱಾನ್.

475. ಇದನ್ನು ಕೇಳಿದ ಆ ಜನರು ಭಯದಿಂದ ದೂರವಾದರು. ಆಮೇಲೆ ತತ್ತನು ತಾನು ಖಡ್ಗಪಾಣಿಯಾಗಿ ಕಾವಲಿದ್ದು, ಆ ತಪಸಿಯೊಡನೆ ನಗರವನ್ನು ದಾಟಿಹೋಗಿ ದುರ್ಗಮವಾದ ಕಾಡನ್ನು ಸೇರಿ ಅಲ್ಲಿ ಆ ಕ್ರೂರನನ್ನು ಬಿಟ್ಟು ಹಿಂತಿರುಗಿ ಬಂದನು.

476. ಆ ಕಪಟ ತಪಸಿಯನ್ನು ಕಾವಲಿದ್ದು ಕೊಂಡುಹೋಗಿ ಆತನೊಡನೆ ಜಗಳ ಮಾಡಬರುವವರೆಲ್ಲರನ್ನೂ ತಡೆದು, ತೊಲಗಿಸಿ ಸುರಕ್ಷಿತವಾಗಿ ಆತನನ್ನು ಬಿಟ್ಟು ಬಂದ ಒಳ್ಳೆಯ ವಾರ್ತೆಯನ್ನು ಕೇಳುವುದಕ್ಕಾಗಿಯೇ ಸೋರಿಹೋಗುತ್ತಿದ್ದ ಉಸಿರನ್ನು ಧರಿಸಿಕೊಂಡಿದ್ದ ಅರಸನ ಸಮ್ಮುಖದಲ್ಲಿ ತತ್ತನು ಬಂದು ನಿಂತನು.

477. ಆಮೇಲೆ ಅರಸನ ಪಾದಗಳಿಗೆ ನಮಿಸಿ ತಪೋವೇಷವನ್ನು ಧರಿಸಿದ ಕೊಲೆಪಾತಕಿಗೆ ಕಾವಲು ನಿಂತು ಆಜ್ಞೆಯಂತೆ ಆತನನ್ನು ಕೊಂಡುಹೋಗಿ ಬಿಟ್ಟು ಬಂದೆನೆಂದು ಆತನು ಹೇಳಲು 'ನೀನು ಮಾಡಿದಂತೆ ಯಾರು ತಾನೇ ಮಾಡಬಲ್ಲವರು!' ಎಂದು ಅರಸನು ಅಭಿನಂದನೆಯ ಮಾತುಗಳನ್ನು ಹೇಳಿ ಆತನ ಮೇಲೆ ಹೆಚ್ಚಾದ ಕರುಣೆಯನ್ನು ತೋರಿದನು.

---

475. ಅವ್ವೞಿ ಯವರ್ಕ ಳೆಲ್ಲಾ ಮಞ್ಚಿಯೇ ಯಕಲ ನೀಙ್ಕ
ಚ್ಚೆವ್ವಿಯ ನೆಱಿಯಿಱ್ಱತ್ತನ್ ಱೀರನಕರ್ ಕಟನ್ತು ಪೋನ್ತು
ಕೈವಟಿ ನೆಟುವಾ ಳೇನ್ತಿ ಯಾಳುಱಾ ಕ್ಕಾನಞ್ ಚೇರ
ವೆವ್ವಿನೈ ಕ್ಕೊಟಿಯೋನ್ ಱನ್ನೈ ವಿಟ್ಟುಪಿನ್ ಮೀಣ್ಟು ಪೋನ್ತಾನ್.

476. ಮಱ್ಱವನ್ ಕೊಣ್ಟು ಪೋನ ವಞ್ಚನೈ ವೇಟ ತ್ತಾನ್ಮೇಱ್
ಚೆಱ್ಱವರ್ ತಮ್ಮೈ ನೀಙ್ಕಿ ತ್ತೀತಿಲಾ ನೆಱಿಯಿಲ್ ವಿಟ್ಟ
ಚೊಱ್ಱಿಱ ಙ್ಕೇಟ್ಕ ವೇಣ್ಟಿ ಚ್ಚೋರ್ಕಿನ್ಱ ವಾವಿ ತಾಙ್ಕುಙ್
ಕೊಱ್ಱವನ್ ಮುನ್ಪು ಚೆನ್ಱಾನ್ ಕೋಮಕನ್ ಕುಱಿಪ್ಪಿ ನಿನ್ಱಾನ್.

477. ಚೆನ್ಱಟಿ ವಣಙ್ಕಿ ನಿನ್ಱು 'ಚೆಯ್ತವ ವೇಟ ಙ್ಕೊಣ್ಟು
ವೆನ್ಱವಱ್ ಕಿಟೈಯೂ ಱಿನ್ಱಿ ವಿಟ್ಟನ' ನೆನ್ಱು ಕೂಱ,
'ಏನ್ಱೆನ ಕ್ಕೈಯನ್ ಚೆಯ್ತ ತಿಯಾರ್ಚೆಯ ವಲ್ಲಾ' ರೆನ್ಱು
ನಿನ್ಱವನ್ ಱನ್ನೈ ನೋಕ್ಕಿ ನಿಱೈಪೆರು ಙ್ಕರುಣೈ ಕೂರ್ನ್ತಾರ್.

478. ತನ್ನ ಅನಂತರ ಆಳ್ವಿಕೆಯನ್ನು ನಡೆಯಿಸತಕ್ಕ ಯುವರಾಜ, ಅಮಾತ್ಯರು ಮೊದಲಾದವರಿಗೂ ತನ್ನ ಮೇಲಣ ಪ್ರೀತಿಯಿಂದ ವ್ಯಥೆಪಡುತ್ತಿರುವ ಅರಸಿ ಮತ್ತುಳಿದ ಸಂಬಂಧಿಗಳು ಮೊದಲಾದವರಿಗೂ ನಡೆದ ವೃತ್ತಾಂತವನ್ನು ಹೇಳಿ, 'ವಿಧಿಯಿಂದ ನಮಿಸಲ್ಪಟ್ಟ ವಿಭೂತಿಯೆಡೆಯಲ್ಲಿಟ್ಟ ಭಕ್ತಿಯನ್ನೇ ಕಡಮೆಯಾಗದಂತೆ ರಕ್ಷಿಸಿಕೊಂಡು ಲೋಕದಲ್ಲಿ ನಡೆದು ಬರುವವರಾಗಿ' ಎಂದು ಆಜ್ಞಾಪಿಸಿದಮೇಲೆ ಅರಸನು ಸಭೆಯಲ್ಲಿ ದಿವ್ಯನಟನವನ್ನಾಡುವ ಸುಂದರ ನೂಪುರದಿಂದಲಂಕೃತವಾದ ಶಿವನ ಶ್ರೀಪಾದವನ್ನು ಚಿಂತಿಸುತ್ತಿದ್ದನು.

479. ಹೀಗೆ ಚಿಂತನೆಯನ್ನು ಮಾಡುತ್ತಿದ್ದ ಆ ಭಕ್ತನಿಗೆ ಪಾರ್ವತೀಪತಿಯಾದ ಶಿವಪರಮಾತ್ಮನು ಆತನು ಚಿಂತಿಸಿ ಕಾಣುತ್ತಿದ್ದ ರೀತಿಯಲ್ಲಿಯೇ ಪ್ರತ್ಯಕ್ಷನಾಗಿ ದರ್ಶನ ವನ್ನು ಕೊಟ್ಟು ಅನುಗ್ರಹಿಸಿ, ಮಿಕ್ಕ ದೇವತೆಗಳಿಗೂ ದೊರೆಯದಂತಹ ತನ್ನ ಶ್ರೀಪಾದದ ನೆಲೆಯನ್ನು ಸೇರುವಂತೆ ಕೃಪೆದೋರಿದನು. ಹಾಗೂ ಪರಿಪೂರ್ಣ ಭಾಗ್ಯವನ್ನು ಕೊಟ್ಟು ಅನುಗ್ರಹಿಸಿದನು.

480. ಆ ಕೃತಿಮ ತಪೋವೇಷಧಾರಿಯು ತನ್ನ ಪ್ರಿಯವಾದ ಪ್ರಾಣವನ್ನೇ ತೊಲಗಿಸುವ ಉದ್ಯಮದಲ್ಲಿ ಪ್ರವರ್ತಿಸಿದುದನ್ನು ನೋಡಿಯೂ ಆ ವೇಷವನ್ನು ಧರಿಸಿದ ಮಾತ್ರದಿಂದ ತನ್ನ ಸ್ವಾಮಿಯ ಭಕ್ತನೇ ಆಗುವನು ಎಂಬ ಅಭಿಪ್ರಾಯದಿಂದ ಭಕ್ತ ವೇಷವನ್ನೇ ಚಿಂತನೆಯನ್ನು ಮಾಡುವ ತಾನು ಕೈಕೊಂಡ ಸನ್ಮಾರ್ಗವನ್ನು ಕಾಪಾಡಿ ಮಡಿದ ಚೇದಿನಾಡಿನ ಅರಸನಾದ ಮೆಯ್‌ಪೊರುಳ್ ನಾಯನಾರನ ಹಿರಿಮೆಯಲ್ಲಿ ನನಗೆ ಎಟಕುವಷ್ಟು ಮಟ್ಟಿಗೆ ಇಲ್ಲಿ ಹೇಳಿರುವೆನು. ಆ ನಾಯನಾರನ ತಿರುವಡಿಯನ್ನು ಶಿರಸಾ ವಹಿಸಿ ಅದರ ಸಹಾಯದಿಂದ 'ದಾಸತನದಲ್ಲಿ ಸ್ಥಿರತೆಯಿಲ್ಲದವರು' ಎಂದು ಕಂಡವರನ್ನು ಒಡನೆಯೇ ತೊಲಗಿಸಿಬಿಡುವ ವಿರನ್‌ಮಿಂಡ ನಾಯನಾರನು ಆಚರಿಸಿದ ಭಕ್ತಿಯ ಚರಿತೆಯನ್ನು ಹೇಳತೊಡಗುವೆನು.

---

478. ಅರಚಿಯ ಲಾಯ ತ್ತಾರ್‌ಕ್ಕು ಮೞಿವುಱು ಕಾತ ಲಾರ್‌ಕ್ಕುಮ್
ವಿರವಿಯ ಚೆಯ್‌ಕೈ ತನ್‌ನೈ ವಿಳಮ್ಬುವಾರ್ 'ವಿತಿಯಿ ನಾಲೇ
ಪರವಿಯ ತಿರುನೀಱ್ಱನ್‌ಪು ಪಾತುಕಾ ತ್ತುಯ್‌ಪ್ಪೀ' ರೆನ್‌ಱು
ಪುರವಲರ್ ಮನ್‌ಱು ಳಾಟುಮ್ ಪೊಱ್ಕೞಲ್ ಚಿನ್‌ತ್ತೈ ಚೆಯ್ತಾರ್.

479. ತೊಣ್ಡನಾರ್ ಕ್ಕಿಮೈಯ ಪ್ಪಾವೈ ತುಣೈವನಾ ರವರ್‌ಮುನ್ ಱಮ್ಮೈ
ಕ್ಕಣ್ಡವಾ ಱೆತಿರೇ ನಿನ್‌ಱು ಕಾಟ್ಟಿತ ನ್ತರುಳಿ, ಮಿಕ್ಕ
ವಣ್ಡವಾ ನವರ್‌ಕಟ್ ಕೆಟ್ಟಾ ವರುಟ್‌ಕೞಲ್ ನೀೞಲ್ ಚ್ಚೇರ
ಕ್ಕೊಣ್ಡವಾ ಱಿಟೈಯ ಱಾಮಱ್ ಕುಮ್ಬಿಟು ಱಿತ್ತೊಳ್‌ಕೈ ಯೀನ್ತಾರ್.

480. ಇನ್‌ನುಯಿರ್ ಚೆಕುಕ್ಕ ಕ್ಕಣ್ಡು ಮೆಯ್ಪ್ಪ್ರಾ ನನ್‌ಪ ರೆನ್‌ಱೇ
ನನ್‌ನೆಱಿ ಕಾತ್ತ ಚೇತಿ ನಾತನಾರ್ ಪೆರುಮೈ ತನ್‌ನಿ
ಲೆನ್‌ನುಱೈ ಚೆಯ್‌ತೇ ನಾಕ; ವಿಕಲ್ಪಱಿನ್ ಮಿಣ್ಡಾರ್ ಪೊಱ್ಱಾಳ್
ಚೆನ್‌ನಿಮೈ ತ್ತವರ್‌ಮುನ್ ಚೆಯ್ತ ತಿರುತ್ತೊಣ್ಡು ಚೆಪ್ಪ ಲುಱ್ಱೇನ್.

6. ವಿಱನ್ ಮಿಂಡ ನಾಯನಾರ

481. ಸುವಾಸನೆಯ ಕರ್ಣಿಕಾರ ಕುಸುಮ ಮಾಲೆಯನ್ನು ಧರಿಸಿದ ಜಡೆಯುಳ್ಳ ಶಿವಪರಮಾತ್ಮನ ಶ್ರೀಪಾದಗಳನ್ನು ಪೂಜಿಸಿ ಹಿರಿಯ ತಪಸ್ಸನ್ನು ಮಾಡಿ, ಪರಶುವನ್ನು ಪಡೆದ ಕಾರಣದಿಂದ ಪರಶುರಾಮನೆಂಬ ಹೆಸರನ್ನು ಹೊಂದಿದ ಮುನಿಯು ಪಡೆದ ನಾಡು, ಅಲೆಗಳನ್ನುಳ್ಳ ಸಮುದ್ರದಲ್ಲಿ ಉಂಟಾಗುವ ಹಿರಿಯ ಭಾಗ್ಯಗಳೂ, ಕೃಷಿಯಾದ ನೆಲಗಳಲ್ಲಿ ದೊರೆಯುವ ಭಾಗ್ಯಗಳೂ, ಗಿರಿಗಳಿಂದ ದೊರೆಯುವ ಉತ್ತಮ ಭಾಗ್ಯಗಳೂ ಒಂದಾಗಿ ವರ್ಧಿಸುವ ಗಿರಿನಾಡು.

482. ಕಡಲಲ್ಲಿ ಬೆಳೆಯುವ ಕಾಂತಿ ಸೂಸುವ ಮುತ್ತುಗಳನ್ನೂ, ಗದ್ದೆಯಲ್ಲಿ ಬೆಳೆಯುವ ಕಬ್ಬಿನಲ್ಲಿ ಉಂಟಾಗುವ ಮುತ್ತುಗಳನ್ನೂ, ಬಿದಿರಿನಲ್ಲಿ ಬೆಳೆಯುವ ಶೀತಲವಾದ ಮುತ್ತುಗಳನ್ನೂ, ಆನೆಯ ದಂತಗಳಿಂದುದಯಿಸುವ ಪ್ರಕಾಶಯುಕ್ತವಾದ ಮುತ್ತುಗಳನ್ನೂ ಈ ಮುತ್ತುಗಳೇ ಇವರ (ಈ ಹೆಂಗಸರ) ಹಲ್ಲಿನ ಸಾಲುಗಳು ಎಂದು ಹೇಳತಕ್ಕ ದಂತಪಂಕ್ತಿಗಳನ್ನು ತೋರಿಸುವ ಮುಗುಳುನಗೆಯಿಂದ ಕೂಡಿದ ಹೆಂಗಸರು ಬಗೆ ತಿಳಿದು ಆರಿಸಿ ರಾಶಿಮಾಡಿರುವ ದೃಶ್ಯಗಳನ್ನೂ ಚೇರನಾಡಿನ ಹಲ ಊರುಗಳಲ್ಲಿ ಮೊದಲನೆಯದೆನಿಸಿಕೊಳ್ಳತಕ್ಕ ಪುರಾತನವಾದ ತಿರುಚ್ಚೆಂಗುನ್ರೂರಿ[1]ನಲ್ಲಿ ಕಾಣಬಹುದು.

---

6. ವಿಱನ್ ಮಿಣ್ಡ ನಾಯನಾರ್ ಪುರಾಣಮ್

481. ವಿರೈಚೆಯ್ ನಱುಮ್‌ಪೂ ನ್ದೊಟ್ಟೈಯಿತಟಿ ವೇಣಿ ಯಾರ್‌ತಱ್ ಕಟಿಲ್‌ಪರಚಿ
ಪ್ಪರಚು ಪೆಱುಮಾ ತವಮುನಿವನ್ ಪರಚಿ ರಾಮನ್ ಪೆಱುನಾಟು
ತಿರೈಚೆಯ್ ಕಟಲಿನ್ ಪೆರುವಳನು ನ್ತಿರುನ್ತ್ತ ನಿಲನಿನ್ ಚೆಱುವಳನುವ್
ವರೈಯಿಿನ್ ವಳನು ಮುಟನ್‌ಪೆರುಕಿ ಮಲ್ಕು ನಾಟು ಮಲೈನಾಟು.

482. ವಾರಿ ಚೊರಿಯು ಜ್ಯತಿರ್‌ಮುತ್ತುಮ್ ವಯಲ್‌ಮೆನ್ ಕರುಮ್ಬಿಱ್
ಪಟುಮುತ್ತುಮ್
ವೇರಲ್ ವಿಳೈಯು ಜ್ಯಳಿರ್‌ಮುತ್ತುಮ್ ವೇಟ ಮರುಪ್ಪಿ ನೊಳಿರ್ ಮುತ್ತುಮ್
ಮೂರ ಲೆನಚ್ಚೊಲ್ ವೆಣ್‌ಮುತ್ತ.ನಕ್ಕೈಯಾರ್ ತೆರಿನ್ತ್ತು ಮುಱೈ ಕೋಕ್ಕುಙ್
ಚೇರರ್ ತಿರುನಾ ಟ್ಟೂರ್‌ಕಳಿನ್‌ಮುನ್ ಚೆಱನ್ತ್ತ ಮೂತೂರ್ ಚೆಙ್ಕುನ್‌ಱೂರ್,

---

1. ತಿರುಚ್ಚೆಂಗುನ್ರೂರು—ಸೇಲಮಿನ ಸಮೀಪದ ತಿರುಚ್ಚೆಂಗೋಡು.

483. ಅಲ್ಲಿ ಹಂಸಗಳು ವಾಸಿಸುವ ಗದ್ದೆಗಳಲ್ಲಿ ಉಳುವ ಉದ್ದಿಮೆಯಲ್ಲಿ ಬರುವ ಭಾಗ್ಯವನ್ನು ಕೊಂಡು ವೇದಗಳಲ್ಲಿ ವಿಧಿಸಿದ ದಾರಿಗಳಲ್ಲಿ ನಡೆದುಬರುವ ಪರಿಶುದ್ಧ ಸುಮಾರ್ಗದಲ್ಲಿ ನೆಲೆವಟ್ಟ ಕುಲದ ವೈದಿಕ ಪರಂಪರೆಯಲ್ಲಿ ಹಿರಿಯರಾದವರು ಬಾಳುವುದಕ್ಕೆ ಎಡೆಯಾದ ಊರು ಅದು.

484. ಆ ಸುಂದರವಾದ ಊರಲ್ಲಿ ವೆಲ್ಲಾಳ ಕುಲವನ್ನು ಬೆಳಗಿಸಲು ನಮ್ಮ ಒಡೆಯನಾದ ವಿಱನ್ಮಿಂಡನು ಅವತರಿಸಿದನು. ಆತನು ಶಿವಪರಮಾತ್ಮನ ಕೆಂಪಗಾದ ಪಾದಗಳನ್ನು ಆಧಾರವಾಗಿಟ್ಟುಕೊಂಡು ಮತ್ತೆಲ್ಲಾ ಆಸೆಗಳನ್ನೂ ತೊಲಗಿಸಿಬಿಡುವವನು. ಶಿವಪರಮಾತ್ಮನ ನಿಜವಾದ ಭಕ್ತರಲ್ಲಿ ಹೆಚ್ಚಾದ ಶ್ರದ್ಧೆಯುಳ್ಳವನು.

485. ಆತನು ಗಂಗೆಯನ್ನೂ ಬಾಲಚಂದ್ರನನ್ನೂ ಧರಿಸಿದ ಜಡೆಯಿರುವ ಶಿವಪರಮಾತ್ಮನು ಆಶಿಸಿ ಪ್ರತ್ಯಕ್ಷನಾಗಿ ಅನುಗ್ರಹಿಸಿರುವುದರಿಂದ ಯೋಗ್ಯತೆಯಲ್ಲಿ ಶ್ರೇಷ್ಠವಾದ ಎಲ್ಲಾ ಊರುಗಳನ್ನೂ ನಮಿಸಿ ಹೋಗುವ ಆಸೆಯಿಂದ ಪ್ರಯಾಣ ಹೋಗುವವನಾಗಿ, ಆ ರೀತಿ ನಮಿಸುವ ಮಾರ್ಗದಲ್ಲಿ ಪಕ್ವಪಡೆದ ಹಿರಿಯ ಭಕ್ತರ ಕೂಟದ ಇದಿರಲ್ಲಿ ಮೊದಲು ಸ್ತುತಿಸಿ ಆಮೇಲೆ ಈಶ್ವರನ ಶ್ರೀಪಾದಗಳನ್ನು ನಮಿಸುವ ಹೆಸರನ್ನು ಪಡೆದನು.

---

483. ಎನ್ನುಮ್ ಪೆಯರಿನ್ ವಿಳಙ್ಕಿಯಉಲ ಕೇಱುಮ್ ಪೆರುಮೈ ಯುಟೈ
ಯತು ತಾನ್
ಅನ್ನಮ್ ಪಯಿಲುಮ್ ವಯಲುೞವಿ ನಮೈನ್ತ ವಳತ್ತಾ ಲಾಯ್ನ್ತ ಮಱೈ
ಚೊನ್ನ ನೆಱಿಯಿನ್ ವೞಿಯೊೞುಕು ನ್ತೂಯ ಕುಟಿಮೈ ತ್ತಲೈನಿನ್ಱಾರ್
ಮನ್ನು ಙ್ಕುಲತ್ತಿನ್ ಮಾಮಱೈಯೋನ್ ಮರಪಿಱ್ ಪೆರಿಯೋರ್
ವಾೞ್ಪತಿಯಾಮ್.

484. ಅಪ್ಪೊಱ್ ಪತಿಯಿ ನಿಟೈವೇಳಾಣ್ ಕುಲತ್ತೈ ವಿಳಕ್ಕ ವವತರಿತ್ತಾರ್;
ಚೆಪ್ಪಱ್ ಕರಿಯ ಪೆರುಞ್ಚೀರ್ತ್ತಿ ಚ್ಚಿವನಾರ್ ಚೆಯ್ಯ ಕೞಲ್ಪಱ್ಱಿ
ಯೆಪ್ಪ ಱ್ಱಿನೈಯು ಮಱವೆಱಿವಾ; ರೆಲ್ಲೈ ತೆರಿಯ ವುಣರ್ನ್ತಾರ್
ಮೆಯ್ಪ್ಪ ತ್ತರ್ಕಳ್ಪಾಱ್ ಪರಿವುಟೈಯಾ ರೆಮ್ಪಿರಾನಾರ್, ವಿಱನ್ಮಿಣ್ಟರ್.

485. ನತಿಯು ಮತಿಯುಮ್ ಪುನೈನ್ತ ಚಟೈ ನಮ್ಪರ್ ವಿರುಮ್ಪಿ ನಲಙ್ಕಿಱನ್ತ
ಪತಿಕ ಳೆಙ್ಕು ಙ್ಕುಮ್ಪಿಟ್ಟು ಪ್ಪಟರು ಙ್ಕಾತಲ್ ವೞಿಚ್ಚೆಲ್ವಾರ್
ಮುತಿರು ಮನ್ಪಿಱ್ ಪೆರುನ್ತೊಣ್ಟರ್ ಮುಱೈಮೈ ನೀಟು ತಿರುಕ್ಕೂಟ್ಟ
ತ್ತಿತಿರ್ಮುನ್ ಪರವು ಮರುಳ್ಪೆಱ್ಱೇ ಯಿಱೈವರ್ ಪಾತ ನ್ತೊೞಪ್ಪೆಱ್ಱಾರ್.

486. ಚಿನ್ನವನ್ನು ಬೀಸುವ ಅಬ್ಬಿಗಳನ್ನುಳ್ಳ ಮಲೆನಾಡನ್ನು ದಾಟಿ ಕಡಲು ಸುತ್ತಿದ ಲೋಕದಲ್ಲಿ ಎಲ್ಲೆಲ್ಲೂ ಪ್ರಯಾಣಮಾಡಿ, ಶಿವಭಕ್ತರ ಸ್ಥಿರವಾದ ಸನ್ಮಾರ್ಗದಲ್ಲಿ ಪ್ರವರ್ತಿಸುತ್ತ, ಯಾರೂ ಯಾವೊಂದು ವಿಧದಲ್ಲಿಯೂ ತನಗೆ ಸರಿಸಮವಿಲ್ಲದ ವಿಱನ್ಮಿಂಡ ನಾಯನಾರನು ಮೇರುಗಿರಿಯನ್ನು ಬಿಲ್ಲಾಗಿ ಬಾಗಿಸಿ ತ್ರಿಪುರಗಳನ್ನಳಿಸಿದ ವೈದಿಕತೇರಿನ ಮೇಲೆ ನಿಂತವನಾದ ಶಿವಪರಮಾತ್ಮನು ವಾಸಿಸಿದ ತಿರುವಾರೂರನ್ನು ಸೇರಿ ಅಲ್ಲಿ ಪರಶಿವನನ್ನು ಪೂಜಿಸಿದನು.

487. ಆಗ ಅನುಗ್ರಹಭಾಗ್ಯವು ಸದಾ ಪರಿಪೂರ್ಣವಾಗಿರುವ ದೇವಾಚಾರ್ಯ ಮಂಟಪದೊಳಗೆ ಸೇರಿ, ಅಲ್ಲಿರುವ ಶಿವಭಕ್ತರನ್ನು ವಂದಿಸದೆ, ಅವರೊಡನೆ ಬಂದು ಸೇರದೆ ಒಂದು ಪಕ್ಕವಾಗಿ ತೊಲಗಿ ಹೋಗುತ್ತಿರುವ ವನ್‌ತೊಂಡನನ್ನು (ಸುಂದರನನ್ನು) ಬೇರೆಯವನು (ಭಕ್ತರಿಂದ ಬೇರೆಯಾದವನು) ಎಂದು ಹೇಳುವುದಕ್ಕೆ ಶಿವಪರಮಾತ್ಮನ ಅನುಗ್ರಹದಲ್ಲಿ ಪಡೆದ ದೊಡ್ಡ ಭಾಗ್ಯವನ್ನು ಈ ನಾಯನಾರನು ಪಡೆದನು.

488. ಆಕಾಶದವರೆಗೆ ಎತ್ತರವಾಗಿ ನಿಂತ ಮೇರುಗಿರಿಯನ್ನು ಬಿಲ್ಲಾಗಿ ಬಾಗಿಸಿದ ಶಿವಪರಮಾತ್ಮನ ಭಕ್ತರ ಕೂಟವನ್ನು ಸ್ತುತಿಸದೆ ಹೋಗುವ ನಂಬಿಯಾರೂರನಿಗೂ ಅವನನ್ನು ಆಳಾಗಿಸಿಕೊಂಡು ಬಾಲಚಂದ್ರನನ್ನು ತಲೆಯಲ್ಲಿ ಧರಿಸಿ ಹಾವನ್ನು ಆಭರಣವಾಗಿ ಅಲಂಕರಿಸಿಕೊಂಡ ಪರಮೇಶ್ವರನಿಗೂ 'ಪ್ರತ್ಯೇಕ' ಎಂದು ಹೇಳುವುದಕ್ಕೆ ಆ ಕೂಟದವರಿಂದಲೇ ಪಡೆದ ನೇರವಾದ ಅನುಗ್ರಹವನ್ನು ಯಾರು ತಾನೇ ಹೇಳಬಲ್ಲರು?

---

486. ಪೊನ್‌ಱಾ ಟಿರುವಿ ಮಲ್ಯೈನಾಟ್ಟು ಕಟನ್ದು ಕಟಲ್‌ಚೂೞ್ ಪುವಿಯೆಙ್ಙಣುಮ್
ಚೆನ್‌ಱಾ ಳುಟೈಯಾ ರಟಿಯವರ್‌ತ ನಿನ್ಱಣ್‌ಮೈ ಯೊಟುಕ್ಕ ನಟೈ ಚೆಲುತ್ತಿ
ವನ್‌ಱಾಣ್ ಮೇರು ಚ್ಚಿಲೈವಳೈತ್ತು ಪ್ಪುರಙ್ಗಳ್ ಚೆಱ್ಱ ವೈತಿಕತ್ತೇರ್
ನಿನ್‌ಱಾ ರಿರುನ್ದ ತಿರುವಾರೂರ್ ಪಣಿನ್ದಾರ್ ನಿಕರೊನ್ ಱಿಲ್ಲಾತಾರ್.

487. ತಿರುವಾರ್ ಪೆರುಮೈ ತಿಕೞ್‌ಕಿನ್‌ಱ ತೇವಾ ಚಿರಿಯ ನಿಟೈಪ್ಪೊಲಿನ್ದು
ಮರುವಾ ನಿನ್‌ಱ ಚಿವನಟಿಯಾರ್ ತಮ್ಮೈ ತ್ತೊೞುತು ವನ್ದಣೈಯಾ
ತೊರುವಾ ಱೊತುಙ್ಗುವನ್ ವನ್‌ಱೊಣ್ಟನ್ 'ಪುಱಕೆನ್ ಱು'ರೈಪ್ಪ ಚ್ಚಿವನರುಳಾಱ್
ಪೆರುಕಾ ನಿನ್‌ಱ ಪೆರುಮ್‌ಪೇಱು ಪೆಱ್ಱಾರ್; ಮಱ್ಱುಮ್ ಪೆಱನಿನ್‌ಱಾರ್.

488. ಚೇಣಾರ್ ಮೇರು ಚ್ಚಿಲೈವಳೈತ್ತ ಚಿವನಾ ರಟಿಯಾರ್ ತಿರುಕ್ಕೂಟ್ಟಮ್
ಪೇಣಾ ತೇಕ ಮೂರನುಕ್ಕುಮ್ 'ಪಿರಾನಾ ನ್ದನ್‌ಮೈ ಪ್ಪಿಱೈಚ್ಚಟೈ
ಪ್ಪೂಣಾ ರರವಮ್ ಪುನೈನ್ದಾರ್‌ಕ್ಕುಮ್ ಪುಱ' ಕೆನ್ ಱುರೈಪ್ಪ ಮಱ್ಱವರ್‌ಪಾಱ್
ಕೋಣಾ ವರುಳ್ಳೈ ಪೆಱ್ಱಾರ್‌ಮ ಱ್ಱಿನಿಯಾರ್ ಪೆಱುಮೈ ಕೂಱುವಾರ್.

489. ಲೋಕವು ಉಜ್ಜೀವಿಸಲೂ, ನಾವು ಉಜ್ಜೀವಿಸಲೂ, ಶೈವಸನ್ಮಾರ್ಗದ ಶೀಲವು ಉಜ್ಜೀವಿಸಲೂ, ತಿರುತ್ತೊಂಡ ತ್ತೊಗೆಯನ್ನು ಮುಂದೆ ನಂಬಿಗಳು ಹಾಡಲು ಶ್ಲಾಘ್ಯವಾದ, ವೇದಗಳು ಮೊರೆದು ತಿಳಿಯುವುದಕ್ಕೆ ಸಾಧ್ಯವಾಗದ, ಶಿವಪರಮಾತ್ಮನು, 'ನಾವು ಇರುವುದು ಭಕ್ತರೊಡನೆಯೇ' ಎಂದು ಹೇಳುವವನರಾದರೂ, ವಿಷವನ್ನು ಅಮೃತ ವಾಗಿಸಿದ ಈಶ್ವರನ ಭಕ್ತರ ಹಿರಿಮೆಯನ್ನು ಯಾರು ತಾನೇ ತಿಳಿದವರು?

490. ಈ ರೀತಿಯಾಗಿ ಹಲಕಾಲ ಇಹಲೋಕದಲ್ಲಿ ಶ್ರೇಷ್ಠವಾದ ಉತ್ತಮ ಯೋಗ್ಯತೆಗಳೆಲ್ಲವುಗಳಿಗೂ ನೆಲೆಯಾದ ಶೈವಮಾರ್ಗವನ್ನು ಕಾಪಾಡಿ ದಿವ್ಯಸೇವೆಯನ್ನು ಮಾಡುವ ಹೆಸರನ್ನು ಪಡೆದು ಬಾಳಿದ ವಿಱನ್ಮಿಂಡ ನಾಯನಾರನು ದಿವ್ಯಕೈಂಕರ್ಯಕ್ಕೆ ಹೊಂದಿಕೆಯಾದ ರೀತಿಯಿಂದ ಗಣನಾಯಕನಾಗುವ ನೆಲೆಯನ್ನು ಪಡೆದು ಶ್ರೀಪಾದಗಳ ನೆಳಲ ಕೆಳಗೆ ಶೋಭಿಸಿದನು.

491. ಇನ್ನೂ ಬೇರೆ ಹಲವು ಹೇಳಿಕೊಂಡಿರಬೇಕಾದುದೇನು? ತಿರುತ್ತೊಂಡ ತ್ತೊಗೈ ದೊರೆಯಲ್ಪಟ್ಟ ಆ ಕಾರಣದಿಂದ ಲೋಕವು ಶೋಭಿಸಿ ಬರುವ ಹಿರಿಯ ಭಾಗ್ಯಕ್ಕೆ ಕಾರಣನಾದ ವಿಱನ್ಮಿಂಡ ನಾಯನಾರನ ಹಿರಿಮೆಯನ್ನು ಎತ್ತಿಹೇಳುವ ಶಕ್ತಿಯು ನನ್ನ ಯೋಗ್ಯತೆಯಲ್ಲಿ ಅಡಗೀತೇ? ಆತನ ಶ್ರೀಪಾದಗಳನ್ನು ತಲೆಯಲ್ಲಿ ವಹಿಸಿಯೇ ಅವುಗಳನ್ನು ಆಧಾರವಾಗಿಟ್ಟುಕೊಂಡೇ ಪಜಯೂರಿನ ವೈಶ್ಯನಾದ ಅಮರ ನೀತಿ ನಾಯನಾರನ ದಿವ್ಯಸೇವೆಯ ಚರಿತೆಯನ್ನೂ ಹೇಳತೊಡಗುವೆನು.

---

489. ಞಾಲ ಮುಯ್ಯ್ ನಾಮುಯ್ಯ್ ನಮ್ಪಿ ಚ್ಚೈವ ನನ್ನೆಱಿಯಿನ್
ಚೀಲ ಮುಯ್ಯ್ ತ್ತಿರುತ್ತೊಣ್ಡ ತ್ತೊಗೈಮುನ್ ಪಾಡ ಚ್ಚೆಪ್ಪುಮುಱೈಕಳ್
ಓಲ ಮಿಟವು ಮುಣರ್ವರಿಯಾ 'ರಟಿಯಾ ರುಟನಾಮುಳ' ತೆನ್ಱಾಲ್,
ಆಲ ಮಮುತು ಚೆಯ್ತಪಿರಾ ನಟಿಯಾರ್ ಪೆರುಮೈ ಯಱಿನ್ತಾರಾರ್?

490. ಒಕ್ಕ ನೆಟುನಾ ಳಿವ್ವುಲಕಿ ಲುಯರ್ನ್ತ ಚ್ಚೈವ ಪ್ಪೆರುನ್ತನ್ಮೈ
ತೊಕ್ಕ ನಿಲೈಮೈ ನೆಱಿಪೋಱ್ಱಿ ತ್ತೊಣ್ಡುಪೆಱ್ಱ ವಿಱನ್ಮಿಣ್ಡರ್
ತಕ್ಕ ವಕೈಯಾ ಲ್ಲಮ್ಪೆರುಮಾ ನರುಳಿ ನಾಲೇ ತಾಣಿಟಱ್ಕೀಟ್
ಮಿಕ್ಕ ಕಣನಾ ಯಕರಾಕು ನ್ತನ್ಮೈ ಪೆಱ್ಱು ವಿಳಙ್ಕಿನಾರ್.

491. ವೇಱು ಪಿರಿತೆನ್? ತಿರುತ್ತೊಣ್ಡ ತ್ತೊಗೈಯಾ ಲುಲಕು ವಿಳಙ್ಕವರುಮ್
ಪೇಱು ತನಕ್ಕು ಕ್ಕಾರಣರಾಮ್ ಪಿರಾನಾರ್ ವಿಱನ್ಮಿ ಣ್ಡರ್ಪೆರುಮೈ
ಕೂಱು ಮಳವೆನ್ ನಳವಿತ್ತೇ? ಯವರ್ತಾಳ್ ಚೆನ್ನಿ ಮೇಱ್ಕೊಣ್ಡೇ
ಯಾಱ್ಱು ವಣಿಕ ರಮರ್ನೀತಿ ಯನ್ಪರ್ ಚೆಯಲ್ಕೈ ಯಱೈಕುವಾಮ್.

7. ಅಮರನೀತಿ ನಾಯನಾರ

492. ಕಾವೇರಿ ನದಿಯು ಹರಿಯುತ್ತಿರುವ ಚೋಳನಾಡಿನಲ್ಲಿ, ಮೇಘದಿಂದಾವೃತವಾಗಿ ಮಧುಮತ್ತತೆಯಿಂದ ಕೂಡಿದ ಬಂಡುಣಿಗಳು ಮುತ್ತಿದ ಹೂವಿನ ಉದ್ಯಾನಗಳಿಂದ ಸುತ್ತಲ್ಪಟ್ಟು, ತೇರುಗಳಿಂದ ಕೂಡಿದ ಶ್ರೇಷ್ಠವಾದ ಬೀದಿಗಳನ್ನೊಳಕೊಂಡು, ಲೋಕದಲ್ಲಿ ನೀಡಿ ನೆಲಸಿದ ಹಿರಿಮೆಯುಳ್ಳ ಸಣ್ಣ ಊರಾದುದು ಪಟ್ಟೈಯಾಱೈ ಎಂಬ ಗ್ರಾಮ.

493. ಆ ಊರಲ್ಲಿ ಉತ್ತಮ ವೈಶ್ಯಕುಲದಲ್ಲಿ ಅಮರನೀತಿಯಾರನು ಅವತರಿಸಿದನು. ಚಿನ್ನ, ಮುತ್ತು, ರತ್ನ, ಸುಂದರವಾದ ದುಕೂಲಗಳು ಮೊದಲಾದ ಎಲ್ಲಾ ನಾಡುಗಳಿಂದಲೂ ಬರುವ ಸೌಭಾಗ್ಯಗಳನ್ನು ಹೆಚ್ಚಾಗಿ ಹೊಂದಿದೆ ಆ ಊರು. ಆ ವಾಣಿಜ್ಯದ ನೆಲೆಯಲ್ಲಿ ಅವನು ಶ್ರೇಷ್ಠನಾಗಿದ್ದನು.

494. ಅವನು ತನ್ನ ಮನಸ್ಸಿನೊಳಗಿಟ್ಟು ಯಾವಾಗಲೂ ಧ್ಯಾನಿಸುವುದು ಶಿವಪರಮಾತ್ಮನ ಶ್ರೀಪಾದಗಳನ್ನು ಮಾತ್ರ. ಸಂಜೆಯು ಕೆಂಬಣ್ಣವುಳ್ಳ ಶಿವಪರಮಾತ್ಮನಿಗೆ ಸ್ವಂತವಾದ ಭಕ್ತರನ್ನು ಭೋಜನಮಾಡಿಸಿ, ಅವರ ಮನಸ್ಸಿನ ಆಸೆಯನ್ನು ತಿಳಿದು ಅದಕ್ಕೆ ತಕ್ಕಂತೆ ಕಂಥೆ, ಕೆಳಗಿನ ಬಟ್ಟೆ, ಮೇಲು ಹೊದಿಕೆಯ ಬಟ್ಟೆಗಳನ್ನು ಕೊಟ್ಟು, ತನ್ನೆಡೆಯಲ್ಲಿ ಬಂದ ಭಾಗ್ಯದಿಂದ ತಾನು ಈ ಲೋಕದಲ್ಲಿ ಜೀವನವನ್ನು ಪಡೆದು ಬರುವುದರಿಂದ ಉಂಟಾದ ಸ್ಥಿರವಾದ ಪ್ರಯೋಜನವನ್ನು ಕೊಳ್ಳುವವನಾಗಿ,

---

7. ಅಮರ್ ನೀತಿ ನಾಯನಾರ್ ಪುರಾಣಮ್

492. ಚೀರಿ ನೀಟಿಯ ಚೆಮ್ಬಿಯರ್ ಪೊನ್ನಿನನ್ ನಾಟ್ಟು
ಕ್ಕಾರಿನ್ ಮೇವಿಯ ಕಳಿಯಳಿ ಮಲರ್ಪ್ಪೊೞಿಲ್ ಚೂೞ್ನ್ತು
ತೇರಿನ್ ಮೇವಿಯ ಚೆೞುಮಣಿ ವೀತಿಕಳ್ ಚೆಱಿನ್ತು
ಪಾರಿ ನೀಟಿಯ ಪೆರುಮ್ಮೈಚೀರ್ ಪತಿಪಟ್ಟೈ ಯಾಱೈ.

493. ಮನ್ನು ಮಪ್ಪತಿ ವಣಿಕರ್ತ ಙ್ಕುಲತ್ತಿನಿಲ್ ವನ್ತಾರ್
ಪೊನ್ನು ಮುತ್ತುನನ್ ಮಣಿಕಳುಮ್ ಪೂನ್ತುಕಿನ್ ಮುತಲಾ
ವೆನ್ನಿ ಲತ್ತಿನು ಮುಳ್ಳನ ವರುವಳ ತ್ತಿಯಲ್ಪಾ
ಲನ್ನಿ ಲೈಕ್ಕಣ್ಮಿ ಕ್ಕವರಮರ್ ನೀತಿಯಾ ರೆನ್ಪಾರ್.

494. ಚಿನ್ತೈ ಚೆಯ್ವತು ಚಿವನ್ಕಟ ಲಲ್ಲತೊನ್ ಱಿಲ್ಲಾರ್
ಅನ್ತಿ ವಣ್ಣರ್ತ ಮಟಿಯವರ್ ಕ್ಕಮುತುಚೆಯ್ ವಿತ್ತು
ಕ್ಕನ್ತೈ ಕೀಳುಟೈ ಕೋವಣ ಙ್ಕರುತ್ತಱಿ ನ್ತುತವಿ
ವನ್ತ ಚೆಲ್ವತ್ತಿನ್ ವಳತ್ತಿನಾಲ್ ವರುಮ್ಪಯನ್ ಕೊಳ್ವಾರ್.

495. ಮುಕ್ಕಣ್ಣನೂ, ದಿಗಂಬರನೂ, ಪರವಸ್ತುವೂ ಆದ ಶಿವಪರಮಾತ್ಮನಿರುವ ತಿರುನಲ್ಲೂರಿನಲ್ಲಿ, ಶ್ರೇಷ್ಠವಾದ ಹಿರಿಯ ಉತ್ಸವವನ್ನು ಆಸೆಯಿಂದ ಸೇವಿಸಿ, ಅಲ್ಲಿ ಭಕ್ತರಿಗೆ ಭೋಜನಕ್ಕನುಕೂಲವಾಗುವಂತೆ ಅನ್ನಸತ್ರವನ್ನೇರ್ಪಡಿಸಿದನು. ಆಮೇಲೆ ತಾನು ಸಂಬಂಧಿಕರೊಡನೆ ಕೂಡಿ ತಿರುನಲ್ಲೂರಿಗೆ ವಾಸಕ್ಕಾಗಿ ಬಂದು ಸೇರಿದನು.

496. ಅಲ್ಲಿ ತಿರುನೀಲಕಂಠನಾದ ಪರಮಾತ್ಮನು ಅನುಗ್ರಹಿಸಿ ನೆಲಸಿರುವ ತಿರುನಲ್ಲೂರಿನ ಉತ್ಸವಾತಿಶಯದಲ್ಲಿ ಸೇವೆಯನ್ನು ಸಲ್ಲಿಸುತ್ತಾ ಅನ್ನಸತ್ರದಲ್ಲಿ ಭಕ್ತರು ಪ್ರತಿದಿನವೂ ಸುಖವಾಗಿ ಭೋಜನವನ್ನು ಮಾಡಲು ಅವರ ಕೃಪೆಯನ್ನು ಪಡೆದುಕೊಂಡು, ದ್ರವಿಸಿದ ಮನವುಳ್ಳವನಾಗಿ ಸಂತೋಷದಿಂದ ತಂಗಿಬರುತ್ತಿದ್ದ ದಿನಗಳಲ್ಲಿ ಒಂದು ದಿನ,

497. ಬಾಲಚಂದ್ರನನ್ನು ಧರಿಸಿದ ಜಡೆಯಿರುವ, ಹಿರಿಮೆಯಲ್ಲಿ ಶ್ರೇಷ್ಠನಾದ, ತಿರುನಲ್ಲೂರಲ್ಲಿ ನೆಲಸಿ ಅನುಗ್ರಹಿಸಿದ ನೀಲಕಂಠನಾದ ಈಶ್ವರನು ತನ್ನ ಕೌಪೀನದ ಮಹಿಮೆಯನ್ನು ಮುಂದೆ ಕಾಣಿಸಿ, ಅದರ ಮೂಲಕ, ಅನನ್ಯಭಕ್ತರಿಗೆ ಪೂರ್ಣಾನುಗ್ರಹವನ್ನು ನೀಡುವುದಕ್ಕಾಗಿ, ವೇದಿಯರ ಕುಲದಲ್ಲಿ ಒಬ್ಬ ಬ್ರಹ್ಮಚಾರಿಯ ರೂಪವನ್ನು ತಾಳಿ,

---

495. ಮುಕ್ಕ ಣಕ್ಕರಾ ಮುತಲ್ವನಾ ರವರ್ತಿರು ನಲ್ಲೂರ್
ಮಿಕ್ಕ ಚೀರ್ವಳರ್ ತಿರುವಿಟಾ ವಿರುಪ್ಪುಟನ್ ವಣಙ್ಕಿ
ತ್ತಕ್ಕ ವನ್ಪರ್ಕ ಳಮುತುಚೆಯ್ ತಿರುಮಟ ಙ್ಕಾಮೈತ್ತಾರ್
ತೊಕ್ಕ ಚುಱ್ಱಮು ನ್ತಾಮುಮಙ್ವ ನ್ತಣೈನ್ತನರ್ ತೂಯೋರ್.

496 ಮರುವು ಮನ್ಪೊಟು ವಣಙ್ಕಿನರ್ ಮಣಿಕಣ್ಟರ್ ನಲ್ಲೂರ್
ತ್ತಿರುವಿ ಟಾವಣಿ ಚೇವಿತ್ತು ತ್ತಿರುಮಟ ತ್ತಟಿಯಾರ್
ಪೆರುಕು ಮಿನ್ಪಮೋ ಟಮುತುಚೆಯ್ ತಿಟವರುಳ್ ಪೇಣಿ
ಯುರುಕು ಚಿನ್ತೈಯಿನ್ ಮಕಿೞ್ನ್ತುಱೈ ನಾಳಿಲ್ ಯೊರುನಾಳ್,

497. ಪಿಱೈಕ್ಕೊಳ್ ಚೆಞ್ಚಟೈಪ್ ಪೆರುನ್ತಕೈಪ್ ಪೆರುನ್ತಿರು ನಲ್ಲೂರ್
ಕ್ಕಱೈಕ್ಕಳ ತ್ತಿಱೈ ಕೋವಣ ಪ್ಪೆರುಮೈಯುಮ್ ಕಾಟ್ಟಿ
ನಿಱೈತ್ತ ವನ್ಪುಟೈ ತ್ತೊಣ್ಟರ್ಕ್ಕು ನೀಟರುಳ್ ಕೊಟುಪ್ಪಾನ್
ಮಱೈಕ್ಕು ಲತ್ತೊರು ಪಿರಮಚಾ ರಿಯಮ್ವಟಿ ವಾಕಿ,

498. ಕೆಂಪಗಾದ ಕಿರುಜಡೆಗಳನ್ನು ಮರೆಸಿದ ತಿರುಮುಡಿ ಶಿಖೆಯೂ, ಶೈವಕ್ಕೆ ತಕ್ಕುದಾದ ತ್ರಿಪುಂಡ್ರವಾಗಿ ಧರಿಸಿದ ವಿಭೂತಿಯ ಕಾಂತಿಯೂ, ಶರೀರದಲ್ಲಿ ಬಿಳಿದಾದ ಹುರಿಗಳುಳ್ಳ ಜನಿವಾರದೊಡನೆ ಶೋಭಿಸುವ ಜಿಂಕೆಯ ಚರ್ಮವೂ, ಕೈಯ ಪವಿತ್ರ ಬೆರಳಲ್ಲಿ ಮರಕತ ಕಿರಣವನ್ನು ಸೂಸುವ ಪವಿತ್ರವೂ,

499. ಮುಂಜಿ ಹುಲ್ಲನ್ನು ತಿರುಪಿ ತಯಾರಿಸಿದ ಹಗ್ಗದಿಂದ ಮಾಡಿದ ಮೇಖಲೆಯ ಎಡೆಯಲ್ಲಿ ವೇದವಾದ ಕೌಪೀನದ ಬಟ್ಟೆಯೂ ಶೋಭಿಸಲು, ಇವುಗಳಿಂದ ಕೂಡಿದ ವೇಷವುಳ್ಳವನಾಗಿ, ದುಷ್ಕರ್ಮದಿಂದುಂಟಾದ ಅಜ್ಞಾನವನ್ನು ನೀಗುವ ಮನಸ್ಸಿನಿಂದ ಕೂಡಿದ, ಭಕ್ತರ ಹೃದಯದಿಂದ ತೊಲಗದೆ ಯಾವಾಗಲೂ ಸ್ಥಿರವಾಗಿರುವ ಶಿವನ ಶ್ರೀಪಾದ ಮಲರುಗಳು ನೆಲದಲ್ಲಿ ಹೊಂದುವಂತೆ (ನಡೆದುಕೊಂಡು),

500 ನೋಡಿದವರ ಮನಸ್ಸು ಕರಗಿ ನೀರಾಗುವಂತೆ, ಭಕ್ತರ ಪ್ರೀತಿಯ ಪರಿಶುದ್ಧಮಾರ್ಗವನ್ನು ಪ್ರಕಾಶಪಡಿಸುವವನಾಗಿ, ಎರಡು ಕೋವಣಗಳು, ವಿಭೂತಿಯ ಚೀಲ, ದರ್ಭೆ ಇವುಗಳಿಂದ ಕೂಡಿದ ದಂಡವನ್ನು ಧರಿಸಿಕೊಂಡು ಅಮರನೀತಿಯ ತಿರುಮಠವನ್ನು ಸೇರಿದನು.

---

498. ಚೆಯ್ಯ ಪುನ್‌ಚಟೈ ಕರನ್ದ್ರ ತೋರ್ ತಿರುಮುಟಿ ಚ್ಚಿಕೈಯುಙ್
ಚೈವ ವೆಣ್ಣಿರು ನೀಟ್ಟುಮು ಣ್ಣುತ್ತೊಳಿ ತ್ತ್ರಟಿ್ಗೈಪ್ಪುಮ್
ಮೆಯ್ಯಿನ್ ವೆಣ್ಪುರಿ ನೂಲುಟನ್ ವಿಳಙ್ಗುಮಾನ್ ಱೋಲುಙ್
ಕೈಯಿನ್ ಮನ್‌ನಿಯ ಪವಿತ್ತಿರ ಮರಕತ ಕ್ಕತಿರುಮ್,

499. ಮುಞ್ಚಿ ನಾಣುಱ ಮುಟಿನ್ದ್ರತು ಚಾತ್ತಿಯ ವರೈಯಿ
ಱ್ಞ್ಚ ಮಾಮಱೈ ಕ್ಕೋವಣ ವಾಟೈಯಿನ್ ಱೈವುಮ್
ವಞ್ಚ ವಲ್ವಿನೈ ಕ್ಕಱುಪ್ಪುಱು ಮನತ್ತ್ರಟೆ ಯಾರ್ಕ
ಣೆಞ್ಚಿ ನೀಙ್ಗಿಟಾ ಪಟಿಮಲರ್ ನೀಣಿಲಮ್ ಪೊಲಿಯ,

500. ಕಣ್ಟ ವರ್‌ಕ್ಕುಱು ಕಾತಲಿನ್ ಮನಙ್ಕರೈ ನ್ದ್ರುರುಕ
ತ್ತೊಣ್ಟ ರನ್‌ಪೆನುನ್ ತೂನೆಱಿ ವೆಳಿಪ್ಪಟು ಪ್ಪಾರಾಯ್
ತ್ತಣ್ಟಿನ್ ಮಿಾತಿರು ಕೋವಣ ನೀಟ್ಟುಪ್ಪೈ ತರುಪ್ಪೈ
ಕೊಣ್ಟು ವನ್ದ್ರಮರ್ ನೀತಿಯಾರ್ ತಿರುಮಟ ಙ್ಗುಱುಕ,

501. ಆತನ ದಿವ್ಯವಿಗ್ರಹವನ್ನು ಕಂಡೊಡನೆ, ಒಳಗೆ ಅರಳಿದ ಮನಸ್ಸಿನಿಂದ ಮುಖವು ಹರ್ಷದಿಂದ ಇನ್ನೂ ವಿಕಸಿತವಾಗಲು, ವೇಗದಿಂದ ಬಂದು ನಮಿಸಿ, 'ಇದುವರೆಗೆ ಕಾಣದ ನಿಮ್ಮ ದರ್ಶನವು ಇಂದು ದೊರಕೊಂಡುದು ನಾನು ಮಾಡಿದ ಯಾವುದೋ ಒಂದು ತಪಸ್ಸಿನ ಫಲ,' ಎಂದು ಅಮರನೀತಿ ಭಕ್ತನು ಹೇಳಿದನು.

502. ಈ ರೀತಿ ಉಪಚರಿಸಿ ಸೇವಿಸುವ ಭಕ್ತನನ್ನು ನೋಡಿ, 'ನೀನು ಭಕ್ತರಿಗೆ ರುಚಿಕರವಾದ ಭೋಜನವನ್ನಿತ್ತು, ಕಂಥೆ, ಉಡುದಾರ, ಬಟ್ಟೆ, ಕೌಪೀನಗಳನ್ನೆಲ್ಲಾ ಕೊಡುತ್ತಿರುವುದನ್ನು ಕೇಳಿ ನಿನ್ನನ್ನು ಕಾಣ ಬಂದೆನು' ಎಂದು ನೆತ್ತಿಯ ಕಣ್ಣನ್ನು ಮರೆಸಿ ಬಂದ ಈಶ್ವರನು ಹೇಳಿದನು.

503. ಇದನ್ನು ಕೇಳಿ ನಾಯನಾರನು 'ಈ ಸತ್ರದಲ್ಲಿ ಚತುರ್ವೇದ ಪಾರಂಗತ ರಾದ ದ್ವಿಜರು ಭೋಜನಮಾಡಲು ಅನುಕೂಲವಾಗುವಂತೆ ಪರಿಶುದ್ಧರಾದ ವೇದಿಯರೇ ಅಡುಗೆ ಮಾಡುವರು. ಇಂದು ನೀವೂ ಇಲ್ಲಿ ಭೋಜನಮಾಡಿ ಅನುಗ್ರಹಿಸಬೇಕು' ಎಂದು ಹೇಳಿ ನಮಿಸಿದನು.

504. ನಮಿಸಿದ ಭಕ್ತನನ್ನು ಬ್ರಹ್ಮಚಾರಿಯಾಗಿ ಬಂದ ಆ ವೇದಿಯನು ನೋಡಿ ಭೋಜನಕ್ಕೆ ಒಪ್ಪಿದವನಾಗಿ, 'ಪವಿತ್ರತೀರ್ಥವಾದ ಕಾವೇರಿಯಲ್ಲಿ ಸ್ನಾನಮಾಡಿ ನಾನು ಬರುವಾಗ ಮಳೆ ಬಂದುಬಿಟ್ಟರೆ ಆಗ ಒದಗುವಂತೆ, ಬೆಚ್ಚಗಾದ ಈ ಕೋವಣವನ್ನು ನಿಮ್ಮೆಡೆಯಲ್ಲಿ ಇಟ್ಟುಬಿಡುವೆನು. ಇದನ್ನು ನೀವು ಜೋಪಾನವಾಗಿಟ್ಟುಕೊಳ್ಳಿರಿ.'

---

501. ವಟಿವು ಕಾಣ್ಟಲು ಮನತ್ತಿನು ಮುಕಮಿಕ ಮಲರ್ನ್ದು,
ಕಟಿತು ವನ್ದೆತಿರ್ ವಣಙ್ಗಿ, 'ಯಿಮರ್ ಮಟತ್ತಿನಿಙ್ ಕಾಣಾಮರ್
ಪಟಿಯಿ ಲಾತನೀ ರಣ್ಣೆಯಮುನ್ ಪಯಿಙವ ಮೆನ್ನೋ
ವಟಿಯ ನೇನ್ಚೆಯ್ದ?' ತೆನ್ಙನ ರಮರ್ನೀತಿ ಯನ್ಪರ್.

502. ಪೇಣು ಮನ್ಪರೈ ನೋಕ್ಕಿ 'ನೀರ್ ಪೆರುಕಿಯ ಅಟಿಯಾರ್
ಕ್ಕೂಣು ಮೇನ್ಮೈಯಿ ಲೂಟ್ಟನಙ್ ಕನ್ದೈಕೀ ಳುಟ್ಟೈಕಳ್
ಯಾಣರ್ ವೆಣ್ಕಿಟಿ ಕ್ಕೋವಣ ಮೀತಲ್ಕೇ ಟ್ಟುಮ್ಮೈ
ಕ್ಕಾಣ ವನ್ದನ' ಮೆನ್ಙನನ್ ಕಣ್ಣುತಙ್ ಕರನ್ದೋನ್.

503. ಎನ್ಙು ತಪ್ಪಿರಾ ನರುಳ್ಚೆಯ 'ವಿತ್ತಿರು ಮಟತ್ತೇ
ನನ್ಙು ನಾನ್ಮಱೈ ನಙ್ಙವ ರಮುತುಚೆಯ್ ತರುಳ
ತ್ತನ್ಙು ವೇತಿಯರ್ ತೂಯ್ಮೈಯಿ ನಮ್ಮೈಪ್ಪತು ಮುಳತಾ
ಲಿನ್ಙು ನೀರುಮಿ ಙ್ಙಮುತುಚೆಯ್ ತರುಳು'ಮೆನ್ ಱಿಙೈಞ್ಚ.

504. ವಣಙ್ಗು ಮನ್ಪರೈ ನೋಕ್ಕಿಯ ಮ್ಮಱೈಯವ ರಿಚೈನ್ದೇ
'ಯಣಙ್ಗು ನೀರ್ಪ್ಪೊನ್ನಿ ಯಾಟಿ ನಾನ್ ವರಮಱೈ ವರಿನು
ಮುಣಙ್ಗು ಕೋವಣಮ್ ವೈತ್ತುನೀರ್ ತಾರು' ಮೆನ್ ಱೊರುವೆಣ್
ಕುಣಙ್ಗೊಳ್ ಕೋವಣ ನ್ದಣ್ಣಿನಿ ಲವಿಙ್ತ್ತತು ಕೊಟುಪ್ಪಾರ್.

505. 'ಶ್ರೇಷ್ಠವಾದ ಈ ಕೋವಣದ ಹಿರಿಮೆಯನ್ನು ನಾನು ಬೇರೆಯಾಗಿ ಹೇಳಬೇಕಾದುದಿಲ್ಲ. ನಾನು ಸ್ನಾನಮಾಡಿ ಬರುವವರೆಗೆ ನೀವಿದನ್ನು ಶ್ರದ್ಧೆಯಿಂದ ರಕ್ಷಿಸಿಟ್ಟುಕೊಂಡು ಆಮೇಲೆ ನನಗೆ ತರಬೇಕು' ಎಂದು ಹೇಳಿ ಕೌಪೀನವನ್ನು ದಂಡದಿಂದ ತೆಗೆದು ಆ ನಾಯನಾರನ ಕೈಯಲ್ಲಿ ಕೊಟ್ಟನು.

506. ವೇದಿಯನು ಕೊಟ್ಟ ಆ ಕೌಪೀನವನ್ನು ತೆಗೆದುಕೊಂಡು ದೋಷ ರಹಿತನೂ ಭಕ್ತನೂ ಆದ ನಾಯನಾರನು, 'ನೀವು ಸ್ನಾನಮಾಡಿ ಶೀಘ್ರವಾಗಿ ಇಲ್ಲಿಗೆ ಆಗಮಿಸಿ' ಎಂದು ಹೇಳಲು, ಗಂಗಾನದಿಯನ್ನು ಧರಿಸಿದ ಜಡೆಯನ್ನು ಮರೆಸಿದವನಾದ ಆ ವೇದಿಯನು ಪಕ್ಕದಲ್ಲುಳ್ಳ, ತಿಳಿಯಾದ ಅಲೆಗಳಿರುವ ಕಾವೇರಿ ನದಿಯಲ್ಲಿ ಸ್ನಾನ ಮಾಡಲು ಹೋದನು.

507. ಇತ್ತ ನಾಯನಾರನು, ತಾನು ಭಕ್ತರಿಗೆ ಕೊಡುವುದಕ್ಕಾಗಿ ಇಟ್ಟಿರುವ ಕಂಥೆ, ಉಡುದಾರ, ಬಟ್ಟೆ, ಕೌಪೀನ ಎಂಬಿವುಗಳನ್ನು ಇಟ್ಟ ಎಡೆಯಲ್ಲಲ್ಲದೆ, ಬೇರೊಂದು ಸುರಕ್ಷಿತವಾದ ಸ್ಥಳದಲ್ಲಿ ವೇದಿಯನು ಕೊಟ್ಟ ಕೌಪೀನವನ್ನು ಭದ್ರವಾಗಿರಿಸಿದನು.

---

505. 'ಓಙ್ಕು ಕೋವಣ ಪ್ಪೆರುಮೈಯೈ ಯುಳ್ಳವಾ ಱುಮಕ್ಕೋ
ಯಿಾಙ್ಕು ನಾನ್‌ಚೊಲ್ಲ ವೇಣ್ಡುವ ತಿಲ್ಲೈನೀ ರಿತನೈ
ವಾಙ್ಕಿ ನಾನ್‌ವರು ಮಳವುಮುಮ್ ಮಿಟತ್ತಿ ಕ ಱಾತೇ
ಯಾಙ್ಕು ವೈತ್ತುನೀರ್ ತಾರು' ಮೆನ್ ಱವರ್‌ಕೈಯಿಱ್ ಕೊಟುತ್ತಾರ್.

506. ಕೊಟುತ್ತ ಕೋವಣ ಙ್ಕೈಕೊಣ್ಡು ಕೋತಿಲಾ ವನ್‌ಪರ್
'ಕಟುಪ್ಪಿ ಲಿಙ್ಕಿಟು ನ್ತರುಳುನೀರ್ ಕುಳಿ' ತ್ತೆನ ಕ್ಕಙ್ಕೈ
ಮಟುತ್ತ ತುಮ್ಪಿಯ ವಳರ್‌ಚಟೈ ಮಱೈತ್ತವರ್ ಮಱೈಯೋ
ರಟುತ್ತ ತೆಣ್ತಿರೈ ಪ್ಪೊನ್ನಿನೀ ರಾಟವೆನ್ ಱಕನ್‌ಱಾರ್.

507. ತನ್ತ ಕೋವಣಮ್ ವಾಙ್ಕಿಯ ತನಿಪ್ಪೆರು ನ್ತೊಣ್ಟರ್
ಮುನ್ತೈ ಯನ್ತಣರ್ ಮೊೞಿಕೊಣ್ಡು ಮುನ್‌ಪುತಾಙ್ ಕೊಟುಕ್ಕುಙ್
ಕನ್ತೈ ಕೀಳುಟೈ ಕೋವಣ ಮನ್‌ಱಿಯೋರ್ ಕಾಪ್ಪು
ಚ್ಚಿನ್ತೈ ಚೆಯ್ತುವೇ ಱಿಟತ್ತೊರು ಚೇಮತ್ತು ವೈತ್ತಾರ್.

508. ಸ್ನಾನಕ್ಕಾಗಿ ಹೋದ ವೇದಿಯನು ನಾಯನಾರನು ಸುರಕ್ಷಿತವಾಗಿರಿಸಿದ ಎಡೆಯಿಂದ ಕೌಪೀನವನ್ನು ಮಾಯವಾಗುವಂತೆ ಮಾಡಿ, ಆಮೇಲೆ ನೀಲೋತ್ಪಲಗಳು ಅರಳುವುದಕ್ಕೆ ಎಡೆಯಾದ ಸುಂದರ ಘಟ್ಟಗಳುಳ್ಳ ಕಾವೇರಿಯ ನೀರಿನಲ್ಲಿ ಸ್ನಾನಮಾಡಿ ತಿರುಗಿದನೋ ಅಥವಾ ಪರಿಶುದ್ಧ ಸುವಾಸನೆಯಿರುವ ಜಡೆಯಲ್ಲುಳ್ಳ ಗಂಗಾನೀರಿನಲ್ಲಿ ಸ್ನಾನಮಾಡಿ ಬಂದನೋ ತಿಳಿಯೆವು. ಆದರೆ ಆಗಸದಿಂದ ಮಳೆಯು ಜೋರಾಗಿ ಸುರಿಯಲು ಅದರಲ್ಲಿ ಒದ್ದೆಯಾಗಿ ಬಂದು ಸೇರಿದನು.

509. ಕಾಂತಿಯುತವಾದ ಬಾಲಚಂದ್ರನನ್ನು ಉತ್ತಂಸವಾಗಿ ಧರಿಸಿದ ವೇದಿಯ ವೇಷದ ಶಿವನು ಬಂದು ಸೇರಿದಾಗ, ಪಕ್ವವಾದ ಭಕ್ತಿಯುಳ್ಳ ನಾಯನಾರನು, ವೇದಿಯನು ಬರುವುದಕ್ಕೆ ಮೊದಲೇ ವಿಧಿಯಂತೆ ಷಡ್ರಸೋಪೇತವಾದ ಭೋಜನವನ್ನು ತಯಾರಿಸಿಟ್ಟಿದ್ದು, ಆತನು ಬಂದೊಡನೆ ಆತನನ್ನು ಸ್ವಾಗತಿಸಿ, ನಮಿಸಿ ನಿಲ್ಲಲು, ಜನಿವಾರದಿಂದ ಅಲಂಕೃತವಾದ ಎದೆಯುಳ್ಳ ಆ ವೇದಿಯನು,

510. ಭಕ್ತರ ಭಕ್ತಿಯೆಂಬ ಪರಿಶುದ್ಧಜಲದಲ್ಲಿ ಸ್ನಾನಮಾಡಲಿಚ್ಛಿಸಿ, ನಾಯನಾರನನ್ನು ನೋಡಿ, ಶೀತಲಜಲದಲ್ಲಿ ಮುಳುಗಿದುದರಿಂದ ಒದ್ದೆಯಾದ ಕೌಪೀನವನ್ನು ಬದಲಿಸುವುದಕ್ಕೆ ದಂಡದ ಮೇಲಿರುವ ಕೌಪೀನವೂ ಒದ್ದೆಯಾದುದರಿಂದ, 'ನಾನು ಕೊಟ್ಟಿದ್ದ ಕೌಪೀನವನ್ನು ಕೊಂಡುಬನ್ನಿ' ಎಂದು ಹೇಳಿದನು.

---

508. ಪೋನ ವೇತಿಯರ್ ವೈತ್ತಕೋ ವಣತ್ತಿನೈ ಪೋಕ್ಕಿ
ಪ್ಪಾನ ಲನ್ನುಱೈ ಪೊನ್ನಿನೀರ್ ಪಟಿನ್ತುವ ನ್ತಾರೋ?
ತೂನ ಱುಙ್ಚಟೈ ಕ್ಕಙ್ಕೈನೀರ್ ತೋಯ್ನ್ತುವ ನ್ತಾರೋ?
ವಾನ ನೀರ್ಮಟೈ ಪೊಟಿನ್ತಿಟ ನನೈನ್ತುವ ನ್ತಣೈನ್ತಾರ್.

509. ಕತಿರಿ ಳಮ್ಪಿಱೈ ಕ್ಕಣ್ಣಿಯರ್ ನಣ್ಣಿಯ ಪೊೞುತಿನ್
ಮುತಿರು ಮನ್ಪುಟೈ ತ್ತೊಣ್ಟರ್ತಾ ಮುಱೈಮೈಯಿನ್ ಮುನ್ನೇ
ಯತಿಕ ನನ್ಮೈಯಿ ನಱುಚುವೈ ತ್ತಿರುವಮು ತಾಕ್ಕಿ
ಯೆತಿರೆ ೞುನ್ತುಚೆನ್ ಱಿಱೈಞ್ಚಿಟ ನಿಱೈನ್ತನೂನ್ ಮಾರ್ಪರ್,

510. ತೊಣ್ಟ ರನ್ಪೆನು ನ್ತೂಯನೀ ರಾಟುತಲ್ ವೇಣ್ಟಿ
'ಮಣ್ಟು ತಣ್ಪುನಲ್ ಮೂೞ್ಕಿಯ ವಿರತ್ತೈ ಮಾಱ
ತ್ತಣ್ಟಿನ್ ಮೇಲುಳ ತೀರನಾನ್ ಱನ್ತಕೋ ವಣತ್ತೈ
ಕ್ಕೊಣ್ಟು ವಾರು'ಮೆನ್ ಱುರೈತ್ತನರ್ ಕೋವಣ ಕ್ಕಳ್ವರ್.

511. ವೇದಿಯನ ಕಪಟವನ್ನು ತಿಳಿಯದವನಾದ ನಾಯನಾರನು, ಶೀಘ್ರವಾಗಿ ಒಳಕ್ಕೆ ಹೋಗಿ ನೋಡಲು ಪ್ರತ್ಯೇಕವಾದೆಡೆಯಲ್ಲಿ ಸುರಕ್ಷಿತವಾಗಿಟ್ಟಿದ್ದ ಆ ಕೌಪೀನವನ್ನು ಕಾಣದಾದನು. 'ನಾನು ಭದ್ರವಾಗಿಟ್ಟಿದ್ದ ಕೌಪೀನವೆಲ್ಲಿ ಹೋಯಿತು?' ಎಂದು ಭ್ರಮಿಸಿ, ಅದನ್ನು ಹುಡುಕುವವನಾದನು.

512. ಆ ದಿವ್ಯವಾದ ಕೌಪೀನವು ತಪ್ಪಿಹೋಗಿದೆ ಎಂಬ ನಿರ್ಧಾರಕ್ಕೆ ಬಂದು ತಾನು ಬಟ್ಟೆಗಳನ್ನಿಡುವ ಇತರ ಹಲವೆಡೆಗಳಲ್ಲಿಯೂ ಹುಡುಕಿ ಕಾಣದಾದನು. ಹೀಗೆ ವೇದಿಯನು ತಂದಿಟ್ಟ ದೊಡ್ಡ ತೊಡರಿನಲ್ಲಿ ಸಿಕ್ಕಿಬಿದ್ದು ಏನೂ ತೋರದೆ ನಿಂತನು.

513. ಇಂತಹ ಒಂದು ಸಂಭವವು ಬಂದು ಸೇರಿತೇ? ಎಂದು ತನ್ನ ಹೆಂಡತಿ ಸಂಬಂಧಿಕರೊಡಗೂಡಿ ದುಃಖವನ್ನು ಹೊಂದಿ, ಬೇರೊಂದನ್ನೂ ನೆನೆಯದವನಾಗಿ ತುಂಬಾ ವ್ಯಥೆಪಟ್ಟನು. ಈ ನೆಲೆಯಲ್ಲಿ ಒಳಗೆ ನಿಲ್ಲಲೂ ಆತನಿಂದ ಸಾಧ್ಯವಾಗಲಿಲ್ಲ. ಕೊನೆಗೆ ವೇದಿಯನು ಧರಿಸುವುದಕ್ಕೆ ಬೇರೊಂದು ಕೌಪೀನವನ್ನು ತೆಗೆದುಕೊಂಡು ಹೊರಟನು.

514. ಹೀಗೆ ನಾಯನಾರನು ವೇದಿಯನ ಮುಂದೆ ಹೋಗಿ, 'ಸ್ವಾಮಿ, ನೀವು ಕೊಟ್ಟ ಕೌಪೀನವನ್ನು ನಾನು ಭದ್ರವಾಗಿಟ್ಟೆಡೆಯಿಂದ ಕಾಣದಾಗಿಸಿದವರು ಯಾರೋ ತಿಳಿಯದಾಗಿದೆ. ಅದು ಮರೆಯಾಗಿ ಹೋದ ರೀತಿಯನ್ನೂ ತಿಳಿಯೆನು. ಇಂತಹ ಒಂದು ಆಶ್ಚರ್ಯವನ್ನು ನಾನು ಬೇರೆ ಕಂಡುದಿಲ್ಲ'.

---

511. ಐಯರ್ ಕೈತವ ಮಱಿವುಱಾ ತವರ್ಕಟಿ ತಣುಕಿ
ಯೆಯ್ದಿ ನೋಕ್ಕುಱಿ ಕೋವಣ ಮಿರುನ್ದವೇ ಱಿಟತ್ತಿನ್
ಮೈಯಿಲ್ ಚಿನ್ದೈಯರ್ ಕಣ್ಟಿಲರ್, 'ವೈತ್ತಕೋ ವಣಮುನ್
ಚೆಯ್ದ ತೆನ್' ನೆನ್ಱು ತಿಕೈತ್ತನರ್ ತೇಟುವಾ ರಾನಾರ್.

512. ಪೊೞ್ಕು ವೆಣ್ಕಿಟಿ ಕೋವಣಮ್ ಪೋಯಿನ ನೆಱಿಮೇಱ್
ಚೞಕ್ಕಿಲ ಯಿನ್ಱಿಯೋ ತಪ್ಪಿನ' ತೆನ್ಱುತ ಞ್ಚರಕ್ಕಿ
ಲೆೞ್ಕು ನಾಟಿಯು ಙ್ಕಣ್ಟಿಲ; ರೆನ್ಚೆಯ್ವಾರ್! ನಿನ್ಱಾ;
ರೞ್ಕಣ್ ವೇತಿಯರ್ ಪೆರುನ್ದೊಟ ಕ್ಕಿನಿಲಕ ಪ್ಪಟ್ಟಾರ್.

513. ಮನೈಮಿ ಯಾರೋಟು ಮನ್ನಿಯ ಕಿಳೈಞರು ನ್ದಾಮು
ಮಿನೈಯು ತೊನ್ಱುಮ ನ್ದಿಯಿನ್ದಯು ತೆನವಿಟರ್ ಕೂರ್ನ್ದು
ನಿನೈವ ತೊನ್ಱಿಲರ್ ವರುನ್ದಿನರ್; ನಿಱ್ಕವು ಮಾಟ್ಟಾರ್;
ಪುನೈಯು ವೇಱೊರು ಕೋವಣ ಙ್ಕೊಟುಪುಱ ಪ್ಪಟ್ಟಾರ್.

514. ಅತ್ತರ್ ಮುನ್ಪುಚೆನ್ 'ಱಟಿಕ! ಣೀರ್ ತನ್ದಕೋ ವಣತ್ತೈ
ವೈತ್ತಿ ಟತ್ತುನಾನ್ ಕಣ್ಟಿಲನ್, ಮಱ್ಱುಮೋ ರಿಟತ್ತಿ
ಲುಯ್ತ್ತೊ ೞಿತ್ತನ ರಿಲ್ಲೈ; ಯಃ ತೊೞಿನ್ದವಾ ಱಱಿಯೋ;
ನಿತ್ತ ಕೈತ್ತವೇ ಱತಿಚಯ ಙ್ಕಣ್ಟಿಲೇ' ನೆನ್ಱು,

515. 'ನೀವು ಒದ್ದೆಯನ್ನು ಬದಲಿಸಲಿಕ್ಕಾಗಿ ಇನ್ನೊಂದು ಉತ್ತಮ ಕೌಪೀನವನ್ನು ತಂದಿರುವೆನು. ಅದು ಜೀರ್ಣವಾದುದಲ್ಲ. ಕೌಪೀನವಾಗಿಯೇ ನೆಯ್ದು ತಯಾರಿಸಿದುದು. ಪರಿಶುದ್ಧ ವಿಭೂತಿಯನ್ನು ಧರಿಸಿದ ಹಣೆಯುಳ್ಳವರೇ, ನಿಮ್ಮ ಕೌಪೀನವನ್ನು ಕಳೆದು ಅದಕ್ಕೆ ಬದಲಾಗಿ ಇದನ್ನುಟ್ಟುಕೊಂಡು ನನ್ನ ತಪ್ಪನ್ನು ಮನ್ನಿಸಿ ಅನುಗ್ರಹಿಸಬೇಕು' ಎಂದು ಹೇಳಿ ನಾಯನಾರನು ನಮಿಸಿದನು.

516. ಆಗ ವೇದಿಯನು, 'ಅಮರನೀತಿಯವರೆ! ನೀವು ಹೇಳುವ ನೆಲೆಯು ತುಂಬಾ ಒಳ್ಳೆಯದಾಗಿದೆ! ಎಡೆಯಲ್ಲಿ ಬಹು ದಿನಗಳೂ ಕಳೆದುದಿಲ್ಲ. ಇಂದು ನಾನು ನಿಮ್ಮೆಡೆಯಲ್ಲಿ ಕೊಟ್ಟ ಕೌಪೀನವನ್ನು ನೀವೇ ಕೊಂಡು, 'ಅದಕ್ಕೆ ಬದಲಾಗಿ ಬೇರೊಂದು ಕೌಪೀನವನ್ನು ತೆಗೆದುಕೊಳ್ಳಿ' ಎಂದು ಹೇಳುವುದೆ?'

517. 'ಒಳ್ಳೆಯ ಕೌಪೀನವನ್ನು ತರುವೆನೆಂದು ಹೇಳಿ ನೋಡುವುದು ನನ್ನ ಕೌಪೀನವನ್ನು ಅಪಹರಿಸುವ ಮನಸ್ಸಿನಿಂದಲೋ? ನೀವು ಇಲ್ಲಿ ಮಾಡಿದ ವ್ಯಾಪಾರವು ತುಂಬಾ ಚಲೋದಾದುದು!' ಎಂದು ಹೇಳಿ, ಎಲ್ಲೆಯಿಲ್ಲದವನಾದ ಪರಮಾತ್ಮನು ದಳ್ಳುರಿಯೆದ್ದಂತೆ ಕೋಪಿಸಿದನು.

---

515. 'ವೇಱು ನಲ್ಲತೋರ್ ಕೋವಣವ್ ವಿರುಮ್ಬಿಮುನ್ ಕೊಣರ್ನ್ದೇನ್,
ಕೀಱು ಕೋವಣ ಮನ್ಱು; ನೆಯ್ ತಮೈತ್ತತು; ಕಿಳರ್ಕೋ
ಣೀಱು ಚಾತ್ತಿಯ ನೆಱ್ಱಿಯೀರ್! ಮಱ್ಱತು ಕಳೈನ್ದು
ಮಾಱು ಚಾತ್ತಿಯೆನ್ ಪಿೞೈಪೊಱು ಪ್ಪೀ' ರೆನ ವಣಙ್ಗ,

516. ನಿನ್ಱ ವೇತಿಯರ್ ವೆಕುಣ್ 'ಟಮರ್ ನೀತಿಯಾರ್! ನಿಲೈಮೈ
ನನ್ಱು! ಚಾಲವು ನಾಳಿಟೈ ಕಟಿನ್ದತು ಮನ್ಱಾ;
ಇನ್ಱು ನಾನ್ವೈತ್ತ ಕೋವಣ ಙ್ಕೊಣ್ಡುತಱ್ ಕೆತಿರ್ವೇ
ಱೊನ್ಱು ಕೊಳ್ಕೆನ ವುರೈಪ್ಪತೇ! ನೀ' ರೆನ ವುರೈಯಾ,

517. 'ನಲ್ಲ ಕೋವಣ ಙ್ಕೊಟುಪ್ಪನೆನ್ ಱುಲಕಿನ್ಮೇ ನಾಳುಙ್
ಚೊಲ್ಲು ವಿತ್ತತೆನ್ ಕೋವಣ ಙ್ಕೊಳ್ವತು ತುಣಿನ್ದೋ?
ವೊಲ್ಲೈ ಯಿಙ್ಙಱು ವಾಣಿಪ ಮಟಕಿತೇ ಯುಮಕ್!' ಕೆನ್
ಱೆಲ್ಲೈ ಯಿಲ್ಲವ ನೆರಿತುಳ್ಳ ನಾಲೆನ ವೆಕುಣ್ಡಾನ್.

518. ಜಿಂಕೆಯನ್ನು ಮರೆಸಿ ಅದಕ್ಕೆ ಪ್ರತಿಯಾಗಿ ದಂಡವನ್ನು ಧರಿಸಿ ಬಂದ ವೇದಿಯನು, ಈ ರೀತಿ ಕೋಪಿಸಲು ಚಿಂತನೆಯೆಲ್ಲಾ ಕಲಕಿ ಮುಖವು ಬಾಡಿ 'ಸಣ್ಣವನಾದ ನನ್ನ ಈ ತಪ್ಪನ್ನು ಮನ್ನಿಸಿ ಅನುಗ್ರಹಿಸಿ. ಇದು ದಾಸನು ತಿಳಿದು ಮಾಡಿದ ತಪ್ಪಲ್ಲ' ಎಂದು ಹೇಳಿ ವೇದಿಯನ ಪಾದಗಳಲ್ಲಿ ಸಾಷ್ಟಾಂಗ ಬಿದ್ದು ಮೊರೆಯಿಡುವವನಾಗಿ,

519. 'ಮಾಡತಕ್ಕುದೆಂದು ತಾವು ವಿಧಿಸಿದ ಕಾರ್ಯವಾವುದನ್ನೂ ನಾನು ಮಾಡುವೆನು. ಈ ಕೌಪೀನವನ್ನಲ್ಲದೆ ಅಮೂಲ್ಯವಾದ ಮಡಿ ಬಟ್ಟೆ, ಪಟ್ಟೆ ವಸ್ತ್ರಗಳೆಂಬ ಶ್ರೇಷ್ಠ ನೂತನ ಬಟ್ಟೆಗಳನ್ನು ತಾವು ತೆಗೆದುಕೊಂಡು ಅನುಗ್ರಹಿಸಿ' ಎಂದು ಹೇಳಿ ತುಂಬಾ ಭಯದಿಂದ ಕೊಡಿದವನಾಗಿ, ಮನಸ್ಸು ಬಾಡಿ, ವೇದಿಯನ ಶ್ರೀಪಾದಗಳನ್ನು ನಾಯನಾರನು ಹಲವು ಬಾರಿ ನಮಿಸಿದನು.

520. ಈ ರೀತಿ ನಮಿಸಿದ ಭಕ್ತನನ್ನು ನೋಡಿ, ಆ ಪರವಸ್ತುವಾದ ವೇದಿಯನು ಕೋಪವು ಕಮ್ಮಿಯಾದವನಂತೆ ತೋರಿಸಿ, 'ನೀವು ತರುವ ಮಣಿ, ಚಿನ್ನ, ಬಟ್ಟೆ ಮತ್ತಿತರ ವಸ್ತುಗಳನ್ನು ಕೊಂಡು ನಾನೇನನ್ನು ಮಾಡಲಿ? ನಾನು ಧರಿಸುವ ಕೌಪೀನಕ್ಕೆ ಸಮವಾದ ಕೌಪೀನವನ್ನು ಕೊಟ್ಟರೆ ಸಾಕು' ಎಂದು ಅನುಗ್ರಹಿಸಿದನು.

---

518. ಮಱೈಕ ರನ್ತ್ರತ ಣ್ಕೋನಿ್ರಯ ಮಱೈಯವರ್ ವೆಕುಳ
ಪ್ಪೊಱೈಕ ಲಙ್ಕಿಯ ವುಣರ್ವಿನ ರಾಯ್ಮುಕಮ್ ಪುಲರ್ನ್ತು
'ಚಿಱಿಯ ವೆನ್ಪೆರುಮ್ ಪಿಱೈಪೊಱು ತ್ತರುಳ್ಚೆಯ್ವೀ! ರಟಿಯೇ
ನಱಿಯ ವನ್ತತೊನ್ ಱನ್' ಱಿನ ವಟಿಪಣಿ ನ್ತಯರ್ವಾರ್;

519. 'ಚೆಯತ್ತ ಕುವ್ಪಣಿ ಚೆಯ್ವ; ನಿ ಕ್ಕೋವಣ ಮನ್ಱಿ
ನಯತ್ತ ಕುನ್ತನ ನಲ್ಪಟ ಟ್ಟಾ ಟೈಕಳ್ ಮಣಿಕ
ಳುಯರ್ತ್ತ ಕೋಟಿಕೊ ಣ್ಟರುಳು' ಮೆನ್ ಱುಟಮ್ಪಿನಿ ಲಟಙ್ಗಾ
ಪಯತ್ತೊ ಟುಙ್ಕುಲೈ ನ್ತಟಿಮಿಚೈ ಪ್ಪಲಮುಱೈ ಪಣಿನ್ತಾರ್.

520. ಪಣಿಯು ಮನ್ಬರೈ ನೋಕ್ಕಿಯ ಪರಮ್ಪೊರು ಳಾನಾರ್.
ತಣಿಯು ಮುಳ್ಳತ್ತ ರಾಯಿನಾರ್ ಪೋನ್ಱು, 'ನೀರ್ ತನ್ತ
ಮಣಿಯುಮ್ ಪೊನ್ನುನ ಲ್ಲಾಟೈಯು ಮಱಿಮೆನ್ ಚೆಯ್ಯ?
ವಣಿಯು ಙ್ಕೋವಣ ನೇರ್ತರ ವಮ್ಯೆಯು' ಮೆನ್ ಱರುಳ.

521. ಇದನ್ನು ಕೇಳಿ ವೈಶ್ಯಕುಲತಿಲಕನಾದ ಆ ನಾಯನಾರನು, 'ತಾವು ತಮ್ಮ ಕೌಪೀನಕ್ಕೆ ಪ್ರತಿಯಾಗಿ ಬೇರೆ ಹೊಸ ಬಟ್ಟೆಗಳನ್ನು ಕೊಳ್ಳುವುದಕ್ಕೆ ಸಮ್ಮತಿಸಲಿಲ್ಲ ಹೀಗಿರುವಲ್ಲಿ ಒಳ್ಳೆಯದಾದ ಕೌಪೀನವನ್ನು ತರುವ ಬಗೆ ತಾನೇ ಯಾವುದು ?' ಎಂದು ನಮಿಸಲು ಹಿತವನಾದ ಆ ವೇದಿಯ ಬ್ರಹ್ಮಚಾರಿಯು,

522. 'ನಾನು ನಿಮ್ಮಲ್ಲಿ ಕೊಟ್ಟು ನೀವು ಕಳೆದುಹಾಕಿದ ಆ ಕೌಪೀನಕ್ಕೆ ಸಮವಾದುದಿದು' ಎಂದು ಹೇಳಿ, ದಂಡದ ಮೇಲೆ ಕಟ್ಟಿರುವುದನ್ನು ಅಲ್ಲಿಂದ ತೆಗೆದು, 'ಇದಕ್ಕೆ ಸಮತೂಕವಾದ ಕೌಪೀನವನ್ನು ತಂದುಕೊಡಿರಿ' ಎಂದು ಹೇಳಿದನು.

523. ಇದಕ್ಕೆ ನಾಯನಾರನು ಸಮ್ಮತಿಸಿ, ಒಂದು ತೊಲೆಯನ್ನು ನಾಟಲು ಮೇರುಗಿರಿಯನ್ನು ಬಿಲ್ಲಾಗಿಸಿಕೊಂಡ ಶಿವನು ಆ ತೊಲೆಯ ಒಂದು ತಟ್ಟೆಯಲ್ಲಿ ತನ್ನ ಕೌಪೀನವನ್ನಿಟ್ಟನು. ನಾಯನಾರನು ತಾನು ನೆಯ್ದ ಕೌಪೀನವನ್ನು ತೊಲೆಯ ಮತ್ತೊಂದು ತಟ್ಟೆಯಲ್ಲಿಟ್ಟನು. ಇದು ಆ ವೇದಿಯನ ಕೌಪೀನದ ಭಾರಕ್ಕೆ ಸಮವಾಗಲಿಲ್ಲ.

---

521. ಮಲರ್ನ್ತ ಚಿನ್ತೈಯರಾಕಿಯ ವಣಿಕರೇ ಱನೈಯಾ
'ರಲರ್ನ್ತ ವೆಣ್ಣೂಱ ಕ್ಕೋವಣ ಮತಱ್ಕುನೇ ರಾಕ
ವಿಲಙ್ಕು ಪೂನ್ತುಕಿಲ್ ಕೊಳ್ವತಱ್ ಕಿಚೈನ್ತರುಳ್ ಚೆಯ್ಯೀರ್;
ನಲಙ್ಕೊಳ್ ಕೋವಣ ನ್ತರುವ್ಪರಿ ಚೆಯಾ' ತೆನ ನವಿಲ್ಪರ್,

522. 'ಉಟುತ್ತ ಕೋವಣ ಮೊಟೆಯನಾ ಮುಙ್ಕೈಯಿ ಱರನೀರ್
ಕೆಟುತ್ತ ತಾಕಮುನ್ ಚೊಲ್ಲುಮ ಕ್ಕಟೆತ್ತಕೋ ವಣನೇ
ರಟುತ್ತ ಕೋವಣ ಮಿತು' ವೆನ್ಱು, ತಣ್ಟಿನಿ ಲವಿಟ್ರಾ
ವೆಟುತ್ತು, 'ಮಣೆತ ನೆಟ್ಟೈಯಿಟು ಙ್ಕೋವಣ' ಮೆನ್ಱಾರ್.

523. 'ನನ್ಱು ಚಾಲ!' ವೆನ್ ಱನ್ಪರು ಮೊರುತುಲೈ ನಾಟ್ಟ
ಕ್ಕುನ್ಱ ವಿಲ್ಲಿಯಾರ್ ಕೋವಣ ಮೊರುತಟ್ಟೆ ಲಿಟ್ಟಾರ್;
ನಿನ್ಱ ವನ್ಪರು ಙ್ಕೈಯಿನಿ ನೆಯ್ತ್ತಕೋ ವಣನ್ತ
ಟ್ಟೊನ್ಱಿ ಲೇಯಿಟ ನಿಙ್ಕೈನಿಲಾ ತೊಟೆನ್ತಮ್ಮೈ ಕಣ್ಟಾರ್.

524. ಬಹುವಾದ ಭಕ್ತಿಯೊಡನೆ ತಾವು ಭಕ್ತರುಗಳಿಗೆ ಕೊಡುವುದಕ್ಕಾಗಿ ಈ ಹಿಂದೆ ಇಟ್ಟಿದ್ದ ಉತ್ತಮ ಕೌಪೀನಗಳೆಲ್ಲವನ್ನೂ ಇಟ್ಟರೆ ತೊಲೆಯು ಸಮವಾಗಿ ನಿಲುವುದೆಂದು ಅವುಗಳನ್ನು ಒಂದೊಂದಾಗಿ ತೆಗೆದು ಹಗುರವಾಗಿ ಮೇಲೆದ್ದ ತಟ್ಟೆಯ ಮೇಲೆ ಇಡುತ್ತ ಹೋಗಲು ಅದು ಅವೆಲ್ಲವನ್ನೂ ಕೊಂಡು ಮೇಲೆದ್ದೇ ನಿಂತುದನ್ನು ಕಂಡವನಾಗಿ, ಚಿದಂಬರದಲ್ಲಿ ನಟನವನ್ನು ಮಾಡುವ ಪರಮಾತ್ಮನ ಶ್ರೀಪಾದಗಳಿಗೆ ಸೇವೆಯನ್ನು ಮಾಡುವ ನಾಯನಾರನು ಆಶ್ಚರ್ಯವನ್ನು ಹೊಂದಿದನು.

525. 'ಇದು ಲೋಕದಲ್ಲಿಲ್ಲದ ಮಾಯೆಯಾಗಿದೆ. ಈ ವೇದಿಯರ ಒಂದು ಕೌಪೀನಕ್ಕೆ ಅಗಣಿತವಾದ ಕೌಪೀನಗಳು ಸಮವಾಗದೆ ಹೋದುವು' ಎಂದು ಆ ನಾಯನಾರನು ಅಚ್ಚರಿಗೊಂಡು ಅದರ ಮೇಲೆ ಅಮೂಲ್ಯವಾದ ಬಟ್ಟೆಗಳು ಪಟ್ಟೆವಸ್ತ್ರಗಳು ಮೊದಲಾದ ಹಲವನ್ನಿಡುತ್ತಾ ಬರಲಾಗಿ ತಟ್ಟೆಯು ಮೇಲೆದ್ದೇ ನಿಂತಿತು. ಆಮೇಲೆ ಶೋಭಿಸುವ ಪರಿಶುದ್ಧವಾದ ಜವುಳಿ ಮೂಟೆಗಳನ್ನೇ ತೆಗೆದು ಆ ಮೇಲೆದ್ದ ತಟ್ಟೆಯ ಮೇಲೆ ಆತನಿಟ್ಟನು.

526. ಭಕ್ತನು ಭಕ್ತಿಯಿಂದಿಡುವ ತಟ್ಟೆಯನ್ನು ನೋಡಲು ವೇದಿಯನು ಕೌಪೀನವೊಂದನ್ನಿಟ್ಟ ತಟ್ಟೆಯು ಅನುಗ್ರಹದಿಂದ ಭಾರವಾಗಿ ಕೆಳಗೆ ತಗ್ಗುವುದೆಂಬುದು ಸಂಪ್ರದಾಯವಾದುದರಿಂದ, ಬಹುವಾದ ಪಟ್ಟೆಗಳೊಡನೆ ಅಗಣಿತವಾದ ವಸ್ತುಗಳನ್ನಿಟ್ಟರೂ ನಾಯನಾರನ ತಟ್ಟೆಯು ಮೇಲ್ಪಟ್ಟೇ ನಿಂತಿತು. ವೇದಿಯನ ತಟ್ಟೆಯು ಭಾರದಿಂದ ತಗ್ಗಿಯೇ ನಿಂತಿತು.

---

524. ನಾಟು ಮನ್ಪೊಟು ನಾಯನ್ಮಾರ್ ಕ್ಕಳಿಕ್ಕಮುನ್ ವೈತ್ತ
ನೀಟು ಕೋವಣ ಮಟ್ಟೈಯುನೇ ರಾಕವೊನ್ ಱಿಱೊನ್ಱಾ
ಕ್ಕೋಟು ತಟ್ಟಿನ್ಮಿಾ ತಿಟವಿಟ ಕ್ಕೊಣ್ಟೆಟು ನ್ತ್ರತುಕಣ್
ಟಾಟು ಚೇವಟಿ ಕ್ಕಟಿಯುರು ಮಱ್ಪುತ ಮೆಯ್ತ್ರಿ,

525. 'ಉಲಕಿ ಲಿಲ್ಲಕೋರ್ ಮಾಯ್ಕೈ ! ಯಿ ಕ್ಕೋವಣ ಮೊನ್ಱು
ಕ್ಕಲಕಿಲ್ ಕೋವಣ ಮೊತ್ತಿಲ !' ವೆನ್ಱಿತಿ ಚಯಿತ್ತು
ಪ್ಪಲವುಮ್ ವೆಣ್ಟುಕಿಲ್ ಪಟ್ಟುಟ ನಿಟವಿಟ ಉಯರ
ವಿಲಕು ಪೂನ್ತುಕಿಱ್ ಪೊತಿಕಳ್ಳೈ ಯೆಟುತ್ತುಮೇ ಲಿಟ್ಟಾರ್.

526. ಮಟ್ಟೆ ಲನ್ಪರ್ತ ಮನ್ಪಿಟು ನ್ತ್ರಟ್ಟುಕ್ಕು ಮುತಲ್ವರ್
ಮಟ್ಟು ನಿನ್ಱತ ಟ್ಟರುಳೊಟು ನ್ತ್ರಾಱ್ವುಱುಮ್ ವಟಕ್ಕಾಲ್
ಪಟ್ಟೊ ಟುನ್ತುಕಿ ಲನೇಕಕೋ ಟಿಕಳಿಟುಮ್ ಪತ್ತರ್
ತಟ್ಟು ಮೇಱ್ಪಟ ತ್ತಾಱ್ನ್ತ್ರತು ಕೋವಣ ತ್ತ್ರಟ್ಟು.

527. ಇದನ್ನು ನೋಡಿ ನಾಯನಾರನು ಆ ವೇದಿಯನೊಡನೆ, 'ಈ ತಟ್ಟೆಯಲ್ಲಿ ಶ್ರೇಷ್ಠವಾದ ಅಗಣಿತ ವಸ್ತ್ರಜಾತಿಗಳನ್ನೂ ನೇಯಲಿಕ್ಕಾಗಿರಿಸಿದ್ದ ನೂಲಿನ ಕಟ್ಟುಗಳನ್ನೂ ಮೇಲೆ ಮೇಲೆ ರಾಶಿ ಹಾಕಿದರೂ ಈ ತಟ್ಟೆಯು ಹಗುರವಾಗಿಯೇ ಇದೆ. ಆದುದರಿಂದ ದಾಸನಾದ ನಾನು ನನ್ನಿತರ ಭಾಗ್ಯಗಳನ್ನು ಈ ತಟ್ಟೆಯ ಮೇಲಿರಿಸಲು ಬಯಸುತ್ತೇನೆ. ಇದಕ್ಕೆ ನಿಮ್ಮ ಸಮ್ಮತಿಯನ್ನು ಕೇಳುತ್ತೇನೆ' ಎಂದು ನಮಿಸಲು,

528. ಪಾರ್ವತಿಯನ್ನು ಭಾಗವಾಗುಳ್ಳ ವೇದಿಯನು ಇದಕ್ಕೊಪ್ಪಿ 'ಇಲ್ಲಿ ನಾನು ಬೇರೊಂದನ್ನು ಹೇಳಲಾರೆನು. ಇನ್ನಿತರ ಸಂಪತ್ತುಗಳನ್ನು ನೀವಿಡಬಹುದು. ಹೇಗೂ ನನ್ನ ಕೌಪೀನದ ತೂಕಕ್ಕೆ ಸಮಬಂದರೆ ಸರಿ. ಇದೇ ನನಗೆ ಬೇಕಾದುದು,' ಎಂದು ಹೇಳಿದನು.

529. ಆಗ ನಾಯನಾರನು ಚಿನ್ನ, ಬೆಳ್ಳಿ, ನವರತ್ನ ಸಮೂಹಗಳು, ಹಲವಿಧ ಶ್ರೇಷ್ಠಲೋಹಗಳು, ಹಲವು ಲೋಹಗಳ ಸೇರಿಕೆಯಿಂದಾದ ಹಲಬಗೆಯ ಮಿಶ್ರಲೋಹ ಗಳು, ಇವುಗಳನ್ನೂ ಇವುಗಳಿಂದಾದ ಅಗಣಿತ ವಸ್ತುಗಳನ್ನೂ ಆ ಮೇಲೆದ್ದ ತಟ್ಟೆ ಯಲ್ಲಿರಿಸುತ್ತಾ ಬರಲು, ಆ ವಸ್ತುಗಳನ್ನೊಳಕೊಂಡೂ, ಆ ತಟ್ಟೆಯು ಲಘುವಾಗಿ ಮೇಲೆದ್ದೇ ನಿಂತಿತು. ಲೋಕದವರು ಅದನ್ನು ಕಂಡು ಅಚ್ಚರಿಗೊಂಡರು.

---

527. ಆನ ತನ್ಮೈಕ ಣ್ಟಿಟೆಯವ ರಙ್ಙಿಯ ನ್ತಣರ್ಮುನ್
'ತೂನ ಙನ್ತುಕಿಲ್ ವರುಕ್ಕನೂಲ್ ವರುಕ್ಕಮೇ ಮುತಲಾ
ಮಾನ ಮಿಲ್ಲನ ಕುವಿಕ್ಕವು ನ್ತಟ್ಟಿನ್ಮ ಟ್ಟಿತುವಾಲ್,
ಏನೈ ಯೆನ್ಙನ ಮಿಟಪ್ಪೆಙ ವೇಣ್ಟು' ಮೆನ್ ಱಿಙೈಞ್ಚ,

528. ಮಙೈಕ್ಕೊರು ಪಾಕರಾ ಮಙೈಯವರ್ ಮತ್ತಿತಱ್ ಕಿಚೈನ್ತೇ
'ಇಙ್ಕು ನಾಮಿನಿ ವೇಱೊನ್ಱು ಚೊಲ್ಲುವ ತೆನ್ಕೊಲ್!
ಅಙ್ಕು ಮತ್ತುಙ್ಕ ಟನಙ್ಕಳಿ ನಾಕಿಲು ಮಿಟುಮೀರ್;
ಎಙ್ಕಳ್ ಕೋವಣ ನೇರ್ನಿಱ್ಕ ವೇಣ್ಟುವ' ತೆನ್ಱಾರ್.

529. ನಲ್ಲ ಪೊನ್ನೊಟುಮ್ ವೆಳ್ಳಿಯು ನವಮಣಿ ತ್ತಿರಳುಮ್
ಪಲ್ವ ಕೈತ್ತಿಙ ತ್ತುಲೋಕಮುಮ್ ಪುಣರ್ಚ್ಚಿಕಳ್ ಪಲವು
ಮೆಲ್ಲೈ ಯಿಲ್ಪೊರುಳ್ ಚುಮನ್ತವ ರಿಟವಿಟ ಕ್ಕೊಣ್ಟೇ
ಮಲ್ಕು ತಟ್ಟುಮಾ ತೆಟುನ್ತತು; ಮಿಯನ್ತನರ್ ಮಣ್ಣೋರ್.

530. ತಪಸ್ಸಿನಲ್ಲಿ ಪರಿಪೂರ್ಣವಾದ ನಾಲ್ಕು ವೇದಗಳ ವಸ್ತುವಾಗಿರುವ ಶಿವ ಪರಮಾತ್ಮನು ಆಶಿಸಿದುದರಿಂದ ಭಾರದ ತಟ್ಟೆಯು ಆ ಕೌಪೀನಕ್ಕೆ ಈ ಭೂಮಿಯಲ್ಲಿ ಅಮರನೀತಿಯರ ಧನಸಂಪತ್ತುಗಳು ಮಾತ್ರವಲ್ಲದೆ ಸಕಲ ಲೋಕಗಳೂ ಸಮವಾಗಿ ನಿಲ್ಲಲಾರವು ಎಂದು ಹೇಳುವುದು ಅದಕ್ಕೆ ಒಂದು ಖ್ಯಾತಿಯಾದೀತೋ? (ಆಗದು. ಅದರ ಖ್ಯಾತಿಯು ಅದರಿಂದಲೂ ಮೇಲ್ಪಟ್ಟು ನಿಲ್ಲುವುದು).

531. ಈ ನೆಲೆಯನ್ನು ನೋಡಿದ ನಾಯನಾರನು ವೇದಿಯನ ಮುಂದೆ ಇದಿರಾಗಿ ನಿಂತು, 'ಕೇಡಿಲ್ಲದ ಹಲವಿಧ ಧನಸಂಪತ್ತೆಲ್ಲವನ್ನೂ ಒಂದನ್ನೂ ಬಿಡದೆ ತಟ್ಟೆಯಲ್ಲಿಟ್ಟು ಮುಗಿಸಿದೆನು. ಇನ್ನು ನಿಮ್ಮ ಸಮ್ಮತಿಯಿದ್ದರೆ, ನಾನೂ, ನನ್ನ ಹೆಂಡತಿಯೂ, ಮಗನೂ ತೊಲೆಯಲ್ಲಿ ಏರಿ ನಿಲ್ಲುವೆವು. ಇದಕ್ಕೆ ನಿಮ್ಮ ಒಪ್ಪಿಗೆ ಇರುವುದೋ?' ಎಂದು ಕೇಳಿ ನಮಿಸಿದನು.

532. ದೋಷಲೇಶವೂ ಇಲ್ಲದ ನಾಯನಾರನು ಇಂತೆನ್ನಲು ವೇದಿಯನು ಅವನ ನೆಲೆಯನ್ನು ನಿಶ್ಚೈಸಿ ತೊಲೆಯನ್ನು ಕಾರಣವಾಗಿಸಿಕೊಂಡು, ಆ ನಾಯನಾರನನ್ನು ಈ ಬಂಧಪಾಶದಿಂದ ಬಿಡಿಸುವವನಾಗಿ ಆತನು ಸತಿಸುತರೊಡನೆ ತೊಲೆಯಲ್ಲಿ ಏರಲು ಸಮ್ಮತಿಸಿದನು.

---

530. ತವನಿ ಱೈನ್ತನಾನ್ ಮಱೈಪ್ಪೊರು ಣೂಲ್‌ಕಳಾಱ್ ಚವೈನ್ತ
ಚಿವನ್‌ಅ ರುಳ್ಪ್ಪಿಯ ಕೋವಣ ಮಿಟುಙ್ಱಿಟು ನ್ತಟ್ಟ
ಕ್ಕವನಿ ಮೇಲಮರ್ ನೀತಿಯಾರ್ ತನಮೆಲಾ ಮನ್‌ಱಿ
ಪ್ಪುವನಮ್ ಯಾವೈಯು ನೇರ್‌ನಿಲಾ ವೆನ್‌ಪತು ಪುಕೞೋ?

531. ನಿಲ್ಮೈಮ್ಮೈ ಮಙ್ಱತು ನೋಕ್ಕಿಯ ನಿಕರಿಲಾರ್ ನೇರ್‌ನಿನ್
'ಱುಲ್ಮೈವಿಲ್ ಪಙ್ಱನ ಮೊನ್‌ಱೊಟಿ ಯಾಮ್ಮೈಯುಯ್ ತ್ತೊಟಿನ್ತೇನ್;
ಱಲ್ಮೈವ! ಯಾನುಮೆನ್ ಮನ್ಮೈವಿಯು ಙ್ಱಿಱುವನು ನ್ತಕುಮೇ
ಙ್ಱಲ್ಮೈಯಿ ಲೇಱಿಟ ಪ್ಪೆಱುವತುನ್ ನರು' ಳೆನ ತ್ತೊಟುತಾರ್.

532. ಪೊಚ್ಚ ಮಿಲ್ಲಟ ಮ್ಮೈತ್ತಿಱಮ್ ಪುರಿನ್ತವ ರೆತಿರ್‌ನಿನ್
ಱಚ್ಚ ಮುನ್‌ಪುಱ ವುರೈತ್ತಲು, ಮಙ್ಕಣ ರರುಳಾ
ನಿಚ್ಚ ಯಿತ್ತವರ್ ನಿಲ್ಮೈಯಿನ್ಮೈ ತ್ತುಲ್ಮೈಯೆನು ಙ್ಚಲತ್ತಾ
ಲಿಚ್ಚ ಟಿಕ್ಕಿನಿನ್ ಱೇಱುವಾ ರೇಱುಕಱ್ ಕಿಚೈನ್ತಾರ್.

533. ಇದರಿಂದ ಸಂತೋಷವನ್ನು ಹೊಂದಿ ವೇದಿಯನ ಪಾದಕಮಲಗಳನ್ನು ನಮಿಸಿ, ತನ್ನ ಸತೀಸುತರನ್ನು ಕೂಡಿಕೊಂಡು ನಾಯನಾರನು ತೊಲೆಯನ್ನೇರಲು ಸಿದ್ಧನಾಗಿ ಹೀಗೆಂದನು.

534. 'ಪರಮಾತ್ಮನ ದಿವ್ಯನೀತಿಮಾರ್ಗವನ್ನು ಭಕ್ತಿಯಿಂದ ಮೇಲ್ಕೊಂಡು, ಆ ಭೃತ್ಯನೆಲೆಯಲ್ಲಿ ಇದುವರೆಗೆ ನಾವು ಯಾವ ತಪ್ಪನ್ನೂ ಮಾಡಿಲ್ಲವೆಂಬುದು ಸತ್ಯ ವಾದರೆ ಈ ತೊಲೆಯು ಸರಿಯಾಗಿ ನಿಲ್ಲಲಿ.' ಇಂತು ಹೇಳಿ ನೀರಿನಿಂದ ತುಂಬಿದ ತಟಾಕ ಗಳೂ, ಉದ್ಯಾನಗಳೂ ಬಹುವಾಗಿರುವ ತಿರುನಲ್ಲೂರು ಶೋಭೆಯನ್ನು ಪಡೆಯಲು ಅನುಗ್ರಹಿಸಿದ ಪರಮಾತ್ಮನನ್ನು ನಮಿಸಿ, ದಿವ್ಯಪಂಚಾಕ್ಷರಿಯನ್ನು ವಿಧಿಯಂತೆ ಹೇಳಿ ದವನಾಗಿ ನಾಯನಾರನು ಸತೀಸುತರೊಡನೆ ತೊಲೆಯ ತಟ್ಟೆಯನ್ನೇರಿದನು.

535. ಹೀಗೆ ಭಕ್ತಿಯಿಂದ ತಟ್ಟೆಯನ್ನೇರಲು, ಸಕಲ ಲೋಕಗಳಿಗೂ ಪರಮೇಶ್ವರ ನಾದ ಪರಮಾತ್ಮನು ತಟ್ಟೆಯಲ್ಲಿಟ್ಟ ಕೌಪೀನವೂ, ಅವರೆಡೆಯಲ್ಲಿ ದಾಸನಿಗಿದ್ದ ಅಮಿತ ವಾದ ಭಕ್ತಿಯೂ ಸಮನಾದುವು. ಇಂತು ಆ ತೊಲೆಯು ತೂಕ ಸರಿಯಾಗಿ ಸಮವಾಗಿ ನಿಂತಿತು.

---

533. ಮನಮು ಕಿೞ್ನ್ತವರ್ ಮಲರ್ಕ್ಕೞಲ್ ಚೆನ್ನಿಯಾಲ್ ವಣಙ್ಕಿ
ಪ್ಪುನೈಮ ಲರ್ಕ್ಕುೞಲ್ ಮನೈವಿಯಾರ್ ತವೊಡು ಪುತಲ್ವನ್
ಱನ್ನೈಯು ಟಕೊಣ್ಟು ತನಿತ್ತುಲೈ ವಲಙ್ಕೊಣ್ಟ ತಕವಾ
ಲಿನ್ನೆಯ ಚೆಯ್ಕೈಯಿ ಲೇಱುವಾರ್ ಕೂಱುವಾ ರೆಟುತ್ತು,

534. 'ಇಟೈತ್ತ ವನ್ಪಿನಿ ಲಿೞೈತಿರು ನೀಱುಮೆ ಯ್ಯಟಿಮೈ
ಪಿಟೈತ್ತಿ ಲೋಮೆನಿಱ್ ಪೆರುನ್ತುಲೈ ನೇರ್ನಿಱ್ಕ!' ವೆನ್ಱು
ಮಟೈತ್ತ ಟನ್ಪೊಟಿ ಞ್ಚಿರುನಲ್ಲೂ ರಿೞೈವರೈ ವಣಙ್ಕಿ
ತ್ತಟೈತ್ತ ವಞ್ಚಿಟು ತ್ತೋತ್ತಿನಾ; ರೇಱಿನಾರ್ ತಟ್ಟಿಲ್.

535. ಮಣ್ಣು ಕಾತಲಿನ್ ಮಱ್ಱವರ್ ಮಕಿೞ್ನ್ತು ಟ ನೇಱ,
ವಣ್ಣರ್ ತಮ್ಪಿರಾನ್ ಱಿರುವರೈ ಕ್ಕೋವಣ ಮತುವು
ಙ್ಕೊಣ್ಟ ವನ್ಪಿನಿಱ್ ಕುೞೈಪಟಾ ವಟಿಯವ ರಟಿಮೈ
ತ್ತೊಣ್ಟ ಮೊತ್ತಲಾ ಲೊತ್ತುನೇರ್ ನಿನ್ಱತ ತ್ತುಲೈತ್ತಾನ್.

536. ನಾಯನಾರನ ಭಕ್ತಿಯ ಮಹಿಮೆಯನ್ನು ಲೋಕವೆಲ್ಲಾ ಸ್ತುತಿಸಲು, ಆಶ್ಚರ್ಯಚಿಂತನೆಯನ್ನು ಪಡೆದು ಆತನು ನಮಿಸಿದನು. ಭೂವ್ಯೋಮಾಕಾಶಗಳೆಡೆಯು ತುಂಬುವಂತೆ ಪೊಸಮಧುರ ಕಲ್ಪಕ ಪುಷ್ಪವೃಷ್ಟಿಯನ್ನು ದೇವತೆಗಳು ಸಂತೋಷದಿಂದ ಸುರಿಸಿದರು.

537. ಈ ಹೂಮಳೆಯ ಎಡೆಯಲ್ಲಿ ಮರೆಯಾಗಿ, ತ್ರಿಪುಂಡ್ರವನ್ನು ಧರಿಸಿದ ವೇದಿಯನು ಪಾರ್ವತೀಮಾತೆಯನ್ನು ಒಂದು ಭಾಗದಲ್ಲಿಟ್ಟುಕೊಂಡು ಅನಾದಿಯಾಗಿ ತಿರುನಲ್ಲೂರಿನಲ್ಲಿ ತಾನು ಅನುಗ್ರಹಮಾಡುವ ರೂಪವನ್ನು ಕೊಂಡವನಾಗಿ ಆಕಾಶದಲ್ಲಿ ಭಕ್ತರಿಗೆ ದರ್ಶನವನ್ನು ಕೊಟ್ಟು ಅನುಗ್ರಹಿಸಿದನು.

538. ಆ ತೊಲೆಯ ಮೇಲೆ ನಿಂತುಕೊಂಡೇ ನಮಿಸಿ ಸ್ತುತಿಸುವ ದೋಷವಿದೂರ ನಾದ ನಾಯನಾರನನ್ನೂ ಆತನ ಸತೀಸುತರನ್ನೂ ಪೂರ್ಣವಾಗಿ ಅನುಗ್ರಹಿಸಿ, ತಮ್ಮ ಮುಂದೆ ಯಾವಾಗಲೂ ನಮಿಸಿಕೊಂಡೇ ಇರುವಂತಹ, ಅಳಿವಿಲ್ಲದ ಹಿರಿಯ ಶಿವಪದವನ್ನೇ ಕೊಟ್ಟು ಶಿವಪರಮಾತ್ಮನು ಅಂತರ್ಧಾನನಾದನು.

---

536. ಮತಿವ ಳಜ್ಕಿಯ ತೊಣ್ಡರ್ತಮ್ ಪೆರುಮೈಯೈ ಮಣ್ಣೋರ್
ತುತಿಚೆ ಯ್ತ್ತಿಜ್ಞಾ ಮತಿಚಯ ಮುಜವೆತಿರ್ ತೊಟುತಾರ್,
ಕತಿರ್ವಿ ಚುಮ್ಬಿಟೈ ಕರನ್ತಿಟ ನಿರನ್ತ ಜ್ಪಕತ್ತಿನ್
ಪುತಿಯ ಪೂಮಟೈ ಯಿಮೈಯವರ್ ಮಕಿಟ್ವಿಟನ್ ಪೊಟಿನ್ತಾರ್.

537. ಅಣ್ಣರ್ ಪೂಮಟೈ ಪೊಟಿಯುಮ ಜ್ಞತನಿಟೈ ಯೊಳಿತ್ತು
ಮುಣ್ಣ ವೇತಿಯ ರೊರುವಟಿ ಯಾನ್ಮುತ ನಲ್ಲೂರ್
ಪ್ಪಣ್ಣ ತಾಮ್ಪಯಿಲ್ ಕೋಲಮೇ ವಿಚುಮ್ಪಿನಿಜ್ ಪಾಕ
ಜಕ್ಕೊಣ್ಣ ಪೇತೈಯು ನ್ತಾಮುಮಾಯ್ ಕ್ಕಾಟ್ಚಿಮುನ್ ಕೊಟುತ್ತಾರ್.

538. ತೊಟುತು ಪೋಜ್ಞಿಯ ತ್ತುಲೈಮಿಚೈ ಕಿನ್ಜುನೇರ್ ತುತಿಕ್ಕುಮ್
ವಟುವಿ ಲನ್ಪರು ಮೈನ್ತರು ಮನೈವಯಾರ್ ತಾಮು
ಮುಟುತು ಮಿನ್ನರುಳ್ ಪೆಜ್ಞುತ್ತಮ್ ಮುನ್ಜಿಕೊಟು ತಿರುಕ್ಕು
ಪ್ಪುಟಿವಿಲ್ ವಾನ್ಪತ ಜಕೊಟುತ್ತೆಟು ನ್ತರುಳಿನಾ ರೈಯರ್.

539. ಶಿವಪರಮಾತ್ಮನ ದಿವ್ಯಾನುಗ್ರಹದಿಂದ ಆ ತೊಲೆಯೇ ಅವರನ್ನು ಮೇಲೆ ಕೊಂಡೊಯ್ಯುವ ವಿಮಾನವಾಗಿ ಮೇಲೇರಲು, ದೋಷವಿಲ್ಲದ ಭಕ್ತನಾದ ಆ ನಾಯನಾರನೂ, ಆತನ ಹೆಂಡತಿ ಮಕ್ಕಳೂ, ಅಳಿವಿಲ್ಲದ ಮೋಕ್ಷಪದವನ್ನು ಕೊಟ್ಟ ಶಿವಮೂರ್ತಿಯೊಡನೆ ಕೈಲಾಸದ ಶಿವಪುರವನ್ನು ಸೇರಿದರು.

540. ತಾವರೆಯಲ್ಲಿರುವ ಬ್ರಹ್ಮನಿಗೂ ವಿಷ್ಣುಮೂರ್ತಿಗೂ ಕಾಣಲಸಾಧ್ಯವಾದ ತ್ಯಾಗಿಯಾದ ಶಿವಪರಮಾತ್ಮನು, ಎಲ್ಲರೂ ಕೊಂಡಾಡುವ ತಿರುವೆಣ್ಣೈನಲ್ಲೂರಿನಲ್ಲಿ ಪತ್ರದ ಪಳಮೆಯನ್ನು ತೋರಿಸಿ, ಲೋಕವು ಉಜ್ಜೀವಿಸಲು ನಂಬಿಯನ್ನು ಆಳಾಗಿಸಿಕೊಂಡನು. ಅಂತಹ ನಂಬಿಯಾರೂರನ ಪಾದಗಳನ್ನು ಧ್ಯಾನಿಸಿ, ಅದರ ಕೆಳಗೆ ಬಾಳುವ ಮೊದಲ ನೆಲೆಯೇ ಪ್ರಥಮವಾಗುವುದು.

---

539. ನಾತರ್ ತನ್ತಿರು ವರುಳಿನಾ ನಱ್ಪಿರು ನುೞೈಯೇ
ಮೀತು ಕೊಣ್ಟೆೞು ವಿಮಾನಮು ತಾಕಿಮೇ ಱ್ಚೆಲ್ಲ
ಕ್ಕೋತಿ ಲನ್ಪರು ಙ್ಕುಟುಮ್ಪಮು ಙ್ಕುಱೈವೞಿ ಕ್ಕೊಟುತ್ತ
ವಾತಿ ಮೂರ್ತ್ತಿಯಾ ರುಟನ್ಚಿವ ಪುರಿಯಿನೈ ಯಣೈನ್ತಾರ್.

540. ಮಲರ್ಮಿಚೈ ಯಯನು ಮಾಲು ಙ್ಕಾಣಾತಱ್ ಕರಿಯ ವಳ್ಳಲ್
ಪಲರ್ಪುಕೞ್ ವೆಣ್ಣೆಯ್ ನಲ್ಲೂ ರಾವಣ ಪ್ಪೞಮೈ ಕಾಟ್ಟಿ
ಯುಲಕುಯ್ಯ ವಾಣ್ಟು ಕೊಳ್ಳ ಪ್ಪೆಱ್ಱವರ್ ಪಾತ ಮುನ್ನಿ
ತ್ತಲೈಮಿಚೈ ವೈತ್ತು ವಾೞು ನ್ತಲೈಮೈಯಿನ ನ್ತಲೈಮೈ ಯಾಕುಮ್.

8. ಎರಿಪ್ಪತ್ತರ್ ನಾಯನಾರ

541. ವಿಶಾಲವಾದ ಸಾಗರದಿಂದ ಸುತ್ತುವರಿಯಲ್ಪಟ್ಟ ಈ ಲೋಕದಲ್ಲಿ ಎಳೆಯ ಎತ್ತನ್ನು ವಾಹನವಾಗುಳ್ಳ ಶಿವಪರಮಾತ್ಮನ ಭಕ್ತರಿಗೆ ವಿಘ್ನಗಳು ಬಂದಾಗ, ಅವುಗಳನ್ನು ಪರಿಹರಿಸಲು ಬೇಕಾದ ಕಾರ್ಯಗಳನ್ನು ಮಾಡುವವನಾದ ನಿಸ್ಸೀಮವಾದ ಖ್ಯಾತಿಯಲ್ಲಿ ಹೆಚ್ಚಿನವನಾದ ಎರಿಪ್ಪತ್ತ ನಾಯನಾರನ ಹಿರಿಮೆಯು ನನ್ನ ಮಾತಿನ ವಿವರಣೆಗೆ ಸಿಕ್ಕುವುದಲ್ಲ. ಆದರೂ ಸಾಧ್ಯವಿದ್ದಷ್ಟು ಹೇಳಲು ಪ್ರಯತ್ನಿಸುವೆನು.

542. ಪುರಾತನವಾದ ಕಾಂತಿಯೂ ಚೆಲುವೂ ಉಳ್ಳ ಬೀದಿಗಳಿಂದ ಕೂಡಿದ ವಿಶಾಲವಾದ ಊರು ಕರುವೂರು. ವಿಜಯದ ಕುರುಹಾಗಿ ಹಿಮಾಲಯದ ಶಿಖರದಲ್ಲಿ ವ್ಯಾಘ್ರಧ್ವಜವನ್ನು ಹಾರಾಡಿಸಿ, ಆ ಪರ್ವತದ ಒಂದು ಭಾಗವನ್ನು ಬೀಳಿಸಿ, ಹೊಸ ದಾರಿಯನ್ನು ಮಾಡಿಸಿ, ಇತರ ದಾರಿಗಳನ್ನು ಮುಚ್ಚಿಸಿದ ಕರಿಕಾಲ ಚೋಳನಿಂದ ಅನಪಾಯ ಚೋಳನ ವರೆಗೆ ಮಹಿಮಾನ್ವಿತರಾದ ಕಿರೀಟಧಾರಿಗಳ ರಾಜಧಾನಿಗಳಲ್ಲಿ ಒಂದು ಕರುವೂರು.

543. ದೇವತೆಗಳು ಸಂತಸದಿಂದ ಸಂಚರಿಸುವ ಇಂದ್ರಪಟ್ಟಣವನ್ನು ಕೀಳ್ಮಾಡುವಂತೆ, ಆ ನಗರದ ದೊಡ್ಡ ಪ್ರಾಕಾರಗಳು ಮೇಘಗಳಿಂದ ವ್ಯಾಪ್ತವಾಗಿವೆ. ಮಾಳಿಗೆಗಳು ಸಾಲಾಗಿ ಆಕಾಶದಲ್ಲಿ ಎತ್ತರವಾಗಿ ಶೋಭಿಸುತ್ತವೆ. ಪರಿಶುದ್ಧವಾದ ರತ್ನಗಳು ಬಾಗಿಲುಗಳನ್ನು ಅಲಂಕರಿಸಿವೆ. ನಂದನಗಳಲ್ಲಿ ಮಲರುಗಳ ಸುಗಂಧವು ಹೆಚ್ಚಿರುತ್ತದೆ. ತಲೆಕೂದಲುಗಳಲ್ಲಿ ಮಧುಯುಕ್ತವಾದ ಮಲರುಗಳನ್ನು ಸುತ್ತಿ ಅಲಂಕರಿಸಿಕೊಂಡ, ಚಂದ್ರನಂತಿರುವ ಮುಖವುಳ್ಳ ಕೆಲಹೆಣ್ಣುಗಳು ನಗರದ ಬೀದಿಯಲ್ಲಿ ಸಂಚರಿಸುವರು.

---

8. ಎಱಿಪತ್ತ ನಾಯನಾರ್ ಪುರಾಣವ್

541. ಮಲ್ಲನೀರ್ ಞಾಲನ್ ತನ್‌ನುಳ್ ಮೞವಿಟೈ ಯುಟೈಯಾ ನನ್‌ಪರ್
ಕೊಲ್ಲೈವ ನ್ತುಱ್ಱ ಚೆಯ್ಕೈ ಯುಱ್ಱಿಟ ತ್ತುತವು ನೀರಾ
ರೆಲ್ಲೈಯಿಲ್ ಪುಕೞಿನ್ ಮಿಕ್ಕ ವೆಱಿಪತ್ತರ್ ಪೆರುಮೈ ಯೆಮ್ಮಾಲ್
ಚೊಲ್ಲಲಾವ್ ಪಟಿತ್ತನ್ ಱೇನು ಮಾಚೈಯಾಱ್ ಚೊಲ್ಲ ಲುಱ್ಱಾವ್.

542. ಪೊನ್‌ಮಲೈ ಪ್ಪುಲಿವೆನ್ ಱೋಙ್ಕ ಪ್ಪುತುಮಲೈ ಯಿಟಿತ್ತು ಪೋಱ್ಱು
ಮನ್ನೈಱಿ ವೞಿಯೇ ಯಾಕ ವಯಲ್‌ವೞಿ ಯಟೈತ್ತ ಚೋೞನ್
ಮನ್‌ನಿಯ ವನಪಾ ಯನ್‌ಚೀರ್ ಮರಪಿನ್‌ಮಾ ನಕರ ಮಾಕುನ್
ತೊನ್‌ನೆಟು ಙ್ಕರುವೂ ರೆನ್‌ನು ಙ್ಕಟರ್‌ಮಣಿ ವೀತಿ ಮೂತೂರ್.

543. ಮಾಮತಿನ್ ಮಞ್ಚು ಚೂೞು; ಮಾಳಿಕೈ ನಿರೈವಿಣ್ ಚೂೞುನ್;
ತೂಮಣಿ ವಾಯಿಲ್ ಚೂೞುಙ್; ಚೋಲೈಯಿಲ್ ವಾಚಙ್ ಚೂೞುನ್;
ತೇಮಲ ರಳಕಙ್ ಚೂೞುಙ್ ಚಿಲಮತಿ ತೆರುವು ಚೂೞುನ್;
ತಾಮಕಿೞ್‌ನ್ ತಮರರ್ ಚೂೞುಙ್ ಚತಮಕ ನಗರನ್ ತಾೞ.

544. ಮದಗಜಗಳು ನೀರು ಹರಿಯುವ ಸ್ನಾನಘಟ್ಟಗಳ ತೊರೆಗಳಲ್ಲಿ ಆಡುತ್ತಿರುತ್ತವೆ. ಸಂತೋಷದಿಂದ ಕೂಡಿದ ನವಿಲುಗಳು ನಗರದ ಸೀಮೆಗಳಲ್ಲಿ ನರ್ತಿಸಿಕೊಂಡಿರುತ್ತವೆ. ಮಣಿಗಳ ಸಾಂದ್ರತೆಯಿಂದ ಶೋಭಿಸುವ ನಾಟ್ಯರಂಗಗಳಲ್ಲಿ ನಲಿಯುವ ನರ್ತಕಿಯರ ಕೂದಲುಗಳಲ್ಲಿ ತುಂಬಿಗಳು ವಿಹರಿಸುತ್ತವೆ. ಹಬ್ಬದ ಕಾಂತಿಯುಳ್ಳ ಬೀದಿಗಳಲ್ಲಿ ಚಲಿಸುವ ಧ್ವಜಗಳು ಸೂರ್ಯಕಿರಣಗಳಲ್ಲಿ ಸ್ಪರ್ಧಿಸುತ್ತವೆ. ವಿಶಾಲವಾದ ಲೋಕವು ಕೊಂಡಾಡುವ ಅದ್ವಿತೀಯವಾದ ಈ ಪಟ್ಟಣದ ಪ್ರಶಸ್ತಿ ಹೀಗೆ ಕೀರ್ತಿಯಿಂದ ಕೂಡಿದೆ.

545. ಶ್ರೇಷ್ಠವೂ ಸಮೃದ್ಧವೂ ಆದ ಆ ನಗರದಲ್ಲಿ, ದೇವತೆಗಳು ಕೊಂಡಾಡುವ ಹಿರಿಮೆಯುಳ್ಳ, ಚಿನ್ನದ ಕೆಲಸದಿಂದ ಅಲಂಕೃತವಾದ ಪ್ರಾಕಾರದಿಂದ ಸುತ್ತುವರಿದುದಾಗಿ, ಬಹುವಾದ ಪ್ರೀತಿಯಿರುವ ಭಕ್ತರ ಮನಸ್ಸಿನಿಂದ ಚಲಿಸದಿರುವ ಶಿವನು ಪತಿ (ಪ್ರಭುವಿನ) ನೆಲೆಯನ್ನು ಪಡೆದು ಬಾಳುವ, ತಿರುವಾನಿಲೈ ಎಂಬ ದೇವಾಲಯವಿರುತ್ತದೆ.

546. ಪುರುಷಾರ್ಥಗಳನ್ನು ತರುವ ವೇದಗಳಿಗೂ ಅತೀತನಾಗಿ ನಿಂತ ಶಿವ ಪರಮಾತ್ಮನನ್ನು, ಆ ದೇಗುಲದಲ್ಲಿ, ಭವರೋಗಕ್ಕೆ ವೈರಿಯಾದ ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ಭಕ್ತಿಯಿಂದ ವಿಶೇಷವಾಗಿ ಪೂಜಿಸುವ, ನೀಲಕಂಠನಾದ ಶಿವಪರಮಾತ್ಮನಿಗೆ ತಕ್ಕುದಾದ ಸೇವೆಮಾಡುವ ಭಕ್ತರುಗಳಿಗೆ, ಶಿವನ ಅನುಗ್ರಹದಿಂದಲಾಗಿ ಅಲ್ಲಿದ್ದು ಶ್ರೇಷ್ಠಸೇವೆಯನ್ನು ಮಾಡುವವನು ಒಬ್ಬನಿರುವನು. ಅವನು ಶಿವ ಭಕ್ತನಾದ **ಎರಿಪ್ಪತ್ತರ್** ಎಂದು ಹೇಳಲ್ಪಡುವನು.

---

544. ಕಟಕರಿ ತುಱೈಯಿ ಲಾಟುಞ್; ಕಳಿಮಯಿಲ್ ಪುಱವಿ ಲಾಟು;
ಮಟರ್ಮಣಿ ಯರಙ್ಕಿ ಲಾಟು ಮರಿವೈಯರ್ ಚೂೞಲ್ವಣ್ ಟಲಾಟುಮ್;
ಪಟರೊಳಿ ಮಱುಕಿ ಲಾಟುಮ್ ಪಯಿಲ್ಕೊಟಿ ಕತಿರ್ವಿೞಾ ತಾಟುನ್
ತಟನೆಟುಮ್ ಪುವಿಕೊ ಣ್ಟಾಟುನ್ ತನಿನಕರ್ ವಳಮ್ಯ ಯಾತಾಲ್.

545. ಮನ್ನಿಯ ಚಿಱಪ್ಪಿನ್ ಮಿಕ್ಕ ವಳನಕ ರತನಿನ್ ಮಲ್ಕುಮ್
ಪೊನ್ನಿಯಲ್ ಪುರಿಚೈ ಚೂೞ್ನ್ತು ಚುರರ್ಕಳುಮ್ ಪೋಱ್ಱುಮ್ ಪೋಱ್ಱಾಱ್
ಱುನ್ನಿಯ ವನ್ಪಿನ್ ಮಿಕ್ಕ ತೊಣ್ಟರ್ತ ಇಚ್ಚೈನ್ನೀಙ್ಕಾ
ವನ್ನಿಲೈ ಯರನಾರ್ ವಾೞ್ವ ತಾನಿಲೈ ಯೆನ್ನುಙ್ ಕೋಯಿಲ್.

546. ಪೊರುಟ್ಟಿರು ಮಱೈಕ ಟನ್ತ ಪುನಿತರೈ ಯಿನಿತ ಕೊಳ್ಕೈಯಿನ್
ಮರುಟ್ಟುಱೈ ಮಾಱ್ಱು ಮಾಱ್ಱಾಲ್ ವೞಿಪಟುನ್ ತೊೞಿಲ ರಾಕಿ
ಯಿರುಟ್ಕಟು ವೊಟುಙ್ಕು ಕಣ್ಟ ತ್ತಿಱೈಯವರ್ ಕ್ಕುರಿಮೈ ಪೂಣ್ಟಾರ್
ಕ್ಕರುಟ್ಪೆರುನ್ ತೊಣ್ಟು ಚೆಯ್ವಾ ರವರೆಱಿ ಪತ್ತ ರಾವಾರ್.

547. ಮಳೆಯಿಂದ ವರ್ಧಿಸುವ ಲೋಕದಲ್ಲಿ, ನೆಲೆನಿಂದ ಶೈವಸಮಯವು ಎಲ್ಲೆಲ್ಲಿಯೂ ವರ್ಧಿಸುವಂತೆ, ಬೆಂಕಿಯಂತೆ ಬಣ್ಣವಿರುವ ಕೆದರಿದ ಜಡೆಯುಳ್ಳ ಶಿವನ ಭಕ್ತರಿಗೆ ಸಹಿಸಲಸಾಧ್ಯವಾದ ಎಡರುಗಳು ಬಂದ ಕಾಲದಲ್ಲಿ ಗುಹೆಯಿಂದ ಹೊರಗೆ ಲಂಘಿಸುವ ಸಿಂಹದಂತೆ ಒಡನೆಯೇ ಕಾಣಿಸಿಕೊಂಡು ಆ ಎಡರುಗಳನ್ನು ಮಾಯವಾಗಿಸುವ ಆಯುಧವಾದ ಪರಶುವನ್ನು ಯಾವಾಗಲೂ ಹಿಡಿದಿರುವವನು ಅವನು.

548. ಹಿರಿಮೆಯಿಂದ ಕೂಡಿದ **ಎರಿಪ್ಪತ್ತರ್ ನಾಯನಾರನು** ಈ ರೀತಿ ಸೇವೆಮಾಡಿಕೊಂಡಿರುತ್ತಿದ್ದ ದಿವಸದಲ್ಲಿ, ತಿರುವಾನಿಲೈಯಲ್ಲಿ ಕಾಣಿಸಿಕೊಂಡು ಅನುಗ್ರಹಿಸಿದ ಶಿವಪರಮಾತ್ಮನಿಗೆ ಅತ್ಯಂತ ಪ್ರಿಯನಾದ **ಶಿವಕಾಮಿಯಾಂಡಾರ್** ಎಂಬ ಪುಣ್ಯರೂಪನಾದ ಮುನಿವರನು, ತಾನು ವಿಧಿಯಂತೆ ಹೂಗಳನ್ನು ಸಂಗ್ರಹಿಸಿ, ಮಾಲೆಗಳನ್ನೇರ್ಪಡಿಸಿ, ತುಂಬುಭಕ್ತಿಯಿಂದ ದೇಗುಲಕ್ಕೆ ಬರುವನು. ಒಂದು ದಿನ ಎಂದಿನ ಕ್ರಮದಂತೆ,

549. ಉದಯಕಾಲದಲ್ಲೆದ್ದು ಹೊರಗೆ ಹೋಗಿ, ತಂಪಾದ ತೊರೆ ನೀರಿನಲ್ಲಿ ಮುಳುಗಿ, ಬಾಯನ್ನು ಕಟ್ಟಿಕೊಂಡು, ಗೊಂಚಲುಗಳಾಗಿ ಮಲರುಗಳು ತುಂಬಿದ ಸುವಾಸನಾಯುಕ್ತವಾದ ನಂದನವನವನ್ನು ಸೇರಿ, ಪಳಗಿದ ಕೈಗಳಿಂದ ತಿಳಿದುಕೊಂಡು, ಒಳ್ಳೆಯ ಪರಿಮಳದಿಂದ ಕೂಡಿ ಅಂದು ಅರಳುವ ಮೊಗ್ಗುಗಳನ್ನೂ, ಹೂ ಎಲೆ ಬೇರುಗಳನ್ನೂ, ಪರಶಿವನ ಪೂಜೆಗಾಗಿ ಸಂಗ್ರಹಿಸಿ,

---

547. ಮೞೈವಳ ರುಲಕಿ ಲೆಙ್ಗು ಮನ್ನಿಯ ಚ್ಚೈವ ಮೋಙ್ಗ
ವೞಲವಿರ್ ಚಟೈಯಾ ನನ್ಪರ್ ಕ್ಕಟಾತನ ವಟುತ್ತ ಪೋತು
ಮುೞೈಯರಿ ಯೆನ್ನ ತ್ತೋನ್ಱಿ ಮುರಣ್ಕೆಟ ವೆಱಿನ್ತು ತೀರ್ಕ್ಕುಮ್
ಪೞಮೞಿಕ್ಕೈ ಪರಚುನ್ ತೂಯ ಪರಚುಮುನ್ ನೇಟುಕ್ಕ ಪ್ಪೆಱ್ಱಾರ್.

548. ಅಣ್ಣಲಾರ್ ನಿಕಟು ನಾಳಿ ಲಾನಿಲೈ ಯಟಿಕಳಾರ್ಕ್ಕು
ತ್ತಿಣ್ಣಿಯ ವನ್ಪು ಕೂರ್ನ್ತ ಚಿವಕಾಮಿ ಯಾಣ್ಟಾ ರೆನ್ನುಮ್
ಪುಣ್ಣಿಯ ಮುನಿವ ನಾರ್ತಾಮ್ ಪೂಪ್ಪಱಿ ತ್ತಲಙ್ಕಲ್ ಚಾತ್ತಿ
ಯುಣ್ಣಿಱೈ ಕಾತ ಲೋಟು ಮೊೞುಕುವಾ ರೊರುನಾಣ್ ಮುನ್ಪೋಲ್,

549. ವೈಕಱೈ ಯುಣರ್ನ್ತು, ಪೋನ್ತು, ಪುನಲ್ಮೂೞ್ಕಿ, ವಾಯುಙ್ ಕಟ್ಟಿ,
ಮೊಯ್ಮ್ಮಲರ್ ನೆರುಙ್ಗು ವಾಚ ನನ್ತನ ವನತ್ತು ಮುನ್ನಿ
ಕ್ಕೈಯಿನಿ ಱ್ಱೆರಿನ್ತು, ನಲ್ಲ ಕಮೞ್ಮುಕೈ ಯಲರುಮ್ ವೇಲೈ
ತ್ತೈಯ್ವನಾ ಯಕರ್ಕ್ಕು ಚ್ಚಾತ್ತುನ್ ತಿರುಪ್ಪಳ್ಳಿ ತ್ತಾಮಙ್ ಕೊಯ್ತು,

550. ಸುಂದರವಾದ ಹೂವಿನ ಬುಟ್ಟಿಯಲ್ಲಿ ತುಂಬಿಸಿಕೊಂಡು, ಮನಸ್ಸಿನಲ್ಲಿ ಪರಿಶುದ್ಧವಾದ ಭಕ್ತಿಯಿಂದ ಕೂಡಿದವನಾಗಿ ಕೈಯಲ್ಲಿ ದಂಡವನ್ನು ಧರಿಸಿ, ದೇಗುಲವನ್ನು ನೋಡುತ್ತ, ಪರಮಾತ್ಮನಿಗೆ ಮಾಲೆಯನ್ನು ಕಟ್ಟಿ ಅಲಂಕರಿಸುವ ಪ್ರಾತಃ ಕಾಲದಲ್ಲಿ ಬಂದು ಸಹಾಯವಾಗಲು ವೇಗದಿಂದ ಬರುತ್ತಿದ್ದನು.

551. ಆತನು ಈ ರೀತಿಯಲ್ಲಿ ಬರುತ್ತಿರುವಾಗ, ಇತ್ತ ಸಂಪತ್ತಿನಿಂದ ತುಂಬಿದ ಆ ನಗರದ ಅರಸನಾದ **ಅನಪಾಯ ಚೋಳನ** ಕುಲದಲ್ಲಿ ಬಂದ **ಪುಗಳ್ ಚೋಳ ನಾಯನಾರನ** ವೈರಿಗಳನ್ನು ನಾಶಮಾಡಿ, ಯುದ್ಧಗಳನ್ನು ಜೈಸುವ **ಪಟ್ಟವರ್ಧನಿ** ಎಂಬ ಪ್ರಸಿದ್ಧವಾದ ಬಿಳಿಯ ಆನೆಯು, ಚೆಲುವಿನಲ್ಲಿ ಹೆಚ್ಚಿದ ಮಹಾನವಮಿಯ ಮುಂಚಿನ ದಿನವಾದ ಆ ದಿನದಲ್ಲಿ,

552. ಮಂಗಲವಾದ ಉತ್ಸವಾಲಂಕಾರಗಳನ್ನು ಧರಿಸಿಕೊಂಡು, ಅಲ್ಲಿ ಹರಿಯುವ ಅಮ್ರಾವತಿ ನದಿಯಲ್ಲಿ ನೀರಾಡಿ, ವಿಶೇಷವಾದ ಸಂತೋಷದಿಂದ ಮದಜಲವು ಸುರಿಯುತ್ತಿರಲು, ಅಲ್ಲಲ್ಲಿ ನಿಂತವರು ಭಯದಿಂದ ಓಡಲು, ಇದಿರಲ್ಲಿ ನಿಂತ ವೇತ್ರಹಸ್ತರಾದ ಜನರು ಧಾವಿಸಲು, ಪರಿಶುದ್ಧವಾದ ದೊಡ್ಡ ಪರ್ವತದಂತೆ ಕಾಣುತ್ತ ಭಯಂಕರವಾಗಿ ಸಮಾಪಿಸಿತು.

---

550. ಕೋಲಪ್ಪೂಙ್ ಕೂಟೈ ತನ್ನೈ ನಿಱೈತ್ತನರ್ ಕೊಣ್ಡು, ನೆಞ್ಜಿಲ್
ವಾಲಿಯ ನೇಚಙ್ ಕೊಣ್ಡು, ಮಲರ್ಕ್ಕೈಯಿ ಱಣ್ಡುಙ್ ಕೊಣ್ಡುಙ್,
ಕಾಲಯು ಮತನ್ನೈ ನೋಕ್ಕಿ ಯಙ್ಕಣರ್ ಕ್ಕಮೈತ್ತು ಚ್ಚಾತ್ತುಙ್
ಕಾಲೈವ ನ್ತುತವ ವೇಣ್ಡಿ ಕ್ಕಟಿತಿನಿಲ್ ವಾರಾ ನಿನ್ಱಾರ್.

551. ಮಣ್ಣುವ ರಣ್ಣೈಯ ವಿಪ್ಪಾಲ್ ವಳನಕ ರತನಿನ್ ಮನ್ನುಙ್
ಕೊಣ್ಣವರ್ ವಳವರ್ ತಙ್ಕಳ್ ಕುಲಪ್ಪುಕಟ್ ಚ್ಚೋಟಿ ನಾರ್ತಮ್
ಪಣ್ಣವರ್ ಮುನೈಕಳ್ ಚಾಯ್ಕ್ಕುಮ್ ಪಟ್ಟನರ್ ತ್ತನಮಾಮ್ ಪಣ್ಪು
ಪೆಣ್ಣವೆ ಙ್ಕಳಿಱು ಕೋಲಮ್ ಪೆರುಕುಮಾ ನವಮಿ ಮುನ್ನಾಳ್,

552. ಮಙ್ಕಲ ವಿಟಿವು ಕೊಣ್ಡು, ವರುನತಿ ತ್ತುಱೈಯ್ನೀ ರಾಟಿ
ಪ್ಪೊಙ್ಕಿಯ ಕಳಿಪ್ಪಿ ನೋಟುಮ್ ಪೊಟಿಮತ ಇಕ್ಕೋರಿಯ, ನಿನ್ಱಾ
ರೆಙ್ಕಣು ಮಿರಿಯಲ್ ಪೋಕ, ವೆತಿರ್ಪರಿ ಕ್ಕಾರ ರೋಟಿ
ತ್ತುಙ್ಕಮಾಲ್ ವರೈಪೋಱ್ ಱೋನ್ಱಿ ತ್ತುಣ್ಣೆನ ವಣೈನ್ತ ತನ್ಱೇ,

553. ಜಯವನ್ನು ತರುವ ಆ ಆನೆಯು ತನ್ನ ಮೇಲೆ ಏರಿರುವ ಮಾವುತರೊಡನೆ ಬಂದು ಬೀದಿಯನ್ನು ಮುಟ್ಟಿ, ಶಿವಕಾಮಿಯಾಂಡಾರನು ಮುಂದೆ ಹೋಗುತ್ತಿರಲು, ಆತನ ಹಿಂದೆಯೇ ಓಡಿಹೋಗಿ, ಆತನು ಧರಿಸಿಕೊಂಡಿದ್ದ ದಂಡದಲ್ಲಿ ನೇತಾಡುತ್ತಿದ್ದ ಹೂವಿನ ಬುಟ್ಟಿಯನ್ನು ತೆಗೆದು ನೆಲದಲ್ಲಿ ಈಡಾಡಿತು.

554. ಆ ಆನೆಯ ಮೇಲಿದ್ದ ಮಾವುತರು ಅದನ್ನು ನೋಡಿ ವೇಗವಾಗಿ ಹೋಗುತ್ತಿದ್ದ ಆ ಆನೆಯನ್ನು ಪ್ರಚಂಡ ಮಾರುತವನ್ನು ನಡೆಸಿಕೊಂಡು ಹೋಗುವವರಂತೆ ತ್ವರೆಯಿಂದ ದೂರಕೊಂಡುಹೋಗಿಬಿಟ್ಟರು. ಜನಿವಾರದಿಂದ ಅಲಂಕೃತವಾದ ಎದೆಯುಳ್ಳ ಭಕ್ತನಾದ **ಶಿವಕಾಮಿಯಾಂಡಾರನು** ಅದನ್ನು ನೋಡಿ ಹೆದರಿ, ಹೆಚ್ಚಾದ ಕೋಪಗೊಂಡು ಮತ್ತೇರಿದ ಆ ಆನೆಯ ಹಿಂದೆಯೇ ದಂಡವನ್ನೆತ್ತಿ ಶಿವದ್ರೋಹಿಯಾದ ಅದನ್ನು ಹೊಡೆಯಲು ಬಂದನು.

555. ಆಗ ದೊಡ್ಡ ಆನೆಯು ಅವರನ್ನು ಹತ್ತಿರ ಬಾರದಂತೆ ಮಾಡುತ್ತ ದೂರ ಹೋಗಿಬಿಟ್ಟಿತು. ಸತ್ಯಹಿತಸ್ವಭಾವಗಳಿರುವ ಆ ಶ್ರೇಷ್ಠಭಕ್ತನು ಮುಪ್ಪಿನಿಂದ ವೇಗವಾಗಿ ಓಡಿ ಅದರ ಹಿಂದೆ ಹೋಗಲು ಸಾಧ್ಯವಿಲ್ಲದವನಾಗಿ ಅದನ್ನು ಬಿಟ್ಟುಬಿಟ್ಟನು. ಆತನು ಕೆಳಗೆ ಬಿದ್ದು ಕೈಯಿಂದ ನೆಲವನ್ನು ಬಡಿದು ತಲೆಯಿಂದ ನೆಲವನ್ನು ಕುಟ್ಟಿ, ಆಮೇಲೆ ಎದ್ದು, ಹೇಳಲು ಸಾಧ್ಯವಿಲ್ಲದ ದುಃಖದಿಂದ ಬಹುವಾಗಿ ಕೋಪವನ್ನು ತಾಳಿ, 'ಶಿವದಾ' (ಶಿವಧೋ) ಎಂದು ಪ್ರಲಾಪಿಸುತ್ತಾ ಇಂತು ಮೊರೆಯಿಟ್ಟನು.

---

553. ವೆನ್ಱಿಮಾಲ್ ಯಾನೈ ತನ್ನೈ ಮೇಲ್ಕೊಣ್ಡ ಪಾಕ ರೋಟುಙ್ಗ್
ಚೆನ್ಱೊರು ತೆರುವಿನ್ ಮುಟ್ಟಿ ಚ್ಚಿವಕಾಮಿ ಯಾರ್ಮುನ್ ಚೆಲ್ಲ
ವನ್ಱನಿ ತ್ತೊಣ್ಡ ಙ್ಙೂಙ್ಕು ಮಲರ್ಕೊಳ್ಪೂ ಕ್ಕೂಟೈತ್ತನ್ನೈ
ಪ್ಪಿನ್ಱೊಟರ್ ನ್ದೋಟಿ ಚ್ಚೆನ್ಱು ಪಿಟಿತ್ತುಮುನ್ ಪಱಿತ್ತು ಚಿನ್ತ,

554. ಮೇಲ್ಕೊಣ್ಡ ಪಾಕರ್ ಕಣ್ಡು ವಿಚೈಕೊಣ್ಡ ಕಳಿಱು ಚಣ್ಡ
ಕ್ಕಾಲ್ಕೊಣ್ಡು ಪೋವಾರ್ ಪೋಲ ಕ್ಕಟಿತುಕೊ ಣ್ಡಕಲ ಪ್ಪೋಕ
ನೂಲ್ಕೊಣ್ಡ ಮಾರ್ಪಿ ಱ್ಱೊಣ್ಡರ್ ನೋಕ್ಕಿನರ್ ಪತೈತ್ತು ಪ್ಪೊಙ್ಕಿ
ಮಾಲ್ಕೊಣ್ಡ ಕಳಿಱ್ಱಿನ್ ಪಿನ್ಪು ತಣ್ಡುಕೊ ಣ್ಡಟಿಕ್ಕ ವನ್ದಾರ್.

555. ಅಪ್ಪೊಟು ತಣ್ಟೈಯ ವೊಟ್ಟಾ ತಟಙ್ಕಳಿ ಱಕನ್ಱು ಪೋಕ,
ಮೆಯ್ಪ್ಪೆರು ನ್ದೊಣ್ಡರ್ ಮೂಪ್ಪಾಲ್ ವಿರೈನ್ದುಪಿನ್ ಚೆಲ್ಲ ಮಾಟ್ಟಾರ್,
ತಪ್ಪಿನರ್ ವಿಟುನ್ದು, ಕೈಯಾ ಱ್ಱರೈಯಟಿ ತ್ತೆಟುನ್ದು, ನಿನ್ಱು,
ಚೆಪ್ಪರು ನ್ದುಯರ ನೀಟ ಚ್ಚೆಯಿರ್ತ್ತು, ಮುನ್ 'ಚಿವತಾ' ವೆನ್ಪಾರ್,

556. 'ಮದಗಜದ ಚರ್ಮವನ್ನು ಸುಲಿದು ಆ ಚರ್ಮವನ್ನು ಧರಿಸಿದವನೇ, ಶಿವದಾ! ಬಡವರನ್ನು ಕಾಪಾಡುವ ಮಹಿಮೆಯುಳ್ಳವನೇ, ಶಿವದಾ! ಪ್ರೇಮವು ತುಂಬಿದ ಭಕ್ತರುಗಳ ತಿಳಿವಾಗಿರುವವನೇ, ಶಿವದಾ! ಜ್ಞಾನಿಗಳ ಅಮೃತವೇ, ಶಿವದಾ! ಶಿವದಾ!'[1]

557. 'ಗಂಗೆಯನ್ನೂ ಬಾಲಚಂದ್ರನನ್ನೂ ಧರಿಸಿದ ಜಡೆಮುಡಿಯ ಮೇಲೆ ಅರ್ಪಿಸಲ್ಪಟ್ಟ ಪುಷ್ಪಗಳನ್ನು ಆನೆಯು ಚೆಲ್ಲುವುದೇ? ಮನಸ್ಸಿನಲ್ಲಿ ನೆನೆಯುವ ಅಸುರರ ಪುರಗಳು ಬೆಂದು ನಾಶವಾಗುವಂತೆ ಕೋಪಗೊಂಡು ಬಿಲ್ಲನ್ನು ಧರಿಸಿದವನೇ, ಶಿವದಾ! ಶಿವದಾ!'

558. 'ಗತಿಯಿಲ್ಲದಿರುವಾಗ ಶರಣುಹೊಂದಿದ ಶ್ರೇಷ್ಠತಮನಾದ ಮಾರ್ಕಂಡೇಯನ ಹೃದಯದಲ್ಲಿದ್ದ ಸಂಕಷ್ಟವು ದೂರವಾಗುವಂತೆ ಸಂಕಲ್ಪವನ್ನು ಮಾಡಿದವನಾಗಿ, ಅವನನ್ನು ಕೊಂಡೊಯ್ಯಲು ಬಂದ ಯಮನನ್ನು ದಂಡಿಸಿ ಋಷಿಪುತ್ರನಿಗೆ ಕೃಪೆದೋರಿ ಅವನನ್ನುಳಿಸಿದ ಶಿವನೇ, ಶಿವದಾ! ಶಿವದಾ!'

ವೇಱು

556. 'ಕಳಿಯಾ ನೈಯಿನೀ ರುರಿಯಾಯ್! ಚಿವತಾ!
ಎಳಿಯಾರ್ ವಲಿಯಾ ವಿೞಿತ್ತೈವಾ! ಚಿವತಾ!
ಅಳಿಯಾ ರಟಿಯಾ ರಱಿವೇ! ಚಿವತಾ!
ತೆಳಿವಾ ರಮುತೇ! ಚಿವತಾ! ಚಿವತಾ!

557. 'ಆಱುಮ್ ಮತಿಯುಮ್ ಮಣಿಯು ಞ್ಚಟೈಮೇ
ಲೇಱುಮ್ ಮಲರೈ ಕ್ಕರಿಚಿ ನ್ಱುವತೇ?
ವೇಱು ಣ್ಣನೈವಾರ್ ಪುರಮ್ಮೂವೆ ನ್ಱವಿಯ
ಚ್ಚೀಱು ಞ್ಚಿಲೈಯಾಯ್! ಚಿವತಾ! ಚಿವತಾ!

558. 'ತಞ್ಚೇ ಚರಣಮ್ ಪುಕುತು ನ್ಱವಿಯೋರ್
ನೆಞ್ಚೀಯ್ ತುಯರ ಜ್ಕಿಟನೇರ್ ತೊಟರುಮ್
ಮಞ್ಚೇ ಯೆನವೀಟ್ ಮಱಲಿ ಕ್ಕೈಱ್ತೈನೀಳ್
ಚೆಞ್ಚೇ ವಟಿಯಾಯ್! ಚಿವತಾ! ಚಿವತಾ!

---

1. ಶಿವದಾ, ಶಿವಧೋ ಎಂದರೆ ಎಲ್ಲೈ ಶಿವನೇ ಎಂದರ್ಥ. ಶಿವನನ್ನು ಕರೆವುದು ಇದರ ತಾತ್ಪರ್ಯ.

559. 'ವಿಷ್ಣುವಿಗೂ ತಿಳಿಯಲು ಸಾಧ್ಯವಿಲ್ಲದ ಶೈವದಲ್ಲಿ ನೆಲೆನಿಂತ, ತಾವು ತಿಳಿದ ರೀತಿಯಲ್ಲಿ ಸೇವಾಧರ್ಮದಲ್ಲಿ ನಿಂತು ಕೈಂಕರ್ಯವನ್ನು ಮಾಡಿ ಶೋಭಿಸುವ, ಭಕ್ತಕೂಟದಲ್ಲಿ ನನಗೆ ಯಾವ ಸ್ಥಾನವನ್ನು ಕೊಡುವಿರಿ? ಅಂತವಿಲ್ಲದ ಆದಿಶಿವನೇ!' ಎಂದು ಶಿವಕಾಮಿಯಾಂಡಾರನು ಹೇಳಿದನು.

560. ಈ ರೀತಿ ಆತನು ಹೇಳಿದ ಮಾತುಗಳನ್ನು ಎದುರಾಗಿ ಬಂದುಕೊಂಡಿದ್ದ ಎರಿಪ್ಪತ್ತರ್ ನಾಯನಾರನು ಕೇಳಿ, ಬೆಂಕಿಯಂತೆ ನಿಟ್ಟುಸಿರು ಬಿಡುತ್ತಾ, ಕೋಪಾತಿಶಯದಿಂದ ಕೂಡಿ, 'ಶಿವನ ಭಕ್ತರುಗಳಿಗೆ ಯಾವಾಗಲೂ ಆನೆಯು ಮೇಲೆ ದ್ವೇಷವುಂಟಲ್ಲವೇ? ಆ ಆನೆಯನ್ನು ಕೊಂದುಹಾಕುವೆನು' ಎಂದು ತನ್ನ ಕೈಯಲ್ಲಿದ್ದ ಹರಿತವಾದ ಮಡುವನ್ನೆತ್ತಿಕೊಂಡು ಬಂದನು.

561. ಬಂದವನೇ, ಶಿವಪರಮಾತ್ಮನನ್ನು ನೋಡಿ 'ಶಿವದಾ' ಎಂದು ಮೊರೆಯಿಡುತ್ತಿದ್ದ ಭಕ್ತನಾದ ಶಿವಕಾಮಿಯಾಂಡಾರನನ್ನು ನೋಡಿ, ನಮಿಸಿ, 'ನಿಮಗೆ ಈ ದೊಡ್ಡ ದುಃಖವನ್ನು ತಂದ ಆ ಆನೆಯು ಎಲ್ಲಿ ಹೋಯಿತು?' ಎಂದು ಕೇಳಲು, 'ನಮ್ಮ ಈಶನನ್ನು ಅಲಂಕರಿಸತಕ್ಕ ಹೂಗಳನ್ನು ನನ್ನ ಕೈಯಿಂದ ಸೆಳೆದು ನೆಲದಲ್ಲಿ ಚೆಲ್ಲಿ, ಮುಂದಿನಿಂದ ಇದೋ ಈ ಬೀದಿಯಲ್ಲಿ ಹೋಯಿತಷ್ಟೆ' ಎಂದು ಶಿವಕಾಮಿಯಾಂಡಾರನು ಹೇಳಿದನು.

---

559. 'ನೆಟಿಯೋ ನಱಿಯಾ ನೆಱಿಯಾ ರಱಿಯುಮ್
ಪಟಿಯಾ ಲಟಿಮೈ ಪ್ಪಣಿಚೆಯ್ ತೊಟುಕು
ಮುಟಿಯಾರ್ ಕಳಿಲ್ಯಾ ನಾರಾ ವಣ್ಣೈವಾಯ್
ಮುಟಿಯಾ ಮುತಲಾ!' ಯೆನವೇ ಮೊಟಿಯು,

ವೇಱು

560. ಎನ್ಱವ ರುರೈತ್ತ ಮಾಱ್ಱ ಮೆಱಿಪತ್ತ ರೆತಿರೇ ವಾರಾ
ನಿನ್ಱವರ್ ಕೇಳಾ ಮೂಳು ನೆರುಪ್ಪುಯಿರ್ ತ್ತುಟಿನ್ಱು ಪೊಱ್ಙ್ಕಿ
'ಮನ್ಱವ ರಟಿಯಾರ್ ಕ್ಕೆನ್ಱುಮ್ ವಟಿಪ್ಪಕೈ ಕಳಿಱೇ ಯನ್ಱೋ,
ಕೊನ್ಱತು ವೀಟುಪ್ಪ' ನೆನ್ಱು ಕೊಲ್ಲೈಮಟು ವೆಟುತ್ತು ವನ್ತಾರ್.

561. ವನ್ತವ ರಟಿತ್ತೈತ್ತ ತೊಣ್ಟರ್ ತಮ್ಮೈಕ್ಕಣ್ಟು ವಣಙ್ಕಿ 'ಯುಮ್ಮೈ
ಯಿನ್ತವ ಲ್ಲಿಟುಮ್ಪ್ಪೈ ಚೆಯ್ತ ಯಾನೈಯೆ ಙ್ಙ್ಱ?' ತೆನ್ನ,
'ವೆನ್ತ್ರೈಯಾರ್ ಚಾತ್ತುಮ್ ಪೂವೈ ಯೆನ್ಕೈಯಿಱ್ ಪಱಿತ್ತು ಮಣ್ಮೇಱ್
ಚಿನ್ತಿಮುನ್ ಪಿಟಿತ್ತೆತ್ತು ಪ್ಪೋಕಾ ನಿನ್ಱತಿ ತ್ತೆರುವೇ' ಯೆನ್ಱಾರ್.

562. 'ಈ ಆನೆಯು ಇನ್ನುಮುಂದೆ ಎಲ್ಲಿ ತಪ್ಪಿಸಿಕೊಂಡು ಹೋದೀತು' ಎಂದು ಹೇಳಿ, ನಾಯನಾರನು ಒಡನೆಯೇ ಬೆಂಕಿಯನ್ನು ಬಾಯಲ್ಲಿ ಕಾರುವಂತಹ ಮಡುವನ್ನು ಕೈಯಲ್ಲಿ ಧರಿಸಿಕೊಂಡು, ಮಡುವೂ ತಾನೂ, ಬೆಂಕಿಯೂ ಗಾಳಿಯೂ ಸೇರಿದ ಹಾಗೆ, ಮಿಗಿಲೆನಿಸಿದ ವೇಗದಿಂದ ಹೋಗಿ ಯುದ್ಧಮಾಡುವ ಆನೆಯನ್ನು ವೇಗದಲ್ಲಿ ಸಮೀಪಿಸಿ, ಆದರ ಮೇಲೆ ಹಾದು ಅದನ್ನು ಹಿಡಿಯುವ ಕೆಂಪಗಾದ ಕಣ್ಣುಗಳೂ ಚೂಪಾದ ನಖಗಳೂ ಇರುವ ಸಿಂಹದಂತೆ ಕೋಪಾತಿಶಯದಿಂದ ಕೂಡಿದವನಾಗಿ ಆ ಆನೆಯನ್ನು ಸಂಧಿಸಿದನು.

563. ಹಾಗೆ ಸಂಧಿಸಿ, ನಾಯನಾರನು 'ಇದು ಪೂರ್ವಕಾಲದಲ್ಲಿ ಶಿವಪರಮಾತ್ಮನು ಸುಲಿದ ಆ ಆನೆಯಂತೆಯೇ ಇದೆ. ಮನುಷ್ಯರೂ ದೇವತೆಗಳೂ ತಡೆದರೂ ಅವರನ್ನು ಲಕ್ಷಿಸದೆ ಮೇಲೇರಿ ಇದಿರಿಸಿ ಈ ಆನೆಯು ಶಕ್ತಿಗುಂದಿ ಬೀಳುವಂತೆ ತುಂಡರಿಸಿ ಕೊಂದುಬಿಡುವೆನು' ಎಂದು ಮಿನುಗುತ್ತಿರುವ ಮಡುವನ್ನು ಬಲವಾಗಿ ಸುತ್ತಾಗಿ ಬೀಸಿಕೊಂಡು ಮೇಲೇರಿ ಆರ್ಭಟಿಸಿ ಸಮೀಪಿಸಿ ಕಾಲುಗಳನ್ನು ಸಂಕೋಚಪಡಿಸಿಕೊಂಡು ಆನೆಯ ಮೇಲೆ ಹಾರಿದನು.

564. ಆಗ ಮೇಲಿದ್ದು ನಡೆಸುತ್ತಿರುವ ಮಾವುತರನ್ನು ಲಕ್ಷಿಸದೆ, ಸಿಡುಕಿ, ಬಿಸಿಯಾದ ಬೆಂಕಿಯನ್ನು ಕಾರುವಂತೆ ಕೆಂಪಗಾದ ಕಣ್ಣುಗಳಿಂದ ಕೂಡಿ, ಆ ಆನೆಯು ತಿರುಗಿ ನಾಯನಾರನ ಮೇಲೆ ಹಾಯುವಾಗ ಅದನ್ನು ತಡೆದು, ಅದರ ಮೇಲೆ ಹಾದು, ನೆಲವನ್ನು ಮುಟ್ಟುವಂತಿರತಕ್ಕ ಅದರ ಉದ್ದವಾದ ಸೊಂಡಿಲು ಕೆಳಗೆ ಬೀಳುವ ಹಾಗೆ ನಾಯನಾರನು ಮಡುವಿನಿಂದ ತುಂಡರಿಸಿದನು. ತಾಯ ಕಟ್ಟಕ್ಕರೆಯ ಮುಂದೆ ಭಯವು ಇದಿರು ಬಂದೀತೇ!

---

562. 'ಇಙ್ಕಿತು ಪಿೞೈಪ್ಪ ತೆಙ್ಕೇ ಯಿನಿ' ಯೆನ ವೆರಿವಾಯ್ ಚಿನ್ದ
ಮಙ್ಕೈಯಿನ್ ಮೞುವು ನಾಮು ಮನಲುಮವ್ವೆ ಙ್ಕಾಲು ಮೆನ್ನ
ಪೊಙ್ಕಿಯ ವಿಚೈಯಿಱ್ ಚೆನ್ಱು ಪೊರುಕರಿ ತೊಟರ್ನ್ದು ಪಱ್ಱಿ
ಯಿಙ್ಕುಱಕ್ಕಣ್ಣಾವ ಳರಿಯಿಱ್ ಕೂಟಿ ಕ್ಕಿಟ್ಟಿನರ್ ಚೇಣ್ ಮಿಕ್ಕಾರ್.

563. ಕಣ್ಣವ 'ರಿತುಮುನ್ ಪಣ್ಣ ಲುರಿತ್ತವ ಕ್ಕಳಿಱೇ ಪೋಲು;
ಮಣ್ಣರು ಮಣ್ಣ ಳೋರು ನ್ತಟುಕ್ಕಿನು ಮಟರ್ನ್ದು ಚ್ಚಿನ್ದು
ತ್ತುಣ್ಟಿತ್ತು ಕ್ಕೊಲ್ವೇ' ನೆನ್ಱು ಚುಟರ್ಮೞು ವಲತ್ತಿಲ್ ವೀಚಿ
ಕ್ಕೊಣ್ಟೆೞು ನ್ದಾರ್ತ್ತು ಚ್ಚೆನ್ಱು ಕಾಲಿನಾಱ್ ಕುಲುಙ್ಕ ಪ್ಪಾಯ್ನ್ದಾರ್.

564. ಪಾಯ್ನ್ದಲು ಮಿಚ್ಚೈಕೊ ಣ್ಟಯ್ಕ್ಕನ್ ಪಾಕರೈ ಕ್ಕೊಣ್ಟು ಚೀಱಿ
ಕ್ಕಾಯ್ನ್ದೞ ಲುಮಿೞ್ಕಣ್ ವೇೞ ನ್ದಿರಿನ್ದುಮೇಱ್ ಕತುವ, (ವಚ್ಚನ್
ತಾಯ್ತಲೈ ಯನ್ಪಿನ್ ಮುನ್ಪು ನಿಱ್ಕುಮೇ!) ತಕ್ಕೈನ್ದು ಪಾಯ್ನ್ದು
ತೋಯ್ತನಿ ತ್ತಟಕ್ಕೈ ವೀೞ ಮೞುವಿನ್ ಱುಣಿತ್ತಾರ್ ತೊಣ್ಟರ್.

565. ಆಗ ಕಡಲಂತೆ ಮೊರೆದು ಕೆಳಗೆ ಬಿದ್ದು, ಕಪ್ಪಗಾದ ಬೆಟ್ಟದಂತಿರುವ ಆ ಆನೆಯು ಹೊರಳಲು, ಅದರೊಡನೆ ಬಂದ ಕ್ರೂರರಾದ ಅಂಕುಶಧಾರಿಗಳಾದ ಮೂವರು ಮಾವುತರನ್ನೂ, ಆನೆಯ ಮೇಲಿದ್ದು ಹೋಗುತ್ತಿರುವ ಇಬ್ಬರು ಮಾವುತರನ್ನೂ, ಈ ಐದು ಮಂದಿಯನ್ನೂ, ದೊಡ್ಡ ಬೆಟ್ಟದಂತಹ ತೋಳುಗಳುಳ್ಳ ನಾಯನಾರನು ಬಹುಬೇಗನೆ ಕೊಂದು ನಿಂತನು.

566. ತುಂಡರಿಸಿದುದರಿಂದ ಕೆಳಗೆ ಬಿದ್ದ ಮಾವುತರು ಸಾಯಲು, ಇತರ ಮಾವುತರು ಓಡಿಹೋಗಿ, ಅರಸನ ಸುಗಂಧಯುಕ್ತವಾದ ಅಲಂಕೃತವಾದ ಅರಮನೆಯ ದ್ವಾರಪಾಲಕರನ್ನು ನೋಡಿ 'ಕೆಲರಿಂದಾಗಿ ಪಟ್ಟವರ್ಧನನೆಂಬಾನೆಯು ಕೊಲ್ಲಲ್ಪಟ್ಟಿತು. ಕೆಲಮಾವುತರು ಸತ್ತುಬಿದ್ದರು ಎಂದು ನೀವು ತ್ವರಿತದಿಂದ ಅರಸನೊಡನೆ ಹೇಳಿರಿ' ಎಂದರು.

567. ಅವರು ಹೇಳಿದ ಮಾತುಗಳನ್ನು ಮಣಿಗಳಿಂದಲಂಕೃತವಾದ ಬಾಗಿಲಲ್ಲಿದ್ದ ಕಾಹಿನವರು ಕೇಳಿ, ಅರಸನೆದುರು ಹೋಗಿ ವೀರಗೆಜ್ಜೆಯಿಂದಲಂಕೃತವಾದ ಅವನ ಪಾದಗಳನ್ನು ನಮಿಸಿ ನಿಂತು, 'ವೈರಿಗಳಿಲ್ಲದವರೆ, ಚಿನ್ನದ ಫಾಲವಟ್ಟದಿಂದ ಶೋಭಿಸುವ ಆ ನಿಮ್ಮ ಪಟ್ಟದಾನೆಯನ್ನು 'ಕೆಲವರು ಕೊಂದುಬಿಟ್ಟರು' ಎಂದು ಮಾವುತರು ಬಂದು ಹೇಳಿದರು', ಎಂದರು.

---

565. ಕೈಯಿನೈ ತ್ತುಣಿತ್ತ ಪೋತು ಕಟಲೆನ ಕ್ಕತಱಿ ವೀೞ್ನ್ತು
ಮೈವರೈ ಯನೈಯ ವೇೞಮ್ ಪುರಣ್ಟಿಟ, ಮರುಙ್ಕು ವನ್ತು
ವೆಯ್ಯಕೋಲ್ ಪಾಕರ್ ಮೂವರ್ ಮಿಚೈಕ್ಕೊಣ್ಟಾ ರಿರುವ ರಾಕ
ವೈವರೈ ಕ್ಕೊನ್ಱು ನಿನ್ಱಾ ರರುವರೈ ಯನೈಯ ತೋಳಾರ್.

566. ವೆಟ್ಟುಣ್ಟು ಪಟ್ಟು ವೀೞ್ನ್ತಾರ್ ರೊೞಿಯಮು ಱುಳ್ಳಾ ರೋಟಿ
ಮಟ್ಟವಿೞ್ ತೊಙ್ಕಲ್ ಮನ್ನನ್ ವಾಯಿಲಿಲ್ ಕಾವಲರೈ ನೋಕ್ಕಿ
'ಪಟ್ಟವರ್ ತ್ತನಮುಮ್ ಪಟ್ಟು ಪ್ಪಾಕರುಮ್ ಪಟ್ಟಾ ರೆನ್ಱು
ಮುಟ್ಟನೀರ್ ಕಟಿತು ಪುಕ್ಕು ಮುತಲ್ವನು ಕ್ಕುರೈಯುಂ' ಮೆನ್ಱಾರ್.

567. ಮಱ್ಱವರ್ ಮೊೞಿನ್ತ ಮಾಱ್ಱಮ್ ಮಣಿಕ್ಕಟೈ ಕ್ಕಾಪ್ಪೋರ್ ಕೇಳಾ
ಕ್ಕೊಱ್ಱವನ್ ಱನ್ಪಾಲ್ ವನ್ತು ಕುಱೈಕಟಲ್ ಪಣಿನ್ತು ನಿನ್ಱು
'ಪಱ್ಱಲ ರಿಲಾತಾಯ್! 'ನಿನ್ಪೊಱಿ ಪಟ್ಟಮಾಲ್ ಯಾನೈ ವೀಟ
ಚ್ಚೆಱ್ಱನರ್ ಚಿಲರಾ' ಮೆನ್ಱು ಚೆಪ್ಪಿನಾರ್ ಪಾಕ' ರೆನ್ಱಾರ್.

568. ಚೋಳ ಅರಸನು ಅದನ್ನು ಕೇಳಿ ಲೋಕವನ್ನು ಪ್ರತ್ಯೇಕವಾಗಿ ಕಾಪಾಡುವ ಪರಾಕ್ರಮದಿಂದ ಕೂಡಿದ ರತ್ನಗಳಿಂದಲಂಕೃತವಾದ ತೋಳುಗಳಲ್ಲಿರುವ ಮಾಲೆಗಳಿಗೆ ಮುಸುರಿದ ತುಂಬಿಗಳು ಝೇಂಕರಿಸಿ ಏಳುವಂತೆ ಉಂಟಾದ ಅಳತೆಗೆ ಸಿಗದ ಕೋಪದಿಂದ 'ಹೀಗೆ ಮಾಡಿದವರು ಯಾರು ?' ಎಂದು ಕೇಳವೆ, ಮಣಿಖಚಿತವಾದ ಹೆಬ್ಬಾಗಿಲಿನಿಂದ ಎಳೆಯ ಗಂಡುಸಿಂಹದಂತೆ ಹೊರಟುಬಂದನು.

569. ಅದನ್ನು ನೋಡಿ ರಾಜತಂತ್ರ ಮುಖಂಡರಾದ ಅಮಾತ್ಯರು ತಮ್ಮ ಪ್ರಭುವಾದ ಅರಸನ ಸ್ಥಿತಿಯನ್ನು ಕಂಡು ಸೇನೆಯನ್ನು ಅತಿ ಶೀಘ್ರವಾಗಿ ಎಬ್ಬಿಸಿ ಸೇರಿಸುವಂತೆ ಮೊದಲೇ ಡಂಗುರದ ಮೂಲಕ ಸಾರಿದರು. ಆಗ ಸುಂದರವಾದ ಬಟ್ಟೆಯ ಧ್ವಜಗಳು ಆಕಾಶವನ್ನೆಲ್ಲಾ ಮರೆಸಿ ತುಂಬಲು ಯಂತ್ರರಥಗಳೂ, ಕುದುರೆಗಳೂ, ಎಡೆಎಡೆಗಳಲ್ಲಿ ಆನೆಗಳೂ ಇದ್ದುಕೊಂಡು,

570. ಬಿಲ್ಲಿನೊಡನೆ ಶಕ್ತಿ, ಬಾಳು, ಡೊಣ್ಣೆ, ಬಿಂಡಿವಾಲ, ಮುಸಲ, ಚಕ್ರ, ಮಡು, ಶೂಲ ಮೊದಲಾದ ಹಲಬಗೆಯ ಆಯುಧಗಳನ್ನು ಧರಿಸಿದವರಾಗಿ ವೀರಗೆಜ್ಜೆಯಿಂದಲಂಕೃತವಾದ ಅಗಣಿತ ಶೂರಸೈನಿಕರು ಎಲ್ಲೆಡೆಗಳಲ್ಲಿಯೂ ಸಿದ್ಧರಾದರು.

---

568. ವಳವನು ಙ್ಕೇಟ್ಟು ಪೋತಿನ್ ಮಾಙನ್‌ಙಿ ಮಣ್‌ಕಾ ಕ್ಕಿನ್‌ಱ
ಕಿಳರ್‌ಮಣಿ ತ್ತೋಳ ಲಙ್ಙಙ್ ಚುರುಪ್ಪಿನ ಙ್ಕಿಳರ್‌ನ್ತು ಪೊಙ್ಕ
ವಳವಿಲ್‌ಚೀ ಱ್ಱಿತ್ತು ನಾಲೇ ಯಾರ್‌ಚೆಯ್ತಾ ರೆನ್‌ಱು ಙ್ಕಿಳಾ
ನಿಳವರಿ ಯೇಱು ಪೋಲ ವೆಟಿನ್‌ಮಣಿ ವಾಯಿ ನೀಙ್ಙ,

569. ತನ್ತಿರ ತ್ತಲೈವರ್ ತಾಮು ನ್ತಲೈವನ್‌ಱ ನಿಲೈಮೈ ಕಣ್ಟು
ವನ್ತುಙ ಚ್ಚೇನೈ ತನ್‌ನೈ ವಲ್ವಿರೈ ನ್ತೊಟಿಮುನ್ ಚಾಱ್ಱಿ
ವನ್ತಾ ತ್ತಕಲ ಮೆಲ್ಲಾ ಮಣಿತುಕಿಲ್ ಪತಾಕೈ ತೂರ್‌ಪ್ಪ
ವೆನ್ತಿರ ತ್ತೇರು ಮಾವು ಮಿಟೈಯಿಟೈ ಕಳಿಱು ಮಾಕಿ,

570. ವಿಲ್ಲೊಟು ವೇಲ್ವಾ ಟಣ್ಟು ಪಿಣ್ಟಿಪಾ ಲಙ್ಙಙ್ ಮಿಕ್ಕ
ವಲ್ಲೆಟು ಮುಚಲ ನೇಮಿ ಮಟುಕ್ಕಟು ಕ್ಕಟೈಮುನ್ ಶಾನ
ಪಲ್ಪಟೈ ಕ್ಕಲನ್‌ಕಳ್ ಪಱ್ಱಿ ಪ್ಪೈಙ್ಕಟಲ್ ವರಿನ್ತು ವನ್‌ಕ
ಙೆಲ್ಲೈಯಿಲ್ ಪಟೈ ಞರ್ ಕೊಟ್ಪು ಱ್ಱೆಟುನ್ತನ ರೆಙ್ಙು; ಮೆಙ್ಙುಮ್.

571. ಎಲ್ಲೆಲ್ಲಿಯೂ ಶಂಖ, ತುತೂರಿ, ಕಹಳೆ, ಭೇರಿ, ತಮಟೆ, ಘಂಟೆ, ದುಡಿ, ತಿಮಿಲೆ, ಪಱೆ ಮೊದಲಾದ ವಾದ್ಯ ಧ್ವನಿಗಳೊಡನೆ ಯುದ್ಧಸೇನೆಗಳು ಸೇರಿದುವು. ಈ ಸಂಭ್ರಮದಲ್ಲಿ ಮೇಘಗಳು ತುಂಬಿದ ಆಕಾಶದ ಸಂಭ್ರಮವು ಕೀಳ್ಪಡುವಂತಾಯಿತು.

572. ವಾದ್ಯಧ್ವನಿಯೂ, ಆಯುಧಗಳು ಒಂದಕ್ಕೊಂದು ತಾಗುವ ಶಬ್ದವೂ, ಕುದುರೆಗಳ ಕಂಠಮಾಲೆಯ ಮಣಿಗಳ ಸದ್ದೂ, ಆನೆಗಳ ಬೃಂಹಿತವೂ, ದೊಡ್ಡ ರಥಗಳ ಕೋಲಾಹಲವೂ, ಯೋಧರ ಸಿಂಹನಾದಗಳೂ, ಬಹುವಾಗಿ ಹೊಮ್ಮಿ ಒಂದಾಗಿ ಸೇರುವಾಗ ಪ್ರಳಯಕಾಲದಲ್ಲಿ ಮೇಘಗರ್ಜನೆಯೊಡನೆ ಉಕ್ಕುವ ಕಡಲಂತೆ ಶಬ್ದವು ಹೆಚ್ಚಿತು.

573. ಲೋಕವನ್ನು ನಾಶಮಾಡುವ ಪ್ರಳಯಮಾರುತವು ಮೇಲೆ ಮೇಲೆ ಎದ್ದು ಬಂದು ಬೀಸಿದಂತೆ, ತನ್ನನ್ನು ಹಿಂಬಾಲಿಸಿ ಬರುವ ಚತುರಂಗಬಲವು ತೋರಲು, ತಾನು ಒಂದು ದಿವ್ಯಾಶ್ವದ ಮೇಲೇರಿ ಅರಸನು ರಾಜಬೀದಿಯಲ್ಲಿ ಬಂದನು.

574. ಆತನು ಬಹುವೇಗವಾಗಿ ಹೋಗಿ ಆನೆಯೊಡನೆ ಮಾವುತರು ಸತ್ತುಬಿದ್ದ ಸ್ಥಳದ ಸಮೀಪವನ್ನು ಸೇರಿದನು. ಅಲ್ಲಿ ವೈರಿಗಳಾದವರು ಒಬ್ಬರೂ ಕಂಡುಬರಲಿಲ್ಲ. ಪ್ರಕಾಶಿಸುತ್ತಿರುವ ಕೊಡಲಿಯೊಂದನ್ನು ಧರಿಸಿದವನಾಗಿ ಬಲಿಷ್ಠವಾದ ಎರಡು ತೋಳುಗಳುಳ್ಳವನಾದ ನಾಶಹೊಂದಿದಂತಹ ಆನೆಯಂತೆಯೇ ಭೀಮಕಾಯನಾಗಿ ಪರಾಕ್ರಮಿಯಾಗಿ ನಿಂತಿರುವ ಓರ್ವ ಶಿವಭಕ್ತನನ್ನು ಮಾತ್ರ ಎದುರಲ್ಲಿ ಕಂಡನು.

---

571. ಚಙ್ಕೊಟು ತಾರೈ ಕಾಳ ನ್ತೞಙ್ಕೊಲಿ ಮುೞಙ್ಕು ಪೇರಿ
ವೆಙ್ಕುರ ಪ್ಪಮ್ಪೈ ಕಣ್ಟೈ ವಿಯನ್ಱುಟಿ ತಿಮಿಲೈ ತಟ್ಟೈ
ಪೊಙ್ಕೊಲಿ ಚ್ಚಿನ್ನ ಮೆಲ್ಲಾಮ್ ಪೊರುಪಟೈ ಮಿಟೈನ್ತು ಪೊಙ್ಕಿನ್
ಮಙ್ಕುಲ್ವಾನ್ ಕಿಳರ್ಚ್ಚಿ ನಾಣ ಮರುಙ್ಕಿಟು ನಿನ್ಱಿಯಮ್ಪ ಮಲ್ಕ.

572. ತೂರಿಯ ತ್ತುವೈಪ್ಪು ಮುಟ್ಟು ಙ್ಕಟರ್ಪ್ಪಟೈ ಯೊಲಿಯು ಮಾವಿನ್
ಱಾರ್ಮಣಿ ಯಿಚೈಪ್ಪುಮ್ ವೇೞ ಮುೞಕ್ಕಮು ನ್ತಿಟನ್ತೇರ್ ಚ್ಚಿಲಮ್ಪುಮ್
ವೀರರ್ತ ಙ್ಕಿರುಕ್ಕಿ ನಾರ್ಪ್ಪು ಮಿಕ್ಕೆೞು ನ್ತೊನ್ಱಾ ಮೆಲ್ಲೈ
ಕ್ಕಾರುಟನ್ ಕಟೈನಾಟ್ ಪೊಙ್ಕು ಙ್ಕಟಲೆನ ಕ್ಕಲಿತ್ತು ವನ್ಱೇ.

573 ಪಣ್ಣುಱು ಮುೞುಪ್ಪು ನಾನ್ಕಿಱ್ ಪಾನ್ತೆೞು ಚೇನೈ ಯೆಲ್ಲಾ
ಮಣ್ಣಿಟೈ ಯೆೞುಕಾಲ್ ಮೇಲ್ಮೇಲ್ ವನ್ತೆೞು ನ್ತತುಪೋ ಱ್ಱೋನ್ಱ
ತ್ತಣ್ಣಳಿ ಕ್ಕವಿಕೈ ಮನ್ನನ್ ಱಾನೈಪಿನ್ ಱೊಟರ ತ್ತಾನೋ
ರಣ್ಣಲವ್ ಪುರವಿ ಮೇಲ್ಕೊ ಣ್ಟರಚಮಾ ವೀತಿ ಚೆನ್ಱಾನ್.

574. ಕಟುವಿಚೈ ಮುಟುಕಿ ಪ್ಪೋಕಿ ಕ್ಕಳಿಱ್ಱೊಟುಮ್ ಪಾಕರ್ ವೀೞ್ನ್ತ
ಪಟುಕಳ ಙ್ಕುಱುಕ ಚ್ಚೆನ್ಱಾನ್; ಪಕೈಪ್ಪುಲ ತ್ತವರೈ ಕ್ಕಾಣಾನ್;
ವಿಟುಚುಟರ್ ಮೞುವೊನ್ ಱೇನ್ತಿ ವೇೞಱು ತಟಕ್ಕೈ ತ್ತಾಯ
ವಟುಕಳಿ ಱೆನ್ನ ನಿನ್ಱ ವನ್ಪರೈ ಮುನ್ಪು ಕಣ್ಟಾನ್.

575. ಚಿನ್ನದ ಹುಡಿಗಳು ನೀರೊಡನೆ ಕಲೆತು ಬರುವುದಕ್ಕೆ ಎಡೆಯಾದ ಅರ್ಬಿಗಳಿಂದ ಕೂಡಿದ ಗಿರಿಯಂತೆ ಹೊರಳಿಬಿದ್ದ ಆನೆಯ ಮುಂಭಾಗದಲ್ಲಿ ನಿಂತವನು ದೇಗುಲದಲ್ಲಿ ಯಾವಾಗಲೂ ಆನಂದನರ್ತನವನ್ನು ಮಾಡುವವನೂ ರಜತಗಿರಿವಾಸನೂ ಆದ ಶಿವಪರಮಾತ್ಮನಿಗೆ ಸೇವಕನಾದವನು. ಆದುದರಿಂದ ಇವನು ಆನೆಯನ್ನೂ ಮಾವುತರನ್ನೂ ಕೊಂದವನೆಂದು ಅರಸನು ನೆನೆಯಲಾರದವನಾಗಿ, 'ಆನೆಯನ್ನೂ ಮಾವುತರನ್ನೂ ಕೊಂದು ಗೆದ್ದವರು ಯಾರು?' ಎಂದು ಗಂಭೀರವಾದ ಗಂಡುಧ್ವನಿಯಿಂದ ಕೇಳಿದನು.

576. ಆಗ ಉಳಿದಿದ್ದ ಮಾವುತರು, ಆತನ ಸಮೀಪ ಬಂದು, 'ಸುಗಂಧಯುಕ್ತವಾದ ಮಲರಮಾಲೆಯನ್ನೂ ಮಣಿಮಾಲೆಯನ್ನೂ ಅಲಂಕಾರವಾಗಿ ಧರಿಸಿಕೊಂಡವರೆ, ನಿಮ್ಮ ದೊಡ್ಡ ಆನೆಯನ್ನು ಇದಿರಿಸಿ ನಿಲ್ಲುವ ಪರಾಕ್ರಮವುಳ್ಳವರು, ಸಮುದ್ರದಿಂದಾವೃತವಾದ ಸಮಸ್ತ ಭೂಮಂಡಲದಲ್ಲೇ ಯಾವ ಅರಸರು ತಾನೇ ಇದ್ದಾರೆ? ಆನೆಯ ಕೊಲೆಯನ್ನು ಮಾಡಿದವರು ಪರಶುವನ್ನು ಎತ್ತಿ ನಿಂತ ಇವರೇ ಆಗಿರುವರು' ಎಂದು ನಮಿಸಿ ಹೇಳಿದರು.

577. ಶಂಖದ ಕರ್ಣಾಭರಣವನ್ನು ಕಿವಿಯಲ್ಲಿ ಧರಿಸಿದ, ಶಿವಪರಮಾತ್ಮನಿಗೆ ಸಖನಾಗುವ ಗುಣದಲ್ಲಿ ಮಿಕ್ಕ ಈತನು, ತಪ್ಪಿಲ್ಲದೆ ಕೊಲೆಯನ್ನು ಮಾಡಿರಲಾರನು. ಆದುದರಿಂದ ತಪ್ಪು ನಡೆದಿರುವುದು ನಿಶ್ಚಯವೆಂದು ಮನದಲ್ಲಿ ನಿರ್ಧರಿಸಿ, ಮಳೆಯಂತೆ ಮದವನ್ನು ಸುರಿಸುವ ಆನೆ, ಕಾಲಾಳು ಮೊದಲಾದ ಸೇನೆಗಳು ಮುಂದೆ ಬಾರದಂತೆ ತಡೆದು ತಾನು ಮೇಲೇರಿ ಬಂದ ದಿವ್ಯಾಶ್ವದಿಂದ ಅರಸನು ಭೂಮಿಗೆ ಇಳಿದನು.

---

575. ಪೊನ್‌ಱಿವ ಱರುವಿ ಕ್ಕುನ್‌ಱಿ ಮೆನಪ್ಪುರಳ್‌ ಕಳಿಱ್ಱಿನ್‌ ಮುನ್‌ಪು
ನಿನ್‌ಱವರ್‌ ಮನ್‌ಱು ಳಿನ್‌ಱು ನಿರುತ್ತಮೇ ಪುರಿಯುಮ್‌ ವೆಳ್ಳಿ
ಕ್ಕುನ್‌ಱವ ರಟಿಯಾ ರಾನಾರ್‌; ಕೊನ್‌ಱವ ರಿವರೆನ್‌ ಱೋರಾನ್‌;
'ವೆನ್‌ಱವ ರಿಯಾವ?' ರೆನ್‌ಱಾನ್‌ ವೆಟಿಪಟ ಮುಟಙ್ಕು ಇಶೈಯ್ಯಾನ್‌.

576. ಅರಚನಾ ಙ್ಕುರುಳಿ ಚ್ಚೆಯ್ಯ ವರುಕುಱೆನ್‌ ಱಣ್ಯೆನ್ತ ಪಾಕರ್‌,
'ವಿರೈಚೆಯ್ತಾರ್‌ ಮಾಲೈ ಯೋಯ್‌! ನಿನ್‌ ವಿಱಙ್ಕಳಿ ಱೆತಿರೇ ನಿಱ್ಕವಲ್‌
ತಿರೈಚೆಯ್‌ನೀ ರುಲಕಿನ್‌ ಮನ್‌ನ ರಿಯಾರುಳಾರ್‌? ತೀಙ್ಕು ಚೆಯ್ತಾರ್‌
ಪರಚುಮುನ್‌ ಕೊಣ್ಟು ನಿನ್‌ಱ ಇವ್‌ ರೆನ ಪ್ಪಣಿನ್ತು ಚೊನ್‌ನಾರ್‌.

57͵. 'ಕುಟಿಶೈಯಣಿ ಕಾತಿನಾನು ಕ್ಕನ್‌ಪರಾ ಙ್ಕುಣತ್ತಿನ್‌ ಮಿಕ್ಕಾರ್‌
ಮಿಟಿಶೈಪಟ ನನ್‌ಱಿ ಕ್ಕೊಲ್ಲಾರ್‌; ಪಿಟಿಶೈತ್ತುಣ್‌ ಟೆನ್‌ಱುಟ್‌ ಕೊಣ್ಟು
ಮಟಿಶೈಮತ ಯಾನೈ ಚ್ಚೇನೈ ವರವಿನೈ ಮಾಱಿ, ಮಱಿ
ವುಟಿಶೈವಯ ಪ್ಪುರವಿ ಮೇನಿನ್‌ ಱಿಟಿನ್ತವ ನುಲಕ ಮನ್‌ನನ್‌.

578. 'ಕಿರಿದಾದ ಬೆಟ್ಟದಂತಿರುವ, ಮದಸುರಿಸುವ ಆನೆಯ ಮುಂದೆ ಈ ತಪಸ್ವಿಗಳು ಹೋಗಿರುವಾಗ ಬೇರೊಂದನ್ನೂ ಮಾಡದೆ, ಇಷ್ಟರಲ್ಲಿಯೇ ಆನೆಯನ್ನು ಕೊಂದು ಮಾತ್ರ ಬಿಟ್ಟಿರುವ ಭಾಗ್ಯವುಳ್ಳವನಾದೆನು. ಚಿತ್ಸಭೆಯಲ್ಲಿರುವ ನಟರಾಜನ ಭಕ್ತರಾದ ಇವರು ಇಷ್ಟು ಕೋಪಗೊಳ್ಳುವಂತೆ ಯಾವ ದೊಡ್ಡ ತಪ್ಪು ಏರ್ಪಟ್ಟಿತೋ? ಓ, ಕೆಟ್ಟೆನು!' ಎಂದು ಅರಸನು ಭಯಗೊಂಡವನಾಗಿ,

579. ತನ್ನ ಸುತ್ತು ಗುಂಪುಗೂಡಿ ಬಂದವರೆಲ್ಲರನ್ನೂ ದೂರ ನಿಲ್ಲುವಂತೆ ಮಾಡಿ, ಸಖರಾದ ಎಱಿಪತ್ತರಲ್ಲಿಗೆ ಹೋಗಿ, 'ಸೇವಕನಿಗೆ ಇದು ತಿಳಿಯದು. ಸೇವಕನು (ತಾನು) ಅಲ್ಲಿ ಕೇಳಿದ ವರ್ತಮಾನವೊಂದು, ಇಲ್ಲಿ ನಡೆದುದಿನ್ನೊಂದು, ಹೀಗಿರಲು ಆನೆಯಿಂದಾದ ದ್ರೋಹಕ್ಕೆ ಪರಿಹಾರವು ತಾವು ಮಾಡಿದ ಕಾರ್ಯ ಮಾತ್ರ ಸಾಕಾದೀತೋ? ಅನುಗ್ರಹಿಸಬೇಕು' ಎಂದು ಅರಸನು ವಿನಯದಿಂದ ಕೇಳಿದನು.

580. ಆಗ ದೇವದೇವನ ಸಖರಾದ ಎಱಿಪತ್ತರು ಅರಸನನ್ನು ನೋಡಿ, 'ಚೋಳ ರಾಜನೆ, ಶಿವಕಾಮಿಯಾಂಡಾರನು ಈಶ್ವರನನ್ನು ಪೂಜಿಸುವುದಕ್ಕಾಗಿ ಕೊಯ್ದು ಸಂಗ್ರಹಿಸಿದ ಪತ್ರಪುಷ್ಪಗಳನ್ನು ಈ ಆನೆಯು ಹರಿದೀಡಾಡಿದುದರಿಂದ ಶಿವದ್ರೋಹಿಯಾಯಿತು. ಅದನ್ನು ನಾನು ತುಂಡರಿಸಿ ನೆಲದಲ್ಲುರುಳಿಸಿದೆನು.'

---

578. ವೈತ್ತಟ ಜ್ಜುನ್ಱು ಪೋಲು ಮತಕ್ಕಳಿ ಱ್ಱಿತಿರೇ ಯಿನ್ಱು
ಮೆಯರ್ತ್ತವರ್ ಚೆನ್ಱ ಪೋತು ವೇಱೊನ್ಱುಮ್ ಪುಕುತಾ ವಿಟ್ಟ
ವತ್ತವ ಮುಟ್ಟೆಯೋ ನಾನೇ; ನಮ್ಪಲ ವಾಣ ರನ್ಪ
ರಿತ್ತನೈ ಮುನಿಯ, ಕ್ಕೆಟ್ಟೇ! ಎನ್ಕೊಲೋ ಪಿಟೈ?' ಯೆನ್ಱಞ್ಚಿ,

579. ಚೆಱ್ನ್ತವರ್ ತಮ್ಮೈ ನೀಕ್ಕಿ, ಯನ್ಪರ್ಮುನ್ ಱೆಱುತು ಚೆನ್ 'ನೀ
ತಱ್ನ್ತಿಲೇ ನಟಿಯೇ; ನಜ್ಜು ಕ್ಕೇಟ್ಟತೊನ್; ಱತುತಾ ಳಿಜ್ಕ;
ಮಱ್ನ್ತಿ ಕ್ಕಳಿಱ್ಱಿನ್ ಕುಱ್ಱಮ್ ಪಾಕರೋ ಟಿತನ್ನೈ ಮಾಳ
ವೆಱ್ನ್ತೇ ಪೋತು ಮೋತಾ? ನರುಳ್ಚೆಯ್ಯು' ಮೆನ್ಱು ನಿನ್ಱಾರ್.

580. ಮನ್ನವನ್ ಱನ್ನೈ ನೋಕ್ಕಿ ವಾನವ ರೀಚರ್ ನೇಚರ್
'ಚೆನ್ನಿ! ಯಿ ತ್ತುಜ್ಕ ವೇಟ ಇಞ್ಚಿವಕಾಮಿ ಯಾಣ್ಟಾರ್ ಕೊಯ್ತು
ಪನ್ನಕಾ ಪರಣರ್ ಚ್ಚಾತ್ತ ಕ್ಕೊಕ್ಕಟುವರುವ್ ಪಳ್ಳಿ ತ್ತಾಮ
ನ್ಱನ್ನೈಮುನ್ ಪಱಿತ್ತು ಚ್ಚಿನ್ಱು ತ್ತರೈಪ್ಪಟ ತ್ತುಣಿತ್ತು ವೀೞ್ತ್ತೇನ್'

581. 'ಆನೆಯು ಈ ಅಪರಾಧವನ್ನು ಮಾಡುವಾಗ ಅದರೊಡನೆ ಬರುತ್ತಿದ್ದ ಅಂಕುಶಧಾರಿಗಳೂ, ಅದರ ಮೇಲೆ ಸವಾರಿ ಮಾಡುತ್ತಿದ್ದ ಮಾವುತರೂ, ಅದನ್ನು ತಡೆಯದೆ ಇದ್ದ ಕಾರಣದಿಂದ ಶಿವದ್ರೋಹಿಗಳಾದ ಅವರೂ ಮೃತರಾದರು. ಇದೇ ಇಲ್ಲಿ ನಡೆದುದು' ಎಂದನು. ಅವನು ಹೀಗೆನ್ನಲು, ದೊಡ್ಡ ಬೆಟ್ಟದಂತಿರುವ ತೋಳುಗಳುಳ್ಳ ಅರಸನು ಅಂಜಿ ಅವನ ಪಾದಗಳಲ್ಲಿ ನಮಿಸಿ,

582. 'ಶಿವಪರಮಾತ್ಮನ ಸನ್ನಿಧಿಯಲ್ಲಿಯೂ ಅವನ ಭಕ್ತರ ಸನ್ನಿಧಿಯಲ್ಲಿಯೂ ಗೈದ ಈ ಅಪಚಾರಕ್ಕೆ ಇಷ್ಟು ಮಾತ್ರ ಸಾಲದು. ನನ್ನನ್ನೂ ಕೊಲ್ಲಬೇಕು. ಆದರೆ ನಿಮ್ಮ ಮಂಗಳಯುಕ್ತವಾದ ಮಡು (ಪರಶು) ವಿನಿಂದ ಕೊಲ್ಲುವುದು ಯುಕ್ತವಾಗಲಾರದು. ಇದು ಅದಕ್ಕೆ ತಕ್ಕುದು' ಎಂದು ತೀರ್ಮಾನಿಸಿದವನಾಗಿ ಎತ್ತಿದ ಕೈಗಳಿಂದ ತನ್ನ ನಡುವಿನಲ್ಲಿರುವ ಖಡ್ಗವನ್ನು ಒರೆಯಿಂದ ಕಳಚಿ ಅವನ ಕೈಯಲ್ಲಿ ಕೊಟ್ಟನು.

583. ಉಷ್ಣವಾದ ಅಗ್ನಿಯಂತೆ ಪ್ರಕಾಶಿಸುವ ಆ ಖಡ್ಗವನ್ನು ಒರೆಯಿಂದ ಕಳಚಿ ನೀಡುವ ಅರಸನನ್ನು ನೋಡಿ, 'ಓ! ಕೆಟ್ಟೆನು! ಎಲ್ಲೆಯಿಲ್ಲದ ಖ್ಯಾತಿಯಿಂದ ಕೂಡಿದ ಅರಸನ ಪ್ರೇಮವು ನಿಸ್ಸೀಮವಾದುದೆಂಬುದನ್ನು ಈಗ ಕಂಡುಕೊಂಡೆನು' ಎಂದು ನೆನೆದವನಾಗಿ, ಅರಸನು ನೀಡಿದ ಖಡ್ಗವನ್ನು ತೆಗೆದುಕೊಳ್ಳಲಾರದವನಾಗಿದ್ದು, ತಾನು ತೆಗೆದುಕೊಳ್ಳದಿದ್ದರೆ ಅರಸನು ತನ್ನನ್ನು ತಾವೇ ನಾಶಮಾಡಿಕೊಳ್ಳುವನೆಂದು ತಿಳಿದವನಾಗಿ ಹೆದರಿ, ಆ ತಪ್ಪು ಬಾರದಂತೆ ಅವನನ್ನು ಕಾಪಾಡುವ ಉದ್ದೇಶದಿಂದ ಆ ಖಡ್ಗವನ್ನು ಕೈಯಿಂದ ತೆಗೆದುಕೊಂಡನು.

---

581. 'ಮಾತಙ್ಗಮ್ ತೀಙ್ಗು ಚೆಯ್ಯ ವರುಪರಿ ಕ್ಕಾರರ್ ತಾಮು
ಮಾತಙ್ಗ ಕ್ಕಟವು ವಾರುವರ್ ವಿಲಕ್ಕಿಟಾ ತೊಟಿನ್ತ್ರ ಪಟ್ಟಾ;
ರೀತಿಙ್ಗು ನಿಕಟ್‌ನ್ತ' ತೆನ್‌ಜಾ ರಿರಿಪತ್ತ; ರೆನ್‌ನ, ಲಙ್ಙ್ಟಿ
ಪ್ಪಾತಙ್ಗಣ್ ಮುಙ್ಕೈಯಾ ಜ್ಞಾಟ್‌ನ್ತು ಪರುವರೈ ತ್ತಟನ್ತೋಣ್ ಮನ್‌ನನ್,

582. ಅಙ್ಗಣ ರಟೆಯಾರ್ ತಮ್ಮೈ ಚ್ಚೆಯ್ತವಿ ವ್ವಪರಾ ತತ್ತು
ಕ್ಕಿಙ್ಗಿತು ತನ್‌ನಾಙ್ ಪೋತಾ; ತೆನ್‌ನೈಯು ಙ್ಕೊಲ್ಲ ವೇಣ್ಟು;
ಮಙ್ಗಲ ಮಟುವಾಙ್ ಕೊಲ್ಕೈ ವಟಿಕ್ಕುಮನ್; ಙತುವಾ' ಮೆನ್‌ಙು
ಚೆಙ್ಕೈಯಾ ಲುಟೈವಾಟ್ ವಾಙ್ಗಿ ಕ್ಕೊಟುತ್ತನರ್ ತೀರ್‌ವು ನೇರ್‌ವಾರ್.

583. ವೆನ್ತಙ್ ಚುಟರ್‌ವಾ ಣೀಟ್ಟುವರ್ ವೇನ್ತನೈ ನೋಕ್ಕಿ 'ಕೆಟ್ಟೇ!
ನನ್ತಮಿಲ್ ಪುಕಟಾ ವನ್‌ಪು ಕ್ಕಳವಿನ್‌ಮೈ ಕಣ್ಟೇ' ನೆನ್‌ಙು
ಶನ್ತವಾಳ್ ವಾಙ್ಗ ಮಾಟ್ಟಾರ್, ತನ್‌ನೈ ತ್ತಾನ್ ಮುಙಕ್ಕು ಮೆನ್‌ಙು
ಚಿನ್ತೈಯಾ ಲುಣರ್‌ವು ಙ್ಙಾಙ್ಗಿ ವಾಙ್ಗಿನಾರ್ ತೀಙ್ಗುತೀರ್‌ಪ್ಪಾರ್.

584. ಆಮೇಲೆ ಅರಸನು ಭಕ್ತನ ಮುಂದೆ ನಮಿಸಿ ನಿಂತು, 'ಇವರು ಈ ಖಡ್ಗದಿಂದ ನನ್ನನ್ನು ಸಂಹರಿಸಿ ನನ್ನ ದೋಷವನ್ನು ಸರಿಪಡಿಸಿಕೊಳ್ಳುವ ಅವಕಾಶವನ್ನು ನಾನು ಹೊಂದಿದೆನು' ಎಂದು ಸಂತಸಗೊಂಡನು. ಇದನ್ನು ಕಂಡ ಎಱಿಪ್ಪತ್ತನು ಇದಕ್ಕಂಜಿ,

585. 'ಈ ದೊಡ್ಡ ಆನೆಯೂ ಮಾವುತರೂ ಮಡಿದುದು ನನ್ನಿಂದ. ಹೀಗೆ ನನ್ನದೇ ದೊಡ್ಡ ತಪ್ಪಿದ್ದರೂ, ತನ್ನ ನಡುವಿನ ಕತ್ತಿಯನ್ನು ಕೊಟ್ಟು ತನ್ನನ್ನೂ ಕೊಲ್ಲು ಎಂದು ಹೇಳುವ ಈ ದೊಡ್ಡ ಸಖನಿಗೆ ಕೇಡನ್ನು ನೆನೆದೆನು' ಎಂದು ಕೊರಗಿ ಈ ತನ್ನ ತಪ್ಪಿಗೆ ಮೊದಲಾಗಿ ತನ್ನ ಪ್ರಾಣವನ್ನು ನೀಗುವುದೇ ತಕ್ಕ ಪ್ರಾಯಶ್ಚಿತ್ತವೆಂದು ನೆನೆದು,

586. ಅರಸನು ಕೊಟ್ಟ ಕತ್ತಿಯನ್ನು ತನ್ನ ಕತ್ತಿಗಿಟ್ಟು ತುಂಡರಿಸಲು ತೊಡಗುವಾಗ 'ಹಿರಿಯರು ಈ ರೀತಿ ಮಾಡಬಾರದು. ಇಂತು ಮಾಡಿದ ಕಾರಣವೇನು? ಓ! ಕೆಟ್ಟೆನು!' ಎಂದು ತ್ವರೆಯಿಂದ ತನ್ನ ದೊಡ್ಡ ತೋಳುಗಳಿಂದ ಅರಸನು ಆ ಕತ್ತಿಯನ್ನೂ ಅದನ್ನು ಹಿಡಿದ ಭಕ್ತನ ಕೈಯನ್ನೂ ಕೂಡಿಯೇ ಹಿಡಿದುಕೊಂಡನು.

---

584. ವಾಙ್ಕಿಯ ತೊಣ್ಡರ್ ಮುನ್‌ಪು ಮನ್‌ನನಾರ್ ತೊಟುತು ನಿನ್‌ಱೇ
'ಯಿಙ್ಙೈನ್ನೈ ವಾಳಿ ನಾಱ್ಕೊನ್ ಱಿನ್‌ಪಿಟಿೖ ತೀರ್‌ಕ್ಕ ವೇಣ್ಟಿ
ಯೋಙ್ಕಿಯ ವುತವಿ ಚೆಯ್ಯ ಪ್ಪೆಱ್ಱ ನಿವರ್‌ಪಾ' ಲೆನ್‌ಱೇ
ಯಾಙ್ಕವ ರುವಪ್ಪ ಕ್ಕಣ್ಟ ವೆಱಿಪತ್ತ ರತನು ಕ್ಕಙ್ಚಿ,

585. 'ವನ್‌ಪೆರು ಙ್ಕಳಿಱು ಪಾಕರ್ ಮಟಿಯವು ಮುಟ್ಟೈವಾ ಳೈತ್ತನ್
ತೆನ್‌ಪೆರುಮ್ ಪಿಟೈಯಿ ನಾಲೇ ಯೆನ್‌ನ್ನೈಯು ಙ್ಕೊಲ್ಲು ಮೆನ್‌ಱು
ಮನ್‌ಪನಾರ್ ತಮ್ಮೈ ತೀಙ್ಕು ನಿನೈನ್ತನ' ನೆನ್‌ಱು ಕೊಣ್ಟು,
'ಮುನ್‌ಪೆನ ತುಯಿರ್‌ಚೆ ಕುತ್ತು ಮುಟಿಪ್ಪತೇ ಮುಟಿ' ವೆನ್ ಱೆಣ್ಣಿ,

586. ಪುರಿನ್ತವರ್ ಕೊಟುತ್ತ ವಾಳೈ ಯನ್‌ಪರ್‌ತ ಙ್ಕಟುತ್ತಿಱ್ ಪೂಟ್ಟ
ಯರಿನ್ತಿಟ ಲುಱ್ಱ ಪೋತಿ ಲರಚನುಮ್ 'ಪೆರಿಯೋರ್ ಚೆಯಲ್‌ಕೈ
ಯಿರುನ್ತವಾ ಱೆತುವೆನ್? ಕೆಟ್ಟೇ!' ನೆನ್‌ಱೆತಿರ್ ಕಟಿತಿಱ್ ಚೆನ್‌ಱು
ಪೆರುನ್ತಟ ನ್ತೋಳಾಱ್ ಕೂಟ ಪ್ಪಿಟಿತ್ತನನ್ ವಾಳು ಙ್ಕೈಯುಮ್.

587. ಆಗ ಮಹಾತಪಸ್ವಿಯಾದ ಎಱಿಪ್ಪತ್ತನು ವ್ಯಸನಗೊಂಡು ನಿಲ್ಲಲು, ಇವರಿಬ್ಬರಲ್ಲಿಯೂ ಅಧಿಕವಾದ ಸ್ನೇಹಕಾರಣದಿಂದ ಬಂದ ಕಷ್ಟವನ್ನು ನಿವಾರಿಸುವ ಕಾರಣವಾಗಿ, ವಿಷಕಂಠನೂ, ಅನುಗ್ರಹಶೀಲನೂ ಆದ ಈಶ್ವರನ ಕೃಪೆಯಿಂದಲಾಗಿ ಜ್ಞಾನಪ್ರಕಾಶವು ಪಸರಿಸುವಂತೆ ದಿವ್ಯವಾಣಿಯು ಕೇಳಿಬಂತು.

588. 'ಎಲ್ಲರಿಂದಲೂ ಸೇವೆಯನ್ನು ಕೈಕೊಳ್ಳುವ ಅರ್ಹತೆಯುಳ್ಳ ಭಕ್ತಾಗ್ರಣಿಗಳೇ, ಮುಖ್ಯವಾದ ಸೇವೆಯನ್ನು ಮಾಡುವಾಗ ಉಂಟಾದ ವ್ಯಸನವನ್ನು ಎತ್ತಿ ತೋರುವುದಕ್ಕೆ, ಕೆಂಪಗಾದ ಹೂಮಾಲೆಯನ್ನು ತುಂಡರಿಸಿ ಚೆಲ್ಲಿದ ಕಾರ್ಯವು ಚಂದ್ರನನ್ನು ತಲೆಯಲ್ಲಿ ಧರಿಸಿದ ನಟರಾಜನ ಕೃಪೆಯ ಕಾರಣದಿಂದ ಆಯಿತು.' ಈ ವಾಣಿಯು ಕೇಳಿಬರುತ್ತಿರಲು ಸತ್ತು ಬಿದ್ದಿದ್ದ ಮಾವುತರೂ ಆನೆಯೂ ಜೀವಂತರಾಗಿ ಎದ್ದುನಿಂತವು.

589. ತನ್ನ ಕತ್ತನ್ನು ತುಂಡರಿಯಲು ಹೂಡಿದ ಖಡ್ಗವನ್ನು ಬಿಟ್ಟು ಬಿಟ್ಟು, ಎಱಿಪ್ಪತ್ತನು ಚೋಳ ಅರಸನ ಪಾದಗಳಲ್ಲಿ ಬಿದ್ದನು. ಅರಸನೂ ಯುದ್ಧಕ್ಕೆ ತಕ್ಕಂತೆ ತೀಡಿ ಹರಿತಮಾಡಿದ ಆ ಖಡ್ಗವನ್ನು ದೂರ ಎಸೆದುಬಿಟ್ಟು ಎಱಿಪ್ಪತ್ತನನ್ನು ಸ್ತುತಿಸಿ ಅವನ ದಿವ್ಯಪಾದಗಳಲ್ಲಿ ಬಿದ್ದು ನಮಿಸಿದನು. ದೇವತೆಗಳು ಶೀತಲವಾದ ಹೂಮಳೆಯನ್ನು ಪೂರ್ಣವಾಗಿ ಅವರ ಮೇಲೆ ಸುರಿಸಿದರು.

---

587. ವೌವನಾರ್ ವಿಟಾತು ಪಱ್ಱಿ ಮಾತವರ್ ವರುನ್ದಿ ನಿಱ್ಪ
ಅಳವಿಲಾ ಪ್ಪರಿವಿಲ್ ವನ್ದ ವಿಟುಕ್ಕಣ್ಣೈ ಯಕಱ್ಱ ವೇಣ್ಡಿ
ಕ್ಕಳಮಣಿ ಕಳತ್ತ ಚ್ಚೆಯ್ಯ ಕಣ್ಣುತ ಲರುಳಾಲ್ ವಾಕ್ಕು
ಕ್ಕಿಳರೊಳಿ ವಿಚುಮ್ಬಿನ್ ಮೇಲ್ವ ನ್ದೆಟುನ್ದತು ಪಲರು ಙ್ಕೇಟ್ಪ,

588. ತೊಟುನ್ದಕೈ ಯನ್ಪಿನ್ ಮಿಕ್ಕೀರ್! ತೊಣ್ಟಿನೈ ಮಣ್ಮೇಱ್ ಕಾಟ್ಟ
ಚ್ಚೆಟುನ್ದಿರು ಮಲರೈ ಯಿನ್ಱು ಚಿನಕ್ಕರಿ ಚಿನ್ದ ತ್ತಿಙ್ಕಟ್
ಕೊಟುನ್ದಣಿ ವೇಣಿ ಕ್ಕೂತ್ತ ರರುಳಿನಾಱ್ ಕೂಟಿ' ಱ್ಱೆನ್ಱಱ್
ಕೆಟುನ್ದತು ಪಾಕ ರೋಟು ಮಿಯಾನೈಯು ಮೆಟುನ್ದ ತನ್ಱೇ.

589. ಈರವೇ ಪೂಟ್ಟಿನುಮ್ ವಾಳೈ ವಿಟ್ಟೆಱಿ ಪ್ಪತ್ತರ್ ತಾಮು
ನೇರಿಯರ್ ಪೆರುಮಾನ್ ಱಾನ್ಮೇಲ್ ವಿಟುನ್ದನರ್, ನಿರುಪರ್ ಕೋನುಮ್
ಪೋರ್ವಟ ವಾಳೈ ಪ್ಪೋಕ ಎಱಿನ್ದವರ್ ಕಟಲ್ಕಳ್ ಪೋಱ್ಱಿ
ಪ್ಪಾರ್ಮಿಚೈ ಪ್ಪಣಿನ್ದಾನ್; ವಿಣ್ಣೋರ್ ಪನಿಮಲರ್ ಮಾರಿ ತೂರ್ತ್ತಾರ್.

590. ಇಬ್ಬರು ಭಕ್ತರೂ ಎದ್ದುನಿಂತು ಆಗಸದಲ್ಲಿ ಕೇಳಿಬಂದ ಆ ದಿವ್ಯವಾಣಿಯನ್ನು ಸ್ತುತಿಸಿದರು. ಪ್ರಯಾಸದಿಂದ ದೊರೆಯುವ ವೇದಾರ್ಥವಾದ ಶಿವಪರಮಾತ್ಮನು ಹೂವಿನ ಬುಟ್ಟಿಯಲ್ಲಿ ಹಿಂದಿದ್ದಂತೆಯೇ ಪತ್ರಪುಷ್ಪಗಳು ತುಂಬುವಂತೆ ಅನುಗ್ರಹಿಸಲು, ಆ ವಿಶೇಷವಾದ ದಿವ್ಯಾನುಗ್ರಹ ಕಾರ್ಯವನ್ನು ಕಂಡು, ಹಿರಿಯ ಭಾಗ್ಯವನ್ನು ಪಡೆದವನಂತೆ ಸಂತೋಷಪಟ್ಟು ಶಿವಕಾಮಿಯಾಂಡಾರನು ಎದ್ದು ನಿಂತನು.

591. ಸುವಾಸನೆಯನ್ನು ಬೀರುವ ಅಲರಮಾಲೆ (ಜೋಳರಿಗೆ ಗುರುತಾದ ಹೂಮಾಲೆ) ಯಿಂದಲಂಕೃತನಾದ, ಜಯಯುಕ್ತನಾದ ಅರಸನ ಮುಂದೆ, ನಿದ್ರೆ ತಿಳಿದು ಕಣ್ಣು ಬಿಟ್ಟು ಎಚ್ಚತ್ತಂತೆ ಬಿಸಿಯಾದ ಮದೋದಕವು ಧಾರಾಳವಾಗಿ ಸುರಿಯುತ್ತಿರಲು, ಮುಗಿಲಿನಂತೆ ಮೊಳಗಿ, ಕೋಲಾಹಲದೊಡನೆ ಎದ್ದ ಪಟ್ಟವರ್ಧನ ಆನೆಯನ್ನು ಏರಿ ನಡೆಸಿಕೊಂಡು ತುಂಬಿದ ಸಂತೋಷದಿಂದ ಆ ಮಾವುತರೂ ಸಮೀಪಕ್ಕೆ ಬಂದರು.

592. ಭಕ್ತನಾದ ಎಱಿಪ್ಪತ್ತನು ಅರಸನನ್ನು ನಮಿಸಿ, 'ದಾಸನಾದ ನಾನು ಕಂಡು ಆನಂದಿಸುವಂತೆ ಈ ದಿವ್ಯವಾದ ಆನೆಯ ಮೇಲೇರಿ ತಮ್ಮ ಅರಮನೆಗೆ ಬಿಜಯ ಮಾಡಿರಿ' ಎಂದು ಹೇಳಲು, ಅರಸನು ಆ ಆಜ್ಞೆಯನ್ನು ಒಪ್ಪಿಕೊಂಡು, ಅವನನ್ನು ನಮಿಸಿ ಬೆಳ್ಕೊಡೆಯ ನೆಳಲಲ್ಲಿ ಆನೆಯ ಮೇಲೇರಿ ಹೋದನು.

---

590. ಇರುವರು ಮೆಟುನ್ತು ವಾನಿ ಲೆಟುನ್ತಪೇ ರೊಲಿಯೈ ಪ್ಪೋಱ್ಱಿ
ಅರುಮಱೈಕ್ಕು ಪ್ಪೊರುಳಾ ಯುಳ್ಳಾ ರಣಿಕೊಳ್‌ಪೂ ಙ್ಕೂಟೈ ತನ್‌ನಿನ್
ಮರುವಿಯ ಪಳ್ಳಿ ತ್ತಾಮ ನಿಱೈನ್ತಿಟ ವರುಳ ಮಱ್ಱ
ತ್ತಿರುವರುಳ್ ಕಣ್ಡು ವಾಟ್ನ್ತು ಚಿವಕಾಮಿ ಯಾರು ನಿನ್‌ಱಾರ್.

591. ಮಟ್ಟವಿ ಟಲಙ್ಕಲ್ ವೆನ್‌ಱಿ ಮನ್‌ನವರ್ ಪೆರುಮಾನ್ ಮುನ್‌ನ
ರುಟ್ಟರು ಕಳಿಪ್ಪಿ ನೋಟು ಮುಱಙ್ಕಿಮಾ ತೆಟುನ್ತ ತೊತ್ತು
ಮುಟ್ಟವೆ ಙ್ಕಟಙ್ಕಳ್ ಪಾಯ್‌ನ್ತು ಮುಕಿಲೆನ ಮುಱಙ್ಕಿ ಪ್ಪೊಙ್ಕುಮ್
ಪಟ್ಟವರ್ ತನತ್ತೈ ಕ್ಕೊಣ್ಡು ಪಾಕರು ಮಣ್ಣೈಯ ವನ್ತಾರ್.

592. ಆನಚೀರ್ ತ್ತೊಣ್ಟರ್ ಕುಮ್ಪಿಟ್ 'ಟಟಿಯನೇನ್ ಕಳಿಪ್ಪ ವಿನ್ತ
ಮಾನವೆ ಙ್ಕಳಿಱ್ಱಿ ಲೇಱಿ ಮಕಿಟ್ನ್ತೆಟು ನ್ತರುಳು' ಮೆನ್‌ನ
ಮೆನ್‌ಮೈಯ ಪ್ಪಣಿಮೇಱ್ ಕೊಣ್ಡು ವಣಙ್ಕಿವೆಣ್ ಕುಟೈಯಿ ನೀಟಲ್
ಯಾನೈಮೇಱ್ ಕೊಣ್ಡು ಚೆನ್‌ಱಾ ರಿವುಳಮೇಱ್ ಕೊಣ್ಡು ವನ್ತಾರ್.

593. ಆ ನೆಲೆಯಲ್ಲಿ ಅರಸನೊಡನೆ ಯುದ್ಧಸನ್ನದ್ಧವಾಗಿ ಬಂದ ಸೇನೆಗಳು ಏಳು ಕಡಲುಗಳು ಒಟ್ಟು ಸೇರಿ ಶಬ್ದಿಸಿದಂತೆ ಕೋಲಾಹಲವನ್ನುಂಟುಮಾಡಲು, ಲೋಕದವರೆಲ್ಲರೂ ಸಂತೋಷದಿಂದ ಬಾಳಲು, ನಿಡಿದಾದ ಚಿದಂಬರದಲ್ಲಿ ನಿತ್ಯನರ್ತನವನ್ನಾಡುವ ಶಿವಪರಮಾತ್ಮನ ಶ್ರೀಪಾದಗಳನ್ನು ಶಿರದಲ್ಲಿ ಧರಿಸಿದವನಾಗಿ ಶಿವಕಾಮಿಯಾಂಡಾರನೂ ಲಕ್ಷ್ಮೀನಿವಾಸಕ್ಕೆಡೆಯಾದ ತನ್ನ ದೇಗುಲವನ್ನು ಪ್ರವೇಶಿಸಿದನು.

594. ಶಿವಪರಮಾತ್ಮನ ಕೈಂಕರ್ಯದ ಉದ್ದೇಶದಿಂದ ಶಿವಕಾಮಿಯಾರನು ದೇಗುಲವನ್ನು ಪ್ರವೇಶಿಸಲು, ಈಶ್ವರನ ಸ್ನೇಹಿತರಾದ ಎಱಿಪ್ಪತ್ತರ್ ನಾಯನಾರನೂ 'ಏನು ! ಚಿತ್ತಭಿಯಲ್ಲಿ ತುಂಬಿದ ಶಿವಪರಮಾತ್ಮನ ಭಕ್ತರ ಮಹಿಮೆಯನ್ನು ತಿಳಿಯಲು ಸಾಧ್ಯವಾಗದು !' ಎಂದು ಚೋಳರ ಮಹಿಮೆಯನ್ನು ನೆನೆದು ಆಶ್ಚರ್ಯಪಟ್ಟು ತನ್ನ ಸೇವಾಕಾರ್ಯ ನಿಮಿತ್ತ ಹೋಗುವವನಾದನು.

595. ಎಱಿಪ್ಪತ್ತ ನಾಯನಾರನು ಲೋಕದಲ್ಲಿ ಭಕ್ತರಿಗೆ ವಿಘ್ನಗಳು ಬಂದೆಡೆಯಲ್ಲಿ ಸಹಾಯಮಾಡುವಂತಹ ನಿಷ್ಠೆಯನ್ನು ನಿಯಮದಿಂದ ನಡೆಸಿಕೊಂಡು ಬಂದು ಮೇಲ್ಮೆಯುಳ್ಳ ಕೈಲಾಸಗಿರಿಯಲ್ಲಿ ಈಶ್ವರನ ಗಣನಾಯಕರ ನಾಯಕನಾಗುವ ಸ್ಥಾನವನ್ನು ಪಡೆದನು.

---

593. ಅನ್ನಿಲೈ ಯರಚನ್ತ ಚೇನೈ ಯಾರ್ಕಲಿ ಯೇೞು ಪೊನ್ಱಾಯ್
ಮನ್ನಿಯ ವೊಲಿಯಿ ನಾರ್ಪ್ಪ, ಮಣ್ಣೆಲಾ ಮಕಿೞ್ನ್ತು ವಾೞ್ತ್ತ,
ಪೊನ್ನೆಟುಮ್ ಪೊತುವಿ ಲಾಟ ನೀಟಿಯ ಪುನಿತರ್ ಪೊಱ್ಱಾಳ್
ಚೆನ್ನಿಯಿಱ್ ಕೊಣ್ಡು ಚೆನ್ನಿ ತಿರುವಳರ್ ಕೋಯಿಲ್ ಪುಕ್ಕಾನ್.

594. ತಮ್ಪಿರಾನ್ ಪಣಿಮೇಱ್ ಕೊಣ್ಡು ಚಿವಕಾಮಿ ಯಾರು ಮ್ಪೋರ
ಎಮ್ಪಿರಾ ನನ್ಪ ರಾನ ವೆಱಿಪತ್ತರ್ ತಾಮು 'ಮೆನ್ನೇ !
ಯಮ್ಪಲ ನಿಱೈನ್ತಾರ್ ತೊಣ್ಡ ರಱಿವತ ಱ್ಕರಿಯಾ' ರೆನ್ಱು
ಚೆಮ್ಪಿಯನ್ ಪೆರುಮ್ಮೈ ಯುನ್ನಿ ತ್ತಿರುಪ್ಪಣಿ ನೋಕ್ಕಿ ಚ್ಚೆನ್ಱಾರ್.

595. ಮಱಿವ ರಿನ್ನೈಯು ತಾನ ವನ್ಪೆರು ನ್ತೊಣ್ಡ ಮಣ್ಮೇ
ಲುಱಿಟ ತ್ತಟಿಯಾರ್ ಮುನ್ಚೆನ್ ಱುತವಿಯೇ ನಾಳು ನಾಳು
ನ್ಱಿವ ಕೊಳ್ಕೈ ತಾಙ್ಕಿ ನಲಮಿಕು ಕಯಿಲೈ ವೆಱ್ಪಿಱ್
ಕೊಱಿವರ್ ಕಣತ್ತಿನ್ ಮುನ್ನಾ ಱ್ಕೋಮುತ ಱಲೈಮೈ ಪೆಱ್ಱಾರ್.

596. ನಮ್ಮನ್ನೆಲ್ಲಾ ದಾಸನಾಗುಳ್ಳ ಭಕ್ತನಾದ ಎಱಿಪ್ಪತ್ತರ್ ನಾಯನಾರನು ಮಾಡಿದ ವೀರಕೃತ್ಯವನ್ನೂ, ತನ್ನನ್ನೂ ಕೊಲ್ಲುವಂತೆ ತನ್ನ ನಡುವಿನ ಖಡ್ಗವನ್ನು ಕೊಟ್ಟು ನಿಂತ ಚೋಳ ಅರಸನ ಹಿರಿಮೆಯನ್ನೂ, ಅನುದಿನವೂ ಅವರಿಗೆ ಕೃಪೆಮಾಡುವ ಲೋಕಸ್ವಾಮಿಯಾದ ಪರಮೇಶ್ವರನು ತಾನೇ ಅಳೆದನು. ಅಲ್ಲದೆ, ನಿಡಿದಾಗಿ ವ್ಯಾಪಿಸುವ ಈ ದಿವ್ಯಭಕ್ತಿಯ ಸ್ವಭಾವಗಳನ್ನು ನೆನೆಯುವಲ್ಲಿ ಬೇರೆ ಯಾರು ತಾನೇ ಅಳತೆಮಾಡಲು ಶಕ್ತರಾಗುವರು?

597. ಮಧುತುಂಬಿದ ಶೀತಲವಾದ ಸುಂದರವಾದ ಕೊನ್ರೈ[1] ಹೂವಿನಿಂದ ಅಲಂಕರಿಸಿ, ಕೆಂಜೆಡೆಯುಳ್ಳ ಶಿವಪರಮಾತ್ಮನ ಸುಂದರ ಶ್ರೀಪಾದಗಳಲ್ಲಿ ಕಮ್ಮಿಯಾಗದ ಆಸೆಯುಳ್ಳ ಭಕ್ತ ಎಱಿಪ್ಪತ್ತ ನಾಯನಾರನ ಶ್ರೀಪಾದಗಳನ್ನು ತಲೆಯ ಮೇಲೆ ಧರಿಸಿ, ಸ್ವರ್ಗಲೋಕ ಪರಿಪಾಲನವನ್ನು ಮಾಡುವ ದೇವತೆಗಳು ಸ್ತುತಿಸುವ, ಚಿದಂಬರದ ನಟರಾಜನ ವಿಭೂತಿಯನ್ನು ಹೊಗಳುವ ಬಾಳ್ವಿಯುಳ್ಳ, ಏಣಾಧಿನಾಥ ನಾಯನಾರನು ಮಾಡುವ ದಿವ್ಯಕೈಂಕರ್ಯವನ್ನು ಹೇಳತೊಡಗುವೆನು.

---

596. ಆಳುಟೈ ತ್ತೊಣ್ಡರ್ ಶೆಯ್ತ ವಾಣ್ಮೈಯು ಮ್ಮಮ್ಮೈ ಕೊಲ್ಲ
ವಾಳಿನೈ ಕ್ಕೊಟುತ್ತು ನಿನ್ಱ ವಳವನಾರ್ ಪೆರುಮೈ ತಾನುಮ್
ನಾಳುಮ ಱ್ಱವರ್ಕ್ಕು ನಲ್ಕು ನಮ್ಬರ್ತಾ ಮಳಕ್ಕಿ ಲನ್ಱಿ
ನೀಳುಮಿ ತ್ತೊಣ್ಡಿ ನೀರ್ಮೈ ನಿನೈಕ್ಕಿಲಾ ರಳಕ್ಕ ವಲ್ಲಾರ್?

597. ತೇನಾರು ಮ್ದಣ್ಪೂಙ್ ಕೊನ್ಱೈ ಚ್ಚಡೈಯಾಟೈ ಯವರ್ಪೊ ಱ್ಱಾಳಿ
ಲಾನಾತ ಕಾತ ಲನ್ಪ ರೆಱಿಪತ್ತ ರಡಿಕಳ್ ಚೂಟಿ
ವಾನಾಳು ಮ್ದೇವರ್ ಪೋಱ್ಱು ಮನ್ಱುಳಾರ್ ನೀಱು ಪೋಱ್ಱು
ಮೇನಾತಿ ನಾತರ್ ಶೆಯ್ತ ತಿರುತ್ತೊಟಿ ಲಿಯಮ್ಬ ಲುಱ್ಱೇನ್.

---

1. ಕೊನ್ರೈ—ಕರ್ಣಿಕಾರ.

೯. ಏಣಾಧಿನಾಥ ನಾಯನಾರರು

598. ವ್ಯಾಘ್ರಧ್ವಜವನ್ನು ಹಿಮಾಲಯದ ಮೇಲೂರಿ ಆ ಎಲ್ಲೆಯವರೆಗೂ ವ್ಯಾಪಿಸಿದ ತಮ್ಮ ನಾಡನ್ನು ಕಾವಲುಮಾಡುವ, ಶೀತಲವಾದ ಮುತ್ತುಗಳನ್ನು ಕಟ್ಟಿದ ಬೆಳ್ಗೊಡೆಯೂ, ಜಯಮಾಲೆಯೂ ಇರುವ ಚೋಳರನಾಡು ಭಾಗ್ಯಪೂರ್ಣವಾದುದು. ಅಲ್ಲಿ ತುಂಬಿಗಳು ಹಾಡುವುದಕ್ಕೆಡೆಯಾದ ಹೂಗಳು ತುಂಬಿರುವ ನಂದನಗಳಿಂದ ಸುತ್ತುವರಿದ ಗದ್ದೆಗಳನ್ನುಳ್ಳ, ಫಲವತ್ತಾದ ಭೂಮಿಯ ಶೀತಲವಾದ ಗ್ರಾಮಗಳಿಂದ ಸುತ್ತುವರಿದುದಾಗಿ ಎಲ್ಲಾ ದಿಕ್ಕುಗಳಲ್ಲಿಯೂ ವ್ಯಾಪಿಸಿದ ಮಹಿಮೆಯುಳ್ಳ ಹಳೆಯ ಊರು ಎಯಿನನೂರು.

599. ಅಲ್ಲಿ ಶೀತಲವಾದ ಗದ್ದೆಗಳಲ್ಲಿ ರಸಹೀನವಾದ ಕಬ್ಬಿನೊಡನೆ ಒಳ್ಳೆಯ ಕಬ್ಬೂ ಎತ್ತರದಲ್ಲಿ ಕೆಳಗಾಗುವಂತೆ ನೆಲ್ಲಿನ ಬೆಳೆಗಳೂ ಎತ್ತರವಾಗಿ ಬೆಳೆಯುವುವು. ಆ ನೆಲ್ಲಿನ ಕೃಷಿಯಿಂದ ಬಾಳ್ವೆಯನ್ನು ಮಾಡುವ ದೊಡ್ಡ ಕುಟುಂಬಗಳು ವೃದ್ಧಿಹೊಂದಲು ನೆಲೆಯಾದ ಆ ಚೆಲುವಿನ ಊರಲ್ಲಿ ಬಿಲ್ಲವರ ಕುಟುಂಬದಲ್ಲಿ ಬಂದವನು ಏಣಾಧಿನಾಥ ನಾಯನಾರ ಎಂಬ ಹಿರಿಯನು.

600. ಅವನು ಪುರಾತನವಾದ ವಿಭೂತಿಯ ಕೈಂಕರ್ಯವನ್ನು ಆಚರಿಸುವ ಸತ್ಕಾರ್ಯದಲ್ಲಿ ಎಂದೂ ತಪ್ಪದವನು. ಅರಸರಿಗೆ ಜಯವನ್ನು ತರುವ ಖಡ್ಗಯುದ್ಧವನ್ನು ಕಲಿಸಿಕೊಡುವ ತನ್ನ ಉದ್ಯೋಗವಾದ ಆ ವಿದ್ಯೆಯಲ್ಲಿ ಶ್ರೇಷ್ಠನಾದವನು.

---

೯. ಏನಾತಿನಾತ ನಾಯನಾರ್ ಪುರಾಣವ್

598. ಪುಣ್ಡರಿಕವ್ ಪೊನ್‌ವರೈಮೇಲ್ ಏಟ್ರಿ ಪುವಿಯಳಿಕ್ಕು
ನ್ಣ್ಡರಳ ವೆಣ್‌ಕವಿಕ್ಕೈ ತ್ತಾರ್‌ವಳವರ್ ಚೋಣಾಟ್ಟಿಲ್
ವಣ್ಡಱೈಪೂ ಞಾಱ್ಱೋಲೈ ವಯಲ್‌ಮರುತ ತ್ತಣ್‌ಪಣೈಚೂಟ್
ನ್ಣ್ಟಿಚೈಯು ಮೇಱಿಯಚೀರ್ ಮೂತೂ ರೆಯಿನನೂರ್.

599. ವೇಟಿ ಕ್ಕರುಮ್ಬಿನ್ನೋಟು ಮೆನ್‌ಕರುಮ್ಬು ತಣ್‌ವಯಲಿ
ಱಾಟಿ ಕ್ಕತಿರ್‌ಚ್ಚಾಲಿ ತಾನೋಙ್ಗು ನ್ನ್‌ಮೈಯತಾಯ್
ವಾಟಿ ಕ್ಕುಟಿತಟಿೃತ್ತು ಮನ್‌ನಿಯವ ಪ್ಪೋಱ್‌ಪತಿಯಿ
ಲೀಟಿ ಕ್ಕುಲಚ್ಚಾನ್‌ಱಾ ರೇನಾತಿ ನಾತನಾರ್.

600. ತೊನ್‌ಮೈ ತ್ತಿರುನೀಱ್ಱು ತ್ತೊಣ್ಟಿನ್ ವಟಿಪಾಟ್ಟಿ
ನನ್‌ಮೈಕ್ಕ ಣಿನ್‌ಱ ನಲಮೆನ್‌ಱು ಙ್ಙನ್‌ಱಾತಾರ್
ಮನ್‌ನರ್‌ಕ್ಕು ವೆನ್‌ಱಿ ವಟಿವಾಟ್ ಪಟೈಪಯಿಱ್ಱು
ನ್ನ್‌ಮೈ ತ್ತೊಟಿಲ್‌ವಿಞ್ಚೈ ಯಿಱ್ಱೈಮೈ ಚಾರ್‌ನ್ದುಳ್ಳಾರ್.

601. ಖಡ್ಗವಿದ್ಯೆಯನ್ನು ಕಲಿಸಿ ಅದರಿಂದ ಬಂದ ಲಾಭದ ಸಂಪತ್ತನ್ನೆಲ್ಲಾ ಪ್ರತಿದಿನವೂ ತುಂಬಾ ಆಸಕ್ತಿಯಿಂದಲೂ ಕರ್ತವ್ಯ ದೃಷ್ಟಿಯಿಂದಲೂ ತನ್ನ ಅಡಿಮುಡಿಗಳನ್ನು ಯಾರಿಂದಲೂ ತಿಳಿಯಲು ಸಾಧ್ಯವಿಲ್ಲದಂಥವನನ್ನು (ಶಿವನನ್ನು) ಆಳಾಗಿಸಿಕೊಳ್ಳುವ ಶಿವಪರಮಾತ್ಮನ ಶ್ರೀಪಾದ ಭಕ್ತರಿಗಾಗಿ ಉಪಯೋಗಿಸುವನು.

602. ಹಗೆಗಳೂ ಹೊಗಳುವಂತಹ ಒಳ್ಳೆಯ ದಾರಿಯಲ್ಲಿ ಯಾವ ರೀತಿಯಿಂದಲಾದರೂ ಅನಿಂದಿತವಾದ ಕಾರ್ಯಗಳನ್ನು ಸ್ವಭಾವದಿಂದಲೇ ಇವನು ನಡೆಸಿಕೊಂಡು ಬರುವ ಕಾಲದಲ್ಲಿ ವಿಶೇಷವಾದ ತನ್ನ ಸ್ವಂತ ಉದ್ಯೋಗದ ದಾಯದಲ್ಲಿ ಪಾಲುಗಾರನಾಗಿ ಅತಿಶೂರನೆಂಬವನೊಬ್ಬನಿದ್ದನು.

603. ಆತನು ಜಯಪ್ರದವಾದ ಖಡ್ಗವಿದ್ಯೆಯ ಉದ್ಯೋಗವನ್ನು ಕಲಿತವರಲ್ಲಿ ತನ್ನಿಂದ ಮೇಲಾದವರಿಲ್ಲವೆಂಬ ಎಣಿಕೆಯಿಂದ ತುಂಬಾ ಗರ್ವಿತನಾಗಿ ತನ್ನನ್ನು ತಾನೇ ಬಹಳವಾಗಿ ಅಭಿಮಾನಿಸಿಕೊಂಡಿದ್ದನು.

---

601. ವಾಳಿನ್ ಪಟ್ಟೈಪಯಿಱ್ಱಿ ವನ್ದ ವಳಮೆಲ್ಲಾ
ನಾಳುಮ್ ಪೆರುವಿರುಪ್ಪಿ ನಣ್ಣಿ ಙ್ಕಟಪ್ಪಾಟ್ಟ
ಱ್ಱಾಟು ನ್ದಟಮುಟಿಯು ಙ್ಕಾಣಾತಾರ್ ತಮ್ಮೈಯುನ್ದೊಣ್
ಟಾಳುಮ್ ಪೆರುಮಾ ನಟಿತ್ತೊಣ್ಟರ್ ಕ್ಕಾಕ್ಕುವಾರ್.

602. ನಳ್ಳಾರ್ ಕಳುಮ್ಪೋಱ್ಱು ರನ್ಮೈ ತ್ತುಱೈಯಿನ್ಕ
ಣೆಳ್ಳಾತ ಚೆಯ್ಕ್ಕೈ ಯಿಯಲ್ಪಿ ನೊಟುಕುನಾಟ್
ಟಳ್ಳಾತ ತಙ್ಕ ಟೊಟಿಲುರಿಮೈ ತ್ತಾಯತ್ತಿ
ನುಳ್ಳಾ ನತಿಚೂರ ನೆನ್ಪಾ ನುಳನಾನಾನ್.

603 ಮಱ್ಱವನು ಙ್ಕೊಱ್ಱ ವಟಿವಾಟ್ ಪಟ್ಟೈತ್ತೊಟಿಲ್ಕಳ್
ಕಱ್ಱವರ್ಕ ಟನ್ನಿಱ್ ಕಟನ್ದುಳಾ ರಿಲ್ಲೈಯೆನುಮ್
ಪೆಱ್ಱಿಮೈಯಾನ್ ಮಾನಿಲತ್ತು ಮಿಕ್ಕ ಪೆರುಮಿತಮ್ವನ್
ತುಱ್ಱುಲಕಿ ಱನ್ನೈಯೇ ಚಾಲ ಮತಿತ್ತುಳ್ಳಾನ್.

604. ಹೀಗಿರುವಾಗ ಆತನ ಉದ್ಯೋಗವು ಕ್ಷೀಣಿಸುತ್ತಾ ಹೋಯಿತು. ಪಾಲು ಗಾರಿಕೆಯ ಖಡ್ಗವಿದ್ಯೆಯನ್ನು ಕಲಿಸುವ ಆಚಾರ್ಯ ವೃತ್ತಿಯಲ್ಲಿ ಅವನಿಗೆ ಬರುವ ವರಮಾನವು ಪ್ರತಿದಿನವೂ ಕಮ್ಮಿಯಾಗುತ್ತಾ ಬಂದು, ಇದಕ್ಕೆ ವಿರೋಧವಾಗಿ ಏಣಾಧಿ ನಾಥನ ಉದ್ಯೋಗವು ವೃದ್ಧಿಯಾಗುತ್ತಾ ಬಂದು ಅವನ ವರಮಾನವು ಅಧಿಕ ವಾಗುತ್ತಾ ಬಂತು. ಈ ಕಾರಣದಿಂದ ಅತಿಶೂರನು ಏಣಾಧಿನಾಥನಲ್ಲಿ ಸಲ್ಲದ ವೈರವನ್ನು ಬೆಳೆಸುವವನಾದನು.

605. ಸೂರ್ಯನು ಮೇಲೆ ಮೇಲೆ ಬರಲು ಕಾಂತಿಹೀನವಾಗುವ ಬೆಳಗಿನ ಚಂದ್ರ ನಂತೆ ತನ್ನ ವರಮಾನವು ಕಮ್ಮಿಯಾಗಲು ಮಾತ್ಸರ್ಯವನ್ನು ಮೇಲ್ಕೊಂಡು ಆ ಅತಿಶೂರನು ತನ್ನ ಬಂಧುಮಿತ್ರರನ್ನು ಸೇರಿಸಿಕೊಂಡು ಏಣಾಧಿನಾಥನೊಡನೆ ಯುದ್ಧ ಮಾಡಬೇಕೆಂದು ಬಗೆದು ಬಂದನು.

606. ಬಲಿಷ್ಠವಾದ ತೋಳುಗಳುಳ್ಳ ನಂಟರಿಷ್ಟರೊಡನೆಯೂ, ತನಗೆ ಸಹಾಯ ವಾಗುಳ್ಳ ಯುದ್ಧವೀರರ ಕೂಟದೊಡನೆಯೂ ಬಂದು ಏಣಾಧಿನಾಥನ ಮನೆಯ ಮುಂಗಡೆಯಲ್ಲಿ ನಿಂತು, 'ಶಸ್ತ್ರವಿದ್ಯೆಯ ಉದ್ಯೋಗದ ಪಾಲನ್ನು ಅದರಲ್ಲಿ ಬಲಿಷ್ಠ ನಾಗಿರುವವನೇ ಕೊಳ್ಳತಕ್ಕವನು' ಎಂದು ಅತಿಯಾದ ಕೋಪದಿಂದ ಕೂಗಿದನು.

---

604. ತಾನಾಳ್ ವಿರುತ್ತಿನೆಟ ತ್ತಙ್ಕಳ್ಕುಲ ತ್ತಾಯತ್ತಿ
ನಾನಾತ ಚೆಯ್ತೊಟಿಲಾ ಮಾಚಿರಿಯ ತ್ತನ್ವೈವಳ
ಮೇನಾಳು ನ್ತಾನ್‌ಕುಱೈನ್ತು ಮಱುವರ್ಕ್ಕೇ ಮೇಮ್ಪಟಲಾ
ಲೇನಾತಿ ನಾತರ್ತಿಱ ತ್ತೇಲಾ ವಿಕಲ್ಪುರಿನ್ತಾನ್.

605. ಕತಿರೋ ನೆಱಿಮಟಙಕ್ಕಿ ಕ್ಕಾಲ್‌ಚಾಯಙ್ಕಲೈ
ಮತಿಪೋ ಲಟಿನ್ತುಪೊಱಾ ಮಱುವನು ಞ್ಚಱಿ
ಪ್ಪತಿಯೋ ರುಟನ್‌ಕೂಟ ಪ್ಪಣ್ಣಿ ಯಮರ್ಮೇಱ್ಚೆನ್
ನೆತಿರ್ಪೋರ್ ವಿಳೈಪ್ಪತಱ್ಕೇ ಯೆಣ್ಣಿ ತ್ತುಣಿನ್ತುಟನ್ತಾನ್.

606. ತೋಳ್‌ಕೊಣ್ಟ ವಲ್ಲಾಣ್ಮೈ ಚ್ಚುಱ್ಱ ತ್ತೊಟುನ್ತುಣೈಯಾಙ್
ಕೋಳ್‌ಕೊಣ್ಟ ಪೋರ್ಮಳ್ಳರ್ ಕೂಟ್ಟ ತ್ತೊಟುಞ್ಚೆನ್‌ಱು
'ವಾಳ್‌ಕೊಣ್ಟ ತಾಯಮ್ ವಲಿಯಾರೇ ಕೊಳ್ವ' ತೆನ
ಮೂಳ್‌ಕಿನ್‌ಱ ಚೆಱ್ಱತ್ತಾನ್ ಮುನ್‌ಕಟ್ಟೈಯಿ ನಿನ್‌ಱಟೈತ್ತಾನ್.

607. ಹೀಗೆ ಅಗ್ನಿಮಯವಾದ ಕಣ್ಣುಗಳುಳ್ಳ ಹುಲಿಯಿರುವ ಭಯಂಕರವಾದ ಗುಹೆಯನ್ನು ಸೇರಿ ಅದನ್ನು ಜಗಳಕ್ಕೆ ಕರೆಯುವ ಗುಳ್ಳೆನರಿಯಂತೆ ಅತಿಶೂರನು ತನ್ನ ಪಡೆಯನ್ನು ಸೇರಿಸಿಕೊಂಡು ಏನಾಧಿನಾಥನಾಯನಾರನ ಮನೆಯ ಮುಂದೆ ನಿಂತು ಅವನನ್ನು ಕೋಪದಿಂದ ಯುದ್ಧಕ್ಕೆ ಕರೆದನು.

608. 'ಯುದ್ಧಕ್ಕೆ ಕರೆದವನು ಯಾರು ?' ಎಂದು ಗಂಡುಸಿಂಹದಂತೆ ಉತ್ಸಾಹದಿಂದ ಎದ್ದು, ನಡುವಿನ ದಟ್ಟಿಯನ್ನು ಎಳೆದು ಕಟ್ಟಿ, ವೀರಗೆಜ್ಜೆಯನ್ನು ಕಟ್ಟಿಕೊಂಡು, ಹರಿತವಾದ ಖಡ್ಗವನ್ನೂ ಹಲಗೆ (ಗುರಾಣಿ) ಯನ್ನೂ ಕೈಕೊಂಡು ಯುದ್ಧಸನ್ನದ್ಧನಾಗಿ ಏನಾಧಿನಾಥನು ತನ್ನ ಮನೆಯಿಂದ ಹೊರಟನು.

609. ಆಗ ಅವರ ಕಡೆಯಲ್ಲಿ ಮಲ್ಲಯುದ್ಧ ಖಡ್ಗವಿದ್ಯೆಗಳನ್ನು ಕಲಿಯುತ್ತಿದ್ದ ಬಲಿಷ್ಠ ಯುವಕರೂ, ಹಿಂದೆ ಕಲಿತು ಬೇರೆಡೆಗಳಲ್ಲಿ ಸೇರಿಕೊಂಡವರೂ, ಹಲವು ಆಯುಧಗಳನ್ನೂ ಖಡ್ಗಗಳನ್ನೂ ತಾಳಿದ ಸಂಬಂಧಿಕರೂ ಅವರೊಡನೆ ಸೇರಿಕೊಂಡರು.

---

607. ವೆಙ್ಕಟ್ ಪುಲಿಕಿಟನ್ತ ವೆಮ್ಮುಟಿಯ್ಯಿಱ್ ಚೆನ್‌ಱಟಿಕ್ಕುಮ್
ಪೈಙ್ಕಟ್ ಕುಱನರಿಯೋ ಪೋಲ್ವಾನ್ ಪಟೈಕೊಣ್ಟು
ಪೊಙ್ಕಿ ಪ್ಪುಱಞ್ಚೂಟಿನ್ನು ಪೋರ್‌ಕುಱಿತ್ತು ನೇರ್‌ನಿನ್ಱೇ
ಯಙ್ಕಟ್ ಕಟೈನಿನ್ ಱಟಿಯ್ತ್ತಾ ನೊಲಿಕೇಳಾ,

608. 'ಆರ್‌ಕೊಲ್ ಪೊರವಟಿಯ್ತ್ತಾ ?' ನೆನ್‌ಱರಿಯೋ ಱೇಱಿನ್‌ಕಿಳರ್‌ನ್ನು
ಚೇರ್‌ವುಱ ಕ್ಕಚ್ಚಿಱ್ ಚೆಱಿನ್ತುವಟ್ಟೈ ಮೇಲ್‌ವೀಕ್ಕಿ
ವಾರ್‌ಕಟಲು ಙ್ಕಟ್ಟಿ ವಟಿವಾಟ್ ಪಲಕೈಕೊಟು
ಪೋರ್‌ಮುನೈಯಿ ಲೇನಾತಿ ನಾತರ್ ಪುಱಪ್ಪಟ್ಟಾರ್.

609. ಪುಱಪ್ಪಟ್ಟ ಪೋತಿನ್‌ಕಟ್ ಪೋರ್‌ತ್ತೊಟಿಲ್ಕಳ್ ಕಱ್ಕುಮ್
ವಿಱಱ್‌ಪೆರುಞ್ಚೀರ್ ಕ್ಕಾಳೈಯರ್‌ಕಳ್ ವೇಱಿಟತ್ತು ನಿನ್‌ಱಾರ್
ಮಱಪ್ಪಟೈವಾಟ್ ಚುಱ್ಱತ್ತಾರ್ ಕೇಟ್ಟೋಟಿ ವನ್ತು
ಚೆಱಿಱ್‌ಕರುವ್ವೋರ್ ವೀರರ್ ಕ್ಕಿರುಮರುಙ್ಕು ಞ್ಚೇರ್‌ನ್ತಾರ್‌ಕಳ್,

610. ಮನೆಬಾಗಿಲಿಗೆ ಬಂದು ಯುದ್ಧಕ್ಕೆ ಕರೆದ ವೈರಿಯಾದ ಅತಿಶೂರನು, ಜಯಯುಕ್ತವಾದ ಗಂಡುಹುಲಿಗೆ ಸಮಾನನಾದ ನಾಯನಾರನ ಮುಂದೆ ನಿಂತು, 'ಖಡ್ಗ ವಿದ್ಯೆಯನ್ನು ಕಲಿಸಿದುದರಿಂದ ಬರುವ ಪರಿಶುದ್ಧವಾದ, ಪಾಲುಗಾರಿಕೆಯ ವರಮಾನ ವನ್ನು ನಾನು ಕೈಕೊಳ್ಳುತ್ತಿರುವೆನಷ್ಟೆ? ಈ ಹೊರಪ್ರದೇಶದಲ್ಲಿ ನಾವಿಬ್ಬರೂ ನಮ್ಮ ನಮ್ಮ ಬಲಗಳೊಡಗೂಡಿ ಪರಸ್ಪರ ಯುದ್ಧಮಾಡಿ, ಆ ಯುದ್ಧದಲ್ಲಿ ಜಯಹೊಂದುವವರೇ ಆ ವರಮಾನವನ್ನು ಕೊಳ್ಳತಕ್ಕದ್ದು' ಎಂದು ಹೇಳಿದನು.

611. ಈ ರೀತಿ ಹಗೆಯುವನಾದ ಆತನು ಹೇಳಲು, ಏನಾಧಿನಾಥನು, 'ಅದು ಒಳ್ಳೆಯದೆಂದು ನಿನ್ನ ಮನಸ್ಸಿಗೆ ತೋರುವುದಿದ್ದರೆ, ಹಾಗೆಯೇ ಮಾಡುವೆನು' ಎಂದು ಹೇಳಿ ಸಂತೋಷದಿಂದ ಸಮ್ಮತಿಸಿ ಆತನು ಹೇಳಿದಂತೆಯೇ ಯುದ್ಧಕಳಕ್ಕೆ ಹೋಗಿ ಯುದ್ಧಕ್ಕೆ ಸಿದ್ಧನಾಗಿ ನಿಂತನು. ಆಗ ಕೋಪಗೊಂಡು ಎರಡು ತಂಡದ ವೀರರೂ ವ್ಯೂಹವಾಗಿ ನಿಂತು ಪರಸ್ಪರ ಯುದ್ಧ ಮಾಡಿದರು.

612. ಮೇಘ ಪಂಕ್ತಿಗಳನ್ನು ಎದುರಿನಲ್ಲಿ ಒಳಕೊಂಡು, ಮಿಂಚಿನ ಪಂಕ್ತಿಗಳನ್ನು ತಮ್ಮ ಎಡೆಯೆಡೆಯಲ್ಲಿ ಒಳಕೊಂಡು, ಆಕಾಶದಲ್ಲಿಯೂ ಭೂಮಿಯಲ್ಲಿಯೂ ದೊಡ್ಡ ಸಿಡಿಲುಗಳು ಎದುರೆದುರು ಸೇರುವಂತೆ ಗುರಾಣಿಗಳನ್ನೂ ಖಡ್ಗಗಳನ್ನೂ ಧರಿಸಿದ ಯುದ್ಧವೀರರು ಕಾಗೆಗಳು ತುಂಬಿದ ಯುದ್ಧರಂಗದಲ್ಲಿ ಎದುರೆದುರಾಗಿ ಕಲೆತರು.

---

610. ವನ್ಱಟೈತ್ತ ಮಾಱಾನ್ ವಯಪ್ಪುಲಿಪ್ಪೋೞ್ ತ್ಱನ್ನಾರ್‌ಮು
'ನನ್ಱಮತು ವಾನ್‌ಪಯಿಱ್ಱು ನಱಾಯ ಱ್ಱೊಳ್ಳುಱ್ಱಾ
ಲಿನ್ಱವೆಳಿ ಮೇಱಿಕ್ಕೈವಕು ತ್ತಿರುವೇಮ್ ಪೊರುಪಟ್ಟೆಯುಳ್
ಚನ್ಱಿ ತ್ತಮರ್‌ವಿಳ್ಳೈತ್ತಾಱಿ ಚಾಯಾತಾರ್ ಕೊಳ್‌ವತೆನ'.

611. ಎನ್ಱುಪಕ್ಕೈ ತ್ತೋಱನುರೈಪ್ಪ, ವೇನಾತಿನಾತ 'ಅತು
ನನ್ಱುನಕ್ಕು ವೇಣ್ಡುಮೇ ನಣ್ಣುವ್ ನೆನ್ ಱುಣ್ಮೈಕಿಟ್ಟನ್ತು
ಚೆನ್ಱವನ್‌ಮುನ್ ಚೊನ್ನ ಚೆರುಕ್ಕಳತ್ತು ಪ್ಪೋರ್‌ಕುಱಿಪ್ಪ
ಕ್ಕನ್ಱಿ ಯಿರುಪಟ್ಟೆಯು ಱ್ಕೈವಕುತ್ತು ನೇರ್‌ಮಲೈವಾರ್.

612. ಮೇಕ ವೊಱುಙ್ಕುಕಣ್ ಮುನ್‌ಕೊಟು ಮಿನ್‌ನಿರೈ ತಮ್ಮಿಟೈ ಯೇಕೊಟು
ಮಾಕ ಮರುಙ್ಕಿನು ಮಣ್ಣಿನುಮ್ ವಲ್ಲುರು ಮೇಱಿತಿರ್ ಚೆಲ್ವನ
ವಾಕ ನೆಟುಮ್ಪಲ ಕೈಕ್ಕುಲ ಮಾಳ್‌ವಿನೈ ವಾಳಟ್ಟೈ ಯಾಟವರ್
ಕಾಕ ಮಿಟೈನ್ತ ಕಳತ್ತಿರು ಕೈಕಲಿನ್ ವನ್ತು ಕಲನ್ತನರ್.

613. ವೀರಗೆಜ್ಜೆಯನ್ನು ಕಾಲುಗಳಲ್ಲಿ ಕಟ್ಟಿದ ಯುದ್ಧವೀರರು ತಮ್ಮ ಕೈಗಳಲ್ಲಿ ಶರೀರವನ್ನು ಮರೆಸುವ ಗುರಾಣಿಯನ್ನೂ ಖಡ್ಗವನ್ನೂ ಕೊಂಡು ಯುದ್ಧಕ್ಕಾಗಿ ಬಂದು ನಿಂತರು. ಹೀಗೆ ಎರಡು ಪಕ್ಷದ ಸೇನೆಯವರೂ ಇದಿರಿಸಿ ಯುದ್ಧ ಮಾಡಿದರು. ಶಕ್ತ್ಯಾಯುಧಗಳನ್ನು ಧರಿಸಿದ ಸೇನೆಗಳೂ ಪರಸ್ಪರ ಇದಿರಿಸಿ ನಿಂತಾಗ ಪಾತಾಳಲೋಕವನ್ನು ಬಿಟ್ಟು ಮೇಲೆ ಬರುವ ನಾಗವೀರರ ನಾಲಗೆಗಳು ಮೇಲೆ ನೀಡುವಂತೆ ತೋರಿತು.

614. ಕೆಂಪಗಾದ ಕಣ್ಣುಗಳುಳ್ಳ, ಬಲವಾದ ಬಿಲ್ಲನ್ನು ತಾಳಿದ ವೀರರು, ತಂತಮ್ಮ ಬಿಲ್ಲುಗಳಿಂದ ಪ್ರಯೋಗಿಸಿದ ಗುರಿತಪ್ಪದೆ ನಾಟುವ ಅಂಬುಗಳು ಒಂದರೊಡನೊಂದು ಸೇರಿ ಒಂದಕ್ಕೊಂದು ಕುತ್ತಿಕೊಳ್ಳುವ ಕಾರ್ಯವು, ಹೆಚ್ಚಾದ ಕೋಪದ ಬೆಂಕಿಯಿಂದ ಹೊಗೆಹೋಗುವ ಮಂಡಲಗಳಂತೆ ಸುತ್ತುವರಿದು ಕೆಂಪಗಾದ ಕಣ್ಣುಗಳ ಕೋಪಾಗ್ನಿಯಿಂದ ಎದುರೆದುರಾಗಿ ಹಾರುವ ಕಿಡಿಗಳಿಗೆ ಸಮಾನವಾಗಿದ್ದುವು.

615. ತಮ್ಮ ಆಯುಷ್ಕಾಲದ ಎಲ್ಲೆಯೊಡನೆಯೂ ಕೋಪಗೊಂಡು ಹೋರಾಡಬಲ್ಲ ವೀರರುಗಳು ಯುದ್ಧಮಾಡುವ ಆ ರಣರಂಗದಲ್ಲಿ, ಖಡ್ಗಗಳೊಡನೆ ಅವುಗಳನ್ನು ಹಿಡಿದ ನಿಡಿದಾದ ಕೈಗಳು ಕೆಳಗೆ ಬಿದ್ದು ನರ್ತಿಸಿದುವು. ಎದೆಗಳೊಳಗೆ ಶಕ್ತಿ ಆಯುಧಗಳು ಸ್ನಾನಮಾಡಿದುವು. ತಾವು ಕುತ್ತಿ ತುಂಡರಿಸಿದ ತೋಳುಗಳೊಡನೆ ಅಂಬುಗಳು ನೆಲದಲ್ಲಿ ಬಿದ್ದುವು. ವೀರರ ಒಡಲನ್ನು ಮೋದಿದ ಖೇಟಕಗಳು ಅವರ ಚರ್ಮದೊಡನೆ ಸೇರಿ ಅಂಟಿಕೊಂಡುವು. ಕಾಲುಗಳೊಡನೆ ಅವುಗಳಲ್ಲಿ ಕಟ್ಟಿದ ವೀರಗೆಜ್ಜೆಗಳು ತುಂಡಾದುವು. ಸುತ್ತಿದ ಮಾಲೆಗಳೊಡನೆ ಅವನ್ನು ಧರಿಸಿದ ತಲೆಗಳೂ ತುಂಡಾದುವು.

---

613. ಕಾಲ್‌ಕಟಿಲ್ ಕಟ್ಟಿಯ ಮಳ್ಳರ್‌ಕಳ್ ಕೈಕಳಿನ್ ಮೆಯ್ಯು ಟ್ರೈಕ್ಕಿಯ
ವಾಳೊಳಿ ವಟ್ಟಮು ನೈನ್ನಿ್ಟ ವನ್ನಿ್ರು ಕೈಕಳಿನ್ ಮುನ್ನಿ್ನರ್;
ವೇಲೊಟು ವೇಲೆತಿರ್ ನೀಳ್‌ವನ ಮೇವಿಯ ಪಾತಲಮ್ ವಿಟ್ಟುಯರ್
ಇಾಲಮು ಱುಮ್ಪಣಿ ವೀರರ್‌ಕ ಣಾನಿಮಿರ್ ಕಿನ್‌ಱಿನ ವೊತ್ತ್ನ.

614. ವೆಙ್ಕಣ್ ವಿಱಱ್‌ಚಿಲೈ ವೀರರ್‌ಕಳ್ ವೇಱಿರು ಕೈಯಿನು ನೇರ್‌ಪವರ್
ತಙ್ಕಳ್ ಚಿಲೈಕ್ಕುಲ ಮುನ್ನಿ್ನ ತಾವಿಲ್ ಚರಙ್ಕ ಣೆರುಙ್ಕುವ
ಪೊಙ್ಕು ಚಿನತ್ತ್ರಿ ಯಿಱ್‌ಪುಕೈ ಪೋಕು ಕೊಟಿಕ್ಕಳ್ ವಳೈತ್ತೆತಿರ್
ಚೆಙ್ಕಣ್ ವಿಟಿಕ್ಕನಲ್ ಚಿನ್ನಿ್ಯ ಚೀಱು ಪೊಱಿಚ್ಚಿಲ ವೊತ್ತ್ನ.

615. ವಾನೊಟು ನೀಳ್‌ಕೈ ತುಟಿತ್ತ್ನ; ಮಾರ್‌ಪೊಟು ವೇಲ್‌ಕಳ್ ಕುಳಿತ್ತ್ನ;
ತೋಳೊಟು ವಾಳಿ ನಿಲತ್ತ್ನ; ತೋಲೊಟು ತೋಲ್‌ಕ ಟಕ್ಕೈತ್ತ್ನ;
ತಾಳೊಟು ವಾರ್‌ಕಟಿ ಲಿಙ್ಙನ; ತಾರೊಟು ಚೂಟಿ್‌ಚಿರ ಮಙ್ಙನ;
ನಾಳೊಟು ಚೀಱ್ ಮಲೈಪ್ಪವರ್ ನಾಟಿಯ ಪೋರ್‌ಚೆಯ್ ಕಳತ್ತಿನಿಲ್.

616. ಎರಡು ಪಕ್ಕದ ಪಡೆಗಳಲ್ಲಿಯೂ ಸೇನಾಮುಖದಲ್ಲಿ ನಿಂತ ವೀರರು ಎದುರೆದುರಾಗಿ ಯುದ್ಧ ಮಾಡುವಾಗ ರಕ್ತಪ್ರವಾಹಗಳು ನದಿಗಳಂತೆ ವ್ಯಾಪಿಸಿದುವು. ತಲೆಯಿಲ್ಲದ ಕಬಂಧಗಳು ರಕ್ತದ ನದಿಯಲ್ಲಿ ಹೊರಳಿದುವು. ಯುದ್ಧಸೇನೆಯ ವೀರರುಗಳ ಒಡಲಿಂದ ಕಡಿದುಹೋದ ಖಂಡಗಳು ಚದರಿದುವು. ಪಕ್ಕಗಳಿಂದ ಹೊರಬಂದ ಕರುಳುಗಳೊಡನೆ ಕೂಡಿದ ಶರೀರಗಳು ಕೆಳಬಿದ್ದುವು. ಭಯವಾಗುವಂತೆ ಹದ್ದುಗಳು ಕೂಡಿದುವು. ಚರ್ಮದ ಬಾರುಗಳು ತುಂಡಾಗಲು ಉಡುಕೆ (ಡಮರು) ಗಳು ಹೊರಳಿದುವು

617. ಬಹುಸಮಯ ವೇಗವಾಗಿ ಎದುರಿಸಿ ಯುದ್ಧಮಾಡಿಕೊಂಡಿದ್ದ ವೀರರಿಬ್ಬರಲ್ಲಿ ಒಬ್ಬನು ತನ್ನನ್ನು ಎದುರಿಸಿದ ವೈರಿಯ ಕಾಲುಗಳು ಎರಡು ತೊಡೆಗಳೊಡನೆ ತುಂಡರಿಸಿ ಬೀಳುವಂತೆ ಹೊಡೆದನು. ಈ ರೀತಿ ತುಂಡಾಗಿ ಶರೀರವು ಕೆಳಬೀಳುವ ಮೊದಲೇ ಆ ಎರಡನೆಯವನು ತಾನು ಧರಿಸಿ ಯುದ್ಧ ಮಾಡುತ್ತಿದ್ದ ಖಡ್ಗದಿಂದ ತನ್ನನ್ನು ಗೆದ್ದವನ ಎದೆಯನ್ನು ಮಧ್ಯದಲ್ಲಿ ತುಂಡರಿಸಿದ ಮಾತ್ರದಲ್ಲಿ ಸಿಂಹದಂತಿರುವ ಆತನೂ ಸತ್ತನು. ಈ ರೀತಿಯಾಗಿ ಸತ್ತ ವೀರರು ಹಲವರು ಆ ಯುದ್ಧರಂಗದಲ್ಲಿ ಎಲ್ಲೆಲ್ಲಿಯೂ ಕಾಣಬರುತ್ತಿದ್ದರು.

618. ಕೂರಾದ ಮೊನೆಯುಳ್ಳ ಶಕ್ತ್ಯಾಯುಧಗಳನ್ನುಳ್ಳ ಪಡೆಗಳ ಯೋಧರು ಇದಿರಿನಲ್ಲಿ ನೀಡಿದ ಗುರಾಣಿಯನ್ನೂ ಎದೆಯನ್ನೂ ಕುತ್ತಿ ದಾಟಿಹೋಗುವಂತೆ ಎದುರೆದುರಾಗಿ ಬಲದಿಂದ ಕುತ್ತಿದವರಾಗಿ, ಆ ಕೃತ್ಯದಿಂದ ತಂತಮ್ಮ ಪ್ರಾಣಗಳು ಹೋದ ಮೇಲೂ ಅಂತೆಯೇ ನಿಂತಿದ್ದರು. ಸಮಪರಾಕ್ರಮಿಗಳಾದ ಇವರು ತಂತಮ್ಮ ಯುದ್ಧ ಪಡೆಯನ್ನು ಕೊಂಡು ಅಳತೆಮಾಡಿ ನೋಡುವವರಂತೆ ನಿಂತರು. ಇಂತಹ ವೀರರು ಲೆಕ್ಕವಿಲ್ಲದಷ್ಟು ಮಂದಿ ಮೃತರಾದರು.

---

616. ಕುರುತಿಯಿ ನತಿಕಳ್ ಪರನ್ದನ; ಕುಱೈತ್ತಲೈಯುಟ ಲೋಟಿ ಯಲೈನ್ದನ;
ಪೊರುಪಟೈ ಯುಱುತುಣಿ ಚಿನ್ದಿನ; ಪುಟೈಚೊರಿ ಕುಟರುಟಲ್ ಪಪ್ಪಿನ;
ವೆರುವರ ವೆರುವೈ ನೆರುಙ್ಗಿನ; ವಿಚಿಯಱು ತುಟಿಕಳ್ ಪುರಣ್ಡನ;
ಇರುಪಟೈ ತನಿನು ಮೆತಿರ್ನ್ದವ ರೆತಿರೆತಿ ರಮರ್ಚೆಯ್ ಪಱಿನ್ದಲೈ.

617. ನೀಳಿಟೈ ಮುಟುಕಿ ನಟನ್ದೆತಿರ್ ನೇರಿರು ವರಿಲೊರು ವನ್ಱಿಕೊಟಿರ್
ತಾಳಿರು ತೊಟೈಯಱ ಮುನ್ಪೆಯರ್ ಚಾರಿಕೈ ಮುಱಿತ್ತವೈ ತಟಿನ್ದನನ್;
ವಾಳೊಟು ವಿಟುಮುಟಲ್ ವೆನ್ಱವನ್ ಮಾರ್ಪಿಟೈ ಯಱಮು ನೆಱಿನ್ದಿಟ
ವಾಳಿಯಿ ನವನು ಮಱಿನ್ದನ; ನಾಯಿನರ್ ಪಲರುಳ ರೆಙ್ಗಣುಮ್.

618. ಕೂರ್ಮುನೈ ಯಯಿಲ್ಕೊಟು ಮುಟ್ಟಿನರ್ ಕೂಟಮು ನುರುವಿಯ ತಟ್ಟುಟ
ನೇರುವ ಮುರುವ ವುರಪ್ಪುಟ ನೇರ್ಪಟ ವೆತಿರೆತಿರ್ ಕುತ್ತಿನ
ರಾರುಯಿರ್ ಕಟಿಯುವು ನಿಱ್ಪವ ರಾಣ್ಮೈಯಿ ಲಿರುವರು ಮೊತ್ತಮೈ
ಪೋರಟು ಪಟೈಕೊ ಟಳಪ್ಪವರ್ ಪೋಲ್ಪವ ರಳವಿಲರ್ ಪಟ್ಟನರ್.

619. ಚಿನ್ನದ ಮುಕರಿಕೆಯನ್ನಿಟ್ಟ ತಮ್ಮ ಬಿಲ್ಲುಗಳನ್ನು ಉರುಟಾಗಿ ಬಾಗಿಸಿ, ವೈರಿಗಳು ಬಿಟ್ಟ ಅಂಬುಗಳು ಹುತ್ತದಿಂದ ಹೊರಡುವ ಹಾವುಗಳಂತಿದ್ದುವು. ಅವುಗಳಿಂದ ತಮ್ಮ ಬಿಲ್ಲುಗಳು ತುಂಡಾಗಿ ನಾಶವಾದರೂ, ಯುದ್ಧವನ್ನು ಬಿಡದವರಾಗಿ, ಜಯವನ್ನು ತರುವ, ನಡುವಿನ ಖಡ್ಗವನ್ನು ಒರೆಯಿಂದ ಕಳಚಿ ಯುದ್ಧಮಾಡಿದ ಕೆಲವು ವೀರರು, ಮೊದಲೇ ಸೇರಿದ್ದ ತಮ್ಮ ಹೆಚ್ಚಿನ ಭಾಗ್ಯಗಳು ನಾಶವಾದವೇಲೂ ಹಿಂದಿನ ದಾನಧರ್ಮಗಳ ನೆಲೆಯಲ್ಲಿ ನಿಂತ ತ್ಯಾಗಿಗಳಿಗೆ ಸಮಾನರಾಗಿದ್ದರು.

620. ಪ್ರಾಣವುಂಟೆಂದೆಣಿಸಿದುದರಿಂದ, ಸತ್ತುಬಿದ್ದ ಯುದ್ಧವೀರರ ಬಿರಿದ ಮುಖಗಳನ್ನು ಸೇರಿ, ರೆಕ್ಕೆಗಳನ್ನು ಬಿಚ್ಚಿ ಹಾರಿಬಂದ ಕರಿಯ ಕಾಗೆಗಳು, ದಟ್ಟವಾಗಿ ಸೇರದೆ ಪಕ್ಕದಲ್ಲಿ ಸುತ್ತಿಸುತ್ತಿ ಬಂದು ಮುಸುರುತ್ತಿದ್ದುದರಿಂದ ಅವುಗಳ ಗುಂಪಿನ ನಡುವೆ, ಜ್ಯೋತಿಯೊಡನೆ ಪ್ರಕಾಶಿಸುವ ವೀರರ ಕಣ್ಣುಗಳು, ಕಬ್ಬಿಣದ ಕೆಲಸವನ್ನು ಮಾಡುವ ಕಮ್ಮಾರರು, ತಮ್ಮ ಒಲೆಯಲ್ಲಿ ಮೇಲೆ ಮುಚ್ಚಿ ಪಕ್ಕದಲ್ಲಿ ಸೇರಿಸಿದ ಇದ್ದಲು ತುಂಡುಗಳ ನಡುವೆ ಪ್ರಕಾಶಿಸುವ ಅಗ್ನಿಗೆ ಸಮಾನವಾಗಿದ್ದುವು.

621. ಹೆಣಗಳು ಕೆಳಗೆ ಬಿದ್ದು ಕೆಂಪಗಾದ ಕಳದಲ್ಲಿ ಕೆಲವು ಯೋಧರು ಆಯುಧಗಳಿಂದ ಗಾಯಗೊಂಡು ಬಿದ್ದಿದ್ದರು. ಆ ಗಾಯಗಳ ಮಾರ್ಗವಾಗಿ ಸುರಿದ ಕರುಳುಗಳನ್ನು, ಹದ್ದುಗಳೂ ಗಿಡುಗಗಳೂ ಹಿಡಿದು ಮೇಲೇಳುತ್ತಿದ್ದುವು. ಆಗಲೂ ಆ ಗಾಯಾಳುಗಳು ವಿರಕ್ತಿಹೊಂದದೆ ತಾವು ನಡೆಸುತ್ತಿದ್ದ ಯುದ್ಧದಲ್ಲಿ ಉತ್ಸಾಹವುಳ್ಳವರಾಗಿದ್ದರು. ಅವರು, ಆಕಾಶದಲ್ಲಿ ಹಾರುವಿಕೆಯನ್ನು ಅಭ್ಯಾಸಮಾಡುವ ವಿದ್ಯಾಧರ ಬಾಲಕರನ್ನು ಹೋಲುತ್ತಿದ್ದರು.

---

619. ಪೊಱ್ಚಿಲೈ ವಳೈಯ ವೆತಿರ್ನ್ದವರ್ ಪುಱ್ಱರ ವನ್ನೈಯ ಚರಮ್ಪಟ
ವಿಱ್ಱೈ ತುಣಿಯವು ನಿನ್ಱಿಲರ್ ವೆಱ್ಱಿಕೊಳ್ ಚುರಿಕೈ ವಳಙ್ಕಿನರ್
ಮುಱ್ಱಿಯ ಪೆರುವಳ ನಿನ್ಱಿಯು ಮುಱ್ಪಟು ಕೊಟೈನಿಲೈ ನಿನ್ಱಿಟ
ವು[illegible]ನ ವುತವಿಯ ಪಣ್ಪಿನ ರೊತ್ತನ ರುಳರ್ ಚಿಲ ಕಣ್ಟಕರ್.

620. ಆಟನ್ಮುನ್ನೈ ಮಱವರ್ ಮಟಿನ್ದವ ರಲರ್ಮುಕ ಮುಯಿರುಳ ವೆನ್ಱುಱು
ಪಟರ್ಚಿಱೈ ಚಲವು ಕರುಙ್ಕೊಟಿ ಪಟರ್ವನ ಚುೞಲ್ವನ ತುನ್ಱಲಿಲ್
ವಿಟುಚುಟರ್ ವಿೞಿಕ ಳಿರುಮ್ಪುಚೆಯ್ ವಿನೈಞರ್ತ ಮುಲೈಯಿನ್
ಮುಕವೊತಿ
ಪುಟೈವಿಟೈ ಕರಿಯಿಟೈ ತಙ್ಕಿಯ ಪುಕೈವಿಟು ತೞಲೈ ನಿಕರ್ನ್ದನ.

621. ತಿಣ್ಪಟೈ ವಯಲರ್ ಪಿಣಮ್ಪಟು ಚೆಙ್ಕಳ ಮತನಿಟೈ ಮುನ್ಚಿಲರ್
ಪುಣ್ಪಟು ವೞಿಚೊರಿ ಯುಙ್ಕುಟರ್ ಪೊಙ್ಕಿಯ ಕೞುಕು ಪರುನ್ದೊಟು
ಕೊಣ್ಟೆೞು ಪೊೞುತಿನು ಮುನ್ಚೆಯಲ್ ಕುನ್ಱುತ ಲಿಲರ್ತಲೈ ನಿನ್ಱನರ್
ವಿಣ್ಪಟರ್ ಕೊಟಿವಿಟು ಪಣ್ಪಯಿಲ್ ವಿಞ್ಚೈಯರ್ ಕುಮರರೈ ವೆನ್ಱನರ್.

622. ಈ ರೀತಿಯ ಭಯಂಕರ ಯುದ್ಧದಲ್ಲಿ ಎರಡು ಪಕ್ಕಗಳಲ್ಲಿಯೂ ಶೂರ ಯೋಧರು ಕಡಿದಾದ ಯುದ್ಧವನ್ನು ಮಾಡಿ ಹಲವರು ಸತ್ತುಹೋದಮೇಲೆ, ಮಡಿಯದೆ ಬದುಕಿ ಉಳಿದ ತನ್ನ ಪಕ್ಷದ ಹಲವು ಆಯುಧವೀರರು ಹಿಂದಿನಿಂದ ಬರಲು ಯುದ್ಧ ಮಾಡುವವನಾಗಿ ಏಣಾಧಿನಾಥನು ಕೋಪದಿಂದ ಮುಂದೆ ಬಂದನು.

623. ತನ್ನ ಕೈಯ ಖಡ್ಗದಿಂದ ಬೆಂಕಿಯು ಹಾರಲು, ಕಾಲಿನಲ್ಲಿ ವೀರ ಗೆಜ್ಜೆಯು ಶಬ್ದಿಸಲು, ವಿಷಕಂಠನಾದ ಶಿವಪರಮಾತ್ಮನಿಗೆ ಭಕ್ತನಾದ ಏಣಾಧಿನಾಥನು ಮೇಲೆ ಕಂಡಂತೆ, ಯುದ್ಧರಂಗದಲ್ಲಿ ಮುಂದೆ ಬಂದು ಕೋಪಿಸಿ, ಇದುವರೆಗೆ ಸಾಯದೆ ಉಳಿದುಕೊಂಡು ಈಗ ಅವನನ್ನಿದಿರಿಸಿ ಯುದ್ಧದಲ್ಲಿ ನಿಂತ ಸೇನಾವೀರರ ತಲೆಗಳನ್ನು ತನ್ನ ಭುಜಪರಾಕ್ರಮವನ್ನೂ ಚಾತುರ್ಯವನ್ನೂ ತೋರಿಸಿ ತುಂಡರಿಸಿದನು.

624. ಕೂಡಿ ಇದಿರಿಸಿದವರೆಲ್ಲಾ ಅಸಮಾನವೀರನಾದ ಏಣಾಧಿನಾಥನ ಖಡ್ಗದಿಂದ ಕೊಲ್ಲಲ್ಪಟ್ಟು ನಾಶವಾದರು. ಇದನ್ನು ಕಂಡು, ಉಳಿದ ಯೋಧರು ಯುದ್ಧಕಳವನ್ನು ಬಿಟ್ಟು ನೆಲಸಿದ ಸುಜ್ಞಾನದಿಂದ ನಾಶವಾಗುವ ಆಸೆ ಮೊದಲಾದ ಅಜ್ಞದೋಷಗಳಂತೆ ಮಾಯವಾದರು.

---

622. ಇಮ್ಮೈನ್ನೈಯ ವೆವ್ವೋರಿ ಲಿರುಪಟ್ಟೈಯಿನ್ ವಾನ್‌ವೀರರ್
ವೆಮ್ಮುನ್ನೈಯಿಲ್ ವೀಟೆಯಪಿನ್ ವೀಟಾತು ಮಿಕ್ಕೊಟಿನ್ರ್‌
ತಮ್ಮುಟ್ಟೈಯ ಪಲ್ಪಟ್ಟೈಇರ್ ಪಿನ್‌ನಾಕ ತ್ತಾಮುನ್‌ಪು
ತೆಮ್ಮುನ್ನೈಯಿ ಲೇನಾತಿ ನಾತರ್ ಚೆಯಿರ್‌ತ್ತೆಟುನ್ತಾರ್.

623. ವೆಞ್ಚಿನವಾ ಟೆಯುಮಿಟಿ ವೀರ ಕ್ಕಟಲ್‌ಕಲಿಪ್ಪ
ನಞ್ಚಣಿಕ ಣ್ಟರ್‌ಕ್ಕನ್‌ಪರ್ ತಾಮೆತಿರ್‌ನ್ರ್ ಇರ್‍ಾಟ್‌ಪಿನ್‌ಕ
ಣೆಞ್ಚಿಯೆತಿರ್ ನಿನ್‌ಱ ವಿಕಸ್‌ಮುನ್ನೈಯಿಲ್ ವೇಲುಟಿವರ್
ತಞ್ಚಿರಮುನ್ ತೋಳುರಮುನ್ ತಾಳುರಮುನ್ ತಾನ್ತುಣಿತ್ತಾರ್.

624. ತಲ್ಲೈಪ್ಪಟ್ಟಾ ರೆಲ್ಲಾರು ನ್ತನಿವೀರರ್ ವಾಳಿಱ್
ಕೊಲ್ಲೈಪ್ಪಟ್ಟಾರ್; ಮುಟ್ಟಾತಾರ್ ಕೊಲ್‌ಕಳತ್ತೈ ವಿಟ್ಟು
ನಿಲ್ಲೈಪ್ಪಟ್ಟ ಮೆಯ್ಯುಣರ್‌ವು ನೇರ್‌ಪಟ್ಟ ಪೋತಿ
ಲಲ್ಲೈಪ್ಪಟ್ಟ ವಾರ್‌ವಮುತಱ್ ಕುಱ್ಱಮ್‌ಪೋ ಳಾಯಿನಾರ್,

625. ಈ ನೆಲೆಯುಳ್ಳುಳ್ಳ ಭಯಂಕರವಾದ ಯುದ್ಧಕಳದಲ್ಲಿ ಯುದ್ಧವನ್ನೆತ್ತಿ ಬಂದು ಸೋತು ಓಡಿಹೋಗುವ ಅಲ್ಪತೆಯನ್ನು ಸಹಿಸಲಾರದುದರಿಂದ, ತನ್ನ ಹಲವು ವೀರರುಗಳಲ್ಲಿ ಓಡಿಹೋದವರನ್ನು ಸೇರಿಸಿ ಒಡಗೊಂಡು, ಅತಿಶೂರನು, ಮಿಂಚಿನಂತೆ ಪ್ರಕಾಶವುಳ್ಳ ಖಡ್ಗವನ್ನು ಬೀಸಿ, ಕೋಪಗೊಂಡ ಹುಲಿಗೆ ಸಮಾನವಾದ ಪರಾಕ್ರಮವುಳ್ಳ ವೀರನಾದ ಏಣಾಧಿನಾಥನ ಮುಂದೆ ನೇರಾಗಿ ಹೋಗಿ ಯುದ್ಧವನ್ನು ಮಾಡಿದನು.

626. ಏಣಾಧಿನಾಥನು ತನ್ನ ಶ್ರೇಷ್ಠವಾದ ಕೂರಾದ ಖಡ್ಗದಿಂದ ಪ್ರಕಾಶ ಮಾತ್ರ ಕಾಣುವಂತೆಯೂ ಸಾರಿಗೆಯನ್ನು ಸುತ್ತಿ ಬರುವ ವೃತ್ತದಲ್ಲಿ, ತಾನು ಕಾಣದಂತೆಯೂ ಆ ಯುದ್ಧದಲ್ಲಿ ಮುಚ್ಚಲ್ಪಟ್ಟು, ಆ ಅತಿಶೂರನನ್ನು ಬೀಸಿ ತುಂಡರಿಸುವ ಸಮಯವು ಪ್ರಾಪ್ತವಾದಾಗ, ಅವನು ಅದರಿಂದಲೂ ತಪ್ಪಿದವನಾಗಿ, ಸ್ವರ್ಣಾಭರಣಗಳಿಂದ ಅಲಂಕೃತವಾದ ದೊಡ್ಡ ತೋಳುಗಳುಳ್ಳ ವೀರನಾದ ಏಣಾಧಿಣಾಥನಿಗೆ ಸೋತು ಓಡಿದನು.

627. ಈ ರೀತಿ ಓಡಿಹೋದ ಅತಿಶೂರನು, ಯುದ್ಧದಲ್ಲಿ ಸೋತುದರಿಂದಾದ ಅವಮಾನವು ಅಧಿಕವಾಗಿ, ನಿದ್ರೆ ಬಾರದವನಾಗಿ ಇದನ್ನೇ ನೆನೆನೆನೆದು ಇಡೀ ರಾತ್ರಿ ಚಿಂತಿಸಿ ಮನದಲ್ಲಿ ವೇದನೆಗೊಂಡು 'ಎದುರೆದುರಾಗಿ ಯುದ್ಧಮಾಡದೆ ಹೀನವಾದ ವಂಚನಾ ಕೃತ್ಯದಲ್ಲಿ ಅವರನ್ನು ಗೆಲ್ಲುವೆನು' ಎಂದು ಚಿಂತಿಸಿದನು.

---

625. ಇನ್ನಿಲೈಯ ವೆಞ್ಕಳತ್ತಿ ನೇೞ್ಟಿನ್ತ ಮಾನತ್ತಾಱ್
ಱನ್ನುಟೈಯ ಪಲ್‌ಪಟೈಞರ್ ಮಾಣ್ಟಾರ್ ತಮ್ಮೈಕ್ಕೊಣ್ಟು
ಮಿನ್‌ನೊಳಿವಾಳ್ ವೀಚಿ ಎಱಲ್‌ವೀರರ್ ವೆಮ್ಪುಲಿಯೋ
ಱನ್‌ನವರ್‌ತಮ್ ಮುನ್‌ಚೆನ್ ಱತಿಚೂರ ನೇರಟರ್‌ನ್ತಾನ್

626. ಮೞ್ಱವರತ ಱಿಚ್ಚೆಯರ್‌ಕ್ಕೈ ವಟಿವಾ ಳೊಳಿಕಾಣ
ಚ್ಚುೞ್ಱಿವರುಮ್ ವಟ್ಟಣೈಯಿ ಱೋನ್‌ಱಾ ವಕೈಕಲನ್ತು
ಪೞ್ಱಿಯಟರ್ ಕ್ಕುಮ್ಪೊೞುತಿ ಱಾನುಮ್ ಪಟೈಪಿಟಿತ್ತು
ಪ್ಪೊೞ್ಱಿಟನ್ತೋಳ್ ವೀರರ್ ಕ್ಕುಟೈನ್ತು ಪುಱಕಿಟ್ಟಾನ್.

627. ಪೋನ ವತಿಚೂರನ್ ಪೋರಿ ಲವರ್‌ಕ್ಕುಟೈನ್ತ
ಮಾನಮಿಕ ಮಿತೂರ ಮಣ್ಪಟುವಾನ್ ಕಣ್ಪಟಾ
ನಾನಚೆಯ ಲೋರಿರವು ಱಿನ್ತಿತ್ತಲಮರುವಾ
'ಱೀನಮಿಕು ವಞ್ಚನೈಯಾಲ್ ವೆಲ್ವ' ನೆನ ವೆಣ್ಣಿನಾನ್,

628. ಹೀಗೆ ಆ ರಾತ್ರಿಯನ್ನು ಕಳೆದು, ಬೆಳಗಿನ ಜಾವದಲ್ಲಿ ಆತನು, 'ನಮ್ಮ ಯುದ್ಧದಲ್ಲಿ ಊರಲ್ಲಿದ್ದವರನ್ನು ಕೊಲ್ಲದೆ, ನಾವಿಬ್ಬರೂ ಪ್ರತ್ಯೇಕವಾದೆಡೆಯಲ್ಲಿ ಖಡ್ಗ ವಿದ್ಯೆಯ ಪಾಲುಗಾರಿಕೆಯ ಒಡೆತನವನ್ನು ನಿಶ್ಚೈಸುವ ಯುದ್ಧವನ್ನು ಮಾಡಲು ಸೇರುವ' ಎಂದು ಎಸಳುಗಳು ತುಂಬಿದ ಹೂಮಾಲೆಯಿಂದಲಂಕರಿಸಿದ ಏಣಾಧಿನಾಥನಿಗೆ ಹೇಳಿ ಬರಲು ಒಬ್ಬ ಆಳನ್ನು ಕಳುಹಿಸಿದನು.

629. ಇದನ್ನು ಕೇಳಿದೊಡನೆ ಏಣಾಧಿನಾಥನು 'ಆ ರೀತಿ ಮಾಡುವುದು ಒಳ್ಳೆಯದು' ಎಂದು ಸಮ್ಮತಿಸಿ, 'ಯುದ್ಧಮಾಡಲು ಆತನು ನಿಶ್ಚಯಿಸಿದ ಸ್ಥಳದಲ್ಲಿ ಖಡ್ಗ ಪಾಣಿಯೂ ಬಲಶಾಲಿಯೂ ಆದ ಆತನು ಬರಲಿ' ಎಂದು ಹೇಳಿ, ಆ ಕಾರ್ಯವನ್ನು ವಹಿಸಿಕೊಂಡವನಾಗಿ,

630. ತನ್ನ ಸಂಬಂಧಿಕರೇ ಮೊದಲಾದವರೂ ಇದನ್ನು ತಿಳಿಯದಂತೆ ತಾನೊಬ್ಬನೇ, ಕಾಂತಿಯುತವಾದ ಖಡ್ಗವನ್ನೂ, ಸುಂದರವಾದ ಕೈಪಿಡಿಯಿದ್ದ ಗುರಾಣಿಯನ್ನೂ ತಾಳಿ ಹೊರಬಂದು, ವೈರಿಯು ತಿಳಿಸಿದ ಆ ಕಳದಲ್ಲಿ ಅವನಿಗೆ ಮೊದಲೇ ಸೇರಿ ಅವನ ಬರುವಿಕೆಯನ್ನು ಕಾದುಕೊಂಡು ನಿಂತನು.

---

628. ಚೇಟ್ಟಾರು ಙ್ಙಙ್ಞಲ್ ಪುಲರ್‌ಕಾಲೈ ತ್ತೀಯೋನು
'ನಾಟ್ಟಾರೈ ಕ್ಕೊಲ್ಲಾತೇ ನಾಮಿರುವೇಮ್ ವೇಜುಟತ್ತು
ವಾಟ್ಟಾಯ ಙ್ಕೊಳ್‌ಪೋರ್ ಮಲೈಕ್ಕ ವರುಕ' ವೆನ
ತ್ತೊಟ್ಟಾರ್‌ಪೂ ನ್ತಾರಾರ್‌ಕ್ಕು ಚ್ಚೊಲ್ಲಿ ಚ್ಚೆಲವಿಟ್ಟಾನ್.

629. ಇವ್ವಾಜು ಕೇಟ್ಟಲುಮೇ ಯೇನಾತಿ ನಾತನಾ
'ರವ್ವಾಜು ಚೆಯ್ತ ಲಟಕಿ' ತೆನವಮೈನ್ತು,
'ಕೈವಾ ಳವರ್‌ವಿಳೈಕ್ಕ ತ್ತಾನ್‌ಕರುತು ಮಕ್ಕಳ ತ್ತಿಲ್
ವೆವ್ವಾ ಳುರವೋನ್ ವರುಕ' ವೆನ ಮೇಙ್ಕೊಳ್ವಾರ್.

630. ಚುಙ್ಙತ್ತಾರ್ ಯಾರು ಮಜಿಯಾ ವಕ್ಕೈಚುಟರ್‌ವಾಳ್
ಪೊಙ್ಙಲಕ್ಕೈ ಯುನ್ತಾಮೇ ಕೊಣ್ಟು ಪುಜಪ್ಪೋನ್ತು
ಮುಙ್ಙವನ್‌ಮುನ್ ಚೊಲ್ಲಿ ವರುಕ್ಕುಜಿತ್ತ ವಕ್ಕಳತ್ತೇ
ಪಙ್ಙಲನೈ ಮುನ್‌ವರವು ಪಾರ್‌ತ್ತು ತ್ತನಿನಿನ್‌ಙಾರ್,

631. ವಂಚನೆಯಿಂದ ಕೇಡನ್ನು ಮಾಡಲು ಮರೆಸಿದ ಕುರುಹುಳ್ಳವನಾಗಿ (ಹಣೆಯಲ್ಲಿ ಧರಿಸಿದ ವಿಭೂತಿಯನ್ನು ಮರೆಸಿದವನಾಗಿ) ಯುದ್ಧಕ್ಕೆ ಕರೆದ ಆ ವಂಚಕನು, 'ವಿಭೂತಿಯನ್ನು ಹಣೆಯಲ್ಲಿ ಧರಿಸಿದವರಿಗೆ ಎಲ್ಲೆಲ್ಲಿಯೂ ಯಾವ ಕಾಲದಲ್ಲಿಯೂ ಆ ನಾಯನಾರನು ಕೇಡನ್ನು ಮಾಡನು' ಎಂಬುದನ್ನು ತಿಳಿದವನಾದುದರಿಂದ, ನಿಜಕ್ಕೂ ಹಿಂದೆ ವಿಭೂತಿಯನ್ನು ಧರಿಸಿ ಪಳಗದವನಾಗಿದ್ದು,

632. ವಿಭೂತಿಯನ್ನು ಇಡೀ ಹಣೆ ವ್ಯಾಪಿಸುವಂತೆ ಪೂಸಿ, ಹೃದಯದಲ್ಲಿ ವಂಚನೆಯ ಕಳಂಕವನ್ನೊಳಗೊಂಡು, ಸುಂದರವಾದ ಜ್ಯೋತಿಯಿಂದ ಕೂಡಿದ ಖಡ್ಗವನ್ನೂ ರತ್ನಗಳು ಪುದಿದ ಗುರಾಣಿಯನ್ನೂ ಕೈಗಳಲ್ಲಿ ಧರಿಸಿ ಧರ್ಮಯುದ್ಧವೀರನಾದ ಏಣಾಧಿನಾಥನಿಗೆ ತಾನು ಹೇಳಿಬಿಟ್ಟ ಆ ಪ್ರದೇಶದಲ್ಲಿ ಬಂದು ನಿಂತನು.

633. ಜಯಯುತವಾದ ಸಿಂಹವು ತನ್ನ ಆಹಾರಕ್ಕೆ ತಕ್ಕುದಾದ ಪ್ರಾಣಿಯು ಬರುವುದನ್ನು ಎದುರು ನೋಡಿಕೊಂಡು ನಿಂತ ಹಾಗೆ ನಿಂತ ನೆಲೆಯನ್ನು ಕಂಡು, ಆತನ ಸಮೀಪ ಸೇರುವವರೆಗೆ ತನ್ನ ಹಣೆಯನ್ನು ಬಲವಾದ ಗುರಾಣಿಯಿಂದ ಮರೆಸಿಕೊಂಡೇ ಎದುರು ಸೇರಿ ಅಸಮಾನವೀರನಾದ ಆತನಿಗೆದುರಾಗಿ ಅಧರ್ಮವನ್ನು ಮೇಲ್ಕೊಂಡ ತಾನು ಯುದ್ಧದಲ್ಲಿ ಕಾಣಿಸಿಕೊಂಡನು.

---

631. ತೀಙ್ಕು ಕುಱಿತ್ತಱೈತ್ತ ತೀಯೋನ್ ಱಿರುನೀಱು
ತಾಙ್ಕಿಯ ನೆಱ್ಱಿಯಿನಾರ್ ತಙ್ಕಳೈಯೇ ಯೆವ್ವಿಟತ್ತು
ಮಾಙ್ಕವರು ನ್ತೀಙ್ಕಿೞೈಯಾ ರೆನ್ಪ ತಱಿನ್ತಾನಾಯ್
ಪ್ಪಾಙ್ಕಿ ಱ್ಱಿರುನೀಱು ಪಣ್ಡು ಪಯಿಲಾತಾನ್,

632. ವೆಣ್ಣೀಱು ನೆಱ್ಱಿ ವಿರವ ಪ್ಪೂಱಿಮ್ಪೂಚಿ
ಯುಣ್ಣೆಞ್ಚಿಲ್ ವಞ್ಚ ಕ್ಕಱುಪ್ಪು ಮುಟನ್ಕೊಣ್ಟು
ವಣ್ಣ ಚ್ಚುಟರ್ವಾಳ್ ಮಣಿಪ್ಪಲಕೈ ಕೈಕ್ಕೊಣ್ಟು
ಪುಣ್ಣಿಯಪ್ಪೋರ್ ವೀರರ್ಕ್ಕು ಚ್ಚೊನ್ನ ವಿಟಮ್ಪುಕುನ್ತಾನ್.

633. ವೆನ್ಱಿ ಮಟಙ್ಕಲ್ ವಿಟಕ್ಕುವರ ಮುನ್ಪಾರ್ತ್ತು
ನಿನ್ಱಾಱ್ಪೋ ನಿನ್ಱ ನಿಲೈಕಣ್ಟು ತನ್ನೆಱ್ಱಿ
ಚೆನ್ಱು ಕಿಟೈಪ್ಪಳವು ನ್ತಣ್ಪಲಕೈ ಯಾನ್ಮಱೈತ್ತು
ನುನ್ಱನಿವೀ ರರ್ಕ್ಕೆತಿರೇ ಮೂಣ್ಟಾನ್ ಮಱಮ್ಪೂಣ್ಟಾನ್.

634. ಪರಾಕ್ರಮವನ್ನು ಹೊಂದಿದ ವೃಷಭದಂತೆ ಎದುರಿಸಿ ಅವನನ್ನು ಕೊಲ್ಲ ತಕ್ಕ ಸಮಯವನ್ನು ತಿಳಿದು ನಾಯನಾರನು ಸಮೀಪಕ್ಕೆ ಬರುವಾಗ ಪಕ್ಕಕ್ಕೆ ತೊಲಗಿದ ವೈರಿಯಾದ ಅತಿಶೂರನು ಗುರಾಣಿಯನ್ನು ಸರಿಸಲು ಹೀನವಾದ ಅವನ ಹಣೆಯ ಮೇಲೆ ವಿಭೂತಿಯನ್ನು ತಾನು ಕಂಡನು.

635. ಕಂಡಾಗಲೇ, 'ಆಹಾ! ಕೆಟ್ಟೆನು. ಹಿಂದೆಂದೂ ಇವನ ಹಣೆಯ ಮೇಲೆ ಕಾಣದ ಬಿಳಿಯ ವಿಭೂತಿಯ ಪ್ರಕಾಶವನ್ನು ಈಗ ಕಂಡೆನು. ಇನ್ನು ಬೇರೇನು ನೆನೆಯಲಿದೆ? ದೇವದೇವನಾದ ಶಿವಪರಮಾತ್ಮನ ಕೀರ್ತಿಯುಳ್ಳ ಶ್ರೀಪಾದಗಳಿಗೆ ಇವನು ಭಕ್ತನಾದನು,' ಎಂದು ನೆನೆದವನಾಗಿ 'ಇವನು ಮನಮಾಡಿದ ಕಾರ್ಯದ ದಾರಿಯಲ್ಲಿಯೇ ಸೇರಿ ಸಮ್ಮತಿಸಿ ನಿಲ್ಲುವೆನು' ಎಂದು ನಿಶ್ಚೈಸಿದನು.

636. ಕೈಯಲ್ಲಿ ಹಿಡಿದ ಖಡ್ಗವನ್ನೂ ಗುರಾಣಿಯನ್ನೂ ಕೆಳಗೆ ತೊಲಗಿಸಿ ಬಿಡಲು ಮೊದಲು ನೆನೆದವನಾದರೂ 'ನಿರಾಯುಧನನ್ನು ಕೊಂದನು' ಎಂಬ ನಿಂದೆಯು ಇವನಿಗೆ ಬಾರದಿರಬೇಕು ಎಂದೆಣಿಸಿ ಆ ಬಲವಾದ ಗುರಾಣಿಯನ್ನೂ ಎಣ್ಣೆಯನ್ನು ಸವರಿದ ಖಡ್ಗವನ್ನೂ ಹಿಡಿದುಕೊಂಡೇ ಯುದ್ಧಮಾಡುವವನಂತೆ ಕಾಣಿಸಿ ಎದುರಿಸಿ ನಿಂತನು.

---

634. ಅಟಲ್‌ವಿಟ್ಟೈಯೋ ಱಿನ್‌ನ ವಟರ್‌ತ್ತವನ್ನೈ ಕ್ಕೊಲ್ಲು
ಮಿಟ್ಟೈತೆರಿನ್ತು ತಾಳ್‌ಪೆಯರ್‌ಕ್ಕು ಮೇನಾತಿ ನಾತರ್
ಪುಟ್ಟೈಪೆಯರ್‌ನ್ತ ಮೂೞ್ಱಾನ್ ಪಲಕ್ಕೈ ಪುಱಮ್ಪೋಕ್ಕ
ಕ್ಕಟ್ಟೈಯವನ್‌ಱ ನೆೞ್ಱಿಯಿನ್‌ಮೇಲ್ ವೆಣ್ಣೀಱು ತಾಙ್ಕಣ್ಟಾರ್.

635. ಕಣ್ಟು ಪೊೞು ತೇ 'ಕೆಟ್ಟೇನ್! ಮುನ್‌ಪಿವರ್‌ಮೇಱ್ ಕಾಣಾತ
ವೆಣ್ಟಿರುನೀ ಱ್ಱಿನ್‌ಪೊಲಿವು ಮೇಱ್ಕಣ್ಟೇನ್; ವೇಱಿನಿಯೆನ್?
ಅಣ್ಣರ್‌ಪಿರಾನ್ ಚೀರಟಿಯಾ ರಾಯಿನಾ' ರೆನ್‌ಱುಮನ
ಱ್ಕೊಣ್ಣ್ 'ಟಿವರ್‌ತಱ್ ಕೊಳ್‌ಕೈ ಕ್ಕುಱಿವಱಿನಿಱ್ ಪೇ' ನೆನ್‌ಱು,

636. ಕೈವಾ ೞುಟನ್‌ಪಲಕ್ಕೈ ನೀಕ್ಕ ಕ್ಕರುತಿಯತು
ಚೆಯ್ಯಾರ್ 'ನಿರಾಯುತರೈ ಕ್ಕೊನ್‌ಱಾ ರೆನುನಿನ್ತೈ
ಯೆಯ್ಯಾತವ್ವೈ ವೇಣ್ಟು ಮಿವರ್' ಕ್ಕೆನ್ ಱಿರುವ್ವಲಕ್ಕೈ
ನೆಯ್ಯಾ ೞುಟನಟರ್‌ತ್ತು ನೇರ್‌ವಾರ್‌ಪೋ ನೇರ್‌ನಿನ್‌ಱಾರ್.

637. ಈ ರೀತಿ ನಿಂತ ದಿವ್ಯಭಕ್ತನ ಅಂತರ್ಯವನ್ನು ಅರಿಯಬಲ್ಲವರು ಯಾರು? ಮುಂದೆ ನಿಂತ ಪಾತಕಿಯಾದ ಅತಿಶೂರನು ತಾನು ಚಿಂತಿಸಿದಂತೆಯೇ ಮಾಡಿ ಮುಗಿಸಿದನು. ಈ ಸ್ವಭಾವವನ್ನು ತಿಳಿದವನಾಗಿ ಈ ದಿವ್ಯಭಕ್ತನಿಗೆ ಅನುಗ್ರಹಿಸಲಿಕ್ಕಾಗಿ ಮಿಂಚಿನಂತಿರುವ ಕೆಂಜೆಡೆಯುಳ್ಳ ಶಿವಪರಮಾತ್ಮನು ತಾನೇ ಪ್ರತ್ಯಕ್ಷವಾಗಿ ತೋರಿ ಅನುಗ್ರಹಿಸಿದನು.

638. ಶಿವಪರಮಾತ್ಮನ ದಿವ್ಯಾನುಗ್ರಹದ ಬಗೆಯನ್ನು ಇನ್ನು ಪ್ರತ್ಯೇಕವಾಗಿ ನಾವು ಹೇಳಲೇನಿದೆ? ವೈರಿಯ ಖಡ್ಗದಿಂದ ಪಾಶವನ್ನು ತುಂಡರಿಸಿ ತನ್ನಲ್ಲಿ ಲೀನನಾದ ನಾಯನಾರನನ್ನು ಸದಾ ಸಾಯುಜ್ಯ ನೆಲೆಯನ್ನು ಹೊಂದುವಂತೆ ಮಾಡಿ ಪರಮೇಶ್ವರಿಯನ್ನು ಒಂದು ಭಾಗದಲ್ಲುಳ್ಳ ಶಿವಪರಮಾತ್ಮನು ಚಿತ್ಸಭೆಯನ್ನು ಸೇರಿದನು.

639. ತಮ್ಮ ಒಡೆಯನು (ಈಶ್ವರನು) ಪೂಸುವ ವಿಭೂತಿಯೇ ಆಧಾರವಾಗುಳ್ಳ ನಮ್ಮೊಡೆಯನಾದ ಏಣಾಧಿನಾಥ ನಾಯನಾರನ ಶ್ರೀಪಾದಗಳನ್ನು ನಮಿಸಿ ಕಣ್ಣಪ್ಪನ್ ಎಂಬ ಓರ್ವ ಮಹಾತ್ಮನು ದೇವದೇವನಾದ ಕಾಳತ್ತಿಯ ಉತ್ತಮರಿಗೆ (ಈಶ್ವರನಿಗೆ) ಮಾಡಿದ ದಿವ್ಯಸೇವೆಯನ್ನು ನಾವು ತಿಳಿದಂತೆ ಹೇಳಹೋಗುವೆವು.

---

637. ಅನ್ನಿನ್ಱ ತೊಣ್ಡರ್ ತಿರುವುಳ್ಳ ಮಾರಱಿವಾರ್?
ಮುನ್ನಿನ್ಱ ಪಾತಕನುನ್ ತನ್ಕರುತ್ತೇ ಮುಱ್ಱುವಿತ್ತಾನ್;
ಇನ್ನಿನ್ಱ ತನ್ಮೈ ಯಱಿವಾ ರಿವರ್ಕ್ಕರುಳ
ಮಿನ್ನಿನ್ಱ ಚೆಞ್ಚಟೈಯಾರ್ ತಾಮೇ ವೆಳಿನಿನ್ಱಾರ್.

638. ಮಱ್ಱಿನಿನಾಮ್ ಪೋಱ್ಱುವತೆನ್? ವಾನೋರ್ ಪಿರಾನರುಳೈ
ಪ್ಪೆಱ್ಱವರ್ತ ಙ್ಕೞ್ವಾಳಾಲ್ ಪಾಚ ಮಱುತ್ತರುಳಿ
ಯುಱ್ಱವರೈ ಯೆನ್ಱು ಮುಟನ್ಪಿರಿಯಾ ವನ್ಪರುಳಿ
ಪ್ಪೊಱ್ಱೊಟಿಯೊಳ್ ಪಾಕನಾರ್ ಪೊನ್ನ ಮ್ಪಲಮಣೈನ್ದಾರ್.

639. ತಮ್ಪೆರುಮಾನ್ ಚಾತ್ತು ನಿತ್ತರುನೀಱು ಚ್ಚಾರ್ಪುಟೈಯ
ವೆಮ್ಪೆರುಮಾ ನೇನಾತಿ ನಾತರ್ ಕೞಲಿಱೈಞ್ಚಿ
ಯುಮ್ಪರ್ಪಿರಾನ್ ಕಾಳತ್ತಿ ಯುತ್ತಮರ್ಕ್ಕು ಕ್ಕಣ್ಣಪ್ಪ
ನಮ್ಪೆರುಮಾನ್ ಚೆಯ್ತಪಣಿ ನಾನ್ತಱಿನ್ತ ಪಟಿಯುರೈಪ್ಪಾಮ್.

---

೧೦. ಕಣ್ಣಪ್ಪ ನಾಯನಾರ್ ಪುರಾಣಂ

640. ವೈರಿಗಳ ತ್ರಿಪುರಗಳನ್ನು ನಾಶಿಸಿದ ವೃಷಭವಾಹನನಾದ ವೇದವನ್ನು ಕಾಪಾಡುವವನಾದ ಪರಮೇಶ್ವರನ ತಿರುಕಾಳತ್ತಿಯಲ್ಲಿ ಕಣ್ಣಪ್ಪ ನಾಯನಾರನ ದಿವ್ಯ ನಾಡಾದುದು, ವಿದ್ವಾಂಸರು ಹೊಗಳಿ ಕೊಂಡಾಡುವ ಒಳ್ಳೆಯ ಭಾಗ್ಯಗಳು ಹೆಚ್ಚಿ ನೆಲಸಿದುದೂ, ಹೂಗಳರಳಿದ ತಟಾಕಗಳಿಂದಲೂ ಉದ್ಯಾನಗಳಿಂದಲೂ ಸುತ್ತುವರಿದುದೂ ಆದ ಪೊತ್ತಪ್ಪಿನಾಡು.

641. ಈ ತಿರುನಾಡಿನಲ್ಲಿ ಇವರ ಊರಾದುದು ಯಾವುದು ಎಂದರೆ ಮುತ್ತುಗಳನ್ನು ಬೀಸಿ ಬರುವ ಅಬ್ಬಿಗಳು ಓಡುವುದಕ್ಕೆಡೆಯಾದ ನಿಡಿದಾದ ಮಲೆಗಳು ಸುತ್ತುವರಿದ ಪಕ್ಕಗಳಲ್ಲಿ ಮದಿಸಿದ ಆನೆಗಳ ಕೊಂಬುಗಳಿಂದ ಸೇರಿದ ಬಲಿಷ್ಠವಾದ ಬೇಲಿಯು ಮದಿಲಾಗಿ ಸುತ್ತುವರಿದು ಶೋಭಿಸುವ ಹಳೆಯ ನಗರವಾದ ಉಡುಪ್ಪೂರ್ ಎಂಬುದು.

642. ಆ ಊರಿನಲ್ಲಿ ಬಾಳುವವರು ಬೆಟ್ಟಗಳಲ್ಲಿ ವಾಸಿಸುವ ಕೊರವರು. ಆ ಊರಿನ ಎಡೆಗಳಲ್ಲೆಲ್ಲಾ ಜೋಲುವ ಕಿವಿಗಳುಳ್ಳ ನಾಯಿಗಳನ್ನು ಕಟ್ಟಿದ ಬೇಲಮರದ ಗೆಲ್ಲುಗಳಲ್ಲಿ ಚರ್ಮದ ಬಾರುಗಳುಳ್ಳ ಬಲೆಗಳು ಪಕ್ಕಗಳಲ್ಲಿ ನೇತಾಡುತ್ತವೆ. ಕಾಡುಹಂದಿ, ಹುಲಿ, ಕರಡಿ, ಕಡವೆ ಮೊದಲಾದ ಜಿಂಕೆಯ ಜಾತಿಗಳು, ಎಂಬಿವುಗಳನ್ನು ಹಿಡಿಯಲು ಉಪಯೋಗಿಸುವ ದೀವದ ಮೃಗಗಳೂ ಇವೆ. ಅಲ್ಲದೆ ಮನೆಗಳ ಮುಂಭಾಗದಲ್ಲಿ ವಿಶಾಲ ಬಂಡೆಗಳ ಮೇಲೆ ಬೆಟ್ಟದ ಬತ್ತದಲ್ಲಾದ ಅಕ್ಕಿಯು ಒಣಗುವುದು.

---

೧೦. ಕಣ್ಣಪ್ಪ ನಾಯನಾರ್ ಪುರಾಣಮ್

640. ಮೇವಲರ್ ಪುರಙ್ಕಳ್ ಚೆಱ್ಱ ವಿಟೈಯವರ್ ವೇತ ವಾಯ್ಮೈ
ಕ್ಕಾವಲರ್ ತಿರುಕ್ಕಾಳತ್ತಿ ಕ್ಕಣ್ಣಪ್ಪರ್ ತಿರುನಾಟೆನ್ಪ
ನಾವಲರ್ ಪುಕಟ್‌ನ್ತು ಪೋಱ್ಱು ನಲ್ವಳಮ್ ಪೆರುಕಿ ನಿನ್‌ಱ
ಪೂವಲರ್ ವಾವಿ ಚೋಲೈ ಚೂಟ್‌ನ್ತ ಪೊ ತ್ತಪ್ಪಿ ನಾಟು.

641. ಇತ್ತಿರು ನಾಟು ತನ್ನಿ ಲಿವರ್ತಿರು ಪ್ಪತಿಯಾ ತೆನ್ನಿ
ನಿತ್ತಿಲ ವರುವಿ ಚ್ಚಾರ ನೀಳ್‌ವರೈ ಚೂಟ್‌ನ್ತ ಪಾಙ್ಕರ್
ಮತ್ತವೆ ಙ್ಕಳಿಱು ಕ್ಕೋಟ್ಟು ವನ್‌ಱಿಕೊಟೆರ್ ವೇಲಿ ಕೋಲಿ
ಯೊತ್ತವೇ ರರಣ ಞ್ಚೂಟ್‌ನ್ತ ಮುತುಪತಿ ಯುಟುಪ್ಪೂ ರಾಕುಮ್.

642. ಕುನ್‌ಱವ ರತನಿಲ್ ವಾಟ್‌ವಾರ್ ಕೊಟುಞ್ಚಿವಿ ಞಮಲಿ ಯಾರ್ತ್ತ
ವನ್‌ಱಿರಳ್ ವಿಳವಿನ್ ಕೋಟ್ಟು ವಾರ್ವಲೈ ಮರುಙ್ಕು ತೂಙ್ಕ
ಪ್ಪನ್‌ಱಿಯುಂ ಪುಲಿಯು ಮೆಣ್ಣು ಙ್ಕಟವೈಯು ಮಾನಿನ್ ಪಾರ್ವೈ
ಯನ್‌ಱಿಯುಂ ಪಾಜಿಕೈ ಮುನ್‌ಱಿ ಲೈವನ ಮುಣಙ್ಕು ಮೆಙ್ಕುಮ್.

643. ಆ ಊರಲ್ಲೆಲ್ಲಿಯೂ ಬಲವಾದ ಹುಲಿಮರಿಗಳೊಡನೆಯೂ ಜಯಯುಕ್ತ ವಾದ ಆನೆಮರಿಗಳೊಡನೆಯೂ, ಎಣ್ಣೆಯಿಲ್ಲದೆ ಜಡೆಕಟ್ಟಿದ ತಲೆಯುಳ್ಳ ಬೇಡರ ಬಾಲಕರು ಆಶಿಸಿ ಆಟವಾಡುವ ದೃಶ್ಯಗಳೂ ಇವೆ. ಅಲ್ಲದೆ, ಪ್ರೀತಿಯಿಂದ ಆಶಾಯುಕ್ತ ವಾಗಿ ಸಮೀಪ ಬರುವ ಹೆಣ್ಣುಜಿಂಕೆಗಳೊಡನೆ ಸುಖ ಉಂಟಾಗುವಂತೆ ಕೂಡಿ ಆಡುವ ಬೇಡರ ಬಾಲಕಿಯರೂ ಇರುವರು.

644. ಗೆಲ್ಲುವ ಆಯುಧವೂ, ಭಯವಿಲ್ಲದ ಪರಾಕ್ರಮವೂ, ಕ್ರೂರವಾದ ಮಾತೂ ಉಳ್ಳ ಬೇಡರ ಕೂಟಗಳಲ್ಲೆಲ್ಲೂ ಕೊಲ್, ತುಂಡರಿಸು, ಕುತ್ತು ಎಂದು ಘರ್ಜಿಸಿ ಹೇಳು ವುದರಿಂದ ಉಂಟಾಗುವ ಶಬ್ದಗಳಲ್ಲದೆ, ಕೆಲ ಹರಳುಗಳುಳ್ಳ ಉಡುಕ್ಕೂ, ಊದುವ ಕೊಂಬೂ, ಸಣ್ಣ ಮುಖವುಳ್ಳ ಪುಟ್ಟ ಪಕ್ಷಿಯೂ ಸೇರಿ ಹೆಚ್ಚಿನ ಶಬ್ದದಿಂದಲೂ ದೊಡ್ಡ ದಾಗಿ ಶಬ್ದಿಸಿ ಓಡುವ ಅರುವಿಗಳು ಅಲ್ಲಿ ಎಲ್ಲೂ ಇವೆ.

645. ಆ ಊರಲ್ಲಿ ಎಲ್ಲೂ ದಾರಿಹೋಕರ ದರೋಡೆಯನ್ನು ತಮ್ಮ ಉದ್ಯೋಗ ವಾಗಿ ಕೊಂಡ ಬೇಡರು ಪಕ್ಕದೆಡೆಗಳಲ್ಲಿ ಕೊಳ್ಳೆ ಮಾಡಿಕೊಂಡು ಬಂದ ಬೇರೆ ಬೇರಾದ ಹಲಬಗೆಯ ರೂಪಗಳಿಂದ ಮಿಕ್ಕಿ ಸೇರಿದ ಹಸುಗಳ ಕೂಟಗಳಲ್ಲದೆ, ಬಾನಲ್ಲಿ ಗುಡುಗಿನ ದನಿಯೊಡನೆ ಸುಳಿಯುವ ಮೇಘಗಳೊಡನೆ ಎದುರಾಗಿ ಧ್ವನಿಯನ್ನು ಕೊಡುವ ಮದ್ದಾನೆಯ ಹಿಂಡುಗಳೂ ಇವೆ.

---

643. ವನ್ಪುಲಿ ಕ್ಕುರುಳೈ ಯೋಟುಮ್ ವಯಕ್ಕರಿ ಕ್ಕನ್ಱಿ ನೋಟುಮ್
ಪುನ್ಱಲೈ ಚ್ಚಿಱುಮ ಕಾರ್ಕಳ್ ಪುರಿನ್ತುಟ ನಾಟ ಲನ್ಱಿ
ಯನ್ಪುಱು ಕಾತಲ್ ಕೂರ ವಣೈಯುಮಾನ್ ಪಿಣೈಕ ಳೋಟುಮ್
ಇನ್ಪುಱ ಮರುವಿ ಯಾಟು ಮೆಯಿಱ್ಱಿಯರ್ ಮಕಳಿ ರೆಙ್ಙುಮ್.

644. ವೆಲ್ಪಟೈ ತ್ತಱುಕಣ್ ವೆಞ್ಚೊಲ್ ವೇಟ್ಟುವರ್ ಕೂಟ್ಟ ನ್ತೋಱುಮ್
ಕೊಲ್ಲೆಱಿ ಕುತ್ತೆನ್ ಱಾರ್ತ್ತ ಕ್ಕುಟಿಮಿಯ ವೋಚೈ ಯನ್ಱಿ
ಚ್ಚಿಲ್ಲರಿ ತ್ತುಟಿಯುಙ್ ಕೊಮ್ಪುಞ್ ಚಿಱುಕಣಾ ಕುಳಿಯುಙ್ ಕೂಟ
ಕ್ಕಲ್ಲೆನು ಮೊಲಿಯಿನ್ ಮೇಲು ಙ್ಕಱಙ್ಕಿಚೈ ಯರುವಿ ಯೆಙ್ಙುಮ್.

645. ಆಱಲೈ ತ್ತುಱಣ್ಣುಮ್ ವೇಟ ರಯಲಿನ್ಪುಲ ಙ್ಕವರ್ನ್ತು ಕೊಣ್ಟ
ವೇಱುಪ ಲ್ಲುರುವಿನ್ ಮಿಕ್ಕ ನಿರವುಮಾ ನಿರೈಕಳನ್ಱಿ
ಯೇಱುಟೈ ವಾನ ನ್ತನ್ನಿ ಲಿಟಿಕ್ಕುರ ಲೆಟಿಲಿ ಯೋಟು
ಮಾಱುಕೊಣ್ ಮುಟಿಕ್ಕ ಙ್ಕಾಟ್ಟು ಮತಕ್ಕೈಮಾ ನಿರೈಕ ಳೆಙ್ಙುಮ್.

646. ಕಾಡಿಗೆಯ ಮೊತ್ತದಂತಹ ಶರೀರಕಾಂತಿಯೂ, ಭಯಂಕರವಾದ ಕಾರ್ಯವೂ ಉಳ್ಳ ಬೇಡರು ತಮ್ಮೆಡೆಯಲ್ಲಿ ದಯೆ, ಭಯ ಎಂಬಿವೆರಡನ್ನೂ ಯಾವ ಕಾಲದಲ್ಲಿಯೂ ಪಡೆಯದಿದ್ದವರು. ಬಲವಾದ ತೊಗಲುಡುಗೆಯುಳ್ಳವರು. ಬೆಟ್ಟದ ಜೇನೂ ಮಾಂಸವೂ ಕಲೆತ ಇನಿದಾದ ಆಹಾರವನ್ನು ಉಣ್ಣುವರು. ನಂಜೂಡಿದ ಅಗ್ನಿಬಾಣಗಳನ್ನುಳ್ಳವರು. ಈ ರೀತಿಯ ಬೇಡರುಗಳಿಗೆ ನಾಯಕನು ನಾಗನೆಂಬವನು.

647. ಸ್ವಭಾವದಿಂದ ಹಿಂದಿನ ಜನ್ಮದಲ್ಲಿ ತಪಸ್ಸನ್ನು ಮಾಡಿದವನಾದರೂ ಈ ಜನ್ಮದಲ್ಲಿ ತಾನು ಹುಟ್ಟಿದ ಕುಲದ ಕಾರಣದಿಂದ ದೋಷಾಚರಣೆಯನ್ನೇ ಗುಣವೆಂದುಕೊಂಡು ಬಾಳುವವನು. ಜೀವಿಗಳಿಗೆ ಕೇಡು ಮಾಡುವುದರಲ್ಲಿ ಹೆಚ್ಚಿನವನು. ಬಿಲ್ಲುದ್ದಿಮೆಯಲ್ಲಿ ಅತಿ ನಿಪುಣನು. ಹೆಚ್ಚಾದ ಕೋಪವುಳ್ಳ ಸಿಂಹದಂತಿರತಕ್ಕವನು. ಅವನ ಕುಗ್ರಾಮಗಳ ಜೀವನದಲ್ಲಿ ಹೆಂಡತಿಯಾಗಿದ್ದವಳು ತತ್ತೈ ಎಂಬವಳು.

648. ಆಕೆಯು ಪಡೆಯುವುದಕ್ಕಸಾಧ್ಯವಾದ ಹಿರಿಮೆಯುಳ್ಳ ಬೇಡರ ವಂಶದಲ್ಲಿ ಶ್ರೇಷ್ಠವಾದ ಒಂದು ಹಳೆಯ ಕುಲದಲ್ಲಿ ಹುಟ್ಟಿದವಳು. ದೊಡ್ಡ ಹುಲಿಹಲ್ಲಿನಿಂದ ಮಾಡಿದ ತಾಳಿಯನ್ನು ಧರಿಸಿಕೊಂಡವಳು. ಎಡೆಎಡೆಯಲ್ಲಿ ಮುತ್ತಿನ ಚಿಪ್ಪುಗಳನ್ನು ಸುರಿದು ಹೆಡತಲೆಯ ಕೆಳಗೂ ನೀಳವಾಗಿ ಜೋಲುವಹಾಗೆ ಅಲಂಕಾರ ಮಾಡಿಕೊಂಡವಳು. ನವಿಲಗರಿಗಳಿಂದಲೂ ಎಲೆಚಿಗುರುಗಳಿಂದಲೂ ಕೂಡಿ, ತುಂಬಿಗಳು ಮುಸುರುವ ಹೂಮಾಲೆಗಳನ್ನು ತಲೆಯ ಮೇಲ್ಭಾಗದಲ್ಲಿ ಕೊಂಡೆಯಾಗಿ ಧರಿಸಿ ಭಯವನ್ನು ತರುವ ಹೆಣ್ಣು ಸಿಂಹದಂತೆ ಇರತಕ್ಕವಳು.

---

646. ಮೈಚ್ಚಿಟಃ ನ್ತನೈಯ ಮೇನಿ ವನ್‌ಱೊಟಿಲ್ ಮಱವರ್ ತಮ್ಪಾ
ಲಚ್ಚಮು ಮರುಳು ಮೆನ್‌ಱು ಮಟ್ಟೈವಿಲಾ ರುಟ್ಟೈವನ್ ಱೋಲಾರ್
ಪೊಚ್ಚೈಯಿ ನಱವು ಮೂನಿನ್ ಪುಱುಕ್ಕಲು ಮುಣವು ಕೊಳ್ಳ
ನಚ್ಚುಟಿಱ್ ಪಕಟಃ ವೇಟರ್ ಕ್ಕತಿಪತಿ ನಾಕ ನೆನ್ಪಾನ್.

647. ಪೆಱ್ಱಿಯಾಱ್ ಱವಮುನ್ ಚೆಯ್ತಾ ನಾಯಿನುಮ್ ಪಿಱಪ್ಪಿನ್ ಚಾರ್ಪಾಱ್
ಕುಱ್ಱಮೇ ಕುಣಮಾ ವಾಟ್ಪಾನ್; ಕೊಟುಮೈಯೇ ತಲೈನಿನ್ ಱುಳ್ಳಾನ್;
ವಿಱ್ಱೊಟಿಲ್ ವಿಱವಿನ್ ಮಿಕ್ಕಾನ್; ವೆಙ್ಚಿನ ಮಟಙ್ಕಲ್ ಪೋಲ್ವಾನ್;
ಮಱ್ಱವನ್ ಕುಱಿಚ್ಚಿ ವಾಟ್ಕೈ ಮನೈವಿಯು ನ್ತತ್ತೈ ಯೆನ್ಪಾಳ್.

648. ಅರುಮ್ಪೆಱಿನ್ ಮಱವರ್ ತಾಯ ತ್ತಾನ್‌ಱತೊಲ್ ಕುಟಿಯಿಲ್ ವನ್ತಾಳ್;
ಇರುಮ್ಪುಲಿ ಯೆಯಿಱ್ಱು ತ್ತಾಲಿ ಯಿಟೈಯಿಟೈ ಮನವು ಕೋತ್ತು
ಪ್ಪೆರುಮ್ಪುಱ ಮಲೈಯ ಪ್ಪೂಣ್ಪಾಳ್; ಪೀಲಿಯು ಙ್ಕುಱಿಯು ನ್ತಟ್ಟೈ
ಚ್ಚುರುಮ್ಪುಱು ಪಟಲೈ ಮುಚ್ಚಿ ಚ್ಚೂರರಿ ಪ್ಪಿಣವು ಪೋಲ್ವಾಳ್.

649. ಸಮಾನವಿಲ್ಲದ ಹಿರಿಮೆಯಲ್ಲಿ ಹೆಚ್ಚಿನವರಾದ ಈ ದಂಪತಿಗಳಿಗೆ ಇನ್ನು ಪುತ್ರಸಂಪತ್ತನ್ನು ಪಡೆಯುವುದು ಅಸಾಧ್ಯವೆಂದು ಎಲ್ಲರೂ ಹೇಳಲು, ಆ ಭಾಗ್ಯದಲ್ಲಿ ಉಂಟಾದ ಆಶೆಯು ಹೆಚ್ಚಿದುದರಿಂದ, ಸುವಾಸನೆಯನ್ನು ಸೂಸುವ ಅರಳಿದ ಹೂಗಳ ಮಾಲೆಯಿಂದ ಅಲಂಕೃತವಾದ ಕೆಂಪಗಾದ ಶಕ್ತ್ಯಾಯುಧವನ್ನು ತಾಳಿದ ಮುರುಗ ವೇಳ್[1]ನ ದೇಗುಲದ ಬಾಗಿಲಲ್ಲಿ ಸೇರಿ ಅವರು ಅನುದಿನವೂ ಪ್ರಾರ್ಥಿಸುತ್ತಿದ್ದರು.

650. ಆ ಪ್ರಾರ್ಥನೆಯ ಅಂಗವಾಗಿ ಹುಂಜಗಳನ್ನೂ ರೇಖೆಗಳುಳ್ಳ ನವಿಲುಗಳನ್ನೂ ಕಾಣಿಕೆಯಾಗಿ ಬಿಟ್ಟು, ತೋರಣವಾಗಿ ಮಣಿಗಳನ್ನು ನೇತಾಡಿಸಿ, ತುಂಬಿಗಳು ಮುಸುರುವ ಸುಂದರವಾದ ಕದಂಬ ಮಾಲೆಗಳನ್ನು ಜೋತುಬಿಟ್ಟು, ಯುದ್ಧದಲ್ಲಿ ಬಲವುಳ್ಳ ಸುಂದರವಾದ ನೀಳಶಕ್ತಿಯನ್ನು ತಾಳಿದ ಮುರುಗಪರಮಾತ್ಮನಿಗೆ ಸ್ತೋತ್ರ ರೂಪವಾದ ಶೋಭಾನೆ ನರ್ತನ[2]ವನ್ನಾಡಿ, ಸ್ವಾಮಿಯ ಹೆಚ್ಚಿನ ಆವೇಶದ ನರ್ತನ[3]ವನ್ನೂ ಮಾಡಿ, ದೊಡ್ಡ ಉತ್ಸವವನ್ನು ನಡೆಸಿದ ಮೇಲೆ,

651. ಮಾಸಿದ ಗಾಯದ ಕಲೆಗಳು ತುಂಬಿದ ಒಡಲುಳ್ಳ, ಬೇಡರ ಅಧಿಪತಿಯಾದ ನಾಗನಿಗೆ, ಪ್ರಾಕಾರಗಳುಳ್ಳ ತ್ರಿಪುರಗಳನ್ನು ದಹಿಸಿದ ನನ್ನ ತಂದೆಯಾದ ಶಿವ ಪರಮಾತ್ಮನ ಮಗನಾದ, ಜಯಯುಕ್ತವಾದ ನವಿಲವಾಹನವನ್ನುಳ್ಳ, ಕ್ರೌಂಚ ಮಲೆಯನ್ನು ಕುತ್ತಿ ತುಂಡುಮಾಡಿದ ಶಕ್ತ್ಯಾಯುಧವನ್ನು ಧರಿಸಿರುವ ದೀರ್ಘಹಸ್ತವನ್ನುಳ್ಳ, ಖ್ಯಾತಿಯಲ್ಲಿ ಹಿರಿದಾದ ಮುರುಗಪರಮಾತ್ಮನ ಅನುಗ್ರಹವಾಯಿತು.

---

649. ಪೊರುವರು ಞ್ಚಿಱಪ್ಪಿನ್ ಮಿಕ್ಕಾ ರಿವರ್ಕ್ಕಿನಿ ಪ್ಪುತಲ್ವರ್ ಪ್ಪೇಱಿ
ಯರಿಯತೆನ್ ಱೆವರು ಞ್ಚೊಲ್ಲ ವತಱ್ಪಟು ಕಾತ ಲಾಲೇ
ಮುರುಕಲ ರಲಙ್ಕಲಿಱ್ ಚೆವ್ವೇನ್ ಮುರುಕವೇಳ್ ಮುನ್ಱಿಲಿಱ್ ಚೆನ್ಱು
ಪರವುತಲ್ ಚೆಯ್ತು ನಾಳುಮ್ ಪರಾಯ್ಕ್ಕಟ ನೆಱಿಯಿ ನಿಱ್ಪಾರ್,

650. ವಾರಣ ಚ್ಚೇವ ಲೋಟು ವರಿಮಯಿಱ್ ಕುಲಙ್ಕಳ್ ವಿಟ್ಟು
ತ್ತೋರಣ ಮಣಿಕ ಟೂಕ್ಕಿ ಚ್ಚುರುಮ್ಪಣಿ ಕತಮ್ಪ ನಾಱ್ಱಿ
ಪ್ಪೋರಣಿ ನೆಟುವೇ ಲಾಱ್ಕು ಪ್ಪುಕೞ್ಪುರಿ ಕುರವೈ ತೂಙ್ಕ
ಪ್ಪೇರಣಿ ಯ್ಯಾಟಲ್ ಚೆಯ್ತು ಪೆರುವಿೞಾ ವೆಟುತ್ತು ಪಿನ್ಱೈ,

651. ಪಯಿಲ್ವಟು ಪ್ಪೊಲಿನ್ತ ಯಾಕ್ಕೈ ವೇಟರ್ತಮ್ ಪತಿಯಾ ನಾಕಱ್
ಕೆಯಿಲುಟ್ಟೈ ಪ್ಪುರಙ್ಕಳ್ ಚೆಱ್ಱ ವೆನ್ತೈಯಾರ್ ಮೈನ್ತ ರಾನ
ಮಯಿಲುಟ್ಟೈ ಕ್ಕೊಱ್ಱ ವೂರ್ತಿ ವರೈಯುರ ಙ್ಕಿೞಿತ್ತ ತಿಣ್ವೈ
ಯಯಿಲುಟ್ಟೈ ತ್ತಟಕ್ಕೈ ವೆನ್ಱಿ ಯಣ್ಣಲಾ ರರುಳಿ ನಾಲೇ,

---

1. ಮುರುಗವೇಳ್ – ಅಶಿಶಕ್ಕ ಮುರುಗ (ಸುಬ್ರಮಣ್ಯ). 2. ಶೋಭಾನೆ ನರ್ತನ – ಕುರವೈ ಕೂತ್ತು. 3. ಅಣ್ಣಂಗಾಡಲ್.

652. ಬೇಡರ ಕುಲವು ಪ್ರಕಾಶಿಸುವಂತೆ ತತ್ತೆಯ ಬಸುರಲ್ಲಿ ಗರ್ಭವು ಉಂಟಾಗಲು, ಪ್ರತಿಮಾಸವೂ ವಿಧಿಯಂತೆ ಊನವಿಲ್ಲದ ಬಲಿಗಳನ್ನು ಕೊಟ್ಟು, ಒಂದು ವಿಧದ ಗ್ರಾಮ್ಯನರ್ತನವನ್ನಾಡುತ್ತ, ಹೀಗೆ ಒಂದೊಂದಾಗಿ ಆ ತಿಂಗಳುಗಳು ಕಳೆಯಲು, ಹಿಂದೆ ಮಾಡಿದ ಹೆಚ್ಚಿನ ತಪಸ್ಸಿನ ಫಲವಾಗಿ ಒಳ್ಳೆಯ ಸ್ವಭಾವವುಳ್ಳ ಪೂರ್ಣಚಂದ್ರನನ್ನು ಉಪ್ಪುಕಡಲು ಪಡೆದಂತೆ ತತ್ತೆಯು ಮಗನನ್ನು ಪ್ರಸವಿಸಿದಳು.

653. ಆನೆಯ ದೊಡ್ಡ ಕೋಡುಗಳಲ್ಲಿ ಉಂಟಾಗುವ ಮುತ್ತುಗಳನ್ನೂ, ಬಿದಿರಿನಲ್ಲಿ ಬೆಳೆಯುವ ನಿರ್ದೋಷವಾದ ಶೀತಲವಾದ ಮುತ್ತುಗಳನ್ನೂ, ಬೆಟ್ಟಗಳಲ್ಲಿ ಸಿಗುವ ಇತರ ರತ್ನಗಳನ್ನೂ ಬೇಡರು ಸಂತೋಷದಿಂದ ಸುರಿದರು. ಈ ಮಣಿಮಳೆಯಲ್ಲದೆ, ರೇಖೆಗಳನ್ನು ಹೊಂದಿದ ತುಂಬಿಗಳು ಎದ್ದು ಹಾರಲು, ಆಗಸದಲ್ಲಿ ಮಲರ ಮಳೆಯೂ ಎಲ್ಲೆಲ್ಲಿಯೂ ಸುರಿಯಿತು. ಸಣ್ಣ ಹರಳುಗಳುಳ್ಳ ಸಣ್ಣ ದುಡಿ[1]ಗಳಲ್ಲದೆ ದೇವ ದುಂದುಭಿಗಳೂ ಎಲ್ಲೆಲ್ಲೂ ಶಬ್ದಿಸಿದುವು.

654. ಆಗ ಶ್ರೇಷ್ಠರಾದ ಮಲೆಕೊರವರ ದೊಡ್ಡ ಕುಟುಂಬಗಳು ಬಾಳುವ ಚಿತ್ತೂರಿ[2]ನಲ್ಲಿ ವಾಸಿಸುವ ಜನರ ಕೂಟವು ಉತ್ಸವವನ್ನು ಕೊಂಡಾಡಿ ಹೆಚ್ಚು ಸಂತೋಷವನ್ನು ಹೊಂದುವ ಸಮಯದಲ್ಲಿ ಕರಿಯ ಬೆಟ್ಟವು ಕಾಳಮೇಘವನ್ನು ಮೇಲಲ್ಲಿ ಧರಿಸಿದಂತೆ ತಂದೆಯಾದ ನಾಗನು ಯುದ್ಧದಲ್ಲಿ ಸಮರ್ಥವಾದ ಬೆಟ್ಟದಂತಿರತಕ್ಕ ತನ್ನ ಉನ್ನತ ತೋಳುಗಳು ತೃಪ್ತಿಹೊಂದುವಂತೆ ಮಗನನ್ನೆತ್ತಿಕೊಂಡನು.

---

652. ಕಾನವರ್ ಕುಲಮ್ವಿ ಳಙ್ಕ ತ್ತತ್ತೈಪಾಱ್ ಕರುಪ್ಪ ನೀಟ
ವೂನಮಿಲ್ ಪಲಿಕಳ್ ಪೋಕ್ಕಿ ಯುಱುಕಟನ್ ವೆಱಿಯಾ ಟ್ಟೋಟುಮ್
ಆನವ ತ್ತಿಙ್ಕಳ್ ಚೆಲ್ಲ ವಳವಿಲ್‌ಚೆಯ್ ತವತ್ತಿ ನಾಲೇ
ಪಾನ್ಮತಿ ಯುವರಿ ಯೀನ್ಱಾ ಲೆನಮಕ ಪ್ಪಯನ್ತ್ ಪೋತು,

653. ಕರಿಪ್ಪರು ಮರುಪ್ಪಿನ್ ಮುತ್ತು ಙ್ಕಟ್ಟೈವಿಳೈ ಚೆಱುನೀರ್ ಮುತ್ತುಮ್
ಪೊರುಪ್ಪಿನಿನ್ ಮಣಿಯುಮ್ ವೇಟರ್ ಪೊಟಿತರು ಮಟಿಯೇ ಯನ್ಱಿ
ವರಿಚ್ಚುರುಮ್ ಪಲ್ಯ ವಾನಿನ್ ಮಲರ್‌ಮಟಿ ಪೊಟಿನ್ತ್ ತೆಙ್ಕುಮ್;
ಅರಿಕ್ಕುಱು ನ್ತುಟಿಯೇ ಯನ್ಱಿ ಯಮರರ್‌ತು ನ್ತುಪಿಯು ಮಾರ್ತ್ತ.

654. ಅರುವರೈ ಕ್ಕುಱವರ್ ತಙ್ಕ ಳಕನ್‌ಕುಟಿ ಚ್ಚೀಱೂ ರಾಯುಮ್
ಪೆರುವಿಱಾ ವೆಟುತ್ತು ಮಿಕ್ಕ ಪೆರುಙ್ಕಳಿ ಕೂರು ಙ್ಕಾಲೈ
ಕ್ಕರುವರೈ ಕಾಳ ಮೇಕ ಮೇನ್ತಿಯ ತೆನ್ನ ತಾತೈ
ಪೊರುವರೈ ತ್ತೋಳ್‌ಕ ಳಾರ ಪ್ಪುತಲ್ವನೈ ಯೆಟುತ್ತು ಕೊಣ್ಟಾನ್.

---

1. ದುಡಿ—ಒಂದು ವಿಧ ಉಡುಕ್ಕೆ. 2. ಚಿತ್ತೂರು—ಸಣ್ಣ ಊರು.

655. ಕಪ್ಪಗಾದ ಕಿರಣಕಾಂತಿಯನ್ನು ಪಸರಿಸಿ ಸೂಸುವ ಸುಂದರ ಶರೀರವುಳ್ಳ ಆ ಮಗುವೂ ದೊಡ್ಡ ಹುಲಿಮರಿಯಂತೆ ಒಳ್ಳೆಯದಾಗಿ ಬೆಳೆದು, ಬೇಡರುಗಳಲ್ಲಿ ಮಾತ್ರ ವಲ್ಲದೆ, ಲೋಕದಲ್ಲೆಲ್ಲಾ ಅಳತೆಗೆ ಬಾರದ ಶ್ರೇಷ್ಠ ಹಿರಿಮೆಯನ್ನು ತೋರಿಸಿ ತರುವ ಕುರುಹುಗಳನ್ನು ಎತ್ತಿ ಹೇಳತಕ್ಕ ರೀತಿಯಲ್ಲಿ ಪ್ರಕಾಶಿಸಿತು.

656. 'ಈ ಮಗುವು ಕೈಯಲ್ಲೆತ್ತುವುದಕ್ಕೆ ಭಾರವಾಗಿರುವುದರಿಂದ ತಿಣ್ಣನ್[1] ಎಂದು ಹೆಸರಿಟ್ಟು ಕರೆಯಿರಿ' ಎಂದು ನಾಗನು ಹೇಳಲು, ಬಲಿಷ್ಠರಾದ, ಬಿಲ್ಲನ್ನು ಧರಿಸಿದ ಬೇಡರು ಅಂತೆಯೇ ಘೋಷಿಸಿದರು. ಪುಣ್ಯದ ತಿರುಳಾದ ಅಸಮಾನವಾದ ಹಿರಿಮೆಗಳ ರೂಪುಳ್ಳ ಆ ಮಗುವನ್ನು ಕಣ್ಣಿಗೆ ಸುಂದರವಾಗಿ ತೋರುವಂತೆ ಆಭರಣಗಳಿಂದ ಅಂದೇ ಅಲಂಕರಿಸಿದರು.

657. ಬೆಟ್ಟದಲ್ಲಿ ವಾಸಿಸುವ ದೇವರು ರಕ್ಷೆಯಾಗಲು, ತಮ್ಮ ಬೇಡರ ಕುಲದಲ್ಲಿ ಬಂದ, ನಿರ್ದೋಷವಾದ ಹಳೆಯ ಪದ್ಧತಿಗೆ ಹೊಂದುವಂತೆ ತಕ್ಕುದಾದ ಕಾರ್ಯಗಳನ್ನೆಲ್ಲಾ ಆಸಕ್ತಿಯಿಂದ ಮಾಡಿ, ಸುವಾಸನೆಯಿಂದ ಕೂಡಿದ ಎಳೆತಳಿರುಗಳನ್ನು ತಲೆಯಲ್ಲಿ ಮುಡಿಸಿ, ಬೆಟ್ಟದ ಬೇವಿನ ಬೀಜಗಳನ್ನು ಸಾಲಾಗಿಟ್ಟು ಎಡೆಎಡೆಯಲ್ಲಿ ಕೋದ ಮುತ್ತಿನ ಚಿಪ್ಪುಗಳಿಂದ ಕೂಡಿದ ಮಾಲೆಯನ್ನು ನಡುದಾರವಾಗಿ ಕಟ್ಟಿ ಮಗುವು ಸುಂದರವಾಗಿ ಪ್ರವರ್ಧಮಾನವಾಗುವ ದಿನದಲ್ಲಿ,

---

655. ಕರುಙ್ಕತಿರ್ ವಿರಿಕ್ಕು ಮೇನಿ ಕ್ಕಾಮರು ಕುೞವಿ ತಾನು
ಮಿರುಮ್ಪುಲಿ ಪ್ಪಱೞಿ ನೋಙ್ಕಿ ಯಿಱವುಳ ರಳವೇ ಯನ್ಱಿ
ಯರುಮ್ಪೆಱ ಲುಲಕ ಮೆಲ್ಲಾ ಮಳಪ್ಪರುಮ್ ಪೆರುಮೈ ಕಾಟ್ಟ
ತ್ತರುಙ್ಕುಱಿ ಪಲವು ಚೂೞ ನ್ನನ್ಮೈಯಿಱ್ ಪೊಲಿನ್ತು ತೋನ್ಱ,

656. ಅಣ್ಣಲೈ ಕ್ಕೈಯಿ ಲೇನ್ತಿಱ್ ಕರುಮೈಯಾ 'ಲುರಿಮೈ ಪ್ಪೆರು
ನ್ತಿಣ್ಣನೆನ್ ಱಿಯಮ್ಪು' ಮೆನ್ನ ತ್ತಿಣ್ಚಿಲೈ ವೇಟ ರಾರ್ತ್ತಾರ್;
ಪುಣ್ಣಿಯ ಪ್ಪೊರುಳಾ ಯುಳ್ಳ ಪೊರುವಿಲ್ಚೀ ರುರುವಿ ನಾನೈ
ಕ್ಕಣ್ಣಿನು ಕ್ಕಣಿಯಾ ತ್ತಙ್ಕಳ್ ಕಲನ್ಪಲ ವಣಿನ್ತಾ ರನ್ಱೇ.

657. ವರೈಯುಱೈ ಕಟವುಟ್ ಕಾಪ್ಪು ಮಱಕ್ಕುಟಿ ಮರಪಿ ಱ್ಱಙ್ಕಳ್
ಪುರೈಯಿಱ್ಱೀರ್ ಮುಱೈಮೈ ಕ್ಕೇಱ್ಪ ಪ್ಪೊರುನ್ತುವ ಪೋಱ್ಱಿ ಚ್ಚೆಯ್ತು
ವಿರೈಯಿಳ ನ್ತಳಿರು ಚೂಟ್ಟಿ ವೇಪ್ಪಿಱ್ಱಿ ತ್ತಿಟ್ಟೈಯೇ ಕೋತ್ತ
ವರೈಮಣಿ ಕ್ಕವಟಿ ಕಟ್ಟಿ ಯೞಕುಱ ವಳರ್ಕ್ಕು ನಾಳಿಲ್,

---

1. ತಿಣ್ಣನ್—ಪರಾಕ್ರಮಿ.

658. ಅದರ ಮೇಲೆ ಕ್ರಮವಾಗಿ ಬರುವ ಪರ್ವಗಳಲ್ಲಿ ಸೌಭಾಗ್ಯಾತಿಶಯದ ಉತ್ಸವದೊಡನೆ ದೈವಗಳಿಗೆ ಬಲಿಗಳನ್ನು ಕೊಟ್ಟು ಆಯಾ ಕಾಲಗಳಲ್ಲಿ ಮಂಗಲ ವಾದ್ಯಗಳು ಮೇಲೆ ಮೇಲೆ ಶಬ್ದಿಸಲು, ಬಂದು ಕೂಡಿದ ಬೇಡರಿಗೆಲ್ಲಾ ದೊಡ್ಡ ಸಂತೋಷದ ಆಟದಿಂದ ಆನಂದವನ್ನು ಮಾಡಿ ಪ್ರೀತಿಯಿಂದ ಮಗನನ್ನು ಪಡೆದುದ ರಿಂದಾದ ಆಶೆಯಿಂದ ಸಂಭ್ರಮವನ್ನು ನಡೆಸಿದರು.

659. ಒಂದು ವರ್ಷ ಕಳೆದು ಮರು ವರ್ಷ ಬಂದಮೇಲೆ ಹೆಜ್ಜೆಯ ನಡುಗು ವಿಕೆಯು ನೀಗಿ ಎಳನಡಿಗೆಯ ಪರ್ವವು ಬಂದಿತು. ಆಗ ಕೆಂಪಗಾದ ಸಣ್ಣ ಕೂದಲು ಗಳುಳ್ಳ ತಲೆಯಲ್ಲಿ ಶೋಭಿಸುವಂತೆ ಹುಲಿಯುಗುರಿನ ಆಭರಣವನ್ನಿಟ್ಟು, ಉಕ್ಕಿ ಏಳುವ ಕೋಪವುಳ್ಳ ಕೆಂಗಣ್ಣಿನ ಮುಳ್ಳುಹಂದಿಯ ಮುಳ್ಳನ್ನು ತೆಗೆದು ಎಡೆಎಡೆಯಲ್ಲಿ ಹಗ್ಗ ದಲ್ಲಿ ಸುರಿದ ಹುಲಿಹಲ್ಲುಗಳ ಮಾಲೆಯನ್ನು ನಲ್ಮೆಯು ಹೆಚ್ಚಾಗಿರುವ ಎದೆಯಲ್ಲಿ ನೇತಾಡುವಂತೆ ಅಲಂಕರಿಸಿ,

660. ಹಸುರಾದ ಕಾಂತಿಯುಳ್ಳ ರತ್ನಗಳೊಡನೆ ಇತರ ಹಲವಿಧದ ರತ್ನ ಗಳನ್ನೂ ಕೋದ ಕಾಲಗೆಜ್ಜೆಯು ಶಬ್ದಿಸಲು, ಕಾಸುಗಳೊಡನೆ ಕೂಡಿ ಕಟ್ಟಿದ ಆಭರಣ ಗಳಿಂದ ಸೇರಿದ ಉಡುದಾರವನ್ನು ಕಟ್ಟಿ, ಪ್ರಕಾಶಿಸುವ ಆನೆಯ ದಂತದಿಂದ ಮಾಡಿದ ಕಾಲದಂಡೆಯನ್ನು ತೊಡಿಸಿ, ರತ್ನಗಳು ತುಂಬಿದ ಕರ್ಣಾಭರಣವು ಪ್ರಕಾಶಿಸಲು, ಹೀಗೆ ಅಲಂಕೃತವಾದ ಮಗುವು ದೋಷರಹಿತವಾದ ಇಂತಹ ದಿವ್ಯರೂಪವನ್ನು ನೋಡುವವರಿಗೆ ಕಾಣಿಸಿಕೊಂಡು ಬೀದಿಯಲ್ಲಿ ಆಡುತ್ತಿರುತ್ತಿತ್ತು.

---

658. ವರುಮುಱೈ ಪ್ಪರುವ ನ್ನೋತ್ತೀಱುಮ್ ವಳಮಿಕು ಚಿಱಪ್ಪಿ ಱ್ಱೆಯ್ದ
ಪ್ಪೆರುಮಟೈ ಕೊಟುತ್ತು ತ್ತೊಕ್ಕ ಪೆರುವಿಱಲ್ ವೇಟರ್ ಕೆಲ್ಲಾ
ನ್ನಿರುಮಲಿ ತುಟನಿ ಪೊಙ್ಕ ಚ್ಚೆಱುಙ್ಕಳಿ ಮಕಿಟ್ಚ್ಚಿ ಚೆಯ್ದೇ
ಯರುಮ್ಮೈಯಿಱ್ ಪುತಲ್ವರ್ ಪ್ಪೆಱ್ಱ ವಾರ್ವಮು ನೋನ್ಱ ವುಯ್ತ್ತಾರ್.

659. ಆಣ್ಟೆತಿ ರಣ್ಣೈನ್ತು ಚೆಲ್ಲ ವಿಟುಮಟಿ ತ್ತಳರ್ವು ನೀಙ್ಕಿ
ಪ್ಪೂಣ್ಟಿಕಟ್ ಚಿಱುಪುನ್ ಕುಞ್ಚಿ ಪ್ಪುಲಿಯುಕಿರ್ ಚ್ಚುಟ್ಟಿ ಚಾತ್ತಿ
ಮೂಣ್ಟೆಟು ಚಿನತ್ತು ಚ್ಚೆಙ್ಕಣ್ ಮುಳವುಮು ಳ್ಳರಿನ್ತು ಕೋತ್ತ
ನಾಣ್ಟರು ಮೆಯಿಱು ತ್ತಾಲಿ ನಲಙ್ಕಿಳರ್ ಮಾರ್ಪಿ ಱಙ್ಕ,

660. ಪಾಚೊಳಿ ಮಣಿಯೋ ಟಾರ್ತ್ತ ಪನ್ಮಣಿ ಚ್ಚತಙ್ಕೈ ಯೇಙ್ಕ
ಕ್ಕಾಚೊಟು ತೊಟುತ್ತ ಕಾಪ್ಪು ಕ್ಕಲನ್ಪುನೈ ಯರೈಞಾಣ್ ಚೇರ್ತ್ತಿ
ತ್ತೇಚುಟೈ ಮರುಪ್ಪಿ ಱಣ್ಟೈ ಚೆಱಿಮಣಿ ಕ್ಕುತಮ್ಪೈ ಮಿನ್ನ
ಮಾಚಱು ಕೋಲ ಙ್ಕಾಟ್ಟಿ ಮಱುಕಿಟೈ ಯಾಟು ನಾಳಿಲ್,

661. ಅದನ್ನು ನೋಡಿ ಶೀತಲವಾದ ಮಲರಮಾಲೆಯನ್ನು ಮುಡಿದ ತಂದೆಯೂ ತಾಯಿಯೂ ಸಂತೋಷಿಸುತ್ತಿದ್ದರು. ಹೀಗೆಯೇ ತಳರ್ನಡೆಯನ್ನು ನಡೆದುಬಂದು, ಪುಣ್ಯಪ್ರದವಾದ ಗಂಗೆಯ ನೀರಿಗಿಂತಲೂ ಪವಿತ್ರವಾದ ಬಾಯ್ನೀರಿನಲ್ಲಿ ಒಳಗೆ ನೆನೆದು ಅಮೃತವಾಗಿಸಿ ಹೊರಬರುವ ಇನಿದಾದ ತೊದಲು ಮಾತುಗಳನ್ನು ಸುಂದರವಾದ ಮೆಲ್ಲಿಯ ಕೆಂಪಾದ ಬಾಯನ್ನು ಅಲುಗಾಡಿಸಿ ಹೇಳುತ್ತ, ಮಗುವು ಬೆಳೆಯುತ್ತಿತ್ತು.

662. ಯುದ್ಧಮಾಡುವ ಹುಲಿಯಾದ ಕೊಳ್ಳಿಯ ಮೃಗದ, ತೆರೆದ ವಿಶಾಲ ವದನವನ್ನು ಸಣ್ಣ ಗುಹೆಯೆಂದು ಅಭಿಪ್ರಾಯಪಟ್ಟು, ತನ್ನ ಸುಂದರವಾದ ಕೈಯನ್ನು ಅದರೊಳಗೆ ನೀಡಲು, ಪ್ರೀತಿಮಿಕ್ಕ ತಂದೆಯು ಅದನ್ನು ಕಂಡು ಪರಿತಾಪಪಟ್ಟು ಹಸುರೆಲೆ ಗೊಂಚಲನ್ನು ಕೈಯಲ್ಲಿ ಕೊಂಡು ಮಗುವನ್ನು ಮೆಲ್ಲನೆ ತಟ್ಟಿ ನಿವಾರಿಸಲು, ಈ ದುಃಖದಿಂದ (ಶಿವನ ಕಣ್ಣುಗಳಾದ) ಸೂರ್ಯಚಂದ್ರರಿಗೆ ಉಂಟಾದ ಕಷ್ಟವನ್ನು ತೀರಿಸುವ[1] ಚೆಲುವು ವರ್ಧಿಸುವ ಕಣ್ಣುಗಳಲ್ಲಿ ನೀರು ತುಂಬಿ ಬರುವ ಹನಿಮುತ್ತನ್ನು ತಾಯಾದ ತತ್ತೆಯು ಬಾಯಿಮುತ್ತನ್ನು ಕೊಟ್ಟು ಬದಲಿಸಿಕೊಳ್ಳುವಳು.

663. ಆ ಮಗುವು ಉಡುಕ್ಕಿನಂತೆ ಇರುವ ಮರದ ಕೊರಡನ್ನು ಉರುಳಿ ಓಡಿಸುವುದು. ನಾಯನ್ನು ಕಟ್ಟಿದ ಹಗ್ಗವನ್ನು ಸುತ್ತಿ ಹಿಡಿದು ತುಂಡುಮಾಡುವುದು. ಬೇಡಬಾಲಕಿಯರು ಆಡಲು ಕಟ್ಟಿದ ಸಣ್ಣ ಮನೆಗಳನ್ನು ತನ್ನ ತಳಿರಿನಂತಹ ಸಣ್ಣ ಪಾದಗಳಿಂದ ಅಳಿಸುವುದು. ಪಕ್ಕದಲ್ಲಿ ಕೂಡಿದ ಬೇಡಬಾಲಕರೊಡನೆ ಸೇರಿ ಆ ಸಣ್ಣ ಊರಲ್ಲಿ ತುಂಬಿದ ಗುಡಿಸಲುಗಳಲ್ಲೆಲ್ಲಾ ಸಣ್ಣ ನಡೆಯ ಚೇಷ್ಟೆಯಾಟಗಳನ್ನೆಲ್ಲ ಮಾಡುವುದು.

---

661. ತಣ್ಮಲ ರಲಙ್ಕ ಲ್ತಾತ್ತೈ ತಾಯ್ಮನ ಙ್ಕಳಿಪ್ಪ ವನ್ದು
ಪುಣ್ಣಿಯ ಕ್ಕಙ್ಕೈ ನೀರಿಙ್ ಪುನಿತಮಾ ನ್ದಿರುವಾಯ್ ನೀರಿ
ಲುಣ್ಣನೈ ನ್ದಮುತ ಮೂಱಿ ಯೊೞುಕಿಯ ಮೞಲೈ ತ್ತೀಙ್ಚೊಲ್
ವಣ್ಣಮೆನ್ ಕುತಲೈ ಚೆವ್ವಾಯ್ ಕುತಟ್ಟಿಯೇ ವಳರಾ ನಿನ್ಱಾರ್.

662. ಪೊರುಪುಲಿ ಪ್ಪಾರ್ವೈ ಪ್ಪೇೞ್ವಾಯ್ ಮುೞೈಯೆನ ಪ್ಪೊಙ್ಕಿ ನೀಟ್ಟ
ಪ್ಪರಿವುಟ್ಟೈ ತ್ತನ್ದೈ ಕಣ್ಟು ಪ್ಪೆನ್ದೞೈ ಕೈಕ್ಕೊ ಣ್ಟೋಚ್ಚ
ವಿರುಚುಟರ್ ಕ್ಕುಱುಕ ಣ್ಡೀರ್ಕ್ಕು ಮೆೞಿಲ್ವಳರ್ ಕಣ್ಣೀರ್ ಮಲ್ಕಿ
ವರುತುಳಿ ಮುತ್ತ ಮತ್ತಾಯ್ ವಾಯ್ಮುತ್ತ ಙ್ಕೊಳ್ಳ ಮಾೞಿ.

663. ತುಟಿಕ್ಕುೞಿ ಟುರುಟ್ಟಿ ಯೋಟಿ ತ್ತೊಟಕ್ಕುನಾಯ್ ಪ್ಪಾಚ ಙ್ಚೂೞಿ
ಪಿಟಿತ್ತಱು ತ್ತೆಯಿನ್ನೈ ಪ್ಪಿಳ್ಳೈ ಪ್ಪೇತೈಯ ರಿೞೈತ್ತ ವಣ್ಟ
ಲಟೆಚ್ಚಿಱು ತಳಿರಾಙ್ ಚೆನ್ದು, ಯರುಕುಱು ಚೆಱುವ ರೋಟು
ಙ್ಕುಟೆಚ್ಚಿೞಿ ಕುರವ್ಪ್ಪೈ ಯೆಙ್ಕು ಙ್ಕುಱುನಟೈ ಕ್ಕುಱುಮ್ಪು ಚೆಯ್ದು.

---

1. ಇದರಿಂದ ಮುಂದೆ ಬರುವ ಅವರ ಕಣ್ಣಿನ ದಾನವನ್ನು ಸಂಕೇತದಿಂದ ಸೂಚಿಸಿದಂತಾಯಿತು.

664. ಈ ರೀತಿಯ ಹಲವಾಟಗಳನ್ನಾಡುತ್ತ ಐದು ವರ್ಷಗಳು ತುಂಬಿದುವು. ಅದರ ಮೇಲೆ ಬರುವ ಆರನೇ ವರ್ಷದಲ್ಲಿ ಕಿತ್ತೆಬ್ಬಿಸಿದ ಚರ್ಮದ ಬಾರನ್ನೂ ಕಣ್ಣಿಯನ್ನೂ ಕೊಂಡು ಹೆಚ್ಚಾದ ಅಧರ್ಮದಿಂದ ಬೇಡಬಾಲಕರೊಡನೆ ಮಲರುಗಳು ತುಂಬಿದ ಗೆಲ್ಲುಗಳಿರುವ ಮರಗಳು ಬೆಳೆದ ಉದ್ಯಾನಗಳಲ್ಲಿ ಆಡಿಯೂ, ಕುಟುಂಬಗಳು ತುಂಬಿದ ಬೆಟ್ಟಗಾಡಿನ ಸಣ್ಣ ಊರುಗಳನ್ನು ಸುತ್ತಿ ಆನೆ ಕೊಂಬುಗಳಿಂದ ಮಾಡಿದ ಉಟಿಲೆಯ[1] ಮೂಲಕವಾಗಿ ಆ ಬಾಲಕನು ಬೇಲಿಯ ಹೊರಗೆ ಬಂದು ಸಣ್ಣ ಕಾಡನ್ನು ಸೇರುವನು.

665. ಅಲ್ಲಿ ಆ ಬಾಲಕನು ಮಿಕ್ಕ ವೇಗವುಳ್ಳ ಮೊಲದ ಮರಿ, ಕಾಡುಹಂದಿಯ ಮರಿ, ಹುಲಿಮರಿ, ಜೋಲುವ ಕಿವಿಗಳಿಂದ ಕೂಡಿದ ಕೆಂಪಗಾದ ಕಾಡುನಾಯಿಯ ಮರಿ, ಇವುಗಳ ಹಿಂದೆ ಶೀಘ್ರವಾಗಿ ವೇಗದಿಂದ ಓಡಿ, ಇವುಗಳನ್ನು ಹಿಡಿದು ತನ್ನ ಮನೆ ಬಾಗಿಲ ಇದಿರ ಮರಗಳಿಗೆ ಕಟ್ಟುವನು. ಈ ರೀತಿ ತಿಣ್ಣನು ಬೆಳೆಯಿಸಿದ ಪ್ರಾಣಿಗಳು ಲೆಕ್ಕವಿಲ್ಲದಷ್ಟು.

666. ಬೇಡರ ಕುಲದಲ್ಲಿ ಬಂದ ಮುದಿಯವಳಾದ ಕುರತ್ತಿಯು ಸೂರ್ಯ ಕಿರಣಗಳ ಪ್ರಕಾಶವು ಬಿರಿದು ಶೋಭಿಸುವ ಹಗಲು ಕಳೆದ ಸಂಜೆಹೊತ್ತಿನಲ್ಲಿ ಸಾಸಿವೆ ಹೊಗೆಯನ್ನು ದೃಷ್ಟಿತೆಗೆಯಲಿಕ್ಕಾಗಿ ನಿವಾಳಿಸಿ, ಉಣಿಸನ್ನು ಕೊಟ್ಟು, ಈ ಬಾಲಕನನ್ನು ಎತ್ತಿಕೊಂಡು ಮಡಿಲಲ್ಲಿಟ್ಟು ನಿದ್ರೆಮಾಡಿಸಿ, ರಾತ್ರಿಕಾಲವು ಕಳೆದಮೇಲೆ ಮಾಂಸದ ಆಹಾರವನ್ನು ಕೊಟ್ಟು, ಆಮೇಲೆ ಆತನು ಮಾಡುವ ಬಾಲರಾಟದಲ್ಲಿ ಅಭ್ಯಾಸವನ್ನು ಮಾಡುವಂತೆ ಬಿಡುತ್ತಿದ್ದಳು. ಈ ರೀತಿ ಕೆಲವರ್ಷಗಳು ಕಳೆಯಲು ತಿಣ್ಣನು ಬಿಲ್ಲು ವಿದ್ಯೆಯನ್ನು ಅಭ್ಯಸಿಸುವ ಪರ್ವವನ್ನು ಮುಟ್ಟಿದನು.

---

664. ಅನ್ನೈಯುನ ಪಲವು ಇೞ್ಚೈಯ್ತ್ತೋ ಯ್ಯೆನ್ನಿನ್ಱ್‌ಮೋ ಲಾನ ವಾಣ್ಟಿನ್
ವನ್ನೈತರು ವಟಿವಾರ್ ಕಣ್ಣಿ ಮಱಿಚ್ಚಿಱು ಮ್ಯೆನ್ಱ ರೋಟು
ಇೞ್ಚಿನೈಮಲರ್ ಕ್ಕಾವು ಳಾಟಿ ಚಿಱಿಕುಟಿ ಕ್ಕುರಿಚ್ಚಿ ಚೂೞ್ನ್ಱ
ಪುನ್ನೈಮರು ಪ್ಪಟಿಲ್ಯೆ ವೇಲಿ ಪ್ಪುಱಿಚ್ಚಿಱು ಕಾಣಿಱ್ ಪೋಕಿ,

665. ಕಟುಮುಯಱ್ ಪಱಿಟಿ ನೋಟು ಱಾಕನವೇ ನತ್ತಿನ್ ಕುಟ್ಟ
ಕೊಟುವರಿ ಕ್ಕುರುಳೈ ಚೆನ್ನಾಯ್ ಕ್ಕೊಟುಞ್ಚೆವಿ ಚ್ಚಾಪ ಮಾನ
ಮುಟುಕಿಯ ವಿಚ್ಚೈಯಿ ಲೋಟಿ ತ್ತೊಟರ್‌ನ್ಱಟನ್ ಪಱ್ಱಿ ಮುಱ್ಱ
ತ್ತಿಟುಮಾ ತ್ತಿರಳಿಱ್ ಕಟ್ಟಿ ವಳರ್‌ಪ್ಪನ ವೆಣ್ಣಿ ಲಾತ.

666. ಅಲರ್‌ಪಕಲ್ ಕಟಿನ್ಱ ವನ್ತಿ ಯ್ಯೆಯವಿ ಪ್ಪುಕೈಯು ಮಾಟ್ಟಿ
ಕ್ಕಲಮತು ಕುಱಿತ್ತ ಯೂಟ್ಟಿ ಕೊಣ್ಟುಕ ಣ್ಟುಯಿಱ್ಱಿ ಕ್ಕಱ್ಕುಲ್
ಪುಲರವೂ ನುಣವು ನಲ್ಕಿ ಪ್ಪುರಿವಿಳೈ ಯಾಟ್ಟಿನ್ ವಿಟ್ಟು
ಚ್ಚಿಲಮುಱಿಚ್ಚೈ ಯಾಣ್ಟು ಚೆಲ್ಲ ಚ್ಚಿಲೈಪಯಿಲ್ ಪರುವ ಇೞ್ಚೇರ್‌ನ್ತಾರ್.

---

1. ಉಟಿಲೆ = ಸುತ್ತುವ ಬಾಗಿಲು (ತುಳು : ಉರೋಳು).

667. ಮಗನು ತಕ್ಕ ರೀತಿಯಲ್ಲಿ ಬಿಲ್ವಿದ್ಯೆ ಅಭ್ಯಾಸಮಾಡತಕ್ಕ ಪರ್ವವನ್ನು ಹೊಂದಿದುದನ್ನು ನೋಡಿ, ತಂದೆಯು ಮನವಿಕ್ಕು ಸಂತೋಷಿಸಿ, ತನ್ನ ತೋರವಾದ ತೋಳುಗಳಿಂದ ಮಗನನ್ನಾಲಿಂಗಿಸಿಕೊಂಡು, ಆತನಿಗೆ ಬಿಲ್ವಿದ್ಯೆ ಅಭ್ಯಾಸಮಾಡಿಸಲು ಎಣಿಸಿ, ಮೊದಲೇ ಆ ಮಾರ್ಗದಲ್ಲಿ ಅನುಭವವೃದ್ಧರನ್ನು ಕರೆದು ಕೂಡಿಕೊಂಡು, ಅವರೊಡನೆ ಆರಯ್ದು, ಅದಕ್ಕೆ ತಕ್ಕ ಒಳ್ಳೆಯ ದಿನವನ್ನು ನಿಶ್ಚಯಿಸಿ, ಆ ವೃತ್ತಾಂತ ವನ್ನೆಲ್ಲಾ ಅಧರ್ವಿಗಳಾದ ಬೇಡರುಗಳಿಗೆ ಹೇಳಿಬಿಟ್ಟನು.

668. ಬೇಡರ ಅರಸನಾದ ನಾಗನು 'ಜಯಯುಕ್ತವಾದ ಸುಬ್ರಮಣ್ಯನ ಅನುಗ್ರಹದಿಂದ ಪಡೆದ ಬುದ್ಧಿಶಾಲಿಗಳಿಗಿಂತಲೂ ಹೆಚ್ಚಿನ ಶ್ರೇಷ್ಠ ಕಾರ್ಯವುಳ್ಳ ತಿಣ್ಣ ನವರು ಬಿಲ್ಲುಹಿಡಿಯುವರು' ಎಂದು ಜಯಸೂಚಕವಾದ ಉಡುಕ್ಕೆಯನ್ನು ಶಬ್ದಿಸಿಯೂ, ಮಾತಿನಿಂದಲೂ ಸಾರಿದ ದೊಡ್ಡ ಧ್ವನಿಯನ್ನು ಪಕ್ಕದ ಮಲೆಗಳನ್ನಾಳುವ ಬೇಡ ನಾಯಕರೆಲ್ಲರೂ ಕೇಳಿದರು.

669. ಒಡನೆಯೇ ಬೆಟ್ಟಗಳಲ್ಲಿ ಉಂಟಾಗುವ ವಸ್ತುಗಳಾದ ರತ್ನ, ಚಿನ್ನ, ಮುತ್ತುಗಳನ್ನೂ, ಹುಲಿತೊಗಲು, ಇದಿರಿಸಿದವರನ್ನು ಕೊಲ್ಲುವ ಆನೆಯ ಕೊಂಬು, ನವಿಲಗರಿಯ ಕಟ್ಟುಗಳು, ಜೇನು, ಲೆಕ್ಕವಿಲ್ಲದ ಹಲಬಗೆಯ ಕಳ್ಳು, ಫಲ, ಗೆಣಸು— ಇವುಗಳನ್ನು ಬಿಲ್ವಿದ್ಯೆಯಲ್ಲಿ ಪರಿಣತರಾದ ಬೇಡರುಗಳು ಎತ್ತಿಕೊಂಡು ಹಲದೆಸೆಗಳಿಂದ ಬಂದರು.

---

667. ತನ್ನೈಯಯು ಮೈನ್ತ ನಾರೈ ನೋಕ್ಕಿತ್ತನ್ ಱಟಿತ್ತ ತೋಳಾಱ್
ಚಿನ್ನೈಯಯುಣ್ ಮಕಿಟಿ ಪ್ಪುಲ್ಲಿ ಚ್ಚಿಲೈತ್ತೊಟಿಲ್ ಪಯಿಱ್ಱ ವೇಣ್ಟಿ
ಮುನ್ನೈಯ ತ್ತುಱೈಯಿನ್ ಮಿಕ್ಕ ಮುತಿಯುರೈ ಯಟೈತ್ತು ಕ್ಕೂಟ್ಟಿ
ನನ್ನಾಟ್ ಕುಱಿತ್ತ ತೆಲ್ಲಾ ಮಱವರ್ಕ್ಕು ಚ್ಚೊಲ್ಲಿ ವಿಟ್ಟಾನ್.

668. 'ವೇಟರ್ತ ಱೈಯ್ಯಮಾ ನಾಕನ್ ವೆನ್ಱಿವೇ ಳರುಳಾಱ್ ಪೆಱ್ಱ
ಚೇಟರಿನ್ ಮಿಕ್ಕ ಚೆಯಲ್ಕೈ ತ್ತಿಣ್ಣನ್ವಿಲ್ ಪಿಟಿಕ್ಕಿನ್ ಱಾನೆನ್
ಱಾಟೆಯ ಱಟಿಯು ಱಾಱ್ಱಿ ಯಱೈನ್ತಪೇ ರೋಚೈ ಕೇಟ್ಟು
ಮಾಟುಯರ್ ಮಲೈಕ ಳಾಳು ಮಱಕ್ಕುಲ ತ್ತಲೈವ ರೆಲ್ಲಾಮ್,

669. ಮಲೈಪಟು ಮಣಿಯುಮ್ ಪೊನ್ನು ನ್ತರಳಮುಮ್ ವರಿಯಿನ್ ಱೋಲು
ಱೈಕ್ಕೊಲೈಪುರಿ ಕಳಿಱ್ಱು ಕ್ಕೋಟುಮ್ ಪೀಲಿಯಿನ್ ಕುವೈಯು ನ್ತೇನು
ನ್ತೊಲೈವಿಲ್ಪ ನ್ನಱವು ಮೂನುಮ್ ಪಲಙ್ಕಳಾ ಱೈಕಿಱಙ್ಕು ನ್ತನ್ಱಿ
ಚ್ಚಿಲೈಪಯಿಲ್ ವೇಟರ್ ಕೊಣ್ಟು ತಿಚೈತೊಱು ನೆರುಙ್ಕ ವನ್ತಾರ್.

670. ಮೇಲೆ ಹೇಳಿದಂತೆ ವಿಪುಲವಾದ ಎಲ್ಲಾ ಭಾಗ್ಯಗಗಳೂ ಪೂರ್ಣವಾಗಿರುವುದರಿಂದ ತನಗೆ ಸಮಾನವಿಲ್ಲದ ಆ ಸಣ್ಣ ಊರಿನ ಎಲ್ಲೆಯೊಳಗೆ ಅಡಕವಾಗದಷ್ಟು ಜನ ಬೇಡರು ಎಲ್ಲೆಲ್ಲಿಯೂ ಬಂದು ಕೂಡಿದರು. 'ಎಲ್ಲೆಲ್ಲಿಯೂ ಹಲ ಹಿರಿಯ ನಂಟರಿಷ್ಟರು ಕೂಡಿ ಕೊಂಡಾಡಲು ದೈವಕ್ಕೆ ಹಲವು ಬಲಿಹರಕೆಗಳನ್ನು ಮಾಡಿಕೊಂಡು ಬಿಲ್ಲ ಅಭ್ಯಾಸದ ಆರಂಭೋತ್ಸವವನ್ನು ಮಾಡುವವರಾಗಿ' ಎಂದು ಬೇಡರರಸನಾದ ನಾಗನು ಹೇಳಿದನು.

671. ಕೆಲಸಗಾರರು ತಕ್ಕ ರೀತಿಯಿಂದ ಆಯುಧಗಳನ್ನು ಸರಿಪಡಿಸಿ ತಾಳಲು, ಮಧುವಿನೊಡನೆ ಅರಳುವ ಕೊನ್ರೈ ಹೂಮಾಲೆಯನ್ನು ಅಲಂಕರಿಸಿಕೊಂಡ ಶಿವ ಪರಮಾತ್ಮನ ಸುವರ್ಣಗಿರಿಯಾದ ದಿವ್ಯಧನುಸ್ಸು, ಅವರಿಗೆ ಹಾಲ್ಗಡಲ ಅಮೃತವನ್ನು ವಿಷವಾಗಿಸಲು, ಇವರ ಕೈಯಲ್ಲಿ ಬಂದಮೇಲೆ, ಅದಕ್ಕೆ ಪರಿಹಾರವಾಗಿ ಅವರಿಗೆ ಕಾಡಿನಲ್ಲುಳ್ಳ ಮೃಗಗಳ ಮಾಂಸವನ್ನು ಭೋಜನವಾಗಿ ತರಲು ಸಾಧನವಾದ ಆ ಧನುಸ್ಸಿಗೆ ಹಗ್ಗವನ್ನು ಸೇರಿಸಿದರು.

672. ಧನುಸ್ಸಿಗೆ ಸೇರಿಸಿ ಕಟ್ಟಿದ ಹಗ್ಗದಂತಹ ಬಲವಾದ ಹುಲಿಯ ನರದಿಂದ ಮಾಡಲ್ಪಟ್ಟ ಉತ್ತಮವಾದ ಹಗ್ಗವನ್ನು ಒಳ್ಳೆಯ ಸಮಯದಲ್ಲಿ ನಾಗನಾರನು ಪಡೆದು, ಬೆಟ್ಟದಲ್ಲಿ ವಾಸಿಸುವರಾದ ಬೇಡರ ಕುಲವು ಪ್ರಕಾಶಿಸಲು ಅವತರಿಸಿದ ವಿಶೇಷವಾದ ಬೆಟ್ಟದಂತಿರುವ ತಿಣ್ಣನ ಸುಂದರವಾದ ಮುಂಗೈಯಲ್ಲಿ ರಕ್ಷೆಯಾಗಿ ಕಟ್ಟಿದನು. ಮಲೆವಾಸಿಗಳಾದ ಆ ಬೇಡಜನರೆಲ್ಲರೂ ವಂಶಕ್ಕುಚಿತವಾದ ಆಶೀರ್ವಾದಗಳನ್ನು ಹೇಳಿ ಹರಸಿದರು.

---

670. ಮಲ್ಕಿಯ ವಳಙ್ಕ ಳೆಲ್ಲಾ ನಿಱೈನ್ದಿಟ ಮಾಱಿಲ್ ಚೀಱೂ
ರೆಲ್ಲೈಯಿ ಲಟಙ್ಗಾ ವಣ್ಣ ಮಿಾಣ್ಟನರ್ ಕೊಣರ್ನ್ದಾ ; ರೆಙ್ಗುಮ್
'ಪಲ್ಪೆರು ಙ್ಕಿಳೈಞರ್ ಪೋಱ್ಱ ಪ್ಪರಾಯ್ಕ್ಕಟನ್ ಪಲವು ಞಾರ್ತ್ತಿಯ್ತು
ವಿಲ್ಪಿಟಿ ವೆಟುಕ್ಕ' ವೆನ್ಱು ವಿಳಮ್ಬಿನಾನ್ ವೇಟರ್ ಕೋಮಾನ್.

671. ಪಾನ್ಮೈಯಿಱ್ ಚಮೈತ್ತು ಕ್ಕೊಣ್ಟ ಪಟೈಕ್ಕಲಮ್ ವಿನೈಞ ರೇನ್ದ
ತ್ತೇನಲರ್ ಕೊನ್ಱೈ ಯಾರ್ತ ನ್ದಿರುಚ್ಚಿಲೈ ಚ್ಚೆಮ್ಪೊನ್ ಮೇರು
ವಾನತು ಕಟಲಿ ನಞ್ಚ ಮಾಕ್ಕಿಟ ವವರ್ಕ್ಕೇ ಪಿನ್ನು
ಙ್ಞಾನವೂ ವಮುತ ಮಾಕ್ಕು ಙ್ಚಿಲೈಯಿನೈ ಕ್ಕಾಪ್ಪು ಚ್ಚೇರ್ತ್ತಾರ್.

672. ಚಿಲೈಯಿನೈ ಕ್ಕಾಪ್ಪು ಕಟ್ಟು ನ್ದಿಣ್ಪುಲಿ ನರಮ್ಪಿಱ್ ಚೆಯ್ತ
ನಲಮಿಕು ಕಾಪ್ಪು ನನ್ನಾ ಣಾಕನಾರ್ ಪಯನ್ದ ನಾಕರ್
ಕುಲಮ್ವಿಳ ಙ್ಕರಿಯ ಕುನ್ಱಿನ್ ಕೋಲಮುನ್ ಕೈಯಿಱ್ ಚೇರ್ತ್ತಿ
ಮಲೈಯಱಿ ಮಾಕ್ಕ ಳೆಲ್ಲಾಮ್ ವಾಟ್ತ್ತೆಟು ತ್ತಿಯಮ್ಬಿ ನಾರ್ಕಳ್,

673. ಗಿರಿಯಲ್ಲಿ ಬೆಳೆದ ಬತ್ತದ ಅನ್ನ, ಬೇರೆ ಬೇರೆ ಬಗೆಯ ಹುಲ್ಲುಗಳಲ್ಲಾಗುವ ಧಾನ್ಯದ ಅನ್ನ, ಬೆಟ್ಟಗಳಲ್ಲಿ ಹೆಚ್ಚಾಗಿ ಬೆಳೆಯುವ ಒಂದು ಜಾತಿಯ ಉತ್ತಮ ಅನ್ನ, ಬಿದಿರಕ್ಕಿಯ ಅನ್ನ—ಇವುಗಳನ್ನು ಪಾಕವಿದ್ಯೆಯಲ್ಲಿ ಪರಿಣತರಾದ ಬೇಡರು ಅಡುಗೆ ಮಾಡಿ, ಆ ಅನ್ನದೊಡನೆ ಮಾಂಸವನ್ನೂ ಗೆಣಸನ್ನೂ ಸೇರಿ ಕಲಸಿ ಕೃತಕಾದ್ರಿಯಂತೆ ರಾಶಿ ಹಾಕಲು, ಬಿಲ್ಲನ್ನು ತಾಳಿದ ಕೋಪಸ್ವಭಾವವುಳ್ಳ ಬೇಡರು ಎಲ್ಲೆಡೆಯಲ್ಲಿಯೂ ಉಣ್ಣಲು ಬಂದು ಕೂಡಿಕೊಂಡರು.

674. ಕೆಂಪು ತಿನೆ[1]ಯನ್ನೂ ಜೇನನ್ನೂ ಕೂಡಿ ಉಣ್ಣುವವರು, ಬೆಂದ ಮಾಂಸವನ್ನು ಜೇನಿನಲ್ಲಿ ನೆನೆದು ಉಂಬುವರು, ಬೇಲದ ಹಣ್ಣನ್ನು ಜೇನು ಸೇರಿಸಿ ಕಲಸಿ ಉಂಡೆ ಮಾಡಿ ಉಣ್ಣುವವರು, ಸತ್ತುಬಿದ್ದ ಗೆದ್ದಲುಹುಳದ ಉಣಿಸನ್ನು ಆಸೆಯಿಂದ ಉಣ್ಣುವವರು—ಈ ರೀತಿ ಬೇರೆ ಬೇರಾದ ಲೆಕ್ಕವಿಲ್ಲದ ಹಲ ಆಹಾರಗಳನ್ನುಣ್ಣುವವರು ಅಗಣಿತರಾದ ಬೇಡರು.

675. ಆ ಊರಲ್ಲಿರುವವರೂ ಬೆಟ್ಟದ ಪಕ್ಕದೆಡೆಗಳಿಂದ ಬಂದವರೂ ಆ ಬೇಡರು. ತಂತಮ್ಮ ಊರಿಗೂ, ತಂತಮ್ಮ ಒಡಲಿಗೂ ತಕ್ಕುದಾದ ಆಹಾರವನ್ನು ತುಂಬಾ ಉಂಡು ತೇಗಿದ ಎಲ್ಲಾ ಬೇಡ ಬೇಡಿತಿಯರೂ ಆಕಾಶದ ಮೇಲಲ್ಲಿ ಉಳ್ಳ ಸೂರ್ಯನ ಗತಿಯಲ್ಲಿ ಮಧ್ಯಾಹ್ನ ಕಾಲವು ಕಳೆಯಲು, ಅಗಣಿತವಾದ ಹಲಬಗೆಯ ಮದ್ಯಗಳನ್ನು ಸೇವಿಸಿ, ಅದರಿಂದ ಮಾದಕವನ್ನು ಹೊಂದಿದ ಒಂದು ಆಟದಲ್ಲಿ ಆಸಕ್ತರಾಗಿ ರೇಖೆಗಳಿಂದ ಕೂಡಿದ ಬಿಲ್ಲುಗಳ ಉತ್ಸವವನ್ನು ಕೊಂಡಾಡುವವರಾದರು.

---

673. ಐವನ ವಟೆಚಿಲ್, ವೆವ್ವೇ ಱವ್ವೈನ್ಱನ ಪುಱಕ್ಕಾಱಿಱ್ ಚೊನ್ಱಿ,
ಮೊಯ್ವರೈ ತ್ತಿನೈಯೆನ್ ಚೋಱು, ಮೂಙ್ಕಿಲ್ವನ್ ಪತಙ್ಕಣ್, ಮಱ್ಱು
ಙ್ಕೈವಿನೈ ಯೆಯಿನ ರಾಕ್ಕಿ ಕ್ಕಲನ್ಱವೂನ್ ಕಿಟಙ್ಕು ತುನ್ಱಿ
ಚ್ಚೆಯ್ವರೈ ಯುಯರ್ಪ್ಪ ವೆಙ್ಕ ಙ್ಕಲನ್ಱನರ್ ಚಿನವಿಲ್ ವೇಟರ್.

674. ಚೆನ್ಱಿನೈ ಯಟೆಯು ನ್ತೇನು ಮರುನ್ತುವಾರ್; ತೇನಿ ೞಿೞೋಯನ್ತ್ತು
ವೆನ್ಱವೂ ನಯಿಲ್ವಾರ್; ವೇರಿ ವಿಳಙ್ಕನಿ ಕ್ಕವಳ ಙ್ಕೊಳ್ವಾರ್;
ನನ್ಱಿಯ ವೀಯ ಲುಣ್ಣೆ ನಚ್ಚೈಯೊಟು ಮಿಚ್ಚೈವಾರ್; ವೆವ್ವೇ
ಱನ್ಱಮಿ ಲುಣವಿನ್ ಮೇಲೋ ರಾಯಿನ ರಳವಿ ಲಾರ್ಕಳ್.

675. ಅಯಲ್ವರೈ ಪ್ಪುಲತ್ತಿನ್ ವನ್ತಾ ರರುಙ್ಕಟಿ ಯಿರುಪ್ಪಿ ಲುಳ್ಳಾ
ರಿಯಲ್ವಕ್ಕೈ ಯುಣವಿ ಲಾರ್ನ್ಱ ವೆಯಿಱಿಯ ರೆಯಿನ ರೆಲ್ಲಾ
ಮುಯರ್ಕತಿ ರುಚ್ಚಿ ನೀಙ್ಕ ವೊಟಿವಿಲ್ಪನ್ ನಱವು ಮಾನ್ಱಿ
ಮಯಲುಱು ಕಳಿಪ್ಪಿ ನೀಟೆ ವರಿಚಿಲೈ ವಿಟವು ಕೊಳ್ವಾರ್.

---

1. ತಿನೆ—ಒಂದು ವಿಧ ಧಾನ್ಯ.

676. ಹಸುರೆಲೆಯಿಂದ ಮಾಡಿದ ಮಾಲೆಗಳನ್ನು ಸುತ್ತಿ, ಇತರ ಹಲವಗೆಯ ಹೂಮಾಲೆಗಳನ್ನು ತಲೆಯಲ್ಲಿ ಮುಡಿದು, ಮಣಿಗಳಿಂದ ಕಟ್ಟಲ್ಪಟ್ಟ ಚರ್ಮದ ಪಟ್ಟಿಯನ್ನು ಎದೆಯ ಮೇಲ್ಭಾಗದಲ್ಲಿ ಕಟ್ಟಿಕೊಂಡು, ಶರೀರವನ್ನು ಮುತ್ತಿನ ಚಿಪ್ಪು, ಶಂಖ ಮೊದಲಾದುವುಗಳಿಂದ ಮಾಡಿದ ಆಭರಣಗಳಿಂದ ಅಲಂಕಾರ ಮಾಡಿಕೊಂಡು, ದೋಷವಿಲ್ಲದ ಹಿರಿಮೆಯುಳ್ಳ ವೆಟ್ಚಿ ಹೂವೇ ಮೊದಲಾದವುಗಳ, ತಾವು ಯಾವಾಗಲೂ ಧರಿಸುವ ಮಾಲೆಗಳನ್ನು ಅಲಂಕಾರವಾಗಿ ಹಾಕಿಕೊಂಡು, ದೋಷವಿಲ್ಲದ ಆಚಾರ್ಯನು ತಾಳಿದ ದೊಡ್ಡ ಬಿಲ್ಲಿನ ಪಕ್ಕದಲ್ಲಿ ಸುತ್ತಿ ನಿಂತರು.

677. ತೊಂಡಕವೆಂಬ ಸಣ್ಣ ವಾದ್ಯವೂ, ಕೊಂಬೂ, ಉಡುಕ್ಕೆಯೂ, ತೂತು ಮಾಡಿದ ಬಿದಿರಿನ ವಾದ್ಯವೂ, ಎಂಟು ದಿಕ್ಕಿನಲ್ಲಿಯೂ ತುಂಬಿ ಎದ್ದು ಧ್ವನಿಸಲು, ಅವುಗಳಿಂದೆದ್ದ ದೊಡ್ಡ ಶಬ್ದದೊಡಗೂಡಿ ಹೆಚ್ಚಾದ ಪರಾಕ್ರಮವುಳ್ಳ ಬೇಡರ ಘೋಷವು ವಿಶಾಲವಾದ ಆಕಾಶ ತುಂಬಿ ಪ್ರತಿಧ್ವನಿಯಾಗಲು ಉತ್ಸವದ ಹಿರಿಮೆಯ ಆ ಊರನ್ನು ಅವರು ಪ್ರದಕ್ಷಿಣವಾಗಿ ಸುತ್ತಿದರು.

678. ಈ ರೀತಿ ಬೇಡರು ತಮ್ಮ ಒಂದು ವಿಧದ ನರ್ತನವನ್ನಾಡಲು, ಬೇಡಿತಿಯರು ತುಣಂಗ ನರ್ತನ[1]ವನ್ನಾಡಲು, ಹೆಚ್ಚಿನ ಸಂತೋಷದಿಂದ ಭೀತಿಯನ್ನು ತರುವ ಗ್ರಾಮ ದೈವ ನರ್ತನವನ್ನು ಸ್ತ್ರೀಯರು ಆಡಲು, ಜಯವನ್ನು ತರುವ ಬಿಲ್ಲಿನ ಉತ್ಸವವನ್ನು ದಿನವಿಡೀ ಕೊಂಡಾಡಿ ಬಂದು, ಏಳನೇ ದಿನದಲ್ಲಿ ಆಸಕ್ತಿಯಿಂದ ಇಮ್ಮಡಿಯಾಗಿ ಆ ಕೊಂಡಾಟಗಳನ್ನು ಚೆಲುವಾಗುವಂತೆ ಮಾಡಿದ ಮೇಲೆ,

---

676. ಪಾಚಿಲೈ ಪ್ಪಟಲೈ ಚುಱ್ಱಿ ಪ್ಪನ್ಮಲರ್ ತ್ತೊಟೈಯಲ್ ಕೂಟಿ
ಕ್ಕಾಚಟೈ ವಟತ್ತೋಲ್ ಕಟ್ಟಿ ಕ್ಕವಟಿಮೆಯ್ ಕ್ಕಲನ್ಕಳ್ ಪೂಣ್ಟು
ಮಾಚಿಲ್‌ಚೀರ್ ಲಿಟ್ಚಿ ಮುನ್ನಾ ವರುತುಱೈ ಕ್ಕಣ್ಣಿ ಕೂಟಿ
ಯಾಚಿಲಾ ಚಿರಿಯ ನೇನ್ತು ಮಟಱ್ಚಿಲೈ ಮರುಙ್ಕು ಚೂಟ್ನಾರ್.

677. ತೊಣ್ಟಕ ಮುರಚ ಱೊಮ್ಪು ನುಟೈಕಳು ನುಳೈಕೊಳ್ ವೇಯು
ಮೆಣ್ಟಿಚೈ ನಿಱೈನ್ತು ವಿಮ್ಮ ವೆಙ್ನ್ತವೇ ರೊಲಿಯಿ ನೋಟು
ನಿಣ್ಟಿಱಿನ್ ಮಱವ ರಾರ್ಪ್ಪು ಚ್ಚೇಣ್ವಿಚುಮ್ ಪಿಟಿತ್ತು ಚ್ಚೆಲ್ಲ
ಕ್ಕೊಣ್ಟಚೀರ್ ವಿಟಿವು ಪೊಙ್ಕ ಕುಱಿಚ್ಚಿಯೈ ವಲಙ್ಕೊ ಣ್ಟಾರ್ಕಳ್.

678. ಕುನ್ಱವರ್ ವರಿಕೊ ಣ್ಟಾಟ ಕ್ಕೊಟಿಚ್ಚಿಯರ್ ತುಣಙ್ಕೈ ಯಾಟ
ತ್ತನ್ಱಿಯ ಮಕಿೞ್ಚ್ಚಿ ಯೋಟು ಞ್ಚೂರರ ಮಕಳಿ ರಾಟ
ವೆನ್ಱಿವಿಲ್ ವಿೞವಿ ನೋಟುಮ್ ವಿರುಪ್ಪುಟೈ ಯೇೞಾ ನಾಳಾ
ಮನ್ಱಿರು ಮಟಙ್ಕು ಚೆಯ್ಕೈ ಯಟಿಕುಱಿ ವಮೈತ್ತ ಪಿನ್ಱೈ.

---

1. ತುಣಂಗ ನರ್ತನ – ಮುಂಗೈಯನ್ನು ಮೇಲೆ ಕೆಳಗೆ ಕೊಂಡುಹೋಗಿ ಆಡುವ ಒಂದು ವಿಧ ನರ್ತನ.

679. ಸೂರ್ಯನು ಆಗಸದ ದಾರಿಯಲ್ಲಿ ಉನ್ನತವಮಟ್ಟವನ್ನು ಹೊಂದಿದ ಕಾಲದಲ್ಲಿ, ಎಲ್ಲೆಲ್ಲಿಯೂ ಅನೇಕ ಮಂಗಳ ಆಶೀರ್ವಾದಗಳು ತುಂಬಲು, ಪಕ್ಕಗಳಲ್ಲಿ ಹಲವಗೆಯ ಮಂಗಳ ವಾದ್ಯಗಳು ಶಬ್ದಿಸಲು, ಆ ಬೇಡರು ತಮ್ಮ ಹಳೆಯ ವಂಶದಲ್ಲಿ ಬಂದ ಬಿಲ್ವಿದ್ಯೆಯ ಅಭ್ಯಾಸಮಾಡುವ ರೀತಿಯನ್ನು ತಿಳಿದವರೆಡೆಯಲ್ಲಿ, ಪ್ರಕಾಶಬೀರುವ, ಕಪ್ಪಗಾದ, ಯುದ್ಧದಲ್ಲಿ ಬಲುಮೆಯುಳ್ಳ ವೃಷಭದಂತಿರತಕ್ಕ ತಿಣ್ಣನನ್ನು ಯುದ್ಧಕ್ಕೆ ತಕ್ಕುದಾದ ಬಿಲ್ಲನ್ನು ಹಿಡಿಸಿದರು.

680. ಸುಂದರವಾದ ದೊಡ್ಡ ಬೆಟ್ಟದ ಪಕ್ಕದಲ್ಲಿ, ಬಿಲ್ವಿದ್ಯೆಯ ವಿಧಿಗಳನ್ನೆಲ್ಲಾ ಮುಂಚೆಯೇ ಮಾಡಿಟ್ಟು, ಅದರ ಅಭ್ಯಾಸದ ಕಳದಲ್ಲಿ ಸೇರಿ ವಿಧಿಯಂತೆ ಕ್ರಮವಾಗಿ ನಮಿಸಿ, ಸೇರಿದ ಆ ದಿನದಲ್ಲಿ ಆರಂಭಿಸಿ, ಒಂದೊಂದು ದಿನವೂ ಬಲವಾದ ಬಿಲ್ಲನ್ನು ಅಭ್ಯಸಿಸುವ ಉದ್ಯೋಗದಲ್ಲಿ, ನನ್ನನ್ನು ಆಳಾಗಿ ಉಳ್ಳ ಕಾನವರ ಕುಲದಲ್ಲಿ ಪ್ರಯಾಸದಿಂದವತರಿಸಿದ ಸಿಂಹದಂತಿರುವ ತಿಣ್ಣನು, ಕೊನೆಹೊಂದುವಂತೆ ಕಲಿತು ಪೂರ್ಣತೆಯನ್ನು ಹೊಂದಿದನು.

681. ಎಲ್ಲೆಯಿಲ್ಲದ ಶಿವಪುಣ್ಯಗಳೆಲ್ಲಾ ಒಂದುಗೂಡಿ, ಅವತರಿಸಿ, ಮೇಲು ಮೇಲೂ ವರ್ಧಿಸುವ ಭಾಗ್ಯಪರಿಪೂರ್ಣತೆಯನ್ನು ಹೋಲುವ ತಿಣ್ಣನು ಆಶಿಸತಕ್ಕ ಸುಂದರವಾದ ಬಿಲ್ವಿದ್ಯೆಯನ್ನೂ ಅದರೊಡನೆ ಇತರ ಆಯುಧಗಳ ವಿದ್ಯೆಗಳನ್ನೂ ಸಂಪೂರ್ಣವಾಗಿ ಕಲಿತು, ಪಸರಿಸಿದ ಚೆಲುವು ಮೇಲುಮೇಲೂ ವರ್ಧಿಸಲು, ಎಲ್ಲಾ ಕಲೆಗಳಿಂದ ತುಂಬಿದ ಚಂದ್ರನಂತೆ ಹದಿನಾರು ವಯಸ್ಸಿನ ಪರ್ವವನ್ನು ಹೊಂದಿದನು.

---

679. ವೆಙ್ಕತಿರ್ ವಿಚುಮ್ಬಿ ನುಚ್ಚಿ ಮೇವಿಯ ಪೊೞುತಿ ಲೆಙ್ಕು
ಮಙ್ಕಲ ವಾೞ್ತ್ತು ಮಲ್ಕ ಮರುಙ್ಕುಪಲ್ ಎಯಙ್ಕ ಳಾರ್ಪ್ಪ
ತ್ತ್ಙ್ಕಟೊನ್ ಮರಪಿನ್ ವಿಙ್ಚ್ಚೈ ತ್ತನುತೊ್ಟಿಲ್ ವಲವರ್ ತಮ್ಪಾಱ್
ಪೊಙ್ಕ್ಕೊಳಿ ಕ್ಕರುಮ್ಪೋ ರೇಱ್ಱೈ ಪ್ಪೊರುಚಿಲೈ ಪಿಟಿಪ್ಪಿ ತ್ತಾರ್ಕಳ್.

680. ಪೊಱ್ಱಟ ವರೈಯಿನ್ ಪಾಙ್ಕರ್ ಪ್ಪೊರಿವುಱು ಕಟನ್ಮುನ್ ಚೆಯ್ತ್ತು
ವಿಱ್ಱೊಟಿಱ್ ಕಳತ್ತಿ ನಣ್ಣಿ ವಿತಿಮುಱೈ ವಣಙ್ಕಿ ಮೇವು
ಮಱ್ಱೈನಾ ಟ್ಟೊಟಙ್ಕಿ ನಾಳು ಮಟಙ್ಚಿಲೈ ಯಾಣ್ಮೈ ಮುಱ್ಱ
ಕ್ಕಱ್ಱನ ನೆನ್ನೈ ಯಾಳು ಙ್ಕಾನವರ್ ಕ್ಕರಿಯ ಚಿಙ್ಕಮ್.

681. ವಣ್ಣವೆ ಙ್ಚ್ಚೈಯಿ ಮಱ್ಱ ಪ್ಪಟ್ಟೈಕಳು ಮಲರ ಕ್ಕಱ್ಱು
ಕ್ಕಣ್ಣಕನ್ ಚಾಯಲ್ ಪೊಙ್ಕ ಕ್ಕಲೈವಳರ್ ತಿಙ್ಕ ಳೇಪೋಲ್
ಎಣ್ಣರ ಣ್ಣ್ಙ್ಣ್ಣಿನ್ ಚೆವ್ವಿ ಯೆಯ್ತ್ತುನಾ ರೆಲ್ಲೈ ಯಿಲ್ಲಾ
ಪ್ಪುಣ್ಣಿಯ ನ್ತೋನ್ಱಿ ಮೇನ್ಮೇಲ್ ವಳರ್ವತನ್ ಪೊಲಿವು ಪೋಲ್ವಾರ್.

682. ಈ ರೀತಿಯಾಗಿ ತಿಣ್ಣನ ವಯೋಘಟ್ಟವು ಪೂರ್ಣವಾದ ಕಾಲದಲ್ಲಿ ಹೆಚ್ಚು ಪರಾಕ್ರಮಿಗಳಾದ ಕುರವರು ಬಾಳುವ ಹಿರಿಮೆಯನ್ನು ಪಡೆದ ಆ ಊರಿಗೆ ನಾಯಕನಾದ, ಕರಿಯ ಬೆಟ್ಟದಂತಿರುವ ತೋರವಾದ ತೋಳುಗಳುಳ್ಳ ನಾಗನೂ ಎಲ್ಲಾ ಬೆಟ್ಟಗಳಲ್ಲಿಯೂ ಎಲ್ಲಾ ವನಗಳಲ್ಲಿಯೂ ಬಹುಕಾಲ ಕೈಯಲ್ಲಿ ತಾಳಿದ ಸುಂದರವಾದ ಬಿಲ್ಲಿನಿಂದ ಬೇಟೆಯಾಡಿಯೂ, ವೈರಿಕೂಟದವರ ಹಲವು ಹಸುಕೂಟಗಳನ್ನು ಕವರಿ[1]ಯೂ ತನಗೆ ಸ್ವಂತವಾದ ಕಾನ[2]ಗಳನ್ನು ಕಾಪಾಡಿಯೂ, ಒಡಲಿನಲ್ಲಿ ಬಲಹೀನತೆಯನ್ನು ತರುವ ಮುಪ್ಪಿನ ಪರ್ವವನ್ನು ಹೊಂದಿದನು.

683. ಚಿಲುವಿನ ಎಡೆಗಳುಳ್ಳ ಬೆಟ್ಟದ ವಿಶಾಲಪಕ್ಕಗಳಲ್ಲಿಯೂ, ಬನಗಳಾದ ಎಲ್ಲೆಡೆಗಳಲ್ಲಿಯೂ, ಪರಾಕ್ರಮಯುತವಾದ ಕಾಡುಹಂದಿ, ಹುಲಿ, ಕರಡಿ, ಕಡವೆ, ಕಾಡುದನ, ಮರೆ, ಜಿಂಕೆ ಮೊದಲಾದ ಮೃಗಗಳು ಹೆಚ್ಚಾಗಿ ಕೂಡಿ, ಮೇಲೆ ಬಂದು ನಾಶಮಾಡಲು ತೊಡಗಿದಾಗ, ‘ಇಡೀ ತಿಂಗಳು ಕ್ರಮವಾಗಿ ಮಾಡುವ ಬೇಟೆಯ ಕಾರ್ಯಗಳು ನಡೆಯದೆ ವಿಳಂಬವಾದುದರಿಂದ ಈ ಕೇಡುಗಳು ನೇರಿಟ್ಟುವು’ ಎಂದು ಬಿಲ್ಲನ್ನು ತಾಳಿದ ಬೇಡರುಗಳೆಲ್ಲಾ ಒಂದಾಗಿ ಸೇರಿ ಹೊರಟು ತಮ್ಮ ಕುಲಕ್ಕೆ ನಾಯಕನಾದ, ಶೀತಲವಾದ ಮಾಲೆಯನ್ನು ಧರಿಸಿದ ನಾಗನಲ್ಲಿಗೆ ಹೋಗಿ ಹೇಳಿದರು.

ವೇಱು

682. ಇವ್ವಣ್ಣ ನ್ತಿಣ್ಣನಾರ್ ನಿರಮ್ಬು ನಾಳಿ
    ಲಿರುಙ್ಕುಱವರ್ ಪೆರುಙ್ಕುಱಿಚ್ಚಿ ಕ್ಕಿಱೈವ ನಾಯ
ಮೈವಣ್ಣ ವರೈನೆಟುನ್ತೋ ಣಾಕನ್ ಱಾನು
    ಮಲೈಯೆಙ್ಕುಮ್ ವನಮೆಙ್ಕುಮ್ ವರಪ್ಪಿಲ್ ಕಾಲ
ಚೆಙ್ಕೈವಣ್ಣ ಚ್ಚಿಲೈವೇಟ್ಟೈ ಯಾಟಿ ತ್ತೆವ್ವರ್
    ಕಣನಿರೈಕಳ್ ಪಲಕವರ್ನ್ತು ಕಾನ ಙ್ಕಾತ್ತು
ಮೆಯ್ವಣ್ಣ ನ್ತಳರ್ಮೂಪ್ಪಿನ್ ಪರುವ ಮೆಯ್ತಿ
    ವಿಲ್ಲುೞವಿನ್ ಪೆರುಮೈಯುಟನ್ ಮೇವಾ ನಿನ್ಱಾನ್.

683. ಅಙ್ಕಣ್ಮಲೈ ತಟಞ್ಚಾರಱ್ ಪುನಙ್ಕ ಳೆಙ್ಕು
    ಮಟಲೇನಮ್ ಪುಲಿಕರಟಿ ಕಟಮೈ ಯಾಮಾ
ವೆಙ್ಕಣ್ಮರೈ ಕಲೈಯೊಟುಮಾನ್ ಮುತಲಾ ಯುಳ್ಳ
    ಮಿರುಕಙ್ಕಣ್ ಮಿಕನೆರುಙ್ಕಿ ಮೀತೂರ್ ಕಾಲೈ
‘ತ್ತಿಙ್ಕಣ್ಮುಱೈ ವೇಟ್ಟೈಯಿನೈ ತಾೞ್ತ್ತ’ ತೆನ್ಱು
    ಚಿಲೈವೇಟರ್ ತಾಮೆಲ್ಲಾ ನ್ತಿರಣ್ಟು ಚೆನ್ಱು
ತಙ್ಕಳ್ಕುಲ ಮುತಱ್ಱಲೈವ ನಾಕಿ ಯುಳ್ಳ
    ತಣ್ಟೆರಿಯ ನಾಕನ್ಪಾಱ್ ಚಾರ್ನ್ತು ಚೊನ್ನಾರ್.

---

1. ಕವರು – ಅಪಹರಿಸು. 2. ಕಾನ – ಕಾಡು.

684. ಬೇಡರು ಹೇಳಿದ ಮಾತನ್ನು ಕೇಳಿದೊಡನೆ ನಾಗನು ತನ್ನನ್ನು ಸುತ್ತಿಕೊಂಡುಬರುವ ಮುಪ್ಪಿನ ಬರುವಿಕೆಯನ್ನು ನೋಡಿ, ಎದುರಿನಲ್ಲಿ ನಿಂತ ಬೇಡರಿಗೆ ಹೇಳುವನು. 'ಮುಪ್ಪಿನ ಕಾರಣವಾಗಿ ಹಿಂದಿನಂತೆ ಬೇಟೆಯಲ್ಲಿ ಉತ್ಸಾಹದ ಬಲಿಮೆ ಇಲ್ಲ. ಆದುದರಿಂದ ನನ್ನ ಮಗನನ್ನು ನಿಮಗೆ ನಾಯಕನಾಗಿ ನೀವೆಲ್ಲಾ ತೆಗೆದುಕೊಳ್ಳಿ.' ಇದನ್ನು ಕೇಳಿ ಅವರು ಮೊದಲು ವ್ಯಸನಪಟ್ಟು, ಆಮೇಲೆ ಸಂತೋಷಿಸಿ, ತಮ್ಮ ನಾಯಕನನ್ನು ನಮಿಸಿ ಈ ರೀತಿ ಹೇಳುವರು.

685. 'ಇಷ್ಟುಕಾಲ ನಿನ್ನ ಬಿಲ್ಬಲುಮೆಯಿಂದ ಆಳತಕ್ಕ ಆಳ್ವಿಕೆಯ ಆಶ್ರಯದಲ್ಲಿ ಇನಿದಾಗಿ ಉಂಡು, ಕೇಡಿಲ್ಲದೆ ಬಾಳುತ್ತಿದ್ದೆವು. ಅಯ್ಯನೇ! ನೀನು ಆಜ್ಞೆಯಿಟ್ಟ ದಾರಿಯಲ್ಲಿ ಸಮ್ಮತಿಸಿ ನಿಲ್ಲುವುದಲ್ಲದೆ ನಮಗೆ ಸಮೀಪದ ದಾರಿಯು ಬೇರೆಯುಂಟೇ? ಅದುವಲ್ಲದೆ ಸತ್ಯವಾದ ಪರಾಕ್ರಮವುಳ್ಳ ತಿಣ್ಣನನ್ನು ನಿನ್ನ ವಂಶದಲ್ಲಿ ಹೆಚ್ಚು ಮೇಲ್ಮೆಯನ್ನು ಹೊಂದಲು ಪಡೆದು ತಂದಿರುವೆ. ಶೋಭಿಸುವ ಮೇಲ್ಮೆವಡೆದ ಬಿಲ್ಲನ್ನು ತಾಳಿದ ನಿನ್ನ ಮಗನನ್ನು ಇಲ್ಲಿಗೆ ಕರೆಯುಕಳುಹಿಸಿ, ನಿನಗೆ ಸ್ವಂತವಾದ ಬೆಟ್ಟದಾಳ್ವಿಕೆಯನ್ನು ಅವನಿಗೆ ಕೊಟ್ಟು ಅನುಗ್ರಹಿಸು' ಎಂದು ಆ ಬೇಡರು ಸಂತೋಷದಿಂದ ಹೇಳಿದರು.

---

684. ಚೊನ್ನವುರೈ ಕೇಟ್ಟಲುಮೇ ನಾಕನ್ ಱಾನುಞ್
ಚೂೞ್ನ್ತುವರು ತನ್ಮೂಪ್ಪಿನ್ ಱೊಟರ್ವುಱ ನೋಕ್ಕಿ
ಮುನ್ನವರ್ಕಟ್ ಕುರೈಚೆಯ್ವಾನ್ 'ಮೂಪ್ಪಿ ನಾಲೇ
ಮುನ್ಪು ಪೋಲ್ ವೇಟ್ಟೈಯಿನಿನ್ ಮುಯಲ ಕಿಲ್ಲೇ;
ನೆನ್ಮಕನೈ ಯುಙ್ಕಳುಕ್ಕು ನಾತ ನಾಕ
ವೆಲ್ಲೀರುಙ್ ಕೈಕೊಣ್ಮಿನ್!' ನೆನ್ಱ ಪೋತಿನ್
ಅನ್ನವರು ಮಿರಙ್ಕಿಪ್ಪಿನ್ ಮಕಿೞ್ನ್ತು ತಙ್ಕೋ
ನಟವಣಙ್ಕಿ ಯಿಮ್ಮಾೞ್ಱ ಮುಱೈಕಿನ್ ಱಾರ್ಕಳ್—

685. 'ಇತ್ತನೈಕಾ ಲಮುನಿನತು ಚಿಲೈಕ್ಕೀೞ್ ತ್ತಙ್ಕಿ
ಯಿನಿತುಣ್ಟು ತೀಙ್ಕಿನ್ಱಿ ಯಿರುನ್ತೋ!; ಮಿನ್ನುಮ್
ಅತ್ತ! ವುನ ತರುಳ್ವೞಿಯೇ ನಿಱ್ಪ ತಲ್ಲಾ
ಲಟುತ್ತನೆಱಿ ವೇಱುಳತೋ?; ವತುವೇ ಯನ್ಱಿ
ಮೆಯ್ತ್ತವಿಱಲ್ ಱಿಣ್ಣನೈಯುನ್ ಮರಪಿಱ್ ಚಾಲ
ಮೇವ್ಪಟವೇ ಪೆಱ್ಱಿತ್ತಾಯ್; ವಿಳಙ್ಕು ಮೇನ್ಮೈ
ವೈತ್ತಚಿಲೈ ಮೈನ್ತನೈಯೀಙ್ ಟೞೈತ್ತು ನುಙ್ಕಳ್
ವೞೈಯಾಟ್ಚಿ ಯತು' ಳೆನ್ಱಾರ್ ಮಕಿೞ್ನ್ತು ವೇಟರ್.

686. ಬಿಲ್ಲನ್ನು ತಾಳಿದ ಬೇಡರು ಈ ರೀತಿ ಹೇಳಲು, ನಾಗನು ತಿಣ್ಣನನ್ನು ಕರೆದುಕೊಂಡು ಬರುವಂತೆ ಮುಂಚೆಯೇ ಹೇಳಿ ಕಳುಹಿಸಿಬಿಟ್ಟು 'ಕನ್ನಿವೇಟೆ[1]ಗೆ ಹೋಗುವುದಕ್ಕಾಗಿ, ಕಾಡದೈವಗಳು ಸಂತೋಷಿಸುವಂತೆ ಬಲಿಗಳನ್ನು ಕೊಡುವುದಕ್ಕೆ ನನ್ನ ನಾಯಕತ್ವವನ್ನು ಹೊಂದಿದ ವಂಶದ ಮಾರ್ಗಪರಂಪರೆಯಲ್ಲಿ ಬಂದ ದೇವರಾಟ್ಟಿ[2]ಯನ್ನು ಕರೆದುಕೊಂಡು ಬನ್ನಿ' ಎಂದು ಹೇಳಲು, ಅಲ್ಲಿದ್ದವರು ಹೊರಟು ಆ ನಿಲವನ್ನು ಹಾಗೆಯೇ ಅವಳಿಗೆ ತಿಳಿಸಲು, ನರೆದ ಮುದುಕಿಯಾದ ಅವಳೂ ಹೆಚ್ಚಾಗಿ ಸಂತೋಷಿಸಿ ಸಂಭ್ರಮದಿಂದ ಶೀಘ್ರವಾಗಿ ಬಂದಳು.

687. ದೇವರಾಟ್ಟಿಯು ರೇಖೆಗಳಿಂದ ಕೂಡಿದ ಕಾಡ ಚಿಗುರುಗಳಲ್ಲಾದ ಮುಡಿಮಾಲೆಯನ್ನು ತಲೆಯಲ್ಲಿ ಧರಿಸಿ, ಗಂಡುಜಿಂಕೆಯ ಕೊಂಬಿನ ತುಂಡಿನ ಕರ್ಣಾಭರಣವನ್ನು ಕಿವಿಯಲ್ಲಿ ಅಲಂಕರಿಸಿಕೊಂಡು, ಜಿಂಕೆಯ ಬಸಿರ ಅರಿದಾರ[3]ದಲ್ಲಿ ಬೊಟ್ಟಿಟ್ಟು, ನವಿಲ ಕಂಠದಂತೆ ಬಣ್ಣವಿರುವ ಶಂಖಮಣಿಮಾಲೆಯನ್ನು ಧರಿಸಿ, ಮೊಲೆಯು ಸರಿದು ಕೆಳಬೀಳುವಂತೆ ಜೋಲಲು, ನಡುವಿನಲ್ಲಿ ಕಟ್ಟಿದ ಮರವುರಿ[4]ಯ ಮೇಲೆ ಎಲೆಯೊಡನೆ ನವಿಲಗರಿಯ ಕಲಾಪಗಳೂ ನೇತಾಡಲು, ಅಲ್ಲಿ ಬಂದು, ಹೂವೂ, ಬೆಟ್ಟದ ನೆಲ್ಲೂ ಸೇರಿದ ಅಕ್ಷತೆಯನ್ನು ಕೊಟ್ಟು, ಯುದ್ಧದಲ್ಲಿ ಶಕ್ತನಾದ ಬೇಡರ ನಾಯಕನಾದ ನಾಗನನ್ನು ಸ್ತುತಿಸಿ ನಿಂತಳು.

---

686. ಚಿಲೈಮಟಿವ ರುರೈಚೆಯ್ಯ ನಾಕನ್ ಊನನ್
ತಿಣ್ಣನೈಮುನ್ ಕೊಣ್ಟುವರ ಚ್ಚೆಪ್ಪಿ ವಿಟ್ಟು
'ಮಲೈಮರುವು ನೆಟುಙ್ಗಾನಿಲ್ ಕನ್ನಿ ವೇಟ್ಟೈ
ಮಕನ್ಪೋಕ ಕ್ಕಾಟುಪಲಿ ಮಕಿಟ ವೂಟ್ಟ
ತ್ತಲೈಮರಪಿನ್ ವಟಿವನ್ದ ತೇವ ರಾಟ್ಟಿ
ತನ್ನೈಯಟಕ್ಕೈಯಿ' ನೆನವಙ್ಗು ಚೊನ್ನೋರ್ ಚೆನ್ಱು
ನಿಲೈಮೈಯುವ ಟನ್ನೈಕ್ಕುರೈಪ್ಪ ನರೈಮೂ ತಾಟ್ಟಿ
ನೆಟಿತುವನ್ದು ವಿರುಪ್ಪಿನೋಟುಙ್ ಕಟಿತು ವನ್ದಾಳ್.

687. ಕಾನಿಲ್ವರಿ ತ್ತಳಿರ್ತುತೈನ್ದ ಕಣ್ಣಿ ಚೂಟಿ
ಕ್ಕಲೈಮರುಪ್ಪಿ ನರಿನ್ದಕುಟೈ ಕಾತಿಙ್ ಪೆಯ್ದು
ಮಾನಿನ್ವಯಿ ಱರಿತಾರ ತ್ತಿಲಕ ವಿಟ್ಟು
ಮಯಿಟಿಙ್ಕಟುತ್ತು ಮನವುಮಣಿ ವಟಮುಮ್ ಪೂಣ್ಟು
ತಾನಿಟನ್ದು ತಿರಙ್ಕಿಮುಲೈ ಚರಿನ್ದು ತಾಟ
ತ್ತಟೈಪ್ಪೀಲಿ ಮರವುರಿಮೇಙ್ ಚಾರ ವೆಯ್ದಿ
ಪ್ಪೂನೆರುಙ್ಕು ತೋರೈಮಲಿ ಚೇಟ್ಟೈ ನಲ್ಕಿ
ಪ್ಪೋರ್ವೇಟರ್ ಕೋಮಾನ್ನೈ ಪ್ಪೋಱ್ಱಿ ನಿನ್ಱಾಳ್.

---

1. ಮೊದಲ ಬೇಟೆ. 2. ದೈವಾವೇಶವನ್ನು ಪಡೆದ ಮುದುಕಿ. 3. ಒಂದು ವಿಧದ ರಸ. 4. ನಾರುಬಟ್ಟೆ.

688. ಈ ರೀತಿ ಬಂದು ಸ್ತುತಿಸಿ ನಿಂತ ಕುರತಿಯಾದ ಮುಪ್ಪಿನ ದೇವರಾಟ್ಟಿಯನ್ನು ಇದಿರು ನೋಡಿ, 'ಅಮ್ಮಾ, ನೀನು ದಾರಿದ್ರ್ಯವಿಲ್ಲದೆ ಸುಖವಾಗಿ ಬಾಳುತ್ತಿರುವೆಯಾ?' ಎಂದು ನಾಗನು ಕೇಳಲು, ಅವನಿಗೆ ಒಳ್ಳೆಯದಾಗಲಿ ಎಂದು ಮೊದಲೇ ಆಶೀರ್ವದಿಸಿ, 'ಒಳ್ಳೆಯ ಮೃದುಮಾಂಸವೂ, ಹುತ್ತದ ಸತ್ತ ಪಾತೆಗಳೂ, ಜೇನೂ, ಬೆಟ್ಟದಲ್ಲುಂಟಾಗುವ ಮತ್ತಿತರ ವಸ್ತುಗಳೂ, ಬೇರೆಡೆಯಲ್ಲಿ ಬೆಳೆಯುವ ವಸ್ತುಗಳೂ ಆದ ನನಗೆ ಬೇಕಾದವುಗಳೆಲ್ಲವನ್ನೂ ಮೊದಲೇ ನೀನು ವಿಭಾಗಿಸಿಕೊಟ್ಟ ನಿಬಂಧನೆಯಂತೆ ಕೊರತೆಯಿಲ್ಲದೆ ಪೂರ್ಣವಾಗಿ ಸೌಖ್ಯದಿಂದ ಅನುಭವಿಸಿ ಬಾಳಿಬರುತ್ತಿದ್ದೇನೆ. ನನ್ನನ್ನು ಕರೆಸಿದ ಕಾರ್ಯವಾವುದು?' ಎಂದು ಆಕೆಯು ಕೇಳಿದಳು.

689. ಇದಕ್ಕೆ ನಾಗನು 'ನಮ್ಮ ವಂಶಕ್ಕೆ ಸ್ವಂತವಾದ ನಾಯಕತ್ವವನ್ನು ನಾನು ಕೊಡಲು, ಮಾರ್ಗತಪ್ಪದ ನನ್ನ ಕುಲಪುತ್ರನಾದ ತಿಣ್ಣನು ಅದನ್ನು ತಾಳಿ ನಾಯಕನಾಗಿ ನಿಂತು, ಹಗ್ಗವನ್ನು ಕಟ್ಟಿದ ಭಯಂಕರವಾದ ಬಿಲ್ಲನ್ನು ತಾಳಿದ ಬೇಡರನ್ನು ಪರಿಪಾಲನ ಮಾಡುವ ಮಲೆಯಾಳ್ವಿಕೆಯ ಉದ್ಯೋಗದಲ್ಲಿ ಪ್ರವೇಶಿಸುವನು. ಅವನಿಗೆ ನನಗಿಂತಲೂ ಮೇಲಾಗಿ ಬೇಟೆಯ ವೃತ್ತಿಯು ಸದಾ ಸಿದ್ಧಿಸುವಂತೆಯೂ, ವೈರಿಗಳ ಪಕ್ಕದೆಡೆಗಳನ್ನು ಅಪಹರಿಸುವಲ್ಲಿ ಜಯ ಉಂಟಾಗುವಂತೆಯೂ, ಬನದಲ್ಲಿ ಬಾಳುವ ದೈವಗಳು ತೃಪ್ತಿಗೊಂಡು ಉಣ್ಣುವಂತೆ ಕಾಡುಬಲಿ ಕೊಡುವವಳಾಗು' ಎಂದು ಮನಸ್ಸಿನಲ್ಲಿ ಸ್ವಲ್ಪವೂ ವ್ಯಾಕುಲವಿಲ್ಲದೆ ಹೇಳಿದನು.

---

688. ನಿನ್ಱಮುತು ಕುಱಕ್ಕೋಲ ಪ್ಪಟಿವ ತ್ತಾಳೈ
ನೇರ್‌ನೋಕ್ಕಿ 'ಯನ್ನೈ! ನೀ ನಿರಪ್ಪು ನೀಙ್ಕಿ
ನನ್ಱಿನಿತಿ ನಿರುನ್ತನೈಯೋ?' ವೆನ್ಱು ಕೂಱ
ನಾಕನೆತಿರ್ ನಲಮ್ಪೆರುಕ ವಾೞ್ತ್ತಿ, 'ನಲ್ಲ
ಮೆನ್ಱಚೈಯು ಮಾಯಲೊಟು ನಱವುಮ್ ವೆಱ್ಪಿಲ್
ವಿಳೈವಳನುಮ್ ಪಿಱವಳನುಮ್ ವೇಣ್ಟಿ ಱೆಲ್ಲಾ
ಮುನ್ಱುನೀ ವೈತ್ತಪಟಿ ಪೆಱ್ಱು ವಾೞ್ವೇ;
ನಱೈತ್ತಪಟಿ ಯೇನ್?' ನೆನ್ಱಾ ಳಣಙ್ಕು ಚಾರ್ನ್ತಾಳ್.

689. 'ಕೋಟ್ಟಮಿಲೆನ್ ಕುಲಮೈನ್ತನ್ ಱಿಣ್ಣ ನೆಙ್ಕಳ್
ಕುಲತ್ತಲೈಮೈ ಯಾನ್‌ಕೊಟುಪ್ಪ ಕ್ಕೊಣ್ಟು ಪೂಣ್ಟು
ಪೂಟ್ಟುಱುವೆಞ್ ಚಿಲೈವೇಟರ್ ತಮ್ಮೈ ಕ್ಕಾಕ್ಕುಮ್
ಪೊರುಪ್ಪುರಿಮೈ ಪುಕುಕಿನ್ಱಾ; ನವನು ಕ್ಕಿನ್ಱುಮ್
ವೇಟ್ಟೈವಿನೈ ಯೆನಕ್ಕುಮೇ ಲಾಕ ವಾಯ್ತ್ತು
ವೇಱುಪುಲಙ್ ಕವರ್ವೆನ್ಱಿ ಮೇವು ಮಾಱು
ಕಾಟ್ಟಿಲುಱೈ ತೆಯ್ವಙ್ಕಳ್ ವಿರುಮ್ಪ ಯುಣ್ಣ
ಕ್ಕಾಟುಪಲಿ ಯೂಟ್ಟೆನ್ಱಾನ್ ಕವಲೈ ಯಿಲ್ಲಾನ್.

690. ಅವನ ಮಾತುಗಳನ್ನು ಕೇಳಿದ ದೇವರಾಟಿಯು ಬಹು ಸಂತೋಷಿಸಿ, 'ಪ್ರೀತಿಯಿಂದ ಬರುವ ನನಗೆ ಮೊದಲು ಯಾವ ದಿನಗಳಲ್ಲಿಯೂ ಕಾಣಲ್ಪಡದ ಬಹಳ ಒಳ್ಳೆಯ ಶಕುನಗಳು ಇಲ್ಲಿ ಉಂಟಾದುವು. ಅದರಿಂದ ಜಯಯುಕ್ತವಾದ ರೇಖೆಗಳಿಂದ ಕೂಡಿದ ಬಿಲ್ಲನ್ನು ಧರಿಸಿದ ನಿನ್ನ ಮಗನಾದ ತಿಣ್ಣನು ನಿನ್ನ ಆಳತೆಗಿಂತಲೂ ಹೆಚ್ಚು ಮೇಲಾಗುವನು' ಎಂದು ಪ್ರೀತಿಯಿಂದ ಆಶೀರ್ವದಿಸಿ, ಜಯವನ್ನು ತರುವ ವನದೈವಗಳು ಹರ್ಷಿಸುವಂತೆ ಕಾಡುಬಲಿ ಕೊಡುವುದಕ್ಕೆ ಬೇಕಾದವುಗಳನ್ನೆಲ್ಲಾ ಏನೊಂದೂ ಕೊರತೆ ಯಿಲ್ಲದೆ ಕೊಡಿಸಿಕೊಂಡು ಹೋದಳು.

691. ದೇವರಾಟ್ಟಿಯು ಹೋದಮೇಲೆ ಬಿಲ್ಲನ್ನು ಹಿಡಿದ ತಂದೆಯು ಕರೆಸಲು ಕೇಳಿ, ಕಪ್ಪಗಿನ ಸಮೃದ್ಧವಾದ ಜುಟ್ಟನ್ನೂ ಸುವಾಸನೆಯುಳ್ಳ ಮಾಲೆಯನ್ನೂ ಉಳ್ಳ ನೀಲಮಣಿಗಿರಿಯೊಂದು ಬಂದಂತೆ ತಿಣ್ಣನು ಕೈಯಲ್ಲಿ ಬಿಲ್ಲನ್ನು ತಾಳಿದ ಹಲಬೇಡರು ನಮಿಸಿಕೊಂಡು ಬರಲು ಒಡನೆಯೇ ಬಂದು ತಂದೆಯ ಪಾದಗಳನ್ನು ನಮಿಸಿದಾಗ, ತಂದೆಯಾದ ನಾಗನು ನೇರಾಗಿ ಬೆಳೆದ ಸಣ್ಣ ಬೆಟ್ಟದಂತೆ ಎತ್ತರವಾದ ಎರಡು ತೋಳು ಗಳಿಂದ, ಮಗನೆಂಬ ವಾತ್ಸಲ್ಯದಿಂದ ತಬ್ಬಿಕೊಂಡು, ಚೆಲುವಾದ ಹುಲಿದೊಗಲಿನ ಆಸನದಲ್ಲಿ ತನ್ನಿದಿರು ಕುಳಿತುಕೊಳ್ಳುವಂತೆ ಮಾಡಿದನು.

---

690. ಮನ್ನವನ್‌ಅನ್ ಮೊೞಿಕೇಟ್ಟ ವರೈಚ್ಚೂ ರಾಟ್ಟಿ
'ಮನಮಕಿೞ್ನ್ದಿಱ್ ಕನ್‌ಪೋಟು ವರುಕಿನ್ ಱೇನು
ಕ್ಕೆನ್ನೈಯಿನುಱ್ ಕುಱಿಕಣ್‌ಮಿಕ ನಲ್ಲ ವಾನ;
ವಿತನಾಲೇ ಯುನ್‌ಮೈನ್ದನ್ ಱಿಣ್ಣ ನಾನ
ವೆನ್ನಿವರಿ ಚ್ಚಿಲೈಯೋನಿನ್ ನಳವಿ ಲನ್‌ಱಿ
ಮೇಮ್ಪಟುಕಿನ್ ಱಾ' ನೆನ್‌ಱು ವಿರುಪ್ಪಿ ವಾೞ್ತ್ತಿ
ಕ್ಕೊನ್ನವನ ತೆಯ್ವಙ್ಕಣ್ ಮಕಿೞ ವೂಟ್ಟ
ವೇಣ್ಟುವನ ಕುಱೈವಿನ್‌ಱಿ ಕ್ಕೊಣ್ಟು ಪೋನಾನ್'.

691. ತೆಯ್ವನಿಕೞ್ ಕುಱಮುತಿಯಾಳ್ ಚೆನ್‌ಱ ಪಿನ್‌ಪು
ತಿಣ್ಣನಾರ್ ಚಿಲೈತ್ತಾತೈ ಯೞೈಪ್ಪ ಚ್ಚೇರ್‌ಕೊಳ್
ಮೈವಿರವು ನಱುಙ್ಕುಞ್ಚಿ ವಾಚ ಕ್ಕಣ್ಣಿ
ಮಣಿನೀಲ ಮಲೈಯೊನ್‌ಱು ವನ್ದ ತೆನ್‌ನ
ಕೈವಿರವು ಚಿಲೈವೇಟರ್ ಪೋಱ್ಱಿ ವನ್ತು
ಕಾತಲ್‌ಪುರಿ ತಾತೈಕೞಲ್ ವಣಙ್ಕಮ್ ಪೋತಿಱ್
ಚೆವ್ವರೈಪೋಱ್ ಪುಯಮಿರಣ್ಟು ಱ್ಚ್ಚಿಱಿಯ ಪ್ಪುಲ್ಲಿ
ಚ್ಚೆೞುಮ್ಪುಲಿತ್ತೋ ಲಿರುಕ್ಕೈಯಿನ್‌ಮುನ್ ಱೇರ ವೈತ್ತಾನ್.

692. ನಾಗನು ತನ್ನ ಮುಂದೆ ಕುಳಿತಿದ್ದ ಮಗನ ಮುಖವನ್ನು ನೋಡಿ, 'ನಾನು ವೃದ್ಧಾಪ್ಯವನ್ನು ಹೊಂದಿದುದರಿಂದ, ಹಿಂದಿನಂತೆ ಉತ್ಸಾಹದಿಂದ ಬೇಟೆಯಾಡಲು ಇನ್ನುಮೇಲೆ ನನ್ನಿಂದಾಗದು. ನನಗಿಂತಲೂ ಮೇಲಾಗಿ ನೀನು ನೆಲೆಗೊಂಡ ಮಲೆವಾಸಿಗಳಾದ ಈ ಬೇಡರ ಕುಲದ ಪರಿಪಾಲನೆಯನ್ನು ವಹಿಸಿಕೊಂಡು, ಹಗೆಗಳ ಊರನ್ನು ಜೈಸಿ, ಮೃಗಬೇಟೆಯನ್ನಾಡಿ, ವಂಶಪರಂಪರೆಯಾಗಿ ಬರತಕ್ಕ ಸ್ವಂತ ಹಕ್ಕಿನ ನಾಯಕತ್ವವನ್ನು ಯಾವಾಗಲೂ ವಹಿಸುವವನಾಗು' ಎಂದು ಆಶೀರ್ವದಿಸಿ, ತನ್ನ ಅರಸಾಳ್ವಿಕೆಯ ಗುರುತಾದ ಉಡುವ ಚರ್ಮವನ್ನೂ, ಖಡ್ಗವನ್ನೂ ಅವನ ಕೈಯಲ್ಲಿ ಆಗಲೇ ಕೊಟ್ಟನು.

693. ತಂದೆಯ ನೆಲೆಯನ್ನು ಮನಸ್ಸಿನಲ್ಲಿ ತಿಳಿದುಕೊಂಡು, ಅದರಿಂದ ಪರಿತಾಪಪಟ್ಟು, ತಮ್ಮ ವಂಶದ ನಾಯಕತೆಗೆ ಒಂದು ಆಧಾರವು ಬೇಕಾದಂತಹ ಕೊರತೆಯನ್ನು ನೀಗಬೇಕೆಂದು ಮನಸ್ಸಿನಲ್ಲಿ ಒಳಕೊಂಡ ಅಭಿಪ್ರಾಯದಿಂದ ತಂದೆಯ ಮಾತಿಗೆ ಪ್ರತಿಹೇಳಲಾರದೆ ವಹಿಸಿಕೊಂಡು, ತಮ್ಮ ವಂಶಕ್ಕೆ ಹಿರಿಯನಾದ ಅವನ ಪಾದಗಳನ್ನು ನಮಿಸಿ, ಅವನು ವಿಧಿಯಂತೆ ಕೊಟ್ಟ ಮೊದಲಸುರಿಗೆಯನ್ನೂ ಉಡುಗೆಯ ತೊಗಲನ್ನೂ ಪಡೆದುಕೊಂಡು ರಾಜ್ಯಭಾರದ ಚಿಂತೆಯನ್ನು ತಾಳಿ ನಿಂತವನಾದ ತಿಣ್ಣನಿಗೆ ಅವನ ಪೂಜ್ಯ ತಂದೆಯು ಸಂತೋಷದಿಂದ ಹೇಳುವನು.

---

692. ಮುನ್‌ನಿರುನ್ತ ಮೈನ್ತನ್‌ಮುಕ ನೋಕ್ಕಿ ನಾಕನ್
'ಮೂಪ್ಪೆನೈವ ನ್ತಟೈತಲಿನಾಲ್ ಮುನ್‌ಪು ಪೋಲ
ಎನ್‌ನುಟೈಯ ಮುಯಱ್ಚಿಯಿನಾಲ್ ವೇಟ್ಟೈ ಯಾಟ
ವಿನಿಯೆನಕ್ಕು ಕ್ಕರುತ್ತಿಲ್ಲೈ; ಯೆನಕ್ಕು ಮೇಲಾಯ್
ಮನ್‌ನುಚಿಲೈ ಮಲೈಯರ್‌ಕುಲ ಕ್ಕಾವಲ್ ಪೂಣ್ಡು
ಮಾಱ್ಱಿನ್ತು ಮಾವೇಟ್ಟೈ ಯಾಟಿ ಯೆನ್‌ಱುಮ್
ಉನ್‌ನುಟೈಯ ಮರಪುರಿಮೈ ತಾಙ್ಕು ವಾ'ಯೆನ್
ಱುಟೈ ತೋಲು ಞ್ಚುರಿಕೈಯುಙ್ಕ ಕೊಟುತ್ತಾ ನನ್‌ಱೇ.

693. ತನ್ತೈನಿಲೈ ಯುಟ್ಕೊಣ್ಡು ತಳರ್ವು ಕೊಣ್ಡು,
ತಙ್ಕಳ್‌ಕುಲ ತ್ತಲೈಮೈಕ್ಕು ಚ್ಚಾರ್ವು ತೋನ್‌ಱ
ವನ್ತಕುಱೈ ಪಾಟತನೈ ನಿರಪ್ಪ ಮಾಱಾ
ಮನಙ್ಕೊಣ್ಡು ಕುಱಿಪ್ಪಿನಾನ್ ಮಱಾಮೈ ಕೊಣ್ಡು,
ಮುನ್ತೈಯವನ್ ಕಟಿಲ್‌ವಣಙ್ಕಿ ಮುಱೈಮೈ ತನ್ತ
ಮುತಱ್‌ಚುರಿಕೈ ಯುಟೈತೋಲುಮ್ ವಾಙ್ಕಿ ಕ್ಕೊಣ್ಡ
ಚಿನ್ತೈಪಾ ಱಙ್ಕೊಳನಿನ್‌ಱ ತಿಣ್ಣ ನಾರ್‌ಕ್ಕು
ತ್ತಿರುತ್ತಾತೈ ಮುಕಮಲರ್‌ನ್ತು ಚೆಪ್ಪು ಕಿನ್‌ಱಾನ್—

694. 'ನಮ್ಮ ಕುಲದ ಬೇಡರನ್ನೂ ಸ್ವಂತದ ಸಂಬಂಧಿಕರನ್ನೂ ನಾನು ವಹಿಸಿಕೊಂಡು ಪರಿಪಾಲಿಸಿದುದಕ್ಕಿಂತಲೂ ಮೇಲಾಗಿ ಅವರಿಗೆ ಹಿತವನ್ನು ಮಾಡಿ, ಯುದ್ಧರಂಗದಲ್ಲಿ ಪಕ್ಕದ ವೈರಿ ಭೂಮಿಯನ್ನು ಕವರ್ದು[1], ಆ ಕಾರ್ಯದಲ್ಲಿ ಕೈಯಲ್ಲಿ ಧರಿಸಿದ ಬಿಲ್ಲಿನಿಂದ ಏರ್ಪಡುವ ಭಾಗ್ಯವು ಕಡಮೆಯಾಗದ ಮೇಲ್ಮೆಯಲ್ಲಿ ಬಾಳುವವನಾಗು. ಆಶಿಸತಕ್ಕ ಬೇಟೆಯ ಮುಖದಲ್ಲಿ ಒಳ್ಳೆಯ ಬೇಟೆಗಳು ನಿನಗೆ ದೊರೆಯುವುವು. ನೀನು ತಾಮಸ ಮಾಡದೆ ಶೀಘ್ರವಾಗಿ ಬೇಟೆಯಾಡುವುದಕ್ಕೆ ಈ ಬಲಿಷ್ಠರೂ ಕ್ರೂರರೂ ಆದ ಬಿಲ್ಲನ್ನು ತಾಳಿದ ಬೇಡರುಗಳೊಡನೆ ಹೊರಡುವವನಾಗು'. ಈ ರೀತಿ ನಾಗನು ತಿಣ್ಣನಿಗೆ ಅನುಮತಿ ಕೊಟ್ಟನು.

695. ಕೆಂಪಗಾದ ಕಣ್ಣುಗಳುಳ್ಳ ಜಯಯುಕ್ತವಾದ ಗಂಡುಸಿಂಹದಂತೆ ಪರಾಕ್ರಮವುಳ್ಳ ತಿಣ್ಣನು, ತಪಸ್ಸಿನ ಹಿರಿಮೆಯನ್ನು ಪಡೆದ ಕ್ರೂರವಾದ ಕಣ್ಣುಗಳನ್ನೂ ಜಯವನ್ನೂ ಉಳ್ಳ ತಂದೆಯ ಪಾದಗಳಲ್ಲಿ ಸಾಷ್ಟಾಂಗ ನಮಸ್ಕರಿಸಿ, ಎದ್ದು ನಿಂತು ಅನುಮತಿ ಪಡೆದುಕೊಂಡು ಹೊರಬಂದು, ಬೇಡರೊಡನೆ ಹೋಗಿ, ಆಮೇಲೆ ಮಂಗಲಕರವಾದ ನೀರುಳ್ಳ ಒರತೆನೀರಲ್ಲಿ ನೀರಾಡಿ[2] ಮನೆಯಲ್ಲಿ ತಂಗಿ, ಆ ರಾತ್ರಿ ತೀರುವ ಬೆಳಗಿನ ಜಾವದಲ್ಲಿ ರೇಖೆಗಳಿರುವ ಬಿಲ್ಲಿನ ಶಾಲೆಯಲ್ಲಿ ಜಯವನ್ನು ತರುವ ಬಿಲ್ಲನ್ನು ಕೊಂಡು, ಬೇಟೆಯ ವೇಷವನ್ನು ಕೊಳ್ಳುವುದಕ್ಕಾಗಿ ಅಲಂಕರಿಸುವ ಉದ್ದಿಮೆಯನ್ನು ಮಾಡುವ ಕೈ ಉಳ್ಳ ಕೆಲಸದಾಳುಗಳೊಡನೆ ಸಂತೋಷಿಸಿ ಅಲಂಕಾರದ ಎಡೆಯನ್ನು ಪ್ರವೇಶಿಸಿದನು.

---

694. 'ನಮ್ಮುಟೈಯ ಕುಲಮುಱವರ್ ಚುಱ್ಱ ತ್ತಾರೈ
ನಾನ್‌ಕೊಣ್ಡು ಪರಿತ್ತತನ್‌ಮೇ ನಲಮೇ ಚೆಯ್ತು
ತೆಮ್ಮುನೈಯಿ ಲಯಱ್ಪುಲಙ್ಕಳ್ ಕವರ್‌ನ್ತು ಕೊಣ್ಡು
ತಿಣ್ಣಿಲೈಯಿನ್ ವಳಮೊಟಿಯಾ ಚ್ಚಿಱಪ್ಪಿನ್ ವಾಟ್‌ವಾಯ್!
ವೆಮ್ಮುನೈಯಿಲ್ ವೇಟ್ಟೈಕಳು ಮುನಕ್ಕು ವಾಯ್‌ಕ್ಕುಮ್;
ವಿರೈನ್ತುನೀ ತಾಟಾತೇ ವೇಟ್ಟೈ ಯಾಟ
ಇಮ್ಮುರಣ್‌ವೆ ಞ್ಚಿಲೈವೇಟರ್ ತಙ್ಕ ಳೋಟು
ಮೆಟುಕ!' ವೆನ ವಿಟೈಕೊಟುತ್ತಾ ನಿಯಲ್ಪಿ ನಿನ್‌ಱಾನ್.

695. ಚೆಙ್ಕಣ್‌ವಯ ಕ್ಕೋಳರಿಯೇ ಱನ್‌ನ ತಿಣ್ಮೈ
ತಿಣ್ಣನಾರ್ ಚೆಯ್ತವತ್ತಿನ್ ಪೆರುಮೈ ಪೆಱ್ಱ
ವೆಙ್ಕಣ್‌ವಿಱ ಱಾತೈಕಟಲ್ ವಣಙ್ಕಿ ನಿನ್‌ಱು
ವಿಟೈಕೊಣ್ಡು ಪುಱಮ್‌ಪೋನ್ತು ವೇಟ ರೋಟು
ಮಙ್ಕಲನೀರ್ ಚುನೈಪಟಿನ್ತು ಮನೈಯಿನ್ ವೈಕಿ
ವೈಕಿರುಳಿನ್ ಪುಲರ್‌ಕಾಲೈ ವರಿವಿಱ್ ಚಾಲೈ
ಪ್ಪೊಙ್ಕುಚಿಲೈ ಯಟಲ್‌ವೇಟ್ಟೈ ಕ್ಕೋಲ ಙ್ಕೊಳ್ಳ
ಪ್ಪುನೈತೊಟಿಱಿಕ್ಕೈ ವಿನೈಞರೊಟುಮ್ ಪೊಲಿನ್ತು ಪುಕ್ಕಾರ್.

---

1. ಅಪಹರಿಸಿ. 2. ಸ್ನಾನಮಾಡಿ.

696. ಸಾಂದ್ರತೆಯಿರುವ ದಟ್ಟವಾದ ತಲೆಕೂದಲ ಸುರುಳುಗಳು ಹೋಗಿ ನೇರಾಗಿ ನಿಮಿರಿ ನಿಲ್ಲುವ ಹಾಗೆ ತಲೆಯ ಮೇಲೆ ಸುತ್ತಿಕಟ್ಟಿ, ಅದರಲ್ಲಿ ತಳಿರುಗಳಿಂದ ಮಾಡಿದ ಮಾಲೆಯನ್ನಿಟ್ಟು, ಅದರೆಡೆಯಲ್ಲಿ ದಟ್ಟವಾದ ಪ್ರಕಾಶಯುಕ್ತವಾದ ನವಿಲು ಗರಿಯನ್ನು ಸೇರಿಸಿ, ಸುವಾಸನೆಯುಳ್ಳ ಮುಲ್ಲೆಮಾಲೆಯೊಡನೆ ಕುರಿಞ್ಚಿಹೂವನ್ನೂ ವೆಟ್ಚಿಹೂವನ್ನೂ ತುಂಬಿದ ತುಂಬಿಗಳ ಕೂಟವು ಮುಸುರುವಂತೆ ಪ್ರಶಸ್ತವಾಗಿ ಹಿಂಭಾಗ ದಲ್ಲಿ ಸೇರುವಂತೆ ಮಾಡಿ,

697. ಮುಂಭಾಗದ ನೆತ್ತಿಯ ಮೇಲೆ, ನವಿಲಗರಿಯ ಅಡಿಯಲ್ಲಿ ಎಡೆಎಡೆಯಲ್ಲಿ ಗುಲಗುಂಜಿ ಮಣಿಗಳನ್ನು ಒಡನೆ ಇಟ್ಟು, ಸುತ್ತಿದ ರೋಮಗಳ[1] ಹಗ್ಗವನ್ನು ಹೊಂದು ವಂತೆ ನೆತ್ತಿಯ ಮೇಲಿಟ್ಟು, ಮಿಂಚಿನಂತಹ ಶಂಖದಿಂದ ಮಾಡಿದ ಪ್ರಕಾಶಿಸುವ ಬೆಳ್ಳಿಯ ತೋಡು ಕಿವಿಯಲ್ಲಿ ಹೊಂದಿಕೆಯಾಗಿ ಎರಡು ಪಕ್ಕವೂ ನಿಲ್ಲಲು ಪೂರ್ಣಚಂದ್ರನಂತೆ ಹೊಂದಿಕೆಯಾಗುವಂತೆ ಇಟ್ಟು,

698. ಬಿಳಿಯಾದ ಮುತ್ತಿನ ಶಂಖ ಇತ್ಯಾದಿ ಚಿಪ್ಪುಗಳಿಂದ ಮಾಡಿದ ಪ್ರಕಾಶ ಯುತವಾದ ಮಾಲೆಯನ್ನು ಹೊಂದಿಕೆಯಾಗುವಂತೆ ಕೊಂಡು, ಶಂಖಮಣಿಯೊಡನೆ ಹಲಬಗೆಯ ಮಣಿಗಳನ್ನೂ ಕೋದು, ಅವುಗಳೆಡೆಯಲ್ಲಿ ಹಂದಿಯ ಕೋರೆಗಳನ್ನು ಬಾಲಚಂದ್ರನ ಕೊಂಬುಗಳನ್ನು ಹೊಂದುವಂತೆ ಜೋಲುಬಿಟ್ಟು, ಇವುಗಳನ್ನು ದೊಡ್ಡ ಹುಲಿಯ ಬಲವಾದ ಚರ್ಮದಲ್ಲಿ ಹೊಂದಿಕೆಯಾಗುವಂತೆ ಕಟ್ಟಿ ಅಲಂಕರಿಸಿ ಮಾಡಿದ ತಟ್ಟೆಯಂತಹ ತಳವನ್ನು ಕೊಂಡ ಚನ್ನವೀರಂ ಎಂಬ ಜಯಯುಕ್ತವಾದ ಮಾಲೆಯು ಕತ್ತಿನಲ್ಲಿ ಶೋಭಿಸಲು,

ವೇಱು

696. ನೆಱಿಕ್ಕೊಣ್ಡ ಕುಞ್ಚಿ ಚ್ಚುರುಟುಞ್ಚಿ ನಿಮಿರ್‌ನ್ದು ಪೊಙ್ಗ
ಮುಱಿಕ್ಕೊಣ್ಡ ಕಣ್ಣಿಕ್ಕಿಟೈ ಮೊಯ್‌ಯ್ಯಳಿ ಪ್ಪೀಲಿ ಚೇರ್‌ತ್ತು,
ವೆಱಿಕ್ಕೊಣ್ಡ ಮುಲ್ಲೈ ಪ್ಪಿಣೈಮಾತು ಕುಱಿಞ್ಚಿ ವೆಟ್ಚಿ
ಚೆಱಿಕ್ಕೊಣ್ಡ ವಣ್ಟಿನ್‌ಕುಲ ಞ್ಚೀರ್‌ಕೊಳ ಪ್ಪಿನ್‌ಪು ಚೆಯ್ತು,

697. ಮುನ್‌ನೆಱ್ಱಿಯಿನ್ ಮಾತು ಮುರುನ್ತಿಟೈ ವೈತ್ತ ಕುನ್‌ಱಿ
ತನ್‌ನಿಱ್ಪುರಿ ಕೊಣ್ಡ ಮಯಿರ್‌ಕ್ಕಯಿಱ್ ಱಾರ ಚ್ಚಾತ್ತಿ,
ಮಿನ್‌ನಿಱ್ಱಿಕಟ್ ಚಙ್ಕು ವಿಳಙ್ಕುವೆಣ್ ಟೋಟು ಕಾತಿನ್
ಮನ್‌ನಿಪ್ಪುಟೈ ನಿನ್‌ಱನ ಮಾಮತಿ ಪೋಲ ವೈಕ,

698. ಕಣ್ಪತ್ತಿಟೈ ವೆಣ್‌ಕವ ಟಿಕ್ಕತಿರ್ ಮಾಲೈ ಚೇರ
ಕ್ಕೊಣ್ಟಕ್ಕೊಟು ಪನ್‌ಮಣಿ ಕೋತ್ತಿಟೈ ಯೇನ ಕ್ಕೋಟು
ತುಣ್ಟಪ್ಪಿಱೈ ಪೋಲ್ವನ ತೂಙ್ಕಿಟ, ವೇಙ್ಕೈಯ ವನ್‌ಱೋ
ಲಿಣೈಟ್ಟಲಚ್ಚೆಯಲ್ ಪೊಙ್ಕಿಯ ಚನ್‌ನವೀ ರನ್ತು ಯಙ್ಕು,

1. ಜಿಂಕೆ ಇತ್ಯಾದಿ ಪ್ರಾಣಿಗಳ ರೋಮದ ಹಗ್ಗ.

699. ಎದೆಯಲ್ಲಿ ಆನೆಯ ದಂತದಿಂದ ಮಾಡಿದ ಸಣ್ಣ ಮಣಿಗಳ ಮಾಲೆಯು ಕೆಳಬೀಳುವಂತೆ ಜೋಲಲು, ಮಾಲೆಗಳಿಂದ ಶೋಭಿಸುವ ತೋಳಲ್ಲಿ ಬಾಹುಬಳೆಗಳು ಚೆಲುವಾಗಿ ಪ್ರಕಾಶಿಸಲು, ಹೊಂದಿಕೆಯಾಗಿ ಪ್ರಕಾಶಿಸುವ ಕಂಕಣವು ಮುಂಗೈಯಲ್ಲಿ ಶೋಭಿಸಲು, ಬಿಲ್ಲಲ್ಲಿ ಕಟ್ಟಿದ ಹೆಗ್ಗವನ್ನು ಕಾರವೊಳಗಿನಂತೆ ಝೇಂಕಾರ ಮಾಡಲು ಕೈಬೆರಳುಗಳಿಗೆ ಚೀಲವನ್ನು ಕಟ್ಟಿ,

700. ನಡುವಿನಲ್ಲಿ ನವಿಲಗರಿಯುಳ್ಳ ಹುಲಿದೊಗಲಿನ ಉಡುಗೆಯ ಮೇಲೆ ಕಡಲಲೆಗಳಲ್ಲಿ ಹೊಂದುವ ಬಿಳಿಯ ಹಲಬಗೆಯ ಕಡಲ ಚಿಪ್ಪುಗಳನ್ನು ಕೋದು, ಚೌಕಟ್ಟಾಗಿ ಕಟ್ಟಿ, ಸಾಲಾಗಿ ಶೋಭಿಸುವ ನಿಡಿದಾದ ಖಡ್ಗದ ಒರೆಯ ತೊಗಲನ್ನು ಸುರಿಗೆಯ ಪಕ್ಕದಲ್ಲಿ ಒಂದು ವಿಧ ರಸವನ್ನು ಹಾಕಿದ ಚರ್ಮದ ಬಾರನ್ನೂ ಬೆಸುಗೆಯನ್ನೂ ಹಾಕಿ ಕಟ್ಟಿ,

701. ಕಾಲಲ್ಲಿ ವೀರಗೆಜ್ಜೆಯನ್ನು ಶೋಭಿಸುವಂತೆ ಅಲಂಕರಿಸಿ, ಶ್ರೀಪಾದಗಳಲ್ಲಿ ಹೊಂದಿಕೆಯಾಗಿ ಹೊಲಿಗೆಯುಳ್ಳ ನಿಡಿದಾದ ಮೆಟ್ಟು ಶೋಭಿಸಲು, ಭಾರವಾದ ದೊಡ್ಡ ಬಿಲ್ಲನ್ನು ಬಲವಂದು ನಮಿಸಿ, ತಿಣ್ಣನು ತನ್ನ ಪಾದಗಳನ್ನು ಕ್ರಮವಾಗಿಟ್ಟುಕೊಂಡು, ಬಿಲ್ಲಿಗೆ ಹಗ್ಗವನ್ನೇರಿಸಿ, ಅದನ್ನು ವೃತ್ತಾಕಾರವಾಗಿ ಮಾಡಿ ಆಶ್ಚರ್ಯಕರವಾಗಿ ತಾಳಿದನು.

---

699. ಮಾರ್ಪಿಱ್ಱಿೞು ತನ್ತ್ರ ಮಣಿತ್ತಿರಣ್ ಮಾಲೈ ತಾೞ,
ತ್ತಾರಿಱ್ಪೊಲಿ ತೋಟ್ಪಲ ಯಱ್ಕ ಟೞ್ಱೈತ್ತ ಮಿನ್ನ,
ಚ್ಚೇರ್ವಿಱ್ಪೊಲಿ ಕಙ್ಕಣ ಮಾತು ತಿಕೞ್ನ್ತ ಮುನ್ಕೈ
ಕ್ಕಾರ್ವಿಱ್ಱಿಱ್ ನಾಣೆಱ್ ಕೈಚ್ಚಿಱ್ ಕಟ್ಟಿ ಕಟ್ಟಿ,

700. ಅರೈಯಿಱ್ಚರ ಣತ್ತುರಿ ಯಾಟ್ಟೈಯಿನ್ ಮಾತು ಪೌವ
ತ್ತಿರೈಯಿಱ್ಪಟು ವೆಳ್ಳಲ ಕಾರ್ತ್ತು ವಿಳಿಮ್ಪು ಚೇರ್ತ್ತು,
ನಿರೈಯಿಱ್ಪೊಲಿ ನೀಳುಟ್ಟೈ ತೋಲ್ಚುರಿ ಕೈಪ್ಪು ಱಱ್ಱ್
ವಿರೈಯಿಱ್ಪುವರ್ ವಾರ್ವಿಚಿ ಪೋಕ್ಕಿ ಯುೞ್ಱೈತ್ತು ವೀಕ್ಕಿ,

701. ವೀರಕ್ಕಟಲ್ ಕಾಲಿನ್ ವಿಳಙ್ಕ ವಣಿನ್ತು ಪಾತ
ಱ್ಱೇರತ್ತೊಟು ನೀಟು ಚೆರುಪ್ಪು ವಿರುಪ್ಪು ವಾಯ್ಪ್ಪ
ಪ್ಪಾರಪ್ಪೆರು ವಿಲ್ಪಲ ಱ್ಱ್ಕಣ್ಣು ಪಣಿನ್ತು ತಿಣ್ಣನ್
ಚಾರತ್ತಿರು ತ್ತಾಣ್ಮುಟಿ ತ್ತೇಱ್ಱ್ ವಿಯನ್ತು ತಾೞ್ಕಿ,

702. ಆಮೇಲೆ ಭುವನದ ಕಷ್ಟವು ನೀಗಲು, ಎತ್ತರವಾದ ದೊಡ್ಡ ಕಾಳ ಮೇಘದಂತೆ ಠಣ್ಣೆಂದು ಶಬ್ದಿಸಲು, ಭಯಂಕರವಾದ ಕೋಪದ ಕಣ್ಣುಳ್ಳ ದೊಡ್ಡ ಮೃಗಗಳು ತೊಲಗಿ ಓಡಲು, ತನ್ನ ಕೆಂಪಗಾದ ಕರತಲದಿಂದ ಸವರಿ, ಬಿಲ್ಲ ಹಗ್ಗವನ್ನು ಮೆದುವಾಗಿ ಝೇಂಕರಿಸಿದನು.

703. ಸಣ್ಣ ಝೇಂಕಾರವನ್ನು ಮಾಡಿದ ಪರಾಕ್ರಮಯುತವಾದ ಗಂಡುಸಿಂಹ ದಂತಿರುವ ತಿಣ್ಣನು ತನ್ನೊಡನೆಯೇ ಬರುವಂತೆ ಬೇಹುಕಾರರಿಗೆ ಆಜ್ಞೆಯನ್ನು ವಿಧಿಸಿ, ಬಿಲ್ಲನ್ನು ಧರಿಸಿದ ಬೇಡರ ಕೊಟಗಳ ಉಡುಕೆಯು ಶಬ್ದಿಸುವ ಮುಂದಿಲ[1]ಲ್ಲಿ ಬಂದು ಅವರು ಹರಸುವ ಹಲಬಗೆಯ ಆಶೀರ್ವಾದಗಳು ಎಲ್ಲಾ ದಿಕ್ಕುಗಳಲ್ಲಿಯೂ ತುಂಬಲು, ಬಲವಾದ ಅಂಬುಗಳನ್ನು ಅಂಬುಗೂಡಿ[2]ನಿಂದ ಪರೀಕ್ಷಿಸಿ ತೆಗೆದುಕೊಂಡು ನಿಂತನು.

704. ದೊಡ್ಡ ಬಿಲ್ಲುಗಳನ್ನು ತಾಳಿದ ಬೇಡರು, ಬೇಟೆಗೆ ತಯಾರಾಗಿ ಅವನ ಪಕ್ಕದಲ್ಲಿ ಕೂಡಿದಾಗ, ನೀಲೋತ್ಪಲ ಮಲರುಗಳ ದೊಡ್ಡ ಗೊಂಚಲುಗಳ ಕಾಂತಿಯಂತೆ ಪಸರಿಸುವ ನೀಲಕಾಂತಿಯುಳ್ಳ ತಿಣ್ಣನ ಮುಂದೆ, ಜೇನು, ಒಳ್ಳೆಯ ಮಾಂಸ, ಕಳ್ಳು, ಅರಳು ಇನ್ನೂ ಇವುಗಳಂತೆಯೇ ಬೇರಿತರ ವಸ್ತುಗಳಿಂದ ಕಾಡುಬಲಿಯನ್ನು ಕೊಟ್ಟ ದೇವರಾಟ್ಟಿಯು ಬಂದಳು.

---

702. ಅಙ್ಕಪ್ಪೊಟು ತಿಙ್ಪವ ನತ್ತಿಟರ್ ವಾಙ್ಕ ವೋಙ್ಕಿ
ತ್ತುಙ್ಕಪ್ಪೆರು ಮಾಮಟಿಕ್ಕೈ ಪೋನ್ಱು ತುಣ್ಣೆನ್ ಱಿಕೊಲಿಪ್ಪ
ವೆಙ್ಕಟ್‌ಚಿನ ನೀಟು ವಿಲಙ್ಕು ವಿಲಙ್ಕಿ ನೀಙ್ಕ
ಚ್ಚೆಙ್ಕೈತ್ತಲ ತ್ತಾಱಿಟ ವಿಚ್ಚೆಱು ನಾಣೆ ಱಿನಾರ್.

703. ಪಲ್ವೇಱು ವಾಳಿ ಪುತ್ತೈಪಾರ್‌ತ್ತುಟನ್ ಪೋತ ವೇವಿ
ವಿಲ್ವೇಟ ರಾಯ ತ್ತುಟಿಮೇವಿ ಯೊಲಿಕ್ಕು ಮುನ್‌ಱಿಲ್
ಚೊಲ್ವೇಱು ವಾಟ್‌ತ್ತು ತ್ತಿಚೈತೋಱು ನ್ತುತೈನ್ತು ವಿಮ್ಮ
ವಲ್ಲೇಱು ಪೋಲ್ವಾ ರಟಲ್‌ವಾಳಿ ತೆರಿನ್ತು ನಿನ್‌ಱಾರ್.

704. ಮಾನಚ್ಚಿಲೈ ವೇಟರ್ ಮರುಙ್ಕು ನೆರುಙ್ಕ ಪೋತಿಱ್
ಪಾನಱ್‌ಕುಲ ಮಾಮಲ ರಿಱ್ಪಿಟರ್ ಚೋತಿ ಯಾರ್‌ಮುನ್
ಱೇನಱ್ಱಚೈ ತೇಱಲ್ ಚರುಪ್ಪೊರಿ ಮಱ್ಱು ಮುಳ್ಳ
ಕಾನಪ್ಪಲಿ ನೇರ್‌ಕಟ ವುಟ್‌ಪೊಱುಕ್ಕೈ ಯಾಟ್ಟಿ ವಂತಾಳ್.

---

1. ಮನೆಯ ಮುಂಭಾಗ, ಕಳ. 2. ಬತ್ತಳಿಕೆ.

705. ಎಲ್ಲೆಡೆಗಳಲ್ಲಿ ಕೂಡಿ ನಿಂತು ಮುಸುರಿರುವ ಬಿಲ್ಲಬೇಡರು ಪಕ್ಕಕ್ಕೆ ನಿಲ್ಲಲು ದೇವರಾಟ್ಟಿಯು 'ಶ್ಯಾಗಿಯಾದ ತಿಣ್ಣನ ಸಮಿಾಪವನ್ನು ಸೇರಿ ಅವನ ನೆತ್ತಿಯಲ್ಲಿ ಅಕ್ಷತೆಯನ್ನಿಟ್ಟು 'ನಿನ್ನ ಅಜ್ಜನಿಗೂ ಇಂತಹ ಮೇಲ್ಮೆಯು ಇದ್ದಿಲ್ಲ. ನಿನ್ನ ಬಲುಮೆಯು ಬಹು ಹಿರಿದು. ಇದು ನಮ್ಮ ಮಾತಿನ ಅಳತೆಗೆ ಸಿಗದು' ಎಂದು ಆಶೀರ್ವದಿಸಿದಳು.

706. ಈ ರೀತಿ ಆಶೀರ್ವದಿಸುವ ದೇವರಾಟ್ಟಿಗೆ ಬಹುವಾದ ಹಿರಿಯ ಸನ್ಮಾನಗಳನ್ನು ಪ್ರತಿಯಾಗಿ ಮಾಡಿ, ಹೋಗಲು ಅನುಮತಿ ಕೊಟ್ಟು, ಬಲವಾದ ಬಿಲ್ಲನ್ನು ಕೈಯಲ್ಲಿ ತಾಳಿದ, ಕಾರ್ಗಾಲದ ಮಳೆಯು ಮೋಡದಂತೆ ಸತ್ಯವಾದ ಕಾಣುವಿಕೆಯನ್ನು ಕೊಂಡ ತಿಣ್ಣನು ಬೇಟೆಯಲ್ಲಿ ಉತ್ಸಾಹವನ್ನು ತಾಳಿ ಹೊರಟನು.

707. ಹೀಗೆ ಬೇಟೆಗಾಗಿ ಎದ್ದು ಗಂಡುಸಿಂಹದಂತೆ ಹೊರಟ ಹಿರಿಮೆಯುಳ್ಳ ತಿಣ್ಣನ ಮುಂದೆ, ಕಾಲುಗಳಲ್ಲಿ ಧರಿಸಿದ ಜೋಡುಗಳುಳ್ಳವನಾಗಿ, ವಿಶಾಲವಾದ ಚರ್ಮವನ್ನು ಮೇಲೆ ಕಟ್ಟಿದ ದೀರ್ಘವಾದ ತೊಗಲುಡುಗೆಯನ್ನು ತಾಳಿಕೊಂಡು, ಧೈರ್ಯವುಳ್ಳವರೂ, ಅಂಬುಗಳೊಡನೆ ಬಿಲ್ಲನ್ನು ತಾಳಿದ ಕೈಗಳುಳ್ಳವರೂ ಆಗಿ ಲೆಕ್ಕವಿಲ್ಲದ ಕಠೋರರೂ, ಪರಾಕ್ರಮಿಗಳೂ ಆದ ಬೇಡರುಗಳು ದಟ್ಟವಾಗಿ ಸೇರಿದ ಕೂಟವು ಮೇಲೆದ್ದಿತು.

---

705. ನಿನ್‌ಱಿಙ್ಕು ಮೊಯ್‌ಕ್ಕು ಇಱೈವೈಟರ್‌ಕ ಣೀಙ್ಗ ಪ್ಪುಕ್ಕು
ಚ್ಚೆನ್‌ಱಙ್ಕು ವಳ್ಳ ಱಿರುನೆಱ್ಱಿಯಿಱ್ ಚೇಟ್ಟೈ ಚಾತ್ತಿ
'ಉನ್‌ಱನ್ತೈ ತನ್ತೈಕ್ಕು ಮಿನ್ನನ್‌ಮೈಕ ಳುಳ್ಳ ವಲ್ಲ
ನನ್‌ಱುಮ್ಪೆರಿ ತುನ್‌ವಿಱಿ ನಮ್ಮಳ ವನ್‌ಱಿ' ತೆನ್‌ಱಾಳ್.

706. ಅಪ್ಪೆಱ್ಱಿಯಿನ್ ವಾಟ್‌ತ್ತು ಮಣಙ್ಕಟ್ಟೈ ಯಾಟ್ಟಿ ತನ್ನೈ
ಚ್ಚೆಪ್ಪಱ್‌ಕರಿ ತಾಯ ಚಿಱಪ್ಪಿತಿರ್ ಚೆಯ್‌ತು ಪೋಕ್ಕಿ
ಕ್ಕೈಪ್ಪಱ್ಱಿಯ ತಿಣ್ಜಿಲೈ ಕಾರ್‌ಮುಟಿಕ್ಕ ಮೇಕ ಮೆನ್ನ
ಮೆಯ್‌ಪ್ಪೋಙ್ಕಿಯ ವೇಟ್ಟೈಯಿನ್ ಷೋಙ್ಕೆಱಙ್ ಟೆಟುನ್ತು ಪೋನ್ನಾರ್.

707. ತಾಳಿಲ್ ವಾಟ್ಟಿ ರುಪ್ಪರ್ ತೋಱ ಟೆಯ್ತ್ತ ನೀಟು ತಾನೈಯಾರ್
ವಾಳಿ ಯೋಟು ಚಾಪ ಮೇವು ಕೈಯರ್ ವೆಯ್ಯ ವನ್‌ಕಣಾರ್
ಆಳಿ ಯೇಱು ಪೋಲ ವೇಕು ಮಣ್ಣ ಲಾಮುರ್ ನೆಣ್ಣಿಲಾರ್
ಮಿಾಳಿ ವೇಟರ್ ನೀಟು ಕೂಟ್ಟ ಮಿಕ್ಕು ಮೇಲೆ ಟುನ್ತತೇ.

708. ಬಲವಾದ ಸಂಕಲೆಯಿಂದ ಸೇರಿ ಕಟ್ಟಿದ ಹಗ್ಗವನ್ನು ವೀರರು ಗಟ್ಟಿಯಾಗಿ ಹಿಡಿದುಕೊಂಡಿರುವಾಗ, ನಾಯಿಗಳು, ಬೇಡರ ಬಿಲ್ಲ ಮೇಲೆ ಸೇರಿರುವ ಜಯವನಿತೆಯ ಪಾದಗಳು ಮುಂದೆ ನೀಡುವಂತಿರತಕ್ಕ ಕೆಂಪಗಾದ ನಾಲಗೆಗಳು ಜೋಲುವ ಬಾಯಿಗಳುಳ್ಳವುಗಳಾಗಿ, ಎಲ್ಲಾ ಪಕ್ಕಗಳಲ್ಲಿಯೂ ಒಂದರೊಡನೊಂದು ಸೇರದೆ ಓಡುವುವು.

709. ಯುದ್ಧಕ್ಕೆ ತಕ್ಕುದಾದ ಬಲೆಯ ಉದ್ಯೋಗವನ್ನೂ ಬಿಲ್ಲ ಉದ್ಯೋಗವನ್ನೂ ಪ್ರತ್ಯಕ್ಷದಲ್ಲಿ ಮಾಡಲು, ಆ ದ್ವಂದ್ವವಾದ ಬಲೆಯ ಕಟ್ಟನ್ನು ತುಂಡರಿಸುವಂತೆ ಹೊಂದುವ ಹಿರಿಮೆಯುಳ್ಳ ತಿಣ್ಣನ ಮುಂದೆ, ಮೇಘಗಳು ಸುತ್ತಿದ ಮಲೆಗಳಲ್ಲಿಯೂ ಬೇಟೆಯ ಕಾಡುಗಳಲ್ಲಿಯೂ, ಬಲೆಯನ್ನು ಸುತ್ತಿ ಪ್ರಾಣಿಗಳನ್ನು ತಡೆಯುವ ಉದ್ದೇಶದಿಂದ, ನಿಡಿದಾದ ಬಾರುಗಳನ್ನೂ ಹಲವಿಧದ ಬಲೆಗಳನ್ನೂ ಎತ್ತಿಕೊಂಡು ಬಂದ ಕುರವರು ಈ ಕೂಟದ ಮುಂದೆ ಹೋದರು.

710. ದೊಡ್ಡ ವೇದಗಳು ಕೂಡಿ ಹುಡುಕುವಂತೆ ಶೀತಲವಾದ ಚಂದ್ರ, ಅಡಂಬು ಬಳ್ಳಿ, ಕೊನ್ರೈ ಹೂ – ಇವುಗಳನ್ನು ಧರಿಸುವ ಜಡೆಯುಳ್ಳವನಾದ ಈಶ್ವರನನ್ನು ತನ್ನ ಕಣ್ಣನ್ನು ನೀಡಿ ಜ್ಞಾನನೇತ್ರದಿಂದ ಕಾಣುವ ಭಕ್ತನಾದ ತಿಣ್ಣನ ಎದುರಿನಲ್ಲಿ ಲೆಕ್ಕವಿಲ್ಲದ ಬೇಟೆಯ ಕೊಳ್ಳೆಮೃಗಗಳನ್ನು ಕೊಂಡು ಎಲ್ಲಾ ಪಕ್ಕಗಳಲ್ಲಿಯೂ (ಆ ಕುರವರು) ಹೋದರು.

---

708. ವನ್ಱಿಱೊ ಟರ್ಪ್ಪಿ ಣಿತ್ತ ಪಾಚವನ್ ವನ್ಕೈ ಮಳ್ಳರ್ ಕೊಳ್ಳವೇ
ವೆನ್ಱಿ ಮಚಿಕ್ಕಿಲ ವೇಟರ್ ವಿಲ್ಲಿನ್ ಮಿಸಾತು ಮೇವು ಪಾತಮುನ್
ಚೆನ್ಱು ನೀಳು ಮಾಱು ಪೋಲ್ವ ಚೆಯ್ಯ ನಾವಿನ್ ವಾಯವಾಯ್
ಒನ್ಱಿಱೊ ಟೊನ್ಱು ನೇರ್ಪ ಟಾಮ ಲೋಟು ನಾಯ್ಕ್ಕಳ್ ಮಾಟೆಲಾಮ್.

709. ಪೋರ್ವ ಲೈಚ್ಚಿ ಲೈತ್ತೊ ಟಿಱ್ಪು ಱತ್ತಿ ಲೇವಿ ಳೈಪ್ಪವ
ಚ್ಚಾರ್ವ ಲೈತ್ತೊ ಟಕ್ಕ ಱುಕ್ಕ ವೇಕು ಮ್ಮೈಯರ್ ತಮ್ಮುನೇ
ಕಾರ್ವ ಲೈಪ್ಪ ಟುತ್ತ ಕುನ್ಱು ಕಾನ ಮಾವ ಳೈಕ್ಕನೀಳ್
ವಾರ್ವ ಲೈತ್ತಿ ಱಙ್ಙ ಮನ್ನ ಲನ್ನ ವೆಯ್ಪರ್ ಮುನ್ನಿನಾರ್.

710. ಕಣ್ಣಿ ಮಾಮ ಱೈಕ್ಕು ಲಙ್ಕ ಣಾಟ ವೆನ್ಱು ನೀಟುಮ
ತ್ತಣ್ಣಿ ಲಾವ ಟಮ್ಪು ಕೊನ್ಱೈ ತಙ್ಕ ವೇಣಿ ಯಾರ್ತಮ್ಮೈ
ಕ್ಕಣ್ಣಿ ನೀಟು ಪಾರ್ವೈ ಯೊನ್ಱು ಕೊಣ್ಟು ಕಾಣು ಮನ್ಪರ್ ಮುನ್
ಎಣ್ಣಿಲ್ ಪಾರ್ವೈ ಕೊಣ್ಟು ವೇಟ ರೆಮ್ಮ ರುಙ್ಕು ಮೇಕಿನಾರ್.

711. ಕೊಂಬುಗಳು ಮುಂಭಾಗದಲ್ಲಿ ಶಬ್ದಿಸಲು, ಸಣ್ಣ ಮುಖವಿರುವ ಸಣ್ಣ ಪಱೆಗಳು ಪಕ್ಕಗಳಲ್ಲಿ ಶಬ್ದಿಸಲು, ಬದಿಗಳಲ್ಲಿ ಬಂಬೆಯು ಶಬ್ದಿಸಲು, ಕೈ ಚಪ್ಪಾಳೆ ತಟ್ಟುವುದರಿಂದುಂಟಾದ ಹಿರಿಯ ಧ್ವನಿಯು ಹೊಮ್ಮಲು, ಬೇಡರ ದೊಡ್ಡ ಕೂಟವು ಕಾಡುಗಳನ್ನು ಸುತ್ತುವರಿದು ಹೋಯಿತು.

712. ದಟ್ಟವಾದ ಹಸುರಾದ ನೀಡಿದ ಮರಗಳ ಕೂಟಗಳುಳ್ಳ ಕಾಡನ್ನು ಹೊಂದುವುದಕ್ಕೆ ಎದುರಾಗಿ ಬರುವ ಕಪ್ಪಾಗಾದ ಬಿಲ್ಲನ್ನು ತಾಳಿದ ದೊಡ್ಡ ಕೈಗಳುಳ್ಳ ಬಲಶಾಲಿಗಳಾದ ಬೇಡರ ಸೇನೆಯಾದುದು, ಅಪ್ಪಳಿಸುವ ಹಿರಿಯ ಅಲೆಗಳುಳ್ಳ ಕಡಲಿನ ಹರಹಿನೆಡೆಯಲ್ಲಿ ಹೊಗುವ ದೊಡ್ಡ ಕರಿಯ ಅಲೆಗಳನ್ನುಳ್ಳ, ನೀಳವಾದ ನೀರು ತುಂಬಿದ ಕಾಳಿಂದಿ ನದಿಯಂತಿತ್ತು.

713. ತೆಂಕಣ ಮಲೆಯ ಕಾಡಿನಲ್ಲಿ ಜಿಂಕೆಯ ಹಲಜಾತಿಗಳು, ಹಂದಿಗಳು, ಕ್ರೂರವಾದ ಮರೆಜಾತಿಗಳು ಮೊದಲಾದ ಹಲಬಗೆ ಜಂತುಕೂಟಗಳು ಸೇರಿ ನಿಂತಿವೆ ಎಂದು ಅವುಗಳ ಅಡಿವಜ್ಜೆಗಳಿಂದ ತಿಳಿದ ಬೇಹುಗಾರನೊಬ್ಬನು ತಿಳಿಸಲು ಬೇಡರುಗಳು ಬಾರುಗಳನ್ನು ತಮ್ಮ ಬಲವಾದ ಕೈಗಳಲ್ಲಿ ಕೊಂಡು ಎಲ್ಲಾ ಪಕ್ಕಗಳಲ್ಲಿಯೂ ಓಡಿದರು.

---

711. ಕೋಟು ಮುನ್ಪೊ ಲಿಕ್ಕ ವುಜ್ಜು ಱುಜ್ಜ ಣಾಕು ಳಿಕ್ಕುಲವ್
ಮೂಟು ಚಿನ್ಱಿ ಚ್ಚೈಪ್ಪ ವುಮ್ಮ ರುಜ್ಜುಕ ಪಮ್ಬೈಲ ಕೊಟ್ಟವು
ಞತ್ತಿಟು ಕೊಣ್ಟ ಕೈವಿ ಳಿಚ್ಚಿ ಱನ್ತ ಮೋಚ್ಚೈ ಚೆಲ್ಲವುಜ್
ಕಾಟು ಕೊಣ್ಟ ಮುನ್ತ ವೇಟು ಕೈವ ಳೈನ್ತು ಚೆನ್ಱತೇ.

712. ನೆರುಜ್ಜು ಪೈನ್ತು ರುಕ್ಕು ಲಜ್ಜ ಣೀಟು ಕಾಟು ಕೂಟನೇರ್
ವರುಜ್ಜ ರುಞ್ಚಿ ಲೈತ್ತ ಟಕ್ಕೈಲ ಮೂನ ವೇಟರ್ ಚೇನೈತಾನ್
ಪೊರುನ್ತು ಟನ್ತಿ ರೈಕ್ಕ ಟಱ್ಪ ರಪ್ಪಿ ಟೈಪ್ಪು ಕುಮ್ಪೈರುಜ್
ಕರುನ್ತ ರಜ್ಜ ನೀಳ್ಪ ನಱ್ಕ ಳಿನ್ತು ಕನ್ನಿ ಯೊತ್ತತೇ.

713. ತೆನ್ಱಿ ಚ್ಚೈಪ್ಪೊ ರುಪ್ಪ ಟನ್ಚಿ ಱೀನ್ತ ಕಾನಿನ್ ಮೂನಿನಮ್
ಪನ್ಱಿ ವೆಮ್ಮ ರೈಕ್ಕ ಣಜ್ಜ ಳಾತಿ ಯಾನ ಪಲ್ಕುಲ
ನ್ತುನ್ಱಿ ನಿನ್ಱ ವೆನ್ಱ ಟಿಚ್ಚು ವಟ್ಟ ನೊಱ್ಱರ್ ಚೊಲ್ಲವೇ
ವನ್ಱ ಟಕ್ಕೈಲ ವಾರ್ಕೊ ಟೆಮ್ಮ ರುಜ್ಜುವ್ ವೇಟ ರೋಟಿನಾರ್.

714. ದಾರಿಯನ್ನು ಮಾಡಿಕೊಂಡು, ಬಾರುಗಳನ್ನು ನೇರವಾಗಿ ಕಟ್ಟಿ, ಬಲವಾದ ಬಲೆಯ ಕಟ್ಟುಗಳನ್ನು ಕಾಡನ್ನು ಸುತ್ತಿಕಟ್ಟಿ ನೋಡುವವರು ಅಂಜುವಂತೆ ಯೋಜನದಗಲದ ಕಾಡೆಡೆಯನ್ನು ನೇರವಾಗಿ ಕಾವಲು ಮಾಡಿ, ಬಲೆಗಳನ್ನು ಕಟ್ಟಿ ಮುಗಿಸಿದ ಮೇಲೆ ಬಿಲ್ಲನ್ನು ಹಿಡಿದ ಕೈಗಳುಳ್ಳ ಸಣ್ಣ ಪೊದರಂತಿರುವ ತಲೆಯನ್ನುಳ್ಳ ಬೇಡರುಗಳು ತಿಣ್ಣನ ಮುಂದೆ ಬಂದು ಸೇರಿದರು.

715. ತನಗೆ ಪ್ರಿಯವಾದ ಬಿಲ್ಲನ್ನು ತಾಳಿದ ಕೈಗಳುಳ್ಳ ವೀರನಾದ ತಿಣ್ಣನೂ, ಇತರ ಬಿಲ್ಲ ಬೇಡರೊಡನೆ ಕೂಡಿ, ಮೊದಲು ಮೇಘವು ಸಂಚರಿಸುವ ದೊಡ್ಡ ಮಲೆಯ ಪಕ್ಕಗಳಲ್ಲಿ ಹೊರಬಂದ ಜಂತುಗಳನ್ನು ಹೆದರಿ ಓಡುವಂತೆ ಮಾಡಿ, ಹಾರಿ ಹಿಡಿಯುವ ನಾಯಿಗಳನ್ನು ಹಲಪಕ್ಕಗಳಲ್ಲಿ ಬಿಟ್ಟು, ನೇರವಾಗಿ ಹೋಗುವ ನೀಳವಾದ ಅಂಬುಗಳೊಡನೆ, ಕಾವಲಿರುವ ಕಾಡಿನೊಳಗೆ ಪ್ರವೇಶಿಸಿದನು.

716. ಮೇಲೆ ಹೇಳಿದಂತೆ ಕ್ರೂರವಾದ ಪ್ರಾಣಿಗಳನ್ನು ಎಬ್ಬಿಸುವಂತೆ ನಾಯಿಗಳನ್ನು ಹಗ್ಗದಿಂದ ಬಿಟ್ಟು, ನೇರವಾಗಿ ಬಿಡುವುದಕ್ಕೆ ತಕ್ಕುದಾದ ಮೊದಲೇ ಆರಯ್ದ ಅಂಬುಗಳನ್ನು ತೆಗೆದುಕೊಂಡು ಬೇಡರ ಕೂಟವು ಓಡಿ, ಉಡುಕೆಗಳೂ ಬಂಬೆಗಳೂ ದೊಡ್ಡ ಧ್ವನಿಯನ್ನು ಎಲ್ಲೆಡೆಗಳಲ್ಲೂ ಉಂಟುಮಾಡಲು, ಅದರೊಡನೆ ಕೈಚಪ್ಪಾಳೆ ತಟ್ಟಿಯೂ ಬಾಯಿಂದ ಶಬ್ದಮಾಡಿಯೂ ಕಾಡಿನ ಎಲ್ಲೆಡೆಗಳಲ್ಲಿಯೂ ಅಡಗಿಕೊಂಡಿದ್ದ ಪ್ರಾಣಿಗಳನ್ನು ಅವುಗಳ ರಹಸ್ಯವಾದ ಆಶ್ರಯಗಳಿಂದ ಎಬ್ಬಿಸಿದರು.

---

714. ಓಟಿಯೆ ಱಿನ್ತು ವಾರೊ ಟುಕ್ಕಿ ಯೋಚ ನೈಪ್ಪ ರಪ್ಪೆಲಾವುಮ್
ನೆಟಿಯ ತಿಣ್ವ ಲೈತ್ತೊ ಟಕ್ಕು ನೀಳಿ ಟೈಪ್ಪಿ ಱಿತ್ತುನೇರ್
ಕಟಿಕೊ ಳಪ್ಪ ರನ್ತ ಕಾಟು ಕಾವಲ್ ಚೆಯ್ತು ಮೈತ್ತಪಿನ್
ಚೆಟಿತ ಲೈಚ್ಚಿ ಲೈಕ್ಕೈ ವೇಟರ್ ತಿಣ್ಣ ನಾರ್ಮು ನಣ್ಣಿನಾರ್.

715. ವೆಞ್ಚಿ ಲೈಕ್ಕೈ ವೀರ ನಾರುಮ್ ವೇಟ ರೋಟು ಕೂಟಿಮುನ್
ಮಞ್ಚು ಲೈಕ್ಕು ಮಾಮ ಲೈಚ್ಚ ರಿಪ್ಪು ಱಿತ್ತು ವನ್ತಮಾ
ವಞ್ಚು ವಿತ್ತ ಟಕ್ಕರ್ ನಾಯ್ಕು ಳಟ್ಟ ಮಾಕ ವಿಟ್ಟುನೀಳ್
ಚೆಞ್ಚು ರತ್ತಿ ನೋಟು ಚೂಟಿಲ್ ಚೆಯ್ತು ಕಾನು ಳೆಯ್ತಿನಾರ್.

716. ವೆಯ್ಯ ಮಾವೆ ಟುಪ್ಪ ವೇವಿ ವೆಜ್ಪಿ ರಾಯ ವೋಟನೇ
ರೆಯ್ಯುಮ್ ವಾಳಿ ಮುನ್ಱಿ ರಿನ್ತು ಕೊಣ್ಟು ಚೆಲ್ಲ ವೆಜ್ಕಣುಮ್
ಮೊಯ್ಯು ರಜ್ಞು ಟಕ್ಕು ಲಜ್ಕಳ್ ಪಮ್ಪೈ ಮುನ್ಚಿ ಲೈತ್ತೆಟಿ
ಕೈವಿ ಳಿತ್ತ ತಿರ್ತ್ತು ಮಾವೆ ಟುಪ್ಪಿ ನಾರ್ಕಳ್ ಕಾನೆಲಾಮ್.

717. ಕಾಡುಹಂದಿಗಳೊಡನೆ, ಜಿಂಕೆಯ ಜಾತಿಗಳು, ಕೆರಡಿಗಳು, ಗಂಡು ಜಿಂಕೆ ಜಾತಿಯ ಕೂಟಗಳು, ಕಾಡೆಮ್ಮೆಗಳು, ಆನೆಗಳು, ಕ್ರೂರವಾದ ಹುಲಿ ಜಾತಿಗಳು, ಕಾಡುಮರೆಗಳು ಆದ ಜಂತುಗಳು ಬಹುವಾಗಿ ಭಯಗೊಂಡು ಎದ್ದು ಕೋಪಧ್ವನಿಯನ್ನು ಮಾಡಿ ಕಾಣಿಸಿಕೊಂಡು ಹಾರಿ ಓಡಲು, ಬೇಡರು ಕೂಟವಾಗಿ ಅವುಗಳ ಮೇಲೆ ಅಡರಿ ಧ್ವನಿಮಾಡಿ ಅಂಬುಗಳನ್ನೆಸೆದು ಅವನ್ನು ನಾಶಪಡಿಸಿದರು.

718. ಹಲವು ಗಂಡು ಜಿಂಕೆಗಳ ಕಾಲು ತುಂಡಾದುವು, ನಡು ತುಂಡಾದುವು, ತಲೆಗಳು ಕತ್ತರಿಸಿ ಬಿದ್ದುವು. ಶರೀರದೊಳಹಾಯ್ದ ಅಂಬುಗಳೊಡನೆ ಕರುಳು ಹೊರಗೆ ಸುರಿಯಲು ಮರೆಜಾತಿಯಲ್ಲಿ ಕೆಲವು ಮೃತವಾದುವು. ಕೂಟವಾಗಿ ಸೇರಿದ ಕಾಡೆಮ್ಮೆಗಳ ನೀಳವಾದ ಶರೀರದೊಳಗೆ ಬೇಡರು ಬಿಟ್ಟ ಅಂಬುಗಳು ಹಾಯ್ದು ಕುತ್ತಿ ಹೊರಗೆ ಹೋಗಲು, ಅವು ಬಲಹೀನವಾಗಿ, ನಿಡಿದಾಗಿ ಬಿದ್ದು ಅತ್ಯಂತ ನೋವಿನಿಂದ ಹೊರಳುವಂತಾದುವು. ಬಲವಾದ ಅಂಬುಗಳು ಕುತ್ತಿದುದರಿಂದ ಹಲ ಜಿಂಕೆಗಳು ತಲೆಗಳನ್ನು ಕಳೆದುಕೊಂಡು ಶರೀರವು ನರ್ತಿಸಲು ಬೀಳುವಂತಾದುವು.

719. ಮುಂದೆ ಬಂದ ದೊಡ್ಡ ಹಂದಿಗಳಿಗೆ ಕ್ರೂರವಾದ ಬಾಣ ತಾಗಿ ಹೆಡತಲೆಯೂ ಭಾಗವಾಗುವಂತೆ ವೇಗದೊಡನೆ ಕುತ್ತಿ ದಾಟಿದುದರಿಂದ ಉಂಟಾದ ಗಾಯದ ದ್ವಾರದಿಂದ ಕೆಂಪಾದ ಬೆಂಕಿಯಂತಹ ರಕ್ತವು ಪ್ರವಾಹವಾಗಿ ಸುರಿಯಲು, ಅದರ ಮೇಲೂ ಅಂಬುಗಳು ಸೇರಿ ಹಾದು ಅವುಗಳ ತಲೆಯನ್ನು ಕುತ್ತಿ ಆ ದಾರಿಯಾಗಿ ದಾಟಿ ಹೊರ ಹೋದಾಗ, ಎದುರು ಹಾದು ತೆರೆದ ಬಾಯೊಡನೆ ಓಡಿಬಂದ ಹುಲಿಗಳ ಬಲವಾದ ಹಲ್ಲುಗಳೆಡೆಯಲ್ಲಿ ಸೇರಲು ಆಯಾ ಹುಲಿಗಳು ಆಯಾ ಹಂದಿಗಳನ್ನು ಕೋಪದಿಂದ ಮುತ್ತುವಂತೆ ಕಾಣುತ್ತಿದ್ದುವು.

---

717. ಏನ ಮೋಟು ಮಾನಿ ನಙ್ಕ ಳಿಣ್ಙ್ಕ ತಿಙ್ಕ ಲ್ಕೈಕ್ಕುಲಮ್
ಕಾನ ಮೇತಿ ಯಾನೈ ವೆಮ್ಪು ಲಿಕ್ಕ ಣಙ್ಕಳ್ ಕಾನ್ಮರೈ
ಯಾನ ಮಾವ ನೇಕ ಮಾವೆ ರುಣ್ಟೆ ಟುನ್ತು ಪಾಯಮುನ್
ಚೇನೈ ವೇಟರ್ ಮೇಲ ಟರ್ನ್ತು ಚೀಱಿ ಯಮ್ಪಿ ನೂಱಿನಾರ್.

ವೇಱು

718. ತಾಳಱುವನ ವಿಟ್ಟೈತುಣಿವನ ತಲ್ಲೈತುಮಿವನ ಕಲೈಮಾ;
ವಾಳಿಕಳೊಟು ಕುಟಲ್ಚೊರಿತರ ಮಱಿವನಚಿಲ ಮರೈಮಾ;
ನೀಳುಟಲ್ವಿಟು ಚರಮುರುವಿಟ ನಿಮಿರ್ವನವಿಟ್ಟೈ ಕಟಮಾ;
ಮಿಳಿಕೊಳ್ಕಣೈ ಪಟುಮುಟಲೆಟಿ ವಿಟುವನಪಲ ವುಟ್ಳೈಯೇ.

719. ವೆಙ್ಕಣೈಪಟು ಪಿಟರ್ಕಿಟಿಪಟ ವಿಙ್ಕೈಯುರುವಿಯು ಕಯವಾಯ್
ಚೆಙ್ಕನಲ್ಪಟ ವತನೊಟುಕಣೈ ಚೆಱಿಯುಮುನಿರು ಕರುಮಾ
ವಙ್ಕಿಟುಚಿರ ಮುರುವಿಯುವೊಟು ತಟಲೆಯಿಱಿಱ ವಕನೈ
ಪ್ಪೊಙ್ಙ್ಕಿಯಚಿನ ಮೊಟುಕವರ್ವನ ಪುರೈವನಚಿಲ ಪುಲಿಕಳ್.

720. ಹಲ ಗಂಡುಜಿಂಕೆಗಳ ಹಿಂದಿನ ಪಕ್ಕದಲ್ಲಿ ನಿಂತು ಬೇಡರು ಎಸೆದ ಅಂಬುಗಳು ತಮ್ಮ ಒಡಲ ಹಿಂಭಾಗದಲ್ಲಿ ನಾಟಲು, ಆ ಅಂಬುಗಳು ಅವುಗಳ ಬಸಿರೆಡೆಯಲ್ಲಿ ಹೊಕ್ಕು, ಮುಂಭಾಗದಲ್ಲಿ ಮುಖದ ನಡುವಿನಿಂದ ಹೊರಬರಲು, ಮಿಕ್ಕ ವೇಗದಿಂದ ಬಿಡಲ್ಪಟ್ಟ ಮಾರಕವಾದ ಆ ಅಂಬುಗಳು, ಆ ರೀತಿ ಎಸೆಯಲ್ಪಟ್ಟ ಗಂಡು ಜಿಂಕೆಗಳ ಜಾತಿಗೆ ಸೇರಿದ ಅದರಿದಿರಲ್ಲಿ ಓಡಿ ಸಮೀಪ ಬಂದ ಜಿಂಕೆಯ ಮುಖದಲ್ಲಿ ನಾಟಿ ಅದನ್ನು ದಾಟಿ ಬರಲು, ಆ ಜತೆಗಳು ಒಂದನ್ನೊಂದು ಇದಿರು ಹಾದು ಯುದ್ಧಮಾಡುವವುಗಳಂತಿದ್ದುವು.

721. ಕರಿಯ ಮಲೆಯೊಂದು ಬಿಲ್ಲಿನೊಡನೆ ಓಡಿ ಬಂದಿತೆಂದು ಹೇಳುವಂತೆ ಯುದ್ಧಮುಖದಲ್ಲಿ ನೇರಾಗಿ ಬಂದ ಹಿರಿಮೆಯುಳ್ಳವನಾದ ತಿಣ್ಣನು ಎದುರಿಸಿ ನಿಂತು ಬಿಡುವ ಅಂಬುಗಳು ಇದಿರಿರುವ ಪ್ರಾಣಿಗಳನ್ನು ಕೊಲೆಮಾಡುತ್ತಿದ್ದುವು. ಆ ಬಾಣಗಳು ಹೋರಾಡುವ ಆನೆಗಳೊಡನೆಯೂ ಮಿಕ್ಕಕೋಪದ ಸಿಂಹಗಳೆಡೆಯಲ್ಲಿಯೂ ಎಡೆ ಇಲ್ಲದಂತೆ ಅವುಗಳ ಒಡಲುಗಳಲ್ಲಿ ಹೊಕ್ಕಿದುದರಿಂದ ಆ ವನವು ಮೇಲೆ ಬರುವ ರಾತ್ರಿಗಳೊಡನೆ ಹಗಲುಗಳ ಸೇರುವೆಯಂತೆ ಕಾಣುವುದು.

722. ನಿಡಿದಾದ ಆಕಾಶ ಮಾರ್ಗದಲ್ಲಿ ವೇಗದೊಡನೆ ಮೇಲೆ ಹಾರುವ ದೊಡ್ಡ ಮುಗಿಲುಗಳನ್ನು ಮುಟ್ಟುವಂತೆ ಮೇಲೆ ಹಾರುವ ಜಿಂಕೆಗಳಿಗೆ, ಕಾಲಿನಲ್ಲಿ ಅಲಂಕರಿಸಿಕೊಂಡ ವೀರಗೆಜ್ಜೆಯುಳ್ಳ ಮರವ[1]ರುಗಳು ಬಿಡುವ ಅಂಬಿನ ಸಾಲುಗಳು ಒಂದರ ಹಿಂದೊಂದು ಎಸೆಯಲ್ಪಡುವುವು. ಇವು ಪ್ರಕಾಶವನ್ನು ಬೀರುವ ಕಿರಣಗಳುಳ್ಳ ಚಂದ್ರನಿಂದ ಬೇರಾಗುವಂತೆ ಆ ಚಂದ್ರಮಂಡಲದಿಂದ ಕೆಳಗೆ ಬೀಳಿಸುವ ಜಿಂಕೆಯನ್ನು ಅಪಹರಿಸುವ ಸ್ವಭಾವದೊಡನೆ ಸಂಚಾರಮಾಡುವ ರಾಹು ಎಂಬ ಹಾವುಗಳಂತೆ ಕಾಣಬರುವುವು.

---

720. ಪಿನ್‌ಮುಱಿವರ್‌ಕಳ್ ವಿಟುಪಕೞಿಕಳ್ ಪಿಱಕುಱಿವಯಿಱ್ಱೈಪ್ಪೋಯ್
ಮುನ್‌ನಟುಮುಕ ಮಿಱೈಯುರುವಿಟ ಮುಟುಕಿಯವಿಱೈ ಯುಟನ
ಕ್ಕೊನ್‌ಮುನೈಯಟು ಚರವಿನಮೆತಿರ್ ಕುಱುಕಿಯಮುಕ ಮುರುವ
ತ್ತುನ್‌ನೆತಿರೆತಿರ್ ಪೊರುವನನಿಕರ್ ತಲೈಯನಪಲ ಕಲೈಕಳ್.

721. ಕರುವೈಯೊರು ತನುವೊಟುವಿಱೈ ಕಟುಕಿಯತೆನ ಮುನೈನೇರ್
ಕುರಿಚಿಲ್‌ಮುನ್‌ವಿಟು ಮಟುಚರಮೆತಿರ್ ಕೊಲೈಪಯಿಲ್‌ಪೊಟು ತವೈಯೇ
ಪೊರುಕರಿಯೊಟು ಚಿನವರಿಯಿಟೈ ಪುರೈಯುಱವುಟಲ್ ಪುಕಲಾಲ್
ವರುಮಿರವೊಟು ಪಕಲಣೈವನ ವೆನಮಿಟೈಯುಮ ವ್ವನಮೇ.

722. ನೀಳಿಟೈವಿಱೈ ಮಿಱೈಕುತಿಕೊಳ ನೆಟುಮುಕಿಱೊಟ ವೆಱುಮಾನ್
ಱಾಳಃಱುಕಟಿನ್ ಮಱವರ್‌ಕಳ್‌ವಿಟು ಚರನಿರೈತೊಟರ್ ವನತಾಮ್
ವಾಳ್‌ವಿಟುಕತಿರ್ ಮತಿಪಿರಿವುಱ ವರುಮೆನವಿಱು ಮುಟೈಯೈ
ಕ್ಕೋಳೊಟುಪಯಿಲ್ ಪಣಿತೊಟರ್‌ನಿಲೈ ಕೊಳವುಳವೆತಿರ್ ಪಲವೇ.

---

1. ಮರವ — ಬೇಡ.

723. ಸಂಹರಿಸುವ ಬಾಣಗಳು ಒಡಲಲ್ಲಿ ನಾಟಿದುದರಿಂದ ಮಲೆಯ ಇಳಿಜಾರಾದ ಪಕ್ಕಗಳಲ್ಲಿ ಹೆಜ್ಜೆ ಇಡಲು ನೆಲೆ ಸರಿಯಾಗಿ ದೊರೆಯದೆ ಸುತ್ತುವುದರಿಂದ, ಸಾಲಾಗಿ ವ್ಯಾಪಿಸಿ ಸಾಂದ್ರವಾಗಿ ಸೇರಿದ ಎಲೆಗಳ ಕೂಟವು ತುಂಬಿದ ದಟ್ಟವಾದ ಪೊದರುಗಳುಳ್ಳ ಆ ಕಾಡಿನ ಮೇಲೆ, ಕಡಲಲ್ಲಿ ವ್ಯಾಪಿಸಿದ ನೀರನ್ನು ಕೊಳ್ಳಲು ಬಿದ್ದು ವ್ಯಾಪಿಸುವ ಕರಿಯ ಮುಗಿಲ ಕೂಟಗಳಂತೆ, ಕರಿಯ ಮರೆಗಳ ಕರಡಿಗಳ ಕೂಟಗಳೊಡನೆ ಕಾಡೆಮ್ಮೆಗಳು ಬೀಳುವವುಗಳಾದುವು.

724. ಹೆಲದಾರಿಗಳಿಂದ ಕಟ್ಟಿರುವ ಬಲೆಗಳು ತುಂಡಾಗುವಂತೆ ಭಯದಿಂದ ಸುಳಿದುಹೋಗುವ ಜಂತುಗಳು ಬಂಡೆ ಕಲ್ಲಿನ ದಾರಿಯಾಗಿ ಹೋಗಲು ಮುಂದಾದುವು ಗಳನ್ನು ತಡೆಯುವಂತೆ, ಕೋಪದಿಂದ ಹಿಡಿಯುವ ನಾಯಿಗಳು, ಹಿಂದಿನ ಜನನಮರಣ ಗಳಲ್ಲಿ ಬಂಧಿಸುವ ಪಾಪಪುಣ್ಯಗಳೆಂಬ ಎರಡು ಕರ್ಮಗಳಾದ ಬಲೆಯೆಡೆಯಲ್ಲಿ ಪಟ್ಟು ತಮ್ಮ ನೆಲೆತಪ್ಪಿ ಸುತ್ತುವರಿಯುವವರ ಸನ್ಮಾರ್ಗ ಸೇರಿದ ಸತ್ಯಜ್ಞಾನದಲ್ಲಿ ಪ್ರವೃತ್ತ ವಾಗುವ ಮನಸ್ಸನ್ನು ಆ ರೀತಿ ಪ್ರವೇಶಿಸಬಿಡದಂತೆ ಎಡೆಯಲ್ಲಿ ತಡೆಮಾಡಿದ ಪಂಚ ಕರ್ಮೇಂದ್ರಿಯಗಳಂತಿದ್ದುವು.

725. ಕ್ರೂರವಾದ ಮೃಗಗಳನ್ನು ಎದುರಿಸಿ ಓಡಿಯೂ, ಅವುಗಳನ್ನು ಕೊಲೆ ಮಾಡುವ ಬಿಲ್ಲ ಬೇಡರುಗಳು, ಉಡುಕೆಗೆ ಸಮಾನವಾದ ಕಾಲುಳ್ಳವುಗಳೂ ಮಡಚಿದ ಕಿವಿಗಳುಳ್ಳವುಗಳೂ ಆದ ಆನೆಮರಿ ಹಿಂಡುಗಳ ಮೇಲೆ ಬೇಟೆಯನ್ನು ಮಾಡರು. ಶಬ್ದ ವುಂಟಾಗುವಂತೆ ಓಡಿ ಹಾರುವ ಸಣ್ಣ ಪ್ರಾಣಿಗಳ ಮರಿಗಳ ಮೇಲೆ ಬೇಟೆಯನ್ನು ಮಾಡರು. ಗರ್ಭಧರಿಸಿರುವುದರಿಂದ ನಿಧಾನವಾಗಿ ತಡೆತಡೆದು ನಡೆದುಬರುವ ಹೆಣ್ಣು ಪ್ರಾಣಿಗಳಿಗೆ ಕಷ್ಟವನ್ನು ಕೊಡರು.

---

723. ಕಟಲ್ವಿರಿಪುನಲ್ ಕೊಳವಿೞುವನ ಕರುಮುಕಿಲೆನ ನಿರೈಯೇ
ಪಟರ್ವೊಟುಚಿಱೈ ತೞೈಪ್ಪೊತುಳಿಯ ಪಯಿಲ್ಪುತಲ್ವನ ಮತನ್ಮೇ
ಲಟಲುಱುಚರ ಮುಟಲುಱವರೈ ಯಟಿಯಿಟಮುಲ ಮರಲಾನ್
ವಿಟೈಕರುಮರೈ ಕರಟಿಕಳೊಟು ವಿೞುವನವನ ಮೇತಿ.

724. ಪಲತುಱೈಕಳಿಲ್ ಪೆರುವರಲೊಟು ಪಯಿಲ್ವಲೈಯಱ ನುೞೈಮಾ
ವಲವೊಟುಪಟರ್ ವನತಕೈವೞಿ ವೞುಚಿನವೊಟು ಕವರ್ನಾಯ್
ನಿಲವಿಯವಿರು ವಿನೈವಲೈಯಿಟೈ ನಿಲೈಚುೞಲ್ಪವರ್ ನೆಱಿಚೇರ್
ಪುಲನುಱುಮನ ನಿಟೈತಟೈಚೆಯ್ತ ಪೊಱಿಕಳಿನಳ ವುಳವೇ.

725. ತುಟಿಯಟಿಯನ ಮಟಿಚೆವಿಯನ ತುಱುಕಯಮುನಿ ತೊಟರಾರ್;
ವೆಟಿಪಟವಿರಿ ಚಿಱುಕುರುಳೈಕಣ್ ವಿೞೈಪಟುಕೊಲೈ ವಿರವಾರ್;
ಅಟಿತಳರ್ವುಱು ಕರುವುಟೈಯನ ವಣೈವುಱುಪಿಣೈ ಯಲೈಯಾರ್;
ಕೊಟಿಯನವೆತಿರ್ ಮುಟುಕಿಯುಮುಱು ಕೊಲೈಪುರಿಚಿಲೈ ಮಱವೋರ್.

726. ಈ ರೀತಿಯಲ್ಲಿ ಕೊಲೆಯಾದ ನೀಚವೃತ್ತಿಯುಳ್ಳ ಬೇಟೆಯು ಎದುರು ನಡೆದುಕೊಂಡಿರುವಾಗ, ಆನೆಗಳೂ ಅಂಜುವಂತೆ, ದಟ್ಟವಾಗಿ ಸೇರಿದ ಕಾಡೂ ಅದುರುವಂತೆ, ಮೇಲೇಳುವ ಒಂದು ಹಂದಿಯು[1] ಗುಡುಗಿನ ಗರ್ಜನೆಯೊಡನೆ ಮಳೆಸುರಿಸುವ ಕರಿಯ ಮುಗಿಲಂತೆ ಮೊಳಗನ್ನು ಮಾಡಿ, ಹೊರಹೊರಟಂತೆ ಕಾಣುವ ಕಣ್ಣುಗಳಿಂದ ಅಗ್ನಿಯನ್ನು ಕಾರುತ್ತ, ಸುತ್ತಿ ಸೇರಿದ ಬಲೆಗಳು ತುಂಡಾಗುವಂತೆ ಹೊರಹೊರಟು ಮಿಕ್ಕಿದ ವೇಗದೊಡನೆ ಓಡಿತು.

727. ಓಡುವ ಹಂದಿಯನ್ನು ಕೊಲ್ಲುವ ಬಲುಮೆಯಿಂದ ಹೋರಾಡುವ ಬೇಡರಿಗೆ ಗಂಡುಸಿಂಹದಂತಿರತಕ್ಕ ತಿಣ್ಣನು, ಹುಡುಕಿ ಸಮೀಪಿಸಿ ಹಿಡಿಯುವ ವೇಗದೊಡನೆ ಅದು ಹೋಗುವ ಹೆಜ್ಜೆಯ ಮಾರ್ಗವಾಗಿ ಹಿಂಬಾಲಿಸುವಾಗ, ಮತ್ತಿತರ ಬೇಡರುಗಳು, ತಾವು ಒಬ್ಬರೂ ತಿಳಿಯದಿದ್ದು, ತಾವೂ ಬೇರೆಯಾಗಿಯೇ ಅದನ್ನು ಸಮೀಪಿಸಿ ಬೆನ್ನಟ್ಟುವಾಗ, ಬಾಣದಿಂದ ಬೇಟೆಯ ಮುಖದಲ್ಲಿ ಕೊಲ್ಲುವ ಬಿಲ್ಲುಳ್ಳವನಾದ ಆ ತಿಣ್ಣನನ್ನು ಬಿಟ್ಟು ಬೇರೆಯಾಗದವರಾಗಿ ಯೌವನಪರ್ವವುಳ್ಳ ಇಬ್ಬರು ಬೇಡರು[2] ಅವರೊಡನೆಯೇ ಇದ್ದರು.

728. ಆರಯ್ದ (ಶ್ರೇಷ್ಠವಾದ) ಗೆಜ್ಜೆಯನ್ನು ಕಟ್ಟಿದ ವೀರರಾದ, ನೀಳವಾದ ಬರೆಗಳಿರುವ ಬಿಲ್ಲುಳ್ಳ, ನಾಣ, ಕಾಡ ಎಂಬ ಆ ಇಬ್ಬರೂ ಮಲೆಯ ರಕ್ಷಕನಾದ ತಿಣ್ಣನೊಡನೆ ವೇಗವಾಗಿ ಸೇರಲು, ಬಿಡುವ ಬಾಣಗಳನ್ನೂ ಕೊಲೆಯನ್ನು ಮಾಡುವ ನಾಯಿಗಳನ್ನೂ ತಪ್ಪಿಸಿ, ನಿಡಿದಾದ ಮಲೆಯ ಇಳಿಜಾರಲ್ಲಿ ಮರಗಳ ನೆಳಲಲ್ಲಿ ವೇಗವುಳ್ಳ ಹಂದಿಯು ಓಡಿತು.

---

726. ಇವ್ವಕೈವರು ಕೊಲೈಮಱವಿನ್ಐ ಯೆತಿರ್‌ನಿಕಟ್‌ವುಟಿ ಯತಿರ
ಕ್ಕೈವರೈಕಳುಮ್ ವೆರುವುಱವಿಟ್ಟೈ ಕಾನೆಟುವತೊ ರೇನಮ್
ಪೆಯರ್‌ಕರುಮುಕಿ ಲೆನವಿಟೆಯೊಟು ಪಿತಿರ್‌ಕನಲ್‌ವಿಟಿ ಚಿತಱಿ
ಮೊಯಿವಲೈಕಳೈ ಯುಱನಿಮಿರ್‌ವುಱ ಮುಟುಕಿಯಕಟು ವಿಚ್ಚೈಯಿಲ್.

727. ಪೋಮತುತನೈ ಯಟುತಿಱಲೊಟು ಪೊರುಮಱವರ್‌ಕ ಳರಿಯೇ
ಱಾಮವರ್‌ತೊಟರ್ ವುಱುಮ್‌ವಿಚ್ಚೈಯುಟ ನಟಿವಟಿಚೆಲು ಮಳವಿಱ್
ಱಾಮೊರುವರು ಮಱಿಕಿಲರವರ್ ತನಿತೊಟರ್‌ವುಟಿ ಯತನ್‌ಮೇಲ್
ಎಮುನೈಯುಟು ಚಿಲೈವಿಟಲೈಕ ಳಿರುವರ್‌ಕಳಟ ಪಿರಿಯಾರ್.

728. ನಾಟಿಯಕಟಲ್ ವಯವರ್‌ಕಳವರ್ ನಾಣನುನೆಟು ವರಿವಿಱ್
ಕಾಟನುಮೆನು ಮಿರುವರುಮಲೈ ಕಾವಲರೊಟು ಕಟಿತಿಱ್
ಕೊಟನರ್‌ವಿಟು ಪಕಟಿಕಳೊಟು ಕೊಲೈಞಮಲಿಕಳ್ ವಟುವಿ
ನೀಟಿಯಚರಿ ಪಟರ್‌ವತುತರು ನೀಟಲಿನ್‌ವಿರೈ ಕೇಟಲ್.

---

1. ಇದು ಆಣವ ಮಲವನ್ನು ಸೂಚಿಸುವುದು. 2. ಇಬ್ಬರು ಬೇಡರು ಪಾಪಪುಣ್ಯಗಳನ್ನು ಸೂಚಿಸುವುದು.

729. ಗುಲಗುಂಜಿಯನ್ನು ಹೋಲುವಂತಹ ಮುಂದೆ ಹೊರ ಹೊರಟಂತಿರುವ ಕೋಪಿಸುವಂತೆ ಜ್ವಲಿಸುವ ಕ್ರೂರವಾದ ಕಣ್ಣುಗಳನ್ನೂ, ಸಿಡಿಲಂತೆ ಘರ್ಜಿಸುವ ಧ್ವನಿಯನ್ನೂ ಉಳ್ಳ ದೊಡ್ಡ ಹಂದಿಯೊಂದು, ಮಿಕ್ಕಿದ ಬಲವಾದ ಪರಾಕ್ರಮದೊಡನೆ ದಾರಿಯಲ್ಲಿ ಬಹಳ ದೂರ ಓಡಿ, ದೊರೆತ ಒಂದು ಸಣ್ಣ ಬೆಟ್ಟದಡಿಯಲ್ಲಿ ಬೆಟ್ಟವನ್ನು ಸುತ್ತಿ ಇರುವ ಒಂದು ಕಾಡಿನೆಡೆಯಲ್ಲಿ ಹೋಗಿ ಮೇಲೂ ಹೋಗಲು ಪರಾಕ್ರಮವು ಕೈಬಿಟ್ಟು, ಅಲ್ಲುಳ್ಳ ಮರಗಳ ಕೊಟದೆಡೆಯಲ್ಲಿ ನಿಂತಿತು.

730. ಕೊಲೆಕಾರ್ಯವನ್ನು ಮೇಲ್ಕೊಂಡ ಬೇಡಕುಲದವರ ನಾಯಕನಾದ ತಿಣ್ಣನು ಆ ಮರಗಳು ಬೆಳೆದ ಕಾಡಿನೆಡೆಯಲ್ಲಿ ಆ ಹಂದಿಯು ನೆಲೆಯನ್ನು ಮೊದಲು ತಿಳಿದವನಾಗಿ ತನ್ನ ಕೈಯಿಂದ ತಿಳಿದು ಎಸೆಯುವ ಅಂಬುಗಳಿಂದ ಕೊಲ್ಲಲು ಮನ ಮಾಡದವನಾಗಿ, ವೇಗದಿಂದ ಅದನ್ನು ಸಮೀಪಿಸಿ, ಪ್ರತ್ಯಕ್ಷ ಹೋರಾಟವನ್ನು ಪಡೆಯುವಂತೆ ಪ್ರಕಾಶಿಸುವ ನಡುವಿನ ಸುರಿಗೆಯನ್ನು ಇದಿರಿನಲ್ಲಿ ಒರೆಕಳಚಿ ಆದರೊಡಲು ತುಂಡಾಗುವಂತೆ ಕುತ್ತಿದನು.

731. ಬೇಡರ ನಾಯಕನಾದ ಕರಿಯ ಶರೀರವೂ ಕೆಂಗಣ್ಣೂ ಉಳ್ಳ ತಿಣ್ಣನು ವೇಗವಾಗಿ ಕುತ್ತಿದುದರಿಂದ ಪಕ್ಕದಲ್ಲಿ ಎರಡು ತುಂಡಾಗಿ ಬಿದ್ದ ಹಂದಿಯನ್ನು ನಾಣನು ಕಂಡು, 'ಕಾಡನೇ, ಇಂದು ಇದರ ಹಿಂದೆ ಹಲಗಾವುದಗಳು ಬಂದುಬಿಟ್ಟೆವು. ಗಂಡುಮಗನಾದ ಇವನು ಈ ಹಂದಿಯನ್ನು ಕೊಂದನು. ಅಬ್ಬಾ!' ಎಂದು ಹೇಳಿ ಇಬ್ಬರೂ ಅವನಡಿಯಲ್ಲಿಯೇ ನಮಿಸಿದರು.

---

729. ಕುನ್ಱಿಯೈನಿಕರ್ ಮುನ್ಚೆಱಿವೆರಿ ಕೊಟುವಿೞಿಯಿಟೆ ಕುರನೀಳ್
ಪನ್ಱಿಯುಮಟಲ್ ವನ್ಱಿಱಲೊಟು ಪಟರ್ನೆಱಿನೆಟಿ ತೋಟಿ
ತ್ತುನ್ಱಿಯತೊರು ಕುನ್ಱಟಿವರೈ ಚುಲವಿಯಚೆಱಿ ಚೂೞಿಱ್
ಚೆನ್ಱತನಿಟ್ಟೈ ನಿನ್ಱತುವಲಿ ತೆರುಮರಮರ ನಿರೈಯಿಲ್.

730. ಅತ್ತರುವಳರ್ ಚುಟಲಿಟ್ಟೈಯಟ್ಟೈ ಯತನಿಲೈಯುಱಿ ಪವರ್ಮುನ್
ಕೈತ್ತೆರಿಕಣೈ ಯಿನಿಲಟುವತು ಕರುತಲರ್ವಿಚೈ ಕಟುಕಿ
ನೊಯ್ತ್ತೆಱುಚುಟರ್ ವಿಟುಚುರಿಕೈಯೈ ಮುನೈಪೆಱವೆತಿ ರುರುವಿ
ಕ್ಕೈತ್ತನರುಟನ್ ಮುಱಿಪಟವೆಱಿ ಕುಲಮುಱವರ್ಕ ಟಲೈವರ್.

ವೇಱು

731. ವೇಟರ್ತಙ್ಙ್ ಕರಿಯ ಚೆಙ್ಕಣ್ ವಿಲ್ಲಿಯಾರ್ ವಿಚೈಯಿಱ್ ಕುತ್ತ
ಮಾಟಿರು ತುಣಿಯಾಯ್ ವೀೞ್ನ್ತ ವರಾಕತ್ತೈ ಕಣ್ಟು ನಾಣನ್
'ಕಾಟನೇ! ಯಿತನ್ಪಿನ್ ನಿನ್ಱು ಕಾತಙ್ಕಳ್ ಪಲವ ನ್ತೋಯ್ತ್ತೋಮ್;
ಆಟವನ್ ಕೊನ್ಱಾ ನಚ್ಚೋ!' ವೆನ್ಱವ ರಟಿಯಿ ೞ್ಟಾಟ್ನ್ತಾರ್.

732. ಮೇಲೂ ಅವರು ತಿಣ್ಣನನ್ನು ನೋಡಿ ಹೇಳುವವರಾಗಿ, 'ಮಾರ್ಗಕ್ರಮಣ ಮಾಡಿ ನಡೆದುಬಂದುದರಿಂದ ಹೆಚ್ಚಾದ ಹಸಿವು ನಮಗಾಗಿದೆ. ಆದುದರಿಂದ ದೊರೆತ ಈ ಹಂದಿಯನ್ನು ಸುಟ್ಟು ನೀನು ಸ್ವಲ್ಪ ತಿಂದು, ನಾವೂ ತಿಂದು, ತಣ್ಣೀರನ್ನು ಕುಡಿದು ಜಯವನ್ನು ಕೊಳ್ಳುವ ಬೇಟೆಯ ಕಾಡಿನಿಂದ ಮೆಲ್ಲನೆ ಹೊರಹೋಗಿ ಸೇರಿಕೊಳ್ಳುವ' ಎಂದು ಹೇಳಿದರು.

733. ಅವರು ಆ ರೀತಿ ಹೇಳಲು, ತಿಣ್ಣನು ಅವರನ್ನು ನೋಡಿ, 'ಈ ವನದೊಳಗೆ ಒಳ್ಳೆಯ ತಣ್ಣೀರು ಎಲ್ಲಿದೆ ?' ಎಂದು ಕೇಳಲು, 'ಇದಿರಿನಲ್ಲಿರುವ ಈ ತೇಗು ಮರಗಳ ಕಾಡನ್ನು ದಾಟಿಹೋದರೆ ಅಲ್ಲಿ ನಿಡಿದಾದ ಕಿರುಬೆಟ್ಟದ ಪಕ್ಕದಲ್ಲಿ ತಂಪಾದ ಪೊನ್ ಮುಗಲಿಯಾರು[1] ಓಡುವುದು' ಎಂದು ನಾಣನು ಹೇಳಿದನು.

734. ಮೇಲೆ ಮೇಲೆ ಹೆಚ್ಚಿದ ಕೋಪದಿಂದ ಕೂಡಿದ ಬಿಲ್ಲನ್ನು ತಾಳಿದ ಬೇಡನಾದ ನಾಣನು ಈ ರೀತಿ ಹೇಳಿದಮೇಲೆ ತಿಣ್ಣನು, 'ನಾವು ಅಲ್ಲಿ ಹೋಗುವ. ಈ ಹಂದಿಯನ್ನು ಎತ್ತಿಕೊಂಡು ಬನ್ನಿ' ಎಂದು ಹೇಳಿ ತಾನೂ ಆ ಎಡೆಯತ್ತ ಹೊರಟನು. ಅರೆಗಾವುದ ದೂರ ಹೋದಮೇಲೆ ಕೆಂಗಣ್ಣ ವೃಷಭವನ್ನುಳ್ಳ ಶಿವಪರಮಾತ್ಮನು ಇದ್ದನು ಗ್ರಹಿಸಿದ ತಿರುಕ್ಕಾಳತ್ತಿ ಮಲೆಯ ಪಕ್ಕದ ಕಾಡನ್ನು ಕಂಡರು.

---

732. ಮಱ್ಱವರ್ ತಿಣ್ಣ ನಾರ್ಕ್ಕು ಮೊೞಿಕಿನ್ಱಾರ್ 'ವೞಿವ ನ್ದಿೞ್ಱ
ವೞಿತ್ತು ಪಚಿವ ನ್ದೆಮ್ಮೈ ಯಡತವಿಯ ವಿತನೈ ಕಾಯ್ಚ್ಚಿ
ಚ್ಚೞಿನೀ ಯರುನ್ದಿ ಯಾಮು ನ್ದಿನ್ಱತ ಣ್ಣೀರ್ಕು ಟಿತ್ತು
ವೆಱ್ಱಿಕೊಳ್ ವೇಟ್ಟೈಕ್ ಕ್ಕಾಟು ಕಡಕುವೋ ಮೆಲ್ಲ' ವೆನ್ಱಾರ್.

733. ಎನ್ಱವರ್ ಕೂಱ ನೋಕ್ಕಿ, ತ್ತಿಣ್ಣನಾರ್ 'ತಣ್ಣೀ ರಿಙ್ಕೇ
ನನ್ ಱುಮಿ ವ್ವನತ್ತಿ ಲುಳ್ಳ ?' ತೆನ್ಱಾರೈ ಚೆಯ್ಯ, ನಾಣನ್
'ನಿನ್ಱವಿ ಪ್ಪೆರಿಯ ತೇಕ್ಕಿ ನಪ್ಪುರ ಙ್ಙಿನ್ಱಾ ನೀಣ್ಟ
ಕ್ಕುನ್ಱಿನು ಕ್ಕಯಲೇ ಯೋಟು ಙ್ಕುಳಿರ್ನ್ದ ಪೊನ್ ಮುಕಲಿ' ಯೆನ್ಱಾನ್.

734. ಪೊಙ್ಕಿಯ ಚಿನವಿಲ್ ವೇಟನ್ ಚೊನ್ನಪಿನ್, 'ಪೇವೋ ಮಙ್ಕೇ;
ಯಿಙ್ಕಿತು ತನ್ನೈ ಕ್ಕೊಣ್ಟು ಪೋತುವಿ' ನೆನ್ಱು, ತಾಮು
ಮಙ್ಕತು ನೋಕ್ಕಿ ಚ್ಚೆನ್ಱಾರ್; ಕಾವತ ಮರೈಯಿಱ್ ಕಣ್ಣಾರ್
ಚೆಙ್ಕಣೇ ಱುಟೈಯಾರ್ ವೈಕು ನ್ದಿರುಮಲೈ ಚ್ಚಾರಱ್ ಚೋಲೈ.

---

1. ಸ್ವರ್ಣಮುಖೀ ನದಿ.

735. 'ನಾಣನೇ! ಮುಂದೆ ತೋರುವ ಕಿರುಬೆಟ್ಟವನ್ನು ಸೇರುವ' ಎಂದು ತಿಣ್ಣನು ಹೇಳಲು, ನಾಣನು[1], 'ನೀನು ಅಲ್ಲಿ ಕಾಣಹೋಗುವೆಯಾದರೆ ಒಳ್ಳೆಯ ದೃಶ್ಯವು ಕಾಣದೊರೆಯುವುದು. ಆಕಾಶದಲ್ಲಿ ಉನ್ನತವಾಗಿರುವ ಈ ತಿರುಕಾಳತ್ತಿ ಮಲೆಯ ಮೇಲೆ ಎದ್ದು ತಿರುವುಗಳು ಒಂದೂ ಇಲ್ಲದಿರುವ (ನಮ್ಮನ್ನು ಹಾಗೆ ನೇರವಾಗಿ ಮಾಡುವ) ಕುಡುಮಿ ದೇವರು[2] ಮಲೆಯ ಉಚ್ಚಿಯಲ್ಲಿ ಇರುವರು. ನಾವು ನಮಸ್ಕರಿಸ ಬಹುದು' ಎಂದು ಹೇಳಿದನು.

736. 'ಈ ರೀತಿ ಆಗುತ್ತಿರುವುದೇಕೆ? ಈ ಮಲೆಯನ್ನು ಕಂಡು ಈ ಎಡೆಯನ್ನು ಸಮೀಪಿಸಿ ಹೋಗುತ್ತಿರುವಾಗ ನನ್ನ ಮೇಲುಳ್ಳ ಭಾರವು ಕಮ್ಮಿಯಾಗುವಂತೆ ಅನುಭವವು ಏರ್ಪಡುವುದು. ಆಶೆಯು ಮೇಲೂ ಮೇಲೂ ಹೆಚ್ಚಲು ಹೃದಯವು ಬೇರೊಂದು ಆಶೆಯನ್ನು ಕೊಂಡುದಾಗಿ ವೇಗವಾಗಿ ಹೋಗುವುದು. ದೇವರು ಇರುವೆಡೆ ಅಲ್ಲಿ ಎಲ್ಲಿದೆ? ಹೋಗುವೆಯಾಗು,' ಎಂದು ತಿಣ್ಣನು ಹೇಳಿದನು.

737. ಹೀಗೆ ಹೇಳಿ ವೇಗವಾಗಿ ಹೋಗಲು, ಆ ಇಬ್ಬರೂ ಅವನೊಡನೆ ಹೊರಟು, ದಡಗಳಲ್ಲಿ ಎರಡು ಪಕ್ಕಗಳಲ್ಲಿಯೂ, ಎತ್ತರವಾಗಿ ಬೆಳೆಯುವ ಬಿದಿರಿನ ಮುತ್ತುಗಳನ್ನೂ, ಕರಿಯ ಅಗಿಲ ಕೊರಡುಗಳನ್ನೂ, ಚಂದನ ಮರಗಳನ್ನೂ, ಮಲೆಯಲ್ಲಿ ಬೆಳೆಯುವ ಇತರ ಮಣಿಗಳನ್ನೂ, ಹೊನ್ನನ್ನೂ, ವಜ್ರವನ್ನೂ, ಮಳಲರಾಶಿಗಳಲ್ಲೆಲ್ಲಾ ಅಲೆಗಳಿಂದ ಮುನ್ನವೇ ತೆರಳಿಸಿ ಸೇರಿಸಿಟ್ಟ ತಿರುಮುಗಲಿ ನದಿಯನ್ನು ಬಂದು ಸೇರಿದರು.

---

735. 'ನಾಣನೇ! ತೋನ್‌ಱು ಙ್ಕುನ್‌ಱಿ ನಣ್ಣುವೋ' ಮೆನ್‌ನ, ನಾಣನ್,
'ಕಾಣನೀ ಪೋತಿ ನಲ್ಲ ಕಾಟ್‌ಚಿಯೇ ಕಾಣು; ಮಿನ್ತು
ಚ್ಚೇಣುಯರ್ ತಿರುಕ್ಕಾಳತ್ತಿ ಮಲೈಮಿಚ್ಚೈ ಯೆಱುನ್ತು ಚೆವ್ವೇ
ಕೋಣಮಿಲ್ ಕುಟುಮಿ ತ್ತೇವ ರಿರುಪ್ಪರ್; ಕು ಮ್ಪಿಟಲಾ' ಮೆನ್‌ಱಾನ್.

736. ಆವತೆನ್? ನಿತನೈ ಕ್ಕಣ್ಟ ಙ್ಕಣ್ಯೈತೊಱು ಮೆನ್‌ಮೇಱ್ ಪಾರವ್
ಪೋವತೊನ್ ಱುಳತು ಪೋಲು; ಮಾಚೈಯುಮ್ ಪೊಱುಕ್ಕಿ ಮೇನ್‌ಮೇನ್
ಮೇವಿಯ ನೆಞ್ಚುಮ್ ವೇಱೋರ್ ವಿರುಪ್ಪುಱ ವಿರೈಯಾ ನಿಱ್ಕುಮ್,
ತೇವರ ಙ್ಕಿರುಪ್ಪ ತೆಙ್ಕೇ? ಪೋ' ತೆನ್‌ಱಾರ್ ತಿಣ್ಣ ನಾರ್‌ತಾಮ್.

737. ಉರೈಚೆಯ್ತು ವಿರೈನ್ತು ಚೆಲ್ಲ ವವರ್‌ಕಟು ಮುಟನೇ ಪೋನ್ತು
ಕರೈವಳರ್ ಕಟಿತ್ಲಯಿನ್ ಮುತ್ತು ಙ್ಕಾರಕಿಱ್ ಕುಱಟು ಞ್ಚನ್ತುಮ್
ವರೈತರು ಮಣಿಯುಮ್ ಪೊನ್‌ನುಮ್ ವಯಿರಮುಮ್ ಪುಳಿನ ನ್ತೋಱು
ನ್ತಿರೈಕಳ್‌ಮುನ್ ಱೆರಟ್ಟ ವೈತ್ತ ತಿರುಮುಕ ಲಿಯಿನೈ ಚ್ಚಾರ್‌ನ್ತಾರ್.

---

1. ಞಾಣ – ಧನುರ್ ಪುಣ್ಯಗಳ ಸಂಕೇತ. 2. ಜಡೆಮುಡಿಯುಳ್ಳ ದೇವರು.

738. ಅಲ್ಲಿ ಆ ನದಿಯ ಕರೆಯ ಪಕ್ಕದಲ್ಲಿ ಒಂದು ಶಾಂತವಾದ ಮರದ ನೆಳಲಲ್ಲಿ ಹಂದಿಯ ಒಡಲನ್ನಿಟ್ಟು, ವೃತ್ತಾಕಾರವಾಗಿ ಮಾಡಿದ ಬಿಲ್ಲನ್ನು ತಾಳಿದ ಕಾಡನನ್ನು ನೋಡಿ ತಿಣ್ಣನು 'ಮರದಿಂದ ಬೆಂಕಿಯನ್ನು ಕಡೆಯುವ ಕೋಲನ್ನು (ಅರಣಿಯನ್ನು) ಮಾಡಿ ಇಲ್ಲಿ ನೀನು ಬೆಂಕಿಯನ್ನು ತಯಾರಿಸುವವನಾಗು. ಈ ಮಲೆಯನ್ನೇರಿ ನಾವು ಎಲ್ಲವನ್ನೂ ಕಂಡು ಬಂದು ಸೇರುವೆವು' ಎಂದು ಹೇಳಿ ನಾಣನೂ ತಾನೂ ಹೋದರು.

739. ತುಂಬಿಗಳು ಮುಸುರಿದ ದಡವನ್ನು ಸುತ್ತಿದ ನಂದನಗಳ ಮಲರುಗಳನ್ನು ಧರಿಸಿಕೊಂಡು ಅಲಂಕೃತವಾದ ಮುಗಲಿನದಿ[1]ಯ ತಿಳಿಯಾದ ನೀರಿನಲ್ಲಿಳಿದು ಮನಸ್ಸು ತಿಳಿಯಾದ ತಿಣ್ಣನು, ಸಂತೋಷವು ಬರುವುದಕ್ಕೆ ಕಾರಣವಾದ ಆನಂದವು ಮೇಲೆ ಮೇಲೆ ಉಕ್ಕಲು ತಿರುಕ್ಕಾಳತ್ತಿ ಮಲೆಯನ್ನು ಕಂಡುಕೊಂಡೇ ಶೀತಲತೆಯಿಂದ ಕೂಡಿ ಪ್ರವಹಿಸುವ ಆ ನದಿಯನ್ನು ದಾಟಿಹೋಗಿ ಎತ್ತರವಾದ ಮಲೆಯ ಪಕ್ಕವನ್ನು ಸೇರಿದರು.

740. ಸೂರ್ಯನು ಆಗಸದಲ್ಲಿ ಉಚ್ಚಿಗೇರಲು, ದೈವಸ್ವಭಾವವುಳ್ಳ ಆ ದೊಡ್ಡ ಮಲೆಯ ಶಿಖರದಲ್ಲಿ ಶಬ್ದಿಸುವ ಐದು ದೇವದುಂದುಭಿಗಳ ನಿನಾದವು ಕಡಲನೊರೆತದಂತೆ ಮೊಳಗಲು, 'ನಾಣನೇ, ಇದು ಏನು?' ಎಂದು ಕೇಳಿದ ತಿಣ್ಣನಿಗೆ, 'ಈ ಮಲೆಯ ಜೇನಿನ ರಾಶಿಯನ್ನು (ಶಿವಪರಮಾತ್ಮನನ್ನು) ಸುತ್ತಿಕೊಂಡು ಮಧುಯುತವಾದ ಮಲರುಗಳಲ್ಲಿದ್ದು ಬರುವ ಜೇನುಹುಳಗಳು (ಭಕ್ತರು) ಮುಸುರಿ ಆಮೇಲೆ ಪಕ್ಕಗಳಲ್ಲಿ ತಿರುಗಿ ಎದ್ದು ಹೋಗುವಾಗ ಮಾಡುವ ಶಬ್ದವಾಗಿದ್ದೀತು' ಎಂದು ನಾಣನು ಹೇಳಿದನು.

---

738. ಅಙ್ಕತನ್ ಕರೈಯಿನ್ ಪಾಙ್ಕೋ ರಣಿನಿೞಲಿಲ್ ಕೇೞಲಿಟ್ಟು
ವಾಙ್ಕುವಿಱ್ ಕಾಟನ್ ಱನ್ನೈ ಮರಕ್ಕಟೈ ತೀಕ್ಕೋಲ್ ಪಣ್ಣಿ
'ಯೀಙ್ಕುನೀ ನೆರುಪ್ಪು ಕ್ಕಾಣ್ಪಾ ಯಿಮ್ಮಲೈ ಯೇಱಿ ಕ್ಕಣ್ಟು
ನಾಙ್ಕಳ್‌ವ ನ್ತಣೈವೋ' ಮೆನ್‌ಱು ನಾಣನು ನ್ತಾಮುಮ್ ಪೋನಾರ್.

739. ಅಳಿಮಿಟೈ ಕರೈಚೂೞ್ ಚೋಲೈ ಯಲರ್‌ಕಳ್‌ಕೊ ಣ್ಟಣೈನ್ತು ವಾೞಿನ್
ಱೊಳಿಪುನ ಲಿೞಿನ್ತು ಚೆನ್ಱು ತೆಳಿವುಱು ನ್ತಿಣ್ಣ ನಾರ್‌ತಾಮುಮ್
ಕಳಿವರು ಮಕಿೞ್‌ಚ್ಚಿ ಪೊಙ್ಕ ಕ್ಕಾಳತ್ತಿ ಕಣ್ಟು ಕೊಣ್ಟು
ಕುಳಿರ್‌ವರು ನತಿಯೂ ಟೇಕಿ ಕ್ಕುಲವರೈ ಚ್ಚಾರಲ್ ಚೇರ್‌ನ್ತಾರ್.

740. ಕತಿರವ ನುಚ್ಚಿ ನಣ್ಣ ಕ್ಕಟವುಳ್‌ಮಾಲ್ ವರೈಯಿ ನುಚ್ಚಿ
ಯತಿರ್‌ತರು ಮೋಚೈ ಯೈನ್ತು ಮಾರ್‌ಕಲಿ ಮುೞಕ್ಕ ಙ್ಕೇಟ್ಟು,
'ಏತುವೆನ್‌ಕೊ? ನಾಣಾ?' ವೆನ್‌ಱಾರ್ 'ಕ್ಕಿಮ್ಮಲೈ ಪ್ಪೆರುನ್ತೇನ್ ಚೂೞ್‌ನ್ತು
ಮತುಮಲ ರೀಕ್ಕಳ್ ಮೊಯ್‌ತ್ತು ಮರುಙ್ಕೆೞು ಮೊಲಿಕೊ' ಲೆನ್‌ಱಾನ್.

---

1. ಮುಗಲಿ ನದಿ = ಸ್ವರ್ಣಮುಖಿ ನದಿ.

741. ಮೊದಲು ಮಾಡಿದ ತಪಸ್ಸುಗಳ ಕೊಟವು ಅಂತ್ಯವಿಲ್ಲದ ಸುಖವಾದ ಪ್ರೀತಿಯನ್ನು ಎತ್ತಿತೋರಿಸಲು, ಅಳತೆಗೆ ಸಿಗದ ಆಶೆಯು ಉಕ್ಕಿ ಸ್ಥಿರವಾದ ಪ್ರೇಮವಾಗಿ ಹಿರಿಮೆಯನ್ನು ತಾಳಲು, ತ್ಯಾಗಿಯಾದ ಈಶ್ವರನ ಮಲೆಯನ್ನು ನೋಡಿ ಎಲುಬುಗಳು ಒಳಗೆ ಸೆಳೆದಿರಲು, ಅಂತರಂಗದೊಳಗೆ ಎದ್ದ ದೊಡ್ಡ ಆಶೆಯೊಡನೆ,

742. ನಾಣನೂ ತನ್ನ ಭಕ್ತಿಯೂ ತನಗೆ ಮೊದಲೇ ಶೀತಲವಾದ ಮಲೆಯನ್ನು ಏರಿಹೋಗಲು, ತಿಣ್ಣನು ತಾನು ಅಲ್ಲಿ ಸ್ಥಿರವಾಗಿ ಏರ್ಪಟ್ಟ ತತ್ವಗಳೆಂಬ ದೊಡ್ಡ ಪಡಿ (ಮೆಟ್ಟಲು) ಗಳನ್ನೇರಿ, ಶಕ್ತಿಯೇ ರೂಪವನ್ನು ತಾಳಿದ ಶಿವವನ್ನು ಸಮೀಪವಾಗಿ ಸೇರುವವರಾದ ಶಿವಯೋಗಿಗಳಂತೆ, ಶಿವಪರಮಾತ್ಮನು ಸ್ಥಿರವಾಗಿರುವ ನಿಡಿದಾದ ಮಲೆಯನ್ನೇರಿ ನೇರಾಗಿ ಹೋಗುವ ಹೊತ್ತಿನಲ್ಲಿ,

743. ತಿಣ್ಣನು ಬಾಲಚಂದ್ರನು ಸೇರಿದ ಜಡೆಯುಳ್ಳವನನ್ನು ನೋಡುವ ಮೊದಲೇ, ಆತನ ಕೃಪಾದೃಷ್ಟಿಯುಳ್ಳ ಕರುಣೆಮಿಕ್ಕ ಅನುಗ್ರಹವನ್ನು ಕೊಂಡ ದಿವ್ಯ ದೃಷ್ಟಿಯು ಇವನ ಮೇಲೆ ಬೀಳಲು, ಸೇರಿದ ಜನ್ಮದ ಹಿಂದಿನ ತೊಡರುಗಳು ಇವನನ್ನು ಬಿಟ್ಟು ಅಗಲಲು, ಅವುಗಳನ್ನು ನೀಗಿದವನಾಗಿ, ಮಿಕ್ಕ ಪ್ರಕಾಶದ ನೆಳಲಲ್ಲಿ ಸಮಾನವಿಲ್ಲದ ಭಕ್ತಿಯೇ ರೂಪುತಾಳಿದಂತವನಾದನು.

---

741. ಮುನ್‌ಪುಚೆಯ್ ತವತ್ತಿ ನೀಟ್ಟ ಮುಟಿವಿಲಾ ವಿನ್‌ಪ ಮಾನ
ವನ್‌ಪಿನೈ ಯೆಟುತ್ತು ಕ್ಕಾಟ್ಟ ವಳವಿಲಾ ವಾರ್‌ವಮ್ ಪೊಙ್ಕಿ
ಮನ್‌ಪೆರು ಙ್ಕಾತಲ್ ಕೂರ ವಳ್ಳಲಾರ್ ಮಲೈಯೈ ನೋಕ್ಕಿ
ಯೆನ್‌ಪುನೆ ಕ್ಕುರುಕಿ ಯುಳ್ಳ ತ್ತೆಟುಪ್ಪೆರು ವೇಟ್ಕೈ ಯೋಟುಮ್,

742. ನಾಣನು ಮನ್‌ಪು ಮುನ್‌ಪು ನಳಿರ್‌ವರೈ ಯೇಱ ತ್ತಾಮುಮ್
ಪೇಣುತ ತ್ತುವಙ್ಕ ಳೆನ್‌ನುಮ್ ಪೆರುಕುಚೋ ಪಾನ ಮೇಱಿ
ಯಾಣೈಯಾಙ್ ಚಿವತ್ತೈ ಚ್ಚಾರ ವಣೈಪವರ್ ಪೋಲ ವೈಯರ್
ನೀಣಿಲೈ ಮಲೈಯೈ ಯೇಱಿ ನೇರ್‌ಪಟ ಚ್ಚೆಲ್ಲುಮ್ ಪೋತಿಲ್,

743. ತಿಙ್ಕಳ್‌ಚೇರ್ ಚಟೈಯಾರ್ ತಮ್ಮೈ ಚೆನ್‌ಱವರ್ ಕಾಣಾ ಮುನ್ನೇ
ಯಙ್ಕಣರ್ ಕರುಣೈ ಕೂರ್‌ನ್ತ ವರುಟ್ಪೆರು ನೋಕ್ಕ ಮೆಯ್ತ್ತ
ತ್ತಙ್ಕಿಯ ಪವತ್ತಿನ್ ಮುನ್ನೈ ಚ್ಚಾರ್‌ಪುವಿ ಟ್ಟಕಲ ನೀಙ್ಕಿ
ಪ್ಪೊಙ್ಕಿಯ ವೊಳಿಯಿ ನೀಟಱ್ ಪೊರುವಿಲನ್ ಪರುವ ಮಾನಾರ್.

744. ಆಕಾಶದವರೆಗೆ ವ್ಯಾಪಿಸಿ ಎತ್ತರವಾಗಿ ಬೆಳೆದ ತಿರುಕಾಳತ್ತಿಯಲ್ಲಿ ಏಳುವ ಮೊಳಕೆಯಾಗಿಯುಳ್ಳ ಏಕನಾಯಕನಾದ ಶಿವಪರಮಾತ್ಮನನ್ನು ತಿಣ್ಣನು ಕಂಡನು. ಆ ದರ್ಶನದಿಂದ ಉಂಟಾದ ದೊಡ್ಡ ಸಂತೋಷವಾದ ಭಕ್ತಿಯು ವೇಗವಾದುದು ಮೇಲೆ ಬರಲು, ಹೆಚ್ಚಾದ ವೇಗದಿಂದ, ಮೋಹಗೊಂಡು ಓಡಿಹೋಗಿ ಅವನನ್ನು ಆಲಿಂಗಿಸಿ ಕೊಂಡು ನೆತ್ತಿಯಲ್ಲಿ ಮುತ್ತಿಟ್ಟು ನಿಂತನು.

745. ಬಹುಸಮಯ ಆ ರೀತಿ ಆಲಿಂಗಿಸಿ ನಿಂತು, ತನ್ನ ಶರೀರದಲ್ಲಿದ್ದ ರೋಮ ಕೂಪಗಳಲ್ಲಿ ಪುಳಕವು ಹೊಮ್ಮಲು, ಮಲರಂತಿರುವ ಕಣ್ಣುಗಳಿಂದ ಕಣ್ಣೀರು ಅರ್ಬಿ ಯಂತೆ ಉಕ್ಕಿ ಹರಿಯಲು, 'ಭಕ್ತನಾದ ನನಗೆ ಇವನು ತಾನೇ ಇಲ್ಲಿ ದೊರೆತನು! ಅಬ್ಬಾ! ಇದೇನಾಶ್ಚರ್ಯ!' ಎಂದು ತಾನೇ ಹೇಳಿಕೊಂಡು, ಸರಿಸಮವಿಲ್ಲದ ಭಕ್ತಿಯು ತಾನೇ ಒಂದು ರೂಪವನ್ನು ತಾಳಿತು ಎಂಬ ಸ್ಥಿತಿಯು ಪ್ರತ್ಯಕ್ಷವಾಗಲು,

746. 'ಕ್ರೂರವಾದ ನೀಚಕುಲದಲ್ಲಿ ಬಂದ ಬೇಡರ ಜಾತಿಯಂತೆ, ಆನೆ, ಕರಡಿ, ಹುಲಿ, ಸಿಂಹ ಮೊದಲಾದ ಕ್ರೂರಜಂತುಗಳು ಸಂಚರಿಸುವುದಕ್ಕೆಡೆಯಾದ ಕಾಡಲ್ಲಿ, ನಿನ್ನೊಡನೆ ಸಹಾಯವಾಗಿ ಒಬ್ಬರೂ ಇಲ್ಲದೆ, ಓ, ಕೆಟ್ಟೆನು! ನೀನು ಈ ಮಲೆಯಲ್ಲಿ ಇರುವುದೇ ?' ಎಂದು ಹೇಳಿ ಮನದಲ್ಲಿ ಬೇಗುದಿಗೊಂಡನು.

---

744. ಮಾಕಮಾರ್ ತಿರುಕ್ಕಾಳತ್ತಿ ಮಲೈಯಿಟೈ ಕೊಟುನಾತ್ತ ಯುಳ್ಳ
ವೇಕನಾ ಯಕರೈ ಕ್ಕಣ್ಟಾ; ರೆಟುನ್ತವೇ ರುವಕ್ಕೈ ಯನ್ಪಿನ್
ವೇಕಮಾ ನತುಮೇಜ಼್ ಚೆಲ್ಲ ಮಿಕ್ಕತೋರ್ ವಿರೈವಿ ನೋಟಿ
ಮೋಕಮಾ ಯೋಟಿ ಚ್ಚೆನ್ಱಾರ್; ತೞುವಿನಾರ್; ಮೋನ್ತು ನಿನ್ಱಾರ್.

745. ನೆಟಿತುಪೋ ತುಯಿರ್ತ್ತು ನಿನ್ಱು, ನಿಱೈನ್ತೆೞು ಮುಯಿರ್ಕ್ಕು ಱೋಮಮ್
ವೆಟಿವೆಲಾಮ್ ಪುಳಕಮ್ ಪೊಙ್ಕ, ಮಲರ್ಕ್ಕಣ್ಣೀ ರರುವಿ ಪಾಯ,
'ಅಟಿಯನೇಱ್ ಕಿವರ್ತಾ ಮಿಙ್ಕೇ ಯಕಪ್ಪಟ್ಟಾ ರಙ್ಕೋ!' ವೆನ್ಱು
ಪಟಿಯಿಲಾ ಪ್ಪರಿವು ತಾನೋರ್ ಪಟಿವಮಾಮ್ ಪರಿಚು ತೋನ್ಱ,

746. ವೆಮ್ಮೈ ಕ್ಕುಲತ್ತು ವನ್ತ ವೇಟ್ಟುವ ಚ್ಚಾತಿ ಯಾರ್ಪೋಲ್
ಕೈಮ್ಮಲೈ ಕರಟಿ ವೇಙ್ಕೈ ಯರಿತಿರಿ ಕಾನ ನ್ತನ್ನಿಲ್
ಉಮ್ಮುಟನ್ ಱುಣೈಯಾ ಯುಳ್ಳಾ ರೊರುವರು ಮಿನ್ಱಿ ಕೈಟ್ಟೇನ್!
ಇಮ್ಮಲೈ ತನಿಯೇ ನೀರಿ ಙ್ಕಿರುಪ್ಪತೇ!' ಯೆನ್ಱು ನೈನ್ತಾರ್.

747. ಕೈಯಲ್ಲಿದ್ದ ಬಿಲ್ಲು ಕೆಳಬಿದ್ದುದನ್ನು ತಿಳಿಯದವನಾಗಿ, ವೃಷಭದಂತಿದ್ದ ತಿಣ್ಣನು, ತಿರುಗಿ 'ಈ ಹಸುರೆಲೆಯೊಡನೆ ಹೂವನ್ನೂ ಕೊಯ್ದಿಟ್ಟು, ತಣ್ಣೀರಿನಿಂದ ಅಭಿಷೇಚಿಸಿ, ಈ ಒಳ್ಳೆಯ ಕಾರ್ಯವನ್ನು ಮಾಡಿದವರು ಯಾರೋ?' ಎಂದು ಹೇಳಿದೊಡನೆ ಪಕ್ಕದಲ್ಲಿ ನಿಂತಿದ್ದ ನಾಣನು, 'ನಾನು ಇದನ್ನು ತಿಳಿದಿರುವೆನು' ಎಂದು ಹೇಳಿದನು.

748. 'ಹೆಚ್ಚಾದ ಪರಾಕ್ರಮವುಳ್ಳ ನಿನ್ನ ತಂದೆಯೊಡನೆ ಪ್ರಾಣಿಗಳನ್ನು ಬೇಟೆಯಾಡುತ್ತ ಹಿಂದೊಂದು ಕಾಲದಲ್ಲಿ ನಾವು ಈ ಮಲೆಯೆಡೆಗೆ ಬಂದೆವು. ಆಗ ಶೀತಲವಾದ ನೀರಿನಿಂದ ಈತನಿಗೆ ಅಭಿಷೇಕವನ್ನು ಮಾಡಿ, ಯುಕ್ತವಾದ ಎಲೆಯಿಂದಲೂ ಹೂವಿನಿಂದಲೂ ಈತನನ್ನಲಂಕರಿಸಿ, ನಿವೇದನವನ್ನೂ ಮಾಡಿ, ಮೊದಲು ಕೆಲಮಾತುಗಳನ್ನು ಹೇಳಿ ಒಬ್ಬ ಬ್ರಾಹ್ಮಣನು ಇಂದು ಕಾಣುವಂತೆಯೇ ಅಂದೂ ಮಾಡಿದ್ದನು. ಆದುದರಿಂದ ಇಂದು ಇದನ್ನು ಅವನೇ ಮಾಡಿದ್ದಿರಬೇಕು' ಎಂದು ಹೇಳಿದನು.

749. ಮನಸ್ಸಿನೊಳಗೆ ಪೂರ್ಣವಾಗಿ ತುಂಬಿ ಬಂದುದಾಗಿಯೂ, ಆತಂಕಗಳೇನೂ ಇಲ್ಲದೆ ಹೆಚ್ಚಿದ ಅಳತೆಗೆ ಮಿಕ್ಕುದೂ ಆದ ಭಕ್ತಿಯಿಂದ 'ತಿರುಕ್ಕಾಳತ್ತಿ ನಾಯನಾರನಾದ ಕುಡುಮಿ ದೇವನಿಗೆ ಆಗಬೇಕಾದ ಇನಿದಾದ ಕಾರ್ಯಗಳು ಇವೇ ಆಗಿರಬೇಕು' ಎಂದು ತಿಣ್ಣನು ಇದನ್ನೇ ದೃಢವಾಗಿ ನೆನೆದುಕೊಂಡು, ಹಿರಿಮೆಯುಳ್ಳ ಆ ಶಿವಪರಮಾತ್ಮನನ್ನು ಅಗಲಲಾರದೆ ಅಳತೆಗೆ ಮೀರಿದ ಪ್ರೀತಿಯು ಹೆಚ್ಚಲು,

---

747. ಕೈಚ್ಚಿಲೈ ವಿಟುನ್ತ ತೋರಾರ್ ಕಾಳೈಯಾರ್ ಮಿಾಳ 'ವಿನ್ತ
ಪ್ಪಚ್ಚಿಲೈ ಯೋಟು ಪ್ರೂವುಮ್ ಪಱಿತ್ತಿಟ್ಟು ನೀರುಮ್ ವಾರ್ತ್ತು
ಮಚ್ಚಿತು ಚೆಯ್ತಾರ್ ಯಾರೋ?' ವೆನ್ಱಲು ಮರುಙ್ಕು ನಿನ್ಱ
ವಚ್ಚಿಲೈ ನಾಣನ್ ಱಾನು 'ನಾನಿತು ವಱಿನ್ತೇನ್' ನೆನ್ಪಾನ್,

748. 'ವನ್ಱಿಱಲುನ್ತೈ ಯೋಟು ಮಾವೇಟ್ಟೈ ಯಾಟಿ ಪಣ್ಟಿ
ಕ್ಕುನ್ಱಿಟೈ ವನ್ತೋ ಮಾಕ, ಕ್ಕುಳಿರ್ನ್ತನೀ ರಿವರ್ಕ್ಕು ಯಾಟ್ಟಿ,
ಯೊನ್ಱಿಯ ವಿಲೈಪ್ಪೂ ಚ್ಚೂಟ್ಟಿ, ಯೂಟ್ಟಿ, ಮುನ್ ಪಱಿಕ್ಕೈನ್ತೋರ್
ಪಾರ್ಪ್ಪಾ
ನನ್ಱಿತು ಚೆಯ್ತಾ; ನಿನ್ಱು ಮವನ್ಚೆಯ್ತಾ ನಾಕು' ಮೆನ್ಱಾನ್.

749. ಉಣ್ಣಿಱೈನ್ತೆಟುನ್ತ ತೇನು ಮೊಟಿವಿನ್ಱಿ ಯಾರ್ ವನ್ಪಿ
ಱ್ಱಿಣ್ಣನಾರ್ 'ತಿರುಕ್ಕಾ ಳತ್ತಿ ನಾಯನಾರ್ ಕ್ಕಿನಿಯ ಚೆಯ್ಕೈ
ಯೆಣ್ಣಿಯ ವಿವೈಕೊ ಲಾ' ಮೆನ್ ಱಿತುಕಟ್ಟೈ ಪ್ಪಿಟಿತ್ತು ಕ್ಕೊಣ್ಟು
ವ್ವಣ್ಣಲೈ ಪ್ಪಿರಿಯ ಮಾಟ್ಟಾ ವಳವಿಲಾ ತರವು ನೀಟ,

750. 'ಈತನನ್ನು ನಾನು ಕಂಡುಬಿಟ್ಟೆನು. ಇದುವರೆಗೆ ಈತನು ಪ್ರತ್ಯೇಕ ವಾಗಿ ಇದ್ದಿರುವನಲ್ಲಾ! ಈತನಿಗೆ ಉಣಿಸಿಗಾಗಿ ಮಾಂಸವನ್ನು ಕೊಡುವವರೂ ಇಲ್ಲ. ಈತನನ್ನು ಬಿಟ್ಟು ಅಗಲಿರಲೂ ಸಾಧ್ಯವಿಲ್ಲ. ನಾನು ಏನನ್ನು ಮಾಡಲಿ? ಇನ್ನು ಮೇಲೆ ನಾನು ಈತನಿಗೆ ಬೇಕಾದ ರೀತಿಯಲ್ಲಿ ಮಾಂಸವನ್ನು ತಂದು ಇಲ್ಲಿ ಸೇರಬೇಕು' ಎಂದು ನೆನೆದು,

751. ಸ್ವಲ್ಪ ದೂರ ಹೋಗುವನು. ತಿರುಗಿ ಬರುವನು. ಆಲಿಂಗನ ಮಾಡಿ ಕೊಳ್ಳುವನು. ತಿರುಗಿ ಹೋಗುವನು. ಭಕ್ತಿಯಿಂದ ನೋಡಿ ನಿಲ್ಲುವನು. ಕರುವನ್ನು ಬಿಟ್ಟು ಹೋಗುವ ಈದ ಹಸುವಿನಂತೆ ತೊಳಲುವನು. 'ನಾಣನೇ, ದೇವರು ಭೋಜನ ವನ್ನು ಮಾಡಲು, ಮೃದುವಾದ ಒಳ್ಳೆಯ ಮಾಂಸವನ್ನು ದೋಷವಿಲ್ಲದಂತೆ ತಿಳಿದು ನಾನು ಒದಗಿಸಿಕೊಂಡು ಇಲ್ಲಿ ಬರುವೆನು' ಎನ್ನುವನು.

752. 'ನೀನು ಯಾರನ್ನು ಸಹಾಯಕ್ಕೆ ಮಾಡಿಕೊಂಡು ಇಲ್ಲಿರುವುದು? ಎಂಬ ಣಿಕೆಯಿಂದ, ನಿನ್ನನ್ನು ನಾನು ಅಗಲಿ ಹೋಗಲಾರೆನು. ನೀನು ಹಸಿವಿನಿಂದ ಇರಲು ಇಲ್ಲಿ ನಿಲ್ಲಲೂ ಆರೆನು' ಎಂದು ಕಣ್ಣೀರು ಎಡೆಬಿಡದೆ ಸುರಿಯುತ್ತಿರಲು, ಒಮ್ಮೆ ಹೋಗಿ ಬರಲು ನಿಶ್ಚಯಮಾಡಿದವನಾಗಿ, ದೊಡ್ಡ ಬಿಲ್ಲನ್ನು ಎತ್ತಿಕೊಂಡು, ತನ್ನ ಮಲ ರಂತಿರುವ ಕೈಗಳಿಂದ ದೇವರನ್ನು ನಮಿಸಿ ಹೋದನು.

---

750. 'ಇವರ್‌ತಮ್ಮೈ ಕ್ಕಣ್ಡೇ ನುಕ್ಕು ತ್ತನಿಯರಾ ಯಿರುನಾತ್ತ; ರೆನ್‌ನೇ!
ಯಿವರ್‌ತಮು ಕ್ಕಮುತು ಚೆಯ್ಯ ವಿಱೈಚ್ಚಿಯು ಮಿಟುವಾ ರಿಲ್ಲೈ;
ಯಿವರ್‌ತಮ್ಮೈ ಪ್ಪಿರಿಯು ವೊಣ್ಣಾ; ತೆನ್‌ಚೆಯ್‌ಕೇ; ನಿನಿಯಾನ್ ಚಾಲ
ವಿವರ್‌ತಮು ಕ್ಕಿಱೈಚ್ಚಿ ಕೊಣ್ಟು ಱಕ್ಕಯ್ತ್ತುವುಮ್ ವೇಣ್ಟು' ಮೆನ್‌ಱು,

751. ಪೋತುವರ್; ಮಿಾಣ್ಟು ಚೆಲ್ವರ್; ಪುಲ್ಲುವರ್; ಮಿಾಳ ಪ್ಪೋವರ್;
ಕಾತಲಿ ನೋಕ್ಕಿ ನಿಱ್ಪರ್; ಕನ್‌ಱಕಲ್ ಪುನಿಱ್ಱಾ ಪ್ಪೋಲ್ವರ್;
'ನಾತನೇ ಯಮುತು ಚೆಯ್ಯ ನಲ್ಲಮೆ ಲ್ಲಿಱೈಚ್ಚಿ ನಾನೇ
ಕೋತಱ ತ್ತೆಱಿನ್ತು ವೇಱು ಕೊಣ್ಟಿಙ್ಕು ವರುವೇ' ನೆನ್‌ಪಾರ್;

752. ಆರ್‌ತಮು ರಾಕ ನೀರಿ ಙ್ಕಿರುಪ್ಪತೆನ್ ಱಕಲ ಮಾಟ್ಟೇನ್;
ನೀರ್‌ಪಚಿ ತ್ತಿರುಕ್ಕ ವಿಙ್ಕು ನಿಱ್ಕವು ಙ್ಕಿಲ್ಲೇ' ನೆನ್‌ಱು
ಚೋರ್‌ತರು ಕಣ್ಣೀರ್ ವಾರ ಪ್ಪೋಯ್ವರ ತ್ತುಣಿನ್ತಾ ರಾಕಿ
ವಾರ್‌ಚಿಲೈ ಯೆಟುತ್ತು ಕ್ಕೊಣ್ಟು ಮಲರ್‌ಕ್ಕೈಯಾ ಱ್ಱೊಟುತು ಪೋನಾರ್.

753. ದೇವರ ಮುಂದೆ ನಿಂತು ಈ ರೀತಿ ಪ್ರಯಾಸದಿಂದ ಅಲ್ಲಿಂದ ತೊಲಗಿ, ದಟ್ಟವಾದ ಮಲೆಯಿಂದ ಕೆಳಬಂದು, ನಾಣನು ಹಿಂದಿನಿಂದ ಬಂದು ಸೇರಲು, ಹಿಂದಿನ ಲೌಕಿಕ ವ್ಯವಹಾರಗಳಲ್ಲಿ ಆಶೆಯನ್ನು ಬಿಟ್ಟು, ಭಕ್ತಿಯೇ ತನ್ನನ್ನು ಹಿಡಿದುಕೊಂಡು ನಡೆಸಲು, ಅವನು, ಹೊನ್ನಹುಡಿಗಳು ತೆರಳಿ ಎರಡು ಕರೆಗಳಲ್ಲಿಯೂ ಸೇರಿರುವಂತಹ ತಿರುಮುಗಲಿ ನದಿಯ ಎದುರು ಪಕ್ಕದ ಕರೆಯನ್ನು ಸೇರಿ ಹೊಸ ಮಲರುಗಳು ತುಂಬಿದ ವನದಲ್ಲಿ ಪ್ರವೇಶಿಸಿದನು.

754. ಅಲ್ಲಿ ನಿಂತಿದ್ದ ಕಾಡನು ಎದುರು ಬಂದು ನಮಿಸಿ, 'ಬೆಂಕಿಯನ್ನು ತಯಾರಿಸಿರುವೆನು. ಕೊಂಬುಳ್ಳ ಹಂದಿಯ ಅವಯವಗಳೆಲ್ಲವನ್ನೂ ನೀವು ಗುರುತಿಸಿರುವಂತೆ ಅಲ್ಲಲ್ಲಿರುವುದನ್ನು ನೋಡಿಕೊಳ್ಳಿರಿ. ನಾವು ಇಂದು ತಿರುಗಿ ಹೋಗಲು ಕಾಲವು ಮೀರುವಷ್ಟು ನೀವು ತಾಮಸಮಾಡಿದ ಕಾರಣವೇನು?' ಎಂದು ಕೇಳಲು ಪಕ್ಕದಲ್ಲಿ ನಿಂತ ನಾಣನು,

755. 'ಇವನು ಮಲೆಯಲ್ಲಿ ಕುಡುಮಿದೇವರನ್ನು ಕಂಡು ಆಲಿಂಗನಮಾಡಿಕೊಂಡು ಹಿಡಿಯಲು ತಕ್ಕುದಾದ ಎಡೆಯನ್ನು ದೃಢವಾಗಿ ಹಿಡಿದುಕೊಂಡು ಬಿಡದ ಬಲವಾದ ಉಡುವಿನಂತೆ ಅವರನ್ನು ನೀಗದವನಾದನು. ಆ ದೇವರು ತಿನ್ನುವುದಕ್ಕೆ ಮಾಂಸವನ್ನು ಕೊಂಡುಹೋಗುವುದಕ್ಕಾಗಿ ಇಲ್ಲಿ ಬಂದನು. ನಮ್ಮ ವಂಶದ ನಾಯಕತ್ವವನ್ನು ಈತನು ಬಿಟ್ಟನು. ದೇವರಿಗೆ ಆಳಾದನು' ಎಂದು ಹೇಳಿದನು.

---

753. ಮುನ್‌ಪುನಿನ್ ಱಿಂತಿ ನೀಙ್ಕಿ ಮೊಯ್ವ್ವರೈ ಯಿಟೞಿನ್ತು ನಾಣನ್
ಪಿನ್‌ಪುವ ನ್ತ್ಣೈಯ ಮುನ್ನೈ ಪ್ಪಿಱತುಱಿ ವೇಟ್ಕೈ ನೀಙ್ಕ
ಯನ್‌ಪುಕೊ ಣ್ಟುಯ್‌ಪ್ಪ ಚ್ಚೆಲ್ಲು ಮವರ್‌ತಿರು ಮುಕಲಿ ಯಾಱ್ಱಿನ್
ಪೊನ್‌ಪುನೈ ಕರೈಯಿ ಲೇಱಿ ಪ್ಪುತುಮಲರ್ ಕ್ಕಾವಿಱ್ ಪುಕ್ಕಾರ್.

754. ಕಾಟನು ಮೆತಿರೇ ಚೆನ್‌ಱು ತೊೞುತು 'ತೀ ಕ್ಕಟ್ಟೈತ್ತು ವೈತ್ತೇನ್;
ಕೋಟ್ಟುಟ್ಟೈ ಯೇನ ಮುಙ್ಕಳ್ ಕುಱಿಪ್ಪಟಿ ಯುಱುಪ್ಪೈ ಯೆಲ್ಲಾ
ಮಾಟುಱ ನೋಕ್ಕಿ ಕೊಳ್ಳ; ಮಱಿತ್ತುನಾಮ್ ಪೋಕೈ ಕ್ಕಿನ್‌ಱು
ನೀಟನೀರ್ ತಾೞ್ತ್ತ ತೆನ್ನೋ?' ವೆನ್‌ಱಲು ನಿನ್‌ಱ ನಾಣನ್,

755. ಅಙ್ಕಿವನ್ ಮಲೈಯಿ ಱ್ಱೇವರ್ ತಮ್ಮೈಕ್ಕ ಣ್ಟಣೈತ್ತು ಕ್ಕೊಣ್ಟು
ವಙ್ಕಿನೈ ಪ್ಪಿಱ್ಱಿ ಪ್ಪೋಕಾ ವಲ್ಲುಟು ಮ್ಪೋನ್‌ನ ನೀಙ್ಕಾ;
ನಙ್ಕುಮ ತ್ತೇವರ್ ತಿಣ್ಣ ವಿಱೈಚ್ಚಿಕೊ ಣ್ಟೇಕ ಪ್ಪೋನ್ತಾನ್;
ನಙ್ಕುಲ ತ್ತಲೈಮೈ ವಿಟ್ಟಾ; ನಲಪ್ಪಟ್ಟಾನ್ ಱೇವರ್' ಕ್ಕೆನ್‌ಱಾನ್.

756. 'ತಿಣ್ಣಾ! ಏನು ಕಾರ್ಯವನ್ನು ಮಾಡಿದೆ! ಎಂತಹ ಮತಿವಿಕಳತೆಯನ್ನು ಹೊಂದಿದೆ! ನೀನು ಬೇಡರುಗಳಾದ ನಮ್ಮ ಹಿಂದಿನ ನಾಯಕನಲ್ಲವೇ?' ಎಂದು ಕಾಡನು ಕೇಳಲು, ಅವನ ಮೊಗವನ್ನೂ ನೋಡದವರಾಗಿ, ಬಲವಾದ ಆ ದೊಡ್ಡ ಹಂದಿಯನ್ನು ಬೆಂಕಿಯಲ್ಲಿಟ್ಟು ಸುಟ್ಟು, ಮಿಕ್ಕ ಇನಿದಾದ ಮಾಂಸಗಳನ್ನು ಭಕ್ತಿಯಿಂದ ಬೇರೆ ಬೇರೆಯಾಗಿ ತುಂಡುಮಾಡಿ ತೆಗೆದುಕೊಂಡು,

757. ಕಬ್ಬಿಣದ ಕೋಲಲ್ಲಿ ಕೋದು ಕಾಯಿಸಿ, ಆ ಕೊಬ್ಬುಳ್ಳ ಮಾಂಸಗಳು ಒಳ್ಳೆಯ ಪಕ್ವವಾಗಿ ಸುಡಲು, ಅವುಗಳ ಇನಿದಾದ ರುಚಿಯನ್ನು ಮೊದಲು ತಿಳಿಯುವುದಕ್ಕಾಗಿ ಬಾಯಲ್ಲಿಟ್ಟು ಹಲ್ಲಿನಿಂದ ಕಡಿದು ರುಚಿನೋಡಿ, ಅವುಗಳಲ್ಲಿ ಹೆಚ್ಚು ರುಚಿಯಾದುವುಗಳೆಲ್ಲವನ್ನೂ ಮೊದಲೇ ಒಣಗಿದೆಲೆಗಳನ್ನು ಆಯ್ದು ಮಾಡಿರುವ ದೊನ್ನೆಯಲ್ಲಿ ಸೇರಿಸಿ ಇಡುವವನಾದನು.

758. ಪಕ್ಕದಲ್ಲಿ ನಿಂತವರಾದ ನಾಣನೂ ಕಾಡನೂ 'ಮಿಕ್ಕ ಮತಿವಿಕಳತೆಯನ್ನು ಮೇಲೂ ಪಡೆದವನಾದನು. ಏನು! ಪ್ರಯಾಸದಿಂದ ಪಡೆದ ಹಂದಿಯ ಮಾಂಸವನ್ನು ಕಾಸಿ, ಹಲ್ಲಿನಿಂದ ಅಗಿದು ರುಚಿ ಇಲ್ಲದ ಇತರ ಮಾಂಸಗಳನ್ನು ಬೇರೆ ಉಗಿದುಬಿಡುವನು. ಹೆಚ್ಚು ಹಸಿವಿನಿಂದ ಕೂಡಿದ್ದರೂ ತಾನು ಉಣ್ಣಲು ನೆನೆಯುವುದಿಲ್ಲ. ಪಡೆದ ಈ ಮಾಂಸವನ್ನು ನಮಗೂ ಕೊಡುವ ಸ್ವಭಾವವಿಲ್ಲದವನಾದನು. ಇತರ ಮಾಂಸಗಳನ್ನು ಹೊರಗೆ ಬಿಸುಡುವನು'.

---

756. 'ಎನ್‌ಚೆಯ್ದಾಯ್ ತಿಣ್ಣಾ! ನೀ ತಾನ್, ಎನ್‌ನಮಾಲ್ ಕೊಣ್ಡಾಯ್? ಯೆಙ್ಗಳ್
ಮುನ್‌ಪೆರು ಮುತಲಿ ಯಲ್ಲೈ ಯೋ?' ವೆನ್ನ, ಮುಕತ್ತೈ ನೋಕ್ಕಾರ್,
ವನ್‌ಪೆರುಮ್ ಪನ್‌ಱಿ ತನ್‌ನೈ ಯೆರಿಯಿನಿಲ್ ವತಕ್ಕಿ ಮಿಕ್ಕ
ಮಿನ್‌ಪುರು ತಚೈಕಳ್ ವೆವ್ವೇ ಱಮ್ಪಿನಿ ಲೀರ್‌ನ್ದು ಕೊಣ್ಡು,

757. ಕೋಲಿನಿಱ್ ಕೋತ್ತು ಕಾಯ್‌ಚ್ಚಿ ಕೊಳುನ್ದಚೈ ಪತತ್ತಿಲ್ ವೇವ
ಲಾಲಿಯ ಚುವೈಮುನ್ ಕಾಣ್ಪಾನ್ ವಾಯಿನಿ ಲತುಕ್ಕಿ ಪ್ಪಾರ್‌ತ್ತು
ಚ್ಚಾಲವು ಮಿನಿಯ ವೆಲ್ಲಾ ಙ್ಗುರುಕಿಲೈ ಯಿಣೈತ್ತ ಕಲ್ಲೈ
ಯೇಲವೇ ಕೇರಲಿ ಕೂಟ್ಟಿ ವತನ್‌ಮಿಚೈ ಯಿಟುವಾ ರಾನಾರ್.

758. ಮರುಙ್ಗುನಿ ನ್ಱವರ್‌ಕಳ್ ಪಿನ್‌ನು ಮಯನ್‌ಮಿಕ ಮುತಿರ್‌ನ್ದಾ; ನೆನ್‌ನೇ!
ಯರುಮ್ಪೆಱ ಲಿಱೈಚ್ಚಿ ಕಾಯ್‌ಚ್ಚಿ ಯತುಕ್ಕಿವೇ ಱುಮಿಟ್ಟಾ ನಿನ್‌ಱಾನ್,
ಪೆರುಮ್ಪಚಿ ಯುಟೈಯ ನೇನುಮ್ ಪೇಚ್ಚಿಲ; ನಮಕ್ಕುಮ್ ಪೇಱು
ತರುಮ್ಪರಿ ಚುಣರಾನ್; ಮಱ್ಱೈ ತ್ತಚೈಪುಱ ತ್ತೆಱಿಯಾ ನಿನ್‌ಱಾನ್;

759. 'ಈ ತಿಣ್ಣನು ದೈವತನ್ಮಯತೆಯನ್ನು ಹೊಂದಿರುವನು. ಇದನ್ನು ಪರಿಹರಿಸುವ ಮಾರ್ಗವೊಂದನ್ನೂ ಕಾಣೆವು. ನಾವು ಊರಿಗೆ ಹೋಗಿ ದೇವರಾಟ್ಟಿಯನ್ನು ನಾಗನೊಡನೆ ಕೊಂಡುಬಂದು ಇದನ್ನು ಪರಿಹರಿಸಬೇಕು. ಬೇಟೆಯಾಡಿದ ಆ ಕಾಡಿನಲ್ಲಿ ನಿಂತ ಇತರ ಕೆಲಸದಾಳುಗಳನ್ನು ಕೂಡಿಕೊಂಡು ಊರಿಗೆ ಹೋಗುವೆವು' ಎಂದು ನೆನೆದು ಹೋದರು.

760. ಬೇಡರಿಬ್ಬರು ಹೋದುದನ್ನು ತಿಣ್ಣನು ತಿಳಿಯದವನಾಗಿ, ವೇಗದಿಂದ ದೊನ್ನೆಯಲ್ಲಿ ಮಾಂಸವನ್ನು ಶುದ್ಧವಾಗಿ ಸೇರಿಸಿಟ್ಟುಕೊಂಡು, ದೇವರನ್ನು ಮಜ್ಜನ ಮಾಡಿಸಲು ನೆನೆದು, ತನ್ನ ಪರಿಶುದ್ಧವಾದ ಬಾಯಿಯ ಎಡೆಯಲ್ಲಿ ನದಿಯ ಒಳ್ಳೆಯ ನೀರನ್ನು ಕೊಂಡು, ಕೊಯ್ದು ತೆಗೆದ ಪರಿಶುದ್ಧವಾದ ಸುವಾಸನೆಯುಳ್ಳ ಪತ್ರಪುಷ್ಪಗಳನ್ನು ತನ್ನ ಪರಿಶುದ್ಧವಾದ ತಲೆಕೂದಲಿನೆಡೆಯಲ್ಲಿ ತುಂಬಿ ಇಟ್ಟುಕೊಂಡವನಾಗಿ,

761. ಕೂರಾದ ಅಂಬಿನೊಡನೆ ಬಿಲ್ಲನ್ನು ಒಂದು ಕೈಯಿಂದ ತಾಳಿ ಕಲ್ಲೆ[1] ಯಲ್ಲಿಟ್ಟ ಪರಿಶುದ್ಧವಾದ ಮೃದುಮಾಂಸದ ಒಳ್ಳೆಯ ಆಹಾರವನ್ನು ಒಂದು ಕೈಯಲ್ಲಿ ತೆಗೆದುಕೊಂಡು, 'ಒಳ್ಳೆಯವನಾದ ನಮ್ಮ ಈಶ್ವರನು ಹೆಚ್ಚು ಹಸಿದಿರುವನು' ಎಂದು ಪರಿತಪಿಸಿ, ವ್ಯಥೆಪಟ್ಟು, ಬಹುವೇಗದಿಂದ ಈಶ್ವರನ ಮಲೆಯನ್ನು ಸೇರಿದನು.

---

759. 'ತೇವುಮಾಲ್ ಕೊಣ್ಡು ನಿನ್ಱ ತ್ತಿಣ್ಣನ್; ಮಱ್ಱಿತನ್ನೈ ತ್ತೀರ್ಕ್ಕ
ಲಾವತೊನ್ ಱಱಿಯೋನ್; ತೇವ ರಾಟ್ಟಿಯ್ಯೈ ನಾಕ ನೋಟು
ಮೇವಿನಾಱ್ ಕೊಣರ್ನ್ದು ತೀರ್ಕ್ಕ ವೇಣ್ಡುಮ ವ್ವೇಟ್ಟೈಲ ಕ್ಕಾಟ್ಟಿ
ಲೇವಲಾಟ್ ಕಳೈಯುಱ್ ಕೊಣ್ಡು ಪೋತು' ಮೆನ್ ಱೆಣ್ಣಿ ಪ್ಪೋನಾರ್.

760. ಕಾನವರ್ ಪೋನ ತೋರಾರ್; ಕಟಿತಿನಿಱ್ ಕಲ್ಲೈ ಯಿನ್ಕ
ಣೂನಮು ತಮೈತ್ತು ಕ್ಕೊಣ್ಡು, ಮಜ್ಜನ ಮಾಟ್ಟ ವುನ್ನಿ
ಮಾನತಿ ನನ್ನೀರ್ ತೂಯ ವಾಯಿನಿಱ್ ಕೊಣ್ಡು, ಕೊಯ್ದು
ತೂನಱುಮ್ ಪಳ್ಳಿ ತ್ತಾಮಱ್ ಕುಞ್ಚಿಮೇ ಱ್ಱತೈಯ ಕ್ಕೊಣ್ಡಾರ್,

761. ತನುವೊರು ಕೈಯಿಲ್ ವೆಯ್ಯ ಚರತ್ತುಟನ್ ಱಾಙ್ಕಿ ಕ್ಕಲ್ಲೈ
ಪ್ಪುನಿತಮೆ ಲ್ಲಿಱೈಚ್ಚಿ ನಲ್ಲ ಪೋನಕ ಮೊರುಕೈ ಯೇನ್ದಿ
ಯಿನಿಯವೆ ಮ್ಪಿರಾನಾರ್ ಚಾಲ ಪ್ಪಚಿಪ್ಪರೆನ್ ಱಿರಙ್ಕಿ ಯೇಙ್ಕಿ
ನನಿವಿರೈ ನ್ದಿಱೈವರ್ ವೆಱ್ಪೈ ನಣ್ಣಿನಾರ್ ತಿಣ್ಣ ನಾರ್ ತಾಮ್.

---

1. ಕಲ್ಲೆ=ದೊನ್ನೆ.

762. 'ತನ್ನ ನಾಯಕನಾದ ದೇವನು ಕ್ಷೀಣವಾಗಿರುವನು' ಎಂದು ವೇಗವಾಗಿ ಹೋಗಿ, ಮಲೆಯಲ್ಲಿ ಉದಯಿಸಿದ ಮೊದಲಿನವನಾದ ಆತನನ್ನು ಕಂಡು, ಆತನ ಶ್ರೀಮುಡಿಯ ಮೇಲೆ ಇದ್ದ ಮಲರುಗಳನ್ನು ತನ್ನ ಕಾಲಲ್ಲಿ ಧರಿಸಿದ ಸುಂದರವಾದ ಮೆಟ್ಟಿನಿಂದ ಒರಸಿ ತೆಗೆದು, ಬಾಯಲ್ಲಿದ್ದ ಅಭಿಷೇಕಜಲವನ್ನು, ಉಂಟಾದ ಭಕ್ತಿಯನ್ನು ಉಗುಳುವವನಂತೆ ಮಲರಹಿತನಾದವನ ಶ್ರೀಮುಡಿಯ ಮೇಲೆ ಬಿಟ್ಟನು.

763. ಬಿಲ್ಲಿನ ಮೇಲೆ ಶೋಭಿಸುವ ಕೆಂಪಾದ ಕೈಯುಳ್ಳ ತಿಣ್ಣನು, ಈಶ್ವರನಿಗೆ ನಮಿಸಿ, ತನ್ನ ತಲೆಯ ಜುಟ್ಟಿನಲ್ಲಿಟ್ಟುಕೊಂಡು ಬಂದ ಪತ್ರಪುಷ್ಪಗಳನ್ನು ದೊಡ್ಡ ಕಾಳತ್ತಿಮಲೆಯ ಮೇಲೆ ಉದಯಿಸಿರುವ ತಮ್ಮ ಈಶ್ವರನ ಶ್ರೀಮುಡಿಯ ಮೇಲೆ ಅಲಂಕರಿಸಿ, ಒಣಗಿದೆಲೆಗಳನ್ನು ಸೇರಿಸಿ ಕುತ್ತಿಮಾಡಿದ ದೊನ್ನೆಗಳಲ್ಲಿ ತೆಗೆದುಕೊಂಡು ಬಂದ ಮಾಂಸದ ಆಹಾರವನ್ನು ಎದುರಲ್ಲಿಟ್ಟು,

764. 'ಕೊಬ್ಬುಳ್ಳ ಮಾಂಸಗಳೆಲ್ಲವನ್ನೂ ತಿಳಿದು ತುಂಡರಿಸಿ ತೆಗೆದು, ಕೋಲಲ್ಲಿ ಸುರಿದು ಬೆಂಕಿಯಲ್ಲಿ ಪಕ್ವವಾಗಿ ಕಾಯಿಸಿದ ಮೇಲೆ, ಹಲ್ಲಿನಿಂದ ಅಗಿದು ನೋಡಿ, ಹಿಂದೆ ಅನುಭವಪಟ್ಟ ನಾಲಗೆಯಿಂದ ಇನಿದಾದ ರುಚಿಯನ್ನು ಆರಯ್ದು ನೋಡಿ ನಿವೇದಿಸಿದ ಈ ಮಾಂಸವು ಬಹಳ ಒಳ್ಳೆಯದಾಗಿದೆ. ನಾಯನಾರೇ[1], ದೇವರು ಇದನ್ನು ಭುಜಿಸಬೇಕು' ಎಂದನು.

---

762. ಇಳೈತ್ತನರ್ ನಾಯ ನಾರೆನ್ ಱೇಣ್ಣಚ್ಚೆನ್, ಱಿಯ್ತು, ವೆಱ್ಪಿನ್
ಮುಳೈತ್ತೆೞು ಮುತಲ್ಯೈ ಕ್ಕಣ್ಟು, ಮುಡಿಮಿಚ್ಚೈ ಮಲರ್ಯೈ ಕ್ಕಾವಿಲ್
ವಳೈತ್ತಪೊಱ್ ಚೆಱುಪ್ಪಾನ್ ಮಾಱ್ಱಿ, ವಾಯಿನ್‌ಮಂ ಞ್ಞನನೀರ್ ತನ್‌ನೈ
ವಿಳೈತ್ತವನ್ ಪುಮಿೞ್‌ವಾರ್ ಪೋಲ ವಿಮಲನಾರ್ ಮುಟಿಮೇಲ್ ವಿಟ್ಟಾರ್.

763. ತಲ್ಯೈಮಿಚ್ಚೈ ಚುಮನ್ತ ಪಳ್ಳಿ ತ್ತಾಮತ್ತೈ ತಟಿಙ್ಞಾ ಳತ್ತಿ
ಮಲ್ಯೈಮಿಚ್ಚೈ ತ್ತಮ್ಪಿ ರಾನಾರ್ ಮುಟಿಮಿಚ್ಚೈ ವಣಙ್ಕಿ ಚ್ಚಾತ್ತಿ,
ಚ್ಚಿಲ್ಯೈಮಿಚ್ಚೈ ಪೊಲಿನ್ತ ಚೆಙ್ಕೈತ್ತಿಣ್ಣನಾರ್ ಚೇರ್‌ತ್ತ ಕಲ್ಲೈ
ಯಿಲ್ಯೈಮಿಚ್ಚೈ ಪ್ಪಟೈತ್ತ ವೂನಿನ್ ಱಿರುವಮು ತೆತಿರೇ ವೈತ್ತು,

764. 'ಕೊೞುವಿಯ ತಚ್ಚೈಕ ಳೆಲ್ಲಾಙ್ ಕೋಲಿನಿ ಱ್ಱಿರಿನ್ತು ಕೋತ್, ತಙ್
ಕೞಲುಱ ಪತತ್ತಿಱ್ ಕಾಯ್‌ಚ್ಚಿ, ಪ್ಪಲ್ಲಿನಾ ಲತುಕ್ಕಿ, ನಾವಿಱ್
ಪೞಕಿಯ ವಿನಿಮೈ ಪಾರ್‌ತ್ತು, ಪ್ಪಟೈತ್ತವಿ ವ್ವಱ್ಱೈಚ್ಚಿ, ಚಾಲ
ಅೞಕಿತು; ನಾಯ ನೀರೇ! ಯಮುತುಚೆಯ್ ತರುಳುಮ್' ಎನ್‌ಱಾರ್.

1. ನಾಯನಾರು = ನಾಯಕರು.

765. ಈ ರೀತಿಯ ಮಾತುಗಳನ್ನು ಹೇಳಿ, ಭೋಜನವನ್ನು ಕೊಟ್ಟು, ಬೇಡ ನಾಯಕನ ಮನಸ್ಸಿನಲ್ಲಿ ತಿರುಕಾಳತ್ತಿ ಮಲೆಯ ಈಶ್ವರನಿಗೆ ಇನಿದಾದ ಒಳ್ಳೆಯ ಆಹಾರವು ಇನ್ನೂ ಬೇಕು ಎಂದು ಕಣ್ಣಪ್ಪನ ಏಳುವ ಹೆಚ್ಚಿನ ಆಶೆಯನ್ನು ಕಂಡು, ತನ್ನ ಹಲವಾದ ನೀಳವಾದ ಕಿರಣಗಳನ್ನು ಸೇರಿಸಿಕೊಂಡು ಸೂರ್ಯನು ಮಲೆಯಲ್ಲಿ ಅಸ್ತಮಿಸಿದನು.

766. ಹೀಗೆ ಹಗಲು ಅಂತ್ಯಗೊಳ್ಳಲು, ತಿಣ್ಣನು ರಾತ್ರಿಯಲ್ಲಿ ಸಂಚರಿಸುವ ಕ್ರೂರಮೃಗಗಳು ಇಲ್ಲಿವೆ ಎಂದು ಹೆದರಿ, ಸತ್ಯದಿಂದ ಬೇರೆಯಾಗದ ಸನ್ಮಾರ್ಗವಾದ ಭಕ್ತಿಯನ್ನು ಮನಸ್ಸಿನೊಳಗೆ ಧರಿಸಿ, ಕೈಯಲ್ಲಿ ಬಿಲ್ಲನ್ನು ತಾಳಿ, ಈಶ್ವರನ ಪಕ್ಕದಲ್ಲಿ ಕರಿಮಲೆಯಂತೆ ಅಗಲದೆ ನಿಂತನು.

767. ಸಮಾಪಿಸುವುದಕ್ಕೆ ಅಸಾಧ್ಯವಾದ ತಪಸ್ಸುಗಳನ್ನು ಮಾಡಿಯೂ, ಮೇಘಗಳು ಸಂಚರಿಸುವ ಮಲೆಗಳನ್ನು, ಕಾಡುಗಳನ್ನು ಸೇರಿಯೂ, ಮುನಿಗಳೂ ದೇವರುಗಳೂ ತಾವು ಕಾಣಲು ಸಾಧ್ಯವಾಗದ ಶಿವಪರಮಾತ್ಮನನ್ನು ಆಶೆಯು ಮೊದಲೇ ಹೆಚ್ಚಲು, ತೃಪ್ತಿಹೊಂದದ ಭಕ್ತಿಯಿಂದ ಕಂಡುಕೊಂಡಂತೆ ನೇರವಾಗಿ ನೋಡಿ ನಿಡಿದಾದ ಇರುಳು ನೀಗುವಂತೆ ತಿಣ್ಣನು ನಿಂತನು.

---

765. ಅನ್ನವಿ ಮೊಟ್ರಿಕಳ್ ಚೊಲ್ಲಿ ಯಮುತುಜಿಯ್ ವಿತ್ತು ವೇಟರ್
ಮನ್ನನಾರ್ ತಿರುಕ್ಕಾಳತ್ತಿ ಮಲೈಯಿನಾರ್ ಕ್ಕಿನಿಯ ನಲ್ಲೂನ್
ಇನ್ನಮುಮ್ ವೇಣ್ಡುಮೆನ್ಱು ಮೆಟುಪೆರುಙ್ ಕಾತಲ್ ಕಣ್ಡು
ಪನ್ನೆಟು ಙ್ಕರಙ್ಕಳ್ ಕೂಪ್ಪಿ ಪ್ಪಕಲವನ್ ಮಲೈಯಿ ಱಾಟ್ನ್ನಾನ್.

766. ಅನ್ವಟಿ ಯನ್ತಿ ಮಾಲೈ ಯಣೈತಲು ಮಿರವು ಚೇರುಮ್
ವೆವ್ವಿಲ ಙ್ಕುಳವೆನ್ ಱಞ್ಚಿ ಮೆಯ್ಮ್ಮೈಯಿನ್ ವೇಱು ಕೊಳ್ಳಾ
ಚ್ಚೆವ್ವಿಯ ವನ್ಪು ತಾಙ್ಕಿ ತ್ತಿರುಕ್ಕೈಯಿಱ್ ಚಿಲೈಯು ನ್ತಾಙ್ಕಿ
ಮ್ಮೈವರೈ ಯೆನ್ನ ವೈಯರ್ ಮರುಙ್ಕುನಿನ್ ಱಕಲಾ ನಿನ್ಱಾರ್.

767. ಚಾರ್ವರು ನ್ತವಙ್ಕಳ್ ಚೆಯ್ತು ಮುನಿವರು ಮಮರರ್ ತಾಙ್
ಕಾರ್ವರೈ ಯಟವಿ ಚೇರ್ನ್ತು ಙ್ಕಾಣ್ಡತ ಱ್ಕರಿಯಾರ್ ತಮ್ಮೈ
ಯಾರ್ವಮುನ್ ಪೆರುಕ ವಾರಾ ವನ್ಪಿನಿಱ್ ಕಣ್ಡು ಕೊಣ್ಡೇ
ನೇರ್ಪೆಱ ನೋಕ್ಕಿ ನಿನ್ಱಾರ್ ನೀಳಿರು ಣೀಙ್ಕ ನಿನ್ಱಾರ್.

768. ಬಿದಿರುಗಳಿಂದ ಉದುರುವ ಮುತ್ತಿನ ಕೂಟಗಳಿಂದ ಕಿರಣಗಳ ಪ್ರಕಾಶವು ಒಂದು ಪಕ್ಕದಲ್ಲಿ ಪ್ರಕಾಶಿಸಿರುವುದರಿಂದಲೂ, ಗುಹೆಗಳಲ್ಲಿ ಹಾವುಗಳು ಉಗುಳಿದ ಕೆಂಪ ಗಾದ ಮಣಿಗಳ ಕೆಂಪು ಸೊಡರು ಒಂದು ಪಕ್ಕದಲ್ಲಿ ಮುಸುರಿದುದರಿಂದಲೂ ಆ ದೃಶ್ಯವು, ಚಂದ್ರನು ಪಸರಿಸಿದ ಕಿರಣಗಳುಳ್ಳ ಸೂರ್ಯನೊಡನೆ ಕೂಡಿ ಕರ್ಣಾಭರಣ ವನ್ನು ತಾಳಿದ ಕಿವಿಯುಳ್ಳ ಶಿವಪರಮಾತ್ಮನ ಈ ತಿರುಮಲೆಯನ್ನು ಅಮಾವಾಸ್ಯೆಯ ದಿನ ಸೇವಿಸಲು ಬಂದಂತೆ ಇದ್ದಿತು.

769. ಅಲ್ಲಿ ಹೊಂದಿದ ಹಲಬಗೆಯ ಮಣಿಗಳು ಹೊರಗೆ ಕಿರಣಗಳನ್ನು ಹೊಮ್ಮುವುದರಿಂದ, ಮರಕತಮಣಿಗಳೂ ಕಾಂತಿಯುಕ್ತವಾದ ನೀಲಮಣಿಗಳೂ ಪಸರಿ ಸುವ ಜ್ಯೋತಿಗಳಾದ ಸೂರ್ಯಚಂದ್ರರು ಹೋರಾಡಲು, ಅದಕ್ಕೆ ಹೆದರಿ ಮರೆಯಾಗಿ ಹೋದ ರಾತ್ರಿಕಾಲವೂ ಅಂಧಕಾರವೂ[1] ಪಕ್ಕಗಳಲ್ಲೆಲ್ಲಾ ಸೇರಿದಂತೆ ಎಲ್ಲೆಲ್ಲಿಯೂ ಕಾಣು ತ್ತಿತ್ತು.

770. ಕೆಂಪಗಾದ ಅಗ್ನಿಜ್ಯೋತಿಯ ಪ್ರಕಾಶದಂತೆ ಹೆಚ್ಚಿನ ಕಾಂತಿಸೂಸುವ ದೊಡ್ಡ ಜ್ಯೋತಿಮರಗಳ ಪ್ರಕಾಶದಿಂದಲೂ, ಹೆಣ್ಣುಮಂಗಗಳು ಬೆಟ್ಟದ ಕಂದರಗಳಲ್ಲಿ ತಮಗೆ ಪ್ರಕಾಶಕ್ಕಾಗಿ ಇಟ್ಟುಕೊಂಡ ಮುತ್ತುಮಣಿಗಳ ಪ್ರಕಾಶದಿಂದಲೂ, ಹಗೆಯನ್ನು ಮಾಡುವ ಐದು ಜ್ಞಾನೇಂದ್ರಿಯಗಳನ್ನು ಜೈಸಿದ ಶ್ರೇಷ್ಠ ಮುನಿಗಳ ಅಸಾಧ್ಯವಾದ ಹಿರಿಯ ಜ್ಯೋತಿಯಿಂದಲೂ, ನಮ್ಮ ತಂದೆಯಾದ ಶಿವಪರಮಾತ್ಮನ ತಿರುಕಾಳತ್ತಿ ಮಲೆಯಲ್ಲಿ ರಾತ್ರಿಯು ಸೇರುವುದೇ ಇಲ್ಲ.

---

768. ಕಟ್ಟಿಚೊರಿ ತಾಳ ಕ್ಕುನ್ಱಿಱ್ ಕತಿರ್ನಿಲ ವೊರುಪಾಱ್ ಪೊಙ್ಕ,
ಮುಟ್ಟೈಯರ ವುಮಿಟ್ನ್ತ ಚೆಯ್ಯ ಮಣಿವೆಯಿ ಲೊರುಪಾನ್ ಮೊಯ್ಪ್ಪ
ತ್ತಟ್ಟೈಕತಿರ್ ಪ್ಪರಿತಿ ಯೋಟು ಇ್ಙನಿ್ತರನ್ ಱಲ್ಲೈಯು ವಾವಿಱ್
ಕುಟ್ಟೈಯಣಿ ಕಾತರ್ ವೆಱ್ಪ್ಪೈ ಕ್ಕುಮ್ಪಿಟ ಚ್ಚೆನ್ಱಾ ಲೊಕ್ಕುಮ್.

769. ವಿರವುಪನ್ ಮಣಿಕಳ್ ಕಾನ್ಱ ವಿರಿಕತಿರ್ ಪ್ಪಟಲ್ಯೈ ಪೊಙ್ಕ
ಮರಕತ ವೊಳಿಕೊ ಣೀಲ ಮಣಿಕಳು ಮಿಮ್ಮೈಕ್ಕು ಇಞ್ಜೋತಿ
ಪೊರವಿರು ಚುಟರು ಕ್ಕಞ್ಚಿ ಪ್ಪೋಯಿನ ಪುಟ್ಟೈಕ ಟೋಱು
ಮಿರವಿರು ಳೊತುಙ್ಕಿ ನಾಲೇ ಪೋನ್ಱುಳ ತೆಙ್ಕು ಮೆಙ್ಕುಮ್.

770. ಚೆನ್ತ್ತಟಿ ಲೊಳಿಯಿ ಱ್ಱೋನ್ಱು ನಿ್ತೀಪಮಾ ಮರಙ್ಕ ಳಾಲು,
ಮನ್ತಿಕಣ್ ಮುಟ್ಟೈಯಿಲ್ ವೈತ್ತ ಮಣಿವಿಳ ಕ್ಕೊಳಿಕ ಳಾಲು,
ವೈನ್ನ್ತುಮಾ ಱಟಕ್ಕಿ ಯುಳ್ಳಾ ರರುಮ್ಪೆರು ಇಞ್ಜೋತಿ ಯಾಲು,
ಮೆನ್ತೈಯಾರ್ ತಿರುಕ್ಕಾ ಳತ್ತಿ ಮಲೈಯಿನಿ ಲಿರವೊನ್ ಱಿಲ್ಲೈ.

---

1. ರಾತ್ರಿಕಾಲವು ಮರಕತಮಣಿಯ ಪ್ರಕಾಶವನ್ನೂ, ಅಂಧಕಾರವು ನೀಲಮಣಿಯ ಪ್ರಕಾಶ ವನ್ನೂ ಸೂಚಿಸುತ್ತವೆ.

771. ಮೊದಲು ರಾತ್ರಿಯನ್ನು ನೀಗಿ ಅದರೊಡನೆ ಕತ್ತಲೆಯು ತುಂಬಿದ ಯಾಮವು ಕಳೆದು ರಾತ್ರಿಯು ಕಮ್ಮಿಯಾಗಲು, ಇದನ್ನು ತಿಳಿದ ಹಕ್ಕಿಗಳು ದೊಡ್ಡ ಕೂಟವಾಗಿ ಶಬ್ದಿಸುವುದರಿಂದ ಆ ಧ್ವನಿಯನ್ನು ಕೇಳಿ ಕರಿಯ ಕಡಲಂತೆ ನಿಂತ ನಿದ್ರೆ ಇಲ್ಲದಿದ್ದ ವೀರನಾದ ತಿಣ್ಣನು ತಾನು ಪಡೆಯಲಿಕ್ಕೆ ಅಸಾಧ್ಯವಿಲ್ಲದೆ ತನ್ನ ಪರಮಾತ್ಮನಿಗೆ ಮಾಂಸ ಆಹಾರವನ್ನು ಹುಡುಕಿಕೊಂಡು ಬರುವ ಕಾರಣವಾಗಿ,

772. ದೊಡ್ಡ ಕಾಲುಗಳುಳ್ಳ ಹಂದಿಯೊಡನೆ ದೊಡ್ಡ ಗಂಡುಜಿಂಕೆ, ಕಾಡು ಜಿಂಕೆಗಳು, ಇತರ ಬೇರೆ ಬೇರೆ ಮೃಗಗಳಾದುವುಗಳನ್ನು ತಂತ್ರದ ಬೇಟೆಯಲ್ಲಿ ಕೊಂದು ವಶಪಡಿಸಿಕೊಳ್ಳುವ ಕಾಲವನ್ನು ನೆನೆದು, ರೂಪವು ಸರಿಯಾಗಿ ತಿಳಿಯದ ಹೊತ್ತಾದ ತೀರ ಬೆಳಗ್ಗಿನ ಕಾಲದಲ್ಲಿ, ಯಾವ ವೈರಿಯನ್ನೂ ನಾಶಪಡಿಸಬಲ್ಲ ತನ್ನ ಬಿಲ್ಲನ್ನು ಕೈಯಲ್ಲೆತ್ತಿಕೊಂಡು ತ್ಯಾಗಿಯಾದ ಕುಡುಮಿದೇವನನ್ನು ನಮಿಸಿ ಹೋದನು.

773. ಸೇರಿದ ರಾತ್ರಿಯನ್ನು ಕಳೆದು ಭಕ್ತಿರೂಪವಾದ ಬಿಲ್ಲನ್ನು ತಾಳಿದ ತಿಣ್ಣನು ಬೇಟೆಯಲ್ಲಿ ಕಾಡುಜಂತುಗಳನ್ನು ಕೊಲ್ಲುವುದಕ್ಕೆ ಅವುಗಳನ್ನು ಸುತ್ತಿ ತಡೆಯಲು, ಅವುಗಳನ್ನು ಮರೆಸಿ ಮೊದಲೇ ಇಟ್ಟ ಕರಿಯ ತೆರೆಯನ್ನು ನೀಗಿ, 'ಅವನ್ನು ಕೊಳ್ಳಿ' ಎಂದು ಕೈಯಲ್ಲಿ ಕಾಣಿಸುವಂತೆ, ತೇರಲ್ಲಿ ಬರುವ ಸೂರ್ಯನು ಸತ್ಯಸ್ವಭಾವವನ್ನೇ ತೋರಿಸಿ ಕಿರಣಗಳನ್ನು ನೀಡಿ ಮೇಲೇಳುವ ಸಮಯದಲ್ಲಿ,

---

771. ನೆರುಙ್ಕಱ್ಱೈ ಪ್ಪೊೞುತು ನೀಙ್ಕಿ ಮಲ್ಕಿಯ ಯಾಮ ಇಱ್ಱನ್ಱು
ಚುರುಙ್ಕಿಟ ವಱಿನ್ತ ಪುಳ್ಳಿನ್ ಚೊಱ್ಚಿಲ ನ್ನೋಕ್ಕೈ ಕೇಟ್ಟು
ಕ್ಕರುಙ್ಕಟ ಲೆನ್ನ ನಿನ್ಱ ಕಣ್ಟುಯಿ ಲಾತ ವೀರರ್
ಅರುಮ್ಪೆಱಲ್ ಪ್ಪಿರಾನಾರ್ ಕ್ಕಮುತುಕೊ ಣ್ಟಣೈಯ ವೇಣ್ಟಿ,

722. ಏಱುಕಾ ಲ್ಪನ್ಱಿ ಯೋಟು ಮಿರುಙ್ಕಲೈ ಪುನಮಾನ್ ಮುಱ್ಱುಮ್
ವೇಱುವೇ ಱಿನಙ್ಕಳ್ ವೇಟ್ಟೈ ವಿನೈತ್ತೊೞಿಲ್ ವಿರಕಿ ನಾಲೇ
ಯೂಱುಚೆಯ್ ಕಾಲ ಙ್ಙಿನ್ತ್ತ ತ್ತುರುಮಿಕ ತ್ತೆರಿಯಾ ಪ್ಪೋತಿನ್
ಮಾಱುಟು ಚಿಲೈಯು ಙ್ಕೈಕ್ಕೊಣ್ಟ ವಳ್ಳಲೈ ತ್ತೊೞುತು ಪೋನಾರ್.

ವೇಱು

773. ಮೆಯ್ಕ್ಕಾಟ್ಟು ಮಿರುಳ್ವಾಙ್ಕಿ ಮುಕಙ್ಕಾಟ್ಟು ನ್ತೇರಿರವಿ
ಮೆಯ್ಕ್ಕಾಟ್ಟು ಮನ್ಪುಟೈಯ ವಿಲ್ಲಿಯಾರ್ ತನಿವೇಟ್ಟೈ
ಯೆಯ್ಕ್ಕಾಟ್ಟಿನ್ ಮಾವಳೈಕ್ಕ ವಿಟ್ಟಕರು ನ್ತಿರೈಯೆಟುತ್ತು
ಕ್ಕೈಕಾಟ್ಟು ವಾನ್ಪೋಲ ಕ್ಕತಿರ್ಕಾಟ್ಟಿ ಯೆೞುಮ್ಪೋತಿಲ್,

774. ಹಿರಿಮೆ ಹೊಂದಿದ ಶಿವಾಗಮಗಳಲ್ಲಿ ಹೇಳಲ್ಪಟ್ಟ ಶಿವಪೂಜೆಯ ವಿಧಿಗಳಿಗೆ ತಕ್ಕಂತೆ, ಕೊಯ್ದುಕೊಂಡು ಬಂದ ಮಲರುಗಳು, ಒಳ್ಳೆಯ ತೀರ್ಥ ಮೊದಲಾದ ಪೂಜಾವಸ್ತುಗಳನ್ನು ಕೊಂಡು, ಆ ಮಲೆಯಲ್ಲಿ ತೋರುವ ವಿಷವು ಶೋಭಿಸುವ ಕಂಠ ವನ್ನುಳ್ಳ ಮುದ್ದಾದ ಕಾಳತ್ತಿನಾಥರನ್ನು ನಿಯಮವಾಗಿ ಸೇವೆ ಮಾಡಿ ಬರುವುದರಿಂದಾದ ತಪಸ್ಸುಳ್ಳ ಶಿವಗೋಚರಿಯಾರ್ ಎಂಬ ಮುನಿಯೂ ಬಂದು ಸೇರಿದನು.

775. ಬೆಟ್ಟದಲ್ಲಿ ಬಂದ ದೇವರ (ಶಿವಪರಮಾತ್ಮನ) ಪಕ್ಕದಲ್ಲಿ ಚಿಂತನೆಯನ್ನು ನಿಯಮದೊಡನೆ ಮಾಡುವವನಾದ ಆ ಮುನಿಯೂ ಬೆಂದ ಮಾಂಸವೂ ಎಲುಬೂ ಸನ್ನಿಧಾನದಲ್ಲಿ ಇದ್ದುದನ್ನು ಕಂಡು, ದೂರದಲ್ಲಿ ದಾಟಿ ಕಾಲಲ್ಲಿ ತುಳಿಯದೆ ಹಾರಿ ಓಡಿ ಹೋಗಿ, 'ಓ ಕೆಟ್ಟೆನು. ಈ ಅನುಚಿತವನ್ನು ಯಾರು ಮಾಡಿದರು ?' ಎಂದು ಮನಸ್ಸಿನಲ್ಲಿ ಚಿಂತಿಸಿ,

776. 'ಎದುರಿನಲ್ಲಿ ನೇರಾಗಿ ಬರುವುದಕ್ಕೆ ಅಂಜದ ಬೇಡರೇ ಇದನ್ನು ಮಾಡಿರ ಬೇಕು. ದೇವದೇವನೇ, ನಿಮ್ಮ ಇದಿರಿನಲ್ಲಿಯೂ ಈ ಅನುಚಿತವನ್ನು ಅವರು ಮಾಡಿ ಹೋಗುವುದೇ ? ಈ ರೀತಿಯ ಅನುಚಿತವು ಬಂದು ಏರ್ಪಡಲು ದೇವರು ಸಮ್ಮತಿಸು ವುದೇ ?' ಎಂದು ಕಂಪನಗೊಂಡು ಬಿದ್ದು ಮಿಕ್ಕ ದುಃಖವನ್ನು ಹೊಂದಿದನು.

---

774. ಎಯ್ತ್ತಿಯಚೀ ರಾಕಮತ್ತಿ ಲಿಯಮ್ಪ್ಪಿಯಪೂ ಚನ್ನೈಕ್ಕೇಜ್ಪ
ಕ್ಕೊಯ್ತ್ತಮಲ ರುಮ್ಪುನಲು ಮುತಲಾನ ಕೊಣ್ಟಣೈನ್ತಾರ್
ಮೈತಟಿನ್ಯೈಯು ಜ್ಞಣ್ಟತ್ತು ಮಲೈಮರುನ್ತೈ ವಟಿಪಾಟು
ಚೆಯ್ತುವರು ನ್ತವಮುಟ್ಟೈಯ ಮುನಿವರ್ಚಿವ ಕೋಚರಿಯಾರ್.

775. ವನ್ತುತಿರು ಮಲೈಯಿನ್ಕಣ್ ವಾನವರ್ನಾ ಯಕರ್ಮರುಜ್ಞ್
ಚಿನ್ತೈನಿಯ ಮತ್ತೋಟು ಇಚ್ಚೈಲ್ಕಿನ್ಜಾರ್ ತಿರುಮುನ್ಪು
ವೆನ್ತವಿಜಿ ಚ್ಚಿಯುಮೆಲುಮ್ಪು ಜ್ಞಣ್ಟಕಲ ಮಿತಿತ್ತೋಟಿ
'ಯಿನ್ತವರು ಚಿತಜ್ಕೈಟ್ಟೇ! ನಿಯಾರ್ಚೆಯ್ತಾ ?' ರೆನ್ಟಟಿವಾರ್,

776. 'ಮೇವನೇರ್ ವರವಞ್ಚಾ ವೇಟುವರೇ ಯಿತುಚೆಯ್ತಾರ್ ;
ತೇವತೇ ವೀಚನೇ! ತಿರುಮುನ್ಪೇ ಯಿತುಚೆಯ್ತು
ಪೋವತೇ! ಯಿವ್ವಣ್ಣಮ್ ಪುಕುತನೀರ್ ತಿರುವುಳ್ಳ
ಮಾವತೇ ?' ಯೆನಪ್ಪತಟಿ ಯಮುತುವಿಟು ನ್ತುಲಮುನ್ತಾರ್.

777. 'ಮಲೆಯಲ್ಲಿ ಮೊಳೆದೆದ್ದ ಜ್ಯೋತಿಯ ಮೊಳಕೆಯಾದ ಕಾಳತ್ತಿಯಪ್ಪನ ಪೂಜೆಯೂ ತಾನುಸವಾಗುವಂತೆ ನಾನು ಇಲ್ಲಿ ಇರುವುದೇನು?' ಎಂದು ನೆನೆಸಿ, ಆ ಮಾಂಸವನ್ನೂ ಎಲುಬನ್ನೂ ಅದರೊಡನೆ ಬಿದ್ದಿದ್ದ ಎಲೆಗಳನ್ನೂ ಮೆಟ್ಟಿನ ಗುರುತುಗಳನ್ನೂ, ನಾಯಿಪಾದಗಳ ಹೆಜ್ಜೆಗಳನ್ನೂ ಅಲಗಿನಿಂದ ಸರಿಸಿ ಶುದ್ಧಮಾಡಿದಮೇಲೆ, ಶಿವಗೋಚರಿಯಾರನು ತಿರುಮುಗಲಿ ನದಿಯಲ್ಲಿ ಮುಳುಗಿ ಸ್ನಾನಮಾಡಿ ಶೀಘ್ರವಾಗಿ ಬಂದು ಸೇರಿದನು.

778. ದೋಷವು ಸೇರಿದುದರಿಂದ ಉಂಟಾದ ಪಾಪವನ್ನು ಹೋಗಲಾಡಿಸುವುದಕ್ಕೆ ತಕ್ಕುದಾದ ಪವಿತ್ರವಾದ ಕಾರ್ಯ[1]ಗಳನ್ನು ಮಾಡಿ ನಮಿಸಿ, ಪೂಜೆಗೆ ದೊರೆತ ವಸ್ತುಗಳನ್ನು ಸೇರಿಸಿಕೊಂಡು ಪ್ರತಿದಿನವೂ ಪದ್ಧತಿಯಂತೆ ಮಾಡುವ ಪರಿಶುದ್ಧವಾದ ಪೂಜೆಯಲ್ಲಿ ತೊಡಗಿ, ದೋಷರಹಿತವಾದ ಅಭಿಷೇಕವೇ ಮೊದಲಾದ ಪೂಜೆಯಲ್ಲಿ ಬರುವ ಅಂಗಗಳನ್ನೆಲ್ಲಾ ಆಗಮಗಳಲ್ಲಿ ವಿಧಿಸಿದ ರೀತಿಯಂತೆಯೇ ಮುಗಿಸಿ, ಮೊದಲಿನವ[2]ನ ಶ್ರೀಪಾದಗಳನ್ನು ಶಿವಗೋಚರಿಯಾರನು ನಮಿಸಿದನು.

779. ನಮಿಸಿ ಎದ್ದು ಎಲ್ಲರಿಗೂ ಶಿವಪರಮಾತ್ಮನೇ ಪರವಸ್ತುವಾಗುವನು ಎಂದು ಹಲರೀತಿಯಲ್ಲಿ ಸ್ಥಿರವಾಗಿ ನಂಬಿ ಶಬ್ದಿಸುವ ವೇದಮಂತ್ರಗಳಿಂದ ಸ್ತುತಿಸಿ, ಪ್ರಕಾಶದಿಂದ ಕೂಡಿದ ಚಂದ್ರನನ್ನು ಅಲಂಕರಿಸಿಕೊಂಡ, ಜೆಡೆಮುಡಿಯಿರುವ ಕೃಪಾನೇತ್ರನಾದ ಕಾಳತ್ತಿಯಪ್ಪನೆಡೆಯಲ್ಲಿ ಅನುಮತಿ ಪಡೆದುಕೊಂಡು ಶಾಂತವಡೆದ ಮನವುಳ್ಳ ಶಿವಗೋಚರಿಯಾರನು ತಾನು ತಪಸ್ಸನ್ನು ಮಾಡುವ ವನವನ್ನು ಸೇರಿದನು.

---

777. 'ಪೊರುಪ್ಪಿಲೆಮು ಇಟ್ಟಟರ್ಕ್ಕೊಟುನ್ತಿನ್ ಪೂಚನೈಯು ನ್ತಾಟಿಕ್ಕನಾನ್
ಇರುಪ್ಪತಿನಿ ಯೆನ್?' ನೆನ್ಱಿ ವ್ವಿಱೈಚ್ಚಿಯೆಲು ಮ್ಪುಟನಿಲೈಯು
ಇಟ್ಟರುಪ್ಪಟಿಯು ನಾಯಟಿಯು ನ್ತಿರುವಲಕಾನ್ ಮಾಱ್ಱಿಯಪಿನ್
ವಿರುಪ್ಪಿನೊಟು ನ್ತಿರುಮುಕಲಿ ಪ್ಪುನಲ್‌ಮೂೞ್ಕಿ ವಿರೈನ್ತಣೈನ್ತಾರ್.

778. ಪಟುತುಪುಕು ನ್ತತುತೀರ ಪ್ಪವಿತ್ತಿರಮಾ ಇಟ್ಟಿಯಲ್‌ಪುರಿನ್ತು
ತ್ತೊಟುತುಪೆಱು ವನಕೊಣ್ಟು ತೂಯಪೂ ಚನೈತೊಟಙ್ಕಿ
ವಟುವಿಱ್ಱಿರು ಮಞ್ಚನಮೇ ಮುತಲಾಕ ವರನ್‌ಪೂಚೈ
ಮುಟುತುಮುಱೈ ಮೈಯಿನ್‌ಮುಟಿತ್ತು ಮುತಲ್ವನಾರ್ ಕಟಿಲ್‌ಪಣಿನ್ತಾರ್.

779. ಪಣಿನ್ತೆಟುನ್ತು, 'ತನಿಮುತಲಾಮ್ ಪರ' ನೆನ್ಱು ಪನ್ಮುಱೈಯಾ
ಱ್ಱಣಿನ್ತಮಱೈ ಮೊೞಿಯಾಲೇ ತುತಿಚೆಯ್ತು, ಚುಟರ್‌ತ್ತಿಙ್ಕ
ಳಣಿನ್ತಚಟೈ ಮುಟಿಕ್ಕಱ್ಱೈ ಯಙ್ಕಣರೈ ವಿಟೈಕೊಣ್ಟು,
ತಣಿನ್ತಮನ ತ್ತಿರುಮುನಿವರ್ ತಪೋವನತ್ತಿ ನಿಟೈಚ್ಚಾರ್ನ್ತಾರ್.

---

1. ಪುಣ್ಯಾರ್ಜನೆ. 2. ಈಶ್ವರ.

೭೮೦. ಈ ರೀತಿ ದೊಡ್ಡ ಮುನಿಯು ಹೋದನು. ಇನ್ನುಮೇಲೆ ಕಾಡನೆಡೆಯಲ್ಲಿ ಕಾಡಿಗೆಯ ಬಣ್ಣದ ಕರಿಯು ಜುಟ್ಟಿರುವ ಕಾಡಿನ ಬೇಡರ ನಾಯಕನು ಕೈಯಲ್ಲಿ ಬಿಲ್ಲನ್ನು ಮಂಡಲಾಕಾರವಾಗಿ ಎಳೆದುಕೊಂಡು ಕಾಡಬೇಟೆಯನ್ನು ಒಬ್ಬನಾಗಿಯೇ ಮಾಡುವ ಕಾರ್ಯಸ್ವಭಾವವನ್ನು ಹೇಳುವೆನು. ಅದರಿಂದ ಪಾಪದ ಸ್ವಭಾವವನ್ನು ದೂರಮಾಡಿ ಕೊಳ್ಳುವೆನು.

೭೮೧. ಮಲೆಯು ಹೊರಗೆ ಸೇರಿದ ತಿಣ್ಣನು ಒತ್ತಾಗಿ ತುರುಗಿದ ಕಲ್ಲುಗಳುಳ್ಳ ದೊಡ್ಡ ಮಲೆಗಳ ಎಡೆ ಇಳಿಜಾರಾದ ಪ್ರದೇಶಗಳಲ್ಲಿ ವಿಶಾಲಜಾಗಗಳಲ್ಲಿ ಮೇದು ಬರುವ ದೊಡ್ಡ ಹಂದಿಗಳನ್ನು ತುಂಡರಿಸಿಯೂ, ಕಾಡಿನಲ್ಲಿದ್ದು ಒಂದು ದಾರಿಯಾಗಿ ಹೋಗಿ ಏರುವ ಜಿಂಕೆಜಾತಿಗಳನ್ನು ಅಲ್ಲಿ ಅವು ತಮ್ಮನ್ನು ತಿಳಿಯದಂತೆ ಮರೆಯಾಗಿ ನಿಂತು ಅವುಗಳನ್ನು ಕೊಂದೂ,

೭೮೨. ಗಂಡುಜಿಂಕೆಯಂತೆ ಕರೆಯುವ ಪರಿಣತವಾದ ಧ್ವನಿಯಿಂದ ಕೂಗಿ ಕರೆದು, ಅವುಗಳು ಸಮೀಪಿಸಿದಾಗ ಅವು ಕಷ್ಟಪಡುವಂತೆ ಅವುಗಳ ಶರೀರದಲ್ಲಿ ಕುತ್ತಿ ದಾಟಿಹೋಗತಕ್ಕ ಕೂರಾದ ತುದಿಯುಳ್ಳ ಕ್ರೂರವಾದ ಬಾಣಗಳನ್ನೆಸೆದೂ, ಅಡಿಹೆಜ್ಜೆ ಗಳಿಂದ ಕಂಡು ಮರಿಜಾತಿಗಳು ನಿದ್ರಿಸುವೆಡೆಯಲ್ಲಿ ಅವುಗಳನ್ನೆಸೆದೂ, ಕಡವೆಗಳನ್ನು ಸಮೀಪಿಸಿ ಎಸೆದೂ, ಬಿಸಿಲನ್ನು ತರುವ ಸೆಕೆಯು ಹೆಚ್ಚಾದ ಸೂರ್ಯಕಿರಣಗಳು ಹೆಚ್ಚಾಗಲು ಪ್ರತ್ಯೇಕವಾಗಿ ಬೇಟೆಯ ವ್ಯಾಪಾರವನ್ನು ಈ ರೀತಿಯಾಗಿ ಮುಗಿಸಿದನು.

---

೭೮೦. ಇವ್ವಣ್ಣಮ್ ಪೆರುಮುನಿವ ರೇಕಿನಾ; ರಿನಿಯಿಪ್ಪಾಲ್
ಮೈವಣ್ಣ ಕ್ಕರುಙ್ಕುಞ್ಚಿ ವನವೇಟರ್ ಪೆರುಮಾನಾರ್
ಕೈವಣ್ಣ ಚ್ಚಿಲೈವಳೈತ್ತು ಕ್ಕಾನ್‌ವೇಟ್ಟೈ ತನಿಯಾಟಿ
ಚ್ಚೆಯ್ವಣ್ಣ ತ್ತಿಱಮೊಟಿವೇನ್ ಱೀವಿನೈಯಿನ್ ಱಿಱಮೊಟಿವೇನ್.

೭೮೧. ತಿರುಮಲೈಯಿನ್ ಪುಱಮ್ಪೋನ ತಿಣ್ಣನಾರ್ ಚೆಱಿತ್ತುಱುಕಱ್
ಪೆರುಮಲೈಕ ಳಿಟೈಚ್ಚರಿವಿಱ್ ಪೆರುಮ್ಪುನ್‌ಱಿ ಪುನಮೇಯರ್ನ್ತು
ವರುವನವು ನ್ತುಣಿಪಟುತ್ತು ಮಾನಿನಙ್ಕಳ್ ಕಾನಿಟೈನಿನ್
ಱೊರುವಟಿಚ್ಚೆನ್ ಱೇಱುತುಱೈ ಯೊಳಿನಿನ್‌ಱು ಕೊನ್‌ಱರುಳಿ,

೭೮೨. ಪಯಿಲ್‌ವಿಳಿಯಾಱ್ ಕಲೈಯಟೈತ್ತು ಪ್ಪಾಟುಪೆಱ ವೂಟುರುವುಮ್
ಅಯಿಲ್‌ಮುಕವೆ ಙ್ಕಣೈಪೋಕ್ಕಿ ಯಟಿಯೊಱ್ಱಿ ಮಱೈಯಿನಙ್ಕಳ್
ತುಯಿಲಿಟೈಯಿಱ್ ಕಿಟೈಯೆಯ್ತು ತೊಟರ್‌ನ್ತುಕಟ ಮೈಕಳೆಯ್ತು
ವೆಯಿಲ್ಪಟುವೆ ಙ್ಕತಿರ್‌ಮುತಿರ ತ್ತನಿವೇಟ್ಟೈ ವಿನೈಮುಟಿತ್ತಾರ್.

783. ಈ ರೀತಿ ಬೇಟೆಯಲ್ಲಿ ಬಿದ್ದ ಜಂತುಗಳೆಲ್ಲವನ್ನೂ ವಿಶಾಲವಾದ ವನದ ಒಂದೆಡೆಯಲ್ಲಿ ಪಕ್ಕದಲ್ಲಿಟ್ಟು, ಬಲವಾದ ಉಡೆವಾಳನ್ನು ಒರೆಯಿಂದ ತೆಗೆದು, ಬೆಂಕಿಯುಂಟಾಗುವ ಕೋಲನ್ನು ತುಂಡುಮಾಡಿ ತೆಗೆದು, ಮರದ ಗೆಲ್ಲುಗಳಲ್ಲಿರುವ ಸುವಾಸನೆಯುಳ್ಳ ಜೇನನ್ನು ಬೇಕಾದಷ್ಟು ತೆಗೆದುಕೊಂಡು ತೇಗಿನ ಎಲೆಯಲ್ಲಿ ದುಂಡಗಾದ ದೊಡ್ಡ ದೊನ್ನೆಗಳನ್ನು ಒಳಗಿನ ಎಡೆಯು ವಿಶಾಲವಿರುವಂತೆ ಜೋಡಿಸಿ ಹೊಲಿದು ಏರ್ಪಡಿಸಿದನು.

784. ಕಟ್ಟಿಗೆ ಕೋಲುಗಳನ್ನು ಮುರಿದು ಸೇರಿಸಿಟ್ಟು, ಅರಣಿ ಕಾಷ್ಠದಿಂದ ಬೆಂಕಿಯನ್ನು ಮಾಡಿ, ಬೆಂಕಿಯುಂಟಾಗುವಂತೆ ವರ್ಧಿಸಿ, ಜಂತುಗಳನ್ನು ಹರಿತವಾದ ಬಾಣದಿಂದ ತುಂಡುಮಾಡಿ, ಕೊಬ್ಬುಳ್ಳ ಭಾಗಗಳನ್ನು ಉರುಟಾಗಿ ತುಂಡರಿಸಿ, ದೊರೆತುದನ್ನು ತೆಗೆದುಕೊಂಡು ಏಳುವ ಬೆಂಕಿಯಲ್ಲಿ ಸುಡತಕ್ಕುದಾದುದನ್ನು ಸುಟ್ಟು,

785. ಹರಿತವಾದ ಬಾಣದಿಂದ ನಾಶಿಸುವ, ವಿಭಾಗವನ್ನು ಮಾಡುವ ಕಾರ್ಯಗಳನ್ನು ಮಾಡಿ, ಜಂತುಗಳ ಹಲ ಅವಯವಗಳ ಮಾಂಸವೆಲ್ಲವನ್ನೂ ತುಂಡರಿಸಿ ತೆಗೆದು, ಬೇರೆ ಒಂದು ದೊನ್ನೆಯಲ್ಲಿ ಇಟ್ಟು, ಬೆಂಕಿಯಲ್ಲಿ ಸುಡಲು ನಿಡಿದಾದ ಕೋಲಲ್ಲಿ ಕೋದು ಬೆಂಕಿಯಲ್ಲಿ ಸರಿಯಾಗಿ ಸುಟ್ಟು, ಒಳ್ಳೆಯದಾದ ಉಣಿಸನ್ನೇರ್ಪಡಿಸಲು, ರುಚಿನೋಡಲು ಪ್ರವೇಶಿಸುವವನಾಗಿ,

---

783. ಪಟ್ಟವನ ವಿಲಙ್ಕೆಲ್ಲಾಮ್ ಪಟರ್ವನತ್ತಿ ಲೊರುಚಾರಿ
ಲಿಟ್ಟರುಕು ತೀಕ್ಕಟೈಕೋ ಲಿರುಞ್ಚುರಿಕೈ ತನ್ನೈಯುರುವಿ
ವೆಟ್ಟನಱು ಙ್ಕೋಱ್ಱೇನೈ ಮಿಕಮುಱಿತ್ತು ತ್ತೇಕ್ಕಿಲೈಯಾಲ್
ವಟ್ಟಮುಱು ಪೆರುಙ್ಕಲ್ಲೈ ಮರುಙ್ಕುಪುಟೈ ಪಟವಮೈತ್ತಾರ್.

784. ಇನ್ತನತ್ತೈ ಮುಱಿತ್ತಟುಕ್ಕಿ ಯೆರಿಕಟೈಯು ಮರಣಿಯಿನಿಲ್
ವೆನ್ತಟಲೈ ಪ್ಪಿಱಪ್ಪಿತ್ತು ಮಿಕವಳರ್ತ್ತು ಮಿರುಕಙ್ಕಳ್
ಕೊನ್ತಿಯಯಿ ಲಲಕಮ್ಪಾಱಿಲ್ ಕುಟ್ಟವಿಟ್ಟು ಕ್ಕೊಟುಪ್ಪರಿನ್ತು
ವನ್ತನಕೊ ಣ್ಣೈಟುನ್ತಟಲಿಲ್ ವಕುಕ್ಕವನ ವಕುಕ್ಕವಿತ್ತು,

785. ವಾಯಮ್ಪಾ ಲಱುಪ್ಪತುವುಮ್ ವಕುಪ್ಪತುವು ಞ್ಚೆಯ್ತವಱ್ಱಿ
ನಾಯವುಱು ಪ್ಪಿಱಿತ್ತೆಚ್ಚಿಯೆಲಾ ಮಱಿನ್ತೊರುಕ ಲ್ಲೈಯಿಲಿಟ್ಟು
ಕ್ಕಾಯನೆಟು ಙ್ಕೋಲ್ಕೋತ್ತು ಕ್ಕನಲಿನ್ಕ ಣಱಕ್ಕಾಯ್ಚ್ಚಿ
ತ್ತೂಯತಿರು ವಮುತಮೈಕ್ಕ ಚ್ಚುವೈಕಾಣ ಲುಱುಕಿನ್ಱಾರ್,

786. ಕೊಂಡುಹೋಗಿ ತಿನ್ನಿಸುವ, ಸುಂದರನಾದ ಅಗ್ನಿದೇವನ ಬಾಯಲ್ಲಿ ಅಗಣಿತರಾದ ದೇವತೆಗಳಿಗೆ ಕೊಡುವ ಆಹಾರವನ್ನು ಇಟ್ಟಹಾಗೆ, ಕಾಳತ್ತಿನಾಥನಿಗೆ ಆಗುವ ಸ್ವಭಾವವನ್ನು ತಾವು ಪರಿಶೋಧಿಸಿ, ಏರ್ಪಡಿಸಲು ತಿಣ್ಣನು ಬಾಯಲ್ಲಿ ಆಹಾರವಾದ ಆ ನೈವೇದ್ಯವನ್ನು ಇಟ್ಟು ನೋಡಿದನು.

787. ಒಳ್ಳೆ ಪಕ್ವವಾಗಿ ಸುಟ್ಟಾದ ಮೇಲೆ ನಾಲಗೆಯಲ್ಲಿಟ್ಟು ರುಚಿಕಂಡ ಮಾಂಸದ ಭಾಗಗಳನ್ನು ದೊನ್ನೆಯಲ್ಲಿ ಸುರಿದಿಟ್ಟು ಜೇನನ್ನು ಹಿಸುಕಿ, ಕಲಸಿ, ಅದನ್ನು ನೈವೇದ್ಯವಾಗಿ ತಯಾರಿಸಿಕೊಂಡು, ಅತಿಶೀಘ್ರದಲ್ಲಿ ಪತ್ರಪುಷ್ಪವನ್ನೂ, ಪರಿಶುದ್ಧವಾದ ಮಜ್ಜನವನ್ನೂ ಹಿಂದಿನ ದಿನದಂತೆಯೇ ಒಡನೆಯೇ ಏರ್ಪಾಡುಮಾಡಿಕೊಂಡು ತಿಣ್ಣನು ವೇಗವಾಗಿ ಬಂದು ಸೇರಿದನು.

788. ಹೀಗೆ ಬಂದು ತಿರುಕಾಳತ್ತಿಮಲೆಯನ್ನು ಏರಿ, ವನಬೇಡರ ನಾಯಕನಾದ ತಿಣ್ಣನು ದೇವರ ನಾಯಕನಾದ ಕುಡುಮಿದೇವರನ್ನು ಸೇರಿ, ಶಿವಗೋಚರಿಯಾರನ ಪೂಜೆನಿರ್ಮಾಲ್ಯಗಳನ್ನು ಹಿಂದಿನ ದಿನದಂತೆ ತೆಗೆದಮೇಲೆ, ಹಿಂದಿನ ವಿಧಾನದಂತೆ ತನ್ನ ಪೂಜೆಯ ಕಾರ್ಯವನ್ನು ಮುಗಿಸುವವನಾಗಿ,

---

786. ಎಣ್ಣಿಱನ್ತ ಕಟವುಳರು ಕ್ಕಿಟುಮುಣವು ಕೊಣ್ಣೊಟ್ಟುವನ್
ವಣ್ಣವೆರಿ ವಾಯಿನ್‌ಕಣ್ ವೈತ್ತತೆನ ಕ್ಕಾಳತ್ತಿ
ಯಣ್ಣಲಾರ್ ಕ್ಕಾಮ್ಪರಿಚು ತಾಙ್ಕ್ಹೋತಿ ತ್ತವ್ವೈಪ್ಪತಱ್ಕು
ತ್ತಿಣ್ಣನಾರ್ ತಿರುವಾಯಿ ಲಮ್ಮೈತ್ತಾರೂನ್ ಱಿರುವಮುತು.

787. ನಲ್ಲಪತ ಮುಱವೆಱ್ಕು ನಾವಿನ್‌ಕ ಣಿಟುವಿಱೈಚ್ಚಿ
ಕಲ್ಲೈಯಿನಿಱ್ ಪಟ್ಟೈತ್ತುತ್ತೇನ್ ಪಿಟಿನ್ತುಕಲ ನ್ತುಕೊಣ್ಟು
ವಲ್‌ವಿರೈನ್ತು ತಿರುಪ್ಪಳ್ಳಿ ತ್ತಾಮಮುನ್ತೂಯ್ ಮಞ್ಚನಮುವನ್
ಒಲ್ಲೈಯಿನಿನ್ ಮುನ್‌ಪುಪೋ ಲುಟನ್‌ಕೊಣ್ಟು ವನ್ತಣೈನ್ತಾರ್.

788. ವನ್ತುತಿರು ಕ್ಕಾಳತ್ತಿ ಮಲ್ಯೈಯೇಱಿ ವನವೇಟರ್
ತನ್ತಲೈವ ನಾರಿಮ್ಮೈಯೋರ್ ತಲೈವನಾರ್ ತಮ್ಮೈಯೆಯ್ತಿ
ಯನ್ತಣನಾರ್ ಪೂಚೈಯಿನ್ನೈ ಮುನ್‌ಪುಪೋ ಲಕಟ್ಱಿಯಪಿನ್
ಮುನ್ತೈಮುಱೈ ತಮ್ಮುಟೈಯ ಪೂಚನೈಯಿನ್ ಚೆಯನ್ ಮುಟಿಪ್ಪಾರ್,

789. ಮಾಂಸಾಹಾರವನ್ನು ದೊನ್ನೆಯೊಡನೆ ಮುಂದಿನಲ್ಲಿಟ್ಟು, 'ಇದು ನಿನ್ನೆ ತಂದುದಕ್ಕಿಂತಲೂ ಒಳ್ಳೆಯದಾಗಿದೆ. ಹಂದಿ ಮಾಂಸದೊಡನೆ ಜಿಂಕೆ, ಗಂಡುಜಿಂಕೆ, ಮರೆ, ಕಡವೆ ಎಂಬ ಈ ವಿಧಗಳಲ್ಲಿ ಯೋಗ್ಯವಾದ ಮಾಂಸವನ್ನು ಆಹಾರವಾಗಿ ಏರ್ಪಡಿಸಿದೆ. ಭೃತ್ಯನಾದ ನಾನು ರುಚಿ ನೋಡಿದ್ದೇನೆ. ಜೇನೂ ಕೂಡ ಕಲೆತಿರುವುದಾಗಿದೆ. ಇದು ಸಿಹಿಯಾಗಿದೆ' ಎಂದು ಹೇಳಿದನು.

790. ತಿಣ್ಣನು ಈ ರೀತಿ ಕಾಳತ್ತಿಯಪ್ಪನಿಗೆ ಆಹಾರವನ್ನು ಅರ್ಪಿಸಿ, ತನ್ನ ಅಸದೃಶವಾದ ಪೂಜೆಯನ್ನು ಮಾಡಿ, ಆ ಮಾರ್ಗದಲ್ಲಿ ನಡೆಯುವವನಾಗಿ, ಯಾವಾಗಲೂ ಮೇಲೆ ಮೇಲೆ ಬಂದೇಳುವ ಭಕ್ತಿಯಿಂದ ಕಾಳತ್ತಿಯಪ್ಪನ ಮುಂದೆ ರಾತ್ರಿಯಲ್ಲಿಯೂ ನಿದ್ರಿಸನು. ಹಗಲಿನಲ್ಲಿ ಬೇಟೆಯಾಡುವನು.

791. ದೊಡ್ಡ ಮುನಿಯಾದ ಶಿವಗೋಚರಿಯಾರನು ಪ್ರತಿದಿನವೂ ಬಂದು ಸಮೀಪಿಸಿ, ಬೇಡನಾದ ತಿಣ್ಣನು ಮಾಡುವ ಪೂಜೆಗೆ ಬಹುವಾಗಿ ಕಷ್ಟಪಟ್ಟು, ಅದನ್ನು ಕೆಟ್ಟುದೆಂದುಕೊಂಡು, ಆಗಮಗಳಲ್ಲಿ ಹೇಳಿದ ವಿಧಿಯಂತೆ ನಿವಾರಿಸಿ, ತಕ್ಕ ವಿಧಿಯಲ್ಲಿ ಅರ್ಚನೆಯನ್ನು ಮಾಡಿ, ಆ ಮಾರ್ಗದಲ್ಲಿ ನಡೆದುಬರುವವನಾದನು.

---

789. ಊನಮುತು ಕಲ್ಲೈಯುಟನ್ ವೈ 'ತ್ತಿತುಮುನ್ ನೈಯಿನನ್‌ಱಾಲ್ ;
ಏನಮೊಟು ಮಾನ್‌ಕಲೈಕಣ್ ಮರೈಕಟಮೈ ಯಿವೈಯಿಱ್ಱಿ
ವಾನವುಱು ಪ್ಪಿಱಿತ್ತಿಚ್ಚಿಯಮು ; ತಟಿಯೇನು ಙ್ಙ್ಹುವೈಕಣ್ಟೇನ್ ;
ತೇನುಮುಟನ್ ಕಲನ್ತಿತು ತಿತ್ತಿಕ್ಕು' ಮೆನನೊಟಿನ್ನಾರ್.

790. ಇಪ್ಪರಿಚು ತಿರುವಮುತು ಚೆಯ್ವಿತ್ತು ತ್ತಮ್ಮುಟೈಯ
ಒಪ್ಪರಿಯ ಪೂಚನೈಚೆಯ್ ತನ್ನೆಱಿಯಿಲ್ ಒಟುಕುವಾರ್
ಎಪ್ಪೊಟುತುಮ್ ಮೇನ್‌ಮೇಲ್ವ ನ್ತೆಟುಮ್‌ಅನ್‌ಪಾಲ್ ಕಾಳತ್ತಿ
ಅಪ್ಪರ್‌ಎತಿರ್ ಅಲ್ಲುಱಙ್ಙಾರ್ ಪಕಲ್‌ವೇಟ್ಟೈ ಆಟುವಾರ್.

791. ಮಾಮುನಿವರ್ ನಾಟೋಱುಮ್ ವನ್ತಣೈನ್ತು ವನವೇನ್ತರ್
ತಾಮುಯಲುಮ್ ಪೂಚನೈಕ್ಕು ಚ್ಚಾಲಮಿಕ ತ್ತಳರ್‌ವೆಯ್ತಿ
ತ್ತೀಮೈಯೆನ ಅತುನೀಕ್ಕಿ ಚ್ಚಿಪ್ಪಿಯಱ ಕಮವಿತಿಯಾಲ್
ಆಮುಱೈಯಿಲ್ ಅರ್‌ಚ್ಚನೈಚೆಯ್ತು ಅನ್ನೆಱಿಯಿಲ್ ಒಟುಕುವರಾಲ್,

792. ನಾಣನೊಡನೆ ಕಾಡನೂ ಹೋಗಿ ನಡೆದ ವೃತ್ತಾಂತಗಳನ್ನು ನಾಗನಿಗೆ ಹೇಳಿದಮೇಲೆ ಆಹಾರವೂ ನಿದ್ರೆಯೂ ಇಲ್ಲದೆ, ದೇವರಾಟ್ಟಿಯನ್ನು ಕೂಡ ಕರೆದುಕೊಂಡು ಬಂದು, ತಮ್ಮನ್ನು ಮರೆತು, ಈಶ್ವರನನ್ನೇ ಸ್ತುತಿಸುವ ಮಗನೆಡೆಯಲ್ಲಿ ತಾವು ತಿಳಿದಂತೆ ಅವನ ಮನವನ್ನು ಭೇದಿಸಿ ಕಾಣುವ ದಾರಿಯಲ್ಲಿ ತಾವು ನೆನೆದ ಲಕ್ಷ್ಯದ ವಶದಲ್ಲಿ ಅವನು ಬರದಿದ್ದುದರಿಂದ ಅವನನ್ನು ಕೈಬಿಟ್ಟು ಬೇರೆಯಾಗಿ ಹೋದರು.

793. ಆರಂಭದಲ್ಲಿ ತಿರುಕಾಳತ್ತಿಯಪ್ಪನ ಅನುಗ್ರಹದೃಷ್ಟಿಯು ಬಿದ್ದುದರಿಂದ[1] ಸ್ಪರ್ಶವೇದಿಯಿಂದ ಕಬ್ಬಿಣವು ಹೊನ್ನಾದಂತೆ, ಶರೀರದ ಸ್ವಭಾವವೂ, ಪಾಪಪುಣ್ಯಗಳೆಂಬ ಕರ್ಮಗಳೆರಡೂ, ಸೇರುವ ಮೂರು ಮಲ[2]ಗಳೂ ನಾಶವಾದುದರಿಂದ, ಹಿಂದಣ ಪಶುಬೋಧ ಸ್ವಭಾವವು ಬೇರೆಯಾಗಿ ಶಿವಬೋಧ ರೂಪವಾಗಿ ಸಂಚಾರವನ್ನು ಮಾಡುವ ತಿಣ್ಣನು ಸಂಬಂಧಿಕರಾದ ನಾಗ, ದೇವರಾಟ್ಟಿ ಮೊದಲಾದ ಬೇಡರ ಅಭಿಪ್ರಾಯದಂತೆ ಇರುವನೇ ?

794. ಆ ನೆಲೆಯಲ್ಲಿ ಭಕ್ತನಾದ ತಿಣ್ಣನು ತಿಳಿದ ಮಾರ್ಗದಲ್ಲಿ ಪೂಜಿಸಲು, ನೆಲೆವಟ್ಟ ಆಗಮವಿಧಿಯಂತೆ ಮಹಾಮುನಿಯಾದ ಶಿವಗೋಚರಿಯಾರನು ಅರ್ಚಿಸಿ, 'ನನ್ನ ಈಶ್ವರನೇ, ಈ ಎಡೆಯಲ್ಲಿ ಈ ಅನುಚಿತಗಳನ್ನು ಮಾಡಿದವರನ್ನು ಇದುವರೆಗೆ ಕಂಡಿಲ್ಲ. ನಿಮ್ಮ ಅನುಗ್ರಹದಿಂದ ಇದನ್ನು ನಿವಾರಿಸಿ ಅನುಗ್ರಹಿಸಬೇಕು' ಎಂದು ಬಿನ್ನವಿಸಿದನು.

---

792. ನಾಣನೊಟು ಕಾಟನುಮ್ ಪೋಯ್ ನಾಗನುಕ್ಕು ಚೊಲ್ಲಿಯಪಿನ್
ಊಣಮ್ ಉಱಕ್ಕಮುಮ್ ಇನ್ಱಿ ಅಣಙ್ಕುಱೈವಾ ಳೈಯುಟಙ್ಕೊಣ್ಟು
ಪೇಣುಮಕ ನಾರ್ ತಮ್ಪಾಲ್ ವನ್ತೆಲ್ಲಾಮ್ ಪೇತಿತ್ತು
ಕ್ಕಾಣುನೆಱಿ ತಙ್ಕಳ್ ಕುಱಿ ವಾರಾಮಲ್ ಕೈವಿಟ್ಟಾರ್.

793. ಮುನ್ ಪುತಿರು ಕ್ಕಾಳತ್ತಿ ಮುತಲ್ವನಾರ್ ಅರುಳ್ ನೋಕ್ಕಾಲ್
ಇನ್ ಪುಱುವೇ ತಕತ್ತಿರುಮ್ಪು ಪೊನ್ ನಾನಾಱ್ ಪೋಲ್ ಯಾಕ್ಕೈ
ತ್ತನ್ ಪರಿಚುಮ್ ವಿನೈಇರಣ್ಟುಮ್ ಚಾರುಮಲ ಮುನ್ಱುಮ್ ಅಱ
ಅನ್ ಪುಪಿಱಮ್ ಪಾಯ್ ತ್ತಿರಿವಾರ್ ಆವರ್ ಕರುತ್ತಿನ್ ಅಳವಿನರೋ ?

794. ಅನ್ನಿಲೈಯಿಲ್ ಅನ್ ಪನಾರ್ ಅಱಿನ್ತನೆಱಿ ಪೂಚಿಪ್ಪ
ಮನ್ ನಿಯಆ ಕಮಪ್ಪಟಿಯಾಲ್ ಮಾಮುನಿವರ್ ಅರುಚ್ಚಿತ್ತು 'ತ್ತಿಙ್ಕು
ಎನ್ ನುಟೈಯ ನಾಯಕನೇ ! ಇತುಚೆಯ್ತಾರ್ ತಮ್ಮೈಕ್ಕಾಣೇನ್ ;
ಉನ್ ನುಟೈಯ ತಿರುವರುಳಾಲ್ ಒಟಿತ್ತರುಳ ವೇಣ್ಟುಮ್' ಎನ.

---

1. ಸ್ಪರ್ಶದೀಕ್ಷೆ. 2. ಆಣವ, ಕರ್ಮ, ಮಾಯೆ ಎಂಬ ಮೂರು ಮಲಗಳು.

795. ಆ ರಾತ್ರಿ ಆ ಮುನಿಯ ಕನಸಿನಲ್ಲಿ ಮಿಂಚಿನಂತೆ ಶೋಭಿಸುವ ಜಡೆಮುಡಿಯುಳ್ಳ, ವೇದವಸ್ತುವಾದ ಶಿವಪರಮಾತ್ಮನು ಕಾಣಿಸಿಕೊಂಡು, 'ನೀನು ಅವನನ್ನು ಪರಾಕ್ರಮವುಳ್ಳ ಒಬ್ಬ ಬೇಡಮಾತ್ರನೆಂದು ತಿಳಿಯಬೇಡ. ಅವನ ಒಳ್ಳೆಯದಾದ ಕಾರ್ಯವನ್ನು ಕೇಳು' ಎಂದು ಆರಂಭಿಸಿ,

796. 'ಅವನ ಶರೀರವಿಡೀ ನನ್ನೆಡೆಯಲ್ಲಿಟ್ಟ ಭಕ್ತಿಮಯವೇ ಆಗಿದೆ' ಎಂದೂ, 'ಅವನ ತಿಳಿವೆಲ್ಲಾ ನನ್ನನ್ನು ತಿಳಿಯುವ ತಿಳಿವೇ' ಎಂದೂ, 'ಅವನ ಕಾರ್ಯಗಳೆಲ್ಲಾ ನನಗೆ ಪ್ರಿಯವಾದವುಗಳೇ ಆಗುವುವು' ಎಂದೂ ಹೇಳಿ, 'ಅವನ ನಿಲವು ಈ ಸ್ವಭಾವದ್ದು. ನೀನು ಇದನ್ನು ತಿಳಿಯುವವನಾಗು' ಎಂದನುಗ್ರಹಿಸಿದನು.

797. 'ನಾಳೆ ನೀನು ನನ್ನ ಪಕ್ಕದಲ್ಲಿ ಮರೆಯಾಗಿದ್ದರೆ ಅವನ ಕಾರ್ಯಗಳನ್ನು ನಾನು ಕಾಣಿಸಲು, ಆ ಕೃತ್ಯಗಳಿಂದ ನನ್ನೆಡೆಯಲ್ಲಿ ಅವನ ಭಕ್ತಿಯಿರುವ ಸ್ವಭಾವವೆಲ್ಲವನ್ನೂ ನೋಡುವೆ. ನಿನ್ನ ಮನಸ್ಸಿನ ತಳಮಳವು ಮಾಯವಾಗುವುದು' ಎಂದು ದೊಡ್ಡ ಮುನಿಯಾದ ಶಿವಗೋಚರಿಯಾರನಿಗೆ ಅನುಗ್ರಹಿಸಿ ಗಂಗೆಯನ್ನು ಧರಿಸಿದ ಜಡೆಮುಡಿಯುಳ್ಳ ಶಿವಪರಮಾತ್ಮನು ಅಂತರ್ಧಾನನಾದನು.

---

795. ಅನ್‌ಱಿರವು ಕನವಿನ್‌ಕಣ್ ಅರುಳ್‌ಮುನಿವರ್ ತಮ್ಪಾಲೇ
ಮಿನ್‌ಱಿಕಟು ಇಟ್ಟೈಮುಪುರಿ ವೇತಿಯರ್‌ತಾಮ್ ಎೞುನ್ತರುಳಿ
'ವನ್‌ತಿಱಲ್‌ವೇ ಟುವನ್‌ಎನ್‌ಱು ಮಱ್ಱವನೈ ನಿನೈಯೇಲ್;
ನನ್‌ಱವನ್‌ತನ್ ಚೆಯಲ್‌ತನ್ನೈ ನಾಮುರೈಪ್ಪ ಕ್ಕೇಳ್'ಎನ್‌ಱು.

796. ಅವನುಟೈಯ ವಟಿವೆಲ್ಲಾಮ್ ನಮ್ಪಕ್ಕಲ್ ಅನ್‌ಪೆನ್‌ಱುಮ್
ಅವನುಟೈಯ ಅಱಿವೆಲ್ಲಾಮ್ ನಮೈಅಱಿಯುಮ್ ಅಱಿವೆನ್‌ಱುಮ್
ಅವನುಟೈಯ ಚೆಯಲೆಲ್ಲಾಮ್ ನಮಕ್ಕಿನಿಯ ವಾಮ್‌ಎನ್‌ಱುಮ್
ಅವನುಟೈಯ ನಿಲೈಇವ್ವಾ ಱಱಿನೀ' ಎನ್ ಱರುಳ್‌ಚೆಯ್ವಾರ್.

797. 'ಉನಕ್ಕವನ್‌ಱನ್ ಚೆಯಲ್‌ಕಾಟ್ಟ ನಾಳೈನೀ ಒಳಿತ್ತಿರುನ್ತಾಲ್
ಎನಕ್ಕವನ್‌ಱನ್ ಪರಿವಿರುಕ್ಕುಮ್ ಪರಿಚೆಲ್ಲಾ ಙ್ಕಾಣ್‌ಕಿನ್‌ಱಾಯ್;
ಮನಕ್ಕವಲೈ ಒೞಿಕೆನ್‌ಱು ಮಱೈಮುನಿವರ್ ಕ್ಕರುಳ್‌ಚೆಯ್ತು
ಪುನಱ್‌ಚಟಿಲ ತ್ತಿರುಮುಟಿಯಾರ್ ಎೞುನ್ತರುಳಿ ಪ್ಪೋಯಿನಾರ್.

798. ಕೊಳ್ಳಲ್ಪಟ್ಟ ತಪಸ್ಸಿನಲ್ಲಿ ಶ್ರೇಷ್ಠನಾದ ದೊಡ್ಡ ಮುನಿಯಾದ ಶಿವ ಗೋಚರಿಯಾರನು ಕನಸಿನ ನೆಲೆಯಿಂದ ಹೊರಬಂದಮೇಲೆ, ಎಚ್ಚರದ ನೆಲೆಯನ್ನು ಪಡೆದು, ಕನಸಿನಲ್ಲಿ ಕಂಡ ವಿಷಯವನ್ನು ಮನದಲ್ಲಿ ತಂದು, ಹೊತ್ತು ಮೂಡುವವರೆಗೂ ಆ ರಾತ್ರಿಯಲ್ಲಿ ನಿದ್ರಿಸದವನಾಗಿ, ಮನದಲ್ಲಿ ಮಿಕ್ಕ ಅದ್ಭುತವೂ ಭಯವೂ ಒಡನೆ ಉಳ್ಳವನಾಗಿ, ವೇಗವುಳ್ಳ ಕುದುರೆಯನ್ನು ಕಟ್ಟಿದ ಪ್ರತ್ಯೇಕವಾದ ತೇರಿನ ಮೇಲೆ ತೋರುವ ಸೂರ್ಯನ ಕಿರಣಗಳು ತೋರಿದ ಆ ಸಮಯದಲ್ಲಿ (ಅರುಣೋದಯದಲ್ಲಿ),

799. ಹಿಂದಿನ ದಿನದಂತೆಯೇ ಬಂದು ತಿರುಮುಗಲಿಯ ನೀರಲ್ಲಿ ಮುಳುಗಿ ತನಗೆ ಈಶ್ವರನಾದ ಕಾಳತ್ತಿಯಪ್ಪನು ಕನಸಿನಲ್ಲಿ ಅನುಗ್ರಹಿಸಿದುದನ್ನು ಹಲರೀತಿಯಲ್ಲಿ ನೆನೆದುಕೊಂಡೇ, ತಿರುಕಾಳತ್ತಿಮಲೆಯನ್ನು ಏರಿ, ಹಿಂದಿನಂತೆ ದೇವರನ್ನು ಪೂಜಿಸಿ ಹಿಂಭಾಗದಲ್ಲಿ ಮರೆಯಾಗಿ ನಿಂತನು.

800. ತಾನು ಈಶ್ವರನನ್ನು ಕಂಡಮೇಲೆ ಅನುಕ್ರಮವಾಗಿ ಬರುವ ಆರನೇ ದಿನದಲ್ಲಿ ರಾತ್ರಿಯು ಕಳೆದ ಬೆಳಗ್ಗಿನ ಕಾಲದಲ್ಲಿ, ಅಸಾಧ್ಯವಾದ ವೇದದಲ್ಲಿ ಪರಿಣತನಾದ ಮುನಿಯು ಬಂದು ಸಮೀಪಿಸುವುದಕ್ಕೆ ಮೊದಲೇ, ಕರಿಯ ಮುಗಿಲಂತೆ ನಿಂತ ಕಣ್ಣು ನಿದ್ರೆಯನ್ನು ಪಡೆಯದ ಬಿಲ್ಲನ್ನು ತಾಳಿದ ತಿಣ್ಣನು, ಸನ್ನಿಧಾನದಿಂದ ಹೊರಟು ಹೋಗಿ, ಮಾಂಸಾಹಾರವನ್ನು ತರುವ ಮೊರೆಯಲ್ಲಿ ಹಿಂದಿನಂತೆ ಪ್ರತ್ಯೇಕವಾದ ದೊಡ್ಡ ಬೇಟೆಯನ್ನಾಡಿ,

---

798. ಕನವುನಿಲೈ ನೀಙ್ಗಿಯಪಿನ್ ವಿೞಿತ್ತುಣರ್ನ್ದು ಕಣ್ಡುಲಿಟ್ಟ
ಪುನೈತವತ್ತು ಮಾಮುನಿವರ್ ಪುಲರ್ವಳವು ಙ್ಙಣ್‌ತುಯಿಲಾರ್
ಮನಮುಱುಮ್ ಅಱ್ಪುತಮಾಕಿ ವರುಮಚ್ಚಮುಮ್ ಉಟನಾಕಿ
ತ್ತುನೈ ಪುರವಿ ತ್ತನಿತ್ತೇರ್‌ಮೇಲ್ ತೋನ್ಱುವಾನ್ ಕತಿರ್‌ತೋನ್ಱ.

799. ಮುನ್ನೈನಾಳ್ ಪೋಲ್ವನ್ದು ತಿರುಮುಕಲಿ ಪುನಲ್‌ಮೂೞ್ಕಿ
ಪ್ಪನ್‌ಮುಱೈಯುಮ್ ತಮ್ಪಿರಾನ್ ಅರುಳ್‌ಚೆಯ್ದು ಪಟಿನಿನೈನ್ದು
ಮನ್ನುತಿರು ಕಾಳತ್ತಿ ಮಲೈಏಱಿ ಮುನ್‌ಪುಪೋಲ್
ಪಿಙ್ಙಕನೈ ಪೂಚಿತ್ತು ಪ್ಪಿನ್‌ಪಾಕ ಒಳಿತ್ತಿರುನ್ದಾರ್.

800 ಕರುಮುಕಿಲ್ ಎನ್ನ ನಿನ್ಱ ಕಣ್‌ಪಟಾ ವಿಲ್ಲಿ ಯಾರ್‌ತಾಮ್
ವರುಮುಱೈ ಆಱಾಮ್ ನಾಳಿಲ್ ವರುಮ್‌ಇರ ವೊೞಿನ್ದ ಕಾಲೈ
ಅರುಮಱೈ ಮುನಿವ ನಾರ್‌ವ ನ್ದಣೈವತನ್ ಮುನ್ನಮ್ ಪೋಕಿ
ತ್ತರುಮುಱೈ ಮುನ್‌ಪು ಪೋಲ ತ್ತನಿಪ್ಪೆರು ವೇಟ್ಟೈ ಯಾಟಿ.

801. ಅಸಮಾನವಾದ ಮಾಂಸಾಹಾರವನ್ನೂ ಒಳ್ಳೆಯ ತಿರುಮಜ್ಜನ ಜಲವನ್ನೂ, ತಲೆಯಲ್ಲಿ ಏರಿಸಲು ಯೋಗ್ಯವಾದ ಹೊಸಮಲರುಗಳನ್ನೂ ಬೇರೆ ಬೇರೆಯಾಗಿ ಸೇರಿಸಿಕೊಂಡು, ದೃಢಭಕ್ತಿಯುಳ್ಳವರಿಗೆ ಅಮೃತದಂತಿರುವ ಭಗವಂತನಾದ ನಿಧಿಯಂತಿರತಕ್ಕವನೂ, ತಿರುಕಾಳತ್ತಿಯಲ್ಲಿ ಎದ್ದು ಅನುಗ್ರಹಿಸಿದವನೂ ಆದ ಗಂಗಾನದಿಯು ಸೇರಿದ ಜಡೆಯುವನ ಸಮೀಪಕ್ಕೆ ಬಂದು ಸೇರಿದವನಾಗಿ,

802. 'ಇಷ್ಟೊಂದು ಹೊತ್ತು ತಾಮಸ[1]ವನ್ನು ಮಾಡಿದೆನು,' ಎಂದು ನೆನೆದು ಶೀಘ್ರವಾಗಿ ಹೋಗುವವರ ಇದಿರು ನೇರ್ಪಟ್ಟ ಹಲ ಶಕುನಗಳು ಕೆಟ್ಟುದನ್ನು ಸೂಚಿಸಲು, 'ಕೇಡನ್ನು ತೋರಿಸುವ ಈ ರೀತಿಯು ಶಕುನಗಳು ಮುಂದೆ ಸೇರಿ ರಕ್ತ ಕುರುಹನ್ನು ತೋರಿಸುತ್ತದೆ. ಆದುದರಿಂದ ನನ್ನ ನಾಯಕನಿಗೆ ಏನು ನಡೆಯಿತೋ? ಓ! ಕೆಟ್ಟೆನು!' ಎಂದು ಬಂದು ಸೇರುವಾಗ,

803. ಹಿರಿಮೆಯುಳ್ಳ ಕಾಳತ್ತಿಯಪ್ಪನು ಶಿವಗೋಚರಿಯಾರನಿಗೆ ತಿಣ್ಣನ ಭಕ್ತಿಯ ಸ್ವಭಾವವನ್ನು ಕಾಣಿಸುವುದಕ್ಕಾಗಿ, ತನ್ನ ಕಣ್ಣುಗಳೊಂದರಲ್ಲಿ ಒಡನೆಯೇ ತುಣ್ಣೆಂದು ರಕ್ತವು ಹಾದು ಹೊರಗೆ ಓಡಿ ಸುರಿಯುವಂತೆ ಕಾಣಿಸಿ ಇದ್ದವನಾಗಲು, ಸುಂದರವಾದ ಕೊಲೆಮಾಡತಕ್ಕ ಬಿಲ್ಲನ್ನುಳ್ಳ ಆ ತಿಣ್ಣನು, ಅದನ್ನು ದೂರದಲ್ಲಿ ಕಂಡು ಬಹು ವೇಗದಿಂದ ಓಡಿಬಂದನು.

---

801. ಮಾಱಿಲ್ಊನ್ ಅಮುತುವಮ್ ನಲ್ಲ ಮಞ್ಜನ ಪ್ಪುನಲುವಮ್ ಚೆನ್ನಿ
ಏಱುನಾಣ್ ಮಲರುಮ್ ವೆವ್ವೇ ಱಿಯಲ್ಪಿನಿಲ್ ಅಮೈತ್ತು ಕೊಣ್ಡು
ತೇಱುವಾರ್ ಕ್ಕಮುತ ಮಾನ ಚೆಲ್ವನಾರ್ ತ್ತಿರುಕ್ಕಾ ಳತ್ತಿ
ಆಱುಚೇರ್ ಚಟೈಯರ್ ತಮ್ಮೈ ಅಣುಕವ ನ್ದಣೈಯಾ ನಿನ್ಱಾರ್.

802. 'ಇತ್ತನೈ ಪೊ಴ುತು ತಾಟಿತ್ತೇನ್' ಎನವಿರೈ ನ್ದೇಕುವಾರ್ಮುನ್,
ಮೊಯ್ತ್ತಪಲ್ ಚಕುನಮ್ ಎಲ್ಲಾಮ್ ಮುಱೈಮುಱೈ ತೀಙ್ಕು ಚೆಯ್ಯ,
'ಇತ್ತಕು ತೀಯ ಪುಟ್ಕಳ್ ಈಣ್ಡಮುನ್ ಉತಿರ ಙ್ಕಾಟ್ಟುಮ್,
ಅತ್ತನು ಕ್ಕೆನ್ಕೊಲ್ ಕೆಟ್ಟೇನ್! ಅಟುತ್ತತೆನ್' ಱಣೈಯುಮ್ ಪೋತಿಲ್,

803. ಅಣ್ಣಲಾರ್ ತಿರುಕ್ಕಾ ಳತ್ತಿ ಅಟಿಕಳಾರ್ ಮುನಿವ ನಾರ್ಕ್ಕು
ತ್ತಿಣ್ಣನಾರ್ ಪರಿವು ಕಾಟ್ಟ ತ್ತಿರುನಯ ನತ್ತಿಲ್ ಒನ್ಱು
ತುಣ್ಣೆನ ಉತಿರಮ್ ಪಾಯ ಇರುನ್ತನರ್; ತೂರ ತ್ತೇ ಅ
ವ್ವಣ್ಣಲೆ ಱಿಚ್ಚಿಲೈಯಾರ್ ಕಣ್ಡು ವಲ್ವಿರೈ ನ್ದೋಟಿವನ್ದಾರ್.

---

1. ತಾಮಸ = ತಡ.

804. ಈ ರೀತಿ ಬಂದ ಹಸಿಯ ಹಸುರೆಲೆಗಳಿಂದಾದ ಮಾಲೆಯಿಂದ ಅಲಂಕೃತನಾದ ತಿಣ್ಣನು ರಕ್ತವು ಸುರಿಯುವುದನ್ನು ಕಂಡನು. ಮತಿವಿಕಲನಾದನು. ಬಾಯಲ್ಲಿಟ್ಟುಕೊಂಡ ಒಳ್ಳೆಯ ಮಜ್ಜನಜಲವು ಚೆಲ್ಲಲು, ಕೈಯಲ್ಲಿರುವ ಮಾಂಸಾಹಾರವು ಬಿಲ್ಲಿನೊಡನೆ ಚದರಿ ಬೀಳಲು, ಗೊಂಚಲಾಗಿ ಅರಳಿರುವ ಪತ್ರಪುಷ್ಪಗಳು ಕುಡುಮಿಯಿಂದ ಅಲ್ಲಾಡಿ ಕೆಳಗುದುರಲು, ಮನನೊಂದು ನೆಲದಲ್ಲಿ ನಡುಗಿ ಬಿದ್ದನು.

805. ಬಿದ್ದ ತಿಣ್ಣನು ಎದ್ದು ಹೋಗಿ ರುಧಿರವನ್ನು ತೊಡೆದನು. ಆ ರಕ್ತದ ಹಾಯುವಿಕೆಯು ನಿಲ್ಲುವುದನ್ನು ಕಾಣಲಿಲ್ಲ. ಮಾಡತಕ್ಕುದು ಇಂತಹುದೆಂಬುದನ್ನು ತಿಳಿಯಲಿಲ್ಲ. ನಿಟ್ಟುಸಿರುಬಿಟ್ಟು ತಿರುಗಿ ಕೃತಿ ವಿಸ್ಮೃತಿಯನ್ನು ಹೊಂದಿ ಬಿದ್ದನು. ಆಮೇಲೆ ಬೇಗುದಿಗೊಂಡು, 'ಇದನ್ನು ಯಾರು ಮಾಡಿದರು?' ಎಂದೆಣಿಸಿ ಎದ್ದನು. ಎಲ್ಲಾ ದಿಕ್ಕುಗಳಲ್ಲಿಯೂ ನೋಡಿದನು. ಬಿಲ್ಲನ್ನೂ ತೆಗೆದುಕೊಂಡನು.

806. ಯೋಗ್ಯವಾದ ಬಾಣಗಳನ್ನು ಆರಯ್ದು ತೆಗೆದುಕೊಂಡು, 'ಈ ಮಲೆಯಲ್ಲಿ ನನಗೆ ವೈರಿಯಾಗಿ ಪರಾಕ್ರಮವುಳ್ಳ ಕ್ರೂರಬೇಡರು ಇದನ್ನು ಮಾಡಿದರೋ? ಸಿಂಹವೇ ಮೊದಲಾದ ಜಂತುಗಳು ಮಾಡಿರುವುವೋ? ತಿಳಿಯೆನು,' ಎಂದೆಣಿಸಿ, ನಿಡಿದಾದ ದೊಡ್ಡ ಮಲೆಯ ಪಕ್ಕದಲ್ಲಿ ಬಹಳ ದೂರ ಹುಡುಕಿ ಹೋದನು.

---

804. ವನ್ತವರ್ ಕುರುತಿ ಕಣ್ಟಾರ್; ಮಯಙ್ಕಿನಾರ್; ವಾಯಿಲ್ ನನ್ನೀರ್
ಚಿನ್ತಿಟ ಕೈಯಿಲ್ ಊನು ಞ್ಚಿಲೈಯುಟನ್ ಚಿತಱಿ ವೀೞ
ಕೊನ್ತಲರ್ ಪಳ್ಳಿ ತ್ತಾಮಮುಮ್ ಕುಞ್ಚಿಯಿನ್ ಚರಿನ್ತು ಚೋರ
ಪೈನ್ತೞೈ ಅಲಙ್ಕಲ್ ಮಾರ್ಪರ್ ನಿಲತ್ತಿಟೈ ಪ್ಪತೈತ್ತು ವೀೞ್ನ್ತಾರ್.

805. ವಿೞುನ್ತವರ್ ಎೞುನ್ತು ಚೆನ್ಱು ತುಟೈತ್ತನರ್ ಕುರುತಿ; ವೀೞ್ವತು
ಒೞಿನ್ತಿಟ ಕ್ಕಾಣಾರ್; ಚೆಯ್ವ ತಱಿನ್ತಿಲರ್ ಉಯಿರ್ತ್ತು ಮೀಳ
ಅೞಿನ್ತುಪೋಯ್ ವೀೞ್ನ್ತಾರ್; ತೇಱಿ 'ಯಾರಿತು ಚೆಯ್ತಾರ್?' ಎನ್ನಾ
ಎೞುನ್ತನರ್; ತಿಚೈಕಳ್ ಎಙ್ಕುಮ್ ಪಾರ್ತ್ತನರ್; ಎಟುತ್ತಾರ್ ವಿಲ್ಲುಮ್.

806. ವಾಳಿಯುಂ ನೇರಿನ್ತು ಕೊಣ್ಟು 'ಇಮ್ ಮಲೈಯಿಟೈ ಎನಕ್ಕು ಮಾಱಾ
ಮೀಳಿವೆ ಮ್ಮಱವರ್ ಚೆಯ್ತಾರ್ ಉಳರ್ಕೊಲೋ? ವಿಲಙ್ಕಿನ್ ಚಾತಿ
ಆಳಿಮುನ್ ಆಕಿ ಯುಳ್ಳ ವಿಳೈತ್ತವೋ? ಅಱಿಯೇನ್' ಎನ್ಱು
ನೀಳಿರು ಙ್ಕುನ್ಱಿಚ್ ಚಾರಲ್ ನೆಟಿತಿಟೈ ನೇಟಿ ಚ್ಚೆನ್ಱಾರ್.

807. ಆ ರೀತಿ ಹುಡುಕಿದ ತಿಣ್ಣನು ಅಂತಹ ಬೇಡರುಗಳನ್ನು ಕಾಣಲಿಲ್ಲ. ಕ್ರೂರಜಂತುಗಳನ್ನು ಬೇರೆಲ್ಲಿ ಹುಡುಕಿಯೂ ಕಾಣಲಿಲ್ಲ. ತಿರುಗಿ ಕಾಳತ್ತಿಯಪ್ಪ ನೆಡೆಯಲ್ಲಿ ಬಂದು ಹೆಚ್ಚಾದ ಶೋಕದೊಡನೆ ಮಲರಂತಹ ಪಾದಗಳನ್ನು ಹಿಡಿದು ಪಕ್ಕದಿಂದ ಎರಡು ಕೈಗಳಿಂದಲೂ ಆಲಿಂಗಿಸಿಕೊಂಡು ಕಣ್ಣೀರು ಸುರಿಯಲು ಅಳುವವನಾಗಿ,

808. 'ಈ ಪರಮನಿಗೆ ಪಾಪಿಯಾದ ನಾನು ಕಂಡಂತೆ, ಈ ರೀತಿ ನಡೆದುದೇನೋ? ಉಸಿರಿಗಿಂತಲೂ ಪ್ರಿಯನಾದ ನನ್ನ ತಂದೆಗೆ ಇದು ಏನಾಯಿತು? ಬಂದು ಸೇರಿದವರು ಬಿಟ್ಟು ತೊಲಗಲಾರದ ವಿಮಲನಿಗೆ ಇಲ್ಲಿ ಏನಾಯಿತು? ಮಾಡತಕ್ಕ ಕಾರ್ಯವೊಂದನ್ನೂ ನಾನು ತಿಳಿಯೆನು' ಎಂದು ಮೊರೆಯಿಟ್ಟು ತಿರುಗಿ ನೆನೆಯುವವನಾಗಿ,

809. 'ಏನು ಮಾಡಿದರೆ ಇದು ನಿಲ್ಲುವುದೋ ತಿಳಿಯೆನು. ನಮ್ಮ ಈಶ್ವರನೆಡೆಯಲ್ಲಿ ಈ ಕೇಡು ಮಾಡಿದವರನ್ನು ಕಾಣೆನು. ಒತ್ತೊತ್ತಾದ ವೀರಗೆಜ್ಜೆಗಳನ್ನು ಧರಿಸಿದ ಬೇಡರು ಪ್ರಕಾಶವುಳ್ಳ ನೀಳವಾದ ಅಂಬಿನಿಂದ ಏರ್ಪಟ್ಟ ಗಾಯಗಳನ್ನು ಯಾವಾಗಲೂ ಗುಣಪಡಿಸುವ ನಿಶ್ಚಯವಾದ ಮದ್ದುಗಳನ್ನು ಹೊನ್ನಿನ ಹುಡಿಗಳಿಂದ ಕೂಡಿದ ಮಲೆಯ ಬುಡದಿಂದ ಹಿಡಿದು ಹುಡುಕಿಕೊಂಡು ಬರುವೆನು' ಎಂದು ಹೇಳಿ ಹೋದನು.

---

807. ವೇಟರ್ೈ ಕ್ಕಾಣಾರ್; ತೀಯ ವಿಲಙ್ಕುಕಳ್ ಮರುಙ್ಕುಮ್ ಎಙ್ಕುಮ್
ನಾಟಿಯುಙ್ ಙ್ಕಾಣಾರ್; ವಿಾಣ್ಟುಮ್ ನಾಯನಾರ್ ತಮ್ಪಾಲ್ ವನ್ತು
ನೀಟಿಯ ಚೋಕ ತ್ತೋಟು ನಿಙ್ತೈಮಲರ್ ಪ್ಪಾತಮ್ ಪಱ್ಱಿ
ಮೂಟುಱ ಕ್ಕೈಟ್ಟಿ ಕ್ಕೊಣ್ಟು ಕತಱಿನಾರ್ ಕಣ್ಣೀರ್ ವಾರ.

808. 'ಪಾವಿಯೇನ್ ಕಣ್ಟ ವಣ್ಣಮ್ ಪರಮನಾರ್ ಕ್ಕುಟುತ್ತ ತೆನ್‌ನೋ?
ಆವಿಯಿನ್ ಇನಿಯ ಎಙ್ಕಳ್ ಅತ್ತನಾರ್ ಕ್ಕುಟುತ್ತ ತೆನ್‌ನೋ?
ಮೇವಿನಾರ್ ಪಿರಿಯ ಮಾಟ್ಟಾ ವಿಮಲನಾರ್ ಕ್ಕುಟುತ್ತ ತೆನ್‌ನೋ?
ಆವತೊನ್ ಱಱಿಕಿ ಲೇನ್‌ಯಾನ್; ಎನ್‌ಚೆಯ್‌ಕೇನ್' ಎನ್‌ಱು ಪಿನ್‌ನುಮ್

809. 'ಎನ್‌ಚೆಯ್ತಾಲ್ ತೀರು ಮೋತಾನ್? ಎಮ್ಪಿರಾನ್ ತಿಱತ್ತು ತೀಙ್ಕು,
ಮುನ್‌ಚೆಯ್ತಾರ್ ತಮ್ಮೈ ಕ್ಕಾಣೇನ್; ಮೊಯ್‌ಕಟಲ್ ವೇಟರ್
ಎನ್‌ಱುಮ್,
ಮಿನ್‌ಚೆಯ್ವಾರ್ ಪಕಟಿ ಪ್ಪುಣ್‌ಕಳ್ ತೀರ್‌ಕ್ಕುಮೆಯ್ ಮರುನ್ತು ತೇಟಿ,
ಪೊನ್‌ಚೆಯ್ತಾಟ್ ವರ್ೈಯಿಱ್ ಕೊಣ್ಟು ವರುವನ್‌ನಾನ್' ಎನ್‌ಱು
ಪೋನಾರ್.

810. ತಿಣ್ಣನು ಮದ್ದುಮೂಲಿಕೆಗಳನ್ನೂ ಅವು ಇರುವ ಎಡೆಗಳನ್ನೂ ತಿಳಿದವನಾಗಿ ಬೇರೆ ಬೇರೆ ದಟ್ಟವಾದ ಕಾಡುಗಳಲ್ಲೆಲ್ಲೂ, ತನ್ನ ಜಾತಿಯಿಂದ ದೂರವಾದ ಕೆಂಪಗಾದ ಕಣ್ಣುಳ್ಳ ವೃಷಭದಂತೆ ಕಾತರತೆಯಿಂದ ಹೋಗಿ ಕಾಡುಗಳಲ್ಲಿ ಮದ್ದುಮೂಲಿಕೆಗಳನ್ನು ಕೊಯ್ದುಕೊಂಡು, ಭೂತನಾಥನಾದ ಕಾಳತ್ತಿಯಪ್ಪನೆಡೆಯಲ್ಲಿ ತಾನು ಇಟ್ಟ ಮನಸ್ಸಿನ ವೇಗಕ್ಕಿಂತಲೂ ಅತಿ ಶೀಘ್ರವಾಗಿ ತಿರುಗಿ ಬಂದು ಆ ಮದ್ದುಗಳನ್ನು ಹಿಂಡಿ ಅವನು ಕಣ್ಣುಗಳಲ್ಲಿ ಆ ನೀರನ್ನು ಸುರಿದನು.

811. ಈ ರೀತಿ ಹಿಂಡಿ ಸುರಿದ ಮದ್ದಿನಿಂದ ತಿರುಕಾಳತ್ತಿಯಪ್ಪನ ಕಣ್ಣಿನ ಗಾಯದಿಂದ ಬರುವ ರಕ್ತವು ಕಮ್ಮಿಯಾಗದೆ ಹಿಂದಿನಂತೆಯೇ ಸುರಿಯಲು, ಅವನು ನೋಡಿ, 'ಈ ದಿನದ ವಿಪತ್ತನ್ನು ಗುಣಪಡಿಸಲು ಇನ್ನುಮೇಲೆ ಮಾಡತಕ್ಕುದೇನೋ?' ಎಂದು ಆರಯ್ದು ಎಣಿಸುವನು. 'ಮಾಂಸವೇ ಮಾಂಸಕ್ಕೆ ಏರ್ಪಟ್ಟ ನೋವನ್ನು ಗುಣಪಡಿಸುವುದು' ಎನ್ನುವ ಹಳೆಮಾತು ತನ್ನ ನೆನಹಿನಲ್ಲಿ ಬರಲು ಅದನ್ನು ತಿಳಿದನು.

812. ಇನ್ನುಮೇಲೆ ಈ ಮದ್ದು ಮಾಡುವುದಕ್ಕಾಗಿ ನನ್ನ ಕಣ್ಣನ್ನು ಭಕ್ತಿಯಿಂದ ತೋಡಿ ಅಂಟಿಸಿದರೆ ನಮ್ಮ ಈಶ್ವರನಿಗೆ ಕಣ್ಣಿನಲ್ಲಿ ಏರ್ಪಟ್ಟ ನೋವಿಗೆ ಇದೇ ಮದ್ದಾಗಿ, ಅದರಿಂದ ಗಾಯದಿಂದ ಸುರಿಯುವ ರಕ್ತವು ಬರದಂತೆ ನಿಲ್ಲಲೂ ಸಾಧ್ಯವಾದೀತು' ಎಂದು ನೆನೆದು, ಆನಂದದಿಂದ ಕೂಡಿ ಮನದಲ್ಲಿ ಹರ್ಷಿಸಿ, ಈಶ್ವರನ ಮುಂದಿದ್ದುಕೊಂಡು, ತನ್ನ ಕಣ್ಣ ಬುಡವನ್ನು ಬಾಣದಿಂದ ಕುತ್ತಿ ತೋಡಿ ತೆಗೆದು ಕೈಯಲ್ಲಿ ತೆಗೆದುಕೊಂಡು, ಮೊದಲಿನವನ[1] ಕಣ್ಣಲ್ಲಿ ಅಂಟಿಸಲು,

---

810. ನಿನ್ನೈತ್ತನರ್ ವೇಱು ವೇಱು ನೆರುಙ್ಗಿಯ ವನಙ್ಗಳ್ ಎಙ್ಗುಮ್,
ಇನತ್ತಿನ್ನೈ ಪ್ಪಿರಿತ್ತ ಚೆಙ್ಗಣ್ ಏಱಿನ ವೆರುಕ್ಕೊ ಣ್ಟೆಯ್ದಿ,
ಪ್ಪುನತ್ತಿಟ್ಟೈ ಪ್ಪಱಿತ್ತು ಕ್ಕೊಣ್ಟು ಪೂತನಾ ಯಕನ್‌ಪಾಲ್ ವೈತ್ತ,
ಮನತ್ತಿನು ಙ್ಗಟಿತು ವನ್ತಾನ್ ಮರುನ್ತುಕಳ್ ಪಿಟಿತ್ತು ವಾರ್ತ್ತಾರ್.

811. ಮಱ್ಱವರ್ ಪಿಟಿನ್ತು ವಾರ್ತ್ತ ಮರುನ್ತಿನಾಲ್ ತಿರುಕ್ಕಾ ಳತ್ತಿ
ಕ್ಕೊಱ್ಱವರ್ ಕಣ್ಣಿಲ್ ಪುಣ್ಣೀರ್ ಕುಱೈಪಟಾ ತಿಟಿಯ ಕ್ಕಣ್ಟುಮ್,
'ಇಱ್ಱೈಯಿನ್ ನಿಲೈಮೈ ಕೆನ್‌ನೋ' ಇನಿಚ್ಚೆಯಲ್ ಎನ್ಱು ಪಾರ್ಪ್ಪಾರ್,
'ಉಱ್ಱನೋಯ್ ತೀರ್ಪ್ಪ ತೂನು ಕ್ಕೊ' ನೆನುಮ್ ಉರೈಮುನ್ ಕಣ್ಡಾರ್.

812. 'ಇತಱ್ಕಿನಿ ಯೆನ್‌ಕಣ್ ಅಮ್ಮಾ ಲಿಟನ್ತಪ್ಪಿ ನೆನ್ತೈ ಯಾರ್‌ಕಣ್
ಅತಱ್ಕಿತು ಮರುನ್ತಾಯ್ ಪ್ಪುಣ್ಣೀರ್ ನಿಱ್ಕವು ಮಟುಕ್ಕು' ಮೆನ್ಱು
ಮತಱ್ತೆಟು ಮುಳ್ಳ ತ್ತೋಟು ಮಕಿೞ್ನ್ತುಮುನ್ ನಿರುನ್ತು ತಙ್ಗಣ್
ಮುತಱ್ಚರ ಮಟುತ್ತು ವಾಙ್ಗಿ ಮುತಲ್ವರ್‌ತ ಙ್ಗಣ್ಣಿ ಲಪ್ಪ,

---

1. ಮೊದಲಿನವನು = ಪ್ರಥಮನಾದ ಈಶ್ವರನು.

813. ರಕ್ತವು ನಿಂತುದನ್ನು ಕಂಡನು. ಆ ಹಿರಿಸಂತಸದಿಂದ ನೆಲದಿಂದ ಎತ್ತರಕ್ಕೆ ಹಾರಿದನು. ಮಲೆಯಂತೆ ಬೆಳೆದ ತನ್ನ ತೋಳುಗಳನ್ನು ತಟ್ಟಿಕೊಂಡನು. ನೃತ್ಯವನ್ನಾಡಿ, 'ನಾನು ಮಾಡಿದ ಈ ಯೋಚನೆಯು ಬಹು ಒಳ್ಳೆಯದಾಯಿತು' ಎಂದು ನಗುವು ತೋರಲು ಉಂಟಾದ ಆನಂದದಿಂದ ಉನ್ಮತ್ತರಂತಹ ನೆಲೆಯಲ್ಲಿ ಮಿಕ್ಕವನಾದನು.

814. ನಾಯಕನಾದ ಕಾಳತ್ತಿಯಪ್ಪನು, ತನ್ನ ಬಲಕಣ್ಣಿನಲ್ಲಿ ತನ್ನ ಬಲ ಕಣ್ಣನ್ನು ತೋಡಿ ಅಂಟಿಸಿದ ತ್ಯಾಗಿಯಾದ ಕಣ್ಣಪ್ಪ ನಾಯನಾರನ ಒಳ್ಳೆಯ ಸ್ವಭಾವವನ್ನು ಮೇಲೂ ಕಾಣಿಸುವ ಉದ್ದೇಶದಿಂದ ತನ್ನ ಎಡಕಣ್ಣಿನಲ್ಲಿ ಎಡೆಬಿಡದೆ ಕೆಂಪಗಾದ ರಕ್ತವು ಜೋರಾಗಿ ಸುರಿಯುವಂತೆ ಮಾಡಿದನು. ಈ ಲೋಕದಲ್ಲಿ ಬೇಡರ ಕುಲವು ಮಾಡಿದ ದೊಡ್ಡ ತಪಸ್ಸು ಕಾರಣವಾಗಿ, ಅದರಲ್ಲಿ ಬಂದು ಅವತರಿಸಿದ ಸಂಭವದಿಂದ ದೇವರಿಗಿಂತಲೂ ಉತ್ತಮನಾದ ತಿಣ್ಣನು ಅದನ್ನು ಕಂಡನು.

815. ಕಂಡೊಡನೆ, 'ಕೆಟ್ಟೆನು! ನಮ್ಮ ಕಾಳತ್ತಿಯಪ್ಪನ ಕಣ್ಣುಗಳಲ್ಲೊಂದರಲ್ಲಿ ಬಂದ ಗಾಯದಿಂದ ಸುರಿದ ರಕ್ತವು ಬರದಂತೆ ನಿಂತುಹೋಗಲು, ಇನ್ನೊಂದು ಕಣ್ಣಿನಿಂದ ರಕ್ತವು ಉಕ್ಕಿ ಹರಿಯುತ್ತಿದೆ. ಈ ನೋವನ್ನು ತೀರಿಸುವ ಮದ್ದನ್ನು ಅನುಭವದಿಂದ ಕಂಡುಕೊಂಡೆನು. ಬರಲಾಗದ ಇದು ಬಂದುದಕ್ಕೆ ಅಂಜಲಾರೆನು. ನನಗೆ ಇನ್ನೂ ಒಂದು ಕಣ್ಣು ಉಳಿದಿದೆ. ಆ ಕಣ್ಣನ್ನು ತೋಡಿ ದೇವರ ಕಣ್ಣಿನಲ್ಲಿ ಅಂಟಿಸಿ ಈ ನೋವನ್ನು ಗುಣಪಡಿಸುವೆನು' ಎಂದು ಸ್ಥಿರವಾಗಿ ನೆನೆದು,

---

813. ನಿನ್ಱಚೆ ಙ್ಕುರುತಿ ಕಣ್ಡಾರ್; ನಿಲತ್ತಿನಿನ್ ಱೇಱಿ ಪ್ಪಾಯ್ನ್ದಾರ್;
ಕುನ್ಱಿನ ವಳರ್ನ್ದ ತೋಳ್ಕಳ್ ಕೊಟ್ಟಿನಾರ್; ಕೂತ್ತುಮಾಟಿ
'ನನ್ಱುನಾನ್ ಚೆಯ್ದ ವಿನ್ದ ಮತಿ'ಯೆನ ನಕ್ಕೈಯು ನ್ದೋನ್ಱಿ
ಪೊನ್ಱಿಯ ಕಳಿಪ್ಪಿ ನಾಲೇ ಯುನ್ಮತ್ತರ್ ಪೋಲ ಮಿಕ್ಕಾರ್.

814. ವಲತ್ತಿರು ಕ್ಕಣ್ಣಿ ಱಿಙ್ಕ ಣಪ್ಪಿಯ ವಳ್ಳ ಲಾರ್ತನ್
ನಲತ್ತಿನೈ ಪ್ಪಿನ್ನು ಙ್ಕಾಟ್ಟ ನಾಯನಾರ್ ಮೞಿತ್ತ ಕಣ್ಣಿ
ಲುಲಪ್ಪಿಲ್ಚೆ ಙ್ಕುರುತಿ ಪಾಯ ಕ್ಕಣ್ಟನ ರುಲಕಿಲ್ ವೇಟರ್
ಕುಲಪ್ಪೆರು ನ್ದವತ್ತಾಲ್ ವನ್ದ ಕೊಳ್ಕೈಯಿ ನುಮ್ಪರ್ ಮೇಲಾರ್.*

815. ಕಣ್ಟಪಿನ್ 'ಕೆಟ್ಟೇ! ನೆಙ್ಕಳ್ ಕಾಳತ್ತಿ ಯಾರ್ಕ ಣೊನ್ಱಿ
ಪುಣ್ಟರು ಕುರುತಿ ನಿಙ್ಕ, ಮಱ್ಱೈಕ್ಕಣ್ ಕುರುತಿ ಪೊಙ್ಕಿ
ಮಣ್ಟಿಮ ಱಿತನ ಕ್ಕಿಙ್ಕೇನ್ ಮರುನ್ದುಕೈ ಕಣ್ಟೇ; ನಿನ್ನು
ಮುಣ್ಟೊರು ಕಣ್ಣ ಕ್ಕಣ್ಣೈ ಯಿಟನ್ದಪ್ಪಿ ಯೊಟಿಪ್ಪೇ' ನೆನ್ಱು,

816. ತನ್ನ ಕಣ್ಣನ್ನು ತೋಡಿ, ನೊಸಲಕಣ್ಣುಳ್ಳ ದೇವರ ಕಣ್ಣಲ್ಲಿ ಅಂಟಿಸಲು, ಕಾಣುವ ಹಿಂದಿನ ಸ್ವಭಾವವನ್ನು ಎಣಿಸುವವನಾಗಿ, ತಿಣ್ಣನು ಈಶ್ವರನ ಕಣ್ಣಿನಲ್ಲಿ ತನ್ನ ಎಡಕಾಲನ್ನು ತೆಗೆದು ಅದರಿಂದ ಒತ್ತಿಕೊಂಡು ಮನಸ್ಸಿನಲ್ಲಿ ತುಂಬಿ ಎದ್ದ ಆಶೆಯಿಂದ, ಸಮಾನವಿಲ್ಲದ ಒಂದು ಬಾಣವನ್ನು ತೆಗೆದು ಅದನ್ನು ತನ್ನ ಕಣ್ಣಲ್ಲಿ ಕುತ್ತಲು, ದೇವದೇವನಾದ ಕಾಳತ್ತಿನಾಥನು ಸಹಿಸಲಾರದವನಾಗಿ,

817. ಕೆಂಪಗಾದ ಕಣ್ಣುಳ್ಳ ಬಿಳಿಯ ವೃಷಭವನ್ನು ವಾಹನವಾಗಿ ಉಳ್ಳವನೂ, ತಿಣ್ಣನನ್ನು ಆಳಾಗಿಕೊಂಡ ಕೃಪಾದೃಷ್ಟಿಯುಳ್ಳವನೂ ಆಗಿ, ಆ ತಿರುಕಾಳತ್ತಿ ಅದ್ಭುತನ[1] ಕೈಯು ತೋರಿ, ಭಕ್ತಿಯಿಂದ ಕಣ್ಣನ್ನು ತೋಡಲು ಪ್ರಯತ್ನಿಸಿದ ತಿಣ್ಣನ ಕೈಯನ್ನು ತಡೆಯಲು, ಹಾವನ್ನು ಕಂಕಣವಾಗಿ ಧರಿಸಿದ ಈಶ್ವರದೇವನು ಅಮೃತ ಸದೃಶ ದಿವ್ಯವಾಣಿಯಿಂದ ಮೂರು ಸಲ 'ಕಣ್ಣಪ್ಪನೇ ನಿಲ್ಲು' ಎಂದನು.

818. ಬೇಡರ ನಾಯಕನಾದ ಕಣ್ಣಪ್ಪನು ತನ್ನ ಕಣ್ಣನ್ನು ತೋಡಿ, ದೇವರ ಕಣ್ಣಲ್ಲಿ ಅಂಟಿಸಿದುದನ್ನೂ, ಅವನು ನಿವೇದಿಸಿದ ಮಾಂಸಾಹಾರವನ್ನು ಆಶಿಸಿ ಸ್ವೀಕರಿಸಿ ಅನುಗ್ರಹಿಸಿದ ಸ್ವಾಮಿಯಾದ ಕಾಳತ್ತಿನಾಥನು, ಅವನು ಮತ್ತೊಂದು ಕಣ್ಣನ್ನು ತೋಡುವ ಕೈಯನ್ನು ಮೊದಲೇ ಹೊಂದಿ ಹಿಡಿದುದನ್ನೂ, ಪೂರ್ಣಜ್ಞಾನವುಳ್ಳ ಮುನಿಯಾದ ಶಿವಗೋಚರಿಯಾರನು ಕಂಡನು. ವೇದಗಳು ಘೋಷಿಸಲು, ಬ್ರಹ್ಮದೇವನೇ ಮೊದಲಾದ ದೇವತೆಗಳು ಕಲ್ಪಕ ಹೊಸಮಲರುಗಳ ಮಳೆ ಸುರಿಸಿದರು.

---

816. ಕಣ್ಣುತಲ್ ಕಣ್ಣಿ ಱಙ್ಕ ಣಿಟತ್ತಪ್ಪಿಱಿ್ ಕಾಣು ನೇರ್ಪಾ
ಟೆಣ್ಣುವಾರ್ ತವಿಪ್ಪ ರಾನ್ಱಿನ್ ಱಿರುಕ್ಕಣ್ಣಿ ಲಿಟಕ್ಕಾ ಲೂನ್ಱಿ
ಯುಣ್ಣಿಱೈ ವಿರುಪ್ಪಿ ನೋಟು ವೊರುತನಿ ಪ್ಪಕಟಿ ಕೊಣ್ಟು
ತಿಣ್ಣನಾರ್ ಕಣ್ಣಿ ಲೂನ್ಱ ತ್ತರಿತ್ತಿಲರ್ ತೇವ ತೇವರ್,

817. ಚೆಙ್ಕಣ್ವೆಳ್ ಳಿಟ್ಟೈಯಿನ್ ಪಾಕರ್, ತಿಣ್ಣನಾರ್ ತಮ್ಮೈಯಾಣ್ಟ
ವಙ್ಕಣರ್, ತ್ತಿರುಕ್ಕಾ ಳತ್ತಿ ಯಱ್ಪುತರ್ ತಿರುಕ್ಕೈಯಮ್ಪಾಱ್
ಱಙ್ಕಣ್ಮು ನಿಟಕ್ಕು ಱ್ಕೈಯೈ ತ್ತಟುಕ್ಕವೂ ನ್ಱಿಟುಕ್ಕ ನಾಕ
ಕಙ್ಕಣ ರಮುತ ವಾಕ್ಕು 'ಕ್ಕಣ್ಣಪ್ಪ ನಿಱ್ಕ' ವೆನ್ಱಿ.

818. ಕಾನವರ್ ಪೆರುಮಾ ನಾರ್ತ ಙ್ಕಣ್ಣಿಟ ನ್ತಪ್ಪುವ್ ಪೋತು
ವೂನಮು ತುಕನ್ತ ವೈಯ ರೊಱುಮುನ್ ಪಿಟಿಕ್ಕುವ್ ಪೋತು
ಞಾನಮಾ ಮುನಿವರ್ ಕಣ್ಟಾರ್; ನಾನ್ಮುಕನ್ ಮುತಲಾ ಯುಳ್ಳ
ವಾನವರ್ ವಳರ್ಪೂ ಮಾರಿ ಪೊಟಿನ್ತನರ್ ಮಱೈಕ ಳಾರ್ಪ್ಪ.

---

1. ಅದ್ಭುತನ=ಆಶ್ಚರ್ಯ ಸ್ವಭಾವವುಳ್ಳವನ.

819. ಈಶ್ವರನ ಕಣ್ಣಿಗೆ ಬಂದ ಅಪಾಯವನ್ನು ಕಂಡು ಹೆದರಿ, ತನ್ನ ಎಡಕಣ್ಣನ್ನು ತೋಡಿ ಅಂಟಿಸಲು ಸಹಾಯವಾಗಿ ನಿಂತ ಕಣ್ಣಪ್ಪನ ಕೈಯನ್ನು ವೃಷಭಧ್ವಜವನ್ನು ಎತ್ತಿದವನಾದ ಕಾಳತ್ತಿಯಪ್ಪನು ತನ್ನ ಕೈಯಿಂದ ಹಿಡಿದುಕೊಂಡು, 'ನಿನಗೆ ಸಮಾನನೂ ನಿನಗಿಂತ ಶ್ರೇಷ್ಠನೂ ಇಲ್ಲದವನೇ, ನನ್ನ ಬಲದ ಪಕ್ಕದಲ್ಲಿ ನಿಲ್ಲುವವನಾಗು' ಎಂದು ನೆಲೆಗೊಂಡ ದೊಡ್ಡ ಅನುಗ್ರಹವನ್ನು ಮಾಡಿದನು. ಇನ್ನುಮೇಲೆ ಇದಕ್ಕೆ ಮೇಲಾಗಿ ಪಡೆಯುತಕ್ಕ ಪ್ರಯೋಜನವು ಬೇರೆ ಉಂಟೋ?

820. ಮೇಘವು ಸಂಚರಿಸುವುದಕ್ಕೆಡೆಯಾದ ತಿರುಕ್ಕಾಳತ್ತಿಯಲ್ಲಿ ಇದ್ದನುಗ್ರಹಿಸಿದ ಈಶ್ವರನ ಕಣ್ಣುಗಳಲ್ಲಿ ಕಂಡ ಗಾಯದಿಂದ ಬರುವ ಕೆನ್ನೀರನ್ನು ತನ್ನ ಕಣ್ಣಿಂದ ತಡೆಯುವ (ಗುಣಪಡಿಸುವ) ಭಾಗ್ಯವುಳ್ಳ ನಾಯಕನಾದ ಕಣ್ಣಪ್ಪ ನಾಯನಾರನ ಶ್ರೀಪಾದಗಳನ್ನು ನನ್ನ ತಲೆಯಲ್ಲಿ ಅಲಂಕರಿಸಿಕೊಂಡು ಗಂಗೆಯಿರುವ ಜಡೆಯನ್ನುಳ್ಳ ಶಿವಪರಮಾತ್ಮನು ಅನುಗ್ರಹಿಸಿದ ತಿರುಕ್ಕಡವೂರಿನ ಕಲಯನಾರಾದ ಮಿಕ್ಕ ಕೀರ್ತಿಯಿಂದ ಮೇಲ್ಪಟ್ಟವನ ದಿವ್ಯಸೇವೆಯನ್ನು ಇನ್ನುಮೇಲೆ ಹೇಳತೊಡಗುವೆನು.

---

819. ಪೇಱಿನಿ ಯಿತನ್ಮೇ ಲುಣ್ಡೋ? ಪಿರಾನ್ ಱಿರು ಕ್ಕಣ್ಣಿಲ್ ವನ್ದ
ಊರುಕ ಣ್ಟಞ್ಚಿ ತ್ತಙ್ಕ ಣಿಟನ್ದಪ್ಪ ವುತವು ಱಿಕ್ಕೈಯೈ
ಯೇಱುಯರ್ ತ್ತವರ್ತ ಱಿಕ್ಕೈಯಾಱ್ ಪಿಟಿತ್ತು 'ಣ್ಣೆನ್ವ ಲತ್ತಿನ್
ಮಾಱಿಲಾಯ್! ನಿಱ್ಕ' ವೆನ್ಱು ಮನ್ನುಪೇ ರರುಳ್ಪು ರಿನ್ದಾರ್.

820. ಮಞ್ಚುಲ್ವಾಟ್ ತಿರುಕ್ಕಾ ಳತ್ತಿ ಮನ್ನನಾರ್ ಕಣ್ಣಿಱ್ ಪುಣ್ಣೀರ್
ತಞ್ಚಣಾನ್ ಮಾಱ್ಱಿ ಪೆಱ್ಱ ತಲೈವರ್ತಾ ಟಲೈಮೇಱ್ ಕೊಣ್ಟೇ
ಕಱಿಕ್ಕೈವಾಟ್ ಚಟೈಯಾರ್ ವಾಟುಙ್ ಕಟವೂರಿಱ್ ಕಲಯ ನಾರಾಮ್
ಪೊಱ್ಕಿಯ ಪುಕಟಿನ್ ಮಿಕ್ಕಾರ್ ತಿರುತ್ತೊಣ್ಟು ಪುಕಲ ಲುಱ್ಱೇನ್.

II. ಕುಂಗುಲಿಯ ಕಲಯ ನಾಯನಾರನು

821. ನೀರಿನ ಸಂಪತ್ತು ಪೂರ್ಣವಾದುದರಿಂದ ಉಂಟಾದ ಭಾಗ್ಯದಿಂದ ಹಿರಿಮೆಗೊಂಡು ವೃದ್ಧಿಹೊಂದಿ, ನೆಲೆವಡೆದ ಕಾವೇರಿಯು ಹರಿಯುವ ಚೋಳನಾಡಿನಲ್ಲಿ ಹಿರಿಮೆಯುಳ್ಳ ವೇದಿಯರು ವಾಸಿಸುವುದಕ್ಕೆಡೆಯಾದ ಪ್ರಾಕಾರದಿಂದ ಕೂಡಿದ ಊರು, ಅಲೆಗಳು ಬೀಸುವ ನೀರನ್ನುಳ್ಳ ಗಂಗಾನದಿಯು ಇರುವ ನಿಡಿದಾದ ಜಡೆಯುವನೂ, ಭಕ್ತನಾದ ಮಾರ್ಕಂಡೇಯನ ಪ್ರಾಣವನ್ನು ಕೊಂಡೊಯ್ಯಲು ಬಂದ ಯಮನನ್ನು ಒದೆದ ಕೆಂಪಗಾದ ಪಾದವುಳ್ಳವನೂ ಆದ ಶಿವಪರಮಾತ್ಮನು ನೆಲಸಿ ಬಾಳುವುದಾದ 'ತಿರುಕ್ಕಡವೂರು' ಎಂಬುದಾಗುವುದು.

822. ಲಕ್ಷ್ಮಿಯೂ ಭಾಗ್ಯವೂ ಉಳ್ಳ ಆ ತಿರುಕ್ಕಡವೂರಲ್ಲಿ ಯಾವ ಕಾಲದಲ್ಲೂ ಬಯಲುಗಳಲ್ಲೆಲ್ಲಾ ಬೆಳೆಯುವ ಕೆಂಪು ನೆಲ್ಲು ಇದೆ. ಬಯಲಿನ ಹರಹುಗಳಲ್ಲೆಲ್ಲಾ ಶಂಖಗಳೂ, ಅವುಗಳಿಂದ ಹೊರಬಂದ ಸುಂದರವಾದ ಮುತ್ತುಗಳೂ ಇವೆ. ಬಯಲುಗಳ ಪಕ್ಕಗಳಲ್ಲೆಲ್ಲೂ ಯಾಗಶಾಲೆಗಳಿವೆ. ಅಣೆಕಟ್ಟುಗಳಲ್ಲೆಲ್ಲೂ ಕೆಂಪಗಾದ ನೀಲೋತ್ಪಲ ಕೂಟಗಳಿವೆ. ಕಾಡಿನಂತೆ ಚೆಲುವಾದ ಕಂಗಿನ ತೋಟಗಳಲ್ಲೆಲ್ಲಾ ಮೇಘಗಳಿವೆ. ಅವುಗಳಿಂದ ಹೊರಗಿನ ಎಡೆಗಳಲ್ಲೆಲ್ಲಾ ಆ ಊರ ಹಿರಿಮೆಯನ್ನು ಹೊಗಳುವುದು ತೋರಿಬರುವುದು.

II. ಕುಙ್ಕುಲಿಯ ಕಲಯ ನಾಯನಾರ್

821. ವಾಯ್ನ್ತ ನೀರ್ ವಳತ್ತಾ ಲೋಙ್ಗಿ ಮನ್ನಿಯ ಪೊನ್ನಿ ನಾಟ್ಟಿಲ್
ಏಯ್ನ್ತ ಚೀರ್ ಮಱೈಯೋರ್ ವಾೞು ಮೆಯಿಱ್ಪತಿ ಯೆಱಿನೀರ್ ಕ್ಕಙ್ಕೈ
ತೋಯ್ನ್ತ ನೀಳ್ ಚಟೈಯಾರ್ ಪಣ್ಣು ತೊಣ್ಟರ್ಮೇಲ್ ವನ್ತ ಕೂಱ್ಱೈ
ಕ್ಕಾಯ್ನ್ತ ಚೇ ವಟಿಯಾರ್ ನೀಟ ಯಿರುಪ್ಪತು ಕಟವೂ ರಾಕುಮ್.

822. ವಯಲೆಲಾಮ್ ವಿಳೈಚೆಙ್ ಚಾಲಿ; ವರಮ್ಪೆಲಾಮ್ ವಳೈಯಿನ್ ಮುತ್ತಮ್;
ಅಯಲೆಲಾಮ್ ವೇಳ್ವಿ ಚ್ಚಾಲೈ; ಯಣೈಯೆಲಾ ಙ್ಕಮಲನೀರ್ ಕ್ಕೞ್ನಿ;
ಪುಯಲೆಲಾ ಙ್ಕಮುಕಿನ್ ಕಾಟ; ಪುಱಮೆಲಾ ಮತನ್ ಚೀರ್ ಪೋಱ್ಱಿಲ್;
ಚೆಯಲೆಲಾ ನೊಟ್ಟಿಲ್ಕ ಳಾಱೀ ಚೆಲುನ್ತಿರು ಕ್ಕಟವೂ ರೆನ್ಱುಮ್.

823. ಕಾಡಿಗೆ ಹೀಡಿದ ಅಂಗೈಯಂತೆ ವಿಸ್ತಾರವಾದ ಕಣ್ಣುಗಳನ್ನುಳ್ಳ ರೈತರ ಸ್ತ್ರೀಯರು, ಕೂಡಿ ಆಡುವುದಕ್ಕೆಡೆಯಾದ ವಿಶಾಲವಾದ ಬಯಲುಗಳಲ್ಲೆಲ್ಲಾ ಅವರ ಮರುತ ನೆಲ[1]ದ ಗೀತಧ್ವನಿಯು ತುಂಬಿದೆ. ಬೇರೆ ಬೇರೆಯಾಗಿ ಹುರಿಯಾಗಿಸಿ ನೂಲುಮಾಡಿದ ಮೂರು ನೂಲಿನ ಜನಿವಾರದಿಂದ ಅಲಂಕೃತವಾದ ಎದೆಯುಳ್ಳ ಬ್ರಾಹ್ಮಣರು ವೈದಿಕ ಶುಭಕಾರ್ಯಗಳನ್ನು ಮಾಡುವ ಎಡೆಗಳಲ್ಲೆಲ್ಲಾ ಸಾಮವೇದವನ್ನು ಹಾಡುವ ಗಾನವು ಎದ್ದು ಕೇಳುವುದು.

824. ನಿಡಿದಾದ ಕೊಂಬುಗಳುಳ್ಳ ದೊಡ್ಡ ಎಮ್ಮೆಗಳು ನೀರಿನಲ್ಲಿ ಬಿದ್ದು (ಕರುವನ್ನು ನೆನೆದು) ಹಾಲು ಸುರಿಸಿದ ಆ ತಟಾಕಗಳಲ್ಲಿ ಕೆಂಪಗಾದ ಕಯಲು ಮೀನುಗಳು ಹಾರುವುದರಿಂದ ಆ ನೀರ ಹನಿಗಳು ಬಿದ್ದ ಸುವಾಸನೆಯುಳ್ಳ ತಾವರೆಗಳು (ಹಾಲಿನ) ಮಧುರವಾದ ಸುವಾಸನೆಯುಳ್ಳವುಗಳಾಗುವುವು. ಮೇಘಗಳು ಸಂಚರಿಸುವಷ್ಟು ಉನ್ನತವಾದ ಉಪ್ಪರಿಗೆಗಳುಳ್ಳ ಯಾಗಶಾಲೆಗಳ ಪಕ್ಕದಲ್ಲಿ ಸ್ವಲ್ಪಕಾಲ ತಂಗತಕ್ಕ ಮೇಘಗಳೂ, ಅಲ್ಲಿ ಅವು ಹನಿಸಿದ ನೀರೂ, ಬೇರೆ ಬೇರೆ ಆಹುತಿಗಳ ಪ್ರತ್ಯಪ್ರತ್ಯೇಕವಾದ ಹೊಗೆಯ ಸುವಾಸನೆಯಿಂದ ಕೂಡುವುವು.

825. ಸೇರಿದ ಸಂಪತ್ತಿನಿಂದ ಹೆಚ್ಚಾದ ಭಾಗ್ಯವುಳ್ಳ, ಆ ಊರಲ್ಲಿ ಬಾಳುವವನಾದ ಹಿರಿಮೆಯ ವೇದವಿಧಿಯಂತೆ ಜನಿವಾರವನ್ನು ಧರಿಸಿದ ಎದೆಯುಳ್ಳ ಬ್ರಾಹ್ಮಣನೊಬ್ಬನು ಕಲಯರ್ ಎಂಬವನು. ಅವನು ಗಂಗೆಯನ್ನು ಅಲಂಕಾರವಾಗಿ ಧರಿಸುವ ಜಡೆಯನ್ನುಳ್ಳ ಶಿವಪರಮಾತ್ಮನ ಪಾದಗಳನ್ನು ಸ್ತುತಿಸಿ ದಿನವೂ ಪರವಶತೆಯನ್ನು ಹೊಂದುವ ಬಹುಭಕ್ತಿಯ ಮನಸ್ಸುಳ್ಳವನು. ಸನ್ಮಾರ್ಗದಲ್ಲಿ ಶ್ರೇಷ್ಠನು.

---

823. ಕುಟಙ್ಕೈಯಿ ನಕನ್ಱ ವುಣ್‌ಕಟ್ ಕಟೈಚಿಯರ್ ಕುಟುಮಿ ಯಾಟುಮ್
ಇಟವ್ಪ್ಪಟು ಪಣ್ಣೈ ತೋಱು ಮೆಱುವನ ಮರುತಮ್ ಪಾಟಲ್;
ವಟವ್ಪುರಿ ಮುನ್ನೂಽನ್ ಮಾರ್‌ಪಿನ್ ವೈತಿಕ ಮಱೈಯೋರ್ ಚೆಯ್‌ಕೈ
ಚ್ಚಟಙ್ಕುಟೈ ಯಿಟಙ್ಕ ಟೋಱು ಮೆಱುವನ ಚಾಮಮ್ ಪಾಟಲ್.

824. ತುಙ್ಕನೀಣ್ ಮರುಪ್ಪಿನ್ ಮೇತಿ ಪಟಿನ್ತುಪಾಲ್ ಚೊರಿನ್ತ ವಾವಿ
ಚ್ಚೆಙ್ಕಯಲ್ ಪಾಯ್‌ನ್ತು ವಾಚ ಕ್ಕಮಲಮುನ್ ತೀಮ್ಪಾ ನಾಱುಮ್;
ಮಙ್ಕುಱೋಯ್ ಮಾಟ ಚ್ಚಾಲೈ ಮರುಙ್ಕಿಱೈ ಯೊತುಙ್ಕು ಮಞ್ಚುಮ್
ಅಙ್ಕವೈ ಪೊಟಿನ್ತ ನೀರು ಮಾಕುತಿ ಪುಕೈಪ್ಪಾ ನಾಱುಮ್.

825. ಮರುವಿಯ ತಿರುವಿನ್ ಮಿಕ್ಕ ವಳಮ್ಪತಿ ಯತನಿಲ್ ವಾೞ್‌ವಾರ್
ಅರುಮಱೈ ಮುನ್ನೂಽನ್ ಮಾರ್‌ಪಿ ನನ್ತಣರ್ ಕಲಯ ರೆನ್‌ಪಾರ್
ಪೆರುನತಿ ಯಣಿಯುಮ್ ವೇಣಿ ಪ್ಪಿರಾನ್ ಕೞಲ್ ಪೇಣಿ ನಾಳುಮ್
ಉರುಕಿಯ ವನ್‌ಪು ಕೂರ್‌ನ್ತ ಚಿನ್ತೈಯಾ ರೊೞುಕ್ಕ ಮಿಕ್ಕಾರ್.

---

1. ಮರುತನೆಲ – ಬಯಲಿನಿಂದ ಸುತ್ತುವರಿದ ನೆಲ.

826. ಅವನು, ಬ್ರಾಹ್ಮಣನಾದ ಬಾಲ ಮಾರ್ಕಂಡೇಯ ಮುನಿಯು ಶಿವನ ಪಾದಗಳನ್ನು ದೃಢವಾಗಿ ಹಿಡಿದುಕೊಂಡುದರಿಂದ, ಅವನ ಭಯವೆಲ್ಲವನ್ನೂ ನಾಶಪಡಿಸಿ ಅನುಗ್ರಹವನ್ನು ಮಾಡಿದ ಬಗೆಯಿಂದ, ವಿಷ್ಣುವೂ ಬ್ರಹ್ಮದೇವರೂ ಕಾಣದ ರೂಪವನ್ನು ಕೊಂಡು ಪ್ರತ್ಯಕ್ಷವಾಗಿ ಬಂದು, ಕಾಲನನ್ನು ಒದೆದು ತಳ್ಳಿ ಅವನ ಉಸಿರನ್ನು ಹೋಗಲಾಡಿಸಿದ ಅಮೃತಗಟೇಶ[1]ನಾದ ಶಿವಪರಮಾತ್ಮನಿಗೆ ಅತಿಯಾದ ಸುವಾಸನೆಯುಳ್ಳ ಗುಗ್ಗುಳದ ಧೂಪವನ್ನು ಬಹುವಾಗಿ ತುಂಬಿ ಬೀಸುವಂತಿಡುವ ದಿವ್ಯಕೈಂಕರ್ಯದಲ್ಲಿ ಹಿರಿಮೆಯನ್ನು ಹೊಂದಿದವನಾದನು.

827. ಗಂಗೆಯ ಜಲವು ಶಬ್ದಿಸುವುದಕ್ಕೆಡೆಯಾದ ಶ್ರೀಮುಡಿಯೂ, ನೊಸಲ ಕಣ್ಣೂ ಉಳ್ಳ ನಮ್ಮ ಶಿವಪರಮಾತ್ಮನಿಗೆ, ಮೇಲೆ ಮೇಲೆ ಪೂರ್ಣವಾಗಿ ತುಂಬಾ ವ್ಯಾಪಿಸಿ, ಹೊಮ್ಮುವ ಗುಗ್ಗುಳ ಧೂಪವನ್ನು ಪ್ರಶಸ್ತವಾಗಿ ಶೋಭಿಸುವಂತೆ ತಪ್ಪದೆ ನಡೆಸಿ ಬಂದವನಾಗಿ ಆ ದಿನದಲ್ಲಿ ತನ್ನ ದೇವರ ಅನುಗ್ರಹದಿಂದ ಬರುವೆಯು (ದಾರಿದ್ರ್ಯವು) ಪ್ರಾಪ್ತವಾಗಲು, ಆಮೇಲೆಯೂ ತನ್ನ ಈಶ್ವರನಿಗೆ ತಾನು ಮೊದಲು ಮಾಡಿಕೊಂಡು ಬಂದ ಆ ಕೈಂಕರ್ಯವನ್ನು ತಪ್ಪದೆ ಹಿಂದಿನಂತೆಯೇ ನಡೆಸಿಕೊಂಡು ಬರುವವನಾದನು.

828. ಆ ಮಾರ್ಗದಲ್ಲಿ ನಡೆದು ಬರುವ ಕಾಲದಲ್ಲಿ ದಾರಿದ್ರ್ಯವು ಅತಿ ಹೆಚ್ಚಾದುದರಿಂದ ತನ್ನ ಒಳ್ಳೆಯ ಭೂಮಿಗಳನ್ನೆಲ್ಲಾ ಮಾರಿಯೂ, ಸ್ವಂತದ ಆಳುಗಳನ್ನೆಲ್ಲಾ ವಿಕ್ರಯಿಸಿಯೂ, ತನ್ನ ದೊಡ್ಡ ಭಾಗ್ಯಗಳೆಲ್ಲವೂ ತೀರಿಹೋಗಲು, ರೂಢಿಯಾಗಿ ಬಾಳಿಕೊಂಡು ಬಂದ ಗೃಹಸ್ಥಾಶ್ರಮದಲ್ಲಿ ಸೇರಿದ ಸಂಬಂಧಿಕರೊಡನೆ ದಾರಿದ್ರ್ಯದಿಂದ ಕಷ್ಟಪಟ್ಟನು.

---

826. ಪಾಲನಾ ಮಱೈಯೋನ್ ಪಱ್ಱಪ್ಪಯಱೈಟ್ಟುತ್ತರುಳು ಮಾಱ್ಱಾನ್
ಮಾಲುನಾನ್ ಮುಕನು ಱ್ಱಾಕಣಾ ವಟಿವುಕೊಣ್ಟೆತಿರೇ ವನ್ದು
ಕಾಲನಾ ರುಯಿರ್ಚೆಱ್ಱಾರ್ಕ್ಕು ಕ್ಕಮಟಿನ್ತ್ತಕು ಱ್ಕುಲಿಯ ತ್ತೂಪಙ್ಙ್
ಚಾಲವೇ ನಿಱೈನ್ತು ವಿಮ್ಮ ವಿರುಮ್ಪಣಿ ತಲೈನಿನ್ ಱುಳ್ಳಾರ್.

827. ಕಙೈಕುನೀರ್ ಕ್ಕಲಿಕ್ಕು ಇಚ್ಚೆನ್ನಿ ಕ್ಕಣ್ಣುತ ಲೆವ್ಪಿ ರಾಱ್ಕು
ಪೊಙ್ಕುಕು ಱ್ಕುಲಿಯ ತ್ತೂಪಮ್ ಪೊಲಿವುಱ ಪೋಱ್ಱಿ ಚ್ಚೆಲ್ಲ
ವಙ್ಕುವ ರರುಳಿ ನಾಲೇ ವಱುಮೈವ ನ್ತೆಯ್ತ ಪಿನ್ನುನ್
ತಙ್ಕಣಾ ಯಕರ್ಕ್ಕು ತ್ತಾಮುನ್ ಚೆಯ್ಪಣಿ ತವಾವ್ಮೈ ಯುಯ್ತ್ತಾರ್.

828. ಇನ್ನೈಱ ಯೊಟುಕು ನಾಳಿ ಲಿಲಮ್ಪಾಟು ನೀಟು ಚೆಲ್ಲ
ನನ್ನಿಲ ಮುಱ್ಱುಮ್ ವಿಱ್ಱು ನಾಟಿಯ ವಟಿಮೈ ವಿಱ್ಱುಮ್
ಪನ್ನೆಟು ನ್ತನಙ್ಕಣ್ ಮಾಳ ಪ್ಪಯಿನ್ಮನೈ ವಾಟ್ಕ್ಕೈ ತನ್ನಿನ್
ಮನ್ನಿಯ ಚುಱ್ಱ ತ್ತೋಟು ಮಕ್ಕಳುಮ್ ವರುನ್ತಿ ನಾರ್ಕಳ್.

---

1. ಅಮೃತ ಗಟೇಶ – ಅಮೃತ ಘಟೇಶ್ವರ.

829. ಊಟಕ್ಕೆ ಬೇಕಾದ ಸಾಧನವು ಯಾವುದೊಂದೂ ದೊರೆಯದುದರಿಂದ ಎರಡು ಹಗಲು ಆಹಾರವಿಲ್ಲದೆ, ವ್ಯಥೆಪಡುವ ಪುತ್ರರನ್ನೂ ಹೆಚ್ಚಿನ ಸಂಬಂಧಿಕರನ್ನೂ ನೋಡಿ ಪ್ರೀತಿಯುಳ್ಳ ಪತ್ನಿಯು ತನ್ನ ಪತಿಯಾದ ಕಲಯನಾರ ಕೈಯಲ್ಲಿ ದೋಷ ರಹಿತವಾದ ಮಂಗಲಸೂತ್ರದ ತಾಲಿಯನ್ನು ಕೊಟ್ಟು 'ಇದಕ್ಕೆ ನೆಲ್ಲನ್ನು ಕೊಂಡು ಬನ್ನಿ' ಎಂದು ಹೇಳಿದಳು.

830. ಆಗ ಆ ತಾಲಿಯನ್ನು ತೆಗೆದುಕೊಂಡು ನೆಲ್ಲನ್ನು ಕೊಂಡುಕೊಳ್ಳುವುದ ಕ್ಕಾಗಿ ಅವನು ಹೋಗಲು, ಅನರ್ಘವಾದ ಗುಗ್ಗುಳದ ಮೂಟೆಯನ್ನು ಕೊಂಡು ಒಬ್ಬ ವಣಿಜನು ಇದಿರಾಗಿ ಬಂದು ಸೇರಿದನು. 'ಈ ಮೂಟೆಯು ಏನು?' ಎಂದು ಅವನು ಕೇಳಲು, ಅವನು 'ಗಗ್ಗುಳ' ಎಂದು ಹೇಳಿದನು. ಅದನ್ನು ಕೇಳಿ ಮೂರೆಳೆಯ ಜನಿವಾರ ವನ್ನು ಧರಿಸಿದ ಎದೆಯುಳ್ಳ ಅವನು ಸಂತಸದಿಂದ ಹೀಗೆ ಹೇಳುವವನಾದನು.

831. 'ಗಂಗೆಯನ್ನು ಕೆಂಪಗಾದ ಜಡೆಯ ಮೇಲಿಟ್ಟ ಕೃಪಾದೃಷ್ಟಿಯುಳ್ಳವನ (ಈಶ್ವರನ) ಪೂಜೆಗೆ ತಕ್ಕುದಾದ ನರುಗಂಪುಳ್ಳ ಗುಗ್ಗುಳವು ಇದಾಗಿದ್ದರೆ ನಾನು ದೊಡ್ಡ ಭಾಗ್ಯವನ್ನು ಇಂದು ಪಡೆದವನಾದೆನು. ಇದಕ್ಕಿಂತ ಒಳ್ಳೆಯ ಭಾಗ್ಯವು ಬೇರುಂಟೇ? ಪಡೆಯಲಸಾಧ್ಯವಾದ ಈ ಭಾಗ್ಯವನ್ನು ಪಡೆದಿದ್ದು ಇನ್ನುಮೇಲೆ ಕೊಳ್ಳತಕ್ಕದ್ದು ಬೇರೇನಿದೆ?' ಎಂದು ಆಶೆಯು ಮಿಕ್ಕಲು,

---

829. ಯಾತೊನ್ಱು ಮಿಲ್ಲೈ ಯಾಕಿ ಯಿರುಪಕ ಲುಣವು ಮಾಱಿ
ಪ್ಪೇತುಱು ಮೈನ್ತ ರೋಟು ಪೆರುಕುಚು ಱ್ಱತ್ತೈ ನೋಕ್ಕಿ
ಕ್ಕಾತಲ್‌ಚೆಯ್ ಮನೈವಿ ಯಾರ್‌ತ ಙ್ಕಣವನಾರ್ ಕಲಯ ನಾರ್‌ಕ್ಕೈ
ಕ್ಕೋತಿನ್‌ಮ ಙ್ಕಲನೂ ಱ್ಱಾಲಿ ಕೊಟುತ್ತು 'ನೆಱ್ ಕೊಳ್ಳು' ಮೆನ್ಱಾರ್.

830. ಅಪ್ಪೋಟು ತತನೈ ಕ್ಕೊಣ್ಟು ನೆಱ್‌ಕೊಳ್‌ವಾ ನವರುಮ್ ಪೋಕ
ವೊಪ್ಪಿಲ್‌ಕು ಙ್ಕಲಿಯ ಱ್ಱೊಕ್ಕೊಣ್ಟೋರ್ ವಣಿಕನು ಮೆತಿರ್‌ವನ್ ತುಱ್ಱಾನ್;
'ಇಪ್ಪೊತಿ ಯೆನ್‌ಕೊ?' ಲೆನ್ಱಾರ್ ಕ್ಕುಳ್ಳವಾ ಱಿಯಮ್ಪ ಕ್ಕೇಟ್ಟು
ಮುಪ್ಪುರಿ ಮುನ್ನೂರ್ ಮಾರ್‌ಪರ್ ಮುಕಮಲರ್ ನ್ತತನೈ ಚ್ಚೊನ್‌ನಾರ್.

831. 'ಆಱುಚೆ ಙ್ಚಟೈಮೇಲ್ ವೈತ್ತ ವಙ್ಕಣರ್ ಪೂಚೈ ಕ್ಕೇಱ್ಱ
ನಾಱುಕು ಙ್ಕಲಿಯ ಮೀತೇ ನಾನಿನ್ಱು ಪೆಱ್ಱೇನ್; ನಲ್ಲ
ಪೇಱುಮ ಱ್ಱಿತನ್‌ಮೇ ಲುಣ್ಟೋ? ಪೆಱಾಪ್ಪೇಱು ಪೆಱ್ಱು ವೈತ್ತು
ವೇಱಿನಿ ಕ್ಕೊಳ್ವತೆನ್?' ನೆನ್ಱು ಱುಱೈತ್ತೆಟುಮ್ ವಿರುಪ್ಪಿನ್ ಮಿಕ್ಕಾರ್,

832. ‘ನಾನು ನಿಮಗೆ ಹೊನ್ನನ್ನು ತರಲು ನೀವು ಈ ಗುಗ್ಗುಳವೆಲ್ಲವನ್ನೂ ಕೊಡುವವರಾಗಿ’ ಎಂದು ಕಲಯನಾರನು ಹೇಳಲು, ವಣಿಜನು ‘ದೇವರು ಯಾವುದನ್ನು ಕೊಡುವುದಕ್ಕೆ ಸಮ್ಮತಿಸುವಿರಿ ?’ ಎಂದನು. ಕಲಯನಾರನು ತಾನು ತಂದಿದ್ದ ತಾಲಿಯನ್ನು ಕೊಟ್ಟನು. ಆಗ ವಣಿಜನು ಅದನ್ನು ತೆಗೆದುಕೊಂಡು ಗುಗ್ಗುಳದ ಮೂಟೆಯನ್ನು ಕೊಟ್ಟನು. ಅದನ್ನು ಪಡೆದುಕೊಂಡ ಕಲಯನಾಯನಾರನು ಅಲ್ಲಿ ಸ್ವಲ್ಪವೂ ನಿಲ್ಲದೆ ಅಂತರಂಗವು ತುಂಬಿದ ಅಧಿಕ ಸಂತೋಷದಿಂದ ಶೀಘ್ರವಾಗಿ ಹೊರಟನು.

833. ತನಗೆ ಸರಿಸಮವಿಲ್ಲದ ಕಲಯನಾಯನಾರನು, ವೃಷಭವನ್ನುಳ್ಳ ಶಿವ ಪರಮಾತ್ಮನ ವೀರಟ್ಟಾನ ತಿರುಕ್ಕೋಯಿಲಿಗೆ ಶೀಘ್ರವಾಗಿ ಸೇರಿ, ತನ್ನನ್ನು ಆಳಾಗಿ ಉಳ್ಳವನೂ ತನ್ನನ್ನು ಆಳುವ ಒಬ್ಬನೂ ಆದ ಈಶ್ವರನ ಭಂಡಾರದಲ್ಲಿ ಆ ಮೂಟೆಯನ್ನಿಟ್ಟು ಬೇರೆಲ್ಲಾ ಚಿಂತೆಗಳನ್ನೂ ಮರೆತು, ಭಕ್ತಿಯು ಹೆಚ್ಚಲು, ಆ ಜಡೆಯುಳ್ಳವನ ಹೂವಿನಂತಿರುವ ಪಾದಗಳನ್ನು ಸ್ತುತಿಸಿಕೊಂಡು ಅಲ್ಲಿಯೇ ಇದ್ದನು.

834. ಆ ರೀತಿ ಭಕ್ತನು ಆ ತಿರುವೀರಟ್ಟಾನದಲ್ಲಿ ಇರಲು ಈಶ್ವರನ ಅನುಗ್ರಹದಿಂದ ಕುಬೇರನು ತನ್ನ ದೊಡ್ಡ ನಿಧಿಯನ್ನು ಭೂಮಿಯಲ್ಲಿ ಬಂದು ಸೇರುವಂತೆ ಕೊಂಡು ಬಂದು ಅವನ ಮನೆಯಲ್ಲಿ ಯಾವೆಡೆಯಲ್ಲಿಯೂ ತುಂಬಿರುವಂತೆ, ಹೊನ್ನು ನೆಲ್ಲು ತುಂಬಿದ ರಾಶಿಗಳೂ, ಸರಿಸಮಾನವಿಲ್ಲದ ಇತರ ವಸ್ತುಗಳೂ ಮೇಲೆ ಮೇಲೆ ಹೆಚ್ಚಲು ನೆಲಸಿದ ದೊಡ್ಡ ಭಾಗ್ಯವಾಗಿಟ್ಟನು.

---

832. ‘ಪೊನ್‌ಱಾ ತ್ತಾರು’ ವೆನ್‌ಱು ಪುಕನ್‌ಱಿಟ ವಣಿಕನ್ ಱಾನು
‘ವೆನ್‌ಱಾ ವಿಚೈನ್ತ ?’ ತೆನ್‌ನ ತ್ತಾಲಿಯೈ ಕ್ಕಲಯ ರೀನ್ತಾರ್ ;
ಅನ್‌ಱವ ನತನೈ ವಾಙ್ಕಿ ಯಪ್ಪೊತಿ ಕೊಟುಪ್ಪ ಕ್ಕೊಣ್ಟು
ನಿನ್‌ಱಿಲರ್ ವಿರೈನ್ತು ಚೆನ್‌ಱಾರ್ ನಿಱೈನ್ತೆಟು ಕಳಿಪ್ಪಿ ನೋಟುಮ್.

833. ವಿಟೈಯುವರ್ ವೀರಟ್ಟಾನಮ್ ವಿರೈನ್ತುಚೆನ್ ಱೆಯ್ತಿ ಯೆನ್ನೈ
ಯುಟೈಯವ ರೆಮ್ಮೈಯಾಳು ಮೊರುವರ್‌ತಮ್ ಪಣ್ಟಾ ರತ್ತಿಲ್
ಅಲಟೈವುಱಿ ವೊಟುಕ್ಕಿ ಯೆಲ್ಲಾ ಮಯರ್‌ತ್ತೆಟು ಮನ್‌ಪು ಪೊಙ್ಕ
ಚ್ಚಟೈಯುವರ್ ಮಲರ್‌ತ್ತಾಳ್ ಪೋಱ್ಱಿ ಯಿರುನ್ತನರ್ ತಮಕ್ಕೊಪ್ಪಿಲ್ಲಾರ್.

834. ಅನ್‌ಪರ ಙ್ಕಿರುಪ್ಪ ನಮ್ಪ ರರುಳಿನಾ ಲಳಕೈ ವೇನ್ತನ್
ಱನ್‌ಪೆರು ನಿತಿಯನ್ ತೂರ್‌ತ್ತು ತ್ತರಣಿಮೇ ನೆರುಙ್ಕ ವೆಙ್ಕುಮ್
ಪೊನ್‌ಪಯಿಲ್ ಕುವೈಯು ನೆಲ್ಲುಮ್ ಪೊರುವಿಲ್‌ಪಲ್ ವಳನುಮ್ ಪೊಙ್ಕ
ಮನ್‌ಪೆರು ಞ್ಚೆಲ್ವ ಮಾಕ್ಕಿ ವೈತ್ತನನ್ ಮನೈಯಿ ನೀಟ.

835. ಈ ರೀತಿ ಇರಲು ಇತ್ತ ಕಲಯನಾರನ ಹೆಂಡತಿಯೂ ಮಕ್ಕಳೂ ಹಸಿವಿನಿಂದ ಕುಂದಿ ಆ ರಾತ್ರಿಯಲ್ಲಿ ಮೈಮರೆತು ಆಯಾಸದಿಂದ ನಿದ್ರಿಸಿರುವಾಗ ಒಳ್ಳೆಯ ತಪಸ್ಸಿನ ಕುಡಿಯಂತಿರತಕ್ಕ ಹೆಂಡತಿಗೆ ಕನಸಿನಲ್ಲಿ ಈಶ್ವರನು ಈ ಭಾಗ್ಯಗಳುಂಟಾದ ಸಮಾಚಾರವನ್ನು ತಿಳಿಸಿ ಅನುಗ್ರಹಿಸಲು, ಅವಳು ತಿಳಿದೆದ್ದು ಕನಸಿನಲ್ಲಿ ಕಂಡಂತೆ ಉಳ್ಳ ಭಾಗ್ಯಗಳೆಲ್ಲವೂ ಕಂಡಮೇಲೆ ಇಂತು ನೆನೆಯುವವಳಾದಳು.

836. ಎಳತಳಿರ ಶಾಖೆಯಂತಿರತಕ್ಕ ಅವಳು, ತನ್ನ ಮನೆಯಲ್ಲಿ ಕೊರತೆಯಿಲ್ಲದೆ ಪೂರ್ಣವಾಗಿ ಕಾಣಲ್ಪಟ್ಟ ಸುಂದರವಾದ ಹೊನ್ನರಾಶಿ, ನೆಲ್ಲು, ಅಕ್ಕಿ ಮೊದಲಾಗುಳ್ಳ ಎಲ್ಲವೂ ನಮ್ಮ ಈಶ್ವರನ ಅನುಗ್ರವೇ ಎಂದು ಚಿಂತಿಸಿ ತನ್ನ ನಾಯಕನಾದ ಸಮಾನವಿಲ್ಲದ ಹಿರಿಯ ನಾಯನಾರನಿಗೆ ಭೋಜನವನ್ನು ತಯಾರಿಸಲು ಅಡುಗೆಯ ಮನೆಗೆ ಹೋದಳು.

837. ಕಾಲನನ್ನು ಒದೆದುರುಳಿಸಿದ ಕೆಂಪಗಾದ ಕಾಲುಳ್ಳ ಶಿವಪರಮಾತ್ಮನು, ಶಿವನ ಪಾದದಲ್ಲಿ ಪೂರ್ಣವಾದ ಭಕ್ತಿ, ಚಿಂತನಗಳುಳ್ಳವನಾದ ಕಲಯನಾರನು ತಿಳಿಯುವಂತೆ 'ನೀನು ಹೆಚ್ಚು ಹಸಿದಿರುವಿ. ನಿನ್ನ ವಿಶಾಲವಾದ ದೊಡ್ಡ ಮನೆಯನ್ನು ಸೇರಿ ಹಾಲೊಡನೆ ಕಲೆತ ಇನಿದಾದ ಆಹಾರವನ್ನುಂಡು ಹಸಿವಿನ ಕಷ್ಟವನ್ನು ನೀಗುವವನಾಗು' ಎಂದನುಗ್ರಹಿಸಿದನು.

---

835. ಮಣ್ಣಿವರ್ ಮನೈವಿ ಯಾರು ಮಕ್ಕಳುಮ್ ಪಚಿಯಾಲ್ ವಾಟಿ
ಯಣ್ಣೈನಾ ಳಿರವು ತನ್ನಿ ಲಯರ್ವುಱ ತ್ತುಯಿಲುಮ್ ಪೋತಿಲ್
ನಣ್ಣಿವ ಕ್ಕೋಟಿಯ ನಾರ್ಕ್ಕು ಕ್ಕನವಿಟೈ ನಾತ ನಲ್ಕ
ತ್ತೆಣ್ಣಿನ ವುಣರ್ನ್ತು ಚೆಲ್ವ ಙ್ಕಣ್ಟಪಿನ್ ಚಿನ್ತೈ ಚೆಯ್ವಾರ್.

836. ಕೊಮ್ಪನಾ ರಿಲ್ಲ ಮೆಙ್ಕು ಙ್ಕುಱೈವಿಲಾ ನಿಱೈವಿಱ್ ಕಾಣುಮ್
ಅಮ್ಪೊನಿನ್ ಕುವೈಯು ನೆಲ್ಲು ಮರಿಚಿಯು ಮುತಲಾ ಯುಳ್ಳ
ವೆಮ್ಪಿರಾ ನರುಳಾ ಮೆನ್ಱೇ ಯಿರುಕರ ಙ್ಕುವಿತ್ತು ಪ್ಪೋಱ್ಱಿ
ತ್ತಮ್ಪೆರು ಙ್ಕಣವ ನಾರ್ಕ್ಕು ತ್ತಿರುವಮು ತಮೈಕ್ಕ ಚಾರ್ನ್ತಾರ್.

837. ಕಾಲನೈ ಕ್ಕಾಯ್ನ್ತ ಚೆಯ್ಯ ಕಾಲನಾರ್ ಕಲಯ ನಾರಾಮ್
ಆಲುಮನ್ ಪುಟೈಯ ಚಿನ್ತೈ ಯಟಿಯವ ರಱಿಯ ಮಾಣ್ಣಾಱ್
'ಚಾಲನೀ ಪಚಿತ್ತಾ ಯುನ್ಱಿನ್ ಱಟನೆಟು ಮನೈಯಿ ನಣ್ಣಿ
ಪ್ಪಾಲಿನಿನ್ ನಟಿಚಿ ಲುಣ್ಟು ಪರುವರ ಲೊಟಿಕೆ' ವೆನ್ಱಾರ್.

838. ಕಲಯನಾರನು, ಈ ರೀತಿ ಈಶ್ವರನು ಹೇಳಿದ ಅನುಗ್ರಹ ವಾಕ್ಯವನ್ನು ಕೇಳಿ, ಕೈಗಳನ್ನು ಜೋಡಿಸಿ ನಮಿಸಿ, ಗಂಗೆಯನ್ನು ಧರಿಸಿದ ಶಿರವುಳ್ಳ ಶಿವಪರಮಾತ್ಮನ ಅನುಗ್ರಹವನ್ನು ಅಂಗೀಕರಿಸಲೂ ಅಂಗೀಕರಿಸದಿರಲೂ, ಮನೆಗೆ ಹೋಗಲೂ ಹೋಗದಿರಲೂ ಆಗದೆ, ದೇಗುಲದಲ್ಲಿರಲೂ ಭಯಗೊಂಡವನಾಗಿ, ಕೊನೆಗೆ ಆ ಆಜ್ಞೆಯನ್ನು ತಲೆಯಲ್ಲಿ ತಾಳಿ, ಶಂಕರನ ದೇಗುಲದಿಂದ ಹೋಗಿ ಬೆಟ್ಟದಂತಿರುವ ಮನೆಗಳು ತುಂಬಿದ ಬೀದಿಯಲ್ಲಿ ನಡೆದು ತನ್ನ ಮನೆಯನ್ನು ಸೇರಿದನು.

839. ನಾಯನಾರನು ತನ್ನ ಮನೆಯೊಳಗೆ ಪ್ರವೇಶಿಸಿ, ಅಲ್ಲಿ ದೊಡ್ಡ ನಿಧಿಗಳೊಡನೆ ಇತರ ಭಾಗ್ಯಗಳೆಲ್ಲವನ್ನೂ ಕಂಡು ನಿಂತು, ತನ್ನ ಪತ್ನಿಯನ್ನು ನೋಡಿ, 'ಬಿಲ್ಲಿನಂತಿರುವ ನೆತ್ತಿಯುಳ್ಳ ಹೆಣ್ಣೇ, ಈ ಭಾಗ್ಯೋದಯವು ಬಂದ ರೀತಿ ಹೇಗೆ?' ಎಂದು ಕೇಳಲು, ಅವಳು 'ಕರಿಯ ಇರುಳಂತಿರತಕ್ಕ ಬಣ್ಣವುಳ್ಳ ತಿರುನೀಲಕಂಠನಾದ ತಮ್ಮ ಈಶ್ವರನು ಕೃಪಾದೃಷ್ಟಿಯನ್ನು ಬೀರಿದುದರಿಂದ ಈ ಭಾಗ್ಯವು ಬಂತು' ಎಂದು ಹೇಳಿದಳು.

840. ಮಿಂಚಿನಂತಿರುವ, ಸಾಧುಸ್ವಭಾವದ ಅಮ್ಮನು ಈ ರೀತಿ ಹೇಳಲು, ಹೆಚ್ಚಿನ ಹಿರಿಮೆಯುಳ್ಳ ಕಲಯನಾರನು ನೆಲೆವಟ್ಟ ದೊಡ್ಡ ಭಾಗ್ಯಗಳ ಪ್ರಶಸ್ತವಾದ ಹೆಚ್ಚಳವನ್ನು ನೋಡಿ, 'ನನ್ನನ್ನು ಆಳಾಗಿಸಿಕೊಂಡು ಅನುಗ್ರಹಿಸುವ ಸ್ವಭಾವಕ್ಕೆ ನನ್ನ ತಂದೆಯೂ ಪರಮಾತ್ಮನೂ ಈಶ್ವರನೂ ಆದ ಶಿವಪರಮಾತ್ಮನ ಅನುಗ್ರಹವು ಇದ್ದ ರೀತಿ ತಾನೇ ಏನು!' ಎಂದು ಕೈಗಳನ್ನು ತಲೆಯ ಮೇಲೆ ಜೋಡಿಸಿಕೊಂಡು ಸ್ತುತಿಸಿದನು.

---

838. ಕಲಯನಾ ರತನೈ ಕ್ಕೇಳಾ, ಕ್ಕೈತೊಟು ತಿಜಿತ್ತಿಇಞ್ಜಿ, ಕ್ಕಜಿತ್ತಿಕಲ
ಯಲೈವುನಜಿನ್ ಚೆನ್ನಿ ಯಾರ್ತ ಮರುಣ್ಮಜಿ ತ್ತಿರುಕ್ಕ ವಞ್ಜಿ,
ತ್ತಲೈಮಿಚ್ಚೈ ಪ್ಪಣಿಮೇಜಿನ್ ಕೊಣ್ಡು ಚಙ್ಕರನ್ ಕೋಯಿ ನಿನ್ಱು
ಮಲೈನಿಕರ್ ಮಾಟವೀತಿ ಮರುಙ್ಕುತಮ್ ಮನೈಯೈ ಚ್ಚಾರ್ನ್ದಾರ್.

839. ಇಲ್ಲತ್ತಿಜಿನ್ ಚೆನ್ಱು ಪುಕ್ಕಾ ರಿರುನಿತಿ ಕ್ಕುವೈಕ ಳಾರ್ನ್ದ
ಚೆಲ್ವತ್ತೈ ಕ್ಕಣ್ಡು, ನಿನ್ಱು, ತಿರುಮನೈ ಯಾರೈ ನೋಕ್ಕಿ,
'ವಿಲ್ಲೊತ್ತ ನುತಲಾ! ಯಿನ್ದ ವಿಳೈವೆಲಾ ಮೆನ್ಕೊ?' ಲೆನ್ನ,
'ಅಲ್ಲೊತ್ತ ಕಣ್ಟ ನೆಮ್ಮಾ ನರುಟರ ವನ್ದ' ತೆನ್ಱಾರ್.

840. ಮಿನ್ನಿಟೈ ಮಟವಾರ್ ಕೂಱ ಮಿಕ್ಕಚೀರ್ ಕ್ಕಲಯ ನಾರ್ತಾ
ಮನ್ನಿಯ ಪೆರುಞ್ಚೆಲ್ವತ್ತು ವಳಮಲಿ ಚಿಱಪ್ಪೈ ನೋಕ್ಕಿ
'ಯೆನ್ನೈಯು ಮಾಳು ನ್ದನ್ಮೈ ಕ್ಕೆನ್ತೈಯೆಮ್ ಪೆರುಮಾ ನೀಚನ್
ಱನ್ನರು ಳಿರುನ್ದ ವಣ್ಣ' ಮೆನ್ಱುಕೈ ತಲೈಮೇಜಿನ್ ಕೊಣ್ಡಾರ್.

841. ತಾವರೆಯಲ್ಲಿ ವಾಸಿಸಿರುವ ಪ್ರಶಸ್ತ್ರವಾದ ಮಹಾಲಕ್ಷ್ಮಿಗಿಂತಲೂ ಮೇಲಾದ ಅತನ ಪತ್ನಿಯು ಉಣ್ಣುವ ಪಾತ್ರೆಯನ್ನು ತೊಳೆದು ಸರಿಪಡಿಸಿಕೊಂಡು, ಬೇಗ ತನ್ನ ಗಂಡನಿಗೂ ಗಂಡನೊಡನಿರುವ ಶಿವಪರಮಾತ್ಮನ ಭಕ್ತರಿಗೂ ವಿಧಿಯಂತೆ ದೀಪ ಮೊದಲಾದುವನ್ನು ಎತ್ತಿ ಪೂಜಿಸಿ ಇನಿದಾದ ಭೋಜನವನ್ನು ಬಡಿಸಲು, ಅಸಾಧ್ಯನಾದ ವೇದಜ್ಞನಾದ ಕಲಯನಾರನು ಅದನ್ನು ಸೇವಿಸಿ ಸುಖವನ್ನು ಹೊಂದಿದನು.

842. ಎಲ್ಲ ಊರುಗಳಲ್ಲಿಯೂ ಭಿಕ್ಷೆಯನ್ನು ಕೊಳ್ಳುವ ಶಿವಪರಮಾತ್ಮನ ಅನುಗ್ರಹದಿಂದ ಈ ಲೋಕದಲ್ಲಿ ಪರಿಪೂರ್ಣ ಭಾಗ್ಯವುಳ್ಳವನಾದ ಸ್ವಭಾವದಲ್ಲಿ ಮೇಲ್ಪಟ್ಟು, ಶ್ರೇಷ್ಠವಾದ ಭೋಜನವನ್ನು ಒಳ್ಳೆಯ ಶ್ಲಾಘ್ಯವಾದ ಮೊಸರು, ತುಪ್ಪ, ಹಾಲು ಇವುಗಳೊಡನೆ ಹೆಚ್ಚಿನ ಭಕ್ತಿಯಿಂದ ಕೂಡಿ ಶಿವನ ಭಕ್ತರುಗಳಿಗೆ ಒದಗಿಸುತ್ತಿರುವ ದಿವಸದಲ್ಲಿ,

843. ಕೆಂಪು ಕಣ್ಣುಳ್ಳ, ಬಿಳಿಯ ವೃಷಭದ ಮೇಲಿರುವ, ತಿರುಪ್ಪನಂದಾಳಿನಲ್ಲಿ ಎದ್ದು ಅನುಗ್ರಹಿಸಿರುವ ಕೃಪಾದೃಷ್ಟಿಯುಳ್ಳವನು, ಕುಸಿದು ನಿಂತುದನ್ನು ಕಂಡು ಅದನ್ನು ಸರಿಪಡಿಸಬೇಕೆಂದು ಚೋಳ ಅರಸನು ಆಶೆ ಹೆಚ್ಚಿ, ತನ್ನ ಆನೆ ಮೊದಲಾದುವೆಲ್ಲವನ್ನೂ ಹೂಡಿ ಎಳೆಯಲು, ಆಗಲೂ ಈಶ್ವರನ ವಿಗ್ರಹವು ಸರಿಯಾಗಿ ನಿಲ್ಲದುದನ್ನು ಕಂಡು, ಅರಸನು ರಾತ್ರಿಯೂ ಹಗಲೂ ತೀರದ ಮನೋವ್ಯಥೆಯಿಂದ ಇರುತ್ತಿರಲು,

---

841. ಪತುಮನ ಱಿರುವಿನ್ ಮಿಕ್ಕಾರ್ ಪರಿಕಲ ನ್ತಿರುತ್ತಿ ಕ್ಕೊಣ್ಡು
ಕತುಮೆನ ಕ್ಕಣವ ನಾರ್ಕ್ಕು ಕ್ಕಣ್ಣುತಜ್ ಕನ್ಪ ರೋಟುಮ್
ವಿತಿಮುಱೈ ತೀಪ ಮೇನ್ತಿ ಮೇವುಮಿನ್ ನಟಿಚಿ ಲೂಟ್ಟ
ವತುನಕರ್ ನ್ತಿನ್ಪ ಮಾರ್ನ್ತಾ ರರುಮಱೈ ಕ್ಕಲಯ ನಾರ್ತಾಮ್.

842. ಊರ್ತೊಱುಮ್ ಪಲಿಕೊಣ್ಟು ಯ್ಕ್ಕು ಮೊರುವನ ತರುಳಿ ನಾಲೇ
ಪಾರಿನಿ ಲಾರ್ನ್ತ ಚೆಲ್ವ ಮುಟ್ಟೈಯರಾವಮ್ ಪಣ್ಪಿ ನೀಟಿ
ಚ್ಚೀರುಟ್ಟೆ ಯಟಿಚಿ ನಲ್ಲ ಚೆಟುಱ್ಕಱಿ ತಯಿರ್ನೆಯ್ ಪಾಲಾ
ಲಾರ್ತರು ಕಾತಲ್ಕೂರ ವಟಿಯವರ್ ಕ್ಕುತವು ನಾಳಿಲ್,

843. ಚೆಙ್ಕಣ್ವೆ ಳ್ಳೇಱಿನ್ ಪಾಕನ್ ಱಿರುಪ್ಪನ ನ್ತಾಳಿನ್ ಮೇವು
ಮಙ್ಕಣನ್ ಚೆಮ್ಮೈ ಕಣ್ಟು ಕುಪ್ಪಿಟ ವರಚ ನಾರ್ವಮ್
ಪೊಙ್ಕಿಕ್ತನ್ ವೇಟಮೆಲ್ಲಾಮ್ ಪೂಟ್ಟವು ನೇರ್ನಿ ಲ್ಲಾಮೈ
ಕ್ಕಙ್ಕುಲುಮ್ ಪಕಲು ನ್ತೀರಾ ಕ್ಕವಲೈಯು ಱಟುಙ್ಕಿ ಚ್ಚೆಲ್ಲ,

844. ಅರಸನ ಆ ವ್ಯಥೆಯನ್ನು ಕೇಳಿ ದೋಷರಹಿತವಾದ ಕೀರ್ತಿಯೂ, ಸನ್ಮಾರ್ಗದಲ್ಲಿ ನಡೆಯುವ ಆಚಾರವೂ ಉಳ್ಳ ಕಲಯನಾರನು, ಅರಸನು ಕುಸಿದು ನಿಂತ ಈಶ್ವರನನ್ನು ಸರಿಯಾಗಿಸುವ ಮಾರ್ಗದಲ್ಲಿ ಉತ್ಸಾಹಿಸಿರುವನು ಎಂದು ತಿಳಿದು, ಅರಸನ ಅಭಿಪ್ರಾಯವನ್ನು ಸಮ್ಮತಿಸಿ, ನೇರವಾಗಿ ಕೊಂಡ ಮಿಂಚಿನ ಕಿರಣಗಳಂತಿರುವ ಜಡೆಯುಳ್ಳ ವಿಕೃತವಾದ ಶಿವಪರಮಾತ್ಮನನ್ನು ನಮಿಸುವುದಕ್ಕಾಗಿ ತಿರುಕ್ಕಡವೂರಿನಿಂದ ತಿರುಪ್ಪನಂದಾಳಿಗೆ ಪ್ರಯಾಣ ಮಾಡಿದನು.

845. ಕೊಡಲಿಯನ್ನೆತ್ತಿದ ಕೆಂಪಾದ ಕೈಯನ್ನುಳ್ಳ ಶಿವಪರಮಾತ್ಮನು ಇದ್ದು ಅನುಗ್ರಹಿಸಿದ, ತಾನು ಬರುವ ಮಾರ್ಗದ ಪಕ್ಕಗಳಲ್ಲುಳ್ಳ ದೇಗುಲಗಳಿಗೂ ಹೋಗಿ ನಮಿಸಿ ಹೋಗುತ್ತಾ, ಎಲ್ಲಾ ಲೋಕಗಳನ್ನೂ ರಕ್ಷಿಸುವುದಕ್ಕಾಗಿ ವೇದವಿಧಿ ತಪ್ಪದಂತೆ ಆಹವನೀಯ ಮೊದಲಾದ ಮೂರು ಬಗೆಯ ಅಗ್ನಿಗಳನ್ನೂ ವರ್ಧಿಸಿ ರಕ್ಷಿಸಿಕೊಂಡು ಬರುವ ವೇದಿಯರು, ಬಾಳುವ ಪ್ರಶಸ್ತವಾದ ಹೂವಿನ ನಂದನಗಳಿಂದ ಸುತ್ತುವರಿದ ತಿರುಪ್ಪನಂದಾಳಿಗೆ ಬಂದು ಸೇರಿದನು.

846. ತಾನು ಕೈಕೊಂಡ ಆಶೆಯಿಂದ ಹೊಂದಿದ ವ್ಯಸನವುಳ್ಳವರನ್ನು, ಆನೆಗಳೊಡನೆ ನಿರ್ದೋಷವಾದ ಸೇನೆಗಳೂ ತಾವೂ ಮಾಡುವ ಕೈಂಕರ್ಯವು ಸರಿಯಾಗದುದರಿಂದ ನೆಲದ ಮೇಲೆ ಉತ್ಸಾಹರಹಿತವಾಗಿ ಬಿದ್ದು ಬಲಗುಂದಿದ ಅರಸರನ್ನು, ಮಹಾ ತಪಸ್ವಿಯಾದ ಕಲಯನಾರನು ನೋಡಿ ಮನದಲ್ಲಿ ವ್ಯಥೆಗೊಂಡು,

---

844. ಮನ್ನವನ್ ವರುತ್ತ ಙ್ಕೇಟ್ಟು ಮಾಚಱು ಪುಕಟಿನ್ ಮಿಕ್ಕ
ನನ್ನೆಱಿ ಕ್ಕಲಯ ನಾರ್ತಾ ನಾತನ್ನೈ ನೇರೇ ಕಾಣು
ಮನ್ನೆಱಿ ತಲೈನಿನ್ ಱಾನೆನ್ ಱರಚನೈ ವಿರುಮ್ಬಿ ತ್ತಾಮು
ಮಿನ್ನೆಱಿ ತ್ತನೈಯ ವೇಣಿ ವಿಕಿರ್ತನೈ ವಣಙ್ಕ ವನ್ದಾರ್.

845. ಮಟುವುಟ್ಟೈ ಚ್ಚೆಯ್ಯ ಕೈಯರ್ ಕೋಯಿಲ್ಕಣ್ ಮರುಙ್ಕು ಚೆನ್ಱು
ತೊಟುತುವೋ ನ್ತನ್ಪಿ ನೋಟು ನ್ತೊನ್ಮಱೈ ನೆಱಿವ ಟಾಮೈ
ಮುಟುತುಲ ಕಿನ್ನೈಯುಮ್ ಪೋಱ್ಱ ಮೂನ್ಱೆರಿ ಪುರಪ್ಪೋರ್ ವಾಟುಙ್
ಚೆಟುಮಲರ್ ಚೋಲೈ ವೇಲಿ ತ್ತಿರುಪ್ಪನ ನ್ದಾಳಿಚ್ ಚೇರ್ನ್ದಾರ್.

846. ಕಾತಲಾ ಲರಚ ನುಱ್ಱ ವರುತ್ತಮು ಙ್ಕಳಿಪ್ಪಿ ನೋಟು
ತೀತಿಲ್ವನ್ ಚೇನೈ ಚೆಯ್ಯ್ಯ ನ್ತಿರುಪ್ಪಣಿ ನೇರ್ಪ ಟಾಮೈ
ಮೇತಿನಿ ಮಿಚೈಯೆ ಯೆಯ್ತ್ತು ವೀಟ್ನಿ ಲೈ ಪ್ಪತುವು ನೋಕ್ಕಿ
ಮಾತವ ಕ್ಕಲಯರ್ ತಾಮು ಮನತ್ತಿನಿಲ್ ವರುತ್ತ ಮೆಯ್ತಿ,

847. ಸೇನೆಯೂ ಆನೆಗಳನ್ನೊಳಕೊಂಡ ಕೂಟವೂ ಆಯಾಸಪಟ್ಟು ಆವೇಲೂ ಉತ್ಸಾಹವಿಲ್ಲದ ನೆಲೆಯನ್ನು ನೋಡಿ, 'ನಾನೂ ಈ ಆಯಾಸವನ್ನು ಹೊಂದಿ ಕಷ್ಟ ಪಡುವ ಕೈಂಕರ್ಯದ ಭಾಗ್ಯವನ್ನು ಪಡೆಯಬೇಕು' ಎಂದು ಅಭಿಪ್ರಾಯಗೊಂಡು, ಜೇನು ತುಂಬಿ ಅರಳುವ ಕರ್ಣಿಕಾರಗಳಿಂದ ಅಲಂಕೃತವಾದ ಈಶ್ವರನ ಶರೀರದಲ್ಲಿ ಕಟ್ಟಿದ ಹೂವಿನ ಕುಚ್ಚುಗಳು ಸುತ್ತಿದ ಬಲವಾದ ಹಗ್ಗವನ್ನು ಕಟ್ಟಿ ಅದನ್ನು ತನಗೆ ಹೂಡಿ ಕೊಂಡು ತನ್ನ ಕತ್ತಿನಿಂದ ಪ್ರಯಾಸಗೊಂಡು ಎಳೆಯತೊಡಗಿದನು.

848. ಒಂದೇ ಹಟವನ್ನು ಹೊಂದಿದ, ಭಕ್ತಿಯಾದ ನಾರಿನಿಂದ ಹುರಿಮಾಡಿದ ಹಗ್ಗದಿಂದ, ವೈರಾಗ್ಯವುಳ್ಳ ಭಕ್ತರು ಆಯಾಸದಿಂದ ಕಷ್ಟಗೊಂಡವೇಲೂ ಆ ತಮ್ಮ ಅಭಿಪ್ರಾಯಕ್ಕೆ ಇದಿರಾಗಿ ಹಿಂದಿನಂತೆ ಓರೆಯಾಗಿ ನಿಲ್ಲುವುದಕ್ಕೆ ಈಶ್ವರನಿಗೆ ಮನ ಬರುವುದೋ? ಕಲಯನಾರನ ಮನದಲ್ಲಿ ಉದಯಿಸಿದ ಛಲವನ್ನು ಕಂಡ ಆ ಸಮಯ ದಲ್ಲಿಯೇ ಮಹಿಮಾವಂತನಾದ ಪರಮಾತ್ಮನು ನೇರವಾಗಿ ನಿಂತನು. ದೇವರುಗಳು ಆಕಾಶದಲ್ಲಿ ಸಂತೋಷದಿಂದ ಘೋಷಿಸಿದರು. ಹೊನ್ನಿನ ಮಳೆ ಕರೆದರು.

849. ಭೂಮಿಯ ಮೇಲೆ ಎಲ್ಲೆಡೆಗಳಲ್ಲಿಯೂ ತುಂಬುವಂತೆ ಅಧಿಕವಾಗಿ ಕಲ್ಪಕ ಹೂಮಳೆಯನ್ನು ಸುರಿಸಿದರು. ತೇರುಗಳಿಂದ ಅತಿಶಯವನ್ನು ಹೊಂದಿದ ಅರಸನ ಸೇನೆಗಳು, ಆನೆಗಳು, ಇವೆಲ್ಲಾ ಮೇಘವನ್ನು ಪಡೆದ ನಂದನದಂತೆ ಸಂತೋಷವನ್ನು ಹೊಂದಿದುವು. ವೀರಗೆಜ್ಜೆಯನ್ನು ಕಟ್ಟಿದ ಅರಸನು ಕೈಗಳನ್ನೆತ್ತಿ ಮುಗಿದು, ಭಕ್ತರ ಮಲರಿನಂತಹ ಪಾದಗಳನ್ನು ತಲೆಯ ಮೇಲೆ ಕೊಂಡು ನಮಿಸಿ,

---

847. ಚೇನೈಯುಂ ಮಾನೈ ಪೂಣ್ಡ ತಿರಳುಮೆಯ್ ತ್ತೆಟಾಮೈ ನೋಕ್ಕಿ
'ಯಾನುಮಿ ವ್ವಿಳೈಪ್ಪು ಱೆಯ್‌ಕ್ಕು ಮಿತುಪೆಱ ವೇಣ್ಡು' ಮೆನ್‌ಱು
ತೇನಲರ್ ಕೊನ್‌ಱೈ ಯಾರ್‌ತ ನ್ತಿರುಮೇನಿ ಪ್ಪೂಙ್ಕ ಚ್ಚೇಯ್‌ನ್ತ
ಮಾನವನ್ ಕಯಿಱು ಪೂಣ್ಡು ಕಟುತ್ತಿನಾಲ್ ವರುನ್ತ ಲುಱ್ಱಾರ್.

848. ನಣ್ಣಿಯ ವೊರುಮೈ ಯನ್‌ಪಿ ನಾರುಱು ಪಾಚ ತ್ತಾಲೇ
ತಿಣ್ಣಿಯ ತೊಣ್ಟರ್ ಪೂಟ್ಟಿ ಯಿಳೈತ್ತಪಿನ್ ಱೀಱಿಪ್ಪಿ ನಿಱ್ಕ
ವೊಣ್ಣುಮೋ? ಕಲಯ ನಾರ್‌ತ ಮೊರುಪ್ಪಾಟು ಕಣ್ಡ ಪೋತೇ
ಯಣ್ಣಲಾರ್ ನೇರೇ ನಿನ್‌ಱಾ; ರಮರರುಮ್ ವಿಚುಮ್ಬಿ ಲಾರ್‌ತ್ತಾರ್,

849. ಪಾರ್‌ಮಿಚೈ ನೆರುಙ್ಕ ವೆಙ್ಙುಮ್ ಪರಪ್ಪಿನರ್ ಪಯಿಲ್‌ಪೂ ಮಾರಿ;
ತೇರ್‌ಮಲಿ ತಾನೈ ಮನ್‌ನನ್ ಚೇನೈಯುಂ ಙ್ಕಳಿಱು ಮೆಲ್ಲಾ
ಙ್ಕಾರ್‌ಪೆರು ಕಾನಮ್ ಪೋಲ ಕ್ಕಳಿತ್ತನ; ಕೈಕಳ್ ಕೂಪ್ಪಿ
ವಾರ್‌ಕಟಲ್ ವೇನ್ತನ್ ಱೊಣ್ಟರ್ ಮಲರಟಿ ತಲೈಮೇಲ್ ವೈತ್ತು,

850. 'ಆಕಾಶದಲ್ಲಿ ಸಂಚರಿಸುವ ತ್ರಿಪುರಗಳೂ ಭಸ್ಮವಾಗಿ ಸುಟ್ಟುಹೋಗುವಂತೆ ವೇದಗಳೆಂಬ ಅಶ್ವಗಳು ಹೂಡಿದ ತೇರಲ್ಲಿ ಮೇರುಗಿರಿಯನ್ನು ಬಲವಾದ ಬಿಲ್ಲಾಗಿ ಮಂಡಲಾಕಾರವಾಗಿ ಮಾಡಿನಿಂತ ಜಡೆಯಪ್ಪನ ಸರಿಯಾದ ಇರುವಿಕೆಯನ್ನು ದಾಸನಾದ ನಾನು ದರ್ಶಿಸುವಂತೆ ಮಾಡಿ ಅನುಗ್ರಹಿಸಿದಿರಿ. ಮಣ್ಣನ್ನು ಬಗೆದು ವರಾಹರೂಪದಲ್ಲಿ ಹೋದ ವಿಷ್ಣುವೂ ಹುಡುಕಿ ಕಾಣಲಸಾಧ್ಯವಾದ ಶಿವಪರಮಾತ್ಮನ ಮಲರಂತಹ ಪಾದಗಳನ್ನು ಒಳ್ಳೆಯ ಸ್ವಭಾವದಿಂದ ಮೇಲ್ಪಟ್ಟ ಭಕ್ತರಲ್ಲದೆ ಬೇರೆ ಯಾರು ತಾನೇ ಭಕ್ತಿಯಿಂದ ಸರಿಯಾಗಿ ಕಾಣಬಲ್ಲವರು ?'

851. ಈ ರೀತಿ ಭಕ್ತನಾದ ನಾಯನಾರನನ್ನು ಸ್ತುತಿಸಿ, ಆ ಸ್ಥಳದಲ್ಲಿ ಈಶ್ವರನಿಗೆ ತಕ್ಕಂತಹ ಹಲವು ಕೈಂಕರ್ಯಗಳನ್ನು ಮಾಡಿ, ಆಮೇಲೆ ನೆಲಸಿದ ಬೆಳ್ಗೊಡೆಯುಳ್ಳ ಅರಸನು ತನ್ನ ನಗರಕ್ಕೆ ಹೋದನು. ಆಮೇಲೂ ಸಮಾನವಿಲ್ಲದ ಭಕ್ತನಾದ ಕಲಯನಾರನು ಚಿತ್ಸಭೆಯಲ್ಲಿ ನಟನವಾಡುವವನ ಮಲರಿನಂತಹ ಪಾದಗಳನ್ನು ಸ್ತುತಿಸಿ ಅಲ್ಲಿ ತಂಗಿದ್ದು,

852. ಕೆಲದಿನಗಳು ಕಳೆದಮೇಲೆ ಅಲ್ಲಿಂದಲೂ ತಿರುಗಿ ಬಂದು ತಿರುಕ್ಕಡವೂರನ್ನು ಸೇರಿ ತನ್ನ ಎಂದಿನ ಕೈಂಕರ್ಯದಲ್ಲಿ ನಡೆದುಬರುತ್ತಿರುವ ದಿನಗಳಲ್ಲಿ ಸಮಾನವಿಲ್ಲದ ಶೀಕಾಟಿಯ ನಾಯಕನಾದ, ನಮ್ಮನ್ನು ಆಳಾಗಿ ಉಳ್ಳ ಬಾಲಕನೂ, ತಿರುತ್ತಾಂಡಕವೆಂಬ ಹಾಡನ್ನು ಹಾಡಿದುದರಿಂದ ತಾಂಡಕವೇಂದನಾದ ತಿರುನಾವಕ್ಕರಸನೂ, ನಮ್ಮನ್ನು ಆಳಾಗಿ ಉಳ್ಳ ಅತಿಶಯಕೀರ್ತಿಯುತನಾದ ಅರಸನೂ ಒಂದಾಗಿ ಅಲ್ಲಿ ಯಾತ್ರೆಗಾಗಿ ಬಂದುದನ್ನು ಕಂಡು,

---

850. 'ವಿಣ್ಪಯಿಲ್ ಪುರಙ್ಕಳ್ ವೇವ ವೈತಿಕ ತ್ತೇರಿನ್ ಮೇರು
ತ್ತಿಣ್ಚಿಲೈ ಕುನಿಯ ನಿನ್ಱಾರ್ ಚೆನ್ನಿಲೈ ಕಾಣ ಚ್ಚೆಯ್ತೀರ್;
ಮಣ್ಪಕಿರ್ ನ್ತವನು ಙ್ಕಾಣಾ ಮಲರಟಿ ಯಿರಣ್ಟುವ್ ಯಾರೇ
ಪಣ್ಪುಟೈ ಯಟಿಯಾ ರಲ್ಲಾಲ್ ಪರಿನ್ತುನೇರ್ ಕಾಣ ವಲ್ಲಾರ್ ?'

851. ಎನ್ಱುಮೆಯ್ ತೊಣ್ಟರ್ ತಮ್ಮೈ ಯೇತ್ತಿಯ ಙ್ಕಿವ್ವಿ ರಾನು
ಕ್ಕೊನ್ಱಿಯ ಪಣಿಕಣ್ ಮಱ್ಱು ಮುಳ್ಳನ ಪಲವು ಞ್ಚೆಯ್ತು
ನಿನ್ಱವೆಣ್ ಕವಿಕೈ ಮನ್ನ ನೀಙ್ಕವು, ನಿಕರಿ ಲನ್ಪರ್
ಮನ್ಱಿಟೈ ಯಾಟಲ್ ಚೆಯ್ಯು ಮಲರ್ಕ್ಕಟಿಲ್ ವಾಟ್ತ್ತಿ ವೈಕಿ,

852. ಚಿಲಪಕಲ್ ಕಟಿನ್ತು ಪಿನ್ಪು ತಿರುಕ್ಕಟ ವೂರಿ ನಣ್ಣಿ
ನಿಲವುತಮ್ ಪಣಿಯಿ ಱ್ಱಙ್ಕಿ ನಿಕಟುನಾ ಣಿಕರಿಲ್ ಕಾಟಿ
ತ್ತಲೈವರಾಮ್ ಪಿಳ್ಳೈ ಯಾರು ನ್ತಾಣ್ಟಕ ಚ್ಚತುರ ರಾಕು
ಮಲರ್ಪುಕ ಟರಚು ಙ್ಕೂಟ ವನ್ತೆಟು ನ್ತರುಳ ಕಣ್ಟು,

853. ಸಂತೋಷವು ಹೆಚ್ಚಲು ಅವರನ್ನು ಎದುರುಗೊಂಡು ಕೂಡಿ ಬಂದು ತನ್ನ ಮನೆಯನ್ನು ಸೇರಿ ಘನಭಕ್ತಿಯಲ್ಲಿ ಅವರ ಹಿರಿಮೆಗೆ ತಕ್ಕಂತೆ ಒಳ್ಳೆಯ ಷಡ್ರಸ ಯುತವಾದ ಭೋಜನವನ್ನು ಉಣ್ಣಿಸಿ, ಅವರ ಅನುಗ್ರಹವನ್ನು ಹೊಂದಿದುದಲ್ಲದೆ ಅದರೊಡನೆ ಸುವಾಸನೆಯುಳ್ಳ ಸುಂದರವಾದ ಕರ್ಣಿಕಾರ ಮಲರುಗಳಿಂದ ಅಲಂಕೃತ ನಾದ ಈಶ್ವರನ ಅನುಗ್ರಹವನ್ನೂ ಪಡೆದನು.

854. ಕಬ್ಬನ್ನು ಬಿಲ್ಲಾಗುಳ್ಳ ಮನ್ಮಥನನ್ನೂ, ಯಮನನ್ನೂ ದಂಡಿಸಿದ ಶಿವಪರಮಾತ್ಮನು ನೆಲಸಿದ ತಿರುಕ್ಕಡವೂರಿನಲ್ಲಿ ಕಲಯನಾರನು ನೆಲೆಯಾಗಿ ಬಾಳಿ ಭಕ್ತಿಯು ಮೇಲೂ ಮೇಲೂ ಅಧಿಕವಡೆಯಲು, ಸ್ಥಿರನಂಬಿಕೆಯುಂಟಾದ ಮನಸ್ಸಿನ ನೆಮ್ಮದಿಯು ಉಂಟಾದುದರಿಂದ ತಾನು ಮಾಡತಕ್ಕ ಹಲ ಕೈಂಕರ್ಯಗಳನ್ನು ಮಾಡಿ ಶಿವನ ಪಾದದ ನೆಳಲನ್ನು ಸೇರಿದನು.

855. ಜೇನುತುಂಬಿದ ಮಲರಮಾಲೆಯನ್ನು ಅಲಂಕರಿಸಿಕೊಂಡ, ಹೆಂಡತಿಯ ತಾಲಿಯನ್ನು ಕೊಟ್ಟು, ವೃತ್ತವಾದ ಶೀತಲ ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದ ಈಶ್ವರನಿಗೆ ತಕ್ಕ ಗುಗ್ಗುಲದ ಧೂಪದ ಕೈಂಕರ್ಯವನ್ನು ತಪ್ಪದೆ ನಡೆಸಿದ ಸ್ವಭಾವವೂ ವೈರಾಗ್ಯವೂ ಉಳ್ಳ ಕಲಯನಾರನನ್ನು ನಮಿಸಿ, ಅವನ ಅನುಗ್ರಹದ ಆಧಾರದಿಂದ, ಮಾನಕ್ಕಂಜಾಱನಾಯನಾರನ ಧರ್ಮಮಾರ್ಗವುಳ್ಳ ಹೆಚ್ಚಿನ ಕೈಂಕರ್ಯವನ್ನು ಇನ್ನು ಮೇಲೆ ಸ್ತುತಿಸಹೋಗುವೆನು.

---

853. ಮಾಱಿಲಾ ಮಕಿೞ್ಚ್ಚಿ ಪೊಙ್ಗ ವೆತಿರ್ಕೊಣ್ಡು ಮನೈಯಿಲೆಯ್ತಿ
ಯೂಱಿಲಾ ವನ್ಪಿನ್ ಮಿಕ್ಕಾರ್ ಕ್ಕಿನ್ನಮು ತೇಙ್ಗ ಮೂಟ್ಟಿಪ್ಪಾಲ್
ಆಱಿನಱ್ ಚುವೈಕ ಳೋಙ್ಗ ವಮೈತ್ತವ ರರುಳೇ ಯನ್ಱಿ
ನಾಱುಪೂ ಙ್ಕೊನ್ಱೈ ವೇಣಿ ನಮ್ಬರ್ತ ಮರುಳುಮ್ ಪೆಟ್ಟಾರ್.

854. ಕರುಪ್ಪುವಿ ಲ್ಲೋನೈ ಕ್ಕೂಱ್ಱೈ ಕ್ಕಾಯ್ನ್ತವರ್ ಕಟವೂರ್ ಮನ್ನಿ
ವಿರುಪ್ಪುಱು ಮನ್ಪು ಮೇನ್ಮೇಲ್ ಮಿಕ್ಕೆೞುಮ್ ವೇಟ್ಕೈ ಕೂರ
ಒರುಪ್ಪಟು ಮುಳ್ಳ ತ್ತನ್ಮೈ ಯಣ್ಮೈಯಾ ಲಮಕ್ಕು ನೇರ್ನ್ತ
ತಿರುಪ್ಪಣಿ ಪಲವು ಶೆಯ್ದು ಶಿವಪದ ನಿೞಲಿಱ್ ಚೇರ್ನ್ತಾರ್.

855. ತೇನಕ್ಕ ಕೋತೈ ಮಾತರ್ ತಿರುನೆಟು ನ್ತಾಲಿ ಮಾಱಿ
ಕ್ಕೂನಲ್ಪಿಱೈಯಿಱ್ ಸಾರ್ಕ್ಕು ಕ್ಕುಙ್ಗುಲಿ ಯಙ್ಗೊ ಟುತ್ತ
ಪಾನ್ಮೈತ್ತಿಣ್ ಕಲಯ ನಾರೈ ಪ್ಪಣಿನ್ತವ ರರುಳಿ ನಾಲೇ
ಮಾನಕ್ಕ ಞ್ಚಾಱರ್ ಮಿಕ್ಕ ವಣ್ಪುಕಟ್ ವಟುತ್ತ ಲುಱ್ಱೇನ್.

12. ಮಾನಕ್ಕಂಜಾಱ ನಾಯನಾರ

856. ಗೆಲ್ಲುಗಳಿಂದ ಕೋಲ್ಜೇನು ಸುರಿಯಲು, ಆ ಜೇನಿನ ರಸದಿಂದಾಗಿ ಸತ್ವವು ತುಂಬಿ ಬೆಳೆದ ಫಲಗಳ ರಸವು ಕಾಲುವೆಯಂತೆ ಹರಿಯುವ ಪ್ರವಾಹವು ಬಯಲಲ್ಲಿ ಬೆಳೆದ ಕಬ್ಬಿನ ರಸದ ದೊಡ್ಡ ತೊರೆಯನ್ನು ಕೂಡಿ, ಆ ರಸಗಳ ಸೇರುವಿಕೆಯು ಸುವಾಸನೆಯನ್ನು ಬೀರುವ ಊರಾದ 'ಕಂಜಾರೂರು' ಎಂಬುದು, ಆಕಾಶಗಂಗೆಯನ್ನು ಕೆಂಜೆಡೆಯ ಮೇಲಿಟ್ಟುಕೊಂಡ ಶಿವಪರಮಾತ್ಮನು ಆಶಿಸಿ ವಾಸಿಸಿಕೊಂಡು ಇರುವುದೂ, ತಮಿಳು ಗ್ರಂಥಗಳನ್ನು ಯುಕ್ತವಾದ ಮಾರ್ಗದಿಂದ ಚೆನ್ನಾಗಿ ಕಲಿತ ವಿದ್ವಾಂಸರುಗಳಿಂದ ಹಾಡಿ ಹೊಗಳಲ್ಪಡುವ ಮೇಲ್ಮೆಯುಳ್ಳುದೂ ಆಗುವುದು.

857. ನೀಲಮಲರಂತಿರುವ ಕಣ್ಣುಗಳುಳ್ಳ ರೈತ ಹೆಣ್ಣುಗಳು, ಕೀಳುವ ಕಳೆ ಹುಲ್ಲುಗಳಿಂದ ತಪ್ಪಿ ಒಂದು ಪಕ್ಕ ಸೇರಿಕೊಂಡು, ನೀರು ಒಳಗೆ ಸೇರಿದುದರಿಂದ ಒಳ್ಳೇ ಕೊಬ್ಬಿ ನಿಂತು, ಹೂವಿನೆಡೆಯಲ್ಲಿ ಕೆಂಪನ್ನು ತೋರುವ ತಣ್ಣೀರಿನಲ್ಲಿ ಅರಳುವ ಹೂವಾದ, ಮೃದುವಾದ ಕೆಂಪಗಾದ ನೀಲೋತ್ಪಲ ಹೂವಿಗೆ ದೊಡ್ಡ ನೆಲ್ಲ ಕದಿರುಗಳು ಓರೆಯಾಗಿ ನಮಿಸುವ, ಮಣ್ಣು, ನೀರು ಎಂಬೆರಡು ಬಗೆಯ ಸಂಪತ್ತು ಹೆಚ್ಚಾಗಿ ಇರುವ ಸಂಪತ್ಸ ಮೃದ್ಧಿಯಾದ ಬಯಲುಗಳು ಆ ಊರ ಪಕ್ಕಗಳಲ್ಲಿವೆ.

858. ಕೂಟವಾಗಿ ಅಲ್ಲಿ ವಾಸಿಸುವ ರೈತ ಹೆಣ್ಣುಗಳ ಹಿಂದಲೆಯು, ಮೇಘಗಳಿಗೆ ಸಮಾನವಾದ ಕೂದಲನ್ನು ಕಾಣಿಸಲು, ನಡುವಾದುದು ಬನದಲ್ಲಿರುವ ನವಿಲಿನ ಇನಿದಾದ ತೋರ್ಕೆಯನ್ನು ಕಾಣಿಸಿ ಅಲ್ಲಾಡಲು, ಮುಖವು ಮೊಲದ ಕಳಂಕವನ್ನುಳ್ಳ ಚಂದ್ರನನ್ನು ಅಪಹಾಸಮಾಡುವಂತೆ ಕಾಣಿಸಲು, ಒಳ್ಳೇ ಬೆಳೆದ ಕಯಲುಮೀನುಗಳು ಅವರ ಕಣ್ಣುಗಳಂತೆ ಕಾಣಿಸಲು, ಅಂತಹ ಮೀನುಗಳಿಗೆಡೆಯಾದ ಹಲ ತಟಾಕಗಳೂ ನೆಲ್ಲ ಕದಿರುಗಳನ್ನು ಮೇಲೆ ತೋರುವಂತೆ ಕಾಣಿಸಿ ನಿಲ್ಲುವ ದೊಡ್ಡ ಬಯಲುಗಳೂ ಅಲ್ಲಿವೆ

---

12. ಮಾನಕ್ಕಂಜಾಱ ನಾಯನಾರ್

856. ಮೇಲಾಱು ಚೆಞ್ಚಟೈಮೇಲ್ ವೈತ್ತವರ್‌ತಾಮ್ ವಿರುಮ್ಬಿಯತು
ನೂಲಾಱು ನನ್‌ಕುಣರ್‌ವೋರ್ ತಾಮ್ಪಾಟು ನೋನ್ಮೈಯತು
ಕೋಲಾಱು ತೇನ್‌ಪೊಟಿಯ ತ್ತೊಟುಙ್ಕನಿಯಿನ್ ಚಾಱೊಟುಕು
ಙ್ಕಾಲಾಱು ವಯಱ್ಕರುಮ್ಬಿನ್ ಕಮಟ್ಞಾಱೂರ್ ಕಞ್ಞಾಱೂರ್.

857. ಕಣ್ಣೀಲ ಕ್ಕಟೈಚಿಯರ್ಕಳ್ ಕಟುಙ್ಕಳೈಯಿಱ್ ಪಿಟಿತ್ತೊತುಙ್ಕಿ
ಉಣ್ಣೀರ್ಮೈ ಪುಣಚ್ಚಿಕ್ಕಣ್ ಉಱೈತ್ತಮಲರ್ ಕ್ಕಣ್‌ಚಿವಕ್ಕುಮ್
ತಣ್ಣೀರ್ಮೆನ್ ಕಟುನೀರ್ಕ್ಕು ತ್ತಟಙ್ಞಾಲಿ ತಲೈವಣಙ್ಕುವವ್
ಮಣ್ಣೀರ್ಮೈ ನಲಙ್ಚಿಱನ್ತ ವಳವಯಲ್ಕಳ್ ಉಳ ಅಯಲ್ಕಳ್.

858. ಪುಯಲ್ಕಾಟ್ಟ ಙ್ಕುನ್ತಲ್‌ಚಿಱು ಪುಱಙ್ಕಾಟ್ಟ ಪುನಮಯಿಲಿನ್
ಇಯಲ್ಕಾಟ್ಟ ಇಟೈಒತುಙ್ಕ ಇನಙ್ಕಾಟ್ಟುಮ್ ಉಟತ್ತಿಯರ್ಕಣ್
ಮುಯಲ್ಕಾಟ್ಟುಮ್ ಮತಿತೋಱ್ಕುಮ್ ಮುಕಙ್ಕಾಟ್ಟ ಕ್ಕಣ್‌ಮೂಱಿ
ಕ್ಕಯಲ್ಕಾಟ್ಟ ನ್ತಟಙ್ಕಳ್‌ಪಲ ಕತಿರ್‌ಕಾಟ್ಟ ನ್ತಟವಪ್ಪೈಕಳ್.

859. ಕೆಸರನ್ನು ಹೊಂದಿದ ಚೆಲುವಾದ ಶೀತಲವಾದ, ಮರುತ ನೆಲದ ಪಕ್ಕದ ಗದ್ದೆಯಲ್ಲಿ ಬೆಳೆದ, ಒಳ್ಳೇ ಸೊಗಸಾಗಿ ಉಳ್ಳ ಕೊಬ್ಬಿದ ನೆಲ್ಲ ಕದಿರು, ಎತ್ತರಕ್ಕೆ ಬೆಳೆದು, ಆ ಗದ್ದೆಯ ಪಕ್ಕದಲ್ಲಿ ಬೇರೆಯಾಗಿ ಪಕ್ಕದಲ್ಲುಳ್ಳ ದಟ್ಟವಾದ ಬೇಲಿಯು ಹಸಿಯ ಕವುಂಗು ಮರಗಳ ಕತ್ತಿನವರೆಗೆ ಬೆಳೆದು ಪ್ರತಿಯಾಗಿ ಎದ್ದ ಆ ಕವುಂಗುಗಳ ಬಲವಾದ ಗೊನೆಯನ್ನು ಮಂಡಲವಾಗಿ ಬಾಗಿಸಲು, ಅವು ತುಂಬಿಗಳಿಗೆಡೆಯಾದ ನಂದನದಲ್ಲಿ ಬಾಳುವ ರೈತರು ಆ ಗೊನೆಗಳನ್ನು ತುಂಡುಮಾಡುವ ನಿಡಿದಾದ ವೃತ್ತಾಕಾರದ ಕತ್ತಿಗಳಿಗೆ ಸಮಾನವಾಗಿ ಒಂದೊಂದೆಡೆಯಲ್ಲಿ ತೋರುವುವು.

860. ಪಕ್ಕಗಳಲ್ಲಿ ರತ್ನಮಯವಾದ ಹಲವು ಮನೆಗಳು ಮದಿಲುಗಳಿಂದ ಸುತ್ತುವರಿದು ಶೋಭಿಸುತ್ತಿವೆ. ಅವುಗಳ ಪಕ್ಕಗಳಲ್ಲಿ ಎತ್ತರವಾದ ದಿನ್ನೆಗಳೂ ಸುಂದರವಾದ ವಸ್ತ್ರದಿಂದ ಮಾಡಿದ ಧ್ವಜಗಳೂ ಇವೆ. ಬೀದಿಮಾರ್ಗವಾಗಿ ಹೋಗುವವರ ಜ್ಞಾನೇಂದ್ರಿಯಗಳನ್ನು ಹೂಬಾಣಗಳಿಂದ ಮರುಳಾಗಿಸುವ ಸ್ತನಗಳನ್ನುಳ್ಳ ಬಳ್ಳಿಯಂತಿರುವ ಹೆಣ್ಣುಗಳಿರುವ ಕೆಲಬೀದಿಗಳು ಎತ್ತರವಾದ ತೋರಣಗಳಿಂದಲೂ ಪೂರ್ಣಕಲಶಗಳಿಂದಲೂ ಕೂಡಿವೆ.

861. ಸುಂದರವಾದ ಸ್ವಭಾವವುಳ್ಳ ನವಿಲಿನಂತಿರುವ ಹೆಣ್ಣುಗಳು ನಟನವಾಡಲು, ಅದಕ್ಕೆ ತಕ್ಕುದಾಗಿ ಶಬ್ದಿಸುವ ಮೃದಂಗಗಳ ಸಂಭ್ರಮಗಳು ಹೆಚ್ಚಿರುವ ಬೀದಿಗಳುಳ್ಳ ಕಂಜಾರೂರು ಹಿರಿಮೆಹೊಂದಿದ ನೆಲೆಯಾದ ಗೃಹಸ್ಥಾಶ್ರಮದ ಆಚರಣೆಯಲ್ಲಿ ಬಂದ ಭಾಗ್ಯಗಳು ಹೆಚ್ಚಿ ಉಳ್ಳ, ಕೃಷಿಯ ಉಪ್ಯೋಗವಿರುವ ಭಾಗ್ಯವಂತ ಕುಟುಂಬಗಳಿಂದ ತುಂಬಿ ಶೋಭಿತವಾಗಿದೆ.

---

859. ಚೇಱಣಿತಣ್ ಪಟಿನವಯಲ್ ಜೆಟುನೆಲ್ಲಿನ್ ಕೊಟುಙ್ಕತಿರ್ಪೋಯ್
ವೇಱುರುಕು ಮಿಟೈವೇಲಿ ಪ್ಪೈಙ್ಕಮುಕಿನ್ ಮಿಟಱುರಿಞ್ಚಿ
ಮಾಱಿಟುಕಿಣ್ ಕುಲೈವಳೈಪ್ಪ ವಣ್ಟಲೈತ ಞ್ಞಲೈಯುಟೈಯರ್
ತಾಱಿರಿಯುವ್ ನೆಟುಙ್ಕೊಟುವಾಳ್ ಅನ್ನೈಯವುಳ ತನಿಇಟಙ್ಕಳ್.

860. ಪಾಙ್ಕುಮಣಿ ಪ್ಪಲವೆಯಿಲುವ್ ಕಲವೆಯಿಲುವ್ ಉಳಮಾಟವ್ ;
ಞ್ಞಾಙ್ಕರಣಿ ತುಕಿಱ್ಕೊಟಿಯುವ್ ನಕಿಱ್ಕೊಟಿಯುವ್ ಉಳ ಅರಙ್ಕುವ್ ;
ಓಙ್ಕುನಿಲೈ ತ್ತೋರಣಮುವ್ ಪೂರಣಕು ಮ್ಪಮುವ್ಉಳವಾಲ್
ಪೂಙ್ಕಣೈವೀ ತಿಯಿಲ್ಅಣ್ಣೈವೋರ್ ಪುಲಮಱುಕು ಞ್ಚಿಲಮಱುಕು.

861. ಮನ್ನೈಚಾಲುವ್ ನಿಲೈಯಱತ್ತಿನ್ ವಟಿವನ್ತ ವಳಮ್ಪೆರುಕುವ್
ವಿನ್ನೈಚಾಲುವ್ ಉಟವುತೊಟಿಲ್ ಮಿಕ್ಕಪೆರುಙ್ಕುಟಿ ತುವನ್ಱಿ
ಪ್ಪನ್ನೈಚಾಯಲ್ ಮಯಿಲನ್ನೈಯಾರ್ ನಟಮ್ಪುರಿಯ ಪ್ಪಕಲ್ ಮುಟಿವವ್
ಕನ್ನೈಚಾಱು ಮಿಟೈವೀತಿ ಕ್ಕಞ್ಚಾಱು ವಿಳಙ್ಕಿಯತಾಲ್.

862. ಸತ್ಯವಸ್ತುವನ್ನು ತಿಳಿದು ಅದನ್ನು ಚಿಂತನೆಯಲ್ಲಿ ಕೊಂಡವನೂ, ಪರಿಶುದ್ಧವಾದ ವೇಳಾಳವಂಶದ ಕ್ಷೇಮನಿಧಿಯಂತಿರುವ ಮೇಲ್ಮೆಯುಳ್ಳವನೂ ಆದ, ಮಾನಕ್ಕಂಜಾರನು ಆ ಸ್ಥಳದಲ್ಲಿ ಪರಂಪರೆಯಾಗಿ ಬಾಳುವ ಹಿರಿಮೆಯುಳ್ಳವನಾಗಿ ಅರಸರ ಸೇನಾಪತಿಯ ಕುಲವು ಪ್ರಕಾಶಿಸುವಂತೆ ಅವತರಿಸಿದನು.

863. ಆತನು ನಮ್ರತೆಯನ್ನು ಬಹಿರಂಗಪಡಿಸುವ ರೂಪುಳ್ಳವನು. ಹಾವಿನೊಡನೆ ಶೀತಲವಾದ ಚಂದ್ರನನ್ನೂ ಅಲಂಕಾರವಾಗಿ ಮಾಡಿಕೊಂಡ ಜಡೆಮುಡಿಯುಳ್ಳ ಶಿವಪರಮಾತ್ಮನಿಗೆ ಆಳಾಗಿರುವ ಯೋಗ್ಯತೆಯನ್ನು ಪಡೆದ ಕೊರತೆ ಇಲ್ಲದ ಹಿರಿಯ ಭಾಗ್ಯವನ್ನುಳ್ಳವನು. ಈಶ್ವರನ ಶ್ರೀಪಾದಗಳನ್ನು ಆಧಾರವಾಗಿ ಉಳ್ಳ ವೈರಾಗ್ಯವಂತ ಭಕ್ತರ ಕೈಂಕರ್ಯವನ್ನು ಮೇಲ್ಕೊಂಡವನು.

864. ಸಮಾನವಿಲ್ಲದ ಸಂಪತ್ತಿನ ಭಾಗ್ಯಗಳು ಹೆಚ್ಚಲು, ಆ ಭಾಗ್ಯಗಳೆಲ್ಲಾ, ಗಂಗಾನದಿಯು ಸಂಚರಿಸುವ ಜಡೆಮುಡಿಯುಳ್ಳ ಶಿವಪರಮಾತ್ಮನ ಅನಂತವಾದ ಭಕ್ತಿ ಸಂಪತ್ತುಳ್ಳವರಿಗೇ ಸೇರತಕ್ಕುದೆಂದು, ಅವೆಲ್ಲವನ್ನೂ ಆ ಭಕ್ತರು ನೇರವಾಗಿ ಕೇಳುವ ಮೊದಲೇ ಅವರ ಮನಸ್ಸಿನ ಅಭಿಲಾಷೆಯನ್ನೂ ತಿಳಿದು ಕೊಟ್ಟುಕೊಂಡು ಬಂದನು.

---

862. ಅಪ್ಪತಿಯಿಲ್ ಕುಲಪ್ಪತಿಯಾಯ್ ಅರಚರ್ಚೇ ನಾಪತಿಯಾಮ್
ಚೆಪ್ಪವರು ಙ್ಕುಟಿವಿಳಙ್ಕ ತ್ತಿರುಅವತಾ ರಞ್ಚೆಯ್ದಾರ್
ಮೆಯ್ಪ್ಪೊರುಳ್ಳೈ ಅಱಿನ್ದುಣರ್ನ್ದಾರ್ ವಿೞುಮಿಯವೇ ಳಾಣ್ಕುಟಿಮೈ
ವೈಪ್ಪನೈಯ ಮೇನ್ಮೈಯಿನಾರ್ ಮಾನಕ್ಕ ಞ್ಚಾಱನಾರ್.

863. ಪಣಿವುಟೈಯ ವಟಿವುಟೈಯಾರ್; ಪಣಿಯಿನೊಟುಮ್ ಪನಿಮತಿಯಿನ್
ಅಣಿವುಟೈಯ ಚಟೈಮುಟಿಯಾರ್ ಕ್ಕಾಳಾಕುಮ್ ಪತಮ್ಪೆಱ್ಱ
ತಣಿವಿಲ್ಪೆರುಮ್ ಪೇಱುಟೈಯಾರ್; ತಮ್ಪೆರುಮಾನ್ ಕೞಲ್ಚಾರ್ನ್ದ
ತುಣಿವುಟೈಯ ತೊಣ್ಡರ್ಕ್ಕೇ ಏವಲ್ಚೆಯು ನೊೞುಕಲ್ಪೂಣ್ಡಾರ್.

864. ಮಾಱಿಲ್ಪೆರು ಞ್ಚೆಲ್ವತ್ತಿನ್ ವಳಮ್ಪೆರುಕ ಮಱ್ಱತೆಲಾಮ್
ಆಱುಲವು ಞ್ಚಟೈಕ್ಕಱ್ರೈ ಅನ್ಱಣರ್ತಮ್ ಅಟಿಯಾರಾಮ್
ಈಱಿಲ್ಪೆರು ನ್ತಿರುವುಟೈಯಾರ್ ಉಟೈಯಾರೆನ್ ಱಿಯಾವೈಯುನೇರ್
ಕೂಱುವತನ್ ಮುನ್ಅವರ್ತ ಙ್ಕುಱಿಪ್ಪಱಿನ್ದು ಕೊಟುತ್ತುಳ್ಳಾರ್.

865. ವಿಶಾಲವಾದ ಕಡಲಿನಿಂದ ಸುತ್ತುವರಿದ ಭೂಲೋಕದಲ್ಲಿ ಶೋಭಿಸುವ ಇಂತಹ ಸ್ವಭಾವವುಳ್ಳವನಾದ ಆ ಹಿರಿಯನಿಗೆ ಹಲ ಕಾಲದಿಂದ ಪುತ್ರಭಾಗ್ಯವಿಲ್ಲದಿದ್ದುದರಿಂದ, ಆತನು ಅದನ್ನು ಪಡೆಯುವ ಉದ್ದೇಶದಿಂದ ಶಿವಾನುಗ್ರಹ ಪ್ರೇರಣೆಯಿಂದ ವಿಷ್ಣುವೂ ತಿಳಿಯಲಾಗದ ಶಿವಪರಮಾತ್ಮನ ಹೂವಿನಂತಹ ಅಡಿಗಳನ್ನು ಮನದಲ್ಲಿ ಧ್ಯಾನಿಸಿದನು.

866. ಕುಳೆ (ಓಲೆ) ಯನ್ನು ತಾಳಿ ಜೋತು ಅಲ್ಲಾಡುವ ಕಿವಿಯನ್ನುಳ್ಳ ನಟರಾಜಪರಮಾತ್ಮನ ಅನುಗ್ರಹದಿಂದ, ಮಳೆಗೆ ಸಹಾಯ ಮಾಡುವ ಹಿರಿಯ ಪಾತಿವ್ರತ್ಯವನ್ನುಳ್ಳ ಗೃಹಿಣಿಯರಿಂದ, ಕರ್ಮದಿಂದ ಸುತ್ತುವರಿದ ಈ ಜನ್ಮಗಳ ಸುಳಿಯಿಂದ ತಪ್ಪಿಸುವ ಮಾರ್ಗವನ್ನು ಕಾಣುವಲ್ಲಿ ತನಗೆ ಸಹಾಯವಾಗಲು, ವಂಶದ ಕುಡಿಯಂತಹ ಹೆಣ್ಣುಮಗಳನ್ನು ನಾಯನಾರನು ಪಡೆದನು.

867. ಮಗಳನ್ನು ಪಡೆದ ಹಿರಿಯ ಸಂತೋಷದಿಂದ ಆ ಹಳೆಯೂರು ಆನಂದದಿಂದ ಹೆಚ್ಚು ಹಿರಿಮೆಯನ್ನು ಹೊಂದಲು, ಸಂಗೀತದ ಪೂರ್ಣತೆಯುಳ್ಳ ಮಂಗಲವಾದ್ಯಗಳು ಮೊಳಗಲು, ಶಿವಧರ್ಮದ ನೆಲೆಯಾದ ಭಕ್ತರುಗಳಿಗೆಲ್ಲಾ ಅಳತೆಗೆ ಸಿಗದಷ್ಟು ದೊಡ್ಡ ಭಾಗ್ಯದಂತಹ ಕೊಡುಗೆಗಳನ್ನು ವಿಶೇಷವಾಗಿ ಮಾಡಿ, ರಕ್ಷಣೆ ಮಾಡುವ ದಾದಿಯರು ಮಗುವನ್ನು ಲಾಲನೆಮಾಡಲು, ಚಿನ್ನದ ಕುಡಿಯಂತಿರುವ ಆ ಹೆಣ್ಣು ಮಗುವನ್ನು ನಾಯನಾರನು ಬಳೆಸುವವನಾದನು.

---

865. ವಿರಿಕಟಲ್ ಚೂಟ್ ಮಣ್ಣುಲಕ್ಕೈ ವಿಳಕ್ಕಿಯಿಞ ತ್ತನ್ ಮೈಯರಾಮ್
ಪೆರಿಯವರ್ಕ್ಕು ಮುನ್ ಚಿಲನಾಟ್ ಪಿಳ್ಳೈಪ್ಪೇ ಱಿನ್ ಮೈಯಿನಾಲ್
ಅರಿಯಱಿಯಾ ಮಲರ್ಕ್ಕಟಲ್ ಕಳ್ ಅಱಿಯಾಮೈ ಅಱಿಯಾತಾರ್
ವರುಮಕವು ಪೆಱಱ್ ಪೊರುಟ್ಟು ಮನತ್ತರುಳಾಲ್ ವಟುತ್ತಿನಾರ್.

866. ಕುಟೈಕ್ಕುಲೈಯಯುಮ್ ವಟಿಕಾತಿಲ್ ಕೂತ್ತನಾರ್ ಅರುಳಾಲೇ
ಮಟೈಕ್ಕುತವುಮ್ ಪೆರುಙ್ಕಱ್ ಪಿನ್ ಮನೈಕ್ಕಿಟಿತ್ತಿ ಯಾರ್ತಮ್ ಪಾಲ್
ಇಟೈಕ್ಕುಮ್ ವಿನೈ ಪ್ಪಯನ್ ಚೂಟ್ನ್ತ ಇಪ್ಪಿಱವಿ ಕ್ಕೊಟುಙ್ಚುಟಲ್
ಪಿಟೈಕ್ಕುತೆಱ ತಮಕ್ಕುತವ ಪ್ಪೆಣ್ ಕೊಟಿಯೈ ಪ್ಪೆಱಿಟುತ್ತಾರ್.

867. ಪಿಱನ್ತಪೆರು ಮಕಿಟ್ಚ್ಚಿಯಿನಾಲ್ ಪೆರುಮೂತೂರ್ ಕಳಿಚಿಱಪ್ಪ
ಚ್ಚಿಱನ್ತನಿಱೈ ಮಙ್ಕಲತೂ ರಿಯಮ್ಮುಟಙ್ಕ ತ್ತೇವರ್ ಪಿರಾನ್
ಅಱನ್ತಲೈನಿನ್ ಱವರ್ಕ್ಕೆಲ್ಲಾಮ್ ಅಳವಿಲ್ ವಳ ತ್ತರುಳ್ ಪೆರುಕ್ಕಿ
ಪ್ಪುಱನ್ತರುವಾರ್ ಪೋಱ್ಱಿಚ್ಚೈಪ್ಪ ಪ್ಪೊಱ್ ಕೊಟಿಯೈ ವಳರ್ಕ್ಕಿನ್ ಱಾರ್.

868. ಕಾಪ್ಪಿ[1]ನಿಂದ ಅಲಂಕೃತವಾಗುವ ಬಾಲ್ಯವನ್ನು ಕಳೆದು, ತುಂಬಿಗಳು ಮುಸುರುವ ಸುವಾಸನಾಯುಕ್ತವಾದ ಹೂಗಳನ್ನು ಮುಡಿಯುವ ಸುರುಳಿದ ಕೂದಲೂ, ಹೊನ್ನಿನಿಂದ ಮಾಡಿದ ಕುಂಡಲವೂ ಒಂದಾಗಿ ಜೋಲಾಡಲು, ನುಣುಪಾದ ಸಣ್ಣ ಮಣಿಗಳನ್ನುಳ್ಳ ಮೇಖಲೆಯಿಂದ ಅಲಂಕೃತವಾದ ಪಾವಡೆಯೊಡನೆ (ಲಂಗದೊಡನೆ) ಕೋದಿರುವ ಕಿಂಕಿಣಿಯು ಶಬ್ದಿಸಲು, ಎಳತಳಿರಂತಹ ಮೃದುವಾದ ಅಡಿಗಳಿಂದ ಆ ಮಗು ಮೆದುವಾಗಿ ನಡೆದುದು.

869. ಉತ್ತಮೆಯಾದ ಆ ಹೆಣ್ಣು, ತನ್ನನ್ನು ಪಾಲನೆಮಾಡುವ ದಾದಿಯರು ಸುತ್ತುವರಿಯಲು, ಅವರ ನಡುವಿನಲ್ಲಿ ಮನೆಯ ಸುಂದರವಾದ ಅಂಗಣದಲ್ಲಿ, ಮಲರಂತಹ ಮೃದುವಾದ ಕೈಗಳಿಂದ, ಮಣಲಿನಿಂದ ಸಣ್ಣ ಮನೆಯನ್ನು ಕಟ್ಟಿ ಕಾಲಿನ ಕಡಗಗಳಲ್ಲಿರುವ ಮಣಿಗಳು ಅಲ್ಲಾಡಿ ಶಬ್ದಿಸುವಂತೆ ಗಜ್ಜುಗೆ ಆಡುವುದೇ ಮೊದಲಾದ ಆಟಗಳನ್ನು ಅಭ್ಯಾಸಮಾಡಿ ಮೊಲೆಗಳು ಮೊಗ್ಗಿನಂತೆ ತೋರುವ ಹುಡುಗಿಯ ಮಟ್ಟವನ್ನು ಪಡೆದಳು.

870. ಸೌಂದರ್ಯವು ಶರೀರದಿಂದ ಹೊಮ್ಮುತ್ತಿರಲು, ಮಿಂಚಿನಂತಿರುವ ನಡುವನ್ನು ಪಡೆದ ಸ್ತನಗಳು ಮನವನ್ನು ವ್ಯಥೆಗೊಳಿಸುತ್ತಿರಲು, ಎಳೆನಗುವು ಹೊರಗೆ ಸರಿಯಾಗಿ ಕಾಣಿಸದಂತೆ ಮುಗಿದ ಮುತ್ತನ್ನು ಹೋಲುವ ಸುವಾಸನೆಯುಳ್ಳ ಮೊಗ್ಗಿನಂತಹ ಹಲ್ಲುಗಳನ್ನೂ, ಮೃದುವಾದ ಲತೆಯಂತಿರುವ ನಡುವನ್ನೂ, ಶೀತಲವಾದ ಸುರುಳಿ ಕೂದಲನ್ನೂ, ಸುಂದರವಾದ ತಳಿರಂತಿರುವ ಕೆಂಪಗಾದ ಕೈಯನ್ನೂ ಉಳ್ಳ, ದೋಷವಿಲ್ಲದ ಕುಲದಲ್ಲಿ ಉದಯಿಸಿದ ಲತೆಯ ಎಳೆಕುಡಿಯಂತಿರುವ ಆ ಹೆಣ್ಣಿಗೆ ವಿವಾಹದ ಪರ್ವವು ಬಂದು ಸೇರಲು,

---

868. ಕಾಪ್ಪಣಿಯು ಮಿಳಜ್ಞ್ಕುಟಿವಿ ಪ್ಪತನೀಙ್ಕ್ಕಿ ಕ್ಕಮಟಿ್ಚುರುಮ್ಪಿನ್
ಪೂಪ್ಪಯಿಲು ಞ್ಱುರುಟ್ಕುಟಲುಮ್ ಪೊಲಜ್ಞ್ಕುಟ್ಕ್ಕೈಯು ಮುಟನ್ಱಾಟಿ
ಯಾಪ್ಪುಱುಮೆನ್ ಚಿಱುಮಣಿಮೇ ಕಲೈಯಣಿಚಿ ಱ್ಱಾಟ್ಟೈಯುಟನ್
ಕೋಪ್ಪಮೈಕಿಣ್ ಕಿಣಿಯಚ್ಚೈಯ ಕ್ಕುಱುನ್ತಳಿರ್ಮೆ ಲ್ಲಟಿಯೊತುಙ್ಕ್ಕ,

869. ಪುನೈಮಲರ್ಮೆನ್ ಕರಙ್ಕಳಿನಾಱ್ ಪೋಱ್ಱಿಯತಾ ತಿಯರ್ನಟುವಣ್
ಮನೈಯಕತ್ತು ಮಣಿಮುನ್ಱಿನ್ ಮಣಱ್ಚಿಱ್ಱಿ ಲಿಟಿೖತ್ತುಮಣಿ
ಕ್ಕನೈಕುರನೂ ಪುರಮಲೈಯ ಕ್ಕಟಿನ್ಮುತಲಾ ಪ್ಪಯಿನ್ಱುಮುಲೈ
ನನೈಮುಕಙ್ಕ್ಚಿಯ್ ಮುತಱ್ಪರುವ ನಣ್ಣಿನಳ ಪ್ಪೆಣ್ಣಮುತಮ್.

870. ಉಱುಕವಿನ್ಮೆಯ್ ಪ್ಪುಱಮ್ಪೊಲಿಯ ಒಳಿನುಚುಪ್ಪೈಲ ಮುಲೈವರುತ್ತ
ಮುಱುವಲ್ಪುಱ ಮಕಲಾತ ಮುಕಿಣ್ಮುತ್ತ ನಕೈಯೆನ್ನುಮ್
ನಱುಮುಕೈಮೆನ್ ಕೊಟಿಮರುಙ್ಕು ನಳಿರ್ಚ್ಚುರುಳನ್ ತಳಿರ್ಚ್ಚೆಙ್ಕೈಕಲ
ಮಱುವಿಲ್ಕುಲ ಕ್ಕೊಟಿನಿನ್ನುಕ್ಕು ಮಣಪ್ಪರುವಮ್ ವನ್ತಣೈಯ,

---

1. ಕಾಪ್ಪು – ರಕ್ಷಣೆಗಾಗಿ ಇಡುವ ಲೋಹದ ಒಂದು ಬಳೆ.

871. ಲಕ್ಷ್ಮಿಗೂ ಮೇಲಾಗಿ ಶೋಭಿಸುವ ಕೆಂಪುಮಣಿಯ (ಮಾಣಿಕ್ಯದ) ದೀಪದಂತಿರುವ, ಸಮಾನವಿಲ್ಲದ ಆ ಪೆಣ್ಮಣಿಯನ್ನು, ಶ್ರೇಷ್ಠವಾದ ವೇಳಾಳ ಕುಲದಲ್ಲಿ ಸಮಾನವಾದ ವಂಶದಲ್ಲಿ ಬಂದವಳಾಗಿ, ತಿರುನೀಲಕಂಠವನ್ನುಳ್ಳ ವೇದಿಯರಾದ ಶಿವಪರಮಾತ್ಮನಿಗೆ ಭಕ್ತನಾದ ವೀರಗೆಜ್ಜೆಯನ್ನು ಧರಿಸಿದ ಏಯರ್‌ಕೋಣ್ ಕುಲದ ಕಲಿಕ್ಕಾಮನಾರನಿಗೆ ವಿವಾಹದ ವಿಷಯ ಮಾತನಾಡುವುದಕ್ಕೆ ಹಿರಿಯರಾದ ಮುದಿಯರು ಬಂದು ಸೇರಿದರು.

872. ಈ ರೀತಿ ಬಂದ ಜ್ಞಾನವೃದ್ಧರನ್ನು ಮಾನಕ್ಕಂಜಾಱನು ಹಿರಿಯರ ವಿಧಿಯಂತೆ ಹಾರ್ದಿಕವಾಗಿ ಸ್ವಾಗತಿಸಿ, ಅವರು ಹೇಳಿದ ವಿವಾಹದ ಕುರಿತಾದ ಮಾತುಗಳನ್ನು ಕೇಳಿ, ನಮ್ಮ ವಂಶಕ್ಕೆ ತಕ್ಕುದಾಗಿ ಇದು ಹೊಂದಿಕೆಯಾಗುವುದೆಂದು ಮನಸ್ಸಂತೋಷದೊಡನೆ ಹೇಳಿ ತಮ್ಮ ಮಗಳನ್ನು ವಿವಾಹಮಾಡಿ ಕೊಡಲು ಸಮ್ಮತಿಸಿ ಅವರನ್ನು ಕಳುಹಿಸಿಕೊಟ್ಟನು.

873. ಆ ವೃದ್ಧರು ಮಾನಕ್ಕಂಜಾಱನು ವಿವಾಹವನ್ನು ಸಮ್ಮತಿಸಿದನೆಂಬ ವೃತ್ತಾಂತವನ್ನು ಹೇಳಲು, ಮಲೆಯಂತಿರುವ ತೋಳುಗಳುಳ್ಳ ಏಯರ್ ಕೋಣಾರನು (ಕಲಿಕ್ಕಾಮನಾರನು) ಅದನ್ನು ಕೇಳಿ ವಿವಾಹಕ್ಕಾಗಿ ಮಿಕ್ಕಿದ ಆಶೆಯನ್ನು ಕೊಂಡು ಇದ್ದವನಾಗಲು, ಈ ನೆಲೆಯಲ್ಲಿ ಎರಡು ಪಕ್ಕದವರಿಗೂ ಹೊಂದುವುದಾದ ವಿವಾಹವನ್ನು ಮಾಡುವುದಕ್ಕೆ ತಕ್ಕ ಮಂಗಲದಿನವನ್ನು, ಅದಕ್ಕೆ ತಕ್ಕ ಜ್ಯೋತಿಷ್ಯ ಮೊದಲಾದ ಶಾಸ್ತ್ರಗಳಲ್ಲಿ ಸೂಕ್ಷ್ಮಮತಿಗಳಾದವರು ನಿಶ್ಚೈಸಿದರು.

---

871. ತಿರುಮಕಟ್ಕು ಮೇಲ್‌ವಿಳಙ್ಗು ಞ್ಚೆಮ್ಮಣಿಯಿನ್ ಱೀಪಮೆನು
ಮೊರುಮಕಳೈ ಮಣ್ಣುಲಕಿ ಲೋಙ್ಗುಕುಲ ಮರಪಿನರಾಯ್
ಕ್ಕರುಮಿಟಱ್ಱು ಮಱೈಯವನಾರ್ ತಮರಾಯ ಕೞಲೇಯರ್
ಪೆರುಮಕಱ್ಕು ಮಕಟ್ಪೇಚ ವನ್ತಣೈನ್ತಾರ್ ಪೆರುಮುತಿಯೋರ್.

872. ವನ್ತವರೂ ತಱೈವೋರೈ ಮಾನಕ್ಕ ಞ್ಚಾಱನಾರ್
ಮುನ್ತೈಮುಱೈ ಮೈಯಿನ್‌ವಿರುಪ್ಪು ಮೊಟಿನ್ತಮಣ ತ್ತಿರಙ್ಕೇಟ್ಟೇ
'ಎನ್ತಮತು ಮರಪಿನುಕ್ಕು ತ್ತಿರುಪ್ಪರಿಚಾ ಲೇಯು' ಮೆನ
ಚಿನ್ತೈಮಕಿೞ್ ವುಱವುರೈತ್ತು ಮಣನೇರ್ನ್ತು ಚೆಲವಿಟ್ಟಾರ್.

873. ಚೆನ್ಱವರು ಙ್ಕಞ್ಚಾಱರ್ ಮಣಮಿಚೈನ್ತ ಪಟಿಚೆಪ್ಪ
ಕ್ಕುನ್ಱನೈಯ ಪುಯತ್ತೇಯರ್ ಕೋನಾರು ಮಿಕವಿರುಮ್ಪಿ
ನಿನ್ಱನಿಲೈ ಮೈಯಿನಿರಣ್ಟು ತಿಱತ್ತಾರ್ಕ್ಕು ನೇರ್ವಾಯ
ಮನ್ಱಲ್‌ವಿನೈ ಮಙ್ಗಲನಾಣ್ ಮತಿನೂಲ್ವ ಲ್ಲವರ್ವಕುತ್ತಾರ್.

874. ವಿವಾಹಯೋಗ್ಯಳಾದ ಮಗಳನ್ನು ಪಡೆದ ತ್ಯಾಗಿಯಾದ ಮಾನಕ್ಕಂಜಾರನು ಮಂಗಲಕ್ಕೆ ತಕ್ಕುದಾದ ಕಾರ್ಯಗಳನ್ನು ಮಾಡಲಾಶಿಸಿ, ತನ್ನ ಕುಲದಲ್ಲುಳ್ಳ ವಿಶ್ವ ಸಂಬಂಧಿಕರೆಲ್ಲ ಹಿರಿ ಸಂತಸಗೊಳ್ಳಲು, ನವಧಾನ್ಯಗಳ ಬಿಳಿ ಮೊಳಕೆಯನ್ನು ಬಿತ್ತಿದ ಸಣ್ಣ ಸಣ್ಣ ಹೊನ್ನಪಾತ್ರೆಗಳನ್ನು ಎಡೆಯೆಡೆಯಲ್ಲಿ ಒತ್ತೊತ್ತಾಗಿಟ್ಟು ಸುವಾಸನೆಯುಳ್ಳ ಶೀತಲವಾದ ನಂದನಗಳುಳ್ಳ ಆ ಹಳೆಯ ನಗರವನ್ನು ವಿವಾಹ ವೈಭವವು ಉಂಟಾಗುವಂತೆ ಹೊಂದಿಕೆಯಾಗುವಂತೆ ಅಲಂಕರಿಸಿದನು.

875. ಮಾನಕ್ಕಂಜಾಱನು ತನ್ನ ಮಗಳನ್ನು ಕೊಡಲು, ಆ ಪೆಣ್ಮಣಿಯನ್ನು ಹೆಂಡತಿಯಾಗಿ ಪಡೆದು ಕೈಹಿಡಿಯಲು ಬರುವ, ದೋಷವಿಲ್ಲದ ಕೀರ್ತಿಯನ್ನೂ ಹಿರಿಮೆ ಗರಿಮೆಯನ್ನೂ ಉಳ್ಳ ಏಯರ್ ಕುಲಕ್ಕೆ ನಾಯಕನಾದ ಕಲಿಕ್ಕಾಮನೂ, ತನ್ನ ಯೋಗ್ಯತೆಗೆ ಅನುರೂಪರಾದ ಸಂಬಂಧಿಕರೆಲ್ಲರೂ ಕೂಟವಾಗಿ ಸೇರಿ, ಅವರು ಇನಿದಾದ ವಾದ್ಯಗಳು ಶಬ್ದಿಸಲು, ಮುಗಿಲುಗಳು ಸೇರಿದ ಹೂದೋಟಗಳಿಂದ ಸುತ್ತುವರಿದ ಕಂಜಾರೂರ ಪಕ್ಕದಲ್ಲಿ ಬರಲು,

876. ತ್ಯಾಗಿಗಳಾದ ಕಲಿಕ್ಕಾಮನ ವಿವಾಹದ ಪ್ರಯಾಣವು ಆ ಕಂಜಾರೂರ ಪಕ್ಕದಲ್ಲಿ ಸೇರುವುದಕ್ಕೆ ಮೊದಲು, ಮಲರಂತಿರುವ ಕಣ್ಣುಳ್ಳ, ಪ್ರಕಾಶಯುಕ್ತವಾದ ಆಭರಣದಿಂದಲಂಕೃತವಾದ ಹೆಣ್ಣನ್ನು ಹೆತ್ತವರ ಮನೆಗೆ ಒಂದು ಮಾರ್ಗವಾಗಿ, ಮೇಲೆ ಹೊರಳುವ ಅಲೆಗಳುಳ್ಳ ಕಡಲಿನಿಂದ ಸುತ್ತುವರಿದ ಲೋಕವು ಉಜ್ಜೀವಿಸುವುದಕ್ಕಾಗಿ ಅವನ (ಮಾನಕ್ಕಂಜಾಜನ) ಅಂತರಂಗದಲ್ಲಿ ನೆಲಸಿದ ಪರವಸ್ತುವೂ ದೇವದೇವನೂ ಆದ ಶಿವಪರಮಾತ್ಮನು ಮುನಿವರನ ವೇಷವನ್ನು ಧರಿಸಿ ಬರುವವನಾದನು.

---

874. ಮಙ್ಗಲಮಾ ಇೞೈಯಲ್ವಿರುಮ್ಬಿ ಮಕಟ್ಪೆಯನ್ತ ವಳ್ಳಲಾರ್
ತಙ್ಗುಲನೀಳ್ ಚುಱ್ಱಮೆಲಾ ನ್ತಯಙ್ಗುಪೆರು ಙ್ಗಳಿಚಿಱಪ್ಪ
ಪ್ಪೊಙ್ಗಿಯವೆಣ್ ಮುಳೈಪ್ಪೆಯ್ತು ಪೊಲಙ್ಗಲಙ್ಗ ಳಿಟ್ಟೆನೆರುಙ್ಗ
ಕೊಙ್ಗಲರ್ತಣ್ ಪೊೞಿಱ್ಮೂತೂರ್ ವತುವೈಮುಕ ಙ್ಗೊೞಿತ್ತಾರ್.

875. ಕಞ್ಜಾಱರ್ ಮಕಟ್ಕೊಟುಪ್ಪ ಕೈಪ್ಪಿಟಿಕ್ಕ ವರುಕಿನ್ಱ
ಎಞ್ಜಾತ ಪುಕೞ್ಪ್ಪೆರುಮೈ ಯೇಯರ್ಕುಲ ಪ್ಪೆರುಮಾನು
ನ್ತಞ್ಜಾಲ್ಪು ನಿಱೈಚುಱ್ಱ ನ್ತಲೈನಿಱೈಯ ಮುರಚಿಯಮ್ಪ
ಮಞ್ಜಾಲು ಮಲರ್ಚ್ಚೋಲೈ ಕ್ಕಞ್ಜಾಱ್ಱಿನ್ ಮರುಙ್ಗಣೈಯ,

876. ವಳ್ಳಲಾರ್ ಮಣಮಪ್ಪೋರ್ ಮರುಙ್ಗಣೈಯಾ ಮುನ್ಮಲರ್ಕ್ಕಣ್
ಒಳ್ಳಿೞೈಯೈ ಪ್ಪಯನ್ತಾರ್ತ ನ್ತಿರುಮನೈಯಿ ಲೊರುವೞಿಯೇ
ತೆಳ್ಳುತಿರೈ ನೀರುಲಕ ಮುಯ್ಯ್ವತಙ್ಗ ಮಱ್ಱವರ್ತಮ್
ಉಳ್ಳನಿಲೈ ಪ್ಪೊರುಳಾಯ ವುಮ್ಪರ್ಪಿರಾನ್ ಱಾಮಣೈವಾರ್.

877. ತ್ರಿಪುಂಡ್ರವಾಗಿ ವಿಭೂತಿಯನ್ನು ಧರಿಸಿದ, ನೆತ್ತಿಯ ಮೇಲೆ ಮುಂಡನ ಮಾಡಿದ, ತಲೆಯಲ್ಲಿ ಇಟ್ಟ ಶಿಖೆಯ ಕೊನೆಯಲ್ಲಿ ಸುರಿದು ಅಲಂಕರಿಸಿದ ಎಲುಬು ಮಣಿಯೂ, ಹಿಂದೊಂದು ಕಾಲದಲ್ಲಿ ವಿಷ್ಣುವಿನ ಬರಿಯ ಅಸ್ಥಿಪಂಜರದ ಪೂರ್ಣ ಎಲುಬುಗಳನ್ನು ಕೊಂಡ ಆ ದಿನದಲ್ಲಿ ಆ ಎಲುಬನ್ನು ಕಡೆದು ತೆಗೆದ ಬಿಳಿಯ ಮುತ್ತುಗಳಂತೆ ಶೋಭಿಸುವ ಕಿವಿಗಳಲ್ಲಿ ಅಲ್ಲಾಡುವ ಕುಂಡಲವೂ,

878. ಆ ಎಲುಬಿನಿಂದ ಮಾಡಿದ ಕಾಂತಿಯುಕ್ತವಾದ ಮಣಿಗಳನ್ನು ಕೋದು ಅಲಂಕರಿಸಿಕೊಂಡು ಜೋಲುವ ಮಾಲೆಯೂ, ಹೆಡೆಯನ್ನುಳ್ಳ ದೊಡ್ಡ ಹಾವಿನ ಸ್ಥಾನದಲ್ಲಿ ತೋಳಿನಲ್ಲಿ ಧರಿಸುವ ಯೋಗಪಟ್ಟಿಯಾದ ಉತ್ತರೀಯವೂ, ಕಪ್ಪಾದ ರೋಮದಿಂದ ಹಗ್ಗವಾಗಿ ಹುರಿಮಾಡಿದ ಜನಿವಾರವೂ, ಋಜುಸ್ವಭಾವದ ಮನಸ್ಸನ್ನುಳ್ಳ ಭಕ್ತರ ಜನ್ಮವನ್ನು ನಿವಾರಿಸುವ ವಿಭೂತಿಯ ಚೀಲವೂ,

879. ಮುಂಗೈಯೆಡೆಯಿಂದ ಒಂದು ಎಲುಬುಮಣಿಯನ್ನು ಸುರಿದು ಧರಿಸಿದ ಶೋಭಿಸುವ ಹಗ್ಗವೂ, ಅಸಾಧ್ಯವಾದ ವೇದಗ್ರಂಥಗಳಾದ ಕೋವಣದ ಮೇಲೆ ಕಟ್ಟಿದ ನಡುವಿನ ವಸ್ತ್ರವೂ, ಪಾದದಲ್ಲಿ ಪಂಚಮುದ್ರೆಗಳೂ (ಪದ್ಮ, ಶಂಖ, ಮಕರ, ಚಕ್ರ, ದಂಡ ರೇಖೆಗಳೂ) ಹೆಚ್ಚಾಗಿ ಶೋಭಿಸಲು,

---

877. ಮುಣ್ಣನಿಱೈ ನೆಱ್ಱಿಯಿನ್‌ಮೇನ್ ಮುಣ್ಣಿತ್ತ ತಿರುಮುಟಿಯಿಱ್
ಕೊಣ್ಣಚಿಕೈ, ಮುಚ್ಚಿಯಿನ್‌ಕಟ್ ಕೋತ್ತಣಿನ್ತ ವೆಱ್ಪುಮಣಿ,
ಪಣ್ಟೊರುವ ನುಟಲಙ್ಕುಮ್ ಪರಿತ್ತನಾ ಳತುಕಟೈನ್ತ
ವೆಣ್ಟರಳ ಮೆನಕ್ಕಾತಿನ್ ಮಿಚೈಯಚೈಯು ಙ್ಕುಣ್ಣಲಮುಮ್,

878. ಅವ್ವೆನ್‌ಪಿ ನೊಳಿಮಣಿಕೋ ತ್ತಣಿನ್ತತಿರು ತ್ತಾಟ್ವಟಮುಮ್,
ಪೈವನ್‌ಪೇ ರರವೊಟಿಯ ತ್ತೋಳಿಲಿಟುಮ್ ಪಟ್ಟಿಕೈಯು,
ಮೈವನ್ತ ನಿಱಕ್ಕೇಚ ವಟಪ್ಪೂಣು ನೂಲು, ಮನ
ಚ್ಚೆವ್ವನ್‌ಪರ್ ಪವಮಾಱ್ಱು ನ್ತಿರುನೀಱ್ಱು ಪ್ಪೊಕ್ಕಣಮುಮ್,

879. ಒರುಮುನ್‌ಕೈ ತ್ತನಿಮಣಿಕೋ ತ್ತಣಿನ್ತವೊಳಿರ್ ಚೂತ್ತಿರಮುಮ್,
ಅರುಮಱೈನೂಱ್ ಕೋವಣತ್ತಿನ್ ಮಿಚೈಯಚೈಯುನ್
ತಿರುವುಟೈಯುಮ್,
ಇರುನಿಲತ್ತಿನ್ ಮಿಚೈತ್ತೋಯ್‌ನ್ತ ವೆಟಿತರಿಯ ತಿರುವಟಿಯುನ್,
ತಿರುವಟಿಯಿ ಱಿರುಪ್ಪಞ್ಚ ಮುತ್ತಿರೈಯು ನ್ತಿಕಟ್‌ನ್ತಿಲಙ್ಕ,

880. ಬೆಂಕಿಯ ಮೇಲೆ ಮುಚ್ಚಿದ ಬೂದಿಯಂತೆ ಶರೀರದ ಮೇಲೆ ಶೋಭಿಸುವ ನಾಶವಿಲ್ಲದ ಸ್ವಭಾವವುಳ್ಳ ವಿಭೂತಿಯನ್ನು ತುಂಬಾ ಪೂಸಿದ ಸ್ವಭಾವವುಳ್ಳವನಾಗಿ, ಧ್ವಜಗಳು ಹೆಚ್ಚಾಗಿ ಶೋಭಿಸುವ ಬೀದಿಯನ್ನು ಸೇರಿ, ಶೀತಲವಾದ ತಾವರೆಯಂತಿರುವ ತನ್ನ ಅಡಿಗಳು ನೆಲಸಿ ತಂಗುವುದಕ್ಕೆಡೆಯಾದ ಮನಸ್ಸುಳ್ಳ ಭಕ್ತನಾದ ಮಾನಕ್ಕಂಜಾಱ ನಾಯನಾರನ ಮನೆಗೆ ಬಂದು ಅನುಗ್ರಹಿಸಿದನು.

881. ಬಂದ ಆ ಮುನಿಯನ್ನು ಕಂಡು ಎದ್ದುನಿಂತು ಮನಮಿಕ್ಕಿ ಆನಂದಪಟ್ಟು ಸಂತೋಷ ತುಂಬಿದ ದೊಡ್ಡ ನಾಯನಾರನು, ‘ನನ್ನ ತಂದೆಯ ದೇವರಾದ ತಪೋವಂತನಾದ ಹಿರಿಯರು, ಈ ಎಡೆಗೆ ಬಂದುದರಿಂದ ದಾಸನಾದ ನಾನು ಉಜ್ಜೀವಿಸಿದೆನು’ ಎಂದು ಮನಕರಗಿದ ಭಕ್ತಿಯಿಂದ ಅವನನ್ನು ನಮಿಸಿದನು.

882. ತಪಸ್ವಿಯಾಗಿ ಬಂದ ಈಶ್ವರನು ಸಜ್ಜನಭಕ್ತನಾದ ಮಾನಕ್ಕಂಜಾಱನನ್ನು ನೋಡಿ, ‘ಇಲ್ಲಿ ನಡೆದು ಬರುವ ಮಂಗಲ ಕಾರ್ಯವೇನು?’ ಎಂದು ಕೇಳಲು, ಅವನು ‘ದಾಸನಾದ ನಾನು ಪಡೆದ ಮಗಳೊಬ್ಬಳ ವಿವಾಹ ಕಾರ್ಯವಿದು’ ಎಂದು ಹೇಳಲು, ಆ ಹಿರಿಯ ತಪಸ್ವಿಯು, ‘ನಿಮಗೆ ಮೇಲೂ ಇತರ ಮಂಗಲಗಳು ಉಂಟಾಗಲಿ’ ಎಂದು ಆಶೀರ್ವದಿಸಿದನು.

---

880. ಪೊಟಿಮೂಟು ತೞಲೆನ್ನ ತ್ತಿರುಮೇನಿ ತನಿಱ್ಪೊಲಿನ್ತ
ಪಟಿನೀಟು ತಿರುನೀಱ್ಱಿನ್ ಪರಪ್ಪಣಿನ್ತ ಪಾನ್ಮೈಯರಾಯ್,
ಕ್ಕೊಟಿನೀಟು ಮಱುಕಣೈನ್ತು ತಮ್ಮುಟೈಯ ಕುಳಿರ್ಕಮಲ
ನ್ನಟಿನೀಟು ಮನತ್ತನ್ಪರ್ ತಮ್ಮನೈಯಿ ನಕಮ್ಪುಕುನ್ತಾರ್.

881. ವನ್ತಣೈನ್ತ ಮಾವಿರತ ಮುನಿವರೈಕ್ಕಣ್, ಟೆತಿರೆೞುನ್ತು,
ಚಿನ್ತೈಕಳಿ ಕೂರ್ನ್ತು, ಮಕಿೞ್ ಚಿಱನ್ತಪೆರು ನ್ತೊಣ್ಟನಾರ್
‘ಎನ್ತೈಪಿರಾನ್ ಪುರಿತವತ್ತೋ ರಿವ್ವಿಟತ್ತೇ ಯೆೞುನ್ತರುಳ
ವುಯ್ನ್ತೊೞಿನ್ತೇ ನಟಿಯೇ’ ನೆನ್ ಱುರುಕಿಯವನ್ ಪೊಟುಪಣಿನ್ತಾರ್.

882. ನಱ್ಱವರಾವರ್ ಪೆರುಮಾನಾರ್ ನಲಮಿಕುಮನ್ ಪರೈನೋಕ್ಕಿ
‘ಯುಱ್ಱಿಚೆಯನ್ ಮಙ್ಕಲಮಿಙ್ಙ್ ಕೊೞುಕುವತೆನ್’ ನೆನ, ‘ವಟಿಯೇನ್
ಪೆಱ್ಱತೊರು ಪೆಣ್ಕೊಟಿತನ್ ವತುವೈ’ ಯೆನ, ಪ್ಪೆರುನ್ತವರುಮ್
‘ಮಱ್ಱುಮಕ್ಕು ಚ್ಚೋಪನಮಾ ಕುವ’ ತೆನ್ಱು ವಾಯ್ಮೊೞಿನ್ತಾರ್.

883. ಒಡನೆಯೇ ಮಾನಕ್ಕಂಜಾಜಿನು, ಜ್ಞಾನರೂಪುಳ್ಳವನಾಗಿ, ತಪೋವೇಷವನ್ನು ತಾಳಿದವನ ಶ್ರೀಪಾದದಲ್ಲಿ ತಾನು ಬಿದ್ದು ನಮಿಸಿ, ಮನೆಯೊಳಗೆ ಹೋಗಿ, ವಿವಾಹಾಲಂಕಾರವನ್ನು ತಾಳಿದ, ಮಧುರಸದಿಂದ ಕೂಡಿದ ಹೊಸದಾಗಿ ಅರಳಿದ ಹೂಗಳಿಂದ ಅಲಂಕೃತಳಾದ ಮಗಳನ್ನು ಒಡನೆ ಕೂಡಿಕೊಂಡು ಬಂದು, ತಿರುನೀಲಕಂಠವನ್ನು ಮರೆಸಿ ಬಂದವರಡಿಯಲ್ಲಿ ಬಿದ್ದು ನಮಿಸುವಂತೆ ಮಾಡಿದನು.

884. ತನ್ನನ್ನು ಸ್ತುತಿಸುವವರಿಗೆ ತನ್ನ ಪಾದದಲ್ಲಿ ಆಶ್ರಯುವನ್ನು ಕೊಡುವವನಾದ ಶಿವಪರಮಾತ್ಮನು ತನ್ನ ಪಾದದಲ್ಲಿ ಬಿದ್ದು ನಮಿಸಿ ಎದ್ದು ನಿಂತ ಸಾಧ್ವಿಯಾದ ಲತೆಯಂತಿರುವ ಕನ್ಯೆಯ, ಮೇಘವು ವಿಸ್ತರಿಸಿದಂತೆ ನಿಡಿದಾಗಿ ವ್ಯಾಪಿಸಿ ಬೆಳೆದ, ಹೂವಿನಿಂದಲಂಕೃತವಾದ ಕೂದಲಿರುವ ತಲೆಯ ಹಿಂಭಾಗವನ್ನು ನೋಡಿ, ನಮಿಸಿ ನಿಂತ ಸತ್ಯಸ್ವಭಾವದ ಭಕ್ತನನ್ನು ನೋಡಿ, 'ದೇವವನಿತೆಗೆ ಸಮಾನಳಾದ ಇವಳ ತಲೆಕೂದಲು ನನಗೆ ಪಂಚವಟಿಗೆ (ಕೂದಲಿನಿಂದ ಮಾಡಲ್ಪಡುವ ಜನಿವಾರಕ್ಕೆ) ಆದೀತು' ಎಂದು ಹೇಳಿದನು.

885. ಈ ರೀತಿ ಅವನು ಅನುಗ್ರಹಿಸಿದ ಮಾತುಗಳನ್ನು ಕೇಳಿ ಮಾನಕ್ಕಂಜಾಜಿನು, ನಡುವಿನ ಬಾಳನ್ನು ಒರೆಯಿಂದ ಕಳಚಿ, "ಈ ಕೂದಲನ್ನು ಉತ್ತಮವಸ್ತುವಾಗಿ ಕೊಂಡು 'ಇದು ಪಂಚವಟಿಗೆ ಆಗುವುದು' ಎಂದು ಹೇಳಲ್ಪಡುವ ಭಾಗ್ಯವನ್ನು ಪಡೆದೆನು" ಎಂದು ಮನಸ್ಸಿನಲ್ಲಿ ನೆನೆದು ಹೂವಿನ ಲತೆಯಂತಿರುವ ಮಗಳ, ರಾತ್ರಿಯಂತಿರುವ ಕರಿಯ ಕೂದಲನ್ನು ಬುಡದೊಡನೆ ತುಂಡರಿಸಿ, ಎದುರು ನಿಂತ ವೈಮರೆವನ್ನು ಮಾಡುವ ಜನ್ಮದ ನೋವನ್ನು ತುಂಡರಿಸುವವನ ಮಲರಿನಂತಹ ಕೈಯಲ್ಲಿ ನೀಡಲು,

---

883. ಞಾನಚ್ಚೆಯ್ ತವರಟಿವೇಡಂ ಪಣಿನ್ದುಮನ್ನೈ ಯಕನಣ್ಣಿ
ಮಾನಕ್ಕ ಞ್ಚಾಜನಾರ್ ಮಣಕ್ಕೋಲಮ್ ಪುನೈನ್ದಿರುನ್ದ
ತೇನಕ್ಕ ಮಲರ್ಕ್ಕೂನ್ದ ಟ್ರಿರುಮಕಳ್ಳೈ ಕ್ಕೊಣ್ಡಣೈನ್ದು
ಪಾನಜ್ಕಿ ನ್ದಿರಮಟಿಕೈತ್ತು ವರುಮವರ್ಪೈ ಪ್ಪಣಿವಿತ್ತಾರ್.

884. ತಞ್ಚರಣ ತ್ತಿಟೈಪ್ಪಣಿನ್ದು ತಾಟ್ನ್ದ್ರೆಟುನ್ದ ಮಟಕ್ಕೊಟಿತನ್
ಮಞ್ಚುತಟಿಕೈ ತ್ತೆನವಳರ್ನ್ದ ಮಲರ್ಕ್ಕೂನ್ದಟ್ ಪುಜನೋಕ್ಕಿ,
ಯಞ್ಚಲಿಮೆಯ್ ತ್ತೊಣ್ಟರೈಪ್ಪಾರ್, 'ತ್ತಣಜ್ಕಿವಟನ್ ಮಯಿರ್ನಮುಕ್ಕು
ಪ್ಪಞ್ಚವಟಿ ಕ್ಕಾ' ಮೆನ್ಱಾರ್ ಪರವವಟಿ ತ್ತಲಜ್ಕೊಟುಪ್ಪಾರ್.

885. ಅರುಳ್ಚೆಯ್ದ ಮೊಟಿಕೇಳಾ ವಟಜ್ಚುರಿಕೈ ತನ್ನೈಯುರುವಿ,
'ಪ್ಪೊರುಳ್ಚೆಯ್ದಾ ಮೆನಪ್ಪೆಱ್ಱೇ' ನೆನಕ್ಕೊಣ್ಟು, ಪೂಜಕ್ಕೊಟಿತನ್
ಇರುಳ್ಚೆಯ್ತ ಕರುಜ್ಕೂನ್ದ ಲಟಿಯಿಲರಿನ್, ತೆತಿರ್ನಿನ್ಜ
ಮರುಳ್ಚೆಯ್ತ ಪಿಜಪ್ಪರುಪ್ಪಾರ್ ಮಲರ್ಕ್ಕರತ್ತಿ ನಿಟೈನೀಟ್ಟ,

886. ಅದನ್ನು ಪಡೆಯುವವನಂತೆ ನಿಂತ ವೇದಸ್ತುತನಾದ ಆ ತಪಸ್ವಿಯು ಮರೆಯಾಗಿ, ಪಕ್ಕದಲ್ಲಿ ಪಾರ್ವತೀಮಾತೆಯೊಡನೆ ಕೂಡಿ ಎಳೆಯ ವೃಷಭವಾಹನವನ್ನೇರಿ, ಶಿವನು ಉನ್ನತವಾದ ಆಕಾಶದಲ್ಲಿ ಮೇಲೆ ಪ್ರತ್ಯಕ್ಷನಾಗಿ ಅನುಗ್ರಹಿಸಿದನು. ಕಾಂತಿಯುಕ್ತವಾದ ಆಕಾಶವೂ ನೆಲವೂ ತುಂಬಲು ಸುಂದರವಾದ ಕಲ್ಪಕ ಹೂಮಳೆಯು ಸುರಿಯಿತು. ಭಕ್ತನಾದ ಮಾನಕ್ಕಂಜಾಱ ನಾಯನಾರನು ನಮಿಸಿ ನೆಲದಲ್ಲಿ ಸಾಷ್ಟಾಂಗ ಬಿದ್ದನು.

887. ಎದುರಿನಲ್ಲಿ ಕೆಳಗೆ ಬಿದ್ದು ಎದ್ದು ಮೈಮರೆತು ನಿಂತ ಋಜುಸ್ವಭಾವದ ಭಕ್ತನಿಗೆ ಬಾಲಚಂದ್ರನು ಆಲ್ಲಾಡುವಂತೆ ವರ್ಧಿಸಿ ಬೀಳುವ ಗಂಗೆಯು ಇರುವ ಜಡೆಯನ್ನುಳ್ಳ ನಟರಾಜನು 'ನಿನಗೆ ನಮ್ಮೆಡೆಯಲ್ಲಿರುವ ಭಕ್ತಿಯ ರೀತಿಯನ್ನು ಶ್ಲಾಘ್ಯವಾದ ಈ ಲೋಕದಲ್ಲಿ ಪಸರಿಸುವ ಉದ್ದೇಶದಿಂದ ಹೀಗೆ ಮಾಡಿದೆವು' ಎಂದು ತಿಳಿಸಿ ತಾನು ಅನುಗ್ರಹಿಸಿದನು.

888. ಪಕ್ಕದಲ್ಲಿ ಹಿರಿಯ ಗಣನಾಥನು ಸ್ತುತಿಸಲು, ದೇವತೆಗಳು ಕೂಟವಾಗಿ ಬರಲು, ವೃಷಭವಾಹನವನ್ನೇರಿ ಬಂದು ನಿಂತ ಪರಮೇಶ್ವರನನ್ನೂ, ಪರಮೇಶ್ವರನ ದೊಡ್ಡ ಕರುಣೆಯ ಸ್ಥಿರತೆಯನ್ನೂ, ಇದಿರು ನಿಂತವನಾದ ಮಾನಕ್ಕಂಜಾಱನು ಒಂದೇ ಮನಸ್ಸಿನೊಡನೆ ಕೈಗಳನ್ನು ತಲೆಯ ಮೇಲೆತ್ತಿ ಜೋಡಿಸಿಕೊಂಡು ಯಾವಾಗಲೂ ಸ್ತುತಿಸುವ ದೊಡ್ಡ ಭಾಗ್ಯವನ್ನು ನೇರವಾಗಿ ಪಡೆದನು.

---

886. ವಾಙ್ಗುವಾರ್ ಪೋನಿನ್ಱ ಮಱೈಪ್ಪೊರುಳಾ ಮವರ್ಮಱೈನ್ತು
ಪಾಙ್ಗಿನ್ಮಲೈ ವಲ್ಲಿಯುಟನ್ ಪಱೈಯಮಱ ವಿಟೈಯೇಱಿ
ಯೋಙ್ಗಿಯವಿಣ್ ಮಿಚೈವನ್ತಾ; ರೊಳಿವಿಚುಮ್ಬು ನಿಲನೆರುಙ್ಗ
ತ್ತೂಙ್ಗಿಯಪೊನ್ ಮಲರ್ಮಾರಿ; ತೊೞುಮ್ಬರ್ತೊೞು ತೆತಿರ್ವಿೞುನ್ತಾರ್.

887. ವಿೞುನ್ತೆೞುನ್ತು ಮೆಯ್ಮ್ಮಱನ್ತ ಮೆಯ್ಯನ್ಪರ್ ತಮಕ್ಕುಮತಿ
ಕ್ಕೊೞುನ್ತಲೈಯ ವಿೞುಙ್ಗಙ್ಗೈ ಕುತಿತ್ತಚಟೈ ಕ್ಕೂತ್ತನಾರ್
'ಎೞುಮ್ಪರಿವು ನಮ್ಪಕ್ಕ ಲುನಕ್ಕಿರುನ್ತ ಪರಿಚಿನ್ತ
ಚ್ಚೆೞುಮ್ಪುವನ ಙ್ಗಳಿಲೇಱ ಚ್ಚೆಯ್ತೋ' ಮೆನ್ ಱರುಳ್ಚೆಯ್ತಾರ್.

888. ಮರುಙ್ಗುಪೆರು ಙ್ಗಣನಾತರ್ ಪೋಱ್ಱಿಚೈಪ್ಪ ವಾನವರ್ಕಳ್
ನೆರುಙ್ಗುವಿಟೈ ಮೇಱ್ಕೊಣ್ಟು ನಿನ್ಱವರ್ಮುನ್ ನಿನ್ಱವರ್ತಾಮ್
ಒರುಙ್ಗಿಯನೆ ಞ್ಚೊಟುಕರಙ್ಗ ಳುಚ್ಚಿಯಿನ್ಮೇಱ್ ಕುವಿತ್ತೈಯರ್
ಪೆರುಙ್ಗರುಣೈ ತ್ತಿಱಮ್ಪೋಱ್ಱುಮ್ ಪೆರುಮ್ಪೇಱು ನೇರ್ಪೆಱ್ಱಾರ್.

889. ಭಕ್ತರಿಗೆ ಈ ರೀತಿ ಅನುಗ್ರಹಿಸಿದ ಮೇಲೆ ದೇವರುಗಳು ಸ್ತುತಿಸಲು ಇಂಡೈ ಹೊವಮಾಲೆಯನ್ನು ಧರಿಸಿದ ನಿಡಿದಾದ ಜಡೆಯುಳ್ಳ ಶಿವಪರಮಾತ್ಮನು ಮರೆಯಾದನು. ತುಂಬಿಗಳು ಮುಸುರುವುದಕ್ಕೆಡೆಯಾದ ತಲೆಕೂದಲನ್ನುಳ್ಳ ಮದು ಮಗಳನ್ನು ಮದುವೆಯಾಗುವ ಉದ್ದೇಶದಿಂದ ಕಂಡವರ ಕಣ್ಣುಗಳು ಆನಂದಿಸುವಂತೆ ವಿವಾಹಾಲಂಕಾರದೊಡನೆ ಕಲಿಕ್ಕಾಮನು ಬಂದು ನಿಂತನು.

890. ಬಂದು ಸೇರಿದ ಕಲಿಕ್ಕಾಮನಾರನು ಮನಸ್ಸಿನಿಂದಲೂ ನೆನೆಯುವುದಕ್ಕೆ ಅಸಾಧ್ಯವಾದ ಆ ಕಾರ್ಯವನ್ನು ಅಲ್ಲಿ ಕೂಡಿದವರಿಂದ ಕೇಳಿ ಮನಸ್ಸಿನಲ್ಲಿ ಮಿಕ್ಕ ಸಂತೋಷವನ್ನು ಹೊಂದಿ, ಈಶ್ವರನು ಮಾಡಿದ ಅನುಗ್ರಹವನ್ನು ಸ್ತುತಿಸಿ ಆಮೇಲೆ ಮನಸ್ಸಿನಲ್ಲಿ ವ್ಯಥೆಗೊಂಡಾಗ ಅನುಗ್ರಹಮಾಡಿದ ದಿವ್ಯವಾಣಿಯನ್ನು ಕೇಳಿದನು.

891. ಇದರಿಂದ ಮನಸ್ಸಿನಲ್ಲಿ ನಿರುತ್ಸಾಹದಿಂದುಂಟಾದ ದುಃಖವನ್ನು ನೀಗಿದವನಾಗಿ ದೇವದೇವನ ಅನುಗ್ರಹದಿಂದ ಹಿಂದೆ ಅಲಂಕರಿಸಿದ ರೀತಿಯೇ ಮಲರುಗಳಿಂದ ಅಲಂಕೃತವಾದ ತಲೆಕೂದಲು ಉಂಟಾದ, ಹೂವಿನ ಬಳ್ಳಿಯಂತಿರುವ ಮದುಮಗಳನ್ನು ಮದುವೆಯಾಗಿ ದ್ರವ್ಯನಿಧಿಗಳನ್ನು ಇದ್ದವರೆಲ್ಲರಿಗೂ ಕೊಟ್ಟು ಮದುವೆಯ ಸಂತೋಷವು ಲೋಕವೆಲ್ಲಾ ಹಬ್ಬುವಂತೆ ಮಾಡಿ ಸಂಬಂಧಿಕರಿಂದ ಕೂಡಿ ಮದಿಲಿನಿಂದ ಸುತ್ತಿದ ತನ್ನ ಹಳೆಯೂರನ್ನು ಸೇರಿದನು.

---

889. ತೊಣ್ಣನಾರ್ ತಮಕ್ಕರುಳಿ, ಚ್ಚೂೞ್ನ್ದ ವ್ಯೆಯೋರ್ ತುತಿಚೆಯ್ಯ
ಇಣ್ಟೈವಾರ್ ಚಟೈಮುಟಿಯಾ ರೆೞುನ್ದರುಳಿ ಪ್ಪೋಯಿನಾರ್,
ವಣ್ಟುವಾರ್ ಕುೞಲ್ಕೊಟಿಯೈ ಕ್ಕೈಪ್ಪಿಟಿಕ್ಕ, ಮಣಕ್ಕೋಲಙ್
ಕಣ್ಟವರ್ಕಳ್ ಕಣ್ಕಳಿಪ್ಪ, ಕ್ಕಲಿಕ್ಕಾಮ ನಾರ್ಪುಕುನ್ದಾರ್.

890. ವನ್ದಣೈನ್ದ ವೇಯರ್ಕುಲ ಮನ್ನವನಾರ್ ಮಣ್ಣಿನ್ದ
ಚ್ಚಿನ್ದೈಯಿನಾ ಲರಿಯಚೆಯಲ್ ಚೆಱಿನ್ದವರ್ಪಾಲ್ ಕೇಟ್ಟರುಳಿ,
ಪ್ಪುನ್ದಿಯಿನಿನ್ ಮಿಕವುವನ್ದು, ಪುನಿತನಾ ರರುಳ್ಪೋಱ್ಱಿ,
ಚ್ಚಿನ್ದೈತಳರ್ ನ್ದರುಳ್ಚೆಯ್ದ ತಿರುವಾಕ್ಕಿನ್ ಱಿಱಙ್ಕೇಟ್ಟು,

891. ಮನನ್ದಳರು ಮಿಟರ್ನೀಙ್ಕಿ, ವಾನವರ್ನಾ ಯಕರರುಳಾಲ್
ಪುನೈನ್ದಮಲರ್ ಕ್ಕುೞಲ್ಪೆಱ್ಱ ಪೂಙ್ಕೊಟಿಯೈ ಮಣಮ್ಪುಣರ್ನ್ದು,
ತನಮ್ಪೊೞಿನ್ದು, ಪೆರುಮತಮ್ಮೈ ಯುಲಕೆಲಾ ನ್ದಲೈಚೆಱಪ್ಪ
ವಿನಮ್ಪೆರುಕ ತ್ತಮ್ಮುೞೈಯ ಮೆಯಿಲ್ಮೂತೂರ್ ಚೆನ್ಱಣೈನ್ದಾರ್.

892. ಒಬ್ಬ ಮಗಳ ಕೂದಲನ್ನು ಆಕೆಯ ವಿವಾಹದಿನದಲ್ಲಿ ಒಬ್ಬ ಮಹಾ ವ್ರತಿಗೆ ಕತ್ತರಿಸಿ ನೀಡಿದ ಮಹಿಮೆಯುಳ್ಳ ಮಾನಕ್ಕಂಜಾಱ ನಾಯನಾರನ ಸ್ವಭಾವ ವನ್ನು ಸ್ತುತಿಸುವ ಹಿರಿಮೆಯು ನನ್ನ ಅಳತೆಗೆ ಸಿಗುವುದೋ? ಸಿಗದು. ನೆಲದ ಬಿರುಕಿನಲ್ಲಿ ಚೆಲ್ಲಿದ ಮಾವಿನ ಮಿಡಿಗಳನ್ನು ಈಶ್ವರನು ಸ್ವೀಕರಿಸಿಕೊಂಡು ಅದನ್ನು ಸವಿಯುವ 'ವಿಡೇಲ್' (ಮಾವಿಡಿಯನ್ನು ಕಚ್ಚಿ ತುಂಡು ಮಾಡುವಾಗ ಆಗುವ ಶಬ್ದ) ಎಂಬ ಧ್ವನಿಯನ್ನು ಕೇಳತಕ್ಕ ಯೋಗ್ಯತೆಯುಳ್ಳವನಾದ ಅರಿವಾಳ್ತಾಯ ನಾಯನಾರನ ಚರಿತ್ರೆಯನ್ನು ಇನ್ನು ಮೇಲೆ ಹೇಳತೊಡಗುವೆನು.

---

892. ಒರುಮಕಳ್ ಕೂನ್ತ ಅನ್ನೈ ವತುವೈನಾ ಳೊರುವರ್ ಕ್ಕೀನ್ತ
ಪೆರುಮೈಯೂರ್ ತನ್ಮೈ ಪೋಱ್ಱುಮ್ ಪೆರುಮೈಯೆನ್ ನಳವಿ ೞ್ಱಾಮೋ?
ಮರುವಿಯ ಕಮರಿಱ್ ಪುಕ್ಕ ಮಾವಟು ವಿಟೇ! ಲೆನ್ ನೋಚೈ
ಯುರಿಮೈಯಾಱ್ ಕೇಟ್ಕ ವಲ್ಲಾರ್ ತಿಱಮಿಣಿ ಯುರೈಕ್ಕ ಲುಱ್ಱೇನ್.

13. ಅರಿವಾಳ್ತಾಯ ನಾಯನಾರ

893. ಕರಣಮಂಗಲಂ ಎಂಬುದು ನೀರು ಪ್ರವಹಿಸುವ ಕಾವೇರಿ ಹರಿಯುವ ನಾಡಿನಲ್ಲಿರುವ ಒಂದು ಸಣ್ಣ ಊರು. ತುಂಬಿಗಳು ಆಶೆಯಿಂದ ಮುಸುರಿ ಝೇಂಕರಿಸಲು, ಕೋಮಲವಾದ ಗಿಣ್ಣುಗಳುಳ್ಳ ನಿಡಿದಾದ ಕಬ್ಬು ಜೇನು ಸುರಿಸುವುದಕ್ಕೆಡೆಯಾದ ಊರದು.

894. ಕೆಂಪಗಾದ ನೆಲ್ಲುತುಂಬಿದ ಗದ್ದೆಗಳಲ್ಲಿ ಕಳೆಯಾಗಿ ಕೀಳಲ್ಪಟ್ಟ, ಮೊದಲೇ ಶಂಖವು ಉಂಟುಮಾಡಿ ತಂಗಿದ ಮುತ್ತುಗಳನ್ನು ಚೆಲ್ಲಿರುವಂತೆ ತೋರುವ ತಾವರೆ ಹೂಗಳನ್ನು ರೈತರು ಕೈಯಲ್ಲಿ ಕೊಂಡಿರುವ ದೃಶ್ಯವು ತೋರಿಕೆಯಿಂದ, ಅವರು ಪದ್ಮನಿಧಿಯನ್ನು ಕೈಯಲ್ಲಿ ಕೊಂಡಿರುವ ದೇವರುಗಳಂತೆ ಕಾಣುತ್ತಿರುವರು.

895. ಭಾಗ್ಯದಿಂದ ತುಂಬಿದ ಆ ಸಣ್ಣ ಊರಲ್ಲಿ, ತುಂಬಿಗಳು ಮುಸುರುವ ಕೂದಲನ್ನುಳ್ಳ ಹೆಣ್ಣುಗಳ ಮುಖಗಳಲ್ಲಿ, ಕುಳೈ (ಕರ್ಣಾಭರಣ) ಗಳನ್ನು ಮುಟ್ಟುವಂತೆ ನೀಲಮಲರಂತಹ ಕಣ್ಣುಗಳು ನೀಡಿರುವುವು. ಅವರ ಕತ್ತಿನ ಮೇಲೆ ಮೆರುಗಿಟ್ಟು ಮಾಡಿದ ನೀಲಮಣಿಗಳುಳ್ಳ ಆಭರಣಗಳು ಪ್ರಕಾಶಿಸುವುವು. ಕಯಲ್ ಮೀನುಗಳು ಹಾರುವುದಕ್ಕೆಡೆಯಾದ ಗದ್ದೆಗಳ ಪಕ್ಕದಲ್ಲುಳ್ಳ ಕೊಳಗಳಲ್ಲಿಯೂ, ಕುಳೈ ಎಲೆಗಳನ್ನುಳ್ಳ ನೀಲೋತ್ಪಲಗಳು ನಿಡಿದಾಗಿ ವ್ಯಾಪಿಸಿ ಹೂ ಬಿಡುವುವು.

---

13. ಅರಿವಾಟ್ಟಾಯ ನಾಯನಾರ್

893. ವರುಮ್ಪು ನಜ಼್ಪೊನ್ನಿ ನಾಟ್ಟೊರು ವಾಟ್ಪತಿ
ಚುರುಮ್ಪು ವಣ್ಡೊಟ್ಟು ಚೂಟ್ನ್ತು ಮುರನ್ಱಿಟ
ವಿರುಮ್ಪು ಮೆನ್ಕ ಣುಟ್ಟೆಯುವಾಯ್ ವಿಟ್ಟುನೀಳ್
ಕರುಮ್ಪು ತೇನ್ಪೊಟಿ ಯುಙ್ಕಣ ಮಙ್ಕಲಮ್.

894. ಚೆನ್ನೆ ಲಾರ್ವಯಱ್ ಕಟ್ಟಚೆ ನ್ತಾಮರೈ
ಮುನ್ನರ್ ನನ್ತುಮಿಟ್ ಮುತ್ತಙ್ ಚೊರಿನ್ತಿಟ
ತ್ತುನ್ನು ಮಳ್ಳರ್ಕೈ ಮ್ಮೇಱ್ಕೊಣ್ಟು ತೋನ್ಱುವಾರ್
ಮನ್ನು ಪಙ್ಕಯ ಮಾನಿತಿ ಪೋನ್ಱುಳಾರ್.

895. ವಳತ್ತಿ ನೀಟುಮ್ ಪತಿಯತನ್ ಕಣ್ವರಿ
ಯುಳರ್ತ್ತು ಮೈಮ್ಪು ಲುಟ್ಟೈಯೋರ್ ಮುಕತ್ತಿನುಙ್,
ಕಳತ್ತಿನ್ ಮಾತುಙ್, ಕಯಲ್ಪಾಯ್ ವಯಲಯಱ್
ಕುಳತ್ತು, ನೀಳುಙ್ ಕುಟೈಯುಟ್ಟೈ ನೀಲಙ್ಕಳ್.

896. ಆ ಒಳ್ಳೆಯ ಊರಲ್ಲಿ ಯೋಗ್ಯತೆಯನ್ನು ಪಡೆದ ಹಿರಿಮೆಯುಳ್ಳ ಇಲ್ವಾಳ್ಕೆಯಲ್ಲಿ (ಗೃಹಸ್ಥಾಶ್ರಮದಲ್ಲಿ) ಇರುವವನು. ಬಹು ಹಿಂದಿನಿಂದಲೇ ಬಂದು ಕೂಡಿದ ದೊಡ್ಡ ನಿಧಿಯಿಂದ ಭಾಗ್ಯವು ತುಂಬಿದ ವೇಳಾಳರ ಕುಲದಲ್ಲಿ ನಾಯಕ ನಾದವನು.

897. ಅವನು ತಾಯನಾರ್ ಎಂಬ ಹೆಸರುಳ್ಳವನು. ಬಹುಕಾಲ ಸೇರಿದ್ದೂ ದೃಢನಿಶ್ಚಯವಿಲ್ಲದ ವಿಷ್ಣುವೇ ಮಣ್ಣನ್ನು ತೋಡಿ ಹುಡುಕಿಯೂ ತಿಳಿಯದ, ಪರಿಶುದ್ಧ ವಾದ ಹೊಸಮಲರಂತಿರುವ ಶಿವನ ಪಾದಗಳನ್ನು ಸೇರಿ ಉಳ್ಳವನು.

898. ಶೋಭಿಸುವ ಕೆಂಪಗಾದ ಜಡೆಯುಳ್ಳ ವೇದಿಯನಾದ ಶಿವಪರಮಾತ್ಮನಿಗೆ ಪ್ರಿಯವೆಂದು ಕೆಂಪುನೆಲ್ಲಿನ ಅಕ್ಕಿಯ ಇನಿದು ಆಹಾರದೊಡನೆ, ಕೆಂಪಗಾದ ಕೀರೆಯನ್ನೂ, ಚೆಲುವಾದ ಮಾಮಿಡಿಗಳ ಹಸುರು ಗೊಂಚಲುಗಳನ್ನೂ ಒಂದೊಂದು ದಿನವೂ ನಿಯತಿ ಯಾಗಿಕೊಂಡು ಅವನ್ನು ಭೋಜನಮಾಡುವಂತೆ ದೇವರಿಗೆ ನಾಯನಾರನು ನಿವೇದಿ ಸುವನು.

---

896. ಅಕ್ಕು ಲಪ್ಪತಿ ತನ್ನಿ ಲಚನೆಚಿ
ತ್ತಕ್ಕ ಮಾಮನೈ ವಾಟ್‌ಕ್ಕೈಯಿ ಜ್ಜಿಕ್ಕಿನಾರ್
ತೊಕ್ಕ ಮಾನಿತಿ ತ್ತೊನ್‌ಮೈಯಿ ಲೋಙ್ಕಿಯ
ಮಿಕ್ಕ ಚೆಲ್ವತ್ತು ವೇಳಾಣ್ ಟಲೈಮೈಯಾರ್.

897. ತಾಯ ನಾರೆನು ನಾಮ ನ್ತರಿತ್ತುಳಾರ್;
ಚೇಯ ಕಾಲ ನ್ತೊಟರ್‌ನ್ತು ನ್ತೊಳಿವಿಲಾ
ಮಾಯ ನಾರ್ಮಣ್ ಕಿಳೈತ್ತಙ್ ಯಾತವ
ತ್ತೂಯ ನಾಣ್ಮಲರ್ ಪ್ಪಾತ ನ್ತೊಟರ್‌ನ್ತುಳಾರ್.

898. ಮಿನ್ನು ಚೆಞ್ಚಟೈ ವೇತಿಯರ್ ಕ್ಕಾಮೆನ್ಱು
ಚೆನ್ನೆ ಲಿನ್ನಮು ತೋಟುಚೆ ಙ್ಕೀರೈಯುಮ್
ಮನ್ನು ಪೈನ್ತುಣರ್ ಮಾವಟು ವುಙ್ಕೊಣರ್
ನ್ತನ್ನ ವೆನ್ಱು ಮಮುತುಚೆಯ್ ವಿಪ್ಪರಾಲ್.

899. ಈ ಒಳ್ಳೆಯ ಕೈಂಕರ್ಯವನ್ನು ಕಷ್ಟಬಂದ ಕಾಲದಲ್ಲಿಯೂ ಮನಸ್ಸಿನಿಂದ ಬಿಡದೆ ಹಿಡಿದು ಸಂತೋಷದಿಂದ ನಡೆಸಿಕೊಂಡು ಬರುತ್ತಿರಲು, ಅವನನ್ನು ತನ್ನೆಡೆಯಲ್ಲಿಟ್ಟುಕೊಳ್ಳಲು, ಪುರಾತನವಾದ ವೇದಗಳಿಗೆ ಮೊದಲವನಾದ ಶಿವಪರಮಾತ್ಮನು, ಅವನಿಗೆ ಪರಂಪರೆಯಾಗಿ ಬಂದ ಹೆಚ್ಚಾದ ಭಾಗ್ಯಗಳನ್ನು ಅವು ಹೋದ ದಾರಿ ತಿಳಿಯದಂತೆ ಬದಲಿಸಿಬಿಟ್ಟನು.

900. ತನ್ನೆಡೆಯಲ್ಲಿದ್ದ ಸಂಪತ್ತು ಆನೆಯುಂಡ ಬೇಲದಂತೆ ಮಾಯವಾಗಲು ಪಾರ್ವತಿಯನ್ನು ಭಾಗವಾಗಿ ಉಳ್ಳ ಈಶ್ವರನಿಗೆ, ಭಕ್ತಿಯಿಂದ ಹಿಂದೆ ಮಾಡಿ ಅಭ್ಯಾಸವಾಗಿದ್ದ ಆ ನಿರ್ದೋಷವಾದ ಸೇವೆಯನ್ನು ನಾಯನಾರನು ತಪ್ಪಿಸಲಿಲ್ಲ.

901. ಕಷ್ಟವನ್ನು ತರುವ ದಾರಿದ್ರ್ಯವು ಏರ್ಪಟ್ಟರೂ, ಕೂಲಿಗೆ ನೆಲ್ಲನ್ನು ಕೊಯ್ದು ನ್ಯಾಯವಾದ ರೀತಿಯಿಂದ, ನಿಡಿದಾದ ಭಕ್ತಿಯಿಂದ, ಆ ಕೂಲಿಯಲ್ಲಿ ಬರುವ ಒಳ್ಳೆಯ ಕೆಂಪಗಾದ ನೆಲ್ಲಿನಲ್ಲಿ ಪಡೆದವುಗಳನ್ನು ಶಿವಪರಮಾತ್ಮನಿಗೆ ಇನಿದಾದ ನಿವೇದನವಾಗಿ ಒಡನೆಯೇ ಸಮರ್ಪಿಸಿಕೊಂಡು ಬರುತ್ತಿದ್ದನು.

---

899. ಇನ್ತ ನನ್ನಿಲೈ ಯಿನ್‌ನಲ್‌ವ ನ್ತೊಯ್ತಿನುಞ್
ಚಿನ್ತೈ ನೀಙ್ಗಾ ಚ್ಚೆಯಲಿ ನುವನ್ತಿಟ
ಮುನ್ತೈ ವೇತ ಮುತಲ್ವ ರವರ್‌ವೞಿ
ವನ್ತ ಚೆಲ್ವ ಮಱಿಯಾಮೈ ಮಾಱಿನಾರ್.

900. ಮೇವು ಚೆಲ್‌ವ ಙ್ಗಳಿಱುಣ್ ವಿಳಙ್ಗನಿ
ಯಾವ ತಾಕಿ ಯೞಿಯವು ಮನ್‌ಪಿನಾಲ್
ಪಾವೈ ಪಾಕರ್‌ಕ್ಕು ಮುನ್‌ಪು ಪಯಿನ್‌ಱವ
ತ್ತಾವಿಲ್ ಚೆಯ್‌ಕೈ ತವಿರ್‌ನ್ತಿಲರ್ ತಾಯನಾರ್.

901. ಅಲ್ಲ ನಲ್‌ಕುರ ವಾಯಿಟ ಕ್ಕೂಲಿಕ್ಕು
ನೆಲ್ಲ ಱುತ್ತುಮೆಯ್ ನ್ನೀಟಿಯ ವನ್‌ಪಿನಾಲ್
ನಲ್ಲ ಚೆನ್ನೆಲಿಱ್ ಪೆಱ್ಱನ ನಾಯನಾರ್
ಕೊಲ್ಲೈ ಯಿನ್‌ನಮು ತಾಕೊ ಣ್ಟುಟುಕುವಾರ್.

902. ಕೆಂಪಗಾದ ನೆಲ್ಲನ್ನು ಹುಡುಕಿಕೊಂಡು ಹೋಗಿ ಕೊಯ್ದು, ಕೂಲಿಯಾಗಿ ತಾನು ಪಡೆಯುವ ಕೆಂಪಗಿನ ನೆಲ್ಲನ್ನೆಲ್ಲಾ, ಈಶ್ವರನಿಗೆ ನೈವೇದ್ಯಕ್ಕಾಗಿ ಸೇರಿಸಿಕೊಂಡು, ಕಪ್ಪಗಾದ ನೆಲ್ಲನ್ನು ಕೊಯ್ದು ಪಡೆದ ಕೂಲಿಯು, ಕಪ್ಪಗಾದ ಭತ್ತವನ್ನು ತನ್ನ ಆಹಾರದ ಉಪಯೋಗಕ್ಕೆ ಕೊಂಡು ಹೀಗೆ ನಡೆದುಬರುವ ಕಾಲದಲ್ಲಿ, ವಿಷ್ಣುವಿಗೂ ಬ್ರಹ್ಮನಿಗೂ ತಿಳಿಯಲಾಗದ ಶಿವಪರಮಾತ್ಮನು ಆ ನೆಲೆಯನ್ನು ಬದಲಿಸಲು ನೆನೆದನು.

903. ಅಲ್ಲಿನ ಗದ್ದೆಗಳಲ್ಲೆಲ್ಲಾ ಪ್ರತಿದಿನವೂ ಇದಿರಲ್ಲಿ ಕಾಣುವಂತೆ ಸುಂದರವಾದ ನಿಡಿದಾದ ಕದಿರುಗಳುಳ್ಳ ಕೆಂಪಗಾದ ನೆಲ್ಲೇ ಬೆಳೆಯುವಂತೆ ಆಗಿಬಿಡಲು, ಅದನ್ನು ಕಂಡು ಹಿರಿಮೆಯುಳ್ಳ ನಾಯನಾರನು, 'ಇದು ದಾಸನಾದ ನಾನು ಮಾಡಿದ ಪುಣ್ಯವೇ ಆಗಿದೆ' ಎಂದುಕೊಂಡು ಮನಸ್ಸಿನಲ್ಲಿ ಆನಂದಿಸಿ, ಅದನ್ನು ಕೊಯ್ದು ಕೂಲಿಯಾಗಿ ಕೆಂಪಗಾದ ನೆಲ್ಲನ್ನು ಕೊಂಡು ಈಶ್ವರನಿಗೆ ಬಹು ಆದರದಿಂದ ನಿವೇದಿಸುವವನಾಗಿ ಬಂದನು.

904. ಪ್ರತಿದಿನವೂ ಊಟವಿಲ್ಲದುದರಿಂದ ಕಮ್ಮಿಯಾಗದ ಭಕ್ತಿಯನ್ನುಳ್ಳ ಪತ್ನಿಯು ಮನೆಯ ಹೊರಭಾಗವನ್ನು ಸೇರಿ ಕೈಯಿಂದ ಹರಿಯತಕ್ಕ ಎಲೆಯ ತರಕಾರಿಗಳನ್ನು ಕೊಯ್ದು ಅಡುಗೆ ಮಾಡಿ ಪಾತ್ರದಲ್ಲಿಡಲು ಅದನ್ನೇ ಉಂಡು, ತಾನು ನಿಯತಿಯಾಗಿ ಮಾಡಿದ ಕೈಂಕರ್ಯದ ಕರ್ತವ್ಯವು ನಿಂತುಹೋಗದಂತೆ ಸೇವೆಯನ್ನು ಮಾಡಿಕೊಂಡು ಬರುವ ದಿನದಲ್ಲಿ,

---

902. ಚಾಲಿ ನೇಟೆ ಯಱುತ್ತವೈ ತಾಮ್ಪೆಱು
ಙ್ಕೂಲಿ ಯೆಲ್ಲಾ ನ್ದಿರುವಮು ತಾಕ್ಕೊಣ್ಡು
ನೀಲ ನೆಲ್ಲರಿ ಕೂಲಿಕೊ ಣ್ಡುಣ್ಣುನಾಳ್
ಮಾಲ ಯಱ್ಕರಿ ಯಾರತು ಮಾಱ್ಱುವಾರ್.

903. ನಣ್ಣಿಯ ವಯಲ್ಕ ಳೆಲ್ಲಾಮ್ ನಾಟೊಱು ಮುನ್ನಱ್ ಕಾಣ
ವಣ್ಣವಾರ್ ಕತಿರ್ಚ್ಚೆ ಙ್ಚಾಲಿ ಯಾಕ್ಕಿಟ, ಮಕಿೞ್ನ್ತು ಚಿನ್ದೈ
ಯಣ್ಣಲಾ ರಱುತ್ತ ಕೂಲಿ ಕೊ'ಣ್ಟಿಕ್ ತಟಿಯೇನ್ ಚೆಯ್ದ
ಪುಣ್ಣಿಯ' ಮೆನ್ಱು, ಪೋತ ವಮುತುಚೆಯ್ ವಿಪ್ಪಾ ರಾನಾರ್.

904. ಪೈಕಲು ಮುಣವಿ ಲಾಮೈ ಮನೈಪ್ಪಟ ಪ್ಪೈಯಿನ್ಱ್ ಪುಕ್ಕು
ನೈಕರ ವಿಲ್ಲಾ ವನ್ಪಿ ನಱೈಕ್ಕೈ ಯಟಕು ಕೊಯ್ದು
ಪೆಯ್ಕಲ ತ್ತಮೈತ್ತು ವೈಕ್ಕ ಪ್ಪೆರುನ್ತಕೈ ಯರುನ್ದಿ ತ್ತಙ್ಕಳ್
ಚೆಯ್ಕಟನ್ ಮುಟ್ಟಾ ವಣ್ಣ ನ್ದಿರುಪ್ಪಣಿ ಚೆಯ್ಯು ನಾಳಿಲ್,

905. ಮನೆಯ ಪಕ್ಕದಲ್ಲಿದ್ದ ಎಲೆಯ ತರಕಾರಿಗಳು ಮುಗಿದುಹೋಗಲು, ಅರುಂಧತಿಯನ್ನು ಹೋಲುವ ಪಾತಿವ್ರತ್ಯವನ್ನುಳ್ಳ ಆ ಸತಿಯು ತಣ್ಣೀರನ್ನು ಕೊಡಲು, ಅದನ್ನೇ ಆಹಾರವಾಗಿ ಸ್ವೀಕರಿಸಿ ಭಕ್ತನು ತನ್ನ ಕೈಂಕರ್ಯವನ್ನೂ ದಿನನಿತ್ಯದ ನೆಲ್ಲನ್ನು ಕೊಯ್ಯುವ ಕೆಲಸವನ್ನೂ ನಡೆಸಿಕೊಂಡು ಬರುತ್ತಿದ್ದನು. ಇಂತಹ ದಿನಗಳಲ್ಲಿ ಒಂದು ದಿನ ಮೊದಲವನ (ಈಶ್ವರನ) ಹಿರಿಯ ಭಕ್ತನಿಗೆ ಅಲ್ಲಿ ನಡೆದುದನ್ನು ಇನ್ನು ಮೇಲೆ ಎತ್ತಿ ಹೇಳುವ ದೊಡ್ಡ ಭಾಗ್ಯವನ್ನು ಪಡೆದೆನು.

906. ಹಿಂದಿನಂತೆಯೇ ಈಶ್ವರನಿಗೆ ಸಮರ್ಪಿಸಲು, ಮೇಲು ಮೇಲೂ ವರ್ಧಿಸುವ ಅವನ ಭಕ್ತಿಯಂತೆಯೇ ಪರಿಶುದ್ಧವಾದ ಕೆಂಪಗಾದ ಭತ್ತದ ಅಕ್ಕಿಯನ್ನೂ ಮಾವಿಡಿ ಯನ್ನೂ, ಮೃದುವಾದ ಕೆಂಪಗಾದ ಕೀರೆಯನ್ನೂ, ಕಷ್ಟವನ್ನು ನೀಗಿದ ಮನಸ್ಸುಳ್ಳ ಭಕ್ತನಾದ ನಾಯನಾರನು ಬುಟ್ಟಿಯಲ್ಲಿಟ್ಟು ಹೊತ್ತುಕೊಂಡು ಹೋಗಲು, ಅವನ ಹಿಂದೆ ಹೋಗುವ ಪತ್ನಿಯು ಆವಿನಿಂದ ಪಡೆಯುವ ಐದು ವಸ್ತುಗಳನ್ನು (ಪಂಚಗವ್ಯ ವನ್ನು) ಮಣ್ಣಿನ ಪಾತ್ರದಲ್ಲಿ ಕೊಂಡು ಕೈಯಲ್ಲಿ ಎತ್ತಿಕೊಂಡು ಹೊರಟಳು.

907. ಈ ರೀತಿ ಹೋಗುವಾಗ ಶರೀರವು ಆಯಾಸಗೊಂಡುದರಿಂದ ಕಾಲು ತಡವರಿಸಿ ತಪ್ಪಿ ವ್ಯಥೆಗೊಂಡು ಬಿದ್ದವನನ್ನು ಪಂಚಗವ್ಯವನ್ನು ಕೊಂಡು ಮಣ್ಣಿನ ಪಾತ್ರವನ್ನು ಮುಚ್ಚಿದ ಕೈಯಿಂದ ಬೀಳದಂತೆ ರಕ್ಷಿಸುವ ಆಶೆಯಿಂದ, ಪತ್ನಿಯು ಅವನನ್ನು ಆಧರಿಸಿಯೂ, ಕೆಂಪುನೆಲ್ಲ ಅಕ್ಕಿ, ಮಾವಿಡಿ, ಕೆಂಪಗಾದ ಕೀರೆ ಎಂಬೆಲ್ಲವೂ ನೆಲದ ಬಿರುಕುಗಳಲ್ಲಿ ಚೆಲ್ಲಲು, ಅದನ್ನು ಕಂಡು, ಭೂತನಾಥನಾದ ಶಿವಪರಮಾತ್ಮನ ಭಕ್ತನಾದ ನಾಯನಾರನು, 'ಇನ್ನುಮೇಲೆ ಯಾವುದಕ್ಕಾಗಿ ಅಲ್ಲಿಗೆ ಹೋಗಬೇಕು' ಎಂದು,

---

905. ಮನ್ನೈಮರು ಙ್ಙಟಕು ಮಾಳ ವಟನೆಟು ವಾನ ಮಿಾನೇ
ಯನ್ನೈಯವರ್ ತಣ್ಣೀರ್ ವಾರ್ಕ್ಕ ವಮುತುಚೆಯ್ ತನ್ಪ ನಾರುಮ್
ಪಿನ್ನೈಚೆಯನ್ ಮುಟಿತ್ತು ಚ್ಚೆಲ್ಲ ಮೇವುನಾ ಳೊರುನಾಣ್ ಮಿಕ್ಕ
ಮುನ್ನೈವನಾರ್ ತೊಣ್ಟರ್ ಕ್ಕಙ್ಙ ನಿಕಟ್ಟ್ನ್ತು ಮೊಟಿಯ ಪ್ಪೆಱ್ಱೇನ್.

906. ಮುನ್ಪು ಪೋನ್ ಮುತಲ್ವನಾರ್ಕ್ಕೆ ಯಮುತುಚೆಯ್ ವಿಕ್ಕ ಮೂಳುಮ್
ಅನ್ಪುಪೋ ಱೂಯ ಚೆನ್ನೆ ಲರಿಚಿಮಾ ವಟುಮೆನ್ ಕೀರೈ
ತುನ್ಪುಪೋ ಮನತ್ತು ತ್ತೊಣ್ಟರ್ ಕೂಟೈಯಿಱ್ ಚುಮನ್ತು ಪೋತ
ಪ್ಪಿನ್ಪುಪೋ ಮನೈವಿ ಯಾರಾನ್ ಪೆಱ್ಱವ ಇಕ್ಕೆನ್ತ್ ಚ್ಚೆನ್ಱಾರ್.

907. ಪೋತರಾ ನಿನ್ಱ ಪೋತು ಪುಲರ್ನ್ತುಕಾ ಱಳರ್ನ್ತು ತಪ್ಪಿ
ಮಾತರಾರ್ ವರುನ್ತಿ ವೀಟ್ವಾರ್ ಮಟ್ಕಲ ಮಟುಟು ಕೈಯಾಱ್
ಕಾತಲಾ ಲಣೈತ್ತು ಮೆಲ್ಲಾ ಙ್ಙಮರಿಟ್ಟೆ ಚ್ಚಿನ್ತ ಕ್ಕಣ್ಟು
ಪೋತನಾ ಯಕರ್ತನ್ ತೊಣ್ಟರ್ 'ಪೋವತ ಱಿಕ್ಕಿನಿಯೇ' ನೆನ್ಱು,

908. ಒಳ್ಳೆಯ ಕೆಂಪಗಾದ ಕೀರೆಯೂ, ಪರಿಶುದ್ಧವಾದ ಮಾವಿಡಿಯೂ, ಜೆಲ್ಲಿಹೋದುದರಿಂದ, ಕಷ್ಟವನ್ನು ತೀರಿಸಿ ಆಳಾಗಿಸಿಕೊಳ್ಳಬಲ್ಲವನಾದ ಶಿವಪರಮಾತ್ಮನು ಅವನ್ನು ಭೋಜನಮಾಡಿ, 'ಅನುಗ್ರಹಿಸುವ ಭಾಗ್ಯವನ್ನು ಬಹುವಾದ ಕೇಡನ್ನುಳ್ಳ ನಾನು ಇಲ್ಲಿ ಪಡೆಯದಾಪೆನು,' ಎಂದು ಶೀಘ್ರವಾಗಿ ಅರಿವಾಳನ್ನು ಹೊಡಿ ತನ್ನ ಕಂಠವನ್ನು ಕತ್ತರಿಸಲು ಉದ್ಯಮಿಸಿದನು.

909. 'ನನ್ನನ್ನು ಆಳಾಗಿಸಿಕೊಳ್ಳುವ ಪರಮಾತ್ಮನು ತಾನು ಆಹಾರ ಸೇವಿಸಿಲ್ಲ!' ಎಂದು ಕತ್ತಿನ ಮೇಲೆ ಅರಿವಾಳನ್ನಿಟ್ಟುಕೊಂಡು, ದೋಷವನ್ನು ನೀಗಿಸುವ ಭಕ್ತಿಯ ಮಾರ್ಗದಿಂದ ಸೇರಿದ ಜನ್ಮಪಾಶವನ್ನು ಕತ್ತರಿಸುವಂತೆ, ಹೃದಯದಿಂದ ಬರತಕ್ಕ ಕೊರಲ ಬಳಿಯು ತುಂಡಾಗಿ ಕೊಯ್ದುಹೋಗುವಂತೆ ಕತ್ತಿನೊಡನೆ ಕೊರಲ ಬಳಿಯನ್ನು ಕತ್ತರಿಸುವವನಾದನು.

910. ದೋಷವನ್ನು ಹೋಗಲಾಡಿಸುವ ಚಿಂತೆಯುಳ್ಳ ಭಕ್ತನು ತನ್ನ ಕತ್ತನ್ನು ತುಂಡರಿಸುವ ಅರಿವಾಳನ್ನು ಹಿಡಿಯುವ, ದೋಷವಿಲ್ಲದ ತ್ಯಾಗವುಳ್ಳ ಕೈಯ ಕಾರ್ಯವನ್ನು ತಡೆಯಲು, ಅಂಬರದಲ್ಲಿ ನಟನವಾಡುವ ಈಶ್ವರನು ನೀಡಿದ ಎಡಕೈಯೂ, ಮಾವಿಡಿಯ 'ವಿಡೇಲ್, ವಿಡೇಲ್' (ಮಾವಿಡಿಯನ್ನು ಕಚ್ಚಿದಾಗ ಆಗುವ ಶಬ್ದ) ಎಂಬ ಧ್ವನಿಯೂ ಬಿರುಕಿನಲ್ಲಿಂದ ಆಗಲೇ ಒಂದಾಗಿ ಎದ್ದುವು.

---

908. ನಲ್ಲಚೆ ಙ್ಕೀರೈ ತೂಯ ಮಾವಟು ವರಿಚಿ ಚಿನ್ತ,
'ಅಲ್ಲಙೀರ್ ತ್ತಾಳ ವಲ್ಲಾ ರಮುತುಚೆಯ್ ತರುಳು ಮಪ್ಪೇ
ಙಿಲ್ಲೈಯಿ ಙೀವ್ಯ್ಯ ಯೇನಿ ಙ್ಕೆಯ್ತಿಟ ಪ್ಪೆಙಿ ಲೇ' ನೆನ್
ಙಿಲ್ಲೈಯಿ ಲರಿವಾಟ್ ಪೂಟ್ಟಿ ಯೂಟ್ಟೆಯ್ಯೆ ಯರಿಯ ಲುಙಾರ್;

909. 'ಆಟ್‌ಕೊಳು ಮ್ಯೆಯರ್ ತಾಮಿ ಙ್ಕಮುತು ಚೆಯ್ ತಿಲರ್‌ಕೊ' ಲೆನ್‌ನಾ
ಪ್ಪೂಟ್ಟಿಯ ವರಿವಾಳ್ ಪಙಿ ಪ್ಪುರೈಯಙಿ ವಿರವು ಮನ್‌ಪು
ಕಾಟ್ಟಿಯ ನೆಙಿಯಿ ನುಳ್ಳ ನ್ತಣ್ಣಙಿ ಕ್ಕಟುತ್ತಿ ನೋಟೇ
ಯೂಟ್ಟೆಯು ಮರಿಯಾ ನಿನ್‌ಙಾ ರುಙುಪಿಙಿ ಪ್ಪರಿವಾ ರೊತ್ತಾರ್.

910. ಮಾಚಙು ಚಿನ್ತೈ ಯನ್‌ಪರ್ ಕಟುತ್ತರಿ ಯರಿವಾಟ್ ಪಙು
ಮಾಚಿಲ್ವಣ್ ಕೈಯ್ಯೆ ಮಾಙಿ ವನ್ಪ್ಪಲ ತ್ತಾಟು ಮ್ಯೆಯರ್
ವೀಚಿಯ ಚೆಯ್ಯ ಕೈಯು, ಮಾವಟು 'ವಿಟೇಲ್‌ವಿ ಟೇ' ಲೆನ್
ನೋಚೈಯುಙ್, ಕಮರಿ ನಿನ್‌ಙು ಮೊಕ್ಕವೇ ಯೆಟುನ್ತ ವನ್‌ಙೇ.

911. ಆ ರೀತಿಯಲ್ಲಿದ್ದ ಈಶ್ವರನ ಕೈಯು ಅರಿವಾಳನ್ನು ಹಿಡಿದಿದ್ದ ನಾಯನಾರನ ಬಲವಾದ ಕೈಯನ್ನು ಹಿಡಿದಾಗ, ಅವನು ಭಯಗೊಂಡು, ಆಗಲೇ ಅರಿವಾಳಿನಿಂದ ಉಂಟಾದ ಗಾಯವು ಮಾಯಲು, ಕ್ರೂರವಾದ ಕರ್ಮವು ಬಿಟ್ಟು ನೀಗಿ, ಬಹುವಾಗಿ ಸಂತೋಷವು ಹೆಚ್ಚಲು, ಶಿವಪರಮಾತ್ಮನು ತನ್ನನ್ನು ಒಂದು ವಸ್ತುವಾಗಿ ನೆನಸಿ ತಂದ ಅನುಗ್ರಹದ ಕರುಣೆಯನ್ನು ನೋಡಿ, ಕೈಗಳನ್ನು ಅಂಜಲಿಯಾಗಿ ಎತ್ತಿ ನಮಿಸಿ ನಿಂತು,

912. 'ದಾಸನಾದ ನನ್ನ ಅಜ್ಞಾನವನ್ನು ಕಂಡಿದ್ದೂ ನನ್ನ ಸೇವೆಯನ್ನಿಚ್ಛಿಸಿ ಅದನ್ನು ಒಂದು ವಸ್ತುವಾಗಿ ಮನ್ನಿಸಿ, ನೆಲದ ಬಿರುಕಿನಲ್ಲಿ ಬಂದು ಇಲ್ಲಿ ನೈವೇದ್ಯವನ್ನು ಸ್ವೀಕರಿಸಿದ ಪರಮವಸ್ತುವೇ, ಸ್ತೋತ್ರವು! ಡಮರುಗದಂತಿರತಕ್ಕ ನಡುವನ್ನುಳ್ಳ ಉಮಾಮಾತೆಯವರನ್ನು ಒಂದು ಭಾಗದಲ್ಲುಳ್ಳ ಪರಿಶುದ್ಧವಾದ ಒಳ್ಳೆಯ ಜ್ಯೋತಿಯೇ ಸ್ತೋತ್ರವು! ವಿಭೂತಿಯನ್ನು ಧರಿಸಿದ ಹವಳದಂತಿರತಕ್ಕ ಶರೀರವನ್ನೂ ಹುರಿಜಡೆಯನ್ನೂ ಉಳ್ಳ ಪುರಾತನನೇ ಸ್ತೋತ್ರವು!'

913. ಎಂದು ಆತನು ಸ್ತುತಿಸಲು, ವೃಷಭಾರೂಢನಾಗಿ ಪ್ರತ್ಯಕ್ಷವಾಗಿ ದರ್ಶನವನ್ನು ಕೊಟ್ಟು, 'ನೀನು ಮಾಡಿದ ಕೈಂಕರ್ಯವು ತುಂಬಾ ಒಳ್ಳೆಯದು. ಸುಂದರವಾದ ನೊಸಲುಳ್ಳ ನಿನ್ನ ಹೆಂಡತಿಯೊಡನೆ ಶಾಶ್ವತವಾಗಿ ನಮ್ಮ ಲೋಕದಲ್ಲಿ ಬಾಳುವವನಾಗು!' ಎಂದು ಅನುಗ್ರಹಿಸಿ, ಅಂಬರದಲ್ಲಿ ನಟನವಾಡುವ ಪರಮಾತ್ಮನು, ಅವನು ತನ್ನೊಡನೆಯೇ ಕೂಡಿಬರಲು ಅಲ್ಲಿಂದ ಅಂತರ್ಧಾನನಾದನು.

---

911. ತಿರುಕ್ಕೈಯುಟನ್ ಉಱಿವಾಟ್ ಪಱ್ಱು ನಿನ್ಱಕ್ಕೈಯೈಪ್ ಪ್ಪಿಟಿತ್ತ ಪೋತು
ವೆರುಕ್ಕೊಳ ಉಱುಕಣ್ ನೀಙ್ಕ ವೆವ್ವಿನೈ ವಿಟ್ಟು ನೀಙ್ಕ
ಪ್ಪೆರುಕ್ಕವೇ ಮಕಿೞ್‌ಚ್ಚಿ ನೀಟ, ತ್ತಮ್ಪಿರಾನ್ ಪೇಣಿ ತ್ತನ್ತ
ವರುಟ್‌ಪೆರು ಙ್ಕರುಣೈ ನೋಕ್ಕಿ ಯಞ್ಚಲಿ ಕೂಪ್ಪಿ ನಿನ್ಱು,

912. 'ಅಟಿಯನೇನ್ ಅಱಿವಿ ಲಾಮೈ ಕಣ್ಟುಮ್ ಎನ್ ಅಟಿಮೈ ವೇಣ್ಟಿಪ್
ಪಟಿಮಿಚೈ ಕ್ಕಮರಿಲ್ ವನ್ತಿಙ್ ಕಮುತುಚೆಯ್ ಪಾನೇ ಪೋಱ್ಱಿ!
ತುಟಿಯಿಟೈ ಪಾಕಮಾನ ತೂಯನಱ್ ಚೋತಿ ಪೋಱ್ಱಿ!
ಪೊಟಿಯಣಿ ಪವಳ ಮೇನಿ ಪ್ಪುರಿಚಟೈ ಪ್ಪುರಾಣ ಪೋಱ್ಱಿ!'

913. ಎನ್ಱವರ್ ಪೋಱ್ಱಿ ಚೆಯ್ಯ ಇಟಪವಾ ಕನರಾಯ್ ತ್ತೋನ್ಱಿ
'ನನ್ಱು ನೀ ಪುರಿನ್ತ ಚೆಯ್‌ಕೈ; ನನ್ನುತ ಲುಟನೇ ಕೂಟ
ಎನ್ಱುಕಮ್ ಉಲಕಿಲ್ ವಾೞ್‌ವಾಯ್' ಎನ್ಱವರ್ ಉಟನೇ ನಣ್ಣ
ಮನ್ಱುಳೇ ಆಟುಮ್ ಐಯರ್ ಮೞವಿಟೈ ಉಕೈತ್ತು ಚ್ಚೆನ್ಱಾರ್.

914. ಭಕ್ತಿಯುತವಾದ ಚಿಂತನೆಯುಳ್ಳ ಭಕ್ತನಾದ ನಾಯನಾರನು, 'ಪರ ವಸ್ತುವಾಗಿ ಉಳ್ಳ ಹಿರಿಯನಾದ ಶಿವಪರಮಾತ್ಮನು ಇಲ್ಲಿ ಭೋಜನವನ್ನು ಮಾಡುವ ಭಾಗ್ಯವನ್ನು ಪಡೆಯಲಿಲ್ಲ' ಎಂದುಕೊಂಡು, ರೇಖೆಯನ್ನುಳ್ಳ ಮಾವಿಡಿಯ 'ವಿಡೇಲ್' ಎಂಬ ಶಬ್ದವನ್ನು ಅವನು ಕೇಳುವುದಕ್ಕೆ ಮೊದಲು, ತನ್ನ ಬಲವಾದ ಕತ್ತನ್ನು ಅರಿವಾಳಿನಿಂದ ಕತ್ತರಿಸುವ ಉದ್ಯಮದಿಂದ, ಅರಿವಾಳ್ತಾಯನಾರ್ ಎಂಬ ಪರಿಶುದ್ಧವಾದ ಹೆಸರನ್ನುಳ್ಳವನಾದನು.

915. ಕೆಂಪಗಾದ ನೆಲ್ಲ ಅಕ್ಕಿ ಮೊದಲಾದುವು ಚೆಲ್ಲಲು, ಅವು ಚೆದರಿದ ಆ ಬಿರುಕೇ ಕಾರಣವಾಗಲು, ಈಶ್ವರನು ಭೋಜನಮಾಡಿ ಅನುಗ್ರಹಿಸಲು, ಆ ನೆಲೆಯಲ್ಲಿ ಮಾವಿಡಿಯ 'ವಿಡೇಲ್' ಎಂಬ ಶಬ್ದವು ತನ್ನ ಕಿವಿಗಳಲ್ಲಿ ಬೀಳುವಂತೆ ಕೇಳುವವನಾಗಿ ಭಾಗ್ಯ ಪಡೆದ ಭಕ್ತನಾದ ನಾಯನಾರನ ಪಾದವನ್ನು ನಮಿಸಿ, ಆ ಸಹಾಯದಿಂದ ಆಯನಾರನ ಕಾರ್ಯವನ್ನು ತಿಳಿದಂತೆ ಸ್ತುತಿಸತೊಡಗುವೆನು.

---

914. ಪರಿವುಱು ಚಿನ್ದೈ ಅನ್ಬರ್ ಪರಮ್ಪೊರು ಳಾಕಿ ಯುಳ್ಳ
ಪೆರಿಯವರ್ ಅಮುತು ಚೆಯ್ಯ ಪೆಱ್ಱಿಲೇನ್ ಎನ್ಱು ಮಾವಿನ್
ವರಿವಟು ವಿಟೇಲೆ ನಾಮುನ್ ವನ್ಕಟು ತ್ತರಿವಾಳ್ ಪೂಟ್ಟಿ
ಅರಿತಲಾಲ್ 'ಅರಿವಾಟ್ಟಾಯರ್' ಆಯಿನಾರ್ ತೂಯ ನಾಮಮ್.

915. ಮುನ್ನಿಲೈ ಕಮಚೇ ಯಾಕ ಮುತಲ್ವನಾರ್ ಅಮುತು ಚೆಯ್ಯ
ಚೆನ್ನೆಲಿನ್ ಅರಿಚಿ ಚಿನ್ದ ಚ್ಚೆವಿಯುಱ ವಟುವಿನ್ ಓಚೈ
ಅನ್ನಿಲೈ ಕೇಟ್ಟ ತೊಣ್ಡರ್ ಅಟಿಯಿಣೈ ತೊಱುತು ವಾಱ್ತ್ತಿ
ಮನ್ನುಮ್ಅ ನಾಯರ್ ಚೆಯ್ಕೈ ಅಱಿನ್ದವಾ ವಱುತ್ತ ಲುಱ್ಱೇನ್.

14. ಆನಾಯ ನಾಯನಾರ

916. ಪಕ್ಕಗಳಲ್ಲಿ ಹರಡುವ ಸುವಾಸನೆಯುಳ್ಳ ಸುಂದರವಾದ ನಂದನಗಳಲ್ಲಿ ಆಕಾಶದ ಚಂದ್ರನು ಬಂದು ಏರಲು, ನೆಲ್ಲಿನ ಸೂಡಿಗಳು ಹರಹಿದ್ದ ಗದ್ದೆಗಳ ಹುಣಿಗಳಲ್ಲಿ ತುಂಬಿಗಳು ಏರಲು, ಮೇಲೆ ಮೇಲೆ ಸೇರಿಸಿಟ್ಟ ಎತ್ತರವಾದ ಬೈಹುಲ್ಲ ರಾಶಿಗಳ ಮೇಲೆ, ಸಂಚರಿಸಿ ತಂಗಲಿಕ್ಕಾಗಿ ಮೇಘಗಳು ಏರಲು, ನೆಲೆವಟ್ಟ ಭಾಗ್ಯವುಳ್ಳುದು 'ಮೇನ್‌ಮಲ ನಾಡು' ಎಂದು ಹೇಳಲ್ಪಡುವ ನೀರಿನ ಭಾಗ್ಯವುಳ್ಳ ನಾಡು.

917. ಅಲ್ಲಿ ನೆರಿಹಿಡಿದು ಉಟ್ಟ ಬಟ್ಟೆಯನ್ನು ಮೇಲೆ ಧರಿಸಿದ ಚೆಲುವು ಉಳುವ ಹೆಂಗಸರದು. ಅವರ ಎಣ್ಣೆ ಸವರಿದ ತಲೆಕೂದಲ ಕರಿಯ ಸುರುಳಿಯನ್ನು ಹೊಂದಿ ಮೃದುವಾದ ರೆಕ್ಕೆಗಳುಳ್ಳ ತುಂಬಿಗಳು ನಿದ್ರಿಸುವುವು. ಸುವಾಸನೆಯುಳ್ಳ ತಾವರೆಯ ಹೂವಿನಲ್ಲಿ ನಿಡಿದಾದ ಕಯಲು ಮೀನುಗಳು ಒರಗುವುವು. ಮಾವುರದ ನಂದನಗಳಲ್ಲಿ ಒಳ್ಳೆಯ ಸುವಾಸನೆಯೂ ಶೈತ್ಯವೂ ಉಳ್ಳ ನೆಳಲಲ್ಲಿ ಕರಿಯ ಎಮ್ಮೆಗಳು ನಿದ್ರಿಸುವುವು.

918. ಕಬ್ಬಿನ ಆಲೆಗಳನ್ನು ರೈತರು ನಡೆಸುವಾಗ ಅದರ ಜತೆಮರಗಳು ಹಲವು ಸಲ ಸುತ್ತಿ ಬರುವುದರಿಂದ ಏಳುವ ಇಂಪಾದ ಶಬ್ದದಿಂದ, ಪಕ್ಕಗಳಲ್ಲಿ ಹಂಸಗಳು ತಂಗುವ ಶೀತಲವಾದ ಸ್ನಾನಘಟ್ಟಗಳುಳ್ಳ ತಟಾಕಗಳ ಪಕ್ಕದಲ್ಲಿ, ಕಬ್ಬಿನ ರಸವನ್ನು ಕಾಯಿಸುವ ಹೊಗೆಯಿಂದ, ಮುಗಿಲಿನ ದೃಶ್ಯದಂತಿರುವ ಸ್ವಭಾವವು ತೋರಿಬರುವುದು.

---

14. ಆನಾಯ ನಾಯನಾರ್

916. ಮಾಟು ವಿರೈಪ್ಪೊಲಿ ಚೋಲೈಯಿನ್ ವಾನ್‌ಮತಿ ವನ್ತೇಱ,
ಚ್ಚೂಟು ಪರಪ್ಪಿಯ ಪಣ್ಣೈ ವರಮ್ಪು ಚುರುಮ್ಪೇಱ,
ಈಟು ಪೆರುಕ್ಕಿಯ ಪೋರ್ಕಳಿನ್ ಮೇಕ ಮಿಳೈತ್ತೇಱ,
ನೀಟು ವಳತ್ತತು ಮೇನ್‌ಮಟಿ ನಾಟೆನು ನೀರ್‌ನಾಟು.

917. ನೀವಿ ನಿತಮ್ಪ ಪುಟಿತ್ತಿಯರ್ ನೆಯ್‌ಕ್ಕುಟಿನ್ ಮೈಚ್ಚೂಟಿಲ್
ಮೇವಿ ಯುಱಙ್ಕುವ ಮೆನ್‌ಚಿಱೈ ವಣ್ಡು; ವಿರೈಕ್ಕಞ್ಚ
ಪ್ಪೂವಿ ಲುಱಙ್ಕುವ ನೀಳ್ಕಯಲ್; ಪೂಮಲಿ ತೇಮಾವಿನ್
ಕಾವಿ ನಱುಙ್ಕುಳಿರ್ ನೀಟಲು ಱಙ್ಕುವ ಕಾರ್ಮೇತಿ.

918. ವನ್‌ನಿಲೈ ಮಳ್ಳ ರುಕೈಪ್ಪ ವೆಟುನ್ತ ಮರಕ್ಕೋವೈ
ಪನ್‌ಮುಱೈ ವನ್ತೆಟು ಮೋಚೈ ಪಯಿನ್‌ಱ ಮುಟಕ್ಕತ್ತಾಲ್
ಅನ್‌ನ ಮರುಙ್ಕುಱೈ ತಣ್ಟುಱೈ ವಾವಿ ಯತನ್‌ಪಾಲೈ
ಕ್ಕನ್‌ನ ಲಟುಮ್ಪುಕೈ ಯಾನ್‌ಮುಗಿಲ್ ಚೆಯ್ಯ ಕರುಪ್ಪಾಲೈ.

919. ಉಕ್ಕಿದ ನದಿಯ ಅಲೆಗಳು ಬೀಸಾಡಿದ ಶಂಖಗಳು, ದೊಡ್ಡ ಎಲೆಗಳನ್ನುಳ್ಳ ಬಾಳೆಯ ಹಸುರಾದ ಎಲೆಗಳನ್ನು ಸುತ್ತಿದ ಬಳ್ಳಿಗಳ ಮಾರ್ಗವಾಗಿ ಏರಿ ಹೋಗಿ, ಹಸುರಾದ ಕವುಂಗಿನ ಶಿಖರದಲ್ಲಿ ಏರಿ ಸೇರಿ, ಅಲ್ಲಿ ಅವುಗಳ ಹಾಳೆಗಳು ಹೂ ಉದಿರಿಸುವಂತೆ ಮುತ್ತುಗಳನ್ನು ಸುರಿಸುವುವು.

920. ಸುವಾಸನೆಯ ಹೂಗಳನ್ನುಳ್ಳ ಗದ್ದೆಗಳ ಸಮೀಪದ ಒಂದು ಪಕ್ಕದಲ್ಲಿ, ಕಾಡುಭಾಗವು ಸುತ್ತುವರಿದ ಪಕ್ಕನೆಲವು, ಹಸು ಈದ, ಮಿಕ್ಕ ಎಳವೆಯನ್ನುಳ್ಳ, ಜಿಗಿದು ಹಾರುವುದರಿಂದ ಕಾಡುನೆಲದಲ್ಲಿ ಗಿಡಗಳ ಮೇಲೆ ಹಾರಿ, ಓಡಾಡಿ ನಡೆಯುವ ಎಳೆಗರುವು ತೋಟದಲ್ಲಿರುವ ಸುಂದರವಾದ ಜಿಂಕೆಮರಿಗಳ ಗುಂಪುಗಳೊಡನೆ ಕೂಡಿ ಹಾರಿ ಓಡುವ ಭಾಗ್ಯವಿರುವಂತಹುದು.

921. ಕಾರ್ಗಾಲದಲ್ಲಿ ಮಲರುವ ಮೊಲ್ಲೆಯ ಶೀತಲವಾದ ಹಲ್ಲಿನಂತಿರುವ ಬಿಳಿದಾದ ಹೂಗಳನ್ನುಳ್ಳ ತುಂಬಿಗಳು ಕಣ್ಣಂತೆ ಮಲರುವ ಕನ್ನೈದಿಲೆಯ ಮಲರುಗಳಲ್ಲಿ ಮುಸುರಿರುವುವು. ಕಾಯರ್‌ಮರದ ಸುಂದರವಾದ ಪ್ರಶಸ್ತವಾದ ಕೊಂಬುಗಳಲ್ಲುಳ್ಳ ಒಂದು ಜಾತಿಯ ಕೊಕ್ಕರೆಗಳು ದೊಡ್ಡ ನೆಲ್ಲ ಪಯಿರನ್ನುಳ್ಳ ಗದ್ದೆಗಳಿಂದ ಮೇಲೆದ್ದು ಹಾರುವ ಕಯಲುಮೀನುಗಳ ಮೇಲೆ ಹಾರಿಕೊಂಡಿರುವುವು.

---

919. ಪೊಙ್ಕಿಯ ಮಾನತಿ ನೀಟಲೈ ಯುನ್ತು ಪುನಱ್‌ಚಙ್ಗನ್
ತುಙ್ಕ ವಿಲೈಕ್ಕತ ಲಿಪ್ಪುತನ್ ಮಿಾತು ತೊಟಕ್ಕಿಪ್ಪೋಯ್
ತ್ತುಙ್ಕಿಯ ಪಾಚಟೈ ಚೂಱ್‌ಕೊಟಿ ಯೂಟು ತವಱ್‌ನ್ತೇಱಿ
ಪೈಙ್ಕಮು ಕಿನ್‌ಱಲೈ ಮುತ್ತು ಮುತಿರ್‌ಕ್ಕುವ ಪಾಳೈಯೆನ.

920. ಅಲ್ಲಿ ಮಲರ್‌ಪ್ಪಟಿ ನತ್ತಯ ನಾಕಿಟಿ ವಾನೀನುಮ್
ಒಲ್ಲೈ ಮುಟುಪ್ಪೈ ಯುಕೈಪ್ಪಿ ನುಟಿಕ್ಕು ಕುಟಿಕ್ಕನ್‌ಱು
ಕೊಲ್ಲೈ ಮಟಕ್ಕುಲು ಪಾನ್‌ಮಱಿ ಯೋಟು ಕುತಿತ್ತೋಟುಮ್
ಮಲ್ಕು ವಳತ್ತತು ಮುಲ್ಲೈ ಯುಟುತ್ತ ಮರುಙ್ಕೋರ್‌ಪಾಲ್.

921. ಕಣ್ಮಲರ್ ಕಾವಿಕಳ್ ಪಾಯ ವಿರುಪ್ಪನ ಕಾರ್ಮುಲ್ಲೈ
ತ್ತಣ್ಣಕೈ ವೆಣ್ಮುಕೈ ಮೇವು ಚುರುಮ್ಪು; ತಟಙ್ಕಾಲಿ
ಪ್ಪಣ್ಣೈ ಯೆಟುಙ್ಕಯಲ್ ಪಾಯ ವಿರುಪ್ಪನ ಕಾಯಾವಿನ್
ವಣ್ಣ ನಱುಙ್ಕಿನೈ ಮೇವಿಯ ವನ್‌ಚಿಜಕೈ ವಣ್ಟಾನಮ್.

922. ಮರದ ಗೆಲ್ಲಿನ ಹೊರಗೆ ತುಂಬಿಗಳು ಅಲೆಯುವುದಕ್ಕೆ ಡೆಯಾದ ಉದ್ಯಾಗಳಲ್ಲಿ, ಮೇಲೆ ಬಾನದಾರಿಯಲ್ಲಿ ಓಡುವ ಸೂರ್ಯನ ಉಷ್ಣಕಿರಣಗಳು ತಂಗುವಂತೆ ಶೋಭಿಸುವ, ಒಳ್ಳೆಯದಾದ ಆ ಮೇಲ್ ಮಟಿನಾಡು (ಪಡದೆಸೆಯಲ್ಲಿರುವ ಮಟಿವರುಗಳು ಇರುವ ನಾಡು) ಈ ಭೂಲೋಕಕ್ಕೆ ಉತ್ತಮ ಆಭರಣವಾಗಲು, ಒಳ್ಳೆಯ ಬಾಳ್ವೆಯನ್ನು ತರತಕ್ಕ ತಿರುಮಂಗಲಂ ಎಂಬ ದೊಡ್ಡ ಪುರಾತನ ಊರು ಆ ನಾಡಿಗೆ ಸರಿಸಮಾನವಿಲ್ಲದ ಮಂಗಲಸೂತ್ರದಂತಿದೆ.

923. ಆ ಪುರಾತನ ಊರು ಸಮಾನವಿಲ್ಲದ ದೊಡ್ಡ ಕುಟುಂಬಗಳು ವಂಶಪರಂಪರೆಯಾಗಿ ಬಾಳಿ ಬರುವ ಸ್ವಭಾವದಿಂದ ಒಂದು ಕಾಲದಲ್ಲಿಯೂ ನೀಗದೆ, ಸ್ಥಿರವಾದ ಭಾಗ್ಯಗಳೆಲ್ಲವನ್ನೂ ವೃದ್ಧಿಮಾಡಿ, ಧರ್ಮಕಾರ್ಯಗಳನ್ನು ಮಾಡುವ ಉತ್ತಮ ಗುಣದೊಡನೆ ಎತ್ತಿ ತೋರಿಸಿ ಹೇಳುವಂತೆ ಹಿರಿದಾದ ಮಹತ್ವದಿಂದ ಶ್ರೇಷ್ಠವಾದುದಾಗಿದೆ. ಆ ರೀತಿ ಖ್ಯಾತಿಹೊಂದಿದ ಆ ಊರಲ್ಲಿ ನೆಲಸಿದ ಆಯರ್ ಕುಲದಲ್ಲಿ (ಗೋವಳರ ಕುಲದಲ್ಲಿ) ಸೇರಿದವನು ಅನಾಯರ್ ಎಂಬವನು.

924. ಅವನು ಆಯರ್‌ಕುಲಕ್ಕೆ ಶೋಭೆಯನ್ನು ತರಲು ಈ ಲೋಕದಲ್ಲಿ ಅವತರಿಸಿದವನು. ಪರಿಶುದ್ಧವಾದ ಕಾಂತಿಯನ್ನು ಸೂಸುವ ವಿಭೂತಿಯನ್ನಾಶಿಸುವ ಕೈಂಕರ್ಯದಲ್ಲಿ ನಿಂತಿರುವವನು. ಮನೋವಾಕ್ಕಾಯಗಳಿಂದ, ಭೂತಗಣಗಳೊಡನೆ ನಟನವಾಡುವ ಶಿವಪರಮಾತ್ಮನ ಶ್ರೀಪಾದಗಳನ್ನಲ್ಲದೆ ಬೇರೊಂದನ್ನು ನಮಿಸದವನು.

---

922. ಪೊಙ್ಕರಿಲ್ ವಣ್ಡು ಮುಱಮ್ಪಲ್ಲೈ ಚೋಲೈಕಣ್ ಮೇಲೋಟುಮ್
ವೆಙ್ಕತಿರ್ ತಙ್ಕ ವಿಳಙ್ಕಿಯ ಮೇನ್‌ಮಟಿ ನನ್‌ನಾಟಾಮ್
ಅಙ್ಕತು ಮಣ್ಣಿ ನರುಙ್ಕಲ ಮಾಕ, ವತಱ್‌ಕೇಯೋರ್
ಮಙ್ಕಲ ಮಾನತು ಮಙ್ಕಲ ಮಾಕಿಯ ವಾಟ್‌ಮೂತೂರ್.

923. ಒಪ್ಪಿಲ್ ಪೆರುಙ್ಕುಟಿ ನೀಟಿಯ ತನ್‌ಮೈಯಿ ಲೋವಾಮೇ
ತಪ್ಪಿಲ್ ವಳಙ್ಕಳ್ ಪೆರುಕ್ಕಿ ಯಱಮ್ಪುರಿ ಚಾಲ್ಪೋಟು
ಇಪ್ಪಿ ವುಯರ್‌ನ್ತ ಚಿಱಪ್ಪಿನ್ ಮಲಿನ್ತತು ಚೀರ್ಮೇವುಮ್
ಅಪ್ಪತಿ ಮುನ್‌ನಿಯ ವಾಯರ್ ಕುಲತ್ತವ ರಾನಾಯರ್.

924. ಆಯರ್ ಕುಲತ್ತೈ ವಿಳಕ್ಕಿಟ ವನ್ತುತ ಯಞ್ಚೆಯ್ತಾರ್;
ತೂಯ ಚುಟರ್‌ತ್ತಿರು ನೀಱು ವಿರುಮ್ಪು ತೊಟುಮ್ಪುಳ್ಳಾರ್;
ವಾಯಿನಿನ್ ಮೆಯ್ಯಿನ್ ವಟುತ್ತ ಮನತ್ತಿನ್ ವಿನೈಪ್ಪಾಲಿಱ್
ಪೇಯುಟ ನಾಟು ಪಿರಾನಟಿ ಯಲ್ಲತು ಪೇಣಾತಾರ್.

925. ಅವನು ಹಸುವಿನ ಕೂಟಗಳನ್ನು ವಿಶಾಲವಾದ ಮುಲ್ಲೈ ನೆಲದ ಕಾಡಿಗೆ ಕೊಂಡುಹೋಗಿ ಕಾಡಿನಲ್ಲುಳ್ಳ ಕ್ರೂರವಾದ ಪ್ರಾಣಿಗಳಿಂದಲೂ ರೋಗಗಳಿಂದಲೂ ಬರುವ ಕಷ್ಟಗಳನ್ನು ನೀಗಿಸಿ ಕಾದು, ಆ ಪಶುವಿನ ಕೂಟಗಳು, ಎಲ್ಲಿಯೂ ಪರಿಶುದ್ಧವಾದ ಹುಲ್ಲನ್ನು ಮೇದು, ನಿರ್ಮಲವಾದ ನೀರನ್ನು ಕುಡಿದು ವೃದ್ಧಿಹೊಂದುವಂತೆ ಕಾಪಾಡಿದನು.

926. ಕರುಗಳು, ಹಾಲು ಕರೆಯುವುದನ್ನು ನಿಲ್ಲಿಸಿದ ಎಳೆಪಶುಗಳು, ಹಾಲು ಕರೆಯುವ ಪಶುಗಳು, ಸಣ್ಣ ರೋಮವುಳ್ಳ ತಲೆಯನ್ನೂ ಮೃದುಸ್ವಭಾವವನ್ನೂ ಉಳ್ಳ ಗರ್ಭದ ಹಸುಗಳು, ಆಗ ತಾನೇ ಈದ ಕರುವುಳ್ಳ ಪಶುಗಳು, ಜಯವುಳ್ಳ ವೃಷಭಗಳ ಕೂಟಗಳು, ಈ ರೀತಿ ಜಾತಿಗಳ ವಿಂಗಡಗಳು ಬೇರೆ ಬೇರೆಯಾಗಿ ಉಳ್ಳ ಕೊಟ್ಟಿಗೆಗಳಲ್ಲಿ ಹಲವು ದನಕಟ್ಟುವ ಸಾಲಿನ ಗೂಟಗಳಿವೆ.

927. ಪಶುಕೂಟಗಳು ಈ ರೀತಿ ವೃದ್ಧಿಹೊಂದುವಂತೆ ಕಾಪಾಡಿ, ಗೋವಳರು ತನ್ನ ಆಜ್ಞೆಯಂತೆ ನಡೆದು ತಾನು ಆಜ್ಞಾಪಿಸಿದ ಕಾರ್ಯಗಳನ್ನು ಮಾಡಿ ನಿಲ್ಲಲು, ಆಯರ್ ಕುಲವನ್ನು ಕಾಪಾಡುವ ಹಿರಿಯನಾದ ಆನಾಯರು, ಶಿವಪರಮಾತ್ಮನ ಶ್ರೀಪಾದಗಳಲ್ಲಿ ಭಕ್ತಿಹೊಂದಿದ ಸಂಗೀತರಾಗದೊಡನೆ ಪಿಳ್ಳಂಗೋವಿ ಬಾರಿಸುವುದನ್ನು ಅಭ್ಯಾಸಮಾಡಿಕೊಂಡಿದ್ದನು.

---

925. ಆನಿರೈ ಕೂಟ ವಕನ್‌ಪುಱ ವಿಱ್‌ಕೊಟು ಚೆನ್‌ಱೇಱಿ
ಕ್ಕಾನುಱೈ ತೀಯ ವಿಲಙ್ಕುಱು ನೋಯ್‌ಕಳ್ ಕಟಿನ್ತೆಙ್ಕು
ನ್ತೂನಱು ಮೆನ್‌ಪು ಲರುನ್ತಿ ವಿರುಮ್ಪಿಯ ತೂನೀರುಣ್
ಟೂನಮಿ ಲಾಯ ಮುಲಪ್ಪಿಲ ಪಲ್ಕ ವಳಿತ್ತುಳ್ಳಾರ್.

926. ಕನ್‌ಱೊಟು ಪಾನ್‌ಮಱೈ ನಾಕು ಕಱಪ್ಪನ ಪಾಲಾವುಮ್
ಪುನ್‌ಱಲೈ ಮೆನ್‌ಚಿನೈ ಯಾನೊಟು ನೀಟು ಪುನಿಱ್ಱಾವುಮ್
ವೆನ್‌ಱಿ ವಿಟೈಕ್ಕುಲ ಮೋಟು ಮಿನನ್ತೊಱುಮ್ ವೆವ್ವೇಱೇ
ತುನ್‌ಱಿ ನಿಱೈನ್ತನ್ತ ಚೂೞ ಲುಟನ್‌ಪಲ ತೋೞಙ್ಕಳ್.

927. ಆವಿ ನಿರೈಕ್ಕುಲ ಮಪ್ಪಟಿ ಪಲ್ಕ ವಳಿತ್ತನ್‌ಱು
ಱ್ಕೋವಲ ರೇವಲ್ ಪುರಿನ್ತಿಟ ವಾಯರ್ ಕುಲಮ್ಪೇಣು
ಱ್ಕಾವಲರ್ ತಮ್ಪೆರು ಮಾನಟಿ ಯನ್‌ಪುಱು ಕಾನತ್ತಿನ್
ಮೇವು ತುಳೈಕ್ಕರು ವಿಕ್ಕುೞಲ್ ವಾಚನೈ ಮೇಱ್ಕೊಣ್ಟಾರ್.

928. ಪುರಾತನವಾದ ಸಂಗೀತಕಲೆಯ ವೇದಗ್ರಂಥಗಳಲ್ಲಿ ಹೇಳಿದ ವಿಧಿಯಂತೆ, ಎದ್ದು ಬೆಳೆದ ಬಿದಿರಿನ ತುದಿಯ ನಾಲ್ಕು ವಿಭಾಗಗಳ ಅಡಿಯಲ್ಲಿ ಎರಡು ಭಾಗಗಳಲ್ಲಿ ತುಂಡುಮಾಡಿ ಎಡೆಯ ಭಾಗವನ್ನು ತೆಗೆದು, ಸ್ವರಗಳುಂಟಾಗುವ ಸ್ಥಾನಗಳಲ್ಲಿ ದ್ವಾರಗಳ ಸಾಲನ್ನು ಮಾಡಿ ಮೊದಲಲ್ಲಿ ಗಾಳಿಯನ್ನುಂಟಾಗಿಸುವ ದ್ವಾರವನ್ನೂ ಆಮೇಲೆ ದೋಷವಿಲ್ಲದಿರುವ ಒಂದೊಂದಂಗುಲದ ಅಂತರಗಳಲ್ಲಿ ದ್ವಾರಗಳನ್ನೂ ಮಾಡಿ,

929. ಈ ರೀತಿ ತೆಗೆಯಲ್ಪಟ್ಟ ಬಿದಿರಿನ ಕೊಳಲಾದ, ದ್ವಾರದಿಂದ ನಾದಬರತಕ್ಕ ವಾದ್ಯದಲ್ಲಿ ನಮ್ಮ ಶಿವಪರಮಾತ್ಮನ ಪಂಚಾಕ್ಷರಿಯನ್ನು ಸೇರಿಸಿ, ಕ್ರಮವಾಗಿ ಬರುವ ಸಪ್ತಸ್ವರಗಳನ್ನುಳ್ಳ ಶ್ರುತಿಯನ್ನು ಪಡೆಯುವಂತೆ ಬಾರಿಸಿ, ಅದರಿಂದ ಬೇರೆ ದಾರಿಯಲ್ಲಿ ಹೋಗದೆ ಸಂಗೀತದಿಂದ ತಡೆಯಲ್ಪಟ್ಟ ಚರಾಚರಗಳೆಲ್ಲಾ ಸೇರಿಬರುವಂತೆ ತಮ್ಮ ಕರುಣೆಯಿಂದ ಕೂಡಿದ ಸಂಗೀತಾಮೃತವನ್ನು ತಂದುಕೊಟ್ಟು ಈ ರೀರಿ ಬಾಳ್ವೆ ನಡೆಸುವನು. ಹೀಗಿರುವಾಗ ಒಂದು ದಿನದಲ್ಲಿ,

930. ಸುವಾಸನೆಯುಳ್ಳ ಮಲರಮಾಲೆಯು ಶೋಭಿಸಿ ಕಾಣಿಸಲು, ತಲೆ ಕೂದಲ ಸಿಕ್ಕು ತೆಗೆದು ಪಕ್ಕದಲ್ಲಿ ಮೇಲೆ ಉನ್ನತವಾಗುವಂತೆ, ಮುಡಿಯಾಗಿ ಮಾಡಿದ ಕೂದಲ ಗೊಂಡೆಯಲ್ಲಿ ಒತ್ತಾಗಿ ಕಟ್ಟಿದ ಕಣ್ಣಿಮಾಲೆಯನ್ನು ಸೇರಿಸಿಟ್ಟು, ಹಸುರಾದ ಎಲೆಗಳನ್ನುಳ್ಳ ಮೃದುವಾದ ಬಳ್ಳಿಗಳಿಂದಾದ ಹಗ್ಗದಲ್ಲಿ ನರುವಿಲ ಹೂಗಳನ್ನು ಸೇರಿಸಿ, ಹೊನ್ನಕಾಸುಗಳನ್ನು ಕಟ್ಟಿದ ಹಗ್ಗದಿಂದ ಕರಿಯ ಕೂದಲ ಮುಡಿಯ ಹೊರಭಾಗವನ್ನು ಕಟ್ಟಿ,

---

928. ಮುನ್ಱೈಮುಱೈ ತೂಣ್ಮರಪಿನ್ ಮೊೞಿನ್ಱಮುಱೈ ಯೆೞುನ್ದವೇಯಿನ್
ಅನ್ಱಮುತ ನಾಲಿರಣ್ಡಿ ನರಿನ್ದುನರವ್ ಪುಱತ್ತಾನಮ್
ವನ್ದತುಳೈ ನಿರೈಯಾಕ್ಕಿ ವಾಯುತಲ್ ವಙ್ಗುತುಳೈ
ಯನ್ದವಿಲ್ಚೀ ರಿಟೈಯಿಟ್ಟ ನಙ್ಗುಲಿಯೆಣ್ ಕಳಿಲಮೈತ್ತು,

929. ಎಟುತ್ತಕುೞಱ್ ಕರುವಿಯಿನಿ ಲೆೞುತ್ತಿನಾ ನೆೞುತ್ತೈನ್ದು
ನ್ದೊಟುತ್ತಮುಱೈ ಯೇೞಿಚೈಯಿನ್ ಚುರುತಿಪೆಱ ವಾಚಿತ್ತು
ತ್ತಟುತ್ತಚರಾ ಚರಙ್ಗಳೆಲಾ ನ್ದಙ್ಗವರು ನ್ದಙ್ಗರುಣೈ
ಯಟುತ್ತವಿಚೈ ಯಮುತಳಿತ್ತು ಚ್ಚೆಲ್ಕಿನ್ಱಾ ರಙ್ಗೊರುನಾಳ್,

930. ವಾಚಮಲರ್ ಪ್ಪಿಣೈಪೊಙ್ಗ ಮಯಿರ್ನುಱುತಿ, ಮರುಙ್ಗುಯರ್ನ್ದ
ತೇಚುಟೈಯ ಚಿಕಳಿಕೈಯಿಱ್ ಚೆಱಿಕಣ್ಣಿ ತ್ತೊಟೈಚೆರುಕಿ,
ಪ್ಪಾಚಿಲೈಮೆನ್ ಕೊಟಿಯಿನ್ವಟಮ್ ಪಯಿಲನಱು ವಿಲಿಪುನೈನ್ದು,
ಕಾಚುಟೈನಾ ಣತಙ್ಗಿಯಲೇ ಕರುಙ್ಚುರುಳಿನ್ ಪುಱಙ್ಗಟ್ಟಿ,

931. **ಕಾರ್ತಿಕ** ಮಾಸದಲ್ಲಿ ಅರಳುವ ಬಿಳಿಹೂವಿನ ಎಲೆಯ ಸುರುಳಿಯಲ್ಲಿ ಹಸುರಿಸಳೂ ಸುವಾಸನೆಯೂ ಇರುವ, ಕಾರ್ತಿಕ ಮಾಸದ ಕೆಂಪಗಾದ ಸುಂದರ ಹೂವನ್ನು ತಳೆದ ಜೋಲುವ ಕಿವಿಯ ಪ್ರಕಾಶವು ಶೋಭಿಸಲು, ಸುಂದರವಾದ ನೆತ್ತಿಯ ಮೇಲೆ ಸ್ಥಿರವಾಗಿ ಪೂಸಿದ ವಿಭೂತಿಯ ಪ್ರಕಾಶವಾದುದು, ಕಂಡವರ ಕಣ್ಣುಗಳನ್ನು ಆಕರ್ಷಿಸು ವಲ್ಲಿ ಪರಿಪೂರ್ಣತೆಯನ್ನು ಹೊಂದಿ ಸುಂದರವಾಗಿ ಶರೀರದಲ್ಲಿ ಹೊಂದಿಕೆಯಾಗುವಂತೆ ಅಲಂಕರಿಸಿ,

932. ಪೂರ್ಣವಾಗಿ ವಿಭೂತಿಯನ್ನು ಧರಿಸಿದ ಎಡೆಯೆಡೆಯಲ್ಲಿ ಕ್ರಮವಾಗಿ ಮೊಲ್ಲೆಯ ಮೊಗ್ಗನ್ನು ಸೇರಿಸಿಟ್ಟು ಒತ್ತಾಗಿ ಕಟ್ಟಿದ ಮಾಲೆಯು ಕೆಳಜೋಲಲು, ಕೊಬ್ಬಿದ ತೋಳುಗಳ ಮೇಲೆ ಧರಿಸಿದ ಮಾಲೆಯ ಹೂಗಳು, ತುಂಬಿಗಳು ಮುಸುರಿ ಹಾಡಿದ ಸಂಗೀತದಿಂದ ಅರಳಲು, ನಡುವಿನಲ್ಲಿ ಉಟ್ಟ ನಾರುಮಡಿಬಟ್ಟೆಯ ಹೊರ ಭಾಗದಲ್ಲಿ ಹಸುರೆಲೆಗಳಿಂದ ಕಟ್ಟಿದ ಸುಂದರವಾದ ಪಟ್ಟಿಯಂತಿರುವ ಮೇಲುವಸ್ತ್ರವು ಅಲ್ಲಾಡಲು,

933. ಕೆಂಪಗಾದ ಪಾದದಲ್ಲಿ ಹೊಲಿದ ಮೆಟ್ಟು, ಕೆಂಪಗಾದ ಕೈಯಲ್ಲಿ ಬಿಳಿ ಯಾದ ಕೋಲೂ, ಗೀತವನ್ನು ತರುವ ಪುಳ್ಳಂಗುಳಲೂ ಮಿಕ್ಕ ಶೋಭೆಯನ್ನು ಮಾಡಲು, ತನ್ನ ಆಜ್ಞೆಯಂತೆ ಸೇವೆಯನ್ನು ಮಾಡುವ ಕಾವಲಿನ ಗೋಪಾಲಕರೂ, ಕರುಗಳೊಡನೆ ಕೂಡಿದ ಹಸುಗಳೂ ತನ್ನನ್ನು ಸುತ್ತಿಬರಲು, ಹೂಗಳು ಅರಳುವ ಮಾಲೆಯನ್ನು ಧರಿಸಿದ ಗೋಪಾಲನಾದ ಆನಾಯನು ಪಶುಕೂಟಗಳನ್ನು ಕಾಪಾಡು ವುದಕ್ಕೆ ಹೊರಗೆ ಹೋದನು.

---

931. ವೆಣ್ಕೋಟ ಲಿಲೈಚ್ಚುರುಳಿಱ್ ಪೈನ್ತೋಟ್ಟು ವಿರೈತ್ತೋನ್ಱಿ
ತ್ತಣ್ಕೋಲ ಮಲರ್ಪುನೈನ್ತ ವಟಿಕಾತಿ ನೊಳಿತಯಙ್ಕ,
ತ್ತಿಣ್ಕೋಲ ನೆಱ್ಱಿಯಿನ್ಮೇ ಱ್ಱಿರುನೀಱ್ಱಿ ನೊಳಿಕಣ್ಟೋರ್
ಕಣ್ಕೋಟ ನಿಱೈನ್ತಾರಾ ಕ್ಕವಿನ್ವಿಳಙ್ಕ ಮಿಕೈಯಣಿನ್ತು,

932. ನಿಱೈನ್ತನೀ ಱಣಿಮಾರ್ಪಿ ನಿರೈಮುಲ್ಲೈ ಮುಕೈಚುರುಕ್ಕಿ
ಚ್ಚೆಱಿನ್ತಪುನೈ ವಟನಾಟ ತ್ತಿರಟೋಳಿನ್ ಪುಟೈಯಲಙ್ಕ
ಲಱೈನ್ತಚುರು ಮ್ಪಿಚೈಯರುಮ್ಪ, ಮರೈಯುಟುತ್ತ ಮರವುರಿಯಿನ್
ಪುಱನ್ತಟೈಯಿನ್ ಮಲಿತಾನೈ ಪ್ಪೂಮ್ಪಟ್ಟು ಪ್ಪೊಲಿನ್ತಚೈಯ,

933. ಚೇವಟಿಯಿ ಱ್ಱೊಟುತೋಲು ಱ್ಱೈಱೈಯಿನಿಲ್ ವೆಣ್ಕೋಲು
ಮೇವುಮಿಚೈ ವೇಯ್ಙ್ಕುಮುಲು ಮಿಕವಿಳಙ್ಕ, ವಿನೈಚೆಯ್ಯು
ಙ್ಕಾವಲ್ಪುರಿ ವಲ್ಲಾಯರ್ ಕನ್ಱುಟೈಯಾ ನಿರೈಚೂಟ
ಪ್ಪೂವಲತಾರ್ ಕೋವಲನಾರ್ ನಿರೈಕಾಕ್ಕ ಪ್ಪುಱಮ್ಪೋನ್ತಾರ್.

934. ನೀಲಬಣ್ಣದಿಂದ ಕೂಡಿದ ದೊಡ್ಡ ನವಿಲುಗಳು ಶಬ್ದಿಸಲು, ಸಾಲಾದ ಬಳ್ಳಿಗಳಲ್ಲುಳ್ಳ ತುಂಬಿಗಳು ಮುಲ್ಲೆ ನೆಲಕ್ಕೆ ತಕ್ಕುದಾದ ಗೀತವನ್ನು ಹಾಡಲು, ಬಾಯಿಯಲ್ಲಿ ಇಂದ್ರಗೋಪದ ಬಣ್ಣವುಳ್ಳ ಸುಂದರವಾದ ಬಿಳಿಯ ಮುಲ್ಲೆ ಮೊಗ್ಗುಗಳು ಮುಗುಳು ನಗೆಯನ್ನು ಕಾಣಿಸಲು, ಅಲ್ಲಾಡುವ ಮಿಂಚೆಂಬ ನಡುವೂ, ಸುಳಿಯುವ ಸಂಜೆಹೊತ್ತೆಂಬ ಮೊಲೆಯೂ ಅಲ್ಲಾಡಲು, ಭೂಲೋಕವೆಂಬ ದೊಡ್ಡ ರಂಗದಲ್ಲಿ ನಟನ ಮಾಡುವುದಕ್ಕೆ ಕಾರ್ಗಾಲವೆಂಬ ಪರ್ವವುಳ್ಳ ಹೆಣ್ಣು ಬಂದಳು.

935. ಎಲ್ಲ ಪಕ್ಕಗಳಲ್ಲಿಯೂ ಪಶುಕೂಟಗಳನ್ನು ಸಂಚರಿಸುವಂತೆ ಮಾಡಿ, ಅವುಗಳನ್ನು ಮೇಯಿಸುವುದಕ್ಕಾಗಿ, ಎತ್ತಿದ ಕೋಲುಗಳನ್ನುಳ್ಳ ಗೋಪಾಲಕರು ತನ್ನ ಪಕ್ಕದಲ್ಲಿ ತನ್ನನ್ನು ನಮಿಸಿ ಬರಲು, ಶೀತಲವಾದ ಮುಲ್ಲೈಕಾಡಿನೆಡೆಯಲ್ಲಿ ಬರುವ ನಾಯಕನಾದ ಆನಾಯನು ಆ ಎಡೆಯಲ್ಲಿ ಕೆಳಗೆ ಬಗ್ಗಿದ ಗೆಲ್ಲುಗಳಲ್ಲಿರುವ ಅರಳಿದ ಹೂಗಳಲ್ಲಿ ಜೇನನ್ನುಂಡು ಮಿಕ್ಕ ಶಿರೋಭ್ರಮಣವನ್ನು ಹೊಂದುವ ಶೀತಲವಾದ ತುಂಬಿಗಳು ಸುತ್ತಿಬರುವ ಶ್ಲಾಘ್ಯವಾದ ಕರ್ಣಿಕಾರವೃಕ್ಷದ ಪಕ್ಕವನ್ನು ಸೇರಿದನು.

936. ಹೀಗೆ ಸೇರಿದ ಆನಾಯನು ಕೈಯಲ್ಲಿ ಮಾಡಲ್ಪಟ್ಟ ಸುವಾಸನೆಯುಳ್ಳ ಮಾಲೆಯಂತೆ ಸುವಾಸನೆಯಿಂದ ಕೂಡಿದ ಹೂ ಗೊಂಚಲುಗಳನ್ನು ಜೋಲಲು ಬಿಟ್ಟು, ಪಕ್ಕಗಳಲ್ಲಿ ಜೋಲುತ್ತ ಶೋಭಿಸುವ ಜಡೆಯನ್ನುಳ್ಳ ಶಿವಪರಮಾತ್ಮನಂತೆ ನಿಂತ, ಸುವಾಸನೆಯುಳ್ಳ ಕರ್ಣಿಕಾರವೃಕ್ಷವನ್ನು ನೇರಾಗಿ ನೋಡಿ, ನಿಂತು, ಮನಕರಗಿ, ತನ್ನನ್ನುಳ್ಳವನಾದ ಶಿವಪರಮಾತ್ಮನೆಡೆಯಲ್ಲಿ ಲೀನನಾಗಿ ಮನಸ್ಸಿನಿಂದೇಳುವ ಭಕ್ತಿಯ ತಡೆಯನ್ನು ತೆರೆದನು.

---

934. ನೀಲಮಾ ಮಞ್ಞೈ ಯೇಙ್ಕ ನಿರೈಕೊಟಿ ಪುಱವ ಮ್ಪಾಟ
ಕ್ಕೋಲವೆಣ್ ಮುಕೈಯೇರ್ ಮುಲ್ಲೈ ಕ್ಕೋಪವಾಯ್ ಮುಱುವಲ್ ಕಾಟ್ಟ
ಆಲುಮಿನ್ ನಿಟೈಚೂೞ್ ಮಾಲೈ ಪ್ಪಯೋತರ ಮಚೈಯ ವನ್ದಾಳ್
ಞಾಲನೀ ಟರಙ್ಕಿ ಲಾಟ ಕ್ಕಾರೆನು ಮ್ಪರುವ ನಲ್ಲಾಳ್.

935. ಎಮ್ಮರುಙ್ಕು ನಿರೈಪರಪ್ಪ ವೆಟುತ್ತತೋ ಲುಟೈಪ್ಪೊತುವರ್
ತಮ್ಮರುಙ್ಕು ತೊೞುತಣೈಯ ತ್ತಣ್ಪುಱವಿಲ್ ವರುನ್ದಲೈವರ್
ಅಮ್ಮರುಙ್ಕು ತಾೞ್ನ್ದಚಿನೈ ಯಲರ್ಮರುಙ್ಕು ಮತುವುಣ್ಟು
ಚೆಮ್ಮರುನ್ದಣ್ ಚುರುಮ್ಪಚುೞಿಲ್ ಚೆೞುಙ್ಕೊನ್ಱೈ ಮರುಙ್ಕಣೈನ್ದಾರ್

936. ಚೆನ್ಱಣೈನ್ದ ವಾನಾಯರ್ ಚೆಯ್ದವಿರೈ ತ್ತಾಮಮೆನ
ಮನ್ಱಿನ್ಮಲರ್ ತ್ತುಣರ್ತೂಕ್ಕಿ ಮರುಙ್ಕುತಾೞ್ ಚಟೈಯಾರ್ಪೋಲ್
ನಿನ್ಱತೊರು ಕೊನ್ಱೈಯಿನೈ ನೇರ್ನೋಕ್ಕಿ ನಿನ್ಱುರುಕಿ
ಯೊನ್ಱಿಯಚಿ ನ್ದೈಯಿಲನ್ಪೈ ಯುಟೈಯವರ್ಪಾನ್ ಮಟೈತಿರನ್ದಾರ್

937. ಭಕ್ತಿಯಿಂದ ಒಳಗೆ ದ್ರವಿಸಿ ಮೇಲೆ ಉಕ್ಕುವ ಅಮೃತಗೀತೆಯನ್ನು ತರುವ ಕೊಳಲ ದನಿಯಿಂದ, ಬಲವಾದ ಭೂತಗಣದ ಪಡೆಯನ್ನು ಆಳುವ ಶಿವಪರಮಾತ್ಮನ ಪಂಚಾಕ್ಷರಗಳನ್ನು ಸ್ತುತಿಸಿ, ತಾನು ಹಿಂದೆ ಬಾರಿಸಿ ಬರುವ ರೀತಿಯ ವಿಧಿಯಂತೆಯೇ, ಎಲ್ಲಾ ಜೀವಿಗಳ ಎಲುಬನ್ನೂ ಒಳಗೆ ದ್ರವಿಸಿ ಮೃದುವಾಗಿಸತಕ್ಕ ಇನಿದಾದ ಗೀತವನ್ನು ತರುವ ಪುಳ್ಳಂಗುಳಲಾದ ವಾದ್ಯಗಳಲ್ಲಿ,

938. ಏಳು ಬೆರಳುಗಳು ಎಡೆಯನ್ನು ಪಡೆಯುವಂತೆ ದ್ವಾರಗಳನ್ನು ಮಾಡಿದುದ ರಿಂದಾದ ಇನಿದಾದ ಗೀತವನ್ನು ತರುವ ವಾದ್ಯವನ್ನು ತೆಗೆದು, ಬೀಳುವ ಮಲರುಗಳಲ್ಲಿ ತುಂಬಿಗಳು ಮಕರಂದದ ಹುಡಿಯನ್ನು ಹಿಡಿಯುವಂತೆ ವೃತ್ತವಾದ ದ್ವಾರಗಳಲ್ಲಿಯೂ ಶಬ್ದಿಸುವುದು, ಆರೋಹಣ, ಅವರೋಹಣ, ಸಮನೆಲೆ ಇವುಗಳನ್ನು ಮಾಡಿ ಪರಿಶುದ್ಧ ವಾದ ದೊಡ್ಡ ಪ್ರತ್ಯೇಕವಾದ ದ್ವಾರದಲ್ಲಿ ಒಳ್ಳೆಯ ಬಾಳುವೆಯುಳ್ಳ ನಮ್ಮ ಶ್ರೇಷ್ಠನು ಸುಂದರವಾದ ಅಧರವನ್ನಿಟ್ಟು ಬಾರಿಸಲು,

939. ಮುದ್ರೆ, ದ್ವಾರ ಮೊದಲಾದ ವಿಧಿಯ ತಾನಗಳನ್ನು ಆರಯ್ದು ಸಂಗೀತ ಶಾಸ್ತ್ರಗಳಲ್ಲಿ ವಿಧಿಸಿದ ಅಳತೆಯಲ್ಲಿ ಏರ್ಪಡಿಸಿಟ್ಟ ಇತರ ದ್ವಾರಗಳನ್ನು ಆರಯ್ದು ಮಾಡುವುದಾಗಿರುವ ವಕ್ಕರಣೆಯ ಮಾರ್ಗದಲ್ಲಿ ಬೆರಳುಗಳನ್ನು ಕ್ರಮವಾಗಿ ನಡೆಸಿ, ಸಂಗೀತವು ಸಮವಾಗಿರುವುದನ್ನು ತಿಳಿದುಕೊಂಡ ಮೇಲೆ, ಷಡ್ಜವೇ ಮೊದಲಾಗಿ ನಿಷಾದದ ವರೆಗೆ ಕ್ರಮವಾಗಿ, ಆ ರೀತಿಯಲ್ಲಿ ಎಚ್ಚು, ತಕ್ಕು ಎಂಬ ಧ್ವನಿಗಳಲ್ಲಿ ಸೇರಿಸಿ ಬಾರಿಸಿ,

---

937. ಅನ್ಪೂಱಿ ಮಿಚ್ಚೈಪ್ಪೊಙ್ಕು ಮಮುತವಿಚ್ಚೈ ಕ್ಕುೞಲೊಲಿಯಾಲ್
ವನ್ಪೂತ ಪ್ಪಟೈಯೊಳಿ ಯೆೞುತ್ತೈನ್ತುಮ್ ನೞುತ್ತಿತ್ತಾಮ್
ಮುನ್ಪೂತಿ ವರುಮಳವಿನ್ ಮುಱೈಮೈಯೇ ಯೆವ್ವುಯಿರುಮ್
ಎನ್ಪೂಟು ಕರೈನ್ತುರುಕ್ಕು ಮಿನ್ನಿಚ್ಚೈವೇಯ್ ಙ್ಕುರುವಿಕಳಿಲ್,

938. ಏೞುವಿರ ಲಿಟ್ಟೈಯಿಟ್ಟ ವಿನ್ನಿಚ್ಚೈವ ಙ್ಕಿಯಮೆೞುತ್ತು
ತ್ತಾೞುಮಲರ್ ವರಿವಣ್ಟು ತಾತುಪಿಟಿ ಪ್ಪನಪೋಲ
ಚ್ಚೂೞುಮುರನ್ ಱೆೞಿನಿನ್ಱು ತೂಯಪೆರು ನ್ತನಿತ್ತುಳೈಯಿಲ್
ವಾೞಿಯುನ ನ್ತೋನ್ಱಲಾರ್ ಮಣಿಯತರಮ್ ವೈತೂತ,

939. ಮುತ್ತಿರೈಯೇ ಮುತಲನೈತ್ತು ಮುಱೈತ್ತಾನ ಙ್ಕೋತಿತ್ತು
ವೈತ್ತತುಳೈ ಯಾಱಾಯ್ಚ್ಚಿ ವಕ್ಕರನ್ನೈ ವೞಿಪೋಕ್ಕಿ
ಯೊತ್ತನಿಲೈ ಯುಣರ್ನ್ತಱಿನ್ ನೊನ್ಱು ಮುತಱ್ ಪಟಿಮುಱೈಯಾಮ್,
ಅತ್ತಕೈಮೈ ಯಾರೋಚೈ ಯಮರೋಚೈ ಕಳಿನ್ವೈತ್ತು

940. ಬದಲಿಸಿ ಬರುವ ಸ್ವರಗಳನ್ನುಳ್ಳ ಕುರಿಂಜಿ ನೆಲಕ್ಕೆ ತಕ್ಕ ರಾಗದ ಅನಂತರದಲ್ಲಿ, ಬೆಳೆಯುವ ಮುಲ್ಲೆಯ ನೆಲಕ್ಕೆ ತಕ್ಕ ರಾಗವನ್ನು ಮಾಡಿ, ಬಂಜರು ಭೂಮಿಗೆ ತಕ್ಕ ವೀಣೆಗೆ ಹೊಂದಿದ ತಾರವೂ ಉಳ್ಳೆಯೂ ಹೊಂದಿಕೆಯಾಗುವಂತೆ ಇಡುವ ತಾನಗಳಲ್ಲಿ ಗಂಗಾನದಿಯು ಸಂಚರಿಸುವುದಕ್ಕೆಡೆಯಾದ ಜಡೆಮುಡಿಯುಳ್ಳ ಶಿವಪರಮಾತ್ಮನ ಪಂಚಾಕ್ಷರಗಳ ಗೀತವು ವೃದ್ಧಿಹೊಂದುವಂತೆ ಹೇಳಲ್ಪಟ್ಟ ಇಳಿಯನ್ನು ಧ್ವನಿಯಾಗುಳ್ಳ 'ಕೊಡಿಪ್ಪಾಲೈ' ರಾಗದಲ್ಲಿ ನಿಲ್ಲಿಸಿ,

941. ಗೀತದ ಲಯದ ನಾಲ್ಕು ನೆಲೆಗಳಲ್ಲಿ ಕೊಡಿಪ್ಪಾಲೈಗೆ ಹೊಂದಿದ ವಿಭಾಗವನ್ನು ತೆಗೆದು ಸ್ವರ ಉಂಟಾಗುವ ಏಳು ದ್ವಾರಗಳಲ್ಲಿ ಬೆರಳುಗಳನ್ನಿಡುವ ತೆಗೆಯುವ ಕಾರ್ಯಗಳಿಂದ ಗೀತೆಯ ಕೆಂಪಗಾದ ಕಾಂತಿಯು ಎಡೆಬಿಡದೆ ಸಂಚರಿಸಿ ಶೋಭಿಸಲು, ಶಿವಪರಮಾತ್ಮನ ಪಂಚಾಕ್ಷರದ ಗೀತಕ್ಕೆ ತಕ್ಕುದಾದ ಐದು ವಿಭಾಗಗಳಲ್ಲಿ ತಕ್ಕ ಪದ್ಧತಿಯನ್ನು ಬೆಳೆಸಿದವನಾಗಿ,

942. ಮಂದ್ರ ಮಧ್ಯಮ ತಾರಕಗಳೆಂಬ ಮೂರು ಬಗೆಯ ಶ್ರುತಿಗಳಲ್ಲಿಯೂ, ಸ್ವರಸ್ಥಾನಕ್ಕೆ ತಕ್ಕ ದ್ವಾರಗಳಲ್ಲಿ ಕ್ರಮವಾಗಿ ಮಂದ್ರ ಮಧ್ಯಮ ತಾರಕವಾಗಿ ಬೆರಳುಗಳನ್ನಿಟ್ಟು, ಎಡೆಯಲ್ಲುಳ್ಳ ದ್ವಾರಗಳನ್ನು ತಕ್ಕ ಪ್ರಮಾಣಗಳನ್ನು ಪಡೆಯುವಂತೆ ಬೆರಳುಗಳನ್ನು ನಡೆಸಿ, ಚೆಲುವಾದ ಕೆಂಪಗಾದ ಹಣ್ಣಿನಂತಿರುವ ಅಧರವೂ, ಕೊಳಲಿನ ದ್ವಾರದ ಬಾಯಿಯೂ ಒಂದಾಗಿ ಸೇರಿ ಲಯಪಡಲು,

---

940. ಮಾಱುಮುತಱ್ ಪಣ್ಣಿನ್‌ಪಿನ್ ವಳರ್‌ಮುಲ್ಲೈ ಪ್ಪಣ್ಣಾಕ್ಕಿ
ಯೇಱಿಯತಾ ರಮುಮುಟ್ಟೈಯು ಱ್ಕಿಟಿವೈಕೊಳ ವಿಟುನ್ತಾನವ್
ಆಱುಲವು ಚಟೈಮುಟಿಯಾ ರಞ್ಚೆಟುತ್ತಿ ನಿಚೈಪೆರುಕ
ಕ್ಕೂಱಿಯಪ ಟ್ಟೈಕ್ಕುರಲಾ ಱ್ಕೊಟಿಪ್ಪಾಲೈ ಯಿನಿನಿಱುತ್ತಿ,

941. ಆಯವಿಚೈ ಪ್ಪುಕನಾನ್‌ಕಿ ನಮೈನ್ತಪುಕಲ್ ವಕೈಯೆಟುತ್ತು
ಮೇಯತುಳೈ ಪಱ್ಱುವನ ವಿಟುಪ್ಪನವಾಮ್ ವಿರನಿರೈಯಿಱ್
ಚೇಯವೊಳಿ ಯಿಟೈಯಲೆಯ ತ್ತಿರುವಾಳ ನೆಟುತ್ತಞ್ಚು
ನ್ತಾಯವಿಚೈ ಕಿಳೈಕೊಳ್ಳು ನ್ತಱೈಯಞ್ಚಿನ್ ಮುಱೈವಿಳೈತ್ತಾರ್,

942. ಮನ್ತರತ್ತು ಮ್ಮತ್ತಿಮತ್ತು ನ್ತಾರತ್ತುಮ್ ವರನ್‌ಮುಱೈಯಾಱ್
ಱನ್ತಿರಿಕಣ್ ಮೆಲಿವಿತ್ತು ಞ್ಚಮಱ್ಕೊಣ್ಟುಮ್ ವಲಿವಿತ್ತುಮ್
ಅನ್ತರತ್ತು ವಿರಱ್ಱೊಟಿಲ್ಕ ಳಳವುಪೆಱ ವಚೈತ್ತಿಯಕ್ಕಿ
ಚ್ಚುನ್ತರಚ್ಚೆ ಙ್ಕನಿವಾಯುಮ್ ತುಳೈವಾಯುಮ್ ತೊಟಕ್ಕುಣ್ಣ,

943. ಸಂಗೀತ ಶಾಸ್ತ್ರಗಳಲ್ಲಿ ಕ್ರಮವಾಗಿ ಏರ್ಪಡಿಸಿದ ಪೆರುವಣ್ಣ್, ಇಡೈವಣ್ಣ್, ವಣಪ್ಪು ಎಂಬ ಗೀತದ ಬಗೆಗಳನ್ನೆಲ್ಲಾ ಮಧುರವಾದ ನಾದದಲ್ಲಿ ಹೊಂದಿದ, ತಾಳ, ಗೀತ, ತೂಕ್ಕು, ನಡೆ ಮೊದಲಾದ ಗತಿಗಳೊಡನೆ, ರಾಗದೊಡನೆ ಸೇರಿ ವ್ಯಾಪಿಸುವ ಧ್ವನಿಯನ್ನು ಎಲ್ಲಾ ಪಕ್ಕಗಳಲ್ಲಿಯೂ ಹರಡುವಂತೆ ಮಾಡಿದನು.

944. ತ್ಯಾಗಿಯಾದ ಆಯನಾರನು ಬಾರಿಸುವ ಚೆಲುವಾದ ದ್ವಾರವನ್ನುಳ್ಳ ಪುಳ್ಳಂಗುಳಲಲ್ಲಿ, ಪಂಚಾಕ್ಷರಗಳನ್ನು ಅಂತರಂಗ ವಸ್ತುವಾಗಿಸಿಕೊಂಡು ನುಡಿಸಲು, ಎಲ್ಲಾ ಪಕ್ಕಗಳಲ್ಲಿಯೂ ವ್ಯಾಪಿಸಿ, ಏಳುವ, ಮಾಧುರ್ಯವನ್ನು ಹೊಂದಿದ ಗೀತ ಧ್ವನಿಯ ಪ್ರವಾಹವಾದುದು, ಪೂರ್ಣವಾಗಿ ಎಲ್ಲಾ ಜೀವಿಗಳೆಡೆಯಲ್ಲಿಯೂ, ಮೇಲಾದ ಬಾನಿನಲ್ಲಿ ಬಾಳುವ ದೇವರುಗಳ ಕಲ್ಪಕಮರದಲ್ಲಿ ವರ್ಧಿಸಿದ ಜೇನನ್ನು ತಿಳಿಯಾದ ಅಮೃತದೊಡನೆ ಕಲೆತು ಕಿವಿದ್ವಾರವಾಗಿ ಉಣ್ಣಿಸುವಂತೆ ಮಾಡಲು,

945. ಹಿಂದೆ ಹುಲ್ಲನ್ನು ಮೇದುಕೊಂಡಿದ್ದ ಪಶುಗಳು ಕೂಡ ಇವರ ಪಕ್ಕವನ್ನು ಸಮಾಪಿಸಿ ತಮ್ಮನ್ನು ಮರೆತು ಅಲ್ಲಾಡದಂತೆ ನಿಲ್ಲಲು, ತಾಯ ಮೊಲೆಯನ್ನುಣ್ಣುತ್ತಿದ್ದುದರಿಂದ ಹಾಲಿನ ನೊರೆಯನ್ನು ಕೊಂಡ ಬಾಯುಳ್ಳ ಕರುಗಳ ಕೂಟವೂ ಹಾಲುಣ್ಣುವುದನ್ನು ತಾವು ಮರೆತಿರಲು, ಬಲವಾದ ಕೊಂಬುಗಳುಳ್ಳ ವೃಷಭ ಕೂಟಗಳೂ, ಜಿಂಕೆ ಮೊದಲಾದ ಕಾಡುಪ್ರಾಣಿಗಳೂ ರೋಮಾಂಚಗೊಂಡು ಬಂದು ಪಕ್ಕದಲ್ಲಿ ಹೊಂದಲು,

---

943. ಎಣ್ಣಿಯನೂಱ್ಪೆರುವಣ್ಣ ಮಿಟೈವಣ್ಣಮುಮ್ ವನಪ್ಪೆನ್ನುಮ್
ವಣ ವಿಚೈ ವಕೈಯೆಲ್ಲಾ ಮಾತುರಿಯ ನಾತತ್ತಿಲ್
ನಣ್ಣಿಯಪಾ ಣಿಯುಮಿಯಲು ನ್ತೂಕ್ಕುನಟೈ ಮುತಱ್ಕತಿಯಿಱ್
ಪಣ್ಣಮೈಯ ವೆೞುಮೋಚೈ ಯೆಮ್ಮರುಙ್ಕುಮ್ ಪರಪ್ಪಿನಾರ್.

944. ವಳ್ಳಲಾರ್ ವಾಚಿಕ್ಕುಮ್ ಮಣಿತ್ತುಳೈವಾಯ್ ವೇಯ್ಙ್ಕುೞಲಿನ್
ಉಳ್ಳುಱೈಯ ಞ್ಚೆೞುತ್ತಾಕ ವೋಙ್ಕಿಯೆೞು ಮತುರವೊಲಿ
ವೆಳ್ಳನಿಱೈನ್ತೆವ್ವುಯಿರ್ಕ್ಕು ಮ್ಮೇಲಮರರ್ ತರುವಿಳೈತೇನ್
ಱೆಳ್ಳಮುತಿ ನುಟನ್ಕಲನ್ತು ಚೆವಿಪ್ಪಾರ್ಪ ತೆನತ್ತೇಕ್ಕ,

945. ಆನಿರೈಕ ಳಱುಕರುನ್ತಿ ಯಚೈವಿಟಾ ತಣೈನ್ತಯರ
ಪ್ಪಾನುರೈವಾಯ್ ತಾಯ್ಮುಲೈಯಿಱ್ ಪಱಿವಿಳ ಙ್ಕನ್ಱಿನಮು
ನ್ತಾನುಣವು ಮಱನ್ತೊಱಿಯ ತ್ತಟಮರುಪ್ಪಿನ್ ವಿಟೈಕ್ಕುಲಮು
ಮಾನ್ಮುತಲಾ ಙ್ಕಾನ್ವಿಲಙ್ಕು ಮಯಿರ್ಮುಕಿೞ್ತ್ತು ವನ್ತಣೈಯ,

946. ನಟನವಾಡುವ ನವಿಲ ಕೂಟಗಳು ಅಲ್ಲಾಡದೆ ಅಲ್ಲಿ ಬಂದು ಸೇರಲು, ತುಂಬಿದ ಮನದೊಡನೆ ಹಕ್ಕಿಗಳ ಕೂಟವೂ ಪಕ್ಕದಲ್ಲಿ ಮೈಮರೆತು ನಿಲ್ಲಲು, ಪಕ್ಕಗಳಲ್ಲಿ ಆಜ್ಞೆಯನ್ನು ಅನುಸರಿಸಿಕೊಂಡು ನಡೆಯುವ ಗೋವಳರ ಸಮೂಹವೂ ಗೀತವನ್ನು ಕೇಳಿದ ಆ ನೆಲೆಯಲ್ಲಿ ತಾವು ಮಾಡುತ್ತಿದ್ದ ಕಾರ್ಯಗಳನ್ನು ಮಾಡಿ ಮುಗಿಸದೆ ಅಂತೆಯೇ ನಿಂತರು.

947. ನಾಗಲೋಕದಲ್ಲುಳ್ಳವರು ತಾವು ಹಿಂದೆ ಬಂದು ಅಭ್ಯಾಸವಾದ ಪಾತಾಳ ಬಿಲಗಳ ದಾರಿಯಾಗಿ ಇಲ್ಲಿ ಬಂದು ಸೇರಿದರು. ಚೆಲುವಾದ ಬೆಟ್ಟಗಳಲ್ಲಿ ವಾಸಿಸುವ ದೇವಸ್ತ್ರೀಯರು ಗೀತದಿಂದ ಮೈಮರೆತವರಾಗಿ ಆ ಪಕ್ಕಗಳಲ್ಲಿ ಬಂದು ತುಂಬಿದರು. ಕಮ್ಮಿಯಾಗದ ಕಾಂತಿಯುಳ್ಳ ವಿದ್ಯಾಧರರೂ, ಚಾರಣರೂ, ಕಿನ್ನರರೂ, ದೇವತೆಗಳೂ ತಾವು ಬಾಳುವ ಚೆಲುವಿನ ಆಕಾಶದ ನೆಲೆಗಳಿಂದ ಗೀತಕ್ಕೆ ವಶಪಟ್ಟವರಾಗಿ ತಮ್ಮನ್ನು ತಾವು ಮರೆತು ವಿಮಾನಗಳಲ್ಲಿ ಬಂದು ಸೇರಿದರು.

948. ದೇವಸ್ತ್ರೀಯರು ಕಲ್ಪಕಹೂವಿನ ಉದ್ಯಾನಗಳ ಪಕ್ಕದಲ್ಲಿದ್ದು ಮಲರಂತಿರುವ ತಮ್ಮ ಕೈಗಳಿಂದ ಅಮೃತಫಲವನ್ನುಣ್ಣುತ್ತಿದ್ದ ಬಾಯನ್ನುಳ್ಳ ಮೃದುವಾದ ಗಿಳಿಗಳೊಡನೆ ತಮ್ಮ ತಲೆಕೂದಲು ಅಲ್ಲಾಡುವಂತೆ ತಂತಮ್ಮ ವಿಮಾನಗಳಲ್ಲಿ ಶೀಘ್ರವಾಗಿ ಏರಿ ಬಂದು ಸಪ್ತಸ್ವರಗಳಿಂದ ಹೊಮ್ಮಿದ ಆ ಗೀತದ ಅಮೃತವನ್ನಾಸ್ವಾದಿಸಿದರು.

---

946. ಆಟುಮಯಿಲಿನಜ್ಙಳುಮ ಜ್ಙಚ್ಚೈವಯರ್ನ್ತು ಮರುಜ್ಙಣುಕ,
ವೂಟುಚೆವಿ ಯಿಚ್ಚೈನಿಱೈನ್ತ ವುಳ್ಳಮೊಟು ಪುಳ್ಳಿನಮು
ಮಾಟುಪಟ ನ್ತಣರ್ವೊೞಿಯ, ಮರುಜ್ಙುತೊೞಿಲ್ ಪುರಿನ್ತೊೞುಕು
ಜ್ಙೊಟಿಯುವನ್ ಕೋವಲರು ಜ್ಙಱೈವಿನ್ನೈಯಿನ್ ಱುಱೈನಿನ್ಱಾರ್.

947. ಪಣಿಪುವನ ಜ್ಙಳಿಲುಳ್ಳಾರ್ ಪಯಿಲ್ಪಿಲಜ್ಙಳ್ ವೞಿಯಣೈನ್ತಾರ್;
ಮಣಿವರೈವಾ ೞರಮಕಳಿರ್ ಮರುಜ್ಙುಮಯ ಜಿನರ್ಮಲಿನ್ತಾರ್;
ತಣಿವಿಲೊಳಿ ವಿಞ್ಚೈಯರ್ಕಳ್ ಚಾರಣರ್ಕಿನ್ ನರರಮರರ್
ಅಣಿವಿಚುಮ್ಪಿ ಲಯರ್ವೆಯ್ತಿ ವಿಮಾನಜ್ಙಣ್ ಮಿಚೈಯಣೈನ್ತಾರ್.

948. ಚುರಮಕಳಿರ್ ಕಱ್ಪಕಪ್ಪೂ ಙ್ಕೊೞಿಲ್ಕಳಿನ್ ಮರುಜ್ಙಿರುನ್ತು
ಕರಮಲರಿ ನಮುತೂಟ್ಟು ಜ್ಙನಿವಾಯ್ಮೆನ್ ಕಿಳ್ಳೈಯುಟನ್
ವಿರವುನಱು ಜ್ಙುೞಲಲೈಯ ವಿಮಾನಜ್ಙಳ್ ವಿರೈನ್ತೇಱಿ
ಸ್ವರವಿಯಮೇ ೞಿಚೈಯಮುತ ಙ್ಚೆವಿಯುಟುತ್ತು ಸ್ವರುಕಿನಾರ್.

949. ಇತರರನ್ನು ಕಷ್ಟಪಡಿಸುವವರೂ, ಅವರಿಂದ ಕಷ್ಟಕ್ಕೊಳಗಾದವರೂ, ಕೊಂಡ ಅನುಭವವು ಒಂದಾಗಿ ಒಳ್ಳೆಯದುಂಟಾಗುವಂತೆ ಲಯಪಟ್ಟುದರಿಂದ, ಬಾಯಲ್ಲಿ ಹೊಂದಿದ ಬಿಳಿದಾದ ಹಲ್ಲುಗಳುಳ್ಳ ಹಾವು ಗೀತದಿಂದ ಮೈಮರೆವನ್ನು ಹೊಂದಿ, ತನ್ನ ವೈರಿಯಾದ ನವಿಲಿನ ಮೇಲೆ ಬೀಳುವುದು, ಸಿಂಹವು ದೊಡ್ಡ ಆನೆಯೊಡನೆ ಸೇರಿ ಬರುವುದು. ಹುಲಿಯ ಬಾಯಿ ಪಕ್ಕದಲ್ಲಿ ಹುಲ್ಲು ಮೇಯುತ್ತ ಜಿಂಕೆಯು ಬರುವುದು.

950. ಗಾಳಿಯೂ ವೇಗವಾಗಿ ಬೀಸದು. ಮರಗಳಲ್ಲಿ ಮಲರನ್ನು ಹೊಂದಿದ ಗೆಲ್ಲುಗಳು ಅಲ್ಲಾಡವು. ಕರಿಯ ಗಿಡಗಳಿಂದ ಬೀಳುವ ಅಬ್ಬಿಗಳೂ ಕಾಡತೊರೆಗಳೂ ಶಬ್ದಿಸಿ ಓಡವು. ದೊಡ್ಡ ಮುಗಿಲ ಕೂಟಗಳು ಸಂಚಾರಮಾಡುವುದನ್ನು ಬಿಟ್ಟು ಮಳೆನೀರನ್ನು ಸುರಿಸವು. ಆಕಾಶದೆಡೆಯಲ್ಲಿ ಮೊಳಗನ್ನೂ ಮಾಡವು. ಸಪ್ತಸಮುದ್ರಗಳೂ ತುಳುಕವು.

951. ತುಂಬಿದ ಸುವಾಸನೆಯುಳ್ಳ ಕರ್ಣಿಕಾರ ಪುಷ್ಪಗಳನ್ನು ಧರಿಸಿದ ಮುಡಿ ಜಡೆಯುಳ್ಳ ಶಿವಪರಮಾತ್ಮನ, ಶ್ರೀಪಾದ ಭಕ್ತನಾದ ಆನಾಯನು ಕೆಂಪಗಾದ ಬಾಯಲ್ಲಿಟ್ಟು ಬಾರಿಸಿದ ಕೊಳಲ ಗೀತಸ್ವರವು ಒಳಹೊಕ್ಕು ಕರಗಿಸಿದುದರಿಂದ, ಈ ರೀತಿ ಚರಾಚರಗಳೂ ಗೀತಮಯವೇ ಆಗಿ, ತಮ್ಮ ಶರೀರ ಮತ್ತು ಅದರದಲ್ಲಿರುವ ಜ್ಞಾನೇಂದ್ರಿಯಗಳು, ಕರಣಗಳು ಇವನ್ನು ಸಂಗೀತಮಯವಾದ ಸ್ಥಿತಿಯನ್ನು ಹೊಂದಿಸಿದುವು.

---

949. ನಲಿವಾರು ಮೆಲಿವಾರು ಮುಣರ್ವೊನ್ಱಾಯ್ ನಯತ್ತಲಿನಾನ್,
ಮಲಿವಾಯ್ವೆಳ್ಳೆಯಿಱ್ಱರವ ಮಯಿಱ್ವಿೞಾತು ಮರುಣ್ಡುವಿೞು;
ಇೞಲಿಯಾತ ನಿಲ್ಲೈಯರಿಯು ನ್ತಟಙ್ಗರಿಯು ಮುಟನ್ಚಾರುಮ್;
ಪುಲಿವಾಯಿನ್ ಮರುಙ್ಗಣೈಯುಮ್ ಪುಲ್ವಾಯ ಪುಲ್ವಾಯುಮ್.

950. ಮರುವಿಯಕಾಲ್ ವಿಚ್ಚೈತ್ತಚೈಯಾ; ಮರಙ್ಗಳ್ಮಲರ್ ಚ್ಚಿನೈಚಲಿಯಾ;
ಕರುವರೈವೀೞ್ ಅರುವಿಕಳುಮ್ ಕಾನ್ಯಾಱುಮ್ ಕಲಿಕ್ಕೋಟಾ;
ಪೆರುಮುಕಿಲಿನ್ ಕುಲಙ್ಗಳ್ಪುಟೈ ಪೆಯರ್ವೊೞಿಯ ಪ್ಪುನಲ್ಚೋರಾ;
ಇರುವಿಚುಮ್ಬಿ ನಿಟೈಮುೞಙ್ಗಾ; ವೆೞುಕಟಲುಮ್ ಇಟೈತುಳುಮ್ಬಾ.

951. ಇವ್ವಾಱು ನಿಱ್ಪನವುಮ್ ಚರಿಪ್ಪನವುಮ್ ಇಚೈಮಯಮಾಯ್
ಮೆಯ್ವಾೞುಮ್ ಪುಲನ್ಕರಣ ಮೇವಿಯವೊನ್ ಱಾಯಿನವಾಲ್
ಮೊಯ್ವಾಚ ನಱುಙ್ಕೊನ್ಱೈ ಮುಟಿಚ್ಚಟೈಯಾರ್ ಅಟಿತ್ತೊಣ್ಡರ್
ಚೆಯ್ವಾಯಿನ್ ಮಿಚೈವೈತ್ತ ತಿರುಕ್ಕುೞಲಿನ್ ಚನ್ದೈಯುರುಕ್ಕ.

952. ಶ್ರೇಷ್ಠಭಕ್ತನ ಭಕ್ತಿಯುತವಾದ ಕೊಳಲ ಧ್ವನಿಯು ಈ ಲೋಕವನ್ನು ತುಂಬಿ, ಬಾನಿನ ಲೋಕವನ್ನೂ ತನ್ನ ವಶವಾಗಿಸಿಕೊಂಡು, ಹುಸಿಭಕ್ತಿಗೆ ದೊರಕದವನೂ, ಪೊನ್ನಂಬಲದಲ್ಲಿ (ಹೊನ್ನಿನ ಸಭೆಯಲ್ಲಿ) ತಿರುನಟನವನ್ನು ಮಾಡುವವನೂ ಆದ ಈಶ್ವರನ ಕಿವಿಯ ಪಕ್ಕದಲ್ಲಿ ಸೇರುವಂತೆ ವರ್ಧಿಸಿತು.

953. ಆನಾಯರನ ಕೊಳಲ ಗೀತಧ್ವನಿಯನ್ನು ಕೇಳಿ ಅನುಗ್ರಹಿಸಿ ಕರುಣಾಂತಃಕರಣವುಳ್ಳ ತಪೋವಲ್ಲಿಯಾದ ಉಮಾದೇವಿಯೊಡನೆ ಕೂಡಿ ಗೀತಕ್ಕೆಲ್ಲಾ ಮೊದಲ ಕಾರಣನಾದ ನೊಸಲಕಣ್ಣುಳ್ಳ ಶಿವಪರಮಾತ್ಮನು ವೃಷಭವಾಹನದ ಮೇಲೇರಿ ಬಾಲಚಂದ್ರನು ತಂಗುವುದಕ್ಕೆಡೆಯಾದ ಜಡೆಯು ಜೋಲುವಂತೆ ಅಂತರಿಕ್ಷಮಾರ್ಗವಾಗಿ ಬಂದು ಅನುಗ್ರಹಿಸಿದನು.

954. ಎಲ್ಲಾ ದಿಸೆಗಳಿಂದಲೂ ದೇವತೆಗಳಿಗೆ ಎದುರುಭಾಗದಲ್ಲಿ ಮೇಲೆ ಒತ್ತಾಗಿ ಕೂಡಿ ಶಿವಗಣನಾಥನು ಬರುವ ಹೊತ್ತು ಕೊಳಲಗೀತಕ್ಕೆ ಪ್ರತಿಯಾಗಿ ಬೇರೆ ಧ್ವನಿಗಳು ಎಡೆಹೊಕ್ಕು ಸೇರದಂತೆ ಅಲೆಯಂತೆ ಏಳುವ ಕೊಳಲನಾದದಲ್ಲಿ ಏರ್ಪಟ್ಟ ಪಂಚಾಕ್ಷರದಲ್ಲಿ ತನ್ನನ್ನು ಸ್ತುತಿಸುವ ಗೀತವನ್ನು ಆಶಿಸುವ ಅನುಗ್ರಹನಟನಾದ ಶಿವಪರಮಾತ್ಮನು ಮೇಲೆ ಹೇಳಿದಂತೆ ಅನುಗ್ರಹಿಸಿ ಬಂದು ಇದಿರಿನಲ್ಲಿ ನಿಂತನು.

---

952. ಮೆಯ್ಯನ್ಪರ್ ಮನತ್ತನ್ಪಿನ್ ವಿಳೈನ್ತಇಚೈ ಕ್ಕುಟಲೋಚೈ
ವೈಯನ್ತ್ತನ್ ನೈಯುವನ್ನಿಜಿೖನ್ತು ವಾನವನ್ತನ್ ವಯಮಾಕ್ಕಿ
ಪ್ಪೊಯ್ಯನ್ಪು ಕ್ಕೆಟ್ಟಾತ ಪೊಜಿನ್ಪೊ ತುವಿಲ್ ನಟವ್ಪುರಿಯುವನ್
ಐಯನ್ಜಿನ್ ತಿರುಚ್ಚೆವಿಯಿನ್ ಅರುಕಣೈಯ ಪ್ಪೆರುಕಿಯತಾಲ್

953. ಆನಾಯರ್ ಕುಟಲೋಚೈ ಕೇಟ್ಟರುಳಿ ಅರುಟ್ಕರುಣೈ
ತಾನಾಯ ತಿರುವುಳ್ಳವನ್ ಉಟೈಯತವ ವಲ್ಲಿಯುಟನ್
ಕಾನಾತಿ ಕಾರಣರಾವನ್ ಕಣ್ಣುತಲಾರ್ ವಿಟೈಯುಕೈತ್ತು
ವಾನಾಜಿ ವನ್ತಣೈನ್ತಾರ್ ಮತಿನಾಜಿ ಞ್ಚಟೈತಾಟ.

954. ತಿಚೈಮುಟಿತು ಜ್ಞಣನಾತರ್ ತೇವರ್ಕಟ್ಕು ಮುನ್ನೆರುಜ್ಕಿ
ಮಿಚೈಮಿಟೈನ್ತು ವರುಮ್ಪೊಟಿತು ವೇಜ್ರೊಲಿಕಳ್ ವಿರವಾಮೇ
ಅಚೈಯುಎಟಿ ಜ್ಕುಟಲ್ನಾತ ತ್ತಞ್ಚಿಟಿತ್ತಾಲ್ ತಮ್ಪೈಪ್ಪರವುವನ್
ಇಚೈವಿರುಮ್ಪುವನ್ ಕೂತ್ತನಾರ್ ಎಟುನ್ತರುಳಿ ಎತಿರ್ನಿನ್ಜಿಾರ್.

955. ಈ ರೀತಿ ವೃಷಭದ ಮೇಲೇರಿ ಪ್ರತ್ಯಕ್ಷವಾಗಿ ನಿಂತ ಮೊದಲಿಗನವನು (ಶಿವಪರಮಾತ್ಮನು) ಸನ್ಮಾರ್ಗದಲ್ಲಿ ನಡೆಯುವ ಹಿರಿಯನಾದ ಆನಾಯನ ಕೊಳಲ ಬಾಜನೆಯನ್ನು ಯಾವಾಗಲೂ ಕೇಳಿಕೊಂಡಿರುವುದಕ್ಕಾಗಿ 'ಇಲ್ಲಿ ನಿಂತ ಈ ನೆಲೆಯಿಂದ ನನ್ನೆಡೆಗೆ ನೀನು ಬರುವವನಾಗು' ಎಂದು ಅನುಗ್ರಹಿಸಲು, ಆ ರೀತಿಯೇ ಆನಾಯನ ಅಲ್ಲಿ ನಿಂತ ಆ ನೆಲೆಯನ್ನು ಬಿಟ್ಟು ಈಶ್ವರನ ಪಕ್ಕವನ್ನು ಸಮೀಪಿಸಿದನು.

956. ದೇವತೆಗಳು ಸುರಿಸುವ ಕಲ್ಪಕ ಹೂಮಳೆಯು ದಟ್ಟವಾಗಿ ಲೋಕದ ಮೇಲೆ ಶೋಭಿಸಲು, ಅಗಣಿತಮುನಿಗಳ ಕೂಟಗಳು ವೇದವಾಕ್ಯಗಳಿಂದ ಸ್ತುತಿಸಲು, ಹಿರಿಮೆಯುಳ್ಳ ಆನಾಯನು ಕೊಳಲ ಗೀತವನ್ನು ನುಡಿಸುತ್ತ ಪಕ್ಕದಲ್ಲಿ ಒಡನೆ ಹೋಗಲು, ಪುಣ್ಯವಸ್ತುವಾದ ಶಿವಪರಮಾತ್ಮನು ಅಲ್ಲಿಂದ ಹೊರಟು ಪೊನ್ನಂಬಲವನ್ನು ಪ್ರವೇಶಿಸಿ ಶರಣನನ್ನು ಅನುಗ್ರಹಿಸಿದನು.

ಸ್ತುತಿ

957. ಪರವೆಯರು ಮನಸ್ಸಿನಲ್ಲಿ ಕೊಂಡಿದ್ದ ಪ್ರಣಯದ ಅಸಮಾಧಾನವನ್ನು ಹೋಗಲಾಡಿಸುವುದಕ್ಕಾಗಿ, ಕೆಂಜೆಡೆಯ ನಟನಾದ ಶಿವಪರಮಾತ್ಮನ ಕಿವಿಯಲ್ಲಿ ಧರಿಸಿಕೊಂಡ ಕರ್ಣಾಭರಣಗಳು ಬೀಸುವ ಪ್ರಕಾಶವು ಇರುಳನ್ನು ನಾಶಗೊಳಿಸಲು, ಅವನನ್ನು ಪರವೆಯರ ಮಾಳಿಗೆಗೆ ದೌತ್ಯಕ್ಕಾಗಿ ಎರಡುಸಲ ಹೋಗುವಂತೆ ನಿಯಮಿಸುವವನಾದ ಆಳಾಗಿಸಿಕೊಂಡ ನಂಬಿಯು ನಮ್ಮನ್ನು ಸೇವಕರಾಗಿ ಕೊಳ್ಳತಕ್ಕವನು. ಆದುದರಿಂದ ದೋಷಯುಕ್ತವಾದ ಕರ್ಮಕಾರಣವಾದ ಜನ್ಮದಲ್ಲಿ ನಾವು ಸಿಕ್ಕಿಬೀಳಲಾರೆವು.

---

955. ಮುನ್‌ನಿನ್‌ಱ ಮಱವಿಟ್ಟೈಮೇಲ್ ಮುತಲ್ವನಾರ್ ಎಪ್ಪೊೞುತುಮ್
ಚೆನ್ನಿನ್‌ಱ ಮನಪ್ಪೆರಿಯೋರ್ ತಿರುಕ್ಕುೞಲಿಚೈ ಕೇಟ್ಕ
'ಇನ್ನಿನ್‌ಱ ನಿಲೈಯೇನವ್ ಪಾಲಣೈವಾಯ್' ಎನ ಅವರುಮ್
ಅನ್ನಿನ್‌ಱ ನಿಲೈಪೆಯರ್‌ಪ್ಪಾರ್ ಐಯರ್‌ತಿರು ಮರುಙ್ಗಣೈನ್ತಾರ್.

956. ವಿಣ್ಣವರ್ಕಳ್ ಮಲರ್‌ಮಾರಿ ಮಿಟೈನ್ತುಲಕಮ್ ಮಿಚೈವಿಳಙ್ಕ
ಎಣ್ಣಿಲರು ಮುನಿವರ್‌ಕುೞಾಮ್ ಇರುಕ್ಕುಮೊೞಿ ಎಟುತ್ತೇತ್ತ
ಅಣ್ಣಲಾರ್ ಕುೞಲಿಚೈಕರುವಿ ಅರುಕಿಚೈತ್ತು ಙ್ಙುಟನ್‌ಚೆಲ್ಲ
ಪ್ಪುಣ್ಣಿಯನಾರ್ ಎೞುನ್ತರುಳಿ ಪ್ಪೊಙ್ಕೊತುವಿ ನಿಟೈಪುಕ್ಕಾರ್.

ಏರಿ

ವೇಱು

957. ಶೀತುಕೊಳ್ ವಿನೈಕ್ಕು ವಾರೋ ಙ್ಙೆಙ್ಙಟೈ ಕ್ಕೂತ್ತರ್ ತಮ್ಮೈ
ಕ್ಕಾತುಕೊಳ್ ಕುೞೈಕಳ್ ವೀಚು ಙ್ಙತಿರ್‌ನಿಲ ವಿರುಳ್‌ಕಾಲ್ ಚೀಪ್ಪ
ಮಾತುಕೊಳ್ ಪುಲವಿ ನೀಕ್ಕ ಮನೈಯಿಟೈ ಯಿರುಕಾಲ್ ಚೆಲ್ಲ
ತ್ತೂತುಕೊಳ್ ಪವರಾ ನಮ್ಮೈ ತ್ತೊೞುಮ್ಬುಕೊ ಣ್ಟರಿಮೈ ಕೊಳ್ವಾರ್.

ಮುಪ್ಪ್ಯೊಯಾಲುಲಗಾಂಡ ಸರ್ಗ

(ಜಡೆಮುಡಿ, ರುದ್ರಾಕ್ಷಿ, ವಿಭೂತಿ ಎಂಬ ಮೂರು ಚಿಹ್ನೆಗಳನ್ನು ತಾಳಿ ಲೋಕವನ್ನು ಆಳಿಕೊಂಡು ಬಂದ ಸರ್ಗ).

15. ಮೂರ್ತಿ ನಾಯನಾರ

958. ಪಾಂಡ್ಯನಾಡು ಸಂಪತ್ಸಮೃದ್ಧವಾದ ಭಾಗ್ಯವಂತ ಗೃಹಗಳಿಂದ ಕೂಡಿದುದು. ಅಲ್ಲಿನ ಮನೆಗಳ ಉಪ್ಪರಿಗೆಗಳು ಕಾಂತಿಯನ್ನು ಸೂಸುವ ಮಣಿಗಳಿಂದ ಖಚಿತವಾಗಿದ್ದು ಅದರ ಶಿಖರಗಳು ಮೇಘಗಳು ತಂಗುವುದಕ್ಕೆ ಆಸ್ಪದವಾಗಿರುವುವು. ಪ್ರೀತಿಯಿಂದ ಕೂಡಿದ ಮನಸ್ಸುಳ್ಳ, ವಿವಿಧ ವೃತ್ತಿಗಳಿಂದ ಜೀವನ ಸಾಗಿಸುವ ಜನರ ಸ್ತುತಿಗೆ ಪಾತ್ರವಾಗುವಂತೆ ಪುರಾತನತೆಯ ಖ್ಯಾತಿಗೆ ಆ ನಾಡು ಈಡಾಗಿದೆ.

959. ಪ್ರೀತಿಯ ಶೀತಲವಾದ ಮುತ್ತು, ತಳಿರುಗಳುಳ್ಳ ಬಾಗುವ ಲತೆಯಂತಹ ನಡುವನ್ನೂ ನಿಡಿದಾದ ವಿಸ್ತಾರವಾದ ಕಣ್ಣುಗಳನ್ನೂ ಬಿದಿರಿನಂತಹ ತೋಳುಗಳನ್ನೂ ಉಳ್ಳ ಹೆಣ್ಣುಗಳ ಸಂಸ್ಕೃತಿಯುತವಾದ ಮಧುರವಾಕ್ಯಗಳನ್ನುಳ್ಳ ಕೆಂಬಾಯಿಯನ್ನು ಹೊಂದುತ್ತವೆ. ತಂಪಾದ ಪ್ರಕಾಶಯುತವಾದ ಮುತ್ತುಗಳು, ನಿಡಿದಾದ ತೀರಗಳ ಮಣ್ಣನ್ನು ಕೊಚ್ಚಿ ಹರಿಯುವ ಶೈತ್ಯಯುತವಾದ ತಾಮ್ರಪರ್ಣಿ ನದಿಯು ಸೇರುವ ಕಡಲಲ್ಲಿ ಉಂಟಾಗುತ್ತವೆ.

960. ತುಂಬಿಗಳು ಮುಸುರಿ ಝೇಂಕರಿಸುವ ಚಂದನ ತೋಟಗಳಿಂದ ಸುತ್ತುವರಿದ ಪೊದಿಯಮಲೆ[1]ಯಿಂದ ಬೀಸುವ ತೆಂಗಾಳಿಯು ಸುವಾಸನಾಯುತವಾದ ಶೈತ್ಯವನ್ನು ಕೊಡುವುದು. ಸಜ್ಜನರಿಗೆ ಸಂತೋಷವನ್ನೂ ಲೋಕಕ್ಕೆ ಅನಂತವಾದ ಮೇಲ್ಮೆಯನ್ನೂ ದೈವಭಕ್ತಿಯುತವಾದ ತಮಿಳನ್ನೂ ಆ ತೆಂಗಾಳಿಯು ತರುವುದು.

ಮುಪ್ಪ್ಯೊಯಾಲುಲಕಾಣ್ಡ ಚರುಕ್ಕಮ್

15. ಮೂರ್ತ್ತಿ ನಾಯನಾರ್

958. ಚೀರ್ಮನ್ನುಚೆ ಲ್ವಕ್ಕ್ಯಟಿ ಮಲ್ಕು ಚೆಲಪ್ಪಿ ನೋಙ್ಕು
ಙ್ಕಾರ್ಮನ್ನುಚೆ ನ್ನಿಕ್ಕತಿರ್ ಮಾಮಣಿ ಮಾಟ ವೈಪ್ಪ
ನಾರ್ಮನ್ನುಚೆ ನ್ತ್ರೈಪ್ಪಲ ನಣ್ಣುಚೆಯ್ ಮಾನ್ತರ್ ಪೋಙ್ಕುಮ್
ಪಾರ್ಮನ್ನುತೋ ನೈಪ್ಪಕಟಿ ಪೊಣ್ಯತು ಪಾಣ್ಟಿ ನಾಟು.

959. ಚಾಯುನ್ತಳಿರ್ ವಲ್ಲಿ ಮರುಙ್ಕು ನೆಟುನ್ತ ಟಙ್ಕಣ್
ವೇಯುಮ್ಪಟು ತೋಳಿಯರ್ ಪಣ್ಪಟು ಮಿನ್ಚೊಲ್ ಚೆಯ್ಯ
ವಾಯುಮ್ಪಟುಂ; ನೀಳ್ಕರೈ ಮಣ್ಪೊರುನ್ ತಣ್ಪೊರುನ್ತಮ್
ಪಾಯುಙ್ಕಟ ಲುಮ್ಪಟುಮ್; ನೀರ್ಮೈ ಪಣಿತ್ತ ಮುತ್ತಮ್.

960. ಮೊಯ್ವೈತ್ತವ ಣ್ಟೈಞ್ಚಿಲಿ ಚೂಟಿನ್ ಮುರನ್ರು ಚಙ್ಕಿನ್
ವೈವೈತ್ತ ಚೋಲೈಮಲ ಯುನ್ತರ ವನ್ತ ಮನ್ತ
ಮೈವೈತ್ತತಾ ಲುನ್ತರುಮ್; ಞಾಲ ಮಳನ್ತ ಮೇನ್ಮೈ
ತ್ತೈವತ್ತಮಿ ಟುನ್ತರುಙ್ ಚೆವ್ವಿ ಮಣಙ್ಚೈ ಯಾರಮ್

---

1. ಪೊದಿಯ ಮಲೆ – ಅಗಸ್ತ್ಯನಿರುವ ಮಲೆ.

961. ಎಸಳುಗಳಿಂದ ಸುತ್ತುವರಿದ ತಾವರೆಯಲರಿನ ಮೇಲೆ ನೆಲಸಿರುವ ಲಕ್ಷ್ಮಿಯು ಯಾವಾಗಲೂ ಹಿರಿಮೆಯಿಂದ ಬಾಳುತ್ತಿರುವುದೂ, ಅಲ್ಲಿಯ ಲಕ್ಷ್ಮಿಯಂತಿರುವ ಹೆಂಗಸರ ವೀಣೆಗಳಲ್ಲಿಯೂ ಕೊದಲಲ್ಲಿಯೂ ಕ್ರಮವಾಗಿ ಮಧುರ ಸಂಗೀತವೂ ತುಂಬಿಗಳೂ ಕಾಣಿಸಿಕೊಳ್ಳುವಂತಿರುವುದೂ ಆದ ಆ ನಗರವು ಮಧುರಾಪುರಿಯೆಂಬ ನಗರ.

962. ಹಾಡುಗಳು ಪ್ರಶಸ್ತವಾಗಿ ಅಂಗೀಕೃತವಾಗುವ ಸಂಘಗಳ ಆಶ್ರಯದಲ್ಲಿ ವರ್ಧಿಸುವ ಹೆಳೆತವಿಳು ನೆಲೆಗೊಂಡ ಆ ಸುಂದರವಾದ ಪುರಾತನ ನಗರದಲ್ಲಿ ಗ್ರಂಥಗಳನ್ನು ಅಭ್ಯಸಿಸುವ ಸ್ಥಳಗಳೂ ಇವೆ. ದೊಡ್ಡ ತಲೆಗಳುಳ್ಳ ಎಮ್ಮೆಗಳು ಅಲ್ಲಾಡದೆ ನಿಂತಿರಲು, ಅವುಗಳ ಹಾಲುಸುರಿಯುವ ಮೊಲೆಗಳ ಹತ್ತಿರ, ಜೇನಿನಿಂದ ಒದ್ದೆಯಾದ ಪಂಕಜಗಳಿಂದ ಹಾರುವ ಶೇಲ್ ಮೀನುಗಳು ಹಾರುತ್ತಿರುತ್ತವೆ. ಅಂತಹ ಗದ್ದೆಗಳಲ್ಲಿ ತಟಾಕೆಗಳಲ್ಲಿ ಎಲ್ಲೆಲ್ಲಿಯೂ ಮುತ್ತುಗಳು ದೊರೆಯುತ್ತವೆ.

963. ಮುತ್ತುಗಳನ್ನು ಸೇರಿ ಸುರಿದ ಮಾಲೆಯು, ಮಂದಾನಿಲವು ಬಂದು ಮೆಲ್ಲನೇ ಬೀಸುವ ಉಪ್ಪರಿಗೆಗಳಲ್ಲಿ ಚೆಂಡಾಡುವ ಸ್ತ್ರೀಯರ ಕೆಂಪಗಾದ ಕರತಳಗಳು ತಾಳಿಕೊಳ್ಳುವ ಚಂದನ ಪೂಸಿದ ಮೊಲೆಗಳ ಮೇಲಿವೆ. ಮುತ್ತಿನಂತಿರುವ ಬೆವರ ಹನಿಗಳ ಸಾಲು ಕರ್ಣಾಭರಣಗಳ ಕಾಂತಿಯಿಂದ ಕೂಡಿದ ಸುಂದರವಾದ ಮೊಗದಾವರೆಗಳ ಮೇಲಿವೆ.

---

961. ಚೊಟುಮ್ಮಿತಟ್ ಪ್ಪಜ್ಕಯ ಮಾಕವ ತ್ತೋಟ್ಟಿನ್ ಮೇಲಾನ್
ಶಾಟ್ಟಿನ್ನಿಯಿನ್ ಜುನ್ತ್ತನಿ ಪಾಟ್ವತ ತ್ತೈಯ ಲೊಪ್ಪಾರ್
ಯಾಟಿನ್‌ಮೊಟಿ ಯಿಜಿಙ್‌ಕುಟ ಲಿನ್ನಿಚ್ಚೈ ಯುಙ್ಙು ರುಮ್ಪುವಟ್
ಪಾಟುನ್ನಕ ರಮ್ಮ್ರತು ರಾಪುರಿ ಯೆನ್ಪ ತಾಕುವಟ್.

962. ಚಾಲ್ಪಾಯಮು ವೈಕೃತ್ತಮಿಟ್ ತಙ್ಕಿಯ ವಙ್ಕಣ್ ಮೂತೂರ್
ನೂಲ್ಪಾಯಿಟ ತ್ತುಮ್ಮುಳ; ನೋನ್‌ಜಿಲ್ಯೈ ಮೇತಿ ಪಾಯ
ಪ್ಪಾಲ್‌ಪಾಯ್‌ಮುಲ್ಯೈ ತೋಯ್ಮ್ರತು ಪ್ಪಙ್ಕಯುವಟ್ ಪಾಯ ವೆಙ್ಕುಙ್
ಚೇಲ್‌ಪಾಯ್ತುಟ ತ್ತುಮ್ಮುಳ; ಚೆಯ್ಯುಣ್ಮಿ ಕ್ಕೇಜಿ ಚಙ್ಕಮ್.

963. ಮನ್ತಾನಿಲಮ್ ವನ್ತುಚ್ಚೈ ಪನ್ತರಿನ್ ಮಾಟ ಮುನ್‌ಜಿಃಜಿಙ್
ಪನ್ತಾಟಿಯ ಮಙಕ್ಕೈಯರ್ ಪಙ್ಕಯ ಚೆಙಕ್ಕೈ ತ್ತಾಙ್ಕುಙ್
ಚನ್ತಾರ್‌ಮುಲ್ಯೈ ಮೇಲನ; ತಾಟ್‌ಕುಟಿಯ ವಾಣ್‌ಮು ಕಪ್ಪೂಙ್
ಚೆನ್ತಾಮಱ್ಯೈ ಮೇಲನ; ನಿತ್ತಿಲಙ್ ಚೇರ್‌ನ್ತ ಕೋವೈ.

964. ಆ ಹಳೆಯ ಊರು, ಸತ್ಯವಸ್ತುವನ್ನು ನಿರ್ದೇಶಿಸುವಂತಹ, ತಮಿಳು ಗ್ರಂಥಗಳು ವಿವರಿಸುವ, ನಿಜವಾದ ಭಾಗ್ಯವನ್ನು ತರುವ ಶಿವಪರಮಾತ್ಮನು ಅನುಗ್ರಹಿಸಿದ ತಿರುವಾಲವಾಯಿ (ಮದುರೆ). ಅಲ್ಲಿ ನಮ್ಮನ್ನು ಸಂಸಾರದಿಂದ ತಪ್ಪಿಸಿ ಉನ್ನತಿಗೆ ಕೊಂಡುಹೋಗುವ ಆ ಪರಮಾತ್ಮನು ತಾನೇ ಮೊದಲಿನವನಾಗಿದ್ದು ಸಂಘವನ್ನು ನಡೆಸಿಬಂದುದನ್ನು ನಾವು ಕಾಣುವೆವಾದುದರಿಂದ ಅದು ಮೂರು ಲೋಕಗಳಲ್ಲಿಯೂ ಮೇಲಾದುದಲ್ಲವೇ ?

965. ಆ ಸುಂದರ ನಗರದಲ್ಲಿ ಬಾಳುವ ವಣಿಜಕುಲದಲ್ಲಿ ಹೆಚ್ಚು ಪುರಾತನವಾದ, ಎಲ್ಲರಿಂದಲೂ ಉತ್ತಮವೆಂದು ಎಣ್ಣಿಸಲ್ಪಡುವ ಮಹಿಮೆಯುಳ್ಳ, ಅಲ್ಲಿನ ನಿವಾಸಿಗಳು ಮಾಡಿದ ತಪಸ್ಸಿನ ಫಲವಾಗಿ ಒಬ್ಬನು ಅವತರಿಸಿದನು. ಅವನು ಎಲ್ಲ ಆಪತ್ತುಗಳನ್ನೂ ಪೂರ್ಣವಾಗಿ ತುಂಡರಿಸುವ, ವೃಷಭವಾಹನನಾದ ಶಿವಪರಮಾತ್ಮನ ಶ್ರೀಪಾದಗಳನ್ನು ಊರುಗೋಲಂತೆ ದೃಢಭಕ್ತಿಯಿಂದ ಹಿಡಿದ ಭಕ್ತರಲ್ಲಿ ಮಿಕ್ಕವನು.

966. ಪ್ರತಿದಿನವೂ ಬಹುವಾದ ಭಕ್ತಿಯೇ ಹೆಚ್ಚಿನ ಆಸೆಯಾದುದರಿಂದ, ಬಂಧುಗಳಿಂದಲೂ ಸ್ನೇಹಿತರಿಂದಲೂ ದೊರೆಯಬಹುದಾದ ಸುಖಸಂತೋಷಗಳನ್ನು ಈಶ್ವರನಾದ ಶಿವಪರಮಾತ್ಮನ ಶ್ರೀಪಾದಗಳ ಅನುಗ್ರಹವೆಂದೇ ತಿಳಿದವನೂ, ಉತ್ಪತ್ತಿಯಾಗಿ ವರ್ಧಿಸುವ ಭಕ್ತಿಯನ್ನೇ ತನ್ನ ಮೂರ್ತಿಯಾಗಿ ಉಳ್ಳವನೂ ಮೂರ್ತಿ ನಾಯನಾರನು.

---

964. ಮುಮ್ಮೈಪ್ಪುವ ನಙ್ಕಳಿನ್ ಮಿಕ್ಕತನ್ ಊೞಿಯುವಮ್ ಮೂತೂರ್
ಮೆಯ್‌ಮ್ಮೈಪ್ಪೊರು ಳಾನ್ತುಮಿೞ್ ನೂಲಿನ್ ವಿಳಙ್ಕು ವಾಯ್‌ಮೈ
ಚ್ಚೆಮ್ಮೈಪ್ಪೊರು ಳುನ್ತರು ವಾರ್‌ತಿರು ವಾಲ ವಾಯಿಲ್
ಎಮ್ಮೈಪ್ಪವನ್ ತೀರ್‌ಪ್ಪವರ್ ಚಙ್ಕ ಮಿರುನ್ತು ತೇನ್‌ಱಾಲ್.

965. ಅಪ್ಪೊೞ್ ಪತಿಲಾೞ್ ವಣಿಕಕುಲ ತ್ತಾನ್‌ಱ ತೊನ್‌ಮೈ
ಚ್ಚೆಪ್ಪ ತ್ತಕುಚೀರ್ ಕ್ಕುಡಿಚೆಯ್ತವ ಙ್ಞೆಯ್ಯ ವನ್ನಾರ್
ಎಪ್ಪ ಱ್ಱಿನ್ನೈಯುಮ್ ಅಱುತ್ತ ಏಱುಕ್ಕೈ ತ್ತೇಱು ವಾರ್ತಾಳ್
ಮೆಯ್‌ಪ್ಪ ಱ್ಱಿನಪ್ಪಱ್ಱಿ ವಿಡಾತ ವಿರುಪ್ಪಿನ್ ಮಿಕ್ಕಾರ್.

966. ನಾಳುಮ್ಮೈರು ಙ್ಕಾತಲ್ ನಯಪ್ಪುಱುಮ್ ವೇಟ್ಕೈಯಾಲೇ
ಕೇಳುಮ್ ತುಣೈಯುಮ್ ಮುತಲ್‌ಕೇಟಿಲ್ ಪತಙ್ಕ ಳೆಲ್ಲಾಮ್
ಆಳುಮ್ಮೈರು ಮಾನ್‌ಅಡಿ ತ್ತಾಮರೈ ಅಲ್ಲ ತಿಲ್ಲಾರ್
ಮೂಳುಮ್ಮೈರು ಕನ್‌ಪೆನು ಮ್ಮೂರ್ತಿಯಾರ್ ಮೂರ್ತಿಯಾರ್ ತಾಮ್.

967. ಸಾಯಂಕಾಲದಲ್ಲಿ ಪ್ರಕಾಶಿಸುವ ಚಂದ್ರನನ್ನು ಕೆಂಜೆಡೆಯಲ್ಲಿ ಧರಿಸಿದ ತಿರುವಾಲವಾಯಿ (ಮಧುರೆ) ಯಲ್ಲಿರುವ ನಮ್ಮ ತಂದೆಯಾದ ಈಶ್ವರನಿಗೆ ಪೂಸುವ ಚಂದನಲೇಪನವನ್ನು ಒಂದುದಿನವೂ ತಪ್ಪಿಸದೆ, ಆ ತನ್ನ ಕೈಂಕರ್ಯವನ್ನು ಉಳಿದ ಭಕ್ತರು ಸಂತೋಷಿಸುವಂತೆ ನಡೆಸಿಕೊಂಡು ಬರುವ ಕಾಲದಲ್ಲಿ,

968. ವನದುರ್ಗವುಳ್ಳ ಬಡಗುದೆಸೆಯ ಕರುನಾಡವರ ಅರಸನು, ತನ್ನ ಸೇನಾ ಬಲದಿಂದ ಬಲಾತ್ಕಾರವಾಗಿ ಪಾಂಡ್ಯನಾಡನ್ನು ಕೈವಶಪಡಿಸಿಕೊಳ್ಳುವುದಕ್ಕಾಗಿ, ಆನೆ ಕುದುರೆ ಕಾಲಾಳು ರಥಗಳನ್ನು ಕೊಂಡ ಸಮುದ್ರತೀರದಂತಿರುವ ಸೇನೆಯನ್ನು ಕೂಡಿಕೊಂಡು ತೆಂಕಣದತ್ತ ಬಂದನು.

969. ಬಂದು ಸೇರಿದ ದೊಡ್ಡ ಸೈನ್ಯವನ್ನು ನೆಲವೇ ಕಾಣದಂತೆ ಎಲ್ಲೆಲ್ಲಿಯೂ ಪಸರಿಸಿ ನಿಲ್ಲಿಸಿ, ಚಂದನ ತೋಟಗಳಿಂದ ಸುತ್ತುವರಿದ ಪೊದಿಯಮಲೆ (ಅಗಸ್ತ್ಯಮಲೆ) ಯಿರುವ ತಮಿಳುನಾಡನ್ನು ಆಳಿಕೊಂಡು ಬರುವ ಪಾಂಡ್ಯ ಅರಸನ ಶೌರ್ಯವು ನಾಶ ವಾಗುವಂತೆ, ಯುದ್ಧದಲ್ಲಿ ವಿಜಯವನ್ನು ಹೊಂದಿ, ತನ್ನ ಆಜ್ಞಾಚಕ್ರವನ್ನು ಸ್ಥಾಪಿಸುವ ಉದ್ದೇಶದಿಂದ, ಸುವಾಸನಾಯುಕ್ತವಾದ ತೋಟಗಳಿಂದ ಕೂಡಿದ ಮಧುರೆ ಮಹಾನಗರವನ್ನು ತನ್ನ ಮುಖ್ಯಪಟ್ಟಣವಾಗಿಕೊಂಡು ಆಳಿಕೊಂಡಿದ್ದನು.

---

967. ಅನ್ತಿ ಪ್ಪಿಱೈಚ್ಚೆ ಞ್ಚಟೈಮೇಲಣಿ ಆಲ ವಾಯಿಲ್
ಎನ್ತೈ ಕಣಿಚ ನ್ತನಕ್ಕಾಪ್ಪಿಟೈ ಎನ್ಱು ಮ್ಮುಟ್ಟಾ
ಅನ್ತ ಚ್ಚೆಯಲಿನ್ ನಿಲೈನಿನ್ ಱಟಿಯಾ ರುವಪ್ಪ
ಚಿನ್ತೈ ಕ್ಕಿನಿತಾಯ ತಿರುಪ್ಪಣಿ ಚೆಯ್ಯುಮ್ ನಾಳಿಲ್.

968. ಕಾನ ಕ್ಕಟಿಚೂಳ್ ವಟುಕ್ಕರು ನಾಟರ್ ಕಾವನ್
ಮಾನ ಪ್ಪಟೈಮನ್ನನ್ ವಲಿನ್ತು ನಿಲಙ್ಕೊಳ್ ವಾನಾಯ್
ಯಾನೈ ಕ್ಕುತಿರೈ ಕ್ಕರುವಿಪ್ಪಟೈ ವೀರರ್ ತಿಣ್ಟೇರ್
ಚೇನೈ ಕ್ಕಟಲು ಙ್ಕೊಣ್ಟುತೆನ್ ಱಿಚೈ ನೋಕ್ಕಿ ವನ್ತಾನ್.

969. ವನ್ತುಱ್ಱ ಪೆರುಮ್ಪಟೈ ಮಣ್ಪುತೈ ಯಪ್ಪ ರಪ್ಪಿ
ಚ್ಚನ್ತ ಪ್ಪೊತಿ ಯಿಲ್ತಮಿೞ್ ನಾಟುಟೈ ಮನ್ನನ್ ವೀರಮ್
ಚಿನ್ತ ಚ್ಚೆರು ವೆನ್ಱುತ ನ್ನಾಣೈ ಚೆಲುತ್ತು ಮಾಱ್ಱಾಲ್
ಕನ್ತ ಪ್ಪೊಟಿಲ್ ಚೂೞ್ಮತು ರಾಪುರಿ ಕಾವಲ್ ಕೊಣ್ಟಾನ್.

970. ಹೆಚ್ಚಾದ ಶೌರ್ಯದಿಂದ ಸಂಪತ್ತಿನಿಂದ ಕೂಡಿದ ತಮಿಳುನಾಡನ್ನು ಮತ್ತೂ ವರ್ಧಿಸುವಂತೆ ಮಾಡಿ, ಬಡತನವನ್ನು ಹೋಗಲಾಡಿಸಿ, ಆ ಅರಸನು, ನಿಡಿದಾದ ಮೇರುವನ್ನು ಬಿಲ್ಲಾಗಿ ಉಳ್ಳ ಶಿವಪರಮಾತ್ಮನ ಸೇವಕತನವನ್ನು ಹೊಂದಿದ ವಿಭೂತಿಯನ್ನು ಧರಿಸುವ ಮಾರ್ಗವನ್ನು ಬಿಟ್ಟುಬಿಟ್ಟು ಅರ್ಹಂತರ ಮಾರ್ಗದಲ್ಲಿ ಪ್ರವರ್ತಿಸಿದನು.

971. ವಂಚಕನಾದ ನೀಚಶ್ರಮಣನ ಕಪಟತಪಗಳನ್ನು ನಿಜವೆಂದು ನೆನೆಸಿ, ಆ ಮಾರ್ಗವನ್ನು ಸ್ವೀಕರಿಸಿ, ಪತನವನ್ನು ಹೊಂದುವ ಆ ಕೆಟ್ಟರಾಜನು ತಾನು ಹೀಗೆ ಕೆಳಬಿದ್ದುದಲ್ಲದೆ ಸರ್ಪ, ಚಂದ್ರ ಇವುಗಳನ್ನುಳ್ಳ ಜಡೆಯಿಂದಲಂಕೃತನಾದ ಶಿವಪರಮಾತ್ಮನ ಭಕ್ತರನ್ನೂ ಕೆಟ್ಟದಾದ ಪ್ರಾರಬ್ಧಕರ್ಮಫಲದಿಂದಾಗಿ ಶ್ರಮಣ ಮತವನ್ನು ಅನುಸರಿಸುವಂತೆ ಬಲಾತ್ಕರಿಸಿದನು.

972. ಕೆಂಪಗಾದ ಆಕಾಶವನ್ನು ಹೋಲುವ ಜಡೆಯುಳ್ಳವನೂ, ವೃಷಭವಾಹನವುಳ್ಳವನೂ, ತಿರುವಾಲವಾಯಲ್ಲಿ (ಮದುರೆಯಲ್ಲಿ) ತೋರಿ ಅನುಗ್ರಹಿಸಿದ ಮುಕ್ಕಣ್ಣ ಪರಮನೂ (ಶ್ರೇಷ್ಠನೂ) ಆದ ಶಿವಪರಮಾತ್ಮನ ಭಕ್ತರಿಗೂ ಮೂರ್ತಿನಾಯನಾರನಿಗೂ, ಕಗ್ಗಲ್ಲಿನಂತೆ ಹೃದಯವಿರುವ ಆ ವಂಚಕನು, ಕೆಟ್ಟುದಾದ ಶ್ರಮಣ ಎಂಬ ಹೆಸರನ್ನು ಕೊಂಡ ಹೀನರುಗಳನ್ನು ಒಡಂಬಡಿಸುವ ಉದ್ದೇಶದಿಂದ, ಹೀನಕಾರ್ಯಗಳನ್ನು ಮಾಡಲು ನೆನೆದು,

---

970. ವಲ್ಲಾಣ್ಮೈಯಿನ್ ವಣ್ಮೈಮಿಟ್ ನಾಟು ವಳಮ್ಪ ಟುತ್ತಿ
ನಿಲ್ಲಾನಿಲ್ಮೈ ಒನ್‌ಱಿಯ ಇನ್ಮೈಯಿನ್ ನೀಣ್ಟ ಮೇರು
ವಿಲ್ಲಾನ್ ಅಟಿ ಮೈತ್ತಿಱ ಮೇವಿಯ ನೀಱ್ಱಿನ್ ಚಾರ್ಪು
ಚೆಲ್ಲಾತರು ಕನ್ತರ್ ತಿಱತ್ತಿನಿಱ್ ಚೆನ್ಱು ತಾಟ್‌ನ್ತಾನ್.

971. ತಾಟುಞ್ಚಮಣ್ ಕೈಯರ್ ತವತ್ತೈಮೆ ಯೆನ್ಱು ಚಾರ್‌ನ್ತು
ವೀಟುಱಕ್ಕೊಟೆ ಯೋನ್‌ಅತು ವನ್‌ಱಿಯುಮ್ ವೆಯ್ಯ ಮುನ್ನೈ
ಚ್ಚೂಟುಮ್‌ವಿನ್ಯೈ ಯಾಲ್‌ಅರ ವಞ್ಚಟರ್ ತ್ತಿಙ್ಕ ಳೋಟುಮ್
ವಾಟುಞ್ಚಟೈ ಯಾನ್‌ಅಟಿ ಯಾರೈಯುಮ್ ವನ್ಮೈ ಚೆಯ್ತಾನ್.

972. ಚೆಕ್ಕರ್ಚ್ಚಟೈ ಯಾರ್‌ವಿಟೈ ಯಾರ್‌ತಿರು ವಾಲ ವಾಯುಳ್
ಮುಕ್ಕಟ್‌ಪರ ನಾರ್‌ತಿರು ತ್ತೊಣ್ಟರೈ ಮೂರ್ತ್ತಿ ಯಾರೈ
ಮೈಕ್ಕಱ್‌ಪುರೈ ನೆಞ್ಚಟೈ ವಞ್ಚಕನ್ ವೆಞ್ಚ ಮಣ್ ಪೇರ್
ಎಕ್ಕರ್‌ಕ್ಕಟೆ ನಾಕ ಇಕಟ್‌ನ್ತನ ಚೆಯ್ಯ ಎಣ್ಣಿ.

973. ಕೊನೆಯಿಲ್ಲದ ವಿಘ್ನಕಾರ್ಯಗಳನ್ನು ಮಾಡಿದರೂ, ಆ ಭಕ್ತನು, ತಾನು ಆಚರಿಸಿ ಬಂದ ಹಿಂದಿನ ಪದ್ಧತಿಯಾದ ಚಂದನ ಕೈಂಕರ್ಯವನ್ನು ಬಿಟ್ಟುಬಿಡದೆ ನಡೆಸಿಕೊಂಡು ಬಂದನು. ತಂತಮ್ಮ ಹಿರಿಮೆಯ ಮಾರ್ಗವನ್ನಾಚರಿಸುವ ಹಿರಿಯರನ್ನು ಅವರ ಸನ್ಮಾರ್ಗಾಚರಣೆಯಲ್ಲಿ ತಡೆಯತಕ್ಕವನು ಯಾವನು?

974. ಹೀನವಾದ ಅನೇಕ ವಿಘ್ನಗಳನ್ನು ತಂದೊಡ್ಡಿದರೂ, ತನ್ನ ದಿವ್ಯ ಕೈಂಕರ್ಯದಿಂದ ದೂರವಾಗದ ಮೂರ್ತಿ ನಾಯನಾರನು, ಚಂದನವನ್ನು ಪಡೆಯುವ ದಾರಿಯನ್ನೂ, ಕ್ರೂರವಾದ ಕೇಡನ್ನು ಮಾಡುವ ಆ ಪಾಪಿಯು ತಡೆದುಬಿಟ್ಟನು. ಶುದ್ಧವಾದ ನೀರುಳ್ಳ ಗಂಗೆಯನ್ನು ಧರಿಸಿದ ಜಡೆಯುವನ ಭಕ್ತನು ಈ ಕಾರ್ಯದಿಂದ ಮನನೊಂದನು.

975. ದುಷ್ಕಾರ್ಯಗಳಲ್ಲಿ ಪ್ರವರ್ತಿಸುವ ಶ್ರಮಣರೊಡನೆ ಕಾಲವನ್ನು ಕಳಿಯುವ ಈ ಕೆಟ್ಟ ಪಾಪಿಯು ಸಾಯಲು, ಸತ್ಯವಾದ ವೇದಗಳಲ್ಲಿ ಹೇಳಿದ ಒಳ್ಳೆಯದನ್ನು ತರುವ ವಿಭೂತಿಮಾರ್ಗದಲ್ಲಿ ಶ್ರೇಷ್ಠವಾದ ಶೈವಸನ್ಮಾರ್ಗವನ್ನು ಕಾಪಾಡುವ ಉತ್ತಮ ಸ್ವಭಾವವುಳ್ಳ ಅರಸರನ್ನು ಈ ನೆಲವು ಹೊಂದುವ ಕಾಲವೆಂದು ಬರುವುದೋ? ಎಂದು ಮನದಲ್ಲಿ ನೆನೆದವನಾಗಿ,

---

973. ಅನ್ರ್ರ್ ಇಲ ವಾಮಿಜಿಕ್ಕೈ ಚೆಯ್ಯವುವ್ ಅನ್ಪ ನಾರ್ತಾವ್
ಮುನ್ತೈಮ್ಮುಙೈ ವೈಪ್ಪಣಿ ಮುಟ್ಟಲರ್ ಚೆಯ್ತು ವನ್ನಾರ್;
ತನ್ರ್ರ್ ಪೆರುಮೈ ಕ್ಕಳವಾಕಿಯ ಚಾರ್ಪಿಲ್ ನಿಱ್ಕುವ್
ಎನ್ರ್ರ್ ಪೆರುಮ ಕ್ಕಳೈಯಾವರ್ ತಟುಕ್ಕ ವಲ್ಲಾರ್?

974. ಎಳ್ಳುಙ್ಚಿಯಲ್ ವನ್ಮೈಕಳ್ ಎಲ್ಲೈಯಿ ಲ್ಲಾತ ಚೆಯ್ಯ
ತ್ತಳ್ಳುಙ್ಚಿಯ ಲಿಲ್ಲವರ್ ಚನ್ರ್ನ ಕ್ಕಾಪ್ಪು ತ್ತೇಟಿ
ಕೊಳ್ಳುನ್ತುಙೈ ಯುವ್ ಅಟ್ಟೈ ತ್ತಾನ್ಕೊಟು ಙ್ಕೋನ್ಮೈ ಚೆಯ್ವಾನ್;
ತೆಳ್ಳುವ್ಪುನಲ್ ವೇಣಿಯರ್ ಕ್ಕನ್ಪರು ಙ್ಚಿನ್ತೈ ನೊನ್ತು.

975. 'ಪುನ್ಮೈ ಚ್ಚೆಯಲ್ವಲ್ ಅಮಣ್ಕುಣ್ಡರಿಱ್ ಪೋತು ಪೋಕ್ಕುವ್
ವನ್ಮೈ ಕೊಟುಮ್ಪಾ ತಕನ್ಮಾಯ್ನ್ತಿಟ ವಾಯ್ಮೈ ವೇತ
ನನ್ಮೈ ತ್ತಿರುನೀ ಱಿಯರ್ನನ್ನೆಱಿ ತಾಙ್ಕು ಮೇನ್ಮೈ
ತ್ತನ್ಮೈ ಪ್ಪುವಿಮನ್ನರೈ ಚ್ಚಾರ್ವತೆನ್ಱು?' ಎನ್ಱು ಚಾರ್ವಾರ್.

976. ಕೋಪಿಯೂ ಕ್ರೂರಕಂಟಕನೂ ಆದ ಆ ಬಡಗ ಕರುನಾಡ ಅರಸನು ಚಂದನ ಪಡೆಯುವ ದಾರಿಯನ್ನು ತಡೆಯಲು, ಮೂರ್ತಿ ನಾಯನಾರನು ಚಂದನವನ್ನು ಹುಡುಕುತ್ತಾ ಆ ಹಗಲು ಕಳೆಯುವವರೆಗೂ ಹುಡುಕಿಯೂ, ತಿರುವಾಲವಾಯಲ್ಲಿ (ಮದುರೆಯಲ್ಲಿ) ತನ್ನ ತಂದೆಯಾದ ಶಿವಪರಮಾತ್ಮನನ್ನು ಅಲಂಕರಿಸತಕ್ಕ ಒಳ್ಳೆಯ ಚಂದನವು ಎಲ್ಲೂ ಸಿಗದೆ ಮನಕಲಕಿ ವ್ಯಥೆಪಟ್ಟು ತನ್ನ ಒಡೆಯನಾದ ಈಶ್ವರನ ದೇಗುಲಕ್ಕೆ ಬಂದು ಸೇರಿದನು.

977. 'ನಟನವನ್ನು ಮಾಡುವ ಪರಮಾತ್ಮನು ಅಲಂಕರಿಸಿಕೊಳ್ಳುವ ದಿವ್ಯ ಲೇಪನ ಕೈಂಕರ್ಯಕ್ಕೆ ಇಂದು ವಿಘ್ನವು ಏರ್ಪಟ್ಟರೂ, ಚಂದನವನ್ನು ತೇಯುವ ನನ್ನ ಕೈಗೆ ವಿಘ್ನವು ಬಂದು ಸೇರದು' ಎಂದು ನಿಶ್ಚಯಿಸಿ, ದುಂಡಗಾಗಿ ಶೋಭಿಸುವ ಚಂದನ ಕಲ್ಲಿನಲ್ಲಿ ತನ್ನ ಮುಂಗೈಯನ್ನಿಟ್ಟು, ಹೊರಗಿನ ಚರ್ಮ, ನರ, ಎಲುಬುಗಳು ಅರೆದು ಹೋಗುವಂತೆ ತೇದನು.

978. ಈ ರೀತಿ ಕಲ್ಲಲ್ಲಿ ತೇದ ಮುಂಗೈಯಿಂದ ರಕ್ತ ಸುರಿದು, ತೇದ ಭಾಗವೆಲ್ಲಾ ಎಲುಬು ಕಾಣಿಸಿಕೊಂಡು, ಅದರೊಳಗಿರುವ ಮೂಳೆಯ ಭಾಗವೂ ಹೊರ ಬೀಳಲು, ಅದನ್ನು ನೋಡಿ ತನ್ನೊಡೆಯನಾದ ಶಿವಪರಮಾತ್ಮನು ಸಹಿಸದಾದನು. ಆ ರಾತ್ರಿಯಲ್ಲಿಯೇ ಅವನು ಅನುಗ್ರಹಿಸಿದ ದಿವ್ಯವಾಣಿಯು,

---

976. ಕಾಯ್ವುೞಿ ಚೆಱ್ಱಕ್ಕೊಟು ಕಣ್ಟಕನ್ ಕಾಪ್ಪ ವುಣ್ಱ್ಚನ್(ಱು)
ಆಯ್ವುೞಿ ಕೊಟ್ಪಿಱ್ ಪಕಲೆಲ್ಲೈ ಅಟಙ್ಕ ನಾಟಿ
ಏಯ್ವುೞಿ ನಱ್ಚ ನ್ತನಮೆಙ್ಕುಮ್ ಪೆಱಾತು ಚಿನ್ತೈ
ಚಾಯ್ವುೞೀಟ ವನ್ತನರ್ ತಮ್ಪಿರಾನ್ ಕೋಯಿಲ್ ತನ್ನಿಲ್.

977. ನಟ್ಟಮ್ಪುರಿ ವಾರಣಿ ನಱ್ಱಿರು ಮೆಯ್ಪ್ಪೂ ಚ್ಚಿನ್ಱು
ಮುಟ್ಟುಮ್ಪರಿ ಚಾಯಿನು ನ್ತೇಯ್ಕ್ಕುಙ್ಕೈ ಮುಟ್ಟಾ ತೆನ್ಱು
ವಟ್ಟನ್ತಿಕೞ್ ಪಾಱೈಯಿನ್ ವೈತ್ತು ಮುೞಙ್ಕೈ ತೇಯ್ತ್ತಾರ್
ಕಟ್ಟುಮ್ಪುಱ ನ್ತೋಲ್ನರಮ್ ಪೆನ್ಪು ಕರೈನ್ತು ತೇಯ.

978. ಕಲ್ಲಿನ್ಪುಱ ತೇಯ್ತ್ತ ಮುೞಙ್ಕೈ ಕಲುೞ್ನ್ತು ಚೋರಿ
ಚೆಲ್ಲುಮ್ಪರ ಪ್ಪೆಙ್ಕಣುಮ್ ಎನ್ಪು ತಿಱನ್ತು ಮೂಳೈ
ಪುಲ್ಲುಮ್ಪಟಿ ಕಣ್ಟು ಪೊಱುತ್ತಿಲರ್ ತಮ್ಪಿ ರಾನಾರ್;
ಅಲ್ಲಿನ್ಕಣ್ ಎೞುನ್ತ(ತು) ಉವನ್ತರುಳ್ ಚೆಯ್ತ ವಾಕ್ಕು.

979. 'ಅಯ್ಯಾ! ಭಕ್ತಿಯ ದಾರ್ಢ್ಯದಿಂದ ಈ ಕಾರ್ಯವನ್ನು ಮಾಡಬೇಡ. ನಿನ್ನಲ್ಲಿ ಹೆಚ್ಚಾದ ಕೆಡುಕನ್ನು ತೋರಿಸಿದವನು ಬಲಾತ್ಕಾರದಿಂದ ಸೆಳೆದುಕೊಂಡ ಈ ನಾಡೆಲ್ಲವನ್ನೂ ನೀನು ಪಡೆದು, ಹಿಂದೆ ಅನುಭವಿಸಿದ ದುಃಖಗಳನ್ನೆಲ್ಲಾ ಹೋಗಲಾಡಿಸಿ ಕೊಂಡು, ಆಮೇಲೆ ನಿನ್ನ ನಿಯತಿಯಾದ ಕೈಂಕರ್ಯವನ್ನು ಮಾಡಿ, ಕೊನೆಗೆ ನನ್ನ ಉತ್ತಮಲೋಕವನ್ನು ಸೇರುವವನಾಗು!' ಎಂದು ಹೇಳಲು,

980. ಈ ದಿವ್ಯವಾಣಿಯನ್ನು ಕೇಳಿ, ಎದ್ದು, ಅಂಜಿ, ತಾನು ಮಾಡುತ್ತಿದ್ದ ಕಾರ್ಯವನ್ನು ನಿಲ್ಲಿಸಲು, ತೇದ ಗಾಯದ ಹುಣ್ಣು ಗುಣವಾಗಿ, ಸುವಾಸನೆಯನ್ನು ಹೊಂದಿದ ಅವನ ಕೈಯ ಸೌಂದರ್ಯವು ಹೆಚ್ಚಿತು. ಮೂರ್ತಿ ನಾಯನಾರನೂ ಶೋಭಿಸುವ ಕಾಂತಿಯನ್ನು ಶರೀರದಲ್ಲಿ ಹೊಂದಿದನು.

981. ಮಿಂಚು ತೋರಿಬರುವ ಸ್ವಲ್ಪಕಾಲದಷ್ಟೇ ಇರುವ ಶರೀರವು, ಶಿವ ಪರಮಾತ್ಮನಲ್ಲಿ ಭಕ್ತಿ ಇಲ್ಲದವರಿಗೆ, ಅಷ್ಟು ಸಮಯವೂ ಬಾಳದಿರುವುದು ಎಂಬ ಸತ್ಯವನ್ನು ಪ್ರಕಾಶಿಸಲು, ಶ್ರಮಣ ಮಾರ್ಗದಲ್ಲಿ ಬಾಳುವ ಬಡಗ ಕರುನಾಡ ಅರಸನ ಜೀವಿತಕಾಲವು ಅಂದಿನ ರಾತ್ರಿಯೇ ಮುಗಿದುಹೋಯಿತು.

---

979. 'ಅನ್‌ಪಿನ್ ತುಣಿ ವಾಲ್‌ಇತು ಚೆಯ್ಯಿಟಲ್; ಐಯ! ಉನ್‌ಪಾಲ್
ವನ್‌ಪುನ್‌ಕಣ್ ವಿಳೈತ್ತವನ್ ಕೊಣ್ಟಮಣ್ ಎಲ್ಲಾ ಐಕ್ಕೊಣ್ಟು
ಮುನ್‌ಪಿನ್ನಲ್ ಪುಕುನ್ತನ ಮುಱಿವುಮ್ ನೀತ್ತು ಕ್ಕಾತ್ತು
ಪ್ಪಿನ್‌ಪುನ್‌ಪಣಿ ಚೆಯ್ತುನಮ್ ಪೇರುಲ ಕೆಯ್ತು' ಕೆನ್ನ.

980. ಇವ್ವಣ್ಣಮ್ ಎಟುನ್ತತು ಕೇಟ್ಟೆಟು ನ್ತಞ್ಚಿ ಮುನ್‌ಪು
ಚೆಯ್ವಣ್ಣಮ್ ಒಟಿನ್ನಿಟ ತ್ತೇಯ್‌ನ್ತಪುಣ್ ಊಱು ತೀರ್‌ನ್ತು
ಕೈವಣ್ಣಮ್ ನಿರಮ್ಪಿನ ವಾಚಮೆ ಲ್ಲಾಙ್ಕು ಲನ್ತು
ಮೊಯ್ವಣ್ಣ ವಿಳಙ್ಕೊಳಿ ಎಯ್ತಿನರ್ ಮೂರ್ತ್ತಿ ಯಾರ್‌ತಾಮ್.

981. ಅನ್ನಾಳ್‌ಇರ ವಿನ್‌ಕನ್ ಅಮಣ್‌ಪುಕಲ್ ಚಾರ್‌ನ್ತು ವಾಟುಮ್
ಮನ್‌ನಾಕಿಯ ಪೋರ್‌ವಟು ಕಕ್ಕರು ನಾಟರ್ ಮನ್‌ನನ್.
ತನ್‌ನಾಳುಮ್ ಮುಟಿನ್ತತು ಚಙ್ಕರನ್ ಚಾರ್ಪಿ ಲೋಕ್ಕು
ಮಿನ್‌ನಾಮೆನ ನೀಟಿಯ ಮೆಯ್‌ನ್ನಿಲೈ ಯಾಮೈ ವೆಲ್ಲ.

982. ಹೀಗೆ ಲೋಕದಲ್ಲಿ ಶ್ರೇಷ್ಠವಾದ ಜೀವಿತವಿರುವ ಭಕ್ತರು, ಶಿವಲೋಕ ವನ್ನು ಶೀಘ್ರವಾಗಿ ಸೇರುವಂತೆ, ಶಿವಪರಮಾತ್ಮನ ಭಕ್ತರನ್ನು ಮೇಲೆ ತಿಳಿಸಿದಂತೆ ಕಷ್ಟಗೊಳಿಸಿದ ಆ ದುಷ್ಟನು, ಕ್ರೂರವಾದ ನರಕದೆಡೆಗೆ ಶೀಘ್ರವಾಗಿ ಬೀಳಲು ಸತ್ತು ಹೋದನು.

983. ಪೂರಾ ಕೇಡುಗಳನ್ನೇ ಮಾಡಿದ ಆ ಮೂರ್ಖನು ಸತ್ತುಹೋದಾಗ, ಚಿತ್ರದಲ್ಲಿ ಬರೆದ ಲತೆಯಂತೆ ಇರುವ ಅವನ ಹೆಂಡಿರುಗಳೊಡನೆ ಬಂಧುಗಳೆಲ್ಲಾ ಮೈ ಮರೆತು ಪ್ರಲಾಪಿಸಿ ದುಃಖದಿಂದ ಬಾಡಿದವರಾದರು. ಮತ್ತು ಅವನ ಮರಣದಂತೆ ಸಂಜೆಯ ಅನಂತರ ಬರುವ ಯಾಮಕಾಲವು ಬಂತು. ಆಮೇಲೆ ಉಷ್ಣ ಕಿರಣವುಳ್ಳ ಸೂರ್ಯನು ಉದಯಿಸುವ ಕಾಲವೂ ಬಂತು.

984. ಆ ಕಾಲದಲ್ಲಿ ಅಲ್ಲಿಗೆ ತಕ್ಕಂತೆ ಅಮಾತ್ಯರು ಕೂಡಿ, ತಾವು ಕರ್ತವ್ಯದಂತೆ ಮುಗಿಸಬೇಕಾದ ಅಂತಿಮ ಕ್ರಿಯೆಗಳನ್ನು ಬೆಳಿಗ್ಗೆ ಮುಗಿಸಿ, ಹರಿತವಾದ ಶಕ್ತ್ಯಾಯುಧವನ್ನು ಕೊಂಡ ಆ ಅರಸನಿಗೆ ಕುಲಪುತ್ರರಿಲ್ಲದಿದ್ದುದರಿಂದ ಮೇಲೆ ನಡೆಸಬೇಕಾದ ಕಾರ್ಯಗಳನ್ನು ಈ ರೀತಿಯಾಗಿ ಚಿಂತಿಸಿದರು.

---

982. ಇವ್ವಾ ಱುಲಕತ್ತಿನ್ ಇಱಪ್ಪ ಉಯರ್ನ್ದ ನಲ್ಲೋರ್
ಮೆಯ್ಯಾ ಱುಲಕತ್ತು ವಿಱೈನ್ದಣೈ ವಾರ್ಕ ಳೇಪೋಲ್
ಅವ್ವಾ ಱಿನಾರ್ ಅಟಿಯಾರೈ ಅಲೈತ್ತ ತೀಯೋನ್
ವೆವ್ವಾಯ್ ನಿರಯ ತ್ತಿಟೈವೀಟ ವಿರೈನ್ದು ವೀನ್ದಾನ್.

983. ಮುಱುತುಪ್ಪಟು ತೀವುರಿ ಮೂರ್ಕ್ಕನ್ ಉಲನ್ದ ಪೋತಿನ್
ಎಱುತುಱುಕ್ಕೊಟಿ ಪೋಲ್ಪವ ರುಟ್ಪಟ ಏಜ್ಞು ಚುಱ್ಱಮ್
ಮುಱುತುಮ್ಮುಲರ್ ವುಱ್ಱತು; ಮಱ್ಱವನ್ ಅನ್ನ ಮಾಲೈ
ಪ್ಪೊಱುತುಮ್ಮುಲರ್ ವುಱ್ಱತು; ಚೆಜ್ಞತಿರ್ ಮಿಾತು ಪೋತ.

984. ಅವ್ವೇಲೈಯಿಲ್ ಅಜ್ಞಣ್ ಅಮೈಚ್ಚರ್ಕಳ್ ಕೂಟಿ ತ್ತಜ್ಞಳ್
ಕೈವೇಱುಕೊಳ್ ಈಮ ವರುಜ್ಞಟನ್ ಕಾಲೈ ಮುಱ್ಱಿ
ವೈವೇಲವನ್ ಱನ್ಕುಲ ಮೈನ್ದರುಮ್ ಇನ್ಮೈ ಯಾಲೇ
ಚೆಯ್ವೇಱುವಿ ನೈತ್ತಿಱ ಱ್ಱೆನ್ದನ್ನೈ ಚೆಯ್ದು ತೇರ್ವಾರ್.

985. 'ಈ ನಾಡು ನೀಚವಾದ ಕಾರ್ಯಗಳು ನಡೆದುಬಾರದಂತೆ ಒಬ್ಬ ಅರಸನಿಂದ ಕಾಪಾಡಿಕೊಂಡು ಬರಬೇಕು. ಏಕೆಂದರೆ, ನಾಡು, ಪೈರು, ವಸತಿ ಮೊದಲಾದ ಎಲ್ಲಾ ಅಂಗಗಳನ್ನು ಕೂಡಿದ್ದರೂ, ನಾಡಿನ ಸಂರಕ್ಷಣೆಯ ಆಲೋಚನೆಯಿರುವ ಸೇನೆಯಿರುವ ಅರಸನ ಎರಡು ತೋಳುಗಳ ಸಹಾಯವಿಲ್ಲದೆ, ಬಾಳುವೆಯನ್ನು ನಡೆಯಿಸುವ ಶಕ್ತತೆಯನ್ನು ಪಡೆಯದು.

986. 'ಹಲವಿಧಗಳಲ್ಲಿ ಎಲ್ಲಾ ಜೀವಿಗಳನ್ನೂ ಪಾಲಿಸಿ ಲೋಕವನ್ನು ಕಾಪಾಡಲಿಕ್ಕಾಗಿ, ತನ್ನ ವಿಸ್ತಾರವಾದ ಬೆಳ್ಗೊಡೆಯ ಕೆಳಗೆ ಜೀವಿಗಳು ತಂತಮ್ಮ ಧರ್ಮಗಳಲ್ಲಿ ಬಾಳಲು ಅನುಕೂಲಮಾಡಿಕೊಡುವ ಅರಸರಿಲ್ಲದಿದ್ದರೆ, ಅಂತಹ ಭೂಲೋಕವನ್ನೆಣಿಸುವಾಗ, ಅದು ಇನಿಯ ಉಸಿರಿಲ್ಲದೆ ಬಾಳುವ ಶರೀರಕ್ಕೆ ಸಮಾನವಾಗುವುದು'.

987. ಈ ರೀತಿಯಾಗಿ ಹಲವಿಚಾರಗಳನ್ನು ಆಲೋಚಿಸಿ, 'ಈಗ ಇಲ್ಲಿ ಅರಸನಿಲ್ಲ. ಅದಕ್ಕೆ ಮಾಡತಕ್ಕುದು ಇದೇ' ಎಂದು ಚಿಂತಿಸಿ, 'ಕಾಡಿಗೆಯ ಮಲೆಯಂತಿರುವ ಶ್ರೇಷ್ಠವಾದ ಆನೆಯನ್ನು ಕಣ್ಣು ಕಟ್ಟಿಬಿಟ್ಟರೆ ಆ ಕೈಮಲೆಯ (ಕೈಯಿರುವ ಮಲೆಯಂತಿರುವ ಆನೆಯ) ಸೊಂಡಿಲಿನಿಂದ ಕೊಳ್ಳಲ್ಪಟ್ಟವರೇ ಈ ಲೋಕದ ರಕ್ಷಣೆಯನ್ನು ಕೊಳ್ಳುವರು' ಎಂದು ನಿರ್ಧರಿಸಿದರು.

---

985. 'ತಾಟುಇಱ್ಱಿಯ ಲಿನ್ಱಿೂರು ಮನ್ನವನ್ ತಾಙ್ಗ ವೇಣ್ಡುವ್;
ಚೂಟುವ್ಕುಟಿ ಯುಮ್ಮೃತ ಲಾಯಿನ ಕೊಳ್ಕೈ ತ್ತೇನುವ್
ಚೂಟುವ್ಪುಟ್ಟೈ ಮನ್ನವನ್ ತೋಳಿಣ್ಣೈ ಕ್ಕಾವ ಲಿನ್ಱಿ
ವಾಟುನ್ತೈ ತ್ತನ್ಱೀನ್ತ ವೈಯಕವ್' ಎನ್ಱು ಚೊನ್ನಾರ್.

986. 'ಪನ್ಮುಱೈ ಉಯಿರ್ಕಳ್ ಎಲ್ಲಾವ್ ಪಾಲಿತ್ತು ಇಾಲ ಱ್ಕಾಪ್ಪಾನ್
ತನ್ನೆಟು ಙ್ಕಟ್ಟೈಕೀಟ್ ತ್ತತ್ತವ್ ನೆಱಿಕಳಿಲ್ ಚರಿತ್ತು ವಾಟುವ್
ಮನ್ನರೈ ಇನ್ಱಿ ವೈಕುವ್ ಮಣ್ಣುಲ ಕೆಣ್ಣು ಙ್ಕಾಲೈ
ಇನ್ನುಯಿರ್ ಇನ್ಱಿ ವಾಟುವ್ ಯಾಕ್ಕೈಯೈ ಓಕ್ಕುವ್' ಎನ್ಪಾರ್.

987. ಇನ್ನಕೈ ಪಲವುವ್ ಎಣ್ಣಿ 'ಇಙ್ಕಿನಿ ಅರಚರ್ ಇಲ್ಲೈ;
ಚೆಯ್ವತೈ ಇತುವೇ' ಎನ್ಱು ತೆಳಿಪವರ್ 'ಚಿರಪ್ಪಿನ್ ಮಿಕ್ಕ
ಮೈವರೈ ಅನೈಯ ವೇಟ ಙ್ಕಣ್ಕಟ್ಟಿ ವಿಟ್ಟಾಲ್ ಮಱ್ಱ
ಕ್ಕೈವರೈ ಕೈಕ್ಕೊ ಣ್ಟಾರ್ಮಣ್ ಕಾವಲ್ಕೈ ಕೊಳ್ವಾರ್' ಎನ್ಱು.

988. ಆಮೇಲೆ ಶಾಸ್ತ್ರಗ್ರಂಥಗಳಲ್ಲಿ ವಿಧಿಸಿದಂತೆ ಕ್ರಮವಾದ ಮಹತ್ವವುಳ್ಳ ಮಂಗಳಕಾರ್ಯಗಳಿಂದ ದೇವರನ್ನು ಆನೆಯಲ್ಲಿ ಅರ್ಚಿಸಿ, ಮಳೆಸುರಿಸುವ ದೊಡ್ಡ ಮುಗಿಲಂತೆ ಮದಸುರಿಸುವ, ವಿಶಾಲವಾದ ನೊಸಲಪಟ್ಟವನ್ನು ಧರಿಸಿದ ಆನೆಯನ್ನು ಪರಿಶುದ್ಧವಾದ ವಸ್ತ್ರದಿಂದ ಕಣ್ಣನ್ನು ಕಟ್ಟಿ, 'ಈ ಹಿರಿಯ ನೆಲದ ಅರಸಾಳ್ವಿಕೆಯನ್ನು ತನ್ನ ತೋಳಬಲುವೆಯಿಂದ ಧರಿಸುವುದಕ್ಕೆ ಒಬ್ಬ ಅರಸನನ್ನು ನೀನು ಎತ್ತಿಕೊಂಡು ಬರುವವನಾಗು' ಎಂದು ಹೇಳಿಬಿಟ್ಟರು.

989. ಕಣ್ಣುಕಟ್ಟಿ ಬಿಟ್ಟ ಆ ಮದ್ದಾನೆಯು ಕಾವಲುಳ್ಳ ಆ ಹಳೆಯ ಊರಿನ ಎಲ್ಲೆಡೆಗಳಲ್ಲಿಯೂ ಸುತ್ತಿ, ಬೀದಿಗಳಲ್ಲಿ ತಿರುಗಾಡಿ, ಸ್ಥಿರವಾದ ಸುಂದರವಾದ ದೊಡ್ಡ ಕಪಾಲಿ ಮದಿಲು ಸುತ್ತುವರಿದ ತಿರುವಾಲವಾಯಲ್ಲಿ ಆಗಸವನ್ನು ದಾಟಿ ಎತ್ತರವಾಗಿ ಮೇಲಕ್ಕೆ ಹೋದ ದೇವಾಲಯದ ಗೋಪುರದ ಮುಂದೆ ಬಂದಿತು.

990. ಹಿಂದಿನ ರಾತ್ರಿಯಲ್ಲಿ ನಡೆದ ವರ್ತಮಾನವನ್ನು ತಿಳಿದ ಭಕ್ತನಾದ ಮೂರ್ತಿ ನಾಯನಾರನು 'ಇಲ್ಲಿ ನಮ್ಮ ಪರಮಾತ್ಮನ ಅನುಗ್ರಹವೇ ಇದಾಗಿದ್ದರೆ, ಈ ನೆಲವನ್ನು ಧರಿಸುವ ಆರಸಾಳ್ವಿಕೆಯನ್ನು ವಹಿಸುವೆನು' ಎಂದು ನಿರ್ಧರಿಸಿ, ಹಿಂದೆ ತನ್ನ ಮನಸ್ಸಿನಲ್ಲಿ ತಾಳಿದ್ದ ದೌರ್ಬಲ್ಯವನ್ನು ಕಳೆದುಕೊಂಡು ಕರ್ಣಿಕಾರ ಪುಷ್ಪವನ್ನು ಧರಿಸಿದ ಶಿವಪರಮಾತ್ಮನ ದೇವಾಲಯದ ಮುಂದೆ ಬಂದು ನಿಂತಿದ್ದನು.

---

988. ಚೆಮ್ಮಾಣ್ವಿನೈ ಅರಚ್ಚನೈ ನೂನ್ಮುಱೈ ಚೆಯ್ದು 'ತೋಳಾಲ್
ಇಮ್ಮಾನಿಲಮ್ ಎನ್ತಾರ್ ಎನ್ತಲೈ ಏನ್ತ' ಕೆನ್ಱು
ಪೆಯ್ಮಾಮುಕಿಲ್ ಪೋಲ್ಮತಮ್ ಪಾಯ್ಪೆರು ಕೋಟ್ಟೈ ನೆಱ್ಱಿ
ಕೈಮ್ಮಾವೈ ನಱುನ್ತುಕಿಲ್ ಕೊಣ್ಟುಕಣ್ ಕಟ್ಟಿ ವಿಟ್ಟಾರ್.

989. ಕಣ್ಕಟ್ಟಿ ವಿಟ್ಟುಕ್ಕಳಿ ಯಾನೈ ಅ ಕ್ಕಾವಲ್ ಮೂತೂರ್
ಮಣ್ಕೊಟ್ಟೈಱ ವೀತಿ ಮರುಙ್ಕು ವಿರಿನ್ತು ಪೋಕಿ
ತ್ತಿಣ್ಕೊಱ್ಱಿಟ ಮಾಮತಿಲ್ ಚೂಟ್ಟಿರು ವಾಲ ವಾಯಿನ್
ವಿಣ್ಪಿಱ್ಪಿಟ ಓಙ್ಕಿಯ ಕೋಪುರಮ್ ಮುನ್ಪು ಮೇವಿ.

990. ನೀಙ್ಕುಮ್ಇರ ವಿನ್ಕಣ್ ನಿಕೞ್ನ್ತತು ಕಣ್ಟ ತೊಣ್ಟರ್
'ಈಙ್ಕೆಮ್ಪೆರು ಮಾನ್ಅರು ಳಾಮ್ಎನಿಲ್ ಇನ್ತ ವೈಯಮ್
ತಾಙ್ಕುಮ್ಚೆಯಲ್ ಪೂಣ್ಪನ್ ಎನ್ ಱುಳ್ಳಮ್ ತಳರ್ವು ನೀಙ್ಕಿ
ಪ್ಪೂಙ್ಕೊನ್ಱೈ ಮಿಲೈನ್ತವರ್ ಕೋಯಿಱ್ ಪುಱತ್ತು ನಿಱ್ಪ.

991. ಪಟ್ಟದಾನೆಯು ಆ ಎಡೆಗೆ ತ್ವರಿತದಿಂದ ನಡೆದುಹೋಗಿ, ಲೋಕದ ಜನರು ತಮ್ಮ ಜೀವನದಲ್ಲಿ ಮಾಡಿದ ತಪಸ್ಸಿನ ಫಲವಾಗಿ ಅವತರಿಸಿದ ತ್ಯಾಗಿಯಾದ ಮೂರ್ತಿ ನಾಯನಾರನನ್ನು, ತನ್ನ ನೊಸಲಪಟ್ಟದ ಕಾಂತಿಯುಳ್ಳ ಮಣಿಗಳು ನೆಲವನ್ನು ಬೆಳಗಿಸುವಂತೆ ಬಾಗಿ ನಮಸ್ಕರಿಸಿ, ಆತನನ್ನೆತ್ತಿ ಅಗಲೇ ತನ್ನ ಪಿಡರ (ಬೆನ್ನು) ಮೇಲೆ ಇಟ್ಟುಕೊಂಡಿತು.

992. ದೋಷಗಳು ಅಳಿಯುವಂತೆ ಯೋಚಿಸಿ ನಿರ್ಧರಿಸಿದ ಅಮಾತ್ಯರೆಲ್ಲಾ, ಆನೆಯಿಂದ ಎತ್ತಲ್ಪಟ್ಟು ಅದರ ಹೆಗಲ ಮೇಲೆ ಇಟ್ಟುಕೊಂಡವನಾದ ಮೂರ್ತಿ ನಾಯನಾರನನ್ನು ನೋಡಿ, ಅವನ ಪಾದಗಳ ಮೇಲೆ ಬಿದ್ದು ಎದ್ದರು. ಆಗ ಆ ಊರು ನೀರು ತುಂಬಿದ ಕಡಲಂತೆ ಘೋಷಿಸಿತು.

993. ಚೆಲುವಾದ ಕಯಲು ಮೀನಿನಂತೆ ಕಣ್ಣುಳ್ಳ, ಸುಂದರವಾದ ಹೊನ್ನಿನ ಆಭರಣಗಳಿಂದ ಅಲಂಕೃತವಾದ ಮರದ ಕೊಂಬಿನಂತಿರುವ ಅಮ್ಮನವರನ್ನು ಒಂದು ಭಾಗದಲ್ಲಿ ಕೊಂಡ ಸುಂದರವಾದ ಲಿಂಗರೂಪಿಯಾದ ಪರಮೇಶ್ವರನ ದಿವ್ಯಾನುಗ್ರಹದಿಂದ ಲೋಕವನ್ನು ಆಳುವವನಾದ ಮೂರ್ತಿ ನಾಯನಾರನ ಎಲ್ಲಾ ಬದಿಗಳಲ್ಲಿಯೂ ವಾದ್ಯಗಳೂ ಶಂಖಗಳೂ ಶಬ್ದಿಸಿದುವು. ಭೇರಿಯೊಡನೆ ಅಸಂಖ್ಯಾತವಾದ ಹಲವಿಧ ವಾದ್ಯಗಳು ಎಲ್ಲೆಡೆಗಳಲ್ಲಿಯೂ ಮೊಳಗಿದುವು. ಅಲ್ಲೆಲ್ಲಾ ಆಶೀರ್ವಾದ ಧ್ವನಿಗಳು ಕೇಳಬಂದುವು.

---

991. ವೇಟಿ ತ್ತರಚಙ್ಙನ್ ವಿರೈನ್ತು ನಟನ್ತು ಚೆನ್ಱು
ವಾಟ್ಟಿವ್ ಙುಲಕಞ್ಚೆಯ್ ತವತ್ತಿನಿನ್ ವಳ್ಳ ಲಾರೈ
ಚ್ಚೂಟಿಪ್ಪೊಱ್ ಚುಟರ್ಮಾಮಣಿ ಮಾನಿಲ ನ್ತೋಯ ಮುನ್ಪು
ತಾಟ್ಟಿವ್ ಙಿಟುತ್ತು ಪ್ಪಿಟರ್ಮಿಸೈ ತರಿತ್ತ ತನ್ಱೇ.

992. ಮಾತಙ್ಕನುವ್ ಎರುತ್ತಿನಿಲ್ ವೈತ್ತವರ್ ತಮ್ಮೈ ಕ್ಕಾಣಾ
ಎತಙ್ಕಟ ಎಣ್ಣಿಯ ತಿಣ್ಮೈ ಅಮೈಚ್ಚರ್ ಎಲ್ಲಾಮ್
ಪಾತಙ್ಕಳಿನ್ ಮಿಸೈ ಪಣಿನ್ತೆಟು ನ್ತಾರ್ಕಳ್ ಅಪ್ಪೋತು
ಓತಙ್ಕಿಳರ್ ವೇಲೈಯೈ ಒತ್ತೊಲಿ ಮಿಕ್ಕ ತವ್ವೂರ್.

993. ಚಙ್ಕಙ್ಕಳ್ ಮುರನ್ಱನ ತಾರೈಕಳ್; ಪೇರಿ ಯೋಟುಮ್
ಎಙ್ಕುಙ್ಕುಮ್ ಇಯಪ್ಪಿನ ಪಲ್ಲಿಯಮ್; ಎಲ್ಲೈ ಯಿಲ್ಲ
ಅಙ್ಕಙ್ಕು ಮಲಿನ್ತನ ವಾಟ್ತೊಲಿ; ಅಮ್ಪೊಱ್ ಕೊಮ್ಪಿನ್
ಪಙ್ಕನ್ಅರು ಳಾಲ್ಉಲ ಕಾಳ್ಪವರ್ ಪಾಙ್ಕರ್ ಎಙ್ಕುಮ್.

994. ಕೆಂಪಗಾದ ಕಣ್ಣುಗಳುಳ್ಳ ಪಟ್ಟದಾನೆಯಿಂದ ಮೂರ್ತಿ ನಾಯನಾರ ನನ್ನು ಕೆಳಗಿಳಿಸಿ, ಮಧುರಸವನ್ನೊಳಕೊಂಡ ಮಲರ ಮಾಲೆಗಳೂ, ಕಾಂತಿಯುತವಾದ ಮಣಿಮಾಲೆಗಳೂ ಸುತ್ತಲೂ ಉಳ್ಳ ಮಕುಟಧಾರಣೆಯನ್ನು ಮಾಡತಕ್ಕ ಮಂಟಪದ ಸುಂದರ ಸ್ಥಳಕ್ಕೆ ಕೊಂಡುಬಂದು, ಸಿಂಹಾಸನವನ್ನೇರಿ ಅನುಗ್ರಹಿಸುವಂತೆ ಮಾಡಿ, ಪ್ರಶಸ್ತವಾದ ಚಂದ್ರನಂತೆ ವೃತ್ತಾಕಾರದ ಬೆಳ್ಗೊಡೆಯ ಕೆಳಗೆ ಅರಸರುಗಳಿಗೆ ತಕ್ಕಂತೆ ಕಿರೀಟಧಾರಣೆಗೆ ಬೇಕಾದ ಮಂಗಳಕಾರ್ಯಗಳನ್ನು ಯೋಚಿಸಿ ಮಾಡುವವರಾಗಿ,

995. ತಕ್ಕುದಾದ ದಿಕ್ಕಿನಲ್ಲಿ ಇರಿಸಲಾದ ವೇದಿಕೆಯಲ್ಲಿ ಶಿವಮಂತ್ರಗಳಿಂದಾಗಿಸಿದ ಹೋಮಕುಂಡದಲ್ಲಿ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿ, ಮುಪ್ಪುರಿನೂಲನ್ನು ಕ್ರಮವಾಗಿ ಸುತ್ತಿದ ಹೊನ್ನಕೊಡಗಳಲ್ಲಿ ಪವಿತ್ರವಾದ ಗಂಗೆಯೇ ಮೊದಲಾದ ತೀರ್ಥ ಗಳನ್ನು ತುಂಬಿ ಧ್ಯಾನಿಸತಕ್ಕ ಮಂತ್ರಯೋಗವುಳ್ಳ ದೇಶಿಕರು ಅವುಗಳನ್ನು ಸ್ಥಾಪಿಸಿ ದರು.

996. ತನ್ನ ಚಿಂತನೆಯಲ್ಲಿ ಶಿವಪರಮಾತ್ಮನನ್ನೇ ಇಟ್ಟುಕೊಂಡು ದೃಢವಾಗಿ ನಂಬಿಕೊಂಡಿದ್ದ ಮೂರ್ತಿ ನಾಯನಾರನು, ತನ್ನೆಡೆಗೆ ಬಂದು ನಮಿಸಿ ಎದ್ದುನಿಂತ ಮಕುಟಧಾರಣೆಯ ಮಂಗಳಕಾರ್ಯಗಳನ್ನು ಮಾಡಿದ ಆ ಪ್ರಜೆಗಳನ್ನು ನೋಡಿ, 'ಹಿಂದೆ ಆಚರಿಸಿಕೊಂಡು ಬಂದ ಶ್ರಮಣಧರ್ಮವು ಹೋಗಿ, ಮೊದಲಿದ್ದ ಶೈವಧರ್ಮವು ಎಲ್ಲೆಡೆ ಗಳಲ್ಲೂ ಇರುವುದಾದರೆ ಈ ಲೋಕವನ್ನು ಧರಿಸಿ ಉತ್ತಮವಾದ ಅರಸಾಳ್ವಿಕೆಯನ್ನು ಮಾಡುವೆನು' ಎಂದನು.

---

994. ಪೆಙ್ಕಟ್ಕಳಿ ಱಿನ್ಇಱಕ್ಕಿ ನಿಣ್ಱುಮ್ ಇಟೈಚ್ಚಿ ವೇರಿ
ತ್ತೊಙ್ಕಲ್ಙ್ಟರ್ ಮಾಲ್ಲೈಕಳ್ ಚೂಟ್ಮುಟಿ ಚೂಟು ಚಾಲೈ
ಅಙ್ಕಟ್ಕೊಟು ಪುಕ್ಕರಿ ಯಾಚನ ತ್ತೇಱಿ ಒಙ್ಕೈ
ತ್ತಿಙ್ಕಟ್ಕುಟೈ ಕೀಟ್ಉರಿ ಮೈಚ್ಚೆಯಲ್ ಚೂಟ್ನ್ತು ಚೆಯ್ವಾರ್.

995. ಮುನ್ನು ನ್ತ್ಚೈವೇತಿಯಿಲ್ ಮಙ್ಕಲ ಆಕು ತಿಕ್ಕಣ್
ತುನ್ನು ಇಟ್ಟಟರ್ವನ್ನಿ ವಳರ್ತ್ತು ತ್ತ್ರೈನ್ತ್ ನೂಲ್ಚೂಟ್
ಪೊನ್ನಿನ್ ಕಲಚಙ್ಕಳ್ ಕುಟಙ್ಕಳ್ ಪೂರಿತ್ತ್ ತೂನೀರ್!
ಉನ್ನು ಇಟ್ಚೆಯಲ್ಮು ನ್ತ್ರಯೋಕರ್ ನಿಱುತ್ತಿ ನಾರ್ಕಳ್.

996. ವನ್ತ್ಱಿಟು ಮಙ್ಕಲ ಮಾನ್ತ್ರ್ಕಳ್ ತಮ್ಮೈ ನೋಕ್ಕಿ
ಚ್ಚಿನ್ತ್ಲೈಚ್ಚಿವ ಮೇತೆಳಿ ಯುತ್ತಿರು ಮೂರ್ತ್ತಿ ಯಾರ್ತಾಮ್
'ಮುನ್ತ್ಲೈಚ್ಚೆಯ ಲಾಮ್ಅಮಣ್ ಪೋಯ್ಮುತಱ್ ಚೈವಮ್ ಓಙ್ಕಿಲ್
ಇನ್ತ್ಪುವಿ ತಾಙ್ಕಿಇ ವ್ವಿನ್ನರ ಚಾಳ್ವನ್' ಎನ್ಱಾರ್.

997. ಮೂರ್ತಿ ನಾಯನಾರನು ಆ ರೀತಿ ಹೇಳಿದುದನ್ನು ಕೇಳಿದ ಅಮಾತ್ಯರೂ ಧರ್ಮಶಾಸ್ತ್ರಗಳನ್ನು ಬಲ್ಲ ಪುರೋಹಿತ, ವಿದ್ವಾಂಸರೇ ಮೊದಲಾದವರೂ 'ಹಿರಿಯರೇ, ನೀವು ಹೇಗೆ ಆಜ್ಞಾಪಿಸುವಿರೋ ಅಂತೆಯೇ ಅಲ್ಲದೆ ಬೇರೆ ರೀತಿ ಆಚರಿಸುವವರು ಯಾರು ?' ಎಂದು ಅವನ ಪಾದಗಳಲ್ಲಿ ಬಿದ್ದು ಹೇಳಲು,

998. ಮೂರ್ತಿ ನಾಯನಾರನು, 'ಲೋಕವನ್ನು ನಾನು ಆಳಿಕೊಂಡು ಬರುವುದಾದರೆ, ಶಿವಪರಮಾತ್ಮನ ಶರೀರದಲ್ಲಿ ಪ್ರಕಾಶಿಸುವ ವಿಭೂತಿಯೇ ನನಗೆ ಮಾಡತಕ್ಕ ಮಕುಟಾಭಿಷೇಕವಾಗಿಯೂ, ಸ್ವಾಮಿಯ ಚಿಹ್ನವಾದ ರುದ್ರಾಕ್ಷಿಯೇ ಅಲಂಕರಿಸತಕ್ಕ ಪ್ರಕಾಶಯುಕ್ತವಾದ ಮಣಿಗಳಾಗಿಯೂ, ಈಶ್ವರನ ದಿವ್ಯಚಿಹ್ನವಾದ ಮೃದುವಾದ ಜಡೆಮುಡಿಯೇ ಅರಸುಮುಡಿ[1]ಯಾಗಿಯೂ ಇರತಕ್ಕದು' ಎಂದನು.

999. ಈ ಮಾತುಗಳನ್ನು ಕೇಳಿ, ಬಹುವಾದ ಕಲ್ವಿಯನ್ನೂ ಋಜುತ್ವವನ್ನೂ ಸ್ಥಿರಮತಿಯನ್ನೂ ಶಾಸ್ತ್ರಜ್ಞಾನವನ್ನೂ ಉಳ್ಳ ಅಮಾತ್ಯರು, 'ಇಲ್ಲಿ ಅನುಗ್ರಹಿಸಿದ ವಾರ್ತೆಯು ಒಳ್ಳೆಯದಾಗಿದೆ' ಎಂದುಕೊಂಡು, ಹಿರಿಮೆಯ ತಪವುಳ್ಳ ಅರಸನ ಮನಸ್ಸಿನಂತೆ ಅರಸಾಳ್ವಿಕೆಯನ್ನು ಮಾಡುವುದಕ್ಕೆ ಆಗಬೇಕಾದ ಮಂಗಳ ಕಾರ್ಯಗಳನ್ನೆಲ್ಲಾ ಮಾಡಿ ಮುಗಿಸಿ ರಾಜಾಧಿಕಾರವನ್ನು ಅವನಿಗೆ ಕೊಟ್ಟರು.

---

997. ಅವ್ವಾಱು ಮೊ಴ಿನ್ದತು ಕೇಟ್ಟ ಅಮೈಚ್ಚರೋಟು
ಮೆಯ್ಯಾವ್ತ್ತಿರು ನೂಲಱಿ ವಿನ್ಮಿಕು ಮಾನ್ದರ್ ತಾಮುಮ್
'ಎವ್ವಾಱರುಳ್ ಚೆಯ್ದನೈ ಮಱ್ಱವೈ ಯನ್ಱಿ ಯಾವರ್
ಚೆಯ್ವಾರ್ ? ಪೆರಿಯೋಯ್ !' ಎನಚ್ಚೇವಡಿ ತಾೞ್ನ್ದು ಚೆಪ್ಪ.

998. 'ವೈಯಮ್ ಮುಱೈಚೆಯ್ ಕುವನಾಕಿಲ್ ವಯಙ್ಗು ನೀಱೇ
ಚೆಯ್ಯುಮ್ ಅಪಿಟೇಕಮುಮಾಕ, ಚೆೞುಙ್ಗ ಲನ್ಕಳ್
ಐಯನ್ ಅಟೈಯಾ ಳನುಮಾಕ, ಅಣಿನ್ದು ತಾಙ್ಗುಮ್
ಮೊಯ್ಪ್ಪುನ್ ಚಟೈಮಾ ಮುಟಿಯೇಮುಟಿ ಯಾವ' ತೆನ್ಱಾರ್.

999. ಎನ್ಱಿವ್ವುರೈ ಕೇಟ್ಟಲುಮ್ ಎಲ್ಲೈಯಿಲ್ ಕಲ್ವಿ ಯೋರುಮ್
ವನ್ತಿಣ್ಮತಿ ನೂಲ್ವಲರ್ ವಾಯ್ಮೈ ಅಮೈಚ್ಚರ್ ತಾಮುಮ್
'ನನ್ ಱಿಙ್ಗರುಳ್ ತಾನ್' ಎನ ನಱ್ಱವ ವೇನ್ದರ್ ಚಿನ್ದೈ
ಒನ್ ಱುಮ್ಅರ ಚಾಳ್ಉರಿ ಮೈಚ್ಚೆಯ ಲಾನ ಉಯ್ತ್ತಾರ್.

---

1. ಮುಡಿ – ಕಿರೀಟ.

1000. ಪಕ್ಕಗಳಲ್ಲೆಲ್ಲಾ ಕೂಟವಾಗಿ ಮಂಗಲನಿನಾದಗಳು ವ್ಯಾಪಿಸಿ ತುಂಬಲು, ಧರಿಸತಕ್ಕ ಮುಡಿಯನ್ನು ಜಡೆಮುಡಿಯಾಗಿ ಕೊಂಡು, ಅರಸುತನದಲ್ಲಿ ಶೋಭಿಸಿದ ಮೂರ್ತಿ ನಾಯನಾರನು, ಹಿಂದಿನಕಾಲದಲ್ಲಿ ವರಾಹಾವತಾರವನ್ನೆತ್ತಿದ ವಿಷ್ಣುವು ಹುಡುಕುವ ದಿವ್ಯಪಾದಗಳನ್ನುಳ್ಳ ಸುಂದರಲಿಂಗಸ್ವರೂಪಿಯಾದ ಪರಮೇಶ್ವರನ ತಿರುವಾಲವಾಯ ದೇವಾಲಯವನ್ನು ಸೇರಿ ನಮಿಸಿ, ಆಮೇಲೆ, ಪಟ್ಟದಾನೆಯ ಮೇಲೇರಿ ಬೀದಿಯ ದಾರಿಯಾಗಿ ಅರಸುಸವಾರಿ ಹೋಗುವವನಾಗಿ,

1001. ಮಿಂಚುವ ಮಣಿಮಾಳಿಗೆಯ ಬಾಗಿಲಲ್ಲಿ ಆನೆಯ ಮೇಲಿಂದ ಇಳಿದು, ಚೆಲುವಾದ ಕೂಟಮಂಟಪಕ್ಕೆ ಬಂದು ಸುವರ್ಣಸಿಂಹಾಸನದ ಮೇಲೆ, ಸುಂದರವಾದ ಚಾಮರಗಳಿಂದ ಎಳೆಗಾಳಿಯು ನಿಧಾನವಾಗಿ ಹಿತವಾಗಿ ಬೀಸಲ್ಪಡಲು, ಬೆಳ್ಗೊಡೆಯ ನೆಳಲಲ್ಲಿ ಲೋಕರಕ್ಷಣೆಯನ್ನು ವಹಿಸಿದವನಾಗಿ ಅರಸುಗೆಯ್ಯುತ್ತಿದ್ದನು.

1002. ವಿವಿಧಮಾರ್ಗಗಳಲ್ಲಿ ನೀತಿಯನ್ನು ನಡೆಸಿಕೊಂಡು ಬರುವ ಅಮಾತ್ಯರು, ತಮ್ಮ ಅಭಿಪ್ರಾಯದಂತೆ ನಿಲ್ಲಲು, ಕಲಹವನ್ನು ಮಾಡಿದ ಶ್ರಮಣರಾಳ್ವಿಕೆಯ ಕಟ್ಟುಪಾಡು ಅಳಿದುಹೋಗಿ, ನೆಲೆಯಾಗಿ ಬರುವ ವಿಭೂತಿಮಾರ್ಗವೂ ಮತವೂ ನಿಡಿದಾಗಿ ಬಾಳಲು, ಲೋಕವೆಲ್ಲಾ ಪಸರಿಸಿದ ಶೈವಮತವು ಉಚ್ಛ್ರಾಯಸ್ಥಿತಿಯಲ್ಲಿ ನೆಲೆಯಾಗಿ ನಿಲ್ಲಲು,

---

1000. ಮಾಟೆಙ್ಕುಮ್ ನೆರುಙ್ಕಿಯ ಮಙ್ಕಲ ಓಚೈ ಮಲ್ಕ
ಚ್ಚೂಟುಞ್ಚಟೈ ಮೌಲಿ ಅಣಿನ್ತವರ್ ತೊಲ್ಲೈ ಏನಮ್
ತೇಟುಙ್ಕೞ ಲಾರ್ತಿರು ವಾಲವಾಯ್ ಚೆನ್ಱು ತಾೞ್ನ್ತು
ನೀಟುಙ್ಕಳಿ ಱ್ಱಿನ್ಮಿಚೈ ನೀಳ್ಮಱುಕೂಟು ಪೋನ್ತಾರ್.

1001. ಮಿನ್ನುಮ್ಮಣಿ ಮಾಳಿಕೈ ವಾಯಿಲಿನ್ ವೇೞ ಮಿೞಿತು
ತನ್ನಿನ್ಱುಮ್ ಇೞಿನ್ತು ತಯಙ್ಕೊಳಿ ಮಣ್ಟ ಪತ್ತಿಱ್
ಪೊನ್ನಿನ್ ಅರಿ ಮೆಲ್ಲಣೈ ಚ್ಚಾಮರೈ ಕ್ಕಾಮರ್ ಪೂಙ್ಕಾಲ್
ಮನ್ನುಙ್ಕುಟೈ ನೀೞಲ್ ಇರುನ್ತನರ್ ವೈಯಮ್ ತಾಙ್ಕಿ.

1002. ಕುಲವುನ್ತುಱೈ ನೀತಿ ಅಮೈಚ್ಚರ್ ಕುಱಿಪ್ಪಿನ್ ವೈಕ
ಕ್ಕಲಕಞ್ಚೆಯ್ ಅಮಣ್ಚೆಯ ಲಾಯಿನ ಕಟ್ಟು ನೀಙ್ಕಿ
ನಿಲವುನ್ತಿರು ನೀಱು ನೆಱಿತ್ತುಱೈ ನೀಟು ವಾೞ
ಉಲಕೆಙ್ಕುಮ್ ನಿರಮ್ಪಿಯ ಚ್ಚೈವಮ್ ಉಯರ್ನ್ತು ಮನ್ನ

1003. ನೆತ್ತಿಯಲ್ಲಿ ಕಣ್ಣುಳ್ಳವನಾದ ಶಿವಪರಮಾತ್ಮನ ಸತ್ಯವಾದ ಸೂಕ್ಷ್ಮಾರ್ಥ ಗ್ರಂಥಗಳು (ಶಿವಾಗಮಗಳು) ಎಲ್ಲೆಡೆಗಳಲ್ಲಿಯೂ ತುಂಬಿ ಪ್ರಕಾಶಿಸಲು, ಸಂಸಾರವನ್ನು ನೀಗಿಸಲು ಸಹಾಯವಾಗುವ ವಿಭೂತಿ, ದಿವ್ಯವಾದ ರುದ್ರಾಕ್ಷಿಮಾಲೆ, ಧರಿಸಿಕೊಂಡ ಜಡೆ ಎಂಬ ಮೊದಲ ಮುಮ್ಮೈ[1]ಗಳಿಂದ ಕೂಡಿ ಮೂರ್ತಿ ನಾಯನಾರನು ತಾನೇ ಲೋಕ ವನ್ನು ಆಳಿಕೊಂಡು ಬಂದನು.

1004. ಪರಿಮಳ ದ್ರವ್ಯಗಳ ವಾಸನೆಯನ್ನು ಸೂಸುವ ತಲೆಕೂದಲುಗಳನ್ನುಳ್ಳ ಹೆಂಗಸರ ಸಂಬಂಧವನ್ನು ಸದಾ ತೊರೆದ ಶೀಲವನ್ನು ಮೇಲ್ಕೊಂಡವನಾಗಿ, ಕ್ರೂರವಾದ ಪಂಚೇಂದ್ರಿಯ ಸುಖಗಳನ್ನೂ ವೈರಿಗಳನ್ನೂ ಒಡನೊಡನೆಯೇ ಗೆದ್ದು, ಲೋಕದಲ್ಲಿ ತನ್ನ ಆಜ್ಞೆಯನ್ನು ನಡೆಸಿಕೊಂಡು, ಪ್ರಳಯಕಾಲದವರೆಗೆ ಸುಖವನ್ನು ತರುವಂತೆ ಜೀವಿ ಗಳಿಗೆ ಬರುವ ಎಡರುಗಳು ಬಾರದಂತೆ ಕಾಪಾಡಿ,

1005. ತನ್ನ ಪಾದಗಳನ್ನು ಇತರ ರಾಜರು ಸುತ್ತಿಬಂದು ನಮಿಸಿ ಸ್ತುತಿಸಲು, ಕೇಡುಗಳು ಪೀಡಿಸದ ರೀತಿಯಿಂದ ಈ ಲೋಕವನ್ನು ಆಳಿಕೊಂಡು, ದಿವ್ಯಕೈಂಕರ್ಯದಿಂದ ಬೇರೆಯಾಗದ ಪರಮೇಶ್ವರನ ಅನುಗ್ರಹದ ಅರಸಾಳ್ವಿಕೆಯನ್ನು ಪಡೆದುಕೊಂಡು, ಗೆಜ್ಜೆ ಗಳಿಂದಲಂಕೃತವಾದ ಶಿವಪರಮಾತ್ಮನ ಶ್ರೀಪಾದಗಳನ್ನು ಹಿರಿಮೆಯುಳ್ಳ ಮೂರ್ತಿ ನಾಯನಾರನು ಸೇರಿದನು.

1003. ನುತಲಿನ್‌ಕಣ್ ವಿಟೈತ್ತವರ್ ವಾಯ್ಮೈ ನುಣಙ್ಕು ನೂಲಿನ್
ಪತಮೆಙ್ಕುಮ್ ನಿಱೈನ್ದು ವಿಳಙ್ಕ ಪ್ಪವಙ್ಕಳ್ ಮಾಱ
ಉತವುನ್ದಿರು ನೀಱುಯರ್ ಕಣ್ಟಿಕೈ ಕೊಣ್ಟ ವೇಣಿ
ಮುತನ್‌ಮುಮ್ಮೈಯಿ ನಾಲ್‌ಉಲ ಕಾಣ್ಟನರ್ ಮೂರ್ತ್ತಿಯಾರ್‌ತಾಮ್.

1004. ಏಲಙ್ಕಮಱ್ ಕೋತೈಯರ್ ತನ್ದಿಱಮ್ ಎನ್‌ಱುಮ್ ನೀಙ್ಕುಮ್
ಚೀಲಙ್ಕೊಟು ವೆಮ್ಪುಲನ್ ತೆವ್ವಟನ್ ವೆನ್‌ಱು ನೀಕ್ಕಿ
ಞಾಲತ್ತನಿ ನೇಮಿ ನಟಾತ್ತಿ ನಲಙ್ಕೊಳ್ ಊಱಿ
ಕ್ಕಾಲಮ್‌ಉಯಿರ್ ಕಟ್‌ಕಿಟ ರಾನ ಕಟಿನ್ದು ಕಾತ್ತು.

1005. ಪಾತಮ್‌ಪರ ಮನ್‌ನವರ್ ಚೂಟ್‌ನ್ದು ಪಣಿನ್ದು ಪೋಱ್ಱ
ಏತಮ್ಪಿಣಿ ಯಾವಕೈ ಇವ್ವುಲ ಕಾಣ್ಟು ತೊಣ್ಟಿನ್
ಪೇತಮ್ಪುರಿ ಯಾಅರುಟ್ ಪೇರರ ಚಾನ ಪೆಱ್ಱು
ನಾತನ್‌ಕಱಿಜ್ ಚೇವಟಿ ನಣ್ಣಿನರ್ ಅಣ್ಣಲಾರೇ.

---

1. ಮುಮ್ಮೈ – ತ್ರಯ.

1006. ಅಂದು ವಿಸ್ತಾರವಾದ ಚಂದನಕಲ್ಲಿನಲ್ಲಿಟ್ಟು ತನ್ನ ಮೊಳಕೈಯನ್ನು ತೇದ, ಪ್ರಶಸ್ತವಾದ ಪಟ್ಟದಾನೆಯ ಮೇಲೇರಿ ಅರಸಾಳ್ವಿಕೆಗೆ ಬಂದ, ಭಕ್ತನಾದ ಮೂರ್ತಿ ನಾಯನಾರನನ್ನು ಸ್ತುತಿಸಿ, ಮೋಡಗಳಿಂದ ಸುತ್ತುವರಿದ, ಸುವಾಸನೆಯಿಂದ ಕೂಡಿದ ಉದ್ಯಾನವನಗಳಿಂದ ಸುತ್ತುವರಿದ, ಪ್ರಕಾಶಯುಕ್ತವಾದ ಮಾಡಬೀದಿ[1]ಗಳುಳ್ಳ ತಿರುಪ್ಪುಗಲೂರಲ್ಲಿ ಅವತರಿಸಿದ ಮುರುಗನಾರಾದ ಬ್ರಾಹ್ಮಣರ ಪ್ರಶಸ್ತವಾದ ಕಾರ್ಯಗಳನ್ನು ಸ್ತುತಿಸಹೋಗುವೆನು.

1006. ಅಕಲ್ಪಾ ಚಿಕ್ಕೈಯಿನ್ ವೈತ್ತು ಮುಟಙ್ಕೈಯ್ಯೈ ಅನ್ರು ತೇಯ್ತ್ತ
ಇಕಲಾರ್ಕಳ ಜ್ಞಿನ್ಪಕೈ ಏತ್ತಿ ಮುರುಕ ನಾರವ್
ಮುಕಿಲ್‌ಚೂಟಿನ್ ನಱುಙ್ಚ್ಚೋಲೈಯಿನ್ ಮೊಯ್ಯೊಳಿ ಮಾಟವೀತಿ
ಪ್ಪುಕಲೂರ್‌ವರುವ್ ಅನ್ತಣರ್ ತನ್ತಿಱವ್ ಪೋಜ್ಞಿ ಲುಜ್ಞಾವ್.

---

1. ಮಾಡ ಬೀದಿ – ದೇಗುಲದ ಬೀದಿ.

16. ಮುರುಗ ನಾಯನಾರ

1007. ಪರಾಗಗಳನ್ನೊಳಕೊಂಡ ಹೂಗಳಿಂದ ಕೂಡಿದ ತಲೆಕೂದಲುಳ್ಳ ಪಾರ್ವತೀಮಾತೆಯವರ, ತಳಿರಂತಿರುವ ಕೈಗಳಿಂದ ಆಲಿಂಗನಹೊಂದಿನ ದಿವ್ಯಶರೀರ ವನ್ನೂ, ಮೇಲೆ ಗಂಗೆಯುಳ್ಳ ಜಡೆಮುಡಿಯನ್ನೂ ಉಳ್ಳ ಶಿವಪರಮಾತ್ಮನು ಆಶಿಸಿ ಬಂದು ನೆಲಸಿರುವ ಊರಾದುದು, ಕಾಂತಿಸೂಸುವ ಮಣಿಮುಡಿಯನ್ನು ಧರಿಸಿದ ಚೋಳರ, ಕಾವೇರಿನದಿಯು ಹರಿಯುವ ನಾಡಿನಲ್ಲುಳ್ಳ, ಮಲರುಗಳಿಂದ ತುಂಬಿದ ದೊಡ್ಡ ನಂದನಗಳಿಂದಲೂ, ಕೊಳಗಳಿಂದಲೂ ಕೂಡಿದ ತಿರುಪ್ಪೂಂ ಪುಗಲೂರ್[1] ಎಂಬುದಾಗಿದೆ.

1008. ಖ್ಯಾತಿಯುಳ್ಳ ಪುರಾತನವಾದ ಆ ಊರಿನಲ್ಲಿ, ಉತ್ತಮ ಭಕ್ತರ ಮನಸ್ಸಿನಂತೆಯೇ, ಅವರ ಶರೀರದಲ್ಲಿ ಧರಿಸಿದ ರಕ್ಷೆಯಂತಿರುವ ವಿಭೂತಿಯು ಪವಿತ್ರ ವಾದ ಬೆಳ್ಳಗಿನ ಕಾಂತಿಯಿಂದ ರಾತ್ರಿಯ ನಡುಯಾಮದ ಕತ್ತಲೆಯು ಮಾತ್ರ ಬಿಳಿ ದಾಗುವುದಲ್ಲ; ಸುವಾಸನಾಯುಕ್ತವಾದ ಮಲರುಗಳ ಮೇಲೆ ನೆಲಸುವ ಮಧುರವಾದ ಜೇನನ್ನುಳ್ಳ ರೆಕ್ಕೆಗಳುಳ್ಳ ಕರಿತುಂಬಿಗಳೂ, ತಮ್ಮ ಕಪ್ಪು ಬಣ್ಣವನ್ನು ಹೋಗಲಾಡಿಸಿ ಕೊಂಡು ಬೆಳ್ಳಗಾಗಿ ಪ್ರಕಾಶಿಸುವುವು.

---

16. ಮುರುಕ ನಾಯನಾರ್

1007. ತಾತು ಚೊಟು ಚ್ಕುಟಿನ್‌ಮಲ್ಕೈಯಾ ಟ್ಳಿರ್‌ಕ್ಕೈ ಚೊಟು ನ್ರುರುಮೇನಿ
ಮಿಾತು ಚೊಟುವು್ ಪುನಜಿ್‌ಕ್ಜೈ ವೇಣಿ ನಮ್ಬರ್ ವಿರುಮ್ಬುಪತಿ
ಚೋತಿ ಚೊಟು ಮಣಿವೌಲಿ ಚ್ಕೋಟಿರ್ ಪೊನ್‌ನಿ ತ್ತಿರುನಾಟ್ಟು
ಪ್ಪೋತು ಚೊಟುನ್ ತಟಙ್ಕ್ಕೋಲ್ಕೈ ಪ್ಪೊಯ್‌ಕ್ಕೈ ಚೊಟುವು್
ಪೂಮ್ಪುಕಲೂರ್.

1008. ನಾಮ ಮೂತೂರ್ ಮಜ್ಞತನು ಣಲ್ಲೋರ್ ಮನಮ್ಪೋ ಲವರಣಿನ್ತ್ರ
ಚೇಮ ನಿಲವು ತಿರುನೀಜ್ಜಿನ್ ಚೆಜನ್ತ್ರ ವೆಣ್‌ಮ್ಮೈ ತ್ತಿರುನೊತ್ರಳಿಯಾಲ್
ಯಾಮ ವಿರುಳುವು್ ವೆಳಿಯಾಕ್ಕು ಮಿರವೇ ಯಲ್ಲ; ವಿಕೈಮಲರ್‌ಮೇಜಿ್
ಕಾಮರ್ ಮತುವುಣ್ ಚೆಜಿ್ಕೈವಣ್ಟು ಜ್ಕಳಜ್ಕ ಮಿನ್‌ಜಿ ವಿಳಜ್ಕುಮಾಲ್.

---

1. ತಿರುಪ್ಪೂಂಪುಗಲೂರ್ – ದಿವ್ಯವಾದ ರಮಣೀಯವಾದ ಪುಗಲೂರು.

1009. ಪ್ರಶಸ್ತವಾದ ಸಂಗೀತವನ್ನು ಪಸರಿಸುವ ತುಂಬಿಗಳು ಅರಳಲು ತಯಾರಾಗಿರುವ ಮೊಗ್ಗುಗಳುಳ್ಳ ಎಳೆಯ ಗೆಲ್ಲುಗಳ ಪಕ್ಕಗಳಲ್ಲಿ ಹಾರಾಡಲು, ಆ ಮೊಗ್ಗುಗಳು ಅರಳಿ ಒಳ್ಳೆಯ ಬಣ್ಣದಿಂದಲೂ ಮಾಧುರ್ಯದಿಂದಲೂ ಕೂಡಿದ ಜೇನನ್ನು ಸುರಿಸುವುವು. ಹೀಗೆ ಜೇನನ್ನು ಸುರಿಸುವುದು ಸುವಾಸನಾಯುಕ್ತವಾದ ಅರಳಿದ ಮಲರುಗಳು ಮಾತ್ರವಲ್ಲ. ಶೀತಲವಾದ ನಂದನಗಳ ಎಲ್ಲಾ ಪಕ್ಕಗಳಲ್ಲಿಯೂ ಯೌವನವೂ ಮಾರ್ದವವೂ ಉಳ್ಳ ಸಾರಿಕೆ ಪಕ್ಷಿಗಳ, ರಾಗದಿಂದ ಕೂಡಿದ ಇಂಪಾದ ಮಾತುಗಳನ್ನು ಹೇಳುವ ಬಾಯಿಯೂ, ತಿರುಪ್ಪದಿಕಗಳೆಂಬ ಮಧುರವಾದ ಜೇನನ್ನು ಸುರಿಸುವುವು.

1010. ತುಂಬಿಗಳು ಹಾಡಲು ನೀರುಳ್ಳ ತಟಾಕಗಳಲ್ಲಿ ತಾವರೆಗಳು ಅರಳಿ ಕಣ್ಣೀರನ್ನು[1] ಸುರಿಸುವುವು. ಸುವಾಸನೆಯುಳ್ಳ ಮೊಗ್ಗುಗಳು ಬಿರಿದು ಅರಳಿದ, ಶೀತಲವಾದ ತಾವರೆಮಲರುಗಳು ಮಾತ್ರವಲ್ಲ. ದೇವರುಗಳಿಗೆ ನಾಯಕನಾದ ಶಿವ ಪರಮಾತ್ಮನನ್ನು ಸ್ತುತಿಸುವ ತಿರುಪ್ಪಾಡುಗಳಾದ ತೇವಾರಗಳ ಅಮೃತವು ವರ್ಧಿಸಲು, ಅದನ್ನು ಕಿವಿಗಳಿಂದಲೂ ಬಾಯಿಗಳಿಂದಲೂ ಉಣ್ಣುವ ಭಕ್ತರ ಮೊಗದಾವರೆಗಳೂ ಎಡೆಬಿಡದೆ ಕಣ್ಣೀರನ್ನು ಹನಿಹನಿಗಳಾಗಿ ಸುರಿಸುವುವು.

1011. ಹಿರಿಮೆಯೂ ಸಂಪತ್ತೂ ಸೇರಿ ಶೋಭಿಸುವುದು ಆ ಸುಂದರವೂ ಶೀತಲವೂ ಆದ ಪುಗಲೂರು. ಅಲ್ಲಿ ಪುರಾತನನಾದ ವೇದವೊದಲಿಗನಾದವನು ಹಿರಿಮೆಯ ವೇದಿಯರ ಕುಲದಲ್ಲಿ ಅವತರಿಸಿದನು. ಅವನು ಜ್ಞಾನನೆಲೆಯಲ್ಲಿ ನಿಂತವನು. ನಾಗಭೂಷಣನಾದ ಶಿವಪರಮಾತ್ಮನ ಶ್ರೀಪಾದಗಳ ಕೆಳಗೆ ನಿರ್ದೋಷವಾದ ಪೂರ್ಣಪ್ರೀತಿಯಿಂದ ದ್ರವಿಸುವ ಮನಸ್ಸಿನವನಾದ ಆತನು ಮುರುಗನಾರ್ ಎಂಬವನು.

1009. ನಣ್ಣು ಮಿಚೈತ್ತೇರ್ ಮತುಕರಙ್ಕ ಣನೈಮೆನ್ ಚಿನೈಯಿನ್ ಮರುಙ್ಕಲೈಯ
ವಣ್ಣ ಮತುರ ತ್ತೇನ್‌ಪೊಟಿವ ವಾಚ ಮಲರ್‌ವಾ ಯೇಯಲ್ಲ;
ತಣ್ಣಿನ್ ಚೋಲೈ ಯೆಮ್ಮರುಙ್ಕು ಇಳ್ಞ್ಚರು ಮಟಮೆನ್ ಚಾರಿಕೈಯಿನ್
ಪಣ್ಣಿನ್ ಕಿಳವಿ ಮಣಿವಾಯುಮ್ ಪತಿಕ ಚ್ಚೆಟುನ್ತೇನ್ ಪೊಟಿಯುಮಾಲ್.

1010. ವಣ್ಟು ಪಾಟ ಪುನಱ್ಟಟತ್ತು ಮಲರ್‌ನ್ತು ಕಣ್ಣೀ ರರುಮ್ಪುವನ
ಕೊಣ್ಟ ವಾಚ ಮುಕೈಯವಿಳ್‌ನ್ತ ಕುಳಿರ್‌ಪ ಙ್ಕಯಙ್ಕ ಳೇಯಲ್ಲ;
ಅಣ್ಟರ್ ಪೆರುಮಾನ್ ಱಿರುಪ್ಪಾಟ್ಟಿ ನಮುತಮ್ ಪೆರುಕ ಚ್ಚೆವಿ ಮಟುಕ್ಕು
ನ್ತೊಣ್ಟರ್ ವತನ ಪಙ್ಕಯಮು ನ್ತುಳಿತ್ತ ಕಣ್ಣೀ ರರುಮ್ಪುಮಾಲ್.

1011. ಆನ ಪೆರುಮ್ಮೈ ವಳಙ್ಚಿಱನ್ತ ವನ್ತಣ್ ಪುಕಲೂ ರತು ತನ್‌ನಿನ್
ಮಾನ ಮಱೈಯೋರ್ ಕುಲಮರಪಿನ್ ವನ್ತಾರ್ ಮುನ್ತೈ ಮಱೈಮುತಲ್‌ವರ್,
ಞಾನ ವರಮ್ಪಿನ್ ಱಲೈನಿನ್‌ಱಾರ್, ನಾಕಮ್ ಪುನೈವಾರ್ ಚೇವಟಿಕ್ಕೀಟ್
ಊನ ಮಿನ್‌ಱಿ ನಿಱೈಯನ್‌ಪಾ ಲುರುಕು ಮನತ್ತಾರ್ ಮುರುಗನಾರ್.

---

1. ಕಣ್ಣೀರ್ - ಕಳ್ + ನೀರ್ = ಮಧುರಸ, ಜೇನು.

1012. ಆತನು ತಾವರೆ ಎಲೆಗಳ ಮೇಲೆ ತಂಗಿರುವ ಏಡಿಗಳು ತಮ್ಮ ನಿದ್ರೆಯಿಂ ದೇಳಲು, ಅಲರುವ ಕೆಂದಾವರೆಗಳನ್ನುಳ್ಳ ಗದ್ದೆಗಳಲ್ಲಿ ಕಯಲ್ ಮೀನುಗಳು ನೀರ ಕಣಿಗಳ ಮೇಲೆ ಹಾರುವುದಕ್ಕೆಡೆಯಾದ ತಿರುಪ್ಪುಗಲೂರಲ್ಲಿ ನೆಲೆಯಾಗಿ ಬಾಳಿ ಬರುವವನಾಗಿ, ವೃಷಭದ ಮೇಲೇರಿ ಅನುಗ್ರಹಿಸುವ ಶಿವಪರಮಾತ್ಮನಿಗೆ ಆಳಾಗುವ ಸತ್ಯಸ್ವಭಾವದ ತಪಸ್ಸಿನಿಂದ, ಅವನ ಸಿಕ್ಕಲಾದ ಜಡೆಯ ಮೇಲೆ ಅಲಂಕರಿಸಲು ಪುಷ್ಪಗಳನ್ನು ತಿರಿದು ತರುವನು.

1013. ಆತನು ಸೂರ್ಯೋದಯಕ್ಕೆ ಮೊದಲೇ ಎದ್ದು ಪುನೀತವಾದ ನೀರಿನಲ್ಲಿ ಮುಳುಗಿ ಸ್ನಾನಮಾಡಿ, ತನ್ನ ಪರಮಾತ್ಮನ ಶ್ರೀಮುಡಿಯ ಮೇಲೆ ಶೋಭಿಸುವ ಗಂಗೆ ಚಂದ್ರರ ಪಕ್ಕದಲ್ಲಿ ಅಲಂಕರಿಸಲು, ಸುಗಂಧವನ್ನು ಸೂಸುವ, ಆಗ ತಾನೇ ನಗುತ್ತಿರುವ ಅಸಂಖ್ಯಾತ ಹೂಗಳನ್ನು ಕೊಯ್ದು ಅವುಗಳ ಜಾತಿಗನುಸಾರವಾಗಿ ಬೇರೆ ಬೇರೆಯಾಗಿ ತನ್ನ ಹೂಬುಟ್ಟಿಯಲ್ಲಿ ಸೇರಿಸುವನು.

1014. ಗೆಲ್ಲುಗಳಿರುವ ಹೂಗಳನ್ನು, ನೆಲದಲ್ಲಿರುವ ಹೂಗಳನ್ನು, ಶೀತಲವಾದ ನೀರು ಹೂಗಳನ್ನು, ಕೋಮಲವಾದ ಬಳ್ಳಿಗಳಲ್ಲಿ ಅರಳುವ ಹೂಗಳನ್ನು, ವೇದಗಳು ಕಾಣಿಸಿಕೊಳ್ಳುವ ಬಾಯಿಯ ಮುಗುಳುನಗೆಯ ಕಾಂತಿಯು ಪಸರಿಸುವಂತಿರುವಾಗಲೇ, ಕನಕಗಿರಿಯನ್ನು ಬಿಲ್ಲಾಗಿಸಿ, ಹಾವನ್ನು ಹಗ್ಗವಾಗಿ ಕಟ್ಟಿದವರ ಶ್ರೀಮುಡಿಯಲ್ಲಿ ಅಲಂಕರಿಸಲು ತಕ್ಕುದಾದ ಹೂಗಳೆಂದು ಸಂಗ್ರಹಿಸಿ,

---

1012. ಅಟ್ಟೈಮೇ ಲಲವನ್ ಱುಯಿಲುಣರ ವಲರ್ಚೆ ಙ್ಙಮಲ ವಯಱ್ಕಯಲ್ಕಣ್
ಮಟ್ಟೈಮೇ ಲುಕಳು ನ್ತಿರುಪ್ಪುಕಲೂರ್ ಮನ್ನಿ ವಾೞು ನ್ತನ್ಮೈ
ಯಾರಾಯ್,
ವಿಟ್ಟೈಮೇಲ್ ವರುವಾರ್ ಕ್ಕಾಳಾನ ಮೆಯ್ಮ್ಮೈ ತ್ತವತ್ತಾ ಲವರ್ ಕಱ್ಱೈ
ಚ್ಚಟೈಮೇ ಲಣಿಯ ತ್ತಿರುಪ್ಪಳ್ಳಿ ತ್ತಾಮಮುಮ್ ಪಱಿತ್ತು ಚ್ಚಾತ್ತುವಾರ್,

1013. ಪುಲರುಮ್ ಪೊೞುತಿನ್ ಮುನ್ನೆೞುನ್ತು, ಪುನಿತ ನೀರಿನ್ ಮೂೞ್ಕಿ
ಪ್ಪೋಯ್,
ಮಲರು ಙ್ಕೊಯ್ವಿ ತ್ತನ್ಪೆರುಮಾನ್ ಮುಟಿಮೇಲ್ ವಾನೀ ರಾಱುಮತಿ
ಯುಲವು ಮರುಙ್ಕು ಮುರುಕುಯಿರ್ಕ್ಕ, ನಕೈಕ್ಕುಮ್ ಪತತ್ತಿ ನುಟನ್ಪಱಿತ್ತ
ವಲಕಿನ್ ಮಲರ್ಕಳ್ ವೆವ್ವೇಱು ತಿರುಪ್ಪೂ ಙ್ಕೂಟೈ ಕನಿಲವೈ ಪ್ಪಾರ್.

1014. ಕೋಟ್ಟು ಮಲರು, ನಿಲಮಲರು, ಙ್ಕುಳಿರ್ನೀರ್ ಮಲರು, ಙ್ಕೊೞುಙ್ಕೊಟಿಯಿನ್
ಙ್ಕೊಟಿಯಿನ್
ಱೋಟ್ಟು ಮಲರು ಮಾಮಲರು, ಙ್ಕುರುತಿ ಮಲರು ನ್ತಿರುವಾಯಿಱ್
ಕಾಟ್ಟು ಮುಱುವ ನಿಲವಲರ ಕ್ಕನಕ ವರೈಯಿಱ್ ಪನ್ನಕನಾಣ್
ಪೂಟ್ಟು ಮೊರುವರ್ ತಿರುಮುಟಿಮೇಱ್ ಪುನೈಯ ಲಾಕು ಮಲರ್ತೆರಿನ್ತು,

1015. ಜನಿವಾರದಿಂದಲಂಕೃತನಾದ ಎದೆಯುಳ್ಳ ಮುರುಗ ನಾಯನಾರನು ಅವುಗಳನ್ನು ಕೊಂಡುಬಂದು ಪ್ರತ್ಯೇಕವಾದ ಸ್ಥಳದಲ್ಲಿ ಸೇರಿ, ಅವನ್ನು ಸುರಿದು ಮಾಡುವ ಮಾಲೆಗಳಾಗಿಯೂ, ಸಣ್ಣ ಸಣ್ಣ ಇಂಡೈ ಹೂಗಳನ್ನು ಕರ್ಣಾಭರಣಗಳಿಗೆ ತಕ್ಕುದಾಗುವಂತೆ ಸುವಾಸನೆಯಿಂದ ಕೂಡಿದ ಮಾಲೆಗಳಾಗಿಯೂ, ತಲೆಯಲ್ಲಿ ಅಲಂಕರಿಸುವ ದಂಡಿನಂತಿರುವ ಹೂವಿನ ದಂಡೆಗಳಾಗಿಯೂ, ಪಾದಗಳನ್ನಲಂಕರಿಸಲು ಕಟ್ಟಿದ ಮಾಲೆಗಳಾಗಿಯೂ, ತೋಳ ಮೇಲೆ ಅಲಂಕರಿಸುವ ಸಣ್ಣದಾದ ಪರಾಗಗಳನ್ನು ಬೀಸುವ ಮಾಲೆಗಳಾಗಿಯೂ ವಿರಚಿಸಿ,

1016. ಆ ಹೂಗಳ ಕೆಲಸಗಳನ್ನು ಅವುಗಳಿಗೆ ವಿಧಿಸಲ್ಪಟ್ಟ ಕಾಲಗಳಲ್ಲಿ ಮಾಡಿ, ಅವುಗಳನ್ನೆತ್ತಿಕೊಂಡು ದೇಗುಲಕ್ಕೆ ಹೋಗಿ, ಭಕ್ತಿಯಿಂದ ದೇವರ ಮೇಲೆ ಅಲಂಕರಿಸಿ, ಮಾಡತಕ್ಕ ಅರ್ಚನೆಗಳನ್ನು ವಿಧಿಯಂತೆ ಭಕ್ತಿಯಿಂದ ಮಾಡಿದನು. ಶಿವಪರಮಾತ್ಮನ ತಿರುಪ್ಪದಿಕಗಳಲ್ಲಿ ಪರವಸ್ತುವಾಗಿ ಶೋಭಿಸುವ ಶಿವಪಂಚಾಕ್ಷರಿಯನ್ನು ನಾಲಗೆಯಲ್ಲಿ ಎಡೆಬಿಡದೆ ಕೊಂಡವನಾದನು.

1017. ಶಾಸ್ತ್ರನಿಂದಿತವಾದ ಕಾರ್ಯಗಳನ್ನು ಬಿಟ್ಟು ಹೀಗೆ ತಕ್ಕ ಸನ್ಮಾರ್ಗದಲ್ಲಿ ಬಾಳುವ ವೇದಿಯನಾದ ಮುರುಗನಾರನು, ವೇದಗಳು ಮೊದಲಾಗಿ ಸ್ಪಷ್ಟವಾಗಿ ತಿಳಿಸಿದ ಶಿವಜ್ಞಾನವನ್ನು ಚಿಂಬೊನ್ನಿನ ಬಟ್ಟಲಿನಲ್ಲಿ ಪೂರ್ಣವಾಗಿ ತೆಗೆದುಕೊಂಡು, ಎಲ್ಲಾ ಲೋಕಗಳನ್ನೂ ಪಡೆದು ಕಾಪಾಡುವ ಅಮ್ಮನವರ ಮೊಲೆಹಾಲಿನೊಡನೆ ಉಂಡು ಅನುಗ್ರಹಿಸಿದ ತಿರುಜ್ಞಾನಸಂಬಂಧರಿಗೆ ಸ್ನೇಹಿತನಾದ ಹಿರಿಮೆಯನ್ನು ಪಡೆದನು.

1015. ಕೊಣ್ಣುವನ್ನು, ತನಿಯಿಟತ್ತಿ ಲಿರುನ್ತು, ಕೋಕ್ಕು ಜನ್ನೋವೈಕ್ಕಳುವುಮ್
ಇಣ್ಣೈ ಚ್ಚುರುಕ್ಕು ನ್ತಾಮುಮುಟ ನಿಣೈಕ್ಕುಮ್ ವಾಚ ಮಾಲೈಕಳುವುಮ್
ತಣ್ಣಿಟಿಲ್ ಕಟ್ಟು ಜ್ಕಣ್ಣಿ ಕಳು ನ್ತಾಳಿಟಿಲ್ ಪಿಣೈಕ್ಕುವುಮ್ ಪಿಣೈಯಲ್‌ಕಳುವುಮ್
ನುಣ್ಣಾ ತಿಜೈಕ್ಕು ನ್ತೊಟೈಯಲ್‌ಕಳು ಜ್ಜಾವೈತ್ತು ನುಟಜ್ಕು
ನೂಣ್‌ಮಾರ್‌ಪರ್,

1016. ಅಜ್ಕು ಪ್ಪಣಿಕ ಳಾನವಜ್ಜು ಕ್ಕಮೈತ್ತು ಕಾಲ ಜ್ಕಳಿಲವೈತ್ತು
ತಾಜ್ಕಿ ಕ್ಕೊಟುಚೆನ್ ಅನ್‌ಪಿನೊಟು ಜ್ಞಾತ್ತಿ ವಾಯ್‌ನ್ತ ವರ್‌ಚ್ಚನೈಕಳ್
ಪಾಜ್ಕಿಟಿಲ್ ಪುರಿನ್ತು ಪರಿನ್ತುಳ್ಳಾರ್; ಪರಮರ್ ಪತಿಕ ಪ್ಪಜ್ಞಾನ
ವೋಜ್ಕಿ ಚ್ಚಿಜನ್ತ ವಜ್ಕೈಟುತ್ತು ಮೋವಾ ನಾವಿ ನುಣರ್‌ವಿನಾರ್.

1017. ತಳ್ಳು ಮುಜೈಮೈ ಯೊಟಿನ್ತಿಟವಿ ತ್ತಕುತಿ ಯೊಟುಕು
ಮಜೈಯವರ್‌ತಾನ್,
ತೆಳ್ಳು ಮಜೈಕಳ್ ಮುತಲಾನ ಞಾನ ಞ್ಚೆಮ್ಪೊನ್ ವಳ್ಳತ್ತಿಲ್
ಅಳ್ಳಿ ಯಕಿಲ ವಿಧಾನ್‌ಜಳಿತ್ತ ವಮ್ಮೈ ಮುಲೈಪ್ಪಾಲುಟನುಣ್ಣ
ಪಿಳ್ಳೈ ಯಾರ್‌ಕ್ಕು ನಣ್‌ಪರುಮಾಮ್ ಪೆರುಮೈ ಯುಟೈಯಾ ರಾಯಿನಾರ್,

1018. ಹಂಸರೂಪವನ್ನೂ ವರಾಹರೂಪವನ್ನೂ ತಾಳಿದ ಬ್ರಹ್ಮವಿಷ್ಣುಗಳೆಂಬ ಇಬ್ಬರು ದೇವರಿಗೂ ತಿಳಿಯಲಾರದ, ತಿರುಪ್ಪುಗಲೂರಲ್ಲಿ ನೆಲೆಯಾಗಿ ಅನುಗ್ರಹಿಸಿದ ಶಿವಪರಮಾತ್ಮನ ವರ್ಧಮಾನವೀಶ್ವರಂ ಎಂಬ ದೇಗುಲದಲ್ಲಿ ತುಂಬಾ ಸಂತೋಷದಿಂದ ಪ್ರತಿಯೊಂದು ದಿವಸವೂ ಆತನು ಪೂಜೆಯನ್ನು ಬಿಡದೆ ಮಾಡುತ್ತ, ಹೇಳಲು ಯೋಗ್ಯವಾದ ಮಹಿಮೆಯುಳ್ಳ ಪಂಚಾಕ್ಷರಿಯನ್ನು ತನ್ಮಯತೆಯಿಂದ ಜಪಿಸಿ ನಮಿಸುತ್ತಾ ಬಂದನು.

1019. ಹೀಗೆ ಅಲ್ಲಿ ಪೂಜಿಸಿಕೊಂಡಿದ್ದ ಮುರುಗನಾರನು ಸುಂದರವಾದ ಪುಗಲಿ[1] ಯಲ್ಲಿದ್ದ ತಿರುಜ್ಞಾನಸಂಬಂಧರ ಮಂಗಲ ವಿವಾಹಕ್ಕೆ, ತಾವು ಹಿಂದೆ ಮಾಡಿದ ಪೂಜಾ ಫಲದಿಂದ ಬಂದು ಸೇರಿ, ಕೆಂಗಣ್ಣುಳ್ಳ ದೊಡ್ಡ ವೃಷಭವನ್ನುಳ್ಳ ಶಿವಪರಮಾತ್ಮನು ಮಹದನುಗ್ರಹವಾದ ಒಳ್ಳೆಯ ಸಂಪತ್ತನ್ನು ಕೊಡಲು, ತನ್ನ ಈಶ್ವರನಾದ ಶಿವ ಪರಮಾತ್ಮನ ಪಾದಗಳ ನೆಳಲಿಡೆಯನ್ನು ಸೇರಿದವನಾದನು.

1020. ಹಾವನ್ನಲಂಕರಿಸಿಕೊಂಡ ನಡುಭಾಗವನ್ನುಳ್ಳ ಶಿವಪರಮಾತ್ಮನನ್ನ ರ್ಚಿಸಿ, ಅದರ ಫಲವಾಗಿ ಅವನ ಶ್ರೀಪಾದಗಳ ಕೆಳಗೆ ಸೇರುವ ತಿರುಪ್ಪುಗಲೂರ ಮುರುಗ ನಾಯನಾರನ ನಿಜಕೈಂಕರ್ಯದ ರೀತಿಯನ್ನು ಸ್ತುತಿಸಿ, ಇನ್ನುಮೇಲೆ ವಂಚನೆಯಿಲ್ಲ ದವರಲ್ಲಿಗೆ ಬರುವವನಾದ ಶಿವಪರಮಾತ್ಮನನ್ನು ಮನದಲ್ಲಿ ಕೊಂಡು ಶ್ರೀರುದ್ರದಿಂದ ಸ್ತುತಿಸುವ ಭಕ್ತನಾದ ಪಶುಪತಿ ನಾಯನಾರನು ಶಿವನನ್ನು ಪೂಜಿಸಿದ ಹಿರಿಮೆಯನ್ನು ಹೇಳುವೆನು.

1018. ಅನ್ನ ವಟಿವು ಮೇನಮುಮಾ ಯಜ್ಞಿವಾ ರಿರುವ ರಜ್ಞಿಯಾವೇ
ಮುನ್ನುಮ್ ಪುಕಲೂ ರುಜ್ಞೈವಾರ್ಕೈ ವರ್ತ್ತ ಮಾನ ವೀಚ್ಚುರತ್ತು
ನನ್ನರ್ ಮಕಿಟ್‌ಚ್ಚಿ ಮನಜ್ಞ್ಕೊಳ್ಳ ನಾಳುಮ್ ಪೂಚೈ ವಟುವಾಮೇ
ಪನ್ನುಮ್ ಪೆರುಮೈ ಯಞ್ಞ್ಚುಟುತ್ತುಮ್ ಪಯಿನ್ಜ್ಞೀ ಪಣಿನ್ತು
ಪರವಿನಾರ್.

1019. ಅಙ್ಕ ಣಮರು ನಿತ್ತಿರುಮುರುಕ ರಟಿಕಾರ್ ಪುಕಲಿ ಪ್ಪಿಳ್ಳೈಯಾರ್
ಪೊಙ್ಕು ಮಣತ್ತಿನ್ ಮುನ್‌ಚೆಯ್ತ ಪೂಚೈ ಯತನಾಜ್ಞ್ ಪುಕ್ಕರುಳಿ
ಚ್ಚೆಙ್ಕ ಣಟಲೇ ಜುಟೈಯವರ್ತಾ ಞ್ಚ್ಞನ್ತ ವರುಳಿನ್ ಪೊರುಳಳಿಕ್ಕ
ತ್ತಙ್ಕಳ್ ಪೆರುಮಾ ನಟನೀಟ ಜ್ಞಿಲೈಯಾಮ್ ಸಿಲೈಮೈ ಚಾರ್ವುಜ್ಞಾರ್.

1020. ಅರವ ಮಣಿನ್ತ ವರೈಯಾರೈ ಯರುಚ್ಚಿ ತ್ತವರ್ತ ಙ್ಕಟನಿಟುಜ್‌ಕೀಟ್
ವಿರವು ಪುಗಲೂರ್ ಮುರುಕನಾರ್ ಮೆಯ್‌ಮ್ಮೈ ತೊಣ್ಟಿನ್
ಜ್ಞಜ್ಞವುಪೋಜ್ಞಿ,
ಕ್ಕರವಿ ಲವರ್‌ಪಾಲ್ ವರುವಾರೈ ಕ್ಕರುತ್ತಿ ಲುರುತ್ತಿ ರಜ್ಞ್ಕೊಣ್ಟು
ಪರವು ಮನ್ಪರ್ ಪಚುಪತಿಯಾರ್ ಪಣಿನ್ತ ಪೆರುಮೈ ಪಕರ್‌ವುಜ್ಞೀನ್.

---

1. ಪುಗಲಿ - ಶೀರ್ಕಾಳಿ.

17. ರುದ್ರ ಪಶುಪತಿ ನಾಯನಾರ

1021. ಎತ್ತರವಾಗಿ ಪಸರಿಸಿರುವ ನೀರುಹೂಗಳು ಅರಳಿರುವ ತಟಾಕಗಳಿಂದ ವಿಶಾಲವಾದ ಗದ್ದೆಗಳಿಂದ ಕೂಡಿದ ಕಾವೇರಿನಾಡಿ[1]ನಲ್ಲಿ ಶ್ರೇಷ್ಠಕುಲದವರಿರುವ, ಕೊರತೆಯಿಲ್ಲದ ಪರಿಪೂರ್ಣತೆಯುಳ್ಳ ಮನೆಗಳು ಹೆಚ್ಚಾಗಿರುವುದರಿಂದ ಊರುಗಳಲ್ಲಿ ಮೇಲಾದುದು ಹಿರಿಯ ತಿರುತ್ತಲೆಯೂರು.

1022. ವೇದಿಯರ ಹೋಮಗಳಲ್ಲಿ ವರ್ಧಿಸುವ ಅಗ್ನಿಯು ಮಳೆಯನ್ನು ಕೊಡುವುದು. ಸುವಾಸನೆಯುಳ್ಳ ಮಲರುಗಳು ತುಂಬಿದ ನಂದನಗಳು ಜೇನನ್ನು ಕೊಡುವುವು. ಪಂಚಕವ್ಯದಿಂದ ಅಭಿಷೇಕಹೊಂದುವ ಶಿವಪರಮಾತ್ಮನಿಗೆ ಆ ಊರು ಪಶುಗಳನ್ನು ಕೊಡುವುದು. ಆ ಊರು ಧರ್ಮ ನೀತಿ ಹಿರಿಮೆಗಳನ್ನು ಕೊಡುವುದು.

1023. ಸುಂದರವಾದ ಪ್ರದೇಶಗಳುಳ್ಳ ಆ ಹಿರಿಯ ನಗರದಲ್ಲಿ, ಶ್ರೇಷ್ಠವಾದ ವೇದಗಳು ಹೇಳುವ ಸತ್ಯದಲ್ಲಿ ಸದಾ ನಿಲ್ಲುವ, ಉತ್ತಮ ವೇದಿಯರ ಕುಲದಲ್ಲಿ ಅವತರಿಸಿದ ಪರಿಶುದ್ಧನಾದವನು, ಕೆಂಗಣ್ಣುಳ್ಳ ದೊಡ್ಡ ವೃಷಭವನ್ನೇರಿ ಬರುವವನೂ, ಸಂಪತ್ತು ತುಂಬಿದ ಹಿಮಾಲಯ ಪರ್ವತದ ಮಗಳಾದ ಲತೆಯಂತಿರುವ ಪಾರ್ವತೀ ಮಾತೆಯನ್ನು ಒಂದು ಭಾಗದಲ್ಲಿ ಕೊಂಡವನೂ ಆದ ಶಿವಪರಮಾತ್ಮನ ಅಡಿಮೆ[2]ಯನ್ನು ಆಶಿಸುವ ಪಶುಪತಿ ನಾಯನಾರನೆಂಬ ಹೆಸರುಳ್ಳವನು.

---

17. ಉರುತ್ತಿರ ಪಚುಪತಿ ನಾಯನಾರ್

1021. ನಿಲತ್ತಿ ನೋಙ್ಕಿಯ ನಿವನ್ತೆಟು ಪ್ಪೊರುಮ್ಪುನ ನೀತ್ತಮ್
ಮುಲರ್ತ್ತ ಟಮ್ಪಣೈ ವಯಲ್‌ಪುಕು ಪೊನ್ನಿನನ್ ನಾಟ್ಟು
ಕ್ಕುಲತ್ತಿ ನೋಙ್ಕಿಯ ಕುಙ್ಕೈವಿಲಾ ನಿಙ್ಕೈಕುಟಿ ಕುಟುಮಿ
ತ್ತಲತ್ತಿನ್ ಮೇಮ್ಪಟು ನಲತ್ತತು ಪೆರುನ್ತಿರು ತ್ತಲೈಯೂರ್.

1022. ವಾನ ಳಿಪ್ಪನ ಮಙ್ಕೈಯವರ್ ವೇಳ್ವಿಯಿನ್ ವಳರ್ತೀ
ತ್ತೇನ ಳಿಪ್ಪನ ನಱುಮಲರ್ ಚೆಙ್ಚೆಟು ಇಞ್ಚೋಲೈ;
ಆನ ಳಿಪ್ಪನ ವಞ್ಚಕ ನಾಟುವಾರ್ ಕ್ಕವೂರ್
ತಾನ ಳಿಪ್ಪನ ತರುಮಮು ನೀತಿಯು ಞ್ಚಾಲ್ಪುಮ್.

1023. ಅಙ್ಕಣ್ ಮಾನಕ ರತನಿಟೈ ಯರುಮಙ್ಕೈ ವಾಯ್ಮೈ
ತ್ತಙ್ಕು ವೇತಿಯರ್ ಕುಲತ್ತಿನಿ ಞ್ಞೋನ್ಱಿಯ ತೂಯೋರ್
ಚೆಙ್ಕಣ್ ಮಾಲ್‌ವಿಟೈ ಯಾರ್‌ಚೆಟುಮ್ ಪೊನ್‌ಮಲೈ ವಲ್ಲಿ
ಪಙ್ಕಿನಾರಟಿ ಮೈತ್ತಿಱಮ್ ಪುರಿಪಚು ಪತಿಯಾರ್.

---

1. ಕಾವೇರಿನಾಡು — ಚೋಳನಾಡು. 2. ಅಡಿಮೆ — ದಾಸ್ಯ.

1024. ಮಹಾವಿಷ್ಣುವಿಗೂ ತಿಳಿಯಲಸಾಧ್ಯವಾದ ಪರಮೇಶ್ವರನ ಮಲರಿನಂತಹ ಶ್ರೀಪಾದಗಳನ್ನು ಆ ಬ್ರಾಹ್ಮಣಭಕ್ತನು ವೇದದಲ್ಲಿ ಶೋಭಿಸುವ ರುದ್ರಮಂತ್ರವನ್ನು ಕೊಂಡು, ಸ್ತುತಿಸುವ ಕಾರ್ಯದಲ್ಲಿ ವಿಘ್ನವಿಲ್ಲದೆ, ಪರಿಶುದ್ಧವಾದ ಭಕ್ತಿಯಿಂದ ಅದನ್ನೇ ಹೇಳಿ ಸ್ತುತಿಸುವ ಸೇವೆಯಲ್ಲಿ ಹಿರಿಮೆಯನ್ನು ಹೊಂದಿ ನಿಂತವನು.

1025. ಆತನು ಪಕ್ಷಿಗಳ ಧ್ವನಿಗಳು ಎಲ್ಲೆಯಿಲ್ಲದಂತೆ ಕೂಟವಾಗಿ ಶಬ್ದಿಸಲು, ಆ ಎಡೆಯಲ್ಲಿ ಮೃದುವಾದ ಜೇನನ್ನುಣ್ಣುವ ತುಂಬಿಗಳು ಪಾಡಲು, ಕರಿದಾದ ವರಾಲ್ ಮೀನುಗಳು ಹೊರಳಾಡುವ, ನೀಳವಾದ ಕಯಲ್ ಮೀನುಗಳು ಓಡಾಡುವ ನೀರಿನಲ್ಲಿ, ಬೆಂಕಿಯೆದ್ದಂತೆ ಸುವಾಸನೆಯಿಂದ ಕೂಡಿ ಅರಳಿದ ಕೆಂದಾವರೆಗಳನ್ನುಳ್ಳ ಮೃದುವಾದ ತಟಾಕದಲ್ಲಿಳಿದು,

1026. ತಿಳಿಯಾದ ಶೀತಲವಾದ ತಟಾಕದ ನೀರು ಕತ್ತಿನವರೆಗೆ ಬರುವಷ್ಟು ಕೆರೆಯ ಒಳಗೆ ಹೋಗಿ ನಿಂತು, ಕೈಯನ್ನು ತಲೆಯ ಮೇಲೆ ಜೋಡಿಸಿ, ನೀರು ಉಬ್ಬಿ ಅಬ್ಬಿಯಂತೆ ಬೀಳುತ್ತಿರುವ ಬಿಳಿದಾದ ಅಲೆಗಳನ್ನುಳ್ಳ ಗಂಗೆಯ ನೀರು ತುಂಬಿ ಕೆಳ ಬೀಳುವ ಜಡೆಯನ್ನುಳ್ಳ ಶಿವಪರಮಾತ್ಮನು ಪ್ರೀತಿಯಿಂದ ಅಂಗೀಕರಿಸುವ ಶ್ರೀರುದ್ರವನ್ನು ಭಕ್ತಿಯಿಂದ ಜಪಿಸಿದನು.

1024. ಆಯ ವನ್ತಣ ರರುಮಱೈ ಯುರುತ್ತಿರ ಜಪ್ಪೊಣ್ಣು
ಮಾಯ ನಾರಱಿ ಯಾಮಲರ್ ಚ್ಚೇವಟಿ ವಱುತ್ತು
ನ್ತಾಯ ವನ್ಪೊಟು ತೊಟರ್ಪಿನಿ ವಿಟ್ಟೈಯಱಾ ಚ್ಚುರುತಿ
ನೇಯ ನೆಞ್ಚಿನ ರಾಕಿಯ ತ್ತೊಟಿಲ್ಲೈ ನಿನ್ಱಾರ್.

1025. ಕರೈಯಿಲ್ ಕಮ್ಪಲೈ ಪುಳ್ಳೊಲಿ ಕಱಙ್ಕಿಟ ಮರುಙ್ಕು
ಪಿರಚ ಮೆನ್ಚುರುಮ್ ಪಱೈನ್ತಿಟ ಕ್ಕರುವರಾಲ್ ಪಿಱಙ್ಕು
ನಿರೈನೆ ಟುಙ್ಕಯ ನೀರಿಟೈ ನೆರುಪ್ಪೆಟು ನ್ತನ್ನೈಯ
ವಿರೈನೆ ಕಿಟ್ನ್ತಚೆ ಙ್ಕಮಲಮೆನ್ ಪೊಯ್ಕೈಯುಳ್ ಮೇವಿ,

1026. ತೆಳ್ಳು ತಣ್ಪುನಲ್ ಕಟುತ್ತಳ ವಾಯಿಟೈ ಚ್ಚೆಱಿಯ
ವುಳ್ಳು ಱಪ್ಪುಕ್ಕು ನಿನ್ಱುಕೈ ಯುಚ್ಚಿಮೇಱ್ ಕುವಿತ್ತು
ತ್ತುಳ್ಳು ವೆಣ್ತಿರೈ ಕ್ಕಙ್ಕೈನೀರ್ ತತುಮ್ಪಿಯ ಚಟೈಯಾರ್
ಕೊಳ್ಳು ಮನ್ಪಿನಿ ಲುರುತ್ತಿರ ಜ್ಙಪಿಪ್ಪೊಟು ಪಯಿನ್ಱಾರ್.

1027. ಮೇಲಾದ ವೇದಗಳ ಫಲವಾದ ರುದ್ರಮಂತ್ರವನ್ನು ಕ್ರಮದಂತೆ ನಿಡಿದಾದ ಹಗಲಲ್ಲಿಯೂ ಸಾಯಂಕಾಲವೂ ತಪ್ಪದೆ, ತಾವರೆಯ ಗರ್ಭದಲ್ಲಿರುವ ಬ್ರಹ್ಮದೇವನಂತಿದ್ದ ಪಶುಪತಿ ನಾಯನಾರನು, ಕೆಲಕಾಲ ಒಂದೇ ಚಿಂತನೆಯಿಂದ ಈ ರೀತಿ ಎಣಿಸಿ ಜಪಿಸಿದಾಗ, ಉಮಾಮಾತೆಯವರನ್ನು ಎಡಭಾಗದಲ್ಲಿ ಸಂತೋಷದಿಂದಿಟ್ಟು ಕೊಂಡ ಶಿವಪರಮಾತ್ಮನು ಸಂತೋಷಿಸಿದನು.

1028. ಆಶಿಯ ಹೆಚ್ಚಿದ ಭಕ್ತನ ಶ್ರೇಷ್ಠತಪಸ್ಸಿನ ಹಿರಿಮೆಯನ್ನೂ ಆ ತಪಸ್ಸಿನೊಡನೆ ಸೇರಿದ ವೇದಮಂತ್ರದ ನಿಯತಿಯ ಅಪರಿಮಿತವಾದ ಹೆಚ್ಚುವಿಕೆಯನ್ನೂ, ಅಂಗೀಕರಿಸಿಕೊಂಡು ಆದಿನಾಯಕನಾದ ಶಿವಪರಮಾತ್ಮನು ಪ್ರೀತಿಸಿ ಅನುಗ್ರಹಿಸಲು, ಪಶುಪತಿಯಾದ ಪರಮೇಶ್ವರನ ದೋಷರಹಿತವಾದ ಶಿವಲೋಕವನ್ನು ಅವನು ಸೇರಿದನು.

1029. ಹೆಚ್ಚಾದ ಭಕ್ತಿಯಿಂದ ಶ್ರೀರುದ್ರವನ್ನು ಜಪಿಸಿದ ಕಾರಣದಿಂದ ಪರಮಾತ್ಮನ ನಟನವಾಡುವ ಶ್ರೀಪಾದದ ಸಾಮೀಪ್ಯವನ್ನು ನಾಯನಾರನು ಸೇರಿದನು. ಆ ಕಾರಣದಿಂದ ಅವನಿಗೆ ಹಿರಿಮೆಯನ್ನು ಹೊಂದಿದ ಶ್ರೇಷ್ಠನಾದ ರುದ್ರಪಶುಪತಿ ಎಂಬ ಹೆಸರು ಲೋಕವು ಸ್ತುತಿಸಲು ವಿಖ್ಯಾತವಾಯಿತು.

1027. ಅರುಮ ಱೈಪ್ಪಯ ನಾಕಿಯ ವುರುತ್ತಿರ ಮತನ್ನೈ
ವರುಮು ಱೈಪ್ಪೆರುವ್ ಪಕಲುಮೆ ಲ್ಲಿಯುಮ್ವಟು ವಾಮೇ
ತಿರುಮ ಲಾರ್ಪ್ಪೊಕು ಟ್ಟಿರುನ್ತವ ನನ್ನೈಯವರ್ ಚಿಲನಾಳ್
ಒರುಮೈ ಯುಯ್ತ್ತಿಟ ವುಮೈಯಿಟ ಮಕಿಟ್ನ್ತವರ್ ಉವನ್ತಾರ್.

1028. ಕಾತ ಲನ್ಪರ್ತ ಮರುನ್ತವ ಪ್ಪೆರುಮೈಯು ಱ್ಕಲನ್ತ
ವೇತ ಮನ್ತಿರ ನಿಯತಿಯಿನ್ ಮಿಕುತಿಯುಮ್ ವಿರುಮ್ಪಿ
ಯಾತಿ ನಾಯಕ ರಮರ್ನ್ತರುಳ್ ಚೆಯ್ಯುಮ ಱವರ್ತಾನ್
ತೀತಿ ಲಾನಿಲೈ ಚ್ಚಿವಪುರಿ ಯೆಲ್ಲೈಯಿಱ್ ಚೇರ್ನ್ತಾರ್.

1029. ನೀಟು ಮನ್ಪಿನಿ ಲುರುತ್ತಿರ ಮೋತಿಯ ನಿಲೈಯಾಲ್
ಆಟು ಚೇವಟಿ ಯರುಕುಱ ವಣೈನ್ತನ; ರವರ್ಕ್ಕು
ಪ್ಪಾಟು ಪೆಱ್ಱಚೀ ರುರುತ್ತಿರ ಪಚುಪತಿ ಯಾರಾ
ಱ್ಟ್ಟು ನಾಮಮು ನಿಕಟ್ನ್ತತು ಕುವಲಯಮ್ ಪೋಱ್ಱ.

1030. ಹರಿತವಾದ ತ್ರಿಶೂಲವನ್ನು ಧರಿಸಿದ ಶಿವಪರಮಾತ್ಮನ ಸಾಮೀಪ್ಯದಲ್ಲಿರುವ ರುದ್ರಪಶುಪತಿಯನ್ನು ಸ್ತುತಿಸಿ, ಪ್ರಾಕಾರದಿಂದ ಸುತ್ತುವರಿದ ತಿಲ್ಲೆ[1]ಯ ಎಲ್ಲೆಯಲ್ಲಿ ನಾಳೈ ಪೋವ[2]ರಾದ ಕಾರ್ಯವುಳ್ಳ ಪುರತ್ತಿರುತ್ತೊಂಡ[3]ರ ಕ್ರಮವನ್ನು ಇನ್ನುಮೇಲೆ ಹೇಳುವೆನು.

1030. ಅಯಿಲ್‌ಕೊಣ್ ಮುಕ್ಕುಟು ಮಿಪ್ಪಟೈ ಯಾರ್‌ಮರು ಙ್ಕರುಳಾಜಿನ್
ಪಯಿಲು ರುತ್ತಿರ ಪಚುಪತಿ ಯಾರ್‌ತಿಜಮ್ ಪರಚಿ
ಯೆಯಿಲು ಟೈತ್ತಿಲ್ಲೈ ಯೆಲ್ಲೈಯಿ ನಾಳೈಪ್ಪೋ ವಾರಾ
ಞಿಚ್ಚಿಯಲು ಟೈಪ್ಪುಜ ತ್ತಿರುತ್ತೊಣ್ಣರ್ ತಿಜತ್ತಿನೈ ಮೊಟಿವಾಮ್.

---

1. ತಿಲ್ಲೆ—ಚಿದಂಬರ. 2. ನಾಳೈ ಪೋವರ್—ನಾಳೆ ಹೋಗುವವರು. 3. ಪುರತಿರುತ್ತೊಂಡರು—ದೇಗುಲಕ್ಕೆ ಹೋಗದೆ ಹೊರಗೇ ಇದ್ದು ದರ್ಶಿಸಿದ ಭಕ್ತರು.

18. ತಿರುನಾಳೈಪ್ಪೋವಾರ್ ನಾಯನಾರ

1031. ಪ್ರಸಿದ್ಧವಾದ ತಣ್ಣೀರುಳ್ಳ ಕೊಳ್ಳಿಡಂ ಎಂಬ ನದಿಯು ಚಿನ್ನದ ಹುಡಿಗಳನ್ನೂ ಒಳ್ಳೆಯ ರತ್ನಗಳನ್ನೂ ಅಲೆಗಳೆಂಬ ಕೈಗಳಿಂದ ನೂಗೆದು ತರಲು, ಎರಡು ಪಕ್ಕಗಳಲ್ಲೂ ಇರುವ ತಾವರೆ ಮಲರುಗಳೆಂಬ ಕೈಗಳಿಂದ ಅವುಗಳನ್ನು ಸ್ವೀಕರಿಸಿ ಕೊಳ್ಳುವ, ವಿಸ್ತಾರವಾದ ಗದ್ದೆಗಳುಳ್ಳ ಸಂಪತ್ತನ್ನು ತರುವ ನೀರನಾಡಿನ[1] ಮೇಲ್ನಾ ನಾಡಿನಲ್ಲಿ ಉಳ್ಳುದು ಆದನೂರು ಎಂಬ ಊರು. ಲೋಕವು ಅದರ ಮಹಿಮೆಯನ್ನು ಎತ್ತಿ ಹೇಳಿ ಸ್ತುತಿಸುವ ಪಳಮೆಯೂ ಸಂಪತ್ತೂ ಉಳ್ಳ ಊರು ಅದು.

1032. ವಿಭೂತಿಯ ಹಿರಿದಾದ ಪ್ರಕಾಶವು ತುಂಬಿ ಶೋಭಿಸುವ ಆ ಊರಲ್ಲಿ ತುಂಬಿರುವ ಕಬ್ಬಿನ ರಸವು ಹರಿದು ತೆರೆಯಂತೆ ಹೊಡೆಯುವ ಹುಣಿಗಳುಳ್ಳ ಗದ್ದೆಗಳಲ್ಲಿ, ತಗಡಿನಂತಿರುವ ವರಾಲ್ ಮೀನುಗಳು ಎದ್ದು ಹಾರುವಂತೆ ಕೋಣಗಳನ್ನು ಹೂಡಿದ ನೇಗಿಲು ಹೋಗುವ ದಾರಿಯಲ್ಲಿ, ನೇಗಿಲಿನ ಬಲವಾದ ಕಬ್ಬಿಣದ ಮೊನೆಯಿಂದ ಸೀಳಲ್ಪಟ್ಟ ಸಾಲಿನಲ್ಲಿ, ಮೆಲ್ಲ ಅಲ್ಲಾಡಿ, ಮೇಲೆ ಬಂದು, ಕೆಸರಿನಲ್ಲಿ ಬಾಳುವ ಏಡಿಗಳು ಮರಿಗಳನ್ನು ಹೆರುವುವು. ಅಲ್ಲಿ ಶ್ಲಾಘ್ಯವಾದ ಕಮಲಗಳು ಸುವಾಸನೆಯನ್ನು ಬೀರುವುವು.

---

18. ತಿರುನಾಳೈಪ್ಪೋವಾರ್ ನಾಯನಾರ್

1031. ಪಕರ್ನ್ತುಲಕು ಚೀರ್ಪೋಱ್ಱುಮ್ ಪಟಿಕೈಯವಳಮ್ ಪತಿಯಾಕು
ನ್ತಿಕಟ್ನ್ತುಪುನಱ್ ಕೊಳ್ಳಿಟಮ್ಪೊನ್ ಚೆಟುಮಣಿಕ ಟಿರೈಕ್ಕರತ್ತಾನ್
ಮುಕನ್ತುತರ ಇರುಮರುಙ್ಕು ಮುಳರಿಮಲರ್ ಕೈಯೇಱ್ಱುಮ್
ಅಕನ್ಪಣೈನೀರ್ ನನ್ನಾಟ್ಟು ಮೇಱ್ಕಾನಾ ಟಾತನೂರ್.

1032. ನೀಱ್ಱಲರ್ಪೇ ರೊಳಿನೆರುಙ್ಕು ಮಪ್ಪತಿಯಿ ನಿಟಿಕೈಕರುಮ್ಪಿನ್
ಚಾಱ್ಱಲೈವನ್ ಕುಲೈವಯಲಿ ಱ್ಱಕಟ್ಟುವರಾ ಲೆಟಪ್ಪಕಟ್ಟೇರ್
ಆಱ್ಱಲವನ್ ಕೊಟುಕ್ಕಿಟಿತ್ತ ಚಾಲ್ವಟಿಪೋ ಯಚೈನ್ತೇಱಿ
ಚ್ಚೇಱ್ಱಲವನ್ ಕರುವುಯಿರ್ಕ್ಕ ಮುರುಕುಯಿರ್ಕ್ಕು ಇಟ್ಟಿಟುಙ್ಕಮಲಮ್.

---

1. ನೀರನಾಡು—ಚೋಳನಾಡು.

1033. ಮೊಗ್ಗುಗಳು ತುಂಬಿದ ಗೆಲ್ಲುಗಳು ದಟ್ಟವಾಗಿ ಹೆಚ್ಚಾದ ಪರಿಮಳ ವನ್ನು ಪಸರಿಸಲು ಬಹುವಾದ ತಳಿರುಗಳಿಂದ ದಿನಕರ ಮಂಡಲವನ್ನು ಸವರುವಂತಿರುವ ಬಲವಾದ ಒಳ್ಳೆಯ ಮರಗಳ ಕೂಟವು ಹೆಚ್ಚಾಗಿ, ಮೇಘಗಳು ಆ ಮರಗಳಲ್ಲಿ ತಂಗಿ ಅವು ಅಲ್ಲಾಡುವುದರಿಂದ, ತುಂಬಿಗಳು ಪಕ್ಕಗಳಲ್ಲಿ ಮುಸುರಲು, ನಿಜವಾದ ಮಳೆಯೂ ಮಧು ಮಳೆಯೂ ಒಂದರ ಹಿಂದೊಂದು ಆ ಹೂವಿನ ತೋಟಗಳಲ್ಲಿ ಸುರಿದುಕೊಂಡೇ ಇರುವುವು.

1034. ತೆಂಗಿನ ಎಳೆಹಾಳೆಗಳು ಬಿರಿದು ಸುವಾಸನೆಯನ್ನು ಬೀರುವುವು. ಹಸು ರಾದ ಕಾಯಿಗಳನ್ನುಳ್ಳ ಬಲವಾದ ಕೊಲೆಗಳನ್ನು ಕೊಂಡಿರುವ ತೆಂಗಿನ ಮರಗಳ ಕೆಳ ಭಾಗದಲ್ಲಿ ಮರವು ಅಲ್ಲಾಡುವಂತೆ ಅದನ್ನು ತಾಗಿ, ದೊಡ್ಡ ನೀರ ಹಳ್ಳಗಳಿಂದ ಮೇಲೆದ್ದು ಹಾರಿದ ಬಾಳೆ ಮೀನುಗಳು, ತಾವು ತಿರುಗಿ ಕೆಳಗೆ ನೀರಿನಲ್ಲಿ ಬೀಳುವಾಗ ಒಡನೆಯೇ ಕೆಳಗೆ ಬಿದ್ದ ತೆಂಗಿನಕಾಯಿಗಳು ಕೊಬ್ಬಿ ಬೆಳೆದ ಹಲಸಿನ ಮರಗಳ ಬೆಳೆದ ಹಣ್ಣುಗಳಿಗೆ ತಾಗಿ ಅವು ಬಿರಿದು ಅವುಗಳಿಂದ ಹೊರಬರುವ ಮಧುರಸದ ಪ್ರವಾಹದಲ್ಲಿ ಆ ಬಾಳೆ ಮೀನುಗಳು ಎದ್ದು ಹಾರುವುವು.

1035. ಗದ್ದೆಗಳಿಂದ ಸಿಗುವ ಸಂಪತ್ತುಗಳೂ, ದೇಹಶ್ರಮದ ಕೆಲಸದಿಂದ ಬೆಳೆ ಯುವ ಹಸುರಾದ ತರಕಾರಿ ತೋಟಗಳಿಂದ ಬರುವ ಸಂಪತ್ತುಗಳೂ ಇರುವ ವಿಶಾಲವಾದ ಪ್ರದೇಶಗಳು ಎಲ್ಲೆಲ್ಲೂ ತೋರಿಬರಲು, ಅವುಗಳಿಂದ ಹೆಚ್ಚಾದ ಭಾಗ್ಯಗಳನ್ನೊಳಕೊಂಡ, ಮೇಘವನ್ನು ಮುಟ್ಟುವಂತೆ ಎತ್ತರವಾದ ಅಸಂಖ್ಯಾತ ಮಾಳಿಗೆಗಳು ಶೋಭಿಸಲು, ಪಕ್ಕದೆಡೆಗಳಲ್ಲಿ ದಟ್ಟವಾಗಿ ಇನ್ನೂ ಮನೆಗಳು ಹೆಚ್ಚುತ್ತಿರುವಂತೆ, ಒತ್ತೊತ್ತಾದ ವಸತಿ ಗಳಿಂದ ಕೂಡಿದುದು ಆ ಆದನೂರು.

1033. ನನೈಮರುವು ಇಟ್ಟಿನೈಪ್ಪೊತುಳಿ ನಱುವಿರೈ ಚೂಟ್ ಚೆಱಿತಳಿರಿ
ಞಾನಕರಮು ಣ್ಡಲವ್‌ವರುಟು ಇಟ್ಟಿಯಿನ್ತ್ರುವಿನ್ ಕುಲವ್ಪೆರುಕಿ
ಕ್ಕನಮರುವಿ ಯಚ್ಚೈನ್ತ್ರಲೈಯ ಕ್ಕಳಿವಣ್ಟು ಪುಟೈಚೂಟಿ
ಪ್ಪುನನ್‌ಮಟೈಯೋ ಮತುಮಟೈಯೋ ಪೊಟೀವೊಟೀಯಾ ಪೂಞ್ಚೋಲೈ.

1034. ಪಾಳೈವಿರಿ ಮಣಜ್ಞಮಟುಮ್ ಪೈಙ್ಕಾಯ್ವನ್ ಕುಲೈತ್ತೆಙ್ಕಿನ್
ಙಾಳತಿರ ಮಿಚ್ಚೈಮುಟ್ಟೆ ತ್ತಟಙ್ಕಿಟಙ್ಕಿ ನೆಟಿಪ್ಪಾಯ್‌ನ್ತ
ವಾಳೈಪುತ್ತೈ ಯಚ್ಚೊರಿನ್ತ ಪಟಿಮಿತಪ್ಪ ವಣ್‌ಪಲವಿ
ನೀಳಮುತಿರ್ ಕನಿಕಿಟೀತೇ ನೀತ್ತತ್ತಿ ನೆಟುನ್ತುಕಳುಮ್.

1035. ವಯಲ್‌ವಳಮು ಇಟ್ಟಿಯಲ್‌ಪಟುಪ್ಪೈ ನ್ತುಟವ್ವೈಯಿಟ್ಟೈ ವರುವಳಮುಮ್
ವಿಯಲಿಟಮೆ ಙ್ಕಣುನಿಱೈಯ ಮಿಕ್ಕಪೆರು ನ್ತಿರುವಿನವಾಮ್
ಪುಯಲಟೈಯು ಮಾಟಙ್ಕಳ್ ಪೊಲಿವೆಯ್ತು ವಲಿವುಟೈತ್ತಾ
ಯಯಲಿಟೈವೇ ಱಿಟನೆರುಙ್ಕ ಕ್ಕುಟಿನೆರುಙ್ಕಿ ಯುಳತವ್ವೂರ್.

1036. ಆ ಊರಿನ ಹೊರಭಾಗದಲ್ಲಿ ಮರುದ ನೆಲವನ್ನು ಸೇರಿದ ಗದ್ದೆಗಳ ಪಕ್ಕದಲ್ಲುಳ್ಳ, ಹುಣಿಗಳ ಬದಿಯಲ್ಲಿ, ಬಂಧುಗಳೊಡನೆ ಕೂಡಿ ಆಶಿಸುವ ಕೃಷಿಯನ್ನು ಮಾಡುವ ಹಕ್ಕುಬಾಧ್ಯತೆಯುಳ್ಳ, ಪಳ್ಳರ[1] ಸಂತತಿಗಳು ಹೆಚ್ಚಿ, ಹಸುರಾದ ಸೋರೆಯ ಬಳ್ಳಿಗಳು ಹಿಡಕೊಂಡು ಮೇಲೆ ಹಬ್ಬಿದ ಹಳೆಯ ಮಾಡುಗಳುಳ್ಳ, ಹುಲ್ಲಿನಿಂದ ಹೊದೆಯಲ್ಪಟ್ಟ ಅವರ ಸಣ್ಣ ಮನೆಗಳು ಹಲವು ತುಂಬಿರುವ ಒಂದು ಹೊಲೆಯರ ಪಾಡಿ ಇದೆ.

1037. ಕೂರಾದ ಉಗುರುಗಳನ್ನೂ ಮೃದುವಾದ ಪಾದಗಳನ್ನೂ ಉಳ್ಳ ಹೆಣ್ಣುಕೋಳಿಗಳ ಸಣ್ಣ ಮರಿಗಳ ಕೂಟಗಳು ಸುತ್ತಿ ತಿರುಗುತ್ತವೆ. ಅವುಗಳೊಡನೆ, ಇದಿರುಭಾಗದಲ್ಲಿ ಚರ್ಮದ ಬಾರುಗಳು ಹಾಕಿರುವ, ಬಾಗಿದ ಉಗುರುಗಳುಳ್ಳ ನಾಯಿಗಳ ಎಳೆಮರಿಗಳು ಓಡಾಡುತ್ತವೆ. ಕರಿದಾದ ಕಬ್ಬಿಣದ ಬಳೆಗಳನ್ನು ದಟ್ಟವಾಗಿ ಅಲಂಕರಿಸಿ ಕೊಂಡ ಕರಿಯ ಬಾಲಕರು ನಾಯಿಮರಿಗಳನ್ನು ಕದ್ದು ಓಡಲು ಅವು ಎಡೆಬಿಡದೆ ಬಗಳುವ ಮೃದುವಾದ ಸಣ್ಣಧ್ವನಿಯನ್ನು ಆ ಬಾಲಕರ ಸೊಂಟದಲ್ಲಿ ಕಟ್ಟಿದ ಕಬ್ಬಿಣದ ಗೆಜ್ಜೆಯ ಶಬ್ದಗಳು ಅಡಗಿಸುವುವು.

1036. ಮಞ್ಞವೂರ್ ಪ್ಪುಱವಮ್‌ಪಣೈಯಿನ್ ವಯಲ್‌ಮರುಙ್ಕು ಪೆರುಙ್ಕುಲೈಯಿಡೈಚ್
ಚುಱ್ಱಮ್‌ವಿರು ಮ್ಪಿಯಕಿಡೈಮೈ ತ್ತೊಡಿಲುಡೈವರ್ ಕಿಳೈತುವನ್ಱಿ,
ಪ್ಪಱ್ಱಿಯಪ್ಪೈ ಙ್ಕೊಡಿಚ್ಚುರೈಮೇಲ್ ಪಡರ್‌ನ್ತಪಡಿ ಙ್ಕೂರೈಯುಟ್ಟೈ
ಪ್ಪುಱ್ಕುರವಮ್ಪೈ ಚ್ಚಿಱ್ಱಿಲ್‌ಪಲ ನಿಲೈತ್ತುಳತೋರ್ ಪುಲೈಪ್ಪಾಡಿ.

1037. ಕೂರುಕಿರ್‌ಮೆ ಲ್ಲಡಿಯಳಕಿನ್ ಕುಱುಮ್ಪಾರ್‌ಪ್ಪು ಕ್ಕುಡಮ್ಚುಟ್ಟಿಲುವಮ್
ವಾರ್‌ಪಯಿಱ್‌ಮುನ್ ಱಿಲಿನಿನ್ಱ ವಳ್ಳುಕಿರ್‌ನಾಯ್ ತ್ತುಳ್ಳುಪಱಿಟ್
ಕಾರಿರುಮ್ಪಿನ್ ಚರಿಚೆಱಿಕ್ಕೈ ಕ್ಕರುಙ್ಚಿಱಾರ್ ಕವರ್‌ನ್ತೋಡ
ವಾರ್‌ಚಿಱುಮೆನ್ ಕುರೈಪ್ಪಡಕ್ಕು ಮರೈಕ್ಕಚ್ಚೈತ್ತ ವಿರುಪ್ಪುಮಣಿ,

1. ಪಳ್ಳರು—ಆದಿದ್ರಾವಿಡರ ಒಂದು ವಿಭಾಗ.

1038. ಬಲವಾದ ಸಣ್ಣ ಪುಟ್ಟ ಚರ್ಮಗಳ ಮೇಲೆ ಹೊಲೆಯರ ಮಕ್ಕಳನ್ನು ಹೊಲತಿಯರು ನಿದ್ರಿಸಿಡುವ ನೆಳಲುಳ್ಳ ಮರುದ ಮರಗಳಿವೆ. ತನ್ನ ಮೊಟ್ಟೆಗಳನ್ನು ಕಾವುಗೊಳಿಸುವ ಹೆಣ್ಣು ಕೋಳಿಗಳು ಇರುವುದಕ್ಕೆ ಎಡೆಯಾದ ದೊಡ್ಡ ಮಣ್ಣಿನ ಪಾತ್ರೆಗಳು ಮಣ್ಣಿನಲ್ಲಿ ಹೊದೆದಿಡಲ್ಪಟ್ಟಿವೆ. ಅವುಗಳಿಗೆ ನೆಳಲನ್ನು ತರುವುದು ಮೃದುವಾದ ಗೆಲ್ಲುಗಳುಳ್ಳ ವಂಜಿಮರಗಳು. ಇವುಗಳನ್ನೂ, ಬಾರುಕಟ್ಟೆದ ಪಱೆಗಳನ್ನು ತೂಗಾಡಿಸಿಟ್ಟ ಮಾಮರಗಳನ್ನೂ, ಸಣ್ಣ ತಲೆಗಳುಳ್ಳ ನಾಯಿಮರಿಗಳು ತಂಗುವುದಕ್ಕೆಡೆಯಾದ ಕೆಳಪೊಟರೆಗಳುಳ್ಳ ತೆಂಗಿನ ಮರಗಳನ್ನೂ ಆ ಹೊಲೆಯರ ಪಾಡಿಯು ಎಲ್ಲೆಡೆಗಳಲ್ಲಿಯೂ ಒಳಕೊಂಡಿರುವುದು.

1039. ಮಿಕ್ಕ ಬಲುಮೆಯುಳ್ಳ ಆ ಪಳ್ಳರು ಕೃಷಿಕಾರ್ಯಗಳನ್ನು ಮಾಡಲು ಆರಂಭಿಸತಕ್ಕ ಕಾಲವಾದ, ಅರುಣೋದಯದ ಕಾಲವನ್ನು ಅಳೆದು ತೋರಿಸಿ, ಅವರನ್ನು ಉದ್ಯೋಗದಲ್ಲಿ ತೊಡಗಿಸುವುದಕ್ಕೆ ಕೂಗುವ, ಕೆಂಪಗಾದ ತಲೆಯ ಜುಟ್ಟುಳ್ಳ ಹುಂಜಗಳು ತಂಗುವುದಕ್ಕೆಡೆಯಾದ, ಸುವಾಸನಾಯುಕ್ತವಾದ ಶೀತಲವಾದ ಗೆಲ್ಲುಗಳುಳ್ಳ ಕಾಂಚಿ ಮರದ ವಿಶಾಲವಾದ ನೆಳಲ ಪಕ್ಕಗಳಲ್ಲೆಲ್ಲಾ, ದಟ್ಟವಾದ ಕೂದಲುಗಳುಳ್ಳ, ಚಿಕ್ಕ ಹೊಲತಿಯರು ಬತ್ತಕುಟ್ಟುವ ಹಾಡಿನ ಶಬ್ದವು ಆ ಪಾಡಿಯಲ್ಲಿ ಹೆಚ್ಚಾಗಿ ಪಸರಿಸಿರುವುದು.

1040. ತಟಾಕಗಳ ಪಕ್ಕಗಳಲ್ಲೆಲ್ಲಾ ಹಕ್ಕಿಗಳು ಶೀತಲವಾದ ನೀರಿನಲ್ಲಿ ಶಬ್ದಿಸುವುವು. ಅಲ್ಲಾಡಿ ಹೋಗುವ ಕಾಲಿನ ನಡೆಯುವಿಕೆಯ ಚಲನೆಯಿಂದ ಮೊಗ್ಗು ಬಿಟ್ಟು ಅರಳುವ ಜೇನನ್ನು ಸುರಿಸುವುದಕ್ಕೆಡೆಯಾದ ಕುವಲಯುಗಳೊಡನೆ ಹಸಿಯಾದ ತಲೆ ಕೂದಲಲ್ಲಿ ಬತ್ತದ ಕದಿರುಗಳನ್ನಿಟ್ಟುಕೊಂಡ, ಎಳೆ ಹೊಲತಿಯರು ಕಳ್ಳನ್ನು ಕುಡಿದು ಕುಣಿದಾಡಲು, ಅದಕ್ಕೆ ಹೊಂದಿಕೆಯಾಗಿ ಮೊಳಗುವ ಪರೆಗಳೂ ಶಬ್ದಿಸುವುವು.

1038. ವನ್‌ಚಿಱುತೋಲ್ ಮಿಚೈಯುೞತ್ತಿ ಮಕವುಱಕ್ಕು ನಿೞಲ್‌ಮರುತುಮ್,
ತನ್‌ಚಿನೈಮೆನ್ ಪೆಟೈಯೊಟುಙ್ಕು ನ್ತಟಙ್ಕುೞಿಚಿ ಪ್ಪುತೈನೀೞಲ್
ಮೆನ್‌ಚಿನೈಯ ವಞ್ಚಿಕಳುಮ್, ವಿಚಿಪ್ಪಱೈತ್ತೂ ಙ್ಕಿಯಮಾವುಮ್,
ಪುನ್‌ಱಲೈನಾಯ್ ಪ್ಪುನಿಱ್ಱುಮುೞೈ ಪ್ಪುಟೈತ್ತೆಙ್ಕು ಮುಟೈತ್ತೆಙ್ಕುಮ್.

1039. ಚೆಱಿವಲಿತ್ತಿಣ್ ಕಟೈಞರ್‌ವಿನೈ ಚ್ಚೆಯಲ್‌ಪುರಿವೈ ಕಱೈಯಾಮ
ಕ್ಕುಱಿಯಳಕ್ಕ ವೞೈಕ್ಕುಞ್ಚೂ ಟ್ಟುಟುಮಿಪ್ಪಾ ರಣಚ್ಚೇಕ್ಕೈಕಲ
ವೆಱಿಮಲರ್‌ತ್ತಣ್ ಚಿನೈಕ್ಕಾಞ್ಚಿ ವಿರಿನೀೞಲ್ ಮರುಙ್ಕೆಲ್ಲಾಮ್
ನೆಱಿಕ್ಕುೞಱ್ಪುನ್ ಪುಲೈಮಕಳಿರ್ ನೆಟುಙ್ಕುರಱ್ಪಾ ಟ್ಟೊಲಿಪರಕ್ಕುಮ್.

1040. ಪುಳ್ಳಿನ್ಱಣ್ ಪುನಱ್ಕುಲಿಕ್ಕುಮ್, ಪೊಯ್‌ಕೈಯುಟೈ ಪ್ಪುಟೈಯೆಙ್ಕು,
ನ್ತಳ್ಳುನಾ ಣಟೈಯಚ್ಚೈಯ ತ್ತಳೈಯವಿೞ್ಪೂ ಙ್ಕುವಳೈಮತು
ವಿಳ್ಳುಮ್‌ಪೈ ಙ್ಕುಟಙ್ಕತಿರ್‌ನೆಲ್ ಮಿಲೈಚ್ಚಿಯಪುನ್ ಪುಲೈಚ್ಚಿಯರ್‌ಕಳ್
ಕಳ್ಳುಣ್ಣು ಕಳಿತೂಙ್ಕ ಕ್ಕುಱಙ್ಕುಪಱೈ ಯುಙ್ಕಲಿಕ್ಕುಮ್.

1041. ಸತ್ಯವಾದ ಭಕ್ತಿಯನ್ನು ಶಿವಪರಮಾತ್ಮನ ಶ್ರೀಪಾದಗಳಲ್ಲಿ ಉಂಟಾಗಿಸಿ ವೃದ್ಧಿಹೊಂದುವಂತೆ ಮಾಡುವ ಪೂರ್ವಜನ್ಮವಾಸನೆಯೊಡನೆ ಈ ಲೋಕದಲ್ಲಿ ಬಂದವತರಿಸಿದವನಾಗಿ ನಂದನಾರ್ ಎಂಬ ಹೆಸರಿನ ಒಬ್ಬನು ಈ ರೀತಿಯಲ್ಲುಳ್ಳ ಹೊಲೆಯರ ಕೇರಿಯಲ್ಲಿ ಬಾಳುವವನಾದನು. ಅವನು ಆ ಊರಲ್ಲಿ ಊರ ಹೊಲೆಯರ ಮಾಂಸಕ್ಕೆ ಸಂಬಂಧಿಸಿದ ಕಸಬನ್ನು ಮಾಡಲು ಬಾಧ್ಯತೆಯುಳ್ಳವನು. ಈ ಉದ್ಯೋಗದಲ್ಲಿ ಅವನಿಗೆ ಬೇರೆ ಯಾರೂ ಸಮಾನರಿರಲಿಲ್ಲ.

1042. ಈ ಲೋಕದಲ್ಲಿ ಬಂದವತರಿಸಿ ತನಗೆ ತಿಳಿವು ಬರಲಾರಂಭಿಸಿದಂದಿನಿಂದ, ಬಾಲಚಂದ್ರನನ್ನು ಶಿರೋಭೂಷಣವಾಗಿ ಧರಿಸಿದ ಸುಂದರನಾದ ಶಿವಪರಮಾತ್ಮನಲ್ಲಿ ಶ್ರೇಷ್ಠವಾದ ಪೇರಾಸೆಯಿಂದ ಪರಿಪೂರ್ಣತೆಯನ್ನಾಶಿಸುವ ಚಿಂತನೆಯುಳ್ಳವನಾಗಿ, ಮರಹಿನಲ್ಲಾದರೂ ಬೇರೆ ನೆನಹೇ ಇಲ್ಲದವನಾಗಿ, ತಾನು ಹುಟ್ಟಿದ ವಂಶಕ್ಕೆ ತಕ್ಕುದಾದ ಶಿವಧರ್ಮಗಳನ್ನಾಚರಿಸುವ ಕಾರ್ಯವುಳ್ಳವನಾಗಿ, ಆತನು ಶಿವಪಾದಸೇವೆಯ ಮಾರ್ಗದಲ್ಲಿ ನೆಲೆಯಾಗಿ ನಿಂತನು.

1043. ಡೋಲು ಬಡಿಯುವ ಉದ್ಯೋಗಕ್ಕೆ ಊರಲ್ಲಿ ಬಿಡಲ್ಪಟ್ಟ ಮಾನ್ಯ ನೆಲದ ಆದಾಯವನ್ನು ತನ್ನ ಅಶನಕ್ಕೆ ಆಧಾರವಾಗಿಟ್ಟುಕೊಂಡು, ಜನ್ಮಸಂಬಂಧದಿಂದ ಬರುವ ಉದ್ಯೋಗವನ್ನೂ ಮಾಡಿಕೊಂಡು ಬರುವ ಆ ನಾಯನಾರನು ತನ್ನ ದಿವ್ಯ ಕೈಂಕರ್ಯದಲ್ಲಿ ನೆಲೆಯಾಗಿ ನಿಂತನು. ಎಲೆಯ ಆಕಾರದ ಹರಿತವಾದ ಮೂರು ತುದಿಗಳುಳ್ಳ ಶೂಲವನ್ನು ಧರಿಸಿದ ಸೇನೆಗಳನ್ನುಳ್ಳ ಶಿವಪರಮಾತ್ಮನ ದೇವಾಲಯಗಳಿಗೆಲ್ಲಾ ಭೇರಿ,

---

1041. ಇಪ್ಪಟಿತ್ತಾ ಕಿಯುಕಟ್ಟೈಙ್ ರಿರುಪ್ಪಿನ್ವರೈ ಪ್ಪಿನಿನ್ವಾಟ್ಟಾರ್;
ಮೆಯ್ಪ್ಪರಿವು ಚಿವನ್ಕಟಟಿಕ್ಕೀ ವಿಳೈತ್ತವುಣರ್ ವೊಟುವುವನ್ತಾರ್;
ಅಪ್ಪತಿಯಿ ಲೂರ್ಪ್ಪುಲೈಮೈ ಯಾನ್ಐತೊಟಿ ಞಾಯತ್ತಾರ್;
ಒಪ್ಪಿಲವರ್ ನನ್ತನಾ ರೆನವೊರುವ ರುಳರಾನಾರ್.

1042. ಪಿಜನ್ತುಣರ್ವು ತೊಟಙ್ಕಿಯಪಿನ್ ಪಿಜಿಕ್ಕೈಕ್ಕಣ್ಣಿ ಪ್ಪೆರುನ್ತಕೈಪಾಜ್
ಚಿಜನ್ತಪೆರು ಜ್ಞಾತಲಿನಾಜ್ ಚೆಮ್ಮೈಪುರಿ ಚಿನ್ತೈಯರಾಯ್
ಮಜನ್ತುಮಯು ನಿನೈವಿನ್ಜಿ ವರುಪ್ಪಿಜಪ್ಪಿನ್ ವಟಿವನ್ತ
ಅಜಮ್ಪುರಿಕೊಳ್ ಕೈಯರಾಯೇ ಯಟಿತ್ತೊಣ್ಟಿ ನೆಜಿನಿನ್ಜಾರ್.

1043. ಊರಿಲ್ವಿಟುಮ್ ಪಜಿಕ್ಕೈತ್ತುಟವ್ವೈ ಯುಣವುರಿಮ್ಮೈ ಯಾಕ್ಕೊಣ್ಟು
ಚಾರ್ಪಿಲ್ವರು ನ್ತೊಟಿಲ್ಚೆಯ್ವಾರ್ ತಲೈನಿನ್ಜಾರ್ ತೊಣ್ಟಿನಾಲ್,
ಕೂರಿಲೈಯ ಮುಕ್ಕುಟುಮಿ ಪ್ಪಟೈಯಣ್ಣಲ್ ಕೋಯಿಜಿಕೊಜುಮ್
ಪೇರಿಕೈಯೋ ಮುತಲಾಯ ಮುಕಕ್ಕರುವಿ ಪಿಜವಿನುಕ್ಕುಮ್,

1044. ಮೃದಂಗ ಮೊದಲಾದವುಗಳ ಮುಖಗಳನ್ನು ಮುಚ್ಚುವ ಚರ್ಮ, ಕಟ್ಟುವ ಚರ್ಮದ ಬಾರು, ಇವುಗಳಂತೆಯೇ ಇರುವ ಇತರ ಸಾಧನಗಳು, ಸಂಗೀತವನ್ನು ನುಡಿಸತಕ್ಕ ವೀಣೆಗೂ ಯಾಟ್‌ವಾದ್ಯಕ್ಕೂ ಹೊಂದುವ ತಂತ್ರಿಗಳು, ಶಿವಪರಮಾತ್ಮನ ಅರ್ಚನೆಗೆ ಬೇಕಾದ ಗೋರೋಚನವೇ ಮೊದಲಾದ ವಸ್ತುಗಳು – ಇವನ್ನೆಲ್ಲಾ ಆತನು ಭಕ್ತರುಗಳಿಗೆ ಕೊಟ್ಟುಕೊಂಡಿದ್ದನು.

1045. ಈ ರೀತಿ ತನ್ನ ಉದ್ಯೋಗದಲ್ಲಿ ತಕ್ಕ ಪ್ರಮಾಣದಲ್ಲಿ ಎಲ್ಲವನ್ನೂ ಎಲ್ಲೆಡೆಗಳಲ್ಲೂ ಮಾಡುವುದರೊಡನೆ ಆತನು ದೇವಾಲಯದ ಮಹಾದ್ವಾರದಲ್ಲಿ ನಿಂತು, ಸತ್ಯವಾದ ಹಿರಿದಾದ ಭಕ್ತಿಯ ಹೆಚ್ಚಳದಿಂದ ಕುಣಿಯುತ್ತಿದ್ದನು. ಅಂತಹ ದಿವಸದಲ್ಲಿ,

1046. ತಿರುಪ್ಪುಂಗೂರಲ್ಲಿ ಅನುಗ್ರಹಿಸಿರುವ ಶಿವಲೋಕನಾಥನ ಕೆಂಪಗಾದ ಶ್ರೀಪಾದಗಳನ್ನು ಬಹುವಾಗಿ ನೆನೆದು ಆಸೆಯೊಡನೆ ತಾನು ಆಶಿಸಿದ ಕೈಂಕರ್ಯಗಳನ್ನು ಮಾಡುವ ಉದ್ದೇಶದಿಂದ ತದೇಕಚಿತ್ತನಾಗಿ, ಆತನು ಆದನೂರಿನಿಂದ ಹೊರಟು ಮಿಕ್ಕ ವ್ಯಸನವುಳ್ಳ ಭಕ್ತಿಯಿಂದ ಆ ಸ್ಥಳದ ಸಮೀಪವನ್ನು ಬಂದು ಸೇರಿದನು.

1044. ಪೋರ್ವೈತ್ತೋಲ್ ವಿಚಿವಾರಿನ್ ಅನ್ನೈಯನವುಮ್, ಪುಕಲುಮಿಚ್ಚೈ
ನೇರ್ವೈತ್ತ ವೀಣೈಕ್ಕುಮ್ ಯಾಟುಕ್ಕು ನಿಲೈವಕ್ಕೈಯಿಲ್
ಚೇರ್ವುಱ್ಱ ತನ್ತ್ರಿಯುಂ, ತ್ತೇವರ್‌ಪಿರಾ ನರ್ಚ್ಚನೈಕಟ್
ಕಾರ್ವತ್ತಿ ನುಟನ್‌ಕೋರೋ ಚನೈಯುಮಿವೈ ಯಳಿತ್ತುಳ್ಳಾರ್.

1045. ಇವ್ವಕೈಯಾ ಱನ್ತೊಟಿಲಿ ನಿಯನ್‌ಱವೆಲಾ ಮೆವ್ವಿಟತ್ತುಙ್
ಚೆಯ್ವನವುಙ್, ಕೋಯಿಲ್‌ಕಳಿ ಱಿರುವಾಯಿಙ್ ಪುಱನಿನ್‌ಱು
ಮೆಯ್ವ್ವಿರವು ಪೇರನ್ಪು ಮಿಕುತಿಯಿನಾ ಲಾಟುತಲುಮ್,
ಅವ್ವಿಯಲ್‌ಪಿಙ್ ಪಾಟುತಲು ಮಾಯ್‌ನಿಕಟ್‌ವಾ ರನ್ನಾಳಿಲ್,

1046. ತಿರುಪ್ಪುನ್‌ಕೂರ್ ಚ್ಚಿವಲೋಕನ್ ಚೇವಟಿಕಣ್ ಮಿಕನಿನೈನ್ತು
ವಿರುಪ್ಪಿನೊಟು ನ್ತಮ್ಪಣಿಕಳ್ ವೇಣ್ಟುವನ ಚೆಯ್ವತಱ್ಕೇ
ಯರುತ್ತಿಯಿನಾ ಲೊರುಪ್ಪಟ್ಟ ಙ್ಙಾತನೂರ್ ತನಿನಿನ್‌ಱುಮ್
ವರುತ್ತಮುಱು ಙ್ಙಾತಲಿನಾಲ್ ವನ್ತಣೂರ್ ಮರುಙ್ಙಣೈನ್ತಾರ್.

1047. ಸ್ತೋತ್ರರೂಪವಾದ ಸಂಗೀತವನ್ನು ಹಾಡಿ ದೇವಾಲಯದ ಮಹಾದ್ವಾರದಲ್ಲಿ ನಿಂತುಕೊಂಡು ಪರಮಾತ್ಮನನ್ನು ಕಂಡು ಕುಂಬಿಡಬೇಕೆಂದು[1] ನೆನೆದ ನಂದನಾರನಿಗೆ ಅದೇ ರೀತಿ ಅನುಗ್ರಹಿಸುವವನಾಗಿ, ಮೇಘಗಳು ಏರಿ ಚಲಿಸುವ ಪ್ರಾಕಾರಗಳಿಂದ ಸುತ್ತುವರಿದ ತಿರುಪ್ಪುಂಗೂರಿನ ಶಿವಲೋಕನಾಥನು ತನ್ನ ಮುಂದೆ ಇರುವ, ಯುದ್ಧದಲ್ಲಿ ಪರಾಕ್ರಮವುಳ್ಳ ವೃಷಭವನ್ನು ಸರಿದು ಇರುವಂತೆ ಆಜ್ಞಾಪಿಸಿ, ತನ್ನನ್ನು ನಂದನಾರನಿಗೆ ನೇರವಾಗಿ ದರ್ಶಿಸುವಂತೆ ಮಾಡಿ ಅನುಗ್ರಹಿಸಿದನು.

1048. ಶಿವಲೋಕನಾಥನ ದೇವಾಲಯದ ಮಹಾದ್ವಾರದ ಮುಂದೆ ನಿಂತುಕೊಂಡು ಲೋಕದಲ್ಲಿ ಭವವನ್ನು ದಾಟಿಸುವ ಶಿವಮಾರ್ಗದಲ್ಲಿ ನಿಂತವನಾದ ನಂದನಾರನು, ಈಶ್ವರನನ್ನು ನಮಸ್ಕರಿಸುವ ಸೇವೆಯನ್ನು ಮುಗಿಸಿಕೊಂಡು, ನಮಿಸಿ ಎದ್ದು, ಬೆನ್ನಿನಲ್ಲಿ ಚರ್ಮದ ಬಾರುಗಳು ಅಲೆಯುತ್ತಿರಲು, ಹೋಗುತ್ತಾ ಆ ದೇಗುಲದ ಹಿಂಬದಿಯ ಸಮೀಪದಲ್ಲಿ ಒಂದು ಹಳ್ಳವಿರುವುದನ್ನು ನೋಡಿ, ಆಸಕ್ತಿಯಿಂದ ಅದನ್ನು ಕೊಳವಾಗಿ ಅಗೆದನು.

1049. ಚಿನ್ನದ ಬಣ್ಣವುಳ್ಳ ಸಾಲಾಗಿ ಅರಳಿದ ಕರ್ಣಿಕಾರಪುಷ್ಪವನ್ನು ತಲೆಯಲ್ಲಿ ಅಲಂಕರಿಸಿಕೊಂಡಿರುವ ಸುಂದರವಾದ ಶ್ರೀಮುಡಿಯನ್ನುಳ್ಳ ಶಿವಪರಮಾತ್ಮನ ದಿವ್ಯಾನುಗ್ರಹದಿಂದ, ವಿಶಾಲವಾದ ಕೊಳಕ್ಕೆ ತಕ್ಕ ಪ್ರಮಾಣದಲ್ಲಿ ಆ ಹಳ್ಳವನ್ನು ಅಗೆದ ಮೇಲೆ, ತನ್ನ ಪರಮಾತ್ಮನು ಇದ್ದನುಗ್ರಹಿಸಿದ ದೇವಾಲಯದ ಹೊರಭಾಗದಿಂದಲೇ ಪ್ರದಕ್ಷಿಣವಾಗಿ ಬಂದು, ನಮಿಸಿ ಎದ್ದು, ಆನಂದದಿಂದ ನಟನವಾಡಿ, ಪರಮಾತ್ಮನ ಅನುಮತಿಯನ್ನು ಪಡೆದುಕೊಂಡು ತನ್ನ ಊರಿಗೆ ಬಂದು ಸೇರಿದನು.

1047. ಚೀರೇಱು ಮಿಜ್ಕೈಪಾಟಿ ತ್ತಿರುತ್ತೋಣ್ಣರ್ ತಿರುವಾಯಿಲ್
ನೇರೇಕುಪುಟ್ ಪಿಟವೇಣ್ಣು ಮೆನನಿನೈನ್ತಾರ್ ಕ್ಕತುನೇರ್ವಾರ್
ಕಾರೇಱು ಮೆಯಿಱ್ಪುನ್‌ಕೂರ್ ಕ್ಕಣ್ಣುತಲಾರ್ ತಿರುಮುನ್‌ಪು
ಪೋರೇಱ್ಱೈ ವಿಲಙ್ಕವರುಳ್ ಪುರಿನ್ತರುಳಿ ಪ್ಪುಲಪ್ಪಟುತ್ತಾರ್.

1048. ಶಿವಲೋಕ ಮುಟ್ಟೈಯವರ್‌ತ ನ್ತಿರುವಾಯಿಲ್ ಮುನ್‌ನಿನ್‌ಱು
ಪವಲೋಕ ಙ್ಕಟಪ್ಪವರ್‌ತಮ್ ಪಣಿವಿಟ್ಟು ಪ್ಪಣಿನ್ತೆಟುನ್ತು
ಚುವಲೋಟು ವಾರಲೈಯ ಪ್ಪೋವಾರ್‌ಪಿನ್ ಪೊರುಚಲೊಟಿಲ್
ಅವಲೋಟು ಮಟುತ್ತತುಕ ಣ್ಟಾತರಿತ್ತು ಕ್ಕುಳನ್ತೊಟ್ಟಾರ್.

1049. ವಟಙ್ಕೊಣ್ಟ ಪೊನ್‌ನಿತಟಿ ಮಣಿಮುಟಿಯಾರ್ ತಿರುವರುಳಾ
ಱ್ಱಟಙ್ಕೊಣ್ಟ ಕುಳತ್ತಳವು ಚಮೈತ್ತತಱ್ಪಿನ್, ಱಮ್ಪೆರುಮಾನ್
ಇಟಙ್ಕೊಣ್ಟ ಕೋಯಿಲ್‌ಪುಱಮ್ ವಲಙ್ಕೊಣ್ಟು, ಪಣಿನ್ತೆಟುನ್ತು,
ನಟಙ್ಕೊಣ್ಟು, ವಿಟೈಕೊಣ್ಟು, ತಮ್ಪತಿಯಿ ನಣ್ಣಿನಾರ್.

---

1. ಕುಂಬಿಡಬೇಕೆಂದು - ನಮಸ್ಕರಿಸಬೇಕೆಂದು.

1050. ಈಶ್ವರನು ಸಂತೋಷದಿಂದ ಇದ್ದು ಅನುಗ್ರಹಿಸಿರುವ ಹಲವು ಸ್ಥಳಗಳನ್ನು ಈ ರೀತಿಯಾಗಿ ಹೋಗಿ ನಮಿಸಿ, ಸತ್ಯವಾದ ದಿವ್ಯಕೈಂಕರ್ಯವನ್ನು ಮಾಡಿ ಬಾಳುತ್ತಿರುವ ನಂದನಾರನಿಗೆ, ಪ್ರೀತಿಯು ಮೇಲೆ ಮೇಲೆ ಹೆಚ್ಚುವ ಚಿತ್ತದೊಡನೆ ತಿಲ್ಲೆಯ ತಿರುವಂಬಲ[1]ವನ್ನು ಸೇರಿ ನಮಿಸಬೇಕೆಂದು ಅತಿಶಯವಾದ ಆಶೆಯು ಮನಸ್ಸಿನಲ್ಲಿ ತುಂಬಿ ಬಂತು.

1051. ಅವನು ಆ ರಾತ್ರಿಯಲ್ಲಿ ನಿದ್ದೆಯೇ ಮಾಡದವನಾದನು. ಸೂರ್ಯೋದಯವಾದ ಮೇಲೆ 'ಆ ದಿವ್ಯಸ್ಥಳಕ್ಕೆ ಹೋಗುವುದು ನನ್ನ ಕುಲಕ್ಕೆ ತಕ್ಕುದಾಗಿಲ್ಲ' ಎಂದು ನೆನೆದವನಾಗಿ, 'ಈ ಎಣಿಕೆಯೂ ನನ್ನ ಪರಮಾತ್ಮನ ಆಜ್ಞೆಯೇ' ಎಂದು ಅಲ್ಲಿಗೆ ಹೋಗುವ ಪ್ರಯತ್ನವನ್ನು ತಡೆದಿಡುವನು. ಆಮೇಲೆ ಸಹಜವಾಗಿಯೇ ಏಳುವ ಆಶೆಯು ಮೇಲೆ ಮೇಲೆ ಅತಿಶಯಿಸಲು 'ನಾಳೆ ಹೋಗುವೆನು' ಎನ್ನುವನು.

1052. ಈ ರೀತಿ 'ನಾಳೆ ಹೋಗುವೆನು' ಎಂದು ಹಲದಿವಸಗಳು ಕಳೆಯಲು, ಮನಸ್ಸು ತಾಳದೆ, ಪೂಳೆಯ ಹೂ[2]ವಿನಂತಹ ಜನ್ಮದ ಕಟ್ಟು ನೀಗಲು, ಹೋಗುವುದಕ್ಕೆ ಆಸೆಪಟ್ಟವನಾಗಿ, ಹಾಳೆಗಳಲ್ಲಿ ಸಿಂಗಾರ ಹೂ ತುಂಬಿದ ಕವುಂಗುಗಳಿಂದ ಸುತ್ತುವರಿದ, ಆ ಹಳೆಯ ಊರಿನಿಂದ ಹೊರಟು, ಬಾಳೆಮೀನುಗಳು ಎದ್ದು ಹಾರುವುದಕ್ಕೆಡೆಯಾದ ಗದ್ದೆಗಳಿಂದ ಸುತ್ತುವರಿದ ಚಿದಂಬರದ ಪಕ್ಕದಲ್ಲಿ ಸೇರಿದನು.

1050. ಇತ್ತನ್ಮೈ ಯಿಾಚರ್ಮಕಿಟ್ ಪತಿಪಲವು ಇಱೈಞ್ಚಿ
ಮೆಯ್ತ್ತಿರು ತೊಣ್ಡುಚೆಯ್ತು ವಿರವುವಾರ್ ಮಿಕ್ಕೆಟುನ್ತ
ಚಿತ್ತಮೊಟು ನ್ತಿರುತ್ತಿಲ್ಲೈ ತ್ತಿರುಮನ್ಱು ಚೆನ್ಱಿಱೈಞ್ಚ
ಉಯ್ತ್ತಪೆರು ಞ್ಕಾತಲುಣರ್ ವೊಟಿಯಾತು ವನ್ತುತಿಪ್ಪ,

1051. ಅನ್ಱಿರವು ಕಣ್ತುಯಿಲಾರ್; ಪುಲರ್ನ್ತತಱ್ಪಿ 'ನಱ್ಕೆಯ್ತ
ಒನ್ಱಿಯಣ್ಣೈ ತರುತನ್ಮೈ ಯುಱುಕುಲತ್ತೋ ಟಿಚ್ಚೈವಿಲ್ಲೈ'
ಎನ್ 'ಱಿತುವು ಮೆನ್ಪೆರುಮಾ ನೇವ' ಲೆನ ಪ್ಪೋಕ್ಕೊಟಿಪಾರ್;
ನನ್ಱುಮೆಟು ಞ್ಕಾತನ್ಮಿಕ 'ನಾಳೈಪ್ಪೋ ವೇ' ನೆನ್ಪಾರ್;

1052. 'ನಾಳೈಪ್ಪೋ ವೇ' ನೆನ್ಱು ನಾಳ್ಕಳ್ಚೆಲ ತ್ತರಿಯಾತು,
ಪೂಳೈಪ್ಪೂ ವಾಮ್ಪಿಱವಿ ಪ್ಪಿಣಿಪ್ಪೋಟಿಯ ಪ್ಪೋವಾರಾಯ್,
ಪ್ಪಾಳೈಪ್ಪೂ ಙ್ಕಮುಕುಟುತ್ತ ಪಟಿಮ್ಪತಿಯಿ ನಿನ್ಱುಮ್ಪೋಯ್,
ವಾಳೈಪ್ಪೋ ತ್ತೆಟುಮ್ಪಟಿನ ಇಱ್ಟುಟ್ತಿಲ್ಲೈ ಮರುಙ್ಕಣೈವಾರ್;

---

1. ಚಿದಂಬರದ ಚಿತ್ಸಭೆ. 2. ಮೃದುವಾದ ಹತ್ತಿಯಂತಿರುವ ಬಿಳಿದಾದ ಒಂದು ಹೂ.

1053. ಹಾಗೆ ಸೇರುವಾಗ ಆದರ ಎಲ್ಲೆಯನ್ನು ನಮಿಸಿ, ಎದ್ದು ವರ್ಧಿಸುವ ಕೆಂಪಗಾದ ಅಗ್ನಿಯನ್ನು ಹೆಚ್ಚಿಸುವಂತೆ ಸದಾ ನಡೆದು ಬರುವ ಯಾಗಗಳಲ್ಲಿ ಏಳುವ ಹೊಗೆಯನ್ನು ಹೊಂದಿದ ದೊಡ್ಡ ಯಾಗ ಕೂಟಗಳೂ, ವೇದಗಳನ್ನು ಓದುವ ಮಠಗಳೂ, ಸಮೀಪದಲ್ಲಿರುವುದನ್ನು ಕಂಡು, ಕೀಳಾದ ತನ್ನ ಕುಲವನ್ನು ನೆನೆದೇ, ಅಂಜಿ, ಇನ್ನು ಮುಂದೆ ಹೋಗದವನಾಗಿ ನಿಂತನು.

1054. ಆ ರೀತಿ ನಿಂತ ನಂದನಾರನು, ಅಲ್ಲಿ ತಾನು ಹೋಗಿ ಸೇರುವುದಕ್ಕೆ ಅಸಾಧ್ಯವಾದ ಹಿರಿಮೆಯನ್ನು ನೆನೆಯುವವನಾಗಿ, 'ಇನ್ನು ಮೇಲೆ ಮುಂದೆ ಹೋಗಿ, ಇವುಗಳನ್ನೂ ದಾಟಿ, ಊರನ್ನು ಸುತ್ತುವರಿದ ಪ್ರಾಕಾರದ ದ್ವಾರವನ್ನು ಪ್ರವೇಶಿಸಿದರೆ ಅಲ್ಲಿ ಬೆಟ್ಟದಂತಿರುವ ಮಾಳಿಗೆಗಳಲ್ಲೆಲ್ಲಾ ಮೊತ್ತವಾಗಿ ವೇದಿಕೆಗಳೊಡನೆ ಒಂದೇ ರೀತಿಯ ಮೂರುಸಾವಿರ ಹೋಮಕುಂಡಗಳು ಇವೆ ಎಂದು ಹೇಳುವರು'.

1055. 'ಈ ರೀತಿಯಾಗಿ ಇರಲು, ಅಲ್ಲಿ ಹೋಗಿ ಸೇರುವುದು ನನಗೆ ಸಾಧ್ಯವಿಲ್ಲ' ಎಂದಂಜಿ, ಆ ಊರಿನ ಮದಿಲ ಹೊರಭಾಗದಲ್ಲೇ ಅಡಗದ ಪೇರಾಸೆಯು ಉಪಮಾತೀತ ವಾಗಿ ಮೇಲೆ ಮೇಲೆ ಅತಿಶಯಿಸಲು, ಒಳಗೇ ಮನಸ್ಸು ದ್ರವಿಸಿ, ಕೈಗಳಿಂದ ನಮಿಸಿ, ಹೇಳುವುದಕ್ಕೆ ಅಸಾಧ್ಯವಾದ ಆ ನಗರದ ಎಲ್ಲೆಯನ್ನೇ ಪ್ರದಕ್ಷಿಣೆ ಬಂದು ಈ ರೀತಿ ಇರುವವನಾದನು.

1053. ಚೆಲ್ಕಿನ್ಱ ಪೋೞ್ತನ್ತ್ ತಿರುವೆಲ್ಲೈ ಪಣಿನ್ತೆೞುನ್ತು,
ಪಲ್ಕುಞ್ಚ್ಚಿ ನ್ತೀವಳರ್ತ್ತ ಪಯಿಲ್ವೇಳ್ವಿ ಯೆೞುಮ್ಪುಕೈಯುಮ್,
ಮಲ್ಕುಪೆರು ಙ್ಕಿಟೈಯೋತು ಮಟಙ್ಕಣೆರು ಙ್ಕಿನವುಙ್ಕಣ್
ಟಲ್ಕುನ್ತ್ ಙ್ಕುಲನಿನೈನ್ತೇ ಯಞ್ಚಿಯಣೈ ನ್ತಿಲರ್ನಿನ್ಱಾರ್.

1054. ನಿನ್ಱವರ ಙ್ಕೆಯ್ತರಿಯ ಪೆರುಮೈಯಿನೈ ನಿನೈಪ್ಪಾರ್ 'ಮುನ್
ಚೆನ್ಱಿಯವು ಙ್ಕಟನ್ತೂರ್ಚೂ ೞಿಯಿಱ್ಱಿರುವಾ ಯಿಲ್ಪುಕ್ಕಾಱ್
ಕುನ್ಱನೈಯ ಮಾಳಿಕೈಕ ಟೊೞುಙ್ಕುಲವುಮ್ ವೇತಿಕೈಕಳ್
ಒನ್ಱಿಯಮೂ ವಾಯಿರಮು ಙ್ಕುಳವೆನ್ಪಾ ರಾಕುತಿಕಳ್;'

1055. 'ಇಪ್ಪರಿಚಾ ಯಿರುಕ್ಕವೆನ ಕ್ಕೆಯ್ತಲರಿ' ತೆನ್ಱಞ್ಚಿ
ಯಪ್ಪತಿಯಿನ್ ಮತಿಱ್ಪುಱತ್ತಿ ಲಾರಾತ ಪೆರುಙ್ಕಾತಲ್
ಒಪ್ಪರಿತಾಯ್ ವಳರ್ನ್ತೋಙ್ಕ ವುಳ್ಳುರುಕಿ ಕ್ಕೈತೊೞುತೇ
ಚೆಪ್ಪರಿಯ ತಿರುವೆಲ್ಲೈ ವಲಙ್ಕೊಣ್ಟು ಚೆಲ್ಕಿನ್ಱಾರ್.

1056. ಈ ರೀತಿ ರಾತ್ರಿಹಗಲೂ ಪ್ರದಕ್ಷಿಣೆ ಬಂದು, ಅಲ್ಲಿ ಹೋಗಿ ಸೇರುವುದಕ್ಕೆ ಅಸಾಧ್ಯವಾದ ಆ ರೀತಿಯನ್ನು ನೆನೆದು, ಕ್ಷೀಣಿಸಿದ ಮನಸ್ಸುಳ್ಳ ಶ್ರೀಪಾದಭಕ್ತನು ದುಃಖಿಸಿ, 'ಕಾಡಿಗೆಯಂತೆ ಕರಿದಾದ ಶ್ರೀಕಂಠವನ್ನುಳ್ಳ ಶಿವಪರಮಾತ್ಮನ ಚಿತ್ಸಭೆಯ ದಿವ್ಯನಟನವನ್ನು ನಮಿಸುವುದು ಹೇಗೆ?' ಎಂದು ನೆನೆದೇ ದುಃಖದೊಡನೆ ಕೂಡಿ,

1057. 'ದುಃಖವನ್ನು ತರುವ ಹೀನವಾದ ಈ ಜನ್ಮವೇ ಅದಕ್ಕೆ ತಡೆಯಾಗಿದೆ' ಎಂದೇ ಮನಸ್ಸಿನಲ್ಲಿ ನೆನೆದು ನಿದ್ರಿಸುವವನಾದನು. ಆ ನೆಲೆಯನ್ನು ಚಿತ್ಸಭೇಶ್ವರನು[1] ತಿಳಿದು ಅನುಗ್ರಹಿಸಿ, ಆ ದಿವ್ಯಭಕ್ತನ ಎಲ್ಲಾ ವ್ಯಸನಗಳನ್ನೂ ತೀರಿಸುವುದಕ್ಕಾಗಿ ಅವನ ಕನಸಿನಲ್ಲಿ ಸೇರಿ, ಮಂದಹಾಸದೊಡನೆ ಹೀಗೆ ಅನುಗ್ರಹಿಸುವವನಾದನು

1058. 'ಈ ಜನ್ಮವಾದ ಶರೀರವು ತೊಲಗುವಂತೆ ಬೆಂಕಿಯಲ್ಲಿ ಪ್ರವೇಶಿಸಿ, ಮೂರೆಳೆಯ ಉಪವೀತವನ್ನು ಕೊಂಡ ವೇದಿಯರೊಡನೆ ಸೇರಿ ನೀನು ಬಾ' ಎಂದು ಹೇಳಿ ಅನುಗ್ರಹಿಸಿ, ಸತ್ಯವಸ್ತುವಾದ ಈಶ್ವರನು ಅದೇ ರೀತಿಯಲ್ಲಿ ತಿಲ್ಲೈವಾಟಂದಣರಿಗೂ[2] ಅಗ್ನಿಯನ್ನು ತಯಾರಿಸುವಂತೆ ಆಜ್ಞಾಪಿಸಿ ಚಿತ್ಸಭೆಯನ್ನು ಸೇರಿದನು (ಅಂತರ್ಧಾನನಾದನು).

1056. ಇನ್ನಣ್ಣ ಮಿರವುಪಕಲ್ ವಲಙ್ಗೊಣ್ಡು ಙ್ಕೈಯ್ಯುರಿಯ
ಅನ್ನಣ್ಣ ನಿನೈನ್ದಟೀನ್ದ ನಟಿತೊನ್ದಣ್ಣ ರಯರ್‌ವೆಯ್ದಿ,
'ಮೈವಣ್ಣ ತ್ತಿರುಮಿಟಱ್ಱಾರ್ ಮನ್‌ಱಿನಟ ಙ್ಕುಮ್ಬಿಟುವ
ತೆನ್ನಣ್ಣ' ಮೆನನಿನೈನ್ದೇ ಯೇಚಱವಿ ನೊಟುನ್ದುಯಿಲ್ವಾರ್,

1057. 'ಇನ್‌ನಱರು ಮಿಟಿಪಿಱವಿ ಯಿತುತಟೈ' ಯೆನ್ ಱೊಳಿತುಯಿಲ್ವಾರ್,
ಅನ್ನಿಲೈಮೈ ಯಮ್ಬಲತ್ತು ಳಾಟುವಾ ರಱಿನ್ದರುಳಿ,
ಮನ್‌ನುತಿರು ತ್ತೊಣ್ಡರವರ್ ವರುತ್ತಮೆಲಾ ನ್ದೀರ್‌ಪ್ಪತಱ್ಕು
ಮುನ್‌ನಣೈನ್ದು ಕನವಿನ್‌ಕಣ್ ಮುಱುವಲೊಟು ಮರುಳ್‌ಚೆಯ್ವಾರ್,

1058. 'ಇಪ್ಪಿಱವಿ ಪೋಯ್‌ನೀಙ್ಕ ವೆರಿಯಿನಿಟೈ ನೀಮೂಟ್ಕಿ
ಮುಪ್ಪುರಿನೂಲ್ ಮಾರ್‌ಪರುಟನ್ ಮುನ್‌ನಣೈವಾ' ಯೆನ್‌ನವೊಟಿ,
ನ್ದಪ್ಪರಿಚೇ ತಿಲ್ಲೈವಾ ಟನ್ದಣರ್‌ಕ್ಕು ಮೆರಿಯಮೈಕ್ಕ
ಮೆಯ್‌ಪ್ಪೊರುಳಾ ನಾರರುಳಿ, ಯಮ್ಬಲತ್ತೇ ಮೇವಿನಾರ್.

---

1. ಚಿತ್ಸಭೆಯಲ್ಲಿ ನಟನಮಾಡುವ ಶಿವಪರಮಾತ್ಮನು. 2. ಚಿದಂಬರ ದೀಕ್ಷಿತರು.

1059. ತಮ್ಮ ಪರಮಾತ್ಮನ ಆಜ್ಞೆಯನ್ನು ಕೇಳಿದ ತಪಸ್ವಿಗಳೂ ವೇದಿಯರೂ ಆದ ತಿಲ್ಲೆಯಲ್ಲಿ ಬಾಳುವ ಬ್ರಾಹ್ಮಣರೆಲ್ಲಾ ಚಿತ್ಸಭಾನಾಯಕರ ಮಹಾದ್ವಾರದ ಮುಂದೆ ಭಯಭಕ್ತಿಯಿಂದ ಬಂದು ಸೇರಿ 'ನಮ್ಮ ಪರಮಾತ್ಮನು ಅನುಗ್ರಹಿಸಿದ ಆಜ್ಞೆಯನ್ನು ಪಾಲಿಸುವೆವು' ಎಂದು ಸ್ತುತಿಸಿ, ಮಿಕ್ಕ ಪ್ರೀತಿಯೊಡನೆ ಬರುವವನಾದ ದಿವ್ಯಭಕ್ತನ ಸಮೀಪ ಸಾರಿದರು.

1060. 'ಸ್ವಾಮಿ, ಚಿತ್ಸಭಾನಾಯಕರು ಉಷ್ಣವಾದ ಅಗ್ನಿಯನ್ನು ತಮಗೆ ತಯಾರಿಸಿ ತರಲು ಆಜ್ಞಾಪಿಸಿದಂತೆ ಈಗ ನಿಮ್ಮೆಡೆಗೆ ಬಂದೆವು' ಎಂದು ಹೇಳಲು, ಕ್ಷೀಣಿಸಿ ವ್ಯಥೆಗೊಂಡ ಮನಸ್ಸುಳ್ಳ ದಿವ್ಯಭಕ್ತನಾದ ನಂದನಾರನು, 'ಈಗ ನಾನು ಉಜ್ಜೀವಿಸಿದೆನು' ಎಂದು ನಮಿಸಿದನು. ದೈವಿಕ ವೇದಿಯ ಬ್ರಾಹ್ಮಣರೂ ಅಂತೆಯೇ ಅಗ್ನಿಯನ್ನು ತಯಾರಿಸಿರುವುದನ್ನು ತಿಳಿಸಿದರು.

1061. ವೇದಿಯರು ಆ ರೀತಿ ತಿಳಿಸಿದೊಡನೆ, ತೆಂಕು ದಿಕ್ಕಿನ ಪ್ರಾಕಾರದ ಹೊರಗಿರುವ, ಚಂದ್ರನನ್ನು ಮುಟ್ಟುವಂತೆ ಉನ್ನತವಾದ ಮಹಾದ್ವಾರದ ಮುಂದೆ, ಜಡೆಮುಡಿಯನ್ನುಳ್ಳವನ[1] ತುಂಬಿದ ಹಿರಿದಾದ ಅನುಗ್ರಹದಿಂದ, ವೇದಿಯರು ಬೆಂಕಿಯನ್ನುಂಟುಮಾಡಿದ ಅಗ್ನಿಕುಂಡವನ್ನು ಸೇರಿ, ಈಶ್ವರನ ಶ್ರೀಪಾದಗಳನ್ನು ಮನಸ್ಸಿನಲ್ಲಿ ಕೊಂಡೇ ಆತನು ಅಗ್ನಿಯನ್ನು ಪ್ರದಕ್ಷಿಣೆ ಬಂದನು.

1059. ತಮ್ಪೆರುಮಾನ್ ಪಣಿಕೇಟ್ಟ ತವಮಱೈಯೋ ರೆಲ್ಲಾರುಮ್
ಅಮ್ಪಲವರ್ ತಿರುವಾಯಿಲ್ ಮುನ್ಪಚ್ಚ ಮುಟನೀಣ್ಟಿ
'ಯೆಮ್ಪೆರುಮಾ ನರುಳ್ಚೆಯ್ತ ಪಣಿಚೆಯ್ವೋ' ಮೆನ್ಱೇತ್ತಿ
ತ್ತಮ್ಪರಿವು ಪೆರುಕವರು ನಿತ್ರುರುತ್ತೊಣ್ಟರ್ ಪಾಱ್ಚಾರ್ನ್ದಾರ್.

1060. 'ಐಯರೇ! ಯಮ್ಪಲವ ರರುಳಾಲಿ ಪ್ಪೊಟುತಣೈನ್ದೋಮ್
ವೆಯ್ಯವಟಿ ಲಮೈತ್ತುಮಕ್ಕು ತ್ತರವೇಣ್ಟಿ' ಯೆನವಿಳಮ್ಪ,
ನೈಯುಮನ ತ್ತಿರುತ್ತೊಣ್ಟರ್ 'ನಾನುಯ್ನ್ದೇ' ನೆನತ್ತೊಟುತಾರ್;
ತೆಯ್ವಮಱೈ ಮುನಿವರ್ಕಳು ನ್ನೀಯಮೈತ್ತ ಪಟಿಮೊಟಿನ್ದಾರ್.

1061. ಮಱೈಯವರ್ಕಣ್ ಮೊಟಿನ್ದತಱ್ಪಿನ್ ಱೆನ್ಱಿಚೈಯಿನ್ ಮತಿಱ್ಪುಱತ್ತು
ಪ್ಪಿಱೈಯುರಿಞ್ಚು ನ್ತಿರುವಾಯಿಲ್ ಮುನ್ನಾಕ ಪಿಞ್ಞಕರ್ತ
ನಿಱೈಯರುಳಾಲ್ ಮಱೈಯವರ್ಕ ಣೆರುಪ್ಪಮೈತ್ತ ಕುಟಿಯೆಯ್ತಿ
ಯಿಱೈಯವರ್ತಾಣ್ ಮನಙ್ಕೊಣ್ಟೇ ಯೆರಿಚೂಟಿ ವಲಙ್ಕೊಣ್ಟಾರ್,

---

1. ಶಿವಪರಮಾತ್ಮನ.

1062. ಆಮೇಲೆ ನಂದನಾರನು ಕೈಗಳನ್ನೆತ್ತಿ ನಮಿಸಿ, ಪಂಚಕೃತ್ಯ ನಟನವನ್ನಾಡಿ ಅನುಗ್ರಹಿಸುವವನ ಶ್ರೀಪಾದಗಳನ್ನು ನೆನೆದು, ಅಗ್ನಿಯನ್ನು ಪ್ರವೇಶಿಸಿದನು. ಆ ಅಗ್ನಿಯಲ್ಲಿ ಮಾಯೆಯ ಅಸತ್ಯ ಶರೀರವನ್ನು ಕಳೆದುಕೊಂಡು ಪುಣ್ಯಶರೀರದ ಮಹಾಮುನಿಸ್ವರೂಪವನ್ನು ತಾಳಿ, ಎದೆಯಲ್ಲಿ ಬಿಳಿದಾದ ಉಪವೀತವು ಶೋಭಿಸಲು, ಜಡೆ ಮುಡಿಯನ್ನು ಕೊಂಡು ಮೇಲೆದ್ದು ಬಂದನು.

1063. ಆ ರೀತಿ ಕೆಂಪಗಾದ ಅಗ್ನಿಯ ಮೇಲೆ ಬಂದು ಏಳುವಾಗ ಆತನು ಕೆಂಪಗಾದ ಮಲರ ಮೇಲೆ ಬಂದೆದ್ದ ಬ್ರಹ್ಮದೇವನಂತೆ ತೋರಿದನು. ಆಗ ದೊಡ್ಡ ಆಗಸದಲ್ಲಿ ಬಾನದುಂದುಭಿಯ ನಾದವು ಮೊಳಗಿತು. ದೇವರುಗಳು ಸಂತೋಷದಿಂದ ಘೋಷಿಸಿ, ಹೊಸತಾದ ಎಸಳುಗಳುಳ್ಳ ಮಂದಾರದ ಶೀತಲವಾದ ಮಲರ ಮಳೆಯನ್ನು ಕರೆದರು.

1064. ಕೂಡಿ ಇದ್ದು ನೋಡಿದ ಈಶ್ವರನ ಅನುಗ್ರಹವುಳ್ಳ ತಿಲ್ಲೈವಾೞಂದಣರು[1] ಭಕ್ತನನ್ನು ಕೈಮುಗಿದು ನಮಿಸಿದರು. ಸ್ತೋತ್ರಕ್ಕೆ ಸಿಗದ ಮಹಿಮೆಯುಳ್ಳ ಭಕ್ತನೂ ನಮಿಸಿ ಹೆಚ್ಚಾದ ಸಂತಸವನ್ನು ಹೊಂದಿದನು. ಅಸಾಧ್ಯವಾದ ವೇದಗಳು ಸುತ್ತುವರಿದು ಸ್ತುತಿಸುವ ಆ ಚಿತ್ಸಭೆಯಲ್ಲಿ, ಅನುಗ್ರಹ ದಿವ್ಯನಟನವನ್ನಾಡುವ ಶ್ರೀಪಾದವನ್ನು ನಮಿಸುವುದಕ್ಕಾಗಿ, 'ನಾಳೆ ಹೋಗುವವನಾದ ವೇದಮುನಿವರನು' ಬರುತ್ತಿರುವನು.

1062. ಕೈತೊೞುತು ನಟಮಾಟು ಙ್ಕೞಲುನ್ನಿ ಯೞಲ್‌ಪುಕ್ಕಾರ್,
ಎಯ್ತಿಯವ ಪ್ಪೊೞುತಿನ್‌ಕ ಣೆರಿಯಿನ್‌ಕ ಣಿಮ್ಮಾಯ
ಪ್ಪೊಯ್ತ್ತಕೈಯು ಮುರುವೊೞಿತ್ತು ಪ್ಪುಣ್ಣಿಯಮಾ ಮುನಿವಟಿವಾಯ್
ಮೆಯ್ತ್ತಿಕೞ್‌ವೆ ಣ್ಣೂಲ್‌ವಿಳಙ್ಕ ವೇಣಿಮುಟಿ ಕೊಣ್ಟೆೞುನ್ತಾರ್.

1063. ಚೆನ್ತೀಮೇ ಲೆೞುಮ್ಪೊೞುತು ಚೆಮ್ಮಲರ್‌ಮೇಲ್ ವನ್ತೆೞುನ್ತ
ವನ್ತಣನ್‌ಪೋ ಱ್ಱೋನ್‌ಱಿನಾ; ರನ್ತರತು ನ್ತುಪಿನಾತಮ್
ವನ್ತೆೞುನ್ತ ತುಯರ್‌ವಿಚುಮ್ಪಿಲ್; ವಾನರ್‌ಕಣ್ ಮಕಿೞ್‌ನ್ತಾರ್‌ತ್ತು
ಪ್ಪೈನ್ತುಣರ್‌ಮ ನ್ತಾರತ್ತಿನ್ ಪಣಿಮಲರ್‌ಮಾ ರಿಕಳ್‌ಪೊೞಿನ್ತಾರ್.

1064. ತಿರುವುಟೈಯ ತಿಲ್ಲೈವಾ ೞನ್ತಣರ್‌ಕಳ್ ಕೈತೊೞುತಾರ್;
ಪರವರಿಯ ತೊಣ್ಟರ್‌ಕಳುಮ್ ಪಣಿನ್ತುಮನ ಙ್ಕಳಿಪಯಿನ್‌ಱಾರ್;
ಅರುಮಱೈಚೂೞ್ ತಿರುಮನ್‌ಱಿ ಲಾಟುಕಿನ್‌ಱ ಕೞಲ್‌ವಣಙ್ಕ
ವರುಕಿನ್‌ಱಾರ್ ತಿರುನಾಳೈ ಪ್ಪೋವಾರಾ ಮಱೈಮುನಿವರ್.

---

1. ಚಿದಂಬರ ದೀಕ್ಷಿತರು.

1065. ಆತನು ಚಿದಂಬರದ ದೀಕ್ಷಿತರುಗಳೂ ಒಡನೆಯೇ ಬರಲು, ನಗರದ ಒಳಗೆ ಬಂದು ಸೇರಿ, ಜಿಂಕೆಯನ್ನು ಧರಿಸಿದ ಕೈಯುಳ್ಳ ಶಿವಪರಮಾತ್ಮನ ಶ್ರೀಗೋಪುರವನ್ನು ನಮಿಸಿ ಶೀಘ್ರವಾಗಿ ಹೋಗಿ ದೇಗುಲದ ಒಳಗೆ ಪ್ರವೇಶಿಸಿದನು. ಲೋಕವನ್ನೆಲ್ಲಾ ಉಜ್ಜೀವಿಸುವ ಕಾರಣದಿಂದ ಅನುಗ್ರಹನಟನವನ್ನಾಡುವವನ ಸಭೆಯ ಸಮೀಪವನ್ನು ಸೇರಿದನು. ಆಮೇಲೆ ಅವನನ್ನು ಕಂಡವರು ಯಾರೂ ಇಲ್ಲ.

1066. ದೀಕ್ಷಿತರು ಅಚ್ಚರಿಗೊಂಡರು. ಅಸಾಧ್ಯವಾದ ತಪಸ್ಸನ್ನುಳ್ಳ ಮುನಿಗಳು ಸ್ತುತಿಸಿದರು. ತನ್ನನ್ನು ಬಂದು ಸೇರಿದ ದಿವ್ಯಭಕ್ತನ ಕರ್ಮದೋಷವನ್ನು ತುಂಡರಿದು, ಸುಂದರವಾದ ತಾವರೆಯಂತಿರುವ ಪಾದದ್ವಂದ್ವಗಳನ್ನು ನಮಿಸಿಕೊಂಡಿರುವಂತೆ, ಅಂತ್ಯವಿಲ್ಲದ ಆನಂದಮಹಾನಟನವನ್ನಾಡಿದ ಚಿತ್ಸಭಾನಾಯಕನು ಆ ಭಕ್ತನಿಗೆ ದಿವ್ಯಾನುಗ್ರಹವನ್ನು ಮಾಡಿದನು.

1067. ದೋಷಯುಕ್ತವಾದ ಶರೀರವನ್ನು ಬಿಡುವ ಕಾರಣದಿಂದ ಅಗ್ನಿಯಲ್ಲಿ ಮಜ್ಜನ ಮಾಡಿ ಮೇಲೆದ್ದು ದೋಷದೂರವಾದ ವೇದಮುನಿವರನಾಗಿ ಚಿತ್ಸಭಾನಾಯಕನ ಶ್ರೀಪಾದವನ್ನು ಸೇರಿದವನ ತೇಜೋಮಯವಾದ ಶ್ರೀಪಾದಗಳನ್ನು ಸ್ತುತಿಸಿ, ಆ ಕೃಪಾಫಲದಿಂದ, ತಿರುಕುರಿಪ್ಪುತೊಂಡನೆಂಬ ಕರ್ಮಬಂಧವನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡಿದವನ ದಿವ್ಯಕೈಂಕರ್ಯದ ಮಹಿಮೆಯನ್ನು ಇನ್ನುಮೇಲೆ ಹೇಳುವೆವು.

1065. ತಿಲ್ಲೈವಾ ೞನ್ತಣರು ಮುಟನ್‌ಚೆಲ್ಲ ಚ್ಚೆನ್‌ಱೆಯ್ದಿ,
ಕೊಲ್ಲೈಮಾನ್ ಮಱಿಕ್ಕರತ್ತಾರ್ ಕೋಪುರತ್ತೈ ತ್ತೊೞುತಿಱೈಞ್ಚಿ,
ಯೊಲ್ಲೈಪೋ ಯುಟ್‌ಪುಕುನ್ದಾ ; ರುಲಕುಯ್ಯ ನಟಮಾಟುಮ್
ಎಲ್ಲೈಯಿನ್ನೈ ತ್ತಲೈಪ್ಪಟ್ಟಾರ್ ರಿಯಾವರ್‌ಕಳು ಙ್ಕಣ್ಟಿಲರಾಲ್.

1066. ಅನ್ತಣರ್‌ಕ ಳತಿಚಯಿತ್ತಾ ; ರರುಮುನಿವರ್ ತುತಿಚೆಯ್ದಾರ್ ;
ವನ್ತಣೈನ್ತ ತಿರುತ್ತೊಣ್ಟರ್ ತಮ್ಮುೞೈವಿನ್ನೈ ಮಾಚಱುತ್ತು
ಚ್ಚನ್ತರತ್ತಾ ಮರೈಪುರೈಯು ನ್ತಣೈಯಟಿಕ ಟ್ತೊೞುತಿರುಕ್ಕ
ವನ್ತಮಿಲಾ ವಾನನ್ತ ಪ್ಪೆರುಙ್ಕೂತ್ತ ರರುಳ್‌ಪುರಿನ್ತಾರ್.

1067. ಮಾಚುಟಮ್ಪು ವಿಟತ್ತೀಯಿನ್ ಮುಞ್ಞನಞ್ಚೆಯ್ ತರುಳಿಯೆೞು
ನ್ತಾಚಿನ್‌ಮಱೈ ಮುನಿಯಾಕಿ ಯಮ್ಪಲವರ್ ತಾಳಟೈನ್ತಾರ್
ತೇಚುಟೈಯ ಕೞಲ್‌ವಾೞ್ತ್ತಿ ತ್ತಿರುಕ್ಕುಱಿಪ್ಪು ತ್ತೊಣ್ಟರ್‌ವಿನ್ನೈ
ಪ್ಪಾಚಮಱ ಮುಯನ್‌ಱವರ್‌ತ ನ್ತಿರುತ್ತೊಣ್ಟಿನ್ ಪರಿಚುರೈಪ್ಪಾಮ್.

---

19. ತಿರುಕುರಿಪ್ಪುತೊಂಡ ನಾಯನಾರ

1068. ಯುಕ್ತವಾಗುವಂತೆ ಹಲಜೀವಿಗಳಿಗೂ ಎಲ್ಲೆಯಿಲ್ಲದ ಕರುಣಾಮಯಿಯಾದ ತಾಯಂತಿರತಕ್ಕ ಉಮಾದೇವಿಯವರು ಏಕನಾದ ಆಕೆಯ ನಾಯಕನನ್ನು ಆಲಿಂಗಿಸುವುದಕ್ಕಾಗಿ, ಸರಿಯಾಗಿ ಪರಿಶೀಲಿಸಲ್ಪಡುವ ನಾಲ್ಕು ವೇದಗಳೂ ಸ್ತುತಿಸಲು ಆಗಮದಾರಿಯಲ್ಲಿ ನಿಂತು ತನ್ನೆಡೆಯಲ್ಲಿಯೇ ಅಸಾಧ್ಯವಾದ ತಪಸ್ಸನ್ನು ಮಾಡುವಂತೆ, ಪರಿಶುದ್ಧವಾದ ದೊಡ್ಡ ತಪಸ್ಸನ್ನು ಮಾಡಿರುವಂಥಾದ್ದು ತೊಂಡೈನಾಡು.

1069. ಹಿತವನ್ನುಳ್ಳ ಸಮನೆಲೆಯ ಮಾರ್ಗದಲ್ಲಿ ಆಶೆಯುಳ್ಳ ಸ್ವಭಾವವನ್ನು ಹೊಂದಿದ ಪ್ರಧಾನವಾದ ದೊಡ್ಡ ಕುಟುಂಬಗಳು ವೃದ್ಧಿಹೊಂದಿ ಅಭಿವರ್ಧಿಸಲು, ಬಲವಾದ ದೊಡ್ಡ ಪ್ರಾಕಾರಗಳನ್ನುಳ್ಳ, ಹಲವು ಸಂಪತ್ತುಳ್ಳ ನಗರಗಳನ್ನು ತನ್ನೊಳಗೆ ಕೂಡಿಕೊಂಡುದಾಗಿ, ಎಲ್ಲೆಯಿಲ್ಲದ ಪುರಾತನವಾದ ಮೇಲ್ಮೆಯೊಡನೆ ಕೂಡಿಕೊಂಡಿರುವುದು ವಿಸ್ತಾರವಾದ ತೊಂಡೈನಾಡು.

1070. ಒಳ್ಳೆಯ ಸ್ವಭಾವವನ್ನೇ ಆಶಿಸುವ ಪಟ್ಟೈಯನೂರಿನ ವೇಳಾಳ[1]ರು, ತಮ್ಮ ಮೇಲೆ ನಿಂದೆಯು ಬಂದಾಗ, ತಮ್ಮ ಜೀವವನ್ನೂ, ವಣಿಜನೊಬ್ಬನಿಗೆ ಒಂದು ಸಲ ತಾವು ಹೇಳಿದ ಸತ್ಯಮಾತನ್ನೂ ತೂಗಿನೋಡಿ, ಜೀವಕ್ಕಿಂತಲೂ ಹಿರಿದಾದ ಆ ಮಾತನ್ನೇ ಕಾಪಾಡಿದ ಮೇಲ್ಮೆಯಿಂದ ಕೂಡಿಕೊಂಡು ಬರುವುದು ವಿಸ್ತಾರವಾದ ತೊಂಡೈನಾಡು.

---

19. ತಿರುಕ್ಕುರಿಪ್ಪುತ್ತೊಣ್ಡ ನಾಯನಾರ್

1068. ಏಯು ಮಾಱುಪ ಲ್ಲುಯಿರ್ಕಳು ಕ್ಕೆಲ್ಲೈಯಿಲ್ ಕರುಣೈ
ತ್ತಾಯು ನಾಟನಿ ಮಾಯಿನ ತಲ್ಲೈವರ್ವೈ ತ್ತಟುವ
ಲಾಯು ನಾನ್ಮಱೈ ಪೋಱ್ಱಿನಿನ್ ಱಿರುನ್ದವವ್ ಪುರಿಯ
ತ್ತೂಯ ಮಾತವ ಞ್ಚೆಯ್ದ್ದತು ತೊಣ್ಡೈನನ್ ನಾಟು.

1069. ನನ್ಮೈ ನೀಟಿಯು ನಟುನಿಲ್ಲೈ ಯೊಟುಕ್ಕತ್ತು ನಯನ್ದ
ತನ್ಮೈ ಮೇವಿಯ ತಲ್ಲೈಮೈಚ್ಚಾಲ್ ಪೆರುಙ್ಕುಟಿ ತಟೈಪ್ಪ
ವನ್ಮೈ ಯೋಙ್ಕೆಯಿಲ್ ವಳಮ್ಪತಿ ಪಯಿನ್ಱತು ವರವಿಪ್ಪಿನ್
ತೊನ್ಮೈ ಮೇನ್ಮೈಯಿ ನಿಕಟ್ನ್ತು ಪೆರುನ್ತೊಣ್ಡೈ ನಾಟು.

1070. ನಱ್ಱಿ ಱಮ್ಪುರಿ ಪಟ್ಟೈಯನೂರ್ ಚ್ಚೆಱಿತ್ತೊಣ್ಡರ್ ನವೈವನ್
ತುಱ್ಱ ಪೋತುತ ಮ್ಮುಯಿರ್ರೈಯುವವ್ ವಣಿಕನು ಕ್ಕೊರುಕಾಱ್
ಚೊಱ್ಱ ಮೆಯಯ್ಮ್ಮೈಯು ನ್ತೂಕ್ಕಿಯ ಚ್ಚೊಲ್ಲೈಯೇ ಕಾಕ್ಕ
ಪ್ಪೆಱ್ಱ ಮೇನ್ಮೈಯಿ ನಿಕಟ್ನ್ತು ಪೆರುನ್ತೊಣ್ಡೈ ನಾಟು.

---

1. ಕೃಷಿ ಕರ್ಮವನ್ನು ಮಾಡುವ ಜನ.

1071. ಶಿವಪರಮಾತ್ಮನ ದಿವ್ಯಾನುಗ್ರಹದ ರೂಪವೇ ವಿಭೂತಿಯಾಗುವುದೆಂದು ಆ ನಂಬಿಕೆಯಲ್ಲಿ ನೆಲೆನಿಂತು ವಿಭೂತಿಯನ್ನು ಕಂಡು ನಮಿಸುವ ರೀತಿಯಿಂದ, 'ಚೇರ ಅರಸನು ತಾನು ಸೇವಕನು' ಎಂದು (ವಿಭೂತಿಯಂತಿರುವ ಬಿಳಿದಾದ ಒಗರು ಮಣ್ಣಿನಿಂದ ಲೇಪಿತವಾದ ಶರೀರವುಳ್ಳ ಅಗಸನನ್ನು) ನಮಿಸುವ, ಬಹುದೂರ ಹಬ್ಬಿದ ಕೀರ್ತಿ ಮಿಕ್ಕ ಚೇರ ಅರಸನ, ಶ್ರೀಯುತವಾದ ಮಲೆನಾಡಿನಲ್ಲಿ ಬಾಳಿ ಬರುವ, ಕಾಂತಿಯುತವಾದ ಆಭರಣಗಳನ್ನು ಅಲಂಕರಿಸಿಕೊಂಡ ವಿಜಯವನ್ನು ಹೊಂದಿದ ವೀರರು, ಮೈದುನರು ಎಂಬ ಬಾಂಧವ್ಯವನ್ನು ಕೊಂಡಾಡುವ[1] ನಿಡಿದಾದ ಪದ್ಧತಿಯನ್ನು ಒಳಕೊಂಡುದು ದೊಡ್ಡ ತೊಂಡೈನಾಡಾಗಿದೆ.

1072. ಕಪ್ಪು ಶೋಭಿಸುವ ಕಂಠವುಳ್ಳ ಶಿವಪರಮಾತ್ಮನಲ್ಲಿ ಭಕ್ತಿಯನ್ನು ಮಾಡುವ ದಾರಿಯಲ್ಲಿ ಪರಿಪೂರ್ಣತೆಯನ್ನಾಶಿಸುವ ಉಮಾಮಾತೆಯು ಇಲ್ಲಿ ಧರ್ಮಗಳನ್ನಾಚರಿಸಿದುದರಿಂದ, ಚಂದ್ರನನ್ನು ಮುಟ್ಟುವಂತೆ ಉನ್ನತವಾದ ಪ್ರಾಕಾರವನ್ನುಳ್ಳ ಶೋಭಿಸುವ ತೊಂಡೈನಾಡು ಶಿವಮಾರ್ಗದ ನಿಯತಿಯುಳ್ಳುದೆಂದು ಜನರು ಹೊಗಳುವ ಹಿರಿಮೆಯನ್ನೊಳಗೊಂಡಿದೆ.

1071. ಆಣ್ಣೈ ಯಾಮೆನ ರೀಱುಕ 'ಣ್ಣಾಟಿಚ್ಚೇರ' ನೆನ್'ನುಞ್
ಚೇಣು ಲಾವುಚೀರ್ ಚ್ಚೇರನಾರ್ ತಿರುಮಲೈ ನಾಟ್ಟು
ವಾಣಿ ಲಾವುಪೂಣ್ ವಯವರ್'ಕಣ್ ಮೈತ್ತುನ ಕ್ಕೇಣ್'ಮೈ
ಪೇಣ ನೀಟಿಯ ಮುಱೈಯತು ಪೆರುನ್ತೊಣ್ಟೈ ನಾಟು.

1072. ಕಱೈಯಣಿ ಟಱ್ಱಿಯ ಕಣ್ಟರ್'ಪಾಱ್ ಕಾತಲ್'ಚೆಯ್ ಮುಱೈಮೈ
ನಿಱೈಪು ರಿನ್ತಟ ನೇರಿೞೈ ಯಱಮ್ಪುರಿ ನ್ತತನಾಲ್
ಪಿಱೈಯು ರಿಞ್ಚಿಯಿಱ್ ಪತಿಪಯಿಲ್ 'ಪೆರುನ್ತೊಣ್ಟೈ ನಾಟು
ಮುಱೈಮೈ ಯಾ' ಮೆನ ವುಲಕಿನಿಱ್ ಮಿಕುಮೊೞಿ ಯುಟೈತ್ತಾಲ್.

---

1. ಇದಕ್ಕೆ ಪೂರ್ವಕಥೆಯಿದೆ.

ನಾಲ್ಕು ರೀತಿಯ ನೆಲಗಳಿಗೂ ಸಾಮಾನ್ಯವಾಗಿರುವ ಸ್ವಭಾವ

1073. ಬೆಟ್ಟದ ಸಮೀಪದ ಕುರಿಂಜಿ[1] ಸ್ಥಳಗಳು, ದೋಷರಹಿತವಾದ ಕೆಂಪ ಗಾದ ಮಾಣಿಕ್ಯಗಳು ಜಲಪಾತಗಳಿಂದಲೂ ನದಿಯಿಂದಲೂ ಇಳಿದು ಬರುವಂತಹ ಪ್ರದೇಶಗಳನ್ನುಳ್ಳದಾಗಿವೆ. ಕಾಡಿನಿಂದ ಸುತ್ತುವರಿದ ಮುಲ್ಲೈ[2] ನೆಲಗಳು ಹೂಗಳಲ್ಲಿ ತುಂಬಿಗಳ ಕೂಟಗಳು ಹೊಸ ಜೇನನ್ನು ಕುಡಿಯುವುದಕ್ಕೆ ಎಡೆಯಾಗಿವೆ. ಬಯಲಿನಿಂದ ಸುತ್ತುವರಿದ ಮರುದ[3] ಸ್ಥಳಗಳು ತಟಾಕಗಳಲ್ಲಿ ನಿಡಿದಾದ ಕಯಲ್ ಮೀನುಗಳು ಕಟ್ಟೆಹುಣಿಗಳು ಒಡೆಯುವಂತೆ ಹಾರಾಡುವುದಕ್ಕೆಡೆಯಾಗಿವೆ. ಕಡಲಿನ ಸಮೀಪ ವಿರುವ ನೈದಲ್[4] ಸ್ಥಳಗಳು ಪರತಿ[5]ಯರು ಮುತ್ತುಗಳನ್ನು ತೊಳೆದು ಒಣಗಿಸುವುದಕ್ಕೆಡೆ ಯಾಗಿವೆ.

1074. ಕೊರಗರು ರತ್ನಗಳನ್ನು ನೀರಿನಿಂದ ಆರಿಸಿ ತೆಗೆದು ಅವುಗಳನ್ನು ಬಿಸಾಡಿ ಅಲಸಂಡೆ ಬೀಜಗಳನ್ನು ಬಿತ್ತುವುದಕ್ಕೆಡೆಯಾಗಿವೆ ಕುರಿಂಜಿ ಸ್ಥಳಗಳು. ದನ ಕೂಟಗಳು ಜಿಂಕೆಗಳೊಡನೆ ಸೇರಿ ಆಡುವುದಕ್ಕೆಡೆಯಾಗಿವೆ ಕಾನ್[6]ಗಳು. ಹಕ್ಕಿಗಳು ತಾವರೆಹೂಗಳಲ್ಲಿದ್ದುಕೊಂಡು ಇರಾಲ್ ಮೀನುಗಳನ್ನು ಉಣ್ಣುವುದಕ್ಕೆಡೆಯಾಗಿವೆ ಗದ್ದೆಗಳು. ಸುರಾ ಮೀನುಗಳ ಮುಳ್ಳುಗಳುಳ್ಳ ಕೊಂಬುಗಳನ್ನು ದೈವವಿಗ್ರಹದಂತೆ ಇಟ್ಟುಕೊಂಡು ಪೂಜಿಸುವುದಕ್ಕೆಡೆಯಾಗಿವೆ ಕಡಲ ಸಮೀಪದ ನೆಲಗಳು.

ನಾನಿಲ ಪ್ಪೋತು ಿಯಲ್ಪು

1073. ತಾವಿಲ್ ಚೆಮ್ಮಣಿ ಯುರುವಿಯಾ ಱಿಱಿವನ ಚಾರಲ್;
ಪೂವಿಲ್ ವಣ್ಡಿನಮ್ ಪುತುನಱ ವರುನ್ದುವ ಪುಱವಮ್;
ವಾವಿ ನೀಳ್‌ಕಯಲ್ ವರಮ್ಬಿಱ ವುಕೈಪ್ಪನ ಮರುತಮ್;
ನೀವಿ ನಿತ್ತಿಲಮ್ ಪರತ್ತಿಯ ರುಣಕ್ಕುವ ನೆಯ್ತಲ್.

1074. ಕುಱವರ್ ಪನ್‌ಮಣಿ ಯರಿತ್ತುತ್ತೈ ವಿತೈಪ್ಪನ ಕುಱಿಞ್ಚಿ;
ಕಱವೈ ಯಾನಿರೈ ಮಾನುಟನ್ ಪಯಿಲ್ವನ ಕಾನಮ್;
ಪಱವೈ ತಾಮರೈ ಯಿರುನ್ದಿಱ ವರುನ್ದುವ ಪಟನಮ್;
ಚುಱವ ಮುಣ್ಮರು ಪ್ಪಣಙ್ಕಯರ್ ವನಕಟಿ ಚ್ಚೂಟಲ್.

---

1. ಮಲೆಯಿಂದ ಸುತ್ತುವರಿದ ಸ್ಥಳ. 2. ಕಾಡಿನಿಂದ ಸುತ್ತುವರಿದ ಸ್ಥಳ. 3. ಬಯಲಿ ನಿಂದ ಸುತ್ತುವರಿದ ಸ್ಥಳ. 4 ಸಮುದ್ರ ಸಮೀಪದ ಸ್ಥಳ. 5. ಪರತಿ – ಬೆಸ್ತರ ಹೆಂಗಸು. 6. ಕಾನ – ಕಾಡು.

1075. ಬೆಟ್ಟದೆಡೆಗಳಲ್ಲಿ ಮೇಘಗಳು ಬಾನಿನಿಂದ ಮುತ್ತುಗಳನ್ನು ಸುರಿಸುತ್ತವೆ. ಮುಲ್ಲೆ ನೆಲದ ಸಮೀಪದೆಡೆಗಳಲ್ಲಿ ಶೀತಲವಾದ ಗೊಂಚಲುಗಳುಳ್ಳ ಕರ್ಣಿಕಾರ ಹೂಗಳು ಹೊನ್ನನ್ನು ಸುರಿಸುತ್ತವೆ[1]. ನೀರಿನಿಂದ ಕೂಡಿದ ಕಾಲುವೆಗಳು ಗದ್ದೆಗಳೆಡೆಗಳಲ್ಲುಳ್ಳ ಹಳ್ಳಗಳಲ್ಲಿ ಮುತ್ತುಗಳನ್ನು ಸುರಿಸುತ್ತವೆ. ಕಡಲ ಕರೆಯಲ್ಲಿ ಕೇದಗೆ ಬನಗಳನ್ನು ಇದಿರು ಪಕ್ಕಗಳಲ್ಲಿ ಕೊಂಡ ಬಂದರುಗಳಲ್ಲಿ ಹಡಗುಗಳೇ ಮೊದಲಾದ ಸಮುದ್ರಯಾನಗಳು ಆನೆಗಳನ್ನು ಕೊಂಡುಬಂದು ಇಳಿಸುತ್ತವೆ.

1076. ಕುರಿಂಜಿ ನೆಲದ ಸಣ್ಣ ಸಣ್ಣ ಊರುಗಳು ತುಂಬಾ ಜೇನುಹಾಕಿ ಕಲಸಿದ ಕೆಂಪಗಾದ ತಿನೆ ಧಾನ್ಯದ ಹಿಟ್ಟನ್ನು ಒಳಗೊಂಡುದು. ಮುಲ್ಲೈನೆಲಕ್ಕೆ ತಕ್ಕುದಾದ ವಿಶಾಲವಾದ ಪಾಡಿ[2]ಗಳು ಹಾಲು ಸೇರಿದ ಅಡುಗೆ ಮಾಡಿದ ಸಣ್ಣಕ್ಕಿಯ ಅನ್ನವನ್ನೊಳ ಕೊಂಡುದು. ಮರುದ ನೆಲದಲ್ಲಿ ಶೀತಲವಾದ ಹದವಾದ ನೀರಿನ ಪ್ರದೇಶಗಳುಳ್ಳ ಊರುಗಳು ಪರಿಶುದ್ಧವಾದ ಬತ್ತದ ಅಕ್ಕಿಯ ಅನ್ನವನ್ನೂ, ತುಪ್ಪವನ್ನೂ, ಕಬ್ಬನ್ನೂ, ಇನಿದಾದ ಫಲಗಳನ್ನೂ ಕೊಂಡ ಆಹಾರವನ್ನು ಒಳಕೊಂಡಿವೆ. ನೆಯ್ದಲ್ ನೆಲವಾದ ಕಡಲಿನಿಂದ ಸುತ್ತುವರಿದ ಎಡೆಗಳು ಮೀನುಗಳಿಂದ ಸಮೃದ್ಧವಾದ ಪುಷ್ಕಲವಾದ ಆಹಾರವನ್ನು ಒಳಗೊಂಡಿವೆ.

1077. ಕುರಿಂಜಿ ನೆಲದಲ್ಲಿ ಕೊಳಲಂತೆ ಶಬ್ದಿಸುವ ತುಂಬಿಯ ಕೂಟಗಳು ಕುರಿಂಜಿ ರಾಗಗಳನ್ನು ಹಾಡುವುವು. ಮುಲ್ಲೆ ನೆಲದಲ್ಲಿ ಮೃದಂಗವೇ ಮೊದಲಾದ ಪರೆಗಳು ಮೇಘಗಳಂತೆ ಶಬ್ದಿಸಲು, ಮುಲ್ಲೆ ಬಳ್ಳಿಗಳು ಪುಷ್ಪಿಸುವುವು. ಮರುದ ನೆಲವು ತೊಂಡು ಮಾತಾಡುವ ಮೃದುವಾದ ಸ್ವಭಾವವುಳ್ಳ ಗಿಳಿಮರಿಗಳು ತಮಗೆ ನಿದ್ರಿಸುವ ಎಡೆಗಳನ್ನಾಗಿ ಮಾಡಿಕೊಂಡಿರುವ ಮರುತ ಮರಗಳನ್ನು ಒಳಕೊಂಡಿವೆ. ನೆಯ್ದಲ್ ನೆಲಗಳು ನೆಳಲನ್ನು ತರುವ ಕೇದಗೆ ಬನಗಳಿಂದ ಸುತ್ತುವರಿದ ನೆಯ್ದಲ್ ಹೂಗಳು ಅರಳಿರುವ ಜಲವಸತಿಗಳನ್ನೊಳಕೊಂಡಿವೆ.

1075. ಕೊಣ್ಬಲ್ ವಾನತ್ತಿನ್ ಮಣಿಚೊರಿ ವನಕುಲ ವರೈಪ್ಪಾಲ್;
ತಣ್ಬುಟ್ ಣರ್ಕ್ಕೊನ್ಱಿ ಪೊನ್ಚೊರಿ ವನತಳ ವಯಱ್ಪಾಲ್;
ವಣ್ಬುನ್ ಮುತ್ತನೀರ್ ಮಣ್ಬುಕಾಲ್ ಚೊರಿವನ ವಯಱ್ಪಾಲ್;
ಕಣ್ಬುನ್ ಮುನ್ಱುಱೈ ಕ್ಕರಿಚೊರಿ ವನಕಲ ಙ್ಕಟಱ್ಪಾಲ್.

1076. ತೇನಿ ಱೈನ್ತಚೆ ನ್ತಿನೈಯಿಟಿ ತರುಮಲೈ ಚ್ಚಿಱೂರ್;
ಪಾನಿ ಱೈನ್ತಪುಱ್ ಪತತ್ತನ ಮುಲ್ಲೈನೀಳ್ ಪಾಟಿ;
ತೂನೆ ಲನ್ನನೆಯ್ ಕನ್ನಲಿನ್ ಕನಿಯತ ಙ್ಕುಱೈಯೂರ್;
ಮೀನಿ ಱೈನ್ತಪೇ ರುಣವಿನ ವೇಲೈವೈ ಪ್ಪಿಟಙ್ಕಳ್.

1077. ಕುಟಲ್ಚೆಯ್ ವಣ್ಟಿನ ಙ್ಕುಱಿಞ್ಚಿಯಾಟ್ ಮುರಲ್ವನ ಕುಱಿಞ್ಚಿ;
ಮುಟವು ಕಾರ್ಕೊಳ ಮುಲ್ಲೈಕಣ್ ಮುಕೈಪ್ಪನ ಮುಲ್ಲೈ;
ಮಟಲೈ ಮೆನ್ಕಿಳಿ ಮರುತಮರ್ ಚೇಕ್ಕೈಯ ಮರುತಮ್;
ನಿಟಲ್ಚೆಯ್ ಕೈತೈಚೂಟ್ ನೆಯ್ತಲ ಙ್ಕಟಿಯನ ನೆಯ್ತಲ್.

---

1. ಹೊನ್ನಿನಂತಹ ಬಣ್ಣವುಳ್ಳ ಎಸಳುಗಳನ್ನು ಸುರಿಸುತ್ತವೆ. 2. ಪಾಡಿ – ಗ್ರಾಮ.

ಕುರಿಂಜಿ ನೆಲದ ಮಹಿಮೆ

1078. ಹಿಂದೆ ಹೇಳಿದ ಸಂಪತ್ಸಮೃದ್ಧವಾದ ಈ ನಾಲ್ಕು ಬಗೆಯ ನೆಲಗಳಲ್ಲಿ ಬೆಟ್ಟಗಳಿಂದ ಸುತ್ತುವರಿದ ಕುರಿಂಜಿ ನೆಲದ ಪ್ರದೇಶಗಳಲ್ಲಿ ಎಲ್ಲೆಲ್ಲಿಯೂ ಬೇಡರು ತಿನ್ನೈ ಧಾನ್ಯವನ್ನು ಬೆಳೆಸಿರುವ ಹಲವು ದೊಡ್ಡ ಗದ್ದೆಗಳಲ್ಲೆಲ್ಲಾ ಬಿಚ್ಚಿದ ರೆಕ್ಕೆಗಳನ್ನೂ ಸೋಗೆಗಳನ್ನೂ ಉಳ್ಳ ನವಿಲುಗಳು ಕೂಡಿ ಇರುವುವು. ಆ ತಿನ್ನೈ ಗದ್ದೆಗಳನ್ನು ಕಾಯುವವರು ಸುರುಳಿಯಾದ ತಲೆಕೂದಲುಗಳನ್ನುಳ್ಳ ನವಿಲಿನಂತಹ ಸೌಂದರ್ಯವುಳ್ಳ ಕೊರತಿಯರು.

ಶ್ರೀ ಕಾಳಹಸ್ತಿ

1079. ಸುಂದರವಾದ ವಿಸ್ತಾರವಾದ ವಿಷ್ಣುಲೋಕದಲ್ಲಿ ಬಾಳುವ ದೇವ ಸ್ತ್ರೀಯರ ಕರಿಯ ತಲೆಕೂದಲುಗಳಲ್ಲುಳ್ಳ ತುಂಬಿಗಳು, ಕಾಂತಿಸೂಸುವ ಆಭರಣಗಳನ್ನು ಧರಿಸಿದ ಮೊಲೆಗಳನ್ನುಳ್ಳ ಕೊರತಿಯರ ಕೂದಲುಗಳಲ್ಲಿ ಮುಳುಗಿ ಅಲ್ಲಿಂದ ಬೇರೆಡೆ ಹೋಗದೆ ಇರುವಂತಹ ಎಡೆಗಳನ್ನೂ, ಕೆಂಪಗಾದ ಕಣ್ಣುಗಳನ್ನುಳ್ಳ ವಿಷ್ಣುವನ್ನು ವೃಷಭವಾಹನವಾಗುಳ್ಳ ಶಿವಪರಮಾತ್ಮನ ಶ್ರೀ ಕಾಳಹಸ್ತಿ ಎಂಬ ಮೇಘಗಳಿಂದ ಸುತ್ತುವರಿದ ಬೆಟ್ಟವನ್ನೂ ತನ್ನಲ್ಲಿ ಒಳಕೊಂಡುದರಿಂದ, ಆ ಕುರಿಂಜಿ ನೆಲವು ಹಿರಿಮೆಯುಳ್ಳುದಾಗಿದೆ.

1080. ಅಲ್ಲಿನ ವಿಶೇಷವಾದ ಭಾಗ್ಯವನ್ನು ನೆನೆದು, ತಪವನ್ನು ಮಾಡಿದ ದೇವತೆಗಳೂ, ದೇವಸ್ತ್ರೀಯರೂ, ಎಣೆಯಿಲ್ಲದ ಬೇಡರುಗಳಾಗಿಯೂ ಬೇಡಿತಿಯರಾಗಿಯೂ ಹುಟ್ಟಿ, ನಮಿಸುವುದಕ್ಕೆಡೆಯಾದ, ಗಂಗೆಯು ಇರುವ ಜಡೆಯನ್ನುಳ್ಳ ಶಿವಪರಮಾತ್ಮನು ಅನುಗ್ರಹಿಸಿದ ತಿರುವಿಡೈಚ್ಚುರವೂ, ಇದ್ದು ವ್ಯಾಪಿಸಿದ ಬಾಳ್ವೆವುಳ್ಳುದೆಂದು ಹೇಳತಕ್ಕ ಮೇಲ್ಮೆಯಿಂದ ಮಿಕ್ಕುದು ಆ ಸಂಪತ್ತುಳ್ಳ ಕುರಿಂಜಿ ನೆಲ.

1078. ಮಲ್ಕು ಮೆಪ್ಪರು ನಿಲಙ್ಕಳಿಲ್ ವರೈಪುಣರ್ ಕುಱಿಞ್ಚಿ
ಯೆಲ್ಲೈ ಯೆಙ್ಕಣು ಮಿಱವುಳ ರೇನಲ್ ಮುನ್ ವಿಳೈಕ್ಕುಮ್
ಪಲ್ಪೆ ರುಮ್ಪುನಮ್ ಪಯಿಲ್ವನ ಪಟರ್‌ಚಿಱಕ್ಕೈ ತ್ತೋಕೈ,
ಚೊಲ್ಲು ಮಪ್ಪುನ ಙ್ಕಾಪ್ಪವು ಞ್ಚುರಿಕುಟಿ ಱ್ಱೋಕೈ.

1079. ಅಙ್ಕಣ್ ವಾನ್‌ಮಿಚೈ ಯರಮ್ಪೈಯರ್ ಕರುಙ್ಕುಟಿಱ್ ಚುರುಮ್ಪು
ಪೊಙ್ಕು ಪೂಣ್‌ಮುಲೈ ಕೊಟಿಚ್ಚಿಯರ್ ಕುಟಿನ್‌ಮೂಟ್‌ಕಿ ಪ್ಪೋಕಾ
ಚ್ಚೆಙ್ಕಣ್ ಮಾಲ್‌ವಿಟೈ ಯಾರ್‌ತಿರು ಕ್ಕಾಳತ್ತಿ ಯೆನ್‌ನು
ಮಙ್ಕಲ್ ಚೂಟ್‌ವರೈ ನಿಲವಿಯು ವಾಟ್‌ವಿನಾನ್ ಮಲ್‌ಕುಮ್.

1080. ಪೇಱು ವೇಱುಚೂ ಟೆಮ್ಮೈಯುವ ರರಮ್ಪೈಯರ್ ಪಿಱನ್ತು
ಮಾಱಿಲ್ ವೇಟರು ಮಾತರು ಮಾಕವೇ ವಣಙ್ಕುಮ್
ಆಱು ಚೂಟ್‌ಚಟೈ ಯಣ್ಣಲಾರ್ ತಿರುವಿಟೈ ಚ್ಚುರಮು
ಙ್ಕಾಱು ಮೇನ್‌ಮೈಯಿನ್ ಮಿಕ್ಕತ ನ್ನಾಟ್ಟುವಣ್ ಕುಱಿಞ್ಚಿ.

1081. ಚೆಲುವಾದ ಚಿನ್ನದ ಕಾಂತಿಯುಳ್ಳ ಮಲರುಗಳನ್ನು ಅಲಂಕರಿಸಿಕೊಂಡ, ನೀಳವಾಗಿ ಕಟ್ಟಿದ ತಲೆಕೂದಲುಗಳುಳ್ಳ ಬೇಡಸ್ತ್ರೀಯರೊಡನೆ ದೇವಸ್ತ್ರೀಯರು, ಸುವಾಸನೆಯಿಂದ ಕೂಡಿದ ಹೂಗಳನ್ನುಳ್ಳ ಬೆಟ್ಟದ ಪಕ್ಕಗಳಲ್ಲುಳ್ಳ ಕೊಳಗಳಲ್ಲಿ ಸ್ನಾನಮಾಡಿ, ಮುಳುಗತಕ್ಕ ನಿಡಿದಾದ ಎಡೆಗಳನ್ನೂ, ದೇವತೆಗಳ ನಾಯಕನಾದ ಶಿವಪರಮಾತ್ಮನು ಇದ್ದು ಅನುಗ್ರಹಿಸಿರುವ ತಿರುಕ್ಕಾಳುಕ್ಕುನ್ರವನ್ನೂ ಆ ಕುರಿಂಜಿ ನೆಲವು ತನ್ನಲ್ಲಿ ಒಳಕೊಂಡಿದೆ. ಆದುದರಿಂದ ಮರದ ಗೆಲ್ಲುಗಳ ಹೂಗಳಲ್ಲಿ ತುಂಬಿಗಳು ಮುಸುರುವುದಕ್ಕೆಡೆಯಾದ ಆ ನಾಡ ಕುರಿಂಜಿ ನೆಲವು ಮಾಡಿದ ತಪಸ್ಸು ಕಮ್ಮಿಯದೇನು?

ನಾಲ್ಕು ನೆಲಗಳಲ್ಲಿಯೂ ಸೇರದಿರುವ ಕುರಿಂಜಿ ಮುಲ್ಲೈ ನೆಲಗಳ
ಮಧ್ಯಪ್ರದೇಶದ ನೀರಿಲ್ಲದ ಬಂಜರುಭೂಮಿ – ಪಾಲೈ

1082. ಸುಂದರವಾದ ಮುಲ್ಲೈ ನೆಲಕ್ಕೂ ಕುರಿಂಜಿ ನೆಲಕ್ಕೂ ಸಮೀಪದ ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದ ಎತ್ತರವಾದ ನೆಲಗಳಾಗುಳ್ಳ ಕೆಲ ಎಡೆಗಳು ನೀಲಕಾಂತಿಯುಳ್ಳವಳಾದ ಖಡ್ಗವನ್ನು ತಾಳಿದ ದುರ್ಗೆಯ ದೇವಾಲಯಗಳನ್ನು ಒಳಕೊಂಡಿದ್ದು ವಸಂತಕಾಲದ ನಡುಮಧ್ಯಾಹ್ನದಲ್ಲಿ ಪಾಲೈನೆಲ[1]ವೆಂದು ಕರೆಯುವಂತಿದೆ.

1083. ಹೂ ಗೊಂಚಲುಗಳಲ್ಲಿ ಮುಸುರಿರುವ ತುಂಬಿಗಳನ್ನು ಓಡಿಸಿಕೊಂಡು ಬರುವ, ದೊಡ್ಡ ಪ್ರವಾಹವನ್ನುಳ್ಳ ಕಾಡಿನ ತೊರೆಗಳು ಎಡೆಎಡೆಗಳಲ್ಲಿ ಹರಿದು, ಹೊರಪಕ್ಕಗಳಲ್ಲುಳ್ಳ ಮೃದುವಾದ ಎಲೆಗಳನ್ನುಳ್ಳ ಕುರುಂದ ಮರದ ಮೇಲೆ ಹಬ್ಬಿದ ಹೂವಿನ ಹಂದರದಂತಿರತಕ್ಕ ಮುಲ್ಲೈ ಬಳ್ಳಿಗಳ ಮೃದುವಾದ ಪೊದರುಗಳಲ್ಲಿ ಹುದುಗಿರುವ ಮೊಲಗಳನ್ನು ಓಡಿಸಿ, ಆಮೇಲೆ ತಾನಾಗಿಯೇ ಅಡಗುವ ನೀರಪ್ರದೇಶಗಳುಳ್ಳ ಮುಲ್ಲೈ ನೆಲಗಳೂ ಅಲ್ಲಿವೆ.

1081. ಅಮ್ಪೊನ್ ವಾರ್ಕುಟಜ್ ಕೊಟಿಚ್ಚಿಯ ರುಟರ್ರೈ ಮಕಳಿರ್
ವಮ್ಪು ಲಾಮಲರ್ ಚ್ಚುನೈಪಟಿ ನ್ತಾಟುನೀಳ್ ವರೈಪ್ಪಿನ್
ಉಮ್ಪರ್ ನಾಯಕರ್ ತಿರುಕ್ಕಟಿ ಕ್ಕುನ್ಜಮು ಮುಟೈತ್ತಾಲ್
ಕೊಮ್ಪರ್ ವಣ್ಟುಚೂಟ್ ಕುಜಿಞ್ಚಿಜೆಯ್ ತವಜ್ಕುಱೈ ಯುಟತೋ?

1082. ಕೋಲ ಮುಲ್ಲೈಯು ಜ್ಕುಜಿಞ್ಚಿಯು ಮಟುತ್ತಚಿ ಲ್ಲಿಟಙ್ಕ
ಣೀಲ ವಾಟ್ಪಟೈ ನೀಲಿಕೋ ಟ್ಟಙ್ಕಳು ನಿರನ್ತು
ಕಾಲ ವೇನಿಲಿಜ್ ಕಟುಮ್ಪಕಜ್ ಪೊಟುತಿನೈ ಪ್ಪಜಿ
ಪ್ಪಾಲೈ ಯುಞ್ಚ್ಛೊಲ ಲಾವನ ವುಳಪರನ್ ಮುರಮ್ಪು.

1083. ಚೊಲ್ಲು ಮೆಲ್ಲೈಯಿನ್ ಪುಱತ್ತನ ತುಣರ್ಚ್ಚುರುಮ್ ಪಲೈಕ್ಕುಮ್
ಪಲ್ಪೆ ರುಮ್ಪುನಜ್ ಕಾನಿಯಾ ಜಟೈಯಿಟೈ ಪರನ್ತು
ಕೊಲ್ಲೈ ಮೆಲ್ಲಿಣರ್ ಕ್ಕುರುನ್ತಮೇಜ್ ಪಟರ್ನ್ತ ಪೂಮ್ ಪನ್ತರ್
ಮುಲ್ಲೈ ಮೆನ್ಪುತನ್ ಮುಯಲುಕ್ಕೈ ತ್ತಟಙ್ಕುನೀಙ್ ಮುಲ್ಲೈ.

---

1. ಕುರಿಂಜಿ ನೆಲದಲ್ಲಿರುವ ದೇವರು – ಮುರುಗನ್, ಮುಲ್ಲೈ - ವಿಷ್ಣು, ಮರುದಂ - ಇಂದ್ರ, ನೈದಲ್ - ವರುಣ, ಪಾಲೈ - ದುರ್ಗೆ.

1084. ಎರಡಾಗಿ ತುಂಡುಮಾಡಿದ ಶೀತಲವಾದ ಚಂದ್ರನಂತಿರತಕ್ಕ ನೆತ್ತಿಯನ್ನುಳ್ಳ ಗೊಲ್ಲಿತಿಯರ ಹಲ್ಲುಗಳ ಸೌಂದರ್ಯವನ್ನು ಮುಲ್ಲೆಯ ಮೊಗ್ಗುಗಳು ಕದ್ದುಕೊಂಡಿವೆ ಎಂದು 'ಕಳಾ' ಹಣ್ಣುಗಳ ಸಣ್ಣ ಗಿಡಗಳು ಹೂಗಳನ್ನು ಸುರಿಸುವುವು. ಅದನ್ನು ಆ ಪ್ರಮಾಣದಿಂದ ಮುಲ್ಲೆಯು ತಿಳಿದು, ಆ ಗೊಲ್ಲಿತಿಯರ ಕೂದಲ ಕಾಂತಿಯಂತೆ ಇರುವ ಹಣ್ಣುಗಳನ್ನೊಳಕೊಂಡ ಆ ಕಳಾ ಮರಗಳನ್ನು ಅವುಗಳಿಗೂ ಆ ಕದಿಯುವ ಸ್ವಭಾವವಿದೆಯೆಂದು ನಗುವುವು.

1085. ಆ ಮುಲ್ಲೆ ನೆಲದಲ್ಲಿ ಗೊಲ್ಲಿತಿಯರ ಕತ್ತಿಯಲಗಿನಂತಿರುವ ಎರಡು ಕಣ್ಣುಗಳಿಗೆ ಸೋಲನ್ನು ಹೊಂದಿದ ಜಿಂಕೆಯ ಕೂಟಗಳು ಎಲ್ಲೆಲ್ಲಿಯೂ ಇವೆ. ಆ ಗೊಲ್ಲಿತಿಯರ ನಡುಗಳಿಂದ ಸೋಲನ್ನು ಹೊಂದಿದ ಹೂವಿನ ಬಳ್ಳಿಗಳು ಎಲ್ಲೆಲ್ಲೂ ಇವೆ. ಮುಲ್ಲೆ ನೆಲಕ್ಕೆ ತಕ್ಕುದಾದ ದೈವವೆಂದು ಅಸಾಧ್ಯವಾದ ಅರ್ಥಪುಷ್ಟಿಯುಳ್ಳ ತಮಿಳು ಗ್ರಂಥಗಳಲ್ಲಿ ಹೇಳಿರುವ ಕೆಂಪಗಾದ ಕಣ್ಣುಗಳುಳ್ಳ ವಿಷ್ಣುವು ಪೂಜಿಸಿದ ಶಿವಪರಮಾತ್ಮನು ಸಂತೋಷದಿಂದ ವಾಸಿಸಿರುವ ತಿರುಮುಲ್ಲೈವಾಯಿಲ್ ಎಂಬ ಸ್ಥಳವೂ ಅಲ್ಲಿದೆ.

1086. ವಿಭೂತಿಯು ಶೋಭಿಸುವ ದೇಹವನ್ನುಳ್ಳ ಶಿವಪರಮಾತ್ಮನ ಬಾಲಚಂದ್ರನು ಶೋಭಿಸುವ ಶ್ರೀಮುಡಿಯಲ್ಲಿರುವ ಉಪಮೆಯಿಲ್ಲದ ಗಂಗೆಯು, ಅವನಿಗೆ ಮಜ್ಜನ ಜಲವನ್ನು ತರುವ ಕಾರಣದಿಂದ ಈ ಲೋಕದಲ್ಲಿ ಬಂದು ಸೇರಿ, ನೀರನ್ನು ತರುವ ಕಾಂತಿಯುತವಾದ ಮಲರುಗಳನ್ನುಳ್ಳ ಕಲಿಗೈ ಮಾನಗರ (ತಿರುವೂರಲ್) ಎಂಬ ಸ್ಥಳವನ್ನು ಪ್ರತ್ಯೇಕವಾಗಿ ತನ್ನ ಹಿರಿಯ ಕ್ಷೇಮನಿಧಿ ಎಂದು ಹೇಳುವಂತೆ, ಮುಲ್ಲೆ ನೆಲವು ಒಳಗೊಂಡು ಶೋಭಿಸುವುದು.

1084. ಪಿಳವು ಕೊಣ್ಡತಣ್ ಮತಿನುತಲ್ ಪೇತೈಯ ರೆಯಿಱ್ಱೈ
ಕ್ಕಳವು ಕೊಣ್ಡತು ತಳವೆನ ಕ್ಕಳವಲರ್ ತೂಱ್ಱುಮ್;
ಅಳವು ಕಣ್ಡವರ್ ಕುಟಿನಿಱ ಱ್ಱನಿಯುಮು ಕ್ಕಳವೈ
ತ್ತಳವು ಕಣ್ಡಿತಿರ್ ಚಿರಿಪ್ಪನ ತಮಕ್ಕುಮು ಣ್ಡೆನ್ಱು.

1085. ಮಱಿತ್ತ ಯರ್ಕ್ಕುವಾಳ್ ವಿಟಿಯಿಣೈ ಕೋಱ್ರಮಾನ್ ಕುಲಙ್ಗಳ್
ಎಙ್ಗು; ಮಱ್ಱವ ರಿಟೈಕ್ಕಿಟೈ ಮಲರ್ಕ್ಕೊಟಿ ಯೆಙ್ಗುಮ್,
ಅಙ್ಗಣ್ 'ಮುಲ್ಲೈಯಿನ್ ಱಿಯ್ವ' ಮೆನ್ ಱರುನ್ತಮಿ ೞುರೈಕ್ಕುಙ್
ಚೆಙ್ಗಣ್ ಮಾಱಿಟು ಱ್ಱಿವನ್ಮಕಿೞ್ ತಿರುಮುಲ್ಲೈ ವಾಯಿಲ್.

1086. ನೀಱು ಚೇರ್ತಿರು ಮೇನಿಯರ್ ನಿಲಾತ್ತಿಕೞ್ ಮುಟಿಮೇನ್
ಮಾಱಿಲ್ ಕಱಿಕ್ಕೈತಾ ನವರ್ಕ್ಕುಮ ಱ್ಱನನ್ತರ ವಣೈನ್ತೇ
ಯೂಱು ನೀರ್ತರು ಮೊಳಿಮಲರ್ ಕ್ಕಲಿಕೈಮಾ ನಕರೈ
ನೇಱು ತನ್ಪೆರು ವೈಪ್ಪೆನ ವಿಳಙ್ಗುಮಾ ಮುಲ್ಲೈ.

1087. ಸುವಾಸನಾಯುತವಾದ ಮೃದುವಾದ ಮಲರುಗಳು ತುಂಬಿದ ಮುಲ್ಲೆಯ ಬಳ್ಳಿಗಳನ್ನುಳ್ಳ ಮುಲ್ಲೆ ನೆಲದ ಪಕ್ಕದಲ್ಲಿರುವ ಬಯಲ ನೆಲದಲ್ಲಿ, ಬೀಸುವ ತಿಳಿಯಾದ ಅಲೆಗಳುಳ್ಳ ಹಲ ನದಿಗಳು ಓಡಿ, ಹಸುರಾದ ಎಲೆಗಳನ್ನುಳ್ಳ ದೊಡ್ಡ ತಾವರೆಗಳು ಅರಳುವುದಕ್ಕೆಡೆಯಾದ ಗದ್ದೆಗಳ ಪಕ್ಕಗಳಲ್ಲೂ, ಪಕ್ಷಿಗಳ ಶಬ್ದದ ಹೆಚ್ಚಳವುಳ್ಳ ಬಲವಾದ ದಡಗಳನ್ನುಳ್ಳ ಕೊಳಗಳಲ್ಲೂ, ಏರಿಗಳಲ್ಲೂ ಆ ನದಿಗಳ ನೀರು ಬಂದು ಸೇರುವುದು.

1088. ವಿಶೇಷವಾದ ತಪಸ್ಸನ್ನುಳ್ಳ ವಸಿಷ್ಠಮುನಿಗಳೊಡನಿರುವ ಕಾಮ ಧೇನುವಿನ ಮೊಲೆಯು ಸುರಿಸಿದ ಹಾಲಾದುದು, ಹೆಚ್ಚುವ ತೀರ್ಥವಾಗಿ ರೂಪುಗೊಂಡು ನಂದಿಮಲೆಯಿಂದ ಬಂದೇ, ಆ ಎಡೆಯಲ್ಲುಳ್ಳ ಮುತ್ತುಗಳನ್ನೂ, ಚಂದ, ಅಗಿಲು ಮೊದಲಾದುವುಗಳೊಡನೆ ಮಣಿಗಳನ್ನೂ ಕೂಡಿಬಂದು ತಾವರೆಯ ತಟಾಕಗಳಲ್ಲಿ ತುಂಬು ವಂತೆ ಕೆಳಗಿಳಿದು ಓಡಿಬರುವುದು. ಅದು ಪಾಲಿಯಾರು[1] ಎಂದು ಹೇಳಲ್ಪಡುವುದು.

1089. ಪಾಲಾರು, ಮಗು ತನ್ನ ಕೈಯಿಂದ ತಡವಲು ಹೆಚ್ಚುವ ಹಾಲನ್ನು ಸುರಿಸುವ ಸ್ತನಗಳನ್ನುಳ್ಳ ತಾಯಿಯಂತೆ, ಕೃಷಿಕರು ವಸಂತಕಾಲದಲ್ಲಿ ಹೊಯಿಗೆಯ ದಿನ್ನೆಗಳನ್ನು ಕಟ್ಟಿ ಕಾಲುವೆಯನ್ನು ಮಾಡಲು, ತನ್ನ ಹೆಚ್ಚುವ ನೀರು ಕಾಲುವೆಗಳ ದಾರಿಯಾಗಿ ಎರಡು ಪಕ್ಕಗಳಲ್ಲೂ ತುಂಬಿ ಮೇಲೇರಿ ಹೋಗಿ, ಹಳ್ಳಪ್ರದೇಶಗಳಲ್ಲುಳ್ಳ ನಿಡಿದಾದ ಗದ್ದೆಗಳ ದೊಡ್ಡ ಮಡೆ[2]ಗಳನ್ನು ಒಡೆಯುವುದು.

1087. ವಾಚ ಮೆನ್‌ಮಲರ್ ಮಲ್ಕಿಯ ಮುಲ್ಲೈಚ್ಚೂಟ್ ಮರುತಮ್
ವೀಚು ತೆಣ್ಣಿರೈ ನತಿಪಲ ಮಿಕ್ಕುಯರ್ ನ್ದೋಟಿ
ಪ್ಪಾಚ ಟೈತ್ತಟ ನ್ತಾಮರೈ ಪಟನಙ್ಕಣ್ ಮರುಙ್ಕುಮ್
ಪೂಚಲ್ ವನ್‌ಕರೈ ಕ್ಕುಳಙ್ಕಳು ಮೇರಿಯುಮ್ ಪುಕುವ.

1088. ತುಙ್ಕ ಮಾತವನ್ ಚುರಪಿಯಿನ್ ತಿರುಮುಲೈ ಚೊರಿಪಾಲ್
ಪೊಙ್ಕು ತೀರ್‌ತ್ತಮಾಯ್ ನನ್ದಿಮಾಲ್ ವರೈಮಿಚೈ ಪ್ಪೋನ್ದೇ
ಅಙ್ಕ ಣೆತ್ತಿಲ ಞ್ಚನ್ದನ ಮಕಿಲೊಟು ಮಣಿಕಳ್
ಪಙ್ಕ ಯತ್ತಟ ನಿಱೈಪ್ಪವ ನ್ದಿಟಿವತು ಪಾಲಿ.

1089. ಪಿಳ್ಳೈ ತೈವರ ಪ್ಪೆರುಕುಪಾಲ್ ಚೊರಿಮುಲೈ ತ್ತಾಯ್‌ಪೋನ್
ಮಳ್ಳರ್ ವೇನಿಲಿನ್ ಮಣಱ್ಱಿಟರ್ ಪಿಱೈನ್ತುಕೈ ವರುಟ
ಲಳ್ಳ ನೀರಿರು ಮರುಙ್ಕುಕಾಲ್ ವಟಿವಿತ ನ್ದೇಱಿ
ಪ್ಪಳ್ಳ ನೀಳ್‌ವಯಱ್ ಪರುಮಟೈ ಯುಟೈಪ್ಪತು ಪಾಲಿ.

1. ಪಾಲಿವಾರು - ಪಾಲಾರು. 2. ಮಡೆ - ಮಾದು, ಅಣೆಕಟ್ಟಿನ ನೀರನ್ನು ಹೊರಬಿಡುವ ಬಾಗಿಲು.

1090. ಆ ರೀತಿಯ ನದಿಗಳು ಹರಿಯುವುದರಿಂದ ಗದ್ದೆಗಳ ಪಕ್ಕಗಳಲ್ಲಿ ಶಬ್ದಿಸುವ ಹೆಚ್ಚಿನ ಪ್ರವಾಹವು ತುಂಬಿ, ಬಲವಾದ ಕಟ್ಟೆಗಳನ್ನುಳ್ಳ ದೊಡ್ಡ ಕೊಳಗಳೊಡನೆ ಸೇರಿ, ಅವುಗಳಿಗೆ ಕಟ್ಟಲ್ಪಟ್ಟ ದೊಡ್ಡ ಬಾಗಿಲುಗಳುಳ್ಳ ಮದಗಗಳ ಬಾಯಿಗಳು ತೆರೆದು ಬಿಡಲು, ಆ ದ್ವಾರಗಳ ಮೂಲಕ ಹೊರಹೋಗಿ, ಕೃಷಿಕರು ನೀರಬರವನ್ನು ಕಂಡು ಘೋಷಿಸುವ ಧ್ವನಿಯು ಹೆಚ್ಚುವಂತೆ ವಿಸ್ತಾರವಾದ ಎಡೆಗಳುಳ್ಳ ಕಾಲುವೆಗಳ ಮೂಲಕವಾಗಿ ನೀರು ಹಾಯುವುದು.

1091. ಉಪಮಾತೀತವಾದ ಸಂಪತ್ತನ್ನು ಕೊಡುವ ಕೋಣಗಳನ್ನು ಕಟ್ಟಿದ ಹಲ ನೇಗಿಲುಗಳು ದಟ್ಟವಾಗಿ ಉಳಲು, ಹೀಗೆ ಗದ್ದೆಗಳನ್ನು ಉತ್ತು ಕೆಸರಾಗಿ ಮಾಡುವವರೂ, ಕೆಂಪಗಾದ ನೆಲ್ಲ ಬಿಳಿದಾದ ಮೊಳಕೆಗಳನ್ನು ಬೀಸಿ ಬಿತ್ತಿ ನಾಟಿ ಮಾಡುವವರೂ ಹಾಗೆ ಹಿಂದೆಯೇ ಬಿತ್ತಿ ಬೆಳೆದ ನಾಟಿಯನ್ನು ಕೀಳುವವರೂ, ನಾಟಿಯನ್ನು ನಡುವವರೂ ಆದ ಬೇರೆ ಬೇರೆ ಕೃಷಿಕರ ಹಲ ವೃತ್ತಿಗಳನ್ನು ಮಾಡುವವರ ಶಬ್ದವು ಹೆಚ್ಚುವುದು.

1092. ನೀರು ಬರುವ ದೊಡ್ಡ ಕಾಲುವೆಗಳನ್ನು ಬಾಳೆಮೀನುಗಳು ಅಡ್ಡವಾಗಿ ನಿಂತು ತಡೆಯಲು, ಅದರಿಂದ ಆ ನೀರು ತುಂಬಿ ಕಾಲುವೆಗಳ ದೊಡ್ಡ ಪಕ್ಕಗಳು ಒಡೆದು ಹೋಗುವಂತೆ ನೀರಕಾಲುವೆಗಳು ಬೇರೆ ದಾರಿಯಾಗಿ ಹೋಗುತ್ತವೆ. ಶೋಭಿಸುವ ನೀರುಳ್ಳ ಗದ್ದೆಗಳಲ್ಲಿ ದಟ್ಟವಾಗುಳ್ಳ ಶೇಲ್ ಮೀನುಗಳ ಕೂಟವು ಹಳ್ಳವಾದ ಗದ್ದೆಯ ನಿಡಿದಾದ ಪಕ್ಕಗಳಲ್ಲಿ ಒಂದರಮೇಲೊಂದಿದ್ದುಕೊಂಡು ಪಕ್ಕಗಳನ್ನು ಎತ್ತರವಾಗಿ ಮಾಡುವುವು. ಮದಗುಗಳ ಒಳಹೋಗಿ ನೀರು ಬರುವ ದಾರಿಯನ್ನು ದೊಡ್ಡ ವರಾಲ್ ಮೀನುಗಳು ತಡೆದುಬಿಡುವುವು.

1090. ಅನ್ನೆಯ ವಾಕಿಯ ನತಿಪರ ನ್ತಕನ್‌ಪಣ್ಣೈ ಮರುಙ್ಗಿನ್
ಕನ್ನೈನೆ ಟುಮ್ಪುನ ನಿಙ್ಕೈನ್ತುತಿಣ್ ಕರೈಪ್ಪೆರು ಙ್ಕುಳಙ್ಕಳ್
ಪುನ್ನೈಯಿ ರುಙ್ಕಟೆ ಮತಕುವಾಯ್ ತಿಙನ್ತ್ಟ ಪ್ಪುಙನ್ಪೋಯ್
ವಿನ್ನೈಞ ರಾರ್‌ಪ್ಪೊಲಿ ಯೆಟುಪ್ಪನೀರ್ ವಟಙ್ಕುವ ವಿಯನ್‌ಕಾಲ್.

1091. ಮಾಙಿಲ್ ವಣ್ಪಕ ಟ್ಟೇರ್‌ಪಲ ನೆರುಙ್ಕಿಟ ವಯಲ್ಕಳ್
ಚೇಙು ಚೆಯ್ಪವರ್, ಚೆನ್ನೆಲಿನ್ ವೆಣ್‌ಮುಳೈ ಚಿತಙಿ
ನಾಙು ವಾರ್‌ಪ್ಪವರ್, ಪಙಿಪ್ಪವರ್, ನಟುಪವ, ರಾನ
ವೇಙು ಪಲ್ವಿನೈ ಯುಟೈಪ್ಪೆರು ಙ್ಕವ್ವೈಯೈ ಮಿಕುಮಾಲ್.

1092. ವರುಮ್ಪು ನಙಿಪ್ಪೆರು ಙ್ಕಾಲ್ಕಳೈ ಮಙಿತ್ತ್ಟ ವಾಳೈ
ಪೆರುಙ್ಕು ಲೈಪ್ಪಟ ವಿಲಙ್ಕುವ ವಿಙಙ್ಕುನೀರ್ ಪ್ಪಟನಮ್;
ನೆರುಙ್ಕು ಚೇಙ್ಕುಲ ಮುಯರ್‌ತ್ತುವ ನೀಳ್‌ಕರೈ; ಪ್ಪಟುತ್ತು
ಚ್ಚುರುಙ್ಕಿಳ ನೀರ್‌ವಟಿ ಕ್ಕಙಿಪ್ಪನ ಪಙುವರಾ ಲ್ಗೊಕುತ್ತಿ.

1093. ನೀರ ಸಂಪತ್ತು ಹೆಚ್ಚುಳ್ಳ ದೊಡ್ಡ ಮರುದ ನೆಲದ ವಿಭಾಗದಲ್ಲಿ ಹುಣಿಗಳನ್ನುಳ್ಳ ದೊಡ್ಡ ಗದ್ದೆಗಳಲ್ಲಿ ಮೊಳೆದಿದ್ದ ಕೆಂದಾವರೆ ಹೂವಾದ ಆಸನದಲ್ಲಿ ಗರ್ಭವನ್ನು ಕೊಂಡು, ಬಲಹೀನವಾಗಿರುವ ಶಂಖಗಳು, ಆ ಹೂವಿನ ಒಳಗೆಲ್ಲಾ ಶಂಖಗಳ ಹಸುರಾದ ಕಾಂತಿಯನ್ನು ಪಡೆಯಲು, ಶೋಭಿಸುವ ಆಕಾಶದಲಿ ಪರಿವೇಷವನ್ನು ಕೊಂಡ ಪೂರ್ಣಚಂದ್ರನಂತೆ ಇವೆ.

1094. ಎತ್ತರವಾಗಿ ಬೆಳೆದ ಕೆಂಪಗಾದ ನೆಲ್ಲ ಪೈರಿನ ಪಕ್ಕದಲ್ಲಿ ಎತ್ತರವಾದ ಕಬ್ಬುಗಳು ಇವೆ. ಆ ಸುಂದರವಾದ ಕಬ್ಬುಗಳ ಒತ್ತಿನಲ್ಲಿ ದಟ್ಟವಾಗಿ ಕೌಂಗುಗಳಿವೆ. ಆ ಕೌಂಗುಗಳ ಪಕ್ಕದಲ್ಲಿ ನಿಡಿದಾದ ಗೊಲೆಗಳನ್ನುಳ್ಳ ತೆಂಗುಗಳೂ, ಹಸುರಾದ ಕಾಯಿಗಳನ್ನುಳ್ಳ ಬಾಳೆಗಳೂ, ಬಲವಾಗಿ ಬೆಳೆದ ಹಲಸಿನ ಮರಗಳೂ, ಜೋಲುವ ಇನಿದಾದ ಫಲಗಳುಳ್ಳ ಮಾವುಮರಗಳೂ ಇವೆ. ಇವನ್ನೊಳಗೊಂಡು ನಿಡಿದಾದ ಬೇಲಿಯನ್ನುಳ್ಳ ನಂದನವನಗಳಿವೆ.

1095. ಸಂಪತ್ಸಮೃದ್ಧವಾದ ಪುರಾತನ ಊರುಗಳು, ಶೀತಲವಾದ ದೊಡ್ಡ ಗದ್ದೆಗಳಿಂದ ಸುತ್ತುವರಿಯಲ್ಪಟ್ಟಿವೆ. ಈ ಊರುಗಳು ಬತ್ತದ ಕಣಜಗಳು ಧಾರಾಳವಾಗಿರುವ ಮನೆಗಳನ್ನೊಳಗೊಂಡಿವೆ. ನಂಟರನ್ನು ಸ್ವಾಗತಿಸಿ ಉಪಚರಿಸುವ ಹಿರಿಮೆಯಲ್ಲಿ ನೆಲೆಯಾದ ದೊಡ್ಡ ಕುಟುಂಬಗಳು ಗೃಹಸ್ಥಧರ್ಮದಲ್ಲಿ ಶೋಭಿಸುವುದಕ್ಕೆಡೆಯಾದ ಉಪ್ಪರಿಗೆಗಳಿರುವ ಬೀದಿಗಳನ್ನು ಪಡೆದಿವೆ.

1093. ತಳೈತ್ತ ಟಮ್ಪಣೈ ಯೆಟುನ್ತಜೆ ನ್ತಾಮರೈ ತ್ತವಿಚಿನ್
ಇಳೈತ್ತ ಕುಲ್ವಳೈ ಕಣ್ಪಟು ಪ್ಪನವಿಟೈ ಯೆಜ್ಝುವನ್;
ವಿಳೈತ್ತ ಪಾಚೊಳಿ ವಿಳಜ್ಝುನೀಳ್ ವಿಚುಮ್ಪಿಟೈ ಯೂರ್ಕೋಳ್
ವಳೈತ್ತ ಮಾಮತಿ ಪೋನ್ಱುಳ ಮರುತನೀರ್ ವೈಪ್ಪು.

1094. ಓಜ್ಝು ಚೆನ್ನೆಲಿನ್ ಪುಟೈಯುನ ವುಯರ್ಕಟಿಕ್ಕರುಮ್ಪು;
ಪೂಜ್ಝು ರುಮ್ಪಯುನ್ ಮಿಟೈವನ ಪೂಕ; ಮ ಪ್ಪೂಕ
ಪ್ಪಾಜ್ಝು ನೀಳ್ಕುಲೈ ತ್ತೆಜ್ಝುಪೈ ಜ್ಞತಲಿವಣ್ ಪಲವು
ತೂಜ್ಝು ತೀಜ್ಞನಿ ಚ್ಚೂತನೀಳ್ ವೇಲಿಯ ಚೋಲೈ.

10೨5. ನೀಟು ತಣ್ಪಣೈ ಯುಟುತ್ತನೀಣ್ ಮರುಜ್ಝಿನ; ನೆಲ್ಲಿನ್
ಕೂಟು ತುನ್ಱಿಯ ವಿರುಕ್ಕೈಯ; ವಿರುನ್ತಿರ್ ಕೊಳ್ಳುವನ್
ಪೀಟು ತಜ್ಝಿಯ ಪೆರುಜ್ಝುಟಿ ಮನೈಯುಱವ್ ಪಿಱಜ್ಝು
ಮಾಟ ಮೋಜ್ಝಿಯ ಮಱುಕನ; ಮಲ್ಲನ್ಮೂ ತೂರ್ಕಳ್.

1096. ವೇದಿಯರ ಸಂಪತ್ಸಮೃದ್ಧವಾದ ಊರುಗಳು, ಪುರಾತನವಾದ ನಾಲ್ಕು ವೇದಗಳೇ ಮೊದಲಾದ ಹಿರಿಮೆಯ ಶಾಸ್ತ್ರಗಳನ್ನೋದುವ ಶಬ್ದವು ಹೆಚ್ಚಿರುವ, ಗೃಹಸ್ಥಾಶ್ರಮಧರ್ಮದಲ್ಲಿ ಆಚರಿಸುವ ಆಹುತಿಗಳಿಂದ ಕೂಡಿದ ಯಾಗಗಳಲ್ಲಿದ್ದ ದಟ್ಟವಾದ ಹೊಗೆಯು, ಮಳೆಯನ್ನು ತರುವ ಮುಗಿಲಕೂಟಗಳನ್ನು ಪಸರಿಸುವ, ಸಂಪತ್ತಿನ ಹೆಚ್ಚಳವನ್ನು ಪಡೆದಿದೆ.

1097. ಕೇಡುಗಳು ಪರಿಹಾರವಾಗುವಂತೆ ತೀಕ್ಕಾಲಿ ಎಂಬ ಅಸುರನಿಗೆ ಪರಮಾತ್ಮನು ಅನುಗ್ರಹಿಸಿರುವಂತಹ, ಪುಣ್ಯಕಾರ್ಯಗಳನ್ನು ಮಾಡುವ ಸ್ತ್ರೀಯರು ಉದಿಸಿರುವ ವಂಶದ ವೇದಿಯರ[1] ಊರಾದ ತಿರುವಲ್ಲಂ ಎಂಬ ಸ್ಥಳವು ವಿಭೂತಿ ರುದ್ರಾಕ್ಷಿಗಳನ್ನು ಆಶಿಸುವ ಭಕ್ತಿಯು ಹೆಚ್ಚಳದ ಚೆಲುವಿನಿಂದ ಶೋಭಿಸುವುದು.

1098. ಆ ಮರುದ ನೆಲವು, ಕುರಿಂಜಿ ನೆಲದ ಬೆಟ್ಟದ ಬದಿಗಳಿಂದ ಬರುವ ಅರ್ವಿಗಳು ಸುರಿಯುವಾಗ ಕೊಂಡುಬರುವ ಕೆಂಪಗಾದ ರತ್ನಗಳೂ, ಕುರಿಂಜಿ ನೆಲದ ಸಮೀಪದ ಮುಲ್ಲೈ ನೆಲದಿಂದಲೂ ಸಂಗ್ರಹಿಸಿಕೊಂಡು ತಂದ ಮಲರುಗಳೂ ಕಲೆತು ತಟಾಕಗಳಲ್ಲಿ ತುಂಬಿ ಕೆಳಗಿಳಿದು ಬರುತ್ತಿರುವ ಪಾಲಾರು ನದಿಯ ದಡದಲ್ಲಿ, ಗಂಗೆಯನ್ನುಳ್ಳ ಜಟಾಜೂಟನಾದ ಶಿವಪರಮಾತ್ಮನು ಸಂತೋಷದಿಂದ ನೆಲೆನಿಂತಿರುವ ತಿರುಮಾಲ್‌ಪೇರು ಎಂಬ ಎಣೆಯಿಲ್ಲದ ದೇವಾಲಯವನ್ನೂ ಒಳಗೊಂಡಿರುವುದು.

1096. ತೊಲ್ಲೈ ನಾನ್‌ಮಱೈ ಮುತಱ್ಪಿರು ಙ್ಕಲೈಯೊಲಿ ತುವನ್‌ಱು
ಯಿಲ್ಲ ಱಮ್ಪುರಿ ನ್ಱ್ತಕುತಿ ವೇಳ್ವಿಯಿ ಲೆಟುನ್ತ
ಮಲ್ಕು ತಿಣ್‌ಪುಕೈ ಮಟೈತ್ತರು ಮುಕಿಱ್‌ಕುಲಮ್ ಪರಪ್ಪಿಱ್
ಚೆಲ್ವ ಮೋಙ್ಕಿಯ ತಿರುಮಱೈ ಯವರ್‌ಚೆಱುಮ್ ಪತಿಕಳ್.

1097. ತೀತು ನೀಙ್ಕಿಟ ತ್ತೀಕ್ಕಾಲಿ ಯಾಮವು ಣಱ್ಕ
ನಾತರ್ ತಾಮರುಳ್ ಪುರಿನ್ತತು; ನಲ್ವಿನೈ ಪ್ಪಯನ್‌ಚೆಯ್
ಮಾತರ್ ತೋನ್‌ಱಿಯ ಮರಪುಟೈ ಮಱೈಯವರ್ ವಲ್ಲಮ್
ಪೂತಿ ಚಾತನಮ್ ಪೋಱ್ಱಿಯ ಪೊಱಿಪ್ಪಿನಾಲ್ ವಿಳಙ್ಕುಮ್.

1098. ಅರುವಿ ತನ್ತಚೆ ಮ್ಮಣಿಕಳುಮ್ ಪುಱವಿಲಾಯ್ ಮಲರುಮ್
ಪರುವಿ ಯೋಟೈಕ ಣೆಱೈನ್ತಿಟಿ ಪಾಲಿಯಿನ್ ಕರೈಯಿನ್
ಮರುವು ಕಙ್ಕೈಯಾಟ್ ಚಟೈಯವರ್ ಮಕಿೞ್ನ್ತಮಾಱ್ ಪೇಱಾಮ್
ಪೊರುವಿಲ್ ಕೋಯಿಲು ಙ್ಕ್ಟೊನ್ತ ಪ್ಪುಱಮ್ಪಣೈ ಮರುತಮ್.

---

1. ಆ ವೇದಿಯರ ಕುಲದಲ್ಲಿ ಶಿವಭಕ್ತಿಯುಳ್ಳ ಸ್ತ್ರೀಯರು ಹುಟ್ಟಿದ್ದರೆಂದು ಪ್ರತೀತಿ.

1099. ಪಸರಿಸುವ ಅಲೆಗಳನ್ನುಳ್ಳ ನದಿಗಳ ದಡಗಳಲ್ಲಿರುವ ಅನೇಕ ಶಿವಾಲಯ ಗಳನ್ನೊಳಗೊಂಡು, ದೊಡ್ಡ ಸೊಂಡಿಲುಳ್ಳ ಆನೆಯ ಚರ್ಮವನ್ನು ಸುಲಿದ ಶಿವ ಪರಮಾತ್ಮನು ಆಶಿಸಿ ನೆಲೆನಿಂತ ತಿರುಪ್ಪಾಶೂರನ್ನೂ ಸಮೀಪದಲ್ಲಿ ಕೂಡಿಕೊಂಡ ಆ ಹಿರಿಮೆಯ ತಪಸ್ಸನ್ನು ಆ ಮರುದ ನೆಲವು ಮಾಡಿದೆಯಲ್ಲವೆ? ಆದುದರಿಂದ ಎಲ್ಲ ರಿಂದಲೂ ಆಶಿಸತಕ್ಕ ಅದರ ಮೇಲ್ಮೆಯನ್ನು ಕುರಿತು ಎತ್ತಿಹೇಳಬೇಕಾದುದು ಬೇರೇನಿದೆ?

ನೆಯ್ದಲ್ ನೆಲ

1100. ಹೂಗಳಿರುವ ನೀರು ತುಂಬಿದ ಬಯಲಿನ ಕೆಲಸಗಳಿಗೆ ಬೇಕಾದ ದೊಡ್ಡ ಅಂಗಳದಲ್ಲಿ ಮರುದ ನೆಲಕ್ಕುಳ್ಳ ರಾಗಗಳನ್ನು ಹಾಡುವ ವೇಷಧಾರಿಗಳು ತಮ್ಮ ಪ್ರೀತಿಯ ಬಂಧುಗಳೊಡನೆ ಕೂಡಿ, ತಟಾಕಗಳಲ್ಲಿ ಅರಳಿದ ಮೃದುವಾದ ಮಲರುಗಳನ್ನು ಧರಿಸಿಕೊಂಡು ಮಾಮರಗಳ ಪಕ್ಕಗಳಲ್ಲಿ ಶೀತಲವಾದ ನೆಳಲಲ್ಲಿದ್ದು ಮರುದ ನೆಲಕ್ಕೆ ತಕ್ಕ ವೀಣೆಯನ್ನು ಶಬ್ದಿಸುವರು. ಅಂತಹ ಸುಂದರವಾದ ಶೀತಲವಾದ ಬಯಲು ನೆಲದ ಸಮೀಪದಲ್ಲಿ ಕಪ್ಪುಕೆಸರ ನೆಲವನ್ನುಳ್ಳ ನೆಯ್ದಲು ನೆಲವು[1] ಇದೆ.

1101. ಪರಿಶುದ್ಧವಾದ ಬಿಳಿಯ ಮಳಲುಳ್ಳ ಕಡಲ ಕರೆಯಲ್ಲಿ ಬಾಳುತ್ತಿರುವ ಬೆಸ್ತರು ಬಲೆಗಳನ್ನು ಎತ್ತಿಕೊಳ್ಳುತ್ತಾರೆ. ಕೆಂಪಗಾಗಿ ನಿಡಿದಾದ ಕಣ್ಣುಗಳುಳ್ಳ ಬೆಸ್ತರ ಹೆಂಗಸರು ಶಿರುಂದಿ ಹೂಗಳ ಮಾಲೆಗಳನ್ನು ಧರಿಸಿಕೊಳ್ಳುತ್ತಾರೆ. ಆ ಎಡೆಯಲ್ಲಿ ಉಪ್ಪು ತಯಾರಿಸುವ ದೊಡ್ಡ ಸ್ಥಳಗಳಲ್ಲಿ ಜನರು ಉಪ್ಪನ್ನು ಅಳೆಯುವರು. ನವಿಲಿನ ಚೆಲುವನ್ನೂ ಹಂಸದ ಗಮನವನ್ನೂ ಉಳ್ಳ ಅಲ್ಲಿಯ ಹೆಂಗಸರು ಮುತ್ತುಗಳನ್ನು ಅಳೆಯುವರು.

1099. ವಿರುಮ್ಪು ಮೋನ್ಮೈಯೆನ್ ಪಕರ್ವತು? ವಿರಿತಿರೈ ನತಿಕಳ್
ಅರುಙ್ಕರೈಪ್ಪಯಿಲ್ ಚಿವಾಲಯ ಮನೇಕಮು ಮಣೈನ್ತು
ಪರುಙ್ಕೈಯ್ಯ ಯಾನೈಯೈ ಯುರಿತ್ತವ ರಿರುನ್ತವ ಪ್ಪಾಚೂರ್
ಮರುಙ್ಕು ಚೂಟ್ಟವಮ್ ಪುರಿನ್ತತನ್ ಱೋ? ಮಣ್ಣಿ ಮರುತಮ್.

1100. ಪೂಮ ರುಮ್ಪುನಲ್ ವಯಲ್ಕಳಮ್ ಪಾಟಿಯ ಪೊರುನರ್
ತಾಮ ರುಙ್ಕಿಳೈ ಯುಟನ್ಱಟ ಮೆನ್ಮಲರ್ ಮಿಲೈನ್ತು
ಮಾಮ ರುಙ್ಕುತ ಣ್ಣೀಟಲಿನ್ ಮರುತಯಾಟ್ ಮುರಲು
ಙ್ಕಾಮರ್ ತಣ್ಪಣೈ ಪ್ಪುಱತ್ತತು ಕರುಙ್ಕಟಿ ನೆಯ್ತಲ್.

1101. ತೂಯ ವೆಣ್ಮಟಱ್ಱೈ ಪರತವರ್ ತೊಟುಪ್ಪನ ವಲೈಕಳ್;
ಚೇಯ ನೀಳ್ವಿಟಿ ಪ್ಪರತ್ತಿಯರ್ ತೊಟುಪ್ಪನ ಚಿರುನ್ತಿ;
ಆಯ ಪೇರಳ ತ್ತಳವರ್ಕ ಳಳಪ್ಪನ ವುಪ್ಪು;
ಚಾಯನ್ ಮೆನ್ನಟೈ ಯಳತ್ತಿಯ ರಳಪ್ಪನ ತಾಳಮ್.

---

1. ಲವಣಭೂಮಿ.

1102. ಒಂದು ಜಾತಿಯ ಬೆಸ್ತರು ಕ್ರೂರವಾದ ಕೊಲೆಕೆಲಸವನ್ನು ಮಾಡಿ ಕೊಂದುಹಾಕಿದ ಕಡಲಮೀನುಗಳು ಮಾರಾಟವಾಗುವುವು. ಬೆಸ್ತರ ಹೆಂಗುಸರು ಮಣಲ ದಿಣ್ಣೆಯಲ್ಲಿ ಬಿದ್ದಿರುವ ಹವಳಗಳನ್ನು ಮಾರುವರು ಸಗರರಿಂದ ತೋಡಲ್ಪಟ್ಟಿದೆಂದು ಹೇಳುವ ಕಡಲಲ್ಲಿ ಕಡಲುಕರೆಯ ಒಂದು ಜಾತಿಯ ಜನರು ಮುಳುಗಿ ಶಂಖಗಳನ್ನು ಎತ್ತಿ ತರುವರು. ಎಳಮಾವಿನಕಾಯಿಯ ಹೋಳುಗಳಂತಿರುವ ಕಣ್ಣುಗಳುಳ್ಳ ಬೆಸ್ತರ ಹೆಂಗಸರು ಕಡಲತೀರದಲ್ಲಿ ಮೀಯುವರು.

1103. ಸುಳಿಗಳಿಂದ ಕೂಡಿದ ನೀರುಳ್ಳ ಕಡಲಿನಿಂದ ಸುತ್ತುವರಿದ ದಡ ಗಳಲ್ಲುಳ್ಳ ಪುನ್ನೆ ಮರಗಳ ಹೂಗಳು ತಮ್ಮ ಕಟ್ಟನ್ನು ಬಿಚ್ಚಿ ಹೊನ್ನಿನಂತಹ ಪರಾಗದ ಹುಡಿಗಳನ್ನು ಸುರಿಸುವುವು. ಅರಳುವ ನೆಯ್ದಿಲ ಮಲರುಗಳಲ್ಲಿ ತಂಗಿದ ತುಂಬಿಗಳು ಉಣ್ಣುವಂತೆ, ನಿಡಿದಾದ ಓಲೆಗಳನ್ನುಳ್ಳ ಕೇದಗೆಯ ಮುಳ್ಳು ಪೊದರುಗಳು ಕಟ್ಟಿದ ಬುತ್ತಿಯ ಆಹಾರವನ್ನು ಬಿಚ್ಚಿಕೊಡುವಂತೆ ಹೂವಿನ ಹುಡಿಗಳನ್ನು ಸುರಿಸುವುವು.

1104. ಕಡಲ ಕರೆಯ ಉದ್ಯಾನಗಳಲ್ಲಿ ಭಾಗ್ಯಸಮೃದ್ಧವಾದ ಬದಿಗಳಲ್ಲಿರುವ ದಾರಿಗಳನ್ನು, ಮುಳ್ಳುಗಳನ್ನುಳ್ಳ ಕೆಂಪಗಾಗಿಯೂ ಶೀತಲವಾಗಿಯೂ ಇರುವ ಸುವಾಸನೆಯಿಂದ ಕೂಡಿದ ಕೋಮಲವಾದ ಮೊಗ್ಗುಗಳು ತುಂಬಿದ ಮುಳ್ಳುಗಿಡಗಳು ಮರೆಮಾಡುತ್ತವೆ. ಆ ಎಡೆಯಲ್ಲುಳ್ಳ ನುಣುಪಾದ ಮಳಲ ಬಿಳುಪನ್ನು, ಹಂಸಗಳು ಓಡಿಯಾಡುವ ಬದಿಯ ದಾರಿಗಳಲ್ಲಿ ಮೊಳೆತುಳ್ಳ ಹೂಗಳ ಪರಾಗಗಳು ಮರೆಮಾಡುತ್ತವೆ.

1102. ಕೊಟುಮೈ ನೈತ್ತೊಟಿ ನುಳೈಯರ್‌ಕಳ್ ಕೊಟುಪ್ಪನ ಕೊಟುಮೀನ್;
ಪಟುಮಣಿ ಣಜ್ಕರೈ ನುಳೈಚ್ಚಿಯರ್ ಕೊಟುಪ್ಪನ ಪವಳಮ್;
ತೊಟುಕಟಲ್ ಟಜ್ಜಙ್ಕು ತುಱೈಯವರ್ ಕುಳಿಪ್ಪನ; ವವರ್‌ತಮ್
ವಟುವಕ್ಕಿರ್‌ಕ್ಕಣ್‌ಮ ಙೈಯರ್‌ಕುಳಿ ಪ್ಪನಮಣಾರ್ ಕೇಣಿ.

1103. ಚುಟಿಪ್ಪು ನಜ್ಕಟ ಲೋತಮುನ್ ಚೂಟ್‌ನ್ತುಕೊ ಣ್ಟಣಿಯ
ವಟಿಕ್ಕ ರೈಪ್ಪೂತಿ ಪೊನ್‌ನವಿಟ್ ಪ್ಪನಮಲರ್ ಪ್ಪುನ್‌ನೈ;
ವಿಟಿಕ್ಕು ನೆಯ್ತಲಿನ್ ವಿರೈಮಲರ್ ಕ್ಕಟ್‌ಚುರು ಮ್ಪುಣ್ಣ
ಕ್ಕಟಿಕ್ಕ ರೈಪ್ಪೂತಿ ಚೋಱವಿಟ್ ಪ್ಪನಮಟಱ್ ಕೈತೈ.

1104. ಕಾಯಲ್ ವಣ್‌ಕರೈ ಪ್ಪುರೈನೆಱಿ ಯುಟೈಪ್ಪನ ಕನಿಮುಟ್
ಟೀಯ ತಣ್ಣಱುಙ್ ಚೆಟಿಮುಕೈ ಚೆಱಿಯುಮು ಣ್ಟಙ್ಕಳ್;
ಆಯ ನುಣ್ಮಣಲ್ ವೆಣ್‌ಮೈಯೈ ಮಱೈಪ್ಪನ ವನ್‌ನ
ನ್ಯಾಯ ಮುನ್‌ಱುಱೈ ಚ್ಚೂಱಲ್‌ಚೂಟ್ ಙಾಟಲಿನ್ ಱಾತು.

1105. ಓಡಿಬೀಳುವ ದೊಡ್ಡ ಅಲೆಗಳಿರುವ ಕಡಲಭಾಗದ ಮುಂದೆ ಗುಡಿಸಲು ಗಳಿರುವ ಎಡೆಗಳಿವೆ. ಅಲ್ಲಿ ಬಿದಿರಂತಿರುವ ತೋಳುಗಳನ್ನುಳ್ಳ ಪರತಿ[1]ಯರು ತಾವು ಹರಹಿದ ಕಯಲು ಮೀನುಗಳಲ್ಲಿ ತಮ್ಮ ಕಣ್ಣುಗಳಾದ (ಕಯಲು) ಮೀನುಗಳನ್ನು ಬಿಟ್ಟು ಆ ಎಡೆಯಲ್ಲಿ ಹಿಡಿದ ಮೀನುಗಳನ್ನು ಮಾರುವರು. ಅವರ ಇನಿದಾದ ಬಾಲ ಭಾಷೆಯಂತಿರುವ ಮಾತುಗಳು ಆ ನೆಲದ ಶೆವ್ವಳಿರಾಗದ ವೀಣೆಯ ನಾದದಂತೆ ಇವೆ.

1106. ಅಜ್ಞಾನದ ಕೆಟ್ಟಕಾರ್ಯವುಳ್ಳ ಒಬ್ಬ ಅರಸನು ದೇವಾಲಯಗಳಿಗೆ ಸಲ್ಲತಕ್ಕ ವರಮಾನವನ್ನು ಕಮ್ಮಿಮಾಡಿದನು. ಆ ವರಮಾನವನ್ನು ಕಮ್ಮಿಮಾಡಿದ ಶಾಸನದಲ್ಲಿ, 'ತಿರುವೊತ್ತಿಯೂರನ್ನು ಬಿಟ್ಟು' ಎಂಬ ವಾರ್ತೆಯನ್ನು ಶಿವಪರಮಾತ್ಮನು ಬರೆದನು. ಅಂತಹ ಶಿವಪರಮಾತ್ಮನಿರುವ ದೇವಾಲಯದ ಒಂದು ಪಕ್ಕದಲ್ಲಿ ವಿಸ್ತಾರ ವಾದ ಕಡಲಕರೆ ಇರುವುದು.

1107. ಚರಿತ್ರೆಯ ಸತ್ಯವನ್ನು ನೆಲೆಯಾಗಿಸಿದ ಹೊಗಳಿಕೆಯನ್ನುಳ್ಳ[2] ತಿರುಮಯಿಲಾಪುರಿ, ಸುವಾಸನೆಯುಳ್ಳ ಮಲರುಗಳು ತುಂಬಿದ ಶೀತಲವಾದ ಉದ್ಯಾನ ಗಳಿಂದ ಸುತ್ತುವರಿದ ತಿರುವಾನ್ಮಿಯೂರು ಮೊದಲಾಗಿ, ವಿಷದ ಚೀಲವನ್ನುಳ್ಳ ಹಾವನ್ನು ಆಭರಣವಾಗಿ ಅಲಂಕರಿಸಿಕೊಂಡ ಶಿವಪರಮಾತ್ಮನು ನೆಲಸಿರುವ ಪವಿತ್ರ ಕ್ಷೇತ್ರಗಳು ಇನ್ನೂ ಹಲವು ಆ ನೆಯ್ದಲ ನೆಲದಲ್ಲಿ ಇವೆ. ಇವುಗಳೆಲ್ಲವನ್ನೂ ತನ್ನೆಡೆ ಯಲ್ಲಿ ಪಡೆಯುವುದಕ್ಕೆ ಆ ನೆಯ್ದಲ ನೆಲವು ಮಾಡಿದ ತಪಸ್ಸು ಸಣ್ಣದಾದೀತೋ ?

1105. ವಾಮ್ಪೊ ರುನ್ತಿರೈ ವಳಾಕಮುನ್ ಕುಟಿಪಯಿಲ್ ವರೈಪ್ಪಿ
ಱ್ರಾಮ್ಪ ರಪ್ಪಿಯ ಕಯಲ್ಕಳಿನ್ ವಿಟಿಕ್ಕಯ ಱವಿರ
ಕ್ಕಾಮ್ಪು ನೇರ್‌ವರು ನೊತ್ತೀಳಿಯರ್ ಕ್ಕಟಿಕ್ಕಯಲ್ ವಿಲೈಚೆಯ್
ತೇಮ್ಪೊ ತಿನ್ತಿನ್ ಮಟಲೈಮೊನ್ ಮೊಟಿಯಚಿ ವ್ವಟಿಯಾಟ್.

1106. ಮರುಟ್ಕೊ ಟುನ್ತೊಟಿಲ್ ಮನ್ನವ ವಿಱಿಕ್ಕಿಯ ವರಿಯ್ಕೈ
ನೆರುಕ್ಕಿ ಮುನ್ 'ತಿರು ವೊಱ್ಱಿಯೂರ್ ನೀಕ್ಕ' ವೆನ್ ಱಿಟುತುಮ್
ಒರುತ್ತರ್ ತಮ್ಪೆರು ಱ್ಕೋಯಿಲಿ ನೊರುಪುಱ ಱ್ಯೋಟನ್ತು
ತಿರುಪ್ಪ ರಪ್ಪೆಯು ಮುಟ್ಟೆಯತ ತ್ತಿರೈಕ್ಕಟಲ್ ವರೈಪ್ಪು.

1107. ಮೆಯ್ತ್ತ ರುಮ್ಪುಕಟ್ ತ್ತಿರುಮಯಿ ಲಾಪುರಿ ವಿರೈಚೊಟ್
ಮೊಯ್ತ್ತ ಯಱ್ಕತಣ್ ಪೊಟಿಱ್ಱಿರು ವಾನ್ಮಿಯೂರ್ ಮುತಲಾ
ಪ್ಪೈತ ರುಮ್ಪಣಿ ಯಣಿನ್ತವರ್ ಪತಿಯನೈ ಪ್ಪಲವಾಲ್;
ನೆಯ್ತ್ತ ಲೆಯ್ತುಮುನ್ ಚೆಯ್ತವ ನ್ನಿಱಿತ್ತ್ರ ವ ಱ್ಱಿಱೀತೋ ?

---

1. ಪರತಿ - ಬೆಸ್ತರ ಹೆಂಗಸು. 2. ಪೂಂಬಾವೈ ಎಂಬ ಹೆಣ್ಣಿನ ಎಲುಬುಗಳನ್ನು ಸೇರಿಸಿ ತಿರುಗಿ ಹೆಣ್ಣಾಗಿ ಮಾಡಿದ ಚರಿತ್ರೆಯು ಇಲ್ಲಿ ಸೂಚಿತವಾಗಿದೆ.

(1) ನೆಯ್ದಲೂ ಕುರಿಂಜಿ ನೆಲವೂ

1108. ಶಂಖಗಳನ್ನು ತನ್ನಲ್ಲಿ ಕೊಂಡು ಮೇಲೇಳುವ ತೆರೆಗಳುಳ್ಳ ಕಡಲಲ್ಲಿ ಹರಡಿರುವ ಹವಳದ ಬಳ್ಳಿಯು ಕೋಮಲವಾದ ತುದಿಗಳು ಪಕ್ಕದಲ್ಲಿ ದಟ್ಟವಾಗುಳ್ಳ ಚಂದನ ಮರಗಳ ಗೆಲ್ಲುಗಳಲ್ಲಿ ಹಬ್ಬುವುದಕ್ಕೆ ಎಡೆಯಾದ ನೆಯ್ದಲೂ ಕುರಿಂಜಿಯೂ ಕೂಡಿದ ನೆಲದ ಭಾಗಗಳಿವೆ. ಅಲ್ಲಾಡುವ ನಿಡಿದಾದ ಧ್ವಜಗಳನ್ನುಳ್ಳ ಮನೆಗಳಿರುವ ಮಾಮಲ್ಲೈ[1] ನಗರದಂತಿರುವ ನಗರಗಳು ಅಲ್ಲಿವೆ.

(2) ಮರುದವೂ ಕುರಿಂಜಿಯೂ

1109. ಮಲೆಗಳೇ ಕಣ್ಣುಗಳನ್ನು ತೆರೆದು ನೋಡುವುವು ಎಂದು ಹೇಳಲಾಗುವಂತೆ, ಗದ್ದೆಗಳಲ್ಲುಳ್ಳ ಶೇಲ್ ಮೀನುಗಳು ಮಲೆಗಳಲ್ಲುಳ್ಳ ಪಾರೆಕಲ್ಲುಗಳ ಮೇಲೆ ಹಾರಿ ಹೊರಳುವುವು. ಹುಣಿಗಳನ್ನುಳ್ಳ ಗದ್ದೆಗಳ ಪ್ರದೇಶದಲ್ಲಿ ನೊಗವನ್ನಿಟ್ಟ ಕರಿದಾದ ಕೋಣಗಳು ಹೋಗುವುವು ಎಂದು ಹೇಳುವಂತೆ ಕರಿದಾದ ಗಂಡು ಜಿಂಕೆಗಳು ಹಾರಿಹೋಗುತ್ತಿರುವ ಅಲೆಗಳುಳ್ಳ ನೀರನ್ನುಳ್ಳ ಗದ್ದೆಗಳು ಕುರಿಂಜಿ ನೆಲದೊಡನೆ ಸೇರಿದ ಎಡೆಗಳು ಹಲವಿವೆ.

(3) ಮುಲ್ಲೆಯೂ ಕುರಿಂಜಿಯೂ

1110. ಪಶುಕೂಟಗಳನ್ನುಳ್ಳ ಮುಲ್ಲೈ ನೆಲದ ಕಾಡಿನಲ್ಲಿದ್ದ ಸಣ್ಣ ಮೊಲವು ಮಲೆಯ ಶಿಖರದಲ್ಲಿ ತೋರುವ ಪೂರ್ಣಚಂದ್ರನಲ್ಲಿರುವ ಮೊಲದ ಗುರುತನ್ನು ನೋಡಿ ಅದು ತನ್ನ ಜಾತಿಗೆ ಸೇರಿದ ಮೊಲವೆಂದು ಅಭಿಪ್ರಾಯಪಟ್ಟು ಅಲ್ಲಿ ಸೇರುವುದರಿಂದಲೂ, ಸುವಾಸನೆಯುಳ್ಳ ಮುಲ್ಲೈ ನೆಲದಲ್ಲಿರುವ ಧಾನ್ಯರಾಶಿಗಳನ್ನು, ಮಲೆಗಳನ್ನು ಮಜ್ಜನ ಮಾಡಿಸುವ ನೀರುಳ್ಳ ಮೇಘಗಳು ಸೇರುವುದರಿಂದಲೂ, ಮುಲ್ಲೆಯೂ ಕುರಿಂಜಿಯೂ ಸೇರಿಕೊಂಡಿರುವಂತಹ ನೆಲಗಳು ಎಲ್ಲೆಲ್ಲಿಯೂ ಇವೆ.

1108. ಕೋಟು ಕೊಣ್ಟೆಟು ನ್ತಿರೈಕ್ಕಟಲಿಱ್ ಪವಳವೆನ್ ಕೊಟುನ್ತಾ
ಮಾಟು ಮೊಯ್ತ್ವರೈ ಚ್ಚನ್ತನ ಚ್ಚಿನೈಮಿಚ್ಚೈ ವಳರುಮ್
ನೀಟು ನೆಯ್ತಲು ಙ್ಕುಱಿಞ್ಚಿಯುಮ್ ಪುಣರ್ನಿಲಮ್ ಪಲವಾಲ್
ಆಟು ನೀಳ್ಕೊಟಿ ಮಾಟಮಾ ಮಲ್ಲೈಯೇ ಯನ್ನೈಯ.

1109. ಮಲೈವಿ ಟಿಪ್ಪನ ವೆನವಯಲಿಱ್ ಚೇಲ್ವರೈ ಪಾಱಿ
ತ್ತಲೈಯು ಕೈಪ್ಪವು ನ್ತಳೈಚ್ಚಿಱು ವಿಟೈನೆಟು ಙ್ಕರುಮಾನ್
ಕಲೈಕು ತಿಪ್ಪನ ಕರುಪ್ಪಕ ಟ್ಟೇರ್ನಿಕರ್ ಪ್ಪವುಮಾಯ್
ಅಲೈಪು ನಲ್ಪಣೈ ಕುಱಿಞ್ಚಿಯೋ ಟಣೈವನ ವನೇಕಮ್.

1110. ಪುಣರ್ನ್ತ ವಾನಿರೈ ಪ್ಪುಲವಿಟೈ ಕ್ಕುಱುಮುಯಲ್, ಪೊರುಪ್ಪಿಶ್
ಅಣೈನ್ತ ವಾನ್ಮತಿ ಮುಯಲಿನೈ ಯಿನಮೆನ ವಣೈನ್ತು
ಮಣಙಕೊಳ್ ಕೊಲ್ಲೈಯಿನ್ ವರಕುಪೋರ್ ಮಞ್ಚನ ವರೈಕ್ಕಾರ್
ಇಣೈನ್ತು ಮುಲ್ಲೈಯು ಙ್ಕುಱಿಞ್ಚಿಯು ಙ್ಕಲಪ್ಪನ ವೆಙ್ಕುಮ್,

---

1. ಮಾಮಲ್ಲೈ - ಮಹಾಬಲಿಪುರ.

(4) ನೆಯ್ದಲೂ ಮುಲ್ಲೆಯೂ

1111. ಬೆಸ್ತರು ತಾವು ಸಂಗ್ರಹಿಸಿದ ಮೀನಿನ ರಾಶಿಗಳನ್ನು ಗೋಪಾಲಕರುಗಳಿಗೆ ಕೊಟ್ಟು ವಸ್ತುಗಳನ್ನು ಬದಲಿಸಿಕೊಳ್ಳುವ ರೀತಿಯಿಂದ, ಅವರಿಂದ ಕವುತಾರಿ ಪಕ್ಷಿಗಳನ್ನೂ ಕೋಳಿಗಳನ್ನೂ ಕೊಳ್ಳುವುದರಿಂದಲೂ, ನೆಯ್ದಲ್ ನೆಲದಲ್ಲಿರುವ ಚಿಕ್ಕ ಹುಡುಗಿಯರು ತಾವು ಗೋವಳಿತಿಯರಿಂದ ಕೊಳ್ಳುವ ಅವರೆ ಮತ್ತು ಧಾನ್ಯಗಳಿಗೆ ಬದಲಾಗಿ ಹವಳಗಳನ್ನೂ ಮುತ್ತುಗಳನ್ನೂ ಅಳೆದು ಕೊಡುವುದರಿಂದಲೂ, ಕಡಲು ಸಮೀಪದ ನೆಯ್ದಲ್ ನೆಲವೂ ಮುಲ್ಲೈ ನೆಲವೂ ಸ್ವಭಾವದಲ್ಲಿ ಪರಸ್ಪರ ಸೇರಿಕೊಂಡುದಾಗಿದೆ.

(5) ಮರುದವೂ ಮುಲ್ಲೆಯೂ

1112. ಒಂದನ್ನೊಂದು ಸಮೀಪದಲ್ಲುಳ್ಳ ಸುವಾಸನೆ ಬೀರುವ ಮುಲ್ಲೆ ನೆಲದ ಕಾಡುಗಳಲ್ಲಿ ಬಾಳುವ ಗೊಲ್ಲಿತಿಯರ ಸುಂದರವಾದ ನಡೆಯನ್ನೂ, ವಿಸ್ತಾರವಾದ ಗದ್ದೆಗಳನ್ನುಳ್ಳ ಮರುದ ನೆಲದಲ್ಲಿ ಬಾಳುವ ರೈತರ ಹೆಣ್ಣುಗಳ ರೂಪನ್ನೂ ಆಶಿಸಿ ನಡೆಯುವ ಹಂಸವೂ (ಮರುದ) ನವಿಲೂ (ಮುಲ್ಲೆ) ಇದಿರೆದುರು ಇರುವುದರಿಂದ, ಮರುದವೂ ಮುಲ್ಲೆಯೂ ಕೂಡುವುದಾದ ಹಲವು ನೆಲಗಳು ಆ ಪಕ್ಕಗಳಲ್ಲಿ ಇವೆ.

1111. ಕವರು ಮೀನ್‌ಕುವೈ ಕಟ್ಟಿಯುವರ್ ಕಾನವರ್ ಕ್ಕಳಿತ್ತು
ಚ್ಚಿವಲು ಇಚ್ಚೀವಲುಮ್ ಮಾಱಿಯುಳ್. ಚಿಱುಕಟಿ ಚ್ಚಿಯರ್‌ಕ
ಳವರೈ ಯೇನಲು ಕ್ಕೆಯಿಱಿಯರ್ ಪವಳಮು ತ್ತಳನ್ತು
ಮುವರಿ ನೆಯ್ತಲು ಱ್ಙಾನಮು ಙ್ಙಳನ್ತುಳ ವೊಟುಕ್ಕಮ್.

1112. ಅಯನ ಱುಮ್ಪುಱ ವಿನಿಲಿಟ್ಟೈ ಚ್ಚಿಯರಣಿ ನಟೈಯುಮ್
ವಿಯನೆ ಟುಮ್ಪಣ್ಣೈ ಯುಟಿತ್ತಿಯರ್ ಚಾಯಲುಮ್ ವಿರುಮ್ಪಿ
ಯಿಯಲು ಮನ್ನಮು ನ್ತೋಕೈಯು ಮೆತಿರೆತಿರ್ ಪಯಿಲ
ವಯಲು ಮುಲ್ಲೈಯು ಮಿಯೈವನ ಪಲವುಳ ಮರುಙ್ಕು.

(6) ನೆಯ್ದಲೂ ಮರುದವೂ

1113. ಅಲೆಗಳು ಮುಂದೆ ಹೊರಳಿ ಆಮೇಲೆ ಹಿಂದಿರುಗುವ ಕಡಲಿನಿಂದ ಹಿಂದೆಯೇ ತಳ್ಳಲ್ಪಟ್ಟ ಬಿಳಿದಾದ ಮುತ್ತುಗಳೂ, ಕವುಂಗಿನ ಪಕ್ವವಾದ ಹಾಳೆಗಳಿಂದ ಉದಿರಿದ ಹೂಗಳೂ ಕಲೆತು ಸೇರುವುದರಿಂದ, ಬೆಸ್ತರ ಹೆಂಗುಸರೂ, ವಿಶಾಲವಾಗಿ ಎದ್ದ ಬಿದಿರಿನಂತೆ ಎತ್ತರವಾದ ಕೋಮಲವಾದ ತೋಳುಗಳನ್ನುಳ್ಳ ಉಳತ್ತಿಯರೂ[1] ಬದಲಿಸಿ ಕೊಂಡು ಅವುಗಳನ್ನು ಸಂಗ್ರಹಿಸಿಕೊಂಡು ಹೋಗುವ ನಿಡಿದಾದ ನೆಯ್ದಲೂ ಮರುದವೂ ಆದ ನೆಲಗಳು ಸೇರಿಕೊಂಡಿವೆ. (ಬೆಸ್ತರ ಹೆಂಗುಸರು ತಪ್ಪಿಹೋಗಿ ಉದುರಿದ ಹೂ ಗಳನ್ನೂ, ಉಳತ್ತಿಯರು ಮುತ್ತುಗಳನ್ನೂ ಬಾಚಿಕೊಂಡು ಹೋಗುವರೆಂದು ಭಾವವು).

1114. ಈ ರೀತಿಯ ಕುರಿಂಜಿ, ಮುಲ್ಲೈ, ಮರುದ, ನೆಯ್ದಲ್ ಎಂಬ ನಾಲ್ಕು ರೀತಿಯ ನೆಲಗಳಲ್ಲೂ ಅವುಗಳ ರಚನಾ ಸ್ವಭಾವದಲ್ಲೂ ತಮತಮಗೆ ತಕ್ಕುದಾದ ಹಲ ಉದ್ದಿಮೆಗಳಿರುವ ಬೇರೆ ಬೇರೆ ವಂಶಗಳಲ್ಲಿ ಶೋಭಿಸಿ, ಕೆಟ್ಟ ಕಾರ್ಯಗಳನ್ನು ಕನಸಿನಲ್ಲೂ ನೆನೆಯದ ಮನಸ್ಸನ್ನುಳ್ಳ ಪರಿಶುದ್ಧವಾದ ಜನರು ಬಾಳಿಕೊಂಡು ಬರುವ ತೊಂಡೈ ನಾಡಿನ ಸ್ವಭಾವವು ನಮ್ಮ ಮಾತಿಗೆ ಸಿಲುಕೀತೋ ?

ಕಾಂಚಿ ನಗರದ ಮಹಿಮೆ

1115. ಇಂತಹ ಸಂಪತ್ತುಗಳನ್ನು ತರುವ ಹಿರಿಮೆಯುಳ್ಳ ನಾಡಿನಲ್ಲಿ ಮಹಿಮೆ ಯುಳ್ಳ ಕಾಂಚೀಪುರವೆಂಬ ನಗರವು, ಸತ್ಯವಾದ ಭಾಗ್ಯಗಳನ್ನು ತರುವ ಹಿರಿಮೆಯಿಂದ ಲೋಕಗಳೆಲ್ಲಾ ಆಶ್ಚರ್ಯಹೊಂದುವಂತೆ ಎಲ್ಲಾ ಯುಗಗಳಲ್ಲಿ ಅಳಿಯದೆ ನೆಲೆಯಾಗಿರುವು ದೆಂದು ಎಲ್ಲರೂ ಸ್ತುತಿಸುವ ಸ್ವಭಾವದಲ್ಲಿ ಶೋಭಿಸುವ ನೆಲೆಯನ್ನುಳ್ಳುದು.

1113. ಮಿೂಳು ಮೋತಮುನ್ ಕೊಟಿತ್ತವೆ ಣ್ಣುರಳಮು ಙ್ಕಟಕಿನ್
ಪಾಳೈ ಯುಕ್ಕವುಮ್ ವಿರಲವಿಙ್ ಪರತ್ತಿಯುರ್ ಪಣೈಮೆನ್
ಙಿೋಳು ಟಿತ್ತಿಯರ್ ಮಕಳಿರ್ಮಾ ಱ್ಱಾಟಿಮುನ್ ಙಿೊಕುಕ್ಕು
ನೀಳು ನೆಯ್ತಲು ಮರುತಮು ಙ್ಕಲನ್ತಳ ನಿಲಙ್ಕಳ್.

1114. ಆಯ ನಾನಿಲ ತ್ತವೈತಿಯಿ ಱುತ್ತಮ ಕ್ಕಟುತ್ತ
ಮೇಯ ಚೆಯ್ತೊಟಿಲ್ ವೇಱುಪಲ್ ಕುಲಙ್ಕಳಿನ್ ವಿಳಙ್ಕಿ,
ತೀಯ ವೆನ್ಪನ ಕನವಿಲು ನಿನೈವಿಲಾ ಚ್ಚಿನ್ತೈ
ತ್ತೂಯ ಮಾನ್ತರ್ವಾಟ್ ತೊಣ್ಟೈನಾ ಟ್ಟಿಯಲ್ಚೊಲ್ ವರೈತ್ತೋ?

1115. ಇವ್ವ ಳನ್ತರು ಪೆರುನ್ತಿರು ನಾಟ್ಟಿಟೈ ಯೆನ್ಱುಮ್
ಮೆಯ್ವ ಳನ್ತರು ಚೆಙಪ್ಪಿನಾ ಲುಲಕೆಲಾಮ್ ವಿಯಪ್ಪ
'ವೆವ್ವ ಕಙ್ಕಳು ಮುಳ್ಳ' ತೆನ್ ಱಿಯಾವರು ಮೇತ್ತ
ಙಿಕ್ಕೈವಿ ಳಙ್ಕಿಯ ನಿಲೈಯತು ಕಾಞ್ಚಿಮಾ ನಕರಮ್.

---

1. ಉಳತ್ತಿ - ರೈತ ಹೆಂಗುಸು.

1116. ಈ ರೀತಿಯಾದ ಪಳಮೆಯನ್ನುಳ್ಳ ಕಾಂಚೀನಗರದಲ್ಲಿ ಅಂಬಿಕೆಯು ತನ್ನ ನಾಯಕನಾದ ಶಿವಪರಮಾತ್ಮನನ್ನು ಶ್ರೇಷ್ಠಪೂಜನದಿಂದ ಒಂದು ಕಾಲದಲ್ಲಿ ಪೂಜಿಸಿ, ಲೋಕವು ಉಜ್ಜೀವಿಸುವಂತೆ, ದೋಷವಿಲ್ಲದ ಅನೇಕ ಧರ್ಮ[1]ಗಳನ್ನು ನೆಲೆಯಾಗಿಸಿದ ಮೇಲ್ಮೆಯುಳ್ಳ ಆ ಹಿರಿಮೆಯನ್ನು ತಿಳಿದಂತೆ ಹೇಳತೊಡಗುವೆನು.

1117. ಬೆಳ್ಳಿಮಲೆಯ ಶ್ರೀಕೈಲಾಸದಲ್ಲಿ ಇದ್ದನುಗ್ರಹಿಸಿ, ಸ್ತುತಿಸಿಕೊಳ್ಳುವ ಪವಿತ್ರಜಲವಾದ ಗಂಗೆಯನ್ನು ಧರಿಸಿದ ಜಡೆಯನ್ನುಳ್ಳ ಶಿವಪರಮಾತ್ಮನು ಅನುಗ್ರಹಿಸಲು, ಲೋಕದ ಜನರನ್ನು ಆಳಾಗಿ ಉಳ್ಳ ಉಮಾದೇವಿಯು ನಮಿಸಿ, ನಿರ್ಮಲವಾದ ಜ್ಞಾನವನ್ನು ಹೇಳುವ ಶಿವಾಗಮಗಳ ವಿಭಾಗಗಳೆಲ್ಲವನ್ನೂ ಇದ್ದಂತೆಯೇ ತಿಳಿದುಕೊಳ್ಳುವಂತೆ ಶಿವನಿಂದ ನೇರಾಗಿ ಕೇಳಿ ತಿಳಿದುಕೊಂಡು ಲೋಕಕ್ಕೆ ಅನುಗ್ರಹಿಸಿದಳು.

1118. ಲೆಕ್ಕವಿಲ್ಲದ ಆಗಮಗಳೆಲ್ಲವನ್ನೂ ಕೇಳಿ ಅನುಗ್ರಹಿಸಿದ ಶಿವಪರಮಾತ್ಮನು, ತಾನು ಆಶಿಸುವ ಸತ್ಯವಾದುದು ಶಿವಪೂಜನವೇ ಆಗಿದೆ ಎಂದು ಹೇಳಿ ಅನುಗ್ರಹಿಸಲು, ಅದನ್ನು ಮನಸ್ಸಿನಲ್ಲಿ ಕೊಂಡವಳಾಗಿ ಹೆಂಗುಸರಲ್ಲೆಲ್ಲಾ ಶ್ರೇಷ್ಠಳಾದ ಹಿರಿತಪಸ್ಸಿನ ತುದಿಯಂತಿರುವ ಉಮಾಮಾತೆಯು ಹಿರಿಮೆಯುಳ್ಳ ಶಿವಪರಮಾತ್ಮನನ್ನು ಪೂಜಿಸುವುದಕ್ಕೆ ಆಶಿಸಿದಳು.

1116. ಆನ ತೊನ್ನಕ ರಪ್ಪಿಕ್ಕೈ ತಪ್ಪೆರು ಮಾನ್ಯೈ
ಮಾನ ವರ್ಚ್ಚನೈ ಯಾಲೊರು ಕಾಲತ್ತು ವಟಿಪ
ಟ್ಟೂನ ಮಿಲ್ಲಱ ಮನೇಕಮು ಮುಲಕುಯ್ಯ ವೈತ್ತ
ಮೇನ್ಮೈ ಪೂಣ್ಟವ ಪ್ಪೆರುಮೈಯೈ ಯಱಿನ್ತವಾ ವಿಳಮ್ಪಲ್,

1117. ವೆಳ್ಳಿ ಮಾಲ್ವರೈ ಕ್ಕಯಿಲೈಯಿಲ್ ವೀಱ್ಱಿರು ನ್ತರುಳಿ
ತ್ತುಳ್ಳು ವಾರ್ಪುನಲ್ ವೇಣಿಯಾ ರರುಳ್ಚೆಯ ತ್ತೊಟುತು
ತೆಳ್ಳು ವಾಯ್ಮೈಯಿ ನಾಕಮ ತ್ತಿಱನೆಲಾ ನ್ತೆರಿಯ
ವುಳ್ಳ ವಾಱುಕೇ ಟ್ಟರುಳಿನಾ ಳುಲಕ್ಕೈಯಾ ಳುಟೈಯಾಳ್.

1118. ಎಣ್ಣಿ ಲಾಕಮ ಮಿಯಮ್ಪಿಯ ವಿಱೈವರ್ತಾಮ್ ವಿರುಮ್ಪುಮ್
ಉಣ್ಮೈ ಯಾವತು ಪೂಚನೈ ಯೆನವುರೈ ತ್ತರುಳ
ಅಣ್ಣ ಲಾರ್ತಮ್ಮೈ ಯರುಚ್ಚನೈ ಪುರಿಯವಾ ತರಿತ್ತಾಳ್
ಪೆಣ್ಣಿ ನಲ್ಲವ ಳಾಯಿನ ಪೆರುನ್ತವ ಕ್ಕೊಟಿನ್ತ.

---

5. ಮೂವತ್ತೆರಡು ಧರ್ಮಗಳು – ಅನ್ನದಾನ, ವಿದ್ಯಾದಾನ ಇತ್ಯಾದಿ ಧರ್ಮಗಳು.

1119. ಉಮಾದೇವಿಯು ಮನಸ್ಸಿನಲ್ಲಿ ತುಂಬಿದ ಆಶೆಯನ್ನು ನೋಡಿ ಶಿವ ಪರಮಾತ್ಮನು ತನ್ನೊಳಗೆ ಸಂತೋಷಗೊಂಡು, ಮುಗುಳುನಗೆಯನ್ನು ಸೂಸುತ್ತ, 'ನಿನ್ನ ಮನಸ್ಸಿನೊಳಗೆ ಇರುವುದೇನು?' ಎಂದು ಕೇಳಲು, 'ನಾಥನೇ! ದೇವನಾದ ನೀನು ಇಲ್ಲಿ ಅನುಗ್ರಹಿಸಿದ ಆಗಮದ ರೀತಿಯಂತೆಯೇ ನಿನ್ನನ್ನು ಪೂಜಿಸಲು ನನ್ನ ಆಶೆಯು ಹೆಚ್ಚುತ್ತಿದೆ' ಎಂದು ಹೇಳಿ, ಭೋಗಭಾಗ್ಯಗಳನ್ನೆಲ್ಲಾ ಉಳ್ಳ ಸ್ತನಗಳಿರುವ ಅಮ್ಮೆಯು ನಮಿಸಿ ಸ್ತುತಿಸಲು,

1120. ದೇವದೇವನಾದ ಶಿವಪರಮಾತ್ಮನು ಅದನ್ನು ತನ್ನ ಮನಸ್ಸಿನಲ್ಲಿ ಕೊಂಡು, 'ತೆಂಕುದಿಕ್ಕು ಮಾಡಿದ ಹೆಚ್ಚಿನ ತಪಸ್ಸಿನ ಫಲವಾಗಿ, ಯಾರೂ ತನ್ನೆಡೆಗೆ ಬಂದು ಸೇರತಕ್ಕುದೂ, ಈ ಭೂಲೋಕದಲ್ಲಿ ಎಂದೆಂದಿಗೂ ಅಳಿಯದೆ ನೆಲೆಯಾಗಿರುವುದೂ, ಕಾಂಚೀನಗರವಾಗಿದೆ. ಅಲ್ಲಿ ಮಾಮರದ ಕೆಳಗೆ ನಾವು ಆಶಿಸಿ ಇದ್ದು ಅನುಗ್ರಹಿಸಿರುವ ಎಡೆಯನ್ನು ಸೇರಿ ನೆಲೆಯಾದ ಪೂಜೆಯನ್ನು ಸಂತೋಷದಿಂದ ಮಾಡುವವಳಾಗು!' ಎಂದಾಜ್ಞಾಪಿಸಿ ಅನುಗ್ರಹಿಸಲು, ಉಮಾದೇವಿಯು ನಾಯಕನನ್ನು ಬಿಟ್ಟು ಬೇರಾಗದ ನೆಲೆಯಲ್ಲಿದ್ದು ಅವನಿಂದ ಅನುಜ್ಞೆಯನ್ನು ಪಡೆದುಕೊಂಡು ಅಲ್ಲಿಂದ (ಕೈಲಾಸದಿಂದ) ಹೊರಡುವುದಕ್ಕೆ ಸಮ್ಮತಿಸಿದಳು.

1119. ನಙ್ಕೈ ಯುಣ್ಣಿಱೈ ಕಾತಲೈ ನೋಕ್ಕಿ, ನಾಯ ಕನ್‌ಱಿರು ವುಳ್ಳತ್ತು ಮಕಿೞ್‌ನ್ದೇ,
ಯಙ್ಕ ಣೆಯ್ತಿಯ ಮುಱುವಲು ನ್ದೋನ್‌ಱ, 'ವಟುತ್ತ ತೆನ್‌ಕೊ ನಿನ್ ಪಾ' ಲೆನ ವಿನವ,
'ಙಙ್ಕು ನಾತ! ನೀ ಮೊಟಿಾನ್ದವಾ ಕಮತ್ತೀ ನಿಯಲ್ಪಿ ನಾಲುನ್ನೈ ಯರುಚ್ಚನೈ ಪುರಿಯ
ಪ್ಪೊಙ್ಕು ಚಿನ್‌ಱತೆನ್ ನಾಚೈ' ಯೆನ್ ಱಿಱೈಞ್ಚಿ ಪ್ಪೋಕ ಮಾರ್‌ತ್ತ ಪೂಣ್ ಮುಲೈಯಿನಾಳ್ ಪೋಱ್ಱಿ,

1120. ತೇವ ತೇವನು ಮತುತಿರು ವುಳ್ಳ, ಙತ್ತೈಯುತ್ತು 'ತೆನ್‌ಱಿಚೈ ಮಿಕ್ಕಚೆಯ್ ತವತ್ತಾಲ್,
ಯಾವ ರುನ್ದನೈ ಯಟ್ಟೈವತು, ಮಣ್ಮೇ, ಲೆನ್‌ಱು ಮುಳ್ಳತು ಕಾಞ್ಚಿ; ಮಱ್ಱತನುಳ್
ಮಾವ ಮರ್‌ನ್ದನ ವ್ವಿರುಕ್ಕೈಯಿ ಲಣ್ಣೈನ್ತು, ಮನ್ನು ಪೂಚನೈ ಮಕಿೞ್‌ನ್ತುಚೆಯ್ ವಾ' ಯೆನ್
ಱೋವ, ವೆಮ್ಪಿರು ಮಾಟ್ಟಿಯುಮ್ ಪಿರಿಯಾ, ವಿಚೈವು ಕೊಣ್ಟೆಟು ನ್ದರುಳತ ಱ್ಕಿಚೈನ್ತಾಳ್.

1121. ದೋಷವನ್ನು ಹೋಗಲಾಡಿಸುವ, ಹಲಬಗೆಯ ಯೋನಿಭೇದವಾದ ಎಂಬತ್ತನಾಲ್ಕು ನೂರಾಯಿರ (ಲಕ್ಷ) ವರ್ಗಗಳೊಳಗೆ ಇರಿಸಲ್ಪಟ್ಟ ಜೀವಿಗಳೆಲ್ಲವನ್ನೂ ಕಾಪಾಡಿ ಅನುಗ್ರಹಿಸುವ ಕರುಣೆಯನ್ನುಳ್ಳ ಶಿವಪರಮಾತ್ಮನು ಉಪದೇಶಿಸಿದ ಆ ಆಗಮಗಳಲ್ಲಿ ಹೇಳಲ್ಪಟ್ಟ ಮಾರ್ಗವಾಗಿಯೇ ಪೂಜೆಮಾಡುವುದನ್ನಾಶಿಸಿ, ಅದನ್ನು ಆಚರಿಸುವ ಸ್ವಭಾವದಿಂದ, ನಮಸ್ಕರಿಸಿ, ಉಮಾದೇವಿಯು ಹೊರಟಮಾತ್ರದಲ್ಲಿ, ಅಮ್ಮನು ದೊಡ್ಡ ತಪಸ್ಸನ್ನು ಮಾಡುವುದಕ್ಕೆ ತಕ್ಕ ಉಪಕರಣಗಳೊಡನೆ ಪರಿಜನಗಳನ್ನು ಪರ್ವತರಾಜನು ದೇವಿಯೊಡನೆ ಕಳುಹಿಸಿದನು.

1122. ಹಲಜೀವಿಗಳೂ ದೇವತೆಗಳೂ ತನ್ನನ್ನು ಸುತ್ತಿ ಬರಲು, ಅಮ್ಮೆಯು ಕಾಂಚಿಯನ್ನು ಮುಟ್ಟಿದಳು. ಆಗ ಅಲ್ಲಿ ಪದ್ಮನೆನ್ನುವ ಮಹಾನಾಗವೊಂದು ದೇವಿಯ ಶ್ರೀಪಾದಗಳನ್ನು ತನ್ನ ತಲೆಯಮೇಲಿಟ್ಟುಕೊಂಡು, 'ಲೋಕಗಳೆಲ್ಲಕ್ಕೂ ತಾಯಾಗಿ ಅವುಗಳನ್ನು ಪಡೆದು ಅನುಗ್ರಹಿಸಿದ ತಾಯಿಯೇ, ಸೇವಕನಾದ ನಾನು ಜೀವಿಸುವ ಬಿಲದ ಸಮೀಪವಿರುವ ದೇವಾಲಯವನ್ನು ಸೇರಿ ಅಲ್ಲಿದ್ದುಕೊಂಡು ಅನುಗ್ರಹಿಸುತ್ತಿರಬೇಕು' ಎಂದು ಬೇಡಲು, ಅದಕ್ಕೆ ಅನುಗ್ರಹಿಸಿ ಸಮ್ಮತಿಸಿ,

---

1121. ಏಕ ಮಿಲ್ವಲ ಯೋನಿಯೆಣ್ ಪತ್ತು
ನಾನ್ಕು ನೂಱಾಯಿ ರನ್ತನುಳ್ ವೈತ್ತ
ಪೇತ ಮುಮ್ಪುರ ನ್ತರುಳುಮ ಕ್ಕರುಣೈ
ಪ್ಪಿರಾನ್ಮೊ ೞಿನ್ತವಾ ಕಮವೞಿ ಪೇಣಿ
ಪ್ಪೋತು ನೀರ್ಮೈಯಿ ಱ್ಱೊೞುತನಳ್ ಪೋತ,
ಪ್ಪೊರುಪ್ಪಿಲ್ ವೇನ್ತನುಮ್ ವಿರುಪ್ಪಿಲ್ವ ನ್ತೆಯ್ತಿ
ಮಾತ ವಮ್ಪುರಿ ನ್ತರುಳುತ ಱ್ಕಿಮೈಯನ್ತ
ವಳತ್ತೊ ಟುಮ್ಪರಿ ಚನಙ್ಕಳೈ ವಿಟುತ್ತಾನ್.

1122. ತುನ್ನು ಪಲ್ಲುಯಿರ್ ವಾನವರ್ ಮುತಲಾ
ಚ್ಚೂೞ್ನ್ತು ಟನ್ಚೆಲ ಕ್ಕಾಞ್ಚಿಯಿ ಲಣೈಯ
ತನ್ನೈ ನೇರ್ವರುಮ್ ಪತುಮಮಾ ನಾಕ
ನ್ತಿಪ್ಪಿ ರಾಟ್ಟಿತಾ ಟಲೈಮಿಚೈ ವೈತ್ತೇ
'ಯನ್ನೈ ಯಾಯುಲ ಕನೈತ್ತೈಯು ಮೀನ್ಱಾ!
ಯಟಿಯ ನೇನುಱೈ ಪಿಲಮತ ನಿಟ್ಟೈಯೋ
ಮನ್ನು ಕೋಯಿಲ್ಕೊ ಣ್ಟರುಳುವಾ' ಯೆನ್ನ,
ಮಲೈಮ ಟನ್ತೈಯುಮ ಱ್ಱತಱ್ಕರುಳ್ ಪುರಿನ್ತು,

1123. ಆ ಸ್ಥಳದಲ್ಲಿ, ಭೂಲೋಕದಲ್ಲುಳ್ಳ ಎಲ್ಲಾ ಜೀವಿಗಳ ಅನುಗ್ರಹಾರ್ಥವಾಗಿ, ನಿರವಧಿಕ ಪ್ರೇಮಪೂರ್ಣ ಅನುಗ್ರಹಚಿತ್ತೆಯಾಗಿ, ಬಾಲಚಂದ್ರನು ನೆಲಸಿದ ಜಡೆಯುಳ್ಳ ಶಿವಪರಮಾತ್ಮನಿಗೆ ದಿವ್ಯಪೂಜೆಯನ್ನು ಮಾಡಲಾಶಿಸಿ, ತನ್ನ ವಾಸ ಸ್ಥಳವನ್ನು ಯಾವೆಡೆಯಲ್ಲಿ ಹುಡುಕಿದರೂ ತಿಳಿಯದಂತಹ ಮೊದಲಿಗನಾದ ಶಿವ ಪರಮಾತ್ಮನು, ತನ್ನ ದಿವ್ಯಲೀಲೆಯಲ್ಲಿ ಕಾಣದಂತೆ ಮರೆಯಾಗಿರಲು, ವಿಶೇಷವಾದ ತಪಸ್ಸನ್ನಾಚರಿಸಿ, ಶಿವಪರಮಾತ್ಮನನ್ನು ಕಾಣುವುದಕ್ಕೆ ಪೊನ್ನಮಲೆಯ ಬಳ್ಳಿಯಾಗಿರುವ ಉಮಾಮಾತೆಯು ಮನಸ್ಸಿನಲ್ಲಿ ನಿಶ್ಚಯಿಸಿದಳು.

1124. ಹೃದಯವು ಈಶನನ್ನು ಕಾಣುವುದನ್ನೇ ಆಶಿಸಲು, ವಾಕ್ಕಿನಲ್ಲಿ ನಿರಂತರವೂ ಪಂಚಾಕ್ಷರಿಯೇ ನೆಲಸಿರಲು, ಅಮ್ಮನು ಕೆಂದಾವರೆಯಂತಿರುವ ಕೈಗಳನ್ನು ಜೋಡಿಸಿ ನಮಿಸಿಕೊಂಡು, ಶ್ರದ್ಧೆಯಿಂದ ಅಸಾಧ್ಯ ತಪವನ್ನು ಮಾಡುತ್ತಿರಲು, ಆಕೆಯ ಹಿರಿಮೆಯುಳ್ಳ ಪತಿಯಾದ ಈಶನು ಸಹಿಸುವನೋ? ಅವನು ಸಹಿಸಲಾರದೆ, ದೋಷ ರಹಿತವಾದ ಮಾಮರದಡಿಯಲ್ಲಿ ಪರ್ವತತನಯೆಗೆ ತೋರುವಂತೆ ಶಿವಲಿಂಗರೂಪದಲ್ಲಿ ತೋರಿಕೊಂಡನು.

1123. ಅಙ್ಙು ಮಣ್ಣಿ ಲ ಕತ್ತುಯಿರ್ ತಟ್ಕೈಪ್ಪ
ವಳವಿ ಲಿನ್‌ಪತ್ತಿ ನರುಟ್‌ಕರು ವಿರುತ್ತಿ
ತ್ತಿಙ್ಙ ಟಙ್ಕಿಯ ಪುರಿಚಟೈ ಯಾರ್‌ಕ್ಕು
ತ್ತಿರುನ್ತು ಪೂಚನೈ ವಿರುಪ್ಪಿನಳ್ ಚೆಯ್ಯ,
ವೆಙ್ಙು ನಾಟವು, ನ್ತಿರುವಿಳೈ ಯಾಟ್ಟಾ
ಲೇಕ ಮಾಮುತ ಲೆತಿರ್‌ಪ್ಪಟಾ ತೊಟೀಯ
ಪ್ಪೊಙ್ಙು ಮಾತವ ಞ್ಚೆಯ್ತುಕಾ ಣ್ಪತಱ್ಕೇ
ಪುರಿವು ಚೆಯ್ತನಳ್ ಪೊನ್‌ಮಲೈ ವಲ್ಲಿ.

1124. ನೆಞ್ಚ ಮಿಾಚನೈ ಕ್ಕಾಣ್ಪತೇ ವಿರುಮ್ಪ
ನಿರನ್ತ ರನ್ತಿರು ವಾಕ್ಕಿನಿ ನಿಕಟ್ಟ
ತಞ್ಚೆ ಲುತ್ತುಮೋ ಯಾಕವಾ ಳುಟ್ಟೈಯ
ವಮ್ಮೈ ಚೆಮ್ಮಲರ್ ಕ್ಕೈಕುವಿ ತ್ತಿಱೈಞ್ಚಿ
ತ್ತಞ್ಚ ಮಾಕಿಯ ವರುನ್ತವನ್ ಪುರಿಯ
ತ್ತರಿಪ್ಪ ರೇಯುವ ಟನಿಪ್ಪೆರು ಙ್ಕಣವರ್
ವಞ್ಚ ನೀಕ್ಕಿಯ ಮಾವಿನ್ ಮೂಲತ್ತಿನ್
ವನ್ತು ತೋನ್‌ಱಿನಾರ್ ಮಲೈಮಕಳ್ ಕಾಣ.

1125. ಹೀಗೆ ಕಾಣಿಸಿಕೊಂಡಾಗ ತೊಂಡೆಹಣ್ಣಿನಂತಿರುವ ಬಾಯಿಯುಳ್ಳ ಅಮ್ಮೈಯು, ತನ್ನ ತಪಸ್ಸಿನ ಫಲವಾಗಿ ಮಾವಿನಮರದಡಿಯಲ್ಲಿ ಕಾಣಿಸಿಕೊಂಡ ತನ್ನ ಪರಮಾತ್ಮನನ್ನು, ತುಂಬಿಗಳು ಮುಸುರುವ ಕೊದಲಜಡೆಯು ಮುಂಭಾಗದಲ್ಲಿ ಜೋಲಲು ನಮಸ್ಕರಿಸಿ, ಆಸೆಯು ಒಳಗೊಳಗೇ ಹೆಚ್ಚುತ್ತಿರಲು, ಪ್ರೇಮದಿಂದಾದ ಬಯಕೆಯು ಮಿತಿಮೀರಲು, ತಾನು ಉದ್ದೇಶಿಸಿದ ಪೂಜಾಕ್ರಮಗಳನ್ನು ಕೈಕೊಂಡು, ಪರಿಶುದ್ಧವಾದ ಅರ್ಚನೆಯಲ್ಲಿ ಉದ್ಯಮಿಸಿದಳು.

1126. ದೇವದೇವನಾದ ಶಿವಪರಮಾತ್ಮನ ಪೂಜೆಗಾಗಿ, ಆತನು ತಾನೇ ಉಪದೇಶಿಸಿದ ಮಾರ್ಗದಲ್ಲಿಯೇ ನೆಲೆನಿಂತವಳಾದ ನಮ್ಮ ಮಾತೆಯು ಅರ್ಚಿಸುವಂತೆ ಆಕೆಯ ಕಣೆಯಂತಿರುವ ಚೇಟಿಯರು ಹೂವಿನ ಬುಟ್ಟಿಯನ್ನು ತೆಗೆದುಕೊಂಡು, ಮೆಲ್ಲಗೆ ನಡೆಯುತ್ತಾ ಅಂಬಿಕಾವನವೆಂಬ ನಂದನವನಕ್ಕೆ ಬಂದು ಶಿವಪರಮಾತ್ಮನಿಗೆ ತಕ್ಕುದಾದ ಸುವಾಸನೆಯುಳ್ಳ ಹೊಸಮಲರುಗಳನ್ನು ಕೊಯ್ದರು.

1125. ಕಣ್ಣ ಪೋತಿಲ ಪ್ಪೆರುನ್ತವ ಪ್ಪಯನಾ
ಙ್ಕಮ್ಪ ಮೇವಿಯ ತಮ್ಪೆರು ಮಾನೈ
ವಣ್ಣ ಲಾಙ್ಕುಟಿ ಙ್ಕಙ್ಕೈಮುನ್ ಙಾಟಿ
ವಣಙ್ಕಿ ವನ್ತಿಟು ಮಾಚೈಮುನ್ ಪೊಙ್ಕ
ಕೊಣ್ಣ ಕಾತಲಿನ್ ವಿರುಪ್ಪೆಳ ವಿನ್ಙಿ
ಕ್ಕಙ್ಕಿತ್ತ ಪೂಚನೈ ಕ್ಕೊಳ್‌ಕೈಮೇ ಙ್ಕೊಣ್ಟು
ತೊಣ್ಟೈ ಯಙ್ಕಣಿ ವಾಯುಮೈ ನಙ್ಕೈ
ತೂಯ ವರ್‌ಚ್ಚನೈ ತೊಟಙ್ಕುತಲ್ ಪುರಿವಾಳ್,

1126. ಉಮ್ಪರ್ ನಾಯಕರ್ ಪೂಚನೈ ಕ್ಕವರ್‌ತಾ
ಮುರೈತ್ತ ವಾಕಮ ತ್ತುಣ್‌ಮೈಯೇ ತಲೈನಿ
ನ್ಱೆಮ್ಪಿ ರಾಟ್ಟಿಯರ್ ಚ್ಚನೈಪುರಿ ವತನು
ಕ್ಕೈಯಲ್ಪಿಲ್ ವಾಟ್ಟಿರು ಚ್ಚೇಟಿಯ ರಾನ
ಕೊಮ್ಪ ನಾರ್‌ಕಳ್‌ಪೂ ವಿಪ್ಪಿಟಕ್ಕೈಕೊ ಣ್ಟಣೈಯ
ಕ್ಕುಲವು ಮೆನ್‌ಙಳಿ ರಟೆಯಿಣೈ ಯೊತುಙ್ಕಿ
ಯಮ್ಪಿ ಕಾವನ ಮಾನ್ತಿರು ವನತ್ತಿ
ಲಾನ ತೂನಱುಮ್ ಪುತುಮಲರ್ ಕೊಯ್ತಾಳ್.

1127. ಮನಃಪೂರ್ವಕವಾಗಿ ಉಕ್ಕುತ್ತಿರುವ ಪ್ರೀತಿಯಿಂದ ಸರಿಯಾದ ಪೂಜೆಯ ವಿಧಿವಿಧಾನಗಳನ್ನು ತಿಳಿದವರು ಸಂಗ್ರಹಿಸುವ ಎಲ್ಲಾ ಸಾಧನಗಳನ್ನು, ಎಂದರೆ ಕೊಯ್ದ ಹಲವು ಮಲರುಗಳು, ಕಂಬೈನದಿಯ ಶ್ರೇಷ್ಠವಾದ ತಿರುಮಜ್ಜನ ನೀರು, ಪೂಸುವ ಸುಗಂಧ ದ್ರವ್ಯಗಳು, ತುಪ್ಪದ ಶ್ರೀಕರವಾದ ಧೂಪದೀಪಗಳು ಇವೇ ಮೊದಲಾದುವುಗಳನ್ನು ಮಾತೆಯು ಆಶಿಸಿದಾಗ, ಚೇಟಿಯರು ತೆಗೆದುಕೊಡಲು, ಆಗಮಗಳಲ್ಲಿ ವಿಧಿಸಿದ ಎಲ್ಲಾ ಬಗೆಯ ಅತಿಶಯ ಪೂಜೆಗಳನ್ನೂ, ಎಲ್ಲಾ ಲೋಕಗಳನ್ನೂ ಪಡೆದನುಗ್ರಹಿಸಿದ ಉಮಾಮಾತೆಯು ತಪ್ಪದೆ ನಡೆಸಿದಳು.

1128. ಜೀವಿಗಳಿಗೆ ವರವನ್ನು ಕೊಡುವ ಪರವಸ್ತುವಾದ ಮಲೈವಲ್ಲಿ[1]ಯು ಕೈಗಳನ್ನು ಪಡೆದುದರ ಪ್ರಯೋಜನ ಶಿವಪೂಜೆಮಾಡುವುದೇ ಎಂದು ಏಕಾಮ್ರದಲ್ಲಿ ಕಾಣಿಸಿ ಅನುಗ್ರಹಿಸಿದ ದೇವದೇವನಲ್ಲಿ ಹೆಚ್ಚಾದ ಆಸೆಯನ್ನು ಹೃದಯದಲ್ಲಿ ಪಡೆದು, ಎಲ್ಲಾ ಶುಭಗಳು ವರ್ಧಿಸಲು, ಶಿರಸಾ ನಮಿಸಿ ಎದ್ದು ಮಾಡುವ ಪೂಜೆಯು ಪ್ರತಿದಿನವೂ ಶಿವಪರಮಾತ್ಮನ ಮನಸ್ಸಿಗೆ ಹಿಡಿಯುವಂತೆ ಅಂದೇ ವರ್ಧಿಸಿತು.

1127. ಕೊಯ್ತ ಪನ್ಮಲರ್ ಕಮ್ಬೈಮಾ ನತಿಯಿಱ್
ಕುಲವು ಮಜ್ಜನ ನಿಲವುಮೆಯ್ ಪ್ಪೂಚಚ್ಚು
ನೆಯ್ತ್ತ ರುಙ್ಕೊಟು ನ್ತೂಪತೀ ಪಙ್ಗಳ್
ನಿಱೈನ್ತ ಚೆನ್ತ್ರಯಿ ನೀಟಿಯ ವನ್ಪಿನ್
ಮೆಯ್ತ್ತ ರುಮ್ಪುಟೆ ವೇಣ್ಟಿನ ವೆಲ್ಲಾಮ್
ವೇಣ್ಟುವಮ್ ಪೋತಿನಿ ಉತವಮೆಯ್ ಪ್ಪೂಚ್ಚೈ
ಯೆಯ್ತ್ತ ವಾಕಮ ವಿತಿಯೆಲಾ ಙ್ಚ್ಚಿಯ್ತ್ತಾ
ಳುಯಿರ್ಕ ಳಿಯಾವೈಯು ಮೀನ್ಱವೆ ಪ್ಪಿರಾಟ್ಟಿ.

1128. ಕರನ್ತ ರುಮ್ಪೆಯ ನಿತುವೆನ ವುಣರ್ನ್ತು
ಕಮ್ಪ ಮೇವಿಯ ವುಮ್ಪರ್ನಾ ಯಕರ್ಪಾ
ನಿರನ್ತ ಕಾತಲ್ಚೆ ಯುಳ್ಳತ್ತ ಳಾಕಿ
ನೀಟು ನನ್ಮೈಕ ಳಿಯಾವೈಯುಮ್ ಪೆರುಕ
ವರನ್ತ ರುಮ್ಪೊರು ಳಾಮಲೈ ವಲ್ಲಿ
ಮಾಱಿ ಲಾವಕ್ಕೈ ಮಲರ್ನ್ತಪೇ ರನ್ಪಾಱ್
ಚಿರಮ್ಪ ಣಿನ್ತೆಟು ಪೂಚೈನಾ ಟೋಱು
ನ್ತಿರುವು ಳಙ್ಕೊಳ ಪ್ಪೆರುಕಿಯ ತನ್ಱೇ.

---

5. ಮಲೈವಲ್ಲಿ - ಪರ್ವತದ ಬಳ್ಳಿ, ಪಾರ್ವತೀಮಾತೆ.

1129. ಹೆಚ್ಚಾದ ಆಸೆಯಿಂದ ಮಾತೆಯು ಸಂತೋಷದಿಂದ ಪೂಜೆಯನ್ನು ಮಾಡುವ ಸಮಯದಲ್ಲಿ, ಏಕಂಬನಾಥನೂ ಮಾತೆಯ ಮೇಲೆ ಪ್ರೀತಿಯಿಂದ ಕೂಡಿದ ಒಂದು ದಿವ್ಯಲೀಲೆಯ ಮೂಲಕ, ಆಕೆಯನ್ನು ಅನುಗ್ರಹಿಸಲಿಕ್ಕಾಗಿ, ಏಳು ಕಡಲುಗಳೂ ಒಂದಾಗಿ ಮೇಲುಕ್ಕಿ ಆಕಾಶವನ್ನೂ ತನ್ನೊಳಗೆ ಸೇರಿಕೊಳ್ಳುವಂತೆ, ಕಂಬೈ ನದಿಯ ನೀರು ತುಂಬಿ ಬರುವಂತೆ ಮನಸ್ಸುಮಾಡಿದನು.

1130. ಶಿವಪರಮಾತ್ಮನು ಅನುಗ್ರಹಿಸಿದ ಆ ಪ್ರವಾಹವನ್ನು ಸುಂದರವಾದ ಕಯಲ್ ಮೀನಿನಂತೆ ಕಣ್ಣುಗಳುಳ್ಳ ಅಮ್ಮೆಯು ನೋಡಿ, ಆಕಾಶವನ್ನೂ ಒಳಕೊಳ್ಳುವಂತೆ ಮೇಲೇರುವ ಜಲಪ್ರವಾಹವು ತನ್ನ ಮೇಲೆ ಬರುವುದು ಎಂದು ಹೆದರಿ, ಮನಸ್ಸಿನಲ್ಲಿ ಹೆಚ್ಚಿನ ಪ್ರೀತಿಯಿಂದ ತನ್ನ ಕೈಗಳಿಂದ, ನೀರು ಮೇಲೆ ಬಾರದಂತೆ ತಡೆಯಲು, ಶೀತಲವಾದ ಚಂದ್ರನು ಮಲರುವುದಕ್ಕೆಡೆಯಾದ ಜಡೆಯುಳ್ಳ ಪರಮಾತ್ಮನನ್ನು ಆಲಿಂಗಿಸಿಕೊಂಡಳು.

1129. ನಾತ ರುಮ್ಪೆರು ವಿರುಪ್ಪೊಟು ನಯನ್ತು
ನಙ್ಕೈ ಯರ್ಚ್ಚನೈ ಚೆಯ್ಯುಮ ಪ್ಪೊಟುತಿನ್
ಕಾತಲ್ ಮಿಕ್ಕತೋರ್ ತಿರುವಿಳೈ ಯಾಟ್ಟಿಙಾ
ಕನಙ್ಕು ಟಿೖಕ್ಕರುಳ್ ಪುರಿನ್ತಿಟ ವೇಣ್ಟಿ
ಯೋತ ಮಾರ್ಕಟ ಲೇಟುಮೊನ್ ಙಾಕಿ
ಯೋಙ್ಕಿ ವಾನಮು ಮುಟ್ಪಟ ಪ್ಪರನ್ತು
ಮೀತು ಚೆಲ್ವತು ಪೋಲ್ವರ ಕ್ಕಮ್ಪೈ
ವೆಳ್ಳ ಮಾನ್ತಿರು ವುಳ್ಳಮು ಇಚ್ಚಿಯಾರ್.

1130. ಅಣ್ಣ ಲಾರರುಳ್ ವೆಳ್ಳತ್ತೈ ನೋಕ್ಕಿ
ಯಙ್ಕ ಯುಙ್ಕಣ್ಣಿ ತಮ್ಪೆರು ಮಾನ್ಮೇಲ್,
ವಿಣ್ಣೆ ಲಾಙ್ಕೊಳ ವರುಮ್ಪೆರು ವೆಳ್ಳ
ಮೀತು ವನ್ತುಙು ಮೆನವೆರು ಕ್ಕೊಣ್ಟೇ
ಉಣ್ಣೆ ಲಾವಿಯ ಪತ್ತೈಪ್ಪುಙು ಕಾತ
ಲುಟನ್ಙೀರು ಕ್ಕೈಯಾ ಲ್ಟುಟುತ್ತುನಿ ಲ್ಲಾಮ್ಮೈ
ತಣ್ಣೆ ಲಾಮಲರ್ ವೇಣಿಯಿ ನಾರೈ
ತ್ತಟುವಿ ಕ್ಕೊಣ್ಟನ ಟನ್ನೈಯೇ ಯೊಪ್ಪಾಳ್.

1131. ಪರ್ವತರಾಜಕುಮಾರಿಯಾದ ಮಾತೆಯು ಪ್ರೇಮವಿಶೇಷದಿಂದ ಕೈಕೊಂಡ ತಪಃಪ್ರಯೋಜನವಾಗಿ, ಮೂಮರದ ಮೂಲದಲ್ಲಿ ತೋರಿಕೊಂಡ ದೇವನಾದ ನಾಯಕನನ್ನು ಮೊಲೆಯೆಂಬ ಪರ್ವತದಿಂದಲೂ, ಬಳೆಗಳನ್ನು ಧರಿಸಿದ ಕೈಗಳೆಂಬ ಕೆಂದಳಿರುಗಳಿಂದಲೂ, ವಿಶೇಷವಾದ ಆಸೆಯಿಂದ ಆಲಿಂಗಿಸಲು, ಲೀಲಾವಿನೋದದಲ್ಲಿ ಪ್ರವರ್ತಿಸಿದ ಶಿವಪರಮಾತ್ಮನು, ಮಾತೆಯ ಶ್ರೀಸ್ತನಗಳಿಗೆ ಮೆತ್ತಗೆನಿಸುವಂತೆ ಆನೆಯ ತೊವಲಿನಿಂದ ಮುಚ್ಚಿದ ತನ್ನ ಶರೀರವನ್ನು ಆಶ್ರಯವಾಗಿ ಕೊಟ್ಟನು.

1132. ತನ್ನ ಪ್ರಿಯೆಯಾದ ಅಮ್ಮೆಯು ಆಲಿಂಗಿಸಲು, ಏಕಂಬಲಾನನು ಶರೀರವನ್ನು ಮೃದುವಾಗಿಸಿ ಆಶ್ರಯವಾಗಿ ಕೊಟ್ಟುದನ್ನು ಕಂಡು ಸ್ಥಾವರಜಂಗಮಗಳಾದ ದೇವತೆಗಳೇ ಮೊದಲಾದ ಏಳು ಜಾತಿಯ ಜೀವವರ್ಗಗಳೆಲ್ಲಾ ಏಕತೆಯಿಂದ 'ನಮ್ಮ ಮಾತೆಯವರು ಆಲಿಂಗಿಸಲು ಏಕಂಬರರು ಮೆತ್ತಗಾದ ಶರೀರವುಳ್ಳವರಾದರು' ಎಂದು ಸ್ತುತಿಸಲು, ಸುವಾಸನಾಯುಕ್ತವಾದ ಕಲ್ಪಕದ ಹೊಸ ಮಲರುಗಳನ್ನು ಬಾನವರು[1] ಸುರಿಸಲು, ಆ ಸಮಯವೇ ಕಂಬೈ ನದಿಯು ನಮಿಸಿ ತನ್ನ ಮೇಲೇರಿದ ಪ್ರವಾಹವನ್ನು ಯಥಾಸ್ಥಿತಿಗೆ ತಂದುಕೊಂಡಿತು.

1131. ಮಲೈಕ್ಕು ಲಕ್ಕೊಟಿ ಪರಿವುಱು ಪಯತ್ತಾಲ್
ಮೂವಿನ್ ಮೇವಿಯ ತೇವರ್ನಾ ಯಕರೈ
ಮುಲೈಕ್ಕು ವಟ್ಟೊಟು ವಳೈಕ್ಕೈಯಾಲ್ ನೆರುಕ್ಕಿ
ಮುಱುಕು ಕಾತಲಾ ಲಿಱುಕಿಟ ತ್ತುಟುವ
ಚ್ಚಿಲೈತ್ತ ನಿತ್ತಿರು ನುತಜ್ಞಿರು ಮುಲೈಕ್ಕು
ಇಚ್ಚೈನ್ನ ಳಿರ್ಕ್ಕರ ಙ್ಕಳುಕ್ಕುಮೆ ತ್ತೆನವೇ
ಕೊಲೈಕ್ಕ ಳಿಱ್ಱುರಿ ಪುನೈತ್ತತ ಮ್ಮೇನಿ
ಕುಟಿೖನ್ತ ಕಾಟ್ಟಿನಾರ್ ವಿಟೈಯಿನ್ತಕೊಳ್ ಕೈಯಿನಾರ್.

1132. ಕಮ್ಪರ್ ಕಾತಲಿ ತಟುವಮೆಯ್ ಕುಟೈಯ
ಕ್ಕಣ್ಟು ನಿಱ್ಪವು ಞ್ಚರಿಪ್ಪವು ಮಾನ
ಉಮ್ಪ ರೇಟುತ ಲಿಯೋನಿಕ ಳೆಲ್ಲಾ
ಮುಯಿರುಮ್ ಯಾಕ್ಕೈಯು ಮುರುಕಿಯೊನ್ ಱಾಕಿ
'ಎಮ್ಪಿ ರಾಟ್ಟಿಕ್ಕು ಮೆಲ್ಲಿಯ ರಾನಾ
ರೆನ್ಱು ಮೇಕಮ್ಪ' ರೆನ್ಱಿಟು ತ್ತೇತ್ತ
ವಮ್ಪು ಲಾಮಲರ್ ನಿಟೈಪವಿಣ್ ಪೊಟಿಯ
ಕ್ಕಮ್ಪೈ ಯಾಱುಮುನ್ ವಣಙ್ಕಿಯ ತನ್ಱೇ.

---

1. ಬಾನವರು - ದೇವತೆಗಳು.

1133. ಸಂಪತ್ ರೂಪವಾದ ಪರಿಶುದ್ಧ ವಿಭೂತಿಯನ್ನು ಶರೀರದಲ್ಲಿ ಧರಿಸಿ, ಉಕ್ಕುತ್ತಿರುವ ಗಂಗೆಯಿಂದ ತೊಯ್ದ ಜಡೆಯನ್ನೇ ಮುಡಿಯಾಗಿ ಕಟ್ಟಿಕೊಂಡು, ಕಿವಿಯಲ್ಲಿ ಬಿಳಿಯ ಶಂಖದ ಉಂಗುರ, ರುದ್ರಾಕ್ಷಿ ಮಣಿ – ಇವುಗಳನ್ನು ಧರಿಸಿಕೊಂಡು, ಯೋಗದಲ್ಲಿಯೇ ಲಕ್ಷ್ಯವನ್ನಿಟ್ಟ ಆದಿದೇವನಾದ ಶಿವಪರಮಾತ್ಮನು ಜ್ಞಾನಿಗಳು ಚಿಂತಿಸತಕ್ಕ, ತನ್ನನ್ನು ಹೊಂದಲು ಮಹಾತಪವನ್ನು ಮಾಡತಕ್ಕ, ಮಹಿಮೆಯುಳ್ಳವನು. ಅವನು ಎಲ್ಲಾ ಲೋಕಗಳನ್ನೂ ಪಡೆದ ಮಾತೆಯ ತಪಸ್ಸಿಗೆ ಸತ್ಯವಾದ ಫಲವನ್ನು ಕೊಡಲು ಆ ತಪವನ್ನು ಸ್ವೀಕರಿಸಿಕೊಂಡು ತನ್ನ ಶರೀರದಲ್ಲಿ ಬಳೆಗಳ ಗುರುತನ್ನೂ ಸ್ತನಗಳ ಲಾಂಛನವನ್ನೂ ಅಲಂಕಾರವಾಗಿಸಿಕೊಂಡನು.

1134. ಅವ್ಮೆಯ ದೋಷವನ್ನು ನೀಗಿಸುವ ಅಮೃತದಂತಹ ಶ್ರೀಸ್ತನದ ಲಾಂಛನವುಳ್ಳ ತನ್ನ ದಿವ್ಯರೂಪವನ್ನು ಪಾರ್ವತೀಮಾತೆಗೆ ಕಾಣಿಸಿ, ಮುಂದೆ ನಿಂತು ಪರಮಾತ್ಮನು 'ವರಗಳನ್ನು ಪಡೆಯುವವಳಾಗು' ಎಂದನುಗ್ರಹಿಸಲು, ದೋಷರಹಿತವಾದ ಪೂಜೆಯು ಇನ್ನೂ ತೀರದುದನ್ನು ತಿಳಿಯಿಸಲು, ವೇದಕಾರಣನಾದ ಏಕಂಬರ ಕೆಂದಾವರೆಯಂತಹ ಶ್ರೀಪಾದಗಳಿಗೆ ನಮಸ್ಕರಿಸಿ,

---

1133. ಪೂತಿ ಯಾಕಿಯ ಪುನಿತನೀ ಱಾಟಿ
ಪ್ಪೊಙ್ಗು ಕಙ್ಕೈತೋಯ್ ಮುಟಿಚ್ಚಟೈ ಪುನೈನ್ತು
ಕಾತಿಲ್ ವೆಣ್‍ಕುೞೈ ಕಣ್ಟಿಕೈ ತಾಟಿ
ಕ್ಕಲನ್ತ ಯೋಕತ್ತಿನ್ ಮರುವಿಯ ಕರುತ್ತಾಲ್
ಆತಿ ತೇವನಾ ರಾಯುಮಾ ತವಙ್ಚ
ಯವ್ವರ ಙ್ಕೊಲೋ ವಕಿಲಮೀನ್ ಱಳಿತ್ತ
ಮಾತು ಮೆಯ್‍ಪ್ಪಯನ್ ಕೊಟುಪ್ಪವೇ ಕೊಣ್ಟ
ವಳೈತ್ತ ೞುಮ್ಪುಟನ್ ಮುಲೈಚ್ಚುವ ಟಣಿನ್ತಾರ್.

1134. ಕೋತಿ ಲಾವಮು ತನೈಯವಣ್ ಮುಲೈಕ್ಕು
ಕ್ಕುೞೈನ್ತ ತಮ್ಮಣ ವಾಳನ ಙ್ಕೋಲಮ್
ಮಾತು ವಾೞವೇ ಕಾಟ್ಟಿಮು ನಿನ್ಱು
'ವರಙ್ಕಳ್ ವೇಣ್ಟುವ ಕೊಳ್ಕ' ವೆನ್ ಱರುಳ
ವೇತ ಕಾರಣ ರಾಯವೇ ಕಮ್ಪರ್
ವಿರೈಮ ಲರ್‍ಚ್ಚೆಯ್ಯ ತಾಮರೈ ಕ್ಕೞಱ್ಕೀ
ೞೀತ ನೀಙ್ಕಿಯ ಪೂಚನೈ ಮುಟಿನ್ತ
ತಿನ್ಮೈ ತಾನಱಿ ವಿಪ್ಪತಱ್ ಕಿಱೈಞ್ಚಿ,

1135. ದೇವದೇವನ ಇದಿರು ನಿಂತು ಮಾತನಾಡುವ ಸಮಯದಲ್ಲಿ ಅಂಜಿ, ಅಂಜಲಿಯನ್ನೆತ್ತಿ, 'ದೇವರು ಸ್ವೀಕರಿಸಿದ ನನ್ನ ಈ ದಿನದ ಪೂಜೆಯಲ್ಲಿ ಇನ್ನೂ ಮಿಕ್ಕಿರುವ ಭಾಗವನ್ನೂ ಪರಿಪೂರ್ಣವಾಗಿ ಸ್ವೀಕರಿಸಬೇಕು' ಎಂದು ಬಿನ್ನವಿಸಿಕೊಳ್ಳಲು, ತುಂಬಿಗಳು ಮುಸುರುವ ಬಾಚಿದ ಕೂದಲುಳ್ಳ ಬೆಟ್ಟದ ಮಗಳ ಮೊಗದಾವರೆಯನು ನೋಡಿ, ಮಲರಿನಂತಿರುವ ಕಣ್ಣುಗಳುಳ್ಳ ನೆತ್ತಿಯ ಮೇಲೆ ತ್ರಿಪುಂಡ್ರವಾಗಿ ಧರಿಸಿದ ವಿಭೂತಿಯುಳ್ಳ ಶಿವಪರಮಾತ್ಮನು, 'ನನ್ನಲ್ಲಿ ನೀನು ಮಾಡುವ ಪೂಜೆಯು ಎಂದಿಗೂ ಮುಗಿಯದು' ಎಂದು ಹೇಳಲು,

1136. 'ಪರಮಾತ್ಮನೇ, ಅಂತ್ಯವಿಲ್ಲದ ಈ ಪೂಜೆಯು ಎಂದೆಂದಿಗೂ ನೆಲೆಯಾಗಿ ನಿಲ್ಲಲು, ದೇವರು ಸಂತೋಷದಿಂದ ಇದನ್ನು ಸ್ವೀಕರಿಸಿ, ದೋಷದೂರವಾದ ಈ ಸ್ಥಳದಲ್ಲಿ ಎಲ್ಲಾ ಧರ್ಮಗಳನ್ನೂ ನಾನು ಆಚರಿಸುವಂತೆ ಅನುಗ್ರಹಿಸಬೇಕು. ಶಿವನಿಂದೆ ಮೊದಲಾದ ದೋಷಗಳನ್ನು ಮಾಡಿದವರು ಆ ದೋಷಗಳನ್ನು ನೀಗಿಸಿಕೊಳ್ಳಲು ಮಾಡುವ ಹಿರಿಯ ತಪಸ್ಸುಗಳಿಗೆ ನಾನು ಅನುಗ್ರಹಿಸುವಂತಾಗಬೇಕು' ಎಂದು ಜೀವಿಗಳ ಭವಬಂಧನವನ್ನು ನಾಶಿಸುವುದನ್ನೇ ಮನದಲ್ಲಿಟ್ಟುಕೊಂಡು ಅಮ್ಮೆಯು ವರವನ್ನು ಕೇಳಿದಳು.

1135. ಅಣ್ಣರ್ ನಾಯಕ ರೆತಿರ್ನಿನ್ಱು ಕೂಱು
ಮಳವಿನಾ ಲಞ್ಜಿ, ಯಞ್ಜಲಿ ಕೂಪ್ಪಿ,
'ಕೊಣ್ಡ ವಿಜ್ಞೈಯೆನ್ ಪೂಚನೈ ಯಿನ್ನುಙ್
ಕುಱೈನಿ ರಮ್ಪಿಟ ಕ್ಕೊಳ್ಕ' ವೆನ್ ಱರುಳ,
ವಣ್ಡು ವಾರ್ಕುೞಿನ್ ಮಲೈಮಕಳ್ ಕಮಲ
ವತನ ನೋಕ್ಕಿ, ಯ ಮ್ಮಲರ್ಕಣ್ ಞ್ಱಿಯಿನ್ಮೇಲ್
ಮುಣ್ಡ ನೀಞ್ಱರ್ 'ನಿನ್ ಪೂಚನೈ ಯೆನ್ಱು
ಮುಟಿವ ತಿಲ್ಲೈನಮ್ ಪಾ' ಲೆನ ಮೊೞಿಯ,

1136. 'ಮಾಱಿ ಲಾತ ವಿಪ್ಪೂಚನೈ ಯೆನ್ಱು
ಮನ್ನ ವೆಮ್ಪಿರಾನ್ ಮಕಿೞ್ನ್ತು ಕೊಣ್ಡರುಳಿ,
ಯಿಱಿ ಲಾತವಿ ಪ್ಪತಿಯಿನು ಳೆಲ್ಲಾ
ವಱಮುಮ್ ಯಾನ್ಚೆಯ ವರುಳ್ಚೆಯ ವೇಣ್ಡುಮ್;
ವೇಱು ಚೆಯ್ವನೈ ತಿರುವಟಿ ಪ್ಪಿಱೈತ್ತ
ಲೊೞಿಯ ವಿಙ್ಕೆಳಾರ್ ವೇಣ್ಟಿನ ಚೆಯಿನುಮ್
ಪೇಱು ಮಾತವ ಪ್ಪಯನ್ಕೊಟು ತ್ತರುಳ
ಪ್ಪೆಱವುಮ್ ವೇಣ್ಡು' ಮೆನ್ ಱನಳ್ಪಿಱ ಪ್ಪೊೞಿಪ್ಪಾಳ್.

1137. ಮಲೆಯ ಮಗಳು ಈ ರೀತಿ ಪ್ರಾರ್ಥಿಸಲು, ವೃಷಭದ ಮೇಲೇರಿ ಬರುವ ಶಿವಪರಮಾತ್ಮನು, ಅವನು ಆಶಿಸಿದ ಪೂಜೆಯನ್ನು ಕೊಳ್ಳುವವನಾಗಿ ಅಲ್ಲಿ ನೆಲಸಿ, ಎಲ್ಲಾ ಧರ್ಮಗಳನ್ನೂ ಎಂದೆಂದಿಗೂ ವಿಘ್ನವಿಲ್ಲದೆ ವರ್ಧಿಸಲು ಕಾರಣವಾಗಿ, ಇಹಪರಗಳಿಗೆ ಸಂಬಂಧಿಸಿದಂತೆ ಎರಡು ನಾಳಿ ನೆಲ್ಲನ್ನು ಕೊಟ್ಟು, ಕಾಂಚಿನಗರದಲ್ಲಿ ಬಾಳುವ ಕೀಳುಮೇಲೆನ್ನದೆ ಸಮಸ್ತರೂ ಮಾಡುವ ಪಾಪಗಳನ್ನು ಹೋಗಲಾಡಿಸಿ, ಅವರು ಧರ್ಮಮಾರ್ಗದಲ್ಲಿ ಹೋಗಲು ಸಹಾಯ ಮಾಡುವ ತಪಸ್ಸುಗಳಾಗಿ ಫಲಿಸುವಂತೆ ಸಂತೋಷದಿಂದ ವರಕೊಟ್ಟು ಅನುಗ್ರಹಿಸಿದನು.

1138. ಈ ರೀತಿ ಚಿಂತಿಸಲು ಅಸಾಧ್ಯವಾದ ಶ್ರೇಷ್ಠ ವರಗಳನ್ನು ಪಡೆದವಳಾಗಿ, ಅಲ್ಲಿ ನಮ್ಮ ಮಾತೆಯು, ತನ್ನ ಪರಮಾತ್ಮನು ಸಂತೋಷಿಸಿ ಅನುಗ್ರಹಿಸುವಂತೆ ಈ ಲೋಕದಲ್ಲಿ ಪೂಜೆಯನ್ನು ಮಾಡಿ, ಅದರ ಫಲವನ್ನು ಜೀವಿಗಳಿಗೆ ಅನುಗ್ರಹಿಸುವುದ ರೊಡನೆ, ಗೃಹಸ್ಥ ಧರ್ಮವನ್ನು ಲೋಕದಲ್ಲಿ ವರ್ಧಿಸುವ ಉದ್ದೇಶದಿಂದ, ಜೀವಿಗಳೆಲ್ಲಾ ಮೇಲ್ಮೆ ಹೊಂದುವಂತೆ ಪುಣ್ಯಸ್ಥಳವಾದ ತಿರುಕಾಮಕೋಟದಲ್ಲಿ ಪ್ರೇಮದಿಂದ ನೆಲಸಿ ಅನುಗ್ರಹಿಸಿ, ಮೂವತ್ತೆರಡು ಧರ್ಮಗಳನ್ನೂ ವರ್ಧಿಸಿದಳು.

1137. ವೀಟ್ಟೈಯಿನ್ ಮೇಲವರ್ ಮಲೈಮಕಳ್ ವೇಣ್ಟ,
ವಿರುಮ್ಪು ಪೂಚನೈ ಮೇವಿವೀ ೞಿರುನ್ತೇ,
ಯಿಟ್ಟೈಯ ೞಾವೞಿಮ್ ವಳರ್‍ಕ್ಕುಮ್ವಿ ತ್ತಾಕ
ವಿಕಪ ರತ್ತಿರು ನಾೞಿನೆ ಲ್ಲಳಿತ್ತು,
ಕ್ಕಟ್ಟೈಯ ರಾಕಿಯು ಮುಯರ್‍ನ್ತವ ರಾಯು
ೞಿಕ್ಕಾಞ್ಚಿ ವಾೞ್ಪವರ್ ತಾಞ್ಚೆಯ್ತೀ ವಿನೈಯು
ನ್ತಟ್ಟೈಪ ಟಾತುಮೆಯ್ ನ್ನೆೞಿಯಟೈ ವತೞ್ಕಾ
ನ್ತವಙ್ಕ ಳಾಕವು ಮುವನ್ತರುಳ್ ಚೆಯ್ತಾರ್.

1138. ಎಣ್ಣ ರುಮ್ಪೆರು ವರಙ್ಕಣ್ಮುನ್ ಪೆಱ್ಱು
ೞಿಕ್ಕಿಮ್ಪಿ ರಾಟ್ಟಿತ ಮ್ಪಿರಾನ್ಮಕಿೞ್ ನ್ತರುಳ
ಮಣ್ಣಿನ್ ಮೇಲ್ವೞಿ ಪಾಟುಚೆ ಯ್ತರುಳಿ
ಮನೈಯ ಱಮ್ಪೆರು ಕ್ಕುಙ್ಕರು ಣೈಯಿನಾ
ನಣ್ಣು ಮನ್ನುಯಿರ್ ಯಾವೈಯುಮ್ ಪಲ್ಕ
ನಾಟು ಕಾತಲಿ ನೀಟಿಯ ವಾೞ್ಕ್ಕೈ
ಪ್ಪುಣ್ಣಿ ಯತ್ತಿರು ಕ್ಕಾಮಕ್ಕೋ ಟ್ಟತ್ತು
ಪ್ಪೊಲಿಯ ಮುಪ್ಪತೋ ಟಿರಣ್ಟಱಮ್ ಪುರಕ್ಕುಮ್.

1139. ದೊಡ್ಡ ತಪಸ್ಸನ್ನು ಮಾಡುವ ಧರ್ಮವೆಂಬ ಹೆಚ್ಚಾದ ಸಂಪತ್ತುಳ್ಳ ಅಮ್ಮೆಯು, ಬ್ರಹ್ಮಾಂಡವೆಂಬ ತನ್ನ ಗೃಹದಲ್ಲಿಡಲು ದೊಡ್ಡ ದೀಪಗಳಾದ ಮೂರು ಸೊಡರುಗಳು, ಆ ಅಮ್ಮೆಯು ಲೋಕದಲ್ಲಿ ಬಂದುದರ ಫಲವನ್ನು ತಿಳಿಸುವಂತೆ ಉದಯ ವಾಯಿತೋ ಎಂಬಂತೆ ಅಲ್ಲಾಡುವ ಮೂರು ಹೊಸ ನೀಲಮಲರುಗಳಿಂದ ಕೂಡಿದ ಒಂದು ಹೂ, ವರ್ಷಕ್ಕೆ ಒಂದುಬಾರಿ ಹೂಬಿಡುವ ವಿಶೇಷತೆಯಿಂದ ಕೂಡಿ ನೆಲಸುವಂತೆ ಪೂರ್ಣವಾದ ಲೋಕದಲ್ಲಿ ಬೆಳಗುವ ಮಹತ್ತಾದ ತಿರುಕಾಮಕೋಟದಲ್ಲಿ ಒಳ್ಳೆಯ ಧರ್ಮಗಳು ನೆಲಸುವಂತೆ ನೆಲೆಯಾಗಿ ನಿಂತು ಅನುಗ್ರಹಿಸುವಳು.

1140. ತಿರುಕಾಮಕೋಟದ ಪಕ್ಕದಲ್ಲಿ, ಮೇಲೆ, ನಡು, ಕೆಳಗೆ ಎನ್ನುವ ಮೂರು ಲೋಕಗಳಲ್ಲುಳ್ಳವರೂ ಸ್ತುತಿಸುವ ತೀರ್ಥವಾದ ಶೀತಲವಾದ ನೀರುಳ್ಳ ಒಂದು ತಟಾಕವು, ನಿರ್ಮಲವಾದ ಅಲೆಯು ಬೀಸುವ ಕಡಲೆಂಬ ಮೇಖಲೆಯಿಂದ ಸುತ್ತುಗೊಂಡ ಭೂಲೋಕದಲ್ಲಿರುವವರಿಗೆ ಗೃಹಸ್ಥ ಧರ್ಮವನ್ನು ಹೊಂದಲು ತಕ್ಕುದಾದ ಮೆಟ್ಟಲು ಗಳುಳ್ಳ ಏಣಿಯಂತೆ, ಶ್ರೇಷ್ಠವಾದ ಜಲಶರೀರವಾಗಿಯೇ ತುಂಬಿ ಎಂದೆಂದಿಗೂ ಇರುವು ದಾಗಿ, ತನ್ನಲ್ಲಿ ಮುಳುಗುವವರ ಎಲ್ಲಾ ಪಾಪಗಳನ್ನೂ ಹೋಗಲಾಡಿಸುವ ಒಳ್ಳೆಯ ತೀರ್ಥಗಳೆಲ್ಲಾ ಸ್ತುತಿಸುವ ಮಹತ್ವದಿಂದ ಉಲಗಾಣಿ ಎಂದು ಹೆಸರನ್ನು ಪಡೆದ ಒಂದು ತೀರ್ಥವಾಗಿದೆ.

1139. ಅಲಕಿ ನೀಟವ ತ್ತುಙಪ್ಪೆರು ಙ್ಞ್ಚಿಲ್ವಿ
ಯಣ್ಟ ಮಾನ್ತಿರು ಮನೈಕ್ಕಿಟು ನ್ತೀಪ
ಮುಲಕಿಲ್ ವನ್ತುಙು ಪಯನಙಿ ವಿಕ್ಕ
ವೋಙ್ಕು ನಾನ್‌ಮಲರ್ ಮೂನ್‌ಱುಟ ನೊನ್‌ಱು
ನಿಲವ ವಾಣ್ಡಿನು ಕ್ಕೊರುಮುಱೈ ಚೆಯ್ಯು
ನೀಟು ತೊನ್‌ಮೈಯಾ ನಿಱೈನ್ತಪೇ ರುಲಕ
ಮುಲರ್‌ಪೆ ರುನ್ತಿರು ಕ್ಕಾಮಕ್ಕೋ ಟ್ಟತ್ತು
ವೈತ್ತ ನಲ್ಲಙ ಮುನ್‌ನವೇ ಮನ್‌ನುವ್.

1140. ತೀಙ್ಕು ತೀರ್‌ಕ್ಕುನ ಞ್ಞೀರ್‌ತ್ತಙ್ಕಳ್ ಪೋಱ್ಱು
ಙ್ಚಿಙಪ್ಪಿ ನಾಞೀರು ಕ್ಕಾಮಕ್ಕೋ ಟ್ಟತ್ತಿನ್
ಪಾಙ್ಕು ಮೂನ್‌ಱುಲ ಕತ್ತಿನು ಳೋರುವ್
ಪರವು ತೀರ್‌ತ್ತಮಾವ್ ಪೈಮ್ಪುನ್‌ಱ್ ಕೇಣಿ,
ವಾಙ್ಕು ತೆಣ್ಡಿರೈ ವೇಲೈಮೇ ಕಲೈಚೂೞ್
ವೈಯ ಕನ್ತನ ಕ್ಕೆಯ್ತಿಯ ಪಟಿಯಾ
ಯೋಙ್ಕು ತನ್‌ವಟಿ ವಾಯ್‌ನಿಕೞ್ ನ್ತಿನ್‌ಱು
ಮುಳ್ಳ ತೊನ್‌ಱುಲ ಕಾಣಿಯೆನ್ ಱುಳತಾಲ್.

1141. ಒಳ್ಳೆಯ ಧರ್ಮಗಳನ್ನೆಲ್ಲಾ ವಿಶೇಷವಾಗಿ ಮಾಡಿ ಜೀವಿಗಳನ್ನು ಕಾಪಾಡುವ ಅಮ್ಮೆಯವರ ತಿರುಕಾಮಕೋಟದ ಮೇಲುಭಾಗಕ್ಕೆ ಚಂದ್ರಸೂರ್ಯರು ಬರುವಾಗ, ಅದರ ಮೇಲೆ ಬಾನಮಾರ್ಗದಲ್ಲಿ ಸರುತವಾಗಿ ಹೋಗದೆ ಪಕ್ಕಕ್ಕೆ ಸರಿದು ಹೋಗುವುದರಿಂದ, ಸರಿಯಾದ ದಿಕ್ಕುಗಳು ಬದಲಿ, ಅದರಿಂದ ಎಲ್ಲಾ ಎಡೆಯ ನೆಳಲುಗಳು ಬದಲಿರುವುದರಿಂದ ಆದ ದಿಕ್ಕುಗಳ ಭ್ರಾಂತಿಯು, ಈ ಭೂಲೋಕದವರೆಲ್ಲರೂ ಕಾಣು ವಂತೆ ಎಂದೆಂದಿಗೂ ಆಗುವುದು. ಅದು ಈಗಲೂ ಹಾಗೆಯೇ ತೋರುವುದು.

1142. ಕಾಳಿಕಾದೇವಿಯ ಹಿತವಾದ ಬಲವಾದ ಕಾವಲುಳ್ಳ ಆ ಕಾಂಚೀನಗರದ ಎಲ್ಲೆಯೊಳಗೆ ಕಾಂಚೀನದಿಯ ತೀರದ ಪಕ್ಕದಲ್ಲಿ, ನೆತ್ತಿಯಲ್ಲಿ ಬಾಲಚಂದ್ರನನ್ನು ಅಲಂಕರಿಸಿಕೊಂಡ ಶಿವಪರಮಾತ್ಮನು ಪ್ರೀತಿಯಿಂದ ನೆಲಸಿರುವ ತಿರುಪ್ಪೆರುಂ ಪೆಯರಿರುಕ್ಕೈ ಎಂಬ ದೇಗುಲದಲ್ಲಿ, ಬೆಂಗದಿರನು ಮೇಲೇರುವ ಮಧ್ಯಾಹ್ನಕಾಲ ದಲ್ಲಿಯೂ, ಪಡುಗಡಲಲ್ಲಿ ಬೀಳುವ ಸಂಧ್ಯಾಕಾಲದಲ್ಲಿಯೂ, ತನ್ನ ನೆಳಲು ತನ್ನೆಡೆ ಯಿಂದ ಬೇರೆಯಾಗದ ಸೌಭಾಗ್ಯವುಳ್ಳ ಕಾಂಚಿತ್ತಾನಂ (ಕಾಂಚಿಮರ ಇರುವ ಎಡೆ) ಎಂಬುದು ಮೇಲ್ಮೆಯನ್ನೂ ಆನಂದವನ್ನೂ ಒಳಗೊಂಡಿದೆ.

1141. ಅನ್ತ ವಿನ್‌ಱಿನ ಲ್ಲಱವುಪ್ಪುರಿ ನ್ತಳಿಕ್ಕು
ಮಮ್ಮೈ ತನ್‌ಱಿರು ಕ್ಕಾಮಕ್ಕೋ ಟ್ಟತ್ತಿಲ್
ವನ್ತು ಚನ್ತಿರ ಚೂರಿಯರ್ ಮಾತು
ವಟಿಕ್ಕೊ ಳಾತತನ್ ಮರುಙ್ಙುಪೋ ತಲಿನಾಱ್
ಚನ್ತ ಮಾತಿರ ಮಯಙ್ಕಿಯ ಮ್ಮರುಙ್ಙು
ಙ್ಙಾಯೈ ಮಾಱಿಯ ತನ್‌ಱಿಚೈ ಮಯಕ್ಕ
ವಿನ್ತ ಮಾನಿಲ ತ್ತವರೆಲಾ ಙ್ಙಾಣ
ವೆನ್‌ಱು ಮುಳ್ಳತೊನ್ ಱಿನ್‌ಱುಮ ಙ್ಙುಳತಾಲ್.

1142. ಕನ್‌ನಿ ನನ್‌ನೆಟು ಙ್ಙಾಪ್ಪುಟೈ ವರೈಪ್ಪಿಱ್
ಕಾಞ್ಚಿ ಯಾನ್ತಿರು ನತಿಕ್ಕರೈ ಮರುಙ್ಙು
ಚೆನ್‌ನಿ ಯಿಱಮ್ಪಿಱೈ ಯಣಿನ್ತವರ್ ವಿರುಮ್ಪು
ತಿರುಪ್ಪೆ ರುಮ್ಪೆಯರಿ ರುಕ್ಕೈಯಿ ಲ್ಚೆಙ್ಕಟಿನ್ತ್
ಮನ್‌ನು ವೆಙ್ಕತಿರ್ ಮಾತೆಟು ವ್ವೋತು
ಮಱಿತ್ತು ಮೇಲ್ಕಟ ಲ್ಲೈವಿಟು ವ್ವೋತು
ನ್ತನ್‌ನಿ ಟಿಱ್‌ಪಿರಿ ಯಾತವಣ್ ಕಾಞ್ಚಿ
ತ್ತಾನ ಮೇವಿಯ ತನ್‌ಮೈಯು ಮುಟೈತ್ತಾಲ್.

1143. ವೇದಮಂತ್ರಗಳಿಂದ ಸ್ತುತಿಸಿ, ಕಡಿದಾದ ತಪವನ್ನು ಮಾಡಿ, ದೃಢ ನಿಯಮಗಳನ್ನಾಚರಿಸಿ, ಮುನಿಗಳು ಆಗಮವಿಧಿಯಿಂದ ಪೂಜೆಯನ್ನು ಮಾಡಲು, ದೇವತೆಗಳೇ ಮೊದಲಾದ ಎಲ್ಲಾ ಜೀವಿಗಳೂ, ತುಂಬಿದ ಭಕ್ತಿಯಿಂದ ಅರ್ಚನೆಯನ್ನು ಮಾಡಲು, ಆಶಿಸಿದ ಕಾಮನೆಗಳನ್ನು ಅವರವರಿಗೆ ಅನುಗ್ರಹಿಸುತ್ತಾ, ಶಿವಪರಮಾತ್ಮನು ಸಂತೋಷದಿಂದ ನೆಲಸಿರುವ ಸ್ಥಳಗಳು ಆ ನಗರದ ಎಲ್ಲೆಗಳೊಳಗೆ ಅಸಂಖ್ಯಾತವಾಗಿವೆ.

1144. ಆ ಕಾಂಚೀನಗರದ ಎಲ್ಲೆಯೊಳಗೆ, ಆ ಸ್ಥಳವಿಶೇಷದ ಮಹಿಮೆಯಿಂದ, ಹತ್ತಿರ ಬಂದ ಒಂದು ಆನೆಯನ್ನು ಕಾಡಿನಲ್ಲಿ ವಾಸಿಸುವ ಒಂದು ಸಣ್ಣ ಮೊಲವು ತನ್ನಿಂದ ದೂರ ಓಡಿಸುವ ಶಕ್ತಿಯುಳ್ಳದು. ಇದಲ್ಲದೆ ಪ್ರಾಣಹೋದ ಶರೀರಗಳು ಪುನಹ ಪ್ರಾಣವನ್ನು ಹೊಂದುವಂತೆ ಮಾಡುವ ಮಹಿಮೆಯುಳ್ಳ ಸ್ಥಳವದು. ಎಲ್ಲೆಲ್ಲಿಯೂ ಕಾಣುವುದಕ್ಕಸಾಧ್ಯವಾದ ಅಮರ್ತ್ಯಸ್ಥಳ ಎಂಬ ಎಡೆಗಳು ಅಲ್ಲಿವೆ. ಇವೆಲ್ಲಾ ಆ ನಗರದ ವಿಶೇಷಗುಣಗಳು.

1143. ಮಱೈಕ ಳಾಱ್ಱಿ, ತ್ತರುನ್ತವರ್ ಪುರಿನ್ತು,
ಮಾಱಿ ಲಾನಿಯ ಮನ್ತ್ರಲೈ ನಿನ್ಱು,
ಮುಱೈಮೈ ಯಾಲ್ವರುಮ್ ಪೂಚನೈ ಚೆಯ್ಯ,
ಮುನಿವರ್ ವಾನವರ್ ಮುತಲಾಯಿ ರೆಲ್ಲಾ
ನಿಱೈಯು ಮನ್ಪಿನಾ ಲರುಚ್ಚನೈ ಚೆಯ್ಯ
ನೀಟು ಕಾಮಙ್ಕ ಳವರವರ್ ಕ್ಕರುಳಿ
ಯಿಱೈವರ್ ತಾಮಕಿಟ್ ನ್ತರುಳಿಯ ಪತಿಕ
ಳೆಣ್ಣಿ ಱನ್ತವ ತ್ತಿರುನಕ ರೆಲ್ಲೈ.

1144. ಮನ್ನು ಕಿನ್ಱವ ತ್ತಿರುನಕರ್ ವರೈಪ್ಪಿನ್
ಮಣ್ಣಿನ್ ಮಿಕ್ಕತೋರ್ ನನ್ಮೈಯಿ ನಾಲೇ,
ತುನ್ನುಮ್ ಯಾನೈಯೈ ತ್ತೂಱ್ಱಿಲ್ವಾಟ್ ಮುಯನ್ಮುನ್
ಱುರಕ್ಕ ವೆಯ್ತಿಯ ತೊಲೈವಿಲೂ ಕ್ಕತ್ತಾ
ಱಿನ್ನಿ ಲತ್ತುನಿನ್ ಱತಱ್ಱುತಲ್ ಚೆಯ್ಯು
ನ್ತಾನ, ಮನ್ಱಿಯು ನ್ತನುವೆಟು ನ್ತರಣಿ,
ಯೆನ್ನಿ ಲತ್ತಿನು ಙ್ಕಾಣ್ಪರು ವಿಱವಾ
ತ್ತಾನ ಮೆನ್ಱಿವೈ ಯಿಯಲ್ಪಿನಿ ಲುಟೈತ್ತಾಲ್.

1145. ಪಾಪರಾಶಿಯನ್ನು ಹೋಗಲಾಡಿಸಿ, ಸುಖವನ್ನು ತರುವ ಪುಣ್ಯ ತೀರ್ಥವೂ, ಬೇಡಿದವರಿಗೆ ಬೇಡಿದುದನ್ನೀಯುವ ಇಷ್ಟಸಿದ್ಧಿ ಎಂಬ ತೀರ್ಥವೂ, ಹಿತವನ್ನು ತರುವ ಮಂಗಲತೀರ್ಥವೂ, ಮೂರು ಲೋಕಗಳಲ್ಲಿಯೂ ಇರುವ ತೀರ್ಥಗಳೆಲ್ಲಾ ಒಂದು ಗೂಡಿದ ಸರ್ವತೀರ್ಥ ಎಂಬಿವೇ ಮೊದಲಾದ ಆ ನಗರದಲ್ಲುಳ್ಳ ಅಸಂಖ್ಯಾತ ತೀರ್ಥಗಳಲ್ಲಿ ದೇವತೆಗಳು ಬಿಡದೆ ಬಂದು ಮಿಂದು ಹೋಗುವರು.

1146. ಒಂದು ದಂಟಿನಲ್ಲಿ ಮೂರು ಹೂಗಳನ್ನು ಬಿಡುವ ಹೊನ್ನ ಕಮಲ ಗಳುಳ್ಳ ತಟಾಕಗಳೂ, ಉಕ್ಕಿ ಹರಿಯುವ ನೀರು ಪಡುಮುಖವಾಗಿ ಓಡಿ ಆಮೇಲೆ ಮರೆಯಾಗಿ ಹೋಗುವ ನದಿಯೂ, ಅದರೊಡನೆ ಹಗಲಿನಲ್ಲಿ ಅರಳುವ ಕೆನ್ನೈದಿಲೆಗಳೂ, ರಾತ್ರಿಯಲ್ಲಿ ಅರಳುವ ಹಸುರು ತಾವರೆ ಹೂಗಳೂ, ಮಧ್ಯಾಹ್ನದಲ್ಲಿ ಅರಳುವ ಪಾದರಿ ಹೂಗಳೂ ಅಲ್ಲದೆ ನೀಲಮೇಘದಂತೆ ಬಣ್ಣವುಳ್ಳ ಅಮ್ಮೆಯು ಇದ್ದು ಅನುಗ್ರಹಿಸಿದ ಆ ಸ್ಥಳದಲ್ಲಿ, ರಾತ್ರಿಯಲ್ಲಿ ನಿದ್ರಿಸದ, ಕಾಯಿಗಳನ್ನು ಬಿಡದ ಹುಣಸೆಮರವೂ ಇದೆ

1145. ಈಣ್ಡು ತೀವಿನೈ ಯಾವೈಯು ನೀಕ್ಕಿ
ಯಿನ್ಪ ಮೇತರುಮ್ ಪುಣ್ಣಿಯ ತೀರ್ತ್ತಮ್
ವೇಣ್ಡಿ ನಾರ್ತಮ ಕ್ಕಿಟ್ಟಚಿ ತ್ತಿಯತಾಯ್
ವಿಳಙ್ಕು ತೀರ್ತ್ತ, ನನ್ ಮಙ್ಕಲ ತೀರ್ತ್ತ,
ನೀಣ್ಡ ಕಾಪ್ಪುಟೈ ತ್ತೀರ್ತ್ತ, ಮೂನ್ ಱುಲಕಿ
ನಿಕಟಿನ್ತ್ತ ಚಾರುವ ತೀರ್ತ್ತಮೇ ಮುತಲಾ
ವಾಣ್ಡು ನೀಟಿಯ ತೀರ್ತ್ತಮೆ ಣ್ಣಿಲವು
ಮಮರ ನಾಟ್ಟವ ರಾಟುತ ಲೊಟಿಯಾರ್.

1146. ತಾಳ ತೊನ್ಱಿನಿನ್ ಮೂನ್ಱುಪೂ ಮಲರು
ನ್ತಮನಿ ಯಞ್ಚಿಟು ನ್ತಾಮರೈ ತ್ತಟಮು
ನೀಳ ವಾರ್ಪುನಲ್ ಕುಟತಿಚೈ ಯೋಟಿ
ನೀರ್ಕ ರಕ್ಕುಮಾ ನತಿಯುಟ, ನೀಟು
ನಾಳ ಲರ್ನ್ತಚೆ ಙ್ಕುವಳೈಪೈ ಙ್ಕಮಲ
ನಣ್ಪ ಕಱಿರುಮ್ ಪಾಟಲ ಮನ್ಱಿ
ಕ್ಕಾಳ ಮೇಕನೊ ಪ್ಪಾಳುಱಿ ವರೈಪ್ಪಿಱ್
ಕಣ್ಪ ಟಾತತಾ ಯಾಪ್ಪುಳಿ ಯುಳತಾಲ್.

1147. ತನ್ನಲ್ಲಿ ಬಿದ್ದ ಇತರರ ಪಡಿನೆಳಲನ್ನು ಕಾಣಿಸದೆ, ತನ್ನೊಳಗೆಯೇ ಅಡಗಿಸಿಕೊಳ್ಳುವ ಒಂದು ಕೊಳ, ಸ್ವಲ್ಪ ಉಂಡರೂ ನಂಜಾಗಿ ಕೊಲ್ಲುವ ನೀರುಳ್ಳ ಒಂದು ತಟಾಕ, ವಂಚನೆಯೊಂದೂ ಇಲ್ಲದೆ ಬಂದು ಒಳಪ್ರವೇಶಿಸಿದವರು ವಾನರರಾಗಿ ರೂಪಭೇದವನ್ನು ಹೊಂದುವ ಬಿಲವೊಂದು, ಪಡೆದ ಮಂಗರೂಪವನ್ನು ಹೋಗಲಾಡಿಸಲು ಸ್ನಾನಮಾಡತಕ್ಕ ಕೆರೆಯೊಂದು, ದೇವತೆಗಳೊಡನೆ ಸೇರುವುದರಿಂದ ಉಂಟಾಗುವ ಸುಖವನ್ನು ಕೊಡುವ ಬಿಲವೊಂದು – ಇಂತಹ ಅತಿಶಯಗಳು ಆ ನಗರದಲ್ಲಿ ಹಲವಿವೆ.

1148. ಐದು ದೊಡ್ಡ ಕೈಗಳನ್ನೂ, ನದಿಯಂತೆ ಪ್ರವಹಿಸುವ ಮದಜಲವನ್ನೂ ಉಳ್ಳ ಎಣೆಯಿಲ್ಲದ ಆನೆಮುಖದ ವಿನಾಯಕ ದೇವರು ನಿಂತು ಕಾಪಾಡಲು, ಪಾದಕಮಲ ಗಳಲ್ಲಿ ಬಲವಾದ ಕಡಗವು ಶಬ್ದಿಸಲು, ನಡುರಾತ್ರಿಯಲ್ಲಿ ಚರಿಸುವ ನೀಳವಾದ ಮೇಘ ದಂತೆ ಕರಿದಾದ ಮೈಯನ್ನೂ, ನಂಜು ಒಸರುವ ಹಲ್ಲುಗಳುಳ್ಳ ಹಾವನ್ನು ದಟ್ಟಿಯಾಗಿ ಧರಿಸಿದ ನಡುವನ್ನೂ ಉಳ್ಳ, ಹೆದರಿಕೆಯನ್ನು ತರುವ ಮೂರು ತುದಿಗಳುಳ್ಳ ಶೂಲ ವನ್ನು ಧರಿಸಿದ ಪಡೆಯನ್ನು ಹೊಂದಿದ ಭೈರವ ದೇವರು ಎಡೆಬಿಡದೆ ಸಂಚರಿಸುತ್ತಾ ಮುಂಭಾಗದಲ್ಲಿ ಕಾಪಾಡಲು, ಕ್ರೌಂಚಮಲೆಯನ್ನು ಇಬ್ಭಾಗವಾಗಿ ತುಂಡುಮಾಡಿದ ಶಕ್ತಿ ಆಯುಧವುಳ್ಳ ಮುರುಗ ದೇವನು ಕಾಪಾಡಲು ಆ ನಗರವು ಎಸೆಯುವುದು.

1147. ಚಾಯ್ಯೈ ಮುನ್‍ಪಿಣಿ ಕ್ಕುಙ್ಕಿಣ ಱಿಸೊನ್‍ಱು,
ತಙ್ಙ್ ಮುಣ್ಣಿನ ಙ್ಙ್ಙ ನ್ನ್ಟ ವೊನ್‍ಱು,
ಮಾಯ್ಯೈ ಯಿನ್‍ಱಿವ ನ್ನ್ತುಳ್ಳೈ ನ್ನ್ತಾರ್‍ಕಳ್,
ವಾನ ರತ್ತುರು ವಾಮ್ಬಿಲ ಮೊನ್‍ಱು,
ಮೇಯ ವವ್ವುರು ನೀಙ್ಕಿಟ ಕ್ಕುಳಿಕ್ಕುಮ್
ವಿಳಙ್ಕು ಪೊಯ್‍ಕೈಯು ಮೊನ್‍ಱು, ವಿಣ್ಣವರೋ
ಟಾಯ ಮಿನ್‍ಪಮುಯ್ ಕ್ಕುಮ್ಬಿಲ ಮೊನ್‍ಱೋ,
ಟನ್ನೈಯ ವಾಕಿಯ ವತಿಚಯಮ್ ಪಲವಾಲ್.

1148. ಅಙ್ಙು ವಾನ್‍ಕರ ತ್ತಾಱಿಟಿ ಮತತ್ತೋ
ರಾನೈ ನಿಱ್ಕವು, ಮರೈಯಿರು ಟ್ಟೆರಿಯು
ಮಙ್ಙು ನೀಳ್ವತು ಪೋಲುಮಾ ಮೇನಿ
ಮಲರ್‍ಪ್ಪ ತಙ್ಕಳಿಲ್ ವಣ್ಕೞಲ ವ್ವೊಲಿಪ್ಪ
ನಙ್ಙು ನಲ್ಕೆಯಿ ಱರವವೆ ಱರೈಯಿ
ನಾಮ ಮೂನ್‍ಱಿಲೈ ಪ್ಪಟೈಯುಟೈ ಪ್ಪಿಳ್ಳೈ
ಯೆಙ್ಙು ಲಿನ್‍ಱಿಮುನ್ ಟಿರಿಯವು, ಙ್ಕುನ್‍ಱಿ
ಮೆಱಿನ್ತ ವೇಲವನ್ ಕಾಕ್ಕವು ಮಿಳೈಯುಮ್.

1149. ಶಿವಶಕ್ತಿಯನ್ನು ಪಾಸಿಸಿ ಸಿದ್ಧಿಯನ್ನು ಪಡೆದ ಶಕ್ತಿಯೋಗಿಗಳೂ, ಶಿವಯೋಗ ಸಾಧನೆಯುಳ್ಳ ಮಹಾಶಿವಯೋಗಿಗಳೂ, ಅಳಿವಿಲ್ಲದೇ ಇರುವ ಆಯುಷ್ಯ ವಿರುವ ಮಹಾತಪಸಿಗಳು ನೆಲಸಿರುವ ಎಡೆಗಳೂ ಅಲ್ಲಿ ಅನೇಕ ಇವೆ. ಸಿದ್ಧರು, ವಿದ್ಯಾಧರರು, ರಾಕ್ಷಸರು, ಗಂಧರ್ವರು ಎಂಬಿವರು ಇರುವ, ತುದಿಯಲ್ಲಿ ಎರಡು ಕವಲುಗಳಿಂದ ಕೂಡಿದ ನಿಡಿದಾಗಿ ಬೆಳೆದ ಬಳುಕುವ ಬೆತ್ತವನ್ನು ಕೈಯಲ್ಲಿ ಧರಿಸಿ, ಶ್ರೇಷ್ಠವಾದ ಆನೆಯ ಮೇಲೆ ಏರಿಹೋಗುವ ಹರಿಹರಪುತ್ರನಾದ ಐಯನಾರನು ಸಂಭ್ರಮ ದಿಂದ ಬರುವ ವೈಹಾಳಿ ಬೀದಿಯೊಂದೂ ಅಲ್ಲಿದೆ.

1150. ತನ್ನಲ್ಲಿಗೆ ಬಂದು ಸೇರಿದವರು ತಮ್ಮ ರೂಪವನ್ನು ಇತರರಿಗೆ ತಿಳಿಯ ದಂತೆ ಮರಸಿ, ತಾವು ಅವರನ್ನು ಕಾಣುವಂತೆ ಇರುವ ಒಂದು ಎಡೆ ಆ ನಗರದಲ್ಲಿದೆ. ಧ್ಯಾನಯೋಗದ ಮುನಿವರರೂ ಯೋಗಿನಿಯರೂ ಸೇರಿರುವ ಒಂದು ಯೋಗಪೀಠವು ಅಲ್ಲಿದೆ. ನಾಶವಿಲ್ಲದ ಧರ್ಮಗಳನ್ನು ಎಂದೆಂದಿಗೂ ಕಾಪಾಡಿ ಬರುವ, ಕಾಮಾಕ್ಷಿ ಮಾತೆಯು ಇದ್ದು ಅನುಗ್ರಹಿಸಿರುವ ದೇವಾಲಯವಾದ ಭೋಗಪೀಠವೂ ಅಲ್ಲಿದೆ. ನಮ್ಮ ಪರಮಾತ್ಮನಾದ ಏಕಾಂಬರನಾಥನು ಸಂತೋಷದಿಂದ ಇದ್ದು ಅನುಗ್ರಹಿಸಿರುವ ಕಾಂಚೀ ಪುರದಲ್ಲಿ ಈ ರೀತಿ ಅಳತೆಗೆ ಮೀರಿದ ಬಹಳ ಅತಿಶಯಗಳಿವೆ. ಅವುಗಳನ್ನೆಲ್ಲಾ ಯಾರು ತಾನೇ ತಿಳಿಯಲು ಸಮರ್ಥರು ?

1149. ಚತ್ತಿ ತಪ್ಪಿರ ಚತ್ತಿಯೋ ಕಿಕಳು
ಇಚ್ಚಿತ ಕತ್ತನಿ ತ್ತಲೈವರು ಮುತಲಾ
ನಿತ್ತ ಮೆಯ್ತ್ತಿಯ ವಾಯುಣ್‌ಮೆಯರ್ ತ್ತವರ್‌ಕ
ಣೀಟು ವಾಟ್‌ತಿರು ಪಾಟಿಯು ಮನೇಕ
ಇಚ್ಚಿತ್ತರ್ ವಿಚ್ಚೈಯ ರಿಯಕ್ಕರ್‌ಕ ನ್ತರುವರ್
ನಿಕಟ್‌ನ್ತು ಮನ್‌ನುವಾರ್ ಚೆಣ್ಬಕೈ ಯೇನ್ತಿ,
ವಿತ್ತ ಕಕ್ಕರಿ ಮೇಱ್ಱೊಳು ಚ್ಚಾರಿ
ಮೇವು ಚೆಣ್ಬಣ್ಣೈ ವೆಳಿಯುಮೊನ್ ಱುಳತಾಲ್.

1150. ವನ್ತ ಟೈನ್ತವರ್ ತಮ್ಮುರು ಮಾಯ
ಮಱ್ಱು ಳಾರ್ಕೈತ್ತಾ ಚ್ಚಾಣ್ಪಟಿ ಮುಳತು;
ಚಿನ್ತೈ ಯೋಕತ್ತು ಮುನಿವರ್‌ಯೋ ಕಿನಿಕಳ್
ಚೇರುಮ್ ಯೋಕಪೀ ಟಮುಮುಳ; ತೆನ್‌ಱು
ಮನ್ತ ಮಿಲ್ಲಱಮ್ ಪುರಪ್ಪವಳ್ ಕೋಯಿ
ಲಾನ ಪೋಕಪೀ ಟಮುಮುಳ ತಾಕು;
ಮೆನ್ತೈ ಯಾರ್‌ಮಕಿಟ್ ಕಾಞ್ಚಿನೀ ಟೆಲ್ಲೈ
ಯೆಲ್ಲೈ ಯಿಲ್ಲನ ವಳ್ಳವಾ ರಱಿವಾರ್ ?

1151. ಸದಾ ಪ್ರಕಾಶಿಸುವ ಜ್ಯೋತಿಯೊಂದು ರಾತ್ರಿಯಲ್ಲಿ ತೋರಿ, ಅಂಧಕಾರ ವನ್ನು ನೀಗಿಸುವುದು. ದೇವತೆಗಳು ಬಂದು ವಿಹರಿಸುವಂತಹ ರುದ್ರನಂದನ ಎಂಬ ಹೂತೋಟವು ಅಲ್ಲಿದೆ. ತಂತಮ್ಮ ಭವವನ್ನು ನಾಶಪಡಿಸುವ ಸತ್ಯಜ್ಞಾನ ನೆಲೆಯಲ್ಲಿ ನಿಂತವರು ತೀಡಿದರೆ, ಓಡು ಮೊದಲಾದ ಯಾವ ರೀತಿಯ ಸಾಮಗ್ರಿಗಳನ್ನೂ ಹೊನ್ನಾಗಿಸುವ ಒಂದು ಶಿಲೆಯೂ ಉಂಟು. ನಮ್ಮನ್ನು ಆಳಾಗಿಸಿಕೊಂಡ ಕಾಮಾಕ್ಷಿಮಾತೆಯು ಷಣ್ಮತಗಳನ್ನೂ, ಎಲ್ಲಾ ಜೀವಿಗಳನ್ನೂ ತಾನು ಕಾಪಾಡುವಳು. ಆ ನಗರದಲ್ಲಿ ಉಳ್ಳ ಇಂತಹ ಮಹಿಮೆಗಳನ್ನು ಇಷ್ಟೆಂದು ಹೇಳತೀರದು.

1152. ಎಂದಿಗೂ ಅಳಿಯದೆ ನೆಲೆಯಾಗುಳ್ಳ ಈ ಕಾಂಚೀನಗರದ ಹಿರಿಮೆ ಹೀಗಿದೆ. ಹಿಮಾಲಯದವರೆಗೆ ಇರುವ ನಾಡುಗಳನ್ನು ಕೀಳ್ಪಡಿಸಿ ವ್ಯಾಘ್ರಧ್ವಜವನ್ನು ಆ ಹಿಮಾಲಯದ ಮೇಲೆ ನಾಟಿದ ಪರಾಕ್ರಮವುಳ್ಳ, ಕಲಿಯುಗದಲ್ಲಿ ಶೋಭಿಸುವ, ಕರಿಕಾಲ ಪೆರುವಳತ್ತಾನ್ ಎಂಬ ಚೋಳ ಅರಸನಿಗೆ, ಹಿಂದೆಯೇ ಇದನ್ನು ನೋಡಿ ಸಿಂದುಮೇದನ್ ಎಂಬೊಬ್ಬ ಬೇಡನು ಹೋಗಿ ಇದರ ಮಹಿಮೆಯನ್ನು ಹೇಳಲು ಅವರು ಆ ಜಾಗವನ್ನು ಸರಿಪಡಿಸಿಕೊಂಡು, ನಾಲ್ಕುಗಾವುದ ದೂರ ಸುತ್ತಲಾಗಿರುವ ಎಲ್ಲೆಯುಳ್ಳ ಒಂದು ನಗರವಾಗಿ ಏರ್ಪಡಿಸಿಕೊಂಡು, ಅನೇಕ ಕುಟುಂಬಗಳು ಅಲ್ಲಿ ನೆಲಸುವಂತೆ ಮಾಡಿದ ಹಿರಿಮೆಯೊಡನೆ ಆ ನಗರವು ಶೋಭಿಸುತ್ತದೆ.

1151. ತೂಣ್ಟು ಚೋತಿಯೊನ್ ಱಿಟುನ್ಱಿರು ಟಿರಕ್ಕು
ಇಣ್ಚರರ್ಕಳ್ ವನ್ತುಚೂ ಟಿರುತ್ತಿರ ಚೋಲೈ,
ವೇಣ್ಟಿ ನಾರ್ಕಟಮ್ ಪಿರಪ್ಪಿನೈ ಯೊಟಿಕ್ಕು
ಮೆಯ್ನ್ನೆ ಱಿಕ್ಕಣಿನ್ ಱಾರ್ಕಲಾಮ್ ವಿರುಮ್ಪಿ
ತ್ತೀಣ್ಟಿಲ್ ಯಾವೈಯು ಞ್ಚೆಮ್ಪೊನಾ ಕ್ಕುವತೋರ್
ಚಿಲೈಯು ಮುಣ್ಟುರೈ ಚೆಯ್ತತಱ್ ಕರಿತಾ
ಲಾಣ್ಟ ನಾಯಕಿ ಚಮಯ ಙ್ಕಳಾಱು
ಮಕಿಲ ಯೋನಿಯು ಮಳಿಕ್ಕುಮ ನ್ನಕರಮ್.

1152. ಎನ್ಱು ಮುಳ್ಳವಿ ನ್ನಕರ್ಕಲಿ ಯುಕತ್ತಿ
ಲಿಲಙ್ಕು ವೇಙ್ಕರಿ ಕಾಱಿಪ್ಪೆರು ವಳತ್ತೋನ್
ವನ್ಱಿ ಱಙ್ಪ್ಪಲಿ ಯಿಮಯಮಾಲ್ ವರೈಮೇಲ್
ವೈಕ್ಕ ವೇಕುವೋನ್ ಱನಕ್ಕಿತನ್ ವಳಮೈ
ಜಿನ್ಱು ವೇಟನ್ಮುನ್ ಕಣ್ಟುರೈ ಚೆಯ್ಯ
ತ್ತಿರುನ್ತು ಕಾತನಾನ್ ಕುಟ್ಪಿಟ ವಕುತ್ತು
ಕ್ಕುನ್ಱು ಪೋಲುಮಾ ಮತಿಲ್ಪ್ಪಟೈ ಪೋಕ್ಕಿ
ಕ್ಕುಟಿಯಿ ರುತ್ತಿನ ಕೊಳ್ಕೈಯಿನ್ ವಿಳಙ್ಕುಮ್.

1153. ಶೀತಲವಾದ ಕಾಂಚೀಮರದ, ಹೂಗೊಂಚಲುಗಳಿಂದ ಕೂಡಿದ ಕೋಮಲವಾದ ಗೆಲ್ಲುಗಳು ಗಾಳಿಯಿಂದ ಅಲುಗಿ ಅಲ್ಲಾಡಲು, ಅದರ ಪಕ್ಕದಲ್ಲಿ ತುಂಬಿಗಳು ಕಾಂಚಿ 'ಪಣ್' ನ ಇನಿದಾದ ರಾಗವನ್ನು ಹಾಡುವಂತಹ ಸ್ಥಳವಾದ ಮಾವಿನ ತೋಟಗಳನ್ನು ಬೇಲಿಯಾಗುಳ್ಳ ಗದ್ದೆಗಳಿಂದ ಕೂಡಿದ ಮರುದ ನೆಲವನ್ನು ಪಕ್ಕದಲ್ಲುಳ್ಳುದಾಗಿ, ಲೋಕದಲ್ಲೇ ನೀಳವಾದ ಕಾಂಚಿನಗರದ ಎತ್ತರವಾದ ಗೋಡೆಯಿಂದ ಸುತ್ತುವರಿದ, ಸಂಪತ್ತುಳ್ಳ ಅಗಳಾದುದು, ಶ್ರೇಷ್ಠವಾದ ವೇದಗಳು ಶಬ್ದಿಸಲು ದೈವಿಕ ಸ್ವಭಾವವುಳ್ಳ ಮಹತ್ತಾದ ಕಾಂಚಿ ಎಂಬ ಆಭರಣವನ್ನು ಧರಿಸಿದ ನಡುವುಳ್ಳ ಪಾರ್ವತೀಮಾತೆಯು, ಕಾಪಾಡುವುದರಿಂದ, ವರ್ಧಿಸುವ ಕರುಣೆಯೆಂಬ ಕಡಲು ಈ ಲೋಕವನ್ನು ಸುತ್ತುವರಿದಿದ್ದರೆ ಹೇಗಿದ್ದೀತೋ ಹಾಗೆ ಇರುವುದಾಗಿದೆ.

1154. ತುಂಬಾ ನೀರುಹೂಗಳು ಇರುವುದಕ್ಕೆ ಎಡೆಯಾದ ಆ ಕಂದಕವು, ಗೊಂಚಲುಗಳಾಗಿ ಅರಳಿದ ಹೂಗಳನ್ನು ಮುಡಿದ ಕೂದಲುಳ್ಳ ಪಾರ್ವತೀದೇವಿಯು, ಏಕಾಂಬರನಾಥನು ಆಶಿಸಿ ಸ್ವೀಕರಿಸುವ ಪೂಜಾಸ್ಥಾನವನ್ನು ಕಾಪಾಡುವುದಕ್ಕಾಗಿ, ಶಿವಪರಮಾತ್ಮನಿಂದ ಅನುಗ್ರಹಿಸಿ ಮಾಡಲ್ಪಟ್ಟ ನಿಜವಾದ ಆಗಮಗಳ ವಿಧಿಯಂತೆ ಏರ್ಪಡಿಸಿರುವ ಮಂತ್ರಮೂಲಕ ರಚಿಸಿದ ಪ್ರಾಕಾರಗಳಿಂದ ಕೂಡಿದ ಕಂದಕಗಳನ್ನು ಹೋಲುವುದು. ಅದಲ್ಲದೆ ಆ ಕಂದಕವು ಕೇಡುಗಳಿಲ್ಲದ ಶ್ರೇಷ್ಠತೆಯುಳ್ಳ ಕಾಂಚಿ ನಗರಕ್ಕೆ ಬಂದು ಸೇರಿದವರಿಗಲ್ಲದೆ ತಮ್ಮನ್ನು ಸೇರಿದ ದೋಷಗಳನ್ನು ನೀಗಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದು ಆ ಕಾಂಚಿಯನ್ನು ಸುತ್ತಿಬಂದು ತನ್ನ ತಪ್ಪನ್ನೂ ಉಪ್ಪಿನ ರುಚಿಯನ್ನೂ ನೀಗಿಸಿಕೊಳ್ಳುವ ದೊಡ್ಡ ಕಡಲನ್ನೂ ಹೋಲುವುದು.

1153. ತಣ್‌ಕಾಞ್ಚಿ ಮೆನ್‌ಚಿನೈಪ್ಪೂ ಙ್ಕೊಮ್ಬು ರಾಟಲ್
ಚಾರ್‌ನ್ತ ಚ್ಚೆಯ ವತನ್‌ಮರುಙ್ಕು ಚುರುಮ್ಬು ತಾಟ್‌ನ್ತು
ಪಣ್‌ಕಾಞ್ಚಿ ಯಿಚ್ಚೈಪಾಟುಮಮ್ ಪಟಲ ವೇಲಿ
ಪ್ಪಣ್ಣೈಮರುತಮಮ್ ಪುಟೈಯುಟೈತ್ತಾಯ್ ಪ್ಪಾರಿ ನೀಟು
ನ್ತಿಣ್‌ಕಾಞ್ಚಿ ನಕರ್‌ನೊಚ್ಚಿ ಯಿಞ್ಚಿ ಚೂಟ್‌ನ್ತ
ಚೆಲ್ವಙ್ಕಿಟಙ್ಕು ತಿರುಮಱೈಕಳ್ ಒಲಿಕ್ಕು ನ್ತೆಯ್ವ
ವಣ್‌ಕಾಞ್ಚಿ ಯಲ್‌ಕುಲ್‌ಮಲೈ ವಲ್ಲಿ ಕಾಕ್ಕ
ವಳರ್‌ಕರುಣೈ ಕ್ಕಟಲುಲಕ ಙ್ಞ್ಚೂಟ್‌ನ್ತಾನ್ ಮಾನುಮಮ್.

1154. ಕೊನ್ತಲರ್‌ಪೂ ಙ್ಕುಟಲಿಮೈಯ ಕ್ಕೊಮ್ಬು ಕಮ್ಬರ್
ಕೊಳ್ಳುಮ್‌ಪೂ ಚನೈಕುಱಿತ್ತ ತಾನ ಙ್ಕಾಕ್ಕ
ಮನ್ತಿರಮಾ ಮತಿಲಕಟ್, ಯಮರ್‌ತಾನ್ ತನ್ತ
ವಾಯ್‌ಮೈಯಾ ಕಮವಿತಿಯಿನ್ ವಕುಪ್ಪು ಪ್ಪೋಲು;
ಮನ್ತಮಿಲ್‌ಚೀರ್ ಕ್ಕಾಞ್ಚಿಯೈವ ನ್ತಟೈನ್ತಾರ್ ಕ್ಕನ್‌ಱಿ
ಯಟೈಕಳಙ್ಕ ಮಱುಪ್ಪರಿತೆನ್ ಱಱಿನ್ತು ಚೂಟ
ವನ್ತಣೈನ್ತು ತನ್‌ಕಱುಪ್ಪು ಮುವರ್‌ಪ್ಪು ನೀಕ್ಕು
ಮೂಕಟಲುಮ್ ಪೋಲುಮಲರ್ ಕ್ಕಿಟಙ್ಕು ಮಾತೋ.

1155. ಆ ನಗರದ ಮದಿಲಿನ ಬಾಗಿಲುಗಳು ಅಲ್ಲಿಯ ದೊಡ್ಡವರ ಮನಸ್ಸಿನಂತೆ ಉನ್ನತವೂ ಸ್ಥಿರವೂ ಆದ ಸ್ವಭಾವವುಳ್ಳುದಾಗಿ, ಲೋಕದವರನ್ನು ಉಜ್ಜೀವಿಸುವ, ಉಮಾದೇವಿಯನ್ನು ಒಂದು ಭಾಗದಲ್ಲುಳ್ಳ ಶಿವಪರಮಾತ್ಮನು ಅನುಗ್ರಹಿಸಿದ ಸನ್ಮಾರ್ಗಗಳಲ್ಲದೆ ದುರ್ಮಾರ್ಗಗಳು ಬರದಂತೆ ತಡೆಯುವವುಗಳೂ, ಸಂಪತ್ತಿನ ಮಾರ್ಗದಲ್ಲಿ ಎಸೆಯುವವುಗಳೂ ಆಗಿ, ಆಗಮವಿಧಿಗಳು ವರ್ಧಿಸುವ ಹಿರಿದಾದ ಕಾಂತಿಯಿಂದ ಎಂದೆಂದಿಗೂ, ವಿಸ್ತಾರವೂ ನೀಳವೂ ಆದ ಆಕಾಶವನ್ನು ಅಳೆಯುವಂತಹ ಸ್ವಭಾವವುಳ್ಳುದಾಗಿದೆ.

1156. ಎಣೆಯಿಲ್ಲದ ಕನಕಮಯವಾಗಿರುವ ಮಾಳಿಗೆಗಳು ಅನೇಕವುಳ್ಳ ಸುಂದರವಾದ ಬೀದಿಗಳೂ, ನಿಡಿದಾದ ರಸ್ತೆಗಳೂ, ಬೇರೆ ಬೇರೆ ಕಡೆಗಳಿಂದ ಬಂದ ಅಮೂಲ್ಯ ವಸ್ತುಗಳು ಮಾರಲ್ಪಡುವ ಅಂಗಡಿಬೀದಿಗಳೂ, ಇನ್ನಿತರ ಬೀದಿಗಳೂ– ಇವುಗಳಿಂದ ಕೂಡಿದ ಆ ನಗರವು, ನಡುವಿನಲ್ಲಿ ರೇಖೆಗಳಿಂದ ಬೇರೆ ಬೇರೆಯಾಗಿ ವಿಭಾಗ ಹೊಂದಿರುವ ನವಖಂಡಗಳಂತೆಯೂ ಅಲ್ಲದೆ ಅನೇಕ ಖಂಡಗಳುಳ್ಳ ಬೇರೊಂದು ಭೂಮಂಡಲವನ್ನು ತನ್ನಲ್ಲಿ ಒಳಕೊಂಡಿದೆ ಎಂದು ಹೇಳುವಂತೆ ಶೋಭಿಸುವ ಮಹರ್ ಲೋಕದಂತೆ ಇರುತ್ತದೆ.

1155. ಆಙ್ಕವಳ ರೆಯಿಲಿನುಟನ್ ವಿಳಙ್ಕುಮ್ ವಾಯಿ
ಲಪ್ಪತಿಯಿಲ್ ವಾಟಿ್‌ಪೆರಿಯೋ ರುಳ್ಳಮ್ ಪೋಲ
ವೋಙ್ಕುನಿಲೈ ತ್ತನ್‌ಮೈಯವಾ ಯಕಿಲ ಮುಯ್ಯ
ವುಮೈಪಾಕ ರರುಳ್‌ಚೆಯ್ತ ವೊಟುಕ್ಕ ಮಲ್ಲಾ
ಞೀಙ್ಕುನೆಱಿ ಯಟೈಯಾತ ತಟೈಯ ಮಾಕಿ
ಚ್ಚೆನ್ನೆಱಿಕ್ಕ ಣಿಕಟಿ್‌ವಾಯ್‌ಮೈ ತಿರುನ್ತು ಮಾರ್‌ಕ್ಕ
ನ್ನಾಙ್ಕುಲವ ನಿಲವಿವಳ ರೊಳಿಯಾ ಲೆನ್‌ಱು
ನ್ತಟನೆಟುವಾ ನಳಪ್ಪನವಾ ನ್ತಕೈಯ ವಾಕುಮ್.

1156. ಮಾಱುಪೆಱ ಲರುಙ್ಕನಕ ಮಾಟ ನೀಟು
ಮಣಿಮಱುಕು ನೆಟುನ್ತೆರುವುಮ್ ವಳತ್ತಿಲ್ ವನ್ತ
ವಾಱುಪಯಿ ಲಾವಣವೀ ತಿಕಳು ಮಱ್ಱು
ಮಮೈನ್ತನಕ ರಣಿವರೈಕ ಣಟುವು ಪೋಕ್ಕಿ
ಕ್ಕೂಱುಪಟು ನವಕಣ್ಡ ಮನ್‌ಱಿ ಮಲ್ಕ
ಕ್ಕೊಣ್ಡವನೇ ಕಙ್ಕಣ್ಡ ಮಾಕಿ ಯನ್‌ನ
ವೇಱೊರುಮ ಣ್ಣುಲಕುತನಿ ಲುಳತಾ ಮೆನ್‌ನ
ವಿಳಙ್ಕಿಯಮಾ ಲೋಕನಿಲೈ ಮೇವಿ ಱ್ಱನ್‌ಱೇ.

1157. ಎರಡು ಪಕ್ಕಗಳಲ್ಲಿಯೂ ಎತ್ತರವಾಗಿ ನೀಳವಾಗಿ ಹಬ್ಬಿದ ಕಾಂತಿ ಬೀರುವ ಮಾಳಿಗೆಗಳ ಪಙ್ಕ್ತಿಗಳಲ್ಲಿ ನುಣುಪಾದ ತಲೆಕೊದಲುಳ್ಳ ಹೆಂಗಸರ ಕೂಟಗಳು ಅಲಂಕಾರವಾಗಿ ಜೋಲಾಡುವಂತೆ ತೂಗಿಸಿಕೊಂಡ ಶೀತಲವಾದ ಮುತ್ತುಮಾಲೆಗಳ ಕಾಂತಿಯು ಹರಹು ಬೀರುವ ಬೀದಿಗಳು, ಎಲ್ಲೆಯಿಲ್ಲದ ಬಣ್ಣಗಳನ್ನೊಳಕೊಂಡ ನಕ್ಷತ್ರ ಗಳನ್ನು ಮೇಲ್ಕೊಂಡು ಮೇಘಗಳೆಡೆಯಿಂದ ಬರುವ ದೈವಿಕವಾದ ಗಂಗೆಯೇ ಮೊದಲಾದ ಪವಿತ್ರ ನದಿಗಳಿಗೆ ಹೋಲುವೆಯಾಗಿವೆ.

1158. ಅಲ್ಲಿಯಃ ಬೀದಿಗಳುದ್ದಕ್ಕೂ ಕೆಲವು ಮಾಳಿಗೆಗಳು ಪ್ರಕಾಶವನ್ನು ಹರಿಸುವ ಚೆಂಬೊನ್ನಿನಿಂದ ಮಾಡಲ್ಪಟ್ಟು ಪಕ್ಕದಲ್ಲಿ ಕೆಳನೆಲೆಯಲ್ಲಿ ನೀಲಮಣಿಗಳ ನ್ನಿರಿಸಿದ ಪಡಿಗಳುಳ್ಳವುಗಳಾಗಿ, ಮೇಲ್ಭಾಗದಲ್ಲಿ ಒಂದು ಪಕ್ಕದಲ್ಲಿ ಶ್ರೇಷ್ಠವಾದ ವಜ್ರ ಮಣಿಜಾತಿಗಳಿಂದ ಮಾಡಿದ ಜಾಲರಿಯನ್ನು ಒಳಕೊಂಡಿರುವುದರಿಂದ, ಅಳತೆಯಿಲ್ಲದ ಕಾಂತಿಯೇ ಘನವಾಗಿ ನಿಂತ ಶಿವಪರಮಾತ್ಮನ ಅಡಿಯನ್ನು ಹುಡುಕಿ ಕಾಣುವ ಉದ್ದೇಶದಿಂದ ವರಾಹರೂಪವನ್ನು ತಾಳಿ ನೆಲವನ್ನು ತೋಡಿ ಹೊರಟ ವಿಷ್ಣು, ಮುಡಿ ಯನ್ನು ಕಾಣುವ ಉದ್ದೇಶದಿಂವ ಹಂಸರೂಪವನ್ನು ತಾಳಿ ಮೇಲೆ ಹೋದ ಬ್ರಹ್ಮ– ಇವರಂತೆ ನಿಡಿದಾಗಿ ವ್ಯಾಪಿಸಿವೆ.

1157. ಪಾಕವುರು ಜ್ಕಿರುಪುಟ್ಟೈಯು ಮುಯರ್‌ನ್ತು ನೀಣ್ಟ
ಪಟರೊಳಿಮಾ ಳಿಕೈನಿರೈಕಳ್ ಪಯಿನ್‌ಮೆನ್ ಕೂನ್ತ
ಱ್‌ಓಕೈಯರ್‌ತ ಜ್ಕುಟಾಮಲೈಯ ತ್ತೂಕ್ಕು ಮುತ್ತಿನ್
ಚುಟರ್‌ಕ್ಕೋವೈ ಕ್ಕುಳಿರ್‌ನೀರ್‌ಮೈ ತುತೈನ್ತ ವೀತಿ
ಮಾಕಮಿಟ್ಟೈ ಯಾಳಿತಟಿೖಪ್ಪ ಮನ್‌ನಿ ನೀಟು
ಮರುಜ್ಕುತಾ ರಕೈಯಲೈಯ ವರಮ್ಪಿಲ್ ವಣ್ಣ
ಮೇಕಮಿಟ್ಟೈ ಕಿಟೀತ್ತೊಟುಕು ನ್ತೆಯ್ವ ಕ್ಕಜ್ಕೈಕ
ಮೇನತಿಕಳ್ ಪಲಮಣ್‌ಮೇಲ್ ವಿಳಜ್ಕಿ ಯೊಕ್ಕುಮ್.

1158. ಕಿಳರೊಳಿಜ್ಚೈ ಜ್ಕನಕಮಯ ನ್ಮಾನಾಯ್ ಮಾಟ್ಟು,
ಕೀಟ್‌ನಿಲೈಯೋರ್ ನೀಲಜ್ಚೋ ಪಾನಮ್ ಪೂಣ
ಕ್ಕೊಳಮೈತ್ತು ಮಿಾತೊರುಪಾಜ್ ಕನ್‌ನ ಜಾಲೈ
ಕುಲವಯಿರತ್ತಾ ಲಮೈತ್ತ ಕೊಳ್‌ಕೈ ಯಾಲೇ
ಯಳವಿಲ್‌ಚುಟರ್ ಪ್ಪಿಟಮ್ಪಾನಾರ್ ನಮ್ಮೈ ತ್ತೇಟಿ
ಯಕಟ್‌ನ್ತೇನ ಮಾನಾನು, ಮನ್‌ನ ಮಾಕಿ
ವಳರ್‌ವಿಚುಮ್ಪಿ, ಲೆಟುನ್ತಾನುಮ್ ಪೋಲ ನೀಟು
ಮಾಳಿಕೈಯು ಮುಳಮುಱು ಮಱುಕು ತೋಱುಮ್.

1159. ಕಾಂತಿ ಸೂಸುವ ರತ್ನಖಚಿತವಾದ ಬೆಳ್ಳಿಯ ಗೋಪುರಗಳ ಮೇಲು ಚಾವಣಿಯ ಚಂದ್ರಕಾಂತ ಶಿಲೆಗಳು ಸಂಜೆಯಲ್ಲಿ ಆಕಾಶದಲ್ಲಿ ತೋರುವ ಚಿನ್ನದಂತೆ ಕೆಂಬಣ್ಣವುಳ್ಳ ಬಾಲಚಂದ್ರನನ್ನು ಕಂಡು ದ್ರವಿಸಿ ಸುರಿಸಿದ ನೀರಿನಿಂದ, ವ್ಯಾಘ್ರ ಚರ್ಮವನ್ನು ಧರಿಸಿದ ಏಕಾಂಬರನಾಥನ ಪಸರಿಸಿದ ನೀಳವಾದ ಜಡೆಯನ್ನೂ, ಅವನು ಆ ಜಡೆಯ ಮೇಲೆ ಧರಿಸಿದ ಬಾಲಚಂದ್ರನನ್ನೂ ಕಂಡು ನಮಿಸಿ, ಪ್ರೀತಿಯಿಂದ ದ್ರವಿಸಿ ದೇಹವೆಲ್ಲಾ ಕಣ್ಣೀರಿನಿಂದ ತೊಯ್ಯುವಂತೆ ನಿಲ್ಲುವ ಭಕ್ತರನ್ನು ಹೋಲುತ್ತವೆ. ಇಂತಹ ಗೋಪುರಗಳು ಅಲ್ಲಿ ಅಸಂಖ್ಯಾತವಾಗಿವೆ.

1160. ಮುಗಿಲು ಮುಟ್ಟುವ ಧ್ವಜಗಳನ್ನು ಕಟ್ಟಿದ ಶಿಖರಗಳುಳ್ಳ, ಪೂರ್ಣ ವಾಗಿ ಸ್ಫಟಿಕಶಿಲೆಯಿಂದ ಮಾಡಲ್ಪಟ್ಟ, ಗೋಪುರಗಳ ಹೊರಗೆ ಸುತ್ತುವ ಚರಾಚರ ಗಳಾದ ಎಲ್ಲಾ ವಸ್ತುಗಳ ನೆಳಲು ಬೀಳುವುದರಿಂದ ಉಂಟಾದ ಪ್ರತಿಬಿಂಬಗಳ ಸೇರುವಿಕೆ ಯಿಂದ, ಅಧಿಕ ತಪವನ್ನು ಮಾಡುವ ಪಾರ್ವತೀಮಾತೆಯ ಸ್ತನದ ಗುರುತನ್ನೂ ಬಳೆಗಳ ಗುರುತನ್ನೂ ತಳೆದ ಏಕಾಂಬರನಾಥನು, ಬ್ರಹ್ಮದೇವನಿಗೆ ಸೃಷ್ಟಿಕಾರ್ಯಕ್ಕಾಗಿ ಕೊಡಲು, ಎಲ್ಲಾ ಜೀವರಾಶಿಗಳನ್ನೂ ಒಂದೆಡೆಯಲ್ಲಿ ಸೇರಿಸಿಟ್ಟ ಅಸಾಧ್ಯವಾದ ನೆಲೆಯನ್ನೂ ಕೊಂಡಂತೆ ಇದೆ.

1159. ಮಿನ್ಪೊಲಿಪನ್ ಮಣಿಮಿಟೈನ್ತ ತವಳ ಮಾಟ
ಮಿಚೈಪ್ಪಯಿಲ್ಚ ನ್ತಿರಕಾನ್ತವ್ ವಿಚುಮ್ಪಿನ್ ಮಿಾತು
ಪೊನ್ಪುರೈಯು ಇಳ್ಕ್ಕರ್ನಿಜ ಪ್ಪೋಟುತು ತೋನ್ಱುಮ್
ಪುನಿಱುಮತಿ ಕಣ್ಟುರುಕಿ ಪ್ಪೊಟೀನ್ತ ನೀರಾಲ್
ವನ್ಪುಲಿಯಿ ನುರಿಯಾಟೈ ತ್ತಿರುವೇ ಕಮ್ಪರ್
ವಳರ್ಚಟೈಯು ಮಿಳಮ್ಪಿಱೈಯು ಙ್ಕಣ್ಟು ಕುಮ್ಪಿ
ಟ್ಟನ್ಪುರುಕಿ ಮೆಯ್ಪೊಟೀಯ ಕ್ಕಣ್ಣೀರ್ ವಾರು
ಮಟಿಯವರು ಮನ್ನೈಯವುಳ ವಲಕಿ ಲಾತ.

1160. ಮುಕಿಲುರಿಞ್ಚು ಙ್ಕೊಟಿತೊಟುತ್ತ ಮುಟಿಯ ವಾಕು
ಮುಟುಪ್ಪಳಿಙ್ಕಿನ್ ಮಾಳಿಕೈಕಣ್ ಮುಱ್ಱು ಙ್ಚಿಱ
ನಿಕರಿಲ್ಚರಾ ಚರಙ್ಕಳೆಲ್ಲ ನಿಟಲಿ ನಾಲೇ
ನಿಱೈತಲಿನಾ ನಿಱೈತವಞ್ಚೆ ಯಿಮಯ ಪ್ಪಾವೈ
ನಕಿಲುಟುತ ಚುವಟುಮ್ವಳೈ ತ್ತಳುಮ್ಪುಮ್ ಪೂಣ್ಟ
ನಾಯಕನಾರ್ ನಾನ್ಮುಕಱ್ಕು ಪ್ಪಟೈಕ್ಕ ನಲ್ಕು
ಮಕಿಲಯೋ ನಿಕಳೆಲ್ಲಾ ಮಮೈತ್ತು ವೈತ್ತ
ವರುಮ್ಪೆರುಮ್ಪ ಣ್ಟಾರನಿಲ್ಯೈ ಯನ್ನೈಯ ವಾಕುಮ್.

1161. ಚಿನ್ನದ ಲೇಪವುಳ್ಳ ಮಾಳಿಗೆಗಳ ಮೇಲೆ ಮುಂಭಾಗದಲ್ಲಿ ನಿಂತು ಇಂಪಾದ ನೂಪುರಗಳನ್ನೂ ಸುಂದರವಾದ ಚೆಂಡುಗಳನ್ನೂ ಉಳ್ಳ, ಬಾಗಿದ ಹುಬ್ಬುಗಳುಳ್ಳ ಲತೆಗಳಂತಹ ಹೆಂಗಸರು ಪರಮಾತ್ಮನ ಮಹಿಮೆಗಳನ್ನು ಸ್ತುತಿಸಿಕೊಂಡು ಆಡುತ್ತಿರುವಾಗ ಅವರ ಆಭರಣಗಳಿಂದ ಹೊನ್ನಿನ ಹುಡಿಗಳು ಚದರಿ ಬೀಳುವುವು. ನಾಯಕರಿಂದ ಕೂಡಿದ ಹೆಂಗಸರು ಪ್ರೇಮಾತಿಶಯದ ಕಾರ್ಯಗಳಿಂದ ಚೆಲ್ಲುವ ಆಭರಣಗಳಿಂದ ಬಿದ್ದ ಮಣಿಗಳನ್ನು ಚೇಟಿಗಳು ಕೂಡಿಸಿ ಸೇರಿಸುವರು. ಈ ರೀತಿಯಲ್ಲಿ ಚಿನ್ನದ ಮಳೆ ಮಾತ್ರವಲ್ಲದೆ ನವಮಣಿವರ್ಷವೂ ಆ ನಗರದಲ್ಲಿ ಬಹಳವಾಗಿ ಸುರಿಯುವುದು.

1162. ಲಕ್ಷ್ಮಿಯು ವಾಸಸ್ಥಳವೆಂದು ಹೇಳಲ್ಪಡುವ ಅರ್ಹತೆಯುಳ್ಳ ಚಿನ್ನದುಪ್ಪರಿಗೆಗಳ ಮೇಲೆ ಚಂದ್ರನ ಬೆಳದಿಂಗಳು ಬೀಳಲು, ಸುಂದರವಾಗಿ ಕಾಣುವ ದೊಡ್ಡ ಮಕರಕುಂಡಲಗಳನ್ನು ಧರಿಸಿದ ಹೆಂಗಸರು, ತಮ್ಮ ನಾಯಕರು ಅಲ್ಲಿ ಬಂದು ಏರುವ ಮೊದಲೇ ಸುವಾಸನೆಯುಳ್ಳ ನೀರಿನಿಂದ ಆಡಲಿಕ್ಕಾಗಿ, ಪರಿಶುದ್ಧವಾದ ಮಣಿಗಳನ್ನು ಸುರಿದ, ಚಂದವಾಗಿ ಮಾಡಲ್ಪಟ್ಟ ಜೀರ್ಕೊಳವಿಗಳಿಂದ ಕೆಂಪು ಕುಂಕುಮದ ನೀರ ಕಾರಂಜಿಗಳನ್ನು ಹೊಮ್ಮಿಸುತ್ತಾರೆ. ಈ ಸುವಾಸನೆಗೆ ತುಂಬಿಗಳು ಮುಸುರುತ್ತವೆ. ಈ ನೀರ ಹನಿಗಳಿಂದ ಒದ್ದೆಯಾಗಿ, ಸುಂದರವಾದ ಮಣಿಗಳಿರುವ ಗೋಪುರಗಳ ಮೇಲ್ಭಾಗಗಳ ಪಕ್ಕಗಳಲ್ಲಿ ತಂಗುವ ಕರಿಮುಗಿಲುಗಳು ಕೆಮ್ಮುಗಿಲುಗಳಾಗಿ ತೋರುವುವು.

1161. ಪೊಜ್ಜಿಳಪ ಮಾಳಿಕೈಮೇಲ್ ಮುನ್‌ಱಿ ನಿನ್‌ಱು
ಪೂಙ್ಕಳಙ್ಕು ಮಣಿಪ್ಪನ್ತುಮ್ ಪೋಱ್ಱಿ ಯಾಟುಮ್
ವಿಙ್ಪುರುವ ಕ್ಕೊಟಿಮಟವಾರ್ ಕಳನ್‌ಕಳ್ ಚಿನ್ತಿ
ವಿಟುವನವು, ಜಕ್ಕಿಟುವುತುಣ್ಕೈ ಮೇವು ಮಾತರ್
ಅಙ್ಪುಮುತಿರ್ ಕಲವಿಯಿನಿಱ್ ಪರಿನ್ತು ಚಿನ್ತಿ
ಮಣಿಮಣಿಚ್ಚೇ ಟಿಯರ್‌ತೊಕುಕ್ಕು ಮವೈಯು, ಮಾಕಿ
ನಙ್ಕನಕ ಮಟಿಕ್ಕೈಯನ್‌ಱಿ ಕ್ಕಾಙ್ಚಿ ಯೆಲ್ಲೈ
ನವಮಣಿಮಾ ರಿಯುಮ್‌ಪೊಟಿಯು ನಾಳು ನಾಳುಮ್.

1162. ಪೂಮಕಳು ಕ್ಕುಱೈಯುಳೆನು ನ್ತಕ್ಕೈಯ ವಾನ
ಪೊನ್‌ಮಾಟ ತ್ತರಮಿಯಙ್ಕಳ್ ಪೊಲಿಯ ನಿನ್‌ಱು
ಮಾಮಕರ ಕ್ಕುಟಿಕೈಮಕಳಿರ್ ಮೈನ್ತ ರಙ್ಕಣ್
ವನ್ತೇಱು ಮುನ್‌ನಱುನೀರ್ ವಣ್ಟ ಲಾಟ
ತ್ತೂಮಣಿಪೊನ್ ಪುನೈನಾಳ ತ್ತುರತ್ತಿ ವೀಚು
ಙ್ಚಿಟರ್‌ವಿಟುಚಿ ಙ್ಕುಙ್ಕುಮನೀರ್ ತ್ತುವಲೈ ತೋಯ್‌ನ್ತ
ಕಾಮರ್‌ಮಣಿ ನಾಚಿಕೈಯಿನ್ ಮರುಙ್ಕು ತಙ್ಕು
ಙ್ಕರುಮುಕಿಲ್ಕಳ್ ಚೆಮ್ಮುಕಿಲ್ಕ ಳಾಕಿ ಕ್ಕಾಟ್ಟುಮ್.

1163. ಎತ್ತರವಾದ ನಿಡಿದಾದ ಬೆಟ್ಟಗಳಂತೆ ಶೋಭಿಸುತ್ತಿರುವ, ಸುಣ್ಣದ ಗಾರೆಯಿಂದ ಕೂಡಿದ ಬಿಳುಪಾದ ಮಾಳಿಗೆಗಳ ನೀಳವಾದ ಶಿಖರಗಳ ತುದಿಯನ್ನು ಸೇರುವುದಕ್ಕಾಗಿ ಏರ್ಪಡಿಸಿದ ಸೋಪಾನ ಪಙ್ತಿಗಳನ್ನು, ಮೇಲಿರುವ ಸ್ವರ್ಗಲೋಕವನ್ನು ಪ್ರತ್ಯೇಕಿಸಿ ತಿಳಿಯಲು ಸಾಧ್ಯವಿಲ್ಲದಂತಿರುವ ಪವಿತ್ರತೆಯಿಂದ, ಆ ಸೋಪಾನ ಪಙ್ತಿಗಳಲ್ಲಿ ಸೇರಿ ತಮ್ಮಲ್ಲಿ ಇಳಿದು ಬರುವ, ಏರಿ ಬರುವ, ಕುಮಾರ ಕುಮಾರಿಯರನ್ನೂ, ಸ್ವರ್ಗಲೋಕದಲ್ಲಿ ಇಳಿದು ಬರುವ ಏರಿ ಬರುವ ದೇವಸ್ತ್ರೀಪುರುಷರನ್ನೂ ಬೇರೆ ಬೇರೆಯಾಗಿ ಪ್ರತ್ಯೇಕಿಸಿ ಹೇಳಲು ಸಾಧ್ಯವಿಲ್ಲದಂತಿರುವ ಮಾಳಿಗೆಗಳು ಅಲ್ಲಿ ಅನೇಕ ಇವೆ.

1164. ಗದ್ದಲದಿಂದ ಕೂಡಿದ ರಥಬೀದಿಗಳ ಪಕ್ಕಗಳಲ್ಲಿರುವ ಮಾಳಿಗೆಗಳ ಸುಂದರ ಮಣಿಗಳಿಂದ ಆವೃತವಾದ ಗೋಪುರಗಳ ಪಕ್ಕದಲ್ಲಿ, ವಿಶಾಲವಾಗಿಯೂ ನೀಳವಾಗಿಯೂ ಇರುವ ಮರಕತಮಣಿಗಳಿಂದ ಪ್ರಕಾಶವನ್ನು ಬೀರುವ ದಿಣ್ಣೆಗಳಿವೆ. ಅವುಗಳ ಪಕ್ಕಗಳುಳ್ಳ ಸೋಪಾನಗಳಲ್ಲಿ ಅಲತಿಗೆಯನ್ನೂಡಿದ ಪಾದಗಳುಳ್ಳ, ಕುರುವಪುಷ್ಪಗಳನ್ನು ಮುಡಿಯಲ್ಲಿ ಧರಿಸಿದ ಹೆಂಗಸರು ಏರಿಬರಲು, ಅವರ ಪಾದಗಳ ಹೆಜ್ಜೆಗಳು ಕರಿಕಡಲ ನಿಡಿದಾದ ಅಲೆಗಳ ಮೇಲೆ ಬೆಳಗಿ ತೋರುವ ಹವಳದ ಚಿಳಿರುಗಳಂತೆ ಶೋಭಿಸುಸುವುವು. ಇಂತಹ ಮಾಳಿಗೆಗಳು ಅಲ್ಲಿ ಹಲವಿವೆ.

1163. ಇಮಮಲಿಯು ನೆಟುತ್ತನೆಟು ವರೈಕಳ್ ಪೋಲ
ವಿಲಙ್ಕು ಚುತ್ತೈ ತ್ತವಳಮಾ ಳಿಕೈನೀಳ್ ಕೋಟ್ಟು
ಚ್ಚಿಮೈಯಟ್ಟೈಯು ಞ್ಚೋಪಾನ ನಿರೈಯುಮ್ ವಿಣ್ಣೋ
ನ್ತ್ರಿವರಿಯು ತೂಯ್ಮೈಯಿನಾ, ಲವ್ವುಟ್ ಚೇರ್ನ್ತು
ತಮಙ್ಕಳುಟ ನಿೞಿನ್ತ್ರೇಱು ಮೈನ್ತರ್ ಮಾತರ್
ತಙ್ಕಳೈಯುಮ್, ವಿಚುಮ್ಪಿಟೈನಿನ್ ಱಿೞಿಯಾ ನಿಙ್ಕು
ಮಮರರೈಯು ಮರಮಕಳಿರ್ ತಮೈಯುಮ್, ವೆವ್ವೇ
ಱಱಿವರಿತಾ ನ್ತಕೈಮೈಯುನ ವನೇಕ ಮಙ್ಕಣ್.

1164. ಅರವನೆಟು ನ್ತೇರ್ವೀತಿ ಯರುಕು ಮಾಟ
ತ್ತಣಿಮಣಿಕ್ಕೋ ಪುರತ್ತಯಲೇ ವಿಯಲ್ವಾಯ್ ನೀಣ್ಟ
ವಿರವುಮರ ಕತಚ್ಚೋತಿ ವೇತಿ ತ್ತಿಣ್ಣೈ
ವಿಳಿಮ್ಪಿನೊಳಿ ತುಳುಮ್ಪುಮುಱೈ ಪ್ಪಟಿವಿಯಾ ತೇಱು
ಙ್ಕುರವಮರು ಙ್ಕುಟಿನ್ಮಟವಾ ರಟಿಯಿ ಲೂಟ್ಟು
ಙ್ಕುಟಿಮ್ಪುಟುತ್ತ ಚೆಮ್ಪಞ್ಞಿನ್ ಚುವಟ್ಟು ಕ್ಕೋಲವ್
ಪರವೈನೆಟು ನ್ತರಙ್ಕಮಿಚೈ ವಿಳಙ್ಕಿ ತ್ತೋನ್ಱುಮ್
ಪವಳನಱು ನ್ತಳಿರನೈಯ ಪಲವುಮ್ ಪಾಙ್ಕರ್.

1165. ಕೋಪಗೊಂಡ ಆನೆಯ ಘೀಂಕಾರವೂ, ಕುದುರೆಯ ಹೇಷಾರವವೂ, ಅಗಲವೂ ನಿಡಿದೂ ಆದ ರಥಚಕ್ರಗಳು ಸುತ್ತುವಾಗ ಆಗುವ ಶಬ್ದವೂ, ಸುಂದರವಾದ ಚಿನ್ನದಿಂದಲಂಕೃತವಾದ ಬೀದಿಗಳುಳ್ಳ ನರ್ತನರಂಗಗಳಲ್ಲಿ ನರ್ತಿಸುವ ನರ್ತಕಿಯರ ಕಾಲಂದುಗೆಗಳ ಶಬ್ದವೂ ಇಲ್ಲಿ ಕೇಳಬರುವುದು. ದೇವೇಂದ್ರನ ಐರಾವತದ ಘೋಳಗೂ, ಸೂರ್ಯನ ತೇರಿಗೆ ಹೂಡಿದ ಕುದುರೆಗಳು ಕಿಳಿರುವ ರವವೂ, ಬ್ರಹ್ಮದೇವನ ತೇರಿನ ಶಬ್ದವೂ, ದೇವವಿಮಾನಗಳಲ್ಲಿ ಆಡುವ ದೇವಸ್ತ್ರೀಯರ ಕಾಲಂದುಗೆಗಳ ಶಬ್ದದೊಡನೆ ಆ ನಗರದಲ್ಲಿ ತುಂಬಾ ತುಂಬಿದೆ.

1166. ಆ ನಗರವು ವೇದವಿದರಾದ ಬ್ರಾಹ್ಮಣರು ಇರುವ ಸ್ಥಳವಾಗಿದೆ. ಅಲ್ಲಿ ಆಹುತಿಗಳ ಹೊಗೆಯು ತುಂಬಿದ ಸುಂದರವಾಗಿಯೂ ಸ್ವರ್ಣಮಯವಾಗಿಯೂ ಇರುವ ಮಾಳಿಗೆಗಳಿಂದ ಕೂಡಿರುವ ದೊಡ್ಡ ಬೀದಿಗಳಿವೆ. ಪಕ್ಕದ ಯೋಗಶಾಲೆಗಳಲ್ಲಿ ದೇವರುಗಳು ಪಡೆಯುವಂತಹ ಹವಿರ್ಭಾಗಗಳನ್ನು ಕೊಡುವ ಮಂತ್ರಗಳನ್ನು ಬ್ರಾಹ್ಮಣರು ಹೇಳುತ್ತಾರೆ. ದೇವತೆಗಳನ್ನು ಬರುವಂತೆ ಆಮಂತ್ರಿಸುವ ಆ ಮಂತ್ರಗಳು, ದೇವರುಗಳ ನಾಯಕನಾದ ಏಕಾಂಬರನ ದಿವ್ಯಸನ್ನಿಧಿಯಲ್ಲಿ ಚಿನ್ನದ ಗೋಪುರ ದ್ವಾರದಲ್ಲಿ ಸಾಂದ್ರವಾಗಿ ಸೇರಿರುವ ಎಲ್ಲಾ ದೇವತೆಗಳನ್ನೂ ತಮ್ಮ ಜಾಗದಿಂದ ಯಾಗಶಾಲೆಗೆ ಕೊಂಡು ಹೋಗುವುವು.

1165. ವೆಮ್ಮುಪಿನ ಕ್ಕಳಿಱ್ಱಿರ್‍ವು ಮರವಿ ನಾರ್‍ಪ್ಪುಮ್
ವಿಯನೆಟುನ್ದೇರ್‍ ಕ್ಕಾಲಿಚ್ಚೈಪ್ಪುಮ್ ವಿಟಿವ ಱಾತ
ವಮ್ಪೊನ್‍ಮಣಿ ವೀತಿಕಳಿ ಲರಙ್ಗಿ ಲಾಟು
ಮರಿವೈಯರ್‍ನೂ ಪುರವೊಲಿಯೋ ಟವ್ವೈಯು ಮಿಮ್ಪ;
ರುಮ್ಪರಿನಿ ನ್ದಿರನ್‍ಕಳಿಱ್ಱಿನ್‍ ಮುಟಿಕ್ಕು ನ್ದೆಯ್ವ
ವುಯರಿರವಿ ಮಾಕ್ಕಲಿಪ್ಪು ಮಯನೂರ್‍ ತಿತ್ತೇರ್‍
ಪಮ್ಪಿಚೈಯುಮ್ ವಿಮಾನತ್ತು ಳಾಟು ನ್ದೆಯ್ವ
ಪ್ಪಾವೈಯರ್‍ನೂ ಪುರವರವ ತ್ತುಟನೇ ಪಲ್ಕುಮ್.

1166. ಅರುಮಱೈಯ ನ್ದಣರ್‍ಮನ್‍ನು ಮಿರುಕ್ಕೈ ಯಾನ
ವಾಕುತಿಯಿನ್‍ ಪುಕೈಯಟುತ್ತ ವಮ್ಪೊನ್‍ ಮಾಟ
ಪ್ಪೆರುಮಱುಕು ತೊಱುಮ್‍ವೇಳ್ವಿ ಚ್ಚಾಲೈ ಯೆಙ್ಙುಮ್
ಪೆಱುಮವಿಪಾ ಕಙ್ಕೊಟುಕ್ಕುಮ್ ಪೆಱ್ಱಿ ಮೇಲೋರ್‍
ವರುಮಱೈಯೈ ಯಟೈಕ್ಕವಿಟು ಮನ್ದಿರಮೆ ಮ್ಮರುಙ್ಗುಮ್
ವಾನವರ್‍ನಾ ಯಕರ್‍ತಿರುವೇ ಕಮ್ಪರ್‍ ಮುನ್‍ಱಿ
ಱ್ಱಿರುಮಲಿಪೊ ಱ್ಕೋಪುರತ್ತು ನೆರುಙ್ಗು ಮೆಲ್ಲಾ
ತ್ತೇವರ್ಯೈಯು ಮಣೆತ್ತಾಕ ಕ್ಕೊಣ್ಡು ಚೆಲ್ಲುಮ್.

1167. ಅರಸುವಂಶದವರು ವಾಸಿಸುವ ದೊಡ್ಡ ಬೀದಿಗಳಲ್ಲಿ, ಚಿತ್ರಕೂಟಗಳಿರುವ ಮನೆಯಂಗಳಗಳಲ್ಲಿ, ರಸ್ತೆಗಳ ಸಂಧಿಸ್ಥಳಗಳಲ್ಲಿ, ಆಯುಧಗಳನ್ನು ಅಭ್ಯಾಸ ಮಾಡುವ ಅಗಲವಾದ ಸ್ಥಳಗಳಲ್ಲಿ, ಕುತ್ತಿಗೆಯಲ್ಲಿ ಕಟ್ಟಿದ ಹಗ್ಗಗಳನ್ನುಳ್ಳ ಆನೆಗಳನ್ನೂ ಕುದುರೆಗಳನ್ನೂ ಏರಿ ಅವುಗಳನ್ನು ನಡೆಸುವ ಬೀದಿಗಳಲ್ಲಿ, ಕಾಂತಿ ಸೂಸುವಂತೆ, ಸುವಾಸನೆಯನ್ನು ಸೂಸುವ ಹೂಗಳಿಂದಲೂ, ಮಣಿಮಾಲೆಗಳಿಂದಲೂ ಅಲಂಕೃತರಾದ ರಾಜಕುಮಾರರು ಪ್ರದರ್ಶಿಸುತ್ತಿರುವ ಅತಿಶಯವಾದ ಬಿಲ್ಲುವಿದ್ಯೆ ಖಡ್ಗವಿದ್ಯೆ ಮೊದಲಾದವುಗಳನ್ನು ಕಂಡು, ವಿದ್ಯಾಧರರಾದ ದೇವಕೂಟದವರು ಸಾಲಾಗಿ ಗುಂಪುಕೂಡಿದ ದೇವವಿಮಾನಗಳಲ್ಲಿಯೂ, ನೆಲದಲ್ಲಿಯೂ ಬಹುಹೊತ್ತು ನಿಂತಿದ್ದು ಮತ್ತೂ ನಿಲ್ಲಲಪೇಕ್ಷಿಸುವರು.

1168. ಕಾಂತಿಯನ್ನು ಸೂಸುವ ಹಲಮಣಿಗಳನ್ನುಳ್ಳ ಆಭರಣಗಳನ್ನು ಧರಿಸಿದ ವಣಿಜರು ಆ ನಗರದ ಸಂಪತ್ತನ್ನು ಹೆಚ್ಚಿಸುತ್ತಾರೆ. ರತ್ನಗಳಿಂದ ಅಲಂಕೃತವಾದ ಬಾಗಿಲುಗಳುಳ್ಳ ವಣಿಜರ ದೊಡ್ಡ ಮಹಡಿಗಳಲ್ಲೆಲ್ಲಾ ನವಮಣಿರಾಶಿಗಳು ತುಂಬಿವೆ. ಆ ನಗರದಲ್ಲಿ ಕೈಲಾಸಪತಿಯಾದ ಶಿವಪರಮಾತ್ಮನು ಕಾಂಚಿಯಲ್ಲಿರುವ ಹಲಸ್ಥಳಗಳಲ್ಲಿಯೂ ದಿವ್ಯವಾದ ಏಕಾಂಬರ ದೇವಾಲಯದಲ್ಲಿಯೂ ಇದ್ದು ಅನುಗ್ರಹಿಸಿರುತ್ತಾನೆ. ಈ ಮಹಿಮೆಯನ್ನು ತಿಳಿದು ಕುಬೇರನು ದರ್ಶಿಸಲೂ ಸ್ತುತಿಸಲೂ ಬಂದು ತಂಗಲಿಕ್ಕಾಗಿ ಅಳಕಾಪುರಿಯ ಸೌಭಾಗ್ಯಗಳನ್ನು ತನ್ನಲ್ಲಿ ಒಳಗೊಂಡಂತೆ ಆ ನಗರವು ತೋರುವುದು.

1167. ಅರಚರ್ಕುಲ ಪ್ಪೆರುನ್ದೆರುವು ನೆಱಿ ಮುಱ್ಱ
ತ್ತಾಯುತಙ್ಕಳ್ ಪಯಿಲುಮ್ವಿಯ ಲಿಟಮು ಮಙ್ಕಟ್
ಪುರಚೈಮತ ಕ್ಕರಿಕಳೊಟು ಪುರವಿ ಯೇಱುಮ್
ಪೊಱ್ಪುಟೈಯ ವೀತಿಕಳುಮ್ ಪೊಲಿಯ ವೆಙ್ಕುಮ್
ವಿರೈಚೆಯ್ನಱು ನೊತ್ತೈಯಲಙ್ಕ ಱ್ಕುಮರರ್ ಚೆಯ್ಯುಮ್
ವಿಯಪ್ಪುಱುಚೆಯ್ ತೊೞಿಲ್ಕಣ್ಟು ವಿಞ್ಚೈ ವಿಣ್ಣೋರ್
ನಿರೈಚೆಱಿಯುಮ್ ವಿಮಾನವೂರ್ ತಿಕಳಿನ್ ಮೇಲು
ನಿಲವಿಚ್ಚೈಯುಮ್ ಪಲಮುಱೈಯು ನಿರನ್ತು ನೀಙ್ಗಾರ್.

1168. ವೆಯಿಲುಮಿೞುಮ್ ಪನ್ಮಣಿಪ್ಪೂಣ್ ವಣಿಕ ಮಾಕ್ಕಳ್
ವಿರವುನಿತಿ ವಳಮ್ಪೆರುಕ್ಕುಮ್ ವೆಱುಕ್ಕೈ ಮಿಕ್ಕ
ವಯಿನಿಲವು ಮಣಿಕ್ಕಟೈಮಾ ನಕರ್ಕ ಳೆಲ್ಲಾಮ್
ವನಪ್ಪುಟೈಯ ಪೊರುಟ್ಕುಲಙ್ಕಣ್ ಮಲಿತ ಲಾಲೇ
ಕಯಿಲೈಮಲೈ ಯಾರ್ಕಚ್ಚಿ ಯಾಲ ಯಙ್ಕಳ್
ಕಮ್ಪಮುಮೇ ವಿಯತನ್ಮೈ ಕಣ್ಟು ಪೋಱ್ಱಿ
ಪ್ಪಯಿಲುಮುರು ಪ್ಪಲಕೊಣ್ಟು ನಿತಿಕ್ಕೋನ್ ಱಙ್ಕ
ಪ್ಪಯಿಲಳಕಾ ಪುರಿವಕುತ್ತ ಪರಿಚು ಕಾಟ್ಟುಮ್.

1169. ಪ್ರಕಾಶಮಾನವಾದ ಜಡೆಯಲ್ಲಿ ಬಾಲಚಂದ್ರನನ್ನುಳ್ಳ ಏಕಾಂಬರನು, ಸುವರ್ಣಗಿರಿಯ ಲತೆಯಾದ ಕಾಮಾಕ್ಷಿಮಾತೆಗೆ ಎರಡು ನಾಳಿ ಬತ್ತವನ್ನು ಉಣಿಸಿಗಾಗಿ ಕೊಟ್ಟು ಅನುಗ್ರಹಿಸಿದ್ದನಷ್ಟೆ! ಲೋಕಗಳೆಲ್ಲವನ್ನೂ ಪಡೆದ ಆ ಮಾತೆಯು ಅದನ್ನು ವಿಶೇಷ ಉತ್ಸವಗಳು ನಡೆಯುವ ದಿವ್ಯಕಾಂಚಿಯ ಎಲ್ಲೆಯಲ್ಲಿ ವೇಳಾಳರೆಂಬ ಪವಿತ್ರ ವಂಶದಲ್ಲಿ ಬಂದ ಮಹಾಭಾಗ್ಯವಂತರಿಗೆ ಕೊಟ್ಟು ಅನುಗ್ರಹಿಸಿದ್ದಳು. ಆ ವೇಳಾಳರು ಅದನ್ನು ಪಡೆದು, ಈ ಲೋಕದಲ್ಲಿ ಬೆಳೆಸಲಾಗುವ ಪಯಿರುಗಳನ್ನು ಬೆಳೆಸಿ, ಎಲ್ಲಾ ಜೀವಿಗಳೂ ಜೀವಿಸಲು ಅನುಕೂಲವಾಗುವಂತೆ ಧರ್ಮಕಾರ್ಯಗಳಲ್ಲಿ ಪ್ರವೃತ್ತರಾಗಿ ಯಾವಾಗಲೂ ಪರಿಶ್ರಮಿಸುತ್ತಿದ್ದರು.

1170. ಶ್ರೇಷ್ಠವಾದ ನಾಲ್ಕು ಜಾತಿಗಳಲ್ಲಿಯೂ, ಒಡನಾಟ ಸಂಪರ್ಕಗಳಿಂದ ತಮ್ಮೊಳಗೆ ಹುಟ್ಟಿದ ಕುಲಭೇದಗಳಲ್ಲಿ ತಂತಮ್ಮ ಅರ್ಹತೆಗನುಸಾರವಾಗಿ ಏರ್ಪಡಿಸಿದ ಪ್ರತ್ಯೇಕ ಸ್ಥಳಗಳಲ್ಲಿದ್ದು, ಅಲ್ಲಿ ತುಂಬಿದ ತಮ್ಮ ಸಂಬಂಧಿಗಳೊಡನೆ ಕಲೆತು, ತಂತಮ್ಮ ವಂಶಗಳಿಗೆ ಅನುಗುಣವಾದ ಉದ್ಯೋಗಗಳನ್ನು ಬಿಡದೆ ಅನುಸರಿಸುವ ಗುಣದಿಂದ ವೃದ್ಧಿಹೊಂದಿದ ಜೀವನದಲ್ಲಿ ಹಲಬಗೆಯ ಸುಸಂಸ್ಕೃತಿಗಳು ಉಂಟಾದುವು.

1169. ವಿಟವುಮಲಿ ತಿರುಕ್ಕಾಞ್ಚಿ ವರೈಪ್ಪಿನ್ ವೇಳಾಣ್
ವಿಟುಕ್ಕುಟಿಮೈ ಪ್ಪೆರುಞ್ಚೆಲ್ವರ್ ವಿಳಙ್ಕುಮ್ ವೇಣಿ
ಮಟಿವಿಳವೆ ಣ್ಣೆಙ್ಕಳ್ಪುನ್ಯೆ ಕಮ್ಪರ್ ಚೆಮ್ಪೊನ್
ಮಲೈವಲ್ಲಿ ಕ್ಕಳಿತ್ತವರು ಳುಣವಿನ್ ಮೂಲ
ನ್ನೊಟಿವುಲಕು ಪೆಱುಮವಟಾ ನರುಳ ಪ್ಪೆಱ್ಱು
ತ್ತೊನ್ನಿಲತ್ತು ಮನ್ನುಪಯಿರ್ ವೇತ ವಾಯ್ಮೈ
ಯಟವುತೊಟಿ ಲಾಱ್ಱೆರುಕ್ಕಿ ಯುಯಿರ್ಕ ಳೆಲ್ಲಾ
ಮೋಙ್ಕವರು ನ್ತರುಮವಿನ್ಯೆ ಕ್ಕುಳರಾ ಲೆನ್ಱುಮ್.

1170. ಓಙ್ಕಿಯನಾ ಙ್ಕುಲತ್ತೊವ್ವಾ ಪ್ಪುಣರ್ವಿ ಱ್ಱಮ್ಮಿ
ಲುಯರ್ನ್ತನವು ಮಿಟಿನ್ತನವು ಮಾನ ಚಾತಿ
ತಾಙ್ಕುಟುಮಿ ಪ್ಪಿಱನ್ತಕುಲ ಪೇತ ಮೆಲ್ಲಾ
ನ್ತನ್ತಕೈಮೈ ಕೇಱ್ಱತನಿ ಯಿಟಙ್ಕಣ್ ಮೇವಿ
ಯಾಙ್ಕುನಿಱೈ ಕಿಳೈಪಯಿನ್ಱು ಮರಪಿ ನಾಱ್ಱಿ
ವಟುತ್ತವಿನ್ಯೆ ತ್ತೊಟಿನ್ಮುಱೈಮೈ ವಟಾಮ್ಯೆ ನೀಟು
ಪಾಙ್ಕುವಳ ರಿರುಕ್ಕೈಯಿಲೈ ಪಲವು ಮೆಲ್ಲಾಮ್
ಪಣ್ಪುನೀ ಟಿಯವುರಿಮೈ ಪ್ಪಾಲ ವನ್ಱೇ.

1171. ಆದಿದೇವನ ಪುರಾತನವಾದ ಮದಿಲಿನಿಂದ ಸುತ್ತುವರಿದ ಆ ಕಾಂಚೀ ಮಹಾನಗರದಲ್ಲಿ ಇರುವ ಬೀದಿಗಳು, ಜ್ಯೋತಿಯುಕ್ತವಾದ ಮಣಿಗಳಿಂದ ತುಂಬಿದ ಧೂಪದೀಪಗಳನ್ನೂ, ದೋಷವನ್ನು ನಿವಾರಿಸುವಂತೆ ಚಲಿಸುವ ಪತಾಕೆಗಳನ್ನೂ ಉಳ್ಳ ಉತ್ಸವಗಳಿಂದ ಹಿರಿಮೆಯನ್ನು ಯಾವಾಗಲೂ ಪಡೆದಿರುವುದು.

1172. ಆ ನಗರದಲ್ಲಿ ಮಹಡಿಯ ಬಾಗಿಲುಗಳಲ್ಲೆಲ್ಲಾ ತೋರಣಗಳಿವೆ. ದೊಡ್ಡದಾದ ಮದಿಲಿನ ತುದಿಯಲ್ಲೆಲ್ಲಾ ಮೇಘಗಳು ಮುಸುರಿವೆ. ಪ್ರಕಾಶವನ್ನು ಬೀರುವ ಚಂದ್ರನನ್ನು ಮುಟ್ಟುವಂತೆ ಎತ್ತರವಾಗಿರುವ ಮನೆಗಳಲ್ಲಿ ಎಲ್ಲೆಲ್ಲೂ ಮಂಗಳಗಳು ಜರಗುತ್ತವೆ. ಭಕ್ತರು ಸುತ್ತಿ ಪ್ರದಕ್ಷಿಣೆ ಬರುವ ದೇವಾಲಯಗಳಲ್ಲೆಲ್ಲಾ ದೇವರುಗಳ ಕೂಟವು ಅಧಿಕವಾಗಿದೆ.

1173 ವೇದಜ್ಞರಾದ ಬ್ರಾಹ್ಮಣರು ನಡೆಸುವ ಯಾಗಗಳಲ್ಲಿಯೇ ಬೆಂಕಿಯು ಕಂಡುಬರುವುದು. ಹೆಂಗಸರ ಕೂದಲಲ್ಲಿರುವ ಮಲರುಗಳೇ ಬಂಧನಕ್ಕೆ ಸಿಲುಕಿರುವವುಗಳು. ರಮಣೀಯವಾದ ಬೀದಿಗಳಲ್ಲಿ ತಿರುಗುವ ಬೀದಿಗಳೇ ಕವಲುಳ್ಳವುಗಳು. ದೊಡ್ಡ ಮರಗಳಲ್ಲಿ ಕುರುಕ್ಕತ್ತಿ ಮರಗಳೇ ಪಟ್ಟಣವನ್ನು ಸುತ್ತಿ ಇರುವವುಗಳು.

1171. ಆತಿ ಮೂತೆಯಿ ಲನ್ನಕರ್ ಮನ್ನಿಯ
ಜೋತಿ ನೀಣ್ಮಣಿ ತ್ತೂಪಮುನ್ ತೀಪಮು
ಜ್ಕ್ಯೋತಿಲ್ ಪಲ್ಲಿಯ ಮುಙ್ಕ್ಕೊಟಿ ಯುವ್ವಯಿಲ್
ವೀತಿ ನಾಳು ಮೊಟಿಯಾ ವಿಟಾವಣಿ.

1172. ವಾಯಿ ಲೆಜ್ಞಣು ನ್ತೋರಣ, ಮಾಮತಿಲ್
ಞಾಯಿ ಲೆಜ್ಞಣು ಞ್ಞುಟ್ಮುಕಿ, ನಾಣ್ಮತಿ
ತೋಯಿ ಲೆಜ್ಞಣು ಮಙ್ಕಲ, ನ್ತೊಣ್ಣರ್ಚೂಟ್
ಕೋಯಿ ಲೆಜ್ಞಣು ಮುಮ್ಮರ್ ಕುಲಕ್ಕುಟಾವನ್.

1173. ವೇತ ವೇತಿಯರ್ ವೇಳ್ವಿಯೇ ತೀಯನ;
ಮಾತ ರೋತಿ ಮಲರೇ ಪಿಣಿಯನ;
ಕಾತಲ್ ವೀತಿ ವಿಲಕ್ಕೇ ಕವಲೈಯ;
ಚೂತ ಮಾತವಿ ಯೇಪುಱಿ ಞ್ಞುಟ್ಟಿವನ.

1174. ನವಿಲಿನಂತೆ ಚೆಲುವೆಯರಾದ ಹೆಂಗಸರ ನಡುವೇ ಕ್ಷೀಣಿಸುವವುಗಳು. ಆ ಹೆಂಗಸರ ಕೂಟಗಳನ್ನುಳ್ಳ ಮಹಡಿಗಳ ಮೇಲೆ ಇರುವ ಧ್ವಜಗಳೇ ಚಲಿಸುವವುಗಳು. ಕೆಂಪಗಾದ ಹೊನ್ನಿನ ಬಣ್ಣವನ್ನುಳ್ಳ, ನೆತ್ತಿಪಟ್ಟಿಕವನ್ನುಳ್ಳ ಆನೆಗಳೇ ದಿಕ್ಕುಗಳಲ್ಲಿ ಉಳ್ಳವುಗಳು (ಅವುಲಿನಿಂದ ಇರತಕ್ಕವುಗಳು). ಪಸರಿಸಿದ ಉದ್ಯಾನಗಳಲ್ಲುಳ್ಳ ಮರಗಳೇ ಪ್ರಯೋಜನವನ್ನು (ಪಯಂ = ಪ್ರಯೋಜನ, ಭಯ) ಹೊಂದಿರುವವುಗಳು.

1175. ಶಿವಪರಮಾತ್ಮನ ಭಕ್ತರ ಮೇಲಣ ಪ್ರೀತಿಯೇ ಕೊಂಡಾಡತಕ್ಕುದು. ಶೀತಲವಾದ ಸುವಾಸನಾಯುಕ್ತವಾದ ಮಲರುಗಳ ಪರಾಗಗಳೇ ಧೂಳು (ತುಗಳ್ = ಪರಾಗ, ಹುಡಿ, ದೋಷ) ಗಳು ಆಗಿವೆ. ಸುಂದರವಾದ ನಿಡಿದಾದ ಮಣಿಮಾಲೆಗಳೇ ಕೆಳಗೆ ಜೋತು ಇರುವವುಗಳು. ಅಳತೆ ಇಲ್ಲದ ಕುಂಕುಮುಗಟ್ಟಿಯ ಮಿಶ್ರಣವೇ ಬೆರಕೆ ಇರುವವುಗಳು.

1176. ವಿಜಯುವನ್ನುಳ್ಳ ದೇವತೆಗಳಂತೆ ಆಟವಾಡುವುದನ್ನೂ, ಕಾಯಸಿದ್ಧಿಯನ್ನು ಪಡೆದು ಇತರರಂತೆ ದೇಹವು ಅಳಿಯದಂತೆ ಮಾಡಿ, ದೀರ್ಘಕಾಲವಿರುವ ಸಿದ್ಧರಂತೆ ಎಂದೆಂದೂ ಬಾಳುವ ಪ್ರವೃತ್ತಿಯನ್ನೂ, ಇತರ ಎಲ್ಲಾ ಪ್ರಯೋಜನಗಳನ್ನೂ, ಹೊಂದಲು ತಮ್ಮ ಮನಸ್ಸಿನಲ್ಲಿ ಆಶೆಯನ್ನು ಕೊಂಡು ಅಲ್ಲಿ ಸೇರಿದವರಿಗೆ ತಂತಮ್ಮ ಬಯಕೆಗಳನ್ನು ಆ ದಿವ್ಯನಗರವು ಪಡೆಯುವಂತೆ ಮಾಡುವುದು.

1174. ಚಾಯ ಲಾರ್ಕ ಣುಚುಪ್ಪೇ ತಳರ್ವನ;
ವಾಯ ಮಾಟ ಕ್ಕೊಟಿಯೇ ಯಚೈವನ;
ಚೇಯ ವೋಟೈ ಕ್ಕಳಿಱೇ ತಿಕೈಪ್ಪನ;
ಪಾಯ ಚೋಲೈ ತ್ತರುವೇ ಪಯತ್ತನ.

1175. ಅಣ್ಣ ಲಾರನ್ಪ ರನ್ಪೇಮು ನಾರ್ತ್ತನ;
ತಣ್ಣ ಱುಙಾಚ್ಚೀಟು ನ್ತಾತೇ ತುಕಳನ;
ವಣ್ಣ ನೀಣ್ಮಣಿ ಮಾಲೈಯೇ ತಾಟ್ವನ;
ಎಣ್ಣಿಲ್ ಕುಙ್ಕುಮ ಚ್ಚೇಱೇ ಯಿಟುಕ್ಕಿನ.

1176. ವೆನ್ಱಿ ವಾನವರ್ ತಾಮ್ವಿಳೈ ಯಾಟಲು
ಮೆನ್ಱು ಮುಳ್ಳವರ್ ವಾಟು ಮಿಯಱ್ಕೈಯು
ನನ್ಱು ಮುಳ್ಳತ್ತು ನಣ್ಣಿನರ್ ವೇಟ್ಕೈಕ
ಳೊನ್ಱು ಮಙ್ಕೊಟಿ ಯಾವಕ್ಕೈ ಯುಯ್ಪ್ಪತು.

1177. ತ್ರಿಪುರಗಳನ್ನು ದಹಿಸಿದ ಶಿವಪರಮಾತ್ಮನು ಇದ್ದು ಅನುಗ್ರಹಿಸಿದ ಕಾಂಚೀಪುರವು ತನ್ನ ಕೀರ್ತಿ ಹಬ್ಬಿದ ವಿಸ್ತಾರವಾದ ಹದಿನಾಲ್ಕು ಲೋಕಗಳಲ್ಲೂ ಉಳ್ಳ ಎಲ್ಲೆ ಇಲ್ಲದ ಎಲ್ಲಾ ಭೋಗಸಮೃದ್ಧಿಗೆ ಹೇತುವಾದ ಭಾಗ್ಯಗಳೆಲ್ಲಾ ತುಂಬಿರುವ ಒಂದು ಭಾಂಡದಂತೆ ಇದೆ.

1177. ಪುರಙ್ಗ ಳ್ಟನ್ತ್ತವರ್ ಕಾಞ್ಚಿ ಪುರಮ್ಪುಕಟಿಟ್
ಪರಮ್ಪು ನೀೞ್ಪುವ ನಮ್ಪತಿ ನಾನ್‌ಕಿನುಮ್
ವರಮ್ಪಿಲ್ ಪೋಕ ವನಪ್ಪಿನ್ ವಳಮೆಲಾ
ನಿರಮ್ಪು ಕೊಳ್ಕಲ ಮೆನ್‌ನ ನಿಜುಕ್ಕೈನ್ತ್ತಾಲ್.

ತಿರುಕುರಿಪ್ಪುತೊಂಡ ನಾಯನಾರ ಚರಿತೆ

1178. ಇಂತಹ ಹಿರಿಮೆಯುಳ್ಳ ಕಾಂಚೀನಗರದಲ್ಲಿ ಒಂದು ಪಕ್ಕದಲ್ಲಿ ಬಾಳುವವನು, ಈ ಲೋಕದಲ್ಲಿ ಕುಲಕ್ರಮದಿಂದ ಏಕಾಲಿಕುಲಕ್ಕೆ ಸೇರಿದವನೂ, ಸೌಭಾಗ್ಯಕರವಾದ ಪ್ರೀತಿ ತುಂಬಿದ ಮನಸ್ಸುಳ್ಳವನೂ, ಶೈವಶೀಲವಾದ ತಪೋಮಾರ್ಗದಲ್ಲಿ ನಿಂತವನೂ, ವಿಷಕಂಠನಾದ ಶಿವಪರಮಾತ್ಮನ ದಿವ್ಯಪಾದಗಳಲ್ಲಿ ಕ್ರಮವಾಗಿ ಸೇವೆಯನ್ನು ಮಾಡುವವನೂ ಆದ ಒಬ್ಬ ಭಕ್ತನು.

1179. ಈ ರೀತಿಯಲ್ಲಿ ಬಂದವತರಿಸಿದಮೇಲೆ ಮನವೇ ಮೊದಲಾದ ತ್ರಿಕರಣಗಳನ್ನೂ ಶಿವಪರಮಾತ್ಮನ ಪಾದಗಳಿಗಾಗಿಯೇ ಅರ್ಪಿಸುವವನಾಗಿ, ಶಿವಪುಣ್ಯವುಳ್ಳ ನಿಜವಾದ ಭಕ್ತರ ಅಂತರಂಗದ ದಿವ್ಯಕುರುಹುಗಳನ್ನು ತಿಳಿದು ಅವರಿಗೆ ಸೇವೆ ಸಲ್ಲಿಸುವ ನೆಲೆಯಲ್ಲಿ ನಿಂತ ಕಾರಣದಿಂದ 'ತಿರುಕುರಿಪ್ಪು ತೊಂಡನು' ಎಂದು ಹೇಳಲ್ಪಡುವ ಶ್ರೇಷ್ಠ ಹೆಸರನ್ನು ಆ ಭಕ್ತನು ಪಡೆಯುವವನಾದನು.

1180. ತೇರುಗಳ ಶಬ್ದವೂ ಕುದುರೆಗಳ ಶಬ್ದವೂ ಎಲ್ಲಾ ದಿಕ್ಕುಗಳಲ್ಲಿಯೂ ಇರುವ ಕಾಂಚೀ ಮಹಾನಗರದಲ್ಲಿ ಇರುವವರಿಗೆ ಬಟ್ಟೆ ಮಡಿಮಾಡಿಕೊಡುವ ದೊಡ್ಡ ಮಡಿವಾಳನು ತಾನೇ ಎಂದು ಹೇಳಲಾಗದ ದೊಡ್ಡ ನೆಲೆಯಲ್ಲಿದ್ದ ಇವನು, ಗಂಗೆಯ ನೀರು ಶಬ್ದಿಸಲು, ಸರ್ಪಗಳು ಅಲುಗಲು, ಚಂದ್ರನು ಪ್ರಕಾಶಿಸುವ ತಲೆಮುಡಿಯುನ್ನುಳ್ಳ ಶಿವಪರಮಾತ್ಮನ ಹೆಸರುಗಳನ್ನು ಹೇಳುವಾಗಲೇ ಮನಸ್ಸು ಕರಗುವ ಭಕ್ತರಿಗೆ ಹೆಚ್ಚಿನ ಸಂತೋಷದಿಂದ ಬಟ್ಟೆಗಳನ್ನು ಮಡಿಮಾಡಿ ಕೊಡುವನು.

ತಿರುಕ್ಕುರಿಪ್ಪುತ್ತೊಣ್ಟ ನಾಯನಾರ್ ಚರಿತಮ್

1178. ಅಮ್ಮಕ್ಕೆಯ ತಿರುನಕರ ಮತನ್ಕಣೊರು ಮರುಙ್ಕುಱೈವಾ;
ರಿಮ್ಮುಲಕಿಱ್ ಪಿಱಪ್ಪಿನಾ ಲೇಕಾಲಿ ಕ್ಕುಲತ್ತುಳ್ಳಾರ್;
ಚೆಮ್ಮೆಯುವನ್ ಪುಟೈಮನತ್ತಾರ್; ಚೀಲತ್ತ ನೆಱಿನಿನ್ಱಾರ್;
ಮೈವಿರವು ಕಣ್ಟರಟಿ ವಟಿತ್ತೊಣ್ಟ ರುಳರಾನಾರ್.

1179. ಮಣ್ಣಿನ್ಮಿಚೈ ವನ್ತತಱ್ಪಿನ್ ಮನಮುತಲಾ ಯಿನಮೂನ್ಱು
ಮಣ್ಣಲಾರ್ ಚೇವಟಿಯಿನ್ ಚಾರ್ವಾಕ ವಣೈವಿಪ್ಪಾರ್
ಪುಣ್ಣಿಯಮೆಯ್ ತ್ತೊಣ್ಟರ್ತಿರು ಕ್ಕುಱಿಪ್ಪರಿನ್ತು ಪೋಱ್ಱುನಿಲೈ
ತ್ತಿಣ್ಮೈಯಿನಾ 'ಱಿರುಕ್ಕುಱಿಪ್ಪುತ್ತೊಣ್ಟ' ರೆನು ಞ್ಚಿಱಪ್ಪಿನಾರ್.

1180. ತೇರೊಲಿಕ್ಕ ಮಾವೊಲಿಕ್ಕ ತ್ತಿಚೈಯೊಲಿಕ್ಕುಮ್ ಪುಕಟ್ಕಾಞ್ಚಿ
'ಯೂರೊಲಿಕ್ಕುಮ್ ಪೆರುವಣ್ಣಾ' ರೆನವೊಣ್ಣಾ ವುಣ್ಮೈಯಿನಾರ್;
ನೀರೊಲಿಕ್ಕ ವರಾವಿರೈಕ್ಕ ನಿಲಾಮುಕಿಟ್ಕ್ಕು ನ್ತಿರುಮುಟಿಯಾರ್
ಪೇರೊಲಿಕ್ಕ ವುರುಕುಮವರ್ ಕ್ಕೊಲಿಪ್ಪರ್ಪೆರು ವಿರುಪ್ಪಿನೊಟುಮ್.

1181. ಕಾಂತಿಯುಕ್ತವಾದ ತಾವರೆಮಲರನ್ನು ಹೋಲುವ ಶ್ರೀಪಾದಗಳನ್ನುಳ್ಳ ಶಿವಪರಮಾತ್ಮನ ಭಕ್ತರ ಬಟ್ಟೆಗಳಲ್ಲಿ ದೂಳಿನಿಂದಾದ ಕೊಳೆಯನ್ನು ಹೋಗಲಾಡಿಸುವವನಂತೆ ತನ್ನ ಪೂರ್ವಕರ್ಮಗಳಿಂದ ಬಂದ ದೋಷಗಳಾದ ತ್ರಿಮಲಗಳ ಸಂಪರ್ಕದಿಂದ ಬರುವ ಜನ್ಮ ಎನ್ನುವ ಕೊಳೆಯನ್ನು ನಿವಾರಿಸುವಂತೆ, ಒಗೆದುಕೊಂಡು ಬರುವ ಒಂದು ದಿನದಲ್ಲಿ,

1182. ಸ್ವರ್ಣಮಯವಾದ ಹಿಮಾಲಯ ಪರ್ವತರಾಜನು ಪಡೆದ ಮಗಳಾದ ಹೂವಿನ ಲತೆಯಂತೆ ಉಳ್ಳ, ಪಾರ್ವತೀಮಾತೆಯ ತಪದ ಮಟ್ಟವನ್ನು ಲೋಕಕ್ಕೆ ತಿಳಿಸುವ ಉದ್ದೇಶದಿಂದ, ಹಿಂದೆ ಅನುಗ್ರಹಿಸಿ ಬಂದ ಶಿವಪರಮಾತ್ಮನು, ತನ್ನ ಸೇವಕರಲ್ಲಿ ಅಸಮಾನನಾದ ಆ ಭಕ್ತನ ನೆಲೆಯನ್ನು ಕಂಡು ಅವನನ್ನು ಅನುಗ್ರಹಿಸುವ ಉದ್ದೇಶದಿಂದ ಅಲ್ಲಿಗೆ ಬಂದವನಾಗಿ,

1183. ಅತಿಯಾದ ಚಳಿಯಿರುವ ಕಾಲದಲ್ಲಿ ತಿರುಕುರಿಪ್ಪು ತೊಂಡನಲ್ಲಿಗೆ ಬಡವನ ರೂಪವನ್ನು ತಾಳಿ ಹೆಚ್ಚು ಕೊಳೆಯಾದ ಕಂಥೆಯೊಡನೆ ಮಹಾಶಿವತವಸಿಯ ವೇಷದಿಂದ, ವಿಷ್ಣುವೂ ಕಂಡರಿಯದ ಮಲರಂತಹ ತನ್ನ ಪಾದಗಳು ಸಣ್ಣ ನಡೆಯನ್ನು ಕೊಳ್ಳುವ ರೀತಿಯಲ್ಲಿ ಬಂದು ದೋಷವನ್ನು ತಿಳಿಯದ ಮನಸ್ಸುಳ್ಳ ಭಕ್ತನ ಮುಂದೆ ಸೇರಿದನು.

1181. ತೇಜುಟೈಯ ಮಲರ್ಕ್ಕಮಲ ಚ್ಚೇವಟಿಯಾ ರಟಿಯಾರ್ತ
ನ್ನೂಚುಟೈಯ ತುಕಣ್ಮಾಚು ಕ್ಕಟಿಪ್ಪಾರ್ಪೋ ಱೊಲ್ಲೈವಿನೈ
ಯಾಚುಟೈಯ ಮಲಮೂನ್ಱು ಮಣ್ಯೈಯುವರುಮ್ ಪೆರುಮ್ಪಿಱವಿ
ಮಾಚುತನೈ ವಿಟಕ್ಕಟಿತ್ತು ವರುನಾಳಿ ಲಜ್ಱೊರುನಾಳ್,

1182. ಪೊನ್ನಿಮಯ ಪ್ಪೊರುಪ್ಪರೈಯನ್ ಪಯನ್ತರುಳುಮ್ ಪೂಙ್ಕೊಟಿತ
ನನ್ನಿಲೈಮೈ ಯನ್ಱಿಳಕ್ಕ ವೇಟುನ್ತರುಳು ನಮ್ಪೆರುಮಾನ್
ಱನ್ನುಟೈಯ ವಟಿಯವರ್ತ ನ್ತನಿತೊಣ್ಟರ್ ತಮ್ಮುಟೈಯ
ವನ್ನಿಲೈಮೈ ಕಣ್ಟನ್ಪರ್ ಕ್ಕರುಳ್ಪುರಿವಾನ್ ವನ್ತಣೈವಾರ್,

1183. ಚೀತಮಲಿ ಕಾಲತ್ತು ತ್ತಿರುಕ್ಕುಱಿಪ್ಪು ತ್ತೊಣ್ಟರ್ಪಾ
ಲಾತುಲರಾಯ್ ಮೆಲಿನ್ತುಮಿಕ ವಟುಕ್ಕಟೈನ್ತ ಕನ್ತೈಯುಟನ್
ಮಾತವವೇ ಟನ್ತಾಙ್ಕಿ ಮಾಲಱಿಯಾ ಮಲರಟಿಕಳ್
ಕೋತಟೈಯಾ ಮನತ್ತವರ್ಮುನ್ ಕುಱುನಟೈಕಳ್ ಕೊಳಕ್ಕುಱುಕಿ,

1184. ವಿಭೂತಿಯು ಹೆಚ್ಚಾಗಿ ಪ್ರಕಾಶಿಸುವ ವೇಷದಿಂದ, ತನ್ನ ದಿವ್ಯದೇಹ ವನ್ನು ಕರಿಯ ಮೇಘವು ಆವರಿಸಿದೆಯೋ ಎನ್ನುವಷ್ಟು ಕೊಳೆಯಾದ ಕಂಥೆಯೊಡನೆ ಬರುವ ದೇಹಕಾಂತಿ ಉಳ್ಳ ಹಿರಿಯ ತಪಸಿಯನ್ನು ತಿರುಕುರಿಪ್ಪು ತೊಂಡನು ಕಂಡು, ಸಂತಸದಿಂದ ಇದಿರುಗೊಂಡು, ತನ್ನ ಶರೀರದಲ್ಲಿ ರೋಮಾಂಚ ಉಂಟಾಗಲು ಅವನನ್ನು ನಮಿಸಿ ಎದ್ದನು.

1185. ಬಂದ ತವಸಿಗಳ ಮನದೊಳಗಿನ ಕುರುಹನ್ನು ತಿಳಿದೇ, 'ಹಿರಿಯ ತಪಸಿಗಳೇ! ದೇವರ ದಿವ್ಯಶರೀರವು ಆಯಾಸಗೊಂಡ ಕಾರಣವೇನು?' ಎಂದು ಇನಿದಾದ ಹಲವು ಮಾತುಗಳನ್ನು ಹೇಳಿ ಕೈಮುಗಿದು, 'ತಮ್ಮ ಕಂಥೆಯನ್ನು ಒಗೆದು ತರುವ ಉದ್ದೇಶದಿಂದ ಅನುಗ್ರಹಿಸಬೇಕು' ಎಂದು ಹೇಳಲು, ನೀಲಕಂಠವನ್ನು ಮರೆಸಿ ಬಂದವನಾದ ಮಹಾತಪಸಿಯು ಹೀಗೆ ಹೇಳಿದನು.

1186. 'ಈ ಕಂಥೆಯಾದುದು ಕೊಳೆಯು ಹೆಚ್ಚಿರುವುದರಿಂದ ತೊಳೆಯಲು ಕಷ್ಟವಾಗಿದ್ದರೂ, ನಾನು ನನ್ನ ಶರೀರದ ಚಳಿಗೆ ಹೆದರಿ ಅದನ್ನು ಬಿಡಲಾರೆನು. ಪಡು ಕಡಲಿನಿಂದ ಅಸ್ತಗಿರಿಯಾದ ಆ ಬೆಟ್ಟವನ್ನು ಬೆಂಗದಿರನು ಸೇರುವುದರೊಳಗಾಗಿ ನೀನು ಅದನ್ನು ಒಗೆದು ತರುವುದಾದರೆ ತೆಗೆದುಕೊಂಡು ಹೋಗಿ ಒಗೆದುಕೊಂಡು ಶೀಘ್ರ ದಲ್ಲಿಯೇ ತಾ' ಎಂದು ಹೇಳಿದನು.

1184. ತಿರುಮೇನಿ ವೆಣ್ಣೀಱು ತಿಕೞ್ನ್ದೊಳಿರು ಱ್ಕ್ಕೋಲತ್ತು
ಕ್ಕರುಮೇಕ ಮೆನವೞುಕ್ಕು ಕ್ಕನ್ದೈಯುಡ ನೆಟುನ್ದರುಳಿ
ವರುಮೇನಿ ಯರುನ್ದವರೈ ಕ್ಕಣ್ಟವಮನ ಮಕಿೞ್ನ್ದೆತಿರ್ಕೊ
ಣ್ಟರುಮೇವು ಮಯಿರ್ಪ್ಪುಳಕ ಮುಳವಾಕ ಪ್ಪಣಿನ್ದೆೞುನ್ದಾರ್.

1185. ಎಯ್ದುಮವರ್ ಕುಱಿಪ್ಪಱಿನ್ದೇ ಯಿನಿಯವೊಟಿ ಪಲವೊಟಿನ್ದು
'ಚೆಯ್ದವತ್ತೀರ್ ತಿರುಮೇನಿ ಯಿಳೈತ್ತಿರುನ್ದ ತೆನ್?' ನೆನ್ಱು,
ಕೈತೊೞುತು 'ಕನ್ದೈಯಿನೈ ತ್ತನ್ದರುಳು ಱ್ಕೞುವ' ವೆನ,
ಮೈತಿಕೞ್ಕ ಣ್ಟಱ್ಕರನ್ದ ಮಾತವತ್ತೋ ರರುಳ್ಚೆಯ್ವಾರ್.

1186. 'ಇಕ್ಕನ್ದೈ ಯೞುಕ್ಕೇಱಿ ಯೆಟುಕ್ಕವೊಣಾ ತೆನಿನುಮ್ಯಾನ್
ಮೆಯ್ಕ್ಕೊಣ್ಟ ಕುಳಿರ್ಕ್ಕಟೈನ್ದು ವಿಟಮಾಟ್ಟೇನ್; ಮೇಲ್ಕಟಱ್ಪಾಲ್
ಅಕ್ಕುನ್ಱವ್ ವೆಞ್ಕತಿರೋ ನಣ್ಣವತನ್ಮುನ್ ಱರುವೀರೇಲ್
ಕೈಕ್ಕೊಣ್ಟು ಪೋಯೊಲಿತ್ತು ಕ್ಕೊಟುವಾರು ಱ್ಕಟಿತೆನ್ಱಾರ್.

1187. ತವಸಿಯನ್ನು ನೋಡಿ ಆ ಭಕ್ತನು 'ಈ ಕಂಥೆಯನ್ನು ಸ್ವಲ್ಪವೂ ತಾಮಸಮಾಡದೆ ಇಂದು ಸಂಜೆಯ ಮೊದಲೇ ಒಗೆದು ತರುವೆನು' ಎನ್ನಲು ಆ ತವಸಿಯು, 'ಈ ಕಂಥೆಯನ್ನು ಶೀಘ್ರದಲ್ಲಿಯೇ ಒಗೆದು ಒಣಗಿಸಿ ಇಂದೇ ತಾರದಿದ್ದಲ್ಲಿ ಈ ದೇಹಕ್ಕೆ ಕಷ್ಟವನ್ನು ಕೊಟ್ಟವನಾಗುವಿ' ಎಂದು ಹೇಳಿ, ಆ ಕಂಥೆಯನ್ನು ಒಗೆಯಲು ಕೊಟ್ಟು ಹೋದನು.

1188. ತವಸಿಯು ಹೇಳಿದ ಹೊತ್ತಿನೊಳಗೇ ಒಗೆದು ಕೊಡುವುದಕ್ಕಾಗಿ ಭಕ್ತನು ಕಂಥೆಯನ್ನು ಕೊಂಡುಹೋಗಿ ಸುವಾಸನಾಯುಕ್ತವಾದ, ಮಲರುಗಳಿಂದ ತುಂಬಿದ ತಟಾಕದಲ್ಲಿ, ಬೇಗನೇ ಅದರ ಕೊಳೆಹೋಗುವಂತೆ ಒಗೆದು, ನೀರಿನಲ್ಲಿ ಅದನ್ನು ಹಾಕಿ ಹದವಾಗಿ ಕುದಿಸಿ, ಆನೇಲೆ ಪ್ರತ್ಯೇಕವಾಗಿ ಅದನ್ನು ಒಗೆಯಲು ತೊಡಗುವಾಗ ಮಧ್ಯಾಹ್ನವು ದಾಟಿ ಪಿಂಬಗಲಾಗಿ, ಜಿಂಕೆಯನ್ನೂ ಚಂದ್ರನನ್ನೂ ಕೈಯಲ್ಲಿ ಧರಿಸಿ ದವನಾದ ಶಿವಪರಮಾತ್ಮನ ದಿವ್ಯಾನುಗ್ರಹದಿಂದ ಮಳೆಯು ಜೋರಾಗಿ ಸುರಿಯಲಾ ರಂಭಿಸಿತು.

1189. ದಿಕ್ಕು ತಿಳಿಯದೆ ಜನರು ಭ್ರಮಿಸುವಂತೆ, ಹೊರಗೆಲ್ಲಾ ಕವಿದ ಮುಗಿಲಿನ ಕೂಟಗಳು ದಟ್ಟವಾಗಿ ಮೇಲೆ ನಿಂತು ಸುರಿಯುವ ಮಳೆಯ ಧಾರೆಯು, ಯಾವ ವಸ್ತುವನ್ನೂ ನೋಡಲು ಸಾಧ್ಯವಿಲ್ಲದಷ್ಟು ದಟ್ಟವಾಗಿರಲು, ಭಕ್ತನು ದುಃಖ ದಿಂದ ಮರೆವು ಕವಿದಂತಾಗಲು ಆಯಾಸಗೊಂಡು, ಮಹಾತಪಸಿಗಳಿಗೆ ತಾನು ಕೊಟ್ಟ ಮಾತನ್ನು ನೆನೆದು ಮನಸ್ಸು ಒಡೆದವನಾಗಿ 'ಇನ್ನು ನಾನು ಏನು ಮಾಡಲಿ?' ಎಂದು ನಿಂತನು.

1187. 'ತನ್ನ್ರುಳು ಮಿಕ್ಕನ್ನೈ ತಾಟ್ಟಾತೇ ಯೊಲಿತ್ತುಮಕ್ಕಿನ್
ಜನ್ನಿಪಟು ವತನ್ಮುನ್ನ ನ್ರುಕಿನ್ಜೇ' ನೆನವವರು
'ಜ್ಞನ್ನೈಯಿತು ವೊಲಿತ್ತುಣಕ್ಕಿ ಕ್ಕಟಿತಿನ್ಜೇ ತಾರೀರೇ
ಲಿನ್ನುವುಟಜ್ ಕಿಟರ್ಚೆಯ್ವಿರ್' ರೆನ್ಜುಕೊಟು ತ್ತೇಕಿನಾರ್.

1188. ಕುಜಿತ್ತುಪೊಟು ತೇಯೊಲಿತ್ತು ಕ್ಕೊಟುಪ್ಪತಜ್ಕು ಕ್ಕೊಟುಪೋನ್ತು
ವೆಜಿತ್ತಟನೀರ್ ತ್ತುಜೈಯಿನ್ಕಣ್ ಮಾಚೆಜಿನ್ತು ಮಿಕಪ್ಪುಟುಕ್ಕಿ
ಪ್ಪಿಜಿತ್ತೊಲಿಕ್ಕ ಪ್ಪುಕುಮಳವಿಜ್ ಪೆರುಮ್ಪಕಲ್ಪೋಯ್ ಪಿನ್ಪಕಲಾಯ್
ಮಜಿಕ್ಕರತ್ತಾರ್ ತಿರುವರುಳಾಲ್ ಮಟೈಯೆಟುನ್ತು ಪೊಟಿನ್ತಟುಮಾಲ್.

1189. ತಿಚೈಮಯಙ್ಕ ವೆಳಿಯಟೈತ್ತು ಚೆಜಿಮುಕಿಲಿನ್ ಕುಟಾಮಿಟೈನ್ತು,
ಮಿಚೈಚೊರಿಯುಮ್ ಪುನಱ್ಱಾರೈ ವಿಟಿನುಟೈಯಾ ವಕೈಮಿಟೈಯ,
ವಚೈವುಟೈಯ ಮನತ್ತನ್ಪ ರಜಿವುಮಜಿ, ನ್ರುನ್ತವರ್ಪಾ
ಲಿಚೈವುನಿನೈ, ನ್ಟಿ, 'ನ್ನಿಯಾ ನೆನ್ಚೆಯ್ಕೇ' ನೆನನಿನ್ಜಾರ್.

1190. ಎಡೆಬಿಡದೆ ಸುರಿಯುವ ಮಳೆ ಒಂದುವೇಳೆ ಸ್ವಲ್ಪ ನಿಂತೀತು ಎಂದು ಕಾಪಾಲಿಯಾದ ಶಿವಪರಮಾತ್ಮನ ದಿವ್ಯಭಕ್ತನು ಸುಮ್ಮನೆ ಸ್ವಲ್ಪಹೊತ್ತು ಕಾದನು. ಆದರೂ ಮಳೆ ಬಿಡುವ ರೀತಿ ಕಾಣಲಿಲ್ಲ. ಆಗ ವೈರಿಯಂತೆ ರಾತ್ರಿಯು ಸಮೀಪಿಸಲು, 'ಆಹಾ! ಚಳಿಯಲ್ಲಿ ದೇಹವು ಕಷ್ಟಪಡುವ ಪವಿತ್ರ ತಪಸಿಯಲ್ಲಿ ನನ್ನ ಸೇವಾವೃತ್ತಿಯು ತಪ್ಪಿಬಿಟ್ಟಿತಲ್ಲಾ!' ಎಂದು ಕೆಳಗೆ ಬಿದ್ದನು.

1191. ಸುರಿಯುವ ಮಳೆಯು ನಿಲ್ಲದುದರಿಂದ 'ತವಸಿಯು ಹೇಳಿದ ಕಾಲವು ದಾಟಿಬಿಟ್ಟಿತು. ಇದಕ್ಕೆ ಮೊದಲೇ ಒಗೆದು ಮನೆಯೊಳಗೆ ಸಿದ್ಧತೆಯನ್ನು ಮಾಡಿ ಅನುಕೂಲಿಸಿಕೊಂಡು ಒಣಗಿಸುವ ಉಪಾಯವನ್ನು ತಿಳಿಯದೆ ಹೋಗಿಬಿಟ್ಟೆನು. ಭಾಗ್ಯವಂತನಾದ ತವಸಿಯ ದಿವ್ಯಶರೀರವು ಶೀತದಿಂದ ಬಾಧೆಪಡುವಂತೆ ಮಾಡಿದ ನನ್ನಂತಹ ನೀಚ ಭಕ್ತನಿಗೆ ಇನ್ನು ಮಾಡತಕ್ಕ ಕಾರ್ಯವು ಇದು ತಾನೇ' ಎಂದು ನಿರ್ಧರಿಸಿ ಎದ್ದವನಾಗಿ,

1192. 'ಕಂಥೆಯನ್ನು ಒಗೆಯಲಿಕ್ಕಿರುವ ಈ ಪಾರೆಕಲ್ಲಿನ ಮೇಲೆ ನನ್ನ ತಲೆಯನ್ನು ಅದು ಚೂರಾಗಿ ಬೀಳುವಂತೆ ಬಡಿದುಕೊಳ್ಳುವೆನು' ಎಂದು ನಿರ್ಧರಿಸಿ, ಭಾಗ್ಯಯುಕ್ತವಾದ ಆ ಪಾರೆಕಲ್ಲಿನ ಮೇಲೆ ತನ್ನ ತಲೆಯನ್ನು ತಾಡಿಸಿ ಬಡಿಯುವಷ್ಟರಲ್ಲಿ ಆ ಪಾರೆಕಲ್ಲಿನ ಪಕ್ಕದಿಂದ ಸುಂದರವಾದ ಬಳೆಯ ಗುರುತನ್ನು ಧರಿಸಿದ ಏಕಾಂಬರ ನಾಥನ ಹೂವಿನಂತಹ ಸಂಪದ್ಯುಕ್ತವಾದ ಕೈಯು ಕಾಣಿಸಿಕೊಂಡು ಆ ತಲೆಯನ್ನು ಹಿಡಿದುಕೊಂಡಿತು.

1190. ಓವಾತೇ ಪೊೞಿಯುಮೞೈ ಯೊರುಕಾಲ್ವಿ ಟ್ಟೊೞಿಯುಮೆನ,
ಕ್ಕಾವಾಲಿ ತಿರುನ್ತೊಣ್ಡರ್ ತನಿನಿನ್ಱಾರ್ ; ವಿಟಕ್ಕಾಣಾರ್ ;
ಮೇವಾರ್ಪೋಲ್ ಕಙ್ಕುಲ್ವರ, 'ಮೆಯ್ಕ್ಕುಳಿರುಮ್ ವಿೞುತ್ತವರ್ಪಾ
ಲಾವಾವೆನ್ ಕುಱ್ಱೇವ ಲೞಿನ್ತವಾ!' ವೆನವಿೞುನ್ತಾರ್.

1191. ವಿೞುನ್ತಮೞೈ ಯೊೞಿಯಾತು, ಮೆಯ್ತ್ತವರ್ಚೊ ಲ್ಲಿಯವೆಲ್ಲೈ
ಕೞಿನ್ತತು ; ಮುನ್ ಪೊಲಿತ್ತುಮನೈ ಕ್ಕಾಯ್ಙ್ಙೇಙ್ಕ ವಱಿನ್ತಿಲೇನ್
ಚೆೞುನ್ತವರ್ತ ನ್ತಿರುಮೇನಿ ಕುಳಿರ್ಕಾಣ ನ್ತೀಙ್ಕಿೞೈತ್ತ
ತೊೞುಮ್ಪನೇ ಱ್ಕಿನಿಯಿತುವೇ ಚೆಯ' ಲೆನ್ಱು ತುಣಿನ್ತೞುವಾರ್ ;

1192. 'ಕನ್ತೈಪುೞೈ ತ್ತಿಟವೆೞ್ಙು ಙ್ಕುಱ್ಪಾಱೈ ಮಿಚೈತ್ತಲೈಯೈ
ಚ್ಚಿನ್ತವೆಟು ತ್ತೇಱ್ಱುವ' ನೆನ್ ಱಣೈನ್ತುಚೆೞುಮ್ ಪಾಱೈಮಿಚೈ
ತ್ತನ್ತಲೈಯೈ ಪ್ಪುಟೈತ್ತೞ್ಙ್ಙ, ವಪ್ಪಾಱೈ ತನ್ಮರುಙ್ಕು
ವನ್ತೆೞುನ್ತು ಪಿಟಿತ್ತತಣಿ ವಳೈತ್ತಮುಮ್ಪರ್ ಮಲರ್ಚ್ಚೆಙ್ಕೈ.

1193. ಬಾನಿನಿಂದ ಸುರಿಯುತ್ತಿದ್ದ ಜಡಿಮಳೆಯು ಮಲರಮಳೆಯಾಯಿತು. ಪಕ್ಕದಲ್ಲಿ ಮಧುರಸದಿಂದ ಕೂಡಿದ ಕರ್ಣಿಕಾರ ಮಲರಮಾಲೆಯನ್ನು ಮುಡಿಯಲ್ಲಿ ಧರಿಸಿದ ಶಿವಪರಮಾತ್ಮನು ತನ್ನ ವಾಹನವಾದ ವೃಷಭದ ಮೇಲೆ ಸತಿಯಾದ ಉಮಾ ಮಾತೆಯೊಡನೆ ಆಕಾಶದಲ್ಲಿ ದರ್ಶನವಿತ್ತನು. ನಿಜಭಕ್ತನು ತುಂಬಿದ ಸ್ನೇಹದಿಂದ ಮನಕರಗಿ ಕೈ ಎತ್ತಿ ನಮಸ್ಕರಿಸಿಕೊಂಡು ಪ್ರತ್ಯೇಕವಾಗಿ ನಿಂತನು.

1194. ಎದುರಿಗಿದ್ದ ಆತನನ್ನು ನೋಡಿ ಮುಕ್ಕಣ್ಣನಾದ ಏಕಾಂಬರನಾಥನು 'ನಿನ್ನ ಪ್ರೇಮದ ನೆಲೆಯನ್ನು ಮೂರು ಲೋಕಗಳೂ ತಿಳಿಯುವಂತೆ ಮಾಡಿದೆನು. ನೀನು ಇನ್ನು ಶಾಶ್ವತವಾಗಿ ನನ್ನ ಲೋಕದಲ್ಲಿ ಇರುವವನಾಗು' ಎಂದು ಅನುಗ್ರಹಿಸಿ ಅಲ್ಲಿಂದೆದ್ದು ಚೆಲುವಾದ ಏಕಾಂಬರದಲ್ಲಿ ಮರೆಯಾದನು (ಪ್ರತ್ಯಕ್ಷವಾದ ನೆಲೆಯಿಂದ ಎಲ್ಲೆಲ್ಲಿಯೂ ಹಬ್ಬಿದ ವ್ಯಾಪಕ ನೆಲೆಯಲ್ಲಿ ಮರೆಯಾದನು).

1195. ಹಿರಿಯ ನೆಲೆಯನ್ನು ಹೊಂದಿದ ತಿರುಕುರಿಪ್ಪು ತೊಂಡ ನಾಯನಾರನ ದಿವ್ಯಸೇವೆಯನ್ನು ಸ್ತುತಿಸಿ, ಲೋಕವಿಡೀ ತಿಳಿಯುವಂತೆ ತಂದೆಯ ಕಾಲುಗಳನ್ನು ತುಂಡರಿಸಿದ ಚಂಡೀಶ ನಾಯನಾರನ ಚರಿತೆಯನ್ನು ಹೇಳತೊಡಗುವೆನು. ಹಿರಿಯ ಭಕ್ತಿಯುಳ್ಳ ನಿಜಭಕ್ತನು ಪರಮಾತ್ಮನನ್ನು ಪಿತ್ತನ್ ಎಂದು ತಿಳಿಯದೆ ಹೇಳಿದುದ ರಿಂದ ಇದರ ನಿಜತತ್ವವನ್ನು ಸರಿಯಾಗಿ ತಿಳಿದು ಹೇಳಲು ಯಾರು ತಾನೇ ಶಕ್ತರು?

1193. ವಾನಿಡೈನ್ತು ಪುನಲ್ಮಟೈಪೋಯ್ ಮಲರ್ಮಟೈಯಾ ಯಿಟಮರುಙ್ಕು
ತೇನಿಡೈನ್ತ ಮಲರಿತಟಿ ತ್ತಿರುಮುಟಿಯಾರ್ ಪೊರುವಿಟೈಯಿನ್
ಮೇನಿಡೈನ್ತು ತುಣೈಯಿಯೊಟುಮ್ ವೆಳಿನಿನ್ಱಾರ್; ಮೆಯ್ತ್ತೊಣ್ಟರ್
ತಾನಿಡೈನ್ತು ವನ್ಪುರುಕ ಕೈತೊಟುತು ತನಿನಿನ್ಱಾರ್.

1194. ಮುನ್ನವರೈ ನೇರ್ನೋಕ್ಕಿ ಮುಕ್ಕಣ್ಣರ್ 'ಮೂವುಲಕು
ನಿನ್ನಿಲೈಮೈ ಯಱಿವಿತ್ತೋಮ್; ನೀಯುಮಿನಿ ನೀಟಿಯನಮ್
ಮನ್ನುಲಕು ಪಿರಿಯಾತು ವೈಕುವಾ' ಯೆನವರುಳಿ
ಯನ್ನಿಲೈಯೇ ಯೆಟುನ್ತರುಳಿ ಯಣಿಯೇಕಾ ಮ್ಪರಮಣೈನ್ತಾರ್.

1195. ಚೀರ್ನಿಲವು ತಿರುಕ್ಕುಱಿಪ್ಪು ತ್ತೊಣ್ಟರ್ತಿರು ತ್ತೊಟಿಲ್ಪೋಱ್ಱಿ
ಪ್ಪಾರ್ಕುಲವ ತ್ತನ್ತೈತಾ ಳಱವೆಱಿನ್ತಾರ್ ಪರಿಚುರೈಕ್ಕೇನ್;
ಪೇರರುಳಿನ್ ಮೆಯ್ತ್ತೊಣ್ಟರ್ 'ಪಿತ್ತ' ನೆನ ಪ್ಪಿತಱ್ಱುತಲಾ
ಲಾರುಲಕಿ ಲಿತನುಣ್ಮೈ ಯಱಿನ್ತುರೈಕ್ಕ ವಿಚೈನ್ತುಟುವಾರ್?

20. ಚಂಡೇಶುರ ನಾಯನಾರ

1196. ಸುಂದರವಾದ ಶೀತಲವಾದ ಕಾವೇರಿಯು ಯಾವಾಗಲೂ ಬತ್ತದೆ ನೀರಿನಿಂದ ತುಂಬಿ ಹರಿಯುವ ಸೌಭಾಗ್ಯಯುಕ್ತವಾದ ಚೋಳನಾಡಿನಲ್ಲಿ, ಪುಣ್ಯಪ್ರದವಾದ ಮಣ್ಣಿನದಿಯ ತೆಂಕು ದಡದಲ್ಲಿ, ಹಿಂದೆ ಕ್ರೌಂಚಮಲೆಯು ಸೀಳಾಗುವಂತೆ ಹೊಡೆದ ಕ್ರೂರಾದ ಶಕ್ತ್ಯಾಯುಧದ ಮಹಿಮೆಯನ್ನು ತೋರಿಸಿ, ಆಮೇಲೆ ದೇವತೆಗಳ ಕ್ರೂರ ವೈರಿಗಳಾದ ಶೂರರುಗಳು ಕ್ಷಯಿಸಲು, ಸುಬ್ರಹ್ಮಣ್ಯನ ಆಜ್ಞೆಯಿಂದ ಕಳುಹಿಸಲ್ಪಟ್ಟ ವೇದಿಯರುಗಳು ತುಂಬಿದ ಹಳೆಯ ಊರು ಶೈವಯುತವಾದ ಶೇಯ್‌ಞಲೂರು ಎಂಬುದು.

1197. ಶಿವಮಾರ್ಗಸಾಧನವಾದ ವಿಭೂತಿಧಾರಣೆಯಲ್ಲಿ ಒಂದುಪಟ್ಟವರಾಗಿ, (ದ್ವಿಜರೆನಿಸಿದುದರಿಂದ) ಎರಡು ಜನ್ಮದ ಮಹಿಮೆಯುಳ್ಳವರಾಗಿ, ಅಹವನೀಯವೇ ಮೊದಲಾದ ಮೂರು ಅಗ್ನಿಗಳನ್ನು ವರ್ಧಿಸುವ ಮಾರ್ಗದಲ್ಲಿ ನಿಂತವರಾಗಿ, ನಾಲ್ಕು ವೇದಗಳನ್ನೂ ವಿಧಾನಪೂರ್ವಕವಾಗಿ ಅಭ್ಯಾಸಮಾಡಿದವರಾಗಿ, ಐದು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡವರಾಗಿ, ಯಜನ, ಯಾಜನ ಮೊದಲಾದ ಆರು ಕರ್ಮಗಳನ್ನೂ ನಿರ್ವಹಿಸುವವರಾಗಿ, ಏಳು ಲೋಕಗಳೂ ಸ್ತುತಿಸತಕ್ಕವರಾಗಿರುವ ವೇದಿಯರುಗಳಿಂದ ಶೋಭಿಸುವುದು ಆ ಊರು.

---

20. ಚಣ್ಡೇಚುರ ನಾಯನಾರ್

1196. ಪೊನ್ತ್ರಣ್ ಪೊನ್ನಿ ಯೆನ್ತ್ತಾಳುಮ್ ಪೊಯ್ಯಾ ತಳಿಕ್ಕುಮ್ ಪುನನಾಟ್ಟು
ವಾಯ್‌ನ್ತ್ತ ಮಣ್ಣಿ ತ್ತೆನ್‌ಕರೈಯಿನ್ ಮನ್‌ನ, ಮುನ್ನಾಳ್, ವರೈಕಿಟಿಯ
ಏನ್ತು ಮಯಿಲ್‌ವೇ ನಿಲ್ಕೈಕಾಟ್ಟಿ, ಯಿಮೈಯೋ ರಿಕಲ್‌ವೆ ಪ್ಪಕೈಕಟಕ್ಕಞ್,
ಚೇನ್ತ್ತ ನಳಿತ್ತ ತಿರುಮಱೈಯೋರ್ ಮೂತೂರ್ ಚೆಲ್ವ ಚ್ಚೇಯ್‌ಞಲೂರ್.

1197. ಚೆಮ್ಮೈ ವೆಣ್ಣೀ ಱ್ಱೊರುಮೈಯಿನಾ; ರಿರಣ್ಡು ಪಿಱಪ್ಪಿನ್ ಚಿಱಪ್ಪಿನಾರ್;
ಮುಮ್ಮೈ ತ್ತಟಲೋಮ್ ಪಿಯನೆಱಿಯಾರ್; ನಾನ್‌ಕು ವೇತ
ಮುಱೈಪಯಿನ್‌ಱಾರ್
ತಮ್ಮೈ ಯ್ಯೆನ್ತು ಪುಲನುಮ್‌ಪಿನ್ ಚೆಲ್ಲು ನ್ತಕೈಯಾ; ರಱುತೊಟಿಲಿನ್
ಮೆಯ್‌ಮ್ಮೈ ಯೊಟುಕ್ಕ ಮೇಟುಲಕುಮ್ ಪೋಱ್ಱು ಮಱೈಯೋರ್
ವಿಳಙ್ಕುವತು.

1198. ದೋಷರಹಿತವಾದ ಜಿಂಕೆಯ ಚರ್ಮದಿಂದ ಕೂಡಿದ ಮೂರೆಳೆಯ ನೂಲನ್ನು ಧರಿಸಿದ ಎದೆಯನ್ನೂ ನಯವಾದ ಕೂದಲುಗಳಿಂದ ಕೂಡಿದ ಜುಟ್ಟನ್ನೂ ಉಳ್ಳ, ವೇದವನ್ನು ಓದುತ್ತಿರುವ ಕೂಟವಾಗಿ ಸೇರಿದ ಕಿರಿಯ ವಟುಗಳೂ, ಅವರಿಗೆ ವೇದವನ್ನು ದಯಪಾಲಿಸುವ ಹಿರಿಮೆಯುಳ್ಳ ಆಚಾರ್ಯನೂ ರಾತ್ರಿಯ ಹೊತ್ತಿನಲ್ಲಿ ಪ್ರಕಾಶಿಸುವ ತಾರಕೆಗಳನ್ನೂ ಚಂದ್ರನನ್ನೂ ಹೋಲುವರು. ಆಚಾರ್ಯ ಮಠಗಳಲ್ಲಿ ಆ ಗುರುಶಿಷ್ಯರ ಮೇಲ್ಭಾಗದಲ್ಲಿ ಶಬ್ದಿಸುವ ಮುಗಿಲುಗಳು ಒಂದು ಬದಿಗೆ ಚದರುವಂತೆ ವೇದಘೋಷಗಳು ಮೊಳಗುವುವು.

1199. ಯಾಗಗಳು ನಡೆಯಲ್ಪಡುವ ಶಾಲೆಗಳಲ್ಲೆಲ್ಲಾ ವೇದಿಯರು ಕೊಡುವ ಹವಿರ್ಭಾಗಗಳನ್ನು ಉಣ್ಣಲು ಬರುವ ವಿಷ್ಣುವೂ ಬ್ರಹ್ಮನೂ ಏರಿಬರುವ ಹರಡಿದ ರೆಕ್ಕೆಗಳನ್ನುಳ್ಳ (ಗರುಡನೂ ಹಂಸವೂ ಆದ) ಪಕ್ಷಿಗಳು ಆಕಾಶದಿಂದ ಬಂದು ತಂಗುವುದಕ್ಕೆ ತಕ್ಕುದಾದ ಸ್ಥಳದಂತೆಯೂ, (ಹಾಗೆಯೇ ಬರುವ) ದೇವೇಂದ್ರನ ವಾಹನವಾದ ಐರಾವತವೆಂಬ ಆನೆಯನ್ನು ಕಟ್ಟತಕ್ಕ ಆಲಾನಸ್ತಂಭದಂತೆಯೂ, ನಾಟಲ್ಪಟ್ಟ ಯೂಪಸ್ತಂಭಗಳ ಕೂಟವು ಅಲ್ಲಿದೆ.

1200. ಹೋಮಗಳಿಗೆ (ಪಂಚಗವ್ಯಕ್ಕಾಗಿ) ಸಾಕಲ್ಪಡುವ ಪಶುಗಳು ಇನಿದಾದ ಹಾಲನ್ನು ಸುರಿಸುತ್ತಾ ಯಾವಾಗಲೂ ಅಲ್ಲಿ ಸಂಚರಿಸುವುವು. ತಾವು ಅಭ್ಯಸಿಸಿದ ವೇದ ಶಾಖೆಗಳನ್ನು ದೃಢಮಾಡಿಕೊಳ್ಳುತ್ತಾ ವಟುಗಳು ಹೋಮಕ್ಕೆ ಬೇಕಾದ ಸಮಿಧೆಗಳನ್ನು ಕೊಂಡು ಬರುವರು. ಹೂಗಳು ತುಂಬಿದ ತಟಾಕಗಳಲ್ಲಿ ಮುಳುಗಿ ಮಿಂದು ವೇದಿಯರ ಹೆಂಗಸರು ಒಳಗೆ ಬರುವರು. ಈ ರೀತಿಯಲ್ಲಿ ಶೋಭಿಸುತ್ತಿರುವ ನಿಡಿದಾದ ಬೀದಿಗಳು ಹಲವು ಆ ನಗರದಲ್ಲಿವೆ.

1198. ಕೋತಿನ್ ಮಾನ್ಱೋಱ್ ಪುರಿಮುನ್ನೂಲ್ ಕುಲವುಮಾರ್ಪಿಱ್
ಕುೞೈಕ್ಕಟ್ಟುವಿ
ಯೋತು ಕಿಟ್ಟೈಚೂೞ್ ಚಿಱುವರ್ಕಳು ಮುತವುಮ್ ಪೆರುಮ್ಮೈ
ಯಾಚಾನುಮ್
ಪೋತಿನ್ ವಿಳಙ್ಕು ನ್ನಾತ್ತರಕ್ಕೈಯು ಮತಿಯುಮ್ ಪೋಲ ಪ್ಪುಣರ್ ಮಟಙ್ಕಳ್
ಮೀತು ಮುಟಙ್ಕು ಮುಕಿಲೊತುಙ್ಕ ವೇತ ವೊಲಿಕಳ್ ಮುಟಙ್ಕುವನ.

1199. ಯಾಕ ನಿಲವುಙ್ ಚಾಲೈತೊೞು ಮಱೈಯೋ ರೀನ್ತ ವವಿಯುಣವಿನ್
ಪಾಕನುಕರ ವರುಮಾಲು ಮಯನು ಮೂರುಮ್ ಪಟರ್ಚಿಱೈ ಪ್ಪುಳ್
ಮಾಕ ಮಿಕನ್ತು ವನ್ತಿರುಕ್ಕುಙ್ ಚೇಕ್ಕೈ ಯೆನವುಮ್, ವಾನವರ್ಕೋ
ನಾಕ ಮಣೈಯು ಙ್ಕನ್ತೆನವು ನಾಟ್ಟುಮ್ ಯೂಪ ಮೀಟ್ಟಮುಳ.

1200. ತೀಮ್ಪಾ ಲೊೞುಕ ಪ್ಪೊೞುತುತೊೞು ವೋಮ ತೇನು ಚ್ಚೆಲ್ವನವುನ್,
ತಾಮ್ಪಾ ಟಿಯಚಾ ಮಙ್ಕಣಿಪ್ಪೋರ್ ಚಮಿತ್ತೈ ಯಿಟಕ್ಕೊ ಣ್ಟಣೈವನವುಮ್,
ಪೂಮ್ಪಾ ಚಟೈನೀರ್ ತ್ತಟಮೂೞ್ಕಿ ಮಱೈಯೋರ್ ಮಕಳಿರ್ ಪುಕುವನವು
ಮಾಮ್ಪಾನ್ ಮೈಯಿನಿಲ್ ವಿಳಙ್ಕುವನ ವಣಿನೀಳ್ ಮಱುಕು ಪಲವುಮುಳ.

1201. ಆ ಸುಂದರವಾದ ನಗರದ ಪಕ್ಕದಲ್ಲಿ ಮಣ್ಣಿನದಿಯ ಅಲೆಗಳು ಮುತ್ತು ಗಳನ್ನು ಸುರಿಸುವ ತೀರಗಳ ಪಕ್ಕಗಳಲ್ಲಿ ವಿಶಾಲವಾದ ಯಾಗಶಾಲೆಗಳು ವ್ಯವಸ್ಥಿತ ವಾಗಿವೆ. ಅವುಗಳನ್ನು ಸುತ್ತುವರಿದ ಹೊರಭಾಗಗಳಲ್ಲಿ, ಅಲ್ಲಿ ತೊಡಗಿದ ಯಾಗವಿಧಿ ಯನ್ನು ಮುಗಿಸಿ ಹೋಗುವ ಯಾಗ ಮುಖಂಡರುಗಳ (ದೇವತೆಗಳ) ದೊಡ್ಡ ರಥಗಳೂ, ಆ ವಿಧಿಗಳಲ್ಲಿ ಬಂದು ಹವಿರ್ಭಾಗಗಳನ್ನುಂಡು ಹೋಗುವ ದೇವತೆಗಳು ಏರಿಹೋಗುವ ವಿಮಾನಗಳೂ ದಟ್ಟವಾಗಿವೆ.

1202. ಕಾಲುವೆಗಳ ಬದಿಗಳಲ್ಲಿ ಕೆನ್ನೈದಿಲೆಗಳೂ, ನೀರಿನಿಂದ ಸುತ್ತುವರಿದ ಫಲವತ್ತಾದ ಗದ್ದೆಗಳಲ್ಲಿ ಕೆಂಪುನೆಲ್ಲಿನ ತೆನೆಗಳ ಕಟ್ಟುಗಳೂ, ಪಕ್ಕದಲ್ಲಿ ತುಂಬಿಗಳು ಮುಸುರುವ ಕವುಂಗಿನಲ್ಲಿ ಹೂಬಿಟ್ಟು, ಜಲಸಮೃದ್ಧಿಯಿಂದ ಹೆಚ್ಚಾದ ಕವುಂಗಿನ ಹೂವಿನ ಹಾಳೆಗಳೂ, ಎಲೆಗಳಿಂದ ತುಂಬಿದ ತಾವರೆಕೊಳದ ನಿಡಿದಾದ ಹೂಗಳಲ್ಲಿ ನಿದ್ರಿಸುವ ಕಯಲ್ ಮೀನುಗಳೂ, ನಡೆಯುವ ದಾರಿಯಲ್ಲಿ ಮೇಲುಹಂದರದಂತೆ ಹಬ್ಬಿದ ಮೃದುವಾದ ಮುಲ್ಲೆಯ ಬಳ್ಳಿಗಳೂ, ಮೊಗ್ಗುಗಳಿಂದ ಶೋಭಿಸುವ ಗೆಲ್ಲುಗಳುಳ್ಳ ಕಾಂಚಿಮರಗಳೂ ಅಲ್ಲಿವೆ.

1203. ಆ ಊರಾದುದು ಚೋಳವಂಶದಲ್ಲಿ ಅಭಯನ್ ಎಂಬ ಕುಲೋತ್ತುಂಗ ಚೋಳನೆಂಬ ಹೆಸರುಳ್ಳವನಾಗಿ ತಿಲ್ಲೆಯ (ಚಿದಂಬರದ) ಎಲ್ಲೆಯಲ್ಲಿರುವ ಹಲಭಾಗಗಳನ್ನು ಸ್ವರ್ಣಮಯವಾಗಿ ಹೊದೆಸಿದ ಚೋಳರಲ್ಲಿ ರಣವೀರರಾಗಿ ಖ್ಯಾತಿಹೊಂದಿದ ಅನಪಾಯ ಚೋಳನು ಅವತರಿಸಿದ ಪುರಾತನವಾದ ವಂಶದಲ್ಲಿ ಕಿರೀಟಧಾರಣೆಮಾಡಿಸಿಕೊಳ್ಳುವ ಕಾವಿರಿಪೂಂಪಟ್ಟಿನಂ, ತಿರುವಾರೂರು, ಉಱೈಯೂರು, ಶೇಯ್ಞಲೂರು, ಕರುವೂರು ಎಂಬ ಐದು ನಗರಗಳಲ್ಲಿ ಒಂದಾಗಿ ಶೋಭಿಸುವುದು.

1201. ವಾಱ್ಪೊಱಿ ಪತಿಮ ಞ್ಞತನ್ಮರುಙ್ಕುಮಣ್ಣಿ ತ್ತಿರೈಕಳ್ ವಯುಲ್ವರಪ್ಪಿನ್
ಱಾಟ್ಟಿ ಞ್ಞರಳ ಇಱ್ಱರಿಕ್ಕಲೈಪ್ಪಾಱ್ ಚಮೈತ್ತ ಯಾಕ ತ್ತಟಙ್ಕಾಲೈ
ಚೂೞ್ವೈ ಪ್ಪಿಟಙ್ಕ ಣೆರುಙ್ಕಿಯುಳ ತೊಟಙ್ಕ ಚಟಙ್ಕ ಮುಟಿತ್ತೇಱುವಾ್
ವೇಳ್ವಿ ತ್ತಲೈವರ್ ಪೆರುನ್ತೇರ್ಕಳ್ ವಿಣ್ಣೋ ರೇಱುಮ್ ವಿಮಾನಙ್ಕಳ್.

1202. ಮಟ್ಟೈಯಿಱ್ ಕಟುನೀರ್ ಚೆಟುನೀರ್ಚೂೞ್ ವಯಲಿಱ್ಚಾಲಿ
ಕ್ಕತಿರ್ಕ್ಕಱೈ
ಪುಟ್ಟೈಯಿಱ್ ಚುರುಮ್ಪು ಮಿಟೈಕಮುಕು ಪುನಲಿಱ್ ಪರಮ್ಪು ಪೂಮ್ಪಾಳೈ
ಯಟ್ಟೈಯಿಱ್ ಪಯಿಲು ನ್ತಾಮರೈನೀ ಳಲರಿ ಱ್ಱುಯಿಲು ಙ್ಕಮಲ್ ಕಳ್ವಟಿ
ನಟ್ಟೈಯಿಱ್ ಪಟರ್ಮೆನ್ ಕೊಟಿಮೌಳವ ನನ್ನೈಯಿ ಱ್ಕಟುಙ್ ಚಿನೈಕ್ಕಾಞ್ಚಿ,

1203. ಚೆನ್ನಿ, ಯಪಯನ್, ಕುಲೋತ್ತುಙ್ಕ ಚೋೞನ್, ಱಿಲ್ಲೈ, ತ್ತಿರುವೆಲ್ಲೈ
ಪೊನ್ನಿನ್ ಮಯಮಾ ಕ್ಕಿಯವಳವರ್ ಪೋರೇ, ಱಿನ್ಱುಮ್ ಪುಲಿಕಾಕ್ಕು
ಮನ್ನರ್ ಪೆರುಮಾ, ನನಪಾಯನ್ ವರುನ್ತೊನ್ ಮರಪಿನ್ ಮುಟಿಚೂಟ್ಟು
ನ್ತನ್ಮೈ ನಿಲವು ಪತಿಯೈನ್ತಿ ನೊನ್ಱಾಯ್ ವಿಳಙ್ಕು ನ್ತಕೈತ್ತವ್ವೂರ್.

1204. ತವಿಳಿನ ಪಣ್‌ಗೀತಕ್ಕೆ ಫಲವಾದ ಒಳ್ಳೆಯ ಮಾಧುರ್ಯವನ್ನು, ಹಾಲಿಗೆ ಫಲವಾದ ಇನಿದಾದ ರುಚಿಯನ್ನು, ಕಣ್ ಪಡೆದುದಕ್ಕೆ ಫಲವಾದ ಹಿರಿಯ ಕಾಂತಿಯನ್ನು, ಅರ್ಥಕ್ಕೆ ಶ್ರೇಷ್ಠಫಲವಾದ ಪಂಚಾಕ್ಷರಗಳನ್ನು, ಆಕಾಶಕ್ಕೆ ಫಲವಾದ ಸುರಿಯುವ ಮಳೆಯನ್ನು, ವೇದಕ್ಕೆ ಫಲವಾದ ಶೈವವನ್ನು ಹೋಲುವಂತೆ ಭೂಲೋಕಕ್ಕೆ ಫಲವಾಗಿರುವ ಆ ನಗರದ ಸೌಭಾಗ್ಯದ ಹಿರಿಮೆಯು ಅಳತೆಗೆ ಸಿಕ್ಕೀತೇ?

1205. ಹಿರಿಮೆಯಿಂದ ಶೋಭಿಸುವ ಆ ನಗರದ ಬ್ರಾಹ್ಮಣರಲ್ಲಿ ಶ್ರೇಷ್ಠವಾದ ಗೃಹಸ್ಥಜೀವನಕ್ಕೆ ಬೇಕಾದ ಧರ್ಮಗಳಲ್ಲಿ ನೆಲಸಿದ, ಕಾಶ್ಯಪ ಗೋತ್ರದಲ್ಲಿ ಪ್ರಧಾನವಾದ ಕುಟುಂಬದಲ್ಲಿ, ಶ್ರೇಷ್ಠವಾದ ರತ್ನವನ್ನು ಕೊಟ್ಟು ನಂಜನ್ನೂ ಕೊಡುವ ಹಾವಿನಂತೆ, ಪಾಪಪುಣ್ಯಗಳೆಂಬ ಎರಡು ಕರ್ಮಗಳನ್ನೂ ಮಾಡಲು ರೂಪತಾಳಿಬಂದವನಾದ ಎಚ್ಚತತ್ತನ್ ಎಂಬವನೊಬ್ಬನು ಇರುತ್ತಿದ್ದನು.

1206. ಆ ವೇದಿಯನ ಪತ್ನಿಯು, ಅವನಂತೆಯೇ ಕುಲೀನ ವಂಶದಲ್ಲಿ ಜನಿಸಿದವಳು. ನಂಟರಿಷ್ಟರ ಕೂಡುವಿಕೆಯನ್ನಪೇಕ್ಷಿಸುವ ಗೃಹಸ್ಥಧರ್ಮವನ್ನು ನಡೆಸುವ ಪ್ರವೃತ್ತಿಯುಳ್ಳವಳು. ಲೋಕದಲ್ಲಿ ಸಹಾಯವಾಗಿರುವ ಪುತ್ರಸಂಪತ್ತನ್ನು ಪಡೆದು ಅದಕ್ಕಾಗಿ ಬೇಕಾದ ತಪವನ್ನು ಹಿಂದೆಯೇ ಮಾಡಿದವಳು. ಪ್ರತಿಯೊಬ್ಬರೂ ಪುತ್ರರಿಂದ ಪಡೆಯುವ ಭಾಗ್ಯಕ್ಕೆಲ್ಲಾ ಎಲ್ಲೆಯಾಗಿರುವ ಫಲವನ್ನು ಪಡೆಯುವವಳು. ಲೋಕದ ತೊಡರುಗಳನ್ನೆಲ್ಲಾ ತುಂಡರಿಸಲು ಸಹಾಯಕವಾದ ಶಿವಾನುಭವವು ಬರುವುದಕ್ಕೆ ಅನುಕೂಲವಾದ ಗುಣವುಳ್ಳವಳು. ಅವಳು ಪವಿತ್ತಿರೈ ಎಂಬ ಹೆಸರುಳ್ಳವಳು.

1204. ಪಣ್ಣಿನ್ ಪಯನಾ ನಲ್ಲಿಚ್ಚೈಯುಮ್ ಪಾಲಿನ್ ಪಯನಾ ವಿನ್‌ಚುವೈಯುಙ್
ಕಣ್ಣಿನ್ ಪಯನಾಮ್ ಪೆರುಕೊಳಿಯು ಙ್ಕರುತ್ತಿನ್ ಪಯನಾ
ಮೆಟುತ್ತಙ್ಚುಮ್
ವಿಣ್ಣಿನ್ ಪಯನಾಮ್ ಪೊಟಿಮುಟಿೈಯುಮ್ ವೇತಪ್ಪಯನಾಙ್
ಚೈನ ಮುಮ್‌ಪೋಲ್
ಮಣ್ಣಿನ್ ಪಯನಾ ಮಪ್ಪತಿಯಿನ್ ವಳತ್ತಿನ್‌ಪೆರುಮೈ ವರಮ್ಪುಟೈತ್ತೋ.

1205. ಪೆರುಮೈ ಪಿಱಙ್ಕು ಮಪ್ಪತಿಯಿನ್ ಮಱೈಯೋರ್ ತಮ್ಮುಟ್
ಪೆರುಮನೈವಾಟ್
ತರುಮ ನಿಲವು ಕಾಚಿಪಕೋ ತ್ತಿರತ್ತು ತ್ತಲೈಮೈ ಚಾನ್‌ಮರಪಿ
ಲರುಮೈ ಮಣಿಯು ಮಳಿತ್ತತುವೇ ನಞ್ಚು ಮಳಿಕ್ಕು ಮರವುಪೋ
ಲಿರುಮೈ ವಿನೈಕ್ಕು ಮೊರುವಟಿವಾ ಮೆಚ್ಚ ತತ್ತ ನುಳನಾನಾನ್.

1206. ಮಱ್ಱೈ ಮಱೈಯೋನ್ ಱಿರುಮನೈವಿ ವಾಯ್‌ನ್ತ ಮರಪಿನ್
ವನ್ತುತಿತ್ತಾನ್;
ಚುಱ್ಱಮ್ ವಿರುಮ್ಪು ಮಿಲ್ಲಾಟ್‌ಕೈ ತ್ತೊಟಿಲಾ ಳುಲಕಿ ಱ್ಣೈಪ್ಪು ತಲ್ವರ್
ಪೆಱ್ಱು ವಿಳಙ್ಕು ನ್ತವಙ್ಚೆಯ್ತಾಳ್; ಪೆಱುಮ್ಪೇ ಱಿಲ್ಲೈ ಪ್ಪಯನ್
ಪೆಱುವಾಟ್;
ಪಱ್ಱೈ ಯೆಱಿಯುಮ್ ಪಱ್ಱುವರ ಚ್ಚಾರ್‌ಪಾ ಯುಳ್ಳ ಪವಿತ್ತಿರೈ ಯಾಮ್.

1207. ಹಿತವನ್ನು ಮಾಡುವ ಅವಳಿಡೆಯಲ್ಲಿ, ಹಿತವನ್ನು ತರುವ ವೇದ ನೀತಿಗಳು ಪ್ರಕಾಶಕ್ಕೆ ಬರಲೂ, ವೇದಿಯರ ಕುಲವು ಎಂದೆಂದಿಗೂ ಅಭಿವೃದ್ಧಿಯನ್ನು ಹೊಂದಲೂ, ಏಳು ಲೋಕಗಳೂ ಮೇಲ್ಮೆಯನ್ನು ಹೊಂದಲೂ, ಚಿದಂಬರದಲ್ಲಿ ದಿವ್ಯ ನಟನವನ್ನು ಮಾಡಿದ ಶಿವಪರಮಾತ್ಮನ ಶೈವಪೂಜಾನಿಯಮವು ನೆಲೆಪಡಲೂ, ಮಹಾ ತಪಸ್ವಿಗಳ ವಿಜಯವು ಶೋಭಿಸಲೂ, ವಿಚಾರಶರ್ಮನು ಬಂದು ಅವತರಿಸಿ ಅನುಗ್ರಹಿಸಿದನು.

1208. ಅವನಿಗೆ ಐದು ವರ್ಷಗಳು ತುಂಬಲು, ಅರಂಗಗಳಿಂದ ಕೂಡಿದ ಛಂದಸ್ಸುಗಳಿರುವ ವೇದಗಳು ಬಂದು ಸೇರಲು, ಮೊದಲಿಗನಾದ ಶಿವಪರಮಾತ್ಮನು ಹಿಂದೆಯೇ ಉಪದೇಶಿಸಿ ಅನುಗ್ರಹಿಸಿದ ಶಿವಾಗಮಗಳನ್ನು ಈ ಮೊದಲೇ ತಿಳಿದುದರಿಂದ ಮೊಗ್ಗಾಗಿ ಅರಳುವ ಹೂವಿನಲ್ಲಿ ಹೊರಬರುವ ಸುಗಂಧದಂತೆ ಚಿಂತನೆಯು ಅರಳಲು ಅದರೊಡನೆ ಅರಳುವ ಪಕ್ವವಾದ ಪ್ರಯತ್ನವೂ ಸಾರ್ಥಕವಾಯಿತು.

1209. ಏಳು ವರ್ಷಗಳು ತುಂಬಲು ಶ್ಲಾಘನಾರ್ಹವಾದ ಉಪನಯನವೆಂಬ ಪವಿತ್ರವಿಧಿಯನ್ನು ಮುಗಿಸಿದ ಮೇಲೆ, ನಿಂದಾರ್ಹವಲ್ಲದ ಎಲ್ಲಾ ವಿದ್ಯೆಗಳೂ ಅವನನ್ನು ಸೇರಿದ್ದರೂ, ಹೆತ್ತವರು ತಮ್ಮ ವಿಶದವಾದ ವಂಶಕ್ರಮದಂತೆ ಅವನಿಗೆ ವೇದವನ್ನು ಕಲಿಸುವ ಕಾರ್ಯವನ್ನು ನೆರವೇರಿಸಿದರು.

1207. ನನ್ಱಿ ಪುರಿಯುಂ ಮವರ್ತಮ್ಪಾ, ನನ್ಮೈ ಮಱೈಯಿನ್ ಱುಱೈವಿಳಙ್ಗ,
ಎನ್ಱು ಮಱೈಯೋರ್ ಕುಲಮ್ಪೆರುಕ, ವೇಟು ಪುವನ ಙ್ಗಳು ಮುಯ್ಯ,
ಮನ್ಱಿ ನಟಇಂಜ್ಚೆಯಪ್ ಪವರ್ಚೈವ ವಾಯ್ಮೈ ವಳರ, ಮಾತವ ತ್ತೋರ್
ವೆನ್ಱಿ ವಿಳಙ್ಗ, ವನ್ತುತಯ ಇಚ್ಚಿಯಾರ್ ವಿಚಾರ ಚರುಮನಾರ್.

1208. ಐನ್ತು ವರುಟ ಮವರ್ಕ್ಕಣೈಯ ವಙ್ಗ ಮಾಱು ಮುಟನಿಱೈನ್ತ
ಚನ್ತ ಮಱೈಕ ಳುಟ್ಪಟಮುನ್ ಱಲೈವರ್ ಮೊೞಿನ್ತ ವಾಕಮಙ್ಗಳ್
ಮುನ್ತೈ ಯಱಿವಿನ್ ಱೊಟರ್ಚ್ಚಿಯಿನಾನ್ ಮುಕೈತ್ತ ಮಲರಿನ್ ವಾಚಮ್ ಪೋಲ್
ಚಿನ್ತೈ ಮಲರ ವುಟನ್ಮಲರು ಇಚ್ಚೆವ್ವಿ ಯುಣರ್ವು ಚಿಱನ್ತತಾಲ್.

1209. ನಿಕಟು ಮುಱೈಮೈ ಯಾಣ್ಟೇಟು ನಿರಮ್ಪವ್ ಪರುವಮ್ ವನ್ತೆಯ್ತ
ಪ್ಪುಕಟುಮ್ ಪೆರುಮೈ ಯುಪನಯನ ಪ್ಪೊರುವಿಲ್ ಚಟಙ್ಗು ಮುಟಿತ್ತಱಿವಿ
ನಿಕಳು ನೆಱಿಯು ವಲ್ಲಾತ ವೆಲ್ಲಾ ಮಿಯೈನ್ತ ವೆನಿನುನ್ತ
ನ್ತಿಕಟು ಮರಪಿ ನೋತುವಿಕ್ಕು ಇಚ್ಚಿಯ್ಕೈ ಪಯನ್ತಾರ್ ಚೆಯ್ವಿತ್ತಾರ್.

1210. ಜ್ಞಾನವು ಪ್ರಕಾಶಿಸಲು ಕಾರಣವಾದ ವೇದಗಳನ್ನೂ ಅವುಗಳನ್ನೊಳ ಕೊಂಡ ಹಲ ಕಲೆಗಳನ್ನೂ .ಗುರುವು ಹೇಳಿಕೊಡುವ ಮೊದಲೇ ತನ್ನ ಮನಸ್ಸಿನಲ್ಲಿ ನೆಲೆಯಾಗಿಸಿಕೊಳ್ಳುವ ಜ್ಞಾನಸಾಮರ್ಥ್ಯವನ್ನು ನೋಡಿ, ಬೋಧಿಸುವ ಗುರುವು ಸಂತೋಷಗೊಂಡನು. ಅಸಂಖ್ಯಾತ ಕಲೆಗಳಿಂದ ಉದ್ದೇಶಿಸಲ್ಪಡುವ ವಸ್ತುಗಳಿಗೆಲ್ಲಾ ಎಲ್ಲೆಯಾಗಿರುವ ವಸ್ತು, ಅನುಗ್ರಹನಟನ ಮಾಡಿದ ಶ್ರೀಪಾದವೇ ಎಂದು ನಿಶ್ಚಯ ಮಾಡಿಕೊಂಡ ತನ್ನ ಚಿಂತನೆಯಿಂದಾಗಿ ಆ ಕಿರಿಯ ಉತ್ತಮ ಭಕ್ತನು ಅತಿಶಯಿಸಿದನು.

1211. 'ಅನುಗ್ರಹನಟನವನ್ನು ಮಾಡುವ ದಿವ್ಯಪಾದಗಳನ್ನುಳ್ಳವನು ನನ್ನ ಒಡೆಯನು' ಎಂಬ ಸತ್ಯವನ್ನು ಸದಾ ಎಣಿಸುತ್ತಾ ಒಡನೆಯೇ ಉದಯವಾದ ಜ್ಞಾನದಲ್ಲಿ ಸ್ಥಿರವಾಗಿದ್ದು ಹೆಚ್ಚುವ ಸ್ನೇಹದ ಮೂಲಕ ಸ್ವಭಾವಸಹಜ ಕರ್ತವ್ಯದಲ್ಲಿ ಪ್ರವೃತ್ತಿ ಮಾಡಿಸುವ ಭಕ್ತಿಭಾವನೆಯು ಸ್ಥಿರವಾಗಿರುವಂತಹ ಸೌಭಾಗ್ಯವು ಈ ರೀತಿ ಪ್ರಕಾಶಿಸುತ್ತಿರುವ ದಿನಗಳಲ್ಲಿ ಒಂದು ದಿನ,

1212. ಓದುವ ವಟುಗಳ ಕೂಟದೊಡನೆ ಹೋಗುತ್ತಿರುವವನು, ಊರವರ ಗೋವುಗಳ ಸಾಲಿನೊಡನೆ ಹೋಗುತ್ತಿರುವಾಗ, ಅವುಗಳಲ್ಲಿ ಬಸುರಿಯಾದ ಒಂದು ಹಸು ತನ್ನನ್ನು ಮೇಯಿಸುವವನನ್ನು ಕೊಂಬುಗಳಿಂದ ಹಾಯಲಿಕ್ಕಾಗಿ ಬರಲು, ಆತನು ಸ್ವಲ್ಪವೂ ಸಂಕೋಚವಿಲ್ಲದೆ ಒಂದು ಕೋಲನ್ನೆತ್ತಿ ಅದನ್ನು ಹೊಡೆದನು. ಇದನ್ನು ನೋಡಿ ಬಹುವಾದ ವಾತ್ಸಲ್ಯದಿಂದ ಅಲ್ಲಿಗೆ ಓಡಿ, ಅವನ ಮೇಲೆ ಕೋಪಿಸಿ, ಆತನ ಆ ಕಾರ್ಯವನ್ನು ನಿವಾರಿಸಿ ತತ್ವವನ್ನು ಆತನಿಗೆ ವಿಚಾರಶರ್ಮನು ತಿಳಿಯಪಡಿಸಿದನು.

1210. ಕುಲವು ಮಱೈಯುಮ್ ಪಲಕಲೈಯು ಉಳ್ಳೊಳುತ್ತು ವತನ್ಮುನ್
ಕೊಣ್ಟಮೈನ್ತು
ನಿಲವು ಮುಣರ್ವಿನ್ ಱಿಱಮ್ಕಣ್ಡು ನಿಱುವು ಮಱೈಯೋ ರತಿಚಯತ್ತಾರ್;
'ಅಲಕಿಲ್ ಕಲೈಯಿನ್ ಪೊರುಟ್ಕೆಲ್ಲೈ ಯಾಟು ಙ್ಕಟಲೇ' ಯೆನ ಕ್ಕೊಣ್ಡು
ಚೆಲವು ಮಿಕುನ್ತ ಚಿನ್ತೈಯಿನಿ ಱ್ತಿಳಿನ್ತಾರ್ ಚೆಱಿಯ ಪೆರುನ್ತಕೈಯಾರ್.

1211. ನಟಮೋ ಪುರಿಯು ಇಚ್ಚೇವಟಿಯಾರ್ ನಮ್ಮೈ ಯುಟೈಯಾ' ರೆನು
ಮೆಯ್ಮ್ಮೈ
ಯುಟನೇ ತೋನ್ಱು ಮುಣರ್ವಿನ್ಕ ಣೊಟಿಯಾ ತೂಱುಮ್
ವಟಿಯನ್ಪಿನ್
ಕಟನೇ ಯಿಯಲ್ಪಾಯ್ ಮುಯಱ್ಚಿವರು ಙ್ಕಾತನ್ ಮೇನ್ಮೇ
ಲೆಟುಙ್ಕರುತ್ತಿನ್
ಱಿಟನೇರ್ ನಿಱ್ಕ ಇಚ್ಚೆಮ್ಮಲಾರ್ ತಿಕಟುನಾಳಿ ಲಾಙ್ಕೊರುನಾಳ್,

1212. ಓತು ಕಿಟೈಯಿ ನುಟನ್ಪೋವಾ, ರೂರಾ ನಿರೈಯಿ ನುಟನ್ಪುಕ್ಕ
ಪೋತು, ಮುಱ್ಱ ಙ್ಕೊರುಪುನಿಱ್ಱಾ ಪೋಱ್ಱು ಮವನ್ಮೇನ್ ಮರುಪ್ಪೋಚ್ಚ,
ಯಾತು ಮೊನ್ಱು ಙ್ಕೂಚಾತೇ ಯೆಟುತ್ತ ಕೋಲ್ಕೊ ಣ್ಟವನ್ ಪುಟೈಪ್ಪ,
ವಿಾತು ಚೆನ್ಱು ಮಿಕುಮ್ಪರಿವಾಲ್ ವೆಕುಣ್ಟು, ವಿಲಕ್ಕಿ, ಮೆಯ್ಯುಣರ್ನ್ತು,

1213. ಈ ಲೋಕದಲ್ಲಿ ವಿಪುಲವಾದ ವಿದ್ಯೆಗಳು, ಆಗಮಗ್ರಂಥ ಸಮೂಹಗಳು, ನಿಜವಾದ ಭಕ್ತಿಯ ಹಿರಿಮೆಯನ್ನು ಹೊಂದಿದ ವೇದಗಳು – ಇವುಗಳ ಮೂಲಕವಾಗಿ, ಶೋಭಿಸುವ ಈ ಲೋಕದಲ್ಲಿ, ಎಲ್ಲವನ್ನೂ ಸ್ಪಷ್ಟವಾಗಿ ತಿಳಿದ ಮನಸ್ಸಿನಿಂದ, ಪಶುಗಳ ಮಹಿಮೆಯನ್ನು ಯಥಾವತ್ತಾಗಿ ತಿಳಿದ ವಿಚಾರಶರ್ಮನು ಆ ಗೋವಳನಿಗೆ ಈ ರೀತಿ ತಿಳಿಯಪಡಿಸಿದನು.

1214. ಎಲ್ಲಾ ಯೋನಿಗಳಲ್ಲಿಯೂ ಮೇಲಾದುದು ಗೋವುಗಳ ಜಾತಿ. ಎಲ್ಲಾ ಪುನೀತವಾದ ತೀರ್ಥಗಳೂ ಗೋವುಗಳಲ್ಲಿ ಸೇರಿವೆ. ಹಿರಿಮೆಯುಳ್ಳ ದೇವತೆಗಳೂ ಮುನಿಗಳ ವೃಂದವೂ ಗೋವಿನ ಎಲ್ಲಾ ಅಂಗಗಳಲ್ಲಿಯೂ ಯಾವಾಗಲೂ ಇರುವರಲ್ಲವೇ?

1215. ಗೋವಿನ ಹಿರಿಮೆಯು ಹೀಗಿದೆ. ಕರುವನ್ನು ಹಾಕಿದ ಆ ದಿವಸಕ್ಕೇ, ಚಿದಂಬರದಲ್ಲಿ ನಟನಮಾಡುವ ಶಿವಪರಮಾತ್ಮನಿಗೆ, ವೃದ್ಧಿಹೊಂದುವ ಬಾಲಚಂದ್ರ, ಗಂಗೆ, ಬೆಳ್ಳಿಯ ನರುವಲ್ಲಿ ಮಾಲೆ – ಇವುಗಳಿಂದ ಕೂಡಿದ ಜಡೆಯ ತಿರುಮುಡಿಯ ಮೇಲೆ, ಆತನಿಗೆ ಪ್ರಿಯವೂ ಪರಿಶುದ್ಧವೂ ಆದ ತಿರುಮಜ್ಜನಕ್ಕೆ ಬೇಕಾದ (ತುಪ್ಪ, ಹಾಲು, ಮೊಸರು, ಗೋಮಯ, ಗೋಮೂತ್ರಗಳೆಂಬ) ಪಶುಸಂಬಂಧವಾದ ಐದು ದ್ರವ್ಯಗಳನ್ನೂ ಆ ಗೋವುಗಳೇ ಕೊಡುವುವು.

1213. ಪಾವು ಜ್ಕಲೈಕ ಳಾಕಮನೂಟಿಲ್ ಪರಪ್ಪಿನ್ ಆಕಮಕುತಿ ಪ್ಪಾನ್ಮೈ ಯಿನಾನ್
ಮೇವುಮ್ ಪೆರುಮೈ ಯರುಮಱೈಕಳ್ ಮೂಲಮಾಕ ವಿಳಜ್ಕುಲಕಿಲ್
ಯಾವು ನ್ತೆಳಿನ್ತ ಪೊರುಣಿಲೈಯೋ ಯೆಯ್ತ್ತ ವುಣರ್ನ್ತ ವುಳ್ಳತ್ತಾ
ಲಾವಿನ್ ಪೆರುಮೈ ಯುಳ್ಳಪಟಿ ಯಱಿನ್ತಾ ರಾಯಱ್ ಕರುಳ್ ಚೆಯ್ವಾರ್,

1214. 'ತಜ್ಕು ಮಕಿಲ ಯೋನಿಕಟ್ಕು ಮೇಲಾಮ್ ಪೆರುಮೈ ತ್ತಕೈಮೈಯನ;
ಪೊಜ್ಕು ಪುನಿತ ತೀರ್ತ್ತಜ್ಕ ಳೆಲ್ಲಾ ಮೆನ್ಱುಮ್ ಪೊರುನ್ತುವನ;
ತುಜ್ಕ ವಮರರ್ ತಿರುಮುನಿವರ್ ಕಣಜ್ಕಳ್ ಚೂಟ್ನ್ತು ಪಿರಿಯಾತ
ಅಜ್ಕ ಮನೈತ್ತು ನ್ತಾಮುಟೈಯ ವಲ್ಲ ವೋನ ಲ್ಲಾನಿನಜ್ಕಳ್?

1215. 'ಆಯ ಚಿಱಪ್ಪಿ ನಾಟ್ಪೆಱ್ಱ ವನ್ಱೇ ಮನ್ಱು ಣಟಮ್ಪುರಿಯು
ನಾಯ ನಾರ್ಕ್ಕು ವಳರ್ಮತಿಯು ನತಿಯು ನಕುವೆ ಣ್ಟಲೈತ್ತೊಟೈಯು
ಮೇಯ ವೇಣಿ ತ್ತಿರುಮುಟಿಮೇಲ್ ವಿರುಮ್ಪು ಮಾಟ ಯರುಳು ತಱ್ಕು
ತ್ತೂಯ ತಿರುಮ ಞ್ಜನಮೈನ್ತು ಮಳಿಕ್ಕು ಮುರಿಮೈ ಚ್ಚುರಪಿಕಟಾಮ್;

1216. ಶ್ರೇಷ್ಠರಾದ ದೇವತೆಗಳೊಡನೆ ಸದಾ ಸಮಸ್ತ ಲೋಕಗಳನ್ನೂ ಕಾಪಾಡುವ ಆದಿಕಾರಣನೂ, ತಿರುನೀಲಕಂಠನೂ, ಕೆಂಪಾದ ಜಡೆಯುಳ್ಳವನೂ ಆದ ದಿವ್ಯನಟನವುಳ್ಳ ಪರಮಾತ್ಮನು ಪೂಸುವ ವಿಭೂತಿಯನ್ನು ಒದಗಿಸುವ ಗೋಮಯ ವನ್ನು ಕೊಡುವುವು ಈ ಹಸುಗಳಿಂದಮೇಲೆ ಬೇರೇನು ಹೇಳಲಿದೆ?

1217. ಇನ್ನು ಬೇರೆ ಯೋಚಿಸಲಿದೆಯೇ? ಜಿಂಕೆಯ ಮರಿಯು ಜಿಗಿದಾಡು ವುದಕ್ಕೆಡೆಯಾದ ದಿವ್ಯಹಸ್ತವನ್ನುಳ್ಳವನೂ, ಅಲಂಕರಿಸಿಕೊಂಡ ಹಾವುಗಳ ಪ್ರಕಾಶ ಯುತವಾದ ಮಣಿಗಳನ್ನು ಗಂಗೆಯ ನೀರು ತೊಳೆಯುವ ಜಡೆಯುಳ್ಳವನೂ ಆದ ಶಿವಪರಮಾತ್ಮನು ಉಮಾಮಾತೆಯೊಡನೆ ದೇವತೆಗಳು ತಮ್ಮ ದರ್ಶನವನ್ನು ತೆಗೆದು ಕೊಳ್ಳುವಂತೆ ತನ್ನ ವಾಹನವಾಗಿ ಮಾಡಿಕೊಂಡ ವೃಷಭದೇವನ ಕುಲವಲ್ಲವೇ ಈ ಪಶುಕುಲವು?

1218. ಎಂಬಿವೇ ಮೊದಲಾದ ಹಲವಿಷಯಗಳನ್ನು ಚಿಂತಿಸಿ, 'ಕರುಗಳಿಂದ ಕೂಡಿದ ಗೋಜಾತಿಯನ್ನು ಸುಖ ತರುವ ಮಾರ್ಗದಲ್ಲಿ ಮೇಯಿಸಿ ಕಾಪಾಡುವುದಕ್ಕಿಂತ ಹೆಚ್ಚಿಗೆ ಮಾಡತಕ್ಕ ಕರ್ತವ್ಯವೇ ಬೇರೆ ಇಲ್ಲ. ಇದೇ ಚಿದಂಬರ ನಟನ ಶ್ರೀಪಾದಗಳನ್ನು ಸ್ತುತಿಸುವ ಮಾರ್ಗವೂ ಆಗಿದೆ' ಎಂದುಕೊಂಡು, ಇದಿರು ನಿಂತ ಗೋವಳನನ್ನು ನೋಡಿ, 'ನೀನು ಇನ್ನು ಗೋವುಗಳನ್ನು ಮೇಯಿಸುವ ವೃತ್ತಿಯನ್ನು ಬಿಟ್ಟುಬಿಡು' ಎಂದು ಹೇಳಿ,

---

1216. 'ಚೀಲ ಮುಟ್ಟೈಯ ಕೋಕ್ಕುಲಙ್ಗಳ್ ಚಿಱಕ್ಕು ನ್ತ್ರಕೈಯ್ಯೈ ತ್ತೇವರುಟನ್
ಕಾಲ ಮುಱುತು ಮುಲಕನೈತ್ತು ಙ್ಕಾಕ್ಕು ಮುತಙ್ಕಾ ರಣರಾಕು
ನೀಲ ಕಣ್ಟರ್ ಚೆಯ್ಯಚಟೈ ನಿರುತ್ತರ್ ಚಾತ್ತು ನೀಱುತರು
ಮೂಲ ಮವತಾ ರಙ್ಕೈಯ್ಯೈ ಮೂರ್ತ್ತ ಮೆನ್ಱಾಲ್ ಮುಟಿವೆನ್ನೋ?

1217. 'ಉಳ್ಳು ನ್ತ್ರಕೈಯ್ಯೈ ಯಿನಿಪ್ಪಿಱವೇ ಉಳವೇ! ಯುಟಿಕ್ಕೈಮಾನ್ ಮಱಿ
ಕ್ಕನ್ಱು
ತುಳ್ಳು ಙ್ಕರತ್ತಾ ರಣಿಪಣಿಯಿನ್ ಚುಟರ್ಚೊಟ್ ಮಣಿಕಳ್ ಚುರನತಿನೀರ್
ತೆಳ್ಳು ಙ್ಚಟೈಯಾರ್ ತೇವರ್ಕಟಮ್ ಪಿರಾಟ್ಟಿ ಯುಟನೇ ಚೇರ ವಿಚೈ
ಕ್ಕೊಳ್ಳು ಙ್ಕಿನಮಾಲ್ ವಿಟೈತ್ತೇವರ್ ಕುಲಮುನ್ ಱೋವಿ ಚ್ಚುರಪಿ
ಕುಲಮ್?

1218. ಎನ್ಱಿನ್ ನನವೇ ಪಲವುನಿನ್ನೈ, 'ನ್ತ್ರತತ್ತಿನ್ ವಟಿಯೋ ಮೇಯ್ ತ್ತ್ರನ್ತ್ರ
ಕ್ಕನ್ಱು ಪಯಿಲಾ ನಿರೈಕಾಕ್ಕು ಮಿತನ್ಮೇ ಲಿಲ್ಲೈ ಕಟ; ನಿತುವೇ
ಮನ್ಱು ಳಾಟು ಙ್ಕೈವಟಿಕಳ್ ವಱುತ್ತು ನೆಱಿಯಾ ವತು' ಮೆನ್ಱು
ನಿನ್ಱ ವಾಯನ್ ಱನ್ನೈ ನೋಕ್ಕಿ 'ನಿರೈಮೇಯ್ ಪ್ಪೊಱಿಕ ನೀ' ಯೆನ್ಪಾರ್,

1219. 'ಇನ್ನು ಈ ಗೋಸಮೂಹವನ್ನು ನಾನೇ ಮೇಯಿಸುವೆನು' ಎಂದು ತಿಳಿಸಿದನು. ಗೋವಳನೂ ಹೆದರಿ ಅವನಿಗೆ ನಮಿಸಿ, ದನಮೇಯಿಸುವ ವೃತ್ತಿಯನ್ನು ಬಿಟ್ಟುಬಿಟ್ಟನು. ತಾನೂ ವೇದಿಯರ ಅನುಮತಿಯನ್ನು ಪಡೆದು ಗೋವುಗಳ ಹತ್ತಿರ ವಿದ್ದು ಆ ಹಿರಿಯ ಸಂಪತ್ತನ್ನು ಕಾಪಾಡುವವನಾಗಿ, ಹಸುರು ಪೈರುಗಳಿಗೆ ಮಳೆಯು ಹೇಗೋ ಅಂತೆಯೇ ಪಶುಕೂಟಗಳನ್ನು ನೋಡಿಕೊಳ್ಳುವುದರಲ್ಲಿ ಈಡುಪಟ್ಟನು.

1220. ಗೋವುಗಳನ್ನು ಮೇಯಿಸುವ ಕೋಲನ್ನೂ ಹಗ್ಗವನ್ನೂ ತೆಗೆದು ಕೊಂಡು, ಎಳೆಕೂದಲಿನ ಜುಟ್ಟು ಅಲುಗಾಡಲು, ಪ್ರಕಾಶಿಸುವ ಮೃಗಚರ್ಮದಿಂದ ಕೂಡಿದ ಜನಿವಾರವು ವಿರಾಜಿಸಲು, ಹಾಲೂ ಕರುಗಳೂ ವರ್ಧಿಸುವಂತೆ ಪಶುಗಳನ್ನು ಮೇಯಿಸುವ ಪ್ರವೃತ್ತಿಯಲ್ಲಿ, ಅವುಗಳಿಗೆ ಬೇಕಾಗುವಷ್ಟು ಹುಲ್ಲನ್ನು ಸಮೃದ್ಧಿಯಾಗಿ ಮೇಯುವಂತೆ ಮಾಡಿ,

1221. ಹುಲ್ಲು ಸಮೃದ್ಧಿಯಾಗಿ ಉಳ್ಳ ಕಾಲಗಳಲ್ಲಿ ಪಶುಕೂಟಗಳನ್ನು ಮೇಯಿಸಿ, ಹುಲ್ಲನ್ನು ತಿನ್ನಲು ಬಿಟ್ಟೂ, ಕೈಯಿಂದ ಹುಲ್ಲನ್ನು ಕಿತ್ತು ತೆಗೆದು ಕೊಟ್ಟೂ ಕಾಪಾಡಿ, ಅವುಗಳ ಸಂಕಷ್ಟಗಳನ್ನು ಹೋಗಲಾಡಿಸಿ, ಇನಿದಾದ ನೀರುಳ್ಳ ತೊರೆಯಲ್ಲಿ ಅವುಗಳಿಗೆ ಒಳ್ಳೆಯ ಶೀತಲವಾದ ನೀರನ್ನು ಕುಡಿಸಿ, ಅವುಗಳಿಗೆ ಭಯನಿವಾರಣೆಯನ್ನು ಮಾಡಿ, ಸುಗಮವಾದ ದಾರಿಗಳಲ್ಲಿ ಅವು ನಡೆಯುವಂತೆ ನೋಡಿಕೊಂಡು, ನೆಳಲಲ್ಲಿ ವಿಶ್ರಮಿಸಲು ಬಿಟ್ಟು, ಅಮೃತದಂತೆ ರುಚಿಯುಳ್ಳ ಹಾಲನ್ನು ತರುವ ಹೊತ್ತಿನಲ್ಲಿ ತಪ್ಪದೆ ಅವುಗಳನ್ನು ಅವುಗಳ ಒಡೆಯರಾದ ವೇದಿಯರ ಮನೆಗಳಿಗೆ ತಲಪಿಸುತ್ತಿದ್ದನು.

1219. 'ಯಾನೇ ಯಿನಿಯಿ ನ್ನಿರೈಮೇಯ್‌ಪ್ಪ' ನೆನ್ಱಾ; ರಞ್ಚಿ ಯಿಟ್ಟೈಮಕನು
ನ್ತಾನೇ ರಿಱೈಞ್ಚಿ ವಿಟ್ಟಕನ್ಱಾನ್; ಱಾಮು ಮಱೈಯೋ ರಿಚೈವಿನಾ
ಲಾನೇ ನೆರುಙ್ಕುವ್ ಪೇರಾಯ ಮಳಿಪ್ಪಾ ರಾಕಿ, ಪ್ಪೈಙ್ಕೂಟ್‌ಕ್ಕು,
ವಾನೇ ಯೆನ್ನ ನಿರೈಕಾಕ್ಕ ವನ್ತಾರ್ ತೆಯ್ವ ಮಱೈಚ್ಚಿಱುವರ್.

1220. ಕೋಲು ಙ್ಕಯಿಱು ಙ್ಕೊಣ್ಟುಕುಟುಮಿ ಕ್ಕುಟುಮಿ ಯಲೈಯ ಕ್ಕುಲವುಮಾನ್
ಱೋಲು ನೂಲು ಞ್ಚಿಱುಮಾರ್ಪಿ ಙ್ಙವಳ ವರೈಕ್ಕೋ ವಣ ಞ್ಚಟರ,
ಪ್ಪಾಲುಮ್ ಪಯನುಮ್ ಪೆರುಕವರುಮ್ ಪಚುಕ್ಕಳ್ ಮೇಯ್‌ಕ್ಕುಮ್
ಪಾನ್ಮೈಯಿನಾಱ್
ಚಾಲುಮ್ ಪುಲ್ಲಿ ನಮೈವೇಣ್ಟು ನ್ತನೈಯು ಮಿಚೈಯು ನ್ತಲೈ ಚ್ಚೆನ್ಱು,

1221. ಪತವು ಕಾಲ ಙ್ಕಳಿನ್ ಮೇಯ್‌ತ್ತುಮ್ ಪಱಿತ್ತು ಮಳಿತ್ತುಮ್ ಪರಿವಕಱ್ಱಿ
ಯಿತಮು ಣ್ಣುಱೈಯು ಣ್ಣಿಣ್ಣೀ ರೂಟ್ಟಿ ಯಚ್ಚ ಮೆತಿರ್‌ನೀಕ್ಕಿ,
ಯತರ್‌ನ ಲ್ಲನಮುನ್ ಚೆಲನೀಟಿ ಲಮರ್‌ವಿ, ತ್ತಮುತ ಮತುರ ಪ್ಪಾಲ್
ಉತವುಮ್ ಪೊಱುತು ಪಿಱೈಯಾಮ ಲುಟೈಯೋ ರಿಲ್ಲ
ನ್ತೊಱುಮುಯ್‌ತ್ತಾರ್.

1222. ಮಣ್ಣಿನದಿಯ ತೀರದಲ್ಲಿ ಬೆಳೆಯುವ ಮುಲ್ಲೆಯ ಕಾಡುಗಳ ಪಕ್ಕದಲ್ಲಿಯೂ, ಬತ್ತದ ಗದ್ದೆಗಳ. ಪಕ್ಕದಲ್ಲಿಯೂ, ಶೀತಲವಾದ ಮುತ್ತುಗಳನ್ನು ಅಯ್ದು ತೆಗೆಯುವ ಮರುತ ನೆಲದ ಉದ್ಯಾನಗಳು ಇರುವ ತೀರಗಳ ಪಕ್ಕದಲ್ಲಿಯೂ, ಮೇಲೆ ಮೇಲೆ ಬೆಳೆದು ಹೆಚ್ಚುವ ಪಶುಕೂಟಗಳನ್ನು ಮೇಯಿಸಿ ಸಮಿಧೆಗಳನ್ನೂ ಅಗ್ನಿಯನ್ನೂ ತೆಗೆದುಕೊಂಡು ರಾತ್ರಿಯು ಬರುವ ಮೊದಲು ಸರಿಯಾಗಿ ಮನೆಗಳಿಗೆ ಹಿಂದಿರುಗುವ ಒಳ್ಳೆಯ ಹಗಲುಗಳು ಹಲವು. ಅಂತಹ ದಿನಗಳಲ್ಲಿ,

1223. ಈ ರೀತಿ ಇದ್ದ ಪಶುಕೂಟಗಳೆಲ್ಲಾ ಚೆಲುವಾಗಿ ಬೆಳೆದು ವೃದ್ಧಿಹೊಂದಿ, ಮೇಯುವ ಇನಿದಾದ ಹುಲ್ಲನ್ನೂ ಬಯಸುವ ತಣ್ಣೀರನ್ನೂ ತೃಪ್ತಿಯಾಗುವಂತೆ ಸೇವಿಸಿದ ಕಾರಣದಿಂದ, ಹೆಚ್ಚಿನ ಸಂತೋಷವನ್ನು ಮನಸ್ಸಿನಲ್ಲಿ ಹೊಂದಿ, ರಾತ್ರಿಯೂ ಹಗಲೂ ಪರಿಶುದ್ಧವೂ ಮಧುರವೂ ಆದ ಹಾಲು ತುಂಬಿದ ಕೆಚ್ಚಲುಳ್ಳವುಗಳಾಗಿ, ಹಾಲನ್ನು ಸುರಿಸುತ್ತಿದ್ದುವು.

1224. ತಾವು ನಡೆಸುವ ವೃತ್ತಿಯಾದ ಯಾಗವಿಧಿಯು ನೆರವೇರುವುದಕ್ಕೆ ಸಹಾಯವಾಗುವ ಹೋಮಧೇನುಗಳು, ಕಣ್ಣಿಗೆ ಚಲೋದಾಗಿ ಶೋಭಿಸಿ, ಹಿಂದಿಗಿಂತಲೂ ಅನೇಕ ಪಾಲು ಹೆಚ್ಚು ಹಾಲನ್ನು ಕೊಡುವವುಗಳಾದುವು. ಈ ಬ್ರಹ್ಮಚಾರಿಯು ಮೇಯಿಸುವ ಹೊಣೆಗಾರಿಕೆಯನ್ನು ಹೊತ್ತಮೇಲೆ ಗೋವುಗಳನ್ನು ಪ್ರೀತಿಯಿಂದ ನೋಡಿಕೊಂಡುದರಿಂದ ಈ ಸಂಪತ್ತು ಬಂತು ಎಂದು ವೇದಿಯರೆಲ್ಲರೂ ಸಂತೋಷಪಟ್ಟರು.

1222. ಮಣ್ಣಿ ಕ್ಕರೈಯಿನ್ ವಳರ್‌ಪುಱವಿನ್ ಮೂಟುಮ್ ಪಟುಕರ್ ಮರುಙ್ಗಿನಿಲುಮ್,
ತಣ್ಣ ಱಿತ್ತಲನೀರ್ ಮರುತತ್ತ ಣ್ಟಲೈಚೂೞ್ ಕುಲೈಯಿನ್ ಚಾರ್‌ಪಿನಿಲುಮ್,
ಎಣ್ಣಿಱ್ ಪೆರುಕು ನಿರೈಮೇಯ್‌ತ್ತು ಚ್ಚಮಿತ್ತೈ ಯುಟನ್‌ಮೇ ಲೆರಿಕೊಣ್ಟು
ನಣ್ಣಿ ಕ್ಕಙ್ಗುಲ್ ಮುನ್‌ಪುಕುತು ನನ್‌ನಾಳ್ ಪಲವಾ ಮನ್ನಾಳಿಲ್.

1223. ಆಯ ನಿರೈಯಿನ್ ಕುಲಮೆಲ್ಲಾ ಮಟಿಕಿನ್ ವಿಳಙ್ಗಿ ಮಿಕಪಲ್ಕಿ
ಮೇಯ ವಿನಿಯ ಪುಲ್ಲುಣವುಮ್ ವಿರುಮ್ಪು ಪುನಲು ಮಾರ್‌ತಲಿನಾಲ್
ಏಯ ಮನಙ್ಗೊಳ್ ಪೆರುಮಕಿೞ್‌ಚ್ಚಿ ಯೆಯ್ತಿ ಯಿರವು ನಣ್‌ಪಕಲುನ್
ತೂಯ ತೀಮ್ಪಾನ್ ಮಟಿಪೆರುಕಿ ಚ್ಚೊರಿಯು ಮುಲೈಕಳ್ ಚುರನ್ತನವಾಲ್.

1224. ಪೂಣು ನ್ತೊೞಿಲ್‌ವೇಳ್ ವಿಚ್ಚಟಙ್ಗು ಪುರಿಯ ಹೋಮ ತೇನುಕ್ಕಳ್
ಕಾಣುಮ್ ಪೊಲಿವಿನ್ ಮುನ್‌ನೈಯಿನು ಮನೇಕ ಮಟಙ್ಗು ಕಱಪ್ಪನವಾಯ್
ಪ್ಪೇಣು ನ್ತಕುತಿ ಯನ್‌ಪಾಲಿ ಪ್ಪಿರಮ ಚಾರಿ ಮೇಯ್‌ತ್ತತಱ್‌ಪಿನ್
ಮಾಣು ನ್ತಿಱತ್ತ ವಾನವೆನ ಮಱೈಯೋ ರೆಲ್ಲಾ ಮನಮಕಿೞ್‌ನ್ತಾರ್.

1225. ಪಶುಕೊಟವು ಎಲ್ಲಾ ವಿಧದಲ್ಲಿಯೂ ಹೆಚ್ಚಾದ ಸಂತೋಷವನ್ನು ಹೊಂದಿದುದರಿಂದ, ಮನೆಯಲ್ಲಿರುವ ತಮ್ಮ ಕರುಗಳನ್ನು ಒಂದುವೇಳೆ ಅಗಲಿಬಿಟ್ಟರೂ ತಮ್ಮ ಒಡನೆಯೇ ಇದ್ದ ಪುಟ್ಟ ವೇದಕರುವಾದ ವಿಚಾರಶರ್ಮನನ್ನು ಕಂಡು ಸಮೀಪ ಬಂದು, ಮನಕರಗಿ, ಆ ಕರುವಿಗೆ ತಾವು ತಾಯಾದ ನೆಲೆಯನ್ನು ಹೊಂದಿದವುಗಳಾಗಿ, ಅಂಬಾರವವನ್ನು ಮಾಡುತ್ತ ತುಂಬಿದ ಕೆಚ್ಚಲಿನಿಂದ ಕರೆಯದೆಯೇ ಹಾಲನ್ನು ಸುರಿಸುತ್ತಿದ್ದುವು.

1226. ತನ್ನನ್ನು ಸಮೀಪಿಸಿ ಪಶುಗಳು ಮೊಲೆಹಾಲನ್ನು ತಾವೇ ಸುರಿಸುವುದನ್ನು ಕಂಡು ಸಂತೋಷಿಸಿ, ಭಾಗ್ಯಯುಕ್ತವಾದ ತನ್ನ ಮನಸ್ಸಿನಲ್ಲಿ ಈ ಹಾಲು ಶಿವಪರಮಾತ್ಮನ ದಿವ್ಯಮಜ್ಜನಕ್ಕೆ ಆದೀತು ಎಂದು ಎಣಿಸಿಯೇ ನಮ್ಮನ್ನು ಆಳಾಗಿ ಉಳ್ಳ ಶಿವಭಕ್ತನಾದ ವಿಚಾರಶರ್ಮನು ಯುಕ್ತವಾಗಿ ಯೋಚಿಸಿ ನಿರ್ಧರಿಸಿದನು. ಆ ಜ್ಞಾನದಿಂದ ಶಿವಪರಮಾತ್ಮನ ಉತ್ತಮ ಪೂಜೆಯನ್ನು ಮಾಡುವ ಬಯಕೆಯು ಚಿಗುರಿ ಎದ್ದಿತು.

1227. ಹಿಂದಿನ ಜನ್ಮಗಳಲ್ಲಿ ಮಾಡಿದ ಅರ್ಚನೆಯನ್ನು ಮುಂದರಿಸುವಂತೆ ಆ ಎಳೆಯ ಭಕ್ತನು ಆಟವಾಡುವ ಮನಸ್ಸಿನಲ್ಲಿ ಉಕ್ಕುವ ಪ್ರೇಮದಿಂದ, ಮಣ್ಣಿ ನದಿಯ ಮಳಲಿನಿಂದ ಅತ್ತಿ ಮರದಡಿಯಲ್ಲಿ, ಕೆಂಗಣ್ಣಿನ ವೃಷಭವನ್ನು ವಾಹನವಾಗಿ ಉಳ್ಳವನ ದಿವ್ಯಶರೀರವಾದ ಶಿವಲಿಂಗವನ್ನು ಮಳಲಿನಿಂದಲೇ ನಿರ್ಮಿಸಿ, ಶಿವಾಲಯ, ನೀಳವಾದ ದೊಡ್ಡ ಗೋಪುರ, ಸುತ್ತಿನ ಆಲಯ ಇವೆಲ್ಲವುಗಳನ್ನೂ ಕ್ರಮವಾಗಿ ರಚಿಸಿದನು.

1225. ಅನ್ನೈತ್ತು ತ್ತಿಱತ್ತು ಮಾನಿನಜ್ಞು ಳಣ್ಣೈನ್ತು ಮಕಿೞ್ಚ್ಚಿ ಯಳವಿನ್ಱಿ
ಮನೈಕ್ಕಟ್ ಕನ್ಱು ಪಿರಿನ್ತಾಲು ಮರುವು ಇಟ್ಟಿರಿಯ ಮಱೈ ಕ್ಕನ್ಱು
ತನ್ನೈಕ್ಕ ಣ್ಟರುಕು ಚಾರ್ನ್ತುರುಕಿ ತ್ತಾಯಾ ನ್ತನ್ಮೈ ನಿಲೈಯಿನ ವಾಯ್
ಕ್ಕನೈತ್ತು ಚ್ಚುರನ್ತು ಮುಲೈಕ್ಕಣ್ಕಳ್ ಕಱವಾ ಮೇಪಾಲ್ ಪೊೞಿ
ನ್ತನವಾಲ್.

1226. ತಮ್ಮೈ ಯಣ್ಣೈನ್ತ ವಾನ್ಮುಲೈಪ್ಪಾಲ್ ತಾಮೇ ಪೊೞಿಯ ಕ್ಕಣ್ಣುವನ್ತು
ಚೆಮ್ಮೈ ನೆಱಿಯೇ ಯುಱುಮನತ್ತಿ ಱಿರುಮ ಱ್ಚಿನಮಾ ಜ್ಜನೞಿಪ್ಪೆಣರ್ನ್ತೇ
ಎಮ್ಮೈ ಯುಟ್ಟೈಯ ವಳ್ಳಲಾ ರೆಯ್ತ್ತು ನಿನ್ನೈನ್ತು ತೆಳಿನ್ತತ ನಿಲ್
ಮೆಯ್ಮ್ಮೈ ಚ್ಚಿವನಾರ್ ಪೂಚನೈಯೈ ವಿರುಮ್ಪುವಾ ವೇಟ್ಕೈ
ವಿಳೈನ್ತೆಟಿಲುವಾ,

1227. ಅಜ್ಜಣ್ ಮುನ್ನೈ ಯರ್ಚ್ಚನೈಯಿ ನಳವಿನ್ ಱಿಟೊರ್ಚ್ಚಿ ವಿಳೈ ಯಾಟ್ಟಾ
ಪ್ಪೊಜ್ಜು ಮನ್ಪಾನ್ ಮಣ್ಣಿ ಮಣಱ್ ಪುಳಿನ ಕ್ಕುಱೈಯಿ ಲಾತ್ತಿ
ಯಿನ್ಕೀೞ್
ಚ್ಚೆಜ್ಜಣ್ ವಿಟ್ಟೈಯಾರ್ ತಿರುಮೇನಿ ಮಣಲಾ ಲಾಕ್ಕಿ ಚ್ಚಿವಾಲಯಮುನ್
ತುಜ್ಜ ನೀಟು ಕೋಪುರಮು ಚ್ಚುಱ್ಱಾ ಲಯಮುಮ್ ವಕುತ್ತಮೈ ತ್ತಾರ್.

1228. ಆತ್ತಿ ಮಲರು, ಸಮೃದ್ಧವಾದ ಚಿಗುರು ಮೊದಲಾದುವುಗಳು ಪಕ್ಕದಲ್ಲಿ ಬೆಳೆಯುವ ಮುಲ್ಲೆಯ ಕಾಡಿನಲ್ಲಿ ಅಲರಿದ ಮಲರುಗಳೊಳಗೆ ತಾನೇ ಆಯ್ದು ಶಿವ ಪರಮಾತ್ಮನ ಜಡೆಯ ತಿರುಮುಡಿಯ ಮೇಲೆ ಅಲಂಕರಿಸುವುದಕ್ಕಾಗಿ ಹಲವು ಹೂ ಮಾಲೆಗಳನ್ನು, ತಾನು ಎಲೆಗಳನ್ನು ಕೋದುಮಾಡಿದ ಹೂವಿನ ಬುಟ್ಟಿಗಳಲ್ಲಿ ಕೊಂಡು ಬಂದು ಅವುಗಳ ಸುವಾಸನೆಯು ಕೆಡದಂತೆ ಸೇರಿಸಿಟ್ಟನು.

1229. ನವಕುಂಭಗಳನ್ನು ತೆಗೆದುಕೊಂಡು ದರ್ಭೆಹುಲ್ಲು ತುಂಬಿದ ಸುಂದರ ವಾದ ಬಹಿ ಪ್ರದೇಶಗಳಲ್ಲಿಯೂ, ನದೀ ಸಮೀಪದ ಏಕಾಂತ ಪ್ರದೇಶದಲ್ಲಿಯೂ ಮೇಯು ತ್ತಿರುವ ಪಶುಗಳಲ್ಲಿಗೆ ಶೀಘ್ರವಾಗಿ ಗಮಿಸಿ ಹಾಲು ಕರೆಯುವ ದನವೊಂದನ್ನು ಸಮೀಪಿಸಿ ಅದರ ಮೊಲೆಯನ್ನು ತೀಡಲು ಅದು ಅಂಬಾರವದೊಡನೆ ಸಮೃದ್ಧಿಯಾಗಿ ಹಾಲನ್ನು ಸುರಿಸಿತು.

1230. ಆ ಹಾಲನ್ನು ಕೊಡಗಳಲ್ಲಿ ತುಂಬಿಕೊಂಡು ಕೊಂಡುಬಂದು ದೇವ ದೇವನಾದ ಶಿವಪರಮಾತ್ಮನ ಬಿಳಿ ಮಳಲಿನಿಂದ ನಿರ್ಮಿತವಾದ ದೇವಾಲಯದೊಳಗೆ ಅವುಗಳನ್ನು ಇದಿರಾಗಿ ಸ್ಥಾಪಿಸಿ, ತುಂಬಿಗಳು ಮುಸುರುವ ಹೂಮಾಲೆಗಳಿಂದ ಉತ್ತಮ ವಿಧಿಗಳಿಂದ, ಪೂರ್ವಜನ್ಮವಾಸನೆಯಿಂದಾದ ಪ್ರೀತಿಯಿಂದ ಅರ್ಚನೆಯನ್ನು ತಿಳಿದು, ಹಾಲಿನ ತಿರುಮಜ್ಜನವನ್ನು ಮಾಡಿಸಿ,

---

1228. ಆತ್ತಿ ಮಲರು ಇಡ್ಟಿಟಿನ್ತಳಿರು ಮುತಲಾ ವರುಕು ವಳರ್ಪುಱ ವಿಱ್
ಪೂತ್ತ ಮಲರ್ಕ ಟಾನ್ತೆರಿನ್ತು ಪುನಿತರ್ ಕಟಿಲ ತ್ತಿರುಮುಟಿಮೇಱ್
ಚಾತ್ತ ಲಾಕು ನ್ತಿರುಪಳ್ಳಿ ತ್ತಾಮಮವ್ ಪಲವು ನ್ತಾಱ್ಕೊಯ್ತು
ಕೋತ್ತ ಇಲೈಪ್ಪೂ ಱ್ಕೂಟೈಯಿನಿಱ್ ಕೊಣರ್ನ್ತು ಮಣನ್ತ ಱ್ಕಿಟವೈತ್ತಾರ್.

1229. ನಲ್ಲ ನವಕು ಮ್ಬಙ್ಕಳ್ಪೆಱ ನಾಟಿ ಕ್ಕೊಣ್ಟು ನಾಣಱ್ಪೂ
ಱ್ಕೊಲ್ಲೈ ಯಿಟತ್ತು ಱ್ಱಱೈಮಱೈವು ಮೇವು ಱ್ಕೋಕ್ಕ ಳುಟನ್ಕೂಟ
ವೊಲ್ಲೈ ಯಣೈನ್ತು ಪಾಲಾಕ್ಕ ಳೊನ್ಱು ಕ್ಕೊರುಕಾ ಲಾಕವೆತಿರ್
ಚೆಲ್ಲ ಮಮ್ಮೈಯು ಱ್ಕನೈತ್ತುಮುಲ್ಲೈ ತೀಣ್ಟ ಚ್ಚುಱುಮ್ಪಾಲ್ ಪೊಱಿನ್ತನವಾಲ್.

1230. ಕೊಣ್ಟು ಮಟುತ್ತ ಕುಟನಿಱೈಯ ಕ್ಕೊಣರ್ನ್ತು ವಿರುಮ್ಪು ಱ್ಕೊಳ್ಕೈಯಿನಾಲ್
ಆಣ್ಟರ್ ಪೆರುಮಾನ್ ವೆಣ್ಮಣಲಾ ಲಯತ್ತು ಳವೈಮುನ್ ಱಾಪಿತ್ತು
ವಣ್ಟು ಮರುವು ನ್ತಿರುಪಳ್ಳಿ ತ್ತಾಮ ಱ್ಕೊಣ್ಟು ಮರನ್ಮುಱೈಯೋ
ಪಣ್ಟೈ ಪ್ಪರಿವಾ ಲರುಚ್ಚಿತ್ತು ಪ್ಪಾಲಿನ್ ಱಿರುಮ ಞ್ಚನಮಾಟ್ಟಿ,

1231. ತಿರುತಿರುಗಿ ಈ ರೀತಿ ಹಾಲಿನಿಂದ ಅಭಿಷೇಕವನ್ನು ಮಾಡಿಸಲು, ಆಳಾಗಿಸಿಕೊಂಡು ಅನುಗ್ರಹಿಸುವವನಾದ ಶಿವಪರಮಾತ್ಮನು ತನ್ನ ಭಕ್ತನ ಪ್ರೀತಿಯ ಕಾರಣವಾಗಿ ಮೇಲೆ ಮೇಲೆ ಹೆಚ್ಚುವ ಆಸೆಯು ವರ್ಧಿಸಿ ಪಕ್ವವಾದ ಪ್ರೇಮವು ಹೆಚ್ಚಲು ಶಿವಲಿಂಗದಲ್ಲಿ ನೆಲೆಯಾಗಿ ನಿಂತು ಆ ಪೂಜೆಯನ್ನು ಸ್ವೀಕರಿಸುವವನಾದನು.

1232. ಹಿರಿಮೆಯು ಶೋಭಿಸುವ ಶೇಯ್‌ಞಲೂರಿನಲ್ಲಿ ಅವತರಿಸಿದ ಪಿಳ್ಳೈಯಾರನು (ಬಾಲಭಕ್ತನು) ತನ್ನ ಮನಸ್ಸಿನಲ್ಲಿ ಏಕೀಭವಿಸಿದ ನೆನಹಿನಿಂದ ಪರಮಾತ್ಮನು ಸಂತೋಷದಿಂದ ಕೈಕೊಳ್ಳುವ ಪೂಜನೆಯ ಅಂಗಗಳಾದ ತಿರುಮಜ್ಜನವೇ ಮೊದಲಾದವುಗಳಿಂದ ತಾನು ಹುಡುಕಿಕೊಳ್ಳಲಾರದುದನ್ನು ಭಕ್ತಿಯ ಮೂಲಕವಾಗಿ ಸಿದ್ಧಿಸಿಕೊಂಡು ಬರುವ ಆ ಮಾರ್ಗದಲ್ಲಿ ಅರ್ಚನೆಯನ್ನು ಮಾಡಿ, ನಮಿಸಿ, ಸಂತೋಷಿಸುವವನಾದನು.

1233. ಶಿವಪರಮಾತ್ಮನ ಶ್ರೀಪಾದಗಳಲ್ಲಿ ವೇದಿಯ ವಟುವು ತಿರುಮಜ್ಜನ ಮಾಡುವ ಪರಿಪೂರ್ಣವಾದ ಪೂಜೆಗೆ, ಪ್ರೇಮ ತುಂಬಿದುದರಿಂದ ಕೊಡಗಳಲ್ಲಿ ಹಾಲು ತುಂಬುವಂತೆ ಕರೆದೂ, ಪಶುಕೂಟಗಳು ಪುನಃ ಕೆಚ್ಚಲು ತುಂಬಿ, ಇದರಿಂದಾಗಿ ಹಾಲಿನ ಪ್ರಮಾಣವು ಕಮ್ಮಿಯಾಗದೆ, ವೇದಿಯರುಗಳ ಮನೆಯಲ್ಲಿಯೂ ಹಿಂದೆ ಇರುತ್ತಿದ್ದ ಸೌಭಾಗ್ಯಗಳೆಲ್ಲಾ ಅಂಶೆಯೇ ಇದ್ದುವು.

1231. ಮೀಳ ಮೀಳ ವಿವ್ವಣ್ಣಮ್ ವೆಣ್ಪಾಲ್ ಚೊರಿಮ ಞ್ಞಾನಮಾಟ್ಟ
ಆಳ ವುಟೈಯಾರ್ ತಮ್ಮುಟೈಯ ವನ್ಪ ರನ್ಪಿನ್ ಪಾಲುಳತಾಯ್
ಮೂಳ ವಮುರ್‌ನ್ತ ನಯಪ್ಪಾಟು ಮುತಿರ್‌ನ್ತ ಪಟ್ಟು ಮುಜ್ಜಚ್ಚೂಟಿಲ್
ಕೋಳ ಮತನಿ ಲುಣ್ಣೊಟಿಯೈನ್ತು ಕುಟಿತ್ತ ಪೂಚೈ ಕೊಳ್‌ಕಿನ್‌ಜಾರ್.

1232. ಪೆರುಮೈ ಪಿಜಙ್ಕು ಇಞ್ಚೀಯಞ್‌ಞಲೂರ್ ಪ್ಪಿಳ್ಳೈ ಯಾರ್‌ತ ಮುಳ್ಳತ್ತಿಲ್
ಒರುಮೈ ನಿನ್ವೈವಾ ಲುಮ್ಪರ್‌ಪಿರಾ ನುವಕ್ಕುಮ್ ಪೂಚೈ ಯುಜಪ್ಪಾನ
ತಿರುಮ ಞ್ಞನಮೇ ಮುತಲಾಣ್ಣ ಞ್ಞೇಟಾ ತನವನ್ ಪಿನಿನಿರಪ್ಪಿ
ವರುಮ ನ್ನೆಜಿಯೇ ಯರ್ಚ್ಚನೈಚೆಯ್ ತರುಳಿ ವಣಙ್ಕಿ ಮಕಿಟಿಲ್
ಕಿನ್‌ಜಾರ್.

1233. ಇಜಿಪ್ಪೈಯೋ ನಟಿಕ್ಕೀಟಿಲ್ ಮಜಿಪ್ಪೈಯುವನಾ ರೆಟುತ್ತು ತ್ತಿರುಮ
ಞ್ಞಾನಮಾಟ್ಟು
ನಿಜಿಪ್ಪುಪೂ ಚನೈಕ್ಕು ಕ್ಕುಟಙ್ಕಳ್‌ಪಾಲ್ ವಿರಮ್ಪ ಚ್ಚೊರಿನ್ತು ನಿರೈಕ್ಕುಲಙ್ಕಳ್
ಕುಜಿಪ್ಪಾ ಟಿನ್‌ಜಿ ಮಟಿಪೆರುಕ ಕ್ಕುವಿನ್ತ ಮುಲೈಪ್ಪಾಲ್ ಕುಜಿಪ್ಪೈವಿನ್‌ಜಿ
ಮಜಿಪ್ಪೈಯೋರ್ ಮನೈಯಿನ್ ಮುನ್‌ಪು ತರುಮ್ ವಳಙ್ಕಳ್ ಪೊಲಿಯ
ವೈಕುಮಾಲ್.

1234. ಹೀಗೆ ಮತ್ತೂ ಹಲದಿನಗಳು ಶ್ರೇಷ್ಠರೀತಿಯ ಪೂಜೆ ಮಾಡಲು ಉದ್ಯಮಿಸಿ, ಅದೇ ಪವಿತ್ರವಾದ ಒಂದು ಆಟದಂತಾಗಲು, ಮೂರೆಳೆಯ ನೂಲಿನಿಂದ ಅಲಂಕೃತನಾದ ಎದೆಯುಳ್ಳ ವಿಚಾರಶರ್ಮನು ತನ್ನ ಸ್ವಭಾವದಂತೆ ಪ್ರವರ್ತಿಸುವ ಈ ರೀತಿಯನ್ನು ಕಂಡು ಇದನ್ನು ಶ್ರೇಷ್ಠ ಪೂಜೆಯೆಂದು ತಿಳಿಯದ ಅನ್ಯನೊಬ್ಬನು ಆ ಊರಲ್ಲಿ ಬ್ರಾಹ್ಮಣರುಗಳಿಗೆ ಇದನ್ನು ತಿಳಿಸಿದನು.

1235. ಈ ಮಾತುಗಳನ್ನು ಕೇಳಿದ, ಸಭೆಯಲ್ಲಿದ್ದ ವೇದಿಯರು, 'ಆತನಿಗೆ ಪಶುಗಳನ್ನು ಮೇಯಿಸಲಿಕ್ಕೆ ತಿಳಿಯದುದರಿಂದ, 'ಅವುಗಳ ಇಚ್ಛೆಯನ್ನು ತಿಳಿದು ಆ ರೀತಿಯಾಗಿಯೇ ನಾನು ಮೇಯಿಸುವೆನು' ಎಂದು ಹೇಳಿಕೊಂಡು ಹೋಗಿ ನಮ್ಮ ಪಶುಗಳ ಹಾಲನ್ನು ಕರೆದು ವಂಚಿಸುತ್ತಿರುವ ಆ ಮಾಣವಕನ ದುಷ್ಟವರ್ತನೆಯನ್ನು ಹೇಳಲಿಕ್ಕಾಗಿ ಅವನ ತಂದೆಯಾದ ಎಚ್ಚತತ್ತನನ್ನು ಕರೆಯಿರಿ' ಎಂದು ಹೇಳಿದರು.

1236. ಅಲ್ಲಿ ಪಕ್ಕದಲ್ಲಿ ನಿಂತವರು ಆ ಬ್ರಾಹ್ಮಣನ ಮನೆಗೆ ಹೋಗಿ ಅವನನ್ನು ಕರೆದುಕೊಂಡು ಬರಲು, ಆ ಉಚ್ಚಸಭೆಯವರು ಅವನನ್ನು ನೋಡಿ, 'ನಿನ್ನ ಮಗನು ಊರವರ ಪಶುಕೂಟಗಳನ್ನು ಮೇಯಿಸಿ ತಾನು ಮಾಡುವ ಅಕ್ರಮವನ್ನು ನೀನು ಕೇಳು' ಎಂದು ಆರಂಭಿಸಿ ನಡೆದ ವರ್ತಮಾನವನ್ನು ಹೇಳತೊಡಗಿದರು.

1234. ಚೆಯಲಿ ಪ್ಪಟಿಯೇ ಪಲನಾಳು ಇೞ್ಚಱನ್ತು ಪೂಚ್ಚೈ ಚೆಯ್ವತಱ್ಕು
ಮಯಲ್ವ್ವ ಱಿತುವೇ ತಿರುವಿಳೈಯಾ ಟ್ಟಾಕ ಮುನ್ನೂಲಣಿಮಾರ್ಪರ್
ಇಯಲ್ಪಿಱ್ ಪುರಿಯ ಮಱ್ಱಿತನೈ ಕ್ಕಣ್ಟ ತ್ತಿಱತ್ತೈ ಯಱಿಯಾತ
ಅಯಲಾನ್ ಮು ಱ್ಱೂರುವ ನಪ್ಪತಿಯಿ ಲನ್ತ ಣಾಳರ್ ಕ್ಕಱಿವಿತ್ತಾನ್.

1235. ಅಚ್ಚೊಲ್ಲಱ್ ಕೇಟ್ಟ ವರುಮಱೈಯೋ 'ರಾಯ ನರಿಯಾ ನೆನ್ಱವಱ್ಱಿನ್
ಇಚ್ಚೈ ವಟಿಯೇ ಯಾನ್ಮೇಯ್ಪ್ಪೇ ನೆನ್ಱಿನ್ ಪಟುಕ್ಕಟಮ್ಮೈಕ್ಕಱನ್ತು
ಪೊಚ್ಚ ಮೊಟುಕು ಮಾಣವಕನ್ ಪೊಲ್ಲಾ ಙ್ಙ್ಕುರೈಕ್ಕ ವವನ್ಱಾತೈ
ಯೆಚ್ಚ ತತ್ತನ್ ಱನ್ನೈಯಟೈವಿ' ನೆನ್ಱಾ ರವ್ವೈಯಿ ಲಿರುನ್ತಾರ್ಕಳ್.

1236. ಆಙ್ಕು ಮರುಙ್ಕು ನಿನ್ಱಾರ್ಕ ಳವ್ವ ನ್ತಣನ್ಱನ್ ಱಿರುಮನೈಯಿನ್
ಪಾಙ್ಕು ಚೆನ್ಱು ಮಱ್ಱವನೈ ಯಟೈತ್ತು ಕ್ಕೊಣ್ಟು ವರ, ಪ್ಪರನ್ತ
ಓಙ್ಕು ಚಪೈಯೋ ರವನೈಪ್ಪಾರ್ 'ತ್ತೂರಾ ನಿರೈಮೇಯ್
ತ್ತುನ್ಮೈಕನ್ ಚೆಯ್
ತೀಙ್ಕು ತನ್ನೈ ಕ್ಕೇ' ಳೆನ್ಱು ಪುಕುನ್ತ ಪರಿಚು ಚೆಪ್ಪುವಾರ್.

1237. ‘ಬ್ರಾಹ್ಮಣರುಗಳ ಹೋಮಗಳಿಗೆ ಬೇಕಾದ ಹಾಲು ಕರೆಯುವ ಪಶುಗಳೆಲ್ಲವನ್ನೂ ಪ್ರೀತಿಯಿಂದ ಕೂಡಿಕೊಂಡು ಹೋಗಿ ಮೇಯಿಸುವವನಂತೆ, ಸುವಾಸನೆಯನ್ನು ಬೀರುವ ಹೂಗಳಿಂದ ತುಂಬಿದ ಮಣ್ಣಿನದಿಯ, ಮಣಲ ತೀರದಲ್ಲಿ ಹಾಲು ಕರೆದು ಹಾಲನ್ನು ಕೆಳಗೆ ಸುರಿದು, ಮನಬಂದ ರೀತಿಯಲ್ಲಿ ಆತನು ವರ್ತಿಸುವನು ಎಂದು ಹೇಳಿದನು’ ಎಂಬುದಾಗಿ ಅವರು ತಿಳಿಸಿದರು.

1238. ವೇದಿಯರು ಇಂತೆಂದುದನ್ನು ಕೇಳಿ ಹೆದರಿ, ‘ಹಿರಿಮೆಯ ಬ್ರಾಹ್ಮಣರೇ! ವಟುವು ಮಾಡಿದ ಈ ಕೃತ್ಯವನ್ನು ನಾನು ಸ್ವಲ್ಪವೂ ತಿಳಿಯೆನು. ಇದುವರೆಗೆ ಆದ ತಪ್ಪನ್ನು ನೀವು ಸೈರಿಸಿಕೊಳ್ಳಬೇಕು’ ಎಂದು ತಪ್ಪೊಪ್ಪಿಕೊಂಡು ನಮಿಸಿ ಬಿನ್ನವಿಸಿಕೊಂಡು ‘ಇನ್ನುಮೇಲೆ ಈ ವರ್ತನೆಯು ಮರುಕಳಿಸಿದರೆ ತಪ್ಪು ನನ್ನದಾಗುವುದು’ ಎಂದು ಎಚ್ಚತತ್ತನು ಹೇಳಿದನು.

1239. ಬ್ರಾಹ್ಮಣರುಗಳಿಂದ ಅನುಮತಿಯನ್ನು ಪಡೆದು, ಸಂಜೆಯ ಸಂಧ್ಯಾವಂದನೆಗಳನ್ನು ಮುಗಿಸಿ, ಮನೆಯೊಳಗೆ ಪ್ರವೇಶಿಸಿ, ಮಗನಿಂದ ತನಗೆ ಬಂದ ಅಪಮಾನ ಇದೊಂದು ಎಂದು ನೆನೆದುಕೊಂಡು, ಮಗನೊಡನೆ ಇದನ್ನು ಪ್ರಸ್ತಾಪಿಸದೆ, ‘ಇದರ ನೆಲೆಯನ್ನು ತಿಳಿಯುವೆನು’ ಎಂದೆಣಿಸಿ, ಆ ರಾತ್ರಿಯು ಕಳೆದ ಮೇಲೆ, ಮಗನು ತಾನು ಪಶುಕೂಟಗಳನ್ನು ಮೇಯಿಸಲು ಕೊಂಡುಹೋದ ಅನಂತರ ವೃದ್ಧ ವೇದಿಯನಾದ ಯಜ್ಞದತ್ತನು ಆತನನ್ನು ಮರೆಯಾಗಿ ಹಿಂಬಾಲಿಸಿದನು.

1237. ‘ಅನ್ತ ಣಾಳ ರಾಕುತಿಕ್ಕು ಕ್ಕಱಕ್ಕುಮ್ ಪಚುಕ್ಕ ಳಾನವೆಲಾ
ಇಚ್ಚಿನ್ತೈ ಮಕಿೞ್ನ್ತು ಪರಿವಿನಾ ಲೀರಳ ಕ್ಕೊಣ್ಟುಪೋಯ್
ಮೇಯ್ಪ್ಪಾನ್ ಪೋಲ್
ಕನ್ತ ಮಲಿಪೂ ಮ್ಮುನ್ನಮ್ ಮಣ್ಣಿ ಮಣಲಿಱ್ ಕಱನ್ತು ಪಾಲುಕುತ್ತು
ವನ್ತ ಪರಿಚೇ ಚೆಯ್‌ಕಿನ್ಱಾ ನೆನ್ಱಾ’ ನೆನ್ಱು ವಾಯ್‌ಮೊೞಿನ್ತಾರ್.

1238. ಮಱೈಯೋರ್ ಮೊೞಿಯ ಕ್ಕೇಟ್ಟಿಚ್ಚ ‘ಚಿಱುಮಾ ಣವಕನ್ ಚೆಯ್ತವೀ
ತಿಱೈಯು ನಾನ್‌ಮುನ್ ಪಱಿನ್ತಿಲೇ; ನಿತಱ್ಕು ಮುನ್‌ಪು ಪುಕುನ್ತ ತನ್ನೈ
ನಿಱೈಯುಮ್ ಪೆರುಮೈ ಯನ್ತಣರ್‌ಕಾಳ್! ಪೊಱುಕ್ಕ ವೇಣ್ಟು ನೀಙ್ಕ ಳೆನ
ಕ್ಕುಱೈಕೊ ಣ್ಟಿಱೈಚ್ಚಿ, ‘ಯಿನಿಪ್ಪುಕುತಿಱ್ ಕುಱ್ಱ ಮೆನತೇ ಯಾ’
ಮೆನ್ಱಾನ್.

1239. ಅನ್ತ ಣಾಳರ್ ತಮ್ಮೈವಿಟ್ಟುಕೊ ಣ್ಟನ್ತಿ ತೊೞುತು ಮನೈ ಪುಕುನ್ತು
‘ವನ್ತ ಪೞಿಯೊನ್’ ಱೆನನಿನೈನ್ತೇ ಮಕನಾರ್ ತಮಕ್ಕು ವಾಯ್ ನೇರಾನ್
‘ಇನ್ತ ನಿಲೈಮೈ ಯಱಿವೇ’ ನೆನ್ ಱಿರವು ಕೞಿನ್ತು ನಿರೈಮೇಯ್‌ಕ್ಕ
ಮೈನ್ತ ಣಾರ್‌ತಾಮ್ ಪೋಯಿನಪಿನ್ ಮಱೈನ್ತು ಚೆನ್ಱಾನ್
ಮಱೈಮುತಿಯೋನ್.

1240. ಈ ರೀತಿ ಹೋದ ವೇದಿಯನಾದ ಯಜ್ಞದತ್ತನು ತನ್ನ ಮಗನಾದ ವಿಚಾರಶರ್ಮನು ಆ ಊರ ಪಶುಗಳನ್ನು ಕೊಂಡುಹೋಗಿ ಸುವಾಸನೆಯನ್ನು ಬೀರುವ ಕಾಡುಪ್ರದೇಶದಲ್ಲಿ ಮೇಯಿಸುವವನಾಗಿ ಮಣ್ಣಿನದಿಯ ಮಣಲ ದಿಣ್ಣೆಯಲ್ಲಿ, ಅಂದು ಮೇಯಿಸಲು ಕೊಂಡುಹೋದ ಆ ಕೃತ್ಯವನ್ನು ನೆನೆದು ಅಲ್ಲಿ ಮರೆಯಾಗಿದ್ದ ಒಂದು ಕುರವ ಮರದ ಮೇಲೇರಿ ಇನ್ನು ಮುಂದಾಗುವುದನ್ನು ತಿಳಿಯಲಿಕ್ಕಾಗಿ ಅಡಗಿಕೊಂಡಿದ್ದನು.

1241. ನಿರ್ಭರ ಪ್ರೇಮದಿಂದ ಕೂಡಿದ ಬ್ರಹ್ಮಚಾರಿಯಾದ ವಿಚಾರಶರ್ಮನು ನೀರಿನಲ್ಲಿ ಮುಳುಗಿ ಸ್ನಾನಮಾಡಿ ಆಮೇಲೆ ಶಿವಪರಮಾತ್ಮನಿಗೆ ಹಿಂದಿನ ದಿನಗಳಂತೆಯೇ ಮಣಲಲ್ಲಿ ಶಿವಾಲಯವನ್ನು ಮಾಡಿ, ಅಂದು ಅರಳಿದ ಮೊಗ್ಗುಗಳನ್ನೂ, ಕೋಮಲ ವಾದ ಮಲರುಗಳನ್ನೂ ಕೊಯ್ದು, ಅನುಸರಿಸಿ ಬಂದ ಪಶುವಿನ ಮೊಲೆಯಿಂದ ಸುರಿದ ಹಾಲಿನಿಂದ ತುಂಬಿದ ಕೊಡಗಳನ್ನು ಪೂಜಿಸುವ ಎಡೆಯಲ್ಲಿ ಕೊಂಡುಬಂದು ಸ್ಥಾಪಿಸಿ, ಆಮೇಲೆ ಬೇಕಾದ ಪೂಜಾದ್ರವ್ಯಗಳನ್ನು ಸೇರಿಸಿಕೊಂಡನು.

1242. ಆಟವಾಡಿದುದರಲ್ಲಿಯೇ ವಿಧಿಪೂರ್ವಕವಾಗಿಯೇ ಶ್ರೇಷ್ಠ ಪೂಜನೆಯನ್ನು ತೊಡಗಿ, ತನ್ಮಯವಾದ ಮನಸ್ಸಿನಿಂದ ಸಹಜವಾಗಿ, ಭಕ್ತರನ್ನು ಆಳಾಗಿಯುಳ್ಳ ಶಿವಪರಮಾತ್ಮನ ಶ್ರೀಮುಡಿಯ ಮೇಲೆ ಸುವಾಸನಾಯುಕ್ತವಾದ ಹೂಮಾಲೆಯನ್ನಿಟ್ಟು ಅರ್ಚಿಸಿ ಮಧುರವಾದ ಹಾಲಿನ ಪೂರ್ಣಕುಂಭಗಳನ್ನೂ ತೆಗೆದುಕೊಂಡು ತಿರುಮಂಜನ ವನ್ನು ಮಾಡಿದನು.

1240. ಚೆನ್ಱ ಮಱೈಯೋನ್ ಱಿರುಮಕನಾರ್ ಚೆಱಿನ್ದ ವೂರಾ ನಿರೈ
ಕೊಟ್ಟುಪ್ಪೋಯ್
ಮನ್ಱಿನ್ ಮರುವುಮ್ ಪುಱವಿನ್‌ಕಣ್ ಮೇಯ್‌ಪ್ಪಾರ್ ಮಣ್ಣಿ
ಮಣಱ್ಕುಱೈಯಿ
ಲನ್ಱು ತಿರಳ ಕ್ಕೊಟ್ಟುಚೆನ್ಱ ವತನೈ ಯಱಿನ್ದು ಮಱೈನ್ದಪ್ಪಾ
ನಿನ್ಱ ಕುರವಿನ್ ಮಿಚೈಯೇಱಿ ನಿಕೞ್ಚಿ ತಱಿಯ ವೊಳಿತ್ತಿರುನ್ದಾನ್.

1241. ಅನ್ಪು ಪುರಿಯುಮ್ ಪಿರಮಚಾ ರಿಕಳು ಮೂೞ್ಕಿ ಯಾನಾರ್ಕ್ಕು
ಮುನ್ಪು ಪೋಲ ಮಣಱ್ಕೋಯಿ ಲಾಕ್ಕಿ ಮುಕೈಮೆನ್ ಮಲರ್ ಕೊಯ್ದು
ಪಿನ್ಪು ವರುಮಾನ್ ಮುಲೈಪೊೞಿಪಾಲ್ ಪೆರುಕು ಱ್ಕುಟಙ್ಕಳ್
ಪೇಣುವಿಟನ್
ತನ್ಪಾಱ್ ಕೊಣರ್ನ್ದು ತಾಪಿತ್ತು ಪ್ಪಿಱವುಮ್ ವೇಣ್ಟು ವನ ಚಮೈತ್ತಾರ್.

1242. ನಿನ್ಱ ವಿತಿಯಿನ್ ವಿಳೈಯಾಟ್ಟಾ ನಿಱೈನ್ದ ವರುಮ್ಪೂ ಚನೈ ತೊಟಙ್ಕಿ
ಯೊನ್ಱು ಮುಳ್ಳ ತ್ತಣ್ಮೈಯಿನಾ ಲುಟೈಯ ನಾತನ್ ಱಿರು ಮುಟಿಮೇನ್
ಮನ್ಱಲ್ ವಿರವು ನಿನ್ದುರುಪ್ಪಳ್ಳಿ ತ್ತಾಮ ಙಾಚ್ಚಿ ಮಞ್ಚನಮಾ
ನನ್ಱು ನಿಱೈತೀಮ್ ಪಾಱ್ಕುಟಙ್ಕ ಳೆಟುತ್ತು ನಯಪ್ಪ ಱಾಟ್ಟುತಲುಮ್.

1243. ಆಗ ಮೇಲೆ ಮೇಲೆ ಏಳುವ ಪ್ರೀತಿಯೂ, ಪೂರ್ವಜನ್ಮವಾಸನೆಯೂ, ಇನ್ನು ಮುಂದೆ ಹೇಳಹೋಗುವ ಸ್ವಭಾವವೂ ಹೊಂದುಗೆಯಾಗಲು, ಅವನಲ್ಲಿ ಉಳ್ಳ ಹಿರಿಮೆಯನ್ನು ವ್ಯಕ್ತಪಡಿಸಲು, ಹಾವನ್ನು ಅಲಂಕರಿಸಿಕೊಂಡ ಜಡೆಮುಡಿಯುಳ್ಳ ಶಿವಪರಮಾತ್ಮನ ಅನುಗ್ರಹವೋ ಇದು ಎಂಬಂತೆ, ತಿಳಿವು ನಾಶವಾಗಿ, ಕುರವ ಮರದ ಮೇಲಿದ್ದ ಮುದಿವೇದಿಯನಾದ ಯಜ್ಞದತ್ತನು ಕರ್ನಾಯತ್ತವಾಗಿ ಕೋಪವು ಹೆಚ್ಚುತ್ತಿರಲು ಅದನ್ನು ನೋಡಿದನು.

1244. ಕಂಡೊಡನೆಯೇ ಶೀಘ್ರವಾಗಿ ಕೆಳಗಿಳಿದು ವೇಗವಾಗಿ ಅಲ್ಲಿ ತಲಪಿ ಕೈಯಲ್ಲಿರುವ ದಂಡದಿಂದ ಮಗನ ಬೆನ್ನ ಮೇಲೆ ಹೊಡೆದು ಕ್ರೂರವಾದ ಮಾತುಗಳನ್ನು ಹೇಳಲು, ದಿವ್ಯಕೈಂಕರ್ಯವನ್ನು ಮಾಡುತ್ತಿದ್ದ ಸಣ್ಣ ಪ್ರಾಯದ ಹಿರಿಯ ಭಕ್ತನು, ತನ್ನ ಪರಮಾತ್ಮನ ಅರ್ಚನೆಯಲ್ಲಿ ಹೊಮ್ಮುವ ಭಕ್ತಿಯಲ್ಲಿ ತನ್ಮಯನಾಗಿದ್ದುದರಿಂದ ಅವಾವುದನ್ನೂ ತಿಳಿಯಲಿಲ್ಲ.

1245. ಕೋಪಗೊಂಡ ಎಚ್ಚದತ್ತನು ಹಲವು ಸಲ ಹೊಡೆಯಲು ಶ್ರೇಷ್ಠನಾದ ಹಿರಿಯ ಭಕ್ತನು ಅದನ್ನು ತಿಳಿಯದವನಾಗಿ ಹಾಲಿನಿಂದ ಪರಿಪೂರ್ಣವಾದ ತಿರುಮಂಜನವನ್ನು ಮಾಡುವ ದಿವ್ಯಕೈಂಕರ್ಯದಲ್ಲಿ ಚಲಿಸದೆ ಇರುವುದನ್ನು ಕಂಡು, ಅರಿವು ಕೆಟ್ಟು, ಭ್ರಾಂತಿ ಹೊಂದಿ, ಬಹುವಾಗಿ ಕೋಪಿಸಿ, ಹಿಂದೆ ಮಾಡಿದ ಕೃತ್ಯದಿಂದ ಇನ್ನು ಮುಂದೆ ಮಾಡಹೋಗುವ ನೀಚಕೃತ್ಯದ ನೆಲೆಯಲ್ಲಿ ನಿಂತವನಾದ ಆ ವೇದಿಯನು ಸಂಗ್ರಹಿಸಿಟ್ಟಿದ್ದ ತಿರುಮಂಜನದ ಹಾಲು ಚೆಲ್ಲಿಹೋಗುವಂತೆ ಆ ಹಾಲಿನ ಕೊಡವನ್ನು ಕಾಲಿನಿಂದ ಒದೆದನು.

1243 ಪರವ ಮೇಲ್ಮೇ ಲೆಟುಮ್ಪರಿವುಮ್ ಪಟ್ರಿಯ ಪಾಲ್ಮೈ ಮಿಕುಮ್ ಪಣ್ಪುಮ್
ವಿರವ ಮೇತ ಕ್ಕವರ್ತಮ್ಪಾಲ್ ಮೇವುಮ್ ಪೆರುಮೈ ವೆಳಿಪ್ಪಟುಪ್ಪಾ
ನರವ ಮೇವು ಞ್ಚಟೈಮುಟಿಯಾ ರರುಳಾ ಮೆನ್ನ ವಱಿವಟಿನ್ತು
ಕುರವ ಮೇವು ಮುತುಮಱೈಯೋನ್ ಕೋಪ ಮೇವುಮ್ ಪಟಿ ಕಣ್ಟಾನ್.

1244. ಕಣ್ಟ ಪೋತೇ ವಿರೈನ್ತಿಟಿನ್ತು ಕಟಿತು ಚೆನ್ಱು ಕೈತ್ತಣ್ಟು
ಕೊಣ್ಟು ಮಕನಾರ್ ತಿರುಮುತುಕಿಲ್ ಪುಟೈತ್ತು ಕ್ಕೊಟಿತಾ ಮೊಟಿಕೊಱಿ
ತ್ತೊಣ್ಟು ಪುರಿಯು ಞ್ಚಿಱಿಯಪೆರು ನ್ತೋನ್ಱಿ ಲಾರ್ತಮ್ ಪೆರುಮಾನ್ಮೇಲ್
ಮಣ್ಟು ಕಾತ ಲರ್ಚ್ಚನೈಯಿನ್ ವೈತ್ತಾರ್ ಮಱ್ಱೊನ್ ಱಱಿ ನ್ತಿಲರಾಲ್.

1245. ಮೇಲಾಮ್ ಪೆರಿಯೋರ್ ಪಲಕಾಲುಮ್ ವೆಕುಣ್ಟೋ ನಟಿಕ್ಕ ವೇಱುಣರಾರ್
ಪಾಲಾರ್ ತಿರುಮ ಞ್ಚನಮಾಟ್ಟುಮ್ ಪಣಿಯಿಱ್ ಚಲಿಯಾ ತತುಕಣ್ಟು
ಮಾಲಾ ಮಱೈಯೋನ್ ಮಿಕಚ್ಚೆಯಿರ್ತ್ತುವೈತ್ತ ತಿರುಮ ಞ್ಚನಕ್ಕುಟಪ್ಪಾಲ್
ಕಾಲಾ ಲಿಟಱಿ ಚ್ಚಿನ್ತಿನಾನ್ ಕೈಯಾಱ್ ಕಟೈಮೈ ತ್ತಲೈನಿನ್ಱಾನ್.

1246. ಚೆಲ್ಲುವ ಸಮಯದಲ್ಲಿ ಅದನ್ನು ನೋಡಿದ ಆ ಕಿರಿಯ ಭಕ್ತನು ಸ್ವಲ್ಪ ಸಮಯದಲ್ಲಿಯೇ ಆ ದೋಷಿಯನ್ನು ತನ್ನ ತಂದೆಯೆಂಬುದಾಗಿ ತಿಳಿದು, ಅವನ ಕಾಲುಗಳು ಶಿವಪರಮಾತ್ಮನಿಗಾಗಿದ್ದ ಹಾಲನ್ನು ಚೆಲ್ಲಿದ ಕಾರಣದಿಂದ ಆ ಪಾಪಿಯನ್ನು ದಂಡಿಸಲು ಮನಸ್ಸುಮಾಡಿ ಇದಿರಲ್ಲಿ ಬಿದ್ದಿದ್ದ ಕೋಲನ್ನು ತೆಗೆದುಕೊಳ್ಳಲು ಸಹಜವಾಗಿಯೇ ಅವನ ಕೈಯಲ್ಲಿ ಅದು ಮಡು (ಕೊಡಲಿ) ವಾಗಿ ಮಾರ್ಪಟ್ಟಿತು. ಅದನ್ನು ಕೊಂಡವನಾಗಿ ಆ ಭಕ್ತನು ಆ ದೋಷಿಯ ಕಾಲುಗಳನ್ನು ತುಂಡರಿಸಿದನು. ಆತನು ಮಣ್ಣಿನಮೇಲೆ ಬಿದ್ದನು.

1247. ಬೀಸಿದ ಆ ಕೋಲೇ ಅರ್ಚನೆಯಲ್ಲಿ ಏರ್ಪಟ್ಟ ವಿಘ್ನವನ್ನು ಹೋಗಲಾಡಿಸುವ ಆಯುಧವಾಗಿ ಒದವಲು, ಪೂಜೆಯನ್ನು ತಡೆದ ತಂದೆಯ ಎರಡು ಕಾಲುಗಳನ್ನೂ ಕತ್ತರಿಸಿ ಬೀಳಿಸಿದ ಮಗನು, ತನ್ನ ಪೂಜೆಗೆ ಬಂದ ದೊಡ್ಡ ವಿಘ್ನವನ್ನು ಹೋಗಲಾಡಿಸಿದವನಾಗಿ, ಹಿಂದಿನಂತೆಯೇ ಅರ್ಚಿಸತೊಡಗಲು, ದಟ್ಟವಾದ ನೀಳ ಜಡೆಯನ್ನುಳ್ಳ ಶಿವಪರಮಾತ್ಮನು ಉಮಾದೇವಿಯೊಡನೆ ವೃಷಭದ ಮೇಲೇರಿ,

1248. ಭೂತಗಣಗಳು ಸುತ್ತುವರಿದು ಬರಲು, ಪುರಾಣಮುನಿಗಳೂ, ದೇವತೆಗಳೂ, ವೇದವಾಕ್ಯಗಳಿಂದ ಸ್ತುತಿಸಿಕೊಂಡು ಬರಲು, ಕಾಣಿಸಿಕೊಂಡನು. ಹೀಗೆ ವಿಮಲಮೂರ್ತಿಯಾದ ಶಿವಪರಮಾತ್ಮನು ಕರುಣೆತುಂಬಿ ತನ್ನಲ್ಲಿ ಅನುಗ್ರಹಿಸಲು, ಪಕ್ವವಾದ ಭಕ್ತಿಯುಳ್ಳ ಬಾಲಕನಾದ ವಿಚಾರಶರ್ಮನು ಕಂಡು ನಮಿಸಿ, ಮನಸ್ಸಿನಲ್ಲಿ ವಿಶೇಷವಾದ ಸಂತೋಷವನ್ನು ಹೊಂದಿದವನಾಗಿ, ಆತನ ಪಾದಮಲರುಗಳ ಮೇಲೆ ಬಿದ್ದನು.

1246. ಚಿನ್ದುಮ್ ಪೊೞುದು ಲತುನೋಕ್ಕು ಇೞೈಯ ರಿಱೈಯಿ ಱೀಯೋನೈ
ತ್ತನ್ದೈ ಯೆನವೇ ಯಱಿನ್ದವನ್ ಱನ್ ಱಾಳ್‌ಕಳ್ ಚಿನ್ದು
ನ್ದಕುತಿಯಿನಾನ್
ಮುನ್ದೈ ಮರುಙ್ಕು ಕಿಟನ್ದಕೋ ಲೆಟುತ್ತಾರ್ ಕ್ಕತುವೇ ಮೞುವಾ
ಮೈಯಿನಾಲ್
ವನ್ದ ಮೞುವಾ ಯಿಟವೆಱಿನ್ದಾರ್ ; ಮಣ್‌ಮೇಲ್ ವೀೞ್‌ನ್ದಾನ್
ಮಱೈಯೋನುಮ್.

1247. ಎಱಿನ್ದ ವತುವೇ ಯರ್ಚ್ಚನೈಯಿ ಲಿಟೈಯೂ ಱಕಱ್ಱುಮ್ ಪಟೈಯಾಕ
ಮಱಿನ್ದ ತಾತೈ ಯಿರುತಾಳು ನ್ದುಣಿತ್ತ ಮೈನ್ದರ್ ಪೂಚನೈಯಿಲ್
ಅಱಿನ್ದ ವಿಟೈಯೂ ಱಕಱ್ಱಿನರಾಯ್ ಮುನ್‌ಪೋ ಲರ್ಚ್ಚಿ ತ್ತಿಟಪ್ಪುಕಲು
ಇಱೈಞ್ಚಿನ್ದ ಚಟೈನೀಣ್ ಮುಟಿಯಾರು ನ್ದೇವಿ ಯೋಟುಮ್ ವಿಟೈಯೇಱಿ,

1248. ಪೂತ ಕಣಙ್ಕಳ್ ಪುಟೈಚೂೞ ಪ್ಪುರಾಣ ಮುನಿವರ್ ಪುತ್ತೇಳಿರ್
ವೇತ ಮೊೞಿಕ ಳೆಟುತ್ತೇತ್ತ ವಿಮಲ ಮೂರ್ತ್ತಿ ತಿರುವುಳ್ಳ
ಙ್ಕಾತಲ್ ಕೂರ ವೆಳಿಪ್ಪಟಲು ಙ್ಕಣ್ಟು ತೊೞುತು ಮನಙ್ಕಳಿತ್ತು
ಪ್ಪಾತ ಮಲರ್‌ಕಣ್ ಮೇಲ್‌ವಿೞುನ್ದಾರ್ ಪತ್ತಿ ಮುತಿರ್‌ನ್ದ ಪಾಲಕನಾರ್,

1249. ನೀಳವಾಗಿ ನೆಯ್ದ ಕರ್ಣಿಕಾರ ಮಾಲೆಯು ಸುತ್ತುವರಿದ ಜಡೆಯನ್ನುಳ್ಳ ಶಿವಪರಮಾತ್ಮನು, ತನ್ನ ಆಶ್ರಯಕೊಡುವ ಎರಡು ಪಾದಗಳಲ್ಲಿ ಬಿದ್ದವನನ್ನು ಎತ್ತಿ ನೋಡಿ 'ನನಗಾಗಿ ನಿನ್ನನ್ನು ಪಡೆದ ತಂದೆಯು ಬೀಳುವ ಹಾಗೆ ನೀನು ತುಂಡರಿಸಿದೆ. ಇನ್ನು ನಾನೇ ಮತ್ತಿನ ತಂದೆಯಾದೆನು,' ಎಂದು ಅವನನ್ನು ಆಲಿಂಗಿಸಿ, ತುಂಬಿದ ಕರುಣೆಯಿಂದ ಮೈ ತಡವಿ, ನೆತ್ತಿಯನ್ನು ಮೂಸಿ, ಸಂತೋಷಿಸಿ ಅನುಗ್ರಹಿಸಿದನು.

1250. ಕೆಂಗಣ್ಣಿನ ವೃಷಭವನ್ನುಳ್ಳ ಶಿವಪರಮಾತ್ಮನ ಮಲರಿನಂತಹ ತಿರು ಕೈಯಿಂದ ತಡವಲ್ಪಟ್ಟ ಬಾಲಕನಾದ ವಿಚಾರಶರ್ಮನು, ಆ ಎಡೆಯಲ್ಲಿಯೇ ತನ್ನ ಭೌತಿಕ ಶರೀರದ ಮೇಲೆ ಅಳತೆಗೆ ಸಿಗದ ಶ್ರೇಷ್ಠವಾದ ಶಿವಮಯವಾಗಿ ಹೊಮ್ಮಿ ಎದ್ದ ದಿವ್ಯಾನುಗ್ರಹದಲ್ಲಿ ಮುಳುಗಿ, ತಾವರೆ ಹೂವಿನಲ್ಲಿ ವಾಸಿಸುವ ಬ್ರಹ್ಮದೇವನೇ ಮೊದಲಾದ ಹಿರಿಯ ದೇವತೆಗಳು ಸ್ತುತಿಸಲು, ತನ್ನನ್ನು ಸುತ್ತುವರಿದು ಪ್ರಕಾಶಿಸುವ ಶಿವಕಾಂತಿ ಯೊಳಗೆಯೇ ತೋರಿದವನಾದನು.

1251. ದೇವರುಗಳಿಗೆ ಒಡೆಯನಾದ ಶಿವಪರಮಾತ್ಮನು ವಿಚಾರಶರ್ಮನನ್ನು ಭಕ್ತರುಗಳಿಗೆಲ್ಲಾ ಅಧಿಪರನ್ನಾಗಿ ಮಾಡಿ, 'ನಾವು ಉಂಡು ಮಿಕ್ಕ ಶೇಷವು, ಉಡುವ ಉಡೆಗಳು, ಧರಿಸುವ ಮಾಲೆ, ಆಭರಣ ಮೊದಲಾದವುಗಳು – ಇವಷ್ಟರಲ್ಲಿಯೂ ನಿನಗೇ ಅಧಿಕಾರವಿರುವಂತೆ ಚಂಡೀಶನೆಂಬ ಪದವಿಯನ್ನು ಕೊಟ್ಟೆವು' ಎಂದು ಹೇಳಿ ಅವನ ಸುಂದರವಾದ ದೊಡ್ಡ ಶ್ರೀಮುಡಿಗೆ ಬಾಲಚಂದ್ರನಿರುವ ತನ್ನ ಜಡೆಯಲ್ಲಿ ಸೂಡಿದ ಕೊನ್ನೆ ಮಲರಮಾಲೆಯನ್ನು ತೆಗೆದು ಮುಡಿಸಿ ಅನುಗ್ರಹಿಸಿದನು.

1249. ತೊಟುತ್ತ ವಿತಟ್ ಚೂಟ್ಚಟ್ಟೈಯಾರ್ ತಣ್ಯೈತಾ ಣಿಟಿಜ಼್ಕೀಟ್
ವಿಱುನ್ತ ವರ್ಯ್ಕೆ
ಎಟುತ್ತು ನೋಕ್ಕಿ 'ನಮ್ಪೊರುಟ್ಟಾ ಲೀನ್ಱ ತಾತೈ ವಿಟವೆಱಿನ್ತಾಯ್;
ಅಟುತ್ತ ತಾತೈ ಯಿನಿಯುನಕ್ಕು ನಾ' ಮೆನ್ ಱರುಳ್ಚೆಯ್ ತಣೈತ್ತರುಳಿ
ಮಟುತ್ತ ಕರುಣೈ ಯಾಟ್ಟವಿ ಯುಚ್ಚಿ ಮೋನ್ತು ಮಕಿಟ್ನ್ತರುಳ,

1250. ಚೆಙ್ಕಣ್ ವಿಟ್ಟೈಯಾರ್ ತಿರುಮಲರ್ಕ್ಕೈ ತೀಣ್ಟ ಪ್ಪೆಱ ಚಿಱುವನಾ
ರಙ್ಕಣ್ ಮಾಯ್ಯೆ ಯಾಕ್ಕೈಯಿನ್ಮೇ ಲಳವಿನ್ ಱುಯರ್ನ್ತ
ಚಿವಮಯಮಾಯ್
ಪ್ಪೊಙ್ಕಿ ಯೆಟುನ್ತ ತಿರುವರುಳಿನ್ ಮೂಟ್ಕಿ ಪ್ಪೂಮೇ ಲಯನ್ ಮುತಲಾ
ನ್ತುಙ್ಕ ವಮರರ್ ತುತಿಚೆಯ್ಯ ಚ್ಚೂಟ್ನ್ತ ವೊಳಿಯಿ ಱ್ತೋನ್ಱಿನಾರ್.

1251 ಅಣ್ಟರ್ ಪಿರಾನು ನ್ತೊಣ್ಟರ್ತಮ ಕ್ಕತಿಪ ನಾಕ್ಕಿ ಯನೈತ್ತುನಾಮ್
ಉಣ್ಟ ಕಲಮು ಮುಟುಪ್ಪನವು ಞ್ಚೂಟುವ ವನವು ಮುನಕ್ಕಾಕ
ಚ್ಚಣ್ಟೀ ಚನುಮಾವ್ ಪತನ್ತನ್ತೋ' ಮೆನ್ಱ ಙ್ಕವರ್ಪೊ ಱ್ಟಟ ಮುಟಿತ್ತು
ತ್ತುಣ್ಟ ಮತಿಚೇರ್ ಚಟೈಕ್ಕೊನ್ಱೈ ಮಾಲೈ ವಾಙ್ಕಿ ಚ್ಚೂಟ್ಟಿನಾರ್.

1252. ಎಲ್ಲಾ ಲೋಕಗಳಲ್ಲಿ ಉಳ್ಳವರೂ ಸಂತೋಷದಿಂದ ಹರಹರ ಎಂದು ಘೋಷಿಸಲು, ಎಲ್ಲೆಡೆಗಳಲ್ಲಿಯೂ ಹೂಮಳೆಯು ಸುರಿಯಲು, ಹಲಸಾವಿರ ಶಿವಗಣ ನಾಥರೂ ಹಾಡಿಯೂ ಆಡಿಯೂ ಸಂತೋಷವನ್ನು ಹೊಂದಲು, ವೇದಗಳು ತಮ್ಮ ಮಾತುಗಳಿಂದ ಪೂರ್ಣವಾದ ಸ್ತುತಿಗಳನ್ನು ಮಾಡಲು, ನಾಲ್ಕು ಸುತ್ತಲೂ ಹಲ ವಾದ್ಯಗಳು ಮೊಳಗಲು, ಶೈವ ಸನ್ಮತವಾದುದು ವೃದ್ಧಿಹೊಂದಿ ಬೆಳೆಯುವಂತೆ, ನಮ್ಮ ಹಿರಿಯನಾದ ನಾಯನಾರನು ಶಿವಪರಮಾತ್ಮನನ್ನು ನಮಿಸಿ, ನಾಯಕನೆನಿಸಿದ ತನ್ನ ಚಂಡೀಶ ಪದವಿಯನ್ನು ಹೊಂದಿದನು.

1253. ವಯೋವೃದ್ಧ ವೇದಿಯನಾದ ಎಚ್ಚತತ್ತನು ಲೋಕವು ತಿಳಿಯುವಂತೆ ಶಿವಾಪರಾಧವನ್ನು ಮಾಡಿಯೂ, ಶಿವಪರಮಾತ್ಮನ ದಿವ್ಯಾನುಗ್ರಹದಿಂದ ವೇದೋಕ್ತವಾದ ಸದಾಚಾರವಿರುವ ಶೇಯ್‌ಞಲೂರಿನ ಪಿಳ್ಳೈಯಾರನ (ಬಾಲಭಕ್ತನ) ದಿವ್ಯಹಸ್ತವು ತಾಳಿದ ಚೆಲುವಾದ ಕೊಡಲಿಯಿಂದ ತುಂಡರಿಸಲ್ಪಟ್ಟುದರಿಂದ, ಆ ಅಪರಾಧದಿಂದ ವಿಮುಕ್ತನಾಗಿ, ತನ್ನ ಸ್ವಂತದವರೊಡನೆ ಮೊತ್ತಮೊದಲಿಗನಾದ ಶಿವನ ಲೋಕದಲ್ಲಿ ಸೇರುವ ಯೋಗ್ಯತೆಯನ್ನು ಪಡೆದನು.

1254. ಅಯೋಗ್ಯಕಾರ್ಯವನ್ನು ಮಾಡಿದ ತಂದೆಯ ಕಾಲುಗಳನ್ನು ಕೊಡಲಿಯಿಂದ ತುಂಡರಿಸಿ ಬೀಳಿಸಿದ ವೇದಿಯ ಬಾಲಕನು ಅದೇ ಶರೀರದಿಂದಲೇ ಶಿವಪರಮಾತ್ಮನ ಮಗನೆನಿಸಿಕೊಂಡನು. ಯಾರು ತಾನೇ ಇದರ ನೆಲೆಯನ್ನು ತಿಳಿಯುವರು? ಈಡಿಲ್ಲದವನಾದ ಶಿವಪರಮಾತ್ಮನಿಗೆ ಪ್ರೇಮವನ್ನು ತಂದ ಭಕ್ತರು ಯಾವುವನ್ನು ಮಾಡಿದರೂ ಅವುಗಳೇ ತಪವಾಗುವುದಲ್ಲವೇ?

1252. ಎಲ್ಲಾ ವುಲಕು ಮಾರ್ಪ್ಪೆಟುಪ್ಪ ವೆಙ್ಙುಮಲರ್ಮಾ ರಿಕಳ್ಪೊೞಿಯ
ಪ್ಪಲ್ಲಾ ಯಿರವರ್ ಕಣನಾತರ್ ಪಾಟಿ ಯಾಟಿ ಕ್ಕಳಿಪಯಿಲ
ಚ್ಚೊಲ್ಲಾರ್ ಮಱೈಕ ಟ್ಟುತಿಚೆಯ್ಯ ಚ್ಚೂೞ್ಪ ಲ್ಲಿಯಙ್ಙ ಳೆಟುತ್ತಿಯಮ್ಪ
ನಲ್ಲಾ ಱೊೞುಙ್ಕು ನಾಯಕಮಾ ನಙ್ಕಳ್ ಪೆರುಮಾನ್ ಱೊೞುತು ತಣ್ಣೈನ್ತಾರ್.

1253. ಞಾಲ ಮಱಿಯ ಪ್ಪಿೞೈತ್ತೈಪುರಿನ್ತ ನಮ್ಪ ರರುಳಾ ನಾನ್ಮಱೈಯಿನ್
ಚೀಲ ನ್ತಿಕೞು ಞ್ಚೇಯ್‌ಞಲೂರ್ ಪ್ಪಿಳ್ಳೈ ಯಾರ್ತ ನ್ತಿರುಕ್ಕೈಯಿಱ್
ಕೋಲ ಮೞುವಾ ಲೇಱುಣ್ಟು ಕುಱ್ಱ ನೀಙ್ಕಿ ಚ್ಚುಱ್ಱಮುಟನ್
ಮೂಲ ನುತಲ್ವರ್ ಚಿವಲೋಕ ಮೆಯ್‌ತ ಪ್ಪೆಱ್ಱಾನ್ ಮುತು
ಮಱೈಯೋನ್.

1254. ವನ್ತ ಪಿೞೈಚೆಯ್ ತಾತೈತಾಳ್ ಮೞುವಾ ಱ್ಱಣಿತ್ತ ಮಱೈಚ್ಚಿಱುವರ್
ಅನ್ತ ವುಟಮ್ಪು ತನ್ನುಟನೇ ಯರನಾರ್ ಮಕನಾ ರಾಯಿನಾರ್;
ಇನ್ತ ನಿಲೈಮೈ ಯಱಿನ್ತಾರಾರ್? ಈಱಿ ಲಾತಾರ್ ತಮಕ್ಕನ್ಪು
ತನ್ತ ವಟಿಯಾರ್ ಚೆಯ್ತನವೇ ತವಮಾ ಮನ್ಱೋ ಚಾಱ್ಱುಙ್ಕಾಲ್?

ಸುಂದರಮೂರ್ತಿ ನಾಯನಾರನ ಸ್ತುತಿ

1255. ವಿಷವನ್ನು ಹೊಂದಿದ ಚೆಲುವಾದ ಕಂಠವನ್ನುಳ್ಳ ಪರಮಾತ್ಮನ ಭಕ್ತರ ಹಿರಿಮೆಯನ್ನು, ಪ್ರೇಮತುಂಬಿದ ಹೃದಯದಿಂದ, ಎಲ್ಲಾ ಜೀವಿಗಳೂ ತಿಳಿದು ನಮಿಸಿ ಉಜ್ಜೀವಿಸುವಂತೆ ತಿರುತ್ತೊಂಡತ್ತೊಗೈ ಮೂಲಕ ಹಿಂದೆ ಅನುಗ್ರಹಿಸಿದ ದಿವ್ಯವ್ಯಕ್ತಿಯಾದ ಆಳಾಗಿಸಿಕೊಂಡ ನಂಬಿಯ ಸುವಾಸನೆಯಿಂದ ಕೂಡಿದ ಮಲರಿನಂತಹ ಮೃದುವಾದ ಪಾದಗಳನ್ನು ನಮಿಸಲು ಅವಕಾಶ ದೊರೆತ ಈ ಜನ್ಮವನ್ನು ನಮಿಸುವೆವು.

1255. ನೇಚ ನಿಱೈನ್ದ ವುಳ್ಳತ್ತಾ ನೀಲನಿಱೈನ್ದ ಮಣಿಕಣ್ಟ
ತ್ತೀಯ ನಟಿಯಾರ್ ಪೆರುಮೈಯಿನೈ ಯೆಲ್ಲಾ ವುಯಿರು ನ್ತೊಟವೆಟುತ್ತು
ತ್ತೇಚ ಮುಯ್ಯ ತ್ತಿರುತ್ತೊಣ್ಟ ತ್ತೊಕೈಮುನ್ ಪಣಿತ್ತ ತಿರುವಾಳನ್
ವಾಚ ಮಲರ್ಮೆನ್ ಕಟಲ್ವಣಙ್ಕ ವನ್ತ ಪಿಱಪ್ಪೈ ವಣಙ್ಕು ವಾಮ್.

ಅನುಬಂಧ ೧

ಪೆರಿಯಪುರಾಣದಲ್ಲಿ ಬರುವ ವೃಕ್ಷಗಳ ಹೆಸರುಗಳು

	ಪುಟ	ಪದ್ಯ		ಪುಟ	ಪದ್ಯ
ಪನೆಮರ	25	68	ವನ್ನಿ (ಬನ್ನಿ)	77	230
ವಾಂಚಿಮರ	,,	,,	ಕುರವಂಕ (ಕುರಾಮರ)	,,	,,
ಶಿರುಂದಿಮರ	,,	,,	ಪೊನ್ನೆ	,,	,,
ಕೊಂಗುಮರ	,,	,,	ಕೊಂಗೈ	94	272
ಞಾಟಲ್‌ಮರ(ಕುಂಕುಮ)	76	229	ಇಂಡೈ	307	889
ವಂಜಿಮರ	,,	,,	ನರುವಿಲ	321	930
ಕೊನ್ರೈ	77	230	ಕಳಾಮರ	376	1084

ಅನುಬಂಧ ೨

ಪೆರಿಯಪುರಾಣದಲ್ಲಿ ಬರುವ ಮೀನುಗಳ ಹೆಸರುಗಳು

ಕಯಲ್‌ಮೀನು	26	70	ವರಾಲ್‌ಮೀನು	354	102
ಮಲಂಗುಮೀನು	76	228	ಇರಾಲ್‌ಮೀನು	372	1074
ಕೆಂಡೆಮೀನು	96	278	ಸುರಾಮೀನು	,,	,,
ಶೇಲ್‌ಮೀನು	332	962	ಬಾಳೆಮೀನು	378	1092

ಅನುಬಂಧ ೩

ಪೆರಿಯಪುರಾಣದಲ್ಲಿ ಬರುವ ಸ್ಥಳಗಳ ಹೆಸರುಗಳು

ತಿರುನಾವಲೂರು	10	17	ತಿರುಮುನ್ನೈಪಾಡಿ	47	137
ಪುಲಿಯೂರು	14	31	ಪುತ್ತೂರು	49	143
ಕಂಬಾನದಿ	15	34	ತಿರುವಣ್ಣೈನಲ್ಲೂರು	61	183
ಕಾಂಚೀ	,,	,,	ತಿರುವರುತ್ತುರೈ ದೇವಾಲಯ	67	201
ಕಾವೇರಿ	17	41	ತಿರುತ್ತುರೈಯೂರು	71	215
ತಿರುವಾರೂರು	28	76	ಪೆಣ್ಣೈಯಾರುನದಿ	72	218

	ಪುಟ	ಪದ್ಯ
ತಿರುವದಿಕ್ಕೈ ವೀರಟ್ಟಾನ	72	218
ಕೆಡಿಲನದಿ	73	220
ತಿರುಮಾಣಿಕ್ಕುಳಿ	75	226
ತಿರುತ್ತಿನೈ ನಗರ	,,	227
ತಿಲ್ಲೈ	,,	,,
ತಿರುಚಿತ್ರಂಬಲ	82	240
ತಿರುಪಣಾಕ್ಕನ್		
ತಿರುವಾಯಿಲ್ (ಶ್ರೀದ್ವಾರ)	,,	,,
ಕಳುಮಲಂ	85	247
ಪುಗಲಿ	85	248
ತಿರುತ್ತೋಣಿಪುರ	,,	249
ತಿರುಕ್ಕೋಲಕ್ಕಾ	86	250
ತಿರುಪ್ಪೂಣ್ಕೂರು	86	251
ತಿರುಮಯಿಲಾಡುತುರೈ	,,	252
ತಿರುವಂಬರ್ಮಾಗಾಳ	,,	,,
ತಿರುಪ್ಪುಗಲೂರು	87	253
ತಿರುಪ್ಪುಲೀಶ್ವರ	134	386
ಪೂಮ್ಪುಕಾರ್	137	393
ತಿರುಚ್ಚಾಯಕ್ಕಾಡು	147	419
ಇಳೆಯಾನ್ಗುಡಿ	151	430
ತಿರುಕ್ಕೋವಲೂರು (ಜೇದಿನಾಡು)	160	457
ತಿರುಚ್ಚೆಂಗುನ್ನೂರು	168	482
ಪಳೈಯಾಱೈ	172	492
ತಿರುನಲ್ಲೂರು	173	495
ಕರುವೂರು	188	542
ತಿರುವಾನಿಲೈ ದೇವಾಲಯ	,,	,,
ಎಯಿನನೂರು	207	598
ಉಡುಪ್ಪೂರು	221	641
ತಿರುಕಾಳತ್ತಿ	,,	640
ಪೊತ್ತಪ್ಪಿನಾಡು	,,	640
ತಿರುಮುಗಲಿನದಿ	255	737
ತಿರುಕ್ಕಡವೂರು (ಜೋಳನಾಡು)	284	821
ತಿರುಪ್ಪನಂದಾಳ್	291	843
ಕಂಜಾರೂರು	296	856
ಕಣಮಂಗಲ	309	893
ಮೇನ್ಮಲನಾಡು	317	916
ತಿರುಮಂಗಲ	319	892
ಮಧುರೆ (ತಿರುವಾಲವಾಯಿ)	332	961
ತಿರುಪ್ಪುಗಲೂರು	347	1006
ಪುಗಲಿ	352	1019
ತಿರುತ್ತಲೆಯೂರು	353	1021
ಆದನೂರು	357	1031
ಕೊಳ್ಳಿಡಂ ನದಿ	,,	,,
ತಿರುಪ್ಪಂಗೂರು	362	1046
ತೊಂಡೈನಾಡು	370	1068
ಪಟ್ಟೈಯನೂರು	370	1070
ತಿರುಕ್ಕಾಳತ್ತಿ	374	1079
ತಿರುವಿಡೈಚ್ಚುರ	374	1080
ತಿರುಕ್ಕಳುಕ್ಕುನ್ರು	375	1196
ತಿರುಮುಲ್ಲೈವಾಯಿಲ್	376	1085
ಕಲಿಗೈ ಮಾನಗರ (ತಿರುವೂರಲ್)	,,	,,
ಪಾಲಿಯಾರು	377	1088

	ಪುಟ	ಪದ್ಯ		ಪುಟ	ಪದ್ಯ
ತಿರುವಲ್ಲಂ	380	1097	ಕಂಬಾನದಿ	392	1127
ತಿರುಮಾಲ್‌ಪೇರು	,,	1098	ತಿರುಕಾಮಕೋಟಿ	397	1138
ಪಾಲಾರ್ ನದಿ	,,	1098	ಉಲಗಾಣಿ ತೀರ್ಥ	398	1140
ತಿರುಪ್ಪಾಶೂರ್	381	1099	ತಿರುಪ್ಪೆರುಂ- ಪೆಯುರಿರುಕ್ಕೈ	399	1142
ತಿರುವೊತ್ತಿಯೂರು	383	1106	ಕಾಂಚಿತ್ತಾನಂ	,,	,,
ತಿರುಮಯಿಲಾಪುರಿ	,,	1107	ಅಮರ್ತ್ಯ ಸ್ಥಳ	,,	1144
ತಿರುವಾನ್ಮಿಯೂರು	,,	,,	ಇಷ್ಟಸಿದ್ಧಿ, ಮಂಗಳ		
ಮಾಮಲ್ಲೈ ನಗರ	384	1108	ತೀರ್ಥ, ಸರ್ವತೀರ್ಥ	401	1145
ಕಾಂಚೀ	386	1115	ಶೇಯ್‌ಞಲೂರು	423	1196
ಅಂಬಿಕಾವನ	391	1126			

ಅನುಬಂಧ ೪

ನಾಯನಾರರೂ ಅವರಿಗೆ ಸಂಬಂಧಿಸಿದ ಸ್ಥಳಗಳೂ

ಸುಂದರರ್	—	ತಿರುನಾವಲೂರು
ತಿರುನೀಲಕಂಠ	—	ತಿಲ್ಲೈ
ಇಯರ್‌ಪಗೈ	—	ಪೂಂಪುಗಾರ್, ಪುಗಾರ್
,,	—	ತಿರುಚ್ಚಾಯಕ್ಕಾಡು
ಇಳೆಯಾನ್‌ಗುಡಿಮಾರ	—	ಇಳೆಯಾನ್‌ಗುಡಿ
ಮೆಯ್‌ಪೊರುಳ್	—	ತಿರುಕ್ಕೋವಲೂರು
ವಿಱನ್‌ಮಿಂಡ	—	ತಿರುಚ್ಚೆಂಗುನ್ನೂರು, ತಿರುವಾರೂರು
ಅಮರನೀತಿ	—	ಪಳೈಯಾಱೈ, ತಿರುನಲ್ಲೂರು
ಎಱಿಪ್ಪತ್ತರ್	—	ಕರುವೂರು
ಏನಾದಿನಾಥ	—	ಎಯಿನನೂರು (ಚೋಳನಾಡು)
ಕಣ್ಣಪ್ಪ	—	ಉಡುಪ್ಪೂರು (ಪೊತ್ತಪ್ಪಿನಾಡು)
,,	—	ತಿರುಮುಗಲಿ ನದಿ

ಕಲಯ	—	ತಿರುಕ್ಕಡವೂರು
,,	—	ತಿರುಪ್ಪನಂದಾಳ್
ಮಾನಕ್ಕಂಜಾರ;		
ಏಯರ್‌ಕೋಣ್ ಕಲಿಕ್ಕಾಮನಾರ್	—	ಕಂಜಾರೂರು
ಅರಿವಾಳ್ತಾಯ	—	ಕಣಮಂಗಲ
ಆನಾಯರ್	—	ತಿರುಮಂಗಲ
ಮೂರ್ತಿ	—	ಮಧುರೆ (ತಿರುವಾಲವಾಯಿ) ಕರುನಾಡು
ಮುರುಗ	—	ತಿರುಪ್ಪುಗಲೂರು, ಪುಗಲಿ
ರುದ್ರಪಶುಪತಿ	—	ತಿರುತ್ತಲೆಯೂರು
ತಿರುನಾಳೈಪ್ಪೋವಾರ್	—	ಆದನೂರು, ತಿರುಪ್ಪುಂಗೂರು, ತಿಲ್ಲೈ (ಚಿದಂಬರ)
ತಿರುಕುರಿಪ್ಪುತೊಂಡ	—	ಕಾಂಚಿ
ಚಂಡೇಶುರ	—	ಶೇಯ್‌ಞಲೂರು

ಅನುಬಂಧ ೫

ಸ್ಥಳಗಳ ಹೆಸರುಗಳನ್ನು ಗುರುತಿಸಿದ ಭೂಪಟ

(ಭೂಪಟವನ್ನು ಇದಿರಿನ ಪುಟದಲ್ಲಿ ಕೊಟ್ಟಿದೆ.)

ಅನುಬಂಧ ೬

ಪೆರಿಯಪುರಾಣದ ಸರ್ಗಗಳು ಮತ್ತು ವಿಷಯಾನುಕ್ರಮಣಿಕೆ

1. ತಿರುಮಲೈ ಚ್ಚರುಕ್ಕಮ್
    1. ತಿರುಮಲೈ ಚಿಱಪ್ಪು
    2. ಪತಿಕಂ
    3. ತಿರುನಾಟ್ಟು ಚ್ಚಿಱಪ್ಪು
    4. ತಿರುವಾರೂರ್ ತಿರುನಕರ ಚಿಱಪ್ಪು
    5. ತಿರುಕ್ಕೂಟ್ಟ ಚ್ಚಿಱಪ್ಪು
    6. ತಟುತ್ತಾಟ್ಕೊಣ್ಟ ಪುರಾಣಮ್

2. ತಿಲ್ಲೈವಾಟಿನ್ತಣರ್ ಚರುಕ್ಕಮ್
    1. ತಿಲ್ಲೈವಾಟಿನ್ತಣರ್ ಪುರಾಣಮ್
    2. ತಿರುನೀಲಕಣ್ಟ ನಾಯನಾರ್ ಪುರಾಣಮ್
    3. ಇಯಱ್ಪಕೈ ನಾಯನಾರ್ ಪುರಾಣಮ್
    4. ಇಳೈಯಾನ್ಕುಟಿಮಾಱ ನಾಯನಾರ್ ಪುರಾಣಮ್
    5. ಮೆಯ್ಪ್ಪೊರುಣಾಯನಾರ್ ಪುರಾಣಮ್
    6. ವಿಱನ್ಮಿಣ್ಟ ನಾಯನಾರ್ ಪುರಾಣಮ್
    7. ಅಮರ್ನೀತಿ ನಾಯನಾರ್ ಪುರಾಣಮ್

3. ಇಲೈಮಲಿನ್ತ ಚರುಕ್ಕಮ್
    8. ಎಱಿಪತ್ತ ನಾಯನಾರ್ ಪುರಾಣಮ್
    9. ಏಣಾತಿ ನಾಯನಾರ್ ಪುರಾಣಮ್
    10. ಕಣ್ಣಪ್ಪ ನಾಯನಾರ್ ಪುರಾಣಮ್
    11. ಕುಙ್ಕುಲಿಯ ಕ್ಕಲಯ ನಾಯನಾರ್ ಪುರಾಣಮ್
    12. ಮಾನಕ್ಕಞ್ಚಾರ ನಾಯನಾರ್ ಪುರಾಣಮ್
    13. ಅರಿವಾಟ್ಟಾಯ ನಾಯನಾರ್ ಪುರಾಣಮ್
    14. ಆನಾಯ ನಾಯನಾರ್ ಪುರಾಣಮ್

4. ಮುಮ್ಮೈಯಾಲುಲಕಾಣ್ಟ ಚರುಕ್ಕಮ್
    15. ಮೂರ್ತ್ತಿ ನಾಯನಾರ್ ಪುರಾಣಮ್
    16. ಮುರುಕ ನಾಯನಾರ್ ಪುರಾಣಮ್

17. ಉರುತ್ತಿರ ಪಚುಪತಿ ನಾಯನಾರ್ ಪುರಾಣವ್
18. ತಿರುನಾಳೈ ಪ್ಪೋವಾರ್ ನಾಯನಾರ್ ಪುರಾಣವ್
19. ತಿರುಕ್ಕುಱಿಪ್ಪುತ್ತೊಣ್ಟ ನಾಯನಾರ್ ಪುರಾಣವ್
20. ಚಣ್ಟೇಚುರ ನಾಯನಾರ್ ಪುರಾಣವ್

5. ತಿರುನಿನ್ಱ ಚರುಕ್ಕವ್

21. ತಿರುನಾವುಕ್ಕರಚು ನಾಯನಾರ್ ಪುರಾಣವ್
22. ಕುಲಚ್ಚಿಱೈ ನಾಯನಾರ್ ಪುರಾಣವ್
23. ಪೆರುಮಿಟಲೈ ಕ್ಕುಱುಮ್ಪ ನಾಯನಾರ್ ಪುರಾಣವ್
24. ಕಾರೈಕ್ಕಾಲಮ್ಮೈಯಾರ್ ಪುರಾಣವ್
25. ಅಪ್ಪೂತಿಯಟಿಕಳ್ ನಾಯನಾರ್ ಪುರಾಣವ್
26. ತಿರುನೀಲನಕ್ಕ ನಾಯನಾರ್ ಪುರಾಣವ್
27. ನಮಿನನ್ತಿಯಟಿಕಳ್ ನಾಯನಾರ್ ಪುರಾಣವ್

6. ವಮ್ಪಱಾವರಿ ವಣ್ಟು ಚರುಕ್ಕವ್

28. ತಿರುಞಾನಚಮ್ಪನ್ತ ನಾಯನಾರ್ ಪುರಾಣವ್
29. ಎಯರ್ಕೋನ್ ಕಲಿಕ್ಕಾಮ ನಾಯನಾರ್ ಪುರಾಣವ್
30. ತಿರುಮೂಲತೇವ ನಾಯನಾರ್ ಪುರಾಣವ್
31. ತಣ್ಟಿಯಟಿಕಳ್ ನಾಯನಾರ್ ಪುರಾಣವ್
32. ಮೂರ್ಕ್ಕ ನಾಯನಾರ್ ಪುರಾಣವ್
33. ಚೋಮಾಚಿಮಾಱ ನಾಯನಾರ್ ಪುರಾಣವ್

7. ವಾರ್ಕೊಣ್ಟ ವನಟಿಲೈಯಾಳ್ ಚರುಕ್ಕವ್

34. ಚಾಕ್ಕಿಯ ನಾಯನಾರ್ ಪುರಾಣವ್
35. ಚಿಱಪ್ಪುಲಿ ನಾಯನಾರ್ ಪುರಾಣವ್
36. ಚಿಱುತ್ತೊಣ್ಟ ನಾಯನಾರ್ ಪುರಾಣವ್
37. ಕಟಱಿಱ್ಱಱಿವಾರ್ ನಾಯನಾರ್ ಪುರಾಣವ್
38. ಕಣನಾತ ನಾಯನಾರ್ ಪುರಾಣವ್
ಕೂಱುವ ನಾಯನಾರ್ ಪುರಾಣವ್

ಯಿಲ್ಲಾತ ಪುಲವರ್ ಚರುಕ್ಕವ್

ಯ್ಯಟಿಮೈಯಿಲ್ಲಾತ ಪುಲವರ್ ಪುರಾಣವ್
ಟ್ ಚ್ಚೋಟ ನಾಯನಾರ್ ಪುರಾಣವ್

42. ನರಚ್ಚಿಙ್ಙ ಮುನೈಯರೈಯ ನಾಯನಾರ್ ಪುರಾಣಮ್
43. ಅತಿಪತ್ತ ನಾಯನಾರ್ ಪುರಾಣಮ್
44. ಕಲಿಕ್ಕಮ್ಪ ನಾಯನಾರ್ ಪುರಾಣಮ್
45. ಕಲಿಯ ನಾಯನಾರ್ ಪುರಾಣಮ್
46. ಚತ್ತಿ ನಾಯನಾರ್ ಪುರಾಣಮ್
47. ಐಯಟಿಕಳ್ ಕಾಟವರ್ಕೋನ್ ನಾಯನಾರ್ ಪುರಾಣಮ್

9. ಕಱೈಕ್ಕಣ್ಟನ್ ಚರುಕ್ಕಮ್

48. ಕಣಮ್ಪುಲ್ಲ ನಾಯನಾರ್ ಪುರಾಣಮ್
49. ಕಾರಿ ನಾಯನಾರ್ ಪುರಾಣಮ್
50. ನಿನ್ಱಚೀರ್ ನೆಟುಮಾಱ ನಾಯನಾರ್ ಪುರಾಣಮ್
51. ವಾಯಿಲಾರ್ ನಾಯನಾರ್ ಪುರಾಣಮ್
52. ಮುನೈಯಟುವಾರ್ ನಾಯನಾರ್ ಪುರಾಣಮ್

10. ಕಟಲ್ ಚೂೞ್ನ್ತ ಚರುಕ್ಕಮ್

53. ಕೞಱ್ಚಿಙ್ಙ ನಾಯನಾರ್ ಪುರಾಣಮ್
54. ಇಟಙ್ಕೞಿ ನಾಯನಾರ್ ಪುರಾಣಮ್
55. ಚೆರುತ್ತುಣೈ ನಾಯನಾರ್ ಪುರಾಣಮ್
56. ಪುಕೞ್ತ್ತುಣೈ ನಾಯನಾರ್ ಪುರಾಣಮ್
57. ಕೋಟ್ಪುಲಿ ನಾಯನಾರ್ ಪುರಾಣಮ್

11. ಪತ್ತರಾಯ್ ಪ್ಪಣಿವಾರ್ ಚರುಕ್ಕಮ್

58. ಪತ್ತರಾಯ್ ಪ್ಪಣಿವಾರ್ ಪುರಾಣಮ್
59. ಪರಮನೈಯೇ ಪಾಟುವಾರ್ ಪುರಾಣಮ್
60. ಚಿತ್ತತ್ತೈ ಚ್ಚಿವನ್ಪಾಲೇ ವೈತ್ತಾರ್ ಪುರಾಣಮ್
61. ತಿರುವಾರೂರ್ ಪ್ಪಿಱನ್ತಾರ್ ಪುರಾಣಮ್
62. ಮುಪ್ಪೋತುಮ್ ತಿರುಮೇನಿ ತೀಣ್ಟುವಾರ್ ಪುರಾಣಮ್
63. ಮುೞುನೀಱು ಪೂಚಿಯ ಮುನಿವರ್ ಪುರಾಣಮ್
64. ಅಪ್ಪಾಲುಮ್ ಅಟಿಚ್ಚಾರ್ನ್ತಾರ್ ಪುರಾಣಮ್

12. ಮನ್ನಿಯಚೀರ್ ಚ್ಚರುಕ್ಕಮ್

65. ಪೂಚಲಾರ್ ನಾಯನಾರ್ ಪುರಾಣಮ್
66. ಮಙ್ಕೈಯರ್ ಕ್ಕರಚಿಯಾರ್ ಪುರಾಣಮ್

67. ನೇಚ ನಾಯನಾರ್ ಪುರಾಣಮ್

68. ಕೋಚ್ಚೆಙ್ಗಟ್ ಚೋೞ ನಾಯನಾರ್ ಪುರಾಣಮ್

69. ತಿರುನೀಲಕಣ್ಟ ಯಾೞ್ಪ್ಪಾಣ ನಾಯನಾರ್ ಪುರಾಣಮ್

70. ಚಟೈಯ ನಾಯನಾರ್ ಪುರಾಣಮ್

71. ಇಚೈಞಾನಿಯಾರ್ ಪುರಾಣಮ್

13. ವೆಳ್ಳಾನೈ ಚ್ಚರುಕ್ಕಮ್